4228

C.NO-4228

ವಿರೂಪಾಕ್ಷ ಪಂಡಿತ ಕೃತ

ಚೆನ್ನಬಸವ ಪುರಾಣ

(ಎರಡನೆಯ ಸಂಪುಟ)

ಗದ್ಯಾನುವಾದ :

ಎಂ. ಚಂದ್ರಶೇಖರ್

ಕನ್ನಡ ಸಾಹಿತ್ಯ ಪರಿಷತ್ತು

1977

ವಜ್ರ ಮಹೋತ್ಸವ

Q234:332
33L9.2

CC-0. Jangamwadi Math Collection. Digitized by eGangotri

ಈ ಮಾಲೆಯಲ್ಲಿ ಪ್ರಕಟವಾಗುವ ಕಾವ್ಯಗಳು

ಪಂಪಭಾರತ ★ ಆದಿಪುರಾಣ ★ ಗದಾಯುದ್ಧ

ನೇಮಿನಾಥ ಪುರಾಣ (ಕರ್ಣಪಾರ್ಯ)

ನೇಮಿನಾಥ ಪುರಾಣ (ನೇಮಿಚಂದ್ರ)

ಯಶೋಧರ ಚರಿತೆ ★ ಅನಂತನಾಥ

ಪುರಾಣ ★ ಧರ್ಮಾಮೃತ

ಕರ್ಣಾಟಕ ಕಾದಂಬರಿ

ಪಂಚತಂತ್ರ ★ ನಳಚಂಪು

ಗಿರಿಜಾಕಲ್ಯಾಣ ಮಹಾಪ್ರಬಂಧ

ಜಗನ್ನಾಥ ವಿಜಯ ★ ಕಬ್ಬಿಗರ ಕಾವ

ಶಬರಶಂಕರ ವಿಲಾಸ ★ ಹರಿಹರನ ರಗಳೆಗಳು

[ಮುಂದುವರಿಸಿದೆ]

Q234:332 4228
33L9.2
Virupaksha Pandita.
Chennabasava purana
V.2.

CC-0. Jangamwadi Math Collection. Digitized by eGangotri

ಬೆಲೆ : ಹದಿನೈದು ರೂಪಾಯಿಗಳು

Q234:332
33L9.2
4228

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಪಂಚವಾರ್ಷಿಕ ಯೋಜನೆಯ ಪುಸ್ತಕಮಾಲೆ–141

ವಿರೂಪಾಕ್ಷ ಪಂಡಿತ ಕೃತ

ಚೆನ್ನಬಸವ ಪುರಾಣ

ಎರಡನೆಯ ಸಂಪುಟ

೪–೫ ಕಾಂಡಗಳು

ಗದ್ಯಾನುವಾದ :

ಎಂ. ಚಂದ್ರಶೇಖರ್

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ : : ಬೆಂಗಳೂರು–18

1979

CC-0. Jangamwadi Math Collection. Digitized by eGangotri

CHENNABASAVA PURANA Vol. II by Virupaksha Pandita. Original Text with Prose rendering in Kannada by Sri M. Chandrasekhar, Published by Kannada Sahitya Parishat, Chamarajpet, Bangalore-18.
Pages : xviii+476+12 Price : Rs. 15-00

ಹಕ್ಕುಗಳು : ಕನ್ನಡ ಸಾಹಿತ್ಯ ಪರಿಷತ್ತು

ಮೊದಲ ಮುದ್ರಣ : 1979

9234:332
3329.2

ಎರಡನೆಯ ಸಂಪುಟ

ಬೆಲೆ : ಹದಿನೈದು ರೂಪಾಯಿಗಳು

ಪ್ರಕಾಶಕರು

ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-560 018

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 4228

ಮುದ್ರಕರು : ಶ್ರೀ ವೀರಾ ಪ್ರಿಂಟರ್ಸ್, ಶಿವರಾಮಪೇಟೆ : : ಮೈಸೂರು-570001

CC-0. Jangamwadi Math Collection. Digitized by eGangotri

ಅನುವಾದದ ಯೋಜನೆ

ಕನ್ನಡದ ಪ್ರಾಚೀನ ಕಾವ್ಯಸಂಪತ್ತು ಅಮೂಲ್ಯವಾಗಿದೆ. ಈ ಸಂಪತ್ತನ್ನು ಈಗಿನ ಕನ್ನಡ ಜನತೆ ಓದಿ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಆದರೆ ಈ ಕಾವ್ಯಗಳು ಜನಸಾಮಾನ್ಯರಿಗೆ ಕಠಿಣವಾಗಿ ತೋರುವುದರಿಂದ ಇವುಗಳ ವ್ಯಾಸಂಗದಲ್ಲಿ ಉತ್ಸಾಹಪೂರ್ಣವಾದ ಪ್ರವೃತ್ತಿ ಕಂಡುಬರುತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಮೂಲ ಗ್ರಂಥಗಳೂ ದೊರೆಯುವುದಿಲ್ಲ. ಎಷ್ಟೋ ವೇಳೆ ವಿಶ್ವವಿದ್ಯಾನಿಲಯದವರು ಪ್ರಾಚೀನ ಕಾವ್ಯಗಳನ್ನು ಕನ್ನಡ ಬಿ.ಎ., ಎಂ.ಎ. ಪದವಿಪರೀಕ್ಷೆಗಳಿಗೆ ಪಠ್ಯಪುಸ್ತಕಗಳಾಗಿ ಇಟ್ಟಾಗಲಂತು ಮೂಲಗ್ರಂಥಗಳ ಅಭಾವ ವಿಶೇಷವಾಗಿ ಕಂಡುಬರುತ್ತದೆ.

ಆದ್ದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ಕನ್ನಡ ಸಾಹಿತ್ಯ ಪರಿಷತ್ತು ತನ್ನ ಪಂಚವಾರ್ಷಿಕ ಯೋಜನೆಯಲ್ಲಿ ಹಳಗನ್ನಡ ಕಾವ್ಯಗಳ ಪುನರ್ಮುದ್ರಣಕ್ಕೆ ವಿಶೇಷ ಗಮನಹರಿಸಿ ಅದಕ್ಕಾಗಿ ಪ್ರತ್ಯೇಕ ಯೋಜನೆಯನ್ನು ಹಾಕಿಕೊಂಡಿತು. ಆರಿಸಿದ ಹಳಗನ್ನಡ ಹಾಗೂ ನಡುಗನ್ನಡ ಕಾವ್ಯಗಳನ್ನು ಹೊಸಗನ್ನಡ ಗದ್ಯದಲ್ಲಿ ಅನುವಾದಿಸಿ ಆ ಅನುವಾದದೊಡನೆ ಮೂಲಪಾಠವನ್ನು ಪ್ರಕಟಿಸಿ ಪುಸ್ತಕ ರೂಪದಲ್ಲಿ ಹೊರತರುವುದು ಮತ್ತು ಸರ್ಕಾರದ ಸಹಾಯ ಪಡೆದು ಆ ಪುಸ್ತಕಗಳು ಸಾಧ್ಯವಾದಮಟ್ಟಿಗೆ ಸುಲಭ ಬೆಲೆ ಯಲ್ಲಿ ದೊರೆಯುವಂತೆ ಮಾಡುವುದು, ಇವು ಆ ಯೋಜನೆಯ ಮುಖ್ಯ ಅಂಶಗಳು.

1. ಭಾರತೀಯ ಜ್ಞಾನಪೀಠದವರು, ವಿಶ್ವವಿದ್ಯಾನಿಲಯದವರು, ಖಾಸಗಿ ಪ್ರಕಾಶಕರು ಪರಿಷತ್ತಿನ ಉದ್ದೇಶದಂತೆ ಈಗಾಗಲೆ ಕನ್ನಡ ಕಾವ್ಯಗಳನ್ನು ಅನುವಾದ ಮಾಡಲು ಕಾರ್ಯ ಕೈಗೊಂಡಿದ್ದರೆ, ಅಂಥ ಕಾವ್ಯಗಳನ್ನು ಪರಿಷತ್ತು ಅನುವಾದಕ್ಕೆ ತೆಗೆದುಕೊಳ್ಳಬೇಕಾಗಿಲ್ಲ.

2. ಅಗತ್ಯ ಕಂಡ ಕಡೆ ಮೂಲವನ್ನು ಪರಿಷ್ಕರಿಸಿ ಅನುವಾದವನ್ನು ಕೈಗೊಳ್ಳ ತಕ್ಕದ್ದು.

3. ಈ ಕೆಳಗೆ ಕಾಣಿಸಿದ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳನ್ನು ಸದ್ಯ ದಲ್ಲಿ ಅನುವಾದಕ್ಕೆ ಆರಿಸಿಕೊಳ್ಳತಕ್ಕದ್ದು :

CC-0. Jangamwadi Math Collection. Digitized by eGangotri

ಹಳಗನ್ನಡ : ವಿಕ್ರಮಾರ್ಜುನವಿಜಯ, ಆದಿಪುರಾಣ, ಗದಾಯುದ್ಧ, ನೇಮಿನಾಥಪುರಾಣ (1. ಕರ್ಣಪಾರ್ಯ 2. ನೇಮಿಚಂದ್ರ), ಯಶೋಧರಚರಿತೆ, ಅನಂತನಾಥ ಪುರಾಣ, ಧರ್ಮಾಮೃತ, ಕಾದಂಬರಿ, ಪಂಚತಂತ್ರ, ನಳಚಂಪು, ವಡ್ಡಾರಾಧನೆ, ಗಿರಿಜಾ ಕಲ್ಯಾಣ, ಜಗನ್ನಾಥವಿಜಯ, ಕಬ್ಬಿಗರಕಾವ, ಶಬರಶಂಕರವಿಳಾಸ, ಹರಿಹರನ ರಗಳೆಗಳು, ಕೆಳದಿನೃಪವಿಜಯ, ದಮಯಂತೀಸ್ವಯಂವರ, ಶಾಂತಿಪುರಾಣ, ಚಂದ್ರಪ್ರಭ ಪುರಾಣ, ಉದ್ಭಟಕಾವ್ಯಂ, ಕುಸುಮಾವಳಿ ಕಾವ್ಯ, ಅಭಿನವ ದಶಕುಮಾರಚರಿತೆ, ಮಲ್ಲಿನಾಥಪುರಾಣ, ರಾಜಶೇಖರ ವಿಳಾಸ, ಚಿಕ್ಕದೇವರಾಜ ವಂಶಾವಳಿ, ದಿವ್ಯಸೂರಿಚರಿತೆ.

ನಡುಗನ್ನಡ : ಸಿದ್ಧರಾಮಚಾರಿತ್ರ, ಬಸವಪುರಾಣ, ಪ್ರಭುಲಿಂಗಲೀಲೆ, ತೊರವೆ ರಾಮಾಯಣ, ರಾಮನಾಥಚರಿತೆ, ಭರತೇಶವೈಭವ, ಅನುಭವಾಮೃತ, ಗೀತಗೋಪಾಲ, ಹದಿಬದೆಯಧರ್ಮ, ನಳಚರಿತ್ರೆ, ಅದ್ಭುತರಾಮಾಯಣ, ಚೆನ್ನಬಸವಪುರಾಣ, ಭಾಗವತ, ಹರಿಕಥಾಮೃತಸಾರ, ಭಿಕ್ಷಾಟನಚರಿತೆ, ಮೋಹನತರಂಗಿಣಿ.

(ಅ) ಒಬ್ಬೊಬ್ಬ ಅನುವಾದಕನಿಗೆ ಒಂದೊಂದು ಕಾವ್ಯವನ್ನು ಪೂರ್ತಿಯಾಗಿ ಅನುವಾದಿಸುವ ಕಾರ್ಯವನ್ನು ವಹಿಸಿಕೊಡಬೇಕು. ವಿಶೇಷ ಸಂದರ್ಭದಲ್ಲಿ ಒಂದು ಪುಸ್ತಕವನ್ನು ಇಬ್ಬರು, ಮೂವರು ಅನುವಾದಕರಿಗೆ ವಹಿಸಿಕೊಡಬಹುದು.

(ಆ) ಅನುವಾದದಲ್ಲಿ ಏಕರೂಪತೆ ಇರಬೇಕು. ಮಧ್ಯದಲ್ಲಿ ವಿಚ್ಛಿನ್ನತೆ ಕಾಣಬಾರದು. ಕಥೆಯಂತೆ ಓದಿಸಿಕೊಂಡು ಹೋಗಬೇಕು.

(ಇ) ಅನುವಾದವು ಆಧುನಿಕರಿಗೆ ಪ್ರಿಯವಾಗುವ ಹೊಸಗನ್ನಡ ಗದ್ಯದಲ್ಲಿ ಇರಬೇಕು.

(ಈ) ಭಾಷೆಯು ಸರಳವಾಗಿಯೂ ಶುದ್ಧವಾಗಿಯೂ ಇರಬೇಕು. ಅನುವಾದವು ಮೂಲದಿಂದ ದೂರ ಹೋಗಬಾರದು ಮತ್ತು ಮೂಲವನ್ನು ಬಿಡಲೂಬಾರದು.

(ಉ) ಇದು ಪ್ರಾಚೀನ ಕಾವ್ಯಗಳ ಅನುವಾದವಾದ್ದರಿಂದ ವಿಷಯದ ಗಂಭೀರತೆ ಪವಿತ್ರತೆಗಳಿಗೆ ಅನುಗುಣವಾಗಿ ಭಾಷೆಯು ಲಲಿತಗಂಭೀರವಾಗಿ ಇರಬೇಕು.

(ಊ) ಪ್ರತಿಯೊಬ್ಬ ಅನುವಾದಕನೂ ತಾನು ಅನುವಾದಿಸಿದ ಗ್ರಂಥಕ್ಕೆ ಒಂದು ಉಪೋದ್ಘಾತ, ಶಬ್ದಾರ್ಥಕೋಶ, ಅನುಬಂಧಗಳನ್ನು ತಯಾರಿಸಿ ಕೊಡಬೇಕು. ಉಪೋದ್ಘಾತದಲ್ಲಿ ಪ್ರಸ್ತುತ ಕವಿಯ ದೇಶಕಾಲಾದಿ ಪರಿಚಯ, ಪ್ರಸ್ತುತ ಕಾವ್ಯದ ವಿಮರ್ಶೆ ಮುಂತಾದುವು ಸಂಕ್ಷೇಪವಾಗಿ ಇರಬೇಕು. ಕಾವ್ಯದಲ್ಲಿ ಬಂದಿರುವ ನ್ಯಾಯಗಳು, ಗಾದೆಗಳು, ಪೂರ್ವಕತೆಗಳು ಮುಂತಾದವುಗಳ ವಿವರಣೆ ಅನುಬಂಧದಲ್ಲಿ ಇರಬೇಕು. ವಿವರಣೆ ಸಂಕ್ಷಿಪ್ತವಾಗಿದ್ದರೆ ಆಯಾ ಪುಟದ ಅಡಿಟಿಪ್ಪಣಿಯಲ್ಲಿ ಬರಬಹುದು.

(ಋ) ಅನುವಾದಕನು ಮೂಲ ಪರಿಷ್ಕೃತ ಪಾಠವನ್ನೂ ಅದರ ಕೆಳಗಡೆ ಅನುವಾದವನ್ನೂ ಕೊಡಬೇಕು.

CC-0. Jangamwadi Math Collection. Digitized by eGangotri

(ಋ) ಉಪೋದ್ಘಾತದಲ್ಲಿ ಅನುವಾದಕನು ತನ್ನ ಸ್ವಂತ ವಿಷಯವೇನನ್ನೂ ಪ್ರಸ್ತಾಪಿಸಕೂಡದು.

(ಎ) ಯಾವೊಬ್ಬ ಅನುವಾದಕನ ಅನುವಾದನಕಾರ್ಯ ಮಂಡಲಿಗೆ ತೃಪ್ತಿಕರವಾಗಿ ಕಂಡುಬಾರದಿದ್ದಲ್ಲಿ ಅಥವಾ ಅನುವಾದಕ ತಾನಾಗಿ ಒಪ್ಪಿಸಿದ ಕಾರ್ಯಮಾಡಲು ತನ್ನಿಂದ ಸಾಧ್ಯವಿಲ್ಲವೆಂದು ತಿಳಿಸಿದ ಸಂದರ್ಭದಲ್ಲಿ ಆ ಅನುವಾದಕಮಂಡಲಿ ಅಧ್ಯಕ್ಷ ಪರಿಷತ್ತಿನ ಅಧ್ಯಕ್ಷರಿಗಾಗಲೀ ಅಥವಾ ಪರಿಷತ್ತಿನ ಪ್ರಕಟಣಾ ಸಮಿತಿ ಪ್ರಧಾನ ಸಂಪಾದಕರಿಗಾಗಲೀ ಆ ವಿಷಯವನ್ನು ತಿಳಿಸಿ ಆ ಕಾರ್ಯಕ್ಕೆ ಬೇರೊಬ್ಬ ವಿದ್ವಾಂಸರನ್ನು ಗೊತ್ತುಮಾಡ ಬಹುದು. ಹಾಗೆಯೇ ಅನುವಾದಕ ಮತ್ತು ಅನುವಾದಕ ಮಂಡಲಿ ಅಧ್ಯಕ್ಷರ ಮಧ್ಯೆ ಉದ್ಭವಿಸಬಹುದಾದ ಸಮಸ್ಯೆಗಳನ್ನು ಪರಿಷತ್ತಿನ ಅಧ್ಯಕ್ಷರು ಅಥವಾ ಪ್ರಕಟಣಾ ಸಮಿತಿಯ ಪ್ರಧಾನ ಸಂಪಾದಕರು ಪರಿಹರಿಸತಕ್ಕದ್ದು.

(ಏ) ನಿಯಮದಂತೆ ಗ್ರಂಥದ ಅನುವಾದಕಾರ್ಯ ಮುಗಿದ ಕೂಡಲೆ ಮಂಡಲಿಯ ಅಧ್ಯಕ್ಷರು ಅದನ್ನು ಅನುವಾದಕರಿಂದ ಪಡೆದು ತಮ್ಮ ಸಲಹೆಯೊಡನೆ ಅದನ್ನು ಪರಿಷತ್ತಿನ ಅಧ್ಯಕ್ಷರಿಗೆ ಕಳುಹಿಸಕೊಡತಕ್ಕದ್ದು.

8. ಹೀಗೆ ಅನುವಾದ ಕಾರ್ಯವನ್ನು ವಿದ್ವಾಂಸರಿಂದ ಮಾಡಿಸಿದಾಗ ಅವರಿಗೆ ಯುಕ್ತ ಸಂಭಾವನೆಯನ್ನು ಕೊಡುವ ಬಗ್ಗೆ ಸಭೆ ತೀರ್ಮಾನ ಕೈಗೊಂಡು, ಸಂಭಾವನೆ ಗ್ರಂಥದ ಪರಿಮಾಣದ ಆಧಾರದ ಮೇಲೆ ಸಲ್ಲಬೇಕೆಂದು ನಿರ್ಣಯಿಸಿ ಗ್ರಂಥದ 400 ಅಕ್ಷರಗಳಿಗೆ ಒಂದು ಘಟಕವೆಂದೂ ಒಂದು ಘಟಕಕ್ಕೆ 2 ರೂ. ನಂತೆ ಸಂಭಾವನೆ ನೀಡ ಬೇಕೆಂದೂ ನಿಶ್ಚಯಿಸಲಾಗಿದೆ. ಮತ್ತು ಅನುವಾದಕ ಮಂಡಲಿಯ ಅಧ್ಯಕ್ಷರಿಗೆ ಅನುವಾದಕರಿಗೆ ಸಲ್ಲುವ ಸಂಭಾವನೆಯ ಶೇಕಡ 15 ರಷ್ಟನ್ನು ಸಂಭಾವನೆಯಾಗಿ ಕೊಡ ತಕ್ಕದ್ದೆಂದೂ ನಿರ್ಣಯಿಸಿತು. ಮತ್ತು ಅವರು ಮೂಲಪಾಠ ಪರಿಷ್ಕಾರ, ಮುನ್ನುಡಿ, ಉಪೋದ್ಘಾತ, ಶೋಧನೆ, ಮೇಲ್ವಿಚಾರಣೆ ಇತ್ಯಾದಿ ಕಾರ್ಯಗಳನ್ನು ಗಮನದಲ್ಲಿಟ್ಟು ಕೊಂಡು ಹಸ್ತಪ್ರತಿಯನ್ನು ಸಿದ್ಧಮಾಡಿ ಪರಿಷತ್ತಿಗೆ ಒಪ್ಪಿಸತಕ್ಕದ್ದೆಂದೂ ಗೊತ್ತು ಪಡಿಸಲಾಗಿದೆ.

9. ಅನುವಾದಕರಿಗೆ ಅನುವಾದ ಕಾರ್ಯಕ್ಕಾಗಿ ಹಣ ಸಂದಾಯವಾದಮೇಲೆ ಆ ಗ್ರಂಥದ ಪೂರ್ಣ ಹಕ್ಕು ಪರಿಷತ್ತಿಗೆ ಸೇರುತ್ತದೆ, ಪುಸ್ತಕ ಪ್ರಕಟಣೆಯಾದಮೇಲೆ ಅನುವಾದಕರಿಗೆ ಈ ಗ್ರಂಥದ ಹತ್ತು ಪ್ರತಿಗಳನ್ನು, ಅನುವಾದಕ ಮಂಡಲಿ ಅಧ್ಯಕ್ಷರಿಗೆ ಎರಡು ಪ್ರತಿಗಳನ್ನು ಉಚಿತವಾಗಿ ಕೊಡತಕ್ಕದ್ದು.

ಮೇಲ್ಕಂಡ ತೀರ್ಮಾನದಂತೆ ಅನುವಾದಕಾರ್ಯ ಕೈಗೊಳ್ಳಲು ಪರಿಷತ್ತು ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಅನುವಾದಕ ಮಂಡಲಿಗಳನ್ನು ರಚಿಸಿ ಅದಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಟ್ಟಿದೆ. ಯೋಜನೆಯ ಪ್ರಕಾರ ಅನುವಾದ

CC-0. Jangamwadi Math Collection. Digitized by eGangotri

ಕಾರ್ಯ ಎರಡು ಕಡೆಯೂ ನಡೆಯುತ್ತಿದೆ. ಈಚೆಗೆ ಧಾರವಾಡದಲ್ಲೂ ಅನುವಾದ ಕಾರ್ಯ ನಡೆಯುತ್ತಿದೆ. ವಿದ್ವಾಂಸರು ಅನುವಾದಕ ಮಂಡಲಿ ಅಧ್ಯಕ್ಷರೊಡನೆ ಸಹಕರಿಸುತ್ತಿದ್ದಾರೆ. ಅನುವಾದಕ ಮಂಡಲಿ ಅಧ್ಯಕ್ಷರು ವಿಶೇಷ ಆಸಕ್ತಿವಹಿಸಿ ಅನುವಾದ ಕಾರ್ಯ ಅಚ್ಚುಕಟ್ಟಾಗಿ ನಡೆಯುವಂತೆ ಶ್ರಮಿಸುತ್ತಿದ್ದಾರೆ.

ಈ ಅನುವಾದ ಗ್ರಂಥಗಳು ಕನ್ನಡ ಜನತೆಗೆ ಸುಲಭ ಬೆಲೆಯಲ್ಲಿ ದೊರೆಯಬೇಕೆಂಬ ಪರಿಷತ್ತಿನ ಆಶೆಯು ಸರ್ಕಾರದ ನೆರವಿನಿಂದ ಕೈಗೂಡಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ.

ಕನ್ನಡಿಗರು ಈ ಅಮೂಲ್ಯವಾದ ಕೃತಿಗಳನ್ನು ಉತ್ಸಾಹದಿಂದ ಬರಮಾಡಿಕೊಂಡು ಇವುಗಳ ಪೂರ್ಣ ಪ್ರಯೋಜನ ಪಡೆಯಬೇಕೆಂದು ಪರಿಷತ್ತು ಬಯಸುತ್ತದೆ.

ಅಧ್ಯಕ್ಷ
ಕನ್ನಡ ಸಾಹಿತ್ಯ ಪರಿಷತ್ತು

CC-0. Jangamwadi Math Collection. Digitized by eGangotri

ಮುನ್ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಹಳಗನ್ನಡ ನಡುಗನ್ನಡ ಕಾವ್ಯಗಳನ್ನು ಹೊಸಗನ್ನಡದಲ್ಲಿ ಸರಳ ಗದ್ಯದಲ್ಲಿ ಅನುವಾದಿಸಿ, ಕಾವ್ಯಾಭ್ಯಾಸಿಗಳಿಗೆ, ವಿದ್ಯಾರ್ಥಿಗಳಿಗೆ, ಸಾಮಾನ್ಯರಿಗೆ ಪರಿಚಯಮಾಡಿಸುವ ಯೋಜನೆಯೊಂದನ್ನು 1973 ರಲ್ಲಿ ಕೈಗೊಂಡಿತು. ಈ ಮಾಲೆಯಲ್ಲಿ ಈಗಾಗಲೆ ಹಲವಾರು ಕಾವ್ಯಗಳು ಪಠ್ಯಭಾಗಗಳೂ ಸೇರಿದಂತೆ ಕನ್ನಡ ಅನುವಾದಗಳೊಡನೆ ಪ್ರಕಟವಾಗಿವೆ. ಈ ಕಾರ್ಯದಲ್ಲಿ ಅರಿತು, ನುರಿತ ಕನ್ನಡ ವಿದ್ವಾಂಸರನೇಕರು ಪರಿಷತ್ತಿಗೆ ನೆರವು ನೀಡಿದ್ದಾರೆ. ಪರಿಷತ್ತಿನ ಈ ಯೋಜನೆ ಜನಪ್ರಿಯವಾಗಿದ್ದು ಈಗಾಗಲೇ ಪ್ರಕಟವಾಗಿರುವ ಅನುವಾದ ಗ್ರಂಥಗಳು ಸಾಕಷ್ಟು ಮಾರಾಟವಾಗಿವೆ. ಅವುಗಳ ಅವಶ್ಯಕತೆ ಕಂಡುಬಂದಿದೆ.

ಕನ್ನಡ ಕಾವ್ಯಗಳ ಪರಂಪರೆಯನ್ನು ಗಮನಿಸಿದರೆ, ನಮ್ಮ ಕವಿಗಳ ದೃಷ್ಟಿ ಕಾಲಕ್ಕೆ ತಕ್ಕಂತೆ ಹೇಗೆ, ಸಮಾಜದ ಅಗತ್ಯತೆಗೆ ತಕ್ಕಂತೆ ಹೇಗೆ ಪರಿವರ್ತನೆಗೊಳ್ಳುತ್ತಾ ಬಂದಿದೆ ಎಂಬುದನ್ನು ಕಾಣಬಹುದು. ಈ ದೃಷ್ಟಿ ಬದಲಾವಣೆಯಲ್ಲಿ ವಸ್ತುವಿನ ವೈವಿಧ್ಯವನ್ನೂ ಧರ್ಮಗಳ ಅಭಿಮಾನವನ್ನೂ, ಜೀವನದ ಧೋರಣೆಯನ್ನೂ. ಕಾವ್ಯರಚನಾ ಮಾರ್ಗದಲ್ಲಿ ನೂತನತೆಯನ್ನೂ ಕಾಣಬಹುದು. ಚಂಪುವಿನಿಂದ ರಗಳೆ, ರಗಳೆಗಳಿಂದ ಷಟ್ಪದಿ, ಷಟ್ಪದಿಯಲ್ಲಿ ವೈವಿಧ್ಯ, ಜೊತೆ ಜೊತೆಗೆ, ತ್ರಿಪದಿ, ಚೌಪದಿ, ಸಾಂಗತ್ಯ ಮೊದಲಾದ ಛಂದೋವಿಶೇಷಗಳನ್ನು ಕಾಣುತ್ತೇವೆ. 12–13ನೆಯ ಶತಮಾನದಲ್ಲಿ ಆರಂಭವಾದ ಷಟ್ಪದಿ ಪ್ರಕಾರಗಳಲ್ಲಿ ಭಾಮಿನಿ ವಾರ್ಧಕ ಷಟ್ಪದಿಗಳು ಕವಿಪ್ರಿಯವಾದುವು ; ಜನಪ್ರಿಯವೂ ಆದವು. ಭಾಮಿನಿಗೆ ಕುಮಾರವ್ಯಾಸ, ವಾರ್ಧಕಕ್ಕೆ ರಾಘವಾಂಕ ಲಕ್ಷ್ಮೀಶರು ಒಡೆಯರಾದರು. ವಾರ್ಧಕ ಷಟ್ಪದಿಯನ್ನು ಅವರಂತೆ ಬಳಸಿಕೊಂಡ ಮತ್ತೊಬ್ಬ ಕವಿ ವಿರೂಪಾಕ್ಷ ಪಂಡಿತ. ಅವನ ಕಾವ್ಯ ಚೆನ್ನಬಸವ ಪುರಾಣ.

'ಚೆನ್ನಬಸವ ಪುರಾಣ' ಒಂದು ವಿಶಿಷ್ಟವಾದ ಕಾವ್ಯ. ವೀರಶೈವ ಸಾಹಿತ್ಯ ಪ್ರಪಂಚದಲ್ಲಿ ಸಮಸ್ಯೆಯಾಗಿ ಉಳಿದಿರುವ 'ಸಿದ್ಧರಾಮ'ನ ಮತದ ಚರ್ಚೆಗೆ ತೀರ್ಮಾನವನ್ನು ಕೊಡಲು ಯತ್ನಿಸಿರುವ ಕಾವ್ಯ. ಸಿದ್ಧರಾಮನಿಗೆ ಚೆನ್ನಬಸವ ಶಿವನ ಲೀಲಾ ಮಾಹಾತ್ಮ್ಯವನ್ನು ಹೇಳುವ ಕಥಾವಿವರಣೆ, ಶಿವನ ಬಹುವಿಧ ಲೀಲೆಗಳು ಇಲ್ಲಿನ ಪುರಾಣ ವಸ್ತು.

ಕವಿ ಹಳೆಯ ಸಂಪ್ರದಾಯದಲ್ಲಿ ಈ ಕಾವ್ಯಪುರಾಣವನ್ನು ರಚಿಸಿದ್ದಾನೆ. 'ಕಥೆಯ ನಾಮಂ ಚೆನ್ನಬಸವಪೌರಾಣಮೀ । ಕಥೆಗೊಡೆಯನಾ ವಿಮಲ ಚೆನ್ನಬಸವೇಶ್ವರಂ !

CC-0. Jangamwadi Math Collection. Digitized by eGangotri

ಕಥೆಯ ಪೇಳ್ದಾತಂ ವಿರೂಪಾಕ್ಷ ಪಂಡಿತಾರಾಧ್ಯನಾಗಮಹೃದ್ಯನು ॥ (ಪೀಠಿಕಾ ಸಂಧಿ, ಪದ್ಯ 31) ಎಂದು ತನ್ನ ಉದ್ದೇಶವನ್ನು ಹೇಳಿಕೊಂಡಿದ್ದಾನೆ.

'ವರಲಕ್ಷಣಂ ಸುಛಂದಸ್ಸು ನುತಶಬ್ದಮುರು । ತರ ರಸಾಲಂಕಾರಮತಿಶಯಾರ್ಥಂ ಗಳಿಂ । ವಿರಚಿಸಿದ ಕಾವ್ಯಂ' ಎಂದು ಕಾವ್ಯರಚನೆಯ ಕ್ರಮವನ್ನು ತಿಳಿಸಿದ್ದಾನೆ. ಇಂಥ ಕಾವ್ಯವನ್ನು ಹಳೆಯ ಕಾವ್ಯಾಭ್ಯಾಸ ರೀತಿಯಲ್ಲೇ ಅರ್ಥಮಾಡಬೇಕು. ಕಾವ್ಯದ ಸರಳ ಗದ್ಯಾನುವಾದ ಈ ಉದ್ದೇಶಕ್ಕೆ ಸಹಕಾರಿಯಾಗಬಹುದು. ಪರಿಷತ್ತಿನ ಈ ಪ್ರಕಟಣೆಯ ಪ್ರಯತ್ನ ಈ ದೃಷ್ಟಿಯಿಂದ ಸಾರ್ಥಕವಾಗಬಹುದು.

ಇಂಥ ಬೃಹದ್ ಗ್ರಂಥವನ್ನು ಶ್ರೀ ಎಂ. ಚಂದ್ರಶೇಖರ್ ಅವರು ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿದ್ದಾರೆ. ಅನುವಾದಕ ಮಂಡಲಿ ಅಧ್ಯಕ್ಷರಾದ ವಿದ್ವಾನ್ ಶ್ರೀ ಎನ್. ರಂಗನಾಥಶರ್ಮ ಅವರು ಪರಿಶೀಲಿಸಿಕೊಟ್ಟಿದ್ದಾರೆ. ಅನುವಾದಕರು ಆಚಾರ್ಯ ಪಾಠಶಾಲೆಯಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಹಳಗನ್ನಡ ನಡುಗನ್ನಡ ಕಾವ್ಯಗಳನ್ನು ಅಭ್ಯಾಸಮಾಡಿ ಪಾಠ ಹೇಳಿ ಅನುಭವ ಗಳಿಸಿದ್ದಾರೆ. ಈ ಕಾವ್ಯವನ್ನು ವಿಶಿಷ್ಟವಾಗಿ ಅಭ್ಯಾಸಮಾಡಿ ತಮ್ಮ ಪಾಂಡಿತ್ಯವನ್ನು ರೂಢಿಸಿಕೊಂಡಿದ್ದಾರೆ.

ಈ ಕಾವ್ಯದಲ್ಲಿ ಪರಂಪರೆಯ ಪ್ರಕಾರ ಅಷ್ಟಾದಶ ವರ್ಣನೆಗಳು ಬಂದರೂ ಅಲ್ಲಲ್ಲಿ ಶೃಂಗಾರಾನ್ವಿತ ಸನ್ನಿವೇಶಗಳಲ್ಲಿ ಕವಿಕಾಲದ ಸಮಾಜದ ಯಥಾರ್ಥ ಚಿತ್ರಣವೂ ದೊರೆಯುವುದೆಂದು ಹೇಳಬಹುದು. ಯಾವುದಕ್ಕೂ ಅಭ್ಯಾಸಪೂರ್ಣ ವಿಂಗಡಣೆ ಅವಶ್ಯವೆಂದು ಬೇರೆ ಹೇಳಬೇಕಿಲ್ಲ. ಸಮಕಾಲೀನ ಸಮಾಜದ ಚಿತ್ರಣದ ಇಂತಹ ಅಂಶ ಗಳನ್ನು ಅಭ್ಯಸಿಸಿ ಇನ್ನೂ ಒಂದೆಡೆಗೆ ಸಂಗ್ರಹಿಸಬೇಕಾಗಿದೆ.

ಅನುವಾದವನ್ನು ಮಾಡಿಕೊಟ್ಟ ಅನುವಾದಕರಿಗೂ, ಅದನ್ನು ಪರಿಶೀಲಿಸಿಕೊಟ್ಟ ವಿದ್ವಾನ್ ಶ್ರೀ ರಂಗನಾಥಶರ್ಮಾ ಅವರಿಗೂ ನಮ್ಮ ವಂದನೆಗಳು.

ಕನ್ನಡಿಗರು ಇದರ ಉಪಯೋಗವನ್ನು ಪಡೆಯಲಿ ಎಂದು ಬಯಸುತ್ತೇನೆ.

ಬೆಂಗಳೂರು
21–7–79

ವಿ. ಕೃ. ಗೋಕಾಕ್
ಪ್ರಧಾನ ಸಂಪಾದಕರು

CC-0. Jangamwadi Math Collection. Digitized by eGangotri

ಬಿನ್ನಹ

ಹಳಗನ್ನಡ ಕಾವ್ಯಗಳನ್ನು ಪ್ರಚಲಿತವಾದ ಕನ್ನಡದಲ್ಲಿ ಗದ್ಯಾನುವಾದ ಮಾಡಿ ಜನತೆಗೆ ಒದಗಿಸಬೇಕೆಂಬ ಉದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಎರಡು ಅನುವಾದಕ ಮಂಡಲಿಗಳನ್ನು ರಚಿಸಿತು. ಒಂದು ಬೆಂಗಳೂರಿನಲ್ಲಿಯೂ ಇನ್ನೊಂದು ಮೈಸೂರಿನಲ್ಲಿಯೂ ಅನುವಾದ ಕಾರ್ಯವನ್ನು ನಡೆಸಬೇಕೆಂದು ನಿರ್ಣಯವಾಯಿತು. ಬೆಂಗಳೂರಿನ ಅನುವಾದಕ ಮಂಡಲಿಗೆ ನಾನು ಅಧ್ಯಕ್ಷನಾಗಿರಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತು ಗೊತ್ತುಮಾಡಿತು. ಈ ಮಂಡಲಿಗೆ ಅನುವಾದಕ ಸದಸ್ಯರಾಗಿರಬೇಕೆಂದು ಕೆಲವು ವಿದ್ವಾಂಸರನ್ನು ಪರಿಷತ್ತು ಕೇಳಿಕೊಂಡಿತು ಇದನ್ನು ಅಂಗೀಕರಿಸಿದ ವಿದ್ವಾಂಸರು ಅನುವಾದಕ ಮಂಡಲಿಯ ಸದಸ್ಯರಾಗಿ ತಮ್ಮ ಕಾರ್ಯವನ್ನು ನಡೆಸಿಕೊಡಲು ಒಪ್ಪಿದರು.

ಅನಂತರ ತಿಂಗಳಿಗೊಂದು ಸಲ ಸಭೆ ಸೇರಿ ಆ ತಿಂಗಳು ಮಾಡಿದ ಅನುವಾದ ಭಾಗವನ್ನು ಪರಿಶೀಲಿಸಿ ನ್ಯೂನಾತಿರೇಕಗಳನ್ನು ತಿದ್ದುವ ಕ್ರಮ ನಡೆಯುತ್ತಾ ಬಂದಿತು. ಅನೇಕಾರ್ಥಗಳನ್ನು ಕೊಡುವ ಶ್ಲೇಷವಾಕ್ಯವಿದ್ದರೆ ಪ್ರಕೃತವಾದ ಅರ್ಥವನ್ನು ಮೊದಲು ಬರೆದು ಅನಂತರ ಉಳಿದ ಅರ್ಥವನ್ನು ಬರೆಯಬೇಕು – ಎಂದು ನಿಶ್ಚಯಿಸಿಕೊಳ್ಳಲಾಯಿತು. ಅನುವಾದಕ್ರಮದಲ್ಲಿ ಬರುವ ತೊಡಕನ್ನು ಬಿಡಿಸುವುದು, ಕಠಿಣವಾದ ಗ್ರಂಥಭಾಗಕ್ಕೆ ಅರ್ಥವನ್ನು ನಿರ್ಣಯಿಸುವುದು ಮುಂತಾದ ಕಾರ್ಯಗಳು ನಡೆದವು.

ಹೀಗೆ ಹಂತಹಂತವಾಗಿ ಅನುವಾದ ಕಾರ್ಯ ನಡೆಯುವಾಗ ನಾನು ಅವನ್ನು ಪರಿಶೀಲಿಸಿ ಯಥಾಮತಿಯಾಗಿ ಮಾರ್ಗದರ್ಶನವನ್ನು ಮಾಡಿದ್ದೇನೆ. ಮೇಲೆ ಕಾಣಿಸಿದ ನಿರ್ಣಯಗಳಿಗೆ ಅನುಸಾರವಾಗಿ ಅನುವಾದವು ಇರಬೇಕೆಂದು ನನ್ನ ಸಂಕಲ್ಪವಾಗಿತ್ತು.

ಹಸ್ತಪ್ರತಿಗಳು ಕೈಸೇರುತ್ತಾ ಬಂದಂತೆ ಅವನ್ನು ಪರಿಶೀಲಿಸಿ ಅಲ್ಲಲ್ಲಿ ತಿದ್ದಿರುತ್ತೇನೆ. ತಿದ್ದಿರುವುದನ್ನು ಅನುವಾದಕರ ಗಮನಕ್ಕೆ ತಂದು ಅವರ ಒಪ್ಪಿಗೆಯನ್ನು ಪಡೆದಿರುತ್ತೇನೆ. ಹೆಚ್ಚಿನ ವಿಶೇಷವನ್ನು ಅಡಿಟಿಪ್ಪಣಿಯಲ್ಲಿ (ರಂ) ಎಂಬ ಸಂಕೇತದಿಂದ ಸೂಚಿಸಿದ್ದೇನೆ.

ಪ್ರತಿಯೊಂದು ವಾಕ್ಯವನ್ನೂ ತಿದ್ದಿ ಮಾರ್ಪಡಿಸುವುದು ಕಾರ್ಯಸಾಧ್ಯವಲ್ಲ; ಅಪೇಕ್ಷಣೀಯವೂ ಅಲ್ಲ. ಅನುವಾದಕರು ವಿದ್ವಾಂಸರಾದ್ದರಿಂದ ಹೆಚ್ಚಿನ ಹಸ್ತಕ್ಷೇಪ ನನಗೆ ಸರಿಯೆನಿಸಲಿಲ್ಲ. ಮೂಲವನ್ನೂ ಅನುವಾದವನ್ನೂ ಅಕ್ಷರಶಃ ತಾಳೆನೋಡುವುದು ಕಠಿಣವೇ. ಅದೆಲ್ಲವನ್ನೂ ಅನುವಾದಕರು ಸರಿಯಾಗಿ ಗಮನಿಸಿಯೇ ಇರುತ್ತಾರೆಂಬ ವಿಶ್ವಾಸವನ್ನು ತಳೆದು, ಮೇಲ್ನೋಟದಲ್ಲಿ ಕಾಣುವ ಕೆಲವು ದೋಷಗಳನ್ನು ಅಲ್ಲಲ್ಲಿ ತಿದ್ದುವ ಪ್ರಯತ್ನಮಾಡಿದ್ದೇನೆ. ಅನುವಾದದಲ್ಲಿರುವ ಗುಣಗಳಿಗೆ ಆಯಾ ವಿದ್ವಾಂಸರೇ ಭಾಗಿಗಳು.

CC-0. Jangamwadi Math Collection. Digitized by eGangotri

ಈ ಕಾರ್ಯದಲ್ಲಿ ನನಗೆ ಪೂರ್ಣ ಸಹಕಾರವನ್ನಿತ್ತು ತಮ್ಮ ಕಾರ್ಯವನ್ನು ಯಶಸ್ವಿಯಾಗಿ ನಡೆಸಿಕೊಟ್ಟಿರುವ ಎಲ್ಲ ವಿದ್ವಾಂಸರನ್ನೂ ಅಭಿನಂದಿಸುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ನನ್ನಲ್ಲಿ ವಿಶ್ವಾಸವಿಟ್ಟು ಅಭಿಮಾನ ದಿಂದ ಪ್ರೋತ್ಸಾಹಿಸಿದ್ದಾರೆ. ಈ ಮಂಡಲಿಯ ಅಧ್ಯಕ್ಷನಾಗಿ ಕೆಲಸಮಾಡಲು ಸಕಲ ಸೌಕರ್ಯಗಳನ್ನೂ ಒದಗಿಸಿಕೊಟ್ಟಿದ್ದಾರೆ. ಆ ಮಹನೀಯರಿಗೆ ಕೃತಜ್ಞತೆಯ ವಂದನೆ ಗಳನ್ನು ಅರ್ಪಿಸುತ್ತೇನೆ. ಎಲ್ಲ ನೆರವಿತ್ತು ಸಹಕರಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧಿಕಾರ ವರ್ಗದವರ ಉಪಕಾರವನ್ನು ಸ್ಮರಿಸಿಕೊಳ್ಳುತ್ತೇನೆ.

ಎನ್. ರಂಗನಾಥಶರ್ಮ

ಬೆಂಗಳೂರು
1–8–79

ಅಧ್ಯಕ್ಷ
ಬೆಂಗಳೂರು ಅನುವಾದಕ ಮಂಡಲಿ
ಕನ್ನಡ ಸಾಹಿತ್ಯ ಪರಿಷತ್ತು

CC-0. Jangamwadi Math Collection. Digitized by eGangotri

ಪ್ರಸ್ತಾವನೆ

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲಿ ಗ್ರಂಥ ಪ್ರಕಟಣೆ ಒಂದು ಪ್ರಮುಖವಾದ ಚಟುವಟಿಕೆ. ಪ್ರಾರಂಭದಲ್ಲಿ ಪರಿಷತ್ತು ತನ್ನ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿ ಕೆಲವೇ ಪುಸ್ತಕಗಳನ್ನು ಪ್ರಕಟಿಸಿತು. ಆದರೆ ಆ ಪುಸ್ತಕಗಳು ಅತ್ಯಂತ ಅಮೂಲ್ಯದವೂ ಅಪೂರ್ವದವೂ ಅತ್ಯುಪಯುಕ್ತದವೂ ಆಗಿವೆ. 1969ರಿಂದ ಈಚೆಗೆ ಪರಿಷತ್ತು ತನ್ನ ಚಟುವಟಿಕೆಗಳನ್ನು ಯೋಜನಾಬದ್ಧವಾಗಿ ರೂಪಿಸಿಕೊಂಡು ತ್ರೈವಾರ್ಷಿಕ ಯೋಜನೆಯಲ್ಲಿ 100 ಪುಸ್ತಕಗಳನ್ನೂ ಪಂಚವಾರ್ಷಿಕ ಯೋಜನೆಯಲ್ಲಿ 150 ಪುಸ್ತಕಗಳನ್ನೂ ಹೊರತರಲು ಆಲೋಚಿಸಿತು, ಅದರಂತೆ ತ್ರೈವಾರ್ಷಿಕ ಯೋಜನೆಯ 100 ಪುಸ್ತಕಗಳೂ, ಪಂಚವಾರ್ಷಿಕ ಯೋಜನೆಯ 140 ಪುಸ್ತಕಗಳೂ ಈಗಾಗಲೆ ಪ್ರಕಟವಾಗಿವೆ. ಉಳಿದವು ಪ್ರಕಟಣೆಯ ಬೇರೆ ಬೇರೆ ಹಂತದಲ್ಲಿವೆ.

ಪರಿಷತ್ತು ಈಗ ಎರಡನೆಯ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮಗಳನ್ನು ಆರಂಭಿಸಿದೆ. ಈ ಯೋಜನೆಯಲ್ಲೂ ಪುಸ್ತಕ ಪ್ರಕಟಣೆಯ ಚಟುವಟಿಕೆಯನ್ನೇ ಪ್ರಧಾನ ಕಾರ್ಯವನ್ನಾಗಿ ರೂಪಿಸಿಕೊಂಡಿದೆ. ಆದರೆ ಕಾಲವನ್ನು ಅನುಸರಿಸಿ ಆಯಾ ಕಾಲದ ಕನ್ನಡ ಸಾಹಿತ್ಯದ ಎಲ್ಲಾ ಆಯಾಮಗಳನ್ನೂ ಸಾಹಿತ್ಯಧೋರಣೆಯನ್ನೂ ಗಮನದಲ್ಲಿಟ್ಟುಕೊಂಡು ಪ್ರಕಟಣೆಗೆ ಪುಸ್ತಕಗಳನ್ನು ಆಯ್ದುಕೊಳ್ಳುತ್ತಿದೆ. ಅದೆಂದರೆ ಪರಿಷತ್ತು ಪ್ರಕಟಿಸುವ ಗ್ರಂಥಗಳನ್ನು ಒಂದು ಗ್ರಂಥ ಪ್ರಕಟಣಾ ಸಲಹಾಸಮಿತಿ ಪರಿಶೀಲಿಸಿ ನಿರ್ಧರಿಸುತ್ತದೆ. ಹಾಗೆ ನಿರ್ಧರಿಸುವಾಗ ಪುಸ್ತಕಗಳ ವಿಷಯವನ್ನು ಕುರಿತು ಕೆಲವೊಮ್ಮೆ ಆಯಾ ವಿಷಯದಲ್ಲಿ ತಜ್ಞರಾದವರ ಅಭಿಪ್ರಾಯವನ್ನು ಪಡೆಯುತ್ತದೆ.

24-7-78 ರಿಂದ ಹೊಸ ಪದಾಧಿಕಾರಿಗಳು ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಹೊಸ ದೃಷ್ಟಿಯಿಂದ ಗ್ರಂಥಪ್ರಕಟಣ ಸಲಹಾಸಮಿತಿಯನ್ನು ರಚಿಸಿದೆ. ಈ ಸಮಿತಿಯ ಸಲಹೆ ಸಹಕಾರಗಳಿಂದ ಇಂದಿನ ಪುಸ್ತಕಗಳು ಹೊರಬರುತ್ತಿವೆ. ಈ ಪುಸ್ತಕಗಳಲ್ಲಿ ಅಚ್ಚಾಗದ ಪ್ರಾಚೀನ ಗ್ರಂಥಗಳು, ಅವಶ್ಯಕವಾದ ಪ್ರಾಚೀನ ಗ್ರಂಥಗಳ ಪುನರ್ಮುದ್ರಣ, ಕವಿಕಾವ್ಯ ಪ್ರಶಸ್ತಿ ಗ್ರಂಥಗಳು, ಭಾಷಾಂತರ ಕೃತಿಗಳು, ಜನಸಾಮಾನ್ಯರಿಗಾಗಿ ಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ, ಜನಪದಸಾಹಿತ್ಯ. ನಿಘಂಟುಗಳು ಇರುತ್ತವೆ. ಈ ಸಮಿತಿಯ ಪ್ರಧಾನ ಸಂಪಾದಕತ್ವದ ಸ್ಥಾನವನ್ನು ಡಾ. ವಿ. ಕೃ. ಗೋಕಾಕರು ವಹಿಸಿಕೊಂಡಿದ್ದಾರೆ. ಆ ಸಮಿತಿಯಲ್ಲಿ ಈ ಕೆಳಕಂಡ ವಿದ್ವಾಂಸರು ಸಾಹಿತಿಗಳು ಸದಸ್ಯರಾಗಿದ್ದಾರೆ.

CC-0. Jangamwadi Math Collection. Digitized by eGangotri

ಡಾ. ಡಿ. ಜವರೇಗೌಡರು	ಡಾ. ಜಿ. ಎಸ್. ಶಿವರುದ್ರಪ್ಪ
ಡಾ. ಬಿ. ಎಸ್. ಕುಲಕರ್ಣಿ	ಶ್ರೀ ಜಿ. ಎಚ್. ನಾಯಕ
ಶ್ರೀ ವಿ. ಸೀ. ಹಿತ್ತಲಮನಿ	ಶ್ರೀ ವೈ. ಎನ್. ಕೃಷ್ಣಮೂರ್ತಿ
ಶ್ರೀ ಜಿ. ನಾರಾಯಣ	ರಾಜ್ಯ ಗ್ರಂಥಾಲಯಾಧಿಕಾರಿಗಳು
ರಾಜ್ಯ ಪಠ್ಯಪುಸ್ತಕ ಸಮಿತಿಯ ನಿರ್ದೇಶಕರು	

ಅಲ್ಲದೆ ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ಡಿ. ಲಿಂಗಯ್ಯ, ಶ್ರೀ ಲಕ್ಷ್ಮಣ್ ತೆಲಗಾವಿ ಕೋಶಾಧಿಕಾರಿಗಳಾದ ಶ್ರೀ ಎಂ. ಪಿ. ದೇವರಾಜ್ ಅವರು ಅಧಿಕಾರ ನಿಮಿತ್ತ ಸದಸ್ಯರಾಗಿರುತ್ತಾರೆ.

ಕನ್ನಡ ಜನತೆಗೆ ಒಳ್ಳೆಯ ಸಾಹಿತ್ಯವನ್ನು ಸುಲಭ ಬೆಲೆಗೆ ಒದಗಿಸಬೇಕು, ಕಾಲ ಕಾಲಕ್ಕೆ ಜನತೆಯ ಆಶೋತ್ತರಗಳನ್ನು ಪೂರೈಸುವಂತೆ ವೈಚಾರಿಕ, ವೈಜ್ಞಾನಿಕ ಸಾಹಿತ್ಯ ವನ್ನು ನೀಡಬೇಕು, ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಶ್ರೇಷ್ಠ ಕೊಡುಗೆಗಳನ್ನು ಪರಿಷತ್ತು ಜನತೆಗೆ ನೀಡಬೇಕು ಎಂಬ ಪರಿಷತ್ತಿನ ಧ್ಯೇಯ ಧೋರಣೆಗಳನ್ನು ಗಮನಿಸಿ ಕರ್ನಾಟಕ ರಾಜ್ಯ ಸರ್ಕಾರದವರು ಉದಾರ ಸಹಾಯ ನೀಡಿದ್ದಾರೆ ಮತ್ತು ನೀಡುತ್ತಿದ್ದಾರೆ.

ಪರಿಷತ್ತು ಈಗ ತನ್ನ ಎರಡನೆಯ ಪಂಚವಾರ್ಷಿಕ ಯೋಜನೆಯ ಕಾರ್ಯಗಳನ್ನು ಆರಂಭಿಸಿದೆ. ಆ ಅವಧಿಯಲ್ಲಿ ಮೇಲೆ ತಿಳಿಸಿದಂತೆ ಅನೇಕ ಹೊಸ ಪುಸ್ತಕಗಳನ್ನು ಹೊಸದಾಗಿ ಹಾಕಿಕೊಂಡ ಧ್ಯೇಯ ಧೋರಣೆಗಳಿಗನುಸಾರವಾಗಿ ಹೊರತರಲು ಯತ್ನಿ ಸುತ್ತದೆ ಎಂಬ ನಂಬಿಕೆ ನನಗಿದೆ. ಈ ಕಾರ್ಯದಲ್ಲಿ ಗ್ರಂಥಪ್ರಕಟಣ ಸಲಹಾಸಮಿತಿ ಸದಸ್ಯರು, ಲೇಖಕರು, ಸಾಹಿತ್ಯ ವಿದ್ವಾಂಸರು ಮತ್ತು ಸರ್ಕಾರ ಸಹಕಾರ ನೀಡುತ್ತಿದ್ದಾರೆ. ಅವರಿಗೆಲ್ಲ ಪರಿಷತ್ತು ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಪರಿಷತ್ತಿನ ಪ್ರಕಟಣೆಗಳು ಕನ್ನಡಿಗರಿಗೆ ಲಾಭದಾಯಕವಾಗಿರುವುದರಲ್ಲಿ ಸಂದೇಹ ವಿಲ್ಲ. ಈ ಲಾಭವನ್ನು ಅವರು ಪಡೆದು ನಾಡನುಡಿಯ ಸೇವೆಯಲ್ಲಿ ಪಾಲುದಾರರಾಗ ಬೇಕೆಂದು ಪ್ರಾರ್ಥಿಸುತ್ತೇನೆ.

ಹಂಪ. ನಾಗರಾಜಯ್ಯ
ಅಧ್ಯಕ್ಷ
ಕನ್ನಡ ಸಾಹಿತ್ಯ ಪರಿಷತ್ತು

CC-0. Jangamwadi Math Collection. Digitized by eGangotri

ಉಪೋದ್ಘಾತ

ಕವಿ ಕಾವ್ಯ ವಿಚಾರ : —ಈ ಕಾವ್ಯದ ಕರ್ತೃ 'ಕರ್ನಾಟಾದಿ ಅನೇಕ ಭಾಷೆಗಳಲ್ಲಿ ಪಂಡಿತನೂ, ವರಕವಿಗಳಲ್ಲಿ ಶ್ರೇಷ್ಠನೂ. ಶಿವಾಚಾರಸಂಪನ್ನನೂ, ಔದಾರ್ಯಾದಿ ಗುಣಗಳಿಂದ ಕೂಡಿದವನೂ' ಆದ ಪಂಡಿತಾರಾಧ್ಯ. ಇವನ ಕಾಲ ಎಂ. ಆರ್. ಶ್ರೀ. ಮತ್ತು ಶಿ. ಶಿ. ಬಸವನಾಳರು ಹೇಳುವಂತೆ 16ನೇ ಶ. ದ ಉತ್ತರಾರ್ಧ. ಈತನ ಮನೆದೈವ ಹರಿಹರ ರಾಘವಾಂಕರ ಇಷ್ಟದೈವವಾದ ಪಂಪಾವಿರೂಪಾಕ್ಷ (ಕಾವ್ಯದ ಪ್ರಾರ್ಥನಾ ಪದ್ಯಗಳಲ್ಲಿ ಇದನ್ನು ಗಮನಿಸಬಹುದು.) ಇವನೊಬ್ಬ ಹಿರಿಯ ಮಠದ ಪಟ್ಟಾಧಿಕಾರಿ. ಇವನ ಕಾಲದಲ್ಲಿ ವಿಜಯನಗರದ ಅರಸರ ಕೊಟ್ಟಕೊನೆಯ ವಂಶವಾದ ಅರವೀಡು ವಂಶದ ರಾಜರು ರಾಜ್ಯವಾಳುತ್ತಿದ್ದರು. ಈ ದಿಸೆಯಲ್ಲಿ ವಿರೂಪಾಕ್ಷ ಪಂಡಿತ, ಅರವೀಡು ವಂಶ ವಿಜಯನಗರದ ಕೊನೆಗಾಲ ಇವುಗಳ ಬಗೆಗೆ ಸಾಕಷ್ಟು ಸಂಶೋಧನೆ ನಡೆಯದಿರುವುದು ಶೋಚನೀಯ ಸಂಗತಿ.

ಇವನು 'ತಾನು ಗ್ರಂಥವನ್ನು ತಾರಣ ಸಂವತ್ಸರದ ಶ್ರಾವಣ ಬಹುಳ ದಶಮಿಯ ಗುರುವಾರದಂದು ಮುಗಿಸಿದೆ'ನೆಂದು ಹೇಳಿಕೊಂಡಿದ್ದಾನೆ. ಆದರೆ ಇಲ್ಲಿ ಲೆಕ್ಕಾಚಾರ ತುಸು ತಪ್ಪಾಗಿದೆ. ಲೆಕ್ಕ ಹಾಕಿ ನೋಡಿದರೆ ಅದು 1506 ಎಂದು ನಿರ್ಧರಿತವಾಗುತ್ತದೆ. ಇಲ್ಲಿ ಶ್ರೀ ಗೋವಿಂದಪೈ ಅವರ ಅಭಿಪ್ರಾಯವನ್ನು ನಾವು ಅನುಮಾನಿಸಬೇಕಾಗುತ್ತದೆ. ಇತಿಹಾಸ ಪ್ರಸಿದ್ಧವಾದ-ವಿಜಯನಗರದಲ್ಲಿ ನಡೆದ ತಾಳಿಕೋಟೆ ಯುದ್ಧವನ್ನು ವಿರೂಪಾಕ್ಷ ಪಂಡಿತನು ಸಾಕ್ಷಾತ್ತಾಗಿ ಕಂಡಿರಬಹುದು ಎಂದು ಅನೇಕ ಪಂಡಿತರು ನಂಬುತ್ತಾರೆ,

ಇವನು ಹಂಪೆಯ ಹಿರಿಯ ಮಠವೊಂದಕ್ಕೆ ಪಟ್ಟಾಧಿಕಾರಿಯಾಗಿದ್ದನೆಂದು ಗೊತ್ತಾಗುತ್ತದೆ. ಆದರೆ ಎಲ್ಲ ಪಟ್ಟಾಧಿಕಾರಿಗಳ ಮಠಗಳು 'ಹಿರಿಯ ಮಠಗಳೆ'. ಇವನು ಅಭಿಮಾನಪೂರ್ವಕವಾಗಿ ತನ್ನ ಮಠ ಯಾವುದೆಂದು ಹೇಳದೆ ಹಿರಿಯ ಮಠವೆಂದು ಹೇಳಿಕೊಂಡಿದ್ದಾನೆ. ಇಲ್ಲಿ ಅವನ ಮಠದ ಅಭಿಮಾನವನ್ನು ಗುರುತಿಸಬಹುದು. ಕಾವ್ಯದಲ್ಲೆಲ್ಲಿಯೂ ತನ್ನ ತಂದೆ-ತಾಯಿಗಳೇ ಮುಂತಾದ ಲೌಕಿಕ ವಿಚಾರಗಳ ಬಗ್ಗೆ ಮೌನವಾಗಿರುವುದರಿಂದ ಇವನೊಬ್ಬ ವೀರಶೈವ ವಿರಕ್ತ, ಎನ್ನಬಹುದು. ಇವನಿಗೆ ಗುರುಪರಂಪರೆಯೇ ಮುಖ್ಯ. ಗುರುಪರಂಪರೆಯನ್ನು ಗೌರವವಾಗಿ ಸ್ಮರಿಸುತ್ತಾನೆ. ತನ್ನ ಗುರುವಾದ ಸಿದ್ಧವೀರೇಶನನ್ನು ಸ್ಮರಿಸಿ ಹಾಡಿ ಹೊಗಳಿದ್ದಾನೆ. ಅಲ್ಲದೆ ಮುಂದೆ ಮಳೆಯನ್ನು ತರಿಸಿ ಪವಾಡ ಮಾಡಿದ-ಮಳೆಯ ಮಲ್ಲೇಶನೆಂಬ ಗುರುವನ್ನು ತನ್ನ ಸಂಪ್ರದಾಯದ ಗುರುವೆಂದು ಹೇಳಿದ್ದಾನೆ, ಇಲ್ಲಿ ವೀರಶೈವ ಧರ್ಮದಂತೆ 'ಸಂಪ್ರದಾಯ'ಗಳು ಎಂದರೆ ಏನೆಂಬುದ[illegible] ಅವರದೇ ಆದ 'ಸಂಪ್ರ

CC-0. Jangamwadi Math Collection. Digitized by eGangotri

ದಾಯ'ಗಳಿರುತ್ತವೆ. ಆ ಸಂಪ್ರದಾಯಗಳನ್ನು ಗಮನಿಸಿದ ತಕ್ಷಣ ಆಯಾ ಪೀಠಗಳ ಹೆಚ್ಚಿನ ತಿಳುವಳಿಕೆ ನಮಗಾಗುತ್ತದೆ. ಇಲ್ಲಿ ಮಳೆಯ ಮಲ್ಲೇಶನ ಸಂಪ್ರದಾಯಕ್ಕೆ ಸೇರಿದ ವಿರೂಪಾಕ್ಷ ಪಂಡಿತನ ಬಗ್ಗೆ ಸಾಕಷ್ಟು ಕೆಲಸ ನಡೆದಿಲ್ಲವೆಂದೇ ವಿಷಾದದಿಂದ ಒಪ್ಪಿಕೊಳ್ಳಬೇಕು.

ತನ್ನ ಕಾವ್ಯದಲ್ಲಿ ಕವಿ ಹಿಂದಿನ ಕವಿಗಳನ್ನು ಸ್ಮರಿಸುವ ಸಂದರ್ಭದಲ್ಲಿ ಇವನ ಕಾಲಕ್ಕಾಗಲೇ ಅನೇಕ ರೀತಿಯಲ್ಲಿ ಕ್ರಾಂತಿಯನ್ನು ಮಾಡಿ ಹೊಸ ಸಂಪ್ರದಾಯವನ್ನೇ ಸೃಷ್ಟಿ ಮಾಡಿದ ಹರಿಹರ-ರಾಘವಾಂಕರನ್ನು ಧಾರಾಳವಾಗಿ ಹೊಗಳಿದ್ದಾನೆ. ಶಿವನನ್ನೇ-ಶಿವಭಕ್ತರನ್ನೇ ಕಾವ್ಯವಸ್ತುವನ್ನಾಗಿ ಮಾಡಿಕೊಂಡು ಹೊಗಳಿದ ಹರಿಹರನ ಧಾಟಿಯಲ್ಲಿ ಇವನೂ ತನ್ನ ಕಾವ್ಯದ ನಾಯಕನನ್ನಾಗಿ ಮಾಡಿಕೊಂಡಿರುವುದು ಪರಮ ಶಿವಭಕ್ತನಾದ ಚೆನ್ನ ಬಸವೇಶ್ವರನನ್ನು, ಜನಗಳು ತನ್ನ ಬಳಿ ಬಂದು ಶಿವಭಕ್ತನಾದ ಚೆನ್ನಬಸವನ ಪುರಾಣವನ್ನು ಹೇಳಲು ನೀನಲ್ಲದೆ ಅನ್ಯರಿಂದ ಸಾಧ್ಯವಿಲ್ಲವೆಂದು ಕೇಳಿಕೊಂಡದ್ದರಿಂದ ಈ ಕಾವ್ಯವನ್ನು ರಚಿಸಿದುದಾಗಿ ಕವಿ ಹೇಳಿಕೊಂಡಿದ್ದಾನೆ.

'ಗುಡಿಯೇ ಮಾತನಾಡಿದಂತೆ' ಶ್ರೀ ಚೆನ್ನಬಸವನ ಹೇಳಿಕೆಗೆ ಅನುಸಾರವಾಗಿ ತಾನು ಈ ಕೃತಿಯನ್ನು ಹೇಳಿದ್ದಾನೆ. ಮನುಷ್ಯಧರ್ಮದಂತೆ ಹಸಿವು, ಆಲಸ್ಯ, ನಿದ್ರೆಗಳಿಂದ ದುರ್ಬಲನಾದ ತಾನು ತಪ್ಪುಮಾಡುವುದು ಸಹಜ. ಆ ತಪ್ಪುಗಳನ್ನು ತಿದ್ದಿ ಕಾವ್ಯವನ್ನು ಸ್ವೀಕರಿಸಬೇಕು' ಎಂದು ವಿನಯಪ್ರದರ್ಶನ ಮಾಡಿದ್ದಾನೆ. ವಿರೂಪಾಕ್ಷ ಪಂಡಿತನ ಕಾಲದಲ್ಲೇ ಕಾವ್ಯಸಂಪ್ರದಾಯಗಳು ಉಳಿದುಬಂದಿದ್ದರಿಂದ ಇವನು ಪರಕವಿ ನಿಂದೆಯನ್ನು ಕಾವ್ಯದಲ್ಲಿ ಮಾಡಿದ್ದಾನೆ. ಇವನ ಹೆಸರಿಗೆ ಇನ್ನಾವ ಕಾವ್ಯಗಳೂ ಆರೋಪಿಸಲ್ಪಟ್ಟಿಲ್ಲವಾದ್ದರಿಂದ, ತಾನೂ ಹೇಳಿಕೊಂಡಿಲ್ಲವಾದ್ದರಿಂದ ಚೆನ್ನಬಸವ ಪುರಾಣವೊಂದೇ ಇವನ ಕೃತಿ ಎಂದು ಹೇಳಬಹುದು. ಸಿದ್ಧನಂಜೇಶನು ಬರೆದ 'ಗುರುರಾಜ ಚಾರಿತ್ರ' ದಲ್ಲಿ ಅನೇಕ ಅಂಶಗಳು ವಿರೂಪಾಕ್ಷಪಂಡಿತನ ಬಗ್ಗೆ ದೊರೆಯುತ್ತವೆ. ಇವನು ತನ್ನ ಕಾವ್ಯದಲ್ಲಿ ಬಾಣ, ಮಯೂರ, ಭವಭೂತಿ, ಕಾಳಿದಾಸ, ಮಲುಹಣ, ರಾಘವಾಂಕ, ಹರಿಹರ, ಹಲಾಯುಧ, ಉದ್ಭಟ, ಪಂಡಿತ, ಭೀಮ, ಮಗ್ಗೆಯ ಮಾಯಿದೇವ ಚಾಮರಸ, ಶಂಕರ, ಕೆರೆಯ ಪದ್ಮರಸ ಮೊದಲಾದವರನ್ನು ಸ್ಮರಿಸಿ ತನ್ನ ಕಾವ್ಯವನ್ನು ಆರಂಭಿಸುತ್ತಾನೆ. ತನ್ನ ಕಾವ್ಯದಲ್ಲಿ ಕವಿ ಅನೇಕ ಐತಿಹಾಸಿಕ ಅಂಶಗಳನ್ನು ಹೇಳುತ್ತಾನೆ. ವೀರಶೈವ ಕ್ರಾಂತಿ ನಡೆದ ಅನಂತರ ಬಾಳೆಯ ಹೊನ್ನೂರು ಮಠ, ಗುಮ್ಮಳಾಪುರದ ಮಠ ಸ್ಥಾಪನೆಯಾದದ್ದರ ವಿಷಯ ಕಾವ್ಯದ ಕೊನೆಯಲ್ಲಿ ನಿರೂಪಿತವಾಗಿದೆ. ಇವೆಲ್ಲವೂ ಮಠಗಳ ಇತಿಹಾಸ ದೃಷ್ಟಿಯಿಂದ ಬಹಳ ಮುಖ್ಯವಲ್ಲವೆ ? ಈ ದೃಷ್ಟಿಯ ಸಂಶೋಧನೆ ಇನ್ನೂ ನಡೆದಿಲ್ಲವೆಂಬುದನ್ನು ವಿಷಾದದಿಂದ ಸ್ಮರಿಸಬೇಕಾಗಿದೆ.

ಕೀರ್ತನೆಗಳ ಮೂಲಕ ಮತಪ್ರಚಾರ ಮಾಡುತ್ತಿದ್ದ ಕಾಲದಲ್ಲಿ ಬೆಳವಣಿಗೆಗೊಂಡ ರೀತಿ ಕೃತಿರಚನೆಗಳಿಂದ ಧರ್ಮಪ್ರಚಾರ ಮಾಡುವುದಕ್ಕೆ ಕಾರಣವಾಯಿತು. ಈ ಕಾಲ

CC-0. Jangamwadi Math Collection. Digitized by eGangotri

ದಲ್ಲಿಯೇ ಕವಿ ಚೆನ್ನಬಸವೇಶ್ವರನ ಚರಿತ್ರೆಯನ್ನು ಪುರಾಣವಾಗಿ ಬರೆದನು. ಅಂದಿನ ಕಾಲದಲ್ಲಿ ಪುರಾಣ ಮಾಧ್ಯಮವೇ ಮತಗಳ ಪ್ರಚಾರಕ್ಕೆ ಉತ್ತಮ ಸಾಧನವೆಂದು ಅರಿತ ಕವಿ ಈ ಪುರಾಣವನ್ನು ಹಾಡಲು ಯೋಗ್ಯವಾದ ಷಟ್ಪದಿಗಳ ಮೂಲಕ ರಚಿಸಿದ. ಈತನಿಗೆ ಪುರಾಣಪ್ರಜ್ಞೆ ಸಂಪೂರ್ಣವಾಗಿತ್ತು. ವೀರಶೈವ ಪುರಾಣಗಳು ಬೆಳೆದುಬಂದ ದಾರಿಯನ್ನು ಹೃದ್ಗತ ಮಾಡಿಕೊಂಡ ಕವಿ ಸಂಪ್ರದಾಯದ ಚೌಕಟ್ಟಿನಲ್ಲಿ ಯಶಸ್ವಿಯಾಗಿ ತನ್ನ ಕಾರ್ಯವನ್ನು ನಿರ್ವಹಿಸಿದ್ದಾನೆ. ಇದರಿಂದ ಈ ಪುರಾಣ 'ಚೆನ್ನಬಸವ ಪುರಾಣ' ವಾಗದೆ ವೀರಶೈವ ಧರ್ಮದ 'ಕೈಪಿಡಿ'ಯಾಗಿದೆಯೆಂದೇ ಹೇಳಬೇಕು. ಅನೇಕ ಸಂದರ್ಭ ಗಳಲ್ಲಿ ಕಾವ್ಯನಾಯಕ ಚೆನ್ನಬಸವಣ್ಣ ಗೌಣವಾಗಿ ಬಿಡುತ್ತಾನೆ. ವೀರಶೈವ ಧರ್ಮ ನಿರೂಪಣೆಯ ರೀತಿ ಹಲಗೆಯಾಚಾರ್ಯನ ವೀರಶೈವಾಮೃತವನ್ನು ನೆನಪಿಗೆ ತರುತ್ತದೆ, ಎಂ. ಆರ್. ಶ್ರೀ ಯವರ ಅಭಿಪ್ರಾಯದಂತೆ ಇದೊಂದು ಸಂಪೂರ್ಣ ಮತಗ್ರಂಥವಾಗಿ ಪರಿಣಮಿಸಿದೆ. ಚಾಮರಸ ತನ್ನ ನಾಯಕ ಅಲ್ಲಮನ ಚಿತ್ರಣದಲ್ಲಿ ತೋರಿದ ತಲ್ಲೀನತೆ ವಿರೂಪಾಕ್ಷ ಪಂಡಿತನಲ್ಲಿ ಕಂಡುಬರುವುದಿಲ್ಲವಾಗಿ ಕೇವಲ ಪಾಂಡಿತ್ಯಪ್ರೌಢಿಮೆ ಮತ್ತು ಮತಾಸಕ್ತಿಯೇ ಅವನ ಕೃತಿಯಲ್ಲಿ ಎದ್ದುಕಾಣುವ ಅಂಶವಾಗಿದೆ.

'ಚೆನ್ನಬಸವ ಪುರಾಣ'ದಲ್ಲಿ ಒಟ್ಟು ಅರವತ್ತುಮೂರು ಸಂಧಿಗಳು ಬರುತ್ತವೆ. ಅವುಗಳಲ್ಲಿ ಚೆನ್ನಬಸವನ ಜೀವನ ಚರಿತ್ರೆ, ಸಿದ್ಧರಾಮನಿಗೆ ಅವನು ಮಾಡಿದ ಪಂಚ ವಿಂಶತಿ ಲೀಲೆಗಳ ಕಥನ (ಎಂ. ಆರ್. ಶ್ರೀ–ಹೇಳುವಂತೆ ಇಲ್ಲಿ ವೀರಶೈವೋಪದೇಶವನ್ನು ನಾವು ಸೇರಿಸಬಹುದು), ನೂತನ-ಪುರಾತನರ, ನೂರೊಂದು ವಿರಕ್ತರ, ಏಳುನೂರು ತೇರಸರ ಮತ್ತು ಇತರ ಶರಣರ ವೃತ್ತಾಂತಗಳು, ಕೆಲವು ಐತಿಹಾಸಿಕ ವಿಚಾರಗಳನ್ನು ಬೆರೆಸಿ ಹೇಳಿದ ಕಾಲಜ್ಞಾನ–ಹೀಗೆ ಅನೇಕ ವಿಷಯಗಳು ವೈವಿಧ್ಯಮಯವಾಗಿ ಹರಡಿಕೊಂಡಿವೆ.

ಕನ್ನಡ ಕಾವ್ಯದಲ್ಲಿ 'ಚೆನ್ನಬಸವ ಪುರಾಣ' ಬಹಳ ಜನಪ್ರಿಯವಾದ ಕಾವ್ಯವಾಗ ಬಹುದಿತ್ತು. ಈ ಕಾವ್ಯದ ಕಥಾನಾಯಕನಾದ ಚೆನ್ನಬಸವಣ್ಣ ಬಸವಣ್ಣನನ್ನು ಮೀರಿಸಿದ ಪವಾಡಪುರುಷನಾಗಲಿಲ್ಲವೆಂದು ಈ ಕಾವ್ಯಕ್ಕೆ ಸಿಕ್ಕಬೇಕಾದ ಪ್ರಾಶಸ್ತ್ಯ ಸಿಕ್ಕದಿರಬಹುದೊ ಏನೊ.

2906 ಪದ್ಯಗಳಿಂದ 63 ಸಂಧಿಗಳಿಂದ ಕೂಡಿದ ಈ ಬೃಹತ್ಕಾವ್ಯದಲ್ಲಿ ಪ್ರತಿಯೊಂದು ಸಂಧಿಯ ಪ್ರಾರಂಭದ ಮೊದಲನೆಯ ಪದ್ಯದಲ್ಲಿ ಯಮಕ, ಪ್ರಾಸ, ಅನುಪ್ರಾಸ, ಉಕ್ತಿ ಚಮತ್ಕಾರ, ಶ್ಲೇಷ ಮೊದಲಾದ ಪಾಂಡಿತ್ಯಪ್ರದರ್ಶನ ಗಳಲ್ಲಿಯೇ ಪಂಡಿತವರ್ಗದವರನ್ನು ಕವಿ ಆಕರ್ಷಿಸುತ್ತಾನೆ. ಇವನ ಕಾವ್ಯದಲ್ಲಿ ಗಮನಿಸಲೇ ಬೇಕಾದ ಇನ್ನೊಂದು ಅಂಶವೆಂದರೆ ಪ್ರತಿಯೊಂದು ಸಂಧಿಯ ಅಂತ್ಯಪದ್ಯವೂ ಮತ್ತು ಪ್ರತಿಯೊಂದು ಕಾಂಡಗಳ ಅಂತ್ಯಪದ್ಯವೂ ಒಂದೇ ರೀತಿಯಲ್ಲಿರುವುದು. ಈ ಕಾವ್ಯ ಸಂಪ್ರದಾಯಬದ್ಧವಾದ ಅಷ್ಟಾದಶ ವರ್ಣನೆಗಳಿಂದ ಕೂಡಿ ಮಹಾಕಾವ್ಯದ ಲಕ್ಷಣಗಳನ್ನೆಲ್ಲಾ ಒಳಗೊಂಡಿದೆ.

CC-0. Jangamwadi Math Collection. Digitized by eGangotri

ವಿರೂಪಾಕ್ಷ ಪಂಡಿತ ತನ್ನ ಕಾವ್ಯವಾದ 'ಚೆನ್ನಬಸವ ಪುರಾಣ'ದ ಮೂಲಕ ಶಿವನ ಲೀಲೆಗಳನ್ನು ವರ್ಣಿಸುತ್ತಾನೆ. ಜೊತೆಗೆ ಅನೇಕ ಶಿವಶರಣರ ವಿಚಾರಗಳನ್ನು ಹೇಳುತ್ತಾನೆ. ಕವಿ ಶಿವಲೀಲೆಗಳನ್ನು-ಶಿವಶರಣರ ವಿಚಾರಗಳನ್ನು ಹೇಳುವಾಗ ಭಕ್ತಿ, ಪಾಂಡಿತ್ಯಪೂರ್ಣ ಶ್ರದ್ಧೆ ಎದ್ದುತೋರುತ್ತದೆ. ಅವತಾರ ಲೀಲೆಗಳನ್ನು ವರ್ಣಿಸುವಾಗ ಕವಿಗೆ ಕಾಲದ ಗಣನೆಯಿಲ್ಲದೆ, ಕಥಾನಕದಲ್ಲಿ ತಾನೇ ಮುಳುಗಿಹೋಗುತ್ತಾನೆ. ಅನೇಕ ಶೈವರ ವೀರಶೈವರ ಶಿವರಶರಣರ ಕಥೆಗಳನ್ನು ಸಂಕ್ಷಿಪ್ತವಾಗಿ ತಿಳಿಸುತ್ತಾನೆ. ಕಾರಣ ಅಷ್ಟುಹೊತ್ತಿಗೆ ಅವರೆಲ್ಲ ಪ್ರಮುಖರಾಗಿದ್ದಿರಬಹುದೆ ? ಕಾವ್ಯದ ಕೊನೆಯಲ್ಲಿ ಬರುವ ಘಟನೆಗಳನ್ನು ಗಮನಿಸಿದರೆ ಅಂದಿನ ಕಾಲದ ಐತಿಹಾಸಿಕ-ಸಾಮಾಜಿಕ ಚರಿತ್ರೆಯ ಮೇಲೆ ಬೆಳಕನ್ನು ಬೀರಬಹುದೆನಿಸುತ್ತದೆ.

ಪಿಂಡೋತ್ಪತ್ತಿ, ಕರಣ ಹಸುಗೆ ನಿರೂಪಣೆ, ದೀಕ್ಷಾ ವಿಧಾನ, ಲಿಂಗಾರ್ಚನೆ, ಷಟ್‌ಸ್ಥಲಗಳ ನಿರ್ಣಯ ಮುಂತಾದ ಅನೇಕ ಸಂಧಿಗಳಲ್ಲಿ ಬರುವ ವೀರಶೈವ ಧರ್ಮದ ಜಿಜ್ಞಾಸೆ ಹೊರನೋಟಕ್ಕೆ ಶುಷ್ಕವಾಗಿ ಕಂಡರೂ ಚಿರಂತನ ಆಧ್ಯಾತ್ಮಿಕ ದಾಹವನ್ನು ತೃಪ್ತಿಪಡಿಸುತ್ತದೆ. ಶಿವಶರಣರ ಧಾರ್ಮಿಕ ಕ್ರಾಂತಿಯ ಸಮಗ್ರ ಚಿತ್ರಣವನ್ನು ಪಡೆಯಲು ಈ ಕಾವ್ಯದಲ್ಲಿ ಉಲ್ಲಿಖಿತವಾಗಿರುವ ಶಿವಶರಣರ ಹೆಸರಿನ ಪಟ್ಟಿಯನ್ನು ಗಮನಿಸಿದರೆ ಸಾಕು. ಚೆನ್ನಬಸವ ಪುರಾಣದ ಕೊನೆಯ ಸಂಧಿಗಳು ಕನ್ನಡ ನಾಡಿನಲ್ಲಿ ನಡೆದುಹೋದ ಕ್ರಾಂತಿಯ ಸಾಮಾಜಿಕ-ಧಾರ್ಮಿಕ-ಆರ್ಥಿಕ-ಯುಗಪೌಲಿಕ-ಸಮಗ್ರ ಚಿತ್ರಣವನ್ನು ನಮಗೆ ಕೊಡುತ್ತದೆ.

ಅನೇಕಾನೇಕ ವೀರಶೈವ ಪುರಾಣಗಳಲ್ಲಿ ಕಂಡುಬಾರದ ಅವಧಾನ, ಸುಸಂಬದ್ಧತೆ, ಹಾಗೂ ಕ್ರಮಬದ್ಧ ನಿರೂಪಣೆ ವಿರೂಪಾಕ್ಷ ಪಂಡಿತನದು ಎನ್ನಬಹುದು. ಈ ಪುರಾಣದಲ್ಲಿ ಕೆಲವು ಕಡೆ ತತ್ವನಿರೂಪಣೆಯ ಸಂದರ್ಭಗಳಲ್ಲಿ ಕವಿಯ ಶೈಲಿ ನೇರ ಹಾಗೂ ಸರಳವಾಗಿದೆ. ವರ್ಣನಾಪ್ರಿಯತೆ ಅವನ ಕಾವ್ಯಗಳಲ್ಲಿ ಕಂಡುಬರುವ ಮತ್ತೊಂದು ಅಂಶ. ಯುದ್ಧವರ್ಣನೆಗಳು ಕಾವ್ಯದಲ್ಲಿ ಮೇಲಿಂದ ಮೇಲೆ ಪುನರಾವರ್ತನೆಗೊಂಡಿದ್ದರೂ ಬೇಸರ ಬಾರದಂತೆ ಕವಿ ವೈವಿಧ್ಯವನ್ನು ತೋರಿದ್ದಾನೆ. ಪ್ರಕೃತಿ ವರ್ಣನೆ, ಸ್ತ್ರೀವರ್ಣನೆ ಮೊದಲಾದ ಸಂದರ್ಭಗಳು ರಸಿಕರ ಮನಸ್ಸನ್ನು ಸೂರೆಗೊಳ್ಳುತ್ತವೆ.

ಚೆನ್ನಬಸವ ಪುರಾಣದ ಜನಪ್ರಿಯತೆಗೆ ಅನೇಕ ಭಾಷೆಗಳಲ್ಲಿ ಅದು ಭಾಷಾಂತರಿಸಲ್ಪಟ್ಟಿರುವುದೇ ಸಾಕ್ಷಿ. ಕನ್ನಡ ಗ್ರಂಥವೊಂದು ಈ ರೀತಿ ಅನೇಕ ಭಾಷೆಗಳಲ್ಲಿ ಭಾಷಾಂತರವಾಗಿರುವುದು ಕನ್ನಡಿಗರು ಹೆಮ್ಮೆಪಡುವ ವಿಷಯವಾಗಿದೆ.

ಎಂ. ಚಂದ್ರಶೇಖರ್

CC-0. Jangamwadi Math Collection. Digitized by eGangotri

ವಿಷಯಸೂಚಿ

ಚತುರ್ಥ ಕಾಂಡ

41. ಶಿವನು ತ್ರಿಪುರಕ್ಕೆ ಬಂದುದು ೩
42. ತ್ರಿಪುರದ ಮುತ್ತಿಗೆ ೨೪
43. ವಿದ್ಯುನ್ಮಾಲಿ ಕಮಲಾಕ್ಷರ ಯುದ್ಧ ೪೧
44. ತ್ರಿಪುರಸಂಹಾರ ೬೧
45. ಜಲಕ್ರೀಡೆ ೭೯
46. ಗಂಗಾಧರಲೀಲೆ ೧೦೪
47. ಅಂಧಕಾಸುರೋತ್ಪತ್ತಿ ೧೧೮
48. ಅಂಧಕಾಸುರನು ಕೈಲಾಸಕ್ಕೆ ದಂಡೆತ್ತಿ ಬಂದುದು ೧೩೫
49. ಅಂಧಕಾಸುರ ಯುದ್ಧ ೧೫೫
50. ಅಂಧಕಾಸುರ ಸಂಹಾರ ೧೭೭
51. ಕಾಲದಹನ ೧೯೭
52. ಸುಖವಹಮೂರ್ತಿಲೀಲೆ ೨೧೧
53. ಕಿರಾತಲೀಲೆ ೨೩೫

ಪಂಚಮ ಕಾಂಡ

54. ಸೋಮಸೂರ್ಯಾನ್ವಯ ವರ್ಣನೆ ೨೬೨
55. ಶೈವರ ಕಥೆ ೨೭೨
56. ಸಾನಂದಗಣೇಶ್ವರನ ಕಥೆ ೨೯೨
57. ವೀರಶೈವ ಶರಣರ ಕಥೆ ೩೧೬
58. ಪಿಂಡೋತ್ಪತ್ತಿ ಕರಣಹಸಿಗೆ ೩೫೦
59. ದೀಕ್ಷಾವಿಧಾನ ೩೬೮
60. ಲಿಂಗಾರ್ಚನಾ ವಿಧಾನ ೩೮೩
61. ಷಟ್ಸ್ಥಲ ನಿರ್ಣಯ ೩೯೮
62. ಕಾಲಜ್ಞಾನ ೪೨೩
63. ಕಾಲಜ್ಞಾನ ೪೫೦

CC-0. Jangamwadi Math Collection. Digitized by eGangotri

ಆಧಾರ ಗ್ರಂಥಗಳು

1. ಚೆನ್ನಬಸವ ಪುರಾಣ—ಶಿ. ಶಿ. ಬಸವನಾಳ.
2. ಜಯಕರ್ನಾಟಕ.
3. ಪ್ರಭುಲಿಂಗ ಲೀಲೆ.
4. ಕನ್ನಡ ಸಾಹಿತ್ಯ ಚರಿತ್ರೆ—ರಂ. ಶ್ರೀ. ಮುಗಳಿ.
5. ಚೆನ್ನಬಸವ ಪುರಾಣ ಸಂಗ್ರಹ—ಎಂ. ಆರ್. ಶ್ರೀ.
6. ಶಿವತತ್ವ ಚಿಂತಾಮಣಿ—ಎಸ್. ಬಸಪ್ಪ.
7. ಚನ್ನಬಸವಣ್ಣನ ಷಟ್‌ಸ್ಥಲ ಮಹಿಮೆ—ಆರ್. ಸಿ. ಹಿರೇಮಠ.
8. ಹರಿಹರ—ಡಿ. ಎಲ್. ಎಸ್.
9. ರಾಘವಾಂಕ—ರಾಗೌ.
10. ಕರ್ನಾಟಕ ಕವಿಚರಿತೆ—ಆರ್. ನರಸಿಂಹಾಚಾರ್.
11. ಗಿರಿಜಾಕಲ್ಯಾಣ—ಎಸ್. ಸಿ. ನಂದೀಮಠ.
12. ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ—ತ. ಸು. ಶಾಮರಾವ್, ಮ.ರಾಜೇಶ್ವರಯ್ಯ
13. ವೀರಶೈವ ಸಾಹಿತ್ಯ ಮತ್ತು ಇತಿಹಾಸ—ಶಿವಮೂರ್ತಿ ಶಾಸ್ತ್ರಿ.
14. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ—ಜಿ. ಎಸ್. ಶಿವರುದ್ರಪ್ಪ.

CC-0. Jangamwadi Math Collection. Digitized by eGangotri

ವಿರೂಪಾಕ್ಷ ಪಂಡಿತ ಕೃತ

ಚೆನ್ನಬಸವ ಪುರಾಣ

ಎರಡನೆಯ ಸಂಪುಟ

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಚತುರ್ಥ ಕಾಂಡ

ನಲವತ್ತೊಂದನೆಯ ಸಂಧಿ

ಸೂಚನೆ : ತಾರಕಾತ್ಮಜರಲೆಗೆ ಕಣ್ಗೆಟ್ಟು ಸುರರಿರದೆ
ಮಾರಾರಿಗತುಳ ಪಶುಪತಿಪಟ್ಟಮಂ ಕಟ್ಟಿ
ಕ್ರೂರ ಖಳರಂ ಕೊಲ್ವೆನೆಂದೀಶ್ವರಂ ತ್ರಿಪುರಕೈದಿ ಪಾಳೆಯಮಿಳಿದನು

ಪುರದಹನಕರ ಕಾಮಹರ ಪರಮಸುರನದೀ
ಧರ ಕೃಪಾಕರ ದಿವಾಕರಕೋಟಿವರತೇಜ
ನರ ವಿಪುಳತರಶೈವಶರವರದ ಹರ ಮಹೇಶ್ವರ ದುರುಳಖಳಸಂಹರ
ಮುರಹರ ಸರೋಜಜಾಮರವರಾನತ ದಿವ್ಯ
ಚರಣ ಘನತರಪುಣ್ಯಕರಣ ವ್ಯಾಘ್ರಾಜಿನಾ
ವರಣ ನತಸಂಕುಲೋದ್ಧರಣ ಸರ್ಪಪ್ರಜಾಭರಣ ಸಲಹಾನತರನು ೧

ಸನ್ನುತಗುಣಾಗ್ರಣಿಯೆ ಸಕಲಧರ್ಮದ ಖಣಿಯೆ
ಚೆನ್ನಬಸವೇಶ ದುಷ್ಕೃತನಾಶ ಪೇಳ್ವುದೆನ
ಗಿನ್ನು ತಾರಕನ ಸುತರಾ ಗುಹೆಯೊಳಡಗಿರ್ದು ಬಳಿಕಲೇನಾದರೆನಲು
ಚೆನ್ನಾಗಿ ಕೇಳಯ್ಯ ಸಿದ್ಧರಾಮೇಶ ಶಿವ
ನುನ್ನತಕಥಾಮೃತದ ಸುಗ್ಗಿಯಂ ಶೌರ್ಯಸಂ
ಪನ್ನನೆಂದೆನಿಪ ಷಣ್ಮುಖನಿಂದೆ ತಾರಕಂ ಮಡಿದ ಸಮನಂತರದೊಳು ೨

ಸೂಚನೆ : ತಾರಾಕಾಸುರನ ಮಕ್ಕಳ ಹೊಡೆತಕ್ಕೆ ಕಂಗೆಟ್ಟು ದೇವತೆಗಳು ತಡೆಯದೆ ಈಶ್ವರನಿಗೆ ಶ್ರೇಷ್ಠವಾದ ಪಶುಪತಿಪಟ್ಟವನ್ನು ಕಟ್ಟಿದರು. ಈಶ್ವರನು ದುಷ್ಟರಾದ ರಾಕ್ಷಸರನ್ನು ಕೊಲ್ಲುವೆನೆಂಬುದಾಗಿ ತ್ರಿಪುರ ಪಟ್ಟಣಕ್ಕೆ ಹೋಗಿ ಪಾಳಯವನ್ನು ಬಿಟ್ಟನು. ೧. ತ್ರಿಪುರರನ್ನು ದಹಿಸಿದವನು, ಮದನಧ್ವಂಸಿ, ದೇವ ಗಂಗಾಧರ, ಕೃಪಾಳು, ಕೋಟಿ ಸೂರ್ಯಪ್ರಕಾಶ, ಅರ್ಜುನನಿಗೆ ಶ್ರೇಷ್ಠವಾದ ಪಾಶುಪತಾಸ್ತ್ರವನ್ನು ಕೊಟ್ಟವನು, ಶಿವ, ಮಹೇಶ್ವರ, ದುಷ್ಟರಾದ ರಾಕ್ಷಸರ ಸಂಹಾರಿ, ವಿಷ್ಣು–ಬ್ರಹ್ಮ–ಇಂದ್ರರಿಂದ ನಮಸ್ಕರಿಸಿ ಕೊಳ್ಳುವ ದಿವ್ಯವಾದ ಪಾದವುಳ್ಳವ, ಶ್ರೇಷ್ಠವಾದ ಪುಣ್ಯವನ್ನುಂಟುಮಾಡುವ ವ್ಯಾಘ್ರ ಚರ್ಮಾಂಬರ, ನಮಸ್ಕರಿಸಿದವರನ್ನು ಉದ್ಧರಿಸುವ ಸರ್ಪಭೂಷಣನಾದ ಶಿವನೇ ನಮಸ್ಕರಿಸಿದವರನ್ನು ಕಾಪಾಡು. ೨. ಹೊಗಳಿಸಿಕೊಳ್ಳುವ ಗುಣಗಳಿಗೆ ಅಗ್ರಗಣ್ಯ, ಸಕಲಧರ್ಮದ ಗಣಿ, ದುಷ್ಕೃತ್ಯಗಳ ನಾಶಕನಾದ ಚೆನ್ನಬಸವೇಶ, ತಾರಕನ ಮಕ್ಕಳು ಆ ಗುಹೆಯಲ್ಲಿ ಅಡಗಿದ್ದ ನಂತರ ಏನಾದರೆಂಬುದನ್ನು ಇನ್ನು ನನಗೆ ಹೇಳು ಎಂದು ಸಿದ್ಧರಾಮನು ಕೇಳಿದನು. ಅದಕ್ಕೆ ಚೆನ್ನಬಸವೇಶನು ಎಲೈ ಸಿದ್ಧರಾಮಣ್ಣ, ಶಿವನ ಉನ್ನತವಾದ ಕಥಾಮೃತದ ಸುಗ್ಗಿಯನ್ನು ಚೆನ್ನಾಗಿ ಕೇಳಯ್ಯ. ಶೌರ್ಯಸಂಪನ್ನನಾದ

CC-0. Jangamwadi Math Collection. Digitized by eGangotri

ತಲೆದಡಹಿದಳ್ ಧರಾವನಿತೆ ಲೋಕದ ಜನರ್
ನಲಿದರ್ ಸಮಸ್ತದೇವಪ್ರತತಿ ದುಂದುಭಿಯ
ದೊಳಗಿನಿಂ ಗುಡಿತೋರಣಂಗಳಿಂ ಸಿಂಗರಿಸಿ ತಂತಮ್ಮ ನಗರಂಗಳ
ಸಲಪೊಕ್ಕು ಸುಖದಿನಿರುತಿರೆ ತಾರಕಾತ್ಮಜರ್
ಕಲಿತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿ
ಗಳೆನಿಪ್ಪಖಿಲಜನವರೀ ಮೂವರುಂ ಗಿರಿಗುಹಾಂತರದೊಳಡಗಿರ್ದರು ೩

ನೂಕಿದರ್ ಖಳರಿಂತು ಬಹುಕಾಲಮಂ ಗುಹಾ
ನೀಕದೊಳ್ ಭೇದದಿಂ ಮೇಣೊಂದು ದಿವಸ ಚಿಂ
ತಾಕುಳಿತಮಾನಸರ್ ತಮ್ಮೊಳಗೆ ತಾವೆ ನೆನೆದಾಲೋಚನಂಗೈವುತೆ
ಸಾಕಿನ್ನು ಚಿಂತೆ ನಮ್ಮಯ್ಯಂಗೆ ವರವಿತ್ತ
ಕೋಕನದಗರ್ಭನಂ ಕುರಿತು ತಪಮಂ ಮಾಡಿ
ಬೇಕಾದ ವರಗಳಂ ಪಡೆದು ದಿವಿಜರ ಬಡಿವೆವೇಕೆ ಸಂಶಯಮೆಂದರು ೪

ಖಳರಿಂತು ನಿರ್ಧರಿಸಿ ಕ್ರೂರತಪಮಂ ಮಾಡಿ
ಸುಲಭವಾಗಿರ್ದ ವರಮಂ ಪಡೆವೆವೆಂದಾಗ
ತೊಳಗುವ ತಪೋವನವ ನೋಡುತ್ತೈತರೆ ಮುಂದೆ ಕಾಣಿಸಿತು ವನಮದರೊಳು
ಸುಲಿಪಲ್ಲ ಕೆಂಜಡೆಯ ಕೃಷ್ಣಾಜಿನಾಂಬರದ
ವಿಲಸದ್ವಿಭೂತಿಲೇಪನದ ಸರ್ವಾಂಗದು
ಜ್ವಲಿಪಕ್ಷಮಾಲಾವಿಭೂಷಿತೋರಸ್ಥಲದ ಮುನಿವರರ್ ಕಣ್ಗೆಸೆದರು ೫

ಷಣ್ಮುಖನಿಂದ ತಾರಕನು ಸತ್ತ ಮೇಲೆ ೩. ಭೂವನಿತೆ ·ತಲೆದೂಗಿದಳು, ಲೋಕದ ಜನರು ಸಂತೋಷಿಸಿದರು. ಎಲ್ಲ ದೇವಸಮೂಹ ತಮ್ಮ ತಮ್ಮ ನಗರಗಳನ್ನು ಬಾವುಟ-ತೋರಣಗಳಿಂದ ಶೃಂಗಾರಮಾಡಿ ಭೇರಿಗಳ ಶಬ್ದದೊಡನೆ ಸಂಭ್ರಮದಿಂದ ಪ್ರವೇಶಿಸಿ ಸುಖವಾಗಿದ್ದರು. ತಾರಕನ ಮಕ್ಕಳಾದ ಶೂರತಾರಕಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ ಗಳೆನಿಸುವ ರಾಕ್ಷಸರಾಜರು ಮೂವರೂ ಬೆಟ್ಟ ಗುಹೆಗಳಲ್ಲಿ ಬಚ್ಚಿಟ್ಟುಕೊಂಡಿದ್ದರು. ೪. ಈ ರೀತಿ ರಾಕ್ಷಸರು ಬಹಳಕಾಲ ವಂಚನೆಯಿಂದ ಗುಹೆಗಳಲ್ಲಿ ಕಳೆದರು. ಮತ್ತೊಂದು ದಿನ ಚಿಂತೆಯಿಂದ ಕೂಡಿದ ಅವರು ತಮ್ಮಲ್ಲಿ ತಾವೇ ನೆಗೆದು ಇನ್ನು ಚಿಂತೆ ಸಾಕು, ನಮ್ಮ ತಂದೆಗೆ ವರಕೊಟ್ಟ ಆ ಬ್ರಹ್ಮನನ್ನು ಕುರಿತು ತಪಸ್ಸುಮಾಡಿ ಬೇಕಾದ ವರಗಳನ್ನು ಪಡೆದು ದೇವತೆಗಳನ್ನು ಸದೆಬಡಿಯುತ್ತೇವೆ. ಇನ್ನು ಏಕೆ ಸಂಶಯವೆಂದು ಆಲೋಚಿಸಿ ದರು. ೫. ರಾಕ್ಷಸರು ಈ ರೀತಿ ನಿರ್ಧಾರಮಾಡಿ ಘೋರವಾದ ತಪಸ್ಸನ್ನು ಮಾಡಿ ಸುಲಭವಾದ ವರವನ್ನು ಪಡೆಯುತ್ತೇವೆ ಎಂದು ಆಗ ತಪಸ್ಸಿಗಾಗಿ ಕಾಡನ್ನು ಹುಡುಕುತ್ತ ಬರುತ್ತಿದ್ದರು. ಆಗ ಮುಂದೆ ಒಂದು ಅರಣ್ಯ ಕಾಣಿಸಿತು. ಅದರಲ್ಲಿ ಹೊಳೆವ ಹಲ್ಲುಗಳ, ಕೆಂಪಾದ ಜಡೆಯ, ಜಿಂಕೆಯ ಚರ್ಮವನ್ನೆ ಬಟ್ಟೆಯನ್ನಾಗಿ ಧರಿಸಿ ಪ್ರಕಾಶಿಸುವ, ವಿಭೂತಿ ಬಳಿದ ದೇಹದ, ಉಜ್ವಲಿಸುವ ರುದ್ರಾಕ್ಷಿಮಾಲೆಯನ್ನು ಎದೆಯ ಮೇಲೆ ಧರಿಸಿದ್ದ

CC-0. Jangamwadi Math Collection. Digitized by eGangotri

ಎಲೆ ಸಿದ್ಧರಾಮ ಕೇಳಾ ವನದೊಳೆಸೆವ ತಿಳಿ
ಗೊಳದಲ್ಲಿ ಮಿಂದು ಶುಚಿಯಾಗಿ ತೀರವನಡರಿ
ನಳಿನಬಾಂಧವಗಂ ನಮಸ್ಕರಿಸಿ ತಮ್ಮ ಮನದಿಷ್ಟಂಗಳಂ ಜಾನಿಸಿ
ಜಲಜಸಂಭವನ ನಿರ್ಮಳ ಪೂತಮೂರ್ತಿಯಂ
ನೆಲೆಗೊಳಿಸಿ ತಮ್ಮ ಹೃತ್ಕಮಲದೊಳ್ ಯೋಗಿಸಂ
ಕುಲದೊಳಪ್ರತಿಮರೆಂದೆನಿಸಿ ಖಳರಾಗತೊಡಗಿದರುಗ್ರತರತಪವನು ೬

ಚರಣದುಂಗುಟಮನಿಳೆಗೂರಿ ನಾಸಾಗ್ರದೊಳ
ಗಿರಸಿ ದೃಷ್ಟಿಯನಮಲತರತಪೋವೃದ್ಧಿಯಂ
ಪುರಿಗೊಳಿಸಿ ಚಿತ್ತಮಂ ಬಲಿದು ನಿಷ್ಕಂಪನಂ ಮಾಡಿ ಸರ್ವಾಂಗದೊಳಗೆ
ಇರದೆ ದೇಹಾಭಿಮಾನವನುಳಿದುಮತ್ಯುಗ್ರ
ತರವಾದ ನಿಷ್ಠೆಯಿಂ ದುಷ್ಟದೈತೇಯರಾ
ಚರಿಸುತಿರೆ ತತ್ತಪೋವಹ್ನಿ ಸುಡುತಿರ್ದುದಂದಖಿಳಲೋಕವ ಕ್ಷಣದೊಳು ೭

ಹಾರಿದುದು ಶಿಖರಿಶಿಖರಂ ಸಿಡಿದು ನಭಕೆ ಕಾ
ವೇರಿದುದು ನಿರ್ಜರಾಂಬುಪ್ರವಾಹಂಗಳುರೆ
ಮೀರಿದುದು ಮುನಿಕುಲಂ ತದ್ವನಮನಾಕ್ಷಣಮತಿತ್ವರಿತಗಮನದಿಂದೆ
ಹೇರಿದುದು ಭಯಮನಹಿಸಂಕುಲಂ ತವೆ ಕರಿಕು
ದೋರಿದುದು ನಾನಾ ಕುಜಪ್ರತತಿಯೊಡನೊಡನೆ
ಚೀರಿದುದು ಸಕಲ ಖಗಮೃಗಕುಲಂ ತಚ್ಛಿಖಿಯನೇನೆಂದು ಬಣ್ಣಿಸುವೆನು ೮

ಋಷಿಶ್ರೇಷ್ಠರು ಕಾಣಿಸಿದರು. ೬. ಎಲೆ ಸಿದ್ಧರಾಮ, ಕೇಳು, ಆ ಕಾಡಿನಲ್ಲಿದ್ದ ತಿಳಿ ನೀರಿನ ಕೊಳದಲ್ಲಿ ಸ್ನಾನ ಮಾಡಿ ಶುಚಿಯಾಗಿ ತೀರವನ್ನು ಸೇರಿ, ಸೂರ್ಯನಿಗೆ ನಮಸ್ಕಾರಮಾಡಿ, ತಮ್ಮ ಮನಸ್ಸಿನ ಆಸೆಗಳನ್ನು ಧ್ಯಾನಿಸಿ, ಬ್ರಹ್ಮನ ನಿರ್ಮಲವಾದ ರೂಪವನ್ನು ತಮ್ಮ ಹೃದಯಕಮಲದಲ್ಲಿ ಸ್ಥಿರಗೊಳಿಸಿ, ಯೋಗಿಸಮೂಹದಲ್ಲಿ ಅಪ್ರತಿಮರು ಎನ್ನಿಸಿ ರಾಕ್ಷಸರು ಆಗ ಉಗ್ರವಾದ ತಪಸ್ಸಿನಲ್ಲಿ ತೊಡಗಿದರು. ೭. ಕಾಲಿನ ಹೆಬ್ಬೆರಳನ್ನು ನೆಲಕ್ಕೆ ಊರಿ ಮೂಗಿನ ತುದಿಯಲ್ಲಿ ದೃಷ್ಟಿಯನ್ನು ಇಟ್ಟು ಮಂಗಳಕರವಾದ ತಪಸ್ಸನ್ನು ದಿನದಿನವೂ ವೃದ್ಧಿಗೊಳಿಸಿ, ಬಲಿಷ್ಠಗೊಳಿಸಿದರು. ಮನಸ್ಸನ್ನು ಕೇಂದ್ರೀಕರಿಸಿ ಅತ್ತ ಇತ್ತ ಚಲಿಸದಂತೆ ಮಾಡಿದರು. ದೇಹದ ಭಾಗಗಳ ಮೇಲಿನ ಅಭಿಮಾನವನ್ನು ಬಿಟ್ಟು ಘೋರವಾದ ನಿಷ್ಠೆಯಿಂದ ದುಷ್ಟರಾಕ್ಷಸರು ತಪಸ್ಸನ್ನು ಆಚರಿಸುತ್ತಿರಲು ಆ ತಪೋಜ್ವಾಲೆಯು ಎಲ್ಲ ಲೋಕಗಳನ್ನೂ ಸುಡುತ್ತಿದ್ದಿತು. ೮. ಪರ್ವತಶಿಖರಗಳು ಸಿಡಿದು ಆಕಾಶಕ್ಕೆ ಹಾರಿದುವು. ದೇವಗಂಗೆಯ ಪ್ರವಾಹಗಳು ಅತಿಯಾಗಿ ಕಾವೇರಿದುವು. ಆ ವನವನ್ನು ಅತಿ ಬೇಗನೆ ಮುನಿಗಳ ಸಮೂಹ ಬಿಟ್ಟು ಹೋಯಿತು. ಸರ್ಪಸಮೂಹಕ್ಕೆ ಭಯ ಆವರಿಸಿತು. ನಾನಾ ಮರಗಳ ಸಮೂಹ ಸುಟ್ಟು ಕರಿಕಾದುವು. ಜೊತೆಜೊತೆಗೆ ಎಲ್ಲ ಪಕ್ಷಿ-ಪ್ರಾಣಿಗಳ ಸಮೂಹ ಚೀರಿದುವು.

CC-0. Jangamwadi Math Collection. Digitized by eGangotri

ಘುಳುಘುಳುಧ್ವಾನದಿಂ ಸಾಗರಂ ಕುದಿದು ತಳ
ಮಳಲನೆಬ್ಬಿಸೆ ದಿಶಾಗಜರಾಜಿ ತಾಪದಿಂ
ತಲೆಗೊಡಹೆ ಶೇಷನ ಫಣಾಮಣಿಗೆ ಶಿಖಿ ತಾಗೆ ಕಚ್ಛಪನ ಬೆನ್ ಕಾಯಲು
ಜಲರುಹಭವಾಂಡ ಬಹಿರಾವರಣಮಂ ತುಡುಕಿ
ಕುಲಗಿರಿಗಳಚಲತೆಯನುಳಿದಾ ವಿಧಾತ್ರನುಂ
ಬಳಿಕೆ ಸೃಷ್ಟಿಯನೆಸಗುವಂತಖಿಳ ಲೋಕಮಂ ದಹಿಸುತಿರ್ದುದು ಭರದೊಳು ೯

ಏನೆಂಬೆನಸುರರ ತಪಸ್ತೇಜಮುರೆ ಪೆರ್ಚಿ
ಭಾನುಮಂಡಲಮಂ ತಿರಸ್ಕರಿಸಿ ಬೇಗದಿಂ
ಭೂ ನಾಗ ನಾಕಲೋಕದ ಜನರ್ಗತಿಭಯಂಕರವಾಗಿ ತೋರುತಿರಲು
ತಾನರಿದನಬ್ಜಸಂಭವನಾಗ ಚಿಂತೆಯಿಂ
ಜಾನಿಸಿದನೆರ್ದೆಯೊಳಗೆ ಖಳರಿದಿರೊಳಾಂ ಸುಳಿಯೆ
ಹಾನಿ ತಪ್ಪದು ಸುರರ್ಗಾಂ ಪೋಗದಿರಬಾರದೇನ ಮಾಡುವೆನೆಂದನು ೧೦

ಕತ್ತಲೆಗೆ ಕಠಿಣತೆಯನಹಿಗಳ್ಗೆ ಗರಿಗಳಂ
ಮತ್ತಹಸ್ತಿಗೆ ಮಹಾಯುದ್ಧವ ಧರಾಧರದ
ಮೊತ್ತಕ್ಕೆ ಚೈತನ್ಯಮಂ ಕೊಟ್ಟೊಡುಳಿಯುವುವೆ ಲೋಕಮುಂ ತಾಂ ಕೃಪೆಯೊಳು
ತತ್ತಾಪಸರ್ಗೆ ಮೊಗದೋರಲವರೇನೆಂದು
ಬಿತ್ತರಿಪರೋ ಶಿವನ ಕರುಣಮಿರೆ ದಿವಿಜರ್ಗೆ
ಮತ್ತಾವ ಭಯಮಿಲ್ಲವೆನುತೆ ಬಂದಾಗ ಖಳತಾಪಸರೊಳಿಂತೆಂದನು ೧೧

ಆ ತಪಸ್ಸಿನ ಜ್ವಾಲೆಯನ್ನು ಏನೆಂದು ವರ್ಣಿಸಲಿ. ೯. ಘುಳು ಘುಳು ಶಬ್ದದಿಂದ ಸಮುದ್ರ ಕುದಿದು, ತಳದ ಮರಳನ್ನು ಮೇಲಕ್ಕೆಬ್ಬಿಸಿತು. ದಿಗ್ಗಜಗಳ ಸಮೂಹ ತಾಪದಿಂದ ತಲೆಕೊಡವಿದವು. ಆದಿಶೇಷನ ತಲೆಯ ಮಣಿಗೆ ಬೆಂಕಿ ತಾಗಿತು. ಆದಿ ಕೂರ್ಮನ ಬೆನ್ನು ಕಾದುಹೋಯಿತು. ಬ್ರಹ್ಮಾಂಡದ ಹೊರ ಆವರಣವನ್ನು ಆವರಿಸಿ, ಕುಲಪರ್ವತಗಳ ಸ್ಥಿರತೆಗೆಡಿಸಿ ಬ್ರಹ್ಮನು ಪುನಃ ಸೃಷ್ಟಿಯನ್ನು ಮಾಡುವಂತೆ ಎಲ್ಲ ಲೋಕಗಳನ್ನೂ ರಭಸದಿಂದ ಸುಡುತ್ತಿದ್ದಿತು. ೧೦. ರಾಕ್ಷಸರ ತಪದ ಜ್ವಾಲೆಯನ್ನು ಏನೆಂದು ಹೇಳಲಿ ? ಅದು ಬಹಳವಾಗಿ ಹೆಚ್ಚಿ ಸೂರ್ಯಮಂಡಲವನ್ನು ದಾಟಿ ಬೇಗನೆ ಭೂಲೋಕ, ಪಾತಾಳ, ಸ್ವರ್ಗಲೋಕದ ಜನಗಳಿಗೆ ಅತಿಭಯಂಕರವಾಗಿ ಕಾಣುತ್ತಿದ್ದಿತು, ಆಗ ಬ್ರಹ್ಮನು ಅದನ್ನು ತಿಳಿದು ಅತಿಯಾದ ಚಿಂತೆಯಿಂದ, ರಾಕ್ಷಸರ ಎದುರಿನಲ್ಲಿ ನಾನು ಕಾಣಿಸಿಕೊಂಡರೆ ದೇವತೆಗಳಿಗೆ ತೊಂದರೆ ತಪ್ಪುವುದಿಲ್ಲ. ಹೋಗದೆ ಇರಲಾಗದು ಏನು ಮಾಡಲಿ ಎಂದು ಮನಸ್ಸಿನೊಳಗೆ ಆಲೋಚಿಸಿದನು. ೧೧. ಕತ್ತಲಿಗೆ ಕಾಠಿಣ್ಯತೆಯನ್ನೂ ಸರ್ಪಗಳಿಗೆ ರೆಕ್ಕೆಗಳನ್ನೂ,ಮದಿಸಿದ ಆನೆಗೆ ಭಯಂಕರವಾದ ಯುದ್ಧವನ್ನೂ, ಪರ್ವತಗಳಿಗೆ ಚೈತನ್ಯವನ್ನೂ ಕೊಟ್ಟರೆ ಲೋಕ ಉಳಿಯುತ್ತದೆಯೆ ? ನಾನು ಕರುಣೆಯಿಂದ ಆ ತಾಪಸರಿಗೆ ಕಾಣಿಸಿಕೊಂಡರೆ ಅವರು ಏನು ವರವನ್ನು ಕೇಳುತ್ತಾರೋ ? ಶಿವನ ಕರುಣೆ

CC-0. Jangamwadi Math Collection. Digitized by eGangotri

ಎಲೆ ತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿ
ಬಳಲಿದಿರಿ ಬಹಳಕಾಲಂ ನಡೆದುದೀ ತಪಂ
ಸಲೆಮೆಚ್ಚಿದೆಂ ನಿಮ್ಮ ಮನದಭೀಪ್ಸಮದಾವುದಿತ್ತಪೆಂ ಪೇಳೆನಲ್ಕೆ
ಬಳಿಕ ಕಣ್ದೆರೆದು ಕಂಡರ್ ನಳಿನಸಂಭವನ
ಸುಲಲಿತಮಹಾಸೌಮ್ಯಮೂರ್ತಿಯಂ ಭಾಳತಟ
ಮಿಳಿತ ವಿಲಸಿತ ಕರಾಂಜಲಿಯೊಪ್ಪೆ ಮೈಯಿಕ್ಕಿ ತುತಿಸಿದರ್ ಭಕ್ತಿಯಿಂದೆ ೧೨

ಜಯಜಯ ಜವನಕರ್ತೃ ಜಯ ವಾಕ್ಸತೀಭರ್ತೃ
ಜಯಜಯ ಜಗದ್ವಿನುತ ಜಯ ಲೋಕಪಾವನತ
ಜಯಜಯ ಸುರಜ್ಯೇಷ್ಟ ಜಯ ಸರ್ವಜನರಿಷ್ಟ ಜಯಜಯ ಹಿರಣ್ಯಗರ್ಭ
ಜಯಜಯ ಚತುರ್ವದನ ಜಯ ಸಕಲಗುಣಸದನ
ಜಯಜಯ ದುರಿತದೂರ ಜಯ ಸುನಿಗವೋದ್ಧಾರ
ಜಯಜಯ ಕೃಪಾಪಾಂಗ ಜಯ ವಿಮಲಸರ್ವಾಂಗ ಜಯವೆನುತ್ತಿಂತೆಂದರು ೧೩

ಗಗನಾಗ್ರದೊಳ್ ಮುಪ್ಪುರಂಗಳಂ ಮಾಡುವೆವು
ಸೊಗಸಾಗಿ ಕನಕಕಲಧೌತಲೋಹಂಗಳಿಂ
ನಗರ ಮೂರಕ್ಕೊಂದೆ ಕೀಲದಂ ಸುರನರಭುಜಂಗಮರ್ ಕಾಣದಿರಲಿ

ಯಿರುವಾಗ ದೇವತೆಗಳಿಗೆ ಯಾವ ಭಯ ಎಂದು ಬಂದು ರಾಕ್ಷಸರೊಡನೆ ಹೀಗೆಂದನು. ೧೨. ಎಲೆ ತಾರಕಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿಗಳೇ ಬಹಳ ಆಯಾಸಗೊಂಡಿರಿ. ಈ ತಪಸ್ಸು ಬಹಳ ಕಾಲ ನಡೆಯಿತು. ಬಹಳವಾಗಿ ಮೆಚ್ಚಿದ್ದೇನೆ. ನಿಮ್ಮ ಮನಸ್ಸಿನ ಕೋರಿಕೆಯೇನು ಕೊಡುತ್ತೇನೆ ಹೇಳಿ ಎಂದನು. ಅವರು ಅನಂತರ ಕಣ್ಣಿಟ್ಟು ಕಮಲ ಸಂಭವನ ಮನೋಹರವಾದ ಸೌಮ್ಯಮೂರ್ತಿಯನ್ನು ನೋಡಿದರು. ಹಣೆಯ ಬಳಿ ಜೋಡಿಸಿದ ಕೈಗಳಿಂದ ಕೂಡಿ ನಮಸ್ಕರಿಸಿ ಭಕ್ತಿಯಿಂದ ಸ್ತೋತ್ರ ಮಾಡಿದರು. ೧೩. ಜಯ ಜಯ ಸೃಷ್ಟಿಕರ್ತ, ಸರಸ್ವತೀಪತಿ ಜಯ, ಜಗತ್ತಿನ ಜನರಿಂದ ಹೊಗಳಿಸಿ ಕೊಳ್ಳುವವನೇ ಜಯ ಜಯ. ರಾಜರುಗಳಿಂದ ನಮಸ್ಕರಿಸಿಕೊಳ್ಳುವವನೇ ಜಯ, ದೇವತೆಗಳಲ್ಲಿ ಹಿರಿಯನೆ ಜಯ ಜಯ. ಎಲ್ಲ ಜನರೂ ಬಯಸುವವನೇ ಜಯ ಜಯ. ಹಿರಣ್ಯಗರ್ಭನೇ ಜಯ ಜಯ, ನಾಲ್ಕು ಮುಖವುಳ್ಳವನೇ ಜಯ, ಎಲ್ಲ ಗುಣಗಳಿಗೂ ಮನೆಯಾದವನೇ ಜಯ, ಪಾಪವನ್ನು ದೂರಮಾಡುವವನೇ ಜಯ ಜಯ. ವೇದೋ ದ್ಧಾರಕನೇ ಜಯ ಜಯ, ಕೃಪಾಕಟಾಕ್ಷವುಳ್ಳವನೇ ಜಯ ಜಯ, ಪರಿಶುದ್ಧವೂ ಪವಿತ್ರವೂ ಆದ ದೇಹವುಳ್ಳವನೇ ಜಯ ಜಯ ಎಂದು ಹೀಗೆ ಹೇಳಿದರು. ೧೪. ನಾವು ಆಕಾಶದ ತುದಿಯಲ್ಲಿ ಸೊಗಸಾದ ಚಿನ್ನ, ಬೆಳ್ಳಿ, ಕಬ್ಬಿಣಗಳಿಂದ ಮೂರು ಪಟ್ಟಣಗಳನ್ನು ಮಾಡುತ್ತೇವೆ. ಆ ಎಲ್ಲ ನಗರಕ್ಕೂ ಒಂದೇ ಅಗುಳಿ. ಅದನ್ನು ದೇವ-ಮಾನವ-ನಾಗರಾರೂ

CC-0. Jangamwadi Math Collection. Digitized by eGangotri

ಮಿಗೆ ಸುರಸಹಸ್ರವರುಷಕ್ಕವೊಂದಾಗಲುಂ
ತಗಲದಂದೊಂದಂಬಿನಿಂದೆಸೆಯಲೀ ಪೇಳ್ದ
ನಗರಮಳಿಗಲ್ಲದೊಡೆ ಸಂತತಂ ತಿರುಗುತಿರಲೆಂದು ಮತ್ತಿಂತೆಂದರು ೧೪

ಖಚರ ಕಿನ್ನರ ಕಿಂಪುರುಷ ಯಕ್ಷ ರಾಕ್ಷಸ
ಪ್ರಚಯುವಿರದೋಲೈಸಲೆಮ್ಮನೆಡೆವಿಡದೆ ಮ
ಧ್ವಚನಮನತಿಕ್ರಮಿಸಿ ನಡೆಯುದಿರಲೀ ಲೋಕಿಗರ್ ನಾಕಿಗರ್ ಭಯುದೊಳು
ಉಚಿತವಿದನೇ ಕರುಣಿಸೆನೆ ವಾಗ್ವಧೂವರಂ
ವಿಚಲಮಾನಸನಾಗಿ ಶಿವಶಿವಾ ಖಲಪೂರ್ವ
ರಚಿತಸಂಕಲ್ಪವೇ ತೋರಿದುದಲಾಯೆನುತೆ ದನುಜರೊಡನಿಂತೆಂದನು ೧೫

ಅಂತೆ ಪುರಮೂರನೇ ರಚಿಸಿ ನಿಮಗಾ ದಿವಿಜ
ಸಂತತಿಗಳೋಲಗಂ ಸಮನಿಸಲ್ ತ್ರಿಪುರಂಗ
ಳಂ ತವೆ ರಣಾಂಕಣದೊಳಾವವಂ ಬಾಣೈಕದಿಂದೆಸುವನಾತನಿಂದೆ
ಅಂತವಹುದಾಗ ಪೋಗೆನುತೆ ಕಮಲೋದ್ಭವಂ
ತಾಂ ತಳರ್ದನಾಗಸಕ್ಕಂಚೆಯುನಡರ್ದಂ ಖಲ
ರಂತರಂಗದ ಮಹಾನಂದಮಂ ಬಣ್ಣಿಸುವೊಡಾವಂಗೆ ವಶವೆಂದನು ೧೬

ಮಸಗಿ ನೀರಸಕುಜಾರಣ್ಯಮಂ ಬಿಡದೆ ಭ
ಕ್ಷಿಸುವ ವಹ್ನಿಗೆ ಮರುದ್ಬಲಮಾಗೆ ನಿಂದು ಯೋ
ಚಿಸುವುದೇನುಂಟು ಮುನ್ನವೆ ತಾರಕಾತ್ಮಜರ್ ಕಮಲಜಂ ವರವೀಯಲು

ನೋಡದಂತಾಗಲಿ. ದೇವ ಸಾವಿರವರ್ಷಕ್ಕೆ ಒಂದು ಬಾರಿ ಮೂರೂ ಒಂದಾಗಲು ಆ ದಿನ ಬಿಡದೆ ಒಂದು ಬಾಣದಿಂದ ಹೊಡೆಯಲು ಈ ನಗರಗಳೆಲ್ಲ ನಾಶವಾಗಲಿ. ಇಲ್ಲದಿದ್ದರೆ ಯಾವಾಗಲೂ ತಿರುಗುತ್ತಿರಲಿ ಎಂದು ಹೇಳಿ ಮತ್ತೆ ಹೀಗೆಂದರು. ೧೫. ಖೇಚರರು, ಕಿನ್ನರರು, ಕಿಂಪುರುಷರು, ಯಕ್ಷರು, ರಾಕ್ಷಸರು, ಈ ಎಲ್ಲರ ಸಮೂಹ ಎಡೆಬಿಡದೆ ನಮ್ಮನ್ನು ಸೇವಿಸುತ್ತಿರಲಿ. ಈ ಲೋಕದ ಜನ ಮತ್ತು ಸ್ವರ್ಗದ ಜನ ಭಯದಿಂದ ನಮ್ಮ ಮಾತನ್ನು ಮೀರದೆ ನಡೆಯುತ್ತಿರಲಿ. ಇದೇ ಸರಿಯಾದ ವರ, ಇದನ್ನು ಕರುಣಿಸು ಎಂದರು. ಬ್ರಹ್ಮನು ಚಂಚಲತೆಯಿಂದ ಕೂಡಿದ ಮನಸ್ಸುಳ್ಳವನಾಗಿ ಶಿವ ಶಿವಾ ನಾನು ಆಲೋಚಿಸಿದ ರೀತಿಯಲ್ಲಿಯೇ ಕೆಟ್ಟದ್ದಾಯಿತು ಎನ್ನುತ್ತ ರಾಕ್ಷಸರೊಡನೆ ಈ ರೀತಿ ಹೇಳಿದನು. ೧೬. ಅದೇ ರೀತಿ ಮೂರು ಪಟ್ಟಣಗಳನ್ನು ರಚಿಸಿ. ನಿಮಗೆ ಆ ದೇವಸಮೂಹದ ಸೇವೆ ದೊರಕಲಿ. ರಣರಂಗದಲ್ಲಿ ಒಂದೇ ಬಾಣದಿಂದ ಯಾವನು ಮೂರು ಪಟ್ಟಣಗಳನ್ನು ಹೊಡೆಯುತ್ತಾನೊ ಅವನಿಂದ ಅವು ನಾಶವಾಗುತ್ತವೆ, ಹೋಗಿ ಎಂದು ಬ್ರಹ್ಮನು ಹಂಸವನ್ನೇರಿ ಆಕಾಶಕ್ಕೆ ಹೋದನು. ರಾಕ್ಷಸರ ಮನಸ್ಸಿನ ಮಹಾ ಆನಂದವನ್ನು ವರ್ಣಿಸಲು ಯಾರಿಗೆ ಸಾಧ್ಯ ಎಂದನು. ೧೭. ಒಣಗಿದ ಮರಗಳ ಕಾಡನ್ನು ವಿಜೃಂಭಿಸಿ ಆವರಿಸಿ ಬಿಡದೆ ತಿನ್ನುವ ಬೆಂಕಿಗೆ ಗಾಳಿಯ ಬೆಂಬಲವೂ ದೊರೆತರೆ

CC-0. Jangamwadi Math Collection. Digitized by eGangotri

ವಶವಿಲ್ಲದಿಹ ಕಾರ್ಯಮಾವುದೈ ತವೆ ಮಯಂ
ಗಸಮಬಲ ದಾನವರ್ ಸೂಚಿಸಲ್ ಕೇಳಿ ನಿ
ರ್ಮಿಸಿದಂ ಪುರತ್ರಯಮನಾಕಾಶಚುಂಬಿತಪ್ರಾಸಾದತತಿ ಮೆರೆಯಲು ೧೭

ಪೊಗರೊಗುವ ಪೊಂಗೋಂಟೆ ತಾರಕಾಕ್ಷಂಗೆ ಝಗ
ಝಗಿಪ ಬೆಳ್ಳಿಯ ಕೋಂಟೆ ಕಮಲನಯನಂಗೆ ಕಾ
ರ್ಬೊಗೆವ ಕಾರ್ಬೊನ್ನಿನದು ವೀರವಿದ್ಯುನ್ಮಾಲಿಗೀ ಕ್ರಮದೊಳಾಣ್ಮರಾಗಿ
ಅಗಣಿತಮಹಾವಿಭವದಿಂದೆ ಸಂಪದದಿಂದೆ
ಮಿಗೆ ನೆರೆವ ಸೈನ್ಯಂಗಳಿಂದೆ ಸಂಭ್ರಮದಿಂದೆ
ಸೊಗಸುಬೀರುತ್ತಿದ್ದುವೀಕ್ಷಿಸುವರಕ್ಷಿಗಳ್ಗೇನೆಂಬೆನಚ್ಚರಿಯನು ೧೮

ಹರಿಯಂತೆ ಚಾರುವನಮಾಲಾಭಿರಂಜಿತಂ
ಹರನಂತೆ ಭೋಗಿನಿಕರಾಲಂಕೃತಂ ಸದಾ
ಶರಧಿವೊಲ್ ಲಾವಣ್ಯಸಂಯುತಂ ಗಿರಿಯಂತೆ ದನುಜಶಾರ್ದೂಲಾಸ್ಪದಂ
ಪರಿಕಿಸಲ್ ಮಾರ್ಗಣತೆಯುಗ್ರತೆ ಜಡಾಶ್ರಯತೆ
ಪರಮಕಠಿಣತೆಯೆನ್ನೊಳಿಲ್ಲೆಂದು ಪುರವನಿತೆ
ಬಿರುದ ಕಡೆಯವನಾಂತಳೆನೆ ತಾರಕಾಂಬಕನ ಪೊಂಗೋಂಟೆ ಕಣ್ಗೆಸೆದುದು ೧೯

ನಿಂತು ಆಲೋಚಿಸುವುದೇನಿದೆ ? ಮೊದಲೇ ತಾರಕನ ಮಕ್ಕಳು. ಜೊತೆಗೆ ಬ್ರಹ್ಮನು ವರವನ್ನೂ ಕೊಡಲು ಅವರಿಗೆ ಅಸಾಧ್ಯವಾದ ಕೆಲಸ ಯಾವುದು ? ಆ ಅಸಮಾನ ಶೂರರಾದ ರಾಕ್ಷಸರು ಮಯನಿಗೆ ಸೂಚನೆ ನೀಡಲು ಅದನ್ನು ಕೇಳಿ ಅವನು ಆಕಾಶವನ್ನು ಮುಟ್ಟುವ ಭವನ ಸಮೂಹಗಳಿಂದ ಕೂಡಿದ ಮೂರು ಪಟ್ಟಣಗಳನ್ನು ನಿರ್ಮಿಸಿದನು. ೧೮. ಕಾಂತಿಯನ್ನು ಬೀರುವ ಚಿನ್ನದ ಕೋಟೆ ತಾರಕಾಕ್ಷನಿಗೆ, ಝಗಝಗಿಸುವ ಬೆಳ್ಳಿಯ ಕೋಟೆ ಕಮಲಾಕ್ಷನಿಗೆ, ಕಪ್ಪನ್ನುಗುಳುವ ಕಬ್ಬಿಣದ್ದು ವೀರ ವಿದ್ಯುನ್ಮಾಲಿಗೆ. ಈ ರೀತಿಯಾಗಿ ಒಡೆಯರಾಗಿ ಲೆಕ್ಕವಿಲ್ಲದಷ್ಟು ವೈಭವದಿಂದ, ಸಂಪತ್ತಿನಿಂದ, ಹೆಚ್ಚಾಗಿ ತುಂಬಿದ ಸೈನ್ಯಗಳಿಂದ ಸಂಭ್ರಮದಿಂದ ನೋಡುವವರ ಕಣ್ಣುಗಳಿಗೆ ಸೌಂದರ್ಯ ಬೀರುತ್ತಿದ್ದುವು. ಆಶ್ಚರ್ಯವನ್ನು ಏನೆಂದು ಹೇಳಲಿ ? ೧೯. ವಿಷ್ಣುವಿನಂತೆ ಮನೋಹರವಾದ ತುಳಸೀ ಮಾಲೆಯಿಂದ (ವನಗಳ ಸಮೂಹದಿಂದ) ರಂಜಿಸುತ್ತಿತ್ತು. ಶಿವನಂತೆ ಸರ್ಪಗಳ ಸಮೂಹಗಳಿಂದ (ಭೋಗಿಗಳ ಸಮೂಹದಿಂದ) ಅಲಂಕೃತವಾಗಿತ್ತು. ಯಾವಾಗಲೂ ಸಮುದ್ರದಂತೆ ಲಾವಣ್ಯದಿಂದ (ಲಾವಣ್ಯ = ಸೌಂದರ್ಯ, ಉಪ್ಪು) ಕೂಡಿತ್ತು. ಪರ್ವತದಂತೆ ರಾಕ್ಷಸರೆಂಬ ಶಾರ್ದೂಲಗಳಿಗೆ ಆಶ್ರಯವಾಗಿತ್ತು. ಯೋಚಿಸಿ ನೋಡಲು ಬಾಣದ (ವಿಷ್ಣುವಿನ) ವೇಗ, ಹರನ ತೀಕ್ಷ್ಣತೆ, ಸಮುದ್ರದ ಜಡಸ್ವಭಾವ, ಗಿರಿಯ ಪರಮಕಾಠಿಣ್ಯತೆ ನನ್ನಲ್ಲಿಲ್ಲ ಎಂದು ಆ ಪುರವನಿತೆಯು ಬಿರುದಿನ ಕಡಗವನ್ನು ಧರಿಸಿದಳು

CC-0. Jangamwadi Math Collection. Digitized by eGangotri

ಬೇಸರದೆ ನಿಚ್ಚಮಾಕಾಶದೊಳ್ ತೊಳಲ್ವುದೆನ
ಗೇಸರಾಸರ್ ಬಿಡದೆ ಬಾಂಬಾವಿಗಂಗಮುಮ
ನೋಸರಿಸದೀವುದೆನುತುಬ್ಬಿ ತರಹರಿಸದಾನಮರರಂ ಕೆಳೆಗೊಳಲ್ಕೆ
ಆ ಸುಪರ್ವರೆ ತಿಂದು ತೇಗುವರ್ ಪೋಗಿ ತಾ
ನೀ ಸುರದ್ವಿಷರ ಸೇರುವೆನೆಂದು ವಿಧು ಬಂದು
ಲೇಸಾಗಿ ನಿಂದುದೆನೆ ರಜತಕೋಟಾವಳಿಯ ನಿರ್ಮಿತಪುರಂ ಮೆರೆದುದು ೨೦

ಪಗಲೊಳ್ ಪ್ರಚಾರಮಂ ಮಾಳ್ಪೆನೆಂದೊಡೆ ಖಗಂ
ಬಗೆಯದರೆಯಟ್ಟುವಂ ಪಕ್ಷದ್ವಯಂಗಳೊಳ
ಗಗಲಿ ಕೂಡುವ ಚಂದ್ರಕಲೆಗಳೀ ರಾತ್ರಿಯೊಳ್ ಪೂರ್ಣತೆಯನೆನಗೀಯವು
ಮಿಗೆ ನಿಲಲ್ಕೆಡೆಗಾಣೆನೀ ಖಳರ್ ತಾಮಸರ್
ಪೊಗುವೊಡಿದು ನೆಲೆಯೆನುತ್ತಂಧಕಾರಂ ದನುಜ
ನಗರಮಂ ಪರಿವೇಷ್ಟಿಸಿರ್ಪುದೆನೆ ಕಾರ್ಬೊನ್ನ ಕೋಂಟೆಯಿಂ ಪುರಮೆಸೆದುದು ೨೧

ಅಮರಾವತಿಯನೆಮಗೆ ಸರಿಯೆಂದು ಪೊಗಳೆಯು
ತ್ತಮರಿದಂ ಮೆಚ್ಚುವರೆ ಕುಲಗೋತ್ರಘಾತಕಂ
ಗಮರ್ದ ಮನೆ ತಾನಾದುದನಿತಲ್ಲದೂರ್ಧ್ವಗಮನಾಪೇಕ್ಷೆಯಂ ಮಾಳ್ಪುದು
ಸುಮನೋಹರಾಸ್ಪದಂ ಭೂಸ್ವರ್ಗಮಧ್ಯಮನು
ಪಮಮಪ್ಪೆಮಗೆ ಸಾಟಿಯೆಂತೆನುತೆ ತ್ರಿಪುರಂಗ
ಳಮರಪುರಮಂ ನಗುವುವೆನೆ ಕೇರಿಕೇರಿಯ ಸುಧಾಧವಳಿಮಂ ಮೆರೆದುವು ೨೨

ಎನ್ನುವಂತೆ ತಾರಕಾಕ್ಷನ ಹೊನ್ನಿನ ಕೋಟೆ ಕಣ್ಣಿಗೆ ಕಾಣಿಸಿತು. ೨೦. ಬೇಸರವಿಲ್ಲದೆ ನಿತ್ಯವೂ ಆಕಾಶದಲ್ಲಿ ಬಿಡದೆ ಸಂಚರಿಸುವುದು ನನಗೆಷ್ಟು ಆಯಾಸ. ರಾಹುವಿಗೆ ದೇಹವನ್ನು ಅನುಮಾನವಿಲ್ಲದೆ ಕೊಡುವುದೆಷ್ಟು ಎನ್ನುತ್ತ ಉಬ್ಬಿ ಸಹಿಸದೆ ನಾನು ಆ ದೇವತೆಗಳ ಸ್ನೇಹ ಮಾಡಲು ಆ ದೇವತೆಗಳೇ ಅಮೃತವನ್ನು ತಿಂದು ತೇಗುವರು. ನಾನು ಹೋಗಿ ಈ ರಾಕ್ಷಸರನ್ನು ಸೇರಿಕೊಳ್ಳುತ್ತೇನೆ ಎಂದು ಚಂದ್ರನು ಬಂದು ನೆಲೆಯಾಗಿ ನಿಂತ ಎನ್ನಲು ಬೆಳ್ಳಿಯ ಕೋಟೆಯಿಂದ ನಿರ್ಮಿಸಿದ ಪಟ್ಟಣ ಮೆರೆಯಿತು. ೨೧. ಹಗಲಿನಲ್ಲಿ ಪ್ರಚಾರಮಾಡುತ್ತೇನೆಂದರೆ ಸೂರ್ಯನು ಹಿಂದೆ ಮುಂದೆ ನೋಡದೆ ಹೊಡೆದಟ್ಟುತ್ತಾನೆ. ಕೃಷ್ಣ ಮತ್ತು ಶುಕ್ಲ ಪಕ್ಷಗಳಲ್ಲಿಯೂ ಅಗಲಿ ಮತ್ತೆ ಸೇರುವ ಚಂದ್ರನ ಕಲೆಗಳು ಈ ರಾತ್ರಿಯಲ್ಲೂ ನನಗೆ ಪೂರ್ಣ ಅವಕಾಶ ಕೊಡುವುದಿಲ್ಲ. ನನಗೆ ತಳವೂರಲು ಸರಿಯಾದ ಜಾಗವನ್ನೇ ಕಾಣೆ. ಈ ರಾಕ್ಷಸರು ಅಜ್ಞಾನಿಗಳು. ಒಳಹೊಗುವುದಾದರೆ ಇದೇ ಸರಿಯಾದ ಜಾಗ ಎನ್ನುತ್ತ ಕತ್ತಲೆ ರಾಕ್ಷಸರ ನಗರವನ್ನು ಸುತ್ತುಗಟ್ಟಿದೆ ಎನ್ನುವಂತೆ ಕಬ್ಬಿಣದ ಕೋಟೆಯಿಂದ ಪಟ್ಟಣ ರಂಜಿಸಿತ್ತು. ೨೨. ಅಮರಾವತಿಯು ನಮಗೆ ಸರಿ ಎಂದು ಹೊಗಳಲು ಉತ್ತಮರು ಅದನ್ನು ಮೆಚ್ಚುತ್ತಾರೆಯೆ ? ಅದು ಕುಲಪರ್ವತಗಳನ್ನು ನಾಶಮಾಡಿದ ದೇವೇಂದ್ರನಿಗೆ ಸರಿಹೋದುವ ಮನೆಯಾಯಿತು. ಅಲ್ಲದೆ ಸದಾ ಮೇಲೆ ಹೋಗುವ ಅಪೇಕ್ಷೆಯನ್ನು ಮಾಡುತ್ತದೆ. ರಾಕ್ಷಸರಿಗೆ ವಾಸಸ್ಥಾನವಾದ

CC-0. Jangamwadi Math Collection. Digitized by eGangotri

ಇಂತೆಸೆವ ಮುಪ್ಪುರದ ಸಿರಿಯು ಬಣ್ಣಿಪೊಡಾವ
ಗಂ ತೀರದತುಳಬಲದೈತೇಯು ತೀವ್ರತೇ
ಜಂ ತೀವಿತಖಿಳ ಲೋಕಂಗಳಂ ಕಂಗಳೆರದೈನೂರನುಳ್ಳವಂಗೆ
ಚಿಂತೆ ನಿಃಪ್ರತ್ಯೂಹವಾಯ್ತುಳಿದ ದಿಕ್ಪಾಲ
ಸಂತತಿಯು ಮನದಂತರವದೇನೊ ಪರ್ವತ ಗು
ಹಾಂತರದೆ ಪ್ಯೆಗರೆದ ಪಳೆರಕ್ಕಸರ್ ಬಂದು ಸೇರುತಿರ್ದರ್ ಖಳರನು ೨೩

ಕೇಳಿದೆಯಲಾ ಸಿದ್ಧರಾಮ ದನುಜರ ಭಾಗ್ಯ
ದೇಳಿಗೆಯನಗಡುರಕ್ಕಸರಿರ್ದರಿತ್ತಲಿಂ
ಪೇಳಲೇಂ ಪೂರ್ವಕಾಲದೊಳಳಿದ ದಾನವರ ಬಂಧುವರ್ಗಂಗಳಾದ
ನೀಳ ನಳ ಕೆಮ್ಮೂಕ ಜಂಭ ಧೂಮ್ರಾಕ್ಷ ಖಳ
ಕಾಳದಾನವ ಭಟಾಸುರ ಶುಂಭ ಮುಂತಾದ
ಕಾಳರಕ್ಕಸರೈದಿ ಸೇರಿದರ್ ತ್ರಿಪುರಮಂ ಪರಿಗಣನೆಗರಿದೆನಲ್ಕೆ ೨೪

ತಾರಕಸುತರ್ ಗಡ ಸರೋಜಭವನಂ ಕುರ್ತು
ಘೋರತಪಮಂ ಮಾಡಿದರ್ ಗಡಾ ದೈತ್ಯರ್ಗೆ
ವಾರಿಜೋದ್ಭವನಿತ್ತ ಗಡ ಸದ್ವರಂಗಳಂ ತದ್ವರದ ಬಲ್ಮೆಯಿಂದೆ
ಸೇರಿತು ಗಡೈಶ್ವರ್ಯ ತತ್ತ್ರಿಪುರವಂ ಮಾಡಿ
ಗೋರಿಗೊಳಿಪರ್ ಗಡ ಸಮಸ್ತ ಲೋಕಂಗಳೊಳ್
ದಾರಿಯೆಮಗೆಂತೆನುತೆ ಸಕಲಲೋಕಂಗಳೊಳ್ ಗುಜುಗುಜು ಮಸಗುತಿರ್ದುದು ೨೫

ಭೂಮಿ ಮತ್ತು ಸ್ವರ್ಗ ಎರಡರ ಮಧ್ಯೆ ಎಣೆಯಿಲ್ಲದಂತಿರುವ ನಮಗೆ ಸಮನೆ ಎನ್ನುತ್ತ ತ್ರಿಪುರಗಳು ಅಮರಾವತಿಯನ್ನು ಹೀಯಾಳಿಸಿ ನಗುತ್ತವೆ ಎನ್ನುವಂತೆ ಅಲ್ಲಿನ ಕೇರಿಕೇರಿಗಳಲ್ಲಿ ಅಮೃತಶಿಲೆಯಿಂದ ಕಟ್ಟಿದ ಭವನಗಳು ಪ್ರಕಾಶಿಸಿದುವು. ೨೩. ಈ ರೀತಿ ಕಂಗೊಳಿಸುವ ಆ ಮೂರು ಪಟ್ಟಣದ ಸಂಪತ್ತನ್ನು ಬಣ್ಣಿಸುವುದಾದರೆ ಯಾರಿಗೂ ಸಾಧ್ಯವಿಲ್ಲ. ಅತಿಬಲಶಾಲಿಗಳಾದ ರಾಕ್ಷಸರ ತೀವ್ರವಾದ ತೇಜಸ್ಸು ಎಲ್ಲ ಲೋಕಗಳನ್ನೂ ತುಂಬಿತು. ದೇವೇಂದ್ರನ ಚಿಂತೆಗೆ ಏನೂ ತಡೆಯಿಲ್ಲದಂತಾಯಿತು. ಉಳಿದ ದಿಕ್ಪಾಲಕರ ಮನಸ್ಸಿನ ಆಂತರ್ಯವೇನೊ ? ಪರ್ವತ ಗುಹೆಗಳಲ್ಲಿ ಅವಿತಿದ್ದ ಹಳೆಯ ರಾಕ್ಷಸರು ಇವರೊಡನೆ ಬಂದು ಸೇರುತ್ತಿದ್ದರು. ೨೪. ರಾಕ್ಷಸರ ಐಶ್ವರ್ಯದ ಉನ್ನತಿಯನ್ನು ಕೇಳಿದೆಯೇನಯ್ಯ ಸಿದ್ಧರಾಮ. ದುಷ್ಟ ರಾಕ್ಷಸರು ಇತ್ತಕಡೆ ಇದ್ದರು., ಹೇಳಲೇನು ? ಹಿಂದೆ ಸತ್ತ ರಾಕ್ಷಸರ ಬಂಧುವರ್ಗದವರಾದ ನೀಲ, ನಳ, ಕೆಮ್ಮೂಕ, ಜಂಭ, ಧೂಮ್ರಾಕ್ಷ, ಖಳ, ಕಾಳದಾನವ, ಭಟಾಸುರ, ಶುಂಭ ಮುಂತಾದ ಲೆಕ್ಕವಿಲ್ಲದಷ್ಟು ಮಂದಿ ಕ್ರೂರ ರಾಕ್ಷಸರು ಬಂದು ತ್ರಿಪುರವನ್ನು ಸೇರಿದರು. ೨೫. ತಾರಕಾಸುರನ ಮಕ್ಕಳಲ್ಲವೇ, ಅವರು ಬ್ರಹ್ಮನನ್ನು ಕುರಿತು ಘೋರವಾದ ತಪಸ್ಸನ್ನು ಮಾಡಿದರಂತೆ, ರಾಕ್ಷಸರಿಗೆ ಬ್ರಹ್ಮನು ಉತ್ತಮವಾದ ವರಗಳನ್ನು ಕೊಟ್ಟನಂತೆ, ಆ ವರದ ಬಲದಿಂದ ಅತುಳ ಐಶ್ವರ್ಯವೂ ಸೇರಿತಂತೆ, ಆ ತ್ರಿಪುರವನ್ನು ಕಟ್ಟಿ ಸಮಸ್ತಲೋಕಗಳನ್ನೂ ಮೋಸ

CC-0. Jangamwadi Math Collection. Digitized by eGangotri

ಕೀರ್ತಿಸುವುದೇಂ ಪ್ರಳಯಕಾಲದೆ ಜಗತ್ತಿನೊಳ್
ನರ್ತಿಸುವ ಘೋರತರ ಹರನಯನಜಾತಸಂ
ವರ್ತವಹ್ನಿಗೆ ಕಟ್ಟೆಹಾಯ್ದು ಕಟ್ಟೊಣಗಿರ್ದ ಮೆಳೆಗಳೇನಡ್ಡೈಪ್ಪವೇ
ಆರ್ತಮಗೆ ಸರಿಸಮಾನವರಿನ್ನು ಲೋಕದೊಳ್
ವರ್ತಿಸುವರಾರೆನುತೆ ಗರ್ವದಿಂ ತಾರಕಸು
ತರ್ತಮ್ಮ ಸೇನೆಸಹಿತೈತಂದು ಭೂಲೋಕಮಂ ಸೂರೆಗೊಳುತಿರ್ದರು ೨೬

ಚಂಡಲಂಘನಹಯವಿಭಸ್ಯಂದನಾದಿಗಳ
ಕೊಂಡಲಂಪಿಂದೆ ತತ್ಪುರಗಳೊಳ್ ನುತಚಂದ್ರ
ಮಂಡಲಂಬೊಲ್ ಮೆರೆವ ಮೊಗದಬಲೆಯರ ಪಿಡಿದು ತನ್ನೃಪರ ಜೀವಂಗಳ
ಹಿಂಡಲಂಬುಧಿವೇಲೆಯಾಗಿರ್ದ ಸಕಲಭೂ
ಮಂಡಲಂ ಭಯರಸದೊಳಾಳಲದ ಕೇಳುತಾ
ಖಂಡಲಂ ಬಹಳಚಿಂತಾಕ್ರಾಂತನಾಗಿರಲ್ಕಿತ್ತಲತಿಸಂಭ್ರಮದೊಳು ೨೭

ಉತ್ಸುಕದಿನಿರುತೊಂದುದಿವಸಮಾ ದಾನವರ್
ತತ್ಸಕಲಚತುರಂಗಮಂ ಕೂಡಿಕೊಂಡು ಸಂ
ಪತ್ಸೌಖ್ಯದಿಂ ಕೊಬ್ಬಿ ವಿಪುಲದೋರ್ದಂಡಕಂಡೂತಿಯಂ ಕಳೆವೆವೆಂದು
ಉತ್ಸುಕದೊಳೈತಂದು ಕಂಗೊಳಿಪ ನಿರ್ಮಲವಿ
ಯತ್ಸಿಂಧುವಂ ದಾಟಿ ನಾಕಲೋಕಂಬೊಕ್ಕು
ಕುತ್ಸಿತದೊಳಖಿಳದಿಕ್ಪಾಲರಂ ಸದೆದು ತತ್ಪುರಕೆ ಠಾಣೆಯಮಿಟ್ಟರು ೨೮

ದಿಂದ ವಶಪಡಿಸಿಕೊಳ್ಳುವರಂತೆ, ನಮಗೇನು ದಾರಿ ಎನ್ನುತ್ತ ಎಲ್ಲ ಲೋಕಗಳಲ್ಲೂ ಗುಜು ಗುಜು ಶಬ್ದ ಆವರಿಸುತ್ತಿದ್ದಿತು. ೨೬. ವಿವರಿಸುವುದೇನು ? ಪ್ರಳಯಕಾಲದಲ್ಲಿ ಜಗತ್ತಿನಲ್ಲಿ ನರ್ತನ ಮಾಡುವ ಘೋರತರವಾದ ಶಿವನ ಕಣ್ಣಿಂದ ಹುಟ್ಟಿದ ಪ್ರಳಯದ ಜ್ವಾಲೆ ಚೆನ್ನಾಗಿ ಒಣಗಿದ್ದ ಮೆಳೆಗಳು ಎದುರಿಸಿ ಅಡ್ಡಗಟ್ಟುತ್ತವೆಯೆ ? ನಮಗೆ ಇನ್ನು ಸರಿಸಮಾನರಾದವರು ಯಾರು ? ಲೋಕದಲ್ಲಿ ಎದುರಿಸುವವರಾರು ? ಎನ್ನುತ್ತ ಗರ್ವದಿಂದ ತಾರಕನ ಮಕ್ಕಳು ತಮ್ಮ ಸೇನಾಸಮೇತರಾಗಿ ಬಂದು ಭೂಲೋಕವನ್ನು ಸೂರೆಗೊಳ್ಳುತ್ತಿದ್ದರು. ೨೭. ಪ್ರಚಂಡವಾಗಿ ಹಾರುವ ಸಾಮರ್ಥ್ಯವುಳ್ಳ ಕುದುರೆ, ಆನೆ, ರಥಗಳನ್ನು ತೆಗೆದುಕೊಂಡು ಅಧಿಕವಾದ ಆಕಾಂಕ್ಷೆಯಿಂದ ಆ ಪಟ್ಟಣಗಳಲ್ಲಿ ಪ್ರಸಿದ್ಧವಾದ ಚಂದ್ರಮಂಡಲಗಳಂತೆ ಪ್ರಕಾಶಿಸುತ್ತಿದ್ದ ಮುಖವುಳ್ಳ ಅಬಲೆಯರನ್ನು ಹಿಡಿದು ಆ ರಾಜರ ಜೀವಗಳನ್ನು ಹಿಂಡಲು ಸಮುದ್ರವನ್ನು ಮೇರೆಯಾಗಿ ಉಳ್ಳ ಎಲ್ಲ ಭೂಮಂಡಲವೂ ಭಯರಸದಲ್ಲಿ ಮುಳುಗಿತು. ಅದನ್ನು ಕೇಳಿ ದೇವೇಂದ್ರನು ಬಹಳ ಚಿಂತೆಯಿಂದ ಕೂಡಿರಲು, ಈ ಕಡೆ ಅತಿ ಸಂಭ್ರಮದಿಂದ ೨೮. ಉತ್ಸಾಹದಿಂದ ಇರುತ್ತ, ಒಂದು ದಿನ ಆ ರಾಕ್ಷಸರು ತಮ್ಮ ಎಲ್ಲ ಚತುರಂಗ ಸೇನೆಯನ್ನು ಕೂಡಿಕೊಂಡು ಐಶ್ವರ್ಯ ಸುಖದಿಂದ ಮದಿಸಿ, ವಿಪುಲವಾದ ಭುಜಬಲದ ತೀಟೆಯನ್ನು ತೀರಿಸಿಕೊಳ್ಳುತ್ತೇವೆ ಎಂಬ ಉತ್ಸಾಹದಿಂದ ಹೊರಟುಬಂದು ಕಂಗೊಳಿಸುತ್ತಿದ್ದ ನಿರ್ಮಲವಾದ ಸಮುದ್ರವನ್ನು

CC-0. Jangamwadi Math Collection. Digitized by eGangotri

ಹರಿಹರಿದನಗ್ನಿ ಭಗ್ನೀಕೃತ ವಿಜಯನಾದ
ನಿರದೆ ಯಮ ನಿಯಮಮಯಯುತನಾದನಾ ನಿರುತಿ
ನಿರುತಂ ಗುಹಾಂತರಮನೈದಿದಂ ಸಲೆ ವರುಣ ಶರಣೆಂದು ಜೀವಿಸಿದನು
ಮರುತನುರುತರ ಪರಾಭವಿಯಾದನತಿಭಯಂ
ಕರದಾನವರ ದೆಸೆಗೆ ದೆಸೆಗೆಟ್ಟು ಭೀತಿಯಿಂ
ದಿರದೆ ಧನದಂ ಬಿನದಮಂ ಬಿಟ್ಟನೀಶಾನನಾಶುಗಮನದೆ ಪೋದನು ೨೯

ಅಲ್ಲಿಯ ಸಮಸ್ತ ಹಯಗಜ ಮುಖ್ಯವಸ್ತುಗಳ
ನೆಲ್ಲವಂ ತ್ರಿಪುರಕ್ಕೆ ಕಳುಪಿ ಪುರಜನಗಳಂ
ಘಲ್ಲಿಸುತೆ ಸುರಪನಂ ಪರಿಭವಿಸಿ ತತ್ಪುರದ ಸತಿಯರಂ ಸೂರೆಗೊಂಡು
ಮೆಲ್ಲಮೆಲ್ಲನೆ ಪೋಗಿ ಮೈಗರೆವ ಸುಭಟರ್ಗ
ಳೆಲ್ಲರಂ ಸದೆಬಡಿದು ತಿರುಗಿದರ್ ದಾನವರ್
ಗೆಲ್ಲವೆಂದೆಂಬ ಕಾಮಿನಿಯ ಮುಂದಲೆವಿಡಿದು ಸೈನಿಕದ ಗಡಣದಿಂದೆ ೩೦

ಕೋಡದ ಸುಭಟರಿಲ್ಲ ತ್ರಿಜಗದೊಳ್ ಕೂರ್ತು ಕೊಂ
ಡಾಡದ ದನುಜರಿಲ್ಲ ಕಂಡು ನಂಬುಗೆಗಳಂ
ಬೇಡದವನಿಪರಿಲ್ಲ ದುರ್ಗಮಂ ಧನಮಂ ಸಮಸ್ತಸಂಪದವನುಳಿದು
ಓಡದ ಪಗೆಗಳಿಲ್ಲ ಬಹುದಿಗಂತದೊಳೆ ಕೈ
ಗೂಡದ ವಿಜಯವಿಲ್ಲಮಾಡೆ ಮನಸಂದಿವರ್
ಮಾಡದ ಮಹಾಹಿಂಸೆಯಿಲ್ಲ ದಾನವರ ಭುಜಬಲದಿರವನೇನೆಂಬೆನು ೩೧

ದಾಟಿ ಸ್ವರ್ಗಲೋಕವನ್ನು ಪ್ರವೇಶಿಸಿ ಕೇಡಿಗತನದಿಂದ ಎಲ್ಲ ದಿಕ್ಪಾಲಕರನ್ನೂ ಸದೆದು ಆ ಪಟ್ಟಣಕ್ಕೆ ಸೈನ್ಯದ ಕಾವಲನ್ನಿಟ್ಟರು. ೨೯. ಇಂದ್ರ ಓಡಿದನು. ಅಗ್ನಿ (ಭಗ್ನ ಹೊಂದಿದ ಜಯವುಳ್ಳವನಾದನು) ಸೋತುಹೋದನು. ಯಮನು ಒಪ್ಪಂದ ಮಾಡಿಕೊಂಡನು. ನಿರುತಿ ನಿಜವಾಗಿಯೂ ಗುಹೆಯಲ್ಲಿ ಅಡಗಿಕೊಂಡನು. ವರುಣನು ಶರಣಾಗತನಾಗಿ ಬದುಕಿಕೊಂಡನು. ವಾಯುವು ಸಂಪೂರ್ಣವಾಗಿ ಸೋತುಹೋದನು. ಅತಿ ಭಯಂಕರರಾದ ರಾಕ್ಷಸರ ಕಾರಣದಿಂದ ದಿಕ್ಕುಗೆಟ್ಟು ಭಯದಿಂದ ಕುಬೇರನು ವಿನೋದವನ್ನು ಬಿಟ್ಟನು (ದುಃಖಿತನಾದನು). ಈಶಾನನು ತಡಮಾಡದೆ ವೇಗದಿಂದ ಹೋದನು. ೩೦. ಅಲ್ಲಿನ ಎಲ್ಲ ಕುದುರೆ, ಆನೆ ಮೊದಲಾದ ಮುಖ್ಯ ವಸ್ತುಗಳೆಲ್ಲವನ್ನೂ ತ್ರಿಪುರಕ್ಕೆ ಕಳುಹಿಸಿ, ಪಟ್ಟಣದ ಜನರನ್ನು ಹೆದರಿಸುತ್ತ ದೇವೇಂದ್ರನನ್ನು ಸೋಲಿಸಿ, ಆ ಪಟ್ಟಣದ ಸ್ತ್ರೀಯರನ್ನು ಸೂರೆಮಾಡಿ, ಮೆಲ್ಲ ಮೆಲ್ಲಗೆ ಹೋಗಿ ಮೈ ಮರೆಸಿಕೊಳ್ಳುವ ಸೈನಿಕರೆಲ್ಲರನ್ನೂ ಸದೆಬಡಿದು, ರಾಕ್ಷಸರು ವಿಜಯಕಾಮಿನಿಯ ಮುಂದಲೆ ಹಿಡಿದು ಸೈನಿಕರ ಸಮೂಹದೊಡನೆ ಹಿಂತಿರುಗಿದರು. ೩೧. ಮೂರು ಲೋಕದಲ್ಲಿ ಎಲ್ಲಿಯೂ ಅವರಿಗೆ ಹೆದರಿಕೊಳ್ಳದ ಶೂರಭಟರಿಲ್ಲ, ಪ್ರೀತಿಯಿಂದ ಹೊಗಳದ ರಾಕ್ಷಸರಿಲ್ಲ. ಅವರನ್ನು ನೋಡಿ ಅಭಯವನ್ನು ಬೇಡದ ರಾಜರುಗಳಿಲ್ಲ, ಕೋಟೆಯನ್ನು. ಹಣವನ್ನು, ಎಲ್ಲ

CC-0. Jangamwadi Math Collection. Digitized by eGangotri

ಈ ಪರಿಯುಳೊಖಿಳ ಲೋಕಾಳಿಗಳ ಪಾಳಿಗಳ
ನಾ ಪುರದ ದನುಜಪ್ರತಾಪಮುಂ ಕೋಪಮುಂ
ವ್ಯಾಪಿಸಿದುದಿತ್ತ ಸುರಪ್ರಂಗವಂ ಭಂಗವಂ ಪಡೆದು ಹಿಮಗಿರಿತಟದೊಳು
ರೂಪಳಿದು ಸುರರ ಸಾಮಿಪ್ಯದೊಳ್ ಗೋಪ್ಯದೊಳ್
ಪಾಪಾತ್ಮರಂ ಜರೆದು ಬಯ್ವುತುಂ ಸುಯ್ವುತುಂ
ಕೂಪಗತಪುತ್ರಿಕಾವೇಷದಿಂ ರೋಷದಿಂ ಪಲವುದಿನವಿರುತಿರ್ದರು ೩೨

ಒಂದು ದಿವಸಂ ಸಕಲ ದಿಕ್ಪಾಲಕರ್ವೆರಸಿ
ಬಂದು ತದ್ಗಿರಿತಟದ ಘೋರಗಹ್ವರದೊಳ್ ಪು
ರಂದರಂ ಕುಳ್ಳಿರಲ್ ಪೂರ್ವಕೃತದುಷ್ಕೃತಂ ತಮಗೆ ಕೈಗೂಡಿತೆಂದು
ನೊಂದು ದಿವಿಜರ್ ವಿಧಿಯನುರೆ ಬೈವುತಿರೆ ಸುರಪ
ನೆಂದನಿನ್ನೇಕೆ ಶೋಕಿಪಿರಿ ಮುನ್ನಾವನಿಂ
ಬಂದುದವನಿಂ ಕಳೆವೆವೇಳಿಯೆನುತ್ತೈತಂದು ಪೊಕ್ಕರಜನೋಲಗವನು ೩೩

ಕಂಡನಮರೇಂದ್ರಾದಿ ವೃಂದಾರಕರ ವಕ್ತ್ರ
ಮಂಡಲದ ದುಗುಡಮನಿದೇನಿದೇನಾವ ಖಳ
ನಂಡಲೆದನೆನೆ ಮಕುಟತಟಘಟಿತವರಕರಾಂಜಳಿಯೊಪ್ಪೆ ಸುರಪಾಲನು

ಸಂಪತ್ತನ್ನೂ ಬಿಟ್ಟು ಓಡಿಹೋಗದ ಶತ್ರುಗಳಿಲ್ಲ. ಎಲ್ಲ ದಿಗಂತಗಳಲ್ಲಿಯೂ ಕೈಸೇರದ ವಿಜಯವಿಲ್ಲ. ಮನಸ್ಸು ಮಾಡಿದರೆ ಇವರು ಮಾಡದ ಅತಿಯಾದ ಹಿಂಸೆ ಇನ್ನಿಲ್ಲ. ರಾಕ್ಷಸರ ಭುಜಬಲ ಪರಾಕ್ರಮವನ್ನು ಏನೆಂದು ಹೇಳಲಿ ? ೩೨. ಈ ರೀತಿಯಲ್ಲಿ ಆ ಪಟ್ಟಣದ ರಾಕ್ಷಸರ ಪರಾಕ್ರಮವೂ, ಕೋಪವೂ ಎಲ್ಲ ಲೋಕಗಳ ಸಮೂಹವನ್ನೂ, ಸಾಲುಗಳನ್ನೂ ವ್ಯಾಪಿಸಿತು. ಇತ್ತ ದೇವೇಂದ್ರನು ಪರಾಭವಹೊಂದಿ ಹಿಮಗಿರಿಯ ತಪ್ಪಲಿನಲ್ಲಿ ಮೈಮರೆಸಿಕೊಂಡು ದೇವತೆಗಳ ಸಹವಾಸದಲ್ಲಿ ರಹಸ್ಯದಿಂದಿದ್ದು, ಪಾಪಿಷ್ಠರನ್ನು ಹೀಯಾಳಿಸಿ ಬೈಯುತ್ತ ನಿಟ್ಟುಸಿರು ಬಿಡುತ್ತ, ಬಾವಿಯಲ್ಲಿ ಬಿದ್ದ ಪುತ್ರಿಕೆಯಂತೆ (ಹೆಂಗುಸಂತೆ) ಕೋಪದಿಂದ ಹಲವು ದಿನ ಇದ್ದನು. ೩೩. ಒಂದು ದಿವಸ ಎಲ್ಲ ದಿಕ್ಪಾಲಕರೊಡಗೂಡಿಕೊಂಡು ಆ ಪರ್ವತದ ತಪ್ಪಲಿನ ಘೋರವಾದ ಗುಹೆಯಲ್ಲಿ ದೇವೇಂದ್ರನು ಕುಳಿತಿರಲು, ಆಗ ಹಿಂದೆ ಮಾಡಿದ ಪಾಪವು ತಮಗೆ ಫಲಕೊಟ್ಟಿತು ಎಂದು ಚಿಂತಿಸಿ ದೇವತೆಗಳು ತಮ್ಮ ಅದೃಷ್ಟವನ್ನು ಬೈಯುತ್ತಿರಲು, ಆಗ ದೇವೇಂದ್ರನು ಇನ್ನು ಏಕೆ ದುಃಖಿಸುತ್ತೀರಿ? ಮೊದಲು ಯಾರಿಂದ ಈ ಕಷ್ಟ ಬಂತೋ ಅವನಿಂದಲೇ ಪರಿಹರಿಸಿಕೊಳ್ಳೋಣ ಏಳಿ ಎಂದು ಎಲ್ಲರೂ ಬಂದು ಬ್ರಹ್ಮನ ಸಭೆಯನ್ನು ಪ್ರವೇಶಿಸಿದರು. ೩೪. ದೇವೇಂದ್ರ ಮೊದಲಾದ ದೇವತೆಗಳ ಮುಖಮಂಡಲದ ದುಗುಡವನ್ನು ಬ್ರಹ್ಮನು ನೋಡಿದನು. ಇದೇನಿದು ? ಯಾವ ರಾಕ್ಷಸನು ನಿಮ್ಮನ್ನು ಕೋಟಲೆಗೊಳಿಸಿ ಅಲೆಯುವಂತೆ ಮಾಡಿದನು ಎನ್ನಲು ಹಣೆಯ ಮೇಲೆ ಕೈಗಳನ್ನು ಜೋಡಿಸಿ ನಮಸ್ಕರಿಸುತ್ತ

CC-0. Jangamwadi Math Collection. Digitized by eGangotri

ಚಂಡಬಲತಾರಕಸುತರ್ ಸಕಲಲೋಕಮುಂ
ಹಿಂಡಿಹಿಳಿದೆಮ್ಮನರೆಯಟ್ಟಲಂದತಿಭಯಂ
ಗೊಂಡು ನಿಮ್ಮಂಘ್ರಿಯಂ ಸಾರ್ದೆವೆನೆ ಸಂತೈಸಿದಂ ದೇವಸಂತತಿಯನು ೩೪

ರಾಜಹಂಸನನೇರಿ ಕಮಲಜಂ ಬಂದು ಸುರ
ರಾಜ ಮುಖ್ಯಾಮರಕದಂಬಕಂ ಬೆರಸು ನುತ
ರಾಜತಮಹಾಶೈಲಶಿಖರದೊಳ್ ರಾಜಾಲಯೋಚಿತಾಸ್ಥಾನನಾಗಿ
ರಾಜತ್ಸಮಸ್ತ ಲೋಕೇಶಮಣಿಮಕುಟನೀ
ರಾಜನದ್ಯುತಿ ಮುಸಗಲಾ ಸಭೆಯನಾಗ ಗಿರಿ
ರಾಜನಂದನೆಯ ವಕ್ಷೋಜಾತಘುಸೃಣಾಂಕಿತಾಂಗನಡಿಯೊಳ್ ಮಣಿದರು ೩೫

ದೇವ ಸಾಕ್ಷಾತ್ ಪರಬ್ರಹ್ಮಸ್ವರೂಪ ಭುವ
ನಾವಲಂಬನ ಸಕಲಗುಣನಿಳಯ ಬಹುಲೋಕ
ಪಾವನತಪಾದಪಂಕೇಜಾತಯುಗ್ಮ ಸರ್ವೋತ್ತಮ ಭವಾನೀಧವ
ಸಾವಧಾನದೊಳೆಮ್ಮ ಬಿನ್ನಪವ ಕೇಳಿ ಕರು
ಣಾವಲೋಕನದ ಪೀಯೂಷಮಂ ಕರೆಯೆಂದು
ದೇವತತಿ ಮುಗುಳೆರಗಿ ತುತಿಯಿಸೆ ಮಹೇಶ್ವರಂ ಕಮಲಜನನೀಕ್ಷಿಸಿದನು ೩೬

ದೇವೇಂದ್ರನು ಬ್ರಹ್ಮನನ್ನು ಕುರಿತು ಪ್ರಚಂಡ ಬಲಶಾಲಿಗಳಾದ ತಾರಕಾಸುರನ ಮಕ್ಕಳು ಎಲ್ಲ ಲೋಕವನ್ನು ಹಿಂಡಿ ಹಿಪ್ಪೆಮಾಡಿ ನಮ್ಮನ್ನು ಹೊಡೆದಟ್ಟಲು, ಅತಿಯಾದ ಹೆದರಿಕೆ ಯಿಂದ ನಿಮ್ಮ ಬಳಿಗೆ ಬಂದೆವು ಎನ್ನಲು ಬ್ರಹ್ಮನು ಇದನ್ನು ಕೇಳಿ ದೇವಸಮೂಹವನ್ನು ಸಂತೈಸಿದನು. ೩೫. ರಾಜಹಂಸವನ್ನೇರಿ ಬ್ರಹ್ಮನು ದೇವೇಂದ್ರ ಮೊದಲಾದ ದೇವತೆ ಗಳೊಡಗೂಡಿ ಬಂದನು. ಎಲ್ಲ ಲೋಕದ ಒಡೆಯರ ಕಿರೀಟದ ಮಣಿಯ ಕಾಂತಿ ಆ ಸಭೆ ಯನ್ನು ಆವರಿಸಲು ಪ್ರಖ್ಯಾತವಾದ ಹೊಳೆಯುವ ಕೈಲಾಸಪರ್ವತದ ಶಿಖರದ ಅರಮನೆ ಯಲ್ಲಿ ಶಿವನು ಪ್ರಕಾಶಿಸುತ್ತಿದ್ದನು. ಪಾರ್ವತಿಯ ಎದೆಯಲ್ಲಿ ಲೇಪಿಸಿದ್ದ ಗಂಧವನ್ನು ತನ್ನ ಶರೀರದಲ್ಲಿ ಧರಿಸಿದ್ದ ಈಶ್ವರನ ಪಾದಕ್ಕೆ ನಮಸ್ಕರಿಸಿದರು. ೩೬. ದೇವನೆ, ಸಾಕ್ಷಾತ್ ಪರಬ್ರಹ್ಮಸ್ವರೂಪನೆ, ಲೋಕಗಳಿಗೆ ಆಧಾರನೆ, ಎಲ್ಲ ಗುಣಗಳಿಗೂ ಮನೆಯಾದ ವನೆ, ಎಲ್ಲ ಲೋಕಪಾಲರಿಂದಲೂ ನಮಸ್ಕರಿಸಿಕೊಳ್ಳುವ ಪಾದಕಮಲವುಳ್ಳವನೆ, ಸರ್ವೋತ್ತಮ, ಪಾರ್ವತೀಪತಿಯೆ, ನಿಧಾನವಾಗಿ ನಮ್ಮ ಮೊರೆಯನ್ನು ಕೇಳಿ ನಿನ್ನ ಕರುಣಾದೃಷ್ಟಿಯೆಂಬ ಅಮೃತವನ್ನು ಸೂಸು ಎಂದು ದೇವಸಮೂಹ ಮತ್ತೆ

CC-0. Jangamwadi Math Collection. Digitized by eGangotri

ಅವಧರಿಸು ಜೀಯ ತಾರಕದೈತ್ಯನಾತ್ಮಜರ್
ದಿವಿಜರಂ ಸದೆಬಡಿದು ಹವ್ಯಕವ್ಯಂಗಳಂ
ತವಿಸಿ ಧರ್ಮವನಧಃಕರಿಸಿ ದುಷ್ಕರ್ಮಮಂ ಪ್ರಕಟಿಸಿ ಜಗಜ್ಜನರನು
ಅವಗಡಿಸಲಿಂದ್ರಾದಿ ದೇವತೆಗಳೈತಂದು
ತವಚರಣಕಮಲಮಂ ಸಾರ್ದರಿನ್ನವರ್ಗೆ ಬೆಸ
ಸುವ ಬುದ್ಧಿಯಾವುದೆನೆ ನಸುನಗುತ್ತೀಶ್ವರಂ ಕಮಲಜಂಗಿಂತೆಂದನು ೩೭

ನೋಡಿದೈ ಬೊಮ್ಮ ನೀಂ ದನುಜರ್ಗೆ ಮುಂಬರ್ಪ
ಕೇಡನರಿಯದೆ ವರವನಿತ್ತೆಯವರಿವರ ಸಿರಿ
ಗೇಡುಗರಲಾ ಮೊದಲ್ ನೀನೀಗ ದಿವಿಜರಂ ಹಿಂದಿಕ್ಕಿ ಬಂದ ಬಳಿಕ
ಆದಲೇನೆಮಗೆ ಪಶುಪತಿಪಟ್ಟಮಂ ಕಟ್ಟಿ
ನೋಡಿ ಸಂಗ್ರಾಮದೆ ಪುರತ್ರಯದ ವೀರರಂ
ನಾಡೆ ಸಂಹರಿಪೆವೆನೆ ಪರಶಿವನ ನುಡಿಗೇಳ್ದು ಸುರಕುಲಂ ತಲೆವಾಗಿತು ೩೮

ಮೂಗುವಟ್ಟಿರಲೇಕೆ ಶಿವನೆಂದ ನುಡಿ ನಿಮಗೆ
ಸಾಗದೋ ಕಮಲಮಿತ್ರನ ಮಹತ್ತ್ವಂಗಳಂ
ಗೂಗೆ ಬಲ್ಲುದೆ ಮಿಥ್ಯಮಿದು ತಥ್ಯಮೆಂಬುದಂ ಮರುಳುಗಳ್ ನೀವರಿವಿರೇ
ಭೋಗದೊಳ್ ಮೈಮರೆದು ನಿಮ್ಮನರಿಯದೆ ವಿಪ
ತ್ಸಾಗರದೊಳೋಲಾಡಿ ನಿತ್ಯನವ್ಯಯನುಭವ
ನಾಗಿ ರಂಜಿಸುವ ಪರಶಿವನನುರೆ ಮರೆದವರ ಪಶುವೆಂದೊಡೇನೆಂದನು ೩೯

ನಮಸ್ಕರಿಸಿಸ್ತುತಿರಲು ಈಶ್ವರನು ಬ್ರಹ್ಮನ ಮುಖವನ್ನು ನೋಡಿದನು. ೩೭. ದೇವ ಕೇಳು, ತಾರಕಾಸುರನ ಮಕ್ಕಳು ದೇವತೆಗಳನ್ನು ಸದೆಬಡಿದು ಹವ್ಯಕವ್ಯ ಮೊದಲಾದುವುಗಳನ್ನು ಅವರಿಗೆ ದೊರಕದಂತೆ ಮಾಡಿ, ಧರ್ಮವನ್ನು ನಾಶಮಾಡಿ, ಕೆಟ್ಟ ಕೆಲಸವನ್ನು ಆಚರಿಸಿ ಜಗತ್ತಿನ ಜನರನ್ನು ಭಂಗಿಸಿದರು. ಇಂದ್ರ ಮೊದಲಾದ ದೇವತೆಗಳು ಬಂದು ನಿನ್ನ ಪಾದಕಮಲವನ್ನು ಸಮೀಪಿಸಿದರು. ಇನ್ನು ಅವರಿಗೆ ಹೇಳುವ ಹಿತವಚನ ಯಾವುದು ಎನ್ನಲು ಶಿವನು ನಸುನಗುತ್ತ ಬ್ರಹ್ಮನಿಗೆ ಹೀಗೆ ಹೇಳಿದನು. ೩೮. ನೋಡಿದೆಯಾ ಬ್ರಹ್ಮ, ನೀನು ಮುಂದೆ ಒದಗುವ ಕೇಡನ್ನು ತಿಳಿಯದೆ ರಾಕ್ಷಸರಿಗೆ ವರ ಕೊಟ್ಟೆ. ಅವರು ಇವರ ಐಶ್ವರ್ಯವನ್ನು ಮೊದಲೇ ಕಿತ್ತುಕೊಂಡ ಬಳಿಕ ನೀನು ದೇವತೆಗಳನ್ನು ಹಿಂದಿಟ್ಟುಕೊಂಡು ನನ್ನ ಬಳಿಗೆ ಬಂದೆ. ಈಗ ನಾನು ಹೇಳುವುದೇನು, ನನಗೆ ಪಶುಪತಿಪಟ್ಟವನ್ನೂ ಕಟ್ಟಿ ನೋಡಿ. ತ್ರಿಪುರದ ವೀರರನ್ನು ಯುದ್ಧದಲ್ಲಿ ಸಂಹಾರ ಮಾಡುತ್ತೇನೆ ಎಂದನು. ಈಶ್ವರನ ಮಾತನ್ನು ಕೇಳಿ ದೇವಕುಲ ತಲೆಬಾಗಿತು. ೩೯. ಸುಮ್ಮನಾದಿರೇಕೆ ? ಶಿವನೆಂದ ಮಾತು ನಿಮಗೆ ಸರಿಕಾಣದೆ ? ಸೂರ್ಯನ ಮಹತ್ವಗಳನ್ನು ಗೂಬೆ ಅರಿತಿದೆಯೆ? ಸುಳ್ಳಾವುದು, ನಿಜ ಯಾವುದು ಎಂಬುದನ್ನು ಬುದ್ಧಿಗೇಡಿಗಳು ನೀವು ಹೇಗೆ ತಿಳಿಯುವಿರಿ? ಭೋಗದಲ್ಲಿ ಮೈಮರೆತು ನಿಮ್ಮನ್ನೇ ನೀವು ತಿಳಿಯದೆ

CC-0. Jangamwadi Math Collection. Digitized by eGangotri

ಸಕಲಭೂತಂಗಳೇ ಪಶುಗಳ್ ವಿಚಾರಿಸ
ಲ್ಕಕಳಂಕನಾದ ಪರಮಾತ್ಮನೇ ಪಶುಪತಿ ಸ
ವಿಕಲಮತಿಗಳ್ ತತ್ಪ್ರಪಂಚಮಂ ಬಲ್ಲಿರೇ ರಚಿಸಿ ಪಟ್ಟಮೆನೆಸಲ್ಕೆ
ಪ್ರಕಟಿಸಿದ ವೃಷಪತಿಯ ನುಡಿಗೇಳ್ದು ಬೆಳಗಿರ್ದ
ಮುಕುರದಂತಾಯ್ತವರ ಮನದ ಜಾಡ್ಯ ಸ್ವಪ್ನ
ನಿಕರವಗಜಾಪತಿಗೆ ಮಾಡಿದರ್ ಪಟ್ಟಾಭಿಷೇಕಮಂ ವಿಭವದಿಂದೆ ೪೦

ಆಲಿಸೈ ಸಿದ್ಧರಾಮೇಶ ಹರಿಯಜದಿವಿಜ
ಪಾಲಮುಖ್ಯಾಮರಕದಂಬಕಂ ಪರುಷದಿಂ
ಕಾಲಕಂಠಂಗೆ ಕಾಣ್ಕೆಯನಿಕ್ಕಿ ನಮಿಸಲತಿಕರುಣದಿಂದಿಂದ್ರನೊಡನೆ
ಭಾಳಾಂಬಕಂ ನುಡಿದನೆಲೆ ಸುರಪ ನೀನೆಮಗೆ
ಮೇಳೈಸು ರಥವನೆನಲಿಂದ್ರನತಿವೇಗದಿಂ
ಪೇಳಿದಂ ವಿಶ್ವಕರ್ಮಂಗವಂ ವರವರಥವನೊದರಿಚಲ್ ಬಗೆದನು ೪೧

ಏನೆಂಬೆನಾ ವಿಶ್ವಕರ್ಮನಿಂದಂ ಭೂಮಿ
ತಾನೇ ವರಥವಾಯ್ತೀಸುಗಳ್ ತಾರೆಗಳ್
ನಾನಾ ಸಮುದ್ರಂಗಳಚ್ಚಾದುವಾ ವಿಂದ್ಯಗಿರಿ ಹಾಸುವಲಗೆಯಾಯ್ತು
ಭಾನುಚಂದ್ರರ ಮಂಡಲಂಗಳೇ ಗಾಲಿ ನೊಗ
ನಾನಿಸಿದಿವಸ ದಕ್ಷಿಣೋತ್ತರಾಯಣ ಯುಗವು
ನೂನವೇದಂಗಳೇ ಮೆರೆವ ಕುದುರೆಗಳಾಯ್ತು ಶಾಸ್ತ್ರಮೇ ಕೀಲಾದುವು ೪೨

ಕಷ್ಟಸಾಗರದಲ್ಲಿ ಓಲಾಡಿ ನಿತ್ಯನಾದವನನ್ನು, ನಾಶವಿಲ್ಲದವನನ್ನು, ಹುಟ್ಟು ಸಾವಿಲ್ಲದವನಾಗಿ ಪ್ರಕಾಶಿಸುವ ಶಿವನನ್ನು ಸಂಪೂರ್ಣವಾಗಿ ಮರೆತವರನ್ನು ಪಶುವೆಂದರೆ ಏನು ? ಎಂದನು. ೪೦. ಸಕಲ ಪ್ರಾಣಿಗಳೇ ಪಶುಗಳು, ಆಲೋಚಿಸಲು ಕಳಂಕರಹಿತನಾದ ಪರಮಾತ್ಮನೇ ಪಶುಪತಿ, ಬುದ್ಧಿಹೀನರು ಆ ಪ್ರಪಂಚವನ್ನು ಏನು ತಿಳಿದಿದ್ದೀರಿ ? ಶಿವನಿಗೆ ಪಶುಪತಿ ಪಟ್ಟವನ್ನು ಕಟ್ಟಿ ಎನ್ನಲು ನಂದಿಯ ವಿವರವಾದ ಮಾತನ್ನು ಕೇಳಿ ಮನಸ್ಸಿನ ರೋಗ ಸ್ವಪ್ನಸಮೂಹವೆಂಬ ಕಾಹಿಲೆ ತೊಳೆದ ಕನ್ನಡಿಯಂತಾಯಿತು ಎಂದರೆ ಅಜ್ಞಾನವು ತೊಲಗಿತು, ಜ್ಞಾನ ಲಭಿಸಿತು. ಆಗ ಅವರು ವೈಭವದಿಂದ ಗಿರಿಜಾಪತಿಗೆ ಪಟ್ಟಾಭಿಷೇಕವನ್ನು ಮಾಡಿದರು. ೪೧. ಕೇಳಯ್ಯ, ಸಿದ್ದರಾಮ, ವಿಷ್ಣು–ಬ್ರಹ್ಮ–ಇಂದ್ರ ಮೊದಲಾದ ಮುಖ್ಯರಾದ ದೇವತೆಗಳ ಸಮೂಹ ಸಂತೋಷದಿಂದ ನಂಜುಗೊರಲನಾದ ಶಿವನಿಗೆ ಕಾಣಿಕೆಯನ್ನು ಕೊಟ್ಟು ನಮಸ್ಕರಿಸಿದರು. ಶಿವನು ಬಹಳ ಕರುಣೆಯಿಂದ ಇಂದ್ರನನ್ನು ಕುರಿತು ಹೇಳಿದನು, ಎಲೆ ದೇವೇಂದ್ರ, ನೀನು ನಮಗೆ ರಥವನ್ನು ಸಿದ್ಧಗೊಳಿಸು ಎಂದನು. ಅದನ್ನು ಕೇಳಿ ದೇವೇಂದ್ರನು ಕೂಡಲೇ ವಿಶ್ವಕರ್ಮನಿಗೆ ಹೇಳಿದ. ಅವನು ಶ್ರೇಷ್ಠವಾದ ರಥವನ್ನು ರಚಿಸಲು ಯೋಚಿಸಿದನು. ೪೨. ನಾನು ಏನು ಹೇಳಲಿ ? ಆ ವಿಶ್ವಕರ್ಮನು ಭೂಮಿಯನ್ನು ರಥವನ್ನಾಗಿ ಮಾಡಿದನು. ಅದಕ್ಕೆ ನಕ್ಷತ್ರಗಳೇ ಈಚುಗಳಾದುವು. ನಾನಾ ಸಮುದ್ರಗಳೇ ಅಚ್ಚಾದುವು, ಆ ವಿಂಧ್ಯಪರ್ವತವೇ ಹಾಸುವ ಹಲಗೆ

CC-0. Jangamwadi Math Collection. Digitized by eGangotri

ಎಸೆವ ಮಿಳಿ ಸರ್ಪಮುಪನಿಷದಾಳಿ ಹಯರಜ್ಜು
ಮಿಸುಪ ಚಮ್ಮಟಿಗೆಯೋಂಕಾರಂ ಮಹಾಮೇರು
ಪೊಸತಪ್ಪ ಚಾಪವಹಿರಾಜನೇ ಸಿಂಜಿನಿ ಸರೋಜಾಕ್ಷನಸ್ತ್ರಮಾಗೆ
ಬಿಸಜಾಸನಂ ಸೂತನಮಲನದ್ಯಂಗನೆಯ
ರಸಮನಯನಂಗೆ ಚಾಮರವನಿಕ್ಕುವರಾದ
ರೆಸಕದಿಂ ನಭವನಳ್ಳಿರಿವ ಮಂದರನಗಂ ಛತ್ರಮಂದೆಸೆದಿರ್ದುದು ೪೩

ಆವ ದೇವರ್ಗೆ ಶಿವಶಿವ ಮಹಾದೇವ ವಿ
ಶ್ವಾವನೀತಳ ರಥಂ ಮತ್ತಾವ ದೇವರ್ಗೆ
ಗೋವಿಂದನೇ ಶರಂ ವಿಧಿ ಸೂತನಾಮ್ನಾಯತತಿ ಹಯಂ ಫಣಿರಾಜನೇ
ಆವ ದೇವರ್ಗೆ ಸಿಂಜಿನಿ ಮಹಾಮೇರು ಮ
ತ್ತಾವ ದೇವರ್ಗೆ ಧನುವೀ ಚರಾಚರದೊಳಾ
ದೇವನೇ ದೇವನಾತಗೆ ದೇವರಿಲ್ಲೆಂದು ಸರ್ವಲೋಕಂ ನುತಿಸಿತು ೪೪

ಕರತಳದೆ ವಾಘೆಯಂ ಪಿಡಿದಜಂ ಸತ್ಪ್ರಣವ
ಭರಿತ ಚಮ್ಮಟಿಗೆಯಿಂ ವೇದಮಯವಾಜಿಗಳ
ನಿರದೆ ಝೂಂಕಿಸಲೊಡಂ ರಥಸಹಂ ಹಯಮಭ್ರಮಂಡಲವನಂಡಲೆದುವು
ಕರುಣಿ ಬಿಜಯಂಗೈವುದೆನೆ ಸುರರ ನುಡಿಗೇಳ್ದು
ಪರಮಪಾವನಮೂರ್ತಿ ಶಂಕರಂ ದೈತ್ಯಸಂ
ಹರಣಕಾರಣನೆದ್ದನಾ ಮಹಾಸ್ಥಾನರಂಜಿತ ಸಿಂಹಪೀಠದಿಂದೆ ೪೫

ಯಾಯಿತು. ಸೂರ್ಯ–ಚಂದ್ರಮಂಡಲಗಳೇ ಗಾಲಿಗಳು. ಆ ರಾತ್ರಿ–ಹಗಲು ಉತ್ತರಾಯಣ ಮತ್ತು ದಕ್ಷಿಣಾಯನಗಳೇ ನೊಗಗಳಾದುವು. ಶ್ರೇಷ್ಠವಾದ ವೇದಗಳೇ ಹೊಳೆಯುವ ಕುದುರೆಗಳಾದುವು. ಶಾಸ್ತ್ರಗಳೇ ಕೀಲುಗಳಾದುವು. ೪೩. ಸರ್ಪವೇ ಹಗ್ಗ, ಉಪನಿಷತ್ತುಗಳ ಸಮೂಹವೇ ಕುದುರೆಯ ಲಗಾಮು, ಓಂಕಾರವೇ ಹೊಳೆಯುವ ಚಾವಟಿ, ಮಹಾ ಮೇರುಪರ್ವತ ಹೊಸದಾದ ಬಿಲ್ಲು. ಅದಕ್ಕೆ (ನಾಗರಾಜನೇ) ಆದಿಶೇಷನೇ ಹೆದೆ, ವಿಷ್ಣುವು ಬಾಣವಾದನು, ಬ್ರಹ್ಮನು ಸಾರಥಿಯಾದನು, ಮಂಗಳವಾದ ನದಿಸ್ತ್ರೀಯರು ಮುಕ್ಕಣ್ಣನಿಗೆ ಚಾಮರವನ್ನು ಬೀಸುವ ಕೆಲಸದವರಾದರು. ಆಕಾಶವನ್ನು ಭೇದಿಸುವ ಮಂದರಪರ್ವತವೇ ಛತ್ರಿಯಾಯಿತು. ೪೪. ಶಿವ ಶಿವಾ, ಮಹಾದೇವ, ಯಾವ ದೇವರಿಗೆ ಭೂತಳವೇ ರಥವಾಗಿದೆ ; ಮತ್ತೆ ಯಾವ ದೇವರಿಗೆ ವಿಷ್ಣುವೇ ಬಾಣ, ಬ್ರಹ್ಮ ಸಾರಥಿ, ವೇದಗಳು ಕುದುರೆ, ಯಾವ ದೇವರಿಗೆ ಆದಿಶೇಷನೇ ಬಿಲ್ಲಿನ ಹಗ್ಗ, ಮತ್ತೆ ಯಾವ ದೇವರಿಗೆ ಮಹಾ ಮೇರುಪರ್ವತವೇ ಬಿಲ್ಲು. ಈ ಸಕಲ ಜಗತ್ತಿನಲ್ಲಿಯೂ ಆ ದೇವನೇ ದೇವರು. ಆತನಿಗೆ ಮೀರಿದ ಬೇರೆ ದೇವರಿಲ್ಲ ಎಂದು ಎಲ್ಲ ಲೋಕವೂ ಸ್ತೋತ್ರಮಾಡಿತು. ೪೫. ಬ್ರಹ್ಮನು ಕೈಯಲ್ಲಿ ಲಗಾಮನ್ನು ಹಿಡಿದು ಓಂಕಾರದ ಚಾವಟಿಯಿಂದ ವೇದಗಳೆಂಬ ಕುದುರೆಗಳನ್ನು ಬೆದರಿಸಿದನು. ತಕ್ಷಣ ರಥದೊಡನೆ ಕುದುರೆಗಳು ಮೇಘಮಂಡಲವನ್ನು ಆವರಿಸಿ, ಕರುಣಾಳು ದಯಮಾಡಿಸು ಎಂಬ

CC-0. Jangamwadi Math Collection. Digitized by eGangotri

ಪೊಳೆವ ತಲೆಮಾಲೆಯುಂ ಲೀಲೆಯಿಂ ತೆಗೆತೆಗೆದು
ಕೆಲದವರ್ ಕೈಸಾರ್ಚೆ ವಿಲಸದ್ವಿಭೂತಿಯುಂ
ಥಳಥಳಿಪ ಸರ್ವಾಂಗಕುದ್ಧೂಳನಂ ಗೆಯ್ದು ಪೆಡೆವಣೆಯ ಪಾವುಗಳನು
ಪೊಳೆವಿನಂ ಕಡೆಯ ಸರಪಳಿ ತೋಳ ಭೂಷಣ
ಕ್ಕಳವಡಿಸಿ ಪುಲಿದೊವಲ ಮುಂಜೆರಗು ಮಿಗೆದೇಸೆ
ಯೊಳೆ ಮೆರೆವುತೀಶ್ವರಂ ನಸುನಗುತೆ ನಡೆತಂದು ರಥವೇರಲನುವಾದನು ೪೬

ಉದರದೊಳನೇಕ ಬ್ರಹ್ಮಾಂಡಂಗಳಂ ತಾಳ್ದ
ಮದನರಿಪು ತನ್ನ ವಾಮಾಂಘ್ರಿಯನಿಡಲ್ ರಥಂ
ಪುದಿದ ಭಾರದೆ ರಸಾತಳಕಿಳಿಯೆ ಗಾಲಿಗಳ್ ನೆಗ್ಗಿದವು ಹಯಮುಳುಕಲು
ಇದನೀಕ್ಷಿಸುತೆ ಸರೋಜಾಂಬಕಂ ಪಾತಾಳ
ಸದನಮಂ ಪೊಕ್ಕು ವೃಷಭಾವತಾರದಿನಾಗ
ಳದುಭುತ ವರೂಥಮಂ ನೆಗಪಲಾಕ್ಷಣದೊಳೊಯ್ಯಾರದಿಂ ರಥಮೆಸೆದುದು ೪೭

ತಲೆಗೊಡಹಿದುವು ವೇದವಾಜಿ ಬಳೆವೊಳೆಯಚ್ಚ
ನಳವಡಿಸಿದಂ ಮತ್ತೆ ವಿಶ್ವಕರ್ಮಂ ರಥಂ
ಥಳಥಳಿಸಿದುದು ವೇದವಾಜಿಯುಂ ಚಪ್ಪರಿಸಿ ಸಾರಥಿ ರಥವ ಸಾಗಿಸೆ

ದೇವತೆಗಳ ಕರೆಯನ್ನು ಕೇಳಿ, ಪಾವನಮೂರ್ತಿಯಾದ, ಮಂಗಳಕರನಾದ, ರಾಕ್ಷಸರ ಸಂಹಾರಕಾರಣನಾದ ಶಿವನು ಆಸ್ಥಾನದಲ್ಲಿ ರಂಜಿಸುತ್ತಿದ್ದ ಸಿಂಹಾಸನದಿಂದ ಮೇಲೆ ಎದ್ದನು. ೪೬. ಹೊಳೆಯುವ ರುಂಡಮಾಲೆಗಳನ್ನು ವಿನೋದದಿಂದ ತೆಗೆದು, ಪಕ್ಕದವರು ಕೈಚಾಚಿ ಹೊಳೆಯುವ ವಿಭೂತಿಯನ್ನು ಥಳಥಳಿಸುವ ದೇಹಕ್ಕೆಲ್ಲ ಬಳಿದರು. ಹೆಡೆ ಸಹಿತವಾದ ಹಾವುಗಳನ್ನು, ಹೊಳೆಯುವ ಕಡಗ, ಸರಪಳಿ, ತೋಳಬಂದಿ ಮೊದಲಾದ ಆಭರಣಗಳನ್ನಾಗಿ ಅಲಂಕರಿಸಿದರು. ಹುಲಿಚರ್ಮದ ಮುಂದಿನ ಸೆರಗಿನ ಹೆಚ್ಚಾದ ವೈಖರಿಯಿಂದ ಪ್ರಕಾಶಿಸುತ್ತ ಈಶ್ವರನು ನಸುನಗುತ್ತ ನಡೆದುಬಂದು ರಥವನ್ನು ಹತ್ತಲು ಸಿದ್ಧನಾದನು. ೪೭. ತನ್ನ ಉದರದಲ್ಲಿ ಅನೇಕ ಬ್ರಹ್ಮಾಂಡಗಳನ್ನು ಹೊಂದಿರುವ ಈಶ್ವರನು ತನ್ನ ಎಡದ ಪಾದವನ್ನು ರಥದಲ್ಲಿಟ್ಟನು. ಆಗ ರಥವು ಅದರ ಭಾರವನ್ನು ತಾಳಲಾರದೆ ರಸಾತಳಕ್ಕೆ ಇಳಿಯಿತು. ಗಾಲಿಗಳು ನೆಗ್ಗಿಹೋದವು. ಕುದುರೆಗಳು ಉಳುಕಿದವು. ಇದನ್ನು ನೋಡಿ ವಿಷ್ಣುವು ಆಗ ಪಾತಾಳಲೋಕವನ್ನು ಹೊಕ್ಕು ವೃಷಭಾವತಾರದಿಂದ ಅದ್ಭುತವಾದ ಆ ರಥವನ್ನು ಎತ್ತಿದನು. ಆಗ ರಥವು ಮನೋಹರವಾಗಿ ಕಂಗೊಳಿಸಿತು. ೪೮. ಕುದುರೆಗಳಾದ ವೇದಗಳು ತಲೆಯನ್ನು ಕೊಡವಿದುವು. ಚಕ್ರದಬಳೆ, ಮೊಳೆ, ಅಚ್ಚು ಮೊದಲಾದುವನ್ನು ವಿಶ್ವಕರ್ಮನು ಮತ್ತೆ ಹೊಂದಿಸಿದನು. ಥ ವು ರ ಥಳಥಳಿಸಿತು. ಕುದುರೆಗಳಾದ ವೇದ

CC-0. Jangamwadi Math Collection. Digitized by eGangotri

ನಲಿದು ಹರನಿಕ್ಕೆಲದೊಳಖಿಳ ವೇದವಿತಾನ
ಮುಲಿವುತಿರೆ ರಥವೇರಿ ಶಂಭು ಸರ್ವೇಶ್ವರಂ
ಕಲಹಸನ್ನಾಹಮಂ ಕೈಕೊಂಡು ಸಕಲ ಗಣಕುಲದೊಡನೆ ನಡೆಗೊಂಡನು ೪೮

ಪಸಿದೊಡಂಬುಜಭವಾಂಡಂಗಳಂ ಕಳಚಿ ಭ
ಕ್ಷಿಸುವ ಬಾಯಾರಿದೊಡೆ ಸಪ್ತಶರನಿಧಿಗಳಂ
ಮಸಗಿ ಸೂಳೊಂದರೊಳ್ ಸುರಿವ ಭೂಷಣಕೆಂದು ಸಿಡಿಲ ತುಡಲವ್ವಳಿಸುವ
ಶಶಿರವಿಗಳಂ ರನ್ನಕನ್ನಡಿಗಳೆಂದು ನಿ
ಟ್ಟಿಸುವ ಕುಲಗಿರಿಯ ಲೀಲಾಕಂತುಕತೆಯುನಾ
ಗಿಸುವ ವಿಷಮಪ್ರಮಥಗಣವೈದುತಿರ್ದುದಗಣಿತಕೋಟಿಸೇನೆಸಹಿತ ೪೯

ಬಿಗಿದ ರಂಚೆಗಳ ತವೆ ಕೊಂಬುಕತ್ತಿಗಳ ಸಬ
ಳಗಳ ಬಾಂಬರಮೆಸೆವ ಠಕ್ಕೆಯುದ ನಾಳಿವಿಲ್
ಝುಗಝುಗಿಪ ಪೊಸಪೊನ್ನ ಪಕ್ಕರಕ್ಕೆಗಳ ಜೋಲುವ ಘಂಟೆಗಳ ದನಿಗಳ
ಮಿಗೆ ಹೊಳೆವ ಹೊಮ್ಮಳಿಯ ಹಮ್ಮುಗೆಯ ನಿರ್ಭಿನ್ನ
ನಿಗಳದ ಮದಾಂಧಸಿಂಧುರವರ್ಗ ಮಸ್ತಕವ
ನಗಿದು ಪೊನ್ನಂಕುಶದೆ ಮೈವಳಿಗೆ ತರ್ಪ ಜೋದರ ಹಿಂಡು ನಡೆಗೊಂಡುದು ೫೦

ಸಿಂಗಾಡಿಗಳ ಸರಳ ಹೊರೆಯ ಮೊಗರಂಬುಗಳ
ಪೊಂಗೆಜ್ಜೆಗಳ ರತ್ನಪಾವುಡದ ಬಂಧಿಸಿದ
ಕಂಗೊಳಿಪ ಹಲ್ಲಣದ ಖಣಖಣಧ್ವಾನದಿಂ ರಂಜಿಸುವ ಕದಿಯಣಗಳ

ಗಳನ್ನು ಸಾರಥಿ ಚಪ್ಪರಿಸಿ ರಥವನ್ನು ನಡೆಸಿದನು. ಶಿವನು ಸಂತೋಷಿಸಿ ಎರಡು ಕಡೆಯೂ ವೇದಗಳ ಸಮೂಹ ಘೋಷಿಸುತ್ತಿರಲು ರಥವನ್ನು ಏರಿ ಸರ್ವೇಶ್ವರ ನಾದ ಶಂಭುವು ಯುದ್ಧಸನ್ನಾಹ ಮಾಡಿ, ಸಕಲಗಣಗಳ ಸಮೂಹದೊಡನೆ ಹೊರಟನು. ೪೯. ಹಸಿವಾದರೆ ಬ್ರಹ್ಮಾಂಡಗಳನ್ನು ಕಿತ್ತು ತಿನ್ನುವ, ಬಾಯಾರಿಕೆಯಾದರೆ ಏಳು ಸಮುದ್ರಗಳನ್ನು ಒಂದೇ ಗುಟುಕಿಗೆ ಹೀರುವ, ಆಭರಣಕ್ಕಾಗಿ ಸಿಡಿಲನ್ನೇ ತೊಡಲು ಮೇಲೆ ಹಾಯುವ, ಚಂದ್ರ–ಸೂರ್ಯರನ್ನೇ ರತ್ನದ ಕನ್ನಡಿಗಳೆಂದು ನೋಡುವ, ಮೇರು ಪರ್ವತವನ್ನು ಆಟದ ಚೆಂಡನ್ನಾಗಿ ಮಾಡುವ, ಪರಾಕ್ರಮಿಗಳಾದ ಪ್ರಮಥಗಣಗಳು ಅನೇಕ ಕೋಟಿಸಂಖ್ಯೆಯಲ್ಲಿ ಬರುತ್ತಿದ್ದವು. ೫೦. ಪಕ್ಕೆ ಪಕ್ಕೆಗಳನ್ನು ಕೊಂಬು, ಕತ್ತಿ ಗಳ, ಭರ್ಜಿಗಳ, ಆಕಾಶದವರೆಗೆ ಹೋಗಿದ್ದ ಧ್ವಜದ ಕೋಲಿನಿಂದ ಮಾಡಿದ ಬಿಲ್ಲಿನ, ಝುಗ ಝುಗ ಹೊಳೆಯುವ ಹೊಸದಾದ ಚಿನ್ನದ ಪಕ್ಕರಕ್ಷೆಗಳು ಜೋತಾಡುವ ಗಂಟೆ ಗಳಿಂದ ಹೊರಡುವ ಶಬ್ದ, ಚೆನ್ನಾಗಿ ಹೊಳೆಯುವ ಚಿನ್ನದ ಮಣಿ, ಬಲವಾದ ಸರಪಳಿಗಳಿಂದ ಬಿಗಿದ ಮದದಾನೆಗಳ ಕುಂಭಸ್ಥಳವನ್ನು ಚಿನ್ನದ ಅಂಕುಶದಿಂದ ತಿವಿದು ಅಧೀನಕ್ಕೆ ತರುವ ಮಾವುತರ ಸಮೂಹ ಹೊರಟಿತು. ೫೧. ಬಿಲ್ಲುಗಳ, ಬಾಣಗಳನ್ನಿಡುವ ಬತ್ತಳಿಕೆಗಳ, ಮುಖವಾಡಗಳ, ಹೊನ್ನಗೆಜ್ಜೆಗಳ ರತ್ನಖಚಿತವಾದ ವಸ್ತ್ರಗಳಿಂದ ಕಟ್ಟಿದ ಹೊಳೆಯುವ ಜೀನಿನ ಕಣ ಕಣ ಶಬ್ದದಿಂದ ಪ್ರಕಾಶಿಸುವ ಕಡಿವಾಣ

CC-0. Jangamwadi Math Collection. Digitized by eGangotri

ಮುಂಗಾಲ ಕಡೆಯಗಳ ಭೂಷಣದ ಸಲೆ ರಾವ್ತ
ರಿಂಗಿತದ ಗಮನಗಳ ರಾಜಿಸುವ ತೇಜಿಗಳ
ವಂಗಡದ ರಾವುತರ್ ನಡೆಗೊಂಡರಗಣಿತಂ ಬೆರಳ ಚಮ್ಮಟಿಗೆಯಿಂದೆ ೫೧

ತುಂಬಿದಂಬುಗಳ ಮೋಣಡಿಕಿರಿದ ಶಸ್ತ್ರಕುಲ
ದುಂಬರವನಳ್ಳಿರಿವ ಕೇತುವಿತತಿಯ ಹಯಕ
ದಂಬಕದ ಚಾರುಲಘು ಗಮನದ ಸಚೀತ್ಕಾರ ಚಕ್ರಂಗಳಿಂ ಸೊಗಸುವ
ಇಂಬಾದ ಪೊಂದೇರ್ಗಳಂ ಪತ್ತಿ ಟಂಕೃತಾ
ಡಂಬರದೆ ಲೋಕಮಂ ಕಿವುಡಾಗಿಸುವ ರಥಿಕ
ರೆಂಬುದೇಂ ಕೋಟಾನುಕೋಟಿಗಳ್ ನಡೆಗೊಂಡರತುಳಸನ್ನಾಹದಿಂದೆ ೫೨

ಹರಿಗೆಗಳ ಹಲಗೆಗಳ ಖಂಡೆಯದ ಸಬಳಗಳ
ಸುರಗಿಗಳ ಬಿಲ್ಗಳಂಬಿನ ಹೊರೆಯ ಕೈಪೊಡೆಯ
ತರತರದ ಜೋಡುಗಳ ತಲೆಕೌಳಿಗಳ ಸಮರಸನ್ನಾಹದಾಯತಗಳ
ಬಿರುದುಗಳ ಸಾಲ ಸತ್ತಿಗೆಯ ಚಮರಗಳ ಪರಿ
ಪರಿಯ ಕಾಲಾಳ್ಗಳೈದಿದರಭವಸೇನೆಯೊಳ್
ಪರಿಗಣನೆಗರಿದೆಂದೆನಲ್ಕೆ ಹಾಣಾಹಾಣಿಗೆಯ್ವ ಕಡುತವಕದಿಂದೆ ೫೩

ಹರಿಮಯಂ ಘನರಥಧ್ವಜಮಯಂ ಗಜಮಯಂ
ಕರಿಮಯಂ ಪಟಹತಮ್ಮಟಮಯಂ ಭಟಮಯಂ
ಶರಮಯಂ ವಾದ್ಯನಿಸ್ವನಮಯಂ ಜನಮಯಂ ನಾನಾಯುಧಾವಳಿಮಯಂ

ಗಳ, ಮುಂಗಾಲಿಗೆ ಕಟ್ಟಿದ ಕಡಗಾಭರಣದ ರಾವುತರ ಮನಸ್ಸನ್ನು ತಿಳಿದು ನಡೆಯುವ ಕುದುರೆಗಳ ಸಮೂಹದ ರಾವುತರು ಕೈಯಲ್ಲಿ ಚಾವಟಿ ಹಿಡಿದು ಲೆಕ್ಕವಿಲ್ಲದಷ್ಟು ಸಂಖ್ಯೆಯಲ್ಲಿ ನಡೆದರು. ೫೨. ಬಾಣಗಳನ್ನು ತುಂಬಿದ್ದರು. ಅಲ್ಲದೆ ಆಯುಧಗಳನ್ನು ಒತ್ತೊತ್ತಾಗಿ ಜೋಡಿಸಿದ್ದರು. ಬಾವುಟಗಳ ಸಮೂಹ ಆಕಾಶವನ್ನು ತಿವಿಯುತ್ತಿತ್ತು. ಕುದುರೆಗಳ ಸಮೂಹದ ಮನೋಹರವಾದ, ಹಗುರವಾದ ನಡಿಗೆಯ, ಚೀತ್ಕಾರ ಹೊರಡಿಸುವ ಚಕ್ರಗಳಿಂದ ಕೂಡಿ ಸೊಗಸಾದ, ಪ್ರೀತಿಯ ಹೊನ್ನ ತೇರುಗಳನ್ನು ಹತ್ತಿ ಬಿಲ್ಲಿನ ಠೇಂಕಾರ ಶಬ್ದದಿಂದ ಲೋಕಗಳನ್ನು ಕಿವುಡು ಮಾಡುತ್ತಿದ್ದ ರಥಾರೋಹಿಗಳು ಸಕಲ ಸನ್ನಾಹದಿಂದ ಕೋಟಿ ಕೋಟಿ ಸಂಖ್ಯೆಯಲ್ಲಿ ಹೊರಟರು. ಅದನ್ನು ೫೩. ಗುರಾಣಿ, ಢಾಲು, ಕತ್ತಿ, ಭರ್ಜಿ, ಬಾಕು, ಬಿಲ್ಲು, ಬಾಣಗಳಿಂದ ಕೂಡಿದ ಬತ್ತಳಿಕೆಗಳ, ಕೈಚೀಲಗಳ, ನಾನಾ ರೀತಿಯ ಕವಚಗಳ, ಶಿರಸ್ತ್ರಾಣಗಳ, ಸಮರಸನ್ನಾಹಗಳ ಸಮೂಹದಿಂದ ಕೂಡಿ ಬಿರುದುಗಳ, ಸಾಲಾದ ಛತ್ರಿಗಳ, ಚಾಮರಗಳನ್ನು ಹಿಡಿದಿದ್ದ ಲೆಕ್ಕವಿಲ್ಲದಷ್ಟು ನಾನಾ ರೀತಿಯ ಕಾಲಾಳುಗಳು ಹಣಾ-ಹಣಿ ಯುದ್ಧಮಾಡುವ ಉತ್ಸಾಹದಿಂದ ಈಶ್ವರನ ಸೈನ್ಯದಲ್ಲಿ ಹೊರಟಿದ್ದರು. ೫೪. ಶಿವನ ಸೇನಾಸಮುದ್ರವು ಕುದುರೆಗಳ ಮಯ, ಶ್ರೇಷ್ಠವಾದ ರಥಗಳ ಧ್ವಜಮಯ, ಆನೆಗಳಮಯ, ಕರಿಮಯ, ಭೇರಿ ತಮ್ಮಟೆಗಳ ಮಯ, ಸೈನ್ಯಮಯ, ಬಾಣಗಳಮಯ, ವಾದ್ಯಗಳ ಶಬ್ದದ ಮಯ, ಜನಮಯ,

CC-0. Jangamwadi Math Collection. Digitized by eGangotri

ಸುರಮಯಂ ಸಕಲಗಣಕುಲಮಯಂ ಬಲಮಯಂ
ಗರಮಯಂ ಭೂತಸಂತತಿಮಯಂ ಖತಿಮಯಂ
ನರಮಯಂ ನೆಗಳ್ದ ಕಿನ್ನರಮಯಂ ಭರಮಯಂ ಹರನ ಸೇನಾಂಬುಧಿಯೊಳು ೫೪

ಕರಿಯಂತೆ ಗಿರಿಯಂತೆ ನದಿಯಂತೆ ನಿಧಿಯಂತೆ
ಹರನಂತೆ ಮರದಂತೆ ಸರದಂತೆ ಪುರದಂತೆ
ರಿರದೆ ಪುಷ್ಕರ ಪುಂಡರೀಕ ಹರಿ ಶಂಖ ವಿಷ ಪತ್ರ ಶರ ಸುಮನಾನ್ವಿತಂ
ಶರಧಿಯಂತಬುಜಾಕ್ಷನಂತೆ ಕೇಸರಿಯಂತೆ
ಸರಸಿರುಹದಂತೆ ವಸು ಚಕ್ರಪಂಚಾಸ್ಯರಣ
ದುರುರಸೋನ್ಮಗ್ನಾಳಿಯಿಂದೆ ಶೋಭಿತವಾಗಿ ಪಡೆ ಪೆಡೆಪಿನಿಂ ನಡೆದುದು ೫೫

ಏನೆಂಬೆನೈ ರಾಮ ಶಂಕರನ ಪಡೆ ನಡೆದು
ದಾನವರ ಪುರಸಮೀಪದ ಮಹಾಬಯಲೊಳಗೆ
ತಾನಿಳಿದುದೀಶ್ವರನ ಪಾಳೆಯಂ ಹರಿಯಜರ ಪಾಳೆಯಂಗಳ್ ಭರದೊಳು
ನಾನಾ ವಿಲಾಸದಿಂದೆಡಬಲದೊಳಿಳಿಯೆ ಪ್ರಮ
ಥಾನೀಕಮುಭವನಪರಾಶೆಯೊಳ್ ದೇವಸಂ
ತಾನಕಂ ಮುಂದೆ ಬಿಡೆ ಮಿಕ್ಕ ಸೇನಾಪತಿಗಳಿಳಿದರೊಂದೊಂದೆಸೆಯೊಳು ೫೬

ನಾನಾ ಆಯುಧಗಳ ಮಯ, ದೇವತೆಗಳ ಮಯ,ಎಲ್ಲ ಗಣಕುಲಗಳ ಮಯ, ಬಲಮಯ, ಪಿಶಾಚಿ–ಭೂತಗಳ ಮಯ, ಸಿಟ್ಟಿನ ಮಯ, ಮನುಷ್ಯಮಯ, ಖ್ಯಾತರಾದ ಕಿನ್ನರರ ಮಯ ರಭಸಮಯವಾಗಿದ್ದಿತು. ೫೫. ಆನೆ ಸೊಂಡಿಲನ್ನು (ಖಡ್ಗ) ಹೊಂದಿತ್ತು. ಪರ್ವತದಂತೆ ಹುಲಿಯಿಂದ (ಪತಾಕೆ) ಕೂಡಿತ್ತು. ನದಿಯಂತೆ ನೀರನ್ನು (ಕುದುರೆ) ಹೊಂದಿತ್ತು. ಕುಬೇರನ ಐಶ್ವರ್ಯದಂತೆ ಶಂಖದಿಂದ (ಊದುವ ವಾದ್ಯ) ಇತ್ತು. ಹರನಂತೆ ವಿಷಯುಕ್ತ (ಕಠಿಣವಾದ ಮಾತು)ವಾಗಿತ್ತು. ಮರದಂತೆ ಎಲೆಗಳಿಂದ (ರಥ) ತುಂಬಿತ್ತು. ಕೊಳದಂತೆ ನೀರಿನಿಂದ (ಬಾಣ) ತುಂಬಿತ್ತು. ಪಟ್ಟಣದಂತೆ ಐಶ್ವರ್ಯ (ದೇವತೆ) ವನ್ನು ಹೊಂದಿತ್ತು. ಸಮುದ್ರದಂತೆ ರತ್ನ (ಗುರಾಣಿ)ಗಳು ನೆರೆದಿದ್ದವು. ವಿಷ್ಣುವಿನಂತೆ ಚಕ್ರ (ಸೈನ್ಯ)ದಿಂದಿತ್ತು. ಸಿಂಹದಂತೆ ವಿಶಾಲವಾದ ಬಾಯಿ (ಶಿವ) ಹೊಂದಿತ್ತು. ಕಮಲದಂತೆ ಆದರದಿಂದ ಹೆಚ್ಚಾದ ರಸವನ್ನು ಹೀರುವ ದುಂಬಿಗಳಿಂದ (ಯುದ್ಧದ ಅತಿಯಾದ ಆವೇಶದಿಂದ ಕೂಡಿದ ಸಮೂಹ) ತುಂಬಿದ ಸೈನ್ಯ ವೈಭವದಿಂದ ಹೊರಟಿತು. ೫೬ ಏನು ಹೇಳಲಯ್ಯ ಸಿದ್ಧರಾಮ, ಶಿವನಸೈನ್ಯ ನಡೆದುಬಂದು, ರಾಕ್ಷಸರ ಪಟ್ಟಣದ ಸಮೀಪದಲ್ಲಿದ್ದ ವಿಶಾಲವಾದ ಬಯಲಿನಲ್ಲಿ ಬೀಡು ಬಿಟ್ಟಿತು. ವಿಷ್ಣು–ಬ್ರಹ್ಮರ ಬಿಡಾರ ರಭಸದಿಂದ ನಾನಾ ವೈಭವದಿಂದ ಎಡ ಬಲಗಳಲ್ಲಿ ಇಳಿಯಿತು. ಪ್ರಮಥಗಣಗಳ ಸಮೂಹ ಶಿವನ ಹಿಂಭಾಗದಲ್ಲಿ ಬೀಡು ಬಿಟ್ಟಿತು. ದೇವಸಮೂಹ ಮುಂದೆ ಬೀಡುಬಿಟ್ಟಿತು. ಉಳಿದ ಸೇನಾಪತಿಗಳು

CC-0. Jangamwadi Math Collection. Digitized by eGangotri

ಕರಿಯ ರಂಚಿಕೆಗಳುಂ ವಾಜಿಗಳ ಹಲ್ಲಣಂ
ವರವರೂಥದ ಸಿಂಧವೆಸೆವ ಸುಭಟರ ಜೋಡು
ಶಿರದ ಸೀಸಕ ಬಾಹುರಕ್ಕೆ ಕೈಪೊಡೆ ಬಗಿದ ವಜ್ರಾಂಗಿ ಬತ್ತಳಿಕೆಯಿಂ
ಇರದುಳಿದ ಸದಳಿಗರ ಸಾಧನಸಮುಗ್ರಮುಂ
ತರತರದೊಳಿಳಿದುವತಿಚೆಲ್ವಾಗಿ ಪಾಳೆಯಂ
ಪರಿಶೋಭೆವಿಡಿದು ರಂಜಿಸುತಿರ್ದುದೆಲೆ ಸಿದ್ಧರಾಮೇಶ ಕೇಳೆಂದನು ೫೭

ಇಂತೆಸೆವ ಚೆನ್ನಬಸವೇಶನ ಪುರಾಣಮುಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮುಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮುಂ ಸಕಲಭೋಗಮುನ
ನಂತಸೌಭಾಗ್ಯಮುಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ ೫೮.

ನಲವತ್ತೊಂದನೆಯ ಸಂಧಿ ಸಂಪೂರ್ಣ

ಒಂದೊಂದು ದಿಕ್ಕಿನಲ್ಲಿ ಬೀಡುಬಿಟ್ಟರು. ೫೭. ಆನೆಗಳ ಪಕ್ಕರಕ್ಕೆಗಳು, ಕುದುರೆಗಳ ಜೀನು, ಶ್ರೇಷ್ಠವಾದ ರಥದ ಕುದುರೆಗಳು, ಶೂರಸೈನಿಕರ ಕವಚ, ಶಿರಸ್ತ್ರಾಣ, ಭುಜ ಕೀರ್ತಿ, ರಕ್ಷಣೆಯ ಕೈಚೀಲ, ಶರೀರಕ್ಕೆ ಬಿಗಿದ ರಕ್ಷಾಕವಚ, ಬತ್ತಳಿಕೆಯಿಂದ ಕೂಡಿತ್ತು. ಅಲ್ಲದೆ ಉಳಿದ ಸೈನಿಕರ ಸಾಧನಸಾಮಗ್ರಿಯೂ ನಾನಾ ರೀತಿಯಲ್ಲಿ ಮನೋಹರವಾಗಿ ಬೀಡುಬಿಟ್ಟವು. ಇವೆಲ್ಲವುಗಳಿಂದ ಪಾಳಯವು ಶೋಭೆಯಿಂದ ಕೂಡಿ ರಂಜಿಸುತ್ತಿತ್ತು, ಎಲೆ ಸಿದ್ಧರಾಮ, ಕೇಳು ಎಂದನು. ೫೮. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ, ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ನಲವತ್ತೊಂದನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ನಲವತ್ತೆರಡನೆಯ ಸಂಧಿ

ಸೂಚನೆ : ಹರನಾಜ್ಞೆಯಿಂದಿಂದ್ರನತುಳಸನ್ನಾಹದಿಂ
ದಿಳದೆ ತ್ರಿಪುರಕೆ ಲಗ್ಗೆಯುಂ ಬಿಡಲ್ ಕೇಳುತಾ
ದುರಳ ವಿದ್ಯುನ್ಮಾಲಿ ಚತುರಂಗವೆರಸಿ ಸಂಗರಕಿರದೆ ನಡೆತಂದನು

ಅತ್ಯಧಿಕ ಮಾಯರಾಹಿತ್ಯ ನಿಗಮಾಳಿಸಂ
[1ಸ್ತು]ತ್ಯ ನಿರ್ಜರಮುನಿಸ್ತುತ್ಯ ನಿಷ್ಕಾಮುಸಾ
ಹಿತ್ಯ ನಿರುಪಮಿತ ಸತ್ಕೃತ್ಯ ನಿರವದ್ಯಮೌನ್ನತ್ಯ ನಿರ್ವಸನ ಸತ್ಯ
ಪ್ರತ್ಯೂಹದಾನವಾಘಾತ್ಯ ಬ್ರಹ್ಮಾಚ್ಯುತಸು
ಭೃತ್ಯ ಕೃತವರಪ್ರದೌಚಿತ್ಯ ಲಕ್ಷ್ಮೀವರಾ
ಪತ್ಯದಹ'ನೀಕೃತಾದಿತ್ಯಸುತ' ಮಥ್ನಾ ಸುನಿತ್ಯ ವಿರುಪಾಕ್ಷ ಸಲಹು ೧

ಆಲಿಸಿನ್ನೆಲೆ ಸಿದ್ಧರಾಮ ಬಳಿಕಾಗಲಾ
ಭಾಳಲೋಚನನ ಪಾಳೆಯದ ಕಾವಲ ಭರಂ
ಕಾಳಭೈರವನ ವಶಮಾಯ್ತು ಸೇನಾಪತ್ಯಮೇ ಕುಮಾರಕನದಾಯ್ತು
ಪೇಳಲೇಂ ಸಕಲಭರಭಾರಮುಂದಾ ಭದ್ರ
ಕಾಳಿಯರಸನದಾಯ್ತು ತ್ರಿಪುರಮಂ ಸಂಹರಿಪ
ಲೀಲೆಯೇ ಶಿವನದಾಯ್ತಾ ಸಮಯದೊಳಗರ್ಕನಸ್ತಗಿರಿಯಂ ಸಾರ್ದನು ೨

ಸೂಚನೆ : ಶಿವನ ಅಪ್ಪಣೆಯಂತೆ ಇಂದ್ರನು ವಿಪುಲಸನ್ನಾಹದಿಂದ ತ್ರಿಪುರಕ್ಕೆ ಲಗ್ಗೆ ಹಾಕಿದನು. ಅದನ್ನು ಕೇಳಿ ದುಷ್ಟ ವಿದ್ಯುನ್ಮಾಲಿ ಚತುರಂಗಸೈನ್ಯದೊಡಗೂಡಿ ಕೂಡಲೇ ಯುದ್ಧಕ್ಕೆ ಹೊರಟುಬಂದನು. ೧. ಅತ್ಯಧಿಕನಾದವನು, ಮಾಯೆಯಿಲ್ಲದವನು, ವೇದರಾಶಿಸ್ತುತನಾದವನು, ದೇವತೆಗಳು ಮತ್ತು ಮುನಿಗಳಿಂದ ಸ್ತುತಿಸಲ್ಪಡುವವನು, ರಾಗರಹಿತನು, ಉಪಮಾತೀತವಾದ ಒಳ್ಳೆಯ ಕೆಲಸ ಮಾಡುವವನು, ನಿರವದ್ಯವಾದ ಔನ್ನತ್ಯವುಳ್ಳವನು, ದಿಗಂಬರ, ಸತ್ಯಸ್ವರೂಪ, ತೊಂದರೆಯುಂಟುಮಾಡುವ ರಾಕ್ಷಸರಿಂದ ಕೊಲ್ಲಲು ಅಸಾಧ್ಯನಾದವನು, ಬ್ರಹ್ಮ-ವಿಷ್ಣು ಮೊದಲಾದ ಸೇವಕರಿಗೆ ಉಚಿತವಾದ ವರಕೊಡುವವನು, ಲಕ್ಷ್ಮೀಪುತ್ರನಾದ ಮನ್ಮಥನನ್ನು ಸುಟ್ಟವನು, ಆದಿತ್ಯಸುತನಾದ ಯಮನನ್ನು ಮಥನ ಮಾಡಿದವನು, ನಿತ್ಯನಾದವನು ಆದ ವಿರೂಪಾಕ್ಷನೇ ಕಾಪಾಡು. ೨. ಇನ್ನು ಕೇಳಯ್ಯ, ಸಿದ್ಧರಾಮ, ಅನಂತರ ಶಿವನ ಪಾಳಯವನ್ನು ಕಾಯುವ ಕೆಲಸ ಕಾಲಭೈರವನದಾಯಿತು. ಸೇನಾಧಿಪತ್ಯ ಕುಮಾರಸ್ವಾಮಿಯದು, ಹೇಳಲಿನ್ನೇನು ? ಸೈನ್ಯದ ಎಲ್ಲ ಜವಾಬ್ದಾರಿಯೂ ವೀರಭದ್ರನದಾಯ್ತು.

1. ಗ (ಅನ್ಯತ್ರ)

CC-0. Jangamwadi Math Collection. Digitized by eGangotri

ಅಸ್ತಮಿಸಿತಂಬುಜದ ಕಾಂತಿ ಕೈರವದ ನಗೆ
ವಿಸ್ತಾರವಾಯ್ತು ನಾನಾ ರಥಾಂಗಂಗಳ ಮ
ನಸ್ತಿಮಿರದೊಡನೆ ತಿಮಿರಂ ಪೆರ್ಚಿದುದು ತುಂಬಿವಿಂಡಲರ್ಗಳೊಳ್ ಸುಳಿದುದು
ನ್ಯಸ್ತಪ್ರಭೆಯೊಳಲ್ಲಿಗಲ್ಲಿಗುಡುಗಣಮಿರೆ ಪ್ರ
ಶಸ್ತಮಣಿಬಂಧುರಾಸ್ಥಾನಮಂಟಪದೊಳ್ ಸ
ಮಸ್ತರಾಕ್ಷಸರ ವಂಗಡದಿನಿತ್ತಂ ತಾರಕಾಕ್ಷನೊಡ್ಡೋಲಗವನು ೩

ಜಂಭ ವಾಮನ ಹಯಗ್ರೀವ ವಿಕ್ಷೋಭಣ ನಿ
ಕುಂಭ ಕರ ಮುರ ಪಂಚಜನ ಕೇತುಮಾಲಿ ಪ್ರ
ಲಂಬ ಹಯಮುಖ ಲೋಕಜಿತು ವಿಪ್ರಜಿತು ವಜ್ರನಾಭ ಗಜಶಿರ ಜರ್ಝರ
ಶುಂಭ ವಿದ್ರಾವಣ ವಿರೂಪಾಕ್ಷ ಪಿಂಗಳ ನಿ
ಶುಂಭ ವಿದ್ಯುನ್ಮಾಲಿ ಕಮಲಾಕ್ಷರೆಂದೆನಿಪ
ತಾಂ ಭಯಂಕರರೆನಿಸುವಸುರನಾಯಕರೋಲಗಕ್ಕೆ ನಡೆತರುತಿರ್ದರು ೪

ನೋಡಿ ಕೆಲಬರನುಚಿತವಚನಂಗಳಿಂದೆ ಮಾ
ತಾಡಿ ಕೆಲಬರನೊಲ್ದು ಸಮ್ಮುಖಂಗಳ್ಗೆ ಕೈ
ನೀಡಿ ಕೆಲಬರನಚಲಭ್ರೂಸೌಂಜ್ಞೆಯಿಂ ಕೆಲರನುಪಚರಿಸಿ ಕುಳ್ಳಿರಿಸುತೆ
ಮೂಡುವೆಳನಗೆಯಿಂದ ಬಲದ ಶುಕ್ರನ ಮೊಗಂ
ನೋಡಿ ಸದ್ವಿನಯಗಂಭೀರವಾಕ್ಯಂಗಳಿಂ
ಮಾಡಿದಂ ಬಿನ್ನಪವನಸುರಪತಿಯುಂದು ದಂತದ್ಯುತಿ ವಿರಾಜಿಸುತಿರೆ ೫

ತ್ರಿಪುರಗಳನ್ನು ಸಂಹಾರ ಮಾಡುವ ಲೀಲೆಯೇ ಶಿವನದಾಯ್ತು. ಆ ಸಮಯಕ್ಕೆ ಸರಿಯಾಗಿ ಸೂರ್ಯನು ಪಶ್ಚಿಮಗಿರಿಯನ್ನು ಸೇರಿದನು. ೩. ಕಮಲದ ಕಾಂತಿ ಕಳೆದು ಹೋಯಿತು. ನೈದಿಲೆಯ ನಗು ಅರಳಿತು. ನಾನಾ ಚಕ್ರವಾಕಪಕ್ಷಿಗಳ ಮನಸ್ಸಿನ ಕತ್ತಲೆಯೊಡನೆ ರಾತ್ರಿಯ ಕತ್ತಲೆಯೂ ಹೆಚ್ಚಿತು. ದುಂಬಿಗಳ ಸಮೂಹ ಹೂವಿನ ಒಳಗೆ ಸೇರಿಕೊಂಡುವು. ಅಲ್ಲಲ್ಲಿ ನಕ್ಷತ್ರಗಳು ಮಸಕಾದ ಕಾಂತಿಯಿಂದ ಹೊಳೆಯುತ್ತಿರಲು ಪ್ರಶಸ್ತವಾದ ಮಣಿಸಹಿತವಾದ ಆಸ್ಥಾನಮಂಟಪದಲ್ಲಿ ಎಲ್ಲ ರಾಕ್ಷಸರ ಸಮೂಹದೊಡನೆ ತಾರಕಾಕ್ಷನು ಓಲಗವನ್ನು ಕೊಟ್ಟನು. ೪. ಜಂಭ, ವಾಮನ, ಹಯಗ್ರೀವ, ವಿಕ್ಷೋಭಣ, ನಿಕುಂಭ, ಕರ, ಮುರ, ಪಂಚಜನ, ಕೇತುಮಾಲಿ, ಪ್ರಲಂಬ, ಹಯಮುಖ, ಲೋಕಜಿತು, ವಿಪ್ರಜಿತು, ವಜ್ರನಾಭ, ಗಜಶಿರ, ಜರ್ಝರ, ಶುಂಭ, ವಿದ್ರಾವಣ, ವಿರೂಪಾಕ್ಷ, ಪಿಂಗಳ, ನಿಶುಂಭ, ವಿದ್ಯುನ್ಮಾಲಿ, ಕಮಲಾಕ್ಷ ಮೊದಲಾದ ಭಯಂಕರರಾದ ರಾಕ್ಷಸನಾಯಕರು ಓಲಗಕ್ಕೆ ಬರುತ್ತಿದ್ದರು. ೫. ರಾಕ್ಷಸರಾಜನು ಕೆಲವರನ್ನು ನೋಡಿ, ಕೆಲವರನ್ನು ಉಚಿತವಾದ ವಚನಗಳಿಂದ ಮಾತಾಡಿಸಿ, ಕೆಲವರನ್ನು ಪ್ರೀತಿಯಿಂದ ಹತ್ತಿರಕ್ಕೆ ಬರುವಂತೆ ಕೈತೋರಿಸಿ, ಕೆಲವರನ್ನು ಚಲಿಸದ ಹುಬ್ಬಿನ ಸನ್ನೆಯಿಂದಲೇ ಉಪಚರಿಸುತ್ತ ಕೂಡಿಸಿದನು. ಮುಖದಲ್ಲಿ ಮಾಡುತ್ತಿದ್ದ ಮುಗುಳುನಗುವಿನಿಂದ ಬಲಭಾಗದಲ್ಲಿ ಕುಳಿತಿದ್ದ ಶುಕ್ರಾಚಾರ್ಯರ ಮುಖವನ್ನು

CC-0. Jangamwadi Math Collection. Digitized by eGangotri

ಕಂಡಿರೇ ಸೋಜಿನವನಮರಸಂಕುಲವೆಮ್ಮ
ಖಂಡೆಯದ ದೆಸೆಗಳ್ಕಿ ದೂರಿಯೆಮ್ಮಂ ಕೊಲಲ್
ಖಂಡಪರಶುವನೆಮ್ಮ ಪುರಕೆ ತಂದರ್ ಗಡ ನೀವೆಮ್ಮ ಕಾರ್ಯಗತಿಗೆ
ಕಂಡುದೇನೆನೆ ಶಿವಂ ಕೊಲಲೆಮ್ಮನಾರ್ ಬಿಡಿಸಿ
ಕೊಂಡಪರ್ ಕಾಯ್ವೊಡಾರ್ ಕೊಲ್ವರಾರ್ ಶಂಭುವಂ
ಕಂಡು ಬಾಳ್ವುದು ನೀತಿಯೆನೆ ಕನಲುತೆದ್ದು ವಿದ್ಯುನ್ಮಾಲಿಯಿಂತೆಂದನು ೬

ಜಲಧಿಯುಂ ನಿಶ್ಶೇಷಮಾಗಿ ಸುರ್ರನೆ ಸುರಿವ
ವಿಲಯವಹ್ನಿಗೆ ಶೀಕರೋದಕಂ ಸಾಲ್ವಪುದೆ
ಬಲುಗಡೆಯರಿದೆ ನಿನ್ನ ಘಟ್ಟನೊಳ್ ಬಿಟ್ಟುನೋಡೀ ದೈತ್ಯಸಂಕುಲವನು
ಹುಳುಗಳಾ ದಿವಿಜಭಟರೆಂಬುವರ್ ಮತ್ಪುರದ
ನೆಲನ ಮೆಟ್ಟಲ್ ಸಮರ್ಥರೆ ಹರಿಣಶಾಬಕಂ
ಪುಲಿಯ ಬಿರುದಂ ನಿವಾರಿಸುವಂತುಟಾಯ್ತೆನಲ್ ಸುಭಟಾಳಿಯಿಂತೆಂದುದು ೭

ಪಿಡಿವೆವು ಸುರೇಂದ್ರಾದಿ ಸಕಲದಿಕ್ಪಾಲರಂ
ಕುಡಿವೆವು ಸಮುದ್ರಾದಿ ಸಕಲಾಂಬುಜಾಲಮಂ
ಹುಡಿಬಡಿವೆವಮರಾಧರಾದಿ ಸಕಲಾದ್ರಿಗಳನಜ ಹರಿಗಳಂ ದಟ್ಟಿಸಿ

ನೋಡಿ ಶುಭ್ರವಾದ ಹಲ್ಲಿನ ಕಾಂತಿ ಪ್ರಕಾಶಿಸುತ್ತಿರಲು, ವಿನಯ ಗಂಭೀರದಿಂದ ಕೂಡಿದ ಮಾತುಗಳಿಂದ ಬಿನ್ನವಿಸಿಕೊಂಡನು. ೬. ಆಶ್ಚರ್ಯವನ್ನು ನೋಡಿದಿರ? ದೇವತೆಗಳ ಸಮೂಹ ನಮ್ಮ ಕತ್ತಿಯ ಏಟಿಗೆ ಶಿವನಲ್ಲಿ ಚಾಡಿ ಹೇಳಿ, ನಮ್ಮನ್ನು ಕೊಲ್ಲಲು ಈಶ್ವರನನ್ನು ನಮ್ಮ ಪಟ್ಟಣಕ್ಕೆ ಕರೆದುಕೊಂಡುಬಂದರಲ್ಲಾ. ಈಗ ನಾವು ಮಾಡಬೇಕಾದ ಕಾರ್ಯವೇನು ಎಂದು ತಿಳಿದಿರುವಿರಿ ? ಎನ್ನಲು, ಅವರು ಶಿವನೇ ನಮ್ಮನ್ನು ಕೊಲ್ಲಲು ಬಂದರೆ ಯಾರು ಬಿಡಿಸಿಕೊಳ್ಳುವರು. ಕಾಪಾಡುವವರು ಯಾರು ? ಕೊಲ್ಲುವವರು ಯಾರು? ಶಿವನನ್ನು ಭಯಭಕ್ತಿಗಳಿಂದ ನೋಡಿ ಬದುಕುವುದು ನೀತಿ ಎಂದು ಶುಕ್ರಾಚಾರ್ಯರು ಹೇಳಲು, ವಿದ್ಯುನ್ಮಾಲಿಯು ಕೋಪದಿಂದ ಎದ್ದು ಹೀಗೆಂದನು. ೭. ಸಮುದ್ರವನ್ನು ಸ್ವಲ್ಪವೂ ಉಳಿಯದಂತೆ ಸುರ್ರನೆ ಹೀರುವ ಪ್ರಳಯಾಗ್ನಿಗೆ ತುಂತುರುಹನಿಯ ನೀರು ಸಾಕಾಗುತ್ತದೆಯೆ ? ನಿನ್ನ ಸೈನ್ಯದಲ್ಲಿ ಅಸಾಮಾನ್ಯರಿರಲಾಗಿ ಈ ರಾಕ್ಷಸಸಮೂಹವನ್ನು ಬಿಟ್ಟು ನೋಡು. ದೇವತೆಗಳ ಸೈನಿಕರೆನ್ನುವವರು ಹುಳುಗಳು. ನನ್ನ ಪಟ್ಟಣದ ನೆಲವನ್ನು ತುಳಿಯಲು ಕೂಡ ಅವರು ಸಮರ್ಥರಾಗಿದ್ದಾರೆಯೆ ? ಜಿಂಕೆಯಮರಿ ಹುಲಿಯ ಬಿರುದನ್ನು ಕಳೆಯುವಂತೆ ಆಯಿತು ಎಂದನು. ಅದನ್ನು ಕೇಳಿ ಸೈನಿಕರ ಸಮೂಹ ಹೀಗೆಂದಿತು. ೮. ಇಂದ್ರ ಮೊದಲಾದ ಎಲ್ಲ ದಿಕ್ಪಾಲಕರನ್ನು ಹಿಡಿಯುತ್ತೇವೆ. ಸಮುದ್ರ ಮೊದಲಾಗಿ ಎಲ್ಲೆಲ್ಲಿರುವ ನೀರನ್ನು ಹೀರುತ್ತೇವೆ. ಮೇರುಪರ್ವತವೇ ಮೊದಲಾದ ಎಲ್ಲ ಪರ್ವತಗಳನ್ನೂ ಪುಡಿಗುಟ್ಟುವೆವು.

CC-0. Jangamwadi Math Collection. Digitized by eGangotri

ಒಡೆವೆವೀ ಬ್ರಹ್ಮಾಂಡವಮಂ ಸಂಚಕಾರವಮಂ
ಕೊಡುವೆವು ವಿರೋಧಿಗಳ ಜೀವನಕೆ ಶೂಲಿಯಂ
ತಡೆವೆವೆಮ್ಮಂ ಬಿಟ್ಟು ನೋಡೆನುತೆ ರಕ್ಕಸರ್ ಜಡಿದರಾಸ್ಥಾನದೊಳಗೆ ೮

ಗರ್ಜಿಸುವ ಸುಭಟರಂ ನಿಲಿಸಿಯೋಲಗವಮಂ ವಿ
ಸರ್ಜಿಸಿ ಸುರತ್ರಯದ ಕೋಂಟೆಗಾವಲ ಪಟುಭ
ಟರ್ಜತನವೆಂದು ನೇಮಿಸಿ ತಾರಕಾಕ್ಷನರಮನೆಪೊಕ್ಕನಾ ಕ್ಷಣದೊಳು
ದುರ್ಜಯರ್ ಬಡಿವ ಹರೆಗಳ ಕೈಗಳೊಳಗಾಂತ
ಪೆರ್ಜೊಡರ ಗಡಣದಿಂ ಪ್ರಹರಿಪುದ ಕಳದಿಂದೆ
ವರ್ಜಿತಸ್ವಾಪರುರೆ ಭೋಯೆನುತೆ ಮುಪ್ಪುರದ ಕೋಂಟೆಯಂ ಕಾದಿರ್ದರು ೯

ಬಿಡದೆ ಕೂಗುವ ಪಹರೆ ತಿರುಗುತಿಹ ಪಂಜುಗಳ್
ಗಡಬಡಿಪ ಕೋಂಟೆವರೆ ದನಿಗೆಯ್ವ ಪೆಟಲುಗಳ್
ವೊಡನೊಡನೆ ಸುಳಿವ ಮೇಲ್ಪಹರಿಯಾಳ್ಗಳ್ ಚೀರುತಿಹ ಕಹಳೆಗಳ್ ಭರದೊಳು
ಪೊಡೆವ ತಂಬಟರವಂ ಮೋಸವೋಗದಿರೆನು
ತ್ತಡಿಗಡಿಗೆ ಸುಯ್ದಾನವಮಂ ಮಾಳ್ಪ ಭಟರವಂ
ಗಡವೆಸೆದುದಾಗಳಾ ತ್ರಿಪುರದಾಳ್ವೇರಿಯೆಡೆಯೆಡೆಯೊಳತಿನಿಬಿಡವಮಾಗಿ ೧೦

ವಿಷ್ಣು-ಬ್ರಹ್ಮರನ್ನು ಒರಸಿಹಾಕಿ ಈ ಬ್ರಹ್ಮಾಂಡವನ್ನು ಒಡೆದುಹಾಕುತ್ತೇವೆ. ಶತ್ರುಗಳ ಜೀವಕ್ಕೆ ಸಂಚಕಾರ ಕೊಡುತ್ತೇವೆ. ಈಶ್ವರನನ್ನು ಅಡ್ಡಗಟ್ಟುತ್ತೇವೆ. ನಮ್ಮನ್ನು ಬಿಟ್ಟು ನೋಡು ಎನ್ನುತ್ತ ರಾಕ್ಷಸರು ಆಸ್ಥಾನದಲ್ಲಿ ಗರ್ಜಿಸಿದರು. ೯. ಗರ್ಜಿಸುತ್ತಿದ್ದ ಶೂರ ಸೈನಿಕರನ್ನು ತಡೆದು ತಾರಕಾಕ್ಷನು ಸಭೆಯನ್ನು ವಿಸರ್ಜನೆ ಮಾಡಿದನು. ಮೂರೂ ಪಟ್ಟಣದ ಕೋಟೆಯ ಕಾವಲಿನವರಿಗೆ ಎಚ್ಚರಿಕೆಯನ್ನು ಹೇಳಿ ತಾರಕಾಕ್ಷನು ಅರಮನೆಯನ್ನು ಸೇರಿದನು. ಜಯಿಸಲು ಅಸಾಧ್ಯರಾದ ಶೂರರು ಹೊಡೆಯುವ ತಮಟೆಗಳ, ಕೈಯಲ್ಲಿ ಹಿಡಿದಿರುವ ದೊಡ್ಡ ಪಂಜುಗಳ ಸಮೂಹದಿಂದ, ಕಾವಲಿನವರು ಕೂಗುವ ಶಬ್ದದಿಂದ, ನಿದ್ದೆಗೆಟ್ಟು ಭೋಯೆಂದು ಆರ್ಭಟಿಸುತ್ತಾ ತ್ರಿಪುರಗಳ ಕೋಟೆಯನ್ನು ಕಾದಿದ್ದರು. ೧೦. ಒಂದೇ ಸಮನೆ ಕೂಗುವ–ಪಹರೆ, ತಿರುಗುತ್ತಿರುವ ಪಂಜುಗಳು, ಗಡಬಡಿಸುವ ಕೋಟೆಯುತನಕ ಧ್ವನಿಮಾಡಿ ಸಿಡಿಯುವ ತುಪಾಕಿಗಳು, ಮತ್ತೆ ಮತ್ತೆ ಸುಳಿದಾಡುವ ಮೇಲಿನ ಕಾವಲಿನ ಆಳುಗಳು, ಚೀರುತ್ತಿರುವ ಕಹಳೆಗಳು, ರಭಸದಿಂದ ಹೊಡೆಯುತ್ತಿರುವ ತಮಟೆಯ ಶಬ್ದ, 'ಮೋಸ ಹೋಗಬೇಡ' ಎಂದು ಮತ್ತೆ ಮತ್ತೆ ಎಚ್ಚರಿಸುವ ಸೈನಿಕರ ಸಮೂಹ, ಆ ತ್ರಿಪುರದ ಕೋಟೆಯ ಗೋಡೆಯ ಬಳಿ ಒತ್ತೊ

CC-0. Jangamwadi Math Collection. Digitized by eGangotri

ಹುರಿವ ಮಳಲಿನ ಕಾಸುವಂಬಲಿಯು ಬಿಸಿಯೆಣ್ಣೆ
ವರವಿಗಳ ಪುದಿದ ಪುಲ್ದೊಂದೆಗಳ ತರತರದೊ
ಳಿರಿಸಿರ್ದ ಬಲ್ದೊಲೆಯು ಡೆಂಕಣೆಯು ಮರುಳ ಕೈಗಳ ನೆಟ್ಟ ಬಲ್ದಸಿಗಳ
ಪರಿಪರಿಯ ಗುಂಡುಗೋವಿಯು ಕುದಿವ ಸುಣ್ಣಗಳ
ಪಿರಿದಾದ ಗುಂಡುಗಳ ಕವಣೆಗಳ ಸಬಳಗಳ
ಸುರಿದ ಕಲ್ಗಳ ಪಂದಿದಲೆಯ ಮೊತ್ತಂಗಳಾಳ್ವೇರಿಯೊಳ್ ಪಸರಿಸಿದುವು ೧೧

ಇಂತು ಪಲತೆರದ ಸಂವರಣೆಯಂ ಮಾಡುತ
ತ್ಯಂತಸುಯ್ಯಾನದಿಂ ದುರ್ಗಮಂ ಕಾಯ್ವ ಸುರ
ಸಂತಾನಮಿರ್ದುದಾ ಸಮಯದೊಳ್ ದಿನಪನುದಯಂಗೈದನಮರೇಂದ್ರನು
ಸಂತಸದೊಳೆದ್ದನಾ ತ್ರಿಪುರಕ್ಕೆ ಲಗ್ಗೆಯಿಂ
ದುಂತರಿಸದೆಲ್ಲರುಂ ಸನ್ನಾಹಮಾಗಿ ಬೇ
ಗಂ ತಳರಲೆಂದು ಪಾಳೆಯದೊಳಗೆ ಪೊಯ್ಸಿದಂ ಡಂಗುರವನಾ ಕ್ಷಣದೊಳು ೧೨

ಆಲಿಸೈ ಸಿದ್ಧರಾಮೇಶ ಮುಪ್ಪುರದ ಜನ
ಜಾಲಮತಿಚೋದ್ಯದಿಂ ಶಂಕರಂ ಮತ್ಪುರದ
ಮೇಲೆ ದಂಡೆತ್ತಿ ನಡೆತಂದು ಪಾಳಯಮನಿಳಿದಿರ್ದಪಂ ನೋಳ್ಪೆವೆಂದು
ಮೇಲೆ ಮೇಲ್ಕೈತಂದು ಕೋಂಟೆಯಂ ಪತ್ತಿ ಪೊರ
ಪಾಳೆಯವನೀಕ್ಷಿಸುತ್ತಿರ್ಪಿನಂ ಕಾಣಿಸಿತು
ಪೇಳಲೇನಚ್ಚರಿಯನಿಡಿಕಿರಿದ ಬಣ್ಣಗೂಡಾರಗಳ ಸಾಲ್ಗಳಿಂದೆ ೧೩

ತ್ತಾಗಿ ಕಾಣಿಸಿತು. ೧೧. ಹುರಿಯುವ ಮರಳಿನ, ಕಾಯಿಸುವ ಅಂಬಲಿಯ, ಬಿಸಿ ಎಣ್ಣೆಯ ಮಡಕೆಗಳ, ತುಂಬಿದ ಹುಲ್ಲಿನ ದೊಂದಿಗಳ, ನಾನಾ ರೀತಿಯಲ್ಲಿರಿಸಿದ್ದ ಭಾರವಾದ ತೊಲೆಯ, ಡೆಂಕಣೆಯೆಂಬ ಆಯುಧದ, ಭೂತಗಳ ಕೈಗಳಲ್ಲಿ ನೆಟ್ಟಿದ್ದ ಬಲವಾದ ಗೂಟಗಳ, ನಾನಾ ರೀತಿಯ ಗುಂಡು, ತುಪಾಕಿಯ, ಕುದಿಯುವ ಸುಣ್ಣದ, ದೊಡ್ಡದಾದ ಗುಂಡುಗಳ, ಕವಣೆಗಳ, ಭರ್ಜಿಗಳ, ಸುರಿದಿದ್ದ ಕಲ್ಲುಗಳ, ಹಂದಿತಲೆಯ ರಾಶಿಗಳು ಕೋಟೆಯ ಪೌಳಿಯ ಮೇಲೆ ಶೇಖರಿಸಲ್ಪಟ್ಟು ಎಲ್ಲೆಲ್ಲೂ ಹರಡಿಕೊಂಡಿದ್ದುವು. ೧೨. ಹೀಗೆ ನಾನಾ ರೀತಿಯ ಸಿದ್ಧತೆಯನ್ನು ಮಾಡುತ್ತ ಅತ್ಯಂತ ಎಚ್ಚರಿಕೆಯಿಂದ ಕೋಟೆಯನ್ನು ಕಾಯುತ್ತಿದ್ದ ರಾಕ್ಷಸರ ಸಮೂಹವಿತ್ತು. ಆ ಹೊತ್ತಿಗೆ ಸೂರ್ಯನು ಉದಯಿಸಿದನು. ದೇವೇಂದ್ರನು ಸಂತೋಷದಿಂದ ಎದ್ದನು. ಆ ತ್ರಿಪುರಕ್ಕೆ ಲಗ್ಗೆಯನ್ನು ಹಾಕಲು ತಡಮಾಡದೆ ಬೇಗ ಸಿದ್ಧರಾಗಿ ಹೊರಡಲಿ ಎಂದು ಪಾಳಯದಲ್ಲಿ ಆ ಕ್ಷಣ ಡಂಗುರವನ್ನು ಸಾರಿಸಿದನು. ೧೩. ಕೇಳಯ್ಯ ಸಿದ್ಧರಾಮೇಶ, ತ್ರಿಪುರದ ಜನಸಮೂಹ ಬಹು ವಿಸ್ಮಯದಿಂದ, ಶಿವನು ನಮ್ಮ ಪಟ್ಟಣದ ಮೇಲೆ ದಂಡೆತ್ತಿ ಬಂದು ಬೀಡುಬಿಟ್ಟಿದ್ದಾನೆ. ಅದನ್ನು ನೋಡುತ್ತೇವೆ ಎಂದು ಮೇಲೆ ಮೇಲೆ ಬಂದು ಕೋಟೆಯನ್ನು ಹತ್ತಿ ಹೊರಗಿನ ಪಾಳೆಯವನ್ನು ನೋಡುತ್ತಿದ್ದಿತು. ಆಶ್ಚರ್ಯ

CC-0. Jangamwadi Math Collection. Digitized by eGangotri

ಪೊಳೆವ ಗೂಡಾರಗಳ ಬುದ್ಬುದವ ಪೋಪ ಬ
ರ್ಪಲಘುವಾಜಿಗಳ ತೆರೆಗಳ ಕರಿಯು ಗಿರಿಯು ಜನ
ಜಲಚರದ ಮಿಸುಗುವಾಯುಧದ ನೊರೆಗಳ ವಾದ್ಯದಾರ್ಭಟೆಯು ಪೆರ್ವೊರೆಹಿನ
ಚಲಿಪ ಕೇತನತತಿಯು ಸುಳಿಯು ಸಬಳದ ಸಾಲ
ತೊಳತೊಳಪ ಪವಳವಳ್ಳಿಗಳ ಭಯುರಸಸಮು
ನ್ಮಿಳಿತ ಪರಶಿವನ ಸೇನಾಸಮುದ್ರವನಾಗ ಪುರಜನಂ ನಿಟ್ಟಿಸಿದುದು ೧೪

ಎರಡುತೆರದೊಳಗೊಪ್ಪುವಂಗಡಿಯ ಮುಂಗಡಿಯು
ಸುರಿದ ಧಾನ್ಯದ ರಾಸಿಯೊತ್ತುಗಳ ಜೊತ್ತುಗಳ
ಕರಿತುರಗನಿಚಯುದೆಡೆಯಾಟಗಳ ಘಾಟಗಳ ಪೊಂದೇರ ಸಂದಣಿಗಳ
ಅರಮನೆಗೆ ಪೋಪ ನೃಪರಂದಳದ ಗೊಂದಳದ
ತರುಣಿಯರ ಮಣಿಭೂಷಣಾವಳಿಯು ಗಾವಳಿಯು
ಪರಮಭೀಷಣಪಟುಭಟಾಳಿಗಳ ಕೇಳಿಗಳ ಪಾಳೆಯಂ ಕಣ್ಗೆಸೆಯುದು ೧೫

ಈಗಳಿದ ನೋಡಿರೇ ತವೆ ಮೇರೆಯಂ ಮಿಗೆ
ಸಾಗರದೊಲಿದೆ ಶಿವನ ಪಾಳೆಯಂ ಕಾಳೆಗಂ
ತೂಗದಿವರೊಡನೆಮ್ಮವರ್ಗೆನುತೆ ನೋಟಕರ್ ನುಡಿವುತಿರೆ ಸತಿಯರಾಗ
ಏಗುವೆಂ ಶಿವನೀಗಲೆಮ್ಮ ತ್ರಿಪುರಕೆ ಲಗ್ಗೆ
ಯಾಗಿ ಬಿಟ್ಟಪನಂತೆ ಕೆಟ್ಟೆವುರುಬಿದೊಡೆ ಶತ
ಯಾಗವೈರಿಗಳೆಂತು ಸೈರಿಸುವರಕಟೆನುತೆ ಗುಜುಗುಜಿಸುತಿರಲಿತ್ತಲು ೧೬

ವನ್ನು ಏನು ಹೇಳಲಿ ? ತುಂಬಿದ ಬಣ್ಣದ ಗುಡಾರಗಳ ಸಾಲುಗಳಿಂದ, ೧೪. ಹೊಳೆಯುವ ಗುಡಾರಗಳ ಗುಪ್ಪೆಗಳಿಂದ, ಹೋಗುವ-ಬರುವ ಬಲವಾದ ಕುದುರೆಗಳ ಅಲೆಗಳಿಂದ, ಆನೆಗಳೆಂಬ ಬೆಟ್ಟಗಳಿಂದ, ಜನವೆಂಬ ನೀರಪ್ರಾಣಿಗಳಿಂದ, ಹೊಳೆಯುವ ಆಯುಧಗಳೆಂಬ ನೊರೆಗಳಿಂದ, ವಾದ್ಯಶಬ್ದವೆಂಬ ದೊಡ್ಡ ಅಲೆಗಳ ಆರ್ಭಟದಿಂದ, ಚಲಿಸುವ ಬಾವುಟಗಳ ಸುಳಿಯಿಂದ, ಭರ್ಜಿಗಳ ಸಾಲಿನ ಹೊಳೆಹೊಳೆಯುವ ಹವಳದ ಬಳ್ಳಿಗಳಿಂದ, ಭಯರಸದ ಏರಿಳಿತದಿಂದ ಕೂಡಿದ ಶಿವನ ಸೇನಾಸಮುದ್ರವನ್ನು ಪುರದ ಜನರು ನೋಡಿದರು. ೧೫. ಎರಡು ಕಡೆಯೂ ಇದ್ದ ಅಂಗಡಿ ಮುಂಗಟ್ಟುಗಳ, ಅಲ್ಲಿ ಸುರಿದ ಧಾನ್ಯಗಳ ಒತ್ತಾದ ರಾಶಿಗಳ, ಆನೆ ಕುದುರೆಗಳ ಸಮೂಹದ ಓಡಾಟಗಳ ಸಂಗಮದ, ಹೊನ್ನರಥಗಳ ಗುಂಪುಗಳ, ಅರಮನೆಗೆ ಹೋಗುವ ರಾಜರ ಪಲ್ಲಕ್ಕಿಯ ಸಮೂಹದ, ತರುಣಿಯರು ಧರಿಸಿದ್ದ ರತ್ನದ ಒಡವೆಗಳ ಶಬ್ದದ, ಭಯಂಕರವಾದ ಶೂರಸೈನಿಕರ ಸಮೂಹದ ಆಟಪಾಟಗಳಿಂದ ಪಾಳೆಯವು ಕಣ್ಣಿಗೆ ಕಾಣಿಸಿತು. ೧೬. ಮೇರೆ ಮೀರಿದ ಶಿವನ ಪಾಳಯ ಸಮುದ್ರದಂತಿದೆ, ಈಗ ಇಲ್ಲಿ ನೋಡಿದಿರಾ ? ನಮ್ಮವರಿಗೆ ಇವರೊಡನೆ ಯುದ್ಧ ಸರಿಹೊಂದುವುದಿಲ್ಲ ಎಂದು ನೋಡಿದವರು ಹೇಳುತ್ತಿರಲು, ಆ ಮಾತುಗಳನ್ನು ಕೇಳಿ ಹೆಂಗಸರು ಏನು ಮಾಡುವುದು ಸಾಧ್ಯ? ಶಿವನು ನಮ್ಮ ಪಟ್ಟಣಕ್ಕೆ ಲಗ್ಗೆ ಹಾಕಿರುವನಂತೆ, ನಾವು ಈಗ ಕೆಟ್ಟೆವು. ದೇವತೆಗಳು ಮೇಲೆ ಬಿದ್ದರೆ

CC-0. Jangamwadi Math Collection. Digitized by eGangotri

ನಿತ್ಯನೇಮಮಂ ಮಾಡಿ ಪಾವಕ ಕೃತಾಂತ ನೈ
ರುತ್ಯ ವರುಣಾನಿಲ ಕುಬೇರರೀಶಾನರೊಡ
ನತ್ಯಧಿಕ ಸಂಭ್ರಮದೆ ನಡೆತಂದು ಶಿವನಡಿಗೆ ನಮಿಸಿ ಭಯಭಕ್ತಿಯಿಂದೆ
ಮೃತ್ಯುಸಂಹರನೆ ಚಿತ್ತವಿಸಿನ್ನು ನಾಂ ಮಾಳ್ಪ
ಕೃತ್ಯಮಂ ನಿರವಿಸೆನಲೀಶ್ವರಂ ಕೇಳ್ದು ತಾಂ
ದೈತ್ಯರ ಪುರಕ್ಕೆ ಲಗ್ಗೆಯ ಬಿಡುವುದೆಂದು ಸುರಪಂಗಿರದೆ ನೇಮಿಸಿದನು ೧೭

ಆ ಸಮಯದೊಳಗಿಂದ್ರನಮಳತರ ಮಣಿಕನಕ
ಭಾಸುರಾಭರಣದಿಂದೆಸೆವ ಬಿಳಿಯಾನೆಯ ವಿ
ಲಾಸದಿಂದೇರಿದಂ ಛತ್ರ ಚಾಮರ ಪತಾಕಾಳಿಗಳ್ ಕಣ್ಗೆಸೆದುವು
ಲೇಸಾಗಿ ಬಿರುದುಪಾಠಕರ ಕಳಕಳದಾ ಮ
ಹಾಸಕಲಸಚಿವ ಸಾಮಂತಸೇನಾಧೀಶ
ರೋಸರಿಸದೈತರಲ್ ನಡೆಸಿದಂ ಗಜಮನಾ ತ್ರಿಪುರವ ನಿರೀಕ್ಷಿಸಲ್ಕೆ ೧೮

ಗುಳಮನನಿಕ್ಕಿದರಾನೆಗಳ್ಗೆ ಪಲ್ಲಣಮನಿರ
ದಳವಡಿಸಿದರ್ ಕುದುರೆಗಳ್ಗೆ ತೇರ್ಗಂ ವಾಜಿ
ಗಳನೈದೆ ಕಟ್ಟಿದರ್ ಸಂಜೋಗಮಾಗಿ ಕಾಲಾಳ್ಗಳುಂ ಪೊರಮಟ್ಟರು
ವೊಳಗಿದುದು ಭೇರಿ ದುಂದುಭಿ ಢಕ್ಕೆ ಡೌಡೆ ಬೊಂ
ಬುಳಿ ಕರಡಿ ನಿಸ್ಸಾಳಮೆಂಬ ವಾದ್ಯಪ್ರತತಿ
ತಳರ್ದುದಾ ಚತುರಂಗಸೇನೆ ಪರಿಗಣನೆಗರಿದೆಂದೆನಲ್ ತವಕದಿಂದೆ ೧೯

ರಾಕ್ಷಸರು ಯಾವ ರೀತಿ ಸಹಿಸುತ್ತಾರೆ, ಅಯ್ಯೋ ಎನ್ನುತ್ತ ಗುಜುಗುಟ್ಟುತ್ತಿರಲು ೧೭. ಇಂದ್ರನು ನಿತ್ಯವಿಧಿಗಳನ್ನು ತೀರಿಸಿ ಅಗ್ನಿ, ಯಮ, ನಿರುತಿ, ವರುಣ, ವಾಯು, ಕುಬೇರ, ಈಶಾನರೊಡನೆ ಬಹು ಸಂಭ್ರಮದಿಂದ ಬಂದು ಶಿವನ ಪಾದಗಳಿಗೆ ಭಯ ಭಕ್ತಿಯಿಂದ ನಮಸ್ಕರಿಸಿದ. ಮೃತ್ಯುಂಜಯನೆ, ಕೇಳು, ಇನ್ನು ನಾನು ಮಾಡಬೇಕಾದ ಕೆಲಸ ವೇನು, ಆಜ್ಞಾಪಿಸು ಎನ್ನಲು ಈಶ್ವರನು ರಾಕ್ಷಸರ ಪಟ್ಟಣಕ್ಕೆ ಕೂಡಲೇ ಲಗ್ಗೆ ಹಾಕೆಂದು ದೇವೇಂದ್ರನಿಗೆ ಆಜ್ಞಾಪಿಸಿದನು. ೧೮. ಆಗ ಇಂದ್ರನು ಅತ್ಯಂತ ಶ್ರೇಷ್ಠವಾದ ರತ್ನ, ಚಿನ್ನಗಳ ಕಾಂತಿಯಿಂದ ಕೂಡಿದ ಆಭರಣದಿಂದ ಅಲಂಕಾರ ಮಾಡಿದ್ದ ಬಿಳಿಯ ಆನೆಯನ್ನು ವೈಭವದಿಂದ ಏರಿದನು. ಛತ್ರ-ಚಾಮರ-ಧ್ವಜಗಳು ಮನೋಹರವಾಗಿ ಕಣ್ಣಿಗೆ ಕಾಣಿಸಿದುವು. ವಂದಿಮಾಗಧರ ಕಳಕಳ ಧ್ವನಿ ತುಂಬಿದ್ದಿತು. ಎಲ್ಲ ಮಹಾಸಚಿವ-ಸಾಮಂತ-ಸೇನಾಧಿಪತಿಗಳು ತ್ವರಿತವಾಗಿ ಬರುತ್ತಿರಲು ತ್ರಿಪುರವನ್ನು ನೋಡಲು ಆ ಆನೆಯನ್ನು ನಡೆಸಿದನು. ೧೯. ಆನೆಗಳಿಗೆ ಪಕ್ಕರಕ್ಕೆಗಳನ್ನು ಹಾಕಿದರು. ಕುದುರೆಗಳಿಗೆ ಜೀನುಗಳನ್ನು ಅಳವಡಿಸಿದರು. ರಥಕ್ಕೆ ಕುದುರೆಗಳನ್ನು ಕಟ್ಟಿದರು. ಉಕ್ಕಿನ ಕವಚಗಳನ್ನು ಧರಿಸಿ ಕಾಲಾಳುಗಳೂ ಹೊರಟರು. ಭೇರಿ, ದುಂಧುಬಿ, ಢಕ್ಕೆ, ಸಣ್ಣಡೋಲು, ತಮ್ಮಟೆ, ಕರಡಿವಾದ್ಯ, ಡೋಲು ಮೊದಲಾದ ವಾದ್ಯಗಳು ಆರ್ಭಟಿಸಿದುವು. ಲೆಕ್ಕಕ್ಕೆ ಅಸಾಧ್ಯ

CC-0. Jangamwadi Math Collection. Digitized by eGangotri

ಸಿಂಧುರದ ಮಸ್ತಕವನೇರಿ ಮುದದಿಂ ಜಯಧು
ರಂಧರಂ ಸುರಪನೈತರೆ ಮುಂದೆ ಕಾಣಿಸಿತು
ಬಂಧುರದ ಕನಕಕೋಟಾವಳಿಯುಮೆಸೆವ ಮಾಣಿಕದ ತೆನೆಗಳ ಸೊಗಸುವ
ಬಂಧಿಸಿದ ನಾನಾ ವಿಚಿತ್ರ ಚಿತ್ರಾಂಬರದ
ಸಿಂಧಂಗಳೋಳಿಯಿಂ ಪೊರವಳಯುಮಂ ಬಳಸಿ
ಸಿಂಧುವಂತೊಪ್ಪುತಿರ್ಪಗಳ ಶೋಭೆಗಳಿಂದೆ ತ್ರಿಪುರಂಗಳತಿಚೆಲ್ವಿನಿಂ ೨೦

ತೆನೆತೆನೆಯ ಸರಿಸಗಳ ಸತ್ತಿಗೆಯ ಮುತ್ತಿಗೆಯ
ದನುಜೇಶರಿಕ್ಕೆಲದ ಮಂದಿಗಳ ವಂದಿಗಳ
ಮಿನುಮಿನುಪ ಕೈದುಗಳ ಮಿಂಚುಗಳ ಸಂಚುಗಳ ಡಾಳಿಸುವ ಚಮರಂಗಳ
ತನತನಗೆ ನೋಳ್ಪ ಗುಣಶೀಲೆಯರ ಬಾಲೆಯರ
ಕನಕರತ್ನಾಭರಣರೋಚಿಗಳ ವೀಚಿಗಳ
ತೊನೆವುತಿಹ ಚಿತ್ರದ ಪತಾಕೆಗಳ ಜೋಕೆಗಳ ಕೋಟಾವಳಿಯುಮೆಸೆದುದು ೨೧

ಸಾಲ ಮುಗಿಲಟ್ಟಣೆಯ ಡೆಂಕಣೆಯ ಪಂದಿದಲೆ
ಯೋಳಿಗಳ ಮರುಳ ಕೈಗಳ ತೂಗುದೊಲೆಯ ಧ್ವ
ಜಾಳಿಗಳ ನೆಟ್ಟ ಸಬಳಗಳ ನಿಡುಗುಂಡುಗಳ ಸಂದಣೆಯ ಸನ್ನಾಹದ
ಸ್ಥೂಲಮಾಗಿರ್ದ ತೆನೆಗಳ ಕನಕರತ್ನಪ್ರ
ಭಾಲಹರಿಯೊಬ್ಬುಳಿಯ ಘಾತಮಾದಗಳಿನ ವಿ
ಶಾಲಶಾಲಮನಿರದೆ ದಿವಿಜಪತಿ ಕಂಡು ತನ್ನವರ ಕೂಡಿಂತೆಂದನು ೨೨

ಎನ್ನುವಷ್ಟು ಚತುರಂಗಸೈನ್ಯ ತವಕದಿಂದ ಹೊರಟಿತು. ೨೦. ಆನೆಯನ್ನು ಹತ್ತಿ ಸಂತೋಷದಿಂದ ಜಯಧುರಂಧರನಾದ ದೇವೇಂದ್ರನು ಬರಲು ಸುಂದರವಾದ ಪ್ರಕಾಶಿಸುವ ಮಾಣಿಕ್ಯದ ತೆನೆಗಳಿಂದ ಸೊಗಯಿಸುವ ಚಿನ್ನದ ಕೋಟೆ ಕಣಿಸಿತು. ನಾನಾ ವಿಚಿತ್ರ-ಚಿತ್ರಗಳಿಂದ ಕೂಡಿದ ಬಟ್ಟೆಗಳಿಂದ ಕಟ್ಟಿದ ಬಾವುಟಗಳ ಸಾಲಿನಿಂದ ; ಹೊರವಲಯವನ್ನು ಬಳಸಿ ಸಮುದ್ರದಂತೆ ಕಾಣುವ ಕಂದಕದ ಶೋಭೆಗಳಿಂದ ತ್ರಿಪುರಗಳು ಅತಿಯಾದ ಸೊಗಸಿನಿಂದ ಕಾಣಿಸಿದುವು. ೨೧, ಕೋಟೆ ಕೊತ್ತಳಗಳ ಎದುರೆದುರಾದ ಬಾವುಟಗಳ ಗುಂಪಿನ ; ರಾಕ್ಷಸರಾಜರ ಎರಡೂ ಕಡೆಯಲ್ಲಿದ್ದ ಜನದ, ಹೊಗಳುಭಟ್ಟರ, ಹೊಳೆ ಹೊಳೆಯುವ ಆಯುಧಗಳ, ಮಿಂಚುಗಳ, ಸಂಚುಗಳ, ಬೀಸುವ ಚಾಮರಗಳ, ತಮ್ಮಷ್ಟಕ್ಕೆ ತಾವು ನೋಡುತ್ತಿದ್ದ ಗುಣಶೀಲೆಯರಾದ ಸ್ತ್ರೀಯರು, ಬಾಲಕಿಯರು ಧರಿಸಿದ್ದ ಚಿನ್ನದ, ರತ್ನದ ಆಭರಣಗಳ ಕಾಂತಿಯ ಅಲೆಗಳ, ಅಲ್ಲಾಡುತ್ತಿರುವ ವಿಚಿತ್ರವಾದ ಚಿನ್ನದ ಬಾವುಟಗಳ ವೈಭವದಿಂದ ಕೋಟೆಯ ಪ್ರದೇಶ ಶೋಭಿಸುತ್ತಿತ್ತು. ೨೨. ಸಾಲಾದ ಚಾವಣಿಯ, ಧ್ವಜಸ್ತಂಭದ, ಹಂದಿತಲೆಯ ಸಾಲುಗಳ, ಪಿಶಾಚಿ ಕೈಗಳ, ತೂಗಾಡುವ ಧ್ವಜಸಮೂಹಗಳ, ನೆಟ್ಟ ಭರ್ಜಿಗಳ, ತೂಕವಾದ ಗುಂಡುಗಳ ಸಮೂಹದ ಸನ್ನಾಹದಿಂದ ಕೂಡಿ, ದಪ್ಪವಾಗಿದ್ದ ತೆನೆಗಳ, ಕನಕರತ್ನಕಾಂತಿಯ ಕಿರಣಸಮೂಹದ, ಆಳವಾದ ಕಂದಕದ, ವಿಶಾಲವಾದ ಕೋಟೆಯ ಪ್ರಾಕಾರವನ್ನು ನೋಡಿ ದೇವೇಂದ್ರನು

CC-0. Jangamwadi Math Collection. Digitized by eGangotri

ಸುರ ನರೋರಗ ಯಕ್ಷ ರಾಕ್ಷಸ ಪಿಶಾಚ ಕಿಂ
ಪುರುಷ ಗುಹ್ಯಕ ಸಿದ್ಧ ಸಾಧ್ಯ ವಿದ್ಯಾಧರರ್
ವರಗರುಡ ಗಂಧರ್ವ ಕಿನ್ನರಪ್ರತತಿ ದಿಕ್ಪಾಲಕರ್ ಮುಖ್ಯರಾದ
ದೊರೆದೊರೆಗಳಂ ಕರೆದು ಸೆಲವಿತ್ತು ತ್ರಿಪುರವಂ
ಪರಿದೈದಿ ಮುತ್ತಿದೊಳ್ಗೋಂಟೆಯಂ ಕೊಂಬುದೆನೆ
ಹರುಷದಿಂ ತಂತಮ್ಮ ಚಾತುರ್ಬಲಂವೆರಸಿ ನಡೆದರತಿಸಂಭ್ರಮದೊಳು ೨೩.

ಲಗ್ಗೆವರೆ ಮೊಳಗಿದುವು ಕೂಗಿದುವು ತಮತಮಗೆ
ಬೊಗ್ಗುಹೆಗ್ಗಾಳೆಗಳ್ ಬಿಡದೆ ನಡೆಗೋಂಟೆಗಳ
ಮೊಗ್ಗರಂ ನೂಂಕಿದುವು ಪುರದ ಪೊರಬಳಸಿನೊಳ್ ಪಡಿಯಟ್ಟಣೆಗಳೆದ್ದುವು
ಬಗ್ಗಿನಿಂ ಬದ್ಧರದ ಬಂಡಿವಿಂಡೈದಿದುವು
ವೆಗ್ಗಳದ ಬಿರುದಿನಾಳ್ತಳಿಯುನಗಳಿನ ಸರಿಸ
ಕಗ್ಗಳಿಕೆಯಿಂ ಸೇರಿಸುತ್ತಿರ್ದರೆಲೆ ಸಿದ್ಧರಾಮ ಕೇಳಚ್ಚರಿಯನು ೨೪

ಕಂಡರಾ ಸಮಯದೊಳ್ ಖಳರು ಗಜಬಜಿಸುವಾ
ಖಂಡಲಾದ್ಯರ್ ಕೋಂಟೆಗಾಳೆಗವನೀಗ ಕೈ
ಕೊಂಡರ್ಕೈತಪ್ಪಾವುದೆಚ್ಚರಿಕೆಯೆಂದು ದಾನವರಾಗ ನೇಮಿಸಲ್ಕೆ
ಖಂಡೆಯದ ಪೊಳಪಿನ ಭಟಾಳಿ ಭೋಯೆನುತಾಲಿ
ಕೊಂದು ಬೊಬ್ಬಿರಿವುತಿರ್ದುದು ದಿವಿಜವಿತತಿ ಮುಂ
ಕೊಂಡು ತಲೆದೋರಿದುದು ಪುರದಗಳ ಸರಿಸದೊಳ್ ಪೇಳಲೇನಚ್ಚರಿಯನು ೨೫

ತನ್ನವರ ಜೊತೆಯಲ್ಲಿ ಹೀಗೆ ಹೇಳಿದನು. ೨೩. ಸುರ, ನರ, ಉರಗ, ಯಕ್ಷ, ರಾಕ್ಷಸ, ಪಿಶಾಚ, ಕಿಂಪುರುಷ, ಗುಹ್ಯಕ, ಸಿದ್ಧ, ಸಾಧ್ಯ, ವಿದ್ಯಾಧರರು, ಶ್ರೇಷ್ಠರಾದ ಗರುಡ, ಗಂಧರ್ವ, ಕಿನ್ನರರ ಸಮೂಹ, ದಿಕ್ಪಾಲಕರು ಮೊದಲಾಗಿ ಎಲ್ಲ ನಾಯಕರುಗಳನ್ನು ಕರೆದು ಅಪ್ಪಣೆಯಿತ್ತು ತ್ರಿಪುರವನ್ನು ಸುತ್ತುಗಟ್ಟಿ ಮುತ್ತಿ ಒಳಕೋಟೆಯನ್ನು ವಶಪಡಿಸಿ ಕೊಳ್ಳಿ ಎನ್ನಲು ಅವರು ಸಂತೋಷದಿಂದ ತಮ್ಮ ತಮ್ಮ ಚತುರಂಗಬಲ ಸಮೇತ ಅತಿ ಯಾದ ಸಂಭ್ರಮದಿಂದ ನಡೆದರು. ೨೪. ಲಗ್ಗೆ ಹತ್ತುವಾಗ ಬಾರಿಸುವ ವಾದ್ಯಗಳು ಮೊಳಗಿದುವು. ಕೊಂಬು, ದೊಡ್ಡ ಕಹಳೆಗಳು ತಮಗೆ ತಾವೇ ಕೂಗಿದುವು. ಚಲಿಸುವ ಕೋಟೆಯ ಗುಂಪು ಬಿಡದೆ ನೂಕಿದುವು. ಪಟ್ಟಣದ ಹೊರಭಾಗದಲ್ಲಿ ಸುತ್ತಲೂ ಪ್ರತಿ ಯಾದ ಕೊತ್ತಳಗಳೆದ್ದುವು, ಒಟ್ಟಾಗಿ ಘೀಳಿಡುತ್ತಿರುವ ಆನೆಗಳ ಮತ್ತು ರಥಗಳ ಹಿಂಡು ಗಳು ಬಂದುವು ; ಅಧಿಕವಾದ ಪ್ರಸಿದ್ಧರಾದ ಯೋಧರ ಗುಂಪನ್ನು ಅಗಳಿನ ಬಳಿಗೆ ಅತಿ ಶಯ ಸಾಮರ್ಥ್ಯದಿಂದ ಸೇರುತ್ತಿದ್ದರು. ಎಲೆ ಸಿದ್ಧರಾಮ ಆಶ್ಚರ್ಯವನ್ನು ಕೇಳು. ೨೫. ಆ ಸಮಯದಲ್ಲಿ ರಾಕ್ಷಸರು ಗಜಬಜಿಸುವ ದೇವೇಂದ್ರ ಮೊದಲಾದವರು ಕೋಟೆ ಕಾಳಗವನ್ನು ಈಗ ಕೈಗೊಂಡುದನ್ನು ನೋಡಿ, ಇದರಲ್ಲಿ ತಪ್ಪೇನು ? ಎಚ್ಚರಿಕೆ ! ಎಂದು ಆಗ ರಾಕ್ಷಸರು ಆಜ್ಞಾಪಿಸಲು ಹೊಳಪಿನ ಕತ್ತಿಗಳಿಂದ ಕೂಡಿದ ಸೈನಿಕರ ಸಮೂಹ ಭೋ ಎಂದು ಕೂಗಿ ಆರ್ಭಟಿಸುತ್ತಿದ್ದಿತು. ದೇವತೆಗಳ ಸಮೂಹ ಮುಂದುವರಿದು

CC-0. Jangamwadi Math Collection. Digitized by eGangotri

ತಲೆವರಿಗೆಯಿಂದೆ ಕೆಲರ್ಗಗಳ ಸರಿಸದೊಳಾಗ
ತಲೆದೋರಿದರ್ ಗಜದ ಭಾರಿಯಂ ಮಾವುತರ್
ಪುಲಿಮುಖಕೆ ನೂಂಕಿದರ್ ಬಿಗಿವ ರೆಂಚೆಗಳ ಮರೆಯೊಳಡಗಿ ಬೇಗದಿಂದೆ
ಎಲೆಲೆ ಸೇರಿದರಗಳ ದಿಣ್ಣೆಯಂ ಸುಮನಸರ್
ಚಲಿಸದಿರಿಯೆಂದಸಿ ಮುಸುಂಡಿ ಮುದ್ಗರ ಗದಾ
ವಳಿಯಿಂದೆ ಬೊಬ್ಬಿರಿದು ಹೊಣಲಿಡುತಿರ್ದರಾ ಸುರಭಟರ್ ಸುರಭಟರನು ೨೬

ತೊಲಗದಿಡುಕಿನೊಳಂಡಿಸಿದರಾಗಳೇ ಕೆಲರ್
ತಳಿಗಳೊಳ್ ಪೊಕ್ಕು ಮೈಗರೆದರಾಗಳೆ ಕೆಲರ್
ಬಲಿದ ಬದ್ದರಗಳಂ ಮರೆಗೊಂಡರಾ ಕ್ಷಣಂ ಕೆಲರೆಸೆವ ನಡೆಗೋಂಟೆಯ
ಬಳಿಯೊಳಿರ್ದರ್ ಕೆಲರ್ ಕೆಲಕೆಲರ್ ಲಾಗಿನಿಂ
ಲಳಿಯೆದ್ದು ಸುಳಿದಾಡಿದರ್ ಬೀಳ್ವ ಕವಣೆಗ
ಲ್ಗಳ ಬೀರುಗುಂಡುಗಳ ಘಾತಿಯಿಂ ಬಸವಳಿದು ಬೀಳುತಿರ್ದರ್ ಕೆಲಬರು ೨೭

ದಿಡ್ಡಿಗಳೊಳೈತಂದು ಗುಪ್ತದಿಂ ಖಳರಗಳ
ದಿಣ್ಣೆಯೊಳ್ ಸಾಲ್ಗೊಂಡು ತರತರದ ಪೇರ್ವಳಿಯ
ದಡ್ಡಿಗಳನುರೆ ಮುರಿದು ಮರೆಯೊಳಗೆ ಮೈಗರೆದ ವೀರರಂ ಸಂಹರಿಸುತೆ
ಒಡ್ಡು ಬಣಗುಗಳನೋಡಿಸಿ ಮುಗ್ಗುವಮರರಂ
ಕಡ್ಡಿಗೆಣಿಸದೆ ತಳಿಗಳಂ ಮುರಿದುಕೊಂಡಗಳೊ
ಳಡ್ಡಲಾದಮರರಂ ತರಿವುತುಂ ಪುರವನೊಳಪೊಗುತಿರ್ದರಾ ಕ್ಷಣದೊಳು ೨೮

ಪಟ್ಟಣದ ಕಂದಕದ ಸಮೀಪದಲ್ಲಿ ಕಾಣಿಸಿಕೊಂಡಿತು. ಆಶ್ಚರ್ಯವನ್ನು ಏನೆಂದು ಹೇಳಲಿ ? ೨೬. ಕೆಲವರು ಮಾವುತರು ಆನೆಗಳ ಸಮೂಹವನ್ನು ಅಂಕುಶದಿಂದ ಪಳಗಿಸಿ ಕಂದಕದ ಎದುರಿಗೆ ಕಾಣಿಸಿಕೊಂಡರು. ಕಟ್ಟಿದ್ದ ಪಕ್ಕರಕ್ಕಿಗಳ ಮರೆಯಲ್ಲಿ ಅಡಗಿಕೊಂಡು ಕೋಟೆಯಿಂದ ಹೊರಗೆ ಹೋಗುವ ದಾರಿಗೆ ನೂಕಿದರು. ಎಲೆಲೆ ಕಂದಕದ ದಡವನ್ನು ದೇವತೆಗಳು ಸಮೀಪಿಸಿದರು, ಅಲ್ಲಾಡಬೇಡಿ ಎಂದು ಆರ್ಭಟಿಸಿ ಕತ್ತಿ, ಮುಸುಂಡಿ, ಮುದ್ಗರ, ಗದೆಗಳಿಂದ ರಾಕ್ಷಸಸೈನಿಕರು ದೇವಸೈನಿಕರನ್ನು ಬಲವಾಗಿ ಹೊಡೆಯುತ್ತಿದ್ದರು. ೨೭. ಆಗಲೇ ಕೆಲವರು ಇಡುಕಿನಲ್ಲಿ ತಲೆಮರೆಸಿಕೊಂಡರು. ಕೆಲವರು ಆಶ್ರಯಸ್ಥಾನವನ್ನು ಹೊಕ್ಕು ಬಚ್ಚಿಟ್ಟುಕೊಂಡರು. ಕೆಲವರು ಮದ್ದಾನೆಗಳ ಮರೆಯಲ್ಲಿ ಅಡಗಿಕೊಂಡರು, ಆ ಕ್ಷಣ ಕೆಲವರು ನಡೆಗೋಂಟೆಯ ಬಳಿಯಲ್ಲಿ ಇದ್ದರು. ಕೆಲಕೆಲವರು ಕೌಶಲ್ಯದಿಂದ ತಂತ್ರದಿಂದ ಓಡಾಡಿದರು. ಕೆಲವರು ಬೀಸುತ್ತಿದ್ದ ಕವಣೆಕಲ್ಲುಗಳ, ಬೀರುಗುಂಡುಗಳ ಹೊಡೆತದಿಂದ ಮೂರ್ಛೆಹೋಗಿ ಬೀಳುತ್ತಿದ್ದರು. ೨೮. ರಾಕ್ಷಸರು ಗುಪ್ತವಾಗಿ ಕಿಂಡಿಯ ಬಳಿಗೆ ಬಂದು ಕಂದಕದ ದಿಣ್ಣೆಯಲ್ಲಿ ಸಾಲಾಗಿ ನಾನಾ ರೀತಿಯ ದೊಡ್ಡ ಗೂಟದ ತಡಿಕೆಗಳನ್ನು ಮುರಿದು ಮರೆಯಲ್ಲಿ ಬಚ್ಚಿಟ್ಟುಕೊಂಡಿದ್ದ ಶೂರರನ್ನು ಕೊಲ್ಲುತ್ತ, ಮೂರ್ಖರನ್ನು ಕೈಲಾಗದವರನ್ನು ಓಡಿಸುತ್ತ, ಕುಗ್ಗುತ್ತಿರುವ ದೇವತೆಗಳನ್ನು ಲೆಕ್ಕಕ್ಕೆ ತರದೆ ದೊಡ್ಡ ಬೇಲಿಗಳ ಕದವನ್ನು ಮುರಿದುಕೊಂಡು,

CC-0. Jangamwadi Math Collection. Digitized by eGangotri

ಕಲ್ಕೊರಡು ಸಣೆಸಟ್ಟು ಪುಲ್ಪೊರೆಗಳಾಂತವರ್
ನಿಲ್ಕಿದರ್ ಪುರದಗಳನೇಣಿಯುಂ ಪೊತ್ತವರ
ಸಾಲ್ಕದಲಿದುದು ಪೊರಗಣಟ್ಟಣೆಯ ಮೇಲಣವರಿಟ್ಟರಾ ತ್ರಿಪುರದವರ
ನಾಲ್ಕು ದಿಕ್ಕಿನ ಸುರಂಗಂ ನಡೆವ ಭರವಸಕೆ
ನಿಲ್ಕಡೆಯ ಕಾಣೆಂ ಪುರಂದರನ ಸೇನೆಯೊಳ್
ಮೇಲ್ಕೀಳ್ಗಳೆಂಬ ಭೇದಮನರಿಯೆನೆಲ್ಲಾ ಭಟರ್ ಮುಸುಕಿದರ್ ಭರದೊಳು ೨೯

ಇರದೆ ಪದಹತಧೂಳಿಯಿಂದ ಪಿರಿದಿಹ ಸಪ್ತ
ಶರಧಿಯುಂ ಪೂಳ್ವರ್ಗೆ ಪುರದಗಳ ಪೂಳ್ವುದೇ
ನರಿದು ನಿಮಿಷಾರ್ಧದೊಳ್ ಮಡಿದ ಪೆಣಗಳನೆಳೆದು ತುಂಬಿದರ್ ಪುಲ್ಪೊರೆಗಳಂ
ಕೊರಡುಗಳನೊಟ್ಟಿದರ್ ಕಲ್ ಗುಂಡು ಮಣ್ಗಳಂ
ಸುರಿದು ನೆಲಸರಿಮಾಡಿದರ್ ಖಳರ್ ಪೊಯಿಲ್ಗಳಂ
ಸರಕುಮಾಡದೆ ಮುಗ್ಗಿ ಕವಿದರಾ ತ್ರಿಪುರಮಂ ಸುತ್ತಲಾ ದಿವಿಜಭಟರು ೩೦

ಮೂಡಲುರುಬಿತು ಬಡಗಲೊತ್ತಿದುದು ಪಡುವ ಪರಿ
ದಾಡಿದುದು ತೆಂಕ ಕೈಕೊಂಡುದೀಶಾನ್ಯದೊಳ್
ಕೋಡಿಯಿಲ್ಲದೆ ಜಡಿದುದನಿಲನೊಳ್ ಬಲಿದುದಸುರನ ದೆಸೆಯೊಳಾರ್ಭಟಿಸಿತು
ನೋಡಲಗ್ನಿಯೊಳಡಗಿ ನುಗ್ಗಿದುದು ಸುತ್ತಲುಂ
ಮಾಡಿದುದು ಕರ್ಕಶವನಮರಸುಭಟಾಳಿ ನಾ
ಡಾಡಿಗಳ ಕೋಂಟೆಗಾಳಿಗವೆ ಕವಿದುದು ಕಲ್ಲಮಳೆ ಭಟರ ಮೇಲೆ ೩೧

ಕಂದಕದಲ್ಲಿ ಎದುರಾದ ದೇವತೆಗಳನ್ನು ತರಿದುಹಾಕುತ್ತ ಆ ಕ್ಷಣದಲ್ಲಿ ಪಟ್ಟಣವನ್ನು ಪ್ರವೇಶಿಸುತ್ತಿದ್ದರು. ೨೯. ಕಲ್ಲು, ಕೊರಡು, ಕಸಕಡ್ಡಿ, ಹುಲ್ಲುಹೊರೆಗಳನ್ನು ಹೊತ್ತವರು ಹೊತ್ತಿಗೆ ಸರಿಯಾಗಿ ಒದಗಿದರು. ಪುರದ ಕಂದಕದ ಏಣಿಯನ್ನು ಹೊತ್ತವರ ಸಾಲು ಚಲಿಸಿತು. ಹೊರಗಿನ ಅಟ್ಟಣೆಯ ಮೇಲಿದ್ದವರು ಆ ತ್ರಿಪುರದವರನ್ನು ಹೊಡೆದರು. ನಾಲ್ಕು ದಿಕ್ಕಿನಲ್ಲಿಯೂ ನಡೆಯುವ ಸೈನ್ಯದ ರಭಸಕ್ಕೆ ತಡೆಯನ್ನೇ ಕಾಣೆ. ಇಂದ್ರನ ಸೈನ್ಯದಲ್ಲಿ ಮೇಲು-ಕೀಳು ಎನ್ನುವ ಭೇದವನ್ನು ತಿಳಿಯೆ. ಎಲ್ಲಾ ಭಟರೂ ರಭಸದಿಂದ ಮುತ್ತಿದರು. ೩೦. ಕಾಲಧೂಳಿನಿಂದಲೇ ದೊಡ್ಡದಾದ ಸಪ್ತ ಸಮುದ್ರಗಳನ್ನು ಹೂಳುಗೆಡವುವರಿಗೆ ಆ ಪಟ್ಟಣದ ಕಂದಕವನ್ನು ಮುಚ್ಚುವುದೇನು ಕಷ್ಟ ? ನಿಮಿಷಾರ್ಧದಲ್ಲಿ ಸತ್ತ ಹೆಣಗಳನ್ನು ಎಳೆದು ತುಂಬಿದರು. ಹುಲ್ಲು ಹೊರೆ-ಕೊರಡುಗಳನ್ನು ಒಟ್ಟಿದರು. ಕಲ್ಲು ಗುಂಡು, ಮಣ್ಣುಗಳನ್ನು ಸುರಿದು ಸಮಮಾಡಿದರು. ರಾಕ್ಷಸರ ಹೊಡೆತಗಳನ್ನು ಲೆಕ್ಕಿಸದೆ ಮುಂದೆ ನುಗ್ಗಿ ತ್ರಿಪುರದ ಸುತ್ತಲೂ ದೇವತೆಗಳ ಸೈನಿಕರು ಮುತ್ತಿದರು. ೩೧. ಪೂರ್ವದಿಕ್ಕಿನ ಸೈನ್ಯ ಮೇಲೆ ಬಿದ್ದಿತು. ಉತ್ತರದಿಕ್ಕಿನ ಸೈನ್ಯ ಒತ್ತಿತು. ಪಶ್ಚಿಮ ದಿಕ್ಕಿನದು ಹರಿದಾಡಿತು. ದಕ್ಷಿಣದಿಕ್ಕಿನ ಸೈನ್ಯ ಯುದ್ಧ ಕೈಗೊಂಡಿತು. ಈಶಾನ್ಯದಿಕ್ಕಿನಲ್ಲಿ ಸಂಶಯ ಬರದಂತೆ ಹೊಡೆಯಿತು. ವಾಯುವ್ಯದಿಕ್ಕಿನಲ್ಲಿ ಯುದ್ಧ ಬಲವಾಯಿತು. ನೈಋತ್ಯದಿಕ್ಕಿನಲ್ಲಿ ಸೈನ್ಯ ಬೊಬ್ಬೆಹಾಕಿತು. ನೋಡುತ್ತಿದ್ದಂತೆ ಆಗ್ನೇಯದಿಕ್ಕಿನಲ್ಲಿ

CC-0. Jangamwadi Math Collection. Digitized by eGangotri

ಆಡಿದುವು ಡೆಂಕಣಗಳಲ್ಲಲ್ಲಿ ಮರುಳ ಕೈ
ನೀಡಿದುವು ಕವಣೆಗಲ್ ಸೂಸಿದುವು ಕಾಯ್ದೆಣ್ಣೆ
ಗೂಡಿ ಮೆಳಲರಗು ಸಾಸಿವೆಗದಡು ಸುಣ್ಣಕಲ್ಲಂಬಲಿಗಳುಂ ಸುರಿದುವು
ಹೂಡಿದುವು ಪೆಟಲ್ಗಳಿಕ್ಕುವ ದಸಿಗಳಾಗಳೋ
ಲಾಡಿದುವು ಪೇರೆತ್ತುಗುಂಡುಗಳ್ ಭರದೊಳೊ
ಕ್ಕಾಡಿದುವು ಬಾಡಿದುವು ಮೋರೆಗಳ್ ಕವಿಕವಿದು ಬೀಳ್ವ ದಿವಿಜಾಳಿಭಟರ ೩೨

ನಿಚ್ಚಣಿಕೆಯಂ ಪತ್ತೆ ಬೇಗ ಪುಲ್ದೊಂದೆಗಳ
ಕಿಚ್ಚಿನಿಂ ಸೀದರೆಡಬಲದೊಳಿಟ್ಟಣಿಪರಂ
ಮುಚ್ಚಿದರ್ ಕಲ್ಗುಂಡುವಳೆಗಳಿಂ ಪಂದಿದಲೆಗಳೊಳಿಟ್ಟು ಬೊಬ್ಬಿರಿದರು
ಕೊಚ್ಚಿದರ್ ಕತ್ತಿ ಕೈದುಗಳಿಂದೆ ಪೆಣಗಳಂ
ಪೆಚ್ಚಿದರ್ ಭೂತವೇತಾಳಸಂಕುಲಕೆ ನೆರೆ
ಹುಚ್ಚು ಮಾಡಿದರೊಂದು ನಿಮಿಷದೊಳ್ ದಿವಿಜರಂ ಖಳಭಟರ್ ತವಕದಿಂದೆ ೩೩

ಕಾಸಿದೆಣ್ಣೆಯ ಪೊಯಿಲ್ಗೆ ಪಟುಭಟರ ಮೈದೊಗಲ್
ಕೀಸಿದುದು ಮಳಲ ಮಳೆಯಿಂದೆ ಪುಣ್ಣಾದುವುರೆ
ಸೂಸುತಿಪ ಸುಣ್ಣಗಳ ಸೋಂಕಿನಿಂ ಕಣ್ಣುರಳಿ ಬಾಯ್ಬೆಂದು ಬಸವಳಿದರು

ಬಚ್ಚಿಟ್ಟುಕೊಂಡು ಸೈನ್ಯ ಮುಂದೆ ನುಗ್ಗಿತು. ಈ ರೀತಿ ಸುತ್ತಲೂ ಮುತ್ತಿ ದೇವಸೈನ್ಯ ಬಿರುಸಾಗಿ ಯುದ್ಧ ಮಾಡಿತು ? ಸಾಮಾನ್ಯರ ಕೋಟೆ ಕಾಳಗವೆ ? ಭಟರ ಮೇಲೆ ಕಲ್ಲ ಮಳೆ ಸುರಿದು ಕವಿಯಿತು. ೩೨. ಅಲ್ಲಲ್ಲಿ ಧ್ವಜಸ್ತಂಭಗಳು ಅಲ್ಲಾಡಿದುವು, ಮರುಳ ಕೈ ಆಯುಧಗಳು ಚಾಚಿದುವು, ಕವಣೆಕಲ್ಲುಗಳು ಬೀಸಿದುವು, ಕಾಯ್ದೆಣ್ಣೆಯ ಜೊತೆಯಲ್ಲಿ ಕಾದಮರಳು, ಅರಗು, ಸಾಸುವೆ, ಗಂಜಳ, ಸುಣ್ಣದಕಲ್ಲು, ಅಂಬಲಿ ಮೊದಲಾದುವು ಸುರಿದುವು, ತುಪಾಕಿಗಳು ಶಬ್ದಮಾಡಿದುವು, ಚೂಪಾದ ಗೂಟಗಳು ಓಲಾಡಿದುವು. ಭಾರಿ ಭಾರಿಯಾದ ಕಲ್ಲುಗುಂಡುಗಳು ಬೀಸಿದುವು. ಒತ್ತೊತ್ತಾಗಿ ಬೀಳುವ ದೇವಭಟರ ಮುಖಗಳು ಬಾಡಿದುವು. ೩೩. ಏಣಿಗಳನ್ನು ಹತ್ತಲು ಬೇಗನೆ ಹುಲ್ಲಿನ ದೊಂದಿಗಳ ಬೆಂಕಿಯಿಂದ ಸೀದರು. ಎಡ ಬಲಗಳಲ್ಲಿ ಗುಂಪುಗೂಡುವವರನ್ನು ಕಲ್ಲು-ಗುಂಡುಗಳ ಮಳೆಯಿಂದ ಮುಚ್ಚಿದರು. ಆಯುಧಗಳಿಂದ ಹೊಡೆದು ಆರ್ಭಟಿಸಿದರು. ಕತ್ತಿ ಮೊದಲಾದ ಆಯುಧಗಳಿಂದ ಒಂದೇ ನಿಮಿಷದಲ್ಲಿ ತವಕದಿಂದ ರಾಕ್ಷಸಭಟರು ದೇವತೆಗಳನ್ನು ಕೊಚ್ಚಿಹಾಕಿದರು. ಹೆಣಗಳನ್ನು ರಾಶಿ ಮಾಡಿದರು. ಭೂತ–ಬೇತಾಳಗಳ ಗುಂಪಿಗೆ ಬಹಳ ಸಂತೋಷವನ್ನುಂಟುಮಾಡಿದರು. ೩೪. ಕಾಸಿದ ಎಣ್ಣೆಯು ಸುರಿದುದರಿಂದ ಶೂರಭಟರ ಮೈಚರ್ಮ ಸುಲಿಯಿತು. ಮರಳ ಮಳೆಯಿಂದ ಹುಣ್ಣಾದುವು. ಹೆಚ್ಚಾಗಿ ಸುರಿಯುತ್ತಿರುವ ಸುಣ್ಣಗಳ ಸೋಂಕಿನಿಂದ ಕಣ್ಣು ಉರಿದು ಬಾಯಿ ಬೆಂದು

CC-0. Jangamwadi Math Collection. Digitized by eGangotri

ಸಾಸಿವೆಯ ಬಿಸಿಗದಡು ಬೀಳೆ ಜಠರಾಗ್ನಿಯೊಳ್
ಕೇಸುರಿಗಳುಬ್ಬಿದುವು ಕಲ್ಗುಂಡುಗಳ ಹತಿಯೊ
ಳೋಸರಿಪ ದಿವಿಜರಂ ಕಂಡು ಮೂದಲಿಸಿದಂ ಸುರಪನತಿಕೋಪದಿಂದೆ ೩೪

ಮತ್ತೆ ಮೂದಲಿಸಿದಂ ಸುರಪನೆಲವೆಲವೊ ಬೆ
ನ್ನಿತ್ತಿರೇ ದನುಜರ್ಗೆ ಸುರರೆಂದು ಮೂದಲಿಸಿ
ಚಿತ್ತದಾವೇಶಮುಬ್ಬರಿಸಿದುದು ಮುಗ್ಗಿದುದು ತಮತಮಗೆ ಸಂದಣಿಸುತೆ
ಕೊತ್ತಳದ ಹುಲಿಮುಖದ ದಿಡ್ಡಿಗಳ ಸರಿಸದೊಳ್
ಪತ್ತಿದರ್ ಸಾಲ ನಿಚ್ಚಣಿಕೆಗಳ ಮೇಲೆ ಮೊರೆ
ವುತ್ತಿರ್ದುವಖಿಳವಾದ್ಯಂಗಳತ್ತಂಡದೊಳ್ ಶರಧಿ ನಿರ್ಘೋಷದಂತೆ ೩೫

ಸೂಸಿದರ್ ಕೆಂಡಮಂ ಬಲ್ಗವಣೆಕಲ್ಗಳಂ
ಬೀಸಿದರ್ ಬಿಸಿಯ ಮೇಣಮನೆರೆದು ತನುಗಳಂ
ಕಾಸಿದರ್ ಬೀರ್ವಗ್ಗಮಂ ಹಾಯ್ಕಿ ಸೇದಿದರ್ ಮುರುಳ್ಗೈಗಳಿಂ ತೂಂತರು
ಮಾಸಿದರ್ ಕಾರ್ಬೊಗೆಯ ಪರ್ಬಿನಿಂ ಬಲ್ಗೊಲೆಗೆ
ಹೇಸಿದರ್ ಸುರರಗಳ ದಿಡ್ಡಿಯೊಳ್ ಕೈಗಳಂ
ಪಾಸಿದರ್ ಕೆಲರಾಗ ಕೆಲರುರುಬಿ ಕಾದುತಿರ್ದರ್ ಬಳಿಕ್ಕೇನೆಂಬೆನು ೩೬

ಇರದೆ ಹಮ್ಮೈಸಿದರ್ ಕೆಂಡಗಳ್ ಬೀಳೆ ಕೇ
ಸುರಿಯಿಂದೆ ಮೊಗವುರಿದು ಮುರಿದರುರೆ ತೊಲೆಯುರುಳೆ
ಕರಚರಣಮುಡಿದು ಕೆಡೆದರ್ ಪಂದಿದಲೆ ತಾಗೆ ಜರ್ಜರಿತತನುವಾದರು

ಆಯಾಸಗೊಂಡರು. ಸಾಸಿವೆಯ ಬಿಸಿಯಾದ ಗಂಜಳ ಬೀಳಲು ಜಠರಾಗ್ನಿಯಲ್ಲಿ ಕೆಂಪು ಜ್ವಾಲೆ ಹೆಚ್ಚಿತು. ಕಲ್ಲುಗುಂಡುಗಳ ಹೊಡೆತದಿಂದ ಹಿಂಜರಿಯುವ ದೇವತೆಗಳನ್ನು ನೋಡಿ ದೇವೇಂದ್ರನು ಅತಿಯಾದ ಕೋಪದಿಂದ ಅವರನ್ನು ಮೂದಲಿಸಿದನು. ೩೫. ದೇವೇಂದ್ರನು ಮತ್ತೆ ಮೂದಲಿಸಿದನು. ಎಲವೆಲವೋ, ರಾಕ್ಷಸರಿಗೆ ದೇವತೆಗಳು ಬೆನ್ನು ತೋರಿಸಿದರಲ್ಲ ! ಎಂದು ಹೀಯಾಳಿಸಿದನು. ಮನಸ್ಸಿನ ಆವೇಶ ಹೆಚ್ಚಾಯಿತು. ಮುನ್ನುಗ್ಗಿ ಕೋಟೆಯ ಹೆಬ್ಬಾಗಿಲಿನ ದಿಡ್ಡಿಗಳ ಎದುರಿನಲ್ಲಿ ತಾವು ತಾವು ಒಟ್ಟಾಗಿ ಸಾಲಾಗಿದ್ದ ಏಣಿಗಳ ಮೇಲೆ ಹತ್ತಿದರು. ಎರಡೂ ಕಡೆಯ ವಾದ್ಯಗಳು ಸಮುದ್ರ ಘೋಷದಂತೆ ಮೊರೆಯುತ್ತಿದ್ದವು. ೩೬. ಕೆಂಡವನ್ನು ಸುರಿದರು. ದಪ್ಪನಾದ ಕವಣೆ ಕಲ್ಲುಗಳನ್ನು ಬೀಸಿದರು. ಬಿಸಿಯಾದ ಮೇಣವನ್ನು ಸುರಿದು ದೇಹಗಳನ್ನು ಸುಟ್ಟರು. ಬೀರುಗುಣಿಕೆಯನ್ನು ಹಾಕಿ ಎಳೆದರು. ಮುರುಳುಕೈ ಆಯುಧಗಳಿಂದ ಕೊರೆದರು. ಕಪ್ಪು ಹೊಗೆಯನ್ನು ಹಬ್ಬಿಸಿ ಮುಸುಕು ಮಾಡಿದರು. ಅತಿಯಾದ ಕೊಲೆಗೆ ದೇವತೆಗಳು ಹೇಸಿದರು. ಕೆಲವರು ಆಗ ದಿಡ್ಡಿಯಲ್ಲಿ ಕೈಗಳನ್ನು ಚಾಚಿದರು.ಕೆಲವರು ಮುನ್ನುಗ್ಗಿ ಹೋರಾಡುತ್ತಿದ್ದರು. ೩೭. ತಡೆಯದೆ ಮೂರ್ಛೆಹೋದರು. ಕೆಂಡಗಳು ಬೀಳಲು ಕೆಂಪು ಜ್ವಾಲೆಯಿಂದ ಮುಖ ತಿರುಗಿಸಿ ಓಡಿದರು. ತೊಲೆಗಳು ಉರುಳಲು ಕೈಕಾಲು ಮುರಿದು ಬಿದ್ದರು. ಆಯುಧವು ತಾಕಲು ಜರ್ಜರಿತ ದೇಹದವರಾದರು. ದೊಡ್ಡ ಚೂಪುಕೋಲುಗಳು

CC-0. Jangamwadi Math Collection. Digitized by eGangotri

ಪಿರಿಯ ದಸಿಗಳು ಮೈಯ ನಾಂಟೆ ಕಳವಳಿಸಿದರ್
ಪರಿಪರಿಯ ಸಮರಸಾಧನಗಳಿಂ ಬಿಡದೊಡನೆ
ತರತರದೆ ಬೀಳುತಿರ್ದರ್ ದಿವಿಜಸುಭಟರದನೇನೆಂಬೆನಚ್ಚರಿಯನು ೩೭

ಕಾದೆಣ್ಣೆ ಸುಣ್ಣಗಳ್ ಜಲಧಾರೆಯಿರ್ಕಡೆಯೊ
ಳೂದುತಿಹ ಕಾಳೆಗಳ್ ಮೊಳಗು ಕಲ್ಗುಂಡುಗಳ್
ಭೇದವಿಲ್ಲದೆ ಸೂಸುವಾರಿಕಲ್ ಕಂಡೆಯದ ಬೆಳಗು ಮಿಂಚುಗಳ ಸಂಚು
ಆದರದೆ ಕುಣಿವ ಶಾಕಿನಿಯರೇ ನವಿಲಲ್ಲಿ
ಕಾದುವ ಸುರರ್ ಜಲಂಧರಗಳೆನೆ ಕಣ್ಗೆ ಸೊಗ
ಸಾದುದಳಿದಮರರಟ್ಟೆಯ ಬೆಳಸು ತ್ರಿಪುರದ ಮಹಾಬಯಲ ಪೆರ್ಬೊಲದೊಳು ೩೮

ಪಡಿಬಲಿಸಿ ಸುರಭಟರ್ ಮುತ್ತುವರ್ ಪತ್ತುವರ್
ಕಡುಗಿ ರಾಕ್ಷಸಭಟರ್ ನೂಂಕುವರ್ ತಾಂಕುವರ್
ಮಡಿದ ಪೆಣಗಳ ಬಳಿಯೊಳೊತ್ತುವರ್ ಸುತ್ತುವರ್ ಪರಿಗೆಯಿಂ ದಿವಿಜಭಟರು
ಕೊಡವೆ ಕೋಪದೊಳಸುರರುರುಬುವರ್ ತರುಬುವರ್
ಬಿಡದೆ ಸುರರೊತ್ತಿ ಪೊಯ್ದಾಡುವರ್ ಕಾಡುವರ್
ಕಡಿದಿರಿದಸುರಭಟರ್ ಕೆಡಪುವರ್ ಮಡಪುವರ್ ಮಾರಾಂತ ಸುರಭಟರನು ೩೯

ಸುರಗಿಯಿಂದಿರಿದು ಶೂಲದೆ ತಿವಿದು ಖಡ್ಗದಿಂ
ದಿರದೆ ಕತ್ತರಿಸಿ ಕೊಡಲಿಗಳಿಂದೆ ಕಡಿದು ಮು
ದ್ಗರದಿಂದೆ ಮೋದಿ ಮುಸಲದೊಳಿಟ್ಟು ಗದೆಗಳಿಂದಪ್ಪಳಿಸಿ ಸಬಳದಿಂದೆ

ಮೈಯಲ್ಲಿ ನಾಟಲು ಕಳವಳಗೊಂಡರು. ಅನೇಕ ರೀತಿಯ ಯುದ್ಧಸಾಮಗ್ರಿಗಳಿಂದ ಬಿಡದೆ ತ್ವರಿತವಾಗಿ ನಾನಾ ರೀತಿ ದೇವಸೈನಿಕರು ಬೀಳುತ್ತಿದ್ದರು. ಆ ಆಶ್ಚರ್ಯವನ್ನು ಏನು ಹೇಳಲಿ ? ೩೮. ಕಾದೆಣ್ಣೆ–ಸುಣ್ಣಗಳೇ ನೀರಿನ ಪ್ರವಾಹ. ಎರಡು ಕಡೆಯಲ್ಲಿಯೂ ಊದುತ್ತಿರುವ ಕಹಳೆಗಳೇ ಗುಡುಗು. ತಡೆಯದೆ ಸುರಿಯುತ್ತಿರುವ ಕಲ್ಲುಗುಂಡುಗಳೇ ಆಲಿಕಲ್ಲು. ಕತ್ತಿಗಳ ಬೆಳಕು ಮಿಂಚುಗಳ ಹೊಳಪು. ಆದರದಿಂದ ಕುಣಿಯುವ ಶಾಕಿನಿಯರೇ ನವಿಲು. ಅಲ್ಲಿ ಯುದ್ಧ ಮಾಡುವ ದೇವತೆಗಳೇ ಮೋಡಗಳು ಎನ್ನಲು ತ್ರಿಪುರದ ವಿಸ್ತಾರವಾದ ಬಯಲಲ್ಲಿ ಸತ್ತ ದೇವತೆಗಳ ದೇಹದ ರಾಶಿ ಕಾಣಿಸಿತು. ೩೯. ಮತ್ತೆ ಬಲವಾಗಿ ಎದುರಿಸಿ ದೇವಸೈನಿಕರು ಮುತ್ತುವರು, ಹತ್ತುವರು ; ಕೋಪಗೊಂಡು ರಾಕ್ಷಸಭಟರು ನೂಕುವರು, ಎರಗುವರು. ದೇವಸೈನಿಕರು ಗುರಾಣಿಯಿಂದ ಸತ್ತ ಹೆಣಗಳನ್ನು ಹಿಂದಕ್ಕೆ ಒತ್ತುವರು, ಸುತ್ತುವರು. ಕೋಪದಿಂದ ರಾಕ್ಷಸಸೈನಿಕರು ಬೆದರದೆ ಮೇಲೆಬಿದ್ದು ಅಡ್ಡಗಟ್ಟುವರು. ದೇವತೆಗಳು ಬಿಡದೆ ಹಿಂದೊತ್ತಿ ಹೊಡೆದಾಡುವರು, ಕೋಟಲೆಗೊಳಿಸುವರು. ಎದುರಿಸಿದ ದೇವಸೈನಿಕರನ್ನು ರಾಕ್ಷಸಸೈನಿಕರು ಕಡಿದು ತಿವಿದು, ಕೆಡವಿ ಕೊಲ್ಲುವರು. ೪೦. ರಾಕ್ಷಸನಾಯಕರು ಬೊಬ್ಬೆ ಹಾಕಿ ಕತ್ತಿಯಿಂದ ಇರಿದು, ಶೂಲದಿಂದ ತಿವಿದು, ಕತ್ತಿಯಿಂದ ಕತ್ತರಿಸಿ, ಕೊಡಲಿಗಳಿಂದ ಕಡಿದು,

CC-0. Jangamwadi Math Collection. Digitized by eGangotri

ಶಿರವನಿರಿದೆತ್ತಿ ಚಕ್ರದಿನರಿದು ಮಿಕ್ಕ ಪರಿ
ಕರದಿಂದೆ ದೈತ್ಯನಾಯಕರಾರ್ದು ಕೊಲುತಿರಲ್
ಪರಿಕಿಸಲ್ ದೀಪಮಂ ಸೋಂಕುವ ಪತಂಗವಾದರ್ ದಿವಿಜಸುಭಟರಂದು ೪೦

ಆರ್ಭಟಿಸಿದಂ ವಹ್ನಿಯಂತಕಂ ಮುಳಿಸಿನಿಂ
ನಿರ್ಭರಾವೇಶನಾದಂ ನಿರುತಿ ಕೋಪಸಂ
ದರ್ಭಮಾನಸನಾದನಬ್ಧಿಪಂ ಕಣ್ಗಳೊಳ್ ಕಿಡಿಗೆದರಿದಂ ಮರುತನು
ಗರ್ಭೀಕೃತಾಮರ್ಷನಾದಂ ಕುಬೇರನಾ
ವಿರ್ಭೂತಶಿಖಿನಯನನಾದನೀಶಾನಂ ಹ
ವಿರ್ಭುಕ್ತರಾಜನಿನಿಬರ್ಗೆ ಕೈವೀಸಿದಂ ಮೊಳಗಿದುವು ವಾದ್ಯಂಗಳು ೪೧

ಕೇಳಾದೊಡೆಲೆ ಸಿದ್ಧರಾಮ ಮೇಲಪ್ಪ ಘನ
ಕೋಳಾಹಳವನೆಂಟು ದಿಕ್ಕಿನೊಳ್ ದಿಕ್ಪಾಲ
ಜಾಲರೇ ಹರಿಗೆಖಂಡೆಯಮಾಂತು ವಾಹನಂಗಳನುಳಿದು ಕಾಲ್ನಡೆಯೊಳು
ಹೂಳಿದಗಳೊಳ್ ನಿಂದು ಸವ್ಯಾಪಸವ್ಯದೊಳ್
ಮೇಲಿಕ್ಕದಮರರಂ ಜರೆವುತಂ ಮುಗ್ಗಿ ಕೈ
ಕಾಲೊಡೆದು ಬೀಳ್ದವರನೆಳೆಸುತಂ ಕೋಟೆಯಂ ಪತ್ತಿದರದೇನೆಂಬೆನು ೪೨

ಪಿಡಿದು ಮುಂದಲೆಯನಾಳ್ವೇರಿಯಿಂದಗಳೊಳಗೆ
ಕೆಡಪುವರ್ ಸುರರಸುರರಂ ದಿವಿಜರಂ ಮೇಲ
ಕಡರದಂತಿರಿದಿರಿದು ನೂಂಕುವರ್ ಹಾಯ್ಕುವರುಪುರಿವ ಮದ್ದಿನ ತಿತ್ತಿಯಂ

ಗದೆಯಿಂದ ಹೊಡೆದು, ಒನಕೆಯಿಂದ ಜಜ್ಜಿ, ಗದೆಗಳಿಂದ ಅಪ್ಪಳಿಸಿ, ಭರ್ಜಿಯಿಂದ ಕುತ್ತಿಗೆಯನ್ನು ಇರಿದು ಎತ್ತಿ, ಚಕ್ರದಿಂದ ಕತ್ತರಿಸಿ ಉಳಿದ ಯುದ್ಧಸಾಮುಗ್ರಿಗಳಿಂದ ಕೊಲ್ಲುತ್ತಿರಲು, ದೇವಸೈನಿಕರು ದೀಪವನ್ನು ಮುತ್ತಿದ ಪತಂಗದಂತಾದರು. ೪೧. ಅಗ್ನಿ ಆರ್ಭಟಿಸಿದನು. ಯಮನು ಕೋಪದಿಂದ ತಡೆಯದೆ ಮಹಾ ಆವೇಶವುಳ್ಳವನಾದನು. ನಿರುತಿ ಕೋಪದಿಂದ ಕೂಡಿದ ಮನಸ್ಸುಳ್ಳವನಾದನು. ವರುಣನು ಕಣ್ಣುಗಳಲ್ಲಿ ಕಿಡಿಗೆದರಿದನು. ವಾಯು ಮತ್ತು ಕುಬೇರರು ಹುದುಗಿಸಲ್ಪಟ್ಟ ಕೋಪ ಮತ್ತು ಅಸಹನೆಗಳಿಂದ ಕೂಡಿದವರಾದರು. ಈಶಾನನು ಅಗ್ನಿನೇತ್ರವನ್ನು ತೆರೆದನು. ದೇವೇಂದ್ರನು ಇವರೆಲ್ಲರಿಗೂ ಕೈಬೀಸಿ ಸಂಜ್ಞೆಮಾಡಿದನು. ಆಗ ವಾದ್ಯಗಳು ಮೊಳಗಿದವು. ೪೨. ಆದರೆ ಸಿದ್ಧರಾಮನೆ ಕೇಳು, ಅತಿಯಾದ ಕೋಲಾಹಲದಿಂದ ಎಂಟು ದಿಕ್ಕಿನಲ್ಲಿ ದಿಕ್ಪಾಲಕರ ಸಮೂಹವೇ ಗುರಾಣಿ ಕತ್ತಿಗಳನ್ನು ಹಿಡಿದು, ವಾಹನಗಳನ್ನು ಬಿಟ್ಟು, ಕಾಲ್ನಡಿಗೆಯಿಂದ ಹೂಳಿಹಾಕಿದ ಕಂದಕದಲ್ಲಿ ನಿಂತು ಎಡಬಲದಲ್ಲಿ ಯುದ್ಧ ಮಾಡದಿದ್ದ ದೇವತೆಗಳನ್ನು ಹೀಯಾಳಿಸುತ್ತ, ಮುಗ್ಗರಿಸಿ ಕೈಕಾಲು ಒಡೆದು ಬಿದ್ದವರನ್ನು ಎಳೆಸಿಹಾಕುತ್ತಾ ಕೋಟೆಯನ್ನು ಹತ್ತಿದರು. ೪೩. ದೇವತೆಗಳು ರಾಕ್ಷಸರ ಮುಂದಲೆಗಳನ್ನು ಹಿಡಿದು ಕೋಟೆ ಗೋಡೆಯಿಂದ ಕಂದಕದೊಳಕ್ಕೆ ದಬ್ಬುವರು, ರಾಕ್ಷಸರು ದೇವತೆಗಳನ್ನು ಮೇಲಕ್ಕೆ

CC-0. Jangamwadi Math Collection. Digitized by eGangotri

ಬಿಡದುಳಿದ ಸಮರಸಾಧನದಿಂದೆ ದಿವಿಜರಂ
ಮಡಿಪುತಿರೆ ಮತ್ತೆ ಮತ್ತುರವಣಿಸಿ ದೈತ್ಯರಂ
ಗಡಣೆಗೊಳ್ಳದೆ ಪತ್ತುತಿರ್ದುದಮರವ್ರಾತಮೇನೆಂಬೆನದ್ಭುತವನು ೪೩

ಊರ್ಗಳೊಳಗಾದುದತಿಕಳಕಳಂ ತತ್ಪುರಜ
ನರ್ಗಳಾಳ್ವೇರಿಯಂ ಪತ್ತಿದರ್ ಶಿವಶಿವಾ
ದುರ್ಗಂಗಳಿರದೆ ಕೋಳ್ಪೋದುವೆಂದೆಡೆಗೆಡೆಗೆ ಬೀದಿಗರ್ ಗಜಬಜಿಸಲು
ಭರ್ಗನಯನಜ್ವಾಲೆ ರೂಪಾದುದೆನೆ ಖಳಭ
ಟರ್ಗಳಂ ತೇರ್ಗಳಂ ವಾಜಿರಾಜಿಗಳನಿಭ
ವರ್ಗಮಂ ಕೂಡಿಕೊಂಡಾ ಕ್ಷಣಂ ವೀರವಿದ್ಯುನ್ಮಾಲಿ ನಡೆತಂದನು ೪೪

ಕಾರೊಡಲ ಕೆಮ್ಮೀಸೆಗಳ ಕೋರೆದಾಡೆಗಳ
ಚೂರಿಸುವ ಖಂಡೆಯದ ಕರದ ಬಹು ರೌದ್ರರಸ
ಧಾರಣಾನನದ ಕಣ್ಗಳ ಕಿಡಿಯ ಝಳದ ಜಾಡಿಯ ಭೀಷಣಧ್ವನಿಗಳ
ಘೋರರಾಕ್ಷಸರವನ ಕೂಡೆ ಬರುತಿರ್ಪುದಂ
ದೂರದೊಳ್ ಕಂಡು ದಿವಿಜಾಳಿ ಯಮದೂತರುಂ
ಸಾರಿ ಬರೆ ಕಂಡು ಹಮ್ಮೈಪ ರೋಗಿಯ ತೆರದೊಳಳವಳಿದುದೇನೆಂಬೆನು ೪೫

ಹತ್ತದಂತೆ ತಿವಿದು ತಿವಿದು ನೂಕುವರು. ಉರಿಯುವ ಮದ್ದಿನ ಚೀಲವನ್ನು ಹಾಕುವರು. ಉಳಿದ ಯುದ್ಧಸಾಧನದಿಂದ ದೇವತೆಗಳನ್ನು ಕೊಲ್ಲುತ್ತಿರಲು ಮತ್ತೆ ಮತ್ತೆ ವಿಜೃಂಭಿಸಿ ರಾಕ್ಷಸರನ್ನು ಲೆಕ್ಕಿಸದೆ ದೇವಸಮೂಹ ಕೋಟೆಯನ್ನು ಹತ್ತುತ್ತಿತ್ತು. ಅದ್ಭುತವನ್ನು ಏನೇನ್ನಲಿ ? ೪೪. ಊರುಗಳಲ್ಲಿ ಬಹಳ ತಳಮಳ, ಚಿಂತೆ ಉಂಟಾಯಿತು. ಆ ಪಟ್ಟಣದ ಜನರು ಕೋಟೆಯ ಗೋಡೆಯನ್ನು ಹತ್ತಿದರು. ಶಿವ ಶಿವಾ, ದುರ್ಗಗಳು ಶತ್ರು ವಶವಾದುವು ಎಂದು ಒಂದುಕಡೆಯಿಂದ ಮತ್ತೊಂದು ಕಡೆಗೆ ಬೀದಿಯ ಜನ ಗದ್ದಲ ಮಾಡಲು ಶಿವನ ಕಣ್ಣಿನ ಜ್ವಾಲೆ ರೂಪತಾಳಿತು ಎಂಬಂತೆ ರಾಕ್ಷಸಸೈನಿಕರನ್ನೂ ರಥಗಳನ್ನೂ, ಕುದುರೆಗಳ ಸಮೂಹವನ್ನೂ, ಆನೆಗಳ ಗುಂಪನ್ನೂ ಕೂಡಿಕೊಂಡು ವೇಗದಿಂದ ವಿದ್ಯುನ್ಮಾಲಿ ಹೊರಟುಬಂದನು. ೪೫. ಕಪ್ಪಾದ ದೇಹದ, ಕೆಂಪಾದ ಮೀಸೆಗಳ, ಕೋರೆದಾಡೆಗಳ, ಕಡಿಯುತ್ತಿದ್ದ ಕೈಯ ಕತ್ತಿಯ, ಬಹಳವಾದ ರೌದ್ರರೂಪವನ್ನು ಧರಿಸಿದ್ದ ಮುಖದ, ಕಣ್ಣುಗಳಲ್ಲಿ ಹೊರಡುತ್ತಿದ್ದ ಕಿಡಿಯ ಝಳದ ಪ್ರವಾಹದ, ಭೀಕರ ಧ್ವನಿಗಳ, ಘೋರವಾದ ರಾಕ್ಷಸರು ಅವನ ಜೊತೆಯಲ್ಲಿ ಬರುತ್ತಿದ್ದುದನ್ನು ದೂರದಲ್ಲಿಯೇ ನೋಡಿ ಯಮದೂತರು ಹತ್ತಿರ ಬರಲು ಅವರನ್ನು ನೋಡಿ ಮೂರ್ಛೆ ಹೋಗುವ ರೋಗಿಯ ರೀತಿಯಲ್ಲಿ ದೇವತೆಗಳ

CC-0. Jangamwadi Math Collection. Digitized by eGangotri

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ೪೬

ನಲವತ್ತೆರಡನೆಯ ಸಂಧಿ ಸಂಪೂರ್ಣ

ಸಮೂಹ ಶಕ್ತಿ ಕುಂದಿತು. ಅದನ್ನು ಏನೆನ್ನಲಿ ? ೪೬. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿ ಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ, ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು, ಕಾಪಾಡುವನು.

ನಲವತ್ತೆರಡನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ನಲವತ್ತುಮೂರನೆಯ ಸಂಧಿ

ಸೂಚನೆ : ವೀರವಿದ್ಯುನ್ಮಾಲಿ ಸುರಪನಂ ಗೆಲೆ ಶಿವಕು
ಮಾರನವನಂ ಮುರಿಯೆ ಕಮಲಾಕ್ಷನೈದಿ ದ
ಕ್ಷಾರಿಯೊಳ್ ಸೆಣಸಲವನಂ ಬಾಣದಿಂದೆಚ್ಚು ಪುರಕಟ್ಟಿನಾ ವೀರನು

ಅಪ್ರತಿಮಮಹಿಮ ದನುಜಪ್ರಲಯಕಾಲ ಲೋ
ಕಪ್ರಭು ದಯಾಳು ಗಿರಿಜಾಪ್ರಮೋದಾಬ್ಧಿ ಚಂ
ದ್ರಪ್ರತಿಮ ಕೋಟಿಸೂರ್ಯಪ್ರಭಾಸಂಪೂರ್ಣ ಸುಪ್ರತೀಕ ವಿರಾಜಿತ
ಕ್ಷಿಪ್ರಪ್ರಸನ್ನ ದೇವಪ್ರಚಯ ಮಕುಟರ
ತ್ನಪ್ರಚುರನೀರಾಜನಪ್ರಕಾಶಾಂಘ್ರಿಯುಗ
ಸುಪ್ರೇಮದಿಂ ರಕ್ಷಿಸಪ್ರಕಟ ಪಂಪಾವಧೂಪ್ರಿಯ ವಿರೂಪಾಕ್ಷನೇ ೧

ಎಲೆ ಸಿದ್ಧರಾಮೇಶ ಕೇಳಿನ್ನು ದಿವಿಜಸಂ
ಕುಲಮಿರದೆ ತ್ರಿಪುರದಾಳ್ವೇರಿಯಂ ಪತ್ತಿ ತ
ತ್ಖಳರೊಡನೆ ಕಾದುತಿರಲಾಕ್ಷಣಂ ವೀರವಿದ್ಯುನ್ಮಾಲಿಯೊಡನೆ ಬರ್ಪ
ಕಲಿಮಹಾನಾಭ ವಿದ್ರಾವಣ ವಿರೂಪಾಕ್ಷ
ಶಲಭ ಗಜಶಿರ ಶಂಖುಶಿರ ಜಂಭ ಮುಂತಾದ
ಬಲುಗಯ್ಯ ರಕ್ಕಸರ್ ಕೋಂಟೆಯಂ ಪತ್ತಿರ್ದ ದಿವಿಜರಂ ಸದೆಬಡಿದರು ೨

ಸೂಚನೆ : ವೀರ ವಿದ್ಯುನ್ಮಾಲಿಯು ದೇವೇಂದ್ರನನ್ನು ಗೆಲ್ಲಲು ಕುಮಾರ ಸ್ವಾಮಿಯು ಅವನನ್ನು ಸೋಲಿಸಿದನು. ಕಮಲಾಕ್ಷನು ಬಂದು ವೀರಭದ್ರನೊಡನೆ ಹೋರಾಡಲು ಅವನನ್ನು ಬಾಣದಿಂದ ಹೊಡೆದು ಪಟ್ಟಣಕ್ಕೆ ಕಳುಹಿಸಿದನು. ೧. ಅಪ್ರ ತಿಮವಾದ ಮಹಿಮೆಯುಳ್ಳವನು, ರಾಕ್ಷಸರಿಗೆ ಪ್ರಳಯಕಾಲನಾದವನು, ಸಕಲ ಲೋಕಕ್ಕೂ ಒಡೆಯ, ದಯಾಳು,ಗಿರಿಜೆಯ ಸಂತೋಷವೆಂಬ ಸಮುದ್ರಕ್ಕೆ ಚಂದ್ರನಂತಿರು ವವನು, ಅಪ್ರತಿಮ, ಕೋಟಿ ಸೂರ್ಯಪ್ರಕಾಶಪೂರ್ಣನಾದವನು, ಸುಂದರ ಸ್ವರೂಪ ದಿಂದ ವಿರಾಜಿಸುತ್ತಿರುವವನು, ಬಹು ಬೇಗ ಪ್ರಸನ್ನನಾಗುವವನು, ದೇವಸಮೂಹದ ಕಿರೀಟಗಳ ರತ್ನಗಳ ಅತ್ಯಂತ ಹೆಚ್ಚಾದ ದೀಪಕಾಂತಿಯಿಂದ ಪ್ರಕಾಶಿಸುವ ಪಾದಗಳುಳ್ಳ ವನು ಆದ, ಪಂಪಾಂಬಿಕೆಯ ಪ್ರಿಯನಾದ ವಿರೂಪಾಕ್ಷನೇ, ಪ್ರೇಮದಿಂದ ಕಾಪಾಡು. ೨. ಎಲೈ ಸಿದ್ಧರಾಮಣ್ಣ, ಮುಂದೆ ಕೇಳು, ದೇವತೆಗಳ ಸಮೂಹವು ತ್ರಿಪುರದ ಕೋಟೆಯ ಮೇಲ್ಭಾಗವನ್ನು ಹತ್ತಿ ರಾಕ್ಷಸರೊಡನೆ ಯುದ್ಧಮಾಡುತ್ತಿದ್ದಿತು. ಆಗ ವೀರ ವಿದ್ಯುನ್ಮಾಲಿಯ ಜೊತೆಯಲ್ಲಿ ಬರುವ ಶೂರಮಹಾನಾಭಾ, ವಿದ್ರಾವಣ, ವಿರೂ ಪಾಕ್ಷ, ಶಲಭ, ಗಜಶಿರ, ಶಂಖುಶಿರ, ಜಂಭ ಮೊದಲಾದ ಪರಾಕ್ರಮಿಗಳಾದ ರಾಕ್ಷಸರು

CC-0. Jangamwadi Math Collection. Digitized by eGangotri

ಪುರಮನಧಟಂ ಬಳಸಿ ಕಾದುವಮರವ್ರಜಂ
ಮುರಿದು ಘಟ್ಟೊಡ್ಡಿ ನಿಂದುದು ಸುರಪನಾಜ್ಞೆಯಿಂ
ದುರುಳರಕ್ಕಸ ಜಂಭನಾಜ್ಞೆಯಿಂ ದಾನವರ ಬಲಮಿರದೆ ಪೌಜೊಡ್ಡಿತು
ಎರಡರ ಸುಮೋಹರದೊಳಧಿಪತಿಗಳಾಜ್ಞೆಯಿಂ
ಪರಿದುದೊಡನೊಡನೆ ಚೂಣಿಯ ಭಟರ ಬೊಬ್ಬೆಯ
ಬ್ಬರಕೆ ಧರೆ ಬಿರಿಯೆ ಕರಿಕಮಠರೆರ್ದೆ ಜರಿಯೆ ಸಂಗರವಿರದೆ ಸಂಕ್ರಮಿಸಿತು ೩

ಕರಿಕರಿಯನಶ್ವಮಶ್ವಮನಾಳ್ಗಳಾಳ್ಗಳಂ
ವರವರೂಥಂ ವರೂಥಮನೊದಗಿ ಸೆಣಸುವ
ಚ್ಚರಿಯದೇಂ ವಣ್ಣಿಪೆಂ ಚೂಣಿಯೆರಡರೊಳೊದಗಿ ಪೊಯ್ದಾಡುತಿಹ ಸುಭಟರು
ಉರುನಖಾನಖಿ ಹತಾಹತಿಗಳಿಂ ಕಾದುತಿರ
ಲಿರದೆ ರಕ್ಕಸರಾರ್ದು ನಾನಾ ಪ್ರಕಾರದಿಂ
ದಿರಿವುತಿರೆ ಕಂಗೆಟ್ಟು ಸುರಬಲಂ ಮುರಿದು ಬೆಂಕೊಂಡುದದನೇನೆಂಬೆನು ೪

ಕವಿವಸುರಬಲದ ಸುಮ್ಮಾನಮಂ ಮಾನಮಂ
ದಿವದವರ ವಿಗತಪ್ರತಾಪಮಂ ತಾಪಮಂ
ತವೆ ಕೊರೆವ ದೈತ್ಯರ ಕೃಪಾಣಮಂ ಬಾಣಮಂ ಸುರಭಟರ ಚೇತನವನು
ದಿವಿಜವೈರಿಗಳ ಬೊಬ್ಬಾಟಮಂ ಘಾಟಮಂ
ವಿವಿಧ ಸುರಭಟರ ಪರಿದಾಟಮಂ ನೋಟಮಂ
ವಿವರಿಸುವದೇನಮರರೋಡಿದರ್ ಕೂಡಿದರ್ ಸುರಪಾಲನರೆನೆಲೆಯನು ೫

ಕೋಟೆಯನ್ನು ಹತ್ತಿದ್ದ ದೇವತೆಗಳನ್ನು ಸದೆಬಡಿದರು. ೩. ಪಟ್ಟಣನ್ನು ಪರಾಕ್ರಮದಿಂದ ಸುತ್ತಿ ಹೋರಾಡುವ ದೇವತೆಗಳ ಸಮೂಹ ಯುದ್ಧಬಿಟ್ಟು ಮತ್ತೆ ದೇವೇಂದ್ರನ ಅಪ್ಪಣೆಯಂತೆ ಸೈನ್ಯ ಅಡ್ಡಗಟ್ಟಿ ನಿಂತಿತು. ದುಷ್ಟರಾಕ್ಷಸನಾದ ಜಂಭನ ಆಜ್ಞೆಯಂತೆ ರಾಕ್ಷಸರ ಸೈನ್ಯ ದೇವತೆಗಳ ಸೈನ್ಯವನ್ನು ಎದುರಿಸಿತು. ಎರಡೂ ಸೈನ್ಯಗಳೂ ಸೇನಾಧಿಪತಿಗಳ ಆಜ್ಞೆಯಿಂದ ಮುಂದುವರಿದುವು. ತಕ್ಷಣ ಮುಂಭಾಗದ ಸೈನಿಕರ ಕಿರಿಚಾಟದ ಆರ್ಭಟಕ್ಕೆ ಭೂಮಿ ಬಿರಿಯಿತು. ದಿಗ್ಗಜ, ಆದಿಕೂರ್ಮರ ಎದೆ ಕುಸಿಯಿತು.ಯುದ್ಧವು ಕೂಡಲೇ ಪ್ರಾರಂಭವಾಯಿತು. ೪. ಆನೆ–ಆನೆಯನ್ನು, ಕುದುರೆ-ಕುದುರೆಯನ್ನು, ಸೈನಿಕರು–ಸೈನಿಕರನ್ನು, ರಥ–ರಥಗಳನ್ನು ಎದುರಿಸಿ ಯುದ್ಧಮಾಡುವ ಆಶ್ಚರ್ಯವನ್ನು ಏನೆಂದು ಬಣ್ಣಿಸಲಿ. ಎರಡೂ ಸೈನ್ಯದ ಮುಂಭಾಗದಲ್ಲಿ ಹೋರಾಡುತ್ತಿರುವ ಶೂರ ಸೈನಿಕರು, ನಖಾ-ನಖಿ, ಹತಾಹತಿಗಳಿಂದ ಯುದ್ಧ ಮಾಡುತ್ತಿರಲು ರಾಕ್ಷಸರು ಅಬ್ಬರಿಸುತ್ತ ನಾನಾ ರೀತಿ ತಿವಿಯುತ್ತಿರಲು ದೇವಸೈನ್ಯ ಕಂಗೆಟ್ಟು ಹಿಂದಿರುಗಿ ಓಡಿಹೋಯಿತು. ೫. ಮುತ್ತುತ್ತಿದ್ದ ರಾಕ್ಷಸಸೈನಿಕರ ಸಂತೋಷವನ್ನು, ಮಾನವನ್ನು, ದೇವಸೈನಿಕರ ಕುಂದಿದ ಶಕ್ತಿಯನ್ನು, ಸಂಕಟವನ್ನು, ಚೆನ್ನಾಗಿ ಕೊರೆಯುವ ರಾಕ್ಷಸರ ಕತ್ತಿ ಮತ್ತು ಬಾಣವನ್ನು, ದೇವಸೈನಿಕರ ಚೈತನ್ಯವನ್ನು, ರಾಕ್ಷಸರ ಬೊಬ್ಬೆಯನ್ನು, ಹೊಡೆತವನ್ನು, ನಾನಾ ದೇವಸೈನಿಕರ ಓಡಾಟವನ್ನು, ನೋಟವನ್ನು ವಿವರಿಸುವುದೇನಿದೆ ? ದೇವತೆಗಳು ಓಡಿ

CC-0. Jangamwadi Math Collection. Digitized by eGangotri

ಖೂಳದೈತ್ಯರ ಬೊಬ್ಬೆಗೊಡುವಸುರಪಾಳಿಗಳ
ಕಾಲಸುಡಿ ಕಳವಳಿಸದಿರಿ ಬೆನ್ನೊಳಿರ್ಪಂ ತ್ರಿ
ಶೂಲಿ ಭಯುವೇಕೆಂದು ವೈಶ್ವಾನರಾದಿ ದಿಕ್ಪಾಲಕರ್ ಮುಂಕೊಂಡರು
ಪೇಳಲೇಂ ಮುಪ್ಪುರದ ದೊರೆಗಳೊಡನಿರ್ವರ್ಗೆ
ಕಾಳೆಗಂ ಸಮನಿಸಿತು ಸುರಪಾಲನಾಕ್ಷಣಂ
ಕಾಳರಕ್ಕಸ ಜಂಭನಂ ಜರೆದು ಶರವರುಷಮಂ ಕರೆದು ಬೊಬ್ಬಿರಿದನು ೬

ಶಕ್ರನುರೆ ಜರಿದು ಬಾಣಂಗಳಂ ಕರೆಯಲ್ಕ
ತಿಕ್ರಮಿತಕೋಪದಿಂ ಚಾಪದಿಂದಾಕಾಶ
ಚಕ್ರಮೆಲ್ಲಂ ಪೂರ್ಣಮಪ್ಪಂತೆ ಚಿತ್ರದಿಂದಂಬಿನಂಭೋನಿಧಿಯನು
ವಿಕ್ರಮದೊಳಾ ಖಳನುಗುಳ್ಗಲಿಂದ್ರನ ಸೈನ್ಯ
ಚಕ್ರದೊಡಲೊಳ್ ಕೀಲಿಸಲ್ ಕಂಡು ಸುರಪತಿಯು
ಸುಕ್ರಮದೊಳವನ ಬಾಣಂಗಳಂ ತಡೆಗಡಿದು ತಾನೆಚ್ಚು ಬೊಬ್ಬಿರಿದನು ೭

ಬಿಡುಗಣ್ಣರರಸನೆಚ್ಚಂಬುಗಳನಾ ದೈತ್ಯ
ನೆಡೆಯೊಳೇ ಸಂಹರಿಸಿ ಪುನರಪಿ ಶರಂಗಳಂ
ತೊಡಿಸಿ ತಿರುವಿಂದುಗುಳ್ವಲ್ ಸುರಪನಂಗಮಂ ತಾಗಲತಿವೇಗದಿಂದೆ
ಗುಡುಗುಡಿಸಿ ಕೋಪದಿಂ ಶಕ್ರನೈದಂಬಿನಿಂ
ದಡಿಗರಕ್ಕಸನ ವಕ್ಷಸ್ಥಳವನೆಚ್ಚೊಡದ
ನೊಡೆದು ಬೆನ್ನೊಳ್ ಮೂಡಿದುವು ಖಲಂ ಮೈಮರೆದು ವರವರೂಥದೊಳೊರಗಲು ೮

ದರು ಮತ್ತು ದೇವೇಂದ್ರನ ಆಶ್ರಯವನ್ನು ಪಡೆದರು. ೬. ದುಷ್ಟರಾಕ್ಷಸರ ಆರ್ಭಟಿಸುವ ರಾಕ್ಷಸರ ಸಾಲುಗಳ ಕಾಲನ್ನು ಮುರಿಯಿರಿ, ನಮ್ಮ ಬೆಂಬಲಕ್ಕೆ ಈಶ್ವರನಿದ್ದಾನೆ, ಭಯವೇಕೆ : ಕಳವಳಗೊಳ್ಳದಿರಿ ಎನ್ನುತ್ತ ಅಗ್ನಿಯೇ ಮೊದಲಾದ ದಿಕ್ಪಾಲಕರು ಮುಂದೆ ಬಂದರು. ಏನು ಹೇಳಲಿ? ತ್ರಿಪುರದ ಸೇನಾನಾಯಕರೊಡನೆ ಇಬ್ಬರಿಗೆ ಯುದ್ಧವು ಒದಗಿತು. ಆಗ ದೇವೇಂದ್ರನು ಕಾಳ ರಾಕ್ಷಸನಾದ ಜಂಭನನ್ನು ಹೀಯಾಳಿಸಿ ಬಾಣದ ಮಳೆಯನ್ನು ಸುರಿಸಿ ಅಬ್ಬರಿಸಿದನು. ೭. ದೇವೇಂದ್ರನು ಚೆನ್ನಾಗಿ ಹೀಯಾಳಿಸಿ ಬಾಣಗಳ ಮಳೆಯನ್ನು ಕರೆಯಲು ರಾಕ್ಷಸನು ಅತಿಯಾದ ಕೋಪದಿಂದ ಆಕಾಶಮಂಡಲವೆಲ್ಲ ತುಂಬುವಂತೆ ಬಿಲ್ಲಿನಿಂದ ಚಿತ್ರವಿಚಿತ್ರವಾದ ರೀತಿಯಲ್ಲಿ ಬಾಣಸಾಗರವನ್ನು ಪರಾಕ್ರಮದಿಂದ ಬಿಡಲು, ದೇವೇಂದ್ರನ ಸೈನ್ಯದ ಶರೀರದಲ್ಲೆಲ್ಲ ಅವು ನಾಟಿಕೊಂಡವು. ಅದನ್ನು ನೋಡಿ ದೇವೇಂದ್ರನು ಕ್ರಮವಾಗಿ ಆ ಬಾಣಗಳನ್ನು ತಡೆದು ಕತ್ತರಿಸಿ ಪ್ರತಿಯಾಗಿ ತಾನೂ ಬಾಣ ಪ್ರಯೋಗಿಸಿ ಬೊಬ್ಬಿರಿದನು. ೮. ದೇವೇಂದ್ರನು ಬಿಟ್ಟ ಬಾಣಗಳನ್ನು ಆ ರಾಕ್ಷಸನು ಮಧ್ಯದಲ್ಲಿಯೇ ತಡೆದು ಕತ್ತರಿಸಿದನು. ಮತ್ತೆ ಬಾಣಗಳನ್ನು ತೊಟ್ಟು ಹೆದೆಯಿಂದ ಬಿಡಲು ಅದು ದೇವೇಂದ್ರನ ದೇಹವನ್ನು ಜೋರಾಗಿ ತಾಗಿತು, ದೇವೇಂದ್ರನು ಕೋಪದಿಂದ ಗರ್ಜಿಸುತ್ತ ಐದು ಬಾಣಗಳಿಂದ ಆ ಬೃಹದಾಕಾರನಾದ ರಾಕ್ಷಸನ ಎದೆಗೆ ಹೊಡೆಯಲು ಅವು ಎದೆಯನ್ನು ಭೇದಿಸಿಕೊಂಡು ಬೆನ್ನಲ್ಲಿ

CC-0. Jangamwadi Math Collection. Digitized by eGangotri

ಮತ್ತೆ ಹದಿನಾಲ್ಕು ಬಾಣದೊಳವನ ಸೂತನಂ
ಕತ್ತರಿಸಿ ತುರಗಮುಂ ಕಡಿದು ರಥಮಂ ಮುರಿಯ
ಲುತ್ತಮಭಟರ್ ನವವರೂಥದೊಳ್ ಜಂಭನಂ ಕೊಂಡೊಯ್ದರಾ ಕ್ಷಣದೊಳು
ಮತ್ತೆ ಗಜನಿಕರದೊಳ್ ಕಂಠೀರವಂ ಪೊಕ್ಕು
ತತ್ತರಂದರಿವೋಲ್ ಸುರೇಂದ್ರನಾ ದಾನವರ
ನೊತ್ತಿ ಸವರಲ್ ಕಂಡು ವೀರವಿದ್ಯುನ್ಮಾಲಿ ತಾನಿರದೆ ಮುಂಕೊಂಡನು ೯

ಆರಳವು ವೀರವಿದ್ಯುನ್ಮಾಲಿಯುಂ ತಡೆವ
ವೀರರೊಳರೇ ಭಲರೆನುತ್ತೆ ಖಲವಂದಿ ಕೈ
ವಾರಿಸಲ್ ಪೊಕ್ಕನಸುರಂ ಸುರರ ಸೇನೆಯಂ ಕೋಪದಿಂ ಸಂಹರಿಸುತೆ
ಆರಿವಂ ಜಂಭಾರಿಯೋಯೆಮ್ಮಪುರಕೆ ಮದ
ನಾರಿಯುಂ ತಂದನೋ ಲೇಸೆಮ್ಮುಮಂ ಜಯಿಸ
ದೂರನೇಂ ಪೊಕ್ಕಪನೆ ನೋಳ್ಪೆನೆನುತಿಂದ್ರನಂ ತರುಬಿ ಖಳನಿಂತೆಂದನು ೧೦

ಧರೆಗೆ ಮಳೆಯುಂ ಕರೆದು ಬಡಪಾರ್ವರಿಂದೆ ನೀಂ
ಧರಿಸುವ ಹವಿರ್ಭಾಗಮಲ್ಲ ಜಲಕೇಳಿಯೊಳ್
ಸುರವಧುಗಳಿಡುವಂಬುಧಾರೆಯಲ್ಲೆನ್ನಂಬುಧಾರೆಯಿವೆ ಕೊಳ್ಳೆನುತ್ತೆ
ಸರಳ ಸಾರದೊಳೆ ದೇವೇಂದ್ರನಂ ಕೊರೆದುಳಿದ
ಸುರರ ಗಂಟಲೊಳಸುವನಿರಿಸಿ ವಿದ್ಯುನ್ಮಾಲಿ
ಹರದಳಕೆ ದಾಳಿಮಾಡಲ್ ಕಂಡು ಶಿವಕುಮಾರಂ ತಡೆದು ಬೊಬ್ಬಿರಿದನು ೧೧

ಹೊರಟವು. ಆ ರಾಕ್ಷಸನು ಎಚ್ಚರತಪ್ಪಿ ತನ್ನ ರಥದಲ್ಲಿ ಒರಗಿದನು. ೯. ಇಂದ್ರನು ಮತ್ತೆ ಹದಿನಾಲ್ಕು ಬಾಣಗಳಿಂದ ಅವನ ಸಾರಥಿಯನ್ನು ಕತ್ತರಿಸಿ, ಕುದುರೆಯನ್ನು ಕಡಿದು, ರಥ ವನ್ನು ಮುರಿದುಹಾಕಲು, ಉತ್ತಮರಾದ ಶೂರ ಸೈನಿಕರು ಆ ಕ್ಷಣ ಬೇರೊಂದು ಹೊಸ ರಥದಲ್ಲಿ ಜಂಭನನ್ನು ತೆಗೆದುಕೊಂಡು ಹೋದರು. ಮತ್ತೆ ಆನೆಗಳ ಸಮೂಹದಲ್ಲಿ ಸಿಂಹವು ಹೊಕ್ಕು ಸೀಳಿ ಕೊಲ್ಲುವಂತೆ ದೇವೇಂದ್ರನು ಆ ರಾಕ್ಷಸರನ್ನು ಹಿಂದಕ್ಕೆ ಒತ್ತಿ ಕತ್ತರಿಸುತ್ತಿರಲು ಅದನ್ನು ನೋಡಿ ಶೂರನಾದ ವಿದ್ಯುನ್ಮಾಲಿ ವಿಳಂಬ ಮಾಡದೆ ಮುಂದೆ ಬಂದನು. ೧೦. ಯಾರಿಗೆ ಸಾಧ್ಯ ? ವೀರವಿದ್ಯುನ್ಮಾಲಿಯನ್ನು ತಡೆಯುವ ವೀರರಿದ್ದಾ ರೆಯೆ ? ಭೇಷ್ ! ಎನ್ನುತ್ತ ರಾಕ್ಷಸರ ಕಡೆಯ ವಂದಿಮಾಗಧರು ಹೊಗಳುತ್ತಿರಲು ರಾಕ್ಷಸನು ದೇವಸೈನ್ಯವನ್ನು ಹೊಕ್ಕು ಕೋಪದಿಂದ ಸಂಹರಿಸುತ್ತ, ಯಾರಿವನು ದೇವೇಂ ದ್ರನೊ ? ನಮ್ಮ ಪಟ್ಟಣಕ್ಕೆ ಈಶ್ವರನನ್ನು ಕರೆತಂದನೊ ? ಒಳ್ಳೆಯದು, ನಮ್ಮನ್ನು ಗೆಲ್ಲದೆ ಊರನ್ನು ಪ್ರವೇಶಿಸುತ್ತಾನೆಯೇ ನೋಡುತ್ತೇನೆ ಎನ್ನುತ್ತಾ ಇಂದ್ರನಿಗೆ ಎದು ರಾಗಿ ರಾಕ್ಷಸನು ಹೀಗೆಂದನು. ೧೧. ನನ್ನ ಬಾಣಗಳ ಪ್ರವಾಹ, ಭೂಮಿಗೆ ಮಳೆಯನ್ನು ಸುರಿಸಿ ಬಡಬ್ರಾಹ್ಮಣರಿಂದ ನೀನು ತೆಗೆದುಕೊಳ್ಳುವ ಹವಿಸ್ಸಿನ ಭಾಗದಂತಲ್ಲ ; ನೀರಾಟ ದಲ್ಲಿ ದೇವಸ್ತ್ರೀಯರು ಹೊಡೆಯುವ ನೀರಿನ ಪ್ರವಾಹವಲ್ಲ, ಇವುಗಳ ರುಚಿನೋಡು ಎನ್ನುತ್ತ, ಬಾಣಗಳ ಧಾರೆಯನ್ನು ಸಹಿಸಿಕೊ ಎನ್ನುತ್ತ ತೀಕ್ಷ್ಣ ಬಾಣಗಳಿಂದ ದೇವೇಂದ್ರ

CC-0. Jangamwadi Math Collection. Digitized by eGangotri

ಕೋದಂಡಮಂ ಗುಹಂ ಜೇವೊಡೆಯೆ ಸಿಂಜಿನಿಯು
ನಾದಮುಣ್ಮಿದುದಖಿಳಲೋಕಂಗಳೊಳಗೆ ಕಿವು
ಡಾದುವು ದಿಶಾಗಜಂ ಭ್ರಮಿಸಿದುವು ಕುಲನಗಂ ಬಿರಿದುದಂಬುಜಭವಾಂಡಂ
ಈ ದನುಜಪುರದ ನೆವದಿಂ ಸಕಲಭುವನಮಂ
ಮಾದೇವನಳಿಯಲ್ಕೆಯ್ದಿದನಲ್ಲದೆಮ್ಮನೇಂ
ಕಾದಪನೆ ಹಾಯೆನುತೆ ಚಾಪಟಂಕಾರದಿಂ ಸಕಲಜನಮುಳವಳಿದುದು ೧೨

ಮಾಡಿದ ಮಹಾಧನುಷ್ಟಂಕಾರಕೊಂದಿನಿಸು
ಕೋಡದಸುರೇಂದ್ರನಂ ಕಂಡು ಸೇನಾನಿ ಮಾ
ತಾಡಿಸಿದನೆಲವೊ ತಾರಕದರ್ಪ ದರ್ಪಕಹರಂ ಹರನ ಸುಕುಮಾರನಾಂ
ಓಡಿ ಬದುಕಲ್ಲದೊಡೆ ಯಮಪುರದೊಳಾಲಯಂ
ಕೂಡೆ ಕೈಗೈವುತಿದೆ ನಿನಗೆ ನಿಮ್ಮಯ್ಯಂಗೆ
ಹೂಡಿದಂಬಿನ ದೊರೆಯ ಬಾಣವಿದೆ ಕೊಳ್ಳೆನಲ್ ಖಳರಾಜನಿಂತೆಂದನು ೧೩

ಬಿಡದರಸಿ ತೊಳಲುತಿಹ ಬಳ್ಳಿ ತಾನೇ ಕಾಲ್ಗೆ
ತೊಡರಲೇನೊಳ್ಳಿತಲ್ಲವೆ ತಮ್ಮ ತಂದೆಯಂ
ಕಡುಮೋಸದಿಂದೆಚ್ಚು ಕೊಂದ ಖೂಳನೆ ಭಾಪುಭಾಪುರೇ ಖಳ ನಿನ್ನನು
ಮಡಿದನೆಂದಿರ್ದೆನಾವಿನ್ನೆಗಂ ನೀನೆ ಕೆ
ಯ್ಯೊಡನೆ ಬಂದ್ಯೆ ಪುಣ್ಯವುಳ್ಳ ಕಾಲಕ್ಕೆ ತ
ನ್ನೆಡೆಗೆ ಬರ್ಪುದು ಕೂರ್ತ ವಸ್ತುವೆಂಬುದಕೆ ನೀನೇ ಸಾಕ್ಷಿ ಹೋಗೆಂದನು ೧೪

ನನ್ನು ಹೊಡೆದು ಉಳಿದ ದೇವತೆಗಳನ್ನು ಗತಪ್ರಾಣರನ್ನಾಗಿ ಮಾಡಿ, ವಿದ್ಯುನ್ಮಾಲಿ ಈಶ್ವರನ ಸೈನ್ಯದ ಮೇಲೆ ಧಾಳಿಯಿಟ್ಟನು. ಅದನ್ನು ನೋಡಿ ಕುಮಾರನು (ಷಣ್ಮುಖನು) ಅವನನ್ನು ತಡೆದು ಬೊಬ್ಬೆಹಾಕಿದನು. ೧೨. ಗುಹನು ಬಿಲ್ಲಿನ ಠಂಕಾರ ಮಾಡಲು ಹೆದೆಯ ಶಬ್ದ ಎಲ್ಲ ಲೋಕದಲ್ಲಿಯೂ ತುಂಬಿತು. ದಿಗ್ಗಜಗಳು ಕಿವುಡಾದುವು. ಕುಲಪರ್ವತಗಳು ಭ್ರಮೆಗೊಂಡು ಅಲ್ಲಾಡಿದುವು. ಬ್ರಹ್ಮಾಂಡ ಬಿರಿಯಿತು. ಈ ತ್ರಿಪುರದ ನೆವದಿಂದ ಎಲ್ಲ ಲೋಕವನ್ನೂ ಈಶ್ವರನು ನಾಶಮಾಡಲು ಹೊರಟನಲ್ಲದೆ ನಮ್ಮನ್ನೇನು ಕಾಪಾಡುತ್ತಾನೆಯೆ ? ಅಯ್ಯೋ ಎನ್ನುತ್ತ ಬಿಲ್ಲಿನ ಠೇಂಕಾರದಿಂದ ಎಲ್ಲ ಜನರೂ ಭಯದಿಂದ ಶಕ್ತಿಗುಂದಿದರು. ೧೩. ಅವನು ಮಾಡಿದ ಬಿಲ್ಲಿನ ಠಂಕಾರಕ್ಕೆ ಸ್ವಲ್ಪವೂ ಅಂಜದ ರಾಕ್ಷಸರಾಜನನ್ನು ನೋಡಿ ಗುಹನು ಅವನನ್ನು ಮಾತನಾಡಿಸಿದನು. ಎಲವೊ, ನಾನು ತಾರಕನ ದರ್ಪವನ್ನು ನಾಶ ಮಾಡಿದವನು. ಈಶ್ವರನ ಮಗನು, ಓಡಿಹೋಗಿ ಬದುಕಿಕೊ ಇಲ್ಲದಿದ್ದರೆ ನಿನಗೆ ಮತ್ತು ನಿಮ್ಮ ತಂದೆಗೆ ಒಟ್ಟಿಗೇ ಯಮನ ಪಟ್ಟಣದಲ್ಲಿ ಅರಮನೆಯು ಸಿದ್ಧವಾಗುತ್ತಿದೆ. ಅವನಿಗೆ ಹೂಡಿದ ಬಾಣಕ್ಕೆ ಸಮನಾದ ಬಾಣವಿದೆ, ಇದನ್ನು ಎದುರಿಸು ಎನ್ನಲು ರಾಕ್ಷಸರಾಜನು ಈ ರೀತಿ ಹೇಳಿದನು. ೧೪. ಬಿಡದೆ ಹುಡುಕುತ್ತ ತೊಳಲುತ್ತಿದ್ದಾಗ ಆ ಬಳ್ಳಿ ತಾನೇ ಕಾಲಿಗೆ ತೊಡರಿಕೊಂಡರೆ ಒಳ್ಳೆಯದೇ ಅಲ್ಲವೆ ? ನಮ್ಮ ತಂದೆಯನ್ನು ಬಹು ಮೋಸದಿಂದ ಹೊಡೆದುಕೊಂಡ ದುಷ್ಟನೇ, ಭಲಾ ಭೇಷ್, ದುಷ್ಟ ಈವ

CC-0. Jangamwadi Math Collection. Digitized by eGangotri

ರಾಮ ಕೇಳಾ ಮಾತುಗೇಳುತತಿಸಂಗರವಿ
ರಾಮನತಿರೌದ್ರಮಾನಸನಾಗಿ ನೋಡೆನ್ನ
ಸಾಮರ್ಥ್ಯಮಂ ಖಲಾಧಮ ನಿನ್ನ ತಂದೆಯಂ ಮೋಸದಿಂ ಕೊಂದೆಂದೆಲಾ
ಈ ಮಹಾನಗರಂಗಳಂ ನಿಮಿಷದೊಳಗೆ ನಿ
ರ್ಧೂಮಮಂ ಮಾಡಿದಪೆನೀಗ ತಾಳೆಂದೆನುತೆ
ಕಾಮವೈರಿಯ ಸುತಂ ಮೂಡಿಗೆಯೊಳಂಬುಗಿಯಲೇನೆಂಬೆನಚ್ಚರಿಯುನು ೧೫

ಬತ್ತಳಿಕೆಯಿಂದುಗಿವ ಸಮಯದೊಳಗೊಂದು ತುಡೆ
ಪತ್ತು ಗುಣದಿಂ ಬರಲ್ ನೂರ್ ಜವದೊಳೊಡನೆ ಪರಿ
ವುತ್ತೆ ಸಾಸಿರಮರಿಯ ಬಾಣಮಂ ಕಡಿವಲ್ಲಿ ಲಕ್ಕಮರಿವಾಗ ಕೋಟಿ
ಬಿತ್ತರದ ದೈತ್ಯಸೇನಾಂಗದೊಳ್ ಪರಿಗಣನೆ
ಯೆತ್ತಣದು ಕುವರನಂಬಿನ ಚಮತ್ಕಾರಮೋ
ನುತ್ತರೋತ್ತರಮೊ ಭಲರೆನುತುಭಯಸೇನೆಯೊಳ್ ಕೊಂಡಾಡಿದರ್ ಗುಹನನು ೧೬

ಈತನಂಬಿನ ಚಮತ್ಕಾರಮಂ ಕಂಡು ಮ
ತ್ತಾತನೊಡನೊಡನೆ ಖತಿಮಸಗಿ ಬಿಲ್ಲಿಂದಿಷು
ವ್ರಾತಮಂ ಕರೆಯಲಾ ಗುಹನೆಸುಗೆಗಿರ್ಮಡಿಯೆನಲ್ ಪುದಿದುವೆಲ್ಲಡೆಯೊಳು

ರಗೆ ನೀನು ಸತ್ತುಹೋಗಿರುವೆಯೆಂದು ನಾನು ತಿಳಿದಿದ್ದೆ. ನೀನೇ ಬಂದಿರುವೆ, ಪುಣ್ಯ ವಿರುವ ಕಾಲಕ್ಕೆ ನಾವು ಆಶಿಸಿರುವ ವಸ್ತುವು ನಮ್ಮೆಡೆಗೆ ಬರುತ್ತದೆ ಎಂಬುದಕ್ಕೆ ನೀನೇ ಸಾಕ್ಷಿ ಹೋಗು ಎಂದನು. ೧೫. ಸಿದ್ಧರಾಮನೇ ಕೇಳು, ಆ ಮಾತನ್ನು ಕೇಳುತ್ತ ಅತಿ ಯುದ್ಧೋತ್ಸಾಹಿಯಾದ ಕುಮಾರನು ಬಹಳ ಕೋಪದಿಂದ ಕೂಡಿ ಮನಸ್ಸುಳ್ಳವನಾಗಿ, ನನ್ನ ಸಾಮರ್ಥ್ಯವನ್ನು ನೋಡು, ರಾಕ್ಷಸಾಧಮ, ನಿನ್ನ ತಂದೆಯನ್ನು ಮೋಸದಿಂದ ಕೊಂದೆ ಎಂದೆಯಲ್ಲವೆ ? ಈ ಮಹಾನಗರಗಳನ್ನು ನಿಮಿಷದೊಳಗೆ ಸುಟ್ಟು ಬೂದಿ ಮಾಡುತ್ತೇನೆ. ಈಗ ತಾಳು ಎನ್ನುತ್ತ ಶಿವನ ಮಗನಾದ ಗುಹನು ಬತ್ತಳಿಕೆಯಿಂದ ಬಾಣವನ್ನು ಹೊರತೆಗೆಯಲು ಆಶ್ಚರ್ಯವನ್ನು ಏನೆಂದು ಹೇಳಲಿ ? ೧೬. ಬತ್ತಳಿಕೆ ಯಿಂದ ಬಾಣವನ್ನು ತೆಗೆಯುವಾಗ ಒಂದು, ಅದನ್ನು ಬಿಲ್ಲಿಗೆ ತೊಡಲು ಹತ್ತರಷ್ಟಾ ಯಿತು. ಮುಂದುವರಿದಾಗ ನೂರಾಯಿತು. ವೇಗವಾಗಿ ಚಲಿಸುತ್ತ ಸಾವಿರವಾಯಿತು. ಶತ್ರುಗಳ ಬಾಣವನ್ನು ಕಡಿಯುವಾಗ ಲಕ್ಷವಾಯಿತು. ದೈತ್ಯಸೇನೆಯನ್ನು ಕೊಚ್ಚು ವಾಗ ಕೋಟಿ ಬಾಣಗಳಾದವು. ಅಸಂಖ್ಯಾತ ರಾಕ್ಷಸಸೇನೆಯ ಮಧ್ಯೆ ಅದರದು ಯಾವ ಕುಮಾರನ ಬಾಣದ ಚಾತುರ್ಯವೇನು ಉತ್ತಮೋತ್ತಮ ರೀತಿಯದೋ, ಭಲರೆ. ಎನ್ನುತ್ತ ಗುಹನನ್ನು ಎರಡೂ ಸೈನ್ಯದಲ್ಲಿಯೂ ಕೊಂಡಾಡಿದರು. ೧೭. ಇವನ ಬಾಣದ ಚಮತ್ಕಾರವನ್ನು ಕಂಡು ಮತ್ತೆ ಅವನೊಡನೆ ಕೋಪವಾವರಿಸಿ ವೀರ ವಿದ್ಯುನ್ಮಾಲಿ ಬಿಲ್ಲಿನಿಂದ ಬಾಣಗಳ ಸಮೂಹವನ್ನು ಸುರಿಸಲು, ಗುಹನು ಬಿಟ್ಟ ಬಾಣಕ್ಕೆ ಎರಡರಷ್ಟು ಎನ್ನುವಂತೆ ಎಲ್ಲಾಕಡೆಯೂ ಬಾಣಗಳು ತುಂಬಿದುವು. ದೇವತೆ

CC-0. Jangamwadi Math Collection. Digitized by eGangotri

ಭೀತಿಗೊಂಡರ್ ಸುರರ್ ವೀರವಿದ್ಯುನ್ಮಾಲಿ
ಗೇತರತಿಶಯವೊ ಬಿಲ್ಬಲ್ಮೆಯೆಂದೆಲ್ಲರುಂ
ಪೂತುರೇ ಸುಭಟ ಚಾಗೆಂದುಲಿಯೆ ಕೋಪದಿಂ ಗುಹನಾರ್ದು ತೆಗೆದೆಚ್ಚನು ೧೭

ಬಿಟ್ಟಕಣೆ ಪಗೆಗಳಂ ಕಚ್ಚಿದುವು ಕೊಚ್ಚಿದುವು
ಮುಟ್ಟಿ ಗಗನಾಂಗಣಕ್ಕುರ್ಬಿದುವು ಪರ್ಬಿದುವು
ನೆಟ್ಟನೆ ದಿಶಾತಟಕ್ಕೊತ್ತಿದುವು ಮುತ್ತಿದುವು ಬಿಡದೆ ನೋಟಕಜನವನು
ಅಟ್ಟಿ ತತ್ಪುರಿಗಳಂ ಪುಗಿಸಿದುವು ಸುಗಿಸಿದುವು
ಇಟ್ಟಣಿಸಿ ಭಗಣಮಂ ಸೋಂಕಿದುವು ನೂಂಕಿದುವು
ನಿಟ್ಟಿಪರ ಕಣ್ಗೆ ಪೊಳೆದಾಡಿದುವು ಮಾಡಿದುವು ಕೌತುಕಮನಾ ಕ್ಷಣದೊಳು ೧೮

ಭೋರ್ಮೊರೆವ ಗುಹನ ಶರಮಂ ಕಂಡು ಮನದ ಖತಿ
ನೂರ್ಮಡಿಸೆ ವೀರವಿದ್ಯುನ್ಮಾಲಿ ಬೇಗದಿಂ
ಕಾರ್ಮುಕದೊಳಂಬನೊಂದಿಸುತೆಲವೊ ನಿನ್ನ ಶರಕೊಂದೆ ವಾಹನಕವೆರಡು
ಆರ್ಮೊಗಕೆ ಮೂರ್ಬಿಲ್ಗೆ ನಾಲ್ಕು ತೊಣೆಗೈದೆನುತೆ
ಕೂರ್ಮೊನೆಯ ಸರಳ್ಗಳಿಂದೆಸೆಯಲ್ಕೆ ಖಂಡಿಸಿತು
ಮೂರ್ಮಡಿ ನಸುನಗುತೆ ವೀರವಿದ್ಯುನ್ಮಾಲಿಗಭವಸುತನಿಂತೆಂದನು ೧೯

ಗಳು ಹೆದರಿದರು. ವೀರವಿದ್ಯುನ್ಮಾಲಿಗೆ ಬಿಲ್ಲಿನ ಸಾಹಸ ಏನು ಅತಿಶಯವಾಗಿದೆಯೋ! ಎಂದು ಎಲ್ಲರೂ ಭಾಪು, ಪರಾಕ್ರಮಿ, ಭಲಾ ಎಂದು ಹೇಳಲು ಗುಹನು ಕೋಪದಿಂದ ಆರ್ಭಟಿಸಿ ಬಾಣಗಳನ್ನು ತೆಗೆದುಬಿಟ್ಟನು. ೧೮. ಬಿಟ್ಟ ಬಾಣಗಳು ಶತ್ರುಗಳನ್ನು ತಾಗಿದುವು, ಕೊಚ್ಚಿ ಹಾಕಿದುವು, ಆಕಾಶವನ್ನು ಸೇರಿ ಉಬ್ಬಿ, ಹಬ್ಬಿದುವು. ನೇರವಾಗಿ ದಿಕ್ಕುಗಳಿಗೆ ಒತ್ತಿದುವು ಮುತ್ತಿದುವು, ನೋಡುತ್ತಿದ್ದ ಜನರನ್ನು ಬಿಡದೆ ಅಟ್ಟಿಸಿಕೊಂಡು ಹೋಗಿ ಆ ಪಟ್ಟಣಗಳನ್ನು ಹೊಗುವಂತೆ ಮಾಡಿದುವು, ಭಯಪಡಿಸಿದುವು. ಗುಂಪುಗೂಡಿ ನಕ್ಷತ್ರಗಳನ್ನು ಸೋಕಿದುವು. ನೂಕಿದುವು. ದಿಟ್ಟಿಸುವವರ ಕಣ್ಣಿಗೆ ಮಿಂಚಿದುವು, ಆ ಕ್ಷಣದಲ್ಲಿ ವಿಸ್ಮಯವನ್ನುಂಟುಮಾಡಿದುವು. ೧೯. ಭೋರೆಂದು ಮೊರೆಯುವ ಗುಹನ ಬಾಣವನ್ನು ನೋಡಿ ಮನಸ್ಸಿನ ಕೋಪ ನೂರುಪಟ್ಟು ಹೆಚ್ಚಾಗಲು ವೀರವಿದ್ಯುನ್ಮಾಲಿ ತ್ವರಿತವಾಗಿ ಬಿಲ್ಲಿಗೆ ಬಾಣವನ್ನು ಹೂಡುತ್ತ ಹೇಳಿದನು-ಎಲೋ ನಿನ್ನ ಬಾಣಕ್ಕೆ ಒಂದು, ರಥಕ್ಕೆ ಎರಡು, ಆರು ಮುಖಕ್ಕೆ ಮೂರು ಬಾಣಗಳು, ಬಿಲ್ಲಿಗೆ ನಾಲ್ಕು, ಬತ್ತಳಿಕೆಗೆ ಐದು ಎನ್ನುತ್ತ ಹರಿತವಾದ ಬಾಣಗಳಿಂದ [illegible] ಕುಮಾರನು

CC-0. Jangamwadi Math Collection. Digitized by eGangotri

ಅರರೆ ಖಳರಾಜ ನಿನ್ನಯ ಶರಕಿದೊಂದಂಬು
ಕರದ ಕಾರ್ಮುಕಕೆರಡು ಸೂತಂಗೆ ಮೂರ್ ತೋರ್ಪ
ತುರಗಕ್ಕೆ ನಾಲ್ಕು ತವರಥಕೈದು ನಿನ್ನೆರ್ದೆಯನೊಡೆಯಲಾರೊಡನೆ ಬರ್ಪ
ದುರುಳದಾನವಸೇನೆಗೇಳ್ ಮುಪ್ಪುರಕ್ಕೆಂಟು
ಸರಳುಳಿದ ದೈತ್ಯಗಣಕೊಂಬತ್ತು ನೋಡೆಂದು
ಹರಸೂನುವೆಸುವಿನಿಂ ಸಿದ್ಧರಾಮೇಶ ಕೇಳೇನೆಂಬೆನಚ್ಚರಿಯನು ೨೦

ಬಾಣಮುಡಿದುವು ಕರಶರಾಸನಂ ಖಂಡಿಸಿತು
ಕಾಣೆನಸುವಂ ಸೂತನಂಗದೊಳ್ ಹಯತತಿಯ
ಗೋಣೆರಳ್ ತುಂಡಾದುವಾ ರಥಂ ಪುಡಿಯಾಯ್ತು ಖಳನೆರ್ದೆಯೊಳೇರಾದುದು
ಮಾಣದಸುರರ್ ಗಾಯವಡೆದುರುಳೆ ಮುಪ್ಪುರಕೆ
ಸಾಣೆಯುಲಗಿನ ಸರಳ್ ಸುರಿದುವಿನ್ನೆಂತೊ ಬಿ
ಲ್ಲಾಣಕೆ ಕುಮಾರಕಂಠೀರವನ ಜಗಜಟ್ಟಿ ಭಾಪೆಂದು ಸುರರುಲಿದರು ೨೧

ಭಲರೆ ಕೋದಂಡಶಿಕ್ಷಾಚಾರ್ಯ ಘನಚಾಪ
ವಿಲಸಿತಾಮ್ನಾಯ ಮೃತ್ಯುಂಜಯ ಮಹಾಶರಾ
ವಳಿಯ ಸೃಷ್ಟಿಗೆ ವಿನೂತನಚತುರ್ಮುಖನೆಂದು ಜನರೀತನಂ ಪೊಗಳಲು
ಖಳನತುಳಕೋಪದಿಂ ಗರ್ಜಿಸುತೆ ಮತ್ತೆಯುಂ
ಕಲಹಸನ್ನಾಹಮಂ ಕೈಕೊಂಡು ಬೇಗದಿಂ
ದೆಳೆವೆರೆಯ ಪೊತ್ತನ ಕುಮಾರನಂ ತಿನ್ನೆನುತ್ತುರಗಾಸ್ತ್ರದಿಂದೆಚ್ಚನು ೨೨

ವಿದ್ಯುನ್ಮಾಲಿಗೆಯನ್ನು ಕುರಿತು ಹೀಗೆಂದನು. ೨೦. ಅರರೇ ರಾಕ್ಷಸರಾಜನೇ ! ನಿನ್ನ ಬಾಣಕ್ಕೆ ಇದೊಂದು ಬಾಣ, ಕೈಯಲ್ಲಿರುವ ಬಿಲ್ಲಿಗೆ ಎರಡು, ನಿನ್ನ ಸಾರಥಿಗೆ ಮೂರು, ಕಾಣುತ್ತಿರುವ ಕುದುರೆಗೆ ನಾಲ್ಕು, ನಿನ್ನ ರಥಕ್ಕೆ ಐದು, ನಿನ್ನ ಎದೆಯನ್ನು ಸೀಳಲು ಆರು, ನಿನ್ನ ಜೊತೆಯಲ್ಲಿ ಬರುತ್ತಿರುವ ರಾಕ್ಷಸಸೈನ್ಯಕ್ಕೆ ಏಳು, ತ್ರಿಪುರಗಳಿಗೆ ಎಂಟು ಬಾಣಗಳು, ಉಳಿದ ರಾಕ್ಷಸಸಮೂಹಕ್ಕೆ ಒಂಬತ್ತು ಬಾಣಗಳು, ಇಗೋ ನೋಡು ಎನ್ನುತ್ತ ಕುಮಾರನು ಹೊಡೆಯುವಲ್ಲಿ ಸಿದ್ಧರಾಮ, ಆಶ್ಚರ್ಯವನ್ನು ಏನು ಹೇಳಲಿ ಕೇಳು. ೨೧. ಬಾಣಗಳು ನಾಟಿದ್ದುವು, ಕೈಯಬಿಲ್ಲು ತುಂಡಾಯಿತು. ಸಾರಥಿಯ ಶರೀರದಲ್ಲಿ ಪ್ರಾಣವನ್ನು ಕಾಣೆ, ಕುದುರೆಗಳ ಕುತ್ತಿಗೆಗಳು ಎರಡು ತುಂಡಾದುವು, ರಥ ಪುಡಿ ಯಾಯಿತು. ರಾಕ್ಷಸನ ಎದೆಯಲ್ಲಿ ಗಾಯವಾಯಿತು. ರಾಕ್ಷಸರು ಗಾಯಗೊಂಡು ಉರುಳಿದರು, ತ್ರಿಪುರಕ್ಕೆ ಸಾಣೆ ಹಿಡಿದು ಹರಿತ ಮತ್ತು ಚೂಪಾದ ಬಾಣಗಳು ಸುರಿ ದುವು, ಕುಮಾರ ಕಂಠೀರವನ (ಗುಹನ) ಬಿಲ್ಲಿನ ಜಾಣತನ ಇನ್ನೆಂತಹುದೋ, ಜಗಜಟ್ಟಿ. ಭಾಪುರೆ ಎಂದು ದೇವತೆಗಳು ಹೊಗಳಿದರು. ೨೨. ಭಲಾ, ಬಿಲ್ಲವಿದ್ಯೆಯ ಗುರು, ಘನಚಾಪ, ವೇದಗಳಿಂದ ಆವರಿಸಿದವನೆ, ಮೃತ್ಯುಂಜಯ, ಮಹಾ ಬಾಣಗಳ ಸಮೂ ಹದ ಸೃಷ್ಟಿಗೆ ನೂತನ ಬ್ರಹ್ಮ ಎಂದು ಜನರು ಇವನನ್ನು ಹೊಗಳಲು ರಾಕ್ಷಸನು ಬಹಳ ಕೋಪದಿಂದ ಗರ್ಜಿಸುತ್ತ ಮತ್ತೆ ಯುದ್ಧಸಿದ್ಧತೆ ಕೈಗೊಂಡು ಬೇಗನೆ ಚಂದ್ರಶೇಖರನ

CC-0. Jangamwadi Math Collection. Digitized by eGangotri

ಕಾದುದು ಸಮಸ್ತರಣರಂಗಂ ವಿಷಾಗ್ನಿಯಿಂ
ಸೀದುದು ಜಗಂ ಮಸಗಿ ಸುಡುವ ತಜ್ಜ್ವಾಲೆಯಿಂ
ಪೋದುದಲ್ಲಿಯ ಜನಂ ಹರಣಮುಳ್ಳೊಡೆ ಹಾಡಿಕೊಂಡು ಬದುಕುವೆನೆನುತ್ತೆ
ತೋದುದಂಬರತಳಂ ವಿಷದ ಲೋಳೆಗಳಿಂದೆ
ತೀದುದಮರರ ಹರುಷವಿನ್ನೆಮ್ಮ ಬಲಕೆ ಲೇ
ಸಾದುದೆಂದಸುರಾಳಿ ಬಾಹುಗಳನುರೆ ಪೊಯ್ದು ಬೊಬ್ಬಿರಿದುದಾ ಕ್ಷಣದೊಳು ೨೩

ವಿಷಕಂಠನಾತ್ಮಜಂ ಫಣಿಭೂಷಣೋದ್ಭವಂ
ವಿಷಮನುಗುಳುತೆ ಬರ್ಪ ಸರ್ಪಾಸ್ತ್ರಕಳುಕುವನೆ
ವಿಷದಮಾರ್ಗದೊಳೈದಲೆಚ್ಚು ಗರುಡಾಸ್ತ್ರದಿಂದುರಗಾಸ್ತ್ರಮಂ ತುಂಡಿಸಿ
ವಿಷಮದಾನವ ನಿನ್ನ ಬತ್ತಳಿಕೆಯೊಳಗಿನ್ನು
ವಿಷುಗಳೆನಿತಿರ್ದಪುವು ತೊಡು ಮಹಾಸ್ತ್ರವನೆನ
ಲ್ಕಿಷುಧಿಯಿಂ ಪರ್ವತಾಸ್ತ್ರಮನುಗಿದು ಕುವರನಂ ಕೆಡಪೆನುತೆ ತೆಗೆದೆಚ್ಚನು ೨೪

ಎತ್ತಲುಂ ಕತ್ತಲಿಸೆ ಭೋರೆನುತೆ ಸುರಬಲದ
ನೆತ್ತಿಯೊಳ್ ಕೆಡೆಕೆಡೆದುರುಳ್ಚುತಿಪ್ಪದ್ರಿಗಳ
ವೊತ್ತಮಂ ಕಂಡು ಸೇನಾನಿ ಕಡುಮುಳಿಸಿನಿಂ ಮತ್ಸೈನ್ಯ ನೊಂದುದೆಂದು
ಬತ್ತಳಿಕೆಯಿಂದೆ ವಜ್ರಾಸ್ತ್ರಮಂ ತೆಗೆಯೆ ಸುಗಿ
ದತ್ತು ಲೋಕಂ ಧನುರ್ಗುಣದೊಳೊಂದಿಸಿ ಬಿಡಲ್
ಮುತ್ತುಮಗನಿಕರಮಂ ತತ್ತರಂದರಿದುದದು ಮತ್ತಮಾ ಖತಿಗೊಂಡನು ೨೫

ಮಗನನ್ನು (ಈ ಬಾಣದ ಹೊಡೆತವನ್ನು) ತಿನ್ನು ಎನ್ನುತ್ತ ಸರ್ಪಾಸ್ತ್ರದಿಂದ ಹೊಡೆದನು. ೨೩. ಎಲ್ಲ ರಣರಂಗವೂ ವಿಷದ ಬೆಂಕಿಯಿಂದ ಕಾದುಹೋಯಿತು. ಮುತ್ತಿ ಸುಡುವ ಆ ಜ್ವಾಲೆಯಿಂದ ಜಗತ್ತು ಸೀದುಹೋಯಿತು. ಪ್ರಾಣವಿದ್ದರೆ ಹಾಡಿಕೊಂಡು ಬದುಕುತ್ತೇವೆ ಎನ್ನುತ್ತ ಅಲ್ಲಿದ್ದ ಜನಸಮೂಹ ಓಡಿಹೋಯಿತು, ವಿಷದ ಲೋಳೆಯಿಂದ ಆಕಾಶ ನೆನೆಯಿತು, ದೇವತೆಗಳ ಸಂತೋಷ ತೀರಿಹೋಯಿತು, ಇನ್ನು ನಮ್ಮ ಸೈನ್ಯಕ್ಕೆ ಒಳ್ಳೆಯದಾಯಿತು. ಎಂದು ರಾಕ್ಷಸಸಮೂಹ ಆ ಕ್ಷಣದಲ್ಲಿ ತೋಳುಗಳನ್ನು ತಟ್ಟಿ ಬೊಬ್ಬೆ ಹಾಕಿತು. ೨೪. ವಿಷಕಂಠನ ಮಗನಾದ-ಸರ್ಪಭೂಷಣನ ಮಗನಾದ ಕುಮಾರನು ವಿಷವನ್ನು ಉಗುಳುತ್ತಾ ಬರುವ ಸರ್ಪಾಸ್ತ್ರಕ್ಕೆ ಅಳುಕುತ್ತಾನೆಯೆ ? ಆಕಾಶದಲ್ಲಿ ವಿಷವನ್ನು ಉಗುಳುತ್ತ ಬರುತ್ತಿರುವ ಸರ್ಪಾಸ್ತ್ರವನ್ನು ಗುರುಡಾಸ್ತ್ರದಿಂದ ತುಂಡರಿಸಿದನು. ಕ್ರೂರ ರಾಕ್ಷಸನೇ ನಿನ್ನ ಬತ್ತಳಿಕೆಯಲ್ಲಿ ಇನ್ನೂ ಎಷ್ಟು ಬಾಣಗಳಿವೆ ? ಮಹಾಸ್ತ್ರವನ್ನು ತೊಡು ಎನ್ನಲು ಬತ್ತಳಿಕೆಯಿಂದ ಪರ್ವತಾಸ್ತ್ರವನ್ನು ತೆಗೆದು ಷಣ್ಮುಖನನ್ನು ಕೊಲ್ಲು ಎನ್ನುತ್ತ ಹೊಡೆದನು. ೨೫. ಎಲ್ಲೆಲ್ಲಿಯೂ ಕತ್ತಲಾವರಿಸಿತು, ಭೋರೆಂದು ಆರ್ಭಟಿಸುತ್ತ ದೇವತೆಗಳ ಸೈನ್ಯದ ತಲೆಯ ಮೇಲೆ ಬಿದ್ದು ಬಿದ್ದು ಉರುಳುತ್ತಿದ್ದ ಪರ್ವತಗಳ ಸಮೂಹವನ್ನು ನೋಡಿ ಗುಹನು ಅತಿಯಾಗಿ ಕೋಪಗೊಂಡನು. ನನ್ನ ಸೈನ್ಯ ನೊಂದಿತು ಎಂದು ಬತ್ತಳಿಕೆಯಿಂದ ವಜ್ರಾಸ್ತ್ರವನ್ನು ತೆಗೆಯಲು ಲೋಕವು ಹೆದರಿ

CC-0. Jangamwadi Math Collection. Digitized by eGangotri

ಇನ್ನಿದಂ ಪರಿಹರಿಸಿಕೊಳ್ಳೆನುತ್ತಮುರಾರಿ
ತನ್ನ ಬತ್ತಳಿಕೆಯಿಂ ಮೇಘಬಾಣವನುಗಿದು
ಸನ್ನುತಶರಾಸನದಿನುಗುಳಿಸಲ್ ಘುಡುಘುಡುಧ್ವಾನದಿಂ ಭೋರ್ವೊರೆವುತೆ
ಸನ್ನಾಹವಾಗಿ ಸೈರಿಸುವ ಮೇಘಾಸ್ತ್ರಕ್ಕೆ
ಪನ್ನತಿಕೆಯಿಂದೆ ವಾಯುವ್ಯಾಸ್ತ್ರಮಂ ಪೂಡಿ
ಪನ್ನಗಾಭರಣನ ಕುಮಾರನಾರ್ದೆಸಲೊಡನೆ ಪಸರಿಸಿತ್ತರಿಬಲದೊಳು ೨೬

ಬಿರುಗಾಳಿ ಬೀಸೆ ರಣಮಂಡಲದೊಳೆಲ್ಲಿಯುಂ
ಮುರಿದುದಾ ಮುಗಿಲೊಡ್ಡು ಚಲಿಸುವ ರಥಧ್ವಜದ
ಸೆರಗುವಿಡಿದೆಳೆದುದತ್ತಲ್ ಖೇಟಕದ ಭಟರನಂಡಲೆದು ಕೊಂಡೊಯ್ದುದು
ತುರುಗಿದ ಹಯಂ ತಾರುಘಟ್ಟಾಯ್ತು ಭಲಭಲರೆ
ಕರಿಗೊರಲನಾತ್ಮಜನೆ ನಿನ್ನಹಂಕಾರಮಂ
ಮುರಿವೆನೆಂದೆನುತೆ ವಿದ್ಯುನ್ಮಾಲಿ ತಿಮಿರಾಸ್ತ್ರಮಂ ಪೂಡಿ ತೆಗೆದೆಚ್ಚನು ೨೭

ಆನೆಕುದುರೆಗಳಾಟಮಡಗಿದುದು ನಡುಗಿದುದು
ಸೇನೆ ರಥಚಕ್ರಮುವು ಮುಗಿದುವು ತಗ್ಗಿದುವು
ನಾನಾಸ್ತ್ರಘಾತಿಗಳ್ ಖಾತಿಗಳ್ ಪೆಚ್ಚಿದುವು ಬೃಂದಾರಕರ ಮನದೊಳು
ಏನೆಂಬೆನಭವನ ಕುಮಾರಕಂ ಧೀರಕಂ
ತಾ ನಿಭೃತಶರಧಿಯೊಳ್ ನೋಡಿದಂ ಪೂಡಿದಂ
ಭಾನುಶರಮಂ ತಿಮಿರವೋಡಿದುದು ಮೂಡಿದುದು ಹರುಷಮುಂ ಸುರಸೇನೆಗೆ ೨೮

ನಡುಗಿಹೋಯಿತು. ಬಿಲ್ಲಿನ ಹೆದೆಗೆ ಅದನ್ನು ಹೂಡಿ ಬಿಡಲು ಮುತ್ತುತ್ತಿದ್ದ ಪರ್ವತ ಸಮೂಹವನ್ನು ತುಂಡು ತುಂಡಾಗಿ ಕತ್ತರಿಸಿ ನಾಶಮಾಡಿತು. ರಾಕ್ಷಸನು ಮತ್ತೆ ಕೋಪಗೊಂಡನು. ೨೬. ಇನ್ನು ಇದನ್ನು ತಡೆದುಕೊ ಎನ್ನುತ್ತ ರಾಕ್ಷಸನು ತನ್ನ ಬತ್ತಳಿಕೆಯಿಂದ ಮೇಘಬಾಣವನ್ನು ಕಿತ್ತು ಶ್ರೇಷ್ಠವಾದ ಬಿಲ್ಲಿನಿಂದ ಬಿಡಲು ಅದು ಘುಡು ಘುಡು ಶಬ್ದದಿಂದ ಭೋರೆಂದು ಮೊರೆಯುತ್ತ ಸಿದ್ಧಗೊಂಡು ತಡೆಯಿತು. ಆ ಮೇಘಾಸ್ತ್ರಕ್ಕೆ ಪರಾಕ್ರಮದಿಂದ ವಾಯುವ್ಯಾಸ್ತ್ರವನ್ನು ಹೂಡಿ ಕುಮಾರನು ಆರ್ಭಟಿಸಿ ಬಿಟ್ಟನು. ಅದು ಕೂಡಲೇ ಶತ್ರುಸೈನ್ಯವನ್ನು ಆವರಿಸಿತು. ೨೭. ಬಿರುಗಾಳಿ ಬೀಸಲು ಯುದ್ಧ ಭೂಮಿಯಲ್ಲಿ ಎಲ್ಲೆಲ್ಲಿಯೂ ಆ ಮೋಡಗಳ ಸಮೂಹ ಚದುರಿತು. ಚಲಿಸುವ ರಥದ ಬಾವುಟದ ಸೆರಗನ್ನು ಹಿಡಿದು ಎಳೆಯಿತು. ಅತ್ತಕಡೆ ಗುರಾಣಿಯ ಭಟರನ್ನು ಕೋಟಲೆಗೊಳಿಸಿ ಹೊತ್ತುಕೊಂಡು ಹೋಯಿತು. ಕಟ್ಟಿದ್ದ ಕುದುರೆಗಳು ಚೆಲ್ಲಾಪಿಲ್ಲಿಯಾದುವು. ಭಲಾ ಭಲಾ ವಿಷಕಂಠನ ಮಗನೇ, ನಿನ್ನ ಅಹಂಕಾರವನ್ನು ಮುರಿಯುತ್ತೇನೆ ಎನ್ನುತ್ತ ವಿದ್ಯುನ್ಮಾಲಿ ತಿಮಿರಾಸ್ತ್ರವನ್ನು ಹೂಡಿ ತೆಗೆದುಬಿಟ್ಟನು. ೨೮. ಆನೆ ಕುದುರೆಗಳ ಆಟ ಅಡಗಿತು, ಸೈನ್ಯ ನಡುಗಿತು, ರಥಚಕ್ರಗಳು ನೆಗ್ಗಿಹೋದವು, ನಾನಾ ಶಸ್ತ್ರಗಳ ಹೊಡೆತ ತಗ್ಗಿಹೋಯಿತು, ದೇವತೆಗಳ ಮನಸ್ಸಿನಲ್ಲಿ ಕೋಪ ಹೆಚ್ಚಾಯಿತು. ಏನೆಂದು ಹೇಳಲಿ, ಶಿವನ ಮಗನಾದ ಧೀರ ಷಣ್ಮುಖನು ತಾನು ತುಂಬಿದ ಬತ್ತಳಿಕೆಯನ್ನು ನೋಡಿ

CC-0. Jangamwadi Math Collection. Digitized by eGangotri

ತೀರಿತೇ ನಿನ್ನ ಮಂತ್ರಾಸ್ತ್ರದುಬ್ಬಟೆಯೆನಲ್
ತಾರಕಾರಿಯನೆಂಟು ಬಾಣದಿಂಪೆಸಲವಂ
ದಾರಿಯೊಳ್ ಕಡಿದೊಂದು ಶಕ್ತಿಯಿಂದಿಡೆ ಖಳನವಕ್ಷವಂ ಬಗಿದುಗಿಯಲು
ವೀರವಿದ್ಯುನ್ಮಾಲಿ ಮೂರ್ಛೆಯಿಂ ಮೈಮರೆದು
ಧಾರುಣಿಯೊಳಡೆಗೆಡೆಯೆ ಖಳರವನ ಪುರಕಿರದೆ
ಸೇರಿಸಿದರುಳಿದಸುರರಂ ಸವರಿ ಗುಹನತ್ತ ತಿರುಗಿದಂ ಸಂತಸದೊಳು ೨೯

ಗೆಲವಿನಿಂ ಕಾರ್ತಿಕೇಯಂ ಪೋಗಲಿತ್ತಲುರೆ
ನಲವಿನಿಂದತ್ತಲಮರೇಶ್ವರಂ ತನ್ನ ಸುತ
ಬಲವೆಲ್ಲವಂ ಕೂಡಿಕೊಂಡುಳಿದ ದೈತ್ಯರಂ ಖಾತಿಯಿಂ ಘಾತಿಸುತಿರೆ
ಖಳ ಕಮಲಲೋಚನಂ ತನ್ನ ತಮ್ಮಂ ಬೀಳ
ಲಳಲಿ ನಿಂದಣ್ಣನಿಂ ಕಾಳೆಗದ ವೀಳೆಯಂ
ತಳೆದು ನಿಜಬಲವೆರಸಿ ಪೊರಮಟ್ಟನಾಪುರವನೇನೆಂಬೆನದ್ಭುತವನು ೩೦

ಪಟುಹಯಂಗಳ್ ಪದ್ಮಪದ್ಮಂಗಳುಗ್ರಗಜ
ಘಟೆಗಳುಂ ಪದ್ಮಪದ್ಮಂಗಳಷ್ಟಾಪದೋ
ತ್ಕಟವರೂಥಂಗಳುಂ ಪದ್ಮಪದ್ಮಂಗಳೇಳ್‌ಕೋಟಿ ದೊರೆಗಳ್ ಸಮರಕೆ
ಲಟಕಟಿಸುತ್ತೈತರ್ಪ ಭಟರ ಪರಿಗಣನೆಯದು
ಘಟಿಸದೊಡನೊಡನೆ ತಂಬಟ ಭೇರಿ ಡೌಡೆಗಳ
ಚಟುಳರವಮುಣ್ಮೆ ದಿಕ್ತಟದೊಳಸುರೇಂದ್ರನಾರ್ಭಟಿಸುತ್ತೈತರುತಿರ್ದನು ೩೧

ಸೂರ್ಯಾಸ್ತ್ರವನ್ನು ತೆಗೆದು ಹೂಡಿದನು. ಕತ್ತಲೆ ಓಡಿತು, ದೇವತೆಗಳ ಸೈನ್ಯದಲ್ಲಿ ಆನಂದ ಮೂಡಿತು. ೨೯. ನಿನ್ನ ಮಂತ್ರಬಾಣದ ಪರಾಕ್ರಮ ಮುಗಿಯಿತೆ ಎಂದು ಕೇಳಲು ಅವನು ಕುಮಾರನನ್ನು ಎಂಟು ಬಾಣಗಳಿಂದ ಹೊಡೆಯಲು ಅದನ್ನು ಕುಮಾರನು ಮಧ್ಯ ದಲ್ಲಿಯೇ ಕತ್ತರಿಸಿ ಶಕ್ತ್ಯಾಯುಧದಿಂದ ಹೊಡೆದನು. ಅದು ರಾಕ್ಷಸನ ಎದೆಯನ್ನು ಸೀಳಿ ಹೊಕ್ಕಿತು. ವೀರ ವಿದ್ಯುನ್ಮಾಲಿ ಮೂರ್ಛೆಹೋಗಿ ಭೂಮಿಯ ಮೇಲೆ ಉರುಳಿಬಿದ್ದನು. ರಾಕ್ಷಸರು ಅವನನ್ನು ಕೂಡಲೇ ಅವನ ಪುರಕ್ಕೆ ಸೇರಿಸಿದರು. ಉಳಿದ ರಾಕ್ಷಸರನ್ನು ಕೊಂದು ಗುಹನು ಸಂತೋಷದಿಂದ ಹಿಂತಿರುಗಿದನು. ೩೦. ಗೆಲುವಿನಿಂದ ಕಾರ್ತಿಕೇಯನು ಹೋಗಲು ಇತ್ತ ಬಹಳವಾದ ಸಂತೋಷದಿಂದ ದೇವೇಂದ್ರನು ತನ್ನ ಸೈನ್ಯದೊಡಗೂಡಿ ಉಳಿದಿದ್ದ ರಾಕ್ಷಸರನ್ನು ಕೋಪದಿಂದ ಹೊಡೆಯುತ್ತಿದ್ದನು. ಆಗ ರಾಕ್ಷಸಕಮಲ ಲೋಚನನು ತನ್ನ ತಮ್ಮನು ಬೀಳಲು ದುಃಖಗೊಂಡಿದ್ದ ಅಣ್ಣನಿಂದ ಯುದ್ಧಕ್ಕೆ ಅಪ್ಪಣೆ ಯನ್ನು ಪಡೆದು ತನ್ನ ಸೈನ್ಯದೊಡಗೂಡಿ ಆ ಪುರದಿಂದ ಹೊರಟನು. ಅದ್ಭುತವನ್ನು ಏನೆಂದು ಹೇಳಲಿ ? ೩೧. ಅನೇಕ ಪದ್ಮಗಳಷ್ಟು ಚುರುಕಾದ ಕುದುರೆಗಳು, ಅನೇಕ ಪದ್ಮ ಗಳಷ್ಟು ಕ್ರೂರವಾದ ಮದಿಸಿದ ಆನೆಗಳು, ಅನೇಕ ಪದ್ಮಗಳಷ್ಟು ಬಂಗಾರಮಯವಾದ ಶ್ರೇಷ್ಠವಾದ ರಥಗಳು, ಏಳು ಕೋಟಿ ನಾಯಕರು, ಯುದ್ಧಕ್ಕೆ ಉತ್ಸಾಹದಿಂದ ಬರುತ್ತಿದ್ದ ಸೈನಿಕರ ಲೆಕ್ಕ [illegible] ತೀಕ್ಷ್ಣವಾದ ಶಬ್ದ

CC-0. Jangamwadi Math Collection. Digitized by eGangotri

ಸುರಪಗಜಕೇಸರಿ ಕೃಶಾನುಹರಿಣವ್ಯಾಘ್ರ
ನುರುತರ ಯಮಾಂಧಕಾರದ್ಯುಮಣಿ ನಿರುತಿಮದ
ಹರಣನಾ ವರುಣಗರ್ವೋದ್ದಂಡಪರ್ವತಚ್ಛೇದಘನವಜ್ರದಂಡ
ಮರುತವನದಾವಂ ಕುಬೇರಾಬ್ಧಿವಾಡಬಂ
ಹರಮೇಘನಿಚಯಪವಮಾನನಿದಕೋ ಬಂದ
ನರರೆ ತೊಲುತೊಲಗೆನುತೆ ಕೂಗಿದುವು ಕಹಳೆಗಳ್ ಸುರಬಲಂ ಬೆರಗಾಗಲು ೩೨

ಘೋರವಂ ಮಾಳ್ಪ ಭುಜದಾರವಂ ಧೃತಖೇಟ
ಕಾರವಂ ಹಸ್ತಿಘಂಟಾರವಂ ವಾದ್ಯದ ಮ
ಹಾರವಂ ತುರಗಹೇಷಾರವಂ ನೋಡಲತಿಭೈರವವೆನಿಸಿ ದೈತ್ಯರ
ವೀರವಂ ಪೊಗಳ್ವ ಕಹಳಾರವಂ ಸಲೆ ಸರಳ
ಸಾರವಂ ಕಡಿವ ಸುಭಟಾರವಂ ಕೃತಸಿಂಜಿ
ನೀರವಂ ದಿವಿಜರ ಗಭೀರವಂ ಮುರಿದತುಳಭಾರವಂ ಜಗಕಿತ್ತುದು ೩೩

ಗಿರಿಗಿರಿಯನಬುಧಿಯಬುಧಿಯನವನಿಯವನಿಯು
ಬೆರಸುವಂತಸುರಸುರಸೈನಿಕಂ ಕಳಚಿದುದು
ಕರಿತುರಗ ವರವರೂಥಂಗಳಂ ನೂಂಕಿದರ್ ತಮತಮಗೆ ಬೇಗದಿಂದೆ
ಶರ ಶಕ್ತಿ ಶಲ್ಲೆಯ ಕೃಪಾಣ ತೋಮರ ಕುಂತ
ಪರಶು ಮುಸಲಾದಿ ಪರಿಪರಿಯ ಕೈದುಗಳಿಂದೆ
ಸುರಸೇನೆಯಂ ಪೊಕ್ಕು ಸವರಿದರ್ ದಾನವರ್ ಪೇಳ್ವುದೇನಚ್ಚರಿಯನು ೩೪

ದಿಕ್ತಟಗಳಲ್ಲೆಲ್ಲ ಆವರಿಸಿರಲು ರಾಕ್ಷಸರಾಜನು ಆರ್ಭಟಿಸುತ್ತ ಬರುತ್ತಿದ್ದನು. ೩೨. ದೇವೇಂದ್ರನೆಂಬ ಆನೆಗೆ ಸಿಂಹ, ಅಗ್ನಿಯೆಂಬ ಜಿಂಕೆಗೆ ಹುಲಿ, ಭೀಕರವಾದ ಯಮನೆಂಬ ಕತ್ತಲೆಗೆ ಸೂರ್ಯ, ನಿರುತಿಯ ಗರ್ವನಾಶಕ, ಆ ವರುಣನೆಂಬ ಗರ್ವಪರ್ವತವನ್ನು ಭೇದಿಸುವ ವಜ್ರಾಯುಧ, ಮರುತ್ತೆಂಬ ವನಕ್ಕೆ ಕಾಳ್ಗಿಚ್ಚು, ಕುಬೇರನೆಂಬ ಸಮುದ್ರಕ್ಕೆ ಬಡಬಾಗ್ನಿ, ಈಶಾನನೆಂಬ ಮೋಡಗಳ ಸಮೂಹಕ್ಕೆ ಬಿರುಗಾಳಿ ಇದೊ ಬಂದನು. ಅರರೆ, ತೊಲಗು ತೊಲಗೆನ್ನುತ್ತ ಕಹಳೆಗಳು ಕೂಗಲು ದೇವತೆಗಳ ಸೈನ್ಯ ಬೆರಗಾಯಿತು. ೩೩. ಭಯವನ್ನುಂಟುಮಾಡುವ ಭುಜವನ್ನು ತಟ್ಟುವ ಶಬ್ದ, ಹಿಡಿದಿದ್ದ ಗುರಾಣಿಯ ಶಬ್ದ, ಆನೆಗಳಿಗೆ ಕಟ್ಟಿದ್ದ ಗಂಟೆಗಳ ಶಬ್ದ, ವಾದ್ಯಗಳ ದೊಡ್ಡ ಶಬ್ದ, ಕುದುರೆಗಳ ಹೇಷಾರವ, ನೋಡಲು ಅತಿಭಯಂಕರನೆನ್ನಿಸಿ ರಾಕ್ಷಸರ ವೀರತ್ವವನ್ನು ಹೊಗಳುವ ಕಹಳೆಗಳ ಶಬ್ದ, ಚೆನ್ನಾಗಿ ಬಾಣಗಳ ಸಮೂಹವನ್ನು ಕಡಿಯುವ ಶೂರ ಸೈನಿಕರ ಆರ್ಭಟ, ಬಿಲ್ಲಿನ ಠಂಕಾರ, ಇವು ದೇವತೆಗಳ ಧೈರ್ಯವನ್ನು ಮುರಿದು ಜಗತ್ತಿಗೆ ಅತಿಯಾದ ಕಷ್ಟವನ್ನುಂಟು ಮಾಡಿತು. ೩೪. ಪರ್ವತ–ಪರ್ವತವನ್ನು, ಸಮುದ್ರ–ಸಮುದ್ರವನ್ನು, ಭೂಮಿ–ಭೂಮಿಯನ್ನು ಸೇರುವಂತೆ, ದೇವ–ದಾನವಸೈನ್ಯ ಒಂದನ್ನೊಂದು ಅಲ್ಲಾಡಿಸಿದವು. ಆನೆ-ಕುದುರೆ-ರಥಗಳನ್ನು ತಾವು ತಾವು ಬೇಗನೆ ಮುಂದಕ್ಕೆ ನೂಕಿದರು. ಬಾಣ, ಶಕ್ತ್ಯಾಯುಧ, ಶೂಲ, ಕತ್ತಿ, ಗದೆ, ಈಟಿ, ಕೊಡಲಿ, ಒನಕೆ ಮುಂತಾದ ನಾನಾ ರೀತಿಯ

CC-0. Jangamwadi Math Collection. Digitized by eGangotri

ಉರುಬಿ ಮುಂದಮರಸಂದೋಹಮಂ ದಾನವರ್
ಕೊರೆಕೊರೆದುರುಳ್ಚುತಿರೆ ಕಂಗೆಟ್ಟು ಸುರಪನಂ
ಜರೆವುತೋಡಿದರೆಮ್ಮ ಗಂಟಲಂ ಕೊಯ್ದನೀ ಪಾಪಿ ಹಿಮಗಿರಿತಟದೊಳು
ಮರೆಸಿಕೊಂಡಿದ್ದೆವೆಮ್ಮಡಲ್ಗಳಂ ರಕ್ಷಿಪಂ
ಕರಿಗೊರಲನೆಂದು ತಂದಂ ರಣಾಂಕಣಕದೇಂ
ಹರಿಯ ನೋಡುವನೆಮ್ಮ ಕೇಡನೀ ಹರನೆನುತೆ ಸುರಕುಲಂ ಮೊರೆಯಿಟ್ಟುದು ೩೫

ವಂಚಿಸಿ ಕಳೆದನೆಮಗೆ ಪಾಪಿಯಲ್ಲವೆ ಖಳವಿ
ರಿಂಚ ದೈತ್ಯರ್ ತನ್ನ ಕೂರ್ತು ಬೇಡಿದರೆಂದು
ತಾಂ ಬೇಗದಿಂದಿತ್ತನಘಟಿತವರಂಗಳಂ ತಾನೀಗ ಸೂತನಾಗಿ
ಇಂ ಚಮ್ಮಟಿಗೆವಿಡಿಯಲೇನಹುದಿದೆಲ್ಲಾ ಪ್ರ
ಪಂಚೆನಲ್ ಸುರಭಟರ ನುಡಿಗೇಳಿ ರೋಷದಿಂ
ಪಂಚಾನನನಕುಮಾರಂ ವೀರಭದ್ರನಾಹವಕೆ ನಡೆತರುತಿರ್ದನು ೩೬

ರಾಕ್ಷಸನ ಕ್ರೂರಾಂಧಕಾರಸೂರಂ ಲಲಾ
ಟೇಕ್ಷಣನ ಪ್ರೇಮದ ಕುಮಾರವೀರಂ ಶಿಷ್ಟ
ರಕ್ಷಾಕರಂ ದುಷ್ಟಶಿಕ್ಷಾಕರಂ ಶೈವಭಕ್ತಿಸಾರಂ ಧೀರನು
ಅಕ್ಷಯಾಕಾರಂ ಗಭೀರಂ ಸಮಸ್ತಸುರ
ಯಕ್ಷವಂದಿತಪದದ್ವಂದ್ವಂ ರಣೋದ್ಧತಂ
ದಕ್ಷಾಧ್ವರಧ್ವಂಸಿಯಿದೆ ಬಂದನೆಂದು ವಂದಿವ್ರಜಂ ಘೋಷಿಸಿದುದು ೩೭

ಆಯುಧಗಳಿಂದ ದೇವಸೈನ್ಯವನ್ನು ಹೊಕ್ಕು ರಾಕ್ಷಸರು ನಾಶ ಮಾಡಿದರು. ೩೫. ಮುನ್ನುಗ್ಗಿ ಮೊದಲು ದೇವಸಮೂಹವನ್ನು ರಾಕ್ಷಸರು ಕತ್ತರಿಸಿ ಉರುಳಿಸುತ್ತಿದ್ದರು. ಅವರು ಕಂಗೆಟ್ಟು ದೇವೇಂದ್ರನನ್ನು ಜರಿಯುತ್ತ ಓಡಿದರು. ನಮ್ಮ ಕುತ್ತಿಗೆಯನ್ನು ಈ ಪಾಪಿ ಕೊಯ್ದ. ಹಿಮಾಲಯದ ತಪ್ಪಲಲ್ಲಿ ತಲೆಮರೆಸಿಕೊಂಡಿದ್ದ ನಮ್ಮನ್ನು ಈಶ್ವರನು ರಕ್ಷಿಸುತ್ತಾನೆ ಎಂದು ನಮ್ಮನ್ನು ಯುದ್ಧರಂಗಕ್ಕೆ ಕರೆತಂದ. ನಮ್ಮ ಕೇಡನ್ನು ಈ ಹರನು ಅದೇನು ಪರಿಹರಿಸುತ್ತಾನೆ ಎಂದು ದೇವಸಮೂಹ ಮೊರೆಯಿಟ್ಟಿತು. ೩೬. ನಮ್ಮನ್ನು ಮೋಸಮಾಡಿ ನಾಶಮಾಡಿದ. ದುಷ್ಟ ಬ್ರಹ್ಮ ಪಾಪಿಯಲ್ಲವೆ ? ರಾಕ್ಷಸರು ತನ್ನನ್ನು ಕುರಿತು ಬೇಡಿದರೆಂದು ತಾನು ತಕ್ಷಣ ಅಸಾಧ್ಯವಾದ ವರಗಳನ್ನು ಕೊಟ್ಟನು. ಈಗ ಸಾರಥಿಯಾಗಿ ಇನ್ನು ಚಾವಟಿಯನ್ನು ಹಿಡಿದರೆ ಏನಾಗುತ್ತದೆ ? ಇದೇ ಪ್ರಪಂಚ ಎನ್ನಲು ದೇವಸೈನಿಕರ ಮಾತನ್ನು ಕೇಳಿ ರೋಷದಿಂದ ಶಿವನ ಮಗನಾದ ವೀರಭದ್ರನು ಯುದ್ಧಕ್ಕೆ ಬರುತ್ತಿದ್ದನು. ೩೭. ರಾಕ್ಷಸನ ಕ್ರೂರವಾದ ಕತ್ತಲೆಗೆ ಸೂರ್ಯ, ಮುಕ್ಕಣ್ಣನ ಪ್ರೇಮದ ವೀರಪುತ್ರ, ಸಜ್ಜನರಕ್ಷಕ, ದುಷ್ಟಶಿಕ್ಷಕ, ಶೈವಭಕ್ತಿಯ ಸಾರ, ಧೀರ, ಅಕ್ಷಯಾಕಾರ, ಗಂಭೀರ, ಎಲ್ಲ ದೇವಯಕ್ಷರಿಂದ ನಮಸ್ಕರಿಸಿಕೊಳ್ಳುವ ಪಾದಗಳನ್ನು ಉಳ್ಳವ, ಯುದ್ಧೋತ್ಸಾಹಿ, ದಕ್ಷನ ಯಾಗವನ್ನು ನಾಶಮಾಡಿದವ ಇದೋ ಬಂದನು ಎಂದು ವಂದಿಮಾಗಧರ ಸಮೂಹ

CC-0. Jangamwadi Math Collection. Digitized by eGangotri

ಏನೆಂಬೆನತುಳಸಂತೋಷಮುಂ ರೋಷಮುಂ
ಬಾನೆಡೆಗೆ ನೆಗೆವ ಬೊಬ್ಬಾಟಮುಂ ಥಾಟಮುಂ
ನೂನಮಿಲ್ಲದೆ ಪೊಲ್ವ ಭಾವಮುಂ ಹೇವಮುಂ ನಗೆಯುಮಳ್ಕುವ ಬಗೆಯುಮುಂ
ಸಾನುರಾಗದೊಳೊಗೆವ ವೀರವುಂ ಘೋರವುಂ
ಮಾನಸಕೆ ಮುಂಚಿರಿವ ಹಸ್ತಮುಂ ವ್ಯಸ್ತಮುಂ
ನಾನಾಸ್ತ್ರಸಂತತಿಯ ಘಾತಿಯುಂ ಖಾತಿಯುಂ ದೇವಾಸುರರೊಳೆಸೆದುದು ೩೮

ಈ ಪರಿಯೊಳಮರಾಸುರವ್ರಜದ ಹರುಷಸಂ
ತಾಪಮಂ ನೋಡುತೆ ವಿರೋಧಿ ಸೇನಾಭೀಮ
ರೂಪಂ ಜಿತಾನೇಕಪಾಪಂ ಮಹಾಸುಪ್ರತಾಪಂ ಜಯಶ್ರೀಪನು
ಕೋಪಮಾನಸನಮರಕುಲನುತಂ ಘನರಣಾ
ಟೋಪನುನ್ನತ ಫಲಕಹಸ್ತಂ ಸಮಸ್ತರಿಪು
ತಾಪಕರಕರಖಡ್ಗರೌದ್ರನಾ ವೀರಭದ್ರಂ ಪೊಕ್ಕನಾಹವವನು ೩೯

ತೆಗೆತೆಗೆಸು ದೊಡ್ಡಿಗರನಸುರಸುಭಟಾಳಿಯೊಳ್
ವಿಗಡರುಳ್ಳೊಡೆ ಬರಲಿ ತದ್ಬಲದೊಳತುಳಸಂ
ಯುಗಸಮರ್ಥರ್ಗೆ ಕಟ್ಟಿದ ಬಿರುದು ತಡೆಯಲಾವವನಾದೊಡಂ ತನ್ನನು
ಬಗಿಬಗಿದು ಕುಕ್ಷಿಗಳನುಗಿದುಗಿದು ಕರುಳ್ಗಳಂ
ತೆಗೆತೆಗೆದು ರಕ್ತಮಂ ಮೊಗೆಮೊಗೆದು ಭೂತಗಣ
ಕಗಲದಗಲಿಕ್ಕಿಸುವೆನೆಂದಸುರಸೇನೆ ಸುಗಿಸುಗಿದೋಡುವೋಲ್ ಕಡಿದನು ೪೦

ಉಗ್ಘಡಿಸಿತು. ೩೮. ಏನೆಂದು ಹೇಳಲಿ ? ದೇವದಾನವರಲ್ಲಿ ಅತಿಯಾದ ಸಂತೋಷವೂ ರೋಷವೂ ; ಆಕಾಶಕ್ಕೆ ನೆಗೆಯುವ ಆರ್ಭಟವೂ, ರಭಸವೂ ; ಕೊರತೆಯಿಲ್ಲದೆ ಹೋಲುವ ಭಾವವೂ, ದುಃಖವೂ ; ನಗುವೂ, ಅಳುಕುವ ರೀತಿಯೂ ; ಅನುರಾಗದಿಂದ ಹುಟ್ಟುವ ವೀರವೂ, ಘೋರವೂ, ಮನಸ್ಸಿಗೆ ಮುಂಚೆ ಇರಿಯುವ ಕೈ, ಅಸ್ತವ್ಯಸ್ತತೆ, ನಾನಾ ಶಸ್ತ್ರಸಮೂಹದ ಹೊಡೆತ, ಕೋಪವೂ ಕ್ರಮವಾಗಿ ಉಂಟಾಯಿತು. ೩೯. ಈ ರೀತಿಯಲ್ಲಿ ದೇವ-ದಾನವರ ಸಮೂಹದ ಸಂತೋಷ ದುಃಖವನ್ನು ನೋಡುತ್ತ ಶತ್ರು ಸೈನ್ಯಕ್ಕೆ ಭಯಂಕರನೂ, ಅನೇಕ ಪಾಪಗಳನ್ನು ಜಯಿಸಿದವನೂ, ಮಹಾಪ್ರತಾಪನೂ, ಜಯಶ್ರೀಪತಿಯೂ, ಕೋಪಗೊಂಡವನೂ, ದೇವಕುಲದಿಂದ ಸ್ತೋತ್ರಮಾಡಿಸಿ ಕೊಳ್ಳುವವನೂ, ಘನರಣಾಟೋಪನೂ, ದೊಡ್ಡ ಗುರಾಣಿಯನ್ನು ಕೈಯಲ್ಲಿ ಹಿಡಿದವನೂ, ಎಲ್ಲ ಶತ್ರುಗಳಿಗೂ ತಾಪವನ್ನುಂಟುಮಾಡುವ ಕತ್ತಿಯನ್ನು ಕೈಯಲ್ಲಿ ಧರಿಸಿದವನೂ, ಭಯಂಕರನೂ ಆದ ವೀರಭದ್ರನು ಯುದ್ಧರಂಗವನ್ನು ಹೊಕ್ಕನು. ೪೦. ಜನರ ಗುಂಪನ್ನು ದಾರಿಬಿಡಿಸು. ರಾಕ್ಷಸರ ಸೈನ್ಯಸಮೂಹದಲ್ಲಿ ಪರಾಕ್ರಮಿಗಳಿದ್ದರೆ ಬರಲಿ. ಆ ಬಲದಲ್ಲಿ ಅತಿಯಾದ ಯುದ್ಧವೀರರಿಗೆ ಕಟ್ಟಿದ್ದ ಬಿರುದನ್ನುಳ್ಳ ಯಾವನಾದರೂ ನನ್ನನ್ನು ತಡೆಯಲಿ. ಬಿಗಿ ಬಿಗಿದು, ಹೊಟ್ಟೆಗಳನ್ನು ಕಿತ್ತು ಕಿತ್ತು, ಕರುಳುಗಳನ್ನು ತೆಗೆ ತೆಗೆದು, ರಕ್ತವನ್ನು ತುಂಬಿ ತುಂಬಿ, ಭೂತಗಣಗಳಿಗೆ ಭಾರಿ ಊಟ

CC-0. Jangamwadi Math Collection. Digitized by eGangotri

ಕಡಿದನಿರಿದಂ ತರಿದನುರುಬಿಘಾತಿಸಿದನಿರ
ದಡಸಿ ಮೆಟ್ಟಿದನಟ್ಟಿ ಬಡಿದನೊದಗಿಂ ಪೊಡೆದ
ನೊಡನೊಡನೆ ಗಜವಾಜಿನಿಕರಮಂ ಸವರಿದಂ ಪ್ರಳಯಸಮವರ್ತಿಯಂತೆ
ಕಡಲಮಧ್ಯದ ವಡಬಶಿಖಿಗೆ ಘನಘೋರವಾ
ದಡವಿಯೊಳಗೊಗೆದ ದಾವಾಗ್ನಿಗಂ ದಕ್ಷಾರಿ
ಪಿಡಿದ ಖಡ್ಗಕೆ ನಿಮಿಷಮುಂಟೆ ನಿಲ್ಕಡೆಯೆನಲ್ ಸವರಿದಂ ಪರಬಲವನು ೪೧

ಉದ್ರೇಕದಿಂದೆಮ್ಮ ಸೇನೆಯ ಭಟಾಳಿಯಂ
ಛಿದ್ರಿಸುತೆ ಮುಂಬರಿದು ಬರ್ಪ ವೀರಂ ವೀರ
ಭದ್ರನೋ ಸಂವರ್ತಕಾಲದೊಳ್ ಸಕಲ ಲೋಕಂಗಳಂ ಸಂಹರಿಸುವ
ರುದ್ರನೋ ಭಟನದಟನಹುದೆನುತೆ ದೈತ್ಯರುರೆ
ಭದ್ರಗಜಘಟೆಯಶ್ವಗಳ ಪದ್ಮಪದ್ಮದಿಂ
ಮುದ್ರಿಸುವೆವಿವನ ವೀರವನೆನುತೆ ಕವಿಸಿದರ್ ತವಿಸಿದರ್ ಸುರರದಟನು ೪೨

ಖನನಖಾಗ್ರೋದ್ಭಿನ್ನ ದಂತಿಮಸ್ತಕಸಿಂಹ
ಕೆನಿತಾದೊಡೇಂ ಗಜಂ ಕೊಲ್ಲದೇ ದಕ್ಷರಿಪು
ಗನುಪಮಹಯದ್ವಿರದತತಿಯೇಸು ಘನವೈದಿದಾಕ್ಷಣಂ ಸದೆಬಡಿದನು

ವನ್ನು ಮಾಡಿಸುತ್ತೇನೆ ಎಂದು ರಾಕ್ಷಸರ ಸೈನ್ಯವು ಹೆದರಿ ಹೆದರಿ ಓಡುವಂತೆ ಕತ್ತರಿಸಿದನು. ೪೧. ಪ್ರಳಯಸದೃಶನಾಗಿ ಕಡಿದನು, ಇರಿದನು, ತರಿದನು, ಮುನ್ನುಗ್ಗಿ ಹೊಡೆದನು, ಇರದೆ ಆಕ್ರಮಿಸಿ ತುಳಿದನು. ಅಟ್ಟಿಸಿಕೊಂಡು ಹೋಗಿ ಬಡಿದನು, ಹೆಚ್ಚಾಗಿ ಹೊಡೆದ. ಜೊತೆ ಜೊತೆಯಲ್ಲಿಯೇ ಆನೆ–ಕುದುರೆಗಳ ಸಮೂಹವನ್ನು ಸವರಿದನು. ಸಮುದ್ರ ಮಧ್ಯದ ಬಡಬಾಗ್ನಿಗೆ, ಘನಘೋರವಾದ ಕಾಡಿನ ಮಧ್ಯದಲ್ಲಿ ಎದ್ದ ಕಾಳ್ಗಿಚ್ಚಿಗೆ, ದಕ್ಷನ ಶತ್ರುವಾದ ವೀರಭದ್ರನು ಹಿಡಿದ ಖಡ್ಗಕ್ಕೆ ನಿಮಿಷವಾದರೂ ತಡೆಯುಂಟೆ ಎನ್ನುವಂತೆ ಶತ್ರುಸೈನ್ಯವನ್ನು ನಾಶಮಾಡಿದನು. ೪೨. ಉದ್ರೇಕದಿಂದ ನಮ್ಮ ಸೈನ್ಯದ ಭಟರ ಸಮೂಹವನ್ನು ಕತ್ತರಿಸುತ್ತ ಮುಂದುವರಿದು ಬರುವ ಶೂರನು ವೀರಭದ್ರನೋ ಅಥವಾ ಪ್ರಳಯಕಾಲದಲ್ಲಿ ಎಲ್ಲ ಲೋಕಗಳನ್ನೂ ನಾಶಮಾಡುವ ಶಿವನೋ ? ಅಹುದು, ಅಹುದು ಭಟನು ಶೂರನೇ ಸರಿ ಎನ್ನುತ್ತ ರಾಕ್ಷಸರು ಬಹಳವಾಗಿ ಅನೇಕ ಪದ್ಮಗಳಷ್ಟು ಮದದಾನೆಗಳ, ಕುದುರೆಗಳ, ಸೈನ್ಯದಿಂದ ಇವನ ಪರಾಕ್ರಮವನ್ನು ತಡೆಯುತ್ತೇವೆ ಎನ್ನುತ್ತ ಅವನನ್ನು ಸುತ್ತುವರಿದರು. ದೇವತೆಗಳ ಪರಾಕ್ರಮವನ್ನು ಕುಂದಿಸಿದರು. ೪೩. ಭಯಂಕರವಾದ ಉಗುರು, ಉದ್ದವಾದ ಕೋರೆಹಲ್ಲು, ತಲೆಗಳನ್ನುಳ್ಳ ಸಿಂಹಕ್ಕೆ ಎಷ್ಟು ಆನೆಗಳಾದರೇನು, ಕೊಲ್ಲದಿರುತ್ತದೆಯೇ ? ವೀರಭದ್ರನಿಗೆ ಅಸಂಖ್ಯಾತ ಕುದುರೆ ಆನೆಗಳ ಸಮೂಹ ಯಾವ ಲೆಕ್ಕ ? ಬಂದಕೂಡಲೇ

CC-0. Jangamwadi Math Collection. Digitized by eGangotri

ತನತನಗೆ ಕವಿವಸುರ ಸಮಿತಿಯುಂ ಶಾಕಿನೀ
ಜನಕೆ ತರಿದೊಟ್ಟಿದಂ ಕುಟ್ಟಿದಂ ಸುಳಿದ ಖಳ
ಜನಪರಂ ನೆರೆದ ದೇವಾಸುರರ್ ಕೊಂಡಾಡೆ ಮೂದೇವರುಂ ತುತಿಸಲು ೪೩

ಕಡಿದ ತಲೆಯೊಳ್ಗಳಿಂ ತೋಳ್ಗಳಿಂ ಬಾಳ್ಗಳಿಂ
ದಡೆಗೆಡೆದ ರುಂಡದಿಂ ಮುಂಡದಿಂ ಖಂಡದಿಂ
ದಿಡಿದ ಕರಜಾತದಿಂ ಭೂತದಿಂ ಪ್ರೇತದಿಂ ಪುದಿದ ಶಾಕಿನಿಯರಿಂದೆ
ಉಡಿದ ಗಜರಾಜಿಯಿಂ ವಾಜಿಯಿಂ ತೇಜಿಯಿಂ
ದೆಡೆವಿಡದ ಘೂಕದಿಂ ಕಾಕದಿಂ ಶೋಕದಿಂ
ಸಡಿಲ್ವ ರಣಚಾರರಿಂ ವೀರರಿಂ ಧೀರರಿಂದಾ ರಣಾಂಕಣಮೆಸೆದುದು ೪೪

ಕಂಡನಾ ಕಮಲಾಂಬಕಂ ರಣಾಂಕಣದೊಳಗೆ
ತುಂಡುತುಂಡಾದ ಗಜರಾಜಿಯುಂ ವಾಜಿಯುಂ
ದಿಂಡುರುಳ್ವ ದೈತ್ಯಭಟಕಾಯಮುಂ ತಾಂ ಯಮಾಕೃತಿಯೊಳತಿರೌದ್ರಮಾಗಿ
ಗಂಡುಜೋಹದ ಸೂಳೆಯರ್ ದೇವರವರೊಳು
ದ್ದಂಡಭಟ ನೀನಹುದೆಲಾ ಕಾಣ್ಬೆವೆನುತೆ ಕೈ
ಕೊಂಡಂ ಮಹಾಸಂಗರಮನಸ್ತ್ರತತಿ ವೀರಭದ್ರನಂ ಮುಸುಕುತಿರಲು ೪೫

ಅವನನ್ನು ಸಂಹರಿಸಿದನು. ತಮ್ಮಿಷ್ಟಕ್ಕೆ ತಾವು ಮುತ್ತುವ ರಾಕ್ಷಸಸಮೂಹವನ್ನು ಶಾಕಿನೀಕುಲಕ್ಕೆ ತರಿದು ಗುಡ್ಡೆ ಹಾಕಿದನು. ನೆರೆದಿದ್ದ ದೇವದಾನವರು ಕೊಂಡಾಡಲು ಮೂರು ದೇವರುಗಳು ಸ್ತುತಿಸಲು ಹತ್ತಿರಕ್ಕೆ ಬಂದ ರಾಕ್ಷಸನಾಯಕರನ್ನು ಕುಟ್ಟಿದನು. ೪೪. ಕಡಿದುಹೋದ ತಲೆಚಿಪ್ಪು, ತೋಳುಗಳು, ಕತ್ತಿಗಳಿಂದ ನೆಲಕ್ಕೆ ಕಡಿದುಬಿದ್ದಿದ್ದ ತಲೆ, ಶರೀರ, ಮಾಂಸಖಂಡಗಳಿಂದ ಸಮೃದ್ಧಿಯಾದ ಉಗುರಿನಿಂದ, ಭೂತದಿಂದ, ಪ್ರೇತದಿಂದ, ತುಂಬಿದ್ದ ಶಾಕಿನಿಯರಿಂದ, ಸತ್ತು ಬಿದ್ದಿದ್ದ ಆನೆಗಳ ಸಮೂಹ, ಕುದುರೆ, ರಥಗಳಿಂದ ಎಡಬಿಡದೆ ತುಂಬಿದ್ದ ಗೂಬೆ ಕಾಗೆಗಳಿಂದ, ದುಃಖದಿಂದ ಕಳಚಿಕೊಂಡು ಹೋಗುವ ಸೈನಿಕರಿಂದ, ವೀರರಿಂದ, ಧೀರರಿಂದ ಆ ರಣರಂಗ ಪ್ರಕಾಶಿಸಿತು. ೪೫. ರಣ ರಂಗದಲ್ಲಿ ತುಂಡು ತುಂಡಾದ ಆನೆಗಳ ಸಮೂಹವನ್ನು, ಕುದುರೆಗಳನ್ನು, ಕಡಿದುರುಳುವ ರಾಕ್ಷಸಭಟರ ಶರೀರವನ್ನು ಆ ಕಮಲಾಕ್ಷನು ನೋಡಿದನು. ಅವನು ಭಯಂಕರಾಕಾರ ನಾಗಿ ಅತಿಯಾಗಿ ಕೋಪಗೊಂಡು ದೇವತೆಗಳು ಗಂಡುವೇಷದ ಸೂಳೆಯರು, ಅವರಲ್ಲಿ ಪರಾಕ್ರಮಿಯಾದ ಸೈನಿಕ ನೀನು ಅಲ್ಲವೇ ? ನಿನ್ನ ಪರಾಕ್ರಮವನ್ನು ನೋಡುತ್ತೇನೆ ಎನ್ನುತ್ತ ಬಾಣಗಳ ಸಮೂಹ ವೀರಭದ್ರನನ್ನು ಕವಿಯುತ್ತಿರಲು ಘೋರ ಯುದ್ಧ

CC-0. Jangamwadi Math Collection. Digitized by eGangotri

ಆಲಿಸೆಲವೆಲವೊ ಮತ್ಪುರವುದೇಂ ದಕ್ಷಮುಖ
ಶಾಲೆಯೋ ನಿನ್ನ ಸಾಮರ್ಥ್ಯಕೆಮ್ಮಯ ರಣಂ
ಮೇಳವಿದೆ ಕೊಳ್ಳೆಂದೊಡೆನುತೆ ಮೂವತ್ತೆಂಟುಬಾಣದಿಂ ಖಳನೆಸೆಯಲು
ಕಾಲಾಂತಕೋಪಮಂ ವೀರಭದ್ರಂ ಬರ್ಪ
ಕೋಲ ಕೋಲಾಹಲಮನಾ ಕ್ಷಣಂ ಕಡಿದು ದನು
ಜಾಳಿಯೆರ್ದೆ ಜರ್ಜರಿತವಾಗೆ ಕೋದಂಡವಂ ಜೇವಡೆದು ಬೊಬ್ಬಿರಿದನು ೪೬

ಈರವಂ ಪ್ರಳಯಭೈರವನ ಕರಕಲಿತ ಢ
ಕ್ಕಾರವಂ ಪುಸಿಯಲ್ಲ ಮಾರಾಂತ ದನುಜರ ವಿ
ಕಾರವಂ ಮುರಿದುದಿನ್ನೀತನೆಚ್ಚಂಬುಗಳ್ಗಾವುದಾಹಾರವೆನುತೆ
ವೀರವಂ ನೋಟಕರ್ ಪೊಗಳೆ ಪಗೆವನ ಸರಳ
ಸಾರವಂ ಕಡಿವುತ್ತೆ ವೈರಿಮದಹಸ್ತಿಕಂ
ಠೀರವಂ ಸರಳೊಳಿದಿರೊಳ್ ಕೂಗಿ ಬೊಬ್ಬಿಡುವ ದೈತ್ಯನಂ ಘಾತಿಸಿದನು ೪೭

ಹೋಮಮಂ ಕೆಡಿಸಿ ಪಾರ್ವನ ತಲೆಯನಿರದರಿದ
ಸಾಮರ್ಥ್ಯಮೇಯೆಮ್ಮ ಕೂಡೆ ನೋಡೆನುತೆ ನಿ
ಸ್ಸೀಮ ಬಾಣಂಗಳಿಂ ಕೆಡೆಯೆನುತ್ತಾರ್ದೆಸಲ್ ವೀರಭದ್ರಂ ಕಾಣುತೆ
ಆ ಮಹಾಬಾಣಮಂ ಪ್ರತ್ಯಸ್ತ್ರದಿಂ ಕಡಿಯೆ
ಭೀಮರೂಪಾಗುತೆಲವೋ ನಿನ್ನನೀಗ ನಿ
ರ್ಧೂಮಮಂ ಮಾಡುವೆಂ ನೋಡೆನುತೆ ಖಳನೊಂದು ಶಕ್ತಿಯಂ ಬರಸೆಳೆದನು ೪೮

ವನ್ನು ಕೈಗೊಂಡನು. ೪೬. ಎಲೆಲೊ, ಕೇಳು, ನಮ್ಮ ಪುರವೇನು ದಕ್ಷನ ಯಜ್ಞ ಮಂಟಪವೇ ? ನಿನ್ನ ಸಾಮರ್ಥ್ಯಕ್ಕೆ ನಮ್ಮೊಡನೆ ಯುದ್ಧ ಸರಿಜೋಡಿಯೆ ? ಹಾಗಾದರೆ ಇದನ್ನು ತೆಗೆದುಕೋ ಎನ್ನುತ್ತ ರಾಕ್ಷಸನು ಮೂವತ್ತೆಂಟು ಬಾಣದಿಂದ ಹೊಡೆಯಲು, ಪ್ರಳಯಸದೃಶನಾದ ವೀರಭದ್ರನು ತನ್ನ ಕಡೆ ಬರುತ್ತಿದ್ದ ಬಾಣದ ಕೋಲಾಹಲವನ್ನು ಆಕ್ಷಣ ಕಡಿದುಹಾಕಿ ರಾಕ್ಷಸಸಮೂಹದ ಎದೆ ಜರ್ಜರಿತವಾಗುವಂತೆ ಬಿಲ್ಲನ್ನು ನೀವಿ ಠೇಂಕಾರ ಮಾಡಿ ಅಬ್ಬರಿಸಿದನು. ೪೭. ಈ ಶಬ್ದ ನಿಜವಾಗಿಯೂ ಕಾಲಭೈರವನ ಕೈಯಲ್ಲಿರುವ ಡಮರುಗದ ಶಬ್ದವಲ್ಲದೆ ಬೇರೆಯಲ್ಲ. ಎದುರಿಸಿದ ರಾಕ್ಷಸರ ಮದ ಮುರಿಯಿತು. ಇನ್ನು ಈತನು ಬಿಟ್ಟ ಬಾಣಗಳಿಗೆ ಆಹಾರ ಯಾವುದು ? ಎನ್ನುತ್ತ ಅವನ ಪರಾಕ್ರಮವನ್ನು ನೋಟಕರು ಹೊಗಳಲು ಶತ್ರುವಿನ ಬಾಣಸಮೂಹ ಗಳನ್ನು ಕತ್ತರಿಸುತ್ತ, ಎದುರಿನಲ್ಲಿ ಕೂಗಿ ಆರ್ಭಟಿಸುವ ರಾಕ್ಷಸನನ್ನು ಶತ್ರುವೆಂಬ ಮದ ಗಜಕ್ಕೆ ಸಿಂಹಸಮಾನನಾದ ವೀರಭದ್ರನು ಬಾಣದಿಂದ ಹೊಡೆದನು. ೪೮. ಹೋಮ ವನ್ನು ಕೆಡಿಸಿ, ಬ್ರಾಹ್ಮಣನ ತಲೆಯನ್ನು ತಡೆಯದೆ ಕಡಿದ ಸಾಮರ್ಥ್ಯ ನಮ್ಮ ಮೇಲೆ ತೋರಿಸುತ್ತೀಯ ? ನೋಡು, ಅಸಮಾನ ಬಾಣಗಳಿಂದ ಬೀಳು ಎನ್ನುತ್ತ ಅಬ್ಬರಿಸಿ ರಾಕ್ಷಸನು ಹೊಡೆಯಲು, ಅದನ್ನು ನೋಡಿ ವೀರಭದ್ರನು ಆ ಮಹಾಬಾಣವನ್ನು ಪ್ರತಿ ಬಾಣದಿಂದ ಕಡಿದನು. ಆಗ ಕಮಲಾಕ್ಷನು ಭಯಂಕರ ರೂಪತಾಳುತ್ತ, ಎಲವೊ,

CC-0. Jangamwadi Math Collection. Digitized by eGangotri

ಆರ್ಭಟಿಸಿ ಶಕ್ತಿಯುಣವಂ ಪಿಡಿಯೆ ಬ್ರಹ್ಮಾಂಡ
ಗರ್ಭಮದಿರಿದುದು ತಜ್ಜ್ವಾಲೆಯೊಡನೊಡನೆಯಾ
ವಿರ್ಭಾವವಮಾದುದಾ ಶಕ್ತಿಯಿಂ ಬಿಡದೊಗೆವ ಬಹಳ ಶಿಖಿಕಣಗಣಾಳಿ
ನಿರ್ಭರದೊಳುಬ್ಬಿಯೊಬ್ಬುಳಿಯಾಗಿ ಪಂಕೇಜ
ಗರ್ಭರಚಿತೋಪರಿ ಜಗದ್ಭಾಂಡವಿತತಿಗಾ
ವಿರ್ಭವಿಸುವಾಪ್ಪುಗೆಯು ಕಿಚ್ಚಾದುದೇನೆಂಬೆನದರ ಬಲುಭೀಕರವನು ೪೯

ಕಾಯದೆಲವೋ ನಿನ್ನನಿದು ಬಿಡಿಸಿಕೊಂಬೊಡಾ
ಕಾಯಜಾರಾತಿಯುಂ ಕರೆದುಕೋ ಬೇಗ ತವ
ಕಾಯಕತಿರಕ್ಷೆಯುಂ ಬಲಿ ವ್ಯಥಾ ಬೊಬ್ಬಾಟವುಂ ಮಾಡುತೆನ್ನಕೂಡೆ
ಕಾಯಲೇಂ ಫಲವೆನುತ್ತಸುರನಿಡೆ ಸಂಗರ
ಕ್ಕಾಯತದೊಳಲ್ಲಲ್ಲಿ ನಿಂದಿರ್ದ ನಿರ್ಜರನಿ
ಕಾಯಮುಂ ಪೆರ್ಗಿಡಿಯ ಗಡಣದಿಂ ಚುಂಬಿಸುತೆ ಶಕ್ತಿಯೈತರುತಿರ್ದುದು ೫೦

ಪೆರ್ಗಿಡಿಯ ಗಡಣದಿಂದೈತರ್ಪ ಶಕ್ತಿಯುಂ
ಕೊರ್ಗಣೆಗಳೈದರಿಂದೆಚ್ಚು ಭಟನದ ನುಚ್ಚು
ನೂರ್ಗಳಾಗಲ್ ಕಡಿದು ಮತ್ತೊಂದು ಬಾಣದಿಂ ವೀರನಿರದಾರ್ದೆಸೆಯಲು
ಭೋರ್ಗರೆವುತಾ ಬಾಣಮಸುರನ ಕಳೇವರವ
ನೇರ್ಗಾಣಿಸುತ್ತೆತ್ತಿ ಕೊಂಡಂಬರವನು ಕೆ
ನ್ನೀರ್ಗಳಿಂ ನನೆಯಿಸುತ್ತಾ ಪುರದೊಳಿಹ ತಾರಕಾಕ್ಷನಿದಿರೊಳ್ ಬಿಸುಟುದು ೫೧

ನಿನ್ನನ್ನೀಗ ಬೂದಿಯೂ ಕೂಡ ಇಲ್ಲದಂತೆ ಮಾಡುತ್ತೇನೆ, ನೋಡು, ಎನ್ನುತ್ತ ಶಕ್ತ್ಯಾಯುಧವೊಂದನ್ನು ಸೆಳೆದುಕೊಂಡನು. ೪೯. ಅವನು ಆರ್ಭಟಿಸಿ ಶಕ್ತ್ಯಾಯುಧವನ್ನು ಹಿಡಿಯಲು ಬ್ರಹ್ಮಾಂಡದ ಬಸಿರು ಆದುರಿತು. ಆ ಶಕ್ತಿಯೊಡನೆ ಜ್ವಾಲೆ ಜೊತೆ ಜೊತೆಯಲ್ಲಿಯೇ ಹುಟ್ಟಿತು. ತಡೆಯದೆ ಹೊಮ್ಮುವ ಬೆಂಕಿಯ ಕಿಡಿಗಳ ಸಮೂಹ ಭರದಿಂದ ಹೆಚ್ಚಿ ಗುಂಪುಗೂಡಿತು. ಬ್ರಹ್ಮನಿಂದ ರಚಿತವಾದ ಮೇಲಿನ ಎಲ್ಲ ಭವಾಂಡಗಳ ಸಮೂಹಕ್ಕೆ ಹುಟ್ಟುತ್ತಿದ್ದ ಅವುಗೆಯ ಬೆಂಕಿಯಾಯಿತು. ಅದರ ಬಹು ಭೀಕರತೆಯನ್ನು ಏನೆನ್ನಲಿ ? ೫೦. ಎಲವೊ ನಿನ್ನನ್ನು ಇದು ರಕ್ಷಿಸುವುದಿಲ್ಲ. ಬಿಡಿಸಿಕೊಳ್ಳುವುದಾದರೆ ಬೇಗನೆ ಆ ಪರಶಿವನನ್ನು ಕರೆ. ನಿನ್ನ ಶರೀರಕ್ಕೆ ಬಹಳ ರಕ್ಷಣೆಯನ್ನು ರಚಿಸು. ವ್ಯರ್ಥವಾಗಿ ಆರ್ಭಟಿಸುತ್ತ ನನ್ನ ಜೊತೆಯಲ್ಲಿ ಯುದ್ಧಮಾಡಲು ಏನು ಫಲ ? ಎನ್ನುತ್ತ ರಾಕ್ಷಸನು ಆ ಆಯುಧವನ್ನು ಪ್ರಯೋಗಿಸಲು ಯುದ್ಧ ಮಾಡುವುದಕ್ಕಾಗಿ ಸಿದ್ಧವಾಗಿ ನಿಂತಿದ್ದ ದೇವತೆಗಳ ಸಮೂಹವನ್ನು ದೊಡ್ಡ ಕಿಡಿಯ ಸಮೂಹದಿಂದ ತಾಗುತ್ತ ಶಕ್ತ್ಯಾಯುಧವು ಬರುತ್ತಿದ್ದಿತು. ೫೧. ಭಾರಿಯಾದ ಕಿಡಿಗಳ ಸಮೂಹದಿಂದ ಬರುತ್ತಿದ್ದ ಶಕ್ತಿಯನ್ನು ಚೂಪಾದ ಐದು ಬಾಣಗಳಿಂದ ಹೊಡೆದು ಭಟನು (ವೀರಭದ್ರನು) ಅದನ್ನು ನುಚ್ಚುನೂರಾಗುವಂತೆ ಕಡಿದನು. ಆರ್ಭಟಿಸಿ ಮತ್ತೊಂದು ಬಾಣ

CC-0. Jangamwadi Math Collection. Digitized by eGangotri

ಕೇಳ್ದಿಲಾ ಸಿದ್ಧರಾಮೇಶ್ವರ ನಿಜಾನುಜಂ
ಬೀಳ್ದು ಮೂರ್ಛಿತನಾಗೆ ತಾರಕಾಕ್ಷಂ ತವೆ ಕೆ
ರಳ್ದು ಕೇಸರಿಯಂತೆ ಗುಡುಗುಡಿಸಲವರ ಮೈದುನನೆನಿಪ ಶಿಂಶುಮಾರಂ
ಏಳ್ದು ನಿಂದಿರ್ದು ಪ್ರಲಯದ ಸಿಡಲರವಮೆನಲ್
ಪೇಳ್ದನೇತಕೆ ಚಿಂತೆ ಸುರ ನರ ಭುಜಂಗಮರ
ಬಾಳ್ದಲೆಗಳಂ ತಂದು ಬಿಸುಡುವೆಂ ವೀಳೆಯವನೀಯೆನುತೆ ಗರ್ಜಿಸಿದನು ೫೨

ಕರ್ಕಶದ ಕಾಳೆಗದೊಳೆನಗೆ ಮಾರಾಂತ ದೇ
ವರ್ಕಳಂ ಸಂಹರಿಪೆನವರ ಪರಿಬಕೆ ಬಂದ
ಸೊರ್ಕಿದಜ ಹರಿಗಳಂ ಬಡಿವೆನಲ್ಲಹುದೆಂದು ಸಮರದೊಳ್ ಮಾರಾಂತೊಡೆ
ಅರ್ಕಚಂದ್ರಾಗ್ನಿಲೋಚನನನಳವಳಿಸುವೆಂ
ಬೀರ್ಕಾಳೆಗಕೆ ವೀಳೆಯವನೆನುತೆ ಕೋಪಸಂ
ಪರ್ಕಮಾನಸನಾಗಿ ಶಿಂಶುಮಾರಂ ತಾರಕಾಕ್ಷನಂ ಬೀಳ್ಕೊಂಡನು ೫೩

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ

ವನ್ನು ಬಿಡಲು ಅದು ಭೋರ್ಗರೆಯುತ್ತ ರಾಕ್ಷಸನ ಶರೀರವನ್ನು ಗಾಯಗೊಳಿಸುತ್ತ ಎತ್ತಿಕೊಂಡು ಆಕಾಶವನ್ನು ರಕ್ತದಿಂದ ನೆಗೆಸುತ್ತ ಪುರದಲ್ಲಿದ್ದ ತಾರಕಾಕ್ಷನ ಎದುರಿಗೆ ಎಸೆಯಿತು. ೫೨. ಕೇಳಿದೆಯೇನಯ್ಯ, ಸಿದ್ಧರಾಮ ? ತನ್ನ ತಮ್ಮನು ಬಿದ್ದು ಮೂರ್ಛೆ ಹೋಗಲು, ತಾರಕನು ಬಹು ಕೋಪಗೊಂಡು ಸಿಂಹದಂತೆ ಗುಡುಗುಡಿಸಲು ಅವರ ಮೈದುನನಾದ ಶಿಂಶುಮಾರನು ಎದ್ದುನಿಂತು ಪ್ರಳಯದ ಸಿಡಿಲಶಬ್ದವೆನ್ನುವಂತೆ ಹೇಳಿದನು—ಚಿಂತೆ ಏಕೆ ? ದೇವ ಮಾನವ ನಾಗರ ಜೀವಸಹಿತವಾದ ತಲೆಗಳನ್ನು ತಂದು ಬಿಸುಡುತ್ತೇನೆ, ನನಗೆ ರಣವೀಳಯವನ್ನು ಕೊಡು ಎನ್ನುತ್ತ ಗರ್ಜಿಸಿದನು. ೫೩. ಭೀಕರವಾದ ಯುದ್ಧದಲ್ಲಿ ನನಗೆ ಎದುರಾದ ದೇವತೆಗಳನ್ನು ಸಂಹರಿಸುತ್ತೇನೆ. ಅವರ ಸಹಾಯಕ್ಕೆ ಬಂದ ಸೊಕ್ಕಿದ ಬ್ರಹ್ಮ–ವಿಷ್ಣುಗಳನ್ನು ಬಡಿಯುತ್ತೇನೆ. ಅಲ್ಲ ಅಹುದೆಂದು ಯುದ್ಧದಲ್ಲಿ ಎದುರಿಸಿ ನಿಂತರೆ ಮುಕ್ಕಣ್ಣನನ್ನು ಶಕ್ತಿಹೀನನನ್ನಾಗಿ ಮಾಡುತ್ತೇನೆ. ಯುದ್ಧಕ್ಕೆ ವೀಳಯವನ್ನು ಕೊಡು ಎನ್ನುತ್ತ ಕೋಪದಿಂದ ಕೂಡಿದ ಮನಸ್ಸುಳ್ಳವನಾಗಿ ಶಿಂಶುಮಾರನು ತಾರಕಾಕ್ಷನಿಂದ ಅಪ್ಪಣೆ ಪಡೆದು ಹೊರಟನು. ೫೪. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿ ಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದ

CC-0. Jangamwadi Math Collection. Digitized by eGangotri

ಸಂತತಂ ಸಕಲಸುಖಿವಮಂ ಸಕಲಭೋಗವುನ
ನಂತಸೌಭಾಗ್ಯಮುಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ ೫೪

ನಲವತ್ತುಮೂರನೆಯ ಸಂಧಿ ಸಂಪೂರ್ಣ

ವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ. ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನು, ಎಲ್ಲ ಭೋಗಗಳನ್ನು, ಅನಂತ ಸೌಭಾಗ್ಯವನ್ನು ಕೊಟ್ಟು ಕಾಪಾಡುವನು.

ನಲವತ್ತುಮೂರನೆಯ ಸಂಧಿ ಮುಗಿಯಿತು

CC-0. Jangamwadi Math Collection. Digitized by eGangotri

ನಲವತ್ತನಾಲ್ಕನೆಯ ಸಂಧಿ

ಸೂಚನೆ : ವೀರನಂದೀಶನಾ ಶಿಂಶುಮಾರನ ಸೀಳೆ
ತಾರಕಾಕ್ಷಂ ಬರಲ್ ಬೆಂಬತ್ತೆ ಹರಗಣಂ
ಮಾರಾರಿ ಪಾಶುಪತಬಾಣದಿಂದೆಚ್ಚು ತ್ರಿಪುರಗಳಂ ಸುಟ್ಟುರುಪಿದಂ

ನಿರ್ಗತಾಖಿಳದುರಿತವರ್ಗ ಘನಪ್ರಮಥಸಂ
ಸರ್ಗ ಕೈಲಾಸಗಿರಿದುರ್ಗ ಸನ್ನುತಭಕ್ತಿ
ಮಾರ್ಗ ನತರಕ್ಷಾನಿಸರ್ಗ ನಿರ್ಮಲಿನಾಪವರ್ಗದಾಯಕ ಜಯಜಯ
ಭರ್ಗ ಭಾಳಾಂಬಕ ಸ್ವರ್ಗಪತಿನುತಪಾದ
ದುರ್ಗತಿವಿದೂರನೆ ನಿರರ್ಗಳ ಮಹಾಮಹಿಮ
ಸ್ವರ್ಗಮುಖಲೋಕರಕ್ಷಾದಕ್ಷ ದಕ್ಷಮುಖದುರ್ಘಟನೆ ಸಲಹೆಮ್ಮನು ೧

ಮತ್ತೆ ಕೇಳೈ ಸಿದ್ಧರಾಮ ಪುರದಿಂ ಮದೋ
ನ್ಮತ್ತಖಳ ಶಿಂಶುಮಾರಂ ರಣಾಟೋಪದಿಂ
ಮುತ್ತಿದ ಚತುರ್ಬಲದ ಗಡಣದಿಂ ಪೊರಮಟ್ಟನೇನೆಂಬೆನಚ್ಚರಿಯನು
ಪೊತ್ತ ತನುವಂ ಬಣ್ಣಿಸಲ್ಕಾಗದಾ ದೈತ್ಯ
ನುತ್ತಮಾಂಗಂ ಗಗನಮಂ ಚುಂಬಿಸಿತ್ತವನ
ಪೆತ್ತ ತಾಯಾವಳೋ ಶಿವಶಿವಾಯೆನುತೆ ಲೋಕದ ಜನಂ ಬೆರಗಾದುದು ೨

ಸೂಚನೆ : ವೀರನಾದ ನಂದಿಯು ಶಿಂಶುಮಾರನನ್ನು ಸೀಳಿಹಾಕಿದನು. ಆಗ ತಾರಕಾಕ್ಷನು ಯುದ್ಧಕ್ಕೆ ಬಂದನು. ಶಿವಗಣ ಹಿಂಬಾಲಿಸುತ್ತಿರಲು ಈಶ್ವರನು ಪಾಶುಪತಾಸ್ತ್ರವನ್ನು ಪ್ರಯೋಗಿಸಿ ತ್ರಿಪುರಗಳನ್ನು ಸುಟ್ಟು ಬೂದಿ ಮಾಡಿದನು. ೧. ಎಲ್ಲ ಪಾಪಗಳನ್ನು ನಾಶಮಾಡುವವನೂ, ಶ್ರೇಷ್ಠರಾದ ಪ್ರಮಥಗಣಗಳನ್ನು ಉಳ್ಳವನೂ, ಕೈಲಾಸವಾಸಿ,ಶ್ರೇಷ್ಠವಾದ ಭಕ್ತಿಮಾರ್ಗನು ನಮಸ್ಕರಿಸಿದವರನ್ನು ರಕ್ಷಿಸುವ ಗುಣವುಳ್ಳವ, ಪರಿಶುದ್ಧವಾದ ಮೋಕ್ಷದಾಯಿ ಜಯಜಯಭರ್ಗ, ಫಾಲಾಕ್ಷ, ದೇವೇಂದ್ರನಿಂದ ನಮಸ್ಕರಿಸಿಕೊಳ್ಳುವ ಪಾದವುಳ್ಳವನೂ, ದುರ್ಗತಿಯನ್ನು ದೂರ ಮಾಡುವವನೂ, ನಿರರ್ಗಳವಾದ ಮಹಾಮಹಿಮೆಯುಳ್ಳವನೂ, ಸ್ವರ್ಗವೇ ಮೊದಲಾದ ಲೋಕಗಳನ್ನು ರಕ್ಷಿಸುವುದರಲ್ಲಿ ದಕ್ಷನಾದವನೂ, ದಕ್ಷನ ಯಜ್ಞವನ್ನು ನಾಶಮಾಡಿದವನೂ ಆದ ಶಿವನೇ ನಮ್ಮನ್ನು ಕಾಪಾಡು. ೨. ಮತ್ತೆ ಕೇಳಯ್ಯ, ಸಿದ್ಧರಾಮಪುರದಿಂದ ಮದೋನ್ಮತ್ತನಾದ ಕ್ರೂರ ಶಿಂಶುಮಾರನು ರಣಾಟೋಪದಿಂದ ತನ್ನ ಸುತ್ತ ಮುತ್ತಿದ್ದ ಚತುರ್ಬಲಸಮೇತ ಹೊರಟನು. ಆ ಆಶ್ಚರ್ಯ ಏನು ಹೇಳಲಿ ? ಅವನ ಶರೀರವನ್ನು ಬಣ್ಣಿಸಲು ಸಾಧ್ಯವಿಲ್ಲ. ಅವನ ತಲೆ ಆಕಾಶವನ್ನು ಮುಟ್ಟುತ್ತಿತ್ತು. ಅವನನ್ನು ಹೆತ್ತವಳು, ಯಾವ

CC-0. Jangamwadi Math Collection. Digitized by eGangotri

ಅತಿದೀರ್ಘಮಾದೊಡೇನಾಯ್ತವನ ತನುಕೋಮ
ಲತೆಯೆ ಘನಪರ್ವತೋದ್ಯಚ್ಛೃಂಗಸಂದೋಹ
ಪ್ರತಿಮಾನಮವಯಮಂ ಶಾಂತನೇ ಸಕಲ ಲೋಕಂಗಳಂ ತಿಂಬೆನೆಂಬ
ಕೃತಕಚಿತ್ತಂ ಕಾಂತಿಪೂರನೇ ದೈತ್ಯನ
ಪ್ರತಿಮಾಂಧಕಾರರೂಪಂ ಸಮ್ಮುಖದೊಳಾಂತು
ಕೃತಯುದ್ಧಕುಶಲಮಂ ತೋರ್ಪ ಭಟನಾವನೋ ಹಾಯೆನುತೆ ಸುರರುಲಿವರು ೩

ಚೂಣಿಯೊಳ್ ಸಮ್ಮುಖದೊಳಾಂತ ಭಟವಿತತಿಯಂ
ಪಾಣಿತಳದಿಂದೆ ತೆಗೆತೆಗೆದಣಲೊಳಡಸುತೆ ವಿ
ಷಾಣದಿಂದೆಚ್ಚು ಬಿಸುಡುತೆ ಗಜಹಯಾಳಿಯಂ ಗಗನಾಂಗಣಂ ತುಂಬಲು
ಮಾಣದುಶ್ವಾಸನಿಶ್ವಾಸದಿಂ ದಿವಿಜರಂ
ಘೋಣದೊಳ್ ಸೆಳೆವುತೈತರೆ ಕಂಡು ಭೀತಿಯಿಂ
ಪ್ರಾಣಮುಳಿದುದೆ ಹಬ್ಬಮೆನುತೆ ಕೆಟ್ಟೋಡಿದರ್ ನಿರ್ಜರರ್ ಕಂಡಕಡೆಗೆ ೪

ಚರಣತಳದಿಂ ಸುರರನೊರಸುತುಂ ಬೆರಸುತುಂ
ಕರಿತುರಂಗಾಳಿಯಂ ಕುಟ್ಟುತುಂ ಮೆಟ್ಟುತುಂ
ವರಮಹಾರಥವನೀಡಾಡುತುಂ ನೋಡುತುಂ ದೆಸೆದೆಸೆಗೆ ನಾಲಗೆಯನು
ಉರವಣಿಸಿ ಪಿಡಿಪಿಡಿದು ನುಂಗುತುಂ ಪೊಂಗುತುಂ
ಸುರರೋಟಮಂ ಕಂಡು ಬೀಗುತುಂ ಕೂಗುತುಂ
ಸರಿಸಕಾಂತವರಸುವ ನೀಗುತುಂ ತೇಗುತುಂ ಶಿಂಶುಮಾರಂ ನಡೆದನು ೫

ಮಹತಾಯಿಯೊ ? ಶಿವ ಶಿವಾ ! ಎನ್ನುತ್ತ ಲೋಕದ ಜನ ಬೆರಗಾಯಿತು. ೩. ಅತಿ ಎತ್ತರವಾದರೆ ಏನಾಯಿತು ? ಅವನ ಶರೀರ ಕೋಮಲವಾಗಿದೆಯೆ ಎಂದರೆ ಅದೂ ಸಹ ಇಲ್ಲ, ಅವನ ಅಂಗಾಂಗ ಭಾರಿ ಪರ್ವತದ ಎತ್ತರವಾದ ಶಿಖರಸಮೂಹ ಸದೃಶ ವಾಗಿತ್ತು. ಶಾಂತಸ್ವಭಾವದವನೇ ಎಂದರೆ ಎಲ್ಲ ಲೋಕಗಳನ್ನೂ ತಿನ್ನುವೆನೆಂಬ ಕೃತ್ರಿಮ ಮನಸ್ಸುಳ್ಳವನು. ಕಾಂತಿಯಿಂದ ಕೂಡಿದ್ದಾನೆಯೆ ಎಂದರೆ ಅಪ್ರತಿಮವಾದ ಕತ್ತಲೆಯ ಸ್ವರೂಪವುಳ್ಳವನು. ಅವನ ಎದುರಿನಲ್ಲಿ ನಿಂತು ಕೌಶಲ್ಯವನ್ನು ತೋರಿಸಿ ಯುದ್ಧ ಮಾಡುವ ಶೂರನು ಯಾವನಿರುವನೊ ? ಹಾ ! ಎನ್ನುತ್ತಾ ದೇವತೆಗಳು ಕೂಗಿಕೊಂಡರು. ೪. ಸೈನ್ಯದ ಮುಂಭಾಗದಲ್ಲಿ ಎದುರಿಸಿದ ಸೈನ್ಯಸಮೂಹವನ್ನು ಅಂಗೈಯಲ್ಲಿ ತೆಗೆತೆಗೆದು ಬಾಯೊಳಗೆ ತುಂಬಿಕೊಳ್ಳುತ್ತಿದ್ದನು. ಕೋರೆಹಲ್ಲುಗಳಿಂದೆತ್ತಿ ಬಿಸಾಡುತ್ತಿದ್ದನು. ಆನೆ–ಕುದುರೆಗಳ ಸಮೂಹವನ್ನು ಆಕಾಶದಲ್ಲಿ ತುಂಬಿದನು. ಅಷ್ಟೇ ಅಲ್ಲದೆ ಉಚ್ವಾಸ–ನಿಶ್ವಾಸದಿಂದ ದೇವತೆಗಳನ್ನು ಮೂಗಿನೊಳಕ್ಕೆ ಎಳೆಯುತ್ತ ಬರುತ್ತಿದ್ದ ಆ ರಾಕ್ಷಸನನ್ನು ಕಂಡು ಹೆದರಿಕೆಯಿಂದ ಪ್ರಾಣವುಳಿದರೆ ಅದೇ ನಮಗೆ ಹಬ್ಬ ಎನ್ನುತ್ತಾ ದಿಕ್ಕುಗೆಟ್ಟು ಸಿಕ್ಕ ಸಿಕ್ಕೆಡೆಗೆ ದೇವತೆಗಳು ಓಡಿದರು. ೫. ಅಂಗಾಲಿನಿಂದ ದೇವತೆಗಳನ್ನು ಒರೆಸಿಹಾಕುತ್ತಾ, ಒಟ್ಟಾಗಿ ಸೇರಿಸುತ್ತ, ಆನೆ ಕುದುರೆಗಳನ್ನು ಕುಟ್ಟುತ್ತ, ತುಳಿಯುತ್ತ, ದೊಡ್ಡ ರಥಗಳನ್ನು ಸಿಕ್ಕೆಡೆಗೆ ಬಿಸಾಡುತ್ತ, ನೋಡುತ್ತ, ದಿಕ್ಕುದಿಕ್ಕಿಗೆ ನಾಲಗೆಯನ್ನು

CC-0. Jangamwadi Math Collection. Digitized by eGangotri

ಇಂದಿನ ದಿನಂ ಸಕಲಜಗಕೆ ಕಡೆಗಾಲವೇಂ
ಬಂದುದೋ ಕಟಕಟಾ ಮತ್ಸುಭಟನಾವವಂ
ನಿಂದು ಕಾದುವನವನ ತಾಯ್ ಪುಸಿಕರಂ ಮುನ್ನ ಪೋದ ಸಂಪದಕಸುವನು
ತಂದು ಬಳುವಲಿಗೊಡುವೊಲಾಯ್ತುಲಾ ಸಿರಿಯಂ ಪು
ರಂದರನೆ ಭೋಗಿಸಲಿ ಸಾಕೆಮಗೆನುತ್ತಮರ
ಸಂದೋಹವೋಡಿದುದು ನಿಂದಲ್ಲಿ ನಿಲ್ಲದೆಯುಮಿಂದುಮೌಳಿಯ ಸರಿಸಕೆ ೬

ನೋಡಲಮ್ಮೆವು ಜೀಯ ಖಳನಿದಿರೊಳನಿಮಿಷತೆ
ಯೋಡಿದುದು ನೀಲಪರ್ವತಕೆ ಕೈಕಾಲ್ಗಳುರೆ
ಮೂಡಿದುವೊ ಲೋಕದ ಮಹಾಂಧಕಾರಂ ಬಿಡದೆ ಪುರುಷಾಕೃತಿಯನಾಂತುದೋ
ಆದಲೇನೆಮ್ಮ ಸಲಹುವ ಕರುಣಮುಳ್ಳೊಡೀ
ಪೂಡಿರ್ದ ಪಾಶುಪತಬಾಣದಿಂದೆಸೆ ಮಿಕ್ಕ
ನಾಡಾಡಿ ಸುಭಟರಿಂದಾಗದಂದಮರಾಳಿ ಮೊರೆಯಿಟ್ಟುದಭವಗಂದು ೭

ಅನಿತರೊಳಗತುಳಕೋಪಾಟೋಪದಿಂ ದೂರು
ವನಿಮಿಷರ ಬಾಯ್ಗಳಂ ಪೊಯ್ಸಿಯುಭವಂಗುಸುರ
ಲೆನಿತು ಘನವಾ ದೈತ್ಯನಂ ಸೀಳ್ವೆನೆಂದೆನುತ್ತಾದಿವೃಷಭಂ ಕನಲ್ದು

ಮುಂದೆ ಚಾಚಿ ಹಿಡಿಹಿಡಿದು ನುಂಗುತ್ತ, ಉಬ್ಬುತ್ತ, ದೇವತೆಗಳು ಓಡುವುದನ್ನು ನೋಡಿ ಸಂತೋಷಿಸುತ್ತ ಕೂಗುತ್ತ, ಹತ್ತಿರಕ್ಕೆ ಬಂದವರ ಪ್ರಾಣವನ್ನು ತೆಗೆಯುತ್ತ, ತೇಗುತ್ತ ಶಿಂಶುಮಾರನು ನಡೆದನು. ೬. ಈ ದಿನ ಎಲ್ಲ ಜಗತ್ತಿಗೂ ಏನು ಕೊನೆಗಾಲ ಬಂತೊ ? ಅಯ್ಯಯ್ಯೊ ! ಅವನೊಡನೆ ಎದುರಾಗಿ ನಿಂತು ಯುದ್ಧ ಮಾಡುವ ನಮ್ಮ ಶೂರಭಟ ಯಾವನು ? ಅವನ ತಾಯಿ ಹಡೆದದ್ದೆ ಸುಳ್ಳು, ಮೊದಲು ಕಳೆದುಹೋದ ಐಶ್ವರ್ಯಕ್ಕೆ ಪ್ರಾಣವನ್ನು ಬಳುವಳಿಯಾಗಿ ಕೊಡುವಂತೆ ಆಯ್ತಲ್ಲಾ. ಐಶ್ವರ್ಯವನ್ನು ದೇವೇಂದ್ರನೇ ಅನುಭವಿಸಲಿ, ನಮಗೆ ಸಾಕು ಎನ್ನುತ್ತ, ದೇವತೆಗಳ ಸಮೂಹ ನಿಂತಲ್ಲಿ ನಿಲ್ಲದೆ ಚಂದ್ರ ಶೇಖರನ ಸಮೀಪಕ್ಕೆ ಓಡಿಹೋಯಿತು. ೭. ಅವನನ್ನು ನೋಡಲು ನಮಗೆ ಧೈರ್ಯ ವಿಲ್ಲ, ದೇವನೇ, ಯಾವಾಗಲೂ ಕಣ್ಣನ್ನು ತೆರೆದೇ ಇರುವ ನಮ್ಮ ಸ್ವಭಾವ ಆ ರಾಕ್ಷಸನ ಎದುರಿಗೆ ನಿಲ್ಲದೆ ಓಡಿಹೋಯಿತು. ನೀಲಪರ್ವತಕ್ಕೆ ದೊಡ್ಡದಾಗಿ ಕೈಕಾಲು ಗಳು ಮೂಡಿದವೊ. ಪ್ರಪಂಚದ ಕತ್ತಲೆಯೆಲ್ಲ ಒಟ್ಟು ಸೇರಿ ಒಬ್ಬ ಮನುಷ್ಯನ ಆಕಾರ ವನ್ನು ತಾಳಿತೊ ? ಏನು ಹೇಳುವುದು ? ನಮ್ಮನ್ನು ಕಾಪಾಡುವ ಕರುಣೆ ಇರುವುದಾದರೆ ಹೂಡಿರುವ ಪಾಶುಪತಬಾಣದಿಂದ ಹೊಡೆ. ಮಿಕ್ಕ ಸಾಮಾನ್ಯ ಸೈನಿಕರಿಂದ ಅವನನ್ನು ಕೊಲ್ಲುವುದು ಸಾಧ್ಯವಿಲ್ಲ ಎಂದು ಆಗ ಈಶ್ವರನಲ್ಲಿ ದೇವತೆಗಳ ಸಮೂಹ ಪ್ರಾರ್ಥಿಸಿತು. ೮. ಈಶ್ವರನಲ್ಲಿ ಹೇಳಲು ಇದ್ಯಾವ ದೊಡ್ಡ ವಿಷಯ. ಆ ರಾಕ್ಷಸನನ್ನು ಸೀಳುತ್ತೇನೆ ಎನ್ನುತ್ತ, ಅಷ್ಟರಲ್ಲಿ ಆದಿವೃಷಭನು ಅತಿಯಾದ ಕೋಪಾಟೋಪದಿಂದ ರೇಗಿ ದೂರು ಹೇಳುತ್ತಿದ್ದ ದೇವತೆಗಳ ಬಾಯನ್ನು ಮುಚ್ಚಿಸಿದನು. ತನ್ನ ಪಕ್ಕೆ ತಾವು ಎಲ್ಲ ದೇವ

CC-0. Jangamwadi Math Collection. Digitized by eGangotri

ತನತನಗೆ ಸಕಲಸುರಗಣವೊಡನೆ ಬರುತಿರಲ್
ವನಧಿಘೋಷಮನತಿಕ್ರಮಿಸೆ ಬಹುವಾದ್ಯನಿ
ಸ್ವನಮೈದಿದಂ ಮಹಾಡಂಬರಕೆ ದಾನವರ ಸೇನೆ ತಲೆಕೆಳಗಾಗಲು ೮

ಪೊಕ್ಕನಾಹವಕೆ ವೃಷಭೇಶ್ವರಂ ರಜತಾಚ
ಲಕ್ಕವಯವಂಗಳಾದುವೊ ಪೇಳೆನಲ್ಕಾಗ
ಳೊಕ್ಕಲಿಕ್ಕುತೆ ಸೊಕ್ಕಿದರಿಸೇನೆಯಂ ಮಹಾರೌದ್ರಾವತಾರದಿಂದೆ
ಎಕ್ಕತುಳದಿಂದಾಗ ಬಿಡದೆ ದೆಸೆದೆಸೆಗಳಂ
ಕೆಕ್ಕರಿಸಿ ನೋಡುತ್ತೆ ಸೈವರಿದು ಬರುತಿರಲ್
ದಿಕ್ಕುದಿಕ್ಕಿನೊಳಿರ್ಪ ರಕ್ಕಸರ್ ಕಾಣುತ್ತೆ ಬೆಕ್ಕಸಂಬೆರಗಾದರು ೯

ಉಗ್ರನೇರುವ ಮಹಾವಾಹನದ ಘೋರತರ
ವಿಗ್ರಹವನೇನೆಂದು ಬಣ್ಣಿಪೆಂ ನಾಲ್ಕುಪಾ
ದಾಗ್ರಹತಿಗೇಳ್ವ ಕೆಂಧೂಳ್ ಬತ್ತಿಸಿತು ಗಗನಗಂಗಾನದೀಜಲವನು
ವ್ಯಗ್ರಹೂಂಕಾರದಾರುಣನಾದದಿಂದೆ ಗರ
ಳಗ್ರೀವಸಹಿತರೆರ್ದೆಯೊಡೆದು ಕೆಡೆದರ್ ವಿಗೆ ರ
ಣಾಗ್ರಮಂ ನಂದಿ ಪುಗಲಿಂತಾಯ್ತು ಕಾದಲಿನ್ನೆಂತೆನುತೆ ಸುರರುಲಿದರು ೧೦

ಗಣಗಳೂ ಜೊತೆಯಲ್ಲಿ ಬರುತ್ತಿರಲು, ಅನೇಕ ವಾದ್ಯಗಳ ಶಬ್ದ ಸಮುದ್ರಘೋಷವನ್ನೂ ಮೀರಿಸುತ್ತಿರಲು, ಆ ದೊಡ್ಡ ಗುಂಪನ್ನು ನೋಡಿ ರಾಕ್ಷಸರ ಸೈನ್ಯ ತಲೆಕೆಳಗಾಗಲು ಹೊರಟುಬಂದನು. ೯. ವೃಷಭೇಶ್ವರನು ಯುದ್ಧರಂಗವನ್ನು ಪ್ರವೇಶಿಸಿದನು. ಬೆಳ್ಳಿಯ ಪರ್ವತಕ್ಕೆ ಅಂಗಾಂಗಗಳು ಮೂಡಿದುವೋ ಎಂಬಂತೆ ಆಗ ಯುದ್ಧಭೂಮಿಯನ್ನು ಹೊಕ್ಕು ಮಹಾಭಯಂಕರಾಕಾರದಿಂದ ಕೊಬ್ಬಿದ್ದ ಶತ್ರುಸೈನ್ಯವನ್ನು ಧೂಳಿಪಟ ಮಾಡುತ್ತ, ಪರಾಕ್ರಮದಿಂದ ಬಿಡದೆ ದಿಕ್ಕು ದಿಕ್ಕನ್ನು ಕೋಪದಿಂದ ದುರುಗುಟ್ಟಿಕೊಂಡು ನೋಡುತ್ತ, ನೆಟ್ಟನೆ ಬರುತ್ತಿರಲು ದಿಕ್ಕುದಿಕ್ಕಿನಲ್ಲಿದ್ದ ರಾಕ್ಷಸರು ಅವನನ್ನು ನೋಡಿದ ಕೂಡಲೇ ಬೆಕ್ಕಸಬೆರಗಾದರು. ೧೦. ಉಗ್ರನು (ಶಿವನು) ಏರುವ ಶ್ರೇಷ್ಠವಾದ ವಾಹನದ ಭಯಂಕರವಾದ ಆಕಾರವನ್ನು ಏನೆಂದು ವರ್ಣಿಸಲಿ ? ನಾಲ್ಕೂ ಪಾದಗಳ ಹೊಡೆತದಿಂದ ಏಳುವ ಕೆಂಪಾದ ಧೂಳು ಆಕಾಶಗಂಗೆಯ ನೀರು ಬತ್ತುವಂತೆ ಮಾಡಿತು. ಕೋಪದಿಂದ ಮಾಡಿದ ಘರ್ಜನೆಯ ಭಯಂಕರವಾದ ಶಬ್ದದಿಂದ ಶಿವನ ಶತ್ರುಗಳು ಎದೆಯೊಡೆದು ಸತ್ತುಬಿದ್ದರು, ರಣರಂಗವನ್ನು ನಂದಿಯು ಹೊಕ್ಕ ಕೂಡಲೇ ಇಷ್ಟಾದ ಮೇಲೆ ಯುದ್ಧ ಮಾಡಿದರೆ ಇನ್ನೆಷ್ಟು ಎಂದು ದೇವತೆಗಳು ಮಾತನಾಡಿಕೊಂಡರು.

CC-0. Jangamwadi Math Collection. Digitized by eGangotri

ಆರ್ಭಟಿಸಿ ಪೊಯ್ದು ವಾಲಾಗ್ರದಿಂ ನಭದ ರೋ
ಚಿರ್ಭಗಣಪಂಕ್ತಿಯನುದಿರ್ಚುತುಂ ಘನರತ್ನ
ಗರ್ಭೆಯುಂ ಪಾದಾಗ್ರದಿಂ ಕೆರೆದು ಮೊರೆದು ಕಲ್ಗುಂಡುಗಳನೇಳಿಸುತ್ತೆ
ನಿರ್ಭರದೆ ಕೋಡಿಕ್ಕಿ ಮಿಾಂಟಿ ಗಿರಿಗಳನಬ್ಜ
ಗರ್ಭನಾಲಯಕೆ ಸಾಲಿಡುತೆ ವೃಷರಾಜಂ ಹ
ವಿರ್ಭುಕ್ತರಾಯೆಂದು ಕೊಂಡಾಡೆ ಸವರಿದಂ ಪೊಕ್ಕು ರಾಕ್ಷಸಬಲವನು ೧೧

ಮುತ್ತಿದುದು ವೃಷಭನಂ ತಮುತಮಗೆ ರಾಕ್ಷಸರ
ಮೊತ್ತಮೊಡನೊಡನೆ ವಡಬಾಗ್ನಿಯಂ ಕಡಲ ನೀರ್
ಮುತ್ತುವಂತುಗ್ರಕೇಸರಿಯಂ ಗಜವ್ರಜಂ ಮುತ್ತುವಂದದಿ ದೀಪಮಂ
ಮುತ್ತುವಂತೊಪ್ಪುವ ಪತಂಗಸಂದೇಹಮುರೆ
ಕತ್ತಿಯಿಂ ಸುರಗಿಯಿಂ ದಿಟ್ಟಿಯಿಂ ಕುಂತದಿಂ
ದೊತ್ತಿ ಕವಿದರ್ ತಿವಿದರುರುಬಿದರ್ ತರುಬಿದರ್ ಮೂದಲಿಸುತಾ ದನುಜರು ೧೨

ಬಿಟ್ಟ ಕಣೆಗಳ್ ಕಲ್ಲ ತಾಗಿ ಮರಳುತ್ತಿರ್ಪ
ಮಿಟ್ಟೆಯಂತಾದುವಸಿ ಮುಸಲ ಮುದ್ಗರತತಿಗ
ಳಿಟ್ಟಿಗಳ್ ನುಚ್ಚುನೂರಾದುವು ಸಬಳ ಚಕ್ರಮಾಕ್ಷಣಂ ತುಮುರಾದುವು
ಮುಟ್ಟಿಬರ್ಪಸುರರ ಪದಾತಿ ಕಾಣುತೆ ಬೆರಗು
ವಟ್ಟೊಡನೆ ಖತಿಮಸಗಿ ಕಲ್ಲಿನಿಂ ಗುಂಡಿನಿಂ
ಬೆಟ್ಟದಿಂ ಮರಗಳಿಂದಿಟ್ಟು ತನತನಗೆ ಬೊಬ್ಬಿಟ್ಟುದದನೇನೆಂಬೆನು ೧೩

೧೧. ಅಬ್ಬರಿಸಿ ಬಾಲದ ತುದಿಯಿಂದ ಹೊಡೆದು ಆಕಾಶದ ಹೊಳೆಯುವ ನಕ್ಷತ್ರದ ಸಾಲನ್ನು ಉದುರಿಸುತ್ತ, ರತ್ನಗರ್ಭೆಯೆನಿಸಿದ ಭೂಮಿಯನ್ನು ಕಾಲಿನ ತುದಿಯಿಂದ ಕೆರೆದು ಆರ್ಭಟಿಸಿ ಕಲ್ಲುಗುಂಡುಗಳನ್ನು ಮೇಲಕ್ಕೆ ಎಬ್ಬಿಸುತ್ತ, ರಭಸದಿಂದ ಕೊಂಬಿನಿಂದ ತಿವಿದು ಮೀಟಿ ಎತ್ತಿ ಪರ್ವತಗಳನ್ನು ಬ್ರಹ್ಮಲೋಕಕ್ಕೆ ಸಾಲಿಡುತ್ತ ನಂದಿಯು ದೇವತೆಗಳು ಹೋ ಎಂದು ಕೊಂಡಾಡುತ್ತಿರಲು ರಾಕ್ಷಸಸೈನ್ಯವನ್ನು ಹೊಕ್ಕು ನಾಶಮಾಡಿದನು.
೧೨. ಜೊತೆ ಜೊತೆಯಲ್ಲಿಯೆ ಬಡಬಾಗ್ನಿಯನ್ನು ಸಮುದ್ರದ ನೀರು ಮುತ್ತುವಂತೆ, ಭೀಕರವಾದ ಸಿಂಹವನ್ನು ಆನೆಗಳ ಸಮೂಹ ಮುತ್ತುವಂತೆ, ದೀಪವನ್ನು ಪತಂಗಗಳ ಸಮೂಹ ಮುತ್ತುವಂತೆ ಕಾಣುತ್ತ ತಮ್ಮಷ್ಟಕ್ಕೆ ತಾವು ರಾಕ್ಷಸರ ಸಮೂಹವು ತಕ್ಷಣ ನಂದಿಯನ್ನು ಮುತ್ತಿತು. ಕತ್ತಿಯಿಂದ ಕಠಾರಿಯಿಂದ, ಈಟಿಯಿಂದ ಭರ್ಜಿಯಿಂದ ಹಿಂದಕ್ಕೆ ನೂಕಿ ಮೂದಲಿಸುತ್ತ ಆ ರಾಕ್ಷಸರು ತಿವಿದರು, ಮುನ್ನುಗ್ಗಿದರು, ಪ್ರತಿಭಟಿಸಿದರು. ೧೩. ಬಿಟ್ಟ ಬಾಣಗಳು ಕಲ್ಲುಗಳನ್ನು ತಾಗಿ ಹಿಂದಕ್ಕೆ ಬರುತ್ತಿದ್ದ ಮಣ್ಣಿನ ಹೆಂಟೆಯಂತಾದುವು, ಕತ್ತಿ, ಒನಕೆ, ಗದೆಗಳ ಸಮೂಹ, ಈಟಿಗಳು ನುಚ್ಚುನೂರಾದುವು, ಭರ್ಜಿಗಳ ಸಮೂಹ ಚೂರಾದುವು, ಮುತ್ತಿ ಬರುತ್ತಿದ್ದ ರಾಕ್ಷಸರ ಕಾಲಾಳುಸೈನ್ಯ ಇದನ್ನು ನೋಡಿ ಬೆರಗಾಗಿ ಅನಂತರ ಕೋಪದಿಂದ ಮೊರೆಯುತ್ತ ಕಲ್ಲಿನಿಂದ, ಗುಂಡಿನಿಂದ, ಬೆಟ್ಟಗಳಿಂದ, ಮರಗಳಿಂದ ಹೊಡೆದು ತಮ್ಮಷ್ಟಕ್ಕೆ ತಾವು ಬೊಬ್ಬೆ ಹಾಕಿದುವು. ಅದನ್ನು

CC-0. Jangamwadi Math Collection. Digitized by eGangotri

ಕುಲಿಶದುಳಿಗಳ್ ನಾಂಟೆ ಪರ್ವತಂಗಳ ಪಕ್ಷ
ಮುಳಿವುವೇ ವೃಷಪತಿಯ ರೋಮಪೋಂಕಿನೊಳದ್ರಿ
ಕುಲಮಿರದೆ ಶತಚೂರ್ಣಮಾಯ್ತು ಕಲ್ಗುಂಡುಮರಗಳ ಪಾಡೆ ಭಾಪೆನಲ್ಕೆ
ಸಲೆಮಿಕ್ಕು ಮಿಗಿಱಿ ನಾನಾಪ್ರಹಾರಂಗಳಿಂ
ಕೊಲುತಿರ್ಪನಂದು ರಣಮಂಡಲದೊಳೀಕ್ಷಿಸುತೆ
ಖಳನೃಪರ್ ಮತ್ತೆ ಗಜ ಹಯ ಪದಾತಿಗಳೊಡನೆ ಮುತ್ತಿದರ್ ವಿಕ್ರಮದೊಳು ೧೪

ಕಡಿಯದಿರಿರೋ ಕೈದುಗಳೊಳಿರಿದೊಡೀಯೆತ್ತು
ಗಡಣೆಗೊಳ್ಳದು ಬಹಳಪಾಶಂಗಳಂ ಬೀಸಿ
ತೊಡರಿ ಕೆಡಪಲ್ವೇಳ್ಕುಮೆಂದು ಬಲ್ಮಿಣಿಗಳಂ ತಮತಮಗೆ ಕೆಯ್ಯೊಳಾಂತು
ಬಿಡದಿರೆಡಬಲಕೆನುತೆ ಸುತ್ತಲುಂ ಕಟ್ಟಿಕೊಂ
ಡಡಿಗಡಿಗೆ ಬೀಸಿದರ್ ಸಿಕ್ಕಿದುದನಡ್ವಾಹ
ಮುಡಿ ಕೊಚ್ಚು ತರಿಯಿರಿಯೆನುತ್ತೆ ಕೋಳಾಹಳದೊಳುರುಬಿದರ್ ವೃಷಪತಿಯನು ೧೫

ನಿಗಳಮಂ ಮುರಿದುಕೊಂಡಾಂತಾಂತ ಜನರ್ಗಳಂ
ಸಿಗಿದ ಮದದಾನೆಯುಂ ತಾವರೆಯನೂಲಿನಿಂ
ಬಿಗಿದೊಡೇಂ ವಶಮಪ್ಪುದೇ ಸಿಂಹಮಾನೆಗಳ ಸೊಂಡಿಲಿಂ ಬಿಗಿವಡೆವುದೇ
ವಿಗಡಬಸವಂ ಮುಸಗಿ ಲಳಿಯೆದ್ದು ತತ್ಕ್ಷಣಂ
ಜಿಗಿಯಲ್ ತೊಡರ್ದ ದಾಮಂಗಳೆಲ್ಲಂ ಪರಿದು
ವಗಡುರಕ್ಕಸರ ಸೇನಾಶರಧಿಯಂ ಪೊಕ್ಕು ಕಲಕಿದನದೇನೆಂಬೆನು ೧೬

ಏನೆಂದು ಹೇಳಲಿ ? ೧೪. ವಜ್ರದ ಉಳಿಗಳು ನಾಟಲು ಪರ್ವತದ ಪಕ್ಕಗಳು ಉಳಿಯುತ್ತವೆಯೆ ? ನಂದಿಯ ಕೂದಲನ್ನು ತಾಗಿದ ಕೂಡಲೇ ಪರ್ವತಸಮೂಹ ನೂರು ಚೂರಾದುವು. ಕಲ್ಲುಗುಂಡು ಮರಗಳ ಸಮವೆ ? ಭಲಾ ಎನ್ನಲು ಯುದ್ಧರಂಗದಲ್ಲಿ ಮಿತಿಮೀರಿ ಉಬ್ಬಿ ನಾನಾರೀತಿಯ ಹೊಡೆತಗಳಿಂದ ನಂದಿಯು ಆ ದಿನ ನಾಶ ಮಾಡುತ್ತಿದ್ದನು. ಇದನ್ನು ನೋಡುತ್ತ ಮತ್ತೆ ರಾಕ್ಷಸರಾಜರು ಆನೆ, ಕುದುರೆ, ಕಾಲಾಳುಗಳೊಡನೆ ಪರಾಕ್ರಮದಿಂದ ಮುತ್ತಿದರು. ೧೫. ಕಡಿಯಬೇಡಿರೊ, ಆಯುಧಗಳಿಂದ ಇರಿದರೆ ಈ ಎತ್ತು ಲಕ್ಷಿಸುವುದಿಲ್ಲ. ಹಗ್ಗಗಳನ್ನು ಬೀಸಿ ತೊಡರಿಸಿ ಕೆಡವಬೇಕು ಎಂದು ಭಾರಿ ಹಗ್ಗಗಳನ್ನು ತಮ್ಮ ತಮ್ಮ ಕೈಯಲ್ಲಿ ಹಿಡಿದು ಎಡಬಲಕ್ಕೆ ಬಿಡಬೇಡ ಎನ್ನುತ್ತ ಸುತ್ತಲೂ ಕಟ್ಟಿಕೊಂಡು ಮತ್ತೆ ಮತ್ತೆ ಬೀಸಿದರು. ಎತ್ತು ಸಿಕ್ಕಿತು, ಅದನ್ನು ತಿವಿ, ಕೊಚ್ಚು, ತರಿ, ಇರಿ ಎನ್ನುತ್ತ ಕೋಲಾಹಲದಿಂದ (ನಂದೀಶ್ವರನನ್ನು) ಅಡ್ಡಗಟ್ಟಿದರು. ೧೬. ಸರಪಳಿಯನ್ನು ಮುರಿದು ಹಾಕಿ ಹಿಡಿದ ಜನಗಳನ್ನು ಸಿಗಿದನು. ಮದದಾನೆಯನ್ನು ತಾವರೆಯ ನೂಲಿನಿಂದ ಬಿಗಿದರೆ ವಶವಾಗುವುದೇನು ? ಸಿಂಹ ಆನೆಗಳ ಸೊಂಡಿಲಿನಿಂದ ಬಂಧಿಸಲ್ಪಡುತ್ತದೆಯೆ ? ಬಲಶಾಲಿಯಾದ ವೃಷಭನು ಕೋಪಗೊಂಡು ಹುರುಪೆದ್ದು ತಕ್ಷಣ ಎಗರಲು ಕಟ್ಟಿದ್ದ ಹಗ್ಗಗಳೆಲ್ಲ ಕಡಿದುಹೋದವು. ಕ್ರೂರ ರಾಕ್ಷಸರ ಸೇನಾ

CC-0. Jangamwadi Math Collection. Digitized by eGangotri

ಪುಂಗವಂ ಕೆರಳಿ ಗುಡಿಗುಡಿಸುತ್ತೆ ತನ್ನುಭಯ
ಶೃಂಗವಂ ನೀಡಿ ದೈತ್ಯರ ಸೇನೆಯೊಳ್ ಘನತು
ರಂಗವಂ ಮತ್ತಮಾತಂಗವಂಗುರುತರ ರಥಾಂಗವಂ ಕೊಡಹಿಟ್ಟನು
ಸಿಂಗವಂ ಕೆಣಕಿ ಗಜಮುಳಿವುವೇ ವೈರಿಚತು
ರಂಗವಂ ಸವರಿದಂ ರಣಭೂಮಿ ಪುದಿದುತ್ತ
ಮಾಂಗವಂ ಕೆಡೆದ ಭಟರಂಗವಂ ಬಹುಳತರಭಂಗವಂ ಪೊಗಳ್ವೆನೇನಾ ೧೭

ಕರ್ಕಶಪದಾಗ್ರದಿಂದೊದೆವುತುಂ ಸದೆವುತುಂ
ಸೊರ್ಕಿ ಮಾರ್ಮಲೆದು ತೂಗಾಡುತುಂ ನೋಡುತುಂ
ಮಾರ್ಕಣೆಗಳಂ ಪಣೆಯೊಳಣೆವುತುಂ ಪೊಣೆವುತುಂ ಕೂರ್ಗೊಂಬುದುದಿಗಳಿಂದೆ
ಇರ್ಕೆಲದ ದಾನವರನಿರಿವುತುಂ ಮುರಿವುತುಂ
ಡುರ್ಕಿಡುತ್ತಸುರರಂ ಕೆಡೆಪುತುಂ ಕೊಡಪುತುಂ
ತೇರ್ಕುದುರೆಗಳ ಭಟರನಟ್ಟುತುಂ ಮೆಟ್ಟುತುಂ ವೃಷಭಂ ಪ್ರಹಾರಿಸಿದನು ೧೮

ಉರ್ಚಿ ಕೆಲಬರನುತ್ತುರಾಗ್ರಹತಿಯಿಂ ಕರುಳ
ಸೋರ್ಚಿ ಕೆಲಬರನವಯವಂಗಳಂ ದೆಸೆದೆಸೆಗು
ದಿರ್ಚಿ ಕೆಲಬರನಿರದೆ ಕೋಡ್ಗಳಿಂದಿರಿದು ಕಾಲ್ಗೆರೆದೊಡನೆ ಮುಚ್ಚಿಯಸುವಂ
ತೀರ್ಚಿ ಕೆಲವರ ಮಹಾಡ್ರೂಂಕಾರದಿಂದಂ ತ
ಳರ್ಚಿ ಕೆಲವರನೊಡನೆ ವಾಲಾಗ್ರದಿಂದಿರವೆ
ಬಾರ್ಚಿ ಕೆಲಬರನಿಂತು ಪುಂಗವಂ ಭಂಗವಂ ಮಾಡುತ್ತೈತರುತಿರ್ದನು ೧೯

ಸಮುದ್ರವನ್ನು ಹೊಕ್ಕು ಕಲಕಿದನು. ಅದನ್ನು ಏನೆಂದು ಹೇಳಲಿ ? ೧೭. ವೃಷಭ ಶ್ರೇಷ್ಠನು ಕೋಪದಿಂದ ಗುಡುಗುಡಿಸುತ್ತ ತನ್ನ ಎರಡು ಕೊಂಬುಗಳನ್ನು ಮುಂದಕ್ಕೆ ಚಾಚಿ ರಾಕ್ಷಸರ ಸೈನ್ಯದಲ್ಲಿ ಶ್ರೇಷ್ಠವಾದ ಕುದುರೆ, ಮದಗಜ, ರಥ ಮೊದಲಾದುವು ಗಳನ್ನು ಕೊಡವಿ ಬಿಸುಟನು. ಸಿಂಹವನ್ನು ಕೆಣಕಿ ಆನೆಯು ಉಳಿಯುತ್ತದೆಯೆ ? ಶತ್ರು ಗಳ ಸೈನ್ಯವನ್ನು ನಾಶಮಾಡಿದನು. ರಣಭೂಮಿ ಬಿದ್ದ ತಲೆಗಳಿಂದ ಭಟರ ಶರೀರ ಗಳಿಂದ ತುಂಬಿತು. ಈ ರೀತಿಯ ಬಹಳವಾದ ನಾಶವನ್ನು ನಾನು ಏನೆಂದು ಹೇಳಲಿ ? ೧೮. ಒರಟಾದ ಪಾದಗಳ ತುದಿಯಿಂದ ಒದೆಯುತ್ತ ಸದೆಬಡಿಯುತ್ತ, ಸೊಕ್ಕಿ, ಮಲೆತು ತೂಗಾಡುತ್ತ, ನೋಡುತ್ತ ಬಾಣಗಳನ್ನು ಹಣೆಯಲ್ಲಿ ಇರಿದು, ಹೋರಾಡುತ್ತ, ಚೂಪಾದ ಕೊಂಬಿನ ತುದಿಗಳಿಂದ ಎರಡೂ ಕಡೆಯ ರಾಕ್ಷಸರನ್ನು ತಿವಿಯುತ್ತ, ಮುರಿಯುತ್ತ, ಗುಟುರುಹಾಕಿ ರಾಕ್ಷಸರನ್ನು ಕೆಡವುತ್ತ ಕೊಡವುತ್ತ, ರಥ ಕುದುರೆಗಳ ಸವಾರರನ್ನು ಅಟ್ಟುತ್ತ, ತುಳಿಯುತ್ತ ನಂದಿಯು ಹೋರಾಡಿದನು. ೧೯. ಗೊರಸಿನಿಂದ ಹೊಡೆದು ರಭಸದಿಂದ ಮುನ್ನುಗ್ಗಿ ಕೆಲವರನ್ನು ಸೀಳಿದನು. ಕೆಲವರ ಕರುಳುಗಳನ್ನು ಜೋತು ಬೀಳುವಂತೆ ಮಾಡಿದನು. ಕೆಲವರ ಅವಯವಗಳನ್ನು ದಿಕ್ಕುದಿಕ್ಕಿಗೆ ಚೆಲ್ಲಿ ಹರಡಿದನು. ಕೆಲವರನ್ನು ಕೊಂಬುಗಳಿಂದ ತಿವಿದು, ಕಾಲನ್ನು ಕೆರೆದು ಸಿಕ್ಕಿದವರನ್ನು ತುಳಿದು ಪ್ರಾಣ ಗಳನ್ನು ತೀ[illegible]ಸುತ್ತಿದ್ದನು. [illegible] ದಿಂದ ಓಡಿಸು

CC-0. Jangamwadi Math Collection. Digitized by eGangotri

ಹಜ್ಜೆ ಹಜ್ಜೆಗೆ ಭೂಮಿ ಕುಸಿಯೆ ದಿಗ್ಗಜಚಯಂ
ಗುಜ್ಜುಗೊಂಡುವು ಫಣೀಂದ್ರನ ಫಣಾಮಂಡಲಂ
ಬಿಜ್ಜಣಿಗೆಯಂ ಮಡಿಸಿದಂತಾಯ್ತು ಕೂರ್ಮನೆರ್ದೆಯೊಡೆದು ಬೃಹತೀಫಲವನು
ಜಜ್ಜಿದಂತಾದುದೀ ವೃಷಪತಿಯ ಸಮರಜಯ
ಕುಜ್ಜುಗಿಪರಂ ಕಾಣೆನಸುರಬಲದೊಳಗಿವನ
ಕಜ್ಜವಂ ನೋಳ್ಪೆವೆನುತಿರೆ ವೃಷಭನಂ ತಡೆದು ಶಿಂಶುಮಾರಂ ನುಡಿದನು ೨೦

ಕಾರಹಬ್ಬದೊಳೆತ್ತು ಪೂಜ್ಯವಲ್ಲದೆ ಸಮರ
ಧಾರುಣಿಗೆ ಯೋಗ್ಯವೇ ಕಂಡೆವಚ್ಚರಿಯಂ ವಿ
ಕಾರಿಯಲ್ಲವೆ ನಿನ್ನ ಪಡೆದ ಬೊಮ್ಮಂ ಮುಸುಡ ಭಾವಮಿದೆ ರಮ್ಯವಾಗಿ
ಆರ ಮಗನೇಸುದಿನ ಪರಿಯಂತರಂ ತಪಿಸಿ
ನಾರಿ ಪೆತ್ತಳ್ ನಿನ್ನನಾದೊಡಂ ಕಿರಿಕಿರಿದು
ವೀರಮಿದ ನಿನ್ನೊಳೆನೆ ಖಳನ ಹಾಸ್ಯೋಕ್ತಿಗಾ ವೃಷರಾಜನಿಂತೆಂದನು ೨೧

ಒರಲಬೇಡೆಲೆ ಕುನ್ನಿ ತನ್ನನೀಕ್ಷಿಸಿ ಪೆರರ
ಜರಿಯಬೇಡೆಲೆ ಕಾರಹಬ್ಬಮಿಂದಿನ ದಿನಂ
ತರಿದ ದನುಜರ ಖಂಡದಿಂಡೆ ಕೊಬ್ಬಿದ ಬೆಳಸು ತವ ರುಧಿರಧಾರೆಯೆಂಬ
ಕೆರೆಯೊಳೀಸಾಡಿ ಗೆಲವಿನ ಸಿಂಗರಂ ಪಡೆದು
ತರಿಸಂದು ಘನರಣಾಂಕಣದೊಳೀ ಸುರರಿಂದೆ
ಮೆರೆದಪೆಂ ಪೂಜೆಯಂ ತಾನೆನುತೆ ಹೂಂಕಾರದಿಂ ಮಸಗಿದಂ ವೃಷಭನು ೨೨

ತ್ತಿದ್ದನು. ಕೆಲವರನ್ನು ಬಾಲದ ತುದಿಯಿಂದ ಬೀಸುತ್ತಿದ್ದನು. ಈ ರೀತಿ ನಂದೀಶನು ಎಲ್ಲವನ್ನೂ ನಾಶಮಾಡುತ್ತ ಬರುತ್ತಿದ್ದನು. ೨೦. ಹೆಜ್ಜೆಹೆಜ್ಜೆಗೆ ಭೂಮಿ ಕುಸಿಯಿತು. ದಿಗ್ಗಜಗಳ ಸಮೂಹ ಮುದುರಿಹೋದುವು. ಆದಿಶೇಷನ ಹಣೆಗಳು ಬೀಸಣಿಗೆಯನ್ನು ಮಡಿಸಿದಂತಾಯಿತು. ಆದಿಕೂರ್ಮನ ಎದೆ ಒಡೆದು ದೊಡ್ಡಗುಳ್ಳದ ಹಣ್ಣು ಜಜ್ಜಿ ದಂತಾಯಿತು. ಈ ರಾಕ್ಷಸನ ಸೈನ್ಯದಲ್ಲಿ ನಂದೀಶ್ವರನೊಡನೆ ಯುದ್ಧಕ್ಕೆ ತೊಡಗು ವವರನ್ನೇ ಕಾಣೆವು. ಇವನ ಸಾಹಸವನ್ನು ನೋಡುತ್ತೇವೆ ಎನ್ನುತ್ತಿರಲು ಶಿಂಶುಮಾರನು ನಂದಿಯನ್ನು ತಡೆದು ಹೇಳಿದನು. ೨೧. ಕಾರಹಬ್ಬದಲ್ಲಿ ಎತ್ತು ಪೂಜ್ಯವಾದುದು. ಅಷ್ಟಲ್ಲದೆ ಅದು ಯುದ್ಧಭೂಮಿಗೆ ಯೋಗ್ಯವೆ ? ಆಶ್ಚರ್ಯವನ್ನು ನೋಡಿದೆವು. ನಿನ್ನನ್ನು ಪಡೆದ ಬ್ರಹ್ಮನೇ ವಿಕಾರಿಯಲ್ಲವೆ ? ನಿನ್ನ ಮುಖಭಾವ ಮುದ್ದಾಗಿದೆ. ನೀನು ಯಾರ ಮಗ ? ನಿನ್ನ ತಾಯಿ ಎಷ್ಟು ದಿನ ತಪಸ್ಸು ಮಾಡಿ ನಿನ್ನನ್ನು ಹೆತ್ತಳು. ಆದರೂ ಸಹ ನಿನ್ನಲ್ಲಿಯೂ ಸಹ ಸ್ವಲ್ಪ ಸ್ವಲ್ಪ ಸಾಮರ್ಥ್ಯ ಇದೆ ಎಂದು ರಾಕ್ಷಸನ ಹಾಸ್ಯದ ಮಾತು ಗಳಿಗೆ ವೃಷಭರಾಜನು ಹೀಗೆ ಹೇಳಿದನು. ೨೨. ಕೂಗಿಕೊಳ್ಳಬೇಡವೊ ಕುನ್ನಿ ! ನನ್ನನ್ನು ನೋಡಿ ಬೇರೆಯವರನ್ನು ಹೀಯಾಳಿಸಬೇಡ. ಈ ದಿನವೇ ಕಾರಹಬ್ಬ. ನಾನು ತರಿದು ಹಾಕಿದ ರಾಕ್ಷಸರ ಮಾಂಸಖಂಡಗಳ ಗುಂಪೇ ಕೊಬ್ಬಿದ ಫಸಲು. ನಿನ್ನ ರಕ್ತಪ್ರವಾಹವೆಂಬ ಕೆರೆಯಲ್ಲಿ ಈಜಾಡಿ, ಗೆಲುವೆಂಬ ಶೃಂಗಾರವನ್ನು ಪಡೆದು ಬಂದು ಖಂಡಿತವಾಗಿಯೂ

CC-0. Jangamwadi Math Collection. Digitized by eGangotri

ಪೂಜೆಯಿದು ನಿನಗೆ ಕೊಳ್ಳೆನುತೆ ಖತಿವುಸಗಿ ಖಳ
ರಾಜನಾಗಳ್ ತನ್ನ ಕೈಯ ಗಿರಿಯಂ ವೃಷಭ
ರಾಜನಂ ಮುಳಿದೆರಗೆ ತದ್ರೋಮತತಿಯು ಸೋಂಕಿಂದಾ ಮಹಾಪರ್ವತಂ
ಗಾಜುವಳೆವೇರ ನೆಗ್ಗಿದ ಪಾಂಗಿನಿಂದಂ ಮ
ಹಾಜವದೆ ಶತಚೂರ್ಣವಾದುದಂದಂ ಕಂಡು
ಸೋಜಿಗಂಬಟ್ಟು ಖಳಶಿಂಶುಮಾರಂ ಕೂಡೆ ರೋಷವಮಾನಸನಾದನು ೨೩

ಮತ್ತೊಂದು ಪರ್ವತವನಾ ಖಳಂ ವೃಷಪತಿಯ
ನೆತ್ತಿಯೊಳ್ ತೆಗೆದಿಡಲ್ ಬೀಳುತಿರೆ ನಂದಿ ಕೋ
ಡೆತ್ತಿ ಬಿಸುಡಲ್ ಬಿರ್ದುದಸುರಬಲದೊಳ್ ಕೋಟಿಸಂಖ್ಯೆಯಸುರರ್ ಮಡಿಯಲು
ಚಿತ್ತಜಾರಿಯ ವಾಹನಂ ಖಳನ ಗದ್ದಮಂ
ಕುತ್ತಿ ಬಿಸುಡುವೆನೆಂದು ಲಾಗಿಸಲ್ಕಾ ಮದೋ
ನ್ಮತ್ತನಿರದಿವನ ನುಂಗುವೆನೆಂದು ಬಾಯ್ದೆರೆಯಲೊಳಪೊಕ್ಕನಾ ಕ್ಷಣದೊಳು ೨೪

ಸಾರತರಮಾದ ಸದ್ಧರ್ಮಂ ವಿಚಾರಿಸಲ್
ಕ್ರೂರಕರ್ಮದ ಖಳನ ದೇಹದೊಳ್ ನಿಂದಪುದೆ
ವೀರನಂದೀಶ್ವರಂ ಧರ್ಮಸ್ವರೂಪನೀ ದಾನವನ ವಿಗ್ರಹದೊಳು

ಈ ಭಯಂಕರವಾದ ಯುದ್ಧಭೂಮಿಯಲ್ಲಿ ದೇವತೆಗಳಿಂದ ನಾನು ಪೂಜೆಗೊಳ್ಳುತ್ತೇನೆ ಎನ್ನುತ್ತ ವೃಷಭನು ಹೂಂಕರಿಸಿ ಕೋಪಾವಿಷ್ಟನಾದನು. ೨೩. ರಾಕ್ಷಸರಾಜನು ಕೋಪದಿಂದ ಕೂಡಿ 'ನಿನಗೆ ಇದೇ ಪೂಜೆ, ತೆಗೆದುಕೊ' ಎನ್ನುತ್ತ ತನ್ನ ಕೈಯಲ್ಲಿದ್ದ ಪರ್ವತವನ್ನು ನಂದಿಯ ಮೇಲೆ ಸಿಟ್ಟಿನಿಂದ ಬೀಸಿಡಲು, ವೃಷಭೇಂದ್ರನ ಕೂದಲಿನ ಸೋಂಕಿನಿಂದಲೇ ಆ ಮಹಾಪರ್ವತವು ಗಾಜಿನ ಬಳೆ ಗಾಯವನ್ನು ಜಜ್ಜಿದ ರೀತಿಯಲ್ಲಿ ಬಹು ವೇಗವಾಗಿ ನೂರು ಚೂರಾಯಿತು. ಅದನ್ನು ನೋಡಿ ವಿಸ್ಮಯ ಹೊಂದಿದ ಖಳ ಶಿಂಶುಮಾರನು ತಕ್ಷಣ ಕೋಪಗೊಂಡನು. ೨೪. ಆ ರಾಕ್ಷಸನು ಮತ್ತೊಂದು ಪರ್ವತವನ್ನು ನಂದಿಯ ತಲೆಯ ಮೇಲೆ ಬಿಸುಟನು. ಬೀಳುತ್ತಿದ್ದ ಆ ಪರ್ವತವನ್ನು ತನ್ನ ಕೊಂಬೆತ್ತಿ ಬಿಸುಟನು. ಅದು ರಾಕ್ಷಸರ ಸೈನ್ಯದ ಮೇಲೆ ಬಿದ್ದು, ಕೋಟಿ ಕೋಟಿ ರಾಕ್ಷಸರು ಸತ್ತರು. ಈಶ್ವರನ ವಾಹನನಾದ ನಂದಿಯು ರಾಕ್ಷಸನ ಗಡ್ಡವನ್ನು ಚುಚ್ಚಿ ಎಸೆಯುತ್ತೇನೆಂದು ಎಗರಿದನು. ಆಗ ಆ ರಾಕ್ಷಸನು ತಡೆಯದೆ ಮದೋನ್ಮತ್ತನಾದ ಈ ನಂದಿಯನ್ನು ನುಂಗುತ್ತೇನೆಂದು ಬಾಯಿ ತೆರೆಯಲು ಆಕ್ಷಣ ನಂದಿಯು ಅವನ ಬಾಯೊಳಹೊಕ್ಕನು. ೨೫. ಆಲೋಚಿಸಲು ಶ್ರೇಷ್ಠವಾದ ಅತ್ಯಂತ ಸಾರಯುಕ್ತವಾದ ಸದ್ಧರ್ಮವು ದುಷ್ಟನಾದ ರಾಕ್ಷಸನ ದೇಹದಲ್ಲಿ ನಿಲ್ಲುತ್ತದೆಯೆ ? ವೀರನಾದ ನಂದೀಶ್ವರನು ಧರ್ಮಸ್ವರೂಪನು. ಈ ರಾಕ್ಷಸನ ಶರೀರದಲ್ಲಿ ಯಾವರೀತಿ ಸೇರಿರುತ್ತಾನೆ? ಅವನು ಅದ್ಭುತಾಕಾರನಾಗಿ ಬೆಳೆಯಲು ಘೋರವಾದ ರಾಕ್ಷಸನ ದೇಹ ಬಿರಿಯುತ್ತಿರಲು ಗೊರಸಿನಿಂದ ಹೊಡೆಯುತ್ತಿರಲು ಅದು ಸರಿಸಮ ಅರ್ಧವಾಗಿ ಸೀಳಿತು. ಮತ್ತೆ

CC-0. Jangamwadi Math Collection. Digitized by eGangotri

ಸೇರಿರ್ಪನೆಂತುಟದ್ಭುತರೂಪಿನಿಂ ಬಳಿಯೆ
ಘೋರದಾನವನ ತನು ಬಿರಿವುತಿರೆ ಖುರದಿಂ ಪ್ರ
ಹಾರಿಸಲ್ ಸೀಳ್ದುದದು ಸಕ್ಕಸವುಮಾಗಿ ಮತ್ತೇನೆಂಬೆನದ್ಭುತವನು ೨೫

ಎರಡು ಕೋಡಿನೊಳೆರಡು ಸೀಳ್ಗಳಂ ನೆಗಪಿ ಮು
ಪ್ಪುರಕೊಂದನೀಡಾಡಿ ಮತ್ತೊಂದು ಸೀಳನೀ
ಹರಬಲಕ್ಕಿಡಲ್ ಸೀಳ್ಗಳೆರಡರಡಿಯೊಳ್ ಸಿಕ್ಕಿ ದೈತ್ಯಾಮರರ್ ಮಡಿವುದಂ
ಪರಿಗಣಿಸಲರಿದು ಪುರದೊಳ್ ಶಿಂಶುಮಾರಖಿಳ
ನುರು ಮರಣವಾರ್ತೆ ವಿಸ್ತರವಾಯ್ತು ತಾರಕನ
ಹಿರಿಯ ತನುಜಂ ಕೇಳಿ ಪರಿಭವದ ಬೇಗೆಯೊಳ್ ಪಾಡಳಿವುತಿಂತೆಂದನು ೨೬

ಅಳಿದನೇ ಹಾ ಶಿಂಶುಮಾರನೆಮ್ಮಯ ಭುಜವ
ನುಳಿದಳೇ ಜಯಲಕ್ಷ್ಮಿ ಬೊಮ್ಮನೆಮ್ಮೊಡನಾಡಿ
ಹೊಳೆದನೇ ಆಕಟಕಟ ತಮ್ಮ ಭಾಗ್ಯದ ಶರಧಿ ಬತ್ತಿ ಬಯಲಾದುದೆಂದು
ಅಳಲಿ ನಿಮಿಷಾರ್ಧದೊಳ್ ತನ್ನ ತಾನೇ ಕೂಡಿ
ತಿಳಿದು ರೋಷಾವೇಶನಾಗಿ ಸಿಂಹಾಸನವ
ನಿಳಿದು ನಡೆದಂ ತಾರಕಾಂಬಕಂ ವಿಲಯದಾರಂಭದ ಕೃತಾಂತನಂತೆ ೨೭

ಬಿತ್ತರಿಪೆನಾಲಿಸೈ ರಾಮ ಬಳಿಕಾ ರಾಕ್ಷ
ಸೋತ್ತಮಂ ಪುರದಿಂದೆ ಪೊರಮಡಲ್ ಕೂಡೆ ಮೂ
ವತ್ತು ಪದ್ಮ ಪ್ರಬಲಬಲದೈತ್ಯನಾಯಕರ್ ಪೊರಮಟ್ಟರಾ ಕ್ಷಣದೊಳು

ಅದ್ಭುತವನ್ನು ಏನೆಂದು ಹೇಳಲಿ ? ೨೬. ಎರಡು ಕೊಂಬುಗಳಲ್ಲಿಯೂ ಎರಡು ಸೀಳುಗಳನ್ನೆತ್ತಿ ತ್ರಿಪುರಕ್ಕೊಂದು ಸೀಳನ್ನು ಬಿಸುಟನು. ಮತ್ತೊಂದು ಸೀಳನ್ನು ಶಿವನ ಸೈನ್ಯದ ಮೇಲೆ ಹಾಕಿದನು. ಎರಡು ಸೀಳುಗಳ ಕೆಳಗಡೆಯೂ ಸಿಕ್ಕಿ ಸತ್ತ ರಾಕ್ಷಸರ ದೇವತೆಗಳ ಸಂಖ್ಯೆ ಲೆಕ್ಕಕ್ಕೆ ಸಿಗದಷ್ಟಿತ್ತು. ತ್ರಿಪುರದಲ್ಲಿ ಶಿಂಶುಮಾರನು ಸತ್ತ ಸುದ್ದಿ ಹರಡಿತು. ತಾರಕಾಸುರನ ಹಿರಿಯ ಮಗನು ಈ ವಾರ್ತೆಯನ್ನು ಕೇಳಿ ಸೋಲಿನ ಬೇಗೆಯಿಂದ ಶಕ್ತಿಗುಂದುತ್ತ ಹೇಳಿದನು. ೨೭. ಅಯ್ಯೋ ಶಿಂಶುಮಾರನು ಸತ್ತನೆ ? ನಮ್ಮ ತೋಳನ್ನು ಜಯಲಕ್ಷ್ಮಿಯು ಬಿಟ್ಟಳೆ ? ಬ್ರಹ್ಮನು ನಮಗೆ ಮಾತುಕೊಟ್ಟು ತಪ್ಪಿದನೆ ? ಅಯ್ಯಯ್ಯೋ ! ನಮ್ಮ ಭಾಗ್ಯದ ಸಮುದ್ರ ಬತ್ತಿ ಬಯಲಾಯಿತು ಎಂದು ದುಃಖಿಸಿ ನಿಮಿಷಾರ್ಧದಲ್ಲಿ ತನ್ನನ್ನು ತಾನೇ ಸಮಾಧಾನ ಮಾಡಿಕೊಂಡು ರೋಷಾವೇಶನಾಗಿ ಸಿಂಹಾಸನದಿಂದ ಇಳಿದು ಪ್ರಳಯದ ಪ್ರಾರಂಭದ ಯಮನಂತೆ ತಾರಕಾಕ್ಷನು ಹೊರಟನು. ೨೮. ಹೇಳುತ್ತೇನೆ ಕೇಳಯ್ಯ, ಸಿದ್ಧರಾಮ, ಅನಂತರ ಆ ರಾಕ್ಷಸೋತ್ತಮನು ಪುರದಿಂದ ಹೊರಹೊರಡಲು ಅವನ ಜೊತೆಯಲ್ಲಿ ಮುವ್ವತ್ತು ಪದ್ಮದಷ್ಟು ಪ್ರಬಲ ಬಲಶಾಲಿಗಳಾದ ಸೈನಿಕರನ್ನು ಹೊಂದಿದ್ದ ರಾಕ್ಷಸರ ನಾಯಕರು ಆ ಕ್ಷಣ ಹೊರಟರು.

CC-0. Jangamwadi Math Collection. Digitized by eGangotri

JNANA SIMHASAN JNANAMANDIR
LIBRARY
Jangamawadi Math, Varanasi
Acc. No. 4228

ಮತ್ತವಾರಣಘಟೆಗಳಂ ತುರಂಗಾಳಿಯುಂ
ಪತ್ತಿಗಳ ವಂಗಡವುದೇಂ ಗಣನೆಯಿನಿತುವಂ
ಪೆತ್ತವಂಗುಸುರಲಸದಳವಹಿಪಗಿಹಿಪರಳವೇ ಮಹಾದ್ಭುತವಮಾದುದು ೨೮

ಆನೆಗಳ ಘಂಟಾಸ್ವನಂ ಬೃಂಹಿತಸ್ವನಂ
ದಾನವರ ಭುಜತಾಡನಸ್ವನಂ ತುರಗಸಂ
ತಾನದ ಮಹಾಹೇಷಿತಸ್ವನಂ ಬಹುವಾದ್ಯನಿಸ್ವನಂ ಪೊಣ್ಮುತಿರಲು
ಏನೆಂಬೆನದ್ಭುತವನುಪರಿಲೋಕದ ಜನಂ
ತಾನಿರದೆ ಕಿವುಡಾಯ್ತು ದಿಗ್ಗಜಪ್ರತತಿ ಮರ
ದಾನೆಯಾಯ್ತುದನರಿದು ಫಣಿರಾಜನಾದಿಯೊಳ್ ಕರ್ಣವಿರಹಿತನಾದನು ೨೯

ಮಸಗಿ ಮುಂಬರಿವ ಭಟರಾಜಿಯುಂ ವಾಜಿಯುಂ
ರಸೆಯನಲ್ಲಾಡಿಸುವ ಕರಿಗಳುಂ ಹರಿಗಳುಂ
ಮಿಸುಪ ಕೂರ್ಮೊನೆಗಳ ಸರಳ್ಗಳುಂ ಬಾಳ್ಗಳುಂ ಕೇತನದ ಸಾಲ್ಗಳಿಂದೆ
ಪಸರಿಸಿದ ವಾದ್ಯನಿರ್ಘೋಷಮುಂ ರೋಷಮುಂ
ಮುಸುಕುತಿಹ ಸತ್ತಿಗೆಗಳೋಳಿಯುಂ ಧೂಳಿಯುಂ
ಬಿಸಮರಕ್ಕಸರ ಬೊಬ್ಬಾಟಮುಂ ಘಾಟಮುಂ ಬಹುಭಯಂಕರಮಾದುದು ೩೦

ಬೀಳಹೊಯ್ ಹೊಯ್ ನಾಯ್ಗಳಂ ನುಚ್ಚುನುರಿಗಳಂ
ಜಾಳಿಸಿದಹಂಕಾರಮೇ ಸುರರ ಗಂಟಲಂ
ಸೀಳೆನುತೆ ತಾರಕಾಕ್ಷಂ ತನ್ನ ಸೇನೆಯಂ ಕೈವೀಸಿ ಮುಂಬರಿಯಲು

ಮದಿಸಿದ ಆನೆಗಳು, ಕುದುರೆಗಳು, ಪದಾತಿಸೈನ್ಯಸಮೂಹ ಲೆಕ್ಕಿಸಲು ಸಾಧ್ಯವೆ ? ಇಷ್ಟನ್ನು ಹೊಂದಿದವನಿಗೆ ಹೇಳಲು ಅಸಾಧ್ಯ. ಇನ್ನು ಆದಿಶೇಷ ಮೊದಲಾದವರಿಗೆ ಸಾಧ್ಯವೇ ? ಬಹು ಅದ್ಭುತವಾಯಿತು. ೨೯. ಆನೆಗಳ ಘಂಟೆಗಳ ಶಬ್ದ, ಘೀಂಕಾರದ ಶಬ್ದ, ರಾಕ್ಷಸರ ಭುಜ ತಟ್ಟುವ ಶಬ್ದ, ಕುದುರೆಗಳ ಸಮೂಹದ ಹೇಷಾರವದ ಶಬ್ದ, ನಾನಾ ವಾದ್ಯಗಳ ಶಬ್ದ ಹೊಮ್ಮುತ್ತಿರಲು ಅದ್ಭುತವನ್ನು ಏನೆಂದು ಹೇಳಲಿ? ಮೇಲಿನ ಲೋಕದ ಜನ ಕಿವುಡಾದರು. ದಿಗ್ಗಜಗಳ ಸಮೂಹ ಮರದ ಆನೆಗಳಂತಾದುವು. ಅದನ್ನು ತಿಳಿದು ಆದಿಶೇಷನು ಮೊದಲು ಕಿವುಡನಾದನು. ೩೦. ಕೋಪದಿಂದ ಮಸಗುತ್ತ ಮುಂದುವರಿಯುತ್ತಿರುವ ಸೈನ್ಯದ ಸಮೂಹವೂ, ವಾಜಿಗಳೂ, ಸೊಂಡಿಲ ನ್ನಾಡಿಸುವ ಆನೆಗಳ, ಕುದುರೆಗಳ, ಹೊಳೆಯುವ ಚೂಪಾದ ಬಾಣಗಳು, ಕತ್ತಿಗಳು, ಬಾವುಟಗಳ ಸಾಲುಗಳಿಂದ, ಹರಡಿರುವ ವಾದ್ಯಗಳ ಆರ್ಭಟ, ರೋಷ, ಮುತ್ತುತ್ತಿರುವ ಛತ್ರಿಗಳ ಸಾಲುಗಳು, ಧೂಳು, ಕ್ರೂರರಾದ ರಾಕ್ಷಸರ ಆರ್ಭಟ ಸಂಗಮಗಳು ಬಹು ಭಯಂಕರವಾದುವು. ೩೧. ಬೀಳುವಂತೆ ಹೊಡೆ, ಹೀನರನ್ನು ಹೊಡೆ, ಸಣ್ಣಸಣ್ಣವರನ್ನು ಸೋಲಿಸಿದ ಅಹಂಕಾರವೆ ? ದೇವತೆಗಳ ಗಂಟಲನ್ನು ಸೀಳು ಎನ್ನುತ್ತ ತಾರಕಾಕ್ಷನು ತನ್ನ ಸೈನ್ಯಕ್ಕೆ ಕೈಬೀಸಿ ಸಂಜ್ಞೆ ಮಾಡಿ ಮುಂದುವರಿಸಲು ... ಚೂಣಿಯಂತೆ

CC-0. Jangamwadi Math Collection. Digitized by eGangotri

ಕಾಳಕೂಟದ ಚೂಳಿಯಂತಸುರನಾಯಕರ್
ಕೋಳಾಹಳಂಗೆಯ್ದುತ್ತುರುಬಿದರ್ ತುರುಗಿದರ್
ಬಾಳೆಯ ಬನಂಬೊಕ್ಕ ಮದದಾನೆವಿಂಡೆನಲು ಸವರಿದರ್ ಸುರಬಲವನು ೩೧

ಅಸಿಗಳಿಂದಿರಿದು ಚಕ್ರದೊಳಿಟ್ಟು ಸಬಳದಿಂ
ಕುಸುಕಿ ಪರಶುವಿನಿಂದೆ ಮುಸುಕಿ ಮುದ್ಗರದಿಂದ
ಲಸಿಯರೆದು ಬಾಣಂಗಳಿಂದೆಚ್ಚು ಖಡ್ಗದಿಂ ಕತ್ತರಿಸಿ ಕೋಪದಿಂದೆ
ಮುಸಲದಿಂ ಬಡಿದು ಗದೆಯಿಂ ಮೋದಿಯಿಟ್ಟಿಯಿಂ
ಮುಸಗಿಟ್ಟು ನಾನಾ ಪ್ರಕಾರಪ್ರಹಾರದಿಂ
ದೆಸೆಗೆಡಿಸಿದರ್ ಸುರಪ್ರಸರಮಂ ದಾನವರ್ ಪೊಸಕೊಲೆಯ ಕಡುಪಿನಿಂದೆ ೩೨

ಒಂದು ದೆಸೆಯೊಳ್ ಕಮಲಲೋಚನಂ ಜಂಭನಿರ
ದೊಂದು ದೆಸೆಯೊಳ್ ವಜ್ರನಾಭನೊಂದೆಸೆಗೆ ಮ
ತ್ತೊಂದು ದೆಸೆಯೊಳ್ ವೀರಸುಭಟ ವಿದ್ಯುನ್ಮಾಲಿ ಶುಂಭಖಳನೊಂದೆಸೆಯೊಳು
ಒಂದು ದೆಸೆಯೊಳ್ ತಾರಕಾಕ್ಷನಿಂತೆಲ್ಲರುಂ
ಮುಂದುವರಿದರೆಯಟ್ಟಿ ಕುಟ್ಟಿ ಘಟ್ಟಿಸೆ ಕೆಟ್ಟೆ
ವೆಂದೋಡಿದರ್ ಕಂಡಕಡೆಗೆ ನಿರ್ಜರಭಟರ್ ನಿಂದು ನಿಲ್ಲದೆ ಭರದೊಳು ೩೩

ಕಂಡನಮರೇಶ್ವರಂ ಮಡಿದ ದಾನವರೆಳ್ದು
ಖಂಡಿಸುತೆ ಬೆಂಕೊಂಡು ಬರ್ಪುದಂ ನಡೆತಂದು
ಖಂಡಪರಶುವಿಗೆಂದನೆಲೆ ದೇವ ಮಡಿದಸುರಬಲಮೆದ್ದು ಸುರಬಲವನು

ರಾಕ್ಷಸನಾಯಕರು ಕೋಲಾಹಲ ಮಾಡುತ್ತ ಜಡಿದರು, ಕವಿದರು, ಬಾಳೆಯ ತೋಟವನ್ನು ಹೊಕ್ಕ ಮದದಾನೆಯ ಹಿಂಡೋ ಎನ್ನುವಂತೆ ದೇವಸೈನ್ಯವನ್ನು ನಾಶಮಾಡಿದರು. ೩೨. ಕತ್ತಿಗಳಿಂದ ಇರಿದು, ಚಕ್ರದಿಂದ ಹೊಡೆದು, ಭರ್ಜಿಯಿಂದ ಚುಚ್ಚಿ, ಕೊಡಲಿಯಿಂದ ಮುಸುಕಿ, ಗದೆಯಿಂದ ಅರೆದು, ಬಾಣಗಳಿಂದ ಹೊಡೆದು, ಖಡ್ಗದಿಂದ ಕತ್ತರಿಸಿ, ಕೋಪಗೊಂಡು ಒನಕೆಯಿಂದ ಹೊಡೆದು, ಗದೆಯಿಂದ ಬಡಿದು, ಮುತ್ತಿ ಈಟಿಯಿಂದ ಇರಿದು ನಾನಾ ರೀತಿಯ ಹೊಡೆತಗಳಿಂದ ರಾಕ್ಷಸರು ಹೊಸಕೊಲೆಯ ಪರಾಕ್ರಮದಿಂದ ದೇವಸಮೂಹವನ್ನು ದಿಕ್ಕುಗೆಡಿಸಿದರು. ೩೩. ಒಂದು ಕಡೆಯಲ್ಲಿ ಕಮಲಾಕ್ಷ, ಮತ್ತೊಂದೆಡೆ ಜಂಭನು, ಇರದೆ ಮತ್ತೊಂದು ಭಾಗದಲ್ಲಿ ವಜ್ರನಾಭ, ಇನ್ನೊಂದು ಕಡೆಯಲ್ಲಿ ವೀರನಾದ ವಿದ್ಯುನ್ಮಾಲಿ, ಬೇರೊಂದು ಭಾಗದಲ್ಲಿ ಶುಂಭರಾಕ್ಷಸ, ಒಂದು ದಿಕ್ಕಿನಲ್ಲಿ ತಾರಕಾಕ್ಷ ಈ ರೀತಿ ಎಲ್ಲರೂ ಮುಂದುವರಿದು ಅಪ್ಪಳಿಸಿ, ಕುಟ್ಟಿ, ಘಟ್ಟಿಸಲು ಕೆಟ್ಟೆವೆಂದು ನಿಂತೂ ನಿಲ್ಲದೆ ರಭಸದಿಂದ ದೇವಸೈನಿಕರು ಸಿಕ್ಕಸಿಕ್ಕ ಕಡೆಗೆ ಓಡಿದರು. ೩೪. ಸತ್ತ ರಾಕ್ಷಸರು ಎದ್ದು ದೇವತೆಗಳನ್ನು ಖಂಡಿಸುತ್ತ ತಾರಕಾಕ್ಷನ ಹಿಂದೆ ಬರುವುದನ್ನು ದೇವೇಂದ್ರನು ನೋಡಿ ಬಂದು ಈಶ್ವರನಿಗೆ ಹೇಳಿದನು. ಎಲೆ ದೇವ, ಸತ್ತ ರಾಕ್ಷಸರ ಸೈನ್ಯ ಬದುಕೆದ್ದು

CC-0. Jangamwadi Math Collection. Digitized by eGangotri

ಅಂಡಲೆದು ಬರ್ಪರೆನಲಜಹರಿಗಳಂ ಕರೆದು
ಚಂಡದೈತ್ಯರ ಪುರದೊಳುಂಟಮೃತಕೂಪಮು
ದ್ದಂಡಪಾತಿವ್ರತೆಯರುಂಟವರುಮಂ ಕೆಡಿಸಿಮೆಂದೀಶ್ವರಂ ಕಳುಪಿದಂ ೩೪

ಹರನಾಜ್ಞೆಯಿಂ ಹರಿಯಜರ್ ತಮ್ಮ ರೂಪನಾ
ದರದಿಂದೆ ಮರೆಸಿ ಪಶು ಕರುವಾಗಿ ಪೋಗಿ ತ
ತ್ಪುರವನೊಳಪೊಕ್ಕಮೃತಮಂ ಪೀರ್ದು ಬಳಿಕಚ್ಯುತಂ ಬೌದ್ಧರೂಪಿನಿಂದೆ
ಹರಭಕ್ತಿಯಂ ಬಿಡಿಸಿ ದನುಜಸತಿಯರ ಮಹಾ
ಪರಮಪಾತಿವ್ರತ್ಯಮಂ ಕೆಡಿಸಿ ಹರಿಯಜರ್
ಮರಳಿ ಬಂದೀಶಂಗೆ ಬಿನ್ನವಿಸೆ ಹರನಂದು ಹರಗಣಕೆ ಸೆಲವಿತ್ತನು ೩೫

ಬಿಡದಾಗ ನಂದೀಶ ಭೃಂಗೀಶ ವೀರೇಶ
ರೊಡನೆ ಷಣ್ಮುಖ ಗಜಾನನ ಭೈರವಾದಿಗಳ್
ಸಡಗರಿಸಿ ತಂತಮ್ಮ ಸೇನೆಸಹಿತಂ ಮುಳಿದು ದೈತ್ಯರಂ ನುಂಗುವಂತೆ
ಸಿಡಿಲ ಜಂಗುಳಿಯೊ ವಿಲಯಾಂತಕನ ವಂಗಡವೊ
ಮೃಡನ ಭಾಳಾಂಬಕಮಹಾಜ್ವಾಲೆಯಾಕೃತಿಯು
ಗಡಣವೋ ತನ್ಮಹಾಮೂರ್ತಿಗಳೊ ಪೇಳೆನಲ್ ಗುಡುಗುಡಿಸಿ ನಡೆತಂದರು ೩೬

ಮೊಳಗಿದುವು ಲಗ್ಗವರೆಗಳ್ ಭಟರ ಬೊಬ್ಬೆಗಳ
ಕಳಕಳಂ ಪರ್ಬಿದುದು ಹರಗಣದ ನಾಯಕರ್
ಮುಳಿದು ಕೊಲತೊಡಗಿದರ್ ದೈತ್ಯರಂ ತಮತಮಗೆ ನಾನಾ ಪ್ರಕಾರದಿಂದೆ

ದೇವಸೈನ್ಯವನ್ನು ಪಾಡುಪಡಿಸಿ ಬರುತ್ತಿದೆ ಎಂದನು. ಆಗ ವಿಷ್ಣು-ಬ್ರಹ್ಮರನ್ನು ಕರೆದು ಪ್ರಚಂಡ ರಾಕ್ಷಸರ ಪಟ್ಟಣದಲ್ಲಿ ಅಮೃತದ ಬಾವಿಯಿದೆ. ಪರಮಪತಿವ್ರತೆಯರು ಇದ್ದಾರೆ. ಅವರನ್ನು ಕೆಡಿಸಿ ಎಂದು ಈಶ್ವರನು ಕಳಿಸಿದನು. ೩೫. ಈಶ್ವರನ ಆಜ್ಞೆಯಂತೆ ಬ್ರಹ್ಮ-ವಿಷ್ಣುಗಳು ತಮ್ಮ ರೂಪವನ್ನು ಆದರದಿಂದ ಮರೆಸಿಕೊಂಡು, ಹಸು-ಕರುಗಳಾಗಿ ಹೋಗಿ ಆ ಪುರವನ್ನು ಹೊಕ್ಕು, ಅಮೃತವನ್ನು ಕುಡಿದು ಅನಂತರ ವಿಷ್ಣುವು ಬೌದ್ಧರೂಪದಿಂದ ಜನರಿಗೆ ಹರನಲ್ಲಿದ್ದ ಭಕ್ತಿಯನ್ನು ಹೋಗಲಾಡಿಸಿ, ರಾಕ್ಷಸಸ್ತ್ರೀಯರ ಪಾತಿವ್ರತ್ಯವನ್ನು ಕೆಡಿಸಿದನು. ಬ್ರಹ್ಮವಿಷ್ಣುಗಳು ಹಿಂದಿರುಗಿ ಬಂದು ಈಶ್ವರನಿಗೆ ಈ ಸಂಗತಿಯನ್ನು ವಿಜ್ಞಾಪಿಸಿಕೊಳ್ಳಲು ಹರನು ಅಂದು ಶಿವಗಣಕ್ಕೆ ಅಪ್ಪಣೆ ಕೊಟ್ಟನು. ೩೬. ಆಗ ನಂದೀಶ, ಭೃಂಗೀಶ, ವೀರೇಶರ ಜೊತೆಯಲ್ಲಿ ಷಣ್ಮುಖ, ಗಣೇಶ, ಭೈರವ ಮೊದಲಾದವರು ಸಂಭ್ರಮದಿಂದ ತಮ್ಮತಮ್ಮ ಸೇನೆಯ ಜೊತೆಯಲ್ಲಿ ಕೋಪಗೊಂಡು ರಾಕ್ಷಸರನ್ನು ನುಂಗುವಂತೆ ನಡೆದರು. ಸಿಡಿಲಗುಂಪೋ, ಪ್ರಳಯಾಂತಕನ ಸಮೂಹವೋ, ಶಿವನ ಹಣೆಗಣ್ಣಿನ ಉರಿಯರೂಪದ ಸಮೂಹವೋ, ಆ ಮಹಾಮೂರ್ತಿಗಳೋ ಹೇಳು ಎನ್ನಲು ಗುಡುಗುಡಿಸಿ ನಡೆದುಬಂದರು. ೩೭. ಲಗ್ಗೆಯ ವಾದ್ಯಗಳು ಆರ್ಭಟಿಸಿದವು. ಭಟರ ಬೊಬ್ಬೆಯ ಕಲಕಲರವ ಹಬ್ಬಿತು. ಶಿವಗಣದ ನಾಯಕರು ಕೋಪದಿಂದ ರಾಕ್ಷಸರನ್ನು ತಾವು ತಾವೇ ನಾನಾ ರೀತಿ ಕೊಲ್ಲತೊಡಗಿದರು. ಶ[illegible]ವಾದ ವೀರಭದ್ರನು

CC-0. Jangamwadi Math Collection. Digitized by eGangotri

ಕಲಿವೀರಭದ್ರನಾ ಕಮಲಾಕ್ಷನಂ ಗುಹಂ
ನಲಿದು ವಿದ್ಯುನ್ಮಾಲಿಯುಂ ನಂದಿ ಶುಂಭನಂ
ಬಲವೈರಿ ಜಂಭನಂ ಭೈರವಂ ತಾರಕಾಕ್ಷನನುರುಬಿ ಘಾತಿಸಿದರು ೩೭

ವೀರಭದ್ರನ ಖಡ್ಗಹತಿಗೆ ಕಮಲಾಕ್ಷಂ ಕು
ಮಾರನಂಬಿನ ಹತಿಗೆ ವೀರವಿದ್ಯುನ್ಮಾಲಿ
ಧೀರ ನಂದೀಶನುರವಣೆಗೆ ಶುಂಭಂ ಹರಿಯ ಭರವಸಕೆ ಜಂಭಾಸುರಂ
ಭೈರವನ ಭೈರವಾಡಂಬರಕ್ಕೆರ್ದೆ ಬಿರಿದು
ತಾರಕಾಕ್ಷಂ ಮುರಿದನೆಲೆ ಸಿದ್ಧರಾಮ ಕೇಳ್
ಸಾರಧರ್ಮದ ಮುಂದಧರ್ಮವಡ್ಡೈಸುವದೆ ಪೇಳಲೇನಚ್ಚರಿಯನು ೩೮

ಧರ್ಮಹೀನರ್ಗೆ ಜಯಲಕ್ಷ್ಮಿಯೊಲಿವಳೆ ಖಳರ
ವರ್ಮವಂ ತಿಳಿದು ಕೋಪದೊಳಭವಬಲದ ವೀ
ರರ್ಮಸಗಿ ಕಡಿದಿರಿದು ಮುಂಕೊಂಡು ಕೊಚ್ಚಿ ಖಂಡಿಸಿ ತರಿದು ಜಡಿದು ಬಡಿದು
ನೂರ್ಮಡಿಸಿ ವಿಕ್ರಮಂ ದೈತ್ಯರಂ ಮೂದಲಿಸಿ
ಮಾರ್ಮಲೆವರಂ ಮಡಿಪೆ ತರಹರಿಸಲಾರದೆ ಖ
ಳರ್ಮುರಿದು ಕಂಡಕಡೆಗೋಡಿದರ್ ತದ್ರಣಾಂಕಣವನೇಂ ಬಣ್ಣಿಸುವೆನು ೩೯

ಉರುಳ್ವ ತಲೆಯೋಡ್ಗಳಿಂ ಕಡಿವಡೆದ ತೋಳ್ಗಳಿಂ
ಪರಿದ ನವಖಂಡದಿಂದಡೆಗೆಡೆದ ಮುಂಡದಿಂ
ಸುರಿವ ಕರುಳೋಳಿಯಿಂ ಮಡಿದ ತುರಗಾಳಿಯಿಂ ಬಿಡುವಿಡುಳ ಜೌಗಿನಿಂದೆ

ಆ ಕಮಲಾಕ್ಷನನ್ನು, ಗುಹನು ಸಂತೋಷದಿಂದ ವಿದ್ಯುನ್ಮಾಲಿಯನ್ನು, ನಂದಿ ಶುಂಭನನ್ನು, ಇಂದ್ರನು ಜಂಭನನ್ನು, ಭೈರವನು ತಾರಕಾಕ್ಷನನ್ನು ಅಡ್ಡಗಟ್ಟಿ ಹೊಡೆದರು. ೩೮. ವೀರಭದ್ರನ ಕತ್ತಿಯ ಹೊಡೆತಕ್ಕೆ ಕಮಲಾಕ್ಷನು, ಕುಮಾರನ (ಗುಹನ) ಬಾಣದ ಹೊಡೆತಕ್ಕೆ ವೀರ ವಿದ್ಯುನ್ಮಾಲಿ, ಧೀರ ನಂದೀಶನ ವಿಜೃಂಭಣೆಗೆ ಶುಂಭನು, ವಿಷ್ಣುವಿನ ರಭಸಕ್ಕೆ ಜಂಭಾಸುರನೂ, ಭೈರವನ ಭೈರವಾಡಂಬರಕ್ಕೆ ಎದೆಬಿರಿದು ತಾರಕಾಕ್ಷನೂ ಬೆನ್ನು ಕೊಟ್ಟರು. ಎಲೈ ಸಿದ್ಧರಾಮ, ಕೇಳು, ಶ್ರೇಷ್ಠಧರ್ಮದ ಮುಂದೆ ಅಧರ್ಮ ಅಡ್ಡಗಟ್ಟಬಲ್ಲುದೆ? ೩೯. ಧರ್ಮಹೀನರಿಗೆ ಜಯಲಕ್ಷ್ಮಿ ಒಲಿಯುತ್ತಾಳೆಯೆ? ರಾಕ್ಷಸರ ಮರ್ಮವನ್ನು ಅರಿತು ಕೋಪದಿಂದ ಶಿವನ ಸೈನ್ಯದ ವೀರರು ಕುಪಿತರಾಗಿ ಕಡಿದರು, ಇರಿದರು, ಮೇಲೆಬಿದ್ದು ಕೊಚ್ಚಿ, ಕತ್ತರಿಸಿ, ತರಿದು, ಜಡಿದು, ಬಡಿದು, ಪರಾಕ್ರಮವು ನೂರ್ಮಡಿಯಾಗಿ ರಾಕ್ಷಸರನ್ನು ಮೂದಲಿಸಿ, ಎದುರುಬಿದ್ದವರನ್ನು ಸಾಯಿಸಿದರು. ಇದೆಲ್ಲವನ್ನೂ ತಾಳಲಾರದೆ ರಾಕ್ಷಸರು ಬೆನ್ನು ತಿರುಗಿಸಿ ಸಿಕ್ಕಸಿಕ್ಕೆಡೆಗೆ ಓಡಿದರು. ಆ ರಣರಂಗವನ್ನು ಏನೆಂದು ವರ್ಣಿಸಲಿ? ೪೦. ಉರುಳುತ್ತಿದ್ದ ತಲೆಚಿಪ್ಪುಗಳಿಂದ, ಕಡಿದುಬಿದ್ದ ತೋಳುಗಳಿಂದ, ಹರಿದ ಮಾಂಸಖಂಡಗಳಿಂದ, ನೆಲದ ಮೇಲೆ ಬಿದ್ದಿದ್ದ ದೇಹದಿಂದ, ಸುರಿಯುತ್ತಿದ್ದ ಕರುಳ ಉಂಡೆಗಳಿಂದ, ಸತ್ತ ಕುದುರೆಗಳ ಗುಂಪಿನಿಂದ,

CC-0. Jangamwadi Math Collection. Digitized by eGangotri

ನರಳ್ವರೆವೆಣಂಗಳಿಂ ಪರಿವ ರಕ್ತಂಗಳಿಂ
ಮೊರೆವ ರಣಭೂತದಿಂ ಶಾಕಿನಿವ್ರಾತದಿಂ
ತರತರದ ಬಾಣದಿಂ ಖಂಡಿತಕೃಪಾಣದಿಂ ರಣಭೂಮಿ ಕಣ್ಗೆಸೆದುದು ೪೦

ಮತ್ತೆ ಗಣನಾಯಕರ್ ಮುತ್ತಿ ರಿಪುವೀರರುಮ
ನೊತ್ತಿ ಮಾರಾಂತರಂ ತತ್ತರಂದರಿದಿರಿದು
ಕತ್ತರಿಸಿ ದುರದುರಿಪ ನೆತ್ತರಿನ ಕೋಡಿಯಿರದೊತ್ತರಿಸಿ ಸುತ್ತುವರಿಯೆ
ಎತ್ತಲುಂ ಪರಿದು ಬಾಯ್ ಬತ್ತಿ ಢಗೆಯೊತ್ತಿ ಮೆಯ್
ಪೊತ್ತಿ ಮಿಗೆ ಪುತ್ತುಮಂ ಪತ್ತಿದಮರಾಳಿಗಳ
ಮೊತ್ತಮಂ ಕಾಯ್ದು ಬೆಂಬತ್ತಿದರ್ ದಾನವರನೆತ್ತಿದಾಯುಧಗಳಿಂದೆ ೪೧

ಸಿಕ್ಕಿದಳಲಾ ಬಹಳಕಾಲಕಿಂದಿನದಿನಂ
ರಕ್ಕಸರ ಜಯಲಕ್ಷ್ಮಿ ಕವಿವ ನುಚ್ಚುಗಳ ಪೊಯ್
ಮಿಕ್ಕು ಕವಿಕವಿಯೆನುತೆ ಸುರಬಲದ ನಾಯಕರ್ ತಾವಾಗ ಕೂಡೆ ಮಸಗಿ
ಒಕ್ಕಲಿಕ್ಕುತೆ ಕರದ ಖಂಡೆಯದ ದನಿಯೊಡನೆ
ನೆಕ್ಕನೆಳಿಲೆನೆ ವಾದ್ಯರಭಸದಿಂದುರುಬಿದರ್
ಮಕ್ಕಳಾಟಿಕೆಯಾಯ್ತು ಖಳಭಟರ ಕಾಳೆಗಂ ಪೇಳಲೇನಚ್ಚರಿಯನು ೪೨

ಆನೆಗಳನಿಳಿದು ಮಾವ್ತರ್ ದಿವ್ಯತುರಗಮಂ
ತಾನವುಂ ಬಿಟ್ಟು ರಾವ್ತರ್ ತೇರಿನಿಂ ಧುಮುಕಿ
ಹೀನವುಂ ಭಾವಿಸದೆ ರಥಿಕರಸಿ ಮುಸಲಾದಿ ಕೈದುಗಳನಿಳೆಗೆ ಬಿಸುಟು

ಹೊರಬಿದ್ದ ಮೆದುಳ ಜೌಗಿನಿಂದ, ನರಳುತ್ತಿದ್ದ ಅರೆಜೀವಿಗಳಿಂದ, ಹರಿಯುತ್ತಿದ್ದ ರಕ್ತದಿಂದ, ಆರ್ಭಟಿಸುವ ರಣಭೂತಗಳಿಂದ, ಶಾಕಿನಿಯರ ಸಮೂಹದಿಂದ, ನಾನಾ ರೀತಿಯ ಬಾಣದಿಂದ, ಮುರಿದ ಕತ್ತಿಗಳಿಂದ ಯುದ್ಧಭೂಮಿ ಭಯಂಕರವಾಗಿ ಕಾಣಿಸಿತು. ೪೧. ಮತ್ತೆ ಗಣನಾಯಕರು ಶತ್ರುಸೈನಿಕರನ್ನು ಮುತ್ತಿ, ಎದುರಿಸಿದವರನ್ನು ಹಿಂದೊತ್ತಿ ತರಿತರಿದು, ಇರಿದು ಕತ್ತರಿಸಿ, ಚಿಮ್ಮುವ ರಕ್ತದ ಕೋಡಿ ತಡೆಯದೆ ಒತ್ತರಿಸಿ ಸುತ್ತುಗಟ್ಟಲು ಎಲ್ಲ ಕಡೆಗೂ ಓಡಿ ಬಾಯಿಬತ್ತಿ, ಧಗೆ ಹೆಚ್ಚಿ, ಮೈಹತ್ತಿ, ಹುತ್ತವನ್ನು ಹತ್ತಿದ ದೇವತೆಗಳನ್ನು ರಕ್ಷಿಸಿ, ಎತ್ತಿದ ಆಯುಧಗಳಿಂದ ದಾನವರನ್ನು ಬೆನ್ನಟ್ಟಿದರು. ೪೨. ಬಹಳ ಕಾಲದ ನಂತರ ಈ ದಿನ ರಾಕ್ಷಸರ ಜಯಲಕ್ಷ್ಮಿ ಸಿಕ್ಕಿದಳು. ಮೇಲೆ ಬೀಳುವ ಸಾಮಾನ್ಯರನ್ನು ಹೊಡೆ, ಚೆನ್ನಾಗಿ ಮುತ್ತು ಎನ್ನುತ್ತ ದೇವಸೈನ್ಯದ ನಾಯಕರು ತಾವು ಆಗ ಮೇಲೆ ಬಿದ್ದು ತರಿದು ಹಾಕುತ್ತ, ಕೈಯ ಕತ್ತಿಯ ಶಬ್ದದೊಡನೆ ದಡದಡ ಎನ್ನುವ ವಾದ್ಯಗಳ ಶಬ್ದದಿಂದ ಮುನ್ನುಗ್ಗಿದರು. ರಾಕ್ಷಸಸೈನಿಕರ ಯುದ್ಧ ಮಕ್ಕಳಾಟವಾಯ್ತು. ಆಶ್ಚರ್ಯವನ್ನು ಏನೆಂದು ಹೇಳಲಿ ? ೪೩. ಮಾವುತರು ಆನೆಗಳನ್ನು ಇಳಿದು ; ರಾವುತರು ಶ್ರೇಷ್ಠವಾದ ಕುದುರೆಗಳನ್ನು ಬಿಟ್ಟು ; ಹೀನಾಯವನ್ನು ಆಲೋಚಿಸದೆ ರಥಿಕರು ರಥದಿಂದ ಧುಮುಕಿ, ಕತ್ತಿ ಒನಕೆ ಮೊದಲಾದ ಆಯುಧಗಳನ್ನು ಭೂಮಿಯ

CC-0. Jangamwadi Math Collection. Digitized by eGangotri

ಮಾನಮುಳಿದೊಡನೆ ಕಾಲಾಳ್ ರುದ್ರಸುಭಟಪ್ರ
ತಾನಮಂ ದೈನ್ಯದಿಂ ಕಾಲ್ಗೆರಗಿ ಕಳವಳಿಸಿ
ಮೌನದಿಂ ಪ್ರಾಣಮಂ ಮಿಗಿಸಿಕೊಂಡೋಡಿದರ್ ತಮತಮಗೆ ಕಂಡಕಡೆಗೆ ೪೩

ತಲೆಗಳಂ ಮೆಟ್ಟಿ ಮುಂಡಮನೆಡಹಿ ಕರುಳ್ಗಳಂ
ತುಳಿದು ನರದೊಳ್ ತೊಡರಿ ರಕ್ತದೊಳ್ ನನೆದು ಪೇ
ರೆಲುಗಳುಮನೊದೆದು ಕೈದುಗಳ ಸೋಂಕಿಂ ಗಾಯವಡೆದು ಪಗೆಗಳ ಬೊಬ್ಬೆಗೆ
ಸಲೆ ಬೀಳುತೇಳುತಳಲುತೆ ಮುಂದುಗಾಣದುರೆ
ಕಳವಳಿಸಿ ಕಾಲ್ಗೆಟ್ಟು ದೈತ್ಯಸೇನಾಭಟರ್
ತಲೆದಡವುತೋಡಿದರ್ ಪೇಳಲೇನಸುರರಾಳ್ತನದ ಭಂಗವನಾಗಳು ೪೪

ಮಲೆತವರ ತಲೆಗಳಂ ಕೊಳುತೆ ನತರಾದವರ
ನುಳುಪುತ್ತೆ ಮಾವುತರಾವುತರ್ಗೆ ನಂಬುಗೆಯಿತ್ತು
ಕಳುಪಿ ಗಜತುರಗಂಗಳಂ ಪಿಡಿವುತೋಡುವರ ಕೈದುವಂ ಸೆಳೆದುಕೊಳುತೆ
ಖಳನೃಪರ ಛತ್ರಚಾಮರ ಪತಾಕಾಳಿಯುಂ
ಕೆಲದವರ ಕೈಗೊಳಗುಮಾಡಿಸುತೆ ಪರೆಗಳಂ
ಮೊಳಗಿಸುತ ಬಿರುದನುರೆ ಪೊಗಳಿಸುತೆ ಹರಗಣಂ ಬೆಂಬತ್ತಿತರಿಬಲವನು ೪೫

ಓಡಿದಂ ವೀರವಿದ್ಯುನ್ಮಾಲಿ ಮನದೊಳಗೆ
ಕೋಡಿದಂ ಕಮಲಾಕ್ಷನೂರೊಳಗೆ ವಿಶ್ರಮಂ
ಮಾಡಿದಂ ತಾರಕಾಕ್ಷಂ ಮಿಕ್ಕ ದೊರೆಗಳೇನಾದರೋ ತತ್‌ಕ್ಷಣದೊಳು

ಮೇಲೆ ಎಸೆದು, ಮರ್ಯಾದೆ ಬಿಟ್ಟು ತಕ್ಷಣ ಶಿವಸೈನ್ಯಸಮೂಹದ ಕಾಲಿಗೆ ದೈನ್ಯದಿಂದ ಬಿದ್ದು, ಕಳವಳಗೊಂಡು ಮಾತಿಲ್ಲದೆ ಪ್ರಾಣವುಳಿಸಿಕೊಂಡು ತಮತಮಗೆ ಸಿಕ್ಕಿದ ಕಡೆಗೆ ಓಡಿದರು. ೪೪. ರಾಕ್ಷಸಸೈನ್ಯದ ಭಟರು ಬಿದ್ದಿದ್ದ ತಲೆಗಳನ್ನು ಮೆಟ್ಟಿ, ಶರೀರಗಳನ್ನು ಎಡವಿ, ಕರುಳುಗಳನ್ನು ತುಳಿದು, ನರಗಳಲ್ಲಿ ತೊಡರಿಕೊಂಡು, ರಕ್ತದಲ್ಲಿ ನೆನೆದು, ದೊಡ್ಡ ಎಲುಬುಗಳನ್ನು ಒದ್ದು, ಆಯುಧಗಳ ತಗಲುವಿಕೆಯಿಂದ ಗಾಯಗೊಂಡು, ಶತ್ರುಗಳ ಆರ್ಭಟಕ್ಕೆ ಬೀಳುತ್ತ-ಏಳುತ್ತ ಬೇಗುದಿ ಹೊಂದಿ, ಮುಂದುಗಾಣದೆ ಬಹಳವಾಗಿ ಕಳವಳ ಪಡುತ್ತ, ಕಾಲ್ಗೆಟ್ಟು ತಲೆದಡವುತ್ತ ಓಡಿದರು. ಆಗ ಆದ ರಾಕ್ಷಸರ ಪರಾಕ್ರಮದ ಭಂಗವನ್ನು ಏನು ಹೇಳಲಿ ? ೪೫. ಗರ್ವದಿಂದ ಎದುರಿಸಿದವರ ತಲೆತೆಗೆಯುತ್ತ, ಶರಣಾದವರನ್ನು ರಕ್ಷಿಸುತ್ತ, ಮಾವುತ-ರಾವುತರಿಗೆ ಆಶ್ವಾಸನೆ ಕೊಟ್ಟು ಕಳಿಸಿ, ಆನೆ ಕುದುರೆಗಳನ್ನು ಓಡಿಯುತ್ತ, ಓಡುತ್ತಿರುವವರ ಆಯುಧಗಳನ್ನು ಕಿತ್ತುಕೊಳ್ಳುತ್ತ, ರಾಕ್ಷಸರಾಜರ ಛತ್ರ-ಚಾಮರ-ಧ್ವಜಗಳನ್ನು ಪಕ್ಕದಲ್ಲಿದ್ದವರ ವಶಕ್ಕೆ ಕೊಡುತ್ತ, ತಮಟೆ ಗಳನ್ನು ಹೊಡೆಸುತ್ತ, ಬಿರುದುಗಳನ್ನು ಚೆನ್ನಾಗಿ ಹೊಗಳಿಸುತ್ತ ಶಿವಗಣ ಶತ್ರುಸೈನ್ಯದ ಬೆನ್ನುಹತ್ತಿತು. ೪೬. ವೀರ ವಿದ್ಯುನ್ಮಾಲಿ ಓಡಿದನು. ಕಮಲಾಕ್ಷ ಮನಸ್ಸಿನಲ್ಲೇ ಹೆದರಿದನು. ತಾರಕಾಕ್ಷನು ಊರೊಳಗೆ ವಿಶ್ರಾಂತಿ ಪಡೆದನು. ಮಿಕ್ಕ ನಾಯಕರು

CC-0. Jangamwadi Math Collection. Digitized by eGangotri

ಕೂಡಿದುದು ಪುರದೊಳಸುರಪದಾತಿ ದಾಳಿಯಂ
ಮಾಡಿದುದು ಹರಗಣಂ ಪುರದ ಪೆರ್ಬಾಗಿಲೊಳ್
ಗಾಢದಿಂ ಧರ್ಮಗಾಳೆಯನಿರದೆ ಪಿಡಿಸಿ ತಿರುಗಿತು ವಿಜಯದುತ್ಸವದೊಳು ೪೬

ರಾಮ ಕೇಳ್ ವಿಜಯದುತ್ಸಹದಿಂದಲಂದು ಸು
ತ್ರಾಮಮುಖ್ಯಾಮರಕದಂಬಕಂ ಸಂಗರೋ
ದ್ದಾಮ ಷಣ್ಮುಖ ವೀರಭದ್ರಾದಿಗಳ್ ಕೂಡಿ ಸಂಭ್ರಮದೊಳೈತರುತಿರೆ
ಕಾಮಸಂಹರನಿತ್ತಲಚಲಚಾಪದೊಳೆ ನಿ
ಸ್ಸೀಮ ಪಾಶುಪತಾಸ್ತ್ರಮಂ ಪೂಡಿ ಖಳರ ನಿ
ರ್ನಾಮಮಂ ಮಾಳ್ಪೆನೆಂದೆನುತೆ ಮುಪ್ಪುರದ ಕೀಲಂ ನಿರೀಕ್ಷಿಸುತಿರ್ದನು ೪೭

ನೆರೆ ಸುರಸಹಸ್ರವರುಷಂ ನೋಡಲಾಗ ಮು
ಪ್ಪುರಗಳೊಂದಾದುವು ಲಲಾಟೇಕ್ಷಣಾಗ್ನಿಯಂ
ಹುರಿಗೊಳಿಸಿ ಪಾಶುಪತಬಾಣಮಂ ಬಿಡೆ ಪುರತ್ರಯದ ಕೀಲಂ ಖಂಡಿಸಿ
ಉರಿಪಿದುದು ತತ್ಪುರಂಗಳ ಪರಿಕರಂಗಳಂ
ಕರಿಕಾದುದಾ ಕ್ಷಣದೊಳಾ ದೈತ್ಯಸಂಕುಲಂ
ಸುರರೆ ಪೂಮಳೆಗರೆದರೀಶ್ವರನ ಸಿರಿಮುಡಿಯೊಳೇನೆಂದು ಬಣ್ಣಿಸುವೆನು ೪೮

ಹರಿಯಜ ಸುರೇಂದ್ರಾದಿ ಸಕಲ ನಿರ್ಜರಜನಂ
ಹರನ ಬಿರುದಾವಳಿಯ ಕೊಂಪಾಡುತಿರಲಾಗ
ವರರಥವನಾ ಪರಿಕರಂಗಳಂ ಮುನ್ನಿನಂತಿರವೇಳ್ದು ಸಕಲ ಸುರರ

ಏನಾದರೊ ? ಆ ಕ್ಷಣದಲ್ಲಿ ರಾಕ್ಷಸರ ಕಾಲಾಳುಸೈನ್ಯ ಊರಿನ ಒಳಗೆ ಸೇರಿಕೊಂಡಿತು. ಶಿವಗಣ ಧಾಳಿ ಮಾಡಿತು. ಪುರದ ಹೆಬ್ಬಾಗಿಲಿನಲ್ಲಿ ಜೋರಾಗಿ ಧರ್ಮಕಹಳೆಯನ್ನು ಊದಿಸಿ ವಿಜಯದ ಉತ್ಸಾಹದಿಂದ ಹಿಂತಿರುಗಿತು. ೪೭. ಸಿದ್ಧರಾಮ ಕೇಳು, ವಿಜಯದ ಉತ್ಸಾಹದಿಂದ ಅಂದು ದೇವೇಂದ್ರ ಮುಂತಾದ ಮುಖ್ಯ ದೇವಸಮೂಹ, ಯುದ್ಧೋದ್ದಾಮ ಷಣ್ಮುಖ, ವೀರಭದ್ರ ಮೊದಲಾದವರು ಕೂಡಿಕೊಂಡು ಸಂಭ್ರಮದಿಂದ ಬರುತ್ತಿದ್ದರು. ಇತ್ತ ಕಡೆ ಈಶ್ವರನು ಮಂದರಪರ್ವತದ ಬಿಲ್ಲಿನಲ್ಲಿ ಶ್ರೇಷ್ಠವಾದ ಅಸಮಾನವಾದ ಪಾಶುಪತಾಸ್ತ್ರವನ್ನು ಹೂಡಿ ರಾಕ್ಷಸರನ್ನು ನಿರ್ನಾಮ ಮಾಡುತ್ತೇನೆಂದು ತ್ರಿಪುರದ ಕೀಲನ್ನು ನಿರೀಕ್ಷಿಸುತ್ತಿದ್ದನು. ೪೮. ದೇವಸಾವಿರ ವರ್ಷಗಳವರೆಗೆ ಚೆನ್ನಾಗಿ ನೋಡಲು ತ್ರಿಪುರಗಳು ಒಂದಾದುವು. ಹಣೆಗಣ್ಣಿನ ಬೆಂಕಿಯನ್ನು ಹುರಿಗೊಳಿಸಿ ಪಾಶುಪತಾಸ್ತ್ರವನ್ನು ಬಿಡಲು ಅದು ತ್ರಿಪುರದ ಕೀಲನ್ನು ಒಡೆದು ಆ ಪುರಗಳ ಸಾಮಗ್ರಿಗಳನ್ನು ಸುಟ್ಟು ಕರಿಕು ಮಾಡಿತು. ಆ ರಾಕ್ಷಸಸಮೂಹ ಕರಿಕಾದುವು. ಈಶ್ವರನ ಸಿರಿಮುಡಿಯ ಮೇಲೆ ದೇವತೆಗಳು ಹೂಮಳೆ ಕರೆದರು. ೪೯. ವಿಷ್ಣು-ಬ್ರಹ್ಮ-ದೇವೇಂದ್ರ ಮೊದಲಾದ ಎಲ್ಲ ದೇವತೆಗಳೂ ಶಿವನ ಬಿರುದುಗಳನ್ನು ಕೊಂಡಾಡುತ್ತಿರಲು ಆಗ ಶ್ರೇಷ್ಠವಾದ ರಥವನ್ನು ಆ ಪರಿಕರಗಳನ್ನು ಮೊದಲಿನಂತೆ ಮಾಡಿ ಹೇಳಿ ಎಲ್ಲ ದೇವತೆ

CC-0. Jangamwadi Math Collection. Digitized by eGangotri

ಕರುಣದಿಂ ನೋಡಿ ಮನ್ನಿಸುತಲವರನವರವರ
ಪುರಗಳ್ಗೆ ಬೀಳ್ಕೊಟ್ಟು ಮಂದರಾಚಲಕೈದಿ
ಗಿರಿಜೆಯೊಡಗೂಡಿ ಸುಖಸಂತಸದೆ ಪಂಪಾವಿರೂಪಾಕ್ಷನೊಪ್ಪಿರ್ದನು ೪೯

ಇಂತೆಸೆವ ಚೆನ್ನಬಸವೇಶನಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖವಂ ಸಕಲಭೋಗವುನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ ೫೦

ನಲವತ್ತುನಾಲ್ಕನೆಯ ಸಂಧಿ ಸಂಪೂರ್ಣ

ಗಳನ್ನೂ ಕರುಣೆಯಿಂದ ನೋಡಿ ಮನ್ನಿಸುತ್ತ ಅವರನ್ನು ಅವರವರ ಪಟ್ಟಣಗಳಿಗೆ ಕಳಿಸಿ ಕೊಟ್ಟು ಮಂದರಪರ್ವತಕ್ಕೆ ಹೋಗಿ ಗಿರಿಜೆಯೊಡನೆ ಕೂಡಿ ಪಂಪಾವಿರೂಪಾಕ್ಷನು ಸುಖ ಸಂತೋಷದಿಂದಿದ್ದನು. ೫೦. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿಮಾಡಿದವರಿಗೆ,ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯ ವರೆವಿಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ, ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನು, ಎಲ್ಲ ಭೋಗಗಳನ್ನು, ಅನಂತ ಸೌಭಾಗ್ಯವನ್ನು ಕೊಟ್ಟು ಕಾಪಾಡುವನು.

ನಲವತ್ತುನಾಲ್ಕನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ನಲವತ್ತೈದನೆಯ ಸಂಧಿ

ಸೂಚನೆ : ಮಂದರಾಚಲದ ಮನೆಯೊಳಗಿರುತೆ ಶಂಕರಂ
ಮಂದಾರದರಲಿಗಾಗಿಯೆ ಚೈತ್ರರಥವನಮ
ನಂದು ಸೃಜಿಯಿಸಿ ಜಲಕ್ರೀಡೆಯಂ ಕಳೆದು ತದ್ವನದೊಳಗೆ ಸುಖಮಿರ್ದನು

ಮಂದರಾಗದ ತವದೊಳೆಡೆಯೆಡೆಗೆ ರಂಜಿಸುವ
ಮಂದರಾಗದ ವನದೊಳೀಕ್ಷಿಸುವರಕ್ಷಿಗಂ
ಮಂದರಾಗವನೀವ ಕ್ರೀಡಾಸ್ಥಳಂಗಳೊಳ್ ಕೆಳದಿಯರ್ವೆರಸಿ ನಲಿದು
ಮಂದಗಾಮಿನಿ ಗಿರಿಜೆ ಪಳುಕಿನರೆಯೊತ್ತಿನೊಳ
ಮುಂದೆಸೆವ ಶಂಭುದ್ವಯಾಕಾರಮಂ ಕಂಡು
ಮಂದಸಂಶಯದಿಂದೆ ನಿಂದುದಂ ನೋಡಿ ನಗುವಿಂದುಧರ ಸಲಹೆಮ್ಮನು ೧

ಆಲಿಸಿನ್ನಾದೊಡೆಲೆ ರಾಮ ಶಂಕರನಧಿಕ
ಲೀಲೆಯಿಂ ಮಂದರಾಚಲವಾಸವಾಗಿರ್ಪ
ಕಾಲದೊಳ್ ಪುಷ್ಪದತ್ತಂ ಪ್ರತಿದಿನಂ ಲೋಕಲೋಕದ ವನಂಗಳಿಂದೆ
ಮೇಲಾದ ಕುಸುಮಂಗಳಂ ತಿರಿದು ತಂದು ಪೊಸ
ಮಾಲೆಯಂ ಕಟ್ಟಿ ತತ್ಕುಸುಮದೇಳ್ಗೆಯಂನುಸುರಿ
ಬಾಲೇಂದುಧರನರಸಿಯಮಳಸಿರಿಮುಡಿಗೀವುತಿರ್ದನತಿಭಕ್ತಿಯಿಂದೆ ೨

ಸೂಚನೆ : ಮಂದರಪರ್ವತದ ಅರಮನೆಯಲ್ಲಿ ಇರುತ್ತ ಶಿವನ ಮಂದಾರ ಪುಷ್ಪಕ್ಕಾಗಿಯೇ ಚೈತ್ರರಥವೆಂಬ ಉದ್ಯಾನವನ್ನು ಸೃಷ್ಟಿಸಿ ಜಲಕ್ರೀಡೆಯಾಡಿ ಆ ವನದಲ್ಲಿ ಸುಖದಿಂದಿದ್ದನು. ೧. ಮಂದರಪರ್ವತದ ತಪ್ಪಲಿನಲ್ಲಿ ಅಲ್ಲಲ್ಲಿ ಕಂಗೊಳಿಸುವ ದಟ್ಟವಾದ ಕೆಂಪುಬಣ್ಣದ ವನದಲ್ಲಿ ನೋಡುವವರ ಕಣ್ಣಿಗೆ ಅತಿಯಾದ ಸಂತೋಷವನ್ನು ಕೊಡುವ ಕ್ರೀಡಾಸ್ಥಳಗಳಲ್ಲಿ ಸಖಿಯರೊಡನೆ ನಲಿದು ಮಂದನಡೆಯುವಳಾದ ಗಿರಿಜೆಯು, ಸ್ಫಟಿಕ ಶಿಲೆಯ ಸಮೀಪದಲ್ಲಿ ಶೋಭಿಸುವ ಶಿವದ್ವಯರ ಮೂರ್ತಿಯನ್ನು ನೋಡಿ ಅತಿಯಾದ ಸಂಶಯದಿಂದ ನಿಂತದ್ದನ್ನು ನೋಡಿ ನಗುವ ಚಂದ್ರಶೇಖರನೇ, ನಮ್ಮನ್ನು ಕಾಪಾಡು. ೨. ಹಾಗಾದರೆ ಇನ್ನು ಕೇಳಯ್ಯ ಸಿದ್ಧರಾಮ, ಶಂಕರನು ಅತಿಶಯವಾದ ಲೀಲೆಯಿಂದ ಮಂದರಾಚಲದಲ್ಲಿ ವಾಸಮಾಡುತ್ತಿದ್ದ ಕಾಲದಲ್ಲಿ ಪುಷ್ಪದತ್ತನು ಪ್ರತಿದಿನವೂ ಎಲ್ಲ ಲೋಕಗಳ ವನಗಳಿಂದ ಉತ್ತಮವಾದ ಹೂಗಳನ್ನು ಬಿಡಿಸಿ ತಂದು ಹೊಸಹಾರವನ್ನು ಕಟ್ಟಿ, ಆ ಹೂವಿನ ಪ್ರಸಿದ್ಧ ಗುಣಗಳನ್ನು ಹೊಗಳಿ, ಚಂದ್ರಶೇಖರನ ರಾಣಿಯ ಪವಿತ್ರ

CC-0. Jangamwadi Math Collection. Digitized by eGangotri

ಈ ತೆರದೊಳೊಂದು ದಿವಸಂ ಪೂವಳಂ ಶೈಲ
ಜಾತೆಗಾ ಮಾಲೆಯಂ ಕೊಡುತಿರಲ್ಕಾ ಪಾರಿ
ಜಾತಕುಸುಮಂಗಾಣದಾ ಗಿರಿಜೆಯಾ ಪುಷ್ಪದತ್ತನ ಪೊಗಂ ನೋಡಲು
ಭೀತಿಯಿಂ ಕೈಗಳಂ ಮುಗಿದು ನಿಂದೆಲೆ ಲೋಕ
ಮಾತೆಯಿದು ಸುರವನದ ಕುಸುಮಮಿದಕೆಳಸಿ ಪುರು
ಹೂತನರ್ಧಾಂಗಿ ಮುಂತರಿಸಿ ಸೂಡಿದಳೆಂದು ನುಡಿದನಭವಂ ಕೇಳಲು ೩

ಆ ನುಡಿ ಭವಾನಿಗೀರ್ಷೆಯನುಂಟುಮಾಡೆ ಮುಂ
ದೇನಪ್ಪುದೋಯೆಂದು ಶಿವನಂದು ಹೃದಯದೊಳ್
ಜಾನಿಸುತ್ತೆಲೆ ಗಿರಿಜೆ ಸುರತರುಗಳೈದವರ ಕುಸುಮಂಗಳೇನಧಿಕಮೋ
ಈ ನಗದ ತಪ್ಪಲೊಳಗತುಳ ಸುರತರುವನಮ
ನೇ ನಿನ್ನ ಮಾನಕಳ್ತಿಯಪ್ಪಂತೆ ಗೈದೆನೆಲೆ
ಮಾನನಿಧಿ ನಡೆ ನೋಳ್ಪೆವೆಂದೆನಲ್ ಗಿರಿಜೆ ಸಖಿಯರ್ಗೂಡಿ ಪೊರಮಟ್ಟಳು ೪

ಆಕೆ ಪೊರಮಡಲೊಡನೆ ಪೊರಮಟ್ಟುದಖಿಳನಾ
ರೀಕದಂಬಂ ಸಕಲವಿಭವದಿಂದೀಶ್ವರಂ
ಜೋಕೆಯಿಂಗೆ ಶರ್ವಾಣಿವೆರಸಿ ತದ್ವನಮನೊಳಪೊಕ್ಕದಂ ನೋಳ್ಪಾಗಳು
ಏಕಸಾಹಸ್ರಯೋಜನದಗಲದಿಂದುಪರಿ
ಲೋಕಂಬರಂ ಬೆಳೆದ ಸುರತರುಗಳಿಂದೆ ನಾ
ನಾ ಕುಸುಮಜಾತಿಯಿಂದಮೃತದ ಕೊಳಂಗಳಿಂದಾ ವನಂ ಕಣ್ಗೆಸೆದುದು ೫

ವಾದ ಸಿರಿಮುಡಿಗೆ ಭಕ್ತಿಯಿಂದ ಕೊಡುತ್ತಿದ್ದನು. ೩. ಈ ರೀತಿಯಲ್ಲಿ ಒಂದು ದಿವಸ ಒಬ್ಬ ಹೂವಾಡಿಗನು ಗಿರಿಜೆಗೆ ಹೂವಿನ ಮಾಲೆಯನ್ನು ಅರ್ಪಿಸುತ್ತಿರಲು ಅದರಲ್ಲಿ ಪಾರಿಜಾತದ ಹೂವಿಲ್ಲದುದನ್ನು ಕಂಡು ಪಾರ್ವತಿ ಪುಷ್ಪದತ್ತನ ಮುಖವನ್ನು ನೋಡಲು, ಅವನು ಹೆದರಿಕೆಯಿಂದ ಕೈಗಳನ್ನು ಮುಗಿದು ನಿಂತು ಲೋಕಮಾತೆಯೆ, ಅದು ದೇವ ಲೋಕದ ನಂದನವನದ ಹೂವು, ಅದಕ್ಕೆ ಆಶಿಸಿ ದೇವೇಂದ್ರನ ಪತ್ನಿ ಮೊದಲೇ ತರಿಸಿ ಮುಡಿದುಕೊಂಡಳು ಎಂದು ಶಿವನು ಕೇಳಿಸಿಕೊಳ್ಳುವಂತೆ ಹೇಳಿದನು. ೪. ಆ ಮಾತು ಭವಾನಿಗೆ ಹೊಟ್ಟೆಕಿಚ್ಚನ್ನುಂಟುಮಾಡಿತು. ಮುಂದೇನಾಗುವುದೊ ಎಂದು ಶಿವನು ಅಂದು ಮನಸ್ಸಿನಲ್ಲಿಯೆ ಆಲೋಚಿಸುತ್ತ, ಎಲೆ ಗಿರಿಜೆ, ಕಲ್ಪವೃಕ್ಷಗಳು ಐದೇ ಐದು. ಅದರ ಹೂಗಳೇನು ಮಹಾಶ್ರೇಷ್ಠವೇ ? ಈ ಪರ್ವತದ ತಪ್ಪಲಿನಲ್ಲಿ ನಿನ್ನ ಮನಕ್ಕೆ ಪ್ರೀತಿಯುಂಟಾಗುವಂತೆ ಅನೇಕ ದೇವಲೋಕದ ವೃಕ್ಷಗಳ ವನವನ್ನೇ ರಚಿಸಿದ್ದೇನೆ. ಎಲೌ ಮಾನನಿಧಿಯೆ, ಅದನ್ನು ನೋಡೋಣ ನಡೆ ಎನ್ನಲು, ಗಿರಿಜೆಯು ಸಖಿಯರೊಡಗೂಡಿ ಹೊರಟಳು. ೫. ಆಕೆಯು ಹೊರಡಲು, ಎಲ್ಲ ಸ್ತ್ರೀಸಮೂಹವು ಆಕೆಯೊಡನೆ ಹೊರಟಿತು. ಸಕಲ ವೈಭವದಿಂದ ಕೂಡಿ ಸಂಭ್ರಮದಿಂದ ಗಿರಿಜೆಯೊಡಗೂಡಿ ಶಿವನು ಆ ವನವನ್ನು ಒಳಹೊಕ್ಕು ಎಚ್ಚರದಿಂದ ನೋಡಲು ಆಗ ಒಂದು ಸಾವಿರ ಯೋಜನದ ಅಗಲವಾಗಿ, ಮೇಲಿನ ಲೋಕದವರಿಗೆ ಬೆಳೆದ ದೇವವೃಕ್ಷಗಳಿಂದ ನಾನಾ ಹೂಗಳ ಜಾತಿ

CC-0. Jangamwadi Math Collection. Digitized by eGangotri

ಆ ವನದ ಸಿರಿಯನೀಕ್ಷಿಸಿ ಗಿರಿಜೆ ನಗುತಲೆಲೆ
ದೇವ ನಿಮ್ಮಡಿಯ ಕರುಣಾಮೃತದ ಮಳೆಯೊಳೆನ
ಗಾವಾವ ಸುಖದಬೆಳೆ ಫಲಿಸದಿರ್ಪುದೆಯೆಂದು ಹರುಷದಿಂ ಪೊಗಳುತಿರಲು
ದೇವಿ ಕೇಳಿದು ಚೈತ್ರರಥವೆಂಬ ವನವಿದ
ಕ್ಕಾವಾವ ಲೋಕದ ವನಂಗಳೆಣೆಯಲ್ಲಿದರ
ಪೂವೆ ನಿನ್ನೆಸೆವ ಸಿರಿಮುಡಿಗೆ ಪೂಗೀ ಮುಡಿಯೆ ತಕ್ಕುದಿದು ನಿಜವೆಂದನು ೬

ಎಂದು ಪೊಸಪೂಗಳಂ ತರಿಸಿ ಗಿರಿಜೆಯ ಮುಡಿಯ
ನಂದು ಸೆಳ್ಳುಗುರ್ಗಳಿಂ ಪಿಕ್ಕಿ ತತ್ಕುಸುಮಗಳ
ನೊಂದಿಸುತ್ತೆಣ್ಣೆಗಂಟಿಟ್ಟು ಮೊಗಮಂ ನೋಡಿ ಸುಖದೊಳೋಲಾಡಿ ವನಮಂ
ಇಂದು ಮೊದಲಾಗಿ ಸಲಹೆಂದೊರ್ವ ವನಪಾಲ
ನಂ ದಯಂಗೆಯ್ದೊಂದಿನಂ ಬಿಡದೆ ಪೂಗಳಂ
ತಂದೀಕೆಗೀಯೆಂದು ಪುಷ್ಪದತ್ತಂಗೆ ನೇಮಿಸಿದನಭವಂ ಕೃಪೆಯೊಳು ೭

ಸಂತಸದೊಳಾ ಪೂಗಳಂ ದೇವಿ ಮುಡಿದ ಸಮ
ನಂತರದೊಳೆಲ್ಲರುಂ ಕೊಂಡಾಡೆ ಶಂಕರನ
ನಂತವಿಭವದೊಳಗಜೆಗೂಡಿ ಬನದಿಂ ಮಂದರಾಚಲವನೈದೆ ಸುರರ

ಯಿಂದ, ಅಮೃತದ ಕೊಳಗಳಿಂದ ಆ ವನವು ಕಂಗೊಳಿಸಿತು. ೬. ಆ ವನದ ಸಿರಿಯ ವೈಭವವನ್ನು ನೋಡಿ ಪಾರ್ವತಿ ನಗುತ್ತ, ಎಲೆ ದೇವ, ನಿಮ್ಮಡಿಗಳ ಕರುಣಾಮೃತದ ಮಳೆಯಿಂದ ನನಗೆ ಎಲ್ಲ ರೀತಿಯ ಸುಖದ ಬೆಳೆ ಫಲಿಸದೆ ಇರುತ್ತದೆಯೆ ? ಎಂದು ಸಂತೋಷದಿಂದ ಹೊಗಳುತ್ತಿರಲು, ದೇವಿ, ಕೇಳು ಇದು ಚೈತ್ರರಥವೆಂಬ ವನ. ಇದಕ್ಕೆ ಯಾವ ಲೋಕದ ವನಗಳೂ ಸಮನಲ್ಲ. ಇದರ ಹೂವೇ ನಿನ್ನ ಪ್ರಕಾಶಿಸುವ ಶ್ರೇಷ್ಠವಾದ ಸಿರಿಮುಡಿಗೆ ಹೂ. ಈ ಉತ್ಕೃಷ್ಟವಾದ ಹೂಗಳನ್ನು ಅಲಂಕರಿಸಲು ನಿನ್ನ ಈ ಸಿರಿಮುಡಿಯೇ ನಿಜಕ್ಕೂ ಯೋಗ್ಯವಾದದ್ದು ಎಂದನು. ೭. ಎಂದು ಆಗತಾನೇ ಅರಳಿದ ಹೂಗಳನ್ನು ತರಿಸಿ ಪಾರ್ವತಿಯ ಮುಡಿಯನ್ನು ಅಂದು ತನ್ನ ಚೂಪಾದ ಉಗುರುಗಳಿಂದ ಬಾಚಿ, ಆ ಹೂಗಳನ್ನು ಮುಡಿಸುತ್ತ, ಸುಗಂಧತೈಲ ಲೇಪಿಸಿದ ಕೂದಲನ್ನು ಗಂಟಿಟ್ಟು, ಮುಖವನ್ನು ನೋಡಿ ಸಂತೋಷದಲ್ಲಿ ಓಲಾಡಿ, ಈ ದಿನ ಮೊದಲ್ಗೊಂಡು ಈ ವನವನ್ನು ಜೋಕೆಯಿಂದ ರಕ್ಷಿಸು ಎಂದು ಒಬ್ಬ ವನ ಪಾಲಕನನ್ನು ನೇಮಿಸಿದನು. ಒಂದು ದಿನವೂ ತಪ್ಪದೆ ಹೂಗಳನ್ನು ತಂದು ಈಕೆಗೆ ಕೊಡು ಎಂದು ಶಿವನು ಕೃಪೆಯಿಂದ ಪುಷ್ಪದತ್ತನಿಗೆ ಆಜ್ಞಾಪಿಸಿದನು. ೮. ಆ ಹೂ ಗಳನ್ನು ದೇವಿಯು ಸಂತೋಷದಿಂದ ಮುಡಿದ ನಂತರ ಎಲ್ಲರೂ ಕೊಂಡಾಡಲು ಶಿವನು ಅತ್ಯಂತ ವೈಭವದಿಂದ ಗಿರಿಜೆಯೊಡಗೂಡಿ ಆ ವನದಿಂದ ಹೊರಟು ಮಂದರಪರ್ವತಕ್ಕೆ

CC-0. Jangamwadi Math Collection. Digitized by eGangotri

ಸಂತತಿಗಳೋಲೈಸುತಿರಲೀಶನಿಪ್ಪ ಸಮ
ನಂತರದೊಳುರೆ ವಿರಹಿಬೃಂದಹೃಚ್ಛೂಲಂ ವ
ಸಂತಕಾಲಂ ಭೋಗಿನಿಕರಾನುಕೂಲಂ ಪ್ರಸೂನಜಾಲಂ ಬಂದುದು ೮

ಚಳಿಯೊಡ್ಡು ಜಾರೆ ತಂಗಾಳಿ ತಲೆದೋರೆ ಪೂ
ಗಳ ಕಂಪು ಮೀರೆ ಭೃಂಗಂ ನಲಿದು ಪಾರೆ ಕೋ
ಕಿಲೆಯ ದನಿ ಸಾರೆ ಮದನಂಗೆ ಬಲಮೇರೆ ನದಿಗಳ್ ತಾರೆ ಮಾಮರಗಳು
ತಳಿರ್ಗಳಂ ಪೇರೆ ವಿರಹಿಗಳ ಬಾಯಾರೆ ಸುಖಿ
ಗಳ ತಾಪಮಾರೆ ಮುನಿಗಳ ಮನಂ ಮೀರೆ ಭೂ
ವಳಯಕೆ ವಸಂತಾಗಮಂ ಮನೋರಾಗಮಂ ಮಾಡುತ್ತೈತರುತಿರ್ದುದು ೯

ಬೀತುವಾ ಜಾತಿ ನೈದಿಲ್ ಮೊಲ್ಲೆಗಳ್ ಕರಂ
ಪೂತುದವನೀಲತಾವಿತತಿ ಮಾಮರಗಳುರೆ
ಕಾತುವಿನಿವಣ್ಣುಂಡು ಗಿಳಿವಿಂಡು ತೊಂಡುಗೆಯ್ಯುತೆಳಸಿತಂಬುಜಮರಳ್ದುವು
ಓತುದು ವಿಯೋಗಿಜಾಲಂ ಮುನಿದರೊಳ್ ಕರಂ
ಸೋತುದಂಗನೆಯರ್ಗೆ ಮುನಿಕುಲಂ ಫಲವಿತತಿ
ಜೋತೊರಗಿದುದು ಬನಬನಂಗಳೊಳ್ ಪೊಸಬಸಂತಂ ಬರಲದೇವೊಗಳ್ವೆನು ೧೦

ಹೋಗಲು ದೇವಸಮೂಹ ಅವನನ್ನು ಸೇವಿಸುತ್ತಿದ್ದುವು. ಈ ರೀತಿ ಈಶ್ವರನು ಇರುವ ಸಮಯದಲ್ಲಿ ವಿರಹಿಗಳ ಹೃದಯಕ್ಕೆ ಶೂಲವೆನಿಸುವ, ಭೋಗಿಗಳ ಸಮೂಹಕ್ಕೆ ಅನುಕೂಲವೆನಿಸಿದ, ವಿವಿಧ ಫಲಪುಷ್ಪಜಾಲಗಳನ್ನು ಕೂಡಿ ಕಂಗೊಳಿಸುವ ವಸಂತ ಕಾಲದ ಉದಯವಾಯಿತು. ೯. ಚಳಿಯು ಉರುಬು ಜಾರಿತು. ತಂಗಾಳಿ ತಲೆ ದೋರಿತು. ಹೂಗಳ ಸುವಾಸನೆ ಹೆಚ್ಚಾಯಿತು. ದುಂಬಿಗಳು ಸಂತೋಷದಿಂದ ಹಾರಿದುವು. ಕೋಗಿಲೆಯ ಧ್ವನಿ ಹತ್ತಿರವೇ ಕೇಳಿಸಿತು. ಮನ್ಮಥನಿಗೆ ಶೌರ್ಯ ಹೆಚ್ಚಾಯಿತು. ನದಿ ಗಳಲ್ಲಿ ನೀರು ಕಡಿಮೆಯಾಯಿತು. ಮಾವಿನ ಮರಗಳು ಚಿಗುರಿನಿಂದ ತುಂಬಿದುವು. ವಿರಹಿಗಳಿಗೆ ಬಾಯಾರಿತು. ಸುಖಿಗಳ ತಾಪ ಆರಿತು. ಮುನಿಗಳ ಮನಸ್ಸು ಚಂಚಲ ವಾಯಿತು. ಹೀಗೆ ಭೂಮಿಗೆ ವಸಂತನ ಆಗಮನ ಮನಸ್ಸಿಗೆ ಆನಂದವನ್ನುಂಟು ಮಾಡುತ್ತ ಬರುತ್ತಿದ್ದಿತು. ೧೦. ವಸಂತ ಬರಲು ಶ್ರೇಷ್ಠವಾದ ನೈದಿಲೆಗಳು ಮೊಲ್ಲೆ ಹೂಗಳು ಅರಳಿದವು. ಭೂಮಿಯಲ್ಲಿ ಬೆಳೆಯುವ ಬಳ್ಳಿ ಚೆನ್ನಾಗಿ ಹೂ ಬಿಟ್ಟಿತು. ಮಾಮರಗಳು ಹಣ್ಣಿನಿಂದ ತುಂಬಿದವು. ಸಿಹಿಯಾದ ಹಣ್ಣನ್ನು ತಿಂದ ಗಿಳಿಸಮೂಹ ಮಾತಾಡಲು ತೊಡಗಿತು. ಕಮಲಗಳು ಅರಳಿದವು. ವಿಯೋಗಿಗಳ ಸಮೂಹ ಸಿಟ್ಟಾದವ ರಲ್ಲಿ ಪ್ರೀತಿಯನ್ನು ತಾಳಿತು. ಸ್ತ್ರೀಯರಿಗೆ ಮುನಿಗಳ ಗುಂಪು ಬಹಳವಾಗಿ ಸೋತು ಹೋಯಿತು. ಹಣ್ಣುಗಳ ರಾಶಿ ವನ ವನಗಳಲ್ಲಿ ಜೋತುಬಿದ್ದು ಒರಗಿದವು. ಅದನ್ನು

CC-0. Jangamwadi Math Collection. Digitized by eGangotri

ಧಾರುಣಿಯ ಹೃತ್ಕುಮುದಮಳಿಯೆ ತನ್ನೇತ್ರಪಂ
ಕೇರುಹಂ ಪೊಳೆಯೆ ಮುನಿದಿನೆಯರೆಂದೆಂಬಾ ಚ
ಕೋರಕೆರ್ದೆ ಬಿರಿಯೆ ಕೂರಿದರೆನಿಪ್ಪೆಣೆವಕ್ಕಿ ನೆರೆಯೆ ಜಾತೀಕುಸುಮದ
ತಾರಗೆಗಳಡಗೆ ತಚ್ಛಿಶಿರೇಂದುವಸ್ತಮಿಸ
ಲಾ ರಮ್ಯಮಧುವೆಂಬ ಸೂರನುದಯದೊಳೆ ಪರಿ
ವಾರಮಂ ನೆರಪಿ ಮನಸಿಜನೃಪಂ ದಿಗ್ವಿಜಯಕೆತ್ತಿ ನಡೆದಂ ಮುದದೊಳು ೧೧

ಅಳಿಕುಳಕ್ಕಾರೋಗಣೆಯ ಪೇಳ್ದು ಕೋಕಿಲಂ
ಗಳ ಬಾಯ ಬೀಗಮಂ ತೆಗೆದು ಪಸಿದೊಡಲ ಗಿಳಿ
ಗಳ ಕಳವಳಂಗಳಂ ಬಿಡಿಸಿ ಕಳಹಂಸೆಗಳ ಕಾಲ್ಗೆ ನಟಣೆಯನೊದವಿಸಿ
ಕೊಳರ್ವಕ್ಕಿಗಳ ಚಿತ್ತಮಂ ಬಲಿಸಿ ವಿರಹಿಗಳ
ನಳಲಿಸುತ್ತೆತ್ತೆತ್ತಲುಂ ಕಾಮದೂತನಂ
ತೆಳೆಗಾಳಿ ತೆಂಕಣಂ ಸುಳಿದುದು ವಸಂತಾಗಮದ ಮೊದಲೊಳೇನೆಂಬೆನು ೧೨

ಮೌನವ್ರತಾಚಾರಿಯಾದ ಕೋಕಿಲೆಯಿಂದು
ಮೌನಮಂ ಬಿಟ್ಟುಲಿಯತೊಡಗಿದುದು ಮಲ್ಲಿಕಾ
ಮಾನಿನಿಗೆ ಚಂಡಾಳಿಯೊಳ್‌ ಸಂಗಮಾದುದಿನನರಸಿ ಸಿರಿವನೆಯೆನಿಸುವ
ಆ ನಳಿನಿ ಬಂದಿನೊಳಗಾದಳುತ್ತಮಜಾತಿ
ಹೀನಮಾಯ್ತಿಳೆಯೊಳೀ ಮಧುಸಂಗದಿಂದಲೇ
ನೇನಾಗದಿರದೆಂದು ತೋರ್ಪಂತೆ ಬಂದುದು ಬಸಂತಮದನೇನೆಂಬೆನು ೧೩

ಏನೆಂದು ಹೊಗಳಲಿ ? ೧೧. ಭೂಮಿಯ ಹೃದಯವೆಂಬ ನೈದಿಲೆ ಅಳಿಯಲು ಧಾರಿಣಿಯ ಕಣ್ಣೆಂಬ ಕಮಲ ಹೊಳೆಯಿತು. ಕೋಪಗೊಂಡ ಪ್ರಿಯರೆಂಬ ಚಕೋರ ಪಕ್ಷಿಗಳ ಎದೆ ಬಿರಿಯಿತು. ಪ್ರೇಮಿಗಳೆಂಬ ಚಕ್ರವಾಕಪಕ್ಷಿಗಳು ಕೂಡಿದುವು. ಶ್ರೇಷ್ಠ ಜಾಜೀ ಹೂವೆಂಬ ನಕ್ಷತ್ರಗಳು ಅಡಗಿದವು. ಆ ಶಿಶಿರದ ಚಂದ್ರ ಮುಳುಗಿದನು. ಆ ಮನೋಹರವಾದ ಜೇನೆಂಬ ಸೂರ್ಯನು ಹುಟ್ಟಿದನು. ಆಗ ಪರಿವಾರದೊಡಗೂಡಿ ಮನ್ಮಥನು ದಿಗ್ವಿಜಯಕ್ಕಾಗಿ ಸಂತೋಷದಿಂದ ಹೊರಟನು. ೧೨. ದುಂಬಿಗಳ ಸಮೂಹಕ್ಕೆ ಊಟಕ್ಕೆ ಹೇಳಿ, ಕೋಗಿಲೆಗಳ ಬಾಯಿಗೆ ಹಾಕಿದ್ದ ಬೀಗವನ್ನು ತೆಗೆದು, ಹಸಿದಿದ್ದ ಗಿಳಿಗಳ ಕಳವಳವನ್ನು ಹೋಗಲಾಡಿಸಿ, ರಾಜಹಂಸಗಳ ಕಾಲಿಗೆ ನಾಟ್ಯವನ್ನು ಒದಗಿಸಿ, ನೀರ್ವಕ್ಕಿಗಳ ಮನಸ್ಸನ್ನು ಬಲಗೊಳಿಸಿ ವಿರಹಿಗಳನ್ನು ದುಃಖಕ್ಕೆ ಈಡು ಮಾಡುತ್ತ, ಮನ್ಮಥನ ಸೇವಕರಂತೆ ವಸಂತನ ಆಗಮನಕ್ಕೆ ಮೊದಲಿನಲ್ಲಿ ಮಂದ ಮಾರುತನು ದಕ್ಷಿಣದ ಕಡೆಯಿಂದ ಎಲ್ಲೆಲ್ಲಿಯೂ ಬೀಸಿತು. ೧೩. ಮೌನವ್ರತಧಾರಿಯಾದ ಕೋಗಿಲೆ ಈದಿನ ಮೌನಬಿಟ್ಟು ಮಾತನಾಡತೊಡಗಿತು. ಮಲ್ಲಿಕೆಯೆಂಬ ಸ್ತ್ರೀಗೆ ದುರುಳ ದುಂಬಿಗಳೊಂದಿಗೆ ಕೂಟವಾಯಿತು. ಪ್ರೇಮಿಯನ್ನು ಹುಡುಕಿ ಲಕ್ಷ್ಮಿಯ ಮನೆಯೆನ್ನಿಸುವ ಆ ಕಮಲೆ ನಾಚಿಕೆಗೆಟ್ಟಳು. ಈ ಭೂಮಿಯಲ್ಲಿ ಉತ್ತಮ ಜಾತಿ ಹೀನವಾಯ್ತು, ಮಧುಸಂಗಮದಿಂದ ಏನೇನಾಗದಿರುತ್ತದೆ ಎನ್ನುವುದನ್ನು ತೋರಿಸ ।

CC-0. Jangamwadi Math Collection. Digitized by eGangotri

ಸಲೆ ಸುಜಾತಿಯ ಸಿರಿಯಡಂಗಿತು ವಿಜಾತಿಗತಿ
ನಲವಾದುದುನ್ಮಧುಪಕುಲಕೆ ಸುಮನಃಕುಲದ
ಕೆಳೆಯಾದುದಂಗಭವನೇ ತನ್ನ ತಾಯ್ಮನೆಗೆ ಕೇಡನೆಣಿಸುವನೆರ್ದೆಯೊಳು
ನೆಲೆಗೆ ಸಂದುದು ಪಾದರೀ ವಿಭವವಾದುದಾ
ಗಳೆ ತಪೋಹೀನತೆಯುದೆಲ್ಲಿಯುಂ ಚಿತ್ರವಿದು
ಕಲಿಕಾಲವೋ ಚೈತ್ರಕಾಲವೋ ಪೇಳೆನಲ್ ಸುರಭಿಸಮಯಂ ಬಂದುದು ೧೪

ಎಳದಳಿರ ಕೆಂಪುಪೂಗಳ ಕಂಪು ಕೋಕಿಲಂ
ಗಳ ಸರದ ನುಂಪು ತಂಗಾಳಿಯ ಪದುಂಪು ಗಿಳಿ
ಗಳ ರವದ ಸೊಂಪು ತುಂಬಿಯ ಗಾನದಿಂಪು ನಾನಾ ಫಲಾವಳಿಯ ಬಿಣ್ಪು
ತಿಳಿಗೊಳದ ತಂಪು ವಿರಹಿಯ ಕೈಕದಂಪು ಸುಖಿ
ಗಳ ಮನದ ಪೆಂಪು ಬನಗಳ ಗುಂಪು ಗುಂಪು ಸಂ
ಗಳಿಸಿತೆಲ್ಲೆಲ್ಲಿಯುಂ ಚೈತ್ರಾಗಮಂ ಬರಲ್ ಪೇಳ್ವುದೇನಚ್ಚರಿಯನು ೧೫

ತಂಬೆಲರ ಕೊಬ್ಬು ಬನಬನದ ಸೌಭಾಗ್ಯಮೆಳೆ
ದುಂಬಿಗಳ ಸಂಗೀತಶಾಲೆ ಚೈತ್ರನ ರಥದ
ಮುಂಬೆಳಸು ಮೆಚ್ಚಿದರ ಮನಮೆಚ್ಚು ಗೆಲ್ವರೆರ್ದೆಗಿಚ್ಚು ರತಿದೇವಿಯೊಲವು

ವಂತೆ ವಸಂತವು ಬಂದಿತು. ಅದನ್ನು ಏನೆಂದು ಹೇಳಲಿ ? ೧೪. ಉತ್ತಮ ಜಾತಿಯ ಹೆಚ್ಚಾದ ಸಿರಿ ಅಡಗಿತು. ವಿಜಾತಿಗೆ ಅತಿಯಾದ ಸಂತೋಷ ಆಯಿತು. ದುಂಬಿಗಳಿಗೆ ಹೂವಿನ ಸ್ನೇಹವಾಯಿತು. ಮನಸ್ಸಿನಲ್ಲಿ ಮನ್ಮಥನೇ ತನ್ನ ತಾಯಿಮನೆಯಾದ ದೇಹಕ್ಕೆ ಕೆಡಕನ್ನು ಆಶಿಸುತ್ತಾನೆ. ಪಾರಿಜಾತಹೂವಿನ ವೈಭವ ಅತಿಯಾಯಿತು. ಎಲ್ಲೆಲ್ಲಿಯೂ ಬೇಸಗೆಯ ಉರಿ ಕಡಿಮೆಯಾಯಿತು. ವಿಚಿತ್ರ ಇದು ಕಲಿಕಾಲವೊ, ಚೈತ್ರಕಾಲವೊ ಹೇಳು ಎನ್ನಲು ಮಧುಮಾಸ ಬಂದಿತು. ಉತ್ತಮ ಜಾತಿಯ ಸ್ತ್ರೀಯರ ಸೌಂದರ್ಯ ಅಡಗಿತು. ವೇಶ್ಯಾಸ್ತ್ರೀಯರಿಗೆ ಬಹಳ ಸಂತೋಷವಾಯಿತು. ಪಂಡಿತರಿಗೆ ಮಧುವಿನ ಸ್ನೇಹವಾಯಿತು. ಮನ್ಮಥನು ತಾನು ಹುಟ್ಟಿದ ಮನೆಗೇ (ದೇಹಕ್ಕೆ) ಮನಸ್ಸಿನಲ್ಲಿ ಕೇಡನ್ನು ಬಗೆಯುತ್ತಾನೆ. ವ್ಯಭಿಚಾರೀಸ್ತ್ರೀಯ ವೈಭವ ತುಟ್ಟತುದಿ ಮುಟ್ಟಿತು. ಎಲ್ಲೆಲ್ಲಿಯೂ ತಪೋಭಂಗವಾಯಿತು. ವಿಚಿತ್ರ ಇದು ಕಲಿಕಾಲವೊ—ಚೈತ್ರಕಾಲವೊ ಹೇಳೆನ್ನಲು ಮಧುಮಾಸವು ಬಂದಿತು. ೧೫. ವಸಂತಾಗಮನವಾಗಲು ಎಳೆಚಿಗುರಿನ ಕೆಂಪು ಹೂಗಳ ಸುವಾಸನೆ, ಕೋಗಿಲೆಗಳ ಸ್ವರದ ಮೃದುತ್ವ, ತಂಗಾಳಿಯ ಮನೋಹರತೆ, ಗಿಳಿಗಳ ಶಬ್ದದ ಸೊಂಪು, ದುಂಬಿಯ ಗಾನದ ಇಂಪು, ನಾನಾ ಹಣ್ಣುಗಳ ಭಾರ, ತಿಳಿಗೊಳದ ತಂಪು, ವಿರಹಿಯುಗಲ್ಲದ ಮೇಲಿನ ಕೈ, ಸುಖಿಗಳಾದವರ ಮನಸ್ಸಿನ ಸಂತೋಷ, ವನಗಳ ಗುಂಪು ಎಲ್ಲೆಲ್ಲಿಯೂ ಹೆಚ್ಚಾಯಿತು. ಆಶ್ಚರ್ಯವನ್ನು ಹೇಳುವುದೇನಿದೆ ? ೧೬. ತಂಗಾಳಿಯ ಕೊಬ್ಬು, ವನಗಳ ಸೌಭಾಗ್ಯ, ಎಳೆದುಂಬಿಗಳ ಸಂಗೀತಶಾಲೆ, ವಸಂತನ ರಥದ ಮುಂಚೂಣಿ, ಮೆಚ್ಚಿದವರ ಮನಮೆಚ್ಚು, ರತಿದೇವಿಯ ಪ್ರೀತಿ, ಪ್ರೇಮಿ

CC-0. Jangamwadi Math Collection. Digitized by eGangotri

ಶಂಬರಾರಿಯ ಸರಳ ಸಂತಾನಮರಳ ಕುಲ
ಕಂ ಬೈತಲೆಯ ಚೊಕ್ಕ ಮುತ್ತೆನಿಪ ಮಲ್ಲಿಗೆಗ
ಳೇಂ ಬಿರಿದುವೋ ಬಿರಯಿಯೆರ್ದೆ ಬಿರಿವ ಮಾಳ್ಕೆಯಿಂದಾ ಬಸಂತದ
ಮೊದಲೊಳು ೧೬

ಕಾಮರಾಯನ ತೇಜದಂಕುರಮೆನ್ನೆ ರತಿ
ದೇವಿ ತಾಂ ತೊಡುವ ಚಿನ್ನದ ಪೂಗಳೆನೆ ವಸಂ
ತಾವನೀಶಂ ಬರಲ್ ವನವಧು ನಿವಾಳಿಸುವ ನೀರಾಜನಂಗಳೆನಲು
ಆವಾವ ಪೂಗಂಪನೊತ್ತರಿಸಿ ತನ್ನ ಕಂ
ಪಾವರಿಸೆ ದೆಸೆದೆಸೆಗಳಂ ಮೊಗ್ಗೆ ಬಿರಿಮುಗುಳ್
ಪೂವಾಂತ ಸಂಪಗೆಗಳೊಪ್ಪಿದುವು ಸ್ಮರನುರಿಯ ಬಾಣಂಗಳೆಂಬಂತಿರೆ ೧೭

ಮನಸಿಜನ ಶಸ್ತ್ರಾಸ್ತ್ರಶಾಲೆಯಿದು ಕಾಮರಾ
ಯನ ಚತುರ್ಬಲದ ಪಾಳೆಯಮಿದಂಗಜನೃಪನ
ಬಿನದದರಮನೆಯೆಂದು ಮಧುವನಕೆ ಕಕ್ಕದರಿಯಂ ನೆಟ್ಟನೋ ಮದನನ
ನನೆಯಂಬು ಮುನಿಹೃದಯಮಂ ನಡವೆನುತ್ತೆ ಚಿಲು
ಕಿನ ದೊಡ್ಡ ಮೊನೆಯಂಬನಾಗಿಸಿದನೋಯೆನಲ್
ವನಮನುರೆ ಬಳಸಿ ಕಂಗೊಳಿಪ ಪೊಂಗೇದಗೆಗಳೊಪ್ಪಿದುವು ತರತರದೊಳು ೧೮

ಗಳ ಎದೆಗಿಚ್ಚು, ಮನ್ಮಥನ ಪುಷ್ಪಬಾಣದ ಪರಂಪರೆ, ಹೂಜಾತಿಗೂ ಬೈತಲೆಯ ಚೊಕ್ಕವಾದ ಮುತ್ತೊ ಎನ್ನಿಸುವಂತಹ ಮಲ್ಲಿಗೆಗಳು ವಸಂತಾಗಮನದ ಪ್ರಾರಂಭದಲ್ಲಿ ವಿರಹಿಗಳ ಎದೆ ಬಿರಿಯುವಂತೆ ಅದೇನು ಅರಳಿದವೊ ! ೧೭. ಮನ್ಮಥರಾಜನ ತೇಜಸ್ಸಿನ ಮೊಳಕೆಯೆನ್ನಲು, ರತಿದೇವಿ ತಾನು ಕೊಡುವ ಚಿನ್ನದ ಹೂಗಳು ಎನ್ನಲು, ವಸಂತರಾಜನು ಬರಲು ವನವೆಂಬ ಕನ್ಯೆಯು ಎತ್ತುವ ದೀಪದ ಆರತಿಗಳು ಎನ್ನುವಂತೆ ಎಲ್ಲ ಹೂವಿನ ಸುವಾಸನೆಯನ್ನು ಮೀರಿ ದಿಕ್ಕು ದಿಕ್ಕುಗಳಿಗೆ ತನ್ನ ವಾಸನೆಯು ಎಲ್ಲೆಡೆಗಳಲ್ಲಿಯೂ ಹರಡಲು, ಮನ್ಮಥನ ಉರಿಯ ಬಾಣಗಳು ಎನ್ನುವಂತಿರಲು ಮೊಗ್ಗು, ಅರೆ ಬಿರಿದ ಮೊಗ್ಗು ಮತ್ತು ಹೂಗಳನ್ನು ಹೊಂದಿದ ಸಂಪಿಗೆಗಳು ಕಂಗೊಳಿಸಿದವು. ೧೮. ಇದು ಮನ್ಮಥನ ಶಸ್ತ್ರಾಗಾರ, ಕಾಮರಾಜನ ಚತುರಂಗದ ಪಾಳಯ, ಮದನರಾಜನ ವಿನೋದದ ಅರಮನೆ ಎನ್ನುವಂತೆ ವಸಂತದ ವನಕ್ಕೆ ಗರಗಸದ ಹಲ್ಲುಳ್ಳ ಬೇಲಿಯನ್ನು ನೆಟ್ಟನೋ, ಮನ್ಮಥನ ಹೂಬಾಣ ಮುನಿಗಳ ಹೃದಯಕ್ಕೆ ನಾಟುವುದಿಲ್ಲವೆನ್ನುತ್ತ ಕೊಂಡಿಯ ದೊಡ್ಡ ಚೂಪಾದ ಬಾಣವನ್ನು ಮಾಡಿದನೊ ಎನ್ನುವಂತೆ ಕಾಡನ್ನು ಬಳಸಿ ಕಂಗೊಳಿಸುವ ಹೊನ್ನಬಣ್ಣದ ಕೇದಿಗೆಗಳು ನಾನಾ ರೀತಿಯಲ್ಲಿ ಪ್ರಕಾಶಿಸಿದುವು.

CC-0. Jangamwadi Math Collection. Digitized by eGangotri

ಭಾವಿಸಲ್ ಸ್ಮರನ ಪಯಣಕೆ ಪೊಯ್ದ ನವಚಂದ್ರ
ಗಾವಿಯೊಳಗ್ಗೊದಾರದರಳೆಲೆಗಳೆನೆ ವಿಯೋ
ಗಾವಳಿಮೃಗಂಗಳಂ ಮಧುವೆಂಬ ಬೇಂಟೆಗಂ ಸುಡಲೆಂದು ಬನದೊಳಿಟ್ಟ
ದಾವಾಗ್ನಿ ನಿಡುವುರಿಯ ನಾಲಗೆಗಳೆನೆ ಕೆಂಪು
ದೀವಿ ದಟ್ಟಯಿಸಿರ್ದ ತಳಿರ್ವೊದರ್ಗಳ ಕೆಳಗ
ನಾವರಿಸುತೆಳಲ್ವ ತಳಿರಿಂದಶೋಕದ್ರುಮಂಗಳ್ ಕರಂ ಮೆರೆದುವಂದು ೧೯

ಎಳೆವಳಿರ ಮಾಣಿಕದ ಗೊಂಚಲ್ಗಳಿಂದೆ ಪೂ
ಗಳ ಮಿಸುನಿಗುಸುರಿಗಳ ಕುಚ್ಚುಗಳೆನೆಸೆವ ಮಿಡಿ
ಗಳ ಪಚ್ಚೆವರಲ ಸೂಸಕಗಳಿಂದಪ್ಪಿದೆಳೆವಳ್ಳಿಗಳ ಬಿರಿಮುಗುಳ್ಗಳ
ತೊಳಪ ಮುತ್ತಿನ ಗುಡಿಗಳಿಂ ಚರಿಪ ಮರಿದುಂಬಿ
ಗಳ ನೀಲಮಣಿಮಾಲೆಯಿಂದೆಸೆವ ಮಾಮರಂ
ಗಳೆ ವಸಂತಂ ಸ್ಮರನ ಬರವಿಂಗೆ ಕೈಗೈದ ಗೂಡಾರಮೆನಲೆಸೆದುವು ೨೦

ಕೋಮಳರಸಾಲಪ್ರಸೂನಗುಚ್ಛಂಗಳೊಳ್
ಕಾಮವಾರಣ ಬೃಂಹಿತಸ್ವನಮಿವೆನೆ ಹೇಮ
ತಾಮರಸದೊಳ್ ಜಲಾಂಗನೆಯ ಮುಖಸಂಗೀತಸಪ್ತಸ್ವರಂಗಳೆನಲು
ಆ ಮಲ್ಲಿಕಾಮುಕುಳದೊಳ್ ಮನೋಜಾಸ್ತ್ರಾಭಿ
ರಾಮಭೀಂಕೃತನಿನಾದಂಗಳೆನೆ ಬನಬನದೊ
ಳಾ ಮಧುವ್ರತನಿಸ್ವನಂ ವಿರಹಿಕಂಪನಂ ಪೊಣ್ಮಿದುದದೇನೆಂಬೆನು ೨೧

೧೯. ಆಲೋಚಿಸಲು ಮನ್ಮಥನ ಪ್ರಯಾಣಕ್ಕೆ ನೆಟ್ಟ ಹೊಸ ಚಂದ್ರಗಾವಿ ಬಟ್ಟೆಯ ಗುಡಾರದ ಹೂ, ಎಲೆಗಳೆನ್ನುವಂತೆ ವಸಂತನೆಂಬ ಬೇಟೆಗಾರ ವಿಯೋಗಿಗಳ ಸಮೂಹವೆಂಬ ಮೃಗಗಳನ್ನು ಸುಡಲೆಂದು ವನದೊಳಿಟ್ಟ ಕಾಳ್ಗಿಚ್ಚಿನ ಉದ್ದವಾದ ಉರಿಯ ನಾಲಗೆಗಳೆನ್ನುವಂತೆ ಕೆಂಪಾಗಿ ದಟ್ಟವಾಗಿ ಬೆಳೆದಿದ್ದ ಚಿಗುರಿನ ಪೊದೆಗಳನ್ನು ಕೆಳಭಾಗವನ್ನು ಹೊಂದಿದ್ದು ಚಿಗುರಿನಿಂದ ಕೂಡಿದ್ದ ಅಶೋಕಮರಗಳು ಅಂದು ಚೆನ್ನಾಗಿ ಮೆರೆದುವು. ೨೦. ಎಳೆಯದಾದ ಚಿಗುರಿನ ಮಾಣಿಕ್ಯದ ಗೊಂಚಲುಗಳಿಂದ, ಹೂಗಳ ಚಿನ್ನದ ಕುಸುರಿಕೆಲಸ ಮಾಡಿದ ಕುಚ್ಚುಗಳಿಂದ, ಪ್ರಕಾಶಿಸುವ ಮೊಗ್ಗುಗಳ ಪಚ್ಚೆಯ ಹರಳುಗಳ ಗೊಂಚಲುಗಳಿಂದ, ತಬ್ಬಿದ ಎಳೆ ಬಳ್ಳಿಗಳ ಬಿರಿದ ಮೊಗ್ಗುಗಳ ಹೊಳೆಯುವ ಮುತ್ತಿನ ಗೊಂಚಲುಗಳಿಂದ, ಚಲಿಸುವ ಮರಿದುಂಬಿಗಳ ನೀಲಮಣಿಯ ಹಾರದಿಂದ ಶೋಭಿಸುವ ಮಾವಿನ ಮರಗಳ ಮನ್ಮಥನ ಆಗಮನಕ್ಕಾಗಿ ವಸಂತನು ಸಿದ್ಧಪಡಿಸಿದ ಗೂಡಾರಗಳು ಎನ್ನುವಂತೆ ಕಾಣಿಸಿದವು. ೨೧. ಕೋಮಲವಾದ ಮಾವಿನ ಹೂಗಳ ಗೊಂಚಲುಗಳಲ್ಲಿ ಮನ್ಮಥನ ಆನೆಯ ಘೀಂಕಾರದ ಶಬ್ದ ಇದು ಎನ್ನಲು, ಕೆಂದಾವರೆಯಲ್ಲಿ ಜಲಸ್ತ್ರೀಯ ಮುಖದಿಂದ ಹೊರಡುವ ಸಂಗೀತದ ಸಪ್ತಸ್ವರಗಳು ಎನ್ನುವಂತೆಯೂ, ಆ ಮಲ್ಲಿಗೆಯ ಹೂಗಳಲ್ಲಿ ಮನ್ಮಥನ ಅಸ್ತ್ರದಿಂದ ಹೊರಟ ಸುಂದರವಾದ ಭೀಂಕಾರಧ್ವನಿ ಎನ್ನುವಂತೆಯೂ, ವನವನಗಳಲ್ಲಿ ಆ ವಿರಹಿಗಳಿಗೆ ಕಂಪನವನ್ನುಂಟು

CC-0. Jangamwadi Math Collection. Digitized by eGangotri

ತೇರೈಸಿ ಬರ್ಪ ತುಂಬಿಗಳ ಪೈಗಪ್ಪು ಮುಂ
ಗಾರ ಮುಗಿಲವರ ಝೇಂಕಾರವೆ ಮೊಳಗು ಚರಿಪ
ನಾರಿಯರ ತಳಪಗಣ್ ಮಿಂಚು ಮಾರುತಹತಿಗೊಗುವ ಮಲ್ಲಿಗೆಯರಲ್ಗಳೆ
ತೋರಮಳೆವನಿಗಳೊಂದೊಂದುದಿರ್ವ ಬಂದುಗೆಯ
ಪೂ ರಮ್ಯಮಾದಿಂದ್ರಗೋಪಂಗಳಾಗೆ ಶೃಂ
ಗಾರವಾಯ್ತದು ವರ್ಷಮೋ ವಸಂತಮೊ ತಿಳಿಯಲರಿದೆನಲ್ ಬನಬನದೊಳು ೨೨

ಸರಸಿಯೊಳಗಾಡುವರಸಂಚೆಯಿಂ ಕೊಂಚೆಯಿಂ
ಬಿರಿಮುಗುಳ್ಗೆರಗುವ ಮದಾಳಿಯಿಂ ಗಾಳಿಯಿಂ
ವರಫಲವನುಂಬ ಪೊಕ್ಕುಳಿಗಳಿಂ ಗಿಳಿಗಳಿಂ ಲತೆವನೆಗಳೋವರಿಯೊಳು
ಹರುಷದಿಂದೊಪ್ಪುವ ವಿಟಾಳಿಯಿಂ ಕೇಳಿಯಿಂ
ಮೊರೆವ ನಾನಾಪಕ್ಷಿಜಾಳದಿಂ ಮೇಳದಿಂ
ದರಳ್ವ ಪೂಗಳ ಸೊಗಸುಗಂಪಿನಿಂ ಪೆಂಪಿನಿಂ ವನವನಂಗಳ್ ಮೆರೆದುವು ೨೩

ಪೊಡವಿಯೆಲ್ಲಂ ಕುಸುಮಪರಿಮಳಮಯಂ ಕಾಣ್ಬ
ಕಡೆಗಳೆಲ್ಲಂ ಸಕಲ ಫಲಮಯಂ ಬನಬನಗ
ಳೆಡೆಗಳೆಲ್ಲಂ ಮದನಬಲಮಯಂ ಲೋಕವೆಲ್ಲಂ ಭೋಗಿಸಂಕುಲಮಯಂ
ನುಡಿವುದೆಲ್ಲಂ ಮನೋಭವಮಯಂ ಮುನಿಮನದ
ನಡುವೆಲ್ಲಮತನುಶರಮಯಮೆಸೆವ ತಣ್ಗೊಳದ
ತಡೆಯೆಲ್ಲಮುಂ ವಿರಹಿಮಯಮಾದುದಾ ವಸಂತಾಗಮದೊಳೇನೆಂಬೆನು ೨೪

ಮಾಡುವ ದುಂಬಿಗಳ ಶಬ್ದ ಹೊಮ್ಮಿತು. ಅದನ್ನು ಏನೆನ್ನಲಿ ? ೨೨. ಗುಂಪುಗೂಡಿ ಬರುವ ದುಂಬಿಗಳ ಪೈಗಪ್ಪು ಮುಂಗಾರಿನ ಮುಗಿಲು, ಅವುಗಳ ಝೇಂಕಾರವೇ ಗುಡುಗು, ಚಲಿಸುವ ಸ್ತ್ರೀಯರ ಹೊಳೆಯುವ ಕಣ್ಣೇ ಮಿಂಚು, ಗಾಳಿಯ ಬೀಸುವಿಕೆಗೆ ಉದುರುವ ಮಲ್ಲಿಗೆಯ ಹೂಗಳೇ ಮಳೆ, ಉದುರುವ ಬಂದುಗೆಯ ಹೂಗಳೇ ರಮ್ಯವಾದ ಮಿಣುಕು ಹುಳುಗಳಾಗಲು ಅದೇನು ಮಳೆಯೊ ವಸಂತವೊ ತಿಳಿಯಲು ಅಸಾಧ್ಯ ಎನ್ನುವಂತೆ ಸಿಂಗರಗೊಂಡು ಮನೋಹರವಾಯಿತು. ೨೩. ಕೊಳಗಳಲ್ಲಿ ಆಡುವ ಹಂಸಗಳಿಂದ, ಕ್ರೌಂಚಪಕ್ಷಿಗಳಿಂದ, ಅರಳಿದ ಹೂಗಳಿಗೆ ಎರಗುವ ಮದಿಸಿದ ದುಂಬಿಗಳಿಂದ, ಗಾಳಿಯಿಂದ ಶ್ರೇಷ್ಠವಾದ ಹಣ್ಣನ್ನು ತಿನ್ನುವ ಕೋಗಿಲೆಗಳಿಂದ, ಗಿಳಿಗಳಿಂದ, ಎಲೆವನೆಗಳ ಕೋಣೆಗಳಲ್ಲಿ ಸಂತೋಷದಿಂದ ಇರುವ ವಿಟಪುರುಷರಿಂದ ಮತ್ತು ಅವರ ವಿನೋದದ ಮಾತುಗಳಿಂದ, ಕೂಗುತ್ತಿರುವ ನಾನಾ ಪಕ್ಷಿಗಳ ಸಮೂಹದಿಂದ, ಅವುಗಳ ಮೇಳದಿಂದ ಅರಳುವ ಹೂಗಳ ಸೊಗಸಾದ ಸುವಾಸನೆಯಿಂದ ಆಧಿಕ್ಯವನ್ನು ಹೊಂದಿ ವನವನಗಳು ಮೆರೆದವು. ೨೪. ಆ ವಸಂತಾಗಮನದಲ್ಲಿ ಭೂಮಿಯೆಲ್ಲ ಹೂವಿನ ಸುವಾಸನಾಮಯ, ನೋಡುವ ಕಡೆಯೆಲ್ಲ ನಾನಾ ಹಣ್ಣುಗಳ ಮಯ, ವನಗಳಲ್ಲಿ ಎಲ್ಲೆಲ್ಲಿಯೂ ಮನ್ಮಥನ ಸೈನ್ಯದ ಮಯ, ಲೋಕವೆಲ್ಲ ಭೋಗಿಗಳ ಸಮೂಹಮಯ, ಮಾತಾಡುವುದೆಲ್ಲ ಮನ್ಮಥನ ವಿಷಯವೇ, ಋಷಿಗಳ ಮನಸ್ಸಿನೊಳಗೆಲ್ಲ ಮದನನ ಬಾಣಗಳ ಮಯ, ಪ್ರಕಾಶಿಸುವ

CC-0. Jangamwadi Math Collection. Digitized by eGangotri

ಇಂತು ಜನಕಾನಂದವಮಂ ಕೊಡುತೆ ಬಂದಾ ವ
ಸಂತನಂ ಚೈತ್ರರಥವನಪಾಲನಿದಿರ್ಗೊಂಡ
ನಂತವಿಭವದೊಳೆಸೆವ ವನವಿಭೂತಿಗೆ ಮೆಚ್ಚಿ ತಲೆದೂಗಿ ಶಿವನಿದಿರೊಳು
ಸಂತಸದೊಳಗಜಾತೆಯೊಡಗೂಡಿ ಸಲೆ ಬಿನದಿ
ಪಂತೆ ಸಿಂಗರಿಪೆನೆಂದೊಡನೆ ಮಿಸುನಿಗೆ ಕಂಪು
ಮಂ ತೀವುವಂತೆ ಬನವಂ ಬಣ್ಣವಿಟ್ಟನವನೇನೆಂದು ಬಣ್ಣಿಸುವೆನು ೨೫

ಅಲ್ಲಿಗಲ್ಲಿಗೆ ಲತಾಮಂಟಪಂಗಳ್ ನೋಡ
ಲಲ್ಲಿಗಲ್ಲಿಗೆ ತಳಿತ ಚಪ್ಪರಂಗಳ್ ಬಳಿ
ಕ್ಕಲ್ಲಿಗಲ್ಲಿಗೆ ಪೂಗಳಿಂ ಸಮೆದು ತೋರ್ಪ ಚಾವಡಿ ಮಲಗುಮಾಡಂಗಳು
ಅಲ್ಲಿಗಲ್ಲಿಗೆ ಮಾಡುವೆಟ್ಟು ತಳಿರುಯ್ಯಲೆಗ
ಳಲ್ಲಲ್ಲಿ ಪನ್ನೀರ ಕಾಲ್ಗಳರವಟ್ಟಿಗೆಗ
ಳೆಲ್ಲೆಡೆಯೊಳಿಂತು ಸಾಹಸ್ರಯೋಜನವನಂ ಕಣ್ಗೆಸೆದುದೇನೆಂಬೆನು ೨೬

ತಳಿರ ಗುಡಿತೋರಣದ ಸಾಲ್ಗಳಿಂದೆಡೆಗೆಡೆಗೆ
ತೊಳಪ ಮುಕುಳದ ಮಕರತೋರಣಗಳಿಂದೆ ಪೂ
ಗಳ ಕುರುಜು ದೊಡ್ಡಮೇರುವೆಗಳಿಂದವರ ನೆಲೆನೆಲೆಗಳೊಳ್ ಕಣ್ಗೊಳಿಸುವ
ನಲಿದು ನರ್ತಿಸುವ ಪೂವಲಿಗೆದರ್ವ ಕಲಿತಪರಿ
ಮಳಜಲಂಗಳನೆ ಜೀರ್ಕೊಳವಿಯಿಂದೆಸೆವ ಪೂ
ಗಳ ಬೊಂಬೆಗಳ ಸಾಲ್ಗಳಿಂದೆ ಚೆಲ್ವಾದುದಾ ಬನವದೇಂ ವಣ್ಣಿಸುವೆನು ೨೭

ತಣ್ಣೀರ ಕೊಳದ ತೀರದಲ್ಲೆಲ್ಲ ವಿರಹಿಗಳ ಮಯವಾಯಿತು. ೨೫. ಈ ರೀತಿಯಲ್ಲಿ ಜನಕ್ಕೆ ಆನಂದವನ್ನುಂಟುಮಾಡುತ್ತ ಬಂದ ಆ ವಸಂತನನ್ನು ಚೈತ್ರರಥದ ವನಪಾಲಕನು ಎದುರುಗೊಂಡು, ಅನಂತವಾದ ವೈಭವದಿಂದ ಪ್ರಕಾಶಿಸುವ ವನಸಂಪತ್ತಿಗೆ ಮೆಚ್ಚಿ ತಲೆದೂಗಿ ಶಿವನು ಇದರಲ್ಲಿ ಸಂತೋಷದಿಂದ ಗಿರಿಜೆಯೊಡಗೂಡಿ ಚೆನ್ನಾಗಿ ವಿನೋದಿಸುವಂತೆ ಸಿಂಗರಿಸುತ್ತೇನೆ ಎಂದು ಕೂಡಲೇ ಚಿನ್ನಕ್ಕೆ ಪರಿಮಳವನ್ನು ತುಂಬುವಂತೆ ವನವನ್ನು ಶೃಂಗರಿಸಿದನು. ಅದನ್ನೇನೆಂದು ವರ್ಣಿಸಲಿ ? ೨೬. ಅಲ್ಲಲ್ಲಿ ಲತಾಮಂಟಪಗಳು, ನೋಡಲು ಅಲ್ಲಲ್ಲಿ ಚಿಗುರಿನ ಚಪ್ಪರಗಳು, ಬಳಿಕ ಅಲ್ಲಲ್ಲಿ ಹೂಗಳ ಶೃಂಗಾರದಿಂದ ಕಾಣುವ ಚಾವಡಿ ಮತ್ತು ಮಲಗುವ ಉಪ್ಪರಿಗೆಗಳು, ಅಲ್ಲಲ್ಲಿ ಕೃತಕಗಿರಿಗಳು, ಚಿಗುರಿನ ಉಯ್ಯಾಲೆಗಳು, ಅಲ್ಲಲ್ಲಿ ಪನ್ನೀರಿನ ಕಾಲುವೆಗಳು, ಅರವಟ್ಟಿಗೆಗಳು, ಈ ರೀತಿಯಲ್ಲಿ ಸಾವಿರ ಯೋಜನ ವಿಶಾಲವಾದ ವನ ಕಣ್ಣಿಗೆ ಮನೋಹರವಾಯಿತು. ೨೭. ಚಿಗುರಿನ ಬಾವುಟ ತೋರಣಗಳ ಸಾಲುಗಳಿಂದ, ಅಲ್ಲಲ್ಲಿ ಹೊಳೆಯುವ ಮೊಗ್ಗಿನ ಮಕರತೋರಣಗಳಿಂದ, ಗೋಪುರದಂತೆ ರಚಿಸಿದ ಹೂಗಳ ಮಂಟಪಗಳಿಂದ, ಅದರ ಎಡೆಎಡೆಯಲ್ಲಿ ಕಂಗೊಳಿಸುವ ಸಂತೋಷದಿಂದ ಕುಣಿದಾಡುವ ಹೂವುಗಳಿಂದ ಬಿಡಿಸಿದ ಅಲಂಕಾರದ ಚಿತ್ರಗಳು ಪರಿಮಳಭರಿತವಾದ ನೀರನ್ನು ಜಿರ್ಕೊಳವೆಗಳಿಂದ ಸುರಿಸುವ ಹೂಬೊಂಬೆ

CC-0. Jangamwadi Math Collection. Digitized by eGangotri

ಶಿರವನಲ್ಲಾಡಿದಂ ವನಪಾಲನಾ ಬನದ
ಸಿರಿಯನೀಶಂಗರಿಪಬೇಕೆಂದು ಮಲ್ಲಿಗೆಯ
ಬಿರಿಮುಗುಳ್ಗಳನೆಸೆವ ಸಂಪಗೆಯ ಪೂಗಳಂ ತಾವರೆಯ ಮೊಗ್ಗೆಗಳನು
ಕುರವಕದ ಕುಸುಮಮಸುಗೆಯ ತಳಿರನಾ ಪೊನ್ನೆ
ಯರಳ್ಗಳಂ ಪಾದರಿಯ ಪೂವ ಮುಡಿವಾಳ ಕ
ತ್ತುರಿಯ ಪೊಂಬಾಳೆಗಳ ಪೊಟ್ಟಣಗಳಂ ಕಟ್ಟಿದಂ ಕಣ್ಗೆ ಸೊಬಗೆಸೆಯಲು ೨೮

ಕಿಕ್ಕಿರಿದು ಬೆಳೆದ ರಸವಾಳೆವಣ್ಗೊನೆಗಳಂ
ಕಕ್ಕಸದೆ ಬೆಳೆದ ತೆಂಗಾಯ್ಗೊನೆಗಳಂ ನೆಲ
ಕ್ಕೊಕ್ಕಪುದು ರಸವೆಂಬ ಮಾವಿನಿನಿವಣ್ಗೊನೆಗಳಂ ಬೇರ್ಗಳೊಳಗೆ ಕಾತ
ಒಕ್ಕಿವಲಸುಗಳ ಪಣ್ಗೊನೆಗಳಂ ಬಿತ್ತುಗಳ
ವೆಕ್ಕಸಂ ಬಿರಿದ ದಾಳಿಂಬವಣ್ಗೊನೆಗಳಂ
ಮುಕ್ಕಣ್ಣನೆಡೆಗೆ ವನಪಾಲಕಂ ಪೊರಿಸಿಕೊಂಡೈತಂದನಾಕ್ಷಣದೊಳು ೨೯

ಬಂದು ಸದ್ಭಯಭರಿತಭಕ್ತಿಯಿಂ ಸಾಷ್ಟಾಂಗ
ದಿಂದೆರಗಿ ಮುಗುಳೆದ್ದು ಕರಕಮಲಮಂ ಪಣೆಗೆ
ತಂದು ದೇವರದೇವ ಸಕಲಜಗದೊಡೆಯ ಚಿತ್ತವಿಸು ಚಿತ್ತಾವಧಾನ
ಅಂದೆನಗೆ ಸಲಹೆಂದು ನಿರವಿಸಿದಿರಾ ವನಮ
ದಿಂದು ಫಲಿಸಿದುದೀಕ್ಷಿಸೆನುತಿರದೆ ಕಾಣ್ಕೆಯಂ
ಮುಂದಿಳಿಪಿ ಶಿವನ ಮನಮೆಚ್ಚರಿದು ಮತ್ತೆ ವನಪಾಲನಂದಿಂತೆಂದನು ೩೦

ಗಳ ಸಾಲುಗಳಿಂದ ಆ ವನವು ಚೆಲುವಾಯ್ತು. ೨೮. ವನಪಾಲಕನು ಅದನ್ನು ನೋಡೀ ತಲೆದೂಗಿದನು. ಆ ವನದ ಸೊಬಗನ್ನು ಈಶ್ವರನಿಗೆ ತಿಳಿಸಬೇಕೆಂದು ಮಲ್ಲಿಗೆಯ ಅರಳಿದ ಮೊಗ್ಗುಗಳನ್ನು, ಹೊಳೆಯುವ ಸಂಪಗೆಯ ಹೂಗಳನ್ನು ತಾವರೆಯ ಮೊಗ್ಗುಗಳನ್ನು, ಗೋರಂಟಿಹೂ, ಅಶೋಕದ ಚಿಗುರು, ಹೊನ್ನೆಯ ಹೂಗಳನ್ನು, ಪಾದರಿಯಹೂಗಳನ್ನು ಪರಿಮಳಿಸುವ ಲಾಮಂಚ, ಕಸ್ತೂರಿ, ಹೊಂಬಾಳೆಗಳ ಪೊಟ್ಟಣಗಳನ್ನು ಕಣ್ಗೆ ಸೊಗಸೆನ್ನುವಂತೆ ಕಟ್ಟಿದನು. ೨೯. ಕಿಕ್ಕಿರಿದು ಬೆಳೆದ ರಸಬಾಳೆಹಣ್ಣಿನ ಗೊನೆಗಳನ್ನು ಕಠಿಣವಾಗಿ ಬೆಳೆದ ತೆಂಗಿನಕಾಯ ಗೊನೆಗಳನ್ನು, ರಸವು ನೆಲಕ್ಕೆ ಸೋರುತ್ತದೆ ಎನ್ನುವಂತೆ ಇರುವ ಮಾವಿನ ಸಿಹಿಯಾದ ಹಣ್ಣಿನ ಗೊನೆಗಳನ್ನು, ಬೇರುಗಳಲ್ಲಿ ಬಿಟ್ಟ ವಿಶಿಷ್ಟ ಜಾತಿಯ ಹಲಸಿನ ಹಣ್ಣುಗಳ ಜೊಂಪೆಗಳನ್ನು, ಅತಿಶಯವಾಗಿ ಬಿರಿದ ಬೀಜಗಳನ್ನುಳ್ಳ ದಾಳಿಂಬೆಹಣ್ಣಿನ ಗೊಂಚಲುಗಳನ್ನು ವನಪಾಲಕನು ಈಶ್ವರನ ಬಳಿಗೆ ಆ ತಕ್ಷಣ ಹೊರಿಸಿಕೊಂಡು ಬಂದನು. ೩೦. ಹಾಗೆ ಬಂದು ಒಳ್ಳೆಯ ಭಯಭರಿತ ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರ ಮಾಡಿ ಮತ್ತೆ, ಎದ್ದು ನಿಂತು ಕೈಯನ್ನು ಮುಗಿದು ಹಣೆಯ ಬಳಿಗೆ ತಂದು ಹೇಳಿದನು. ದೇವರದೇವನೇ, ಸಕಲ ಜಗತ್ತಿಗೂ ಒಡೆಯನೆ, ಸಾವಧಾನವಾಗಿ ಕೇಳು, ಅಂದು ಆ ವನವನ್ನು ರಕ್ಷಿಸೆಂದು ನನಗೆ ಆಜ್ಞಾಪಿಸಿದ್ದೆ. ಈ ದಿನ ಆ ವನವು ಫಲಕೊಟ್ಟಿದೆ. ಇಗೋ ನೋಡು ಎನ್ನುತ್ತ ಇರದೆ ಕಾಣಿಕೆಯನ್ನು ಶಿವನು

CC-0. Jangamwadi Math Collection. Digitized by eGangotri

ಭೋಗಿಭೂಷಣನೆ ಕೇಳ್ ವನದೇವಿ ಷಟ್ಪದೀ
ರಾಗದಿಂ ಪಾಡಿ ದಾಳಿಂಬವಲ್ಗಿರಿದೊಡನೆ
ಕೋಗಿಲೆಯ ಸರವೆತ್ತಿ ನಿಮ್ಮನೇ ಕರೆದೆನ್ನನಟ್ಟಿದಳ್ ಗಿರಿಜೆವೆರಸಿ
ಬೇಗ ಚಿತ್ತೈಸೆನಲ್ ವನಪಾಲಕಂಗೊಲಿದು
ರಾಗದಿಂದುಡುತೊಡಂಗಳನಿತ್ತು ಬೀಳ್ಕೊಟ್ಟು
ನಾಗಭೂಷಣನಗಜೆಗೂಡಿ ಸುವಿಲಾಸದಿಂ ಪೊರಮಟ್ಟನಾ ಕ್ಷಣದೊಳು ೩೧

ಆ ಭವಾನಿಯ ಪಿಂತೆ ಪೊರಮಡುತ್ತಿರ್ದುದು ಮು
ದೇಭವರಯಾನೆಯರ್ ಸುಕಲಾನಿಧಾನೆಯರ್
ಶೋಭಿಸುವ ಕಾಂತೆಯರ್ ನೀಲಾಳಕಾಂತೆಯರ್ ನಿಬಿಡಕುಚಮಂಡಲೆಯರು
ನಾಭಿಗಂಭೀರೆಯರ್ ನವರತ್ನಹಾರೆಯರ್
ಸ್ವಾಭರಣಹಸ್ತೆಯರ್ ಸುಗುಣಪ್ರಶಸ್ತೆಯರ್
ಸ್ವಾಭಾವಮುಗ್ಧೆಯರ್ ಸಾಜದ ವಿದಗ್ಧೆಯರ್ ನಡೆಗೊಂಡರೇವೇಳ್ವೆನು ೩೨

ಕುಡಿತೆಗಂಗಳ ಗುಣವೆಯರ್ ನೆಲಕ್ಕಲೆವ ನಿಡು
ಜಡೆಯ ನೀಟಿನ ನೀರೆಯರ್ ಮುದ್ದುಮೊಗದ ಸೊಂ
ಪಿಡಿದ ಸೊಬಗಿನ ಸೊಗಸುಗಾರ್ತಿಯರ್ ನಸುನಗೆಯ ಸುಲಿಪಲ್ಲ ಕೋಮಲೆಯರು
ಕಡುಕಕ್ಕಸದ ಬಟ್ಟಬಲ್ಮೊಲೆಯ ಭಾವೆಯರ್
ನಡೆಯ ಬೆಡಗಿನ ಬಿಂಕಗಾರ್ತಿಯರ್ ಪೊಂಬಾಳೆ
ದೊಡೆಯ ಪೊಸಪೊಂಗೊಡದ ಪೊರವಾರ ಸೊಕ್ಕಾನೆನಡೆಯವರ್ ನಡೆತಂದರು ೩೩

ಮುಂದೆ ಇಳಿಸಿದನು. ಶಿವನ ಮನಸ್ಸು ಮೆಚ್ಚಿಕೆ ಪಡೆದುದನ್ನು ತಿಳಿದು ಮತ್ತೆ ವನಪಾಲಕನು ಈ ರೀತಿ ಹೇಳಿದನು. ೩೧. ಸರ್ಪಭೂಷಣನೇ ಕೇಳು, ವನದೇವಿಯು ದುಂಬಿಯ ಇಂಪಾದ ರಾಗದಿಂದ ಹಾಡಿ, ದಾಳಿಂಬೆಯ ಬೀಜಗಳ ಹಲ್ಲುಕಿರಿದು, ಕೋಗಿಲೆಯ ಸ್ವರವೆತ್ತಿ ನಿಮ್ಮನ್ನೇ ಕರೆಯಲು ನನ್ನನ್ನು ಕಳುಹಿಸಿದಳು. ಗಿರಿಜೆಯೊಡಗೂಡಿ ಬೇಗನೆ ದಯಮಾಡು ಎಂದನು. ಆ ವನಪಾಲಕನ ಮಾತಿಗೆ ಒಲಿದು ಸಂತೋಷದಿಂದ ಉಡುಗೆ-ತೊಡಿಗೆಗಳ ಉಡುಗೊರೆ ಕೊಟ್ಟುಕಳಿಸಿ, ನಾಗಭೂಷಣನು ಗಿರಿಜೆಯೊಡಗೂಡಿ ಸಂತೋಷ ಸಂಭ್ರಮಗಳಿಂದ ಆ ಕ್ಷಣ ಹೊರಟನು. ೩೨. ಮಂದಗಜಗಮನೆಯರು, ಒಳ್ಳೆಯ ಕಲೆಗಳಿಗೆ ಆಗರವಾಗಿದ್ದವರು, ಕಾಂತಿಯುತರು, ಕಪ್ಪುಬಣ್ಣದ ಗುಂಗುರುಕೂದಲಿನವರು, ಒತ್ತಾದ ದುಂಡನೆಯ ಮೊಲೆಯುಳ್ಳವರು, ಆಳವಾದ ಹೊಕ್ಕುಳುಳ್ಳವರು, ನವರತ್ನಗಳ ಹಾರ ಧರಿಸಿದ್ದವರು, ಕೈಯ ಆಭರಣದಿಂದ ಕೂಡಿದವರು, ಒಳ್ಳೆಯ ಗುಣಶಾಲಿಗಳು, ಮುಗ್ಧಸ್ವಭಾವವುಳ್ಳವರು, ಸಹಜವಾದ ಪಾಂಡಿತ್ಯವುಳ್ಳವರು ಆದ ಇಂತಹ ಪರಿವಾರದ ಸ್ತ್ರೀಯರು ಭವಾನಿಯ ಹಿಂದೆ ಹೊರಟರು. ೩೩. ಅಲ್ಲದೆ ಬಟ್ಟಗಣ್ಣಿನ ಶ್ರೇಷ್ಠವಾದ ಸ್ತ್ರೀಯರು, ನೆಲಕ್ಕೆ ತೊನೆದಾಡುವ ಉದ್ದವಾದ ಜಡೆಯ ಸೊಗಸುಗಾತಿಯರು, ಮುದ್ದಾದ ಮುಖದ ಕಾಂತಿಯಿಂದ ಕೂಡಿದ ಮನೋಹರವಾದ ಚೆಲುವೆಯರು, ನಸುನಗೆಯ ಹೊಳಪುಹಲ್ಲಿನ ಕೋಮಲೆ

CC-0. Jangamwadi Math Collection. Digitized by eGangotri

ಅಡಿ ತಳಿರ್ಗಳ್ ಕುರುಳ್ ತುಂಬಿಗಳ್ ಮುಖಮೆ ಸೊಂ
ಪಿಡಿದ ತಾವರೆಗಳಾ ಬಾಹು ಲತೆಗಳ್ ನುಂಪು
ದೊಡೆ ಬಾಳೆಗಳ್ ಪೊಕ್ಕುಳೇ ಕೊಳಂಗಳ್ ಮೊಲೆಗಳೇ ಚಕ್ರವಾಕಂಗಳು
ನುಡಿಯೆ ಗಿಳಿಗಳ್ ನಡೆಗಳಂಚೆಗಳ್ ತೋರಸೋ
ರ್ಮುಡಿ ನವಿಲ್ಗಳಾಗಲಾ ಸತಿಯರೆಂದೆಂಬ ಚೆ
ಲ್ವಿಡಿದ ಜಂಗಮವನಂ ಸ್ಥಾವರವನಕ್ಕೈದುವಂತೆ ವನಮಂ ಪೊಕ್ಕರು ೩೪

ಪೊಕ್ಕುದಂತಬಲೆಯರ ತಂಡವೊಡನೊಡನೆ ಮೇ
ಲಿಕ್ಕಿಕ್ಕಿಯಿಂ ಹಿಂಡುಹಿಂಡಾಗಿ ಮನಸಿಜನ
ಸೊಕ್ಕಾನೆಗಳ್ ನಿಗಳಮಂ ಪರಿದು ಬಂದಂತೆ ಬನಮನಾ ಕೋಮಳೆಯರು
ಒಕ್ಕೈಗೆ ಪೂ ತಳಿರ್ಗಳೊಂದೊಂದರಿಂ ಮೇಲೆ
ಸಿಕ್ಕಲರಿಯವುಪುಯೆಂಬ ಸಂದೆಗಂಗಳ್ ಸಲೆ ಮ
ನಕ್ಕಾಗೆ ಪೂಗೊಯ್ವ ತವಕದಿಂದಬಲೆಯರ್ ಸಂದಣಿಸಿದರ್ ಬನದೊಳು ೩೫

ತಳಿರ್ಗಳಿವು ಕರಪದತಳಂಗಳಿವು ತುಂಬಿಗಳ
ಬಳಗಮಿವು ಕುರುಳ್ಗಳಿವು ತುಟಿಗಳಿವು ಬಂಧೂಕ
ದಲರ್ಗಳಿವು ತನುಗಳಿವು ಲತೆಗಳಿವು ನಗೆಗಳಿವು ಮಲ್ಲಿಗೆಯ ಪೂವೆಳ್ಪಿವು
ಸಲೆನಾಸಿಕಂಗಳಿವು ಚಂಪಕದ ಮುಕುಳಮಿವು
ಗಿಳಿನುಡಿಗಳಿವು ನುಡಿಗಳಿವಿವೆಂಬ ಭೇದಮಂ
ತಿಳಿಯಲರಿಯದೆ ಕೆಲರ್ ಮುಗ್ಧೆಯರ್ ಕಳಕಳಂಗೊಂಡರೇಂ ವಣ್ಣಿಸುವೆನು ೩೬

ಯರು, ಬಹಳ ಬಲಿಷ್ಠವಾದ ದುಂಡಾದ ದೊಡ್ಡ ಮೊಲೆಯ ಮುಗ್ಧೆಯರು, ಬೆಡಗಿನ ನಡೆಯುಳ್ಳ ಬಿಂಕಗಾತಿಯರು, ಹೊಂಬಾಳೆ ತೊಡೆಯ, ಹೊಸಹೊನ್ನಿನ ಕೊಡದಂಥ ಪೃಷ್ಠವುಳ್ಳ ಮದಗಜಗಮನೆಯರು ಹೊರಟುಬಂದರು. ೩೪. ಪಾದಗಳೇ ಚಿಗುರಗಳು, ಕಪ್ಪು ಗುಂಗುರುಕೂದಲೇ ದುಂಬಿಗಳು, ಮುಖವೇ ಸೊಗಸಾದ ತಾವರೆಗಳು, ತೋಳುಗಳೇ ಬಳ್ಳಿಗಳು, ನುಣುಪಾದ ತೊಡೆಯೇ ಬಾಳೆಗಿಡ, ಹೊಕ್ಕುಳೇ ಕೊಳಗಳು, ಮೊಲೆಗಳೇ ಚಕ್ರವಾಕಪಕ್ಷಿಗಳು, ಅವರ ಮಾತೇ ಗಿಳಿಗಳು, ನಡಿಗೆಯೇ ಹಂಸಗಳು, ದೊಡ್ಡ ತೂಗಾಡುವ ಜಡೆಯೇ ನವಿಲುಗಳಾಗಲು ಆ ಸ್ತ್ರೀಯರೆನ್ನುವ ಸೊಗಸಾದ ಚಲಿಸುವ ವನವು (ಸ್ಥಿರವಾಗಿ) ಕದಲದೆ ನಿಂತ ವನಕ್ಕೆ ಬರುವಂತೆ ಆ ವನವನ್ನು ಪ್ರವೇಶಿಸಿದರು. ೩೫. ಆ ರೀತಿಯಲ್ಲಿ ಸ್ತ್ರೀಯರ ತಂಡ ಹೊಕ್ಕಿತು. ಜೊತೆಯಲ್ಲೆ ಮೇಲೆ ಮೇಲೆ ಗುಂಪು ಗುಂಪಾಗಿ ಹಿಂಡು ಹಿಂಡಾಗಿ ಮನ್ಮಥನ ಮದದಾನೆಗಳ ಹಿಂಡು ಸರಪಣಿಗಳನ್ನು ಹರಿದು ಬಂದಂತೆ ಆ ವನವನ್ನು ಹೊಕ್ಕು ಕೋಮಲೆಯರು ಒಂದು ಕೈಗೆ ಹೂ ಚಿಗುರು ಒಂದಕ್ಕಿಂತ ಹೆಚ್ಚು ಸಿಗುವುದಿಲ್ಲವೊ ಎಂಬ ಸಂದೇಹ ಮನಸ್ಸಿಗೆ ಹೆಚ್ಚಾಗಿ ಉಂಟಾಗಲು ಹೂ ಕೊಯ್ಯುವ ಆತುರದಿಂದ ವನದಲ್ಲಿ ಗುಂಪುಗೂಡಿದರು. ೩೬. ಇವು ಚಿಗುರುಗಳು, ಇವು ಅಂಗೈ ಅಂಗಾಲು, ದುಂಬಿಗಳ ಸಮೂಹವಿದು, ಮುಂಗುರುಳುಗಳಿವು, ಇವು ತುಟಿಗಳು, ಇವು ಬಂದುಗೆಯ ಹೂಗಳು. ಶರೀರಗಳಿವು, ಬಳ್ಳಿಗಳಿವು, ನಗುವಿದು,

CC-0. Jangamwadi Math Collection. Digitized by eGangotri

ನಲಿದು ಮಲ್ಲಿಗೆಯ ಪೂಗೊಯ್ವ ಸತಿಯರೊಳೊರ್ವ
ಲಲಿತಾಂಗಿಯುರದ ಮೇಲುದು ಜಾರೆ ಕಂಗೊಳಿಪ
ನೆಲೆವೊಲೆಗಳಂ ಕಾಣುತಕ್ಕಕ್ಕ ಮಲ್ಲಿಗೆಯ ಬಳ್ಳಿ ತಾವರೆವೊಗ್ಗೆಯಂ
ತಳೆದಿದೆಕೊ ಕೊಯ್ದಿತ್ತಪೆಂ ನೋಡೆನುತ್ತವಳ
ಮೊಲೆಗಳ್ಗೆ ಕೈನೀಡಿ ಸಖಿಯರಂ ಹಾಸ್ಯರಸ
ಜಲಧಿಯೊಳಗದ್ದಿದಳ್ ಮುಗ್ಧೆಯೊರ್ವಳ್ ಬಳಿಕ್ಕೇನೆಂಬೆನಚ್ಚರಿಯನು ೩೭

ಅಸಿಯ ನಡು ನಿಮಿರೆ ಮೆಯ್ ಬೆಮರೆ ಕಣ್ಬೆಳಗು ದೆಸೆ
ದೆಸೆಗೆ ಪಸರಿಸೆ ಮೇಲುದೋಸರಿಸೆ ಮೊಲೆಗಳುಂ
ಕುಸುಮದೊಳ್ ಮುಂಡಾಡೆ ಮುಡಿ ಬೆನ್ನೊಳೊಲೆದಾಡೆ ಚರಣಾಗ್ರದೊಳಗೆ ನಿಂದು
ಪೊಸಪೂಗಳಂ ನೋಡಿ ನಳಿತೋಳ್ಗಳಂ ನೀಡಿ
ಮುಸುರ್ವಳಿಗೆ ಕಾಯ್ದುತಂ ಕುಸುಮಮಂ ಕೊಯ್ವುತಂ
ದೆಸೆದರ್ ಪ್ರಮೋದಂಗಳಿಂ ವಿನೋದಂಗಳಿಂದೊಬ್ಬೊಬ್ಬರೊಳ್ ನಲಿವುತೆ ೩೮

ಮಾತಂಗದಾನಾರ್ಥಿಗಳ್ ಮಲಿನದೇಹಿಗಳ್
ನೂತನಸುಪುಷ್ಪಿತಾಸಂಗಿಗಳ್ ಮಧುವನತಿ
ಪ್ರೀತಿಯಿಂದುಂಬುವೀ ಚಂಡಾಳಿಗಳ್ ತಾನಿವಂ ಕಂಡು ಕಂಡು ಸೋಂಕೆ

ಮಲ್ಲಿಗೆಯ ಹೂವಿನ ಬಿಳುಪಿದು, ಮೂಗುಗಳಿವು, ಸಂಪಿಗೆ ಹೂಗಳಿವು, ಗಿಳಿಗಳ ಮಾತುಗಳಿವು, ಮನುಷ್ಯರ ಮಾತುಗಳಿವು ಎಂಬ ವ್ಯತ್ಯಾಸವನ್ನೇ ತಿಳಿಯಲಾರದೆ ಕೆಲವರು ಮುಗ್ಧೆಯರು ಗಜಿಬಿಜಿಗೊಂಡರು. ಅದನ್ನು ಏನೆಂದು ಬಣ್ಣಿಸಲಿ ? ೩೭. ನಲವಿನಿಂದ ಮಲ್ಲಿಗೆಯ ಹೂ ಕೊಯ್ಯುವ ಸ್ತ್ರೀಯರಲ್ಲಿ ಒಬ್ಬ ಕೋಮಲೆಯ ಎದೆಯ ಮೇಲಿನ ಸೆರಗು ಜಾರಲು ಮನೋಹರವಾಗಿ ಕಾಣಿಸುವ ಭಾರವಾದ ಪುಷ್ಟವಾದ ಮೊಲೆಗಳನ್ನು ನೋಡುತ್ತ ಅಕ್ಕ, ಎಲೆ ಅಕ್ಕ, ಮಲ್ಲಿಗೆಯ ಬಳ್ಳಿ ತಾವರೆಯ ಮೊಗ್ಗನ್ನು ಬಿಟ್ಟಿದೆ, ಇದೊ ಕೊಯ್ದುಕೊಡುತ್ತೇನೆ ನೋಡು ಎನ್ನುತ್ತ ಅವಳ ಮೊಲೆಗಳಿಗೆ ಕೈಚಾಚಿ ಸಖಿಯರನ್ನು ಅನಂತರ ಹಾಸ್ಯರಸದ ಸಮುದ್ರದಲ್ಲಿ ಮುಗ್ಧೆಯೊಬ್ಬಳು ಅದ್ದಿದಳು. ಅನಂತರ ಆದ ಆಶ್ಚರ್ಯವನ್ನು ಏನು ಹೇಳಲಿ? ೩೮. ತೆಳುವಾದ ನಡು ನಿಮಿರಲು, ಮೈ ಬೆವರಲು, ಕಣ್ಣಿನಕಾಂತಿ ದಿಕ್ಕುದಿಕ್ಕಿಗೆ .ಹರಡಲು, ಸೆರಗು ಪಕ್ಕಕ್ಕೆ ಜಾರಲು, ಮೊಲೆಗಳು ಹೂಗಳನ್ನು ಮುದ್ದಿಸುತ್ತಿರಲು, ಜಡೆ ಬೆನ್ನಲ್ಲಿ ಓಲಾಡುತ್ತಿರಲು ತುದಿಗಾಲಿನಲ್ಲಿ ನಿಂತು, ಆಗತಾನೆ ಅರಳಿದ್ದ ಹೂಗಳನ್ನು ನೋಡಿ, ಕೋಮಲವಾದ ತೋಳುಗಳನ್ನು ಚಾಚಿ, ಮುತ್ತುವ ದುಂಬಿಗಳನ್ನು ನೋಡಿ ಕೋಪಗೊಳ್ಳುತ್ತ, ಹೂಗಳನ್ನು ಕೊಯ್ಯುತ್ತ, ಹಿಗ್ಗು ಮತ್ತು ವಿನೋದಗಳಿಂದ ಒಬ್ಬರಲ್ಲಿ ಒಬ್ಬರು ನಲಿಯುತ್ತ ಮೆರೆದರು. ೩೯. ಆನೆಯ ಮದಜಲಕ್ಕೆ ಆಶಿಸುವುವುಗಳು, ಕೊಳಕು ಶರೀರಿಗಳು, ಹೊಸದಾಗಿ ಅರಳಿದ ಹೂಗಳ ಸಂಗದಲ್ಲಿರುವವರು ಜೇನನ್ನು ಅತಿಪ್ರೀತಿಯಿಂದ ಪಾನಮಾಡುತ್ತವೆ ಈ ದುರುದುಂಬಿಗಳು. ನಾನು ಇದನ್ನು ನೋಡಿ ನೋಡಿಯೂ ಸೋಕಿದರೆ (ಸ್ನೇಹಮಾಡಿದರೆ) ಪಾಪ

CC-0. Jangamwadi Math Collection. Digitized by eGangotri

ಪಾತಕವೆನುತ್ತೆ ಸಂಪಗೆ ತೆವರಿತೈಸೆ ಬಳಿ
ಕೀ ತುಂಬಿ ಸಂಪಗೆಗೆ ಪಗೆಯಪ್ಪವೇ ಪುಷ್ಪ
ಜಾತಿನಾಯಕರತ್ನವೆನುತೆ ಸಂಪಗೆಯ ಪೂಗಳ ತಿರಿದರಂಗನೆಯರು ೩೯

ಗಣಿಕಾಸಮೂಹಕೊಲಿದರ್ ಬೊಜಗರಂತೆ [ರಾ[1]]
ಗಿಣಿಯಂತೆ ಮಧುದೂತಿಗೆಳಸಿದರ್ ಬಿಲ್ಲಬಿ
ನ್ನಣಿಗರೆನೆ ಬಾಣಮಂ ತುಡುಕಿದರಶೋಕದೊಳ್ ಬೆರಸಿದರ್ ಸುಖಿಗಳಂತೆ
ಫಣಿಯುವತಿಯಂತೆ ಪುನ್ನಾಗದೊಳ್ ಕ್ರೀಡಿಸಿದ
ರೆಣಸಿ ಬೆಲೆವೆಣ್ಣಂತೆ ಕಾಂಚನಂಬಿಡಿದರಿಂ
ತಣಿಯರಂ ನಾನಾಪ್ರಕಾರದಿಂ ಪರಿದಾಡಿದರ್ ಬನದೊಳಾ ಪೆಣ್ಗಳು ೪೦

ಪೂಗಳಂ ಪುರಂ ತಳಿರ ಮರನಾಗುತಿರ್ದುವತಿ
ಬೇಗದಿಂ ಚೆಂದಳಿರ್ಗೆಯ್ಯ ಕೆಂಪಿಂ ಬಳಿ
ಕ್ಕಾಗಳಕ್ಷಿಗಳ ಬೆಳ್ಪಿಂ ತಳಿರ್ಮರನವೆಲ್ಲಂ ಪೂಮರಗಳಾದುವು
ಮೇಗೆ ಬಗೆಬಗೆವಣ್ಣದಲರ್ಗಳಿಂದವರಧರ
ರಾಗ ನಗೆವೆಳ್ಪಿನಿಂ ಪಲ್ಲಟಿಸಿದುವು ಚೋದ್ಯ
ಮಾ ಗರುವೆಯರ್ ಬನದೊಳಿಂದ್ರಜಾಲಿಗರಂತೆ ಕಣ್ಗೆಸೆದರೇನೆಂಬೆನು ೪೧

ವುಂಟಾಗುತ್ತದೆ ಎನ್ನುತ್ತ ಸಂಪಿಗೆ ತಿರಸ್ಕರಿಸಿತಲ್ಲವೆ. ಅನಂತರ ಈ ದುಂಬಿ ಮತ್ತು ಸಂಪಿಗೆಗೆ ದ್ವೇಷವಾಗದೆ ? ಇದು ಹೂಜಾತಿಗೆ ನಾಯಕರತ್ನ ಎನ್ನುತ್ತ ಅಂಗನೆಯರು ಸಂಪಿಗೆಹೂಗಳನ್ನು ಬಿಡಿಸಿಕೊಂಡರು. ೪೦. ಆ ಹೆಂಗಳೆಯರು ವಿಟರಂತೆ ಜಾಜಿ ಮಲ್ಲಿಗೆಗೆ ಒಲಿದರು. ಅನುರಕ್ತಳು ವಸಂತಕಾಲದ ದೂತಿಯನ್ನು ಬಯಸುವಂತೆ ಮಧುದೂತಿಯೆಂಬ ಹೂಬಳ್ಳಿಗೆ ಆಶಿಸಿದರು. ಜಾಣ ಬಿಲ್ಗಾರರೆನ್ನುವಂತೆ ಗೋರಂಟಿ ಹೂವನ್ನು ಕೈಗೆತ್ತಿಕೊಂಡರು. ಸುಖಿಗಳಂತೆ ಅಶೋಕೆಯಲ್ಲಿ ಬೆರೆತರು, ನಾಗಕನ್ಯೆಯರಂತೆ ಪುನ್ನಾಗವೃಕ್ಷದಲ್ಲಿ ಮತ್ತು ಗಂಡುನಾಗಗಳಲ್ಲಿ ಕ್ರೀಡಿಸಿದರು. ಸೂಳೆಯರಂತೆ ಹೊನ್ನನ್ನು ಮತ್ತು ನಾಗಸಂಪಿಗೆಯನ್ನು ಹಿಡಿದರು. ಹೀಗೆ ಆ ಹೆಣ್ಣುಗಳು ಅತಿಶಯ ವಾಗಿ ನಾನಾರೀತಿಯಲ್ಲಿ ಆ ವನದಲ್ಲಿ ಅಲೆದಾಡಿದರು. ೪೧. ಹೂ ಬಿಡುವ ಮರಗಳು ಕೆಂಪಾದ ಅಂಗೈಯ ಚಿಗುರಿನಂತಹ ಕೆಂಪಿನಿಂದ ಅತಿಬೇಗ ಚಿಗುರಿನ ಮರಗಳಾದುವು. ಅನಂತರ ಕಣ್ಣ ಹೊಳಪಿನಿಂದ ಚಿಗುರಿನ ಮರಗಳೆಲ್ಲ ಹೂಮರಗಳಾದುವು ಮತ್ತು ನಾನಾ ಬಣ್ಣದ ಹೂಗಳು ಅವರ ತುಟಿಯ ನಗುವಿನ ಬಿಳಿಯ ಬಣ್ಣದಿಂದ ವ್ಯತ್ಯಾಸಹೊಂದಿ ದವು. ಆಶ್ಚರ್ಯವೇನೆಂದರೆ ಆ ಸ್ತ್ರೀಯರು ವನದಲ್ಲಿ ಐಂದ್ರಜಾಲಿಕರಂತೆ ತೋರು

---

1 ಜೋ–ಅನ್ಯತ್ರ

CC-0. Jangamwadi Math Collection. Digitized by eGangotri

ತಿಲಕ ಕುರವಕ ಚಂಪಕ ಪ್ರಿಯಂಗು ರಸಾಲ
ಲಲಿತಕಂಕೇಳಿ ವರಬಕುಳ ಪುನ್ನಾಗ ಕೋ
ಮಲ ಕರ್ಣಿಕಾರ ಮಂದಾರಂಗಳಕ್ಷಿ ಕುಚ ಹರುಷತನು ಸರಸಪದದ
ತಳ ಮಧುರಗೀತ ಗುಣ ಚತುರೋಕ್ತಿಗಳ್ ಮನಂ
ಗೊಳೆ ನೋಡಿಯಪ್ಪಿ ನಕ್ಕುರೆಸೋಂಕಿ ಜರೆದೊದೆದು
ಗುಳಿ ಪಾಡಿ ಕೊಂಡಾಡಿ ನುಡಿದು ಪೂದೋರಿಸಿದರಂಗನೆಯರಾ ಬನದೊಳು ೪೨

ವಕುಳ ಪಾದರಿ ಪಾರಿಜಾತ ಪುನ್ನಾಗ ಕುರ
ವಕ ಕರ್ಣಿಕಾರ ಪ್ರಿಯಂಗು ಮಧುದೂತಿ ಚಂ
ಪಕ ತಿಲಕ ಬಂಧೂಕ ಚೂತ ಕರವೀರ ಕೇತಕಿ ಯೂಥಿಕಾ ಮಲ್ಲಿಕಾ
ಪ್ರಕಟಮಂದಾರ ಬಗೆ ನಾಗಸಂಪಗೆಯಾದಿ
ಸಕಲಕುಸುಮಂಗಳಂ ತಂದು ತಮತಮಗೆ ಕಾ
ಣಿಕೆಯನವರೀಯಲಂಬಿಕೆಸಹಿತನೀಶ್ವರಂ ಕೈಕೊಂಡನುತ್ಸವದೊಳು ೪೩

ಬಳಿಕಲೀಶ್ವರನಗಜೆಗೂಡಿ ಸಖಿಯರ್ವೆರಸಿ
ತೊಳತೊಳಪ ನಂದನದ ಸಿರಿಯನೀಕ್ಷಿಸಿ ತಲೆಯ
ನೊಲೆದೊಲೆದು ಪೊಗಳುತ್ತಲೈತರಲ್ ತದ್ವನಾಂತರದೊಳತಿರಮ್ಯವಾಗಿ
ವಿಲಸಿತ ಚಲಚ್ಚಂಚರೀಕ ಝೇಂಕೃತಿಮಿಳಿತ
ನಳಿನರಾಜಿಗಳ ಚಕ್ರಕ್ರಮವಿಕೀರ್ಣ ಸ
ತ್ಪುಳಿನರಾಶಿಗಳ ಕುವಲಯಗಂಧಬಂಧುರದ ಪದ್ಮಾಕರಂ ಮೆರೆದುದು ೪೪

ತ್ತಿದ್ದರು. ೪೨. ಆ ವನದಲ್ಲಿ ಅಂಗನೆಯರು ತಿಲಕದ ಹೂಗಳನ್ನು ಕಣ್ಣಿಂದ ನೋಡಿ, ಮದರಂಗಿಯನ್ನು ಮೊಲೆಗಳಲ್ಲಿ ಅಪ್ಪಿ, ಚಂಪಕವನ್ನು ನೋಡಿ ಸಂತೋಷಗೊಂಡು ನಕ್ಕು ಪ್ರಿಯಂಗುಲತೆಯನ್ನು ಶರೀರದಿಂದ ತಾಗಿ, ಮಾವನ್ನು ಸರಸವಚನಗಳಿಂದ ಜರಿದು, ಮನೋಹರವಾದ ಅಶೋಕವನ್ನು ಅಂಗಾಲಿನಿಂದ ಒದ್ದು, ಶ್ರೇಷ್ಠವಾದ ಬಕುಳವನ್ನು ಮಧುರವಾದ ಹಾಡುಗಳಿಂದ ಚೀರಾಡಿ, ಪುನ್ನಾಗದ ಗುಣವನ್ನು ಕೊಂಡಾಡಿ, ಕೋಮಲವಾದ ಬೆಟ್ಟದಾವರೆಯನ್ನು ಚತುರವಾದ ಮಾತುಗಳಿಂದ ಹೇಳಿ, ಮಂದಾರ ಗಳನ್ನು ಮನಸಾರ ಹೂ ತೋರಿಸಿದರು. ೪೩. ಅವರು ನಾಗಕೇಸರ, ಪಾದರಿ ಪಾರಿಜಾತ, ಪುನ್ನಾಗ, ಗೋರಂಟಿ, ಬೆಟ್ಟದಾವರೆ, ಪ್ರಿಯಂಗು, ಮಧುದೂತಿ, ಚಂಪಕ, ತಿಲಕ, ಬಂದುಗೆ, ಮಾವು, ಕಣಗಿಲೆ, ಕೇದಗೆ, ಒಂದು ಬಗೆ ಮಲ್ಲಿಗೆ, ಮಲ್ಲಿಗೆ, ಮಂದಾರ, ನಾಗಸಂಪಿಗೆ ಮೊದಲಾದ ಎಲ್ಲ ಹೂಗಳನ್ನು ತಂದು ತಮ್ಮ ತಮ್ಮ ಕಾಣಿಕೆಯನ್ನು ಕೊಡಲು ಗಿರಿಜೆಯೊಡಗೂಡಿದ ಈಶ್ವರನು ಅವುಗಳನ್ನು ಸಂತೋಷದಿಂದ ಸ್ವೀಕರಿಸಿದನು. ೪೪. ಆನಂತರ ಈಶ್ವರನು ಪಾರ್ವತಿಯೊಡಗೂಡಿ ಸಖಿಯರ ಜೊತೆಯಲ್ಲಿ ಪ್ರಕಾಶಿ ಸುತ್ತಿದ್ದ ನಂದನವನದ ವೈಭವವನ್ನು ನೋಡಿ ತಲೆಯನ್ನು ತೂಗಿ ತೂಗಿ ಹೊಗಳುತ್ತ ಬರಲು ಆ ವನದೊಳಗೆ ಅತಿಮನೋಹರವಾಗಿ ವಿಲಾಸದಿಂದ ಝೇಂಕರಿಸುತ್ತಿರುವ ದುಂಬಿಗಳಿಂದ ಕೂಡಿ, ಅರಳಿ ಪ್ರಕಾಶಿಸುವ ತಾವರೆ

CC-0. Jangamwadi Math Collection. Digitized by eGangotri

ಕಂಗೊಳಿಪ ರನ್ನಸೋಪಾನ ಮಿನಪ್ರಸೂ
ನಂಗಳಿಂದೇಳ್ವ ತೆರೆ ನೊರೆ ಪೊರೆಯ ರಾಜಹಂ
ಸಂಗಳಿಂ ನಿರ್ಮಳಿನ ಪುಳಿನ ನಳಿನಂಗಳಿಂ ತಡಿವಿಡಿದು ಸಂತಸದೊಳು
ಸಂಗಳಿಸಿ ನಲಿವ ನವನಕ್ರ ಚಕ್ರ ಪ್ರಕ್ರ
ಮಂಗಳಿಂ ಭೃಂಗಾಳಿ ಗಾಳಿ ಕೇಳೀಜಲವಿ
ಹಂಗಂಗಳಿಂ ಕಂಪು ತಂಪು ಗುಂಪುಗಳೊಳಾ ಕಾಸಾರವುಂದೆಸೆದುದು ೪೫

ವಿಕಸಿತೋತ್ಪುಂಡರೀಕೋತ್ಸಾಹದಿಂ ಮೆರೆವ
ವಿಕಟವಾಜಿಗಳಿಂದತೀತ ವಾರಣದಿಂದೆ
ಪ್ರಕಟತರ ರಾಜಹಂಸಾಳಿಗಳ ಸೌಖ್ಯದಿಂ ವಿವಿಧಕೋ ಶಂಗಳಿಂದೆ
ಸಕಲಕುವಲಯಮಹೋತ್ಪತ್ತಿಯಿಂ ಕಾಲಕಾ
ಲಕೆ ಮುಕುಳಿತೋತ್ಕರ ಸರೋಜದಿಂದಮಲವೃ
ತ್ತಕದೊಳೊಪ್ಪುವ ಭುವನಶೋಭೆಯಿಂ ಸರಸಿಯುರಸಿನ ತೆರದೊಳಂದೆಸೆದುದು ೪೬

ನಳನೀಳಕುಮುದಕುಶಲವಲಕ್ಷ್ಮಣಾನ್ವಿತಂ
ತಿಳಿಯಲ್ಕೆ ರಘುರಾಮನಲ್ತು ಕಂದರ್ಪಜೋ
ತ್ಕಳಿಕಾಪ್ರಸಂಗಿ ತಾನಾಗಿಯುಂ ವಿರಹಿಗಳ ಹೃತ್ಕಮಲಮಧ್ಯಮಲ್ತು

ಸಮೂಹಗಳಿಂದ, ನೀರಿನ ಸುಳಿಗಳಿಂದ ಆವರಿಸಿ ಮರಳರಾಶಿಗಳಿಂದ, ಕನ್ನೈದಿಲೆಯ ಸುವಾಸನೆಯಿಂದ ಮನೋಹರವಾದ ಕೊಳವು ಮೆರೆಯುತ್ತಿದ್ದಿತು. ೪೫. ಹೊಳೆಯುತ್ತಿರುವ ಚಿನ್ನದ ಮೆಟ್ಟಿಲುಗಳಿಂದಲೂ, ಮೀನುಮರಿಗಳಿಂದ ಏಳುವ ತೆರೆನೊರೆಗಳಿಂದ ರಾಜಹಂಸಗಳಿಂದ, ನಿರ್ಮಲವಾದ ಮರಳು, ತಾವರೆಗಳಿಂದ, ದಡವನ್ನು ಸಮೀಪಿಸಿ ಸಂತೋಷದಿಂದ ಆನಂದಿಸುವ ಮೊಸಳೆ, ಚಕ್ರವಾಕಗಳಿಂದ, ಕ್ರಮವಾಗಿ ದುಂಬಿಗಳ ಸಮೂಹ, ಗಾಳಿ, ಆಡುವ ನೀರಹಕ್ಕಿಗಳಿಂದ ಸುವಾಸನೆ. ತಂಪು, ಗುಂಪುಗಳಿಂದ ಆ ಸರೋವರವು ಕಣ್ಣಿಗೆ ಮನೋಹರವಾಗಿ ಕಾಣಿಸಿತು. ೪೬. ಅರಳಿದ ಬೆಳ್ದಾವರೆಯ (ಬಿಳಿದಾವರೆ) ಸಂಭ್ರಮದಿಂದಲೂ, ಮೆರೆಯುವ ಬಲಿಷ್ಠವಾದ ಕುದುರೆ–ಬಾಣ (ಪಕ್ಷಿ) ಗಳಿಂದ, ಅತೀತವಾದ ಆನೆ (ಕೆರೆಯ ಕಟ್ಟೆ)ಯಿಂದ, ಎದ್ದುಕಾಣುವ ಶ್ರೇಷ್ಠನಾದ ಅರಸನ (ರಾಜಹಂಸ) ಸುಖದಿಂದ, ನಾನಾರೀತಿಯ ಭಂಡಾರ (ಹೂವಿನ ಧೂಳಿ)ಗಳಿಂದ ಎಲ್ಲ ಭೂಮಂಡಲದ (ಕನ್ನೈದಿಲೆಯ) ಸೇರ್ಪಡೆಯಿಂದ, ಕಾಲಕಾಲಕ್ಕೆ ಒರೆಗಳಚುವ ಹೊಳೆಯುವ ಕತ್ತಿಯ ಹಿಡಿ(ಅರಳುವ ಕಮಲ)ಯಿಂದಲೂ, ಸಚ್ಚಾರಿತ್ರ್ಯ (ಗುಂಡಾಗಿ) ದಿಂದ ಕೂಡಿದ ರಾಜ್ಯದ (ನೀರಿನ) ಶೋಭೆಯಿಂದ ಸರೋವರವು ರಾಜನಂತೆ ಕಂಗೊಳಿಸಿತು. ೪೭. ನಳ (ನಳನಳಿಸುವ) ನೀಳ (ವಿಸ್ತಾರವಾದ) ಕುಮುದ (ನೈದಿಲೆ) ಕುಶ (ನೀರು) ಲವ (ಒಂದು ಜಾತಿಯ ಪಕ್ಷಿ) ಲಕ್ಷ್ಮಣ (ಬಕಪಕ್ಷಿ) ಮೊದಲಾದವರಿಂದ ಕೂಡಿದ್ದರೂ ಆಲೋಚಿಸಿದರೆ ರಘುರಾಮನಲ್ಲ. ಮನ್ಮಥನಿಂದ ಹುಟ್ಟಿದ ಚಿಂತೆ (ಅಲೆ)

CC-0. Jangamwadi Math Collection. Digitized by eGangotri

ಸಲೆ ಶಿಳೀಮುಖವಾಜಿವಾರಣರಥಾಂಗಸಂ
ಕುಲಗತಾಗತವಾಗಿ ಕಾಳೆಗಮದಲ್ತು ನಿ
ರ್ಮಲಿನಪುಷ್ಕರಣಿ ತಾನಾಗಿಯುಂ ಕರಿಣಿಯಲ್ತೆನೆ ತತ್ಸರಂ ಮೆರೆದುದು ೪೭

ಕುಮುದದುನ್ನತಿಯನೆಣಿಸದೆ ಪೆರ್ಚುವಾರಡಿಯ
ಕ್ರಮಕೆ ಚಲಿಸದೆ ಸಲೆ ವಿಪಕ್ಷಘಾತಕೆ ತೆಗೆಯ
ದಮರ್ದ ಕಮಲಾಶ್ರಯಕೆ ಪೆರ್ಚದುದ್ಭವನಶೋಭೆಯ ಮದಕ್ಕೊಳಗಾಗದೆ
ಸುಮನೋಕುಲಾಸ್ಪದಕ್ಕುಬ್ಬಿ ಮೀರದೆ ಶಿವಾ
ಗಮಯುಕ್ತಸದ್ವೃತ್ತಿಯಾಗಿ ದುಃಖಂ ಸುಖಂ
ಸಮನೆಂದು ಕಾಣ್ಬ ಸದ್ರಾಜಋಷಿಯಂತೆ ಕಾಸಾರಮದು ಚೆಲ್ವಾದುದು ೪೮

ಹರನಂತೆ ವಿಷಧಾರಿ ವಿಷಧಾರಿಯಂದದಿಂ
ತರುಣಾಬ್ಜಶೋಭಿ ತರುಣಾಬ್ಜಶೋಭಿಯ ತೆರದೆ
ಸರಸಹಂಸಂ ಸರಸಹಂಸನೊಲ್ ಸದ್ವಿಜಾನ್ವಿತನಾ ದ್ವಿಜಾನ್ವಿತನೊಲು
ಹರಗಣನಿಷೇವಿಯಾ ಹರಗಣನಿಷೇವಿಯೊಲ್
ಕರಕಮಲಸಂಗಿಯಾ ಕರಕಮಲಸಂಗಿಯೊಲ್
ಪರಮಪತ್ರಾನ್ವಿತಂ ಪರಮಪತ್ರಾನ್ವಿತನೊಲಾ ಸರಸಿ ಕಣ್ಗೆಸೆದುದು ೪೯

ಯಾದರೂ ವಿರಹಿಗಳ ಹೃದಯಗಳಲ್ಲಿ ಹೆಚ್ಚಾದ ಬಾಣ (ದುಂಬಿ), ಕುದುರೆ (ಪಕ್ಷಿ), ಆನೆ (ಕೆರೆಕಟ್ಟೆ), ರಥದಗಾಲಿ (ಚಕ್ರವಾಕಪಕ್ಷಿ) ಸಮೂಹದಿಂದ ಕೂಡಿದ್ದರೂ ಯುದ್ಧ ವಲ್ಲ. ನಿರ್ಮಲವಾದ ಹೆಣ್ಣಾನೆ(ಕೊಳ)ಯಾಗಿದ್ದರೂ ಹೆಣ್ಣಾನೆಯಲ್ಲ ಎನ್ನುವಂತೆ ಆ ಸರೋವರ ಪ್ರಕಾಶಿಸಿತು. ೪೮. ಆನಂದದ (ನೀಲಿ ತಾವರೆ) ಆಧಿಕ್ಯವನ್ನು ಲೆಕ್ಕಿಸದೆ, ಹೆಚ್ಚುವ ಅಪಕೀರ್ತಿಗೆ (ದುಂಬಿ) ವಿಚಲಿತರಾಗದೆ, ಹೆಚ್ಚಾದ ವಿರೋಧಿಬಣ್ಣದ (ಕಾರಣರಹಿತವಾದ) ಹೊಡೆತಕ್ಕೆ ಹಿಂದೆಗೆಯದೆ, ದೊರಕಿದ ಐಶ್ವರ್ಯ(ನೀರು)ಕ್ಕೆ ಹೆಚ್ಚದೆ, ಅತಿಯಾದ ಆನಂದ(ನೀರು)ದ ಮದಕ್ಕೆ ಒಳಗಾಗದೆ, ಪಾಂಡಿತ್ಯಕ್ಕೆ (ಹೂವಿಗೆ) ಆಶ್ರಯವಾದುದಕ್ಕೆ ಉಬ್ಬಿ ಮಿತಿಮೀರದೆ. ಶಿವಾ(ಬುರುಗು)ಗಮವೇ ಸರಿಯಾದ ಉತ್ತಮ ವೃತ್ತಿಯಾಗಿ ದುಃಖ ಸುಖವೆರಡೂ ಸಮವೆಂದು ಕಾಣುವ ಒಳ್ಳೆ ರಾಜಋಷಿ ಯಂತೆ ಸರೋವರವು ಪ್ರಕಾಶಿಸಿತು. ೪೯. ಆ ಸರೋವರವು ಶಿವನಂತೆ ವಿಷವನ್ನು ಧರಿಸಿದ್ದು-ಜಲವನ್ನೂ ಧರಿಸಿದ್ದು ; ವಿಷಧಾರಿಯಾದ ಶಿವನಂತೆ ಬಾಲಚಂದ್ರಶೋಭಿ-ನವಕಮಲ ಶೋಭಿ ; ಶಿವನಂತೆ ಭಕ್ತಿಯುಳ್ಳ ಪರಮಹಂಸರಿಂದ ಕೂಡಿದ್ದು-ಆನಂದದಿಂದ ಕೂಡಿದ ಹಂಸಪಕ್ಷಿಗಳನ್ನುಳ್ಳದ್ದು ; ಪರಮಯೋಗಿಯಾದ ಶಿವನಂತೆ ಸತ್-ಸುಂದರವಾದ ಚಂದ್ರನಿಂದ ಕೂಡಿದ್ದು ಮತ್ತು ಸುಂದರವಾದ ಹಕ್ಕಿಗಳಿಂದ ಕೂಡಿದ್ದು ; ಚಂದ್ರಶೇಖರ ನಂತೆ ಪ್ರಮಥಗಣಗಳಿಂದ ಸೇವಿತ, ಸ್ನಾನಪಾನಗಳಿಗಾಗಿ ಪ್ರಮಥಗಣಗಳಿಂದ ಸೇವಿತ ವಾದದ್ದು ; ಪ್ರಮಥಗಣಗಳಿಂದ ಸೇವಿತನಾದ ಶಿವನಂತೆ ಕರಮಲಯುಕ್ತ-ಕಿರಣ ಮತ್ತು ಕಮಲಗಳಿಂದ ಕೂಡಿದ್ದು ; ಶಿವನಂತೆಯೇ ಶ್ರೇಷ್ಠವಾದ ವಾಹನದಿಂದ ಅನ್ವಿತ-ಶ್ರೇಷ್ಠ

CC-0. Jangamwadi Math Collection. Digitized by eGangotri

ಪರಮಾಬ್ಜರಮ್ಯಮುಡುಗಣದಂತೆ ಹರಿಯಂತೆ
ವರದ್ವಿಜಾಲಂಕೃತಂ ಹರನಂತೆ ಯಜ್ಞದಂ
ತುರುಚಕ್ರಶೋಭಿ ರವಿಯಂತೆ ರಥದಂತೆ ಸತ್ಕುವಲಯಾಶ್ರಿತವೊಪ್ಪುವ
ಶರಧಿಯಂತಾ ಕೃಷ್ಣಪಕ್ಷೇಂದುವಂತಮೃತ
ಪರಿಪಾಲನಂ ಸಗ್ಗದಂತಬ್ಧಿಯಂತೆ ಶಿವ
ಭರಿತಮಾ ಕೈಲಾಸದಂತೆ ವನದಂತೆನಲ್ ಪದ್ಮಾಕರಂ ಮೆರೆದುದು ೫೦

ಕುಮುದಾಕ್ಷಿ ಕಳಹಂಸಗಮನೆ ಸಾರಸವಚನೆ
ಭ್ರಮರಕುಂತಳೆ ಚಕ್ರಕುಚೆ ಪುಳಿನಜಘನೆ ಸ
ತ್ಕಮಲಮುಖಿ ಸುಳಿವೊಕ್ಕುಳಬಲೆ ತೆರೆತಿವಳಿಯಂಗನೆ ದಿವ್ಯಕುಸುಮಗಂಧಿ
ವಿಮಲಾಮೃತಾಧರೆಯಪಾರಗಂಭೀರೆ ಸ
ದ್ರಮಣಾನುಕೂಲೆ ಕಾಸಾರವಧು ಕಣ್ಗೆದೇ
ನಮರ್ದಳೋ ತಡಿವಿಡಿದು ನೋಳ್ಪ ತರುಣೀಜನಂಗಳ್ಗೆ ಬಹುರೂಪವಾಗಿ ೫೧

ವಾದ ದಳಗಳಿಂದ ಕೂಡಿದ್ದು ; ಹೀಗೆ ಪರಮ ಪತ್ರಾನ್ವಿತನಾದ ಶಿವನಂತೆ ಶೋಭಿಸಿತು. ೫೦. ಆ ಕೊಳವು-ನಕ್ಷತ್ರಸಮುದಾಯದಂತೆ ಚಂದ್ರನಿಂದ ರಮ್ಯ, ಹರಿಯಂತೆ ಶಂಖದಿಂದ ರಮ್ಯ ಮತ್ತು ಸ್ವತಃ ಕಮಲದಿಂದ ರಮ್ಯ, ಹರನಂತೆ ಚಂದ್ರನಿಂದ ರಂಜಿತ, ಯಜ್ಞದಂತೆ ಬ್ರಾಹ್ಮಣರಿಂದ ಅಲಂಕೃತ, ಸ್ವತಃ ನೀರುಹಕ್ಕಿಗಳಿಂದ ಅಲಂಕೃತ, ರವಿಯಂತೆ ದೊಡ್ಡದಾದ (ಒಂದೇ) ಚಕ್ರದಿಂದ ಶೋಭಿತ, ಮಂಡಲಾಕಾರದಿಂದ ಶೋಭಿತ ; ರಥದಂತೆ ಗಾಲಿಯಿಂದ ಶೋಭಿತ ; ಸ್ವತಃ ಸುಳಿಗಳಿಂದ ಶೋಭಿತ. ಸಮುದ್ರದಂತೆ ಭೂಮಂಡಲದಿಂದ ಆಶ್ರಿತ ; ಕೃಷ್ಣಪಕ್ಷದ ಚಂದ್ರನಂತೆ ಕುತ್ಸಿತನಾದ ಎಂದರೆ ಶೋಭಾಹೀನವಾದ ವಲಯದಿಂದ ಕೂಡಿದ್ದು ; ಸ್ವತಃ ಕುವಲಯಗಳಿಗೆ ಆಶ್ರಿತ, ಸ್ವರ್ಗದಂತೆ ದೇವತೆಗಳನ್ನು ಸಮುದ್ರದಂತೆ ಅಮೃತವನ್ನು ಪಾಲಿಸತಕ್ಕದ್ದು , ಸ್ವತಃ ಜಲವನ್ನು ಪಾಲಿಸತಕ್ಕದ್ದು. ಕೈಲಾಸದಂತೆ ಶಿವನಿಂದಲೂ, ವನದಂತೆ ನರಿಗಳಿಂದಲೂ, ಸ್ವತಃ ಜಲಯುಕ್ತವೂ ಆಗಿ ರಂಜಿಸಿತು. ೫೧. ಕನ್ನೈದಿಲೆಯ ಕಣ್ಣುಳ್ಳವಳು, ರಾಜಹಂಸದ ನಡೆಯುವಳು, ಸಾರಸಹಕ್ಕಿಯಂತೆ ಮಾತನಾಡುವವಳು, ದುಂಬಿಯಂತೆ ಗುಂಗುರು ಕೂದಲುಳ್ಳವಳು, ಚಕ್ರವಾಕಪಕ್ಷಿಯಂತೆ ಸ್ತನವುಳ್ಳವಳು, ಮರಳಿನಂತೆ ಪೃಷ್ಠವುಳ್ಳವಳು, ಕಮಲಮುಖಿ, ಸುಳಿಹೊಕ್ಕಳಿನ ತರುಣಿ, ತೆರೆಯಂತೆ ತ್ರಿವಳಿಯುಳ್ಳ ಸ್ತ್ರೀ ದಿವ್ಯವಾದ ಹೂ ವಾಸನೆಯುಳ್ಳವಳು, ಅಮೃತದಂತಹ ತುಟಿಯುಳ್ಳವಳು, ಬಹಳ ಗಂಭೀರಳಾದವಳು, ಒಳ್ಳೆಯ ಗಂಡನಿಗೆ ಅನುಕೂಲಳಾದವಳು, ಸರೋವರವದು ದಡದಲ್ಲಿ ನಿಂತು ನೋಡುತ್ತಿದ್ದ ತರುಣೀಜನದ ಕಣ್ಣಿಗೆ ಅನೇಕ ರೂಪದಿಂದ ಅದಾವ ರೀತಿ

7

CC-0. Jangamwadi Math Collection. Digitized by eGangotri

ಹಾರಿದ್ರಜಲವುದೊಂದೆಡೆ ರಕ್ತವರ್ಣಾಂಬು
ವೋರೊಂದುಕಡೆ ಸೀತೋದಕವೊಂದುದೆಸೆ ಕೃಷ್ಣ
ನೀರೊಂದುದೆಸೆಯೊಳಿರಲೊಪ್ಪಿತು ಕೊಳಂ ಶಿವಕ್ರೀಡನಾರ್ಥಂ ಕದಡಿದ
ಗೋರೋಜದಮಳಕುಂಕುಮದ ಮಲಯಜದ ಕ
ಸ್ತೂರಿಯ ಕೆಸರ್ ತೆರೆಗಳಿಂ ತಡಿಗೆ ಸಾರೆ ಕಾ
ಸಾರವಧುವೀಶಂಗೆ ನಿವಳಿಸುವ ಬಣ್ಣಬರೆದಾರತಿಯಿದೆಂಬಂತಿರೆ ೫೨

ಆ ಕೊಳದ ಚೆಲ್ವನೀಕ್ಷಿಸುತಗಜೆಸಹಿತಂ ಪಿ
ನಾಕಿ ತತ್ಸರಸಿಯಂ ಹರುಷದಿಂ ಪೊಕ್ಕು ಬಳಿ
ಕಾ ಕನ್ಯೆಯರ್ಗೆ ನೇಮಿಸಲಂಚೆ ಕೊಂಚೆ ಗಿಳಿ ಕೊಳರ್ವಕ್ಕಿ ಜೊನ್ನವಕ್ಕಿ
ಕೋಕ ಕರಿ ತುರಗ ಹರಿ ಶರಭ ಭೇರುಂಡಂಗ
ಳಾಕಾರದಿಂ ಸಮೆದ ನವರತ್ನಖಚಿತ ನಾ
ನಾಕುಶಲದುಂಡೆ ಜೀರ್ಕೊಳವಿ ಜಲಯಂತ್ರಂಗಳಂ ತಾಳ್ದು ಕಣ್ಗೆಸೆದರು ೫೩

ಬಳಿಕ ಮಣಿಸೋಪಾನದಿಂದಿಳಿದು ನಿಂದುದಾ
ಕೊಳದೊಳಗಜಾಳೀಜನಂ ಜಂಘೆ ಜಾನು ಕಟಿ
ಸುಳಿನಾಭಿ ಕುಚದಘ್ನವಾದ ವಿಮಳೋದಕಂಗಳನತಿವಿಲಾಸದಿಂದೆ
ತಳುವದೋರೊರ್ವರಂ ಮುಂಚಿ ತಮ್ಮೊಳ್ ಸರಸ
ಕಳವಟ್ಟ ಸಖಿಯರಂ ಸರಿಸಮಾಗೆನುತೆ ನೀ
ರ್ದುಳುಕಿದರ್ ಪೊಳಕಿದರ್ ಮುಳುಕಿದರ್ ಕಲಕಿದರ್ ಕೊಳದೊಳೇಂ ವಣ್ಣಿಸುವೆನು ೫೪

ಕಂಡಳೊ ? ೫೨. ಅರಿಶಿನದ ನೀರು ಒಂದು ಕಡೆ, ಕೆಂಪು ಬಣ್ಣದ ನೀರು ಒಂದು ಕಡೆ, ಬಿಳಿಯ ಬಣ್ಣದ ನೀರು ಒಂದು ಕಡೆ, ಕಪ್ಪಾದ ನೀರು ಮತ್ತೊಂದು ಕಡೆಯಲ್ಲಿ ಇರಲು ಕೊಳವು ಮನೋಹರವಾಗಿ ಕಾಣುತ್ತಿತ್ತು. ಶಿವನ ಕ್ರೀಡೆಗಾಗಿ ಕದಡಿದ ಗೋರೋಜನದ ಶ್ರೇಷ್ಠ ಕುಂಕುಮದ, ಗಂಧದ, ಕಸ್ತೂರಿಯ ಕೆಸರು ಅಲೆಗಳಿಂದ, ದಡಕ್ಕೆ ಚಿಮ್ಮಲು ಸರೋವರಸ್ತ್ರೀ ಈಶ್ವರನಿಗೆ ನಿವಾಳಿಸುವ ಬಣ್ಣ ಕದಡಿದ ಆರತಿಯೆನ್ನುವಂತೆ ಇತ್ತು. ೫೩. ಆ ಕೊಳದ ಚೆಲುವನ್ನು ನೋಡುತ್ತ ಪಾರ್ವತೀಸಮೇತವಾಗಿ ಈಶ್ವರನು ಅದನ್ನು ಸಂತೋಷದಿಂದ ಹೊಕ್ಕು ಅನಂತರ ಆ ಕನ್ಯೆಯರಿಗೆ ಆಜ್ಞಾಪಿಸಲು ಅವರು ಹಂಸ, ಕ್ರೌಂಚ, ಗಿಳಿ, ಕೊಳರ್ವಕ್ಕಿ, ಚಕೋರಪಕ್ಷಿ, ಚಕ್ರವಾಕ, ಆನೆ, ಕುದುರೆ, ಸಿಂಹ, ಶರಭ, ಭೇರುಂಡ ಮೊದಲಾದ ಆಕಾರದಿಂದ ಮಾಡಿದ ನವರತ್ನಖಚಿತವಾದ ನಾನಾ ಕೌಶಲ್ಯದ ಬಿದಿರಿನ ಕೊಳವಿ ಜೀರ್ಕೊಳವಿ, ನೀರಯಂತ್ರಗಳನ್ನು ಹಿಡಿದು ಮನೋಹರವಾಗಿ ಕಾಣಿಸಿದರು. ೫೪. ಅನಂತರ ರತ್ನಮಯವಾದ ಮೆಟ್ಟಿಲುಗಳಿಂದ ಇಳಿದು ಪಾರ್ವತಿಯ ಸಖೀಜನ ಕೊಳದೊಳಗೆ ನಿಂತಿತು. ಜಂಘೆ, ಮೊಣಕಾಲು, ಸೊಂಟ, ಸುಳಿಹೊಕ್ಕಳು, ಸ್ತನದವರೆಗೆ ಬಂದ ನಿರ್ಮಲವಾದ ನೀರನ್ನು ಅತಿವಿಲಾಸದಿಂದ ತಡ ಮಾಡದೆ ಒಬ್ಬರನ್ನೊಬ್ಬರನ್ನು ಮೀರಿಸಿ ತಮ್ಮಲ್ಲಿ ಸರಸಕ್ಕೆ ಸಿದ್ಧರಾದ ಸಖಿಯರನ್ನು ಎದುರಾಗು ಎನ್ನುತ್ತ ಕೊಳದಲ್ಲಿ ನೀರನ್ನು ತುಳುಕಿದರು, ಎರಚಿದರು, ಮುಳುಗಿದರು,

CC-0. Jangamwadi Math Collection. Digitized by eGangotri

ಇತ್ತ ನಸುನಗುತೀಶನಗಜೆಯೊಳ್ ಸರಸವಾ
ಡುತ್ತೆ ಸರ್ವಾಂಗದೊಳ್ ನಿರ್ಮಳೋದಕವನಿರ
ದೊತ್ತೆ ಚಂದ್ರಿಕೆ ಬಳಸಿ ನಿಂದ ನೀಲದ ಪ್ರತಿಮೆಯಂದಮಂ ಪೋಲ್ತು ಕೂಡೆ
ತತ್ತರುಣಿ ಕೈಚಳಕದಿಂ ರನ್ನದಂಡೆಯೊಳ್
ಕತ್ತುರಿಯ ನೀರನೀಶನ ಮೊಗಂಗಳೊಳೊತ್ತೆ
ಕತ್ತಲೆಯು ಮರಳಿಂದುಬಿಂಬಂಗಳಂ ಮುತ್ತಿದಂತಾದುದೇವೇಳ್ವೆನು ೫೫

ನೀರನದನೊರಸಿಕೊಳುತುಂ ಕುಂಕುಮಾಂಬುಗಳ
ನಾ ರಮಣಿಯಂಗದೊಳಗೀಶ್ವರಂ ಸೂಸೆ ಸಂ
ಧ್ಯಾರಾಗದಿಂದೆ ರಂಜಿಸುತಿಹ ನಿಶಾಂಗನೆಯ ಭಂಗಿಯಂ ತಳೆದು ಶಿವನ
ಗೋರೋಜದಂಬುವಂ ಜೀರ್ಕೊಳವಿಯಿಂಬೆಚ್ಚು
ಮಾದಾರಿಯಂ ಮುಸುಕೆ ಪೊಂಬಿಸಿಲ್ ಬಳಸಿ ನಿಂ
ದಾ ರಜತಗಿರಿಯಂತೆ ಚೆಲ್ವಾದನೀಶನದನೇನೆಂದು ಬಣ್ಣಿಸುವೆನು ೫೬

ಮೇಲೆ ಮೇಲೀಶ್ವರಂ ಮಲಯಜೋದಕಮನಾ
ಕಾಳಿಯಂಗಂದುಂಬಿ ಸೂಸೆ ಕ್ಷೀರಾಂಬುಧಿಯ
ಸಾಲ ತೆರೆಗಳ ನಡುವೆ ರಂಜಿಸುವ ಕೃಷ್ಣನದಿದೇವಿಯಂ ಪೋಲ್ತು ಕೂಡೆ
ಆ ಲಲನೆ ಕುಂಕುಮಾಂಬುವನೊತ್ತುತಿರಲರುಣ
ಧೂಳಿಯೊಳ್ ಪೊರೆದು ನೀರೊಳಗಾಡುವ ಸುರಶುಂ
ಡಾಲದ ವಿಳಾಸಮಂ ತಳೆದೀಶ್ವರಂ ಕಣ್ಗೆ ಚೆಲ್ವಾದನೇನೆಂಬೆನು ೫೭

ಕಲಕಿದರು. ಅದನ್ನು ಏನೆಂದು ವರ್ಣಿಸಲಿ ? ೫೫. ಇತ್ತಕಡೆ ನಸುನಗುತ್ತಾ ಈಶ್ವರನು ಪಾರ್ವತಿಯೊಂದಿಗೆ ಸರಸವಾಡುತ್ತ ಶರೀರದ ಮೇಲೆಲ್ಲ ನಿರ್ಮಲವಾದ ನೀರನ್ನು ತಡೆಯದೆ ಚೆಲ್ಲಲು ಬೆಳದಿಂಗಳು ಬಳಸಿನಿಂತ ನೀಲರತ್ನದ ಪ್ರತಿಮೆಯಂತೆ ಸೌಂದರ್ಯದಿಂದ ಕೂಡಿದಳು. ತಕ್ಷಣ ಆ ತರುಣಿ (ಗಿರಿಜೆ) ಕೈಚಳಕದಿಂದ ರತ್ನದ ಜೀರ್ಕೊಳವಿಯಿಂದ ಕಸ್ತೂರಿಯ ನೀರನ್ನು ಈಶ್ವರನ ಮುಖದ ಮೇಲೆ ಚಿಮ್ಮಲು ಕತ್ತಲೆಯು ಮತ್ತೆ ಚಂದ್ರಬಿಂಬಗಳನ್ನು ಮುತ್ತಿದಂತೆ ಆಯಿತು. ಅದನ್ನು ಏನೆಂದು ಹೇಳಲಿ ? ೫೬. ಈಶ್ವರನು ಆ ನೀರನ್ನು ಒರೆಸಿಕೊಳ್ಳುತ್ತ, ಕುಂಕುಮದ ನೀರನ್ನು ಆ ರಮಣಿಯ ಶರೀರದ ಮೇಲೆ ಸುರಿಯಲು ಪಾರ್ವತಿಯು ಸಂಜೆಯ ಕೆಂಬಣ್ಣದಿಂದ ರಂಜಿಸುತ್ತಿರುವ ನೀಲಾಂಗನೆಯ ರೀತಿ ಕಂಡಳು. ಗೋರೋಜನದ ನೀರನ್ನು ಜೀರ್ಕೊಳವೆಯಿಂದ ತೆಗೆದು ಶಿವನ ಮೇಲೆ ಚೆಲ್ಲಿದಳು. ಅದು ಅವನನ್ನು ಮುಸುಕಲು ಹೊಂಬಿಸಿಲು ಆವರಿಸಿ ನಿಂತ ಆ ಬೆಳ್ಳಿಯ ಬೆಟ್ಟದಂತೆ ಈಶ್ವರನು ಚೆಲುವಿಕೆಯಿಂದ ಕಾಣಿಸಿದನು. ೫೭. ಒಂದೇ ಸಮನಾಗಿ ಈಶ್ವರನು ಶ್ರೀಗಂಧದ ನೀರಿನಿಂದ ಆ ಕಾಳಿಯ ಶರೀರವನ್ನು ಮುಳುಗಿಸಲು ಆಕೆ ಕ್ಷೀರಸಮುದ್ರದ ಸಾಲಾದ ಅಲೆಗಳ ನಡುವೆ ಪ್ರಕಾಶಿಸುವ ಕೃಷ್ಣನದಿದೇವಿಯನ್ನು ಹೋಲುತ್ತಿದ್ದಳು. ತಕ್ಷಣ ಆ ತರುಣಿ ಕುಂಕುಮದ ನೀರನ್ನು ಶಿವನ ಶರೀರದ ಮೇಲೆ ಚಿಮ್ಮುತ್ತಿರಲು ಈಶ್ವರನು ಕೆಂಪುಧೂಳಿನಲ್ಲಿ ಹೊರಳಾಡಿ ನೀರಿನಲ್ಲಿ ಆಡುವ ಸ್ವರ್ಗದ

CC-0. Jangamwadi Math Collection. Digitized by eGangotri

ಮರಳಿ ಮರಳೀಶಂ ಕರಂಗಳನಿತರೊಳೊಮ್ಮೆ
ಪರಿಪರಿಯ ನೀರ್ಗಳಂ ಸೂಸುತಿರಲಾಗ ಶಾಂ
ಕರಿ ಚಿತ್ರವರ್ಣದ ಸುಪುತ್ರಿಕೆಯ ಭಾವಮಂ ತಳೆದು ಕಣ್ಸನ್ನೆಯಿಂದೆ
ಕರೆಕರೆದು ಸಖಿಯರ್ಗೆ ನೇಮಿಸಿದಳೊಡನೆ ಪರಿ
ಪರಿವೆಡಬಲಂ ಪಿಂದು ಮುಂದೆ ಸಂದಣಿಸಿ ಶಂ
ಕರನ ಸರ್ವಾಂಗದೊಳ್ ಸೂಸುತಿರ್ದರ್ ನೀರನೇನೆಂದು ಬಣ್ಣಿಸುವೆನು ೫೮

ನೋಡುವರ್ ಪೂಡುವರ್ ಜಂತ್ರಮಂ ನೀರ್ ಸೂಸ
ಲಾಡುವರ್ ತೀಡುವರ್ ನಗೆಯನಗಜೆಗೆ ಪಿಂದ
ಕೋಡುವರ್ ಕೋಡುವರ್ ಶಿವನ ಪೊಯ್ಲಿಗೆ ಮತ್ತೆ ಶಿವೆಯ ಕಣ್ಸನ್ನೆಯಿಂದೆ
ಕೂಡುವರ್ ಕಾಡುವರ್ ನೀರ್ದುಳುಕಿ ಮಿಗೆ ಮುಳುಂ
ಗಾಡುವರ್ ಮಾಡುವರ್ ಸುಖವನೀಶಂಗೆ ಕಿಯ್
ನೀಡುವರ್ ಪಾಡುವರ್ ಪಾರ್ವತಿಯ ಪಂಥಮಂ ತತ್ಸಖಿಯರೇನೆಂಬೆನು ೫೯

ಝುಲ್ಲೆಂಬ ರವಮುಣ್ಮೆ ಮೊಗೆಮೊಗೆದು ನೀರ್ಗಳಂ
ಚೆಲ್ಲುತಿರ್ಪರ್ ಶಿವಂ ಪಿಂತಿರುಗಿ ಪೆಸರ್ವಿಡಿದು
ನಿಲ್ಲೆಂಬ ದನಿಯುಣ್ಮಲೊರ್ವರೊರ್ವರ್ ಮರೆಯೊಳಡಗುವರ್ ಮರಳಿ ಮರಳಿ
ಮೆಲ್ಲಮೆಲ್ಲನೆ ಪೊರ್ದಿ ಕನಕಶೃಂಗಾಂಬುವಿಂ
ದೆಲ್ಲರುಂ ಕೂಡಿ ಕೈಯೆತ್ತಿ ಪೊಯ್ದರ್ ಮಗುಳೆ
ತಲ್ಲಣಿಸುವರ್ ಶಿವನ ಪೊಯ್ಲಿಂಗೆ ತತ್ಸಖಿಯರೇನೆಂಬೆನಚ್ಚರಿಯನು ೬೦

ಆನೆ ಐರಾವತದ ಮನೋಹರತೆಯನ್ನು ತಾಳಿ ಕಣ್ಣಿಗೆ ಚೆಲುವಾದನು. ೫೮. ಮತ್ತೆ ಮತ್ತೆ ಈಶ್ವರನು ತನ್ನೆಲ್ಲ ಕೈಗಳಿಂದಲೂ ಒಮ್ಮೆಗೇ ನಾನಾ ಬಣ್ಣದ ನೀರುಗಳನ್ನು ಗಿರಿಜೆಯ ಮೇಲೆ ಸುರಿಯುತ್ತಿರಲು ಆಗ ಶಾಂಕರಿ ವಿಚಿತ್ರವರ್ಣದ ಬೊಂಬೆಯ ಭಾವ ತಳೆದು, ಕಣ್ಸನ್ನೆಯಿಂದ ಸಖಿಯರನ್ನು ಕರೆದು ಅವರಿಗೆ ಆಜ್ಞಾಪಿಸಿದಳು. ಅವರೆಲ್ಲ ಕೂಡಲೇ ಶಿವನ ಬಳಿಗೆ ಸರಿದು ಎಡ-ಬಲ-ಹಿಂದೆ-ಮುಂದೆ ಗುಂಪುಗೂಡಿ ಹರನ ಸರ್ವಾಂಗದಲ್ಲಿಯೂ ನೀರನ್ನು ಸುರಿಯುತ್ತಿದ್ದರು. ಅದನ್ನು ಏನೆಂದು ವರ್ಣಿಸಲಿ ? ೫೯. ನೋಡುವರು, ಜಲಯಂತ್ರವನ್ನು ಹೂಡುವರು, ನೀರನ್ನು ಸುರಿದಾಡುವರು, ನಗೆಯನ್ನು ಹರಿಸುವರು, ಪಾರ್ವತಿಯ ಹಿಂದಕ್ಕೆ ಓಡುವರು, ಶಿವನ ಹೊಡೆತಕ್ಕೆ ಹೆದರುವರು, ಮತ್ತೆ ಪಾರ್ವತಿಯ ಕಣ್ಸನ್ನೆಯಿಂದ ಒಟ್ಟುಗೂಡುವರು, ಕೋಟಲೆ ಗೊಳಿಸುವರು, ನೀರನ್ನು ತುಳುಕಿ ಮುಳುಗಾಡುವರು, ಈಶ್ವರನಿಗೆ ಸುಖವನ್ನುಂಟು ಮಾಡುವರು, ಕೈಯನ್ನು ನೀಡುವರು, ಆ ಸಖಿಯರು ಪಾರ್ವತಿಯ (ಪ್ರತಿಜ್ಞೆ) ಹಾಡುವರು. ಅದನ್ನು ಏನೆಂದು ಹೇಳಲಿ ? ೬೦. ಝುಲ್ಲೆಂಬ ಶಬ್ದಹುಟ್ಟುವಂತೆ ನೀರನ್ನು ತುಂಬಿ ತುಂಬಿ ಚೆಲ್ಲುವರು, ಶಿವನು ಹಿಂತಿರುಗಿ ನಿಲ್ಲಿ ಎಂದು ಹೆಸರನ್ನು ಹಿಡಿದು ಕೂಗುವ ಶಬ್ದ ಕೇಳಲು ಒಬ್ಬರೊಬ್ಬರ ಮರೆಯಲ್ಲಿ ಅವಿತುಕೊಳ್ಳುವರು. ಮತ್ತೆ ಮತ್ತೆ ಮೆಲ್ಲ ಮೆಲ್ಲಗೆ ಸಮೀಪಿಸಿ ಎಲ್ಲರೂ ಕೂಡಿ ಕೈಯೆತ್ತಿ ಚಿನ್ನದ ಕೋಡಿನಲ್ಲಿ ನೀರು ತುಂಬಿಕೊಂಡು

CC-0. Jangamwadi Math Collection. Digitized by eGangotri

ಕಾಮನಂ ನಿಷ್ಕಾರಣಂ ಕೊಂದನಕ್ಕಟಾ
ದೇವನಾಂ ಗೆಲ್ವೆನೀತನನೆಂದು ಮದನನಧಿ
ದೇವಿ ದಂಡೆತ್ತಿ ನಿಜನಾರೀಬಲಕ್ಕೆ ಸೆಲವಿಕ್ಕೆ ಪೊಕ್ಕಲ್ಲಿ ಪೊಕ್ಕು
ಜೀವನಂಬೊಕ್ಕಡಂ ಕಾಯದಾ ಸುರರ ಸಂ
ಜೀವಂಗೆ ಕರೆವರಲಮಳೆಗಳೆಸೆ ಹಸ್ತರಾ
ಜೀವಗತಯಂತ್ರಮುಕ್ತಾಂಬುಗಳನಭವಂಗೆ ಕರೆದರಗಜೆಯ ಸಖಿಯರು ೬೧

ಪರಿಪರಿದು ತರಳೆಯರ್ ಪರಿಪರಿಜಲಂಗಳಂ
ಸುರಿಸುರಿಯೆ ಹಿಂದಕ್ಕೆ ಸರಿಸರಿದು ಶಂಕರಂ
ತಿರುತಿರುಗಿ ಸುರಿವ ನೀರ್ವನಿಗಳಂಗನೆಯರಂಗೋಪಾಂಗದೊಳ್ ತುಂಬಲು
ಗುರುಕುಚಂಗಳ ಮಧ್ಯದೊಳ್ ಹಾರದಂತೆ ಕಚ
ಭರದೊಳ್ ಕದಂಬಗಳ ಪೂಗಳಂತಂಗದೊಳ್
ಪೊರೆದು ನವರತ್ನಭೂಷಣ ಸುಚಿತ್ರಾಂಬರಂಗಳವೊಲತಿಚೆಲ್ವಾದುದು ೬೨

ಮೃಗಮದಸುಗಂಧಿಯೊರ್ವಳ ಮೊಗಕೆ ಶಂಕರಂ
ಮೃಗಮದಜಲಂಗಳಂ ಸೂಸುತಿರಲಾ ಚಕಿತ
ಮೃಗಲೋಚನೆಯ ಥಳತ್ಥಳಿಪ ನಗೆಮೊಗದೊಳಿರದೊಡನಿಳೆಗೆ ಸೂಸುತಿರ್ಪ
ಮೃಗಮದೋದಕಧಾರೆಗಳ್ ಪೊರೆಯೊಳಿರ್ಪ ಸನ್
ಮೃಗರಾಜವಾಹನಾದ್ಯಬಲೆಯರ ಕಣ್ಗಳ್ಗೆ
ಮೃಗಧರನ ಬಿಂಬಮಾ ನಿಜಕಳಂಕಂ ಕಾರುವಂತೆಸೆದುದಾ ಕ್ಷಣದೊಳು ೬೩

ಮತ್ತೆ ಹೊಡೆದರು. ಶಿವನ ಹೊಡೆತದಿಂದ ಆ ಸಖಿಯರು ನಡುಗುವರು. ಆ ಆಶ್ಚರ್ಯವನ್ನು ಏನೆಂದು ಹೇಳಲಿ ? ೬೧. ಕಾಮನನ್ನು ನಿಷ್ಕಾರಣವಾಗಿ ಕೊಂದನು, ಅಯ್ಯೋ ! ಈ ದೇವನನ್ನು ನಾನು ಗೆಲ್ಲುತ್ತೇನೆ ಎನ್ನುತ್ತ ರತಿದೇವಿ ದಂಡೆತ್ತಿ ತನ್ನ ಸ್ತ್ರೀಸೈನ್ಯಕ್ಕೆ ಅಪ್ಪಣೆ ಕೊಟ್ಟು ಹೊಕ್ಕಲ್ಲಿ ಹೊಕ್ಕು ನೀರಲ್ಲಿ ಹೊಕ್ಕರೂ ಬಿಡದೆ, ಆ ದೇವತೆಗಳಿಗೆ ಸಂಜೀವಿನಿಯಾದ ಈಶ್ವರನಿಗೆ ಸುರಿಯುವ ಹೂಮಳೆಗಳೆನ್ನುವಂತೆ ಪಾರ್ವತಿಯ ಸಖಿಯರು ಕರಕಮಲಗಳಲ್ಲಿ ಹಿಡಿದಿದ್ದ ಜೀರ್ಕೊಳವೆಗಳಿಂದ ನೀರನ್ನು ಈಶ್ವರನ ಮೇಲೆ ಸುರಿದರು. ೬೨. ಸುತ್ತಿ ಸುತ್ತಿ ಆ ತರಳೆಯರು ನಾನಾ ರೀತಿಯ ನೀರುಗಳನ್ನು ಒಂದೇ ಸಮನೆ ಸುರಿದರು, ಶಂಕರನು ಹಿಂದಕ್ಕೆ ಸರಿಸರಿದು ಮತ್ತೆ ಮತ್ತೆ ಸುರಿಯುವ ನೀರ ಹನಿಗಳು ಆ ಸ್ತ್ರೀಯರ ಅಂಗಾಂಗಗಳನ್ನು ತುಂಬಲು ದಪ್ಪ ಮೊಲೆಗಳ ಮಧ್ಯದಲ್ಲಿ ಹಾರದಂತೆ, ಮುಡಿಗಳಲ್ಲಿ ಈಚಲ ಹೂವಿನಂತೆ, ದೇಹದಲ್ಲಿ ಧರಿಸಿದ ನವರತ್ನದಾಭರಣ, ಒಳ್ಳೆಯ ಚಿತ್ರವಿಚಿತ್ರವಾದ ವಸ್ತ್ರಗಳಂತೆ ಬಹು ಚೆಲುವಾಯಿತು. ೬೩. ಕಸ್ತೂರಿಯ ಸುವಾಸನೆಯನ್ನು ಬೀರುವ ಒಬ್ಬಳ ಮುಖಕ್ಕೆ ಈಶ್ವರನು ಕಸ್ತೂರಿಯ ಪನ್ನೀರನ್ನು ಚಿಮ್ಮುತ್ತಿರಲು ವಿಸ್ಮಯಗೊಂಡ ಆ ಜಿಂಕೆಯ ಕಣ್ಣಿನ ಸ್ತ್ರೀಯ ಥಳಥಳಿಸುವ ನಗುಮುಖದಲ್ಲಿ ನಿಲ್ಲದೆ ಭೂಮಿಗೆ ಸುರಿಯುತ್ತಿರುವ ಕಸ್ತೂರಿನೀರಿನ ಧಾರೆಗಳು ಪಕ್ಕದಲ್ಲಿದ್ದ ಶ್ರೇಷ್ಠಳಾದ ಸಿಂಹವಾಹಿನಿಯಾದ ಪಾರ್ವತಿಯೇ ಮೊದಲಾದ ಸ್ತ್ರೀಯರ

CC-0. Jangamwadi Math Collection. Digitized by eGangotri

ಇಂತು ನಾನಾ ವಿನೋದಂಗಳ ವಿಲಾಸಂಗ
ಳಂ ತಳೆದು ಹರಗಿರಿಜೆಯರ್ ಮುಂಚಿ ಪೊರಮಟ್ಟ
ನಂತವಿಭವದೆ ನವ್ಯವಸ್ತ್ರಭೂಷಾನುಲೇಪಂಗಳಂ ತಳೆದು ಬಳಿಕ
ಸಂತಸದಿ ನಿಂದು ನಿಟ್ಟಿಸುತಿರಲ್ ತತ್ಸರಸಿ
ಯಂತರಂತರದ ಸೋಪಾನದೊಳ್ ಸತಿಯರಾ
ಕಂತುವಿನ ಮಂತ್ರಾಧಿದೇವಿ ಬಹುರೂಪಾಂತು ನಿಂದಂತೆ ಕಣ್ಗೆಸೆದರು ೭೪

ಕಂಗೊಳಿಪ ಸೋಪಾನದಂತರಂಗಳೊಳೆಸೆವ
ತಂಗದಿರ್ಗಲ್ಲ ಪುತ್ಥಳಿಗಳೋ ಮೇಣೀ ಭು
ಜಂಗಭೂಷಣಸೇವೆಗೀ ಸರಬಿಲದ್ವಾರದಿಂ ಬಂದ ನಾಗಿಣಿಯರೋ
ಅಂಗಮಂ ಜಲಶೈತ್ಯಮಂಟೆ ಬಿಸಿಲ್ಗಾದಪ ಜ
ಲಾಂಗನೆಯರೋ ಪೇಳಿಮೆಂಬಿನಂ ಸರಸೀತ
ಟಂಗಳನಲಂಕರಿಸಿ ನಿಂದ ನಿಬಿಡಸ್ತನಾಲಂಕೃತೆಯರೊಪ್ಪಿರ್ದರು ೭೫

ತೀರಮನಡರ್ದು ನಿಡುಗೇಸಂಗಳೊಳ್ ಸುರಿವ
ನೀರನಾರಿಸಿ ನಾಂದು ಕಾಯದೊಳ್ ಪತ್ತಿರ್ದ
ಸೀರೆಯುಂ ಕಳೆದು ನವವಸ್ತ್ರಭೂಷಣ ಕುಸುಮ ಪರಿಮಳದ್ರವ್ಯಂಗಳ
ಓರಂತೆ ತೊಟ್ಟುಟ್ಟು ಮುಡಿದು ಲೇಪಿಸಿ ಸುಕ
ರ್ಪೂರತಾಂಬೂಲಂಗಳಂ ಕೊಂಡು ನಲವಿನಿಂ
ನಾರೀಜನಂ ಬರಲ್ ಶಿವನಗಜೆಗೂಡಿ ನಿಜರಾಜಾಲಯಂಬೊಕ್ಕನು ೭೬

ಕಣ್ಣುಗಳಿಗೆ ಚಂದ್ರಬಿಂಬವು ತನ್ನ ಕಳಂಕವನ್ನು ಕಾರು (ಕಕ್ಕು)ವಂತೆ ತೋರುತ್ತಿದ್ದಿತು. ೭೪. ಈ ರೀತಿ ನಾನಾ ವಿನೋದ ವಿಲಾಸಗಳನ್ನು ಹೊಂದಿ ಹರ ಪಾರ್ವತಿಯರು ಮೊದಲು ಹೊರಹೊರಟು ಅನಂತ ವೈಭವದಿಂದ ಹೊಸ-ವಸ್ತ್ರ-ಆಭರಣ ಅನುಲೇಪನ ಗಳನ್ನು ಧರಿಸಿ ಅನಂತರ ಸಂತೋಷದಿಂದ ನಿಂತು ನೋಡುತ್ತಿರಲು ಆ ಕೊಳದ ಹತ್ತಿರ ಹತ್ತಿರದ .ಮೆಟ್ಟಿಲುಗಳಲ್ಲಿದ್ದ ಸಖಿಯರು ಮನ್ಮಥನ ಮಂತ್ರಾಧಿದೇವತೆಯು ಅನೇಕ ರೂಪಧರಿಸಿ ನಿಂತಂತೆ ಶೋಭಿಸಿದರು. ೭೫. ಮನೋಹರವಾದ ಮೆಟ್ಟಿಲುಗಳ ಸಮೀಪದಲ್ಲಿ ಪ್ರಕಾಶಿಸುವ ಚಂದ್ರಕಾಂತಶಿಲೆಯ ಗೊಂಬೆಗಳೋ ಅಥವಾ ಈ ಸರ್ಪ ಭೂಷಣನ ಸೇವೆಗೆ ಈ ಕೊಳದ ಬಿಲದ್ವಾರದಿಂದ ಬಂದ ನಾಗಿಣಿಯರೋ! ಶರೀರವನ್ನು ನೀರಿನ ಶೈತ್ಯ ತಟ್ಟಲು ಬಿಸಿಲನ್ನು ಕಾಸುತ್ತಿರುವ ಅಪ್ಸರೆಯರೋ ಹೇಳಿ ಎನ್ನುವಂತೆ ಸರೋವರದ ತೀರವನ್ನು ಅಲಂಕರಿಸಿ ನಿಂತ ಒತ್ತಾದ ಸ್ತನಗಳಿಂದ ಅಲಂಕೃತರಾದ ಸ್ತ್ರೀಯರು ಕಂಗೊಳಿಸುತ್ತಿದ್ದರು. ೭೬. ತೀರವನ್ನು ಆವರಿಸಿ ಉದ್ದವಾದ ಕೂದಲಿ ನಿಂದ ಸುರಿಯುವ ನೀರನ್ನು ಆರಿಸಿ, ನೆನೆದು ಶರೀರಕ್ಕೆ ಹತ್ತಿದ್ದ ಸೀರೆಯನ್ನು ಬಿಚ್ಚಿ ಹೊಸ ವಸ್ತ್ರ-ಭೂಷಣ, ಹೂ, ಪರಿಮಳದ್ರವ್ಯಗಳನ್ನು ಕ್ರಮವಾಗಿ ತೊಟ್ಟು ಉಟ್ಟು, ಮುಡಿದು, ಲೇಪಿಸಿಕೊಂಡು, ಒಳ್ಳೆಯ ಕರ್ಪೂರ ತಾಂಬೂಲಗಳನ್ನು ಹಾಕಿಕೊಂಡು, ಸ್ತ್ರೀಸಮೂಹ ಆನಂದದಿಂದ ಬರಲು, ಈಶ್ವರನು ಪಾರ್ವತಿಯೊಡಗೂಡಿ ತನ್ನ

CC-0. Jangamwadi Math Collection. Digitized by eGangotri

ಮೇರು ಮಂದರ ರಜತಗಿರಿಗಳೊಳ್ ಕಣ್ಗೊಳಿಸು
ವಾ ರಾಜಮಂದಿರಂಗಳ ಚೆಲ್ವುಗಳನತ್ತ
ಸಾರೆಂದು ಮಣಿಕನಕಮಯಮಾದ ಸೌಧಪ್ರಕಾಶಂಗಳಿಂದೆ ನಗುವ
ಆ ರಮ್ಯಗೇಹಮಂ ಕಂಡೀ ವಸಂತಋತು
ತೀರಿಪೋಪನ್ನಮಿಾ ಮನೆಯೊಳಿರವೇಳ್ಕೆಂದು
ಮಾರಾರಿ ಮನಸಂದು ಗಿರಿಜೆಯೊಡಗೂಡಿ ನಾನಾ ವಿಲಾಸದೊಳಿರ್ಪನು ೬೭

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ೬೮

ನಲವತ್ತೈದನೆಯ ಸಂಧಿ ಸಂಪೂರ್ಣ

ಅರಮನೆಯನ್ನು ಪ್ರವೇಶಿಸಿದನು. ೬೭. ಮೇರು ಮಂದರ ರಜತಗಿರಿಗಳಲ್ಲಿ ಕಂಗೊಳಿಸುವ ಆ ರಾಜಭವನಗಳ ಸೌಂದರ್ಯವನ್ನು ಅತ್ತ ತಳ್ಳು ಎನ್ನುತ್ತ ಮಣಿಕನಕ ಮಯವಾದ ಸೌಧಗಳ ಪ್ರಕಾಶಗಳಿಂದ ನಗುವ ಆ ಮನೋಹರವಾದ ಅರಮನೆಯನ್ನು ಕಂಡು ಈ ವಸಂತಋತುವಿನ ಕಡೆಯುವರೆಗೂ ಆ ಅರಮನೆಯಲ್ಲಿಯೇ ಇರಬೇಕೆಂದು ಈಶ್ವರನು ನಿಶ್ಚಯಿಸಿ ಗಿರಿಜೆಯೊಡಗೂಡಿ ನಾನಾರೀತಿಯ ವಿಲಾಸದಿಂದಿರುವನು. ೬೮. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವಪುರಾಣವನ್ನು ಸಂತೋಷದಿಂದ ಪ್ರತಿ ಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯುವರೆವಿಗೂ ಹೇಳಿದ ವರಿಗೆ, ವಾಚನಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪರಾವತಾರ ನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ನಲವತ್ತೈದನೆಯ ಸಂಧಿ ಮುಗಿಯಿತು

CC-0. Jangamwadi Math Collection. Digitized by eGangotri

ನಲವತ್ತಾರನೆಯ ಸಂಧಿ

ಸೂಚನೆ : ಹರನಕ್ಷಿಗಳನಗಜೆ ಸರಸದಿಂ ಮುಚ್ಚಲಂ
ದಿರದೆ ತ್ರಿಪ್ರಳಯಂಗಳಾಗಲಾ ಜಲವನಾ
ದರದಿಂದೆ ಶಿರದೊಳಿಂಬಿಟ್ಟು ಗಂಗಾಧರಸುಲೀಲೆಯಿಂ ಶಿವನೆಸೆದನು

ತೊಳಪ ಮಾಣಿಕದ ಭಿತ್ತಿಯ ರಮ್ಯಮಂದಿರದ
ಸೆಳೆಮಂಚದೊಳ್ ಮಲಂಗಿರೆ ಹಿಮಗಿರೀಂದ್ರಸುತೆ
ನಲವಿನಿಂದೊಳಪೊಕ್ಕು ಕಾಣುತಡಿಗಡಿಗೆ ಕಡುನೊಂದಂತರಂಗದೊಳಗೆ
ಮುಳಿಮುಳಿದು ಪೋಗೆ ಬೆಂಬತ್ತಿ ತೋರುವುದೆನು
ತ್ತೆಳೆಯಳಂ ತದ್ಗೃಹಕೆ ತರೆ ಯುಗಪ್ರತಿರೂಪು
ಪೊಳೆಯೆ ತಲೆವಾಗಿದಗಜೆಯ ನಗುವ ಪಂಪಾವಿರೂಪಾಕ್ಷ ಸಲಹೆಮ್ಮನು ೧

ಮುಂತೆ ಕೇಳ್ಕೆ ಸಿದ್ಧರಾಮ ಮರುದಿವಸಮಾ
ಕಂತುಹರನತಿವಿಲಾಸದೊಳೆ ತಾನೊರ್ವನೇ
ಯಂತಃಪುರದ ಬಾಗಿಲಂ ಕಳಿದು ಪೊರಬಾಗಿಲಂ ದಾಂಟಿ ಬನದ ಚೆಲ್ವಂ
ಮುಂತೆಪಿಂತೆಡಬಲಂಗಳನೊಲ್ದು ನೋಡೆ ದೂ
ರಾಂತರದೊಳೆಸೆವ ಚೆಂದಳಿರ ಚೆಲ್ವಂ ಪೂಗ
ಳಿಂ ತರದ ಮಿಡಿಗಳಿಂ ಕಾಯ್ಪಣ್ಗಳಿಂದೊಂದು ಮಾಮರಂ ಕಣ್ಗೆಸೆದುದು ೨

ಸೂಚನೆ : ಹರನ ಕಣ್ಣುಗಳನ್ನು ಗಿರಿಜೆ ವಿನೋದಕ್ಕಾಗಿ ಮುಚ್ಚಲು ಆಗ ಮೂರು ಪ್ರಳಯಗಳಾದುವು. ಶಿವನು ಆ ನೀರನ್ನು ಆದರದಿಂದ ಶಿರದಲ್ಲಿ ಧರಿಸಿ ತನ್ನ ಗಂಗಾಧರ ಸುಲೀಲೆಯನ್ನು ಮೆರೆದನು. ೧. ಬೆಳಗುವ ಮಾಣಿಕ್ಯದ ಗೋಡೆಯಿಂದ ಕೂಡಿದ ಮನೋಹರವಾದ ಮಂದಿರದ ತೂಗುಮಂಚದಲ್ಲಿ ಮಲಗಿರಲು ಪಾರ್ವತಿಯು ಸಂತೋಷ ದಿಂದ ಒಳಹೊಕ್ಕು, ಅದನ್ನು ನೋಡಿ ಮತ್ತೆ ಮತ್ತೆ ವ್ಯಥೆಗೊಂಡು ಮನಸ್ಸಿನಲ್ಲಿಯೇ ಕೋಪಗೊಂಡು ಹೊರಟುಹೋಗಲು ಅವಳ ಹಿಂದೆಯೇ ಹೋಗಿ ಆ ಮಂದಿರವನ್ನು ತೋರಿಸುತ್ತೇನೆಂದು ಪ್ರಿಯಳನ್ನು ಅಲ್ಲಿಗೆ ಕರೆತರಲು ಎರಡು ಪ್ರತಿರೂಪ ಹೊಳೆಯಲು ತಲೆಬಾಗಿದ ಪಾರ್ವತಿಯನ್ನು ನೋಡಿ ನಗುವ ಪಂಪಾವಿರೂಪಾಕ್ಷನೇ ನಮ್ಮನ್ನು ಕಾಪಾಡು. ೨. ಮುಂದೆ ಕೇಳಯ್ಯ, ಸಿದ್ಧರಾಮ. ಮಾರನೆಯ ದಿನ ಆ ಶಿವನು ಬಹಳವಾದ ವಿನೋದದಿಂದ ತಾನೊಬ್ಬನೇ ಅಂತಃಪುರದ ಬಾಗಿಲನ್ನು ತೆಗೆದು ಹೊರ ಬಾಗಿಲನ್ನು ದಾಟಿ ವನದ ಸೊಬಗನ್ನು ಮುಂದೆ-ಹಿಂದೆ, ಎಡ-ಬಲಗಳಲ್ಲಿ ಪ್ರೀತಿಯಿಂದ ನೋಡಿದನು. ದೂರದಲ್ಲಿ ಪ್ರಕಾಶಿಸುವ ಕೆಂಪಾದ ಚಿಗುರಿನ ಚೆಲುವನ್ನು ನೋಡಲು ಹೂಗಳಿಂದ ನಾನಾ ರೀತಿಯ ಹೀಚುಗಳಿಂದ-ಕಾಯಿಗಳಿಂದ-ಹಣ್ಣುಗಳಿಂದ ತುಂಬಿದ

CC-0. Jangamwadi Math Collection. Digitized by eGangotri

ಸೆಳೆಗೊಂಬು ಸೊಂಡಿಲ್ ಕವಲ್ಗೊಂಬು ಕೊಂಬುಗಳ್
ಬಳೆದ ಗ್ರಂಥಿಗಳೆಸೆವ ಕುಂಭಸ್ಥಳಂ ಸುತ್ತ
ಬಳಸಿ ಮೊರೆವಳಿಗಳುರುಗೆಜ್ಜೆಗಳ್ ತಳಿರ್ಗಳರಳೆಲೆ ಸುರಿವ ಸೋನೆಯು ಮದಂ
ಉಲಿವ ಕೋಕಿಲರವಂ ಬೃಂಹಿತಂ ಮೈದೊಡ
ರ್ದೆಳೆವಳ್ಳಿ ಹೊರಜೆ ಮಿಳಿ ಸಂಕಲೆಗಳಾಗೆ ಕಂ
ಗೊಳಿಸಿತಾ ಮಾಮರಂ ಸ್ಮರನ ಸೊಕ್ಕಾನೆಯೆಂಬಂತೆ ಶಂಕರನಿದಿರೊಳು ೩

ಮನದೊಳಚ್ಚರಿವಟ್ಟು ಶಂಕರಂ ತಾನಿರದೆ
ಘನಹರುಷದಿಂದಲಾ ಮರನನೀಕ್ಷಿಸುತಲೊ
ಯ್ಯನೆ ಬಂದು ತತ್ತರುಸಮೀಪದೊಳ್ ಮೆರೆವ ಸಸಿಗಲ್ಲ ಪೊಂಜಗುಲಿಯೊಳಗೆ
ಮನವೊಸೆದು ಮಂಡಿಸಿರಲಾ ಮರದ ತುದಿಯ ಕೊಂ
ಬಿನೊಳೆ ಮೃದುವಾಣಿಯೆಂದೆನಿಪ ಪೆಣ್ಗಿಳಿ ತನ್ನ
ಮನದನ್ನ ಮಧುಮಿತ್ರನೆಂಬರಸಗಿಳಿಯಿರುಳ್ ತಡೆಯೆ ಶೋಕಿಸುತಿರ್ದುದು ೪

ಬೆಕ್ಕುಗಳ್ ನುಂಗಿದುವೊ ಮೇಣ್ ಬೇಡಬಲೆಗಳೊಳ್
ಸಿಕ್ಕಿದುದೊ ಕೈಗಲ್ಲ ಗಾಯಂಗಳಿಂದಾವ
ರೆಕ್ಕೆ ಮುರಿದುದೊ ರೂಪು ಯೌವನಕೆ ಸೋಲ್ತು ಪೊಸವೆಣ್ಗಿಳಿಯ ಸೊಗಸುನುಡಿಯ
ತಕ್ಕಿಗೊಳಗಾದುದೋ ತಡೆಯಲೇಂ ಕಾರಣಮಿ
ದಕ್ಕೆ ತಾನೇವೆನೆಂತುಳಿವೆನಯ್ಯೋ ಅಕ್ಕ
ಟಕ್ಕಟಾ ವಿಧಿಯೆ ಹಾಯೆಂದು ಹಂಬಲಿಸಿ ಕಂಬನಿಗರೆವುದೇವೊಗಳ್ವೆನು ೫

ಒಂದು ಮಾವಿನ ಮರ ಕಣ್ಣಮುಂದೆ ಕಂಗೊಳಿಸಿತು. ೩. ತೂಗಾಡುವ ಕೊಂಬೆಯೇ ಸೊಂಡಿಲು, ಕವಲೊಡೆದ ಕೊಂಬೆಗಳೇ ಕೋರೆಗಳು, ಬೆಳೆದ ಗಂಟುಗಳೇ ಹೊಳೆಯುವ ಕುಂಭಸ್ಥಳ. ಸುತ್ತ ಬಳಸಿ ಝೇಂಕರಿಸುವ ದುಂಬಿಗಳೇ ಗೆಜ್ಜೆಗಳು, ಚಿಗುರೇ ಅರಳೆಲೆಯಾಭರಣ, ಮರದಿಂದ ಸುರಿಯುವ ರಸವೇ ಮದಜಲ ಉಲಿಯುವ ಕೋಗಿಲೆಯ ಶಬ್ದವೇ ಘೀಂಕಾರ, ಮೈಗೆ ಬಳಸಿದ್ದ ಎಲೆಯಬಳ್ಳಿ ಆನೆಯ ಕುತ್ತಿಗೆಯ ಸುತ್ತಲೂ ಹಾಕಿರುವ ಹಗ್ಗ, ಮಿಣಿ, ಸರಪಳಿಗಳಾಗಲು ಆ ಮಾವಿನಮರವು ಮನ್ಮಥನ ಮದಿಸಿದ ಆನೆಯೆಂಬಂತೆ ಈಶ್ವರನ ಎದುರಿಗೆ ಕಂಗೊಳಿಸಿತು. ೪. ಮನಸ್ಸಿನಲ್ಲಿ ವಿಸ್ಮಯಹೊಂದಿ ಶಂಕರನು ತಾನು ಬಲು ಸಂತೋಷದಿಂದ ಆ ಮರವನ್ನು ನೋಡುತ್ತ ಬೇಗನೆ ಬಂದು ಆ ಮರದ ಸಮೀಪದಲ್ಲಿ ಪ್ರಕಾಶಿಸುವ ಚಂದ್ರಕಾಂತಶಿಲೆಯ ಹೊನ್ನಜಗುಲಿಯಲ್ಲಿ ಪ್ರೀತಿಯಿಂದ ಕುಳಿತನು. ಆಗ ಆ ಮರದ ತುದಿಯ ಕೊಂಬೆಯಲ್ಲಿ ಮೃದುವಾಣಿಯೆಂಬ ಹೆಣ್ಣುಗಿಳಿ ತನ್ನ ಪ್ರಿಯಕರನಾದ ಮಧುಮಿತ್ರ ಎಂಬ ಗಂಡುಅರಗಿಳಿ ರಾತ್ರಿಯಲ್ಲಿ ಹಿಂದಿರುಗದೇ ಇರಲು ದುಃಖಿಸುತ್ತಿದ್ದಿತು. ೫. ಬೆಕ್ಕುಗಳು ನುಂಗಿದುವೊ ? ಅಥವಾ ಜೇಡನ ಬಲೆಗಳಲ್ಲಿ ಸಿಕ್ಕಿಕೊಂಡಿತೋ ? ಕವಣೆಯ ಕಲ್ಲಿನ ಗಾಯಗಳಿಂದ ಯಾವ ರೆಕ್ಕೆ ಮುರಿಯಿತೋ ? ರೂಪು-ಯೌವನಕ್ಕೆ ಸೋತು ಹೊಸ ಹೆಣ್ಣುಗಿಳಿಯ ಸೊಗಸಾದ ಮಾತಿನ ಮೋಡಿಗೆ ಒಳಗಾಗಿ ಮೋಸಹೋಯಿತೋ ? ಬರದೆ ನಿಲ್ಲಲು ಏನು ಕಾರಣ ? ನಾನೇನು ಮಾಡಲಿ ? ಹೇಗೆ

CC-0. Jangamwadi Math Collection. Digitized by eGangotri

ಸುತ್ತಲಾಲಿಪುದೊಮ್ಮೆ ಬರ್ಪ ಬಟ್ಟೆಯನೀಕ್ಷಿ
ಸುತ್ತೆ ನಿಂದಿಹುದೊಮ್ಮೆ ಬರವಗಾಣದೆ ಶೋಕಿ
ಸುತ್ತೆ ತಿರುಗುವುದೊಮ್ಮೆ ಮರಳಿ ಗೂಡಂ ಸಾರ್ದು ತಿರುಗಿ ಪುದಿಯಲ್ಲಿ ನಿಂದಾ
ಮತ್ತೆ ನೋಡುವುದೊಮ್ಮೆ ರಕ್ಕೆಗಳನುರೆ ಜೋಲಿ
ಸುತ್ತೆ ಜೊಂಪಿಪ್ಪುದೊಮ್ಮೆ ಸುಯ್ಗಳಿಂ ತಳಿರನುರು
ಪುತ್ತಳುವುದೊವ್ಮೊಮ್ಮೆ ಪತಿವಿರಹದಿಂದವಾ ಪೆಣ್ಗಿಳಿಯದೇನೆಂಬೆನು ೬

ಸಿಂಗರಂ ರೂಪು ಹರೆಯಂ ಜಾಣ್ಮೆ ನಿನಗಲ್ಲ
ದಿಂ ಗಿಳಿಗಳೊಳಗೆತ್ತಲಾನುಂಟೆ ನಿನ್ನಯ ಗು
ಣಂಗಳಂ ಬಣ್ಣಿಸುವೊಡಳವೆ ಮನದನ್ನ ನೀನಗಲಲೆನಗೀ ಜೀವದ
ಹಂಗುಂಟೆ ಬಾ ನೋಡು ಮಾತಾಡು ಚುಂಬಿಸಾ
ಲಿಂಗಿಸೊಡಗೂಡು ಸಾವನ್ನಬರವಿನಿತು ಸರ
ಸಂಗಳುಂಟೇ ರಮಣ ಮೊಗದೋರೆನುತ್ತೆ ಹಲುಬುತ್ತಿರ್ದುದೇವೇಳ್ವೆನು ೭

ಅನ್ನೆಗಂ ಬರುತಿರ್ದುದಾಚೆಯೊಳ್ ತನ್ನ ಮನ
ದನ್ನಳಳಿದಿರ್ಪಳೋ ಜೀವಿಸಿರ್ಪಳೊ ವಿರಹ
ಡಿನ್ನೋವುತಿರ್ಪಳೋ ಬೇವುತಿರ್ಪಳೊ ಅಗಲ್ಕೆಯ ಕುರುಪನರಿಯದಬಲೆ
ಎನ್ನೀ ವಿಯೋಗದಿಂದುಳಿಯಳೆಂತಾದೊಡಂ
ಪನ್ನಗಾಭರಣನುರುಸೇವೆಗಾಂ ತಡೆದೆನದ
ರುನ್ನತಿಕೆ ದುಃಖಮಂ ತರದೆಂಬ ಧೈರ್ಯದಿಂದಿನಿಯಳೆಡೆಗೈತಂದುದು ೮

ಜೀವಿಸಲಿ ? ಅಯ್ಯಯ್ಯೋ ! ವಿಧಿಯೇ ಹಾ ! ಎಂದು ಹಂಬಲಿಸಿ ಕಣ್ಣೀರು ಸುರಿಸಿತು, ಏನೆಂದು ಹೊಗಳಲಿ ? ೬. ಆ ಹೆಣ್ಣುಗಿಳಿ ಸುತ್ತಲೂ ಒಮ್ಮೆ ಆಲಿಸುವುದು. ಬರುವ ದಾರಿಯನ್ನು ನೋಡುತ್ತ ಒಮ್ಮೆ ನಿಲ್ಲುವುದು. ಬರುವುದನ್ನು ಕಾಣದೆ ದುಃಖಿಸುತ್ತ ಒಮ್ಮೆ ತಿರುಗುವುದು. ಮತ್ತೆ ಗೂಡನ್ನು ಸೇರಿ ತಿರುಗಿ ಬಾಗಿಲಲ್ಲಿ ನಿಲ್ಲುವುದು. ಮತ್ತೆ ಒಮ್ಮೆ ನೋಡುವುದು. ರೆಕ್ಕೆಗಳನ್ನು ಜೋಲಿ ಹೊಡೆಸುತ್ತ ತೂಕಡಿಸುವುದು. ಮತ್ತೊಮ್ಮೆ ನಿಟ್ಟುಸಿರಿನಿಂದ ಚಿಗುರನ್ನು ಸುಡುತ್ತ, ಪತಿಯ ವಿರಹದಿಂದ ಒಮ್ಮೊಮ್ಮೆ ಅಳುವುದು. ಅದನ್ನು ಏನೆನ್ನಲಿ ? ೭. ಶೃಂಗಾರ, ರೂಪು, ಯೌವನ, ಜಾಣತನ ನಿನಗಲ್ಲದೆ ಉಳಿದ ಗಿಳಿಗಳಿಗೆಲ್ಲಿಯಾದರೂ ಉಂಟೆ ? ನಿನ್ನ ಗುಣಗಳನ್ನು ಬಣ್ಣಿಸಲು ಸಾಧ್ಯವೆ ? ಪ್ರಿಯನೇ, ನೀನು ತೊರೆಯಲು ಜೀವನದ ಆಸೆಯುಂಟೇ ? ಬಾ ನೋಡು, ಮಾತಾಡು, ಮುದ್ದಿಸು, ಅಪ್ಪಿಕೊ, ಒಡಗೂಡು. ಸಾವು ಬರುವವರೆಗೆ ಇಷ್ಟು ಸರಸಗಳು ನನ್ನ ಪಾಲಿಗೆ ಇವೆಯೆ ? ರಮಣಾ, ಮುಖವನ್ನು ತೋರಿಸು–ಎನ್ನುತ್ತ ಆ ಹೆಣ್ಣುಗಿಳಿಯು ಗೋಳಾಡುತ್ತಿದ್ದಿತು. ೮. ಅಷ್ಟುಹೊತ್ತಿಗೆ ಆ ಗಂಡುಗಿಳಿಯು ಹೊರಬರುತ್ತಿದ್ದಿತು. ತನ್ನ ಪ್ರಿಯಳು ಸತ್ತು ಹೋಗಿದ್ದಾಳೆಯೊ ? ಜೀವಿಸಿದ್ದಾಳೆಯೊ ? ವಿರಹದಿಂದ ನೋಯುತ್ತಿದ್ದಾಳೆಯೊ ? ಬೇಗುದಿಗೊಳ್ಳುತ್ತಿದ್ದಾಳೆಯೊ ? ಅಗಲಿಕೆಯ ಗುರುತನ್ನು ಕೂಡ ತಿಳಿಯದ ಅಬಲೆ ನನ್ನ ಈ ವಿಯೋಗದಿಂದ ಉಳಿಯುವುದಿಲ್ಲ. ಹೇಗಾದರೂ ನಾನು ಸರ್ಪಭೂಷಣನ ಪುಣ್ಯಕರ

CC-0. Jangamwadi Math Collection. Digitized by eGangotri

ಘುಸೃಣರಸದಿಂ ನಾಂದ ರಕ್ಕೆಗಳ ಸೊಬಗು ರಂ
ಜಿಸೆ ಮಲಯಜೋದಕಂಬೊರೆದ ನುಣ್ಗೊರಳ್ ವಿರಾ
ಜಿಸೆ ಮೃಗಮದಾಂಬುವಿನೊಳದ್ದ ಮುಖಚಂಚುಗಳ್ ಮೆರೆಯಲಾ ದಿವ್ಯಗಂಧಂ
ದೆಸೆಗಳೊಳ್ ತೀವೆ ಸವಿಗುಟುಕಾಂತು ದನಿಯನಾ
ಲಿಸುತೆ ಹರಣಂ ಬರ್ಪವೋಲ್ ಬಂದ ಪ್ರಿಯನನಿದು
ಪೊಸಪಕ್ಕಿಯೆಂದು ಕೋಪಿಸಿ ನುಡಿಗಳಿಂದಿನಿಯನೆಂದು ಪೆಣ್ಗಿಳಿಯರಿದುದು ೯

ವಿರಹವಿಮ್ಮಡಿಸೆ ಸುಯ್ ಮೂವಡಿಸೆ ಮೈಬಿಸು
ರ್ಪಿರದೆ ನಾಲ್ವಡಿಸೆ ಕಿಡಿಕಿಡಿಯಾಗಿ ಕಂಗಳಿಂ
ಸುರಿವಶ್ರುಧಾರೆಗಳ್ ಕುದಿದು ಬತ್ತಲ್ ಪೆಣ್ಣುಗಿಳಿ ತನ್ನ ಪ್ರಿಯನ ಮೆಯ್ಯ
ಪರಿಮಳಮಿದನ್ಯರತಸಂಬಂಧವೆಂದು ಕೇ
ಕರದ ಕಿಚ್ಚಿಂದಿನಿಯನಂ ಮುಸುಕಿ ಮೌನಮಂ
ಧರಿಸಿ ಕಣ್ಮುಚ್ಚಿದುದು ಮೋಹವೆಂತಪ್ಪರಂ ಕಣ್ಗೆಡಿಸದೇಂ ಬಿಡುವುದೇ ೧೦

ನಡುಗಿತಾ ಗಂಡುಗಿಳಿ ನಲ್ಲಳಂ ಕಂಡಿರುಳ್
ತಡೆದುದಿದು ತಪ್ಪಲ್ಲವೆಂತಾದೊಡಂ ಮೋಹ
ದೆಡೆಗಿದೇ ತಪ್ಪಿದಂ ಕಾಯಬೇಕಬಲೆ ನೀನೆಂದೆರಗಲೊದ್ದು ನೂಂಕಿ

ವಾದ ಸೇವೆಗಾಗಿ ನಿಂತೆ. ಅದರ ಮಹಿಮೆ ನನಗೆ ದುಃಖವನ್ನು ತರಲಾರದು ಎಂಬ ಧೈರ್ಯದಿಂದ ಪ್ರೇಯಸಿಯ ಬಳಿಗೆ ಬಂದಿತು. ೯. ಚಂದನದ ರಸದಲ್ಲಿ ನೆನೆದ ರೆಕ್ಕೆಗಳ ಸೊಗಸು ಪ್ರಕಾಶಿಸಲು, ಗಂಧದ ನೀರನ್ನು ಸವರಿದ ಮೃದುವಾದ ಕೊರಳು ವಿರಾಜಿಸಲು, ಕಸ್ತೂರಿನೀರಿನಲ್ಲಿ ಅದ್ದಿದ ಮುಖ-ಕೊಕ್ಕುಗಳು ಮೆರೆಯುತ್ತಿರಲು, ಆ ದಿವ್ಯವಾದ ಪರಿಮಳವು ದಿಕ್ಕು ದಿಕ್ಕುಗಳಲ್ಲಿ ತುಂಬಲು ರುಚಿಯಾದ ಗುಟುಕನ್ನು ಹೊಂದಿ ಧ್ವನಿಯನ್ನು ಕಿವಿಗೊಟ್ಟು ಕೇಳುತ್ತ, ಪ್ರಾಣಬರುವ ರೀತಿಯಲ್ಲಿ ಬಂದ ಪ್ರಿಯನನ್ನು ಹೊಸ ಹಕ್ಕಿಯೆಂದು ಭಾವಿಸಿ ಕೋಪಗೊಂಡು ಅನಂತರ ಅದರ ಮಾತಿನಿಂದ ತನ್ನ ಪ್ರಿಯನೇ ಎಂದು ಹೆಣ್ಣುಗಿಳಿ ತಿಳಿಯಿತು. ೧೦. ವಿರಹವು ಎರಡು ಪಟ್ಟಾಯಿತು, ನಿಟ್ಟುಸಿರು ಮೂರುಪಟ್ಟಾಯಿತು, ಮೈಯ ಬಿಸಿ ಇರದೆ ನಾಲ್ಕು ಪಟ್ಟು ಹೆಚ್ಚಿತು. ಕಿಡಿಕಿಡಿಯಾಗಿ ಕಣ್ಣುಗಳಿಂದ ಹರಿಯುವ ಕಣ್ಣೀರ ಧಾರೆ ಕುದಿದು ಬತ್ತಿ ಹೋಗಲು, ಹೆಣ್ಣುಗಿಳಿ ತನ್ನ ಪ್ರಿಯನ ಮೈಯ ಪರಿಮಳವನ್ನು ನೋಡಿ ಇದು ಬೇರೆಯವರೊಡನೆ ಆದ ಸಂಭೋಗ ಸಂಬಂಧದಿಂದ ಉಂಟಾದುದೆಂದು ತಿಳಿದು ಕಡೆಗಣ್ಣಿನ ಬೆಂಕಿಯಿಂದ ಪ್ರಿಯನನ್ನು ಮುಸುಕಿ ಮೌನಧರಿಸಿ ಕಣ್ಮುಚ್ಚಿತು. ಮೋಹವು ಎಂಥವರನ್ನೂ ಕುರುಡರನ್ನಾಗಿ ಮಾಡದೆ ಬಿಡುವುದೆ ? ೧೧. ಆ ಗಂಡುಗಿಳಿ ನಡುಗಿತು. ಪ್ರಿಯಳನ್ನು ನೋಡಿ–ರಾತ್ರಿ ನಿಂತದ್ದು ತಪ್ಪಲ್ಲ. ಏನಾದರೂ ಮೋಹ ಇರುವ ಜಾಗದಲ್ಲಿ ಇದೇ ತಪ್ಪು. ಪ್ರಿಯಳೆ ನೀನು ಇದನ್ನು ಕ್ಷಮಿಸಬೇಕು ಎಂದು ಕಾಲಿಗೆ ಬಿದ್ದಿತು. ಆಗ ಹೆಣ್ಣುಗಿಳಿ ಗಂಡುಗಿಳಿಯನ್ನು

CC-0. Jangamwadi Math Collection. Digitized by eGangotri

ನಡೆ ನಿನ್ನಿನೆಡೆಗೆ ಹೋ ಹೋಯಿನಿತ್ತಲ್ಲದಿ
ರ್ದೊಡೆ ನಡೆಯದೇ ನಿನ್ನ ವಿಟಚಿಹ್ನವೆಂಮು ಸಿಡಿ
ಮಿಡಿಗೊಂಡು ಕುದಿಗೂಳಿನಂತೆಸೆವ ಶುಕಿಗಾ ಶುಕಂ ಮಗುಳ್ದಿಂತೆಂದುದು ೧೧

ಮುಳಿಸೇಕೆ ನೀನಲ್ಲದನ್ಯವರಿಯೆಂ ತರುಣಿ
ತಿಳಿವುದೀ ಪರಿಮಳವನೀಶನೀ ಬನದ ಪೂ
ಗೊಳದೊಳ್ ಜಲಕ್ರೀಡೆಗೆಯ್ಯಲಿಳೆಗೀ ಸರಸಿಯೇ ಪುಣ್ಯತೀರ್ಥವೆಂದು
ನಳಿನಾಕ್ಷಮುಖ್ಯರುಂ ಮಿಂದು ಸುಕೃತಿಗಳಾಗೆ
ಬಳಿಕಾಂ ಮುಳುಂಗಿ ಬರೆ ತಡವಾಯ್ತು ತೋರ್ಪೆನಾ
ಕೊಳನನೆಂದಿನಿಯಳಂ ತಿಳುಪಿ ರತಿಸುಖದೊಳಾ ಶುಕನೆಸೆದುದಾ ಕ್ಷಣದೊಳು ೧೨

ಇತ್ತಲೀಶಂ ಗಿಳಿಗಳತಿವಿನೋದವನಾಲಿ
ಸುತ್ತಿರಲ್ ಗಿರಿಜೆಶೈಸೆಜ್ಜೆಯ ಮನೆಯೊಳಂ ಕಾಣ
ದೆತ್ತಪೋದನೊಯೆಂದು ರಾಜಮಂದಿರದೊಳೆಲ್ಲಂ ನೋಡಿಯುಂ ಕಾಣದೆ
ಚಿತ್ತವಿಭ್ರಮೆಯಾಗಿ ಜಲಕೇಳಿಯೊಳಗೆ ಮನ
ಮಿತ್ತಾವಳಂ ನೆರೆಯ ಪೋದನೋಯೆಂದು ತ
ನ್ನುತ್ತಮಾಂಗವನೊಲಿವುತರಮನೆಯನಿರದೆ ಪೊರಮಟ್ಟರಸುತ್ತೈತಂದಳು ೧೩

ನುತವಸಂತಾಧಿದೇವತೆಯಂತೆ ಪರಿಪರಿದು
ಲತವನೆಗಳೊಳ್ ತಳಿರ ಕಾವಣಗಳೊಳ್ ಕುಸುಮ
ವಿತತಿಗಳ ಮಂಟಪಂಗಳೊಳೆ ಮಾಮರದ ಪೊರೆಯೊಳ್ ಮಣಿಯ ಜಗುಲಿಗಳೊಳು

ಒದ್ದು ನೂಕಿ-ನಿನ್ನೆ ಇದ್ದ ಜಾಗಕ್ಕೇ ಹೋಗು, ಹೋಗು. ಅಷ್ಟಲ್ಲದಿದ್ದರೆ ನಿನ್ನ ಈ ವಿಟಚಿಹ್ನೆ ನಡೆಯದೇ ಎಂದು ಸಿಡಿಮಿಡಿಗೊಂಡು ಕುದಿಯುತ್ತಿರುವ ಅನ್ನದಂತೆ ಕಾಣುತ್ತಿದ್ದ ಆ ಹೆಣ್ಣುಗಿಳಿಗೆ ಪುನಃ ಗಂಡುಗಿಳಿ ಈ ರೀತಿ ಹೇಳಿತು. ೧೨. ಕೋಪವೇಕೆ ? ನೀನಲ್ಲದೆ ಬೇರೆಯವರನ್ನು ಕಾಣೆ. ತರುಣಿಯೇ, ಈ ಪರಿಮಳ ಯಾವುದೆಂದು ತಿಳಿ. ಈ ವನದ ಹೂಗೊಳದಲ್ಲಿ ಈಶ್ವರನು ಜಲಕ್ರೀಡೆ ಆಡಲು, ಈ ಭೂಮಿಗೆ ಈ ಕೊಳವೇ ಪುಣ್ಯತೀರ್ಥವೆಂದು ವಿಷ್ಣು ಮೊದಲಾದವರು ಸ್ನಾನಮಾಡಿ ಪುಣ್ಯಹೊಂದಲು ಬಳಿಕ ನಾನು ಮುಳುಗಿಬರಲು ತಡವಾಯಿತು. ಆ ಕೊಳವನ್ನು ತೋರಿಸುತ್ತೇನೆ ಎಂದು ತಿಳಿಯಹೇಳಿ ಆ ಗಿಳಿ ರತಿಸುಖದಲ್ಲಿದ್ದಿತು. ೧೩. ಈ ಕಡೆ ಈಶ್ವರನು ಗಿಳಿಗಳ ವಿನೋದ ವನ್ನು ಕೇಳುತ್ತಿರಲು ಪಾರ್ವತಿ ಮಲಗುವ ಮನೆಯಲ್ಲಿ ಅವನನ್ನು ಕಾಣದೆ ಎಲ್ಲಿ ಹೋದನೋ ಎಂದು ರಾಜಮಂದಿರದಲ್ಲೆಲ್ಲ ನೋಡಿಯೂ ಕಾಣದೆ, ಮನೋಭ್ರಾಂತಿ ಗೊಂಡು, ಜಲಕ್ರೀಡೆಯಲ್ಲಿ ಮನಸೋತು ಯಾರಲ್ಲಿ ಕೂಡಲು ಹೋದನೋ ಎಂದು ತನ್ನ ತಲೆಯನ್ನು ತೂಗುತ್ತ ಅರಮನೆಯಿಂದ ಆ ಕ್ಷಣ ಹೊರಹೊರಟು ಹುಡುಕುತ್ತ ಬಂದಳು. ೧೪. ಎಲ್ಲರ ಹೊಗಳಿಕೆಗೆ ಪಾತ್ರಳಾದ ವಸಂತದ ಅಧಿದೇವತೆಯಂತೆ ಆಲೆದಾಡಿ ಬಳ್ಳಿ ಮೋಡಗಳಲ್ಲಿ, ಚಿಗುರ ಚಪ್ಪರಗಳಲ್ಲಿ, ಹೂಗೊಂಚಲ ಮಂಟಪಗಳಲ್ಲಿ, ಮಾವಿನ ಮರವ ಸಮೀಪದಲ್ಲಿ, ರತ್ನದ ಜಗುಲಿಯಲ್ಲಿ, ಕೃತಕವಾದ ಬೆಟ್ಟ ಮೊದಲಾದ ಮುಖ್ಯ ಸ್ಥಳಗಳಲ್ಲಿ

CC-0. Jangamwadi Math Collection. Digitized by eGangotri

ಕೃತಕಾದ್ರಿಮುಖ್ಯಸ್ಥಳದೊಳರಸಿ ಕಾಣ್ದುದುರೆ
ಮತಿಗೆಟ್ಟು ಧೃತಿಗುಂದಿ ಬರುತೆ ದೂರದೊಳೆ ಗಿರಿ
ಸುತೆ ಕಂಡಳೀಶನಂ ಮಾಮರದ ಪೊರೆಯ ಸಸಿಗಲ್ಲ ಪೊಸವೇದಿಕೆಯೊಳು ೧೪

ಪೊರೆಯೇರಿತಂಗಲತೆ ಹರುಷಾಶ್ರುಗಳ್ ಕರೆದು
ವರಳ್ದುದು ಮುಖಾಂಬುಜಂ ರೋಮಾಂಚನಂಗಳು
ಬ್ಬರಿಸಿದುವು ಶಿವನೊರ್ವನಿರ್ಪುದಂ ಕಂಡು ಗಿರಿಸುತೆ ಮರಳ್ದಿಂತು ಬಂದ
ಬರವನರಿದಪನೆಂಬ ಲಜ್ಜೆಯುಂ ಭೀತಿಯುಂ
ಪಿರಿದಾಗಲಿವನೊಂದುಪಾಯಮಂ ಕಂಡು ಪರಿ
ಹರಿಸಬೇಕೆಂದು ತನ್ನೊಳ್ ತಿಳಿದು ಲತೆಯ ಮರೆಗಳೊಳ್ಳೆದೆ ಮೊಯ್ಗರೆದಳು ೧೫

ಇಂಚರಮೊಗೆಯದಂತೆ ಕಟಕನೂಪುರರತ್ನ
ಕಾಂಚಗಳನಳವಡಿಸಿ ಸಖಿಯರಂ ಕೈಸನ್ನೆ
ಯಿಂ ಚಲಿಸಬೇಡೆಂದು ಮರೆಯೊಳಡಗಿಸಿ ಮೆಲ್ಲನೊಯ್ಯಾರದೊಳ್ ಚರಣದ
ಸಂಚುಗೇಳಿಸದಂತುಮಲ್ಲಲ್ಲಿ ನಿಂದು ಮೈ
ಮಚಿಸುತೆ ಪ್ಪಿಂದೆ ಬಂದಭವಾಕ್ಷಿಯುಗಳಂಗ
ಳಂ ಚೆಂದಳಿರ್ಗೈಗಳಿಂ ಮುಚ್ಚಿದಳ್ ಗಿರಿಜೆಯೇನೆಂಬೆನಚ್ಚರಿಯನು ೧೬

ರಾಮ ಕೇಳಾ ಮೋಹನಾಂಗಿಯ ಕರಂಗಳಾ
ಕಾಮರಿಪುವಂ ಸೋಂಕೆ ಗಿರಿಜೆಯಿವಳೆಂದರಿದು
ರೋಮಾಂಚಮುಖ್ಯಸಾತ್ವಿಕಮೊಗೆಯೆ ಮೈಮರೆದನಭವನಾತನಸೋಂಕಿನಿಂ

ಹುಡುಕಿ ಕಾಣದೆ ಬಹಳವಾಗಿ ಬುದ್ಧಿಗೆಟ್ಟು, ಧೈರ್ಯಗುಂದಿ ಬರುತ್ತಾ ದೂರದಲ್ಲಿ ಒಂದು ಮಾವಿನಮರದ ಪಕ್ಕದ ಚಂದ್ರಕಾಂತಶಿಲೆಯ ಹೊಸವೇದಿಕೆಯ ಮೇಲೆ ಈಶ್ವರನನ್ನು ಪಾರ್ವತಿಯು ನೋಡಿದಳು. ೧೫. ದೇಹಲತೆ ಉತ್ಸಾಹಗೊಂಡಿತು. ಸಂತೋಷದ ಕಣ್ಣೀರು ಹರಿಯಿತು. ಮುಖಕಮಲ ಅರಳಿತು. ಅತಿಯಾದ ಪುಳಕವುಂಟಾಯಿತು. ಶಿವನೊಬ್ಬನೇ ಇರುವುದನ್ನು ನೋಡಿ ಪಾರ್ವತಿ ಹಿಂದಿರುಗಿ ಹೀಗೆ ಬಂದ ರೀತಿಯನ್ನು ತಿಳಿಯುತ್ತೇನೆ ಎಂಬ ನಾಚಿಕೆಯೂ ಭೀತಿಯೂ ಹೆಚ್ಚಾಗಲು ಇದನ್ನು ಒಂದು ಉಪಾಯದಿಂದ ಪರಿಹರಿಸಬೇಕೆಂದು ತನ್ನಲ್ಲಿಯೇ ಆಲೋಚಿಸಿ ಬಳ್ಳಿಗಳ ಹಿಂದೆ ಹೋಗಿ ಬಚ್ಚಿಟ್ಟುಕೊಂಡಳು. ೧೬. ಶಬ್ದವಾಗದಂತೆ ಕೈಬಳೆ, ಕಾಲಂದುಗೆ, ರತ್ನದ ಡಾಬುಗಳನ್ನು ಹೊಂದಿಸಿಕೊಂಡು, ಸ್ನೇಹಿತೆಯರನ್ನು ಕೈಸನ್ನೆಯಿಂದ ಓಡಾಡಬೇಡಿರೆಂದು ಮರೆಯಲ್ಲಿ ಮುಚ್ಚಿಟ್ಟು, ಮೆಲ್ಲನೆ ಒಯ್ಯಾರದಿಂದ ನಡಿಗೆಯ ಶಬ್ದ ಕೇಳಿಸದಂತೆ ಅಲ್ಲಲ್ಲಿ ನಿಂತು ಮೈಮರೆಸುತ್ತಾ ಹಿಂದೆ ಬಂದು ಶಿವನ ಎರಡು ಕಣ್ಣುಗಳನ್ನೂ ತನ್ನ ಕೆಂಪಾದ ಚಿಗುರುಕೈಗಳಿಂದ ಗಿರಿಜೆ ಮುಚ್ಚಿದಳು. ಆಗ ಆದ ಆಶ್ಚರ್ಯ ಏನು ಹೇಳಲಿ ? ೧೭. ಸಿದ್ಧರಾಮ, ಕೇಳು. ಆ ಮೋಹನಾಂಗಿಯ ಕೈಗಳು ಆ ಕಾಮಾರಿಯನ್ನು ಸೋಕಲು ಇವಳು ಗಿರಿಜೆ ಎಂದು ತಿಳಿದು ರೋಮಾಂಚ ಮೊದಲಾದ ಸಾತ್ವಿಕಭಾವಗಳುಂಟಾಗಲು ಈಶ್ವರನು ಮೈಮರೆತನು.

CC-0. Jangamwadi Math Collection. Digitized by eGangotri

ಈ ಮಹಾದೇವಿ ಮರವಟ್ಟಳಭವಾಕ್ಷಿ ಮೊದ
ಲೇ ಮುಚ್ಚಿದಂತಿರ್ಪುದುಂ ಬಂದುದದ್ಭುತಂ
ಭೂಮಿಯೊಳ್ ಸ್ತ್ರೀಬುದ್ಧಿಯೇ ಪ್ರಳಯಮೆಂಬ ನೀತಿಗೆ ನಿದರ್ಶನದಂತಿರೆ ೧೭

ಮುಚ್ಚಿದ ಶಿವಾಕ್ಷಿಯೊಳಗಿಂದುರವಿಮೂರ್ತಿಗಳ್
ಮುಚ್ಚಿದುವು ನಿಖಿಳಭುವನಜನಾಕ್ಷಿಸಂಕುಲಂ
ಮುಚ್ಚಿದುದು ಲೋಕಲೋಕಪ್ರಭಾಸಮುದಯಂ ನಿಮಿಷದೊಳಗೇನೆಂಬೆನು
ಪೆಚ್ಚಿದುದು ಘೋರಾಂಧಕಾರಮಿರ್ದಂತಿರ್ದು
ಪೆಚ್ಚಿದುದು ಜನಮನಸ್ತಿಮಿರವೊಂದೇ ಬಾರಿ
ಪೆಚ್ಚಿದುದು ಲೋಕಲೋಕದೊಳತಿಭಯಂಕರಂ ಪೇಳಲೇನದ್ಭುತವನು ೧೮

ಅಂಜನಕರಂಡದಂತೋ ಬಹಳರಾತ್ರಿಗಳ
ಪುಂಜದಂತೋ ಪ್ರಲಯಘೋರಾಂಧಕಾರದ ಕ
ಣಂಜದಂತೋ ಪ್ರಳಯಕಾಲಮೇಘಂಗಳ ಕಠೋರದಂತೋ ಭಾವಿಸೆ
ನಂಜಿಡಿದ ಭರಣಿಯಂತೋ ಮಹಾಮಾಯೆಗಳ
ಬಿಂಜದಂತೋಯೆಂಬವೂಹೆಗಳವಡದಂತೆ
ಕಂಜೋದ್ಭವಾಂಡಮೊಪ್ಪಿರ್ದುದೇಂ ಸಾಂದ್ರಾಂಧಕಾರದೊಳದೇವೇಳ್ವೆನು ೧೯

ಮುಬ್ಬಿನೊಳಗಾಚರಿಸಿ ಕೆಡೆವರಿಂ ಮಡಿವರಿಂ
ಬೆಬ್ಬಳಿಸಿ ಧರೆಗೆ ಬೀಳ್ದಳಲ್ವರಿಂ ತೊಳಲ್ವರಿಂ
ತಬ್ಬಿಬ್ಬುಗೊಂಡು ಮೊರೆಗೆಯ್ವರಿಂ ಸುಯ್ವರಿಂದೆಡಬಲಕೆ ಕಾಲಿಡಲ್ಕೆ

ಆತನ ಸೋಂಕಿನಿಂದ ಈ ಮಹಾದೇವಿಯೂ ಮೈಮರೆತಳು. ಶಿವನ ಕಣ್ಣು ಮೊದಲೇ ಮುಚ್ಚಿದಂತೆ ಇದ್ದಿತು. ಸ್ತ್ರೀಬುದ್ಧಿಯೇ ಪ್ರಳಯವೆಂಬ ಲೋಕನೀತಿಗೆ ನಿದರ್ಶನದಂತಿರಲು ಒಂದು ಅದ್ಭುತ ನಡೆಯಿತು, ೧೮. ಮುಚ್ಚಿದ ಶಿವನ ಕಣ್ಣುಗಳಲ್ಲಿ ಚಂದ್ರ-ಸೂರ್ಯಮೂರ್ತಿಗಳು ಮುಚ್ಚಿಹೋದರು. ಸಮಸ್ತ ಪ್ರಪಂಚದ ಜನರ ಕಣ್ಣುಗಳೂ ಮುಚ್ಚಿದುವು. ಲೋಕ ಲೋಕಗಳ ಬೆಳಕಿನ ಸಮುದಾಯ ಮುಚ್ಚಿಹೋಯಿತು. ನಿಮಿಷದಲ್ಲಿ ಘೋರವಾದ ಕತ್ತಲೆ ಹೆಚ್ಚಿತು. ಇದ್ದಕ್ಕಿದ್ದಂತೆಯೇ ಜನರ ಮನಸ್ಸಿನ ಅಂಧಕಾರವೂ ಹೆಚ್ಚಿತು. ಒಡನೆಯೇ ಲೋಕ ಲೋಕಗಳಲ್ಲಿ ಭಯಂಕರತೆ ಅತಿ ಹೆಚ್ಚಿತು, ಅದ್ಭುತವನ್ನು ಏನೆಂದು ಹೇಳಲಿ ? ೧೯. ಕಾಡಿಗೆಯ ಭರಣಿಯಂತೆಯೊ ? ಅಸಂಖ್ಯಾತ ರಾತ್ರಿಗಳ ಮೊತ್ತವೊ ? ಪ್ರಳಯದ ಘೋರವಾದ ಅಂಧಕಾರದ ಕಣಜದಂತೊ ? ಪ್ರಳಯಕಾಲದ ಮೋಡಗಳ ಕಠಿಣತೆಯಂತೊ ? ಆಲೋಚಿಸಲು ವಿಷ ತುಂಬಿದ ಬಟ್ಟಲಿನಂತೊ ? ಮಹಾ ಮಾಯಗಳ ಮಹಾ ಅಡವಿಯಂತೆಯೊ ಎಂಬ ಊಹೆಗೆ ಸಿಲುಕದಂತೆ ಒತ್ತಾದ ಕತ್ತಲಿನ ಮೊತ್ತದಿಂದ ಬ್ರಹ್ಮಾಂಡವು ಕೂಡಿದ್ದಿತು. ಅದನ್ನು ಏನು ಹೇಳಲಿ ? ೨೦. ಕತ್ತಲಲ್ಲಿ ನಡೆದು ಬೀಳುವವರಿಂದ, ಸಾಯುವವರಿಂದ, ಗಾಬರಿಯಾಗಿ ನೆಲಕ್ಕೆ ಬಿದ್ದು ಸಂಕಟಪಡುವವರಿಂದ, ತೊಳಲುವವರಿಂದ, ತಬ್ಬಿಬ್ಬಾಗಿ ಮೊರೆಯಿಡುವವರಿಂದ, ನಿಟ್ಟುಸಿರು ಬಿಡುವವರಿಂದ, ಎಡ–ಬಲಕ್ಕೆ ಕಾಲಿಡಲು ಒಬ್ಬರೊಬ್ಬರಿಗೆ ಡಿಕ್ಕಿ ಹೊಡೆದು ಬೀಳು

CC-0. Jangamwadi Math Collection. Digitized by eGangotri

ಒಬ್ಬೊಬ್ಬರಿಂತಾಗಿ ಬೀಳ್ವರಿಂದೇಳ್ವರಿಂ
ದೆಬ್ಬಿಸಲ್ ದಿಕ್ಕಿಲ್ಲದಳಿವರಿಂ ಕೊಳೆವರಿಂ
ಸಬ್ಬಲೋಕದೊಳೆ ಚಾನಿಸುವರಿಂ ನಸಿವರಿಂ ಪೇಳಲದ್ಭುತವಾದುದು ೨೦

ಅಂತಪ್ಪ ಕತ್ತಲೆಯೊಳಖಿಳಲೋಕದ ಜನಂ
ಪಿಂತೆ ಮುಂತೆಸಬಲಂಗಾಣದಡಿಯಿಡಲಂಜಿ
ನಿಂತಲ್ಲಿ ನಿಂತು ಕಲ್ಮರನಾಗಿ ಲಯಮೈದುತಿರ್ದುವಾ ಹರಿವಿಧಿಗಳು
ಚಿಂತಿಸುತೆ ಕಣ್ಗೆಟ್ಟದೇಂ ಪ್ರಳಯಸಮಯಮ
ಲ್ಲೆಂತಾದುದೋ ಈ ವಿಪತ್ತಿದಕೆ ನಿಷ್ಕೃತಿಯ
ನೆಂತೊ ಶಿವನೇ ಬಲ್ಲನೆನುತ ಮೃತ್ಯುಂಜಯಧ್ಯಾನದಿಂದಿರುತಿರ್ದರು ೨೧

ಅನಿತರೊಳ್ ಹಿಮಗಿರಿಸುತಾಪುಳಕಜಲಕಣಂ
ನನೆಯಿಸಲ್ ಬೆಂಗೆ ತಣ್ಣಸವೋರಲೆಚ್ಚತ್ತು
ನೆನೆದು ಲೋಕಾಪತ್ತನಕಟೆಂತು ಕೆಯ್ಗಳಂ ಬಲ್ಮೆಯಿಂ ಬಿಡಿಸಲೊಡನೆ
ಮುನಿವಳಂಗನೆಯೆಂಬ ಭೀತಿಯಿಂ ಕತ್ತಲೆಯ
ಮನೆಗೆ ದೀಪವನಿಡುವ ಮಾಳ್ಕೆಯಿಂ ನೊಸಲಕ
ಣ್ಣೊನೆಯನೆಳ್ಳನಿತನೊಯ್ಯನೆ ತೆರೆದನೀಶ್ವರಂ ರಾಮ ಕೇಳದ್ಭುತವನು ೨೨

ಭವನ ಪಣೆಗಣ್ಣುರಿಯ ಬೆಳಗಿನಿಂ ತಮವಿರದೆ
ಜವದಿಂದಲೋಡುತಿರೆ ಮುಂದೊಂದು ಕಾರಣಕೆ
ಶಿವನಾಜ್ಞೆಯಿಂದಲಾ ತಮದ ತಿರುಳೆಲ್ಲವೊಬ್ಬುಳಿಯಾಗಿ ಬಲಿದು ಕೂಡೆ

ವವರಿಂದ, ಏಳುವವರಿಂದ, ಎಬ್ಬಿಸಲು ಯಾರೂ ಇಲ್ಲದೆ ಸಾಯುವವರಿಂದ, ಕೊಳೆಯುವವರಿಂದ, ಎಲ್ಲ ಲೋಕದಲ್ಲಿ ಚಿಂತಿಸುವವರಿಂದ, ಸೊರಗುವವರಿಂದ ಗಾಂಢಾಂಧಕಾರವು ಅದ್ಭುತವಾಯಿತು. ೨೧. ಅಂತಹ ಕತ್ತಲೆಯಲ್ಲಿ ಎಲ್ಲ ಲೋಕದ ಜನ ಹಿಂದೆ-ಮುಂದೆ, ಎಡ-ಬಲ ಕಾಣದೆ ಹೆಜ್ಜೆ ಇಡಲು ಹೆದರಿ ನಿಂತಲ್ಲಿ ನಿಂತು ಕಲ್ಲು ಮರಗಳಂತೆ ಅಚಲವಾಗಿ ನಾಶವಾಗುತ್ತಿದ್ದಿತು. ಆ ವಿಷ್ಣು-ಬ್ರಹ್ಮರು ಚಿಂತಿಸುತ್ತ ಕಂಗೆಟ್ಟು, ಇದೇನು ಪ್ರಳಯ ಕಾಲ ? ಹೇಗಾಯಿತೊ ಈ ವಿಪತ್ತು ? ಇದಕ್ಕೆ ಪರಿಹಾರವೇನೊ ? ಶಿವನೇ ಬಲ್ಲ ! ಎನ್ನುತ್ತ ಮೃತ್ಯುಂಜಯನ ಧ್ಯಾನದಲ್ಲಿ ತೊಡಗಿದರು. ೨೨. ಅಷ್ಟರಲ್ಲಿ ಪಾರ್ವತಿಯ ಪುಳಕದ ಜಲಬಿಂದು ನೆನೆಯಿಸಲು ಬೆನ್ನಿಗೆ ತಂಪೇರಲು ಶಿವನು ಎಚ್ಚರಗೊಂಡು ಲೋಕದ ವಿಪತ್ತನ್ನು ನೆನೆದು ಅಯ್ಯೋ ! ಕೈಗಳನ್ನು ಬಲಪ್ರಯೋಗದಿಂದ ಬಿಡಿಸಿದರೆ ಕೂಡಲೇ ತರುಣಿ ಕೋಪಗೊಳ್ಳುತ್ತಾಳೆ ಎನ್ನುವ ಹೆದರಿಕೆಯಿಂದ ಕತ್ತಲೆಯ ಮನೆಗೆ ದೀಪವನ್ನು ಹಚ್ಚುವ ರೀತಿಯಲ್ಲಿ ಶಿವನು ತನ್ನ ಹಣೆಗಣ್ಣ ಕೊನೆಯನ್ನು ಸ್ವಲ್ಪಮಾತ್ರ ಮೆಲ್ಲನೆ ತೆರೆದನು. ಸಿದ್ಧರಾಮ, (ಆಗ ನಡೆದ) ಅದ್ಭುತವನ್ನು ಕೇಳು ! ೨೩. ಭವನ ಹಣೆಗಣ್ಣಿನ ಉರಿಯ ಜ್ವಾಲೆಯಿಂದ ಕತ್ತಲೆಯು ಇರದೆ ವೇಗದಿಂದ ಓಡುತ್ತಿರಲು ಮುಂದೊಂದು ಕಾರಣಕ್ಕಾಗಿ ಶಿವನ ಆಜ್ಞೆಯಿಂದ ಆ ಕತ್ತಲೆಯ ತಿರುಳೆಲ್ಲ ಒಂದುಗೂಡಿ ಒಟ್ಟಾಗಿ ಸೇರಿ

CC-0. Jangamwadi Math Collection. Digitized by eGangotri

ತವಕದಿಂದೊಂದು ಶಿಶುವಾಗಿ ಶಿವನಿದಿರೊಳಂ
ದವಿರಳಾನಂದದಿಂದಿರಲಿತ್ತ ಪಣೆಗಿಚ್ಚು
ಭುವನಂಗಳಂ ದಹಿಸತೊಡಗಿತವರದ್ಭುತವನೇನೆಂದು ಬಣ್ಣಿಸುವೆನು ೨೩

ನಿಟಿಲಾಕ್ಷಮರೆದೆರೆಯೆ ತುಂಬಿದುದು ಬ್ರಹ್ಮಾಂಡ
ಘಟದೊಳಗೆ ಬೆಳಗು ಬೆಳಗಿಂದುಷ್ಣಮುಷ್ಣದಿಂ
ಪುಟನೆಗೆದು ಬಳೆವ ಪೊಗೆ ಪೊಗೆಯೊಳುರಿಯುರಿಯೊಳಿರದೇಳ್ವ ಕಿಡಿ ಕಿಡಿಗಳೊಳಗೆ
ಲಟಕಟಿಪ ಶಿಖಿಯ ನಾಲಗೆ ಪೆಚ್ಚೆ ಭುಗಿಭುಗಿಲ್
ಚಿಟಿಚಿಟಿಲ್ ಛಿಳಿಛಿಳಿಲ್ ಸಿಮಿಸಿಮಿಸಿಮೆಂದು ಛಟ
ಛಟ ಧಗಂ ಧಗಧಗೆಂದೆಂಬ ನಾನಾ ಘೋಷಮುಣ್ಮಿದುದನೇನೆಂಬೆನು ೨೪

ಸಿಡಿಸಿಡಿದು ಪಾರಿದುವು ಬೆಟ್ಟಂಗಳೆತ್ತಲುಂ
ಪೊಡವಿ ಬೆಂದಿರ್ಭಾಗವಾಗುತಿರ್ದುದು ಸಪ್ತ
ಜಲಧಿಗಳ್ ತಕಪಕನೆ ಕುದಿದುಕ್ಕಿ ಬತ್ತುತಿರ್ದುವು ಕೆಳಗೆ ಫಣಿಕರಿಗಳ
ಹೆಡೆಗಳುಂ ಕೈಕಾಲ್ಗಳುಂ ಮುರುಟುತ್ತಿರ್ದು
ವೊಡೆದು ಬ್ರಹ್ಮಾಂಡವಾ ಮೇಲಣ ಜಲಂ ಚುಯ್ಯ
ನಡಿಗನಡಿಗೆ ಸೇದಿಂಗುತಿರ್ದುವೇಂ ವಣ್ಣಿಸುವೆನಾ ಹರಾಕ್ಷಿಯಃ ಕಿಚ್ಚನು ೨೫

ಘೋಳಿಡುತೆ ಕೆಡೆವ ಕೇಸರಿಗಳಿಂ ಕರಿಗಳಿಂ
ಘೀಳಿಡುತುರುಳ್ವ ಮೃಗರಾಜಿಯಿಂ ವಾಜಿಯಿಂ
ಬೇಳಿಡುತೆ ಬೀಳ್ವ ಕಾಳ್ಪಸುಗಳಿಂ ಮುಸುಗಳಿಂದುರಿಯ ಪೊಯ್ಲುಗಳೊಳಂದು

ಒಂದು ಮಗುವಾಗಿ ಶಿವನ ಎದುರಿನಲ್ಲಿ ಅಂದು ಅತ್ಯಾನಂದದಿಂದ ಇರಲು ಇತ್ತಕಡೆ ಹಣೆ ಗಣ್ಣಿನಿಂದ ಹೊರಟ ಕಿಚ್ಚು ಲೋಕಗಳನ್ನೆಲ್ಲ ಸುಡತೊಡಗಿತು. ಅದರ ಅದ್ಭುತವನ್ನು ಏನೆಂದು ವರ್ಣಿಸಲಿ ? ೨೪. ಹಣೆಗಣ್ಣು ಅರೆತೆರೆಯಲು ಬ್ರಹ್ಮಾಂಡದಲ್ಲಿ ಬೆಳಕು ತುಂಬಿತು. ಆ ಬೆಳಕಿನಿಂದ ಶಾಖ, ಶಾಖದಿಂದ ಪುಟನೆಗೆದು ಬೆಳೆಯುವ ಹೊಗೆ, ಹೊಗೆಯಲ್ಲಿ ಉರಿ, ಉರಿಯಲ್ಲಿ ಏಳುವ ಕಿಡಿ, ಕಿಡಿಗಳೊಳಗೆ ಛಟಛಟಿಸುವ ಬೆಂಕಿಯ ನಾಲಗೆ ಹೆಚ್ಚಲು ಭುಗಿ ಭುಗಿಲ್, ಚಿಟಿ ಚಿಟಿಲ್, ಛಿಳಿ ಛಿಳಿಲ್, ಸಿಮಿ ಸಿಮಿ ಸಿಮಿಯೆಂದು, ಛಟ ಛಟ, ಧಗಧಗಧಗ ಎನ್ನುವ ನಾನಾ ರೀತಿಯ ಶಬ್ದ ಹೊರಟಿತು, ಅದನ್ನು ಏನೆನ್ನಲಿ? ೨೫. ಬೆಟ್ಟಗಳು ಸಿಡಿ ಸಿಡಿದು ಎತ್ತೆತ್ತಲೂ ಹಾರಿದುವು. ಭೂಮಿ ಬೆಂದು ಎರಡು ಭಾಗ ವಾಗುತ್ತಿದ್ದಿತು. ಸಪ್ತಸಾಗರಗಳೂ ತಕಪಕನೆ ಕುದಿದು ಉಕ್ಕಿ ಬತ್ತಿ ಹೋಗುತ್ತಿದ್ದುವು. ಭೂಮಿಯ ಕೆಳಗೆ ಆದಿಶೇಷ, ದಿಗ್ಗಜಗಳ ಹೆಡೆಗಳು, ಕೈಕಾಲ್ಗಳು ಸುಟ್ಟು ಸುಕ್ಕಾಗಿ ಸುರುಟಿಕೊಳ್ಳುತ್ತಿದ್ದುವು. ಬ್ರಹ್ಮಾಂಡವು ಒಡೆದು ಮೇಲಿನ ನೀರು ಚುಯ್ಯೆಂದು ಮತ್ತೆ ಸೇದಿ ಇಂಗಿಹೋಗುತ್ತಿದ್ದಿತು ! ಆ ಹರನ ಉರಿಗಣ್ಣಿನ ಬೆಂಕಿಯನ್ನು ಏನೆಂದು ಬಣ್ಣಿ ಸಲಿ ? ೨೬. ಘೋ ಎಂದು ಕೂಗುತ್ತ ಬೀಳುವ ಸಿಂಹಗಳಿಂದ, ಆನೆಗಳಿಂದ, ಘೀಳಿ ಡುತ್ತ ಉರುಳುವ ಮೃಗಸಮೂಹದಿಂದ, ಕುದುರೆಗಳಿಂದ ; ಬೆಂಕಿಯ ತಾಪದಿಂದ ಮರುಗಿ

CC-0. Jangamwadi Math Collection. Digitized by eGangotri

ಕಾಲುಡುಗಿ ಬೀಳ್ವ ಬಹುದನುಜರಿಂ ಮನುಜರಿಂ
ಮೇಲಣಿಂ ಕೆಡೆದುರುಳ್ವ ಯಕ್ಷರಿಂ ರಕ್ಷರಿಂ
ಪಾಳಾದ ಸಕಲಲೋಕಂಗಳಿಂ ಕಂಗಳಿಂ ನೋಡಲುರಿ ಘನಮಾದುದು ೨೬

ಹಾಯೆಂದು ಹರಿಯಜರ್ ಬಾಯ್ ಬಿಡಲ್ ಶಿವನೆ ಮೊರೆ
ಯೋಯೆಂದು ಸುರನಿಕರಮೊರಲುತಿರೆವುರಿಯೊಳ
ಯ್ಯೋಯೆಂದು ಸಕಲಲೋಕಪ್ರಾಣಿಗಳ್ ಮಡಿವುತಿರೆ ಶಿವ ಮಹಾದೇವನೆ
ಕಾಯೆಂದು ಮುನಿನಿಕರಮರಚುತಿರೆ ತಪ್ಪಾಯ್ತು
ಲಾಯೆಂದು ನಡುನಡುಗಿ ಶಿವನಕಣ್ಣಂ ಮುಚ್ಚಿ
ದಾ ಯಮಳಹಸ್ತಮಂ ಗಿರಿಜೆ ತೆಗೆದಳ್ ಮತ್ತೆ ರಾಮ ಕೇಳ್ ಕೌತುಕವನು ೨೭

ಮೃಡಲೋಚನಂಗಳಿಂದೊಗೆದ ಹರುಷಾಶ್ರುಜಲ
ಮೊಡನೆ ಗಿರಿಜೆಯ ಕುಡಿತೆಯೊಳ್ ತುಂಬಿಬರಲದಂ
ಕೊಡಹಲ್ ದಶಾಂಗುಲಿಯ ಸವ್ವಳಿಯೊಳಿಳಿದ ನೀರ್ ದಶನದಿಗಳಾಗಿ ಪರಿದು
ಅಡಿಗಡಿಗೆ ಹತ್ತುಸಾವಿರ ಲಕ್ಷ ಕೋಟಿಗಿ
ಮ್ಮಡಿಯಾಗಿ ಪೆರ್ಚಿ ಪ್ರವಾಹಿಸಿ ಪೊದಳ್ದು ಭೋ
ರಿಡುತೆ ನಾನಾಮುಖದೊಳವನಿಯಂ ತುಂಬಿದುರಿ ನಂದಿ ಜಲಮಯವಾಗಲು ೨೮

ಕೂಗುತ್ತ ಬೀಳುವ ಕಾಡಹಸುಗಳಿಂದ ಕರಿಯ ಕೋತಿಗಳಿಂದ ; ಉರಿಯ ಹೊಡೆತದಿಂದ, ಕಾಲಿನಲ್ಲಿ ಶಕ್ತಿಯಿಲ್ಲದೆ ಬೀಳುವ ಬಹುಸಂಖ್ಯೆಯ ರಾಕ್ಷಸರಿಂದ, ಮನುಷ್ಯರಿಂದ ; ಮೇಲಿನಿಂದ ಕೆಳಕ್ಕೆ ಬಿದ್ದು ಉರುಳುವ ಯಕ್ಷರಿಂದ, ರಕ್ಷರಿಂದ ; ನಾಶವಾದ ಎಲ್ಲ ಲೋಕಗಳಿಂದ-ಕಣ್ಗಳಿಂದ ನೋಡಲು ಉರಿ ಬಹು ಹೆಚ್ಚಿತು. ೨೭. ವಿಷ್ಣು-ಬ್ರಹ್ಮರು ಹಾ ಎಂದು ಬಾಯ್‌ಬಿಡಲು, ನಮಗೆ ಶಿವನೇ-ರಕ್ಷಕ, ಓಯೆಂದು ದೇವತೆಗಳ ಸಮೂಹ ಅರಚುತ್ತಿರಲು, ಉರಿಯಲ್ಲಿ ಸಿಕ್ಕಿ ಅಯ್ಯಯ್ಯೋ ಎಂದು ಎಲ್ಲ ಲೋಕದ ಪ್ರಾಣಿಗಳೂ ಸಾಯುತ್ತಿರಲು, ಶಿವ, ಮಹಾದೇವನೆ ಕಾಪಾಡು ಎಂದು ಮುನಿಸಮೂಹವು ಮೊರೆ ಯಿಡುತ್ತಿರಲು, ಎಂತಹ ಅಪರಾಧವಾಯಿತು ಎಂದು ನಡನಡುಗಿ ಪಾರ್ವತಿಯು ಶಿವನ ಕಣ್ಣನ್ನು ಮುಚ್ಚಿದ್ದ ತನ್ನ ಎರಡೂ ಕೈಗಳನ್ನೂ ತೆಗೆದಳು. ಸಿದ್ಧರಾಮ, ಮತ್ತೆ ಉಂಟಾದ ಕೌತುಕವನ್ನು ಕೇಳು. ೨೮. ಶಿವನ ಕಣ್ಣುಗಳಿಂದ ಹರಿದ ಸಂತೋಷದ ಕಣ್ಣೀರು ತಕ್ಷಣ ಗಿರಿಜೆಯ ಬೊಗಸೆಯಲ್ಲಿ ತುಂಬಿ ಬರಲು ಅದನ್ನು ಒದರಲು ಅವಳ ಹತ್ತು ಬೆರಳುಗಳ ತುದಿಯಿಂದ ಇಳಿದ ನೀರು ಹತ್ತು ನದಿಗಳಾಗಿ ಹರಿದು ಮತ್ತೆ ಮತ್ತೆ ಹತ್ತು ಸಾವಿರ, ಲಕ್ಷ, ಕೋಟಿಗೆರಡರಷ್ಟಾಗಿ ಹೆಚ್ಚಿ ಭಾರಿ ಪ್ರವಾಹವಾಗಿ ಎಲ್ಲೆಲ್ಲಿಯೂ ಹರಡಿ ಭೋರಿಡುತ್ತ, ನಾನಾ ಕಡೆಗಳಿಂದಲೂ ಪ್ರಪಂಚವನ್ನು ತುಂಬಿದ್ದ ಬೆಂಕಿ ಆರಿ ಜಲ

CC-0. Jangamwadi Math Collection. Digitized by eGangotri

ಸುತ್ತಲುಂ ಪರಿವ ಪ್ರಚಾರದಿಂ ಪೂರದಿಂ
ದೊತ್ತಿರಿಸಿ ಬರ್ಪ ಬಲ್ದೆರೆಗಳಿಂ ನೊರೆಗಳಿಂ
ದೆತ್ತೆತ್ತಲೊಗೆವ ಸವ್ವಳಿಗಳಿಂ ಸುಳಿಗಳಿಂ ನಾನಾಪ್ರಕಾರದಿಂದೆ
ಒತ್ತಿ ಭೋರ್ಗರೆವ ರವದುರ್ಬಿನಿಂ ಪರ್ಬಿನಿಂ
ಹತ್ತೊಂದುಗೂಡಿ ವಿಸ್ತೀರ್ಣದಿಂ ಪೂರ್ಣದಿಂ
ತುತ್ತಿದುದು ಸಕಲಲೋಕಂಗಳಂ ತಿಂಗಳಂ ಪೊತ್ತವಂ ಬೆರಗಾಗಲು ೨೯

ವಸುಧೆಯುಂ ಸಪ್ತಶರನಿಧಿಗಳೇಕಾರ್ಣವದೊ
ಳೆಸೆವಿನಮಧೋಭುವನವೆನಿತನಿತುವಂ ಮುಳುಂ
ಗಿಸಿಯೂರ್ಧ್ವಲೋಕಂಗಳಂ ನುಂಗಿ ಮುನ್ನುರಿಯೊಳೊಡೆದೆಸೆವ ಬ್ರಹ್ಮಾಂಡದ
ಪೊಸತಪ್ಪ ಖಂಡಖಂಡಗಳೊಳಲ್ಲಲ್ಲಿ ಭೇ
ದಿಸಿ ಮೇಲಣಾವರಣಜಲದೊಳಗೆ ಕೂಡಿ ಕಂ
ಗೆಸೆದುದು ಮಹಾಪ್ರಳಯದುದಕಮಯಮಾದಂತೆ ತಜ್ಜಲಮದೇನೆಂಬೆನು ೩೦

ಆಲಿಸೆಲೆ ಸಿದ್ಧರಾಮೇಶ ಬಳಿಕಾ ಕ್ಷಣದೊ
ಳಾಳಿಪೋದುದು ಸಕಲಲೋಕಸಂತತಿ ಕಂಡು
ಪೇಳಲರಿಯೆಂ ಸುರಬ್ರಹ್ಮರೇನಾದರೆಂಬುದನಾ ಮಹಾಜಲದೊಳು
ಆಲದೆಲೆಯೊಳ್ ಮಲಗಿಯೊಮ್ಮೆ ಮುಳುಗುತ್ತೊಡನೆ
ತೇಲುತೊರ್ವನೆಯುಗುಳ್ನೀರನುಗುಳುತ್ತೆ ಕ
ಣ್ಣಾಲಿಗಳ್ ಮರಳಲ್ ಮಹಾವಿಷ್ಣು ಮನದೊಳ್ ಭಯಂಗೊಳುತ್ತಿಂತೆಂದನು ೩೧

ಮಯವಾಯಿತು. ೨೯. ಸುತ್ತಲೂ ಹರಡಿ ಹರಿಯುವ ಮಹಾಪ್ರವಾಹದಿಂದ, ಒತ್ತೊತ್ತಾಗಿ ಬರುವ ಬಾರಿ ಅಲೆಗಳಿಂದ-ನೊರೆಗಳಿಂದ, ಎಲ್ಲೆಲ್ಲಿಯೂ ಹುಟ್ಟುವ ತೆರೆಯ ತುದಿಗಳಿಂದ, ಸುಳಿಗಳಿಂದ, ನಾನಾ ರೀತಿಯಿಂದ ಒತ್ತಿ ಭೋರ್ಗರೆಯುವ ಶಬ್ದದ ಹೆಚ್ಚಳದಿಂದ, ಆವರಿಸುವಿಕೆಯಿಂದ, ಹತ್ತೂ ಒಂದಾಗಿಕೂಡಿ ವಿಸ್ತಾರದಿಂದ ಪೂರ್ಣವಾಗಿ ಚಂದ್ರಶೇಖರನೇ ಬೆರಗಾಗುವಂತೆ ಎಲ್ಲ ಲೋಕಗಳನ್ನೂ ನುಂಗಿತು. ೩೦. ಭೂಮಿಯ ಸಪ್ತಸಾಗರಗಳೂ ಒಂದೇ ಮಹಾಸಾಗರವಾಗಿ ಸೇರಿದಂತೆ, ಪಾತಾಳಲೋಕಗಳಷ್ಟನ್ನೂ ಮುಳುಗಿಸಿ, ಮೇಲಿನ ಲೋಕಗಳನ್ನು ನುಂಗಿ, ಮೊದಲು ಹುಟ್ಟಿದ ಬೆಂಕಿ ಒಡೆದು ಪ್ರಕಾಶಿಸುವ ಬ್ರಹ್ಮಾಂಡದ ಹೊಸದಾದ ಖಂಡ ಖಂಡಗಳಲ್ಲಿ ಅಲ್ಲಲ್ಲಿ ಭೇದಿಸಿ ಕೊಂಡು ಹೋಗಿ ಮೇಲಿನ ಆವರಣದ ಜಲದಲ್ಲಿ ಸೇರಿ, ಮಹಾಪ್ರಳಯದ ಜಲಮಯವಾದಂತೆ ಆ ನೀರು ಕಣ್ಣಿಗೆ ಕಾಣಿಸಿತು. ಅದನ್ನು ಏನೆಂದು ಹೇಳಲಿ? ೩೧. ಕೇಳಯ್ಯಾ, ಸಿದ್ಧರಾಮ, ಅನಂತರ ಬಹುಸ್ವಲ್ಪಕಾಲದಲ್ಲಿಯೇ ಎಲ್ಲ ಲೋಕಗಳ ಸಂತತಿಯೂ ಮುಳುಗಿಹೋಯಿತು. ಇಂದ್ರ-ಬ್ರಹ್ಮರುಗಳು ಏನಾದರು ಎಂಬುದನ್ನು ನಾನು ಕಂಡು ಕೇಳಿ ತಿಳಿಯೆನು. ಆ ಮಹಾಜಲದಲ್ಲಿ ಆಲದೆಲೆಯ ಮೇಲೆ ಮಲಗಿ ಒಂದು ಬಾರಿ ಮುಳುಗುತ್ತ ತಕ್ಷಣ ತೇಲುತ್ತ ಒಬ್ಬನೇ ಕುಡಿದ ನೀರನ್ನು ಉಗುಳುತ್ತ ಕಣ್ಣುಗುಡ್ಡೆಗಳು ತಿರುಗುತ್ತಿರಲು ಮಹಾವಿಷ್ಣುವು ಮನಸ್ಸಿನಲ್ಲಿ ಭಯಪಡುತ್ತ ಹೀಗೆಂದನು.

CC-0. Jangamwadi Math Collection. Digitized by eGangotri

ಕಡೆಗಾಲದಂಧತಮವಿನಿತಿಲ್ಲವಿಲ್ಲವಾ
ಮೃಡನಂದು ಕಾಲ ಕಾಮ ತ್ರೈಪುರಂಗಳಂ
ಸುಡುವ ಕಣ್ಗಿಚ್ಚಿನಿತ್ತಲ್ಲಂತ್ಯದಗ್ನಿಯುತೋದಕಪ್ರಳಯಂಗಳ
ಕಡುಪಿನಿತ್ತಿಲ್ಲ ಕಾಲಪ್ರಳಯವಾಗಲೊಡ
ನೊಡನೆ ತನಗಂತ್ಯವಿಲ್ಲದೆಯುದಕಮಯವಾಯ್ತು
ನುಡಿವುದಿನ್ನೇನೆನುತ್ತಚ್ಚರಿಯೊಳಾ ಹರಿ ಶಿವಧ್ಯಾನದಿಂದಿರ್ದನು ೩೨

ಬೆರಗಾದಳಿತ್ತ ಗಿರಿಸುತೆ ಮತ್ತೆ ಶಂಕರಂ
ಮರುಗಿ ಲೋಕಕೆ ಲಯಂ ಬಂದುದಕಟೆಂದೊಂದು
ಕಿರುಜಡೆಯ ಕೊನೆಯನಾ ಜಲದೊಳದ್ದಲ್ ಸರಸಿಜಾಂಡದೊಳಗಂ ಪೊರಗನು
ನೆರೆ ತೀವಿದುದಕಮೆಲ್ಲಂ ಸರ್ರನೈತಂದು
ಮಿರುಪ ಮುತ್ತಿನ ಮಣಿಯೊಲಾ ಜಡೆಯ ತುದಿಯೊಳಗೆ
ಮೆರೆಯಲದನೀಶ್ವರಂ ಶಿರದೊಳಗೆ ಧರಿಸಿ ಗಂಗಾಧರತ್ವಮನಾಂತನು ೩೩

ಆದುದೀಶಂಗೆ ಗಂಗಾಧರಸುಲೀಲೆ ನೆರೆ
ಪೋದುದಖಿಳಾವನಿಯ ಪೂರ್ಣಜಲದೊದವು ಬಳಿ
ಕಾ ದಯಾನಿಧಿ ಶಂಕರಂ ಕರುಣದಿಂದಖಿಳಜಗವೆಸೆಯಲೆಂದೆನಲ್ಕೆ
ಆ ದಿವಿಜರಾ ದನುಜರಾ ಮನುಜರಾವುರಗ
ರಾದಿ ನಾನಾ ಲೋಕವೆಂದಿನಂತೆಸೆದರೆನ
ಲಾದರದೆ ಸಿದ್ಧರಾಮಂ ವಿಸ್ಮಯಂಬಟ್ಟು ಕೈಮುಗಿವುತಿಂತೆಂದನು ೩೪

೩೨. ಪ್ರಳಯಕಾಲದ ಅಂಧಕಾರ ಅಷ್ಟಾಗಿ ಇಲ್ಲ. ಪರಮೇಶ್ವರನು ಆ ದಿನ ಯಮ, ಕಾಮ, ತ್ರಿಪುರಗಳನ್ನು ದಹಿಸಿದ ಕಣ್ಗಿಚ್ಚು ಇಷ್ಟಿರಲಿಲ್ಲ. ಪ್ರಳಯಕಾಲದ ಅಗ್ನಿ-ನೀರಿನ ಸಾಮರ್ಥ್ಯ ಇಷ್ಟಿಲ್ಲ. ಆ ಕಾಲದಲ್ಲಿ ಪ್ರಳಯವಾಗಲು ಕೂಡಲೆ ತನಗೆ ಸಾವಿಲ್ಲದೆ ಜಲಮಯವಾಯಿತು. ಹೇಳುವುದಿನ್ನೇನಿದೆ? ಎನ್ನುತ್ತ ಆಶ್ಚರ್ಯದಿಂದ ವಿಷ್ಣುವು ಶಿವನ ಧ್ಯಾನದಲ್ಲಿರುತ್ತಿದ್ದನು. ೩೩. ಇತ್ತ ಕಡೆ ಪಾರ್ವತಿ ಬೆರಗಾದಳು ಮತ್ತು ಶಿವನು ವ್ಯಥೆಗೊಂಡು ಲೋಕಕ್ಕೆ ನಾಶ ಬಂತೊ, ಅಯ್ಯೊ ಎಂದು ಒಂದು ಸಣ್ಣ ಜಡೆಯ ತುದಿಯನ್ನು ಆ ಮಹಾಜಲದಲ್ಲಿ ಅದ್ದಲು ಬ್ರಹ್ಮಾಂಡದ ಒಳಗೆ-ಹೊರಗೆ ಪೂರ್ಣವಾಗಿ ತುಂಬಿದ್ದ ನೀರೆಲ್ಲವೂ ಸರ್ರನೆ ಬಂದು ಹೊಳೆಯುವ ಮುತ್ತಿನ ಮಣಿಯಂತೆ ಆ ಜಡೆಯ ತುದಿಯೊಳಗೆ ಮೆರೆಯಲು ಈಶ್ವರನು ಅದನ್ನು ತನ್ನ ತಲೆಯಲ್ಲಿ ಧರಿಸಿ ಗಂಗಾಧರತ್ವವನ್ನು ಹೊಂದಿದನು. ೩೪. ಈ ರೀತಿ ಈಶ್ವರನಿಗೆ ಗಂಗಾಧರ ಸುಲೀಲೆ ಆಯಿತು. ಎಲ್ಲ ಲೋಕವನ್ನೂ ತುಂಬಿದ್ದ ನೀರಿನ ಹೆಚ್ಚಳ ಪೂರ್ಣವಾಗಿ ನಿವಾರಣೆಯಾಯಿತು. ಬಳಿಕ ಆ ದಯಾನಿಧಿಯಾದ ಶಂಕರನು ಕರುಣೆಯಿಂದ 'ಎಲ್ಲ ಲೋಕವೂ ಸೃಷ್ಟಿಯಾಗಲಿ' ಎನ್ನಲು ಆ ದೇವತೆಗಳು, ರಾಕ್ಷಸರು, ಮಾನವರು, ನಾಗರು ಮೊದಲಾದ ನಾನಾ ಲೋಕ ಎಂದಿನಂತೆ ಪ್ರಕಾಶಿಸಿತು ಎನ್ನಲು ಆದರದಿಂದ ಸಿದ್ಧರಾಮನು ವಿಸ್ಮಯಗೊಂಡ

CC-0. Jangamwadi Math Collection. Digitized by eGangotri

ಎಲೆ ಚೆನ್ನಬಸವೇಶ ತ್ರಿಪ್ರಳಯದೊಳ್ ಬಿಡದೆ
ನಳಿನೋದ್ಭವಾಂಡವಿರದಳಿದುದೆಂದೆನಗಿಂದು
ತಿಳಿಪಿದಿರಲಾ ಶಿವನದೆಂತಿರ್ದನಾ ಸಮಯದೊಳ್ ಪೇಳಿಮೆಂದೆನಲ್ಕೆ
ಬಳಿಕ ನಗುತೆಲೆ ರಾಮ ಕೇಳ್ ಶಿವನ ಪುರ್ಬುಗೊನೆ
ಯಲುಕದಿಂ ಸಕಲ ಬ್ರಹ್ಮಾಂಡಸೂತ್ರಂಗಳುರೆ
ಕಳಚಿ ಹೊಡುವುವೀಶ್ವರಂಗಿದೇನಚ್ಚರಿಯೆನುತ್ತೆ ಮತ್ತಿಂತೆಂದನು ೩೫

ಮರೆಯಲ್ಲ ನೋಡಲೌದುಂಬರದ ಮರದೊಳಿಡಿ
ಕಿರಿದ ಫಲದಂತಭವರೋಮಕೂಪಂಗಳೊಳ್
ತುರುಗಿಪ್ಪುವಖಿಳಬ್ರಹ್ಮಾಂಡಂಗಳಾ ಫಲಂ ಕಳಿತುದುರೆ ತತ್ತರುವಿಗೆ
ಮರುವೆಳಸು ಮೊದಲಂತೆ ವರುಷವರುಷಕೆ ಬಪ್ಪ
ತೆರದೆ ಬ್ರಹ್ಮಾಂಡಂಗಳಳಿದುದಿಸುತಿರ್ಪುವೀ
ಕರೆಗೊರಲನಾಟಕ್ಕಿದೇಂ ಚೋದ್ಯಮಲ್ಲಮೆಂದಿರದೆ ಮಗುಳಿಂತೆಂದನು ೩೬

ಕತ್ತಲೆಯ ಮನೆಯ ಮಣಿದೀಪದೊಲ್ ದಾವಾಗ್ನಿ
ಸುತ್ತಿರ್ದ ತಂಗೊಳದವೊಲ್ ಶರಧಿಯೊಳ್ ಶೋಭಿ
ಸುತ್ತಿರ್ಪ ವಡಬನಂತಂಧಕಾರಾಗ್ನಿವುದಕಂಗಳತಿದೂರದಲ್ಲಿ
ಬಿತ್ತರದೊಳೆಸೆಯಲಾ ಸಸಿಗಲ್ಲ ವೇದಿಕೆಯ
ನೆತ್ತಿಯನಡರ್ದಗಜೆಯೊಡಗೂಡಿ ನಲಿವುತ ನ
ಗುತ್ತೀಶನಂತುಗ್ಗೈದಂ ಶಿವಮಹಾತ್ಮೆ ಬಣ್ಣಿಸಲಾರ ವಶವೆಂದನು ೩೭

ಕೈ ಮುಗಿಯುತ್ತ ಈ ರೀತಿ ಹೇಳಿದನು. ೩೫. ಎಲೈ ಚೆನ್ನಬಸವೇಶ, ಮೂರು ಪ್ರಳಯ ಗಳಲ್ಲಿಯೂ ಬಿಡದೆ ಬ್ರಹ್ಮಾಂಡವು ನಾಶವಾಯಿತು ಎಂದು ನನಗೆ ಇಂದು ತಿಳಿಸಿದಿರಿ ಅಲ್ಲವೆ. ಆ ಶಿವನು ಆ ಸಮಯದಲ್ಲಿ ಯಾವ ರೀತಿ ಇದ್ದನು ? ಹೇಳಿ ಎನ್ನಲು ಅನಂತರ ನಗುತ್ತ ಎಲೈ ಸಿದ್ಧರಾಮ, ಕೇಳು ಹುಬ್ಬಿನ ಕೊನೆಯ ಅಲುಗಾಟದಿಂದಲೇ ಎಲ್ಲ ಬ್ರಹ್ಮಾಂಡಸೂತ್ರಗಳನ್ನು ಚೆನ್ನಾಗಿ ಕಳಚಿ ಮತ್ತೆ ಹೂಡುವ ಈಶ್ವರನಿಗೆ ಇದೇನು ಆಶ್ಚರ್ಯ ಎನ್ನುತ್ತ ಮತ್ತೆ ಈ ರೀತಿ ಹೇಳಿದನು. ೩೬. ಮುಚ್ಚುಮರೆಯಲ್ಲ, ಯೋಚಿ ಸಲು ಅತ್ತಿಯಮರದಲ್ಲಿ ತುಂಬಿರುವ ಹಣ್ಣಿನಂತೆ ಈಶ್ವರನ ರೋಮಕೂಪಗಳಲ್ಲಿ ಎಲ್ಲ ಬ್ರಹ್ಮಾಂಡಗಳೂ ಕಿಕ್ಕಿರಿದಿವೆ. ಆ ಹಣ್ಣು ಕಳಿತು ಕೆಳಕ್ಕೆ ಉದುರಲು ಆ ಮರಕ್ಕೆ ಮತ್ತೆ ಬೆಳೆ ಮೊದಲಿನಂತೆ ವರ್ಷ ವರ್ಷವೂ ಬರುತ್ತದೆ. ಅದರಂತೆಯೇ ಬ್ರಹ್ಮಾಂಡ ಗಳೂ ನಾಶವಾಗಿ-ಹುಟ್ಟುತ್ತಿರುತ್ತವೆ. ಈ ವಿಷಕಂಠನ ಲೀಲೆಗೆ ಇದೇನು ಆಶ್ಚರ್ಯ ವಲ್ಲ ಎಂದು ಮತ್ತೆ ಹೀಗೆಂದನು. ೩೭. ಕತ್ತಲೆಯ ಮನೆಯ ಬೆಳಗುವ ಮಣಿದೀಪ ದಂತೆ, ಕಾಳ್ಗಿಚ್ಚು ಕೂಡಿರುವ ತಂಪಾದ ಕೊಳದಂತೆ, ಸಮುದ್ರದಲ್ಲಿ ಶೋಭಿಸುತ್ತಿರುವ ಬಡಬಾಗ್ನಿಯಂತೆ-ಅಂಧಕಾರ, ಅಗ್ನಿ, ಜಲಗಳು ದೂರದಲ್ಲಿ ವಿಸ್ತಾರವಾಗಿ ಪ್ರಕಾಶಿಸಲು ಚಂದ್ರಕಾಂತಶಿಲೆಯ ವೇದಿಕೆಯ ಮೇಲೆ ಕುಳಿತಿದ್ದ ಪಾರ್ವತಿಯೊಡಗೂಡಿ ನಲಿಯುತ್ತ, ನಗುತ್ತ ಈಶ್ವರನು ಈ ರೀತಿ ಮಾಡಿದನು. ಶಿವನ ಮಹಿಮೆಯನ್ನು ಬಣ್ಣಿಸಲು ಯಾರಿಗೆ

CC-0. Jangamwadi Math Collection. Digitized by eGangotri

ಇಂತೆಸೆವ ಚೆನ್ನಬಸವೇಶನ ಪುರಾಣವಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತವಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖವಂ ಸಕಲಭೋಗಮುನ
ನಂತಸೌಭಾಗ್ಯವಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ೩೮

ನಲವತ್ತಾರನೆಯ ಸಂಧಿ ಸಂಪೂರ್ಣ

ಸಾಧ್ಯ ಎಂದನು. ೩೮. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವಪುರಾಣವನ್ನು ಸಂತೋಷದಿಂದ ಪ್ರತಿಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದವರಿಗೆ, ವಾಚನಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ನಲವತ್ತಾರನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ನಲವತ್ತೇಳನೆಯ ಸಂಧಿ

ಸೂಚನೆ : ಅಂಧಕಾರಂ ಬಲಿದು ಶಿಶುವಾದ ಕಾರಣದೊ
ಳಂಧಕಾಸುರನೆಂಬ ಪೆಸರಾಂತು ಪೆಚ್ಚಿದ ಮ
ಹಾಂಧಕಾರದೊಳೆ ದಿವಿಜರನಟ್ಟಿ ಕೈಲಾಸಪುರಕೆ ದಾಳಿಯನಿಟ್ಟನು

ಅರುಣಜಾತ್ಯಂಧನಂದನರನನ್ಯಾಯದಿಂ
ಧುರದೊಳಗೆ ಮಥಿಸಿದವರಯ್ಯಂದಿರಾತ್ಮಜರ
ನರಿದಾಳ್ದನಂಗನೆಯ ತಾಯ ತನುಜನ ಹಿಂದಣಾತನೊಂದೇ ಭಾಗಮುಂ
ವರಮುನಿಯ ಪಟ್ಟಣದ ಪೆಸರೊಳೊಗೆದಾಕೆಯುಂ
ಬೆರಸಿ ಧರಿಸಿದ ಲಸತ್ಪಂಪಾವಿರೂಪಾಕ್ಷ
ಶರಣಜನಸಂರಕ್ಷ ರಕ್ಷಿಸೆಮ್ಮಂ ಬಹಳಕರುಣದಿಂದನವರತವು ೧

ಆಲಿಸೈ ಸಿದ್ಧರಾಮೇಶ ಕನಕಾಂಬಕಂ
ಭಾಳಾಕ್ಷನಂ ಕುರಿತು ಪುತ್ರನಂ ಬೇಡಿ ಬಹು
ಕಾಲಪರಿಯಂತರಂ ತಪವನಾಚರಿಸಲೀಶ್ವರನರಿದು ಕರುಣದಿಂದೆ
ಕಾಳಿ ತನ್ನಕ್ಷಿಯಂ ಮುಚ್ಚಲದರಿಂದಾದ
ಕಾಳಗತ್ತಲೆಯ ಶಿಶುವಿರೆ ನೋಡಿ ಕೊಂಡು ಸ
ಲ್ಲೀಲೆಯಿಂದಾ ಖಳಂಗೀವೆನೆನುತಗಜೆಯುಂ ಕೂಡಿ ನಡೆತರುತಿರ್ದನು ೨

ಸೂಚನೆ : ಅಂಧಕಾರ ಹೆಚ್ಚಿ ಮಗುವಾದ ಕಾರಣದಿಂದ ಅಂಧಕಾಸುರನೆಂಬ ಹೆಸರನ್ನು ಪಡೆದು ಕೊಬ್ಬಿ ಅತಿಯಾದ ಅಂಧಕಾರದಲ್ಲಿಯೇ ದೇವತೆಗಳನ್ನು ಸೋಲಿಸಿ ಕೈಲಾಸಕ್ಕೆ ದಾಳಿಯಿಟ್ಟನು. ೧. ಸೂರ್ಯ ಮತ್ತು ಹುಟ್ಟುಕುರುಡನಾದ ಧೃತರಾಷ್ಟ್ರ ಇವರ ಮಕ್ಕಳಾದ ಕರ್ಣ ಮತ್ತು ಕೌರವರನ್ನು ಯುದ್ಧದಲ್ಲಿ ಅನ್ಯಾಯದಿಂದ ಕೊಂದವನಾದ ಅರ್ಜುನನ ಅಯ್ಯಂದಿರ ಎಂದರೆ ತಂದೆಯಾದ ಇಂದ್ರನ (ಗೌರವಾರ್ಥದಲ್ಲಿ ಬಹುವಚನ) ಮಗನಾದ ವಾಲಿಯನ್ನು ಸಂಹರಿಸಿದ ಸಮರ್ಥನಾದ ಶ್ರೀ ರಾಮನ ಪತ್ನಿಯಾದ ಸೀತೆಗೆ ತಾಯಿಯಾದ ಭೂಮಿಯ ಮಗನಾದ ಕುಜನ (ಮಂಗಳವಾರ) ಹಿಂದಿನವನ, ಅಂದರೆ ಚಂದ್ರನ ಅರ್ಧಭಾಗವನ್ನೂ ಮತ್ತು ಪಟ್ಟಣಕ್ಕೆ ಪರ್ಯಾಯನಾಮವಾದ ನಿಗಮದ ಹೆಸರಾದ ಶ್ರುತಿ (ವೇದ) ಎಂದರೆ ಕಿವಿ–ಜಹ್ನುಮುನಿಯ ಕಿವಿಯಲ್ಲಿ ಜನಿಸಿದ ಗಂಗೆಯನ್ನು ಧರಿಸಿದ ಶರಣಜನಸಂರಕ್ಷಕನಾದ ಪಂಪಾವಿರೂಪಾಕ್ಷನೇ ನಮ್ಮನ್ನು ಯಾವಾಗಲೂ ಕರುಣೆಯಿಂದ ಕಾಪಾಡು. ೨. ಕೇಳಯ್ಯ, ಸಿದ್ಧರಾಮ, ಕನಕಾಂಬಕನು ಶಿವನನ್ನು ಕುರಿತು ಮಗನನ್ನು ಬೇಡಿ ಬಹಳಕಾಲದವರೆಗೆ ತಪಸ್ಸನ್ನು ಆಚರಿಸಿದನು. ಈಶ್ವರನು ಅದನ್ನು ತಿಳಿದು ಕರುಣೆಯಿಂದ, ಗಿರಿಜೆಯು ತನ್ನ ಕಣ್ಣನ್ನು ಮುಚ್ಚಲು ಅದರಿಂದ ಉಂಟಾದ ಭೀಕರವಾದ ಕತ್ತಲೆಯ ಮಗುವಿರಲು ಅದನ್ನು ನೋಡಿ, ಅದನ್ನು

CC-0. Jangamwadi Math Collection. Digitized by eGangotri

ಅನ್ನೆಗಂ ಬರಬರಲ್ ಕೈಲಾಸಗಿರಿತಟದೊ
ಳುನ್ನತತಪಂಗೆಯ್ವ ಕನಕಾಕ್ಷನಿದಿರೊಳ್ ಪ್ರ
ಸನ್ನತೆಯುನೈದಿ ನಿನ್ನಿಷ್ಟಮಂ ಬೇಡೆನಲ್ ಕಣ್ದೆರೆದವಂ ಕಾಣುತೆ
ಪನ್ನಗಾಭರಣನಂ ನುತಿಗೆಯ್ದು ಬೇಳ್ಪುದೆನ
ಗಿನ್ನೇಂ ವರಂ ಸುರಪಬ್ರಹ್ಮಾಚ್ಯುತಾದ್ಯರಂ
ತನ್ನ ಬಲ್ಪಿಂ ಗೆಲ್ವ ಕುವರನಂ ಪಾಲಿಸೆನಲೀಶನೊಲಿದಿಂತೆಂದನು ೩

ಆದೊಡಂತಪ್ಪ ಪ್ರತಾಪಶಿಶುವಿದು ಮಹ
ತ್ತಾದಂಧಕಾರಸ್ವರೂಪಿದಾ ಹರಿವಿಧಿಗ
ಳಾದಿ ಸುರರಂ ತನ್ನ ಬಾಹುಬಲದಿಂ ಗೆಲ್ದು ಸರ್ವಾವನೀತಳವನು
ಸಾಧಿಸಿ ಸಗರ್ವದಿಂ ಬಾಳ್ವುದಿದು ಕೊಳ್ಳೆನು
ತ್ತಾದರದೊಳಾ ಶಿಶುವನಾ ಖಳಂಗಿತ್ತು ಬಳಿ
ಕಾ ದಯಾಂಬುಧಿ ರಜತಗಿರಿವೊಕ್ಕು ಗಿರಿಜೆಯೊಡಗೂಡಿ ಸುಖದಿಂದಿರ್ದನು ೪

ಇತ್ತಲೀ ಕನಕಲೋಚನನತುಳಸಂತಸಂ
ಬೆತ್ತು ಶಿಶುವೆರಸಿ ಗುಡಿತೋರಣದ ವಿಭವದಿಂ
ದೆತ್ತುವಾರತಿಗಳಿಂ ಬಹುವಾದ್ಯಘೋಷದಿಂ ಭಟ್ಟರ ಪೊಗಳ್ಕೆಯಿಂದೆ
ಮುತ್ತೈದೆಯರ ಪರಕೆಸೇಸೆಗಳನುರೆ ಕೈಕೊ
ಳುತ್ತೆ ಪೊಳಲೊಳ್ ಮೆರೆದು ಮಂದಿರಂಬೊಕ್ಕು ತ
ನ್ನುತ್ತಮಾಂಗನೆಗಾ ಕುಮಾರಕನನಿತ್ತಂ ಹಿರಣ್ಯಾಕ್ಷನುತ್ಸವದೊಳು ೫

ತೆಗೆದುಕೊಂಡು ವಿನೋದದಿಂದ ಆ ರಾಕ್ಷಸನಿಗೆ ಕೊಡುತ್ತೇನೆಂದು ಪಾರ್ವತೀಸಮೇತನಾಗಿ ಬರುತ್ತಿದ್ದನು. ೩. ಹಾಗೆ ಬರುತ್ತಿರಲು ಕೈಲಾಸಪರ್ವತದ ತಪ್ಪಲಲ್ಲಿ ಉಗ್ರವಾದ ತಪಸ್ಸನ್ನು ಮಾಡುವ ಕನಕಾಕ್ಷನ ಎದುರಿನಲ್ಲಿ ಪ್ರತ್ಯಕ್ಷನಾಗಿ ನಿನ್ನ ಅಭೀಷ್ಟವನ್ನು ಕೇಳು ಎನ್ನಲು ಅವನು ಕಣ್ದೆರೆದು ಸರ್ಪಭೂಷಣನನ್ನು ನೋಡಿ ಸ್ತೋತ್ರಮಾಡಿ ಬೇಡುವುದಾದರೆ ಬೇರೆ ನನಗಿನ್ನೇನು ವರ ಬೇಕು. ದೇವೇಂದ್ರ, ಬ್ರಹ್ಮ, ವಿಷ್ಣು ಮೊದಲಾದವರನ್ನೂ ತನ್ನ ಸಾಮರ್ಥ್ಯದಿಂದ ಗೆಲ್ಲುವ ಮಗನನ್ನು ದಯಪಾಲಿಸು ಎನ್ನಲು ಈಶ್ವರನು ಅವನಿಗೆ ಒಲಿದು ಹೀಗೆಂದನು. ೪. ಹಾಗಾದರೆ ಅಂತಹ ಪ್ರತಾಪಶಾಲಿಯಾದ ಮಗುವಿದು, ಮಹತ್ತಾದ ಅಂಧಕಾರ ಸ್ವರೂಪವಿದು. ಆ ವಿಷ್ಣು-ಬ್ರಹ್ಮ ಮೊದಲಾದ ದೇವತೆಗಳನ್ನು ಬಾಹುಬಲದಿಂದ ಗೆದ್ದು ಎಲ್ಲ ಭೂತಳವನ್ನೂ ಸಾಧಿಸಿ ಗರ್ವದಿಂದ ಬಾಳುತ್ತದೆ, ಇದನ್ನು ತೆಗೆದುಕೊ ಎನ್ನುತ್ತ ಆದರದಿಂದ ಆ ಮಗುವನ್ನು ರಾಕ್ಷಸನಿಗೆ ಕೊಟ್ಟು ಅನಂತರ ದಯಾಸಾಗರನಾದ ಈಶ್ವರನು ರಜತಗಿರಿಯನ್ನು ಸೇರಿ ಪಾರ್ವತೀಸಮೇತನಾಗಿ ಸುಖವಾಗಿದ್ದನು. ೫. ಇತ್ತಕಡೆ ಹಿರಣ್ಯಾಕ್ಷನು ಬಹು ಸಂತೋಷಗೊಂಡನು. ಮಗುವಿನೊಡಗೂಡಿ ಬಾವುಟ ತೋರಣಗಳ ವೈಭವದಿಂದ, ಎತ್ತುವ ಆರತಿಗಳಿಂದ, ಬಹಳವಾದ ವಾದ್ಯಗಳ ಧ್ವನಿಯಿಂದ, ವಂದಿಮಾಗಧರ ಹೊಗಳಿಕೆಯಿಂದ, ಮುತ್ತೈದೆಯರ ಹರಕೆ ಅಕ್ಷತೆಗಳನ್ನು ಸ್ವೀಕರಿಸುತ್ತ ಪಟ್ಟಣದಲ್ಲಿ ಮೆರೆದು

CC-0. Jangamwadi Math Collection. Digitized by eGangotri

ನೋಡಿದಳ್ ತರುಣಿ ಹರುಷಾಶ್ರುರಸದೊಳ್ ಮುಳುಂ
ಗಾಡಿದಳ್ ಕುವರನಂ ತೆಗೆದಪ್ಪಿ ತೊರೆದ ಮೊಲೆ
ಯೂಡಿದಳ್ ತೂಪಿರಿದು ಪರಸಿ ಸಲೆ ಜೋಗುಳಂ ಪಾಡಿದಳ್ ಮೋಹದಿಂದೆ
ಪೂಡಿದಳ್ ಪೊಂದೊಟ್ಟಿಲಂ ಸಖಿಯರೊಡನೆ ತೂ
ಗಾಡಿದಳ್ ಪತಿಯ ಪೌರುಷಕೆ ತಾಂ ಮೆಚ್ಚಿ ಕೊಂ
ಡಾಡಿದಳ್ ಕನಕಾಕ್ಷನರ್ಧಾಂಗಿ ಸುತಮೋಹದಿಂದದೇವಣ್ಣಿಸುವೆನು ೬

ವರಶುಕ್ರನೇಮದಿಂದಾದುದಾಗಳೆ ನಾಮ
ಕರಣಮಿಶಂ ನುಡಿದೊಲಂಧಕಾಸುರನೆಂದು
ಪಿರಿದುವಂ ದಿವಸದಿವಸಂ ಮಾಸ ವರುಷಂಗಳೆಂದೆನಲ್ ಭೀಕರದೊಳು
ಸುರಕುಲದ ಮಿಳ್ತು ಬೆಳೆವಂತಖಿಳಮಾಯೆಗಳ
ಗಿರಿ ಪೆಚ್ಚುವಂತೆ ಪಾಪಂ ರೂಪುವೆತ್ತು ಸಂ
ಚರಿಪಂತೆ ಬೆಳೆವ್ರತಿರ್ದಂ ಮಹಾಕಾಯನದನೇನೆಂದು ಬಣ್ಣಿಸುವೆನು ೭

ಇಂತಿರಲ್ ಕನಕಲೋಚನ ಹಿರಣ್ಯಕಶಿಪುಗ
ಳಿಂತಿರ್ವರುಂ ಹರಿವರಾಹನರಸಿಂಹರೂ
ಪಿಂ ತಡೆಯುದಳಿದು ಪೋಗಲ್ ಬಳಿಕ್ಕವರವರ ದೇಶದುರ್ಗಂಗಳೊಳಗೆ
ಮುಂತೊಪ್ಪುವಗ್ರಜಾನುಜ ಪುತ್ರ ಮಿತ್ರ ಸಾ
ಮಂತ ಸೇನಾನಿ ಸಚಿವಪ್ರಮುಖದಾನವರ
ಸಂತತಿಗಳುಂ ಶುಕ್ರನೇಮದಿಂದಂಧಕಾಸುರನೆಡೆಗೆ ನಡೆತಂದರು ೮

ಅರಮನೆಯನ್ನು ಸೇರಿ ತನ್ನ ರಾಣಿಗೆ ಆ ಕುಮಾರನನ್ನು ಉತ್ಸಾಹದಿಂದ ಕೊಟ್ಟನು. ೬. ಆ ತರುಣಿ ಮಗುವನ್ನು ನೋಡಿ ಸಂತೋಷಸಾಗರದಲ್ಲಿ ಮುಳುಗಾಡಿದಳು. ಮಗನನ್ನು ತೆಗೆದು ಆಲಿಂಗಿಸಿ ತೊರೆದ ಮೊಲೆಯನ್ನು ಉಣಿಸಿದಳು. ಮುದ್ದಾಡಿ ಹರಸಿ ಜೊಗುಳವನ್ನು ಹಾಡಿದಳು. ಮೋಹದಿಂದ ಚಿನ್ನದ ತೊಟ್ಟಿಲನ್ನು ಸಿದ್ಧಗೊಳಿಸಿದಳು. ಸಖಿಯರ ಜೊತೆಗೂಡಿ ತೂಗಿದಳು. ಮಗನ ಮೇಲಿನ ಮೋಹದಿಂದ ಕನಕಾಕ್ಷನ ಅರ್ಧಾಂಗಿಯು ತನ್ನ ಗಂಡನ ಪರಾಕ್ರಮಕ್ಕೆ ಮೆಚ್ಚಿ ಕೊಂಡಾಡಿದಳು. ಅದನ್ನು ಏನೆಂದು ವರ್ಣಿಸಲಿ ? ೭. ಪೂಜ್ಯರಾದ ಶುಕ್ರಾಚಾರ್ಯನ ಅಪ್ಪಣೆಯಿಂದ ಆಗಲೇ ಈಶ್ವರನು ಹೇಳಿದಂತೆ ಅಂಧಕಾಸುರನೆಂದು ನಾಮಕರಣವಾಯಿತು. ದಿವಸ-ದಿವಸ, ತಿಂಗಳು-ವರ್ಷಗಳು ದೊಡ್ಡದಾಗಿ ಬೆಳೆದುವೆನ್ನುವಂತೆ, ಭಯಂಕರವಾಗಿ ದೇವಕುಲದ ಮೃತ್ಯು ಬೆಳೆಯುವಂತೆ, ಎಲ್ಲ ಮಾಯೆಗಳ ಪರ್ವತ ಹೆಚ್ಚಾಗುವಂತೆ, ಪಾಪವು ರೂಪು ಧರಿಸಿ ಓಡಾಡುವಂತೆ ಮಹಾಕಾಯನಾದ ಅವನು ಬೆಳೆಯುತ್ತಿದ್ದನು. ೮. ಹೀಗಿರಲು ಕನಕಲೋಚನ-ಹಿರಣ್ಯಕಶಿಪುಗಳಿಬ್ಬರೂ ವಿಷ್ಣುವಿನ-ವರಾಹ ಮತ್ತು ನರಸಿಂಹ ಅವತಾರಗಳಿಂದ ನಿಲ್ಲದೆ ನಾಶವಾದರು. ಅನಂತರ ಅವರವರ ದೇಶದುರ್ಗಗಳೊಳಗೆ ವಾಸವಾಗಿದ್ದ ಅಣ್ಣ-ತಮ್ಮ, ಮಗ-ಸ್ನೇಹಿತ, ಸಾಮಂತ-ಸೇನಾನಿ, ಮಂತ್ರಿ ಮೊದಲಾದ ಪ್ರಮುಖ ರಾಕ್ಷಸರ ಸಂತತಿಗಳೂ ಶುಕ್ರನ ಅಪ್ಪಣೆಯಂತೆ ಅಂಧಕಾಸುರನ ಬಳಿಗೆ

CC-0. Jangamwadi Math Collection. Digitized by eGangotri

ಈ ಜಗಂಗಳೊಳ್ಳಿದೆ ಪೆಸರ್ವಡೆದ ದಾನವಸ
ಮ್ಞಾಜವ್ಯೈತಂದಂಧಕಾಸುರಂಗಂದಸುರ
ರಾಜಪಟ್ಟಂಗಟ್ಟಿ ಕೈಮುಗಿದು ಕಾಣ್ಕೆಗಳನಿಕ್ಕಿ ನಿಂದೋಲೈಸಲು
ತೇಜಮುಗ್ಗಳಿಸಿದುದು ದಿನದಿನಕ್ಕವಗೆ ನಾ
ನಾಜಗದೊಳವನಾಣೆಯಾಜ್ಞೆ ಸಂದುದು ಧರೆಗೆ
ಸೋಜಿಗಮುದಾಯ್ತವನ ವರ್ತನಂ ಸಿದ್ಧರಾಮೇಶ ಕೇಳ್ ಕೌತುಕವನು ೯

ಸೊಕ್ಕಿದಾನೆಗೆ ಕೈದು ಪಸಿದ ಪೊಸಪಾವಿಂಗೆ
ಪಕ್ಕಮುಬ್ಬರಿಪ ಪೆರ್ಬುಲಿಗೆ ಧೈರ್ಯಂ ನವತ
ಮಕ್ಕ ಕಠಿಣತೆಗಳೊದಗುವುವೆಂತುಟಂತುಟಾ ದೈತ್ಯರ ಸಹಾಯುಮಾಗೆ
ದಿಕ್ಕುದಿಕ್ಕಿಂಗೆ ದಾಳಿಯುನಿಟ್ಟು ಮಲೆತರಂ
ಪೊಕ್ಕಲ್ಲಿ ಪೊಕ್ಕು ಸಂಹರಿಸುತ್ತೆ ಸಕಲಲೋ
ಕಕ್ಕೆ ತನ್ನಾಜ್ಞೆಯುಂ ಪಸರಿಸಿದನಾ ಖಳಂ ಪೇಳ್ವುದೇನವನದಟನು ೧೦

ಸಪ್ತಾಬ್ಧಿಗಳನೊಂದಿನಂ ದಾಂಟಿ ತನ್ಮಧ್ಯ
ಸಪ್ತಸದ್ವೀಪಂಗಳಂ ಕಟ್ಟಿಕೊಂಡಿಂದ್ರ
ಸಪ್ತಾರ್ಚಿರಾಜಿ ದಿಕ್ಪಾಲರಂ ಸದೆದವರ ಲೋಕಂಗಳಂ ಸಾಧಿಸಿ
ಸಪ್ತಾಶ್ವ ಚಂದ್ರ ವಸು ಮನುಗಳಂ ಬಡಿದು ದ್ವಿ
ಸಪ್ತ ಲೋಕಂಗಳ್ಗೆ ಠಾಣೆಯುವನಿಟ್ಟು ವಿಧಿ
ಸಪ್ತತ್ರಯಾವತಾರಾಧಿಪರನೆಬ್ಬಟ್ಟಿದಂ ಖಳಂ ಸಾಮಾನ್ಯನೇ ೧೧

ಬಂದವು. ೯. ಈ ಪ್ರಪಂಚದಲ್ಲಿ ಉತ್ತಮ ಖ್ಯಾತಿ ಪಡೆದ ರಾಕ್ಷಸಸಮಾಜ ಬಂದು ಅಂಧಕಾಸುರನಿಗೆ ಆ ದಿನ ಅಸುರರಾಜಪಟ್ಟವನ್ನು ಕಟ್ಟಿ ಕೈಮುಗಿದು ಕಾಣಿಕೆಗಳನ್ನು ಕೊಟ್ಟು ಸೇವಿಸಿತು. ದಿನದಿನಕ್ಕೆ ಅವನ ಪ್ರತಾಪ ಹೆಚ್ಚಾಯಿತು. ನಾನಾ ಜಗತ್ತಿನಲ್ಲಿ ಅವನ ಆಣೆ ಆಜ್ಞೆಗಳು ನಡೆದುವು. ಅವನ ವರ್ತನೆ ಭೂಮಿಗೆ ಸೋಜಿಗವನ್ನುಂಟು ಮಾಡಿತು. ಸಿದ್ಧರಾಮ ಕೌತುಕವನ್ನು ಕೇಳು. ೧೦. ಮದಿಸಿದ ಆನೆಗೆ ಅಂಕುಶ ಆಯುಧ, ಹಸಿದ ಹೊಸ ಹಾವಿಗೆ ರೆಕ್ಕೆ, ಅಬ್ಬರಿಸುವ ಹೆಬ್ಬುಲಿಗೆ ಧೈರ್ಯ, ಹೊಸ ಕತ್ತಲೆಗೆ ಕಾಠಿಣ್ಯಗಳು ಯಾವ ರೀತಿ ಒದಗುವುದೋ ಅದರಂತೆ ಅವನಿಗೆ ರಾಕ್ಷಸರ ಸಹಾಯ ದೊರೆಯಲು ದಿಕ್ಕುದಿಕ್ಕಿಗೆ ದಾಳಿಯಿಟ್ಟು, ಗರ್ವಿಸಿ ಎದುರಿಸಿದವರನ್ನು ಹೋದಲ್ಲಿ ಹೊಕ್ಕು ಸಂಹಾರ ಮಾಡುತ್ತ ಎಲ್ಲ ಲೋಕದಲ್ಲಿಯೂ ತನ್ನ ಆಜ್ಞೆಯನ್ನು ಆ ರಾಕ್ಷಸನು ಹರಡುತ್ತಲಿದ್ದನು. ಅವನ ಪರಾಕ್ರಮವನ್ನು ಏನೆಂದು ಹೇಳುವುದು ? ೧೧. ಒಂದು ದಿನ ಸಪ್ತ ಸಮುದ್ರಗಳನ್ನೂ ದಾಟಿ ಅದರ ಮಧ್ಯದಲ್ಲಿರುವ ಏಳು ದ್ವೀಪಗಳನ್ನು ಸ್ವಾಧೀನಪಡಿಸಿಕೊಂಡು ಇಂದ್ರ-ಅಗ್ನಿ ಮೊದಲಾದ ದಿಕ್ಪಾಲಕರನ್ನು ಸೋಲಿಸಿ ಅವರ ಲೋಕಗಳನ್ನು ಗೆದ್ದು, ಸೂರ್ಯ-ಚಂದ್ರ, ವಸು ಮನುಗಳನ್ನು ಬಡಿದು ಹದಿನಾಲ್ಕು ಲೋಕಗಳಲ್ಲಿಯೂ ಬೀಡುಬಿಟ್ಟು ಬ್ರಹ್ಮ-ವಿಷ್ಣುಗಳನ್ನು ಬೆನ್ನಟ್ಟಿದನು.

CC-0. Jangamwadi Math Collection. Digitized by eGangotri

ಗೂಳೆಯಂ ತೆಗೆದು ಹರಿಮುಖ್ಯರೆಲ್ಲರ್ ಬಂದು
ಪಾಳೆಯಮನಿಳಿದಿರಾ ರಜತಗಿರಿಯೊಳ್ ಸುರರ
ಸೂಳೆಯರನೆಲ್ಲರಂ ಸೆರೆವಿಡಿದು ತನಗೆ ಸರಿಯಿಲ್ಲೆಂದು ಬಲ್ಬಿರುದಿನ
ಕಾಳೆಯಂ ಪಿಡಿಸಿ ಬಲದಿಂ ಚತುಸ್ಸಾಗರದ
ವೇಳೆಯು ಧರಾಮಂಡಲಂಗಳಂ ಸಂತಸದೊ
ಳಾಳೆಯುಂಧಾಸುರಂ ತತ್ಖಳನ ಕೀರ್ತಿ ಮೂಜಗದೊಳಗೆ ಪಸರಿಸಿದುದು ೧೨

ಮಾರ್ಮಲೆವರಿಲ್ಲವೆಲ್ಲೆಲ್ಲಿಯುಂ ರಕ್ಕಸನ
ದೋರ್ಮಹಿಮೆ ಮಡಲಿರಿದು ಪರ್ಬಿದುದು ತಾನಲ್ಲ
ದಾರ್ಮತ್ತದೊರ್ವರೀಜಗಕೊಡೆಯರಿಲ್ಲವೆಂದೇ ಬಗೆದು ತನ್ನ ಮನದ
ಪೆರ್ಮೆಯಿಂ ಮತ್ತತ್ವಮಂ ತಾಳ್ದಿರುತ್ತೆ ನೇ
ಸರ್ಮೂಡಿಬರ್ಪಕಾಲದೊಳೊಂದಿನಂ ರತ್ನ
ಭರ್ಮನಿರ್ಮಾಣದಾಸ್ಥಾನದೊಳ್ ಖಳಶಿರೋಮಣಿಯೋಲಗಂಗೊಟ್ಟನು ೧೩

ಓರೊರ್ವರಂ ಮುಂಚಿ ಬಂದುದವನೋಲಗಕೆ
ಕಾರೊಡಲ ಕೆಮ್ಮಿಸೆಗಳ ಕೆಂಡಗಣ್ಣ ಹೆ
ಮ್ಮಾರಿಮೊಗಗಳ ಬಿಗಿದ ಹುಬ್ಬುಗಳ ಬಲ್ಕೋರೆದಾಡೆಗಳ ಸಲೆಕೊಬ್ಬಿದ
ತೋರದೊಡೆಗಳ ತೋಳ್ಗಳೊಳಗಾಂತ ಕೈದುಗಳ
ಹೇರುರದ ಹಿಂಗಾಲ ಬಿರುದುಹಾಹೆಗಳಹಂ
ಕಾರದುಬ್ಬಿನ ದಡಿಗರಕ್ಕಸರ್ ಕೋಟಾನುಕೋಟಿಗಳದೇನೆಂಬೆನು ೧೪

ರಾಕ್ಷಸನೇನು ಸಾಮಾನ್ಯನೆ ? ೧೨. ವಿಷ್ಣು ಮೊದಲಾದವರೆಲ್ಲರೂ ವಲಸೆ ಹೊರಟು ಬಂದು ಹಿಮಾಲಯದಲ್ಲಿ ಪಾಳೆಯ ಹಾಕಿದರು. ದೇವಗಣಿಕೆಯರೆಲ್ಲರನ್ನೂ ಸೆರೆಹಿಡಿದು ತನಗೆ ಎಣೆಯಿಲ್ಲ ಎಂಬ ದೊಡ್ಡ ಬಿರುದಿನ ಕಹಳೆಯನ್ನು ಹಿಡಿಸಿ ಪರಾಕ್ರಮದಿಂದ ಹದಿನಾಲ್ಕು ಸಾಗರಪರ್ಯಂತವಾದ ಭೂಮಂಡಲವನ್ನು ಸಂತೋಷದಿಂದ ಅಂಧಕಾಸುರನು ಆಳಲು ಆ ರಾಕ್ಷಸನ ಕೀರ್ತಿ ಮೂರು ಲೋಕದಲ್ಲಿಯೂ ಹರಡಿತು. ೧೩. ಗರ್ವಿಸಿ ಎದುರು ನಿಲ್ಲುವವರಿಲ್ಲ, ಎಲ್ಲೆಲ್ಲಿಯೂ ರಾಕ್ಷಸನ ಬಾಹುಬಲದ ಪ್ರಭಾವ ಹಬ್ಬಿ ಹರಡಿತು. ತಾನಲ್ಲದೆ ಯಾವೊಬ್ಬನೂ ಈ ಜಗತ್ತಿಗೆ ರಾಜನಿಲ್ಲವೆಂದೇ ತಿಳಿದು ತನ್ನ ಮನಸ್ಸಿನ ಹೆಮ್ಮೆಯಿಂದ ಮದಿಸಿದ್ದನು. ಒಂದು ದಿನ ಸೂರ್ಯೋದಯಕಾಲದಲ್ಲಿ ರತ್ನ–ಬಂಗಾರಗಳಿಂದ ನಿರ್ಮಿಸಿದ ಆಸ್ಥಾನದಲ್ಲಿ ರಾಕ್ಷಸರಾಜನು ಒಡ್ಡೋಲಗದಲ್ಲಿದ್ದನು. ೧೪. ಕಪ್ಪನೆಯ ದೇಹದ, ಕೆಂಪುಮೀಸೆಯ, ಕೆಂಡಗಣ್ಣಿನ, ಹೆಮ್ಮಾರಿ ಮುಖಗಳ, ಗಂಟಿಕ್ಕಿದ ಹುಬ್ಬುಗಳ, ದೊಡ್ಡ ಕೋರೆದಾಡೆಗಳ, ಚೆನ್ನಾಗಿ ಕೊಬ್ಬಿದ ದೊಡ್ಡ ತೊಡೆಗಳ, ತೋಳಲ್ಲಿ ಹಿಡಿದ ಆಯುಧಗಳ, ವಿಶಾಲವಾದ ಎದೆಯ, ಹಿಂಗಾಲಿಗೆ ಕಟ್ಟಿದ ಬಿರುದಿನ ಬಾವುಟಗಳುಳ್ಳ, ಅಹಂಕಾರದಿಂದ ಉಬ್ಬಿದ, ಸ್ಥೂಲಕಾಯರಾದ ಕೋಟ್ಯನುಕೋಟಿ

CC-0. Jangamwadi Math Collection. Digitized by eGangotri

ಮಣಿಪೂರಣೋರಣದ ಕೀಲಣದ ಮಕುಟದಿಂ
ಮಣಿವ ತನುಜರ್ ದನುಜಮನುಜರ್ಕಳಿಂದಾಗ
ಕುಣಿವ ಪಾತ್ರ ಸ್ತೋತ್ರ ವೇತ್ರಧಾರರ್ ಮುಖ್ಯಸಕಲವಿನಿಯೋಗದಿಂದೆ
ಗಣಿಕೆಯರ ನೋಟ ಬೇಟದ ಪಾಟದೇಳ್ಗೆಯಿಂ
ಬಣಿತೆಯು ವಿಧಾವಂತ ಮಾವಂತ ಸಾವಂತ
ಗಣದಿನೊಪ್ಪುವ ಸಭೆಗೆ ನಾರದಂ ನೀರದಾಧ್ವದಿನಿಳಿದು ನಡೆತಂದನು ೧೫

ಆ ಸುರಮುನೀಶ್ವರಂಗಿದಿರೆದ್ದೆರಂಗಿ ಸಿಂ
ಹಾಸನಾರ್ಧಮನಿತ್ತು ಕುಳ್ಳಿರಿಸಿ ವಿನಯದಿಂ
ದೇಸುಪುಣ್ಯದ ಫಲವೊ ನಿಮ್ಮ ದರುಶನವೆಮಗೆ ಸಮನಿಸಿತ್ತೆಂದು ಕೂಡೆ
ಈ ಸಭೆಗೆ ಬರವೆತ್ತಣಿಂದಾಯ್ತು ನಿಮಗೆಲ್ಲಿ
ವಾಸವಾವುದು ಬಂದ ಕಜ್ಜವಿಂತೆಂದಂಧ
ಕಾಸುರಂ ಬೆಸಗೊಳಲ್ ನಾರದಂ ದಶನದೀಧಿತಿ ಮಿನುಗಲಿಂತೆಂದನು ೧೬

ಇರ್ಪೆವೆಮ್ಮಯ ಮನಂ ಬಂದೆಡೆಗಳೊಳ್ ಪೋಗಿ
ಬರ್ಪೆವು ದಿನಂದಪ್ಪದಖಿಳಲೋಕದ ಕರ್ತೃ
ಸರ್ಪಭೂಷಣನೋಲಗಕಿಲ್ಲಿಗೈತಂದ ಕಾರಣಂ ನಿನ್ನ ಭುಜದ
ದರ್ಪದಿಂ ನೊಂದ ನಿಮ್ಮಯ್ಯನಂ ಕೊಂದ ಕಂ
ದರ್ಪಜನಕಾದಿಗಳ ಮೊರೆಯಿಡಲ್ ಕೇಳ್ದು ತ
ದ್ದರ್ಪಕಧ್ವಂಸಿ ತವ ವಧೆಗೆ ಬರುತಿರಲುಸಿರಬಂದೆವಿದು ಹದನೆಂದನು ೧೭

ರಾಕ್ಷಸರು ಒಬ್ಬರನ್ನೊಬ್ಬರು ಮೀರಿಸಿ ಅವನ ಸಭೆಗೆ ಬಂದರು. ೧೫. ಮಣಿಖಚಿತ ವಾದ ಓರಣವಾದ ಕೀಲಿಸಿದ ಕಿರೀಟದಿಂದ ನಮಸ್ಕರಿಸುವ ಮಕ್ಕಳು ರಾಕ್ಷಸರು, ಮಾನವರುಗಳಿಂದ ; ನರ್ತಕ, ಸ್ತುತಿಪಾಠಕ, ದಂಡಧಾರಿಗಳು ಮೊದಲಾದ ಎಲ್ಲ ಸೇವಕರಿಂದ, ಸೂಳೆಯರ ನೋಟ-ಪ್ರೀತಿ–ಪಾಟಗಳ ಆಧಿಕ್ಯದಿಂದ ; ಸಂಭಾಷಣಕಾರರು ಬಾಡಿಗೆಯ ಆಳು, ಮಾವುತ, ಸಾಮಂತ ಸಮೂಹದಿಂದ ಕೂಡಿದ್ದ ಸಭೆಗೆ ನಾರದನು ಆಕಾಶಮಾರ್ಗದಿಂದ ಇಳಿದುಬಂದನು. ೧೬. ಆ ದೇವಮುನಿಗೆ ಎದುರಾಗಿ ಎದ್ದು ನಮಸ್ಕರಿಸಿ ಸಿಂಹಾಸನದಲ್ಲಿ ಅರ್ಧಭಾಗ ಕೊಟ್ಟು ಕೂಡಿಸಿ ಎಷ್ಟು ಜನ್ಮದ ಪುಣ್ಯವೊ, ನಮಗೆ ನಿಮ್ಮ ದರ್ಶನವಾಯ್ತು. ಈ ಸಭೆಗೆ ಎಲ್ಲಿಂದ ಬಂದಿರಿ ? ನಿಮ್ಮ ವಾಸಸ್ಥಾನವಾವುದು ? ಬಂದ ಕೆಲಸವೇನು ? ಎಂದು ವಿನಯದಿಂದ ಅಂಧಕಾಸುರನು ಕೇಳಲು ನಾರದನು ಶುಭ್ರವಾದ ಹಲ್ಲಿನ ಕಾಂತಿ ಬೆಳಗಲು ಈ ರೀತಿ ಹೇಳಿದನು. ೧೭. ನಮ್ಮ ಮನ ಬಂದ ಕಡೆಗಳಲ್ಲಿ ಇರುತ್ತೇವೆ. ಪ್ರತಿದಿನವೂ ತಪ್ಪದೆ ಎಲ್ಲ ಲೋಕದ ಕರ್ತೃವೂ ಆದ ನಾಗಭೂಷಣನ ಸಭೆಗೆ ಹೋಗಿಬರುತ್ತೇವೆ. ಇಲ್ಲಿಗೆ ಬಂದ ಕಾರಣವೇನೆಂದರೆ ನಿನ್ನ ಭುಜಬಲ ಪರಾಕ್ರಮದಿಂದ ನೊಂದ–ನಿಮ್ಮ ತಂದೆಯನ್ನು ಕೊಂದ ವಿಷ್ಣು ಮೊದಲಾದವರು ಮೊರೆಯಿಡಲು ಕೇಳಿ ಆ ಮದನಸಂಹಾರಿಯಾದ ಶಿವನು ನಿನ್ನನ್ನು ವಧಿಸಲು ಬರುತ್ತಿದ್ದಾನೆ. ಈ

CC-0. Jangamwadi Math Collection. Digitized by eGangotri

ಕೇಳ್ದು ಗಹಗಹಿಸಿ ಶುಕ್ರನ ಮೊಗಂ ನೋಡಿ ಜಗ
ದಾಳ್ದನಿನ್ನೊರ್ವನಿರ್ದಪನೆಂಬುದಂ ನಮಗೆ
ಪೇಳ್ದುದಿಲ್ಲಿಂದುವರೆಗಂ ಭಾಪು ನಿಮ್ಮನೇನೆಂದಪೆವು ತನ್ನ ಪಿತನಂ
ಸೀಳ್ದನಂ ಮರೆವೊಗಿಸಿಕೊಂಡೆಮ್ಮುಮಂ ಕೊಂದು
ಬಾಳ್ದಪನ ಪೆಸರದೇನಿನ್ನೊಮ್ಮೆ ನುಡಿಯೆನುತೆ
ನೀಳ್ದ ನಿಟ್ಟುಸಿರ ಹೂಂಕೃತಿ ನೆಗೆಯೆ ನಾರದನೊಳಂಧಕಾಸುರ ನುಡಿದನು ೧೮

ಉಸುರ್ದರೇ ಹರಿಯಜಾದ್ಯರ್ ನಮ್ಮ ದೂರನಾ
ಮಸಣಗಾಹಿಗೆ ಬೂದಿಬಡಕನಾ ಮೊರೆಯನಾ
ಲಿಸಿದನೇ ಪೆಣ್ಗೂಸುಮೆಯ್ಯುಮಂ ಮುಳಿದು ತಾನೆಮ್ಮುಮಂ ಕೊಲಬಪ್ಪುದು
ಹಸನಾಯ್ತು ದಿಗ್ವಿಜಯದೊಳ್ ಗೊರವನೆಂದು ಪಾ
ಲಿಸಿದೆವವನೇ ಜಗತ್ಕರ್ತೃ ಗಡಮೆನುತಾಗ
ಲಸಮದಾನವನಿರದೆ ಮಸಗಿ ಕಡುಕೋಪದಿಂದೊಡನೊಡನೆ ಗರ್ಜಿಸಿದನು ೧೯

ಗರ್ಜನೆಯ ದನಿಗಖಿಳಲೋಕದ ಜನಂ ಬೆರ್ಚಿ
ನಿರ್ಜೀವಮಾಯ್ತು ಮುನ್ನೊಂದು ಹರಿವಿಧಿಮುಖ್ಯ
ನಿರ್ಜರರ್ ಕಣ್ಗೆಟ್ಟು ಸರಕುಗಳನಡಕಿದರ್ ಬ್ರಹ್ಮಾಂಡದೋಂಟೆಯುದಿರೆ
ಜರ್ಜರಿಸಿದಂ ನಾರದಂ ಬೆರಗುವಟ್ಟಿವನ
ನಾರ್ಜಯಿಪರೆಂದು ಸರಿದಂ ಬಳಿಕ್ಕಾ ಮಹಾ
ದುರ್ಜನಂ ಶತಮಾಯನೆಂಬ ಸೇನಾನಿಯುಂ ಕರೆದು ಮತ್ತಿಂತೆಂದನು ೨೦

ಸಂಗತಿಯನ್ನು ಹೇಳಲು ಬಂದೆವು ಎಂದನು. ೧೮. ಇದನ್ನು ಕೇಳಿ ರಾಕ್ಷಸನು ಗಹಗಹಿಸಿ ನಕ್ಕು, ಶುಕ್ರಾಚಾರ್ಯನ ಮುಖವನ್ನು ನೋಡಿ ಜಗತ್ತಿಗೆ ಇನ್ನೊಬ್ಬ ಒಡೆಯನಿದ್ದಾನೆ ಎಂದು ಇಂದಿನವರೆಗೆ ಯಾರೂ ಹೇಳಲಿಲ್ಲ. ಭೇಷ್ ! ನಿಮ್ಮನ್ನು ಏನೆನ್ನೋಣ ? ನನ್ನ ತಂದೆಯನ್ನು ಕೊಂದವನಿಗೆ ಆಶ್ರಯ ಕೊಟ್ಟು ನಮ್ಮನ್ನು ಕೊಂದು ಬಾಳುವವನ ಹೆಸರೇನು ? ಮತ್ತೊಮ್ಮೆ ಹೇಳು ಎನ್ನುತ್ತ ದೀರ್ಘವಾದ ನಿಟ್ಟುಸಿರಿನ ಹೂಂಕಾರ ಹೊರಡಲು ನಾರದನನ್ನು ಅಂಧಕಾಸುರನು ಕೇಳಿದನು. ೧೯. ವಿಷ್ಣು–ಬ್ರಹ್ಮರು ಆ ಸ್ಮಶಾನ ಕಾಯುವವನಿಗೆ ನಮ್ಮ ಮೇಲೆ ದೂರನ್ನು ಹೇಳಿದರೋ ? ಆ ಬೂದಿಬಡುಕ ಅವರ ಮೊರೆಯನ್ನು ಕೇಳಿದನೋ ? ಆ ಅರೆವೆಣ್ಮೆಯ್ಯನು ನಮ್ಮ ಮೇಲೆ ಕೋಪಗೊಂಡು ಕೊಲ್ಲಲು ಬರುವುದು ಚೆನ್ನಾಯಿತು ! ದಿಗ್ವಿಜಯದ ಕಾಲದಲ್ಲಿ ಅವನನ್ನು ಭಿಕ್ಷುಕನೆಂದು ಭಾವಿಸಿ ಕಾಪಾಡಿದೆವು. ಅವನೇಯೆ ಈ ಜಗತ್ತಿನ ಸೃಷ್ಟಿಕರ್ತ ? ಎನ್ನುತ್ತ ಅಸಮಾನನಾದ ರಾಕ್ಷಸನು ತಡೆಯದೆ ಆವೇಗಗೊಂಡು ಅತಿಕೋಪದಿಂದ ಒಡನೆಯೇ ಗರ್ಜಿಸಿದನು. ೨೦. ಅವನ ಗರ್ಜನೆಯ ಧ್ವನಿಗೆ ಎಲ್ಲ ಲೋಕದ ಜನವೂ ಬೆಚ್ಚಿ ನಿರ್ಜೀವವಾಯಿತು. ಮೊದಲೇ ನೊಂದು ವಿಷ್ಣು-ಬ್ರಹ್ಮ ಮೊದಲಾದ ದೇವತೆಗಳು ಕಂಗೆಟ್ಟು ಕಣ್ಣಿಗೆ ಕಾಣದಂತೆ ಬಚ್ಚಿಟ್ಟುಕೊಂಡರು. ಬ್ರಹ್ಮಾಂಡದ ಚಿಪ್ಪು (ಮೇಲ್ಭಾಗವು) ಅದುರಿತು. ನಾರದನು ಜರ್ಜರಿತನಾಗಿ ಬೆರಗುಗೊಂಡು ಇವನನ್ನು

CC-0. Jangamwadi Math Collection. Digitized by eGangotri

ಬರಹೇಳ್ ನಿಕುಂಭನಂ ಶುಂಭನಂ ಜಂಭನಂ
ಬರಹೇಳ್ ಸಶಬಲನಂ ಪ್ರಬಲನಂ ಸುಬಲನಂ
ಬರಹೇಳ್ ಪ್ರವೀರನಂ ಘೋರನಂ ಶೂರನಂ ಬರಹೇಳ್ ಮಹಾನಾಭನಂ
ಬರಹೇಳ್ ನಿಶುಂಭನಂ ಕುಂಭನಂ ಲಂಬನಂ
ಬರಹೇಳ್ ಸುವಿಪುಳನಂ ಚಪಳನಂ ಕಪಿಲನಂ
ಬರಹೇಳ್ ಮುಹುಂಡನಂ ಮುಂಡನಂ ಹುಂಡಮುಖ್ಯರನೆನುತ್ತುರಿದೆದ್ದನು ೨೧

ಪೊಡೆಸು ಭೇರಿಯನಿಂದೆ ನಡೆಸು ಮತ್ಸೈನ್ಯಮಂ
ಬಿಡಿಸು ಪಾಳೆಯವನೆರ್ದೆಗೆಡಿಸು ಗೊಳೆಯಮನುರೆ
ಪಿಡಿಸಮರರೋಳಿಯಂ ಕಡಿಸು ಮಾಸಾಳಿಯಂ ಕುಡಿಸು ನೆತ್ತರನೊಡಲ್ಗೆ
ಅಡಸು ಹರಿವಿಧಿಗಳಂ ಬಡಿಸು ಮೂವಿಧಿಗಳಂ
ಸುಡಿಸು ಕೈಲಾಸಮಂ ಕೆಡಿಸು ಹರಸಾಸಮಂ
ತಡೆಸದೆನ್ನಿಂ ದಾಳಿಯಿಡಿಸು ಬೇಗದೊಳೆನುತ್ತೊಡನೊಡನೆ ನೇಮಿಸಿದನು ೨೨

ಅನಿತರೊಳ್ ಕಂಡು ಪ್ರಹ್ಲಾದನಿವನ ಮನ
ದನುವನಾಯ್ತಾಯ್ತು ಹೋ ಹೋ ಸಾಕು ಸಾಕಿದೇಂ
ಘನತೆ ಯಾರೊಳ್ ಕಲಹ ಮತ್ತೆಲ್ಗೆ ದಾಳಿ ಶಿವಶಿವ ಪಿಂದುಮುಂದೆಣಿಸದೆ

ಯಾರು ಜಯಿಸುವವರು ಎಂದು ಹೇಳಿ ಅಲ್ಲಿಂದ ಹೊರಟುಹೋದನು. ಅನಂತರ ಆ ಮಹಾಖೂಳನು ಶತಮಾಯನೆಂಬ ಸೇನಾಪತಿಯನ್ನು ಕರೆದು ಮತ್ತೆ ಹೀಗೆಂದನು. ೨೧. ನಿಕುಂಭ, ಶುಂಭ, ಜಂಭ ಇವರನ್ನು ಬರಹೇಳು. ಸಶಬಲನನ್ನೂ ಪ್ರಬಲನನ್ನೂ ಸುಬಲನನ್ನೂ ಬರಹೇಳು. ಪ್ರವೀರ, ಘೋರ, ಶೂರ ಇವರುಗಳನ್ನು ಬರಹೇಳು. ಮಹಾನಾಭನನ್ನು ನಿಶುಂಭನನ್ನು, ಕುಂಭನನ್ನು, ಲಂಬನನ್ನು ಬರಹೇಳು. ಸುವಿಪುಳ, ಚಪಳ, ಕಪಿಲರನ್ನು ಬರಹೇಳು. ಮುಹುಂಡ,ಮುಂಡ, ಹುಂಡ ಮೊದಲಾದ ಮುಖ್ಯರಾಕ್ಷಸರನ್ನು ಬರಹೇಳೆನ್ನುತ್ತ ಕೋಪದಿಂದೆದ್ದನು. ೨೨. ಭೇರಿಯನ್ನು ಹೊಡೆಸು. ಈದಿನವೇ ನಮ್ಮ ಸೈನ್ಯವನ್ನು ನಡೆಸು, ಪಾಳಯವನ್ನು ಹಾಕಿಸು. ವಲಸೆಹೋದ ದೇವಸಮೂಹದ ಧೈರ್ಯಗೆಡಿಸು. ಅಸಮಾನ ದೇವತೆಗಳನ್ನು ಹಿಡಿಸು. ಶೂರರನ್ನು ಕಡಿದುಹಾಕಿಸು. ಶರೀರಕ್ಕೆ ರಕ್ತವನ್ನು ಕುಡಿಸು. ವಿಷ್ಣು-ಬಹ್ಮರನ್ನು ಮುತ್ತು, ತ್ರಿಲೋಕ (ಮೂರು ದಾರಿ) ಗಳನ್ನು ಬಡಿಸು. ಕೈಲಾಸವನ್ನು ಸುಡಿಸು. ಹರನ ಪರಾಕ್ರಮವನ್ನು ಕೆಡುವಂತೆ ಮಾಡು. ಬೇಗನೆ ನನ್ನಿಂದ ದಾಳಿಯಿಡಿಸು ಎನ್ನುತ್ತ ಕೂಡಲೇ ಆಜ್ಞಾಪಿಸಿದನು. ೨೩. ಅಷ್ಟರಲ್ಲಿ ಇವನ ಮನಸ್ಸಿನ ರೀತಿಯನ್ನು ಪ್ರಹ್ಲಾದನು ನೋಡಿದನು. ಹೋ ಹೋ, ಸಾಕು ಸಾಕು, ಇದೇನು ದೊಡ್ಡಸ್ತಿಕೆ ? ಯಾರೊಡನೆ ಯುದ್ಧ ? ಮತ್ತೆ ಎಲ್ಲಿಗೆ ದಾಳಿ ? ಶಿವ ಶಿವ ! ಹಿಂದು ಮುಂದಾಲೋಚನೆ ಮಾಡದೆ ಈ ರೀತಿ ಗರ್ವಪಡು

CC-0. Jangamwadi Math Collection. Digitized by eGangotri

ಇನಿತುಬ್ಬುವರೆ ಬಲ್ಲವರ್ ತಮ್ಮ ಬಾಯ ಹವ
ಣಿನ ತುತ್ತನುಂಬುದೊಳ್ಳಿತು ಶಿವನದಾರ್ ನಿನ್ನ
ಜನನಮಾರಿಂದಾಯ್ತು ಕೇಳ್ ಶುಕ್ರನಂ ಬರಿದೆ ಭ್ರಮೆಗೊಳಲ್‌ಬೇಡೆಂದನು ೨೩

ಪರಶಿವನ ಶಶಿಸೂರ್ಯನೇತ್ರಂಗಳಂ ಗಿರಿಜೆ
ಸರಸದೊಳ್ ಮುಚ್ಚಲ್ ತಮಂ ಪೆಚ್ಚಲೀಶನಂ
ದುರಿಗಣ್ಣಿನಿಂ ಬೆಳಕುದೋರಲಾ ತಮದಳವಿನೊಳಗೆ ನೀಂ ಜನಿಸಿ ಶಿವನ
ಪೊರೆಯೊಳಳುತಿರೆ ಶಿವಂ ಕಂಡು ಕನಕಾಕ್ಷನುರು
ತರ ತಪಸ್ಸಿಂಗೊಲಿದು ನಿನ್ನನಿತ್ತಂ ನಿನ್ನ
ಗುರುಶುಕ್ರನಂ ವಿಚಾರಿಸು ತೋಳ್ಗಳುರೆ ಬೆಳೆಯಲಾರನಪ್ಪುವೆಯೆಂದನು ೨೪

ಶಿವಮಹಿಮೆ ಬಣ್ಣಿಸುವೊಡಳವೆ ಕೇಳ್ ಮುನ್ನಬ್ಜ
ಭವವಿಷ್ಣುಗಳ ಸಮರಮಂ ಬಿಡಿಸಲುರುಲಿಂಗ
ಮವತರಿಸೆ ಶೀರ್ಷಪದಮಂ ಕಾಣ್ಬೆವೆಂದು ನೇಮಿಸಲೊರ್ವರುಂ ಕಾಣದೆ
ಬವಣೆಯೊಳ್ ತಿರುಗಿ ಗರ್ವಮನುಳಿದರಾ ಕಮಲ
ಭವನಿರುತಿರುತ್ತಹಂಕರಿಸೆ ರುದ್ರಂ ನಗು
ತ್ತವನ ತಲೆಯಂ ಚಿವುಂಟಿದನುಗುರ್ಗೊನೆಯೊಳಾ ಬ್ರಹ್ಮನೇಂ ಸಾಮಾನ್ಯನೇ ೨೫

ತ್ತಾರೆಯೆ ? ತಿಳಿದವರು ತಮ್ಮ ಬಾಯಿಗೆ ಸರಿಯಾದ ಗಾತ್ರದ ತುತ್ತನ್ನು ತಿನ್ನುವುದು ಒಳ್ಳೆಯದು. ಶಿವ ಯಾರು ? ನಿನ್ನ ಹುಟ್ಟು ಯಾರಿಂದಾಯ್ತು ? ಶುಕ್ರನನ್ನು ಕೇಳು. ಸುಮ್ಮನೆ ಭ್ರಮೆಪಡಬೇಡ ಎಂದನು. ೨೪. ಪರಮೇಶ್ವರನ ಚಂದ್ರ–ಸೂರ್ಯ ಕಣ್ಣುಗಳನ್ನು ಗಿರಿಜೆ ವಿನೋದಕ್ಕಾಗಿ ಮುಚ್ಚಲು ಕತ್ತಲು ಹೆಚ್ಚಿತು. ಈಶ್ವರನು ಉರಿ ಗಣ್ಣಿನಿಂದ ಬೆಳಕನ್ನು ತೋರಲು ಆ ಕತ್ತಲಿನ ಸಾಮರ್ಥ್ಯದಿಂದ ನೀನು ಹುಟ್ಟಿ ಶಿವನ ಪಕ್ಕದಲ್ಲಿ ಅಳುತ್ತಿದ್ದೆ. ಶಿವನು ನೋಡಿ ಕನಕಾಕ್ಷನ ಘೋರವಾದ ತಪಸ್ಸಿಗೆ ಮೆಚ್ಚಿ ನಿನ್ನನ್ನು ಕೊಟ್ಟನು. ನಿನ್ನ ಗುರುವಾದ ಶುಕ್ರಾಚಾರ್ಯನನ್ನು ವಿಚಾರಿಸು. ತೋಳು ಗಳು ಬಲವಾಗಿ ಬೆಳೆಯಿತೆಂದು ಯಾರನ್ನು, ಶಿವನನ್ನು ಬೇಕಾದರೂ ಅಪ್ಪಿಕೊಳ್ಳುವೆಯಾ? ಎಂದನು. ೨೫. ಶಿವನ ಮಹಿಮೆಯನ್ನು ಬಣ್ಣಿಸಲು ಸಾಧ್ಯವೆ ? ಕೇಳು. ಹಿಂದೆ ಬ್ರಹ್ಮ–ವಿಷ್ಣುಗಳ ಯುದ್ಧವನ್ನು ನಿವಾರಿಸಲು ಶ್ರೇಷ್ಠವಾದ ಲಿಂಗವು ಹುಟ್ಟಿತು. ಅದರ ತಲೆ-ಕಾಲುಗಳನ್ನು ಕಾಣುತ್ತೇವೆಂದು ನಿಯಮಿಸಲು ಒಬ್ಬರೂ ಕಾಣದೆ ಆಯಾಸ ದಿಂದ ಹಿಂದಿರುಗಿ ಗರ್ವವನ್ನು ಬಿಟ್ಟರು. ಆ ಬ್ರಹ್ಮನು ಸುಮ್ಮನಿರದೆ ಅಹಂಕಾರ ಗೊಳ್ಳಲು ಶಿವನು ನಗುತ್ತ ಅವನ ತಲೆಯನ್ನು ಉಗುರಿನ ಕೊನೆಯಿಂದ ಚಿವುಟಿಹಾಕಿ

CC-0. Jangamwadi Math Collection. Digitized by eGangotri

ಕಾಲನಂ ಕಾಮನಂ ತ್ರಿಪುರವಂ ನೊಸಲಕ
ಣ್ಣಾಲಿಯುರಿಯಿಂ ಸುಟ್ಟನುದ್ಭವಿಸಿದೇಳ್ದಿನದ
ಬಾಲನಿಂ ತಾರಕನನುರೆ ಕೊಲಿಸಿದಂ ಕೊಂದನಾ ಜಲಂಧರದೈತ್ಯನಂ
ಕಾಲುಂಗುಟದಿನವನಿಯೊಳ್ ಬರೆದ ಚಕ್ರದಿಂ
ಪೇಳಲೇಂ ಶ್ರುತಿಚೋರತಮನೆಂಬನಂ ಕೊಂದ
ಭೀಳಹರಿಮತ್ಸ್ಯರೂಪಂ ಸೀಳ್ದನಂತಿವರ್ ಸಾಮಾನ್ಯರೇಯೆಂದನು ೨೬

ಪೂರ್ವಮಂತಿರಲತಿಪ್ರತಾಪರೆಮ್ಮಯ್ಯಂಗ
ಳಿರ್ವರಂ ಸೀಳ್ದಾ ಮಹಾವಿಷ್ಣುವಿನದೊಂದು
ದೋರ್ವಲಮನರಿವೆಯೋ ತತ್ಸಿಂಹಕ್ರೋಡಾವತಾರಂಗಳವನಿಯೊಳಗೆ
ಗರ್ವಿಸಲ್ ಹರನಾ ವರಾಹನಂ ಸೀಳ್ದು ಮ
ತ್ತೊರ್ವ ಮಗನಿಂ ಸಿಂಹಮಂ ಕೊಲಿಸಿದಂ ಶಿವಂ
ಸರ್ವಥಾ ದುಷ್ಟನಿಗ್ರಹ ಶಿಷ್ಟಪಾಲಕಂ ನೀಂ ತಿಳಿದುಕೊಳ್ಳೆಂದನು ೨೭

ಎವೆಯಾಟದಿಂದಖಿಳಬ್ರಹ್ಮಾಂಡಮಳಿದುದಿಸು
ವುವು ವಿಷ್ಣು ಬ್ರಹ್ಮೇಂದ್ರರುಂ ಭೃತ್ಯರಗ್ನಿ ಶಶಿ
ರವಿಗಳಕ್ಷಿಗಳವನಿ ಜಲ ವಹ್ನಿ ಪವನ ಗಗನಾತ್ಮರ್ಕ ಶಶಿಮುಖ್ಯರು
ಶಿವನಷ್ಟಮೂರ್ತಿಗಳ್ ಸರ್ವಕೆಲ್ಲಂ ಸದಾ
ಶಿವಮಯುಂ ನೀನದೇತಕೆ ಮರುಳ್ಗೊಂಬೆ ಬಾ
ಶಿವಚರಣಮಂ ಕಂಡು ಬದುಕಲಿಹಪರಸೌಖ್ಯಮಪ್ಪುದಿದು ನಿಜವೆಂದನು ೨೮

ದನು. ಆ ಬ್ರಹ್ಮನೇನು ಸಾಮಾನ್ಯನೆ ? ೨೬. ಯಮನನ್ನು, ಮನ್ಮಥನನ್ನು, ತ್ರಿಪುರವನ್ನು ಹಣೆಗಣ್ಣಿನ ಉರಿಯಿಂದ ಸುಡಿಸಿದನು. ಹುಟ್ಟಿದ ಏಳು ದಿನದ ಬಾಲಕ ನಿಂದ ತಾರಕನನ್ನು ಕೊಲ್ಲಿಸಿದನು. ಕಾಲಿನ ಹೆಬ್ಬೆರಳಿನಿಂದ ಭೂಮಿಯ ಮೇಲೆ ಬರೆದ ಚಕ್ರದಿಂದ ಆ ಜಲಂಧರನೆಂಬ ರಾಕ್ಷಸನನ್ನು ಕೊಂದನು. ಏನು ಹೇಳಲಿ ? ವೇದ ಗಳನ್ನು ಕದ್ದ ತಮನೆಂಬ ರಾಕ್ಷಸನನ್ನು ಕೊಂದ ಪರಾಕ್ರಮಿಯಾದ ವಿಷ್ಣುವಿನ ಮತ್ಸ್ಯರೂಪವನ್ನೂ ಸೀಳಿದನು. ಹಾಗಿರುವಾಗ ಇವರು ಸಾಮಾನ್ಯರೇ ? ಎಂದನು. ೨೭. ಹಿಂದಿನದು ಹಾಗಿರಲಿ, ಅತಿಪರಾಕ್ರಮಿಗಳಾದ ನಮ್ಮ ಇಬ್ಬರು ತಂದೆಯರನ್ನೂ ಸೀಳಿದ ಆ ಮಹಾವಿಷ್ಣುವಿನ ಅದೊಂದು ಬಾಹು ಪರಾಕ್ರಮವನ್ನು ತಿಳಿಯೆಯೊ ? ಆ ಸಿಂಹ–ವರಾಹಾವತಾರಗಳು ತಡೆಯದೆ ಭೂಮಿಯಲ್ಲಿ ಗರ್ವಪಡಲು ಶಿವನು ವರಾಹ ವನ್ನು ಸೀಳಿದನು, ಮತ್ತೊಬ್ಬ ಮಗನಿಂದ ಸಿಂಹವನ್ನು ಕೊಲ್ಲಿಸಿದನು. ಶಿವನು ನಿಜ ವಾಗಿಯೂ ದುಷ್ಟನಿಗ್ರಹಿ–ಶಿಷ್ಟಪಾಲಕ, ನೀನು ತಿಳಿದುಕೋ ಎಂದನು. ೨೮. ಕಣ್ಣಿನ ಸನ್ನೆಯಿಂದಲೇ ಎಲ್ಲ ಬ್ರಹ್ಮಾಂಡವೂ ನಾಶಹೊಂದಿ ಮತ್ತೆ ಸೃಷ್ಟಿಗೊಳ್ಳುವುವು. ವಿಷ್ಣು-ಬ್ರಹ್ಮ, ಇಂದ್ರರೂ ಅವನ ಸೇವಕರು. ಅಗ್ನಿ, ಚಂದ್ರ, ಸೂರ್ಯರು ಅವನ ಕಣ್ಣುಗಳು, ಭೂಮಿ, ನೀರು, ಅಗ್ನಿ, ಗಾಳಿ, ಆಕಾಶ, ಆತ್ಮ, ಸೂರ್ಯ-ಚಂದ್ರ ಮೊದಲಾದವರು ಶಿವನ ಅಷ್ಟಮೂರ್ತಿಗಳು, ಎಲ್ಲಕ್ಕೂ ಯಾವಾಗಲೂ ಮಂಗಳಕಾರಕರು, ನೀನು ಏಕೆ ಮರುಳಾಗು

CC-0. Jangamwadi Math Collection. Digitized by eGangotri

ಕೇಳಿ ಕಿಡಿಕಿಡಿವೋಗಿ ಬಾಯ್ ದೊಡ್ಡಿತೆಂದೆನ್ನ
ನೂಳುವೆಯದಾರ್ ಕರೆದರೈ ನಿನ್ನನೀಗ ನೀಂ
ಪೇಳಿದ ಹರಿ ಬ್ರಹ್ಮಮುಖ್ಯರೆನ್ನಿಂದಲೇನಾದರೆಂಬುದನರಿಯೆಲಾ
ಆ ಲೋಕವನಿತನೆನ್ನಯ ಭೃತ್ಯಸಂದೋಹ
ಮಾಳುತಿರಲಾ ಹರನದೇಗೆಯ್ದನೆಲವೊ ಘಡ
ಖೂಳ ಕೂಗದೆ ಕೆಲಕೆ ಸಾರೆಂದು ತನ್ನವರ ಮೊಗನೋಡುತಿಂತೆಂದನು ೨೯

ಊರೊಂದೆರಳ್ಮೂರ್ಗಳಂ ಸುಟ್ಟನಂತೆ ಬಡ
ಹಾರುವನ ತಲೆಯುಂ ಚಿವುಟಿದಂ ಗಡ ಪೊಕ್ಕು
ನೀರೊಳಗಣೊಂದು ಮೀನಂ ಸೀಳ್ದನಂತೊಂದು ಪಂದಿಯುಂ ಕೊಂದನಂತೆ
ಬೀರದಿಂದರೆಮಾನಿಸನನಿರಿದನಂತೆ ಬಡ
ತಾರಕ ಸ್ಮರ ಕಾಲರಂ ಮುರಿದನಂತವನ
ಬೀರಮಂ ಕಾಣ್ಬೆ ನೀಂ ಪೊಯ್ಸು ಭೇರಿಯನೆನುತ್ತಾಸ್ಥಾನದಿಂದೆದ್ದನು ೩೦

ಧಂಧಣಂ ಧಳಧಳಧಳಂ ಧಳಧ್ವನಿಗೆ ದಿ
ಕ್ಸಂಧಿಗಳ್ ಸಡಿಲಲಾ ಫಣಿಪ ದಿಕ್ಕರಿಗಳ ಶಿ
ರಂ ಧಿಮ್ಮೆನುತ್ತೆ ಕಿವುಡೆಸೆಯಲಾ ಕುಲಪರ್ವತಂಗಳ ಧರಾಚಕ್ರದ
ಬಂಧನಂಗಳ ಬಿಗುಹು ಬಿಡೆ ಕಲಕಲಂ ಸಕಲ
ಸಿಂಧುಗಳ್ ತರಣಿಶಶಿಗಳ್ ಸರಣಿಗೆಡೆ ಜಗದೊ
ಳಂಧಕಾಸುರನ ಭೇರೀರವಂ ಪೊಣ್ಮಿದುದನೇನೆಂಬೆನದ್ಭುತವನು ೩೧

ತ್ತೀಯೆ ? ಬಾ ಶಿವನ ಪಾದಗಳನ್ನು ಕಂಡು ಬದುಕಲು ಇಹ-ಪರಗಳಲ್ಲಿ ಸೌಖ್ಯವಾಗು ವುದು, ಇದು ನಿಜ ಎಂದನು. ೨೯. ಅಂಧಕಾಸುರನು ಅವನ ಮಾತನ್ನು ಕೇಳಿ ಕಿಡಿಕಿಡಿ ಯಾಗಿ-ಬಾಯಿ ದೊಡ್ಡದಾಗಿದೆಯೆಂದು ನನ್ನ ಬಳಿ ಬೊಗುಳುತ್ತೀಯೊ ? ನಿನ್ನನ್ನು ಈಗ ಯಾರು ಕರೆದವರು ? ನೀನು ಹೇಳಿದ ವಿಷ್ಣು-ಬ್ರಹ್ಮ ಮೊದಲಾದವರು ನನ್ನಿಂದ ಏನಾ ದರು ಎಂಬುದನ್ನು ನೀನು ತಿಳಿಯೆ ? ಆ ಲೋಕವಷ್ಟನ್ನು ನನ್ನ ಸೇವಕರ ಸಮೂಹ ಆಳುತ್ತಿರುವಾಗ ಶಿವನು ಅದೇನು ಮಾಡಿದನು ? ಘಡ, ಖೂಳ, ಕೂಗದೆ ಪಕ್ಕಕ್ಕೆ ಸರಿ ಎಂದು ತನ್ನವರ ಮುಖವನ್ನು ನೋಡುತ್ತ ಹೀಗೆಂದನು. ೩೦. ಒಂದೆರಡು ಮೂರು ಊರುಗಳನ್ನು ಸುಟ್ಟನಂತೆ ! ಬಡಬ್ರಾಹ್ಮಣನ ತಲೆಯನ್ನು ಚಿವುಟಿಹಾಕಿದನಂತೆ ! ನೀರೊ ಳಗೆ ಪ್ರವೇಶಿಸಿ ಒಂದು ಮೀನನ್ನು ಸೀಳಿದನಂತೆ ! ಅದೊಂದು ಹಂದಿಯನ್ನು ಕೊಂದ ನಂತೆ ! ಪರಾಕ್ರಮದಿಂದ ಅರ್ಧ ಮನುಷ್ಯನನ್ನು ಸೀಳಿದನಂತೆ ! ಬಡ ತಾರಕ, ಮನ್ಮಥ. ಯಮರನ್ನು ಸಂಹರಿಸಿದನಂತೆ ! ಅವನ ಪರಾಕ್ರಮವನ್ನು ನೋಡುತ್ತೇನೆ. ನೀನು ಭೇರಿ ಯನ್ನು ಹೊಡೆಯಿಸು ಎನ್ನುತ್ತ ಆ ಸ್ಥಾನದಿಂದ ಎದ್ದನು. ೩೧. ಧಂಧಣಂ, ಧಳಧಳ ಧಳಂ, ಧಳ ಎಂಬ ಶಬ್ದಕ್ಕೆ ದಿಕ್ಕುಗಳ ಕೀಲುಗಳು ಸಡಿಲವಾಯಿತು. ಆ ಆದಿಶೇಷ, ದಿಗ್ಗಜಗಳ ತಲೆ ಧಿಮ್ಮೆನ್ನುತ್ತ ಕಿವುಡಾದುವು. ಆ ಕುಲಪರ್ವತಗಳ-ಭೂಮಂಡಲದ ಬಂಧನಗಳ ಬಿಗಿತ ತಪ್ಪಿತು. ಎಲ್ಲ ಸಮುದ್ರಗಳೂ ಕಲಕಿಹೋದುವು. ಸೂರ್ಯ-ಚಂದ್ರರು

CC-0. Jangamwadi Math Collection. Digitized by eGangotri

ಪೊಯ್ಸು ಘನಭೇರಿಯಂ ಭಾರಿಯಂಕಕ್ಕೆ ಮು
ಟ್ಟಯ್ಸಲಿ ಚತುರ್ಬಲಂ ಸಗ್ಗಲಗ್ಗೆಯೊಳೆಂಬ
ಕಯ್ಸನ್ನೆಯೊಳ್ ಮನ್ನೆಯರ್ ಮಂಡಲೀಕ ಸಾಮಂತ ಸಚಿವಪ್ರಮುಖರು
ಅಯ್ಸುದಾನವಮಾನವರ್ ಕವನಕರ್ಕಶದ
ಮೆಯ್ಸಿರಿಯ ರಾವುತರ್ ಮಾವುತರ್ ಬಳಸಿ ವೇ
ಡಯ್ಸಿ ಬರಲಂದಂಧಕಾಸುರಂ ಪೊರಮಟ್ಟು ಪೊರಬೀಡನುರೆ ಬಿಟ್ಟನು ೩೨

ನೆಗಳ್ದುವಲ್ಲಲ್ಲಿ ಮಯನಿರ್ಮಿತದೊಳಾಗ ಬಗೆ
ಬಗೆಯ ಗುಡಿಗುಮುಡಿ ಗೂಡಾರ ಸಾಗರದಾನ
ಮಗಲದೊಳ್ ಚಾವಡಿ ಹಜಾರ ಹಯಗಜಶಾಲೆಮುಖ್ಯಬೀಡಾರಂಗಳು
ಗಗನಮಿದುದೊ ನೆಲಂ ಬೆಸಲೆಯಾದುದೊ ನಿಖಿಳ
ಜಗಮಿದಂ ಪೆತ್ತುದೋ ಜಡಧಿ ಪಡೆದುದೊ ಬಲಮಿ
ದಗಣಿತಮೆನಲ್ ಪೊರಮಡುತ್ತಿರ್ದುದೂರೊಳಗಣಿಂದದೇಂ ವಣ್ಣಿಸುವೆನು ೩೩

ಕುಲಗಿರಿಗಳೊಲ್ ದಿಶಾಕರಿಗಳೊಲ್ ಬರ್ಪ ಭರ
ಕಿಳೆ ತರ್ಗೆ ಸುರಿವ ಮೇಲ್ಕೀಳ್ ಮದಜಲಂ ಕಾರ
ಮಳೆಗಾಲಮೆನಿಸೆ ಘನಕರ್ಣತಾಳಾನಿಲಂ ಬೆಟ್ಟಗಳನಲ್ಲಾಡಿಸೆ
ಚಲಿಪ ಕದಳೀವಳದ ಮಾರುತಂ ರವಿಘರ್ಮ
ಜಲವನಾರಿಸಿ ವಿಯದ್ಗಂಗೋದಕವನೂಡಿ
ಕೊಳುತೆ ನಡೆತಂದತ್ತು ಶುಂಭಾಲಸೈನ್ಯಮದನೇನೆಂಬೆನದ್ಭುತವನು ೩೪

ಕ್ರಮ ತಪ್ಪಿದರು. ಈ ರೀತಿ ಜಗತ್ತಿನಲ್ಲಿ ಅಂಧಕಾಸುರನ ಭೇರಿಯ ಶಬ್ದ ಹೊಮ್ಮಿತು. ಅದ್ಭುತವನ್ನು ಏನೆಂದು ಹೇಳಲಿ ? ೩೨. ದೊಡ್ಡ ಭೇರಿಯನ್ನು ಹೊಡೆಸು, ಸ್ವರ್ಗದ ಲಗ್ಗೆಯಲ್ಲಿ ದೊಡ್ಡ ಕಾಳಗಕ್ಕೆ ಚತುರ್ಬಲವೂ ಮುತ್ತಿಗೆ ಹಾಕಲಿ ಎಂಬ ಕಯ್ಸನ್ನೆಯಿಂದ ಮಾನ್ಯರು, ಮಾಂಡಲೀಕರು. ಸಾಮಂತರು, ಮಂತ್ರಿ ಮೊದಲಾದವರು, ಅಷ್ಟು ರಾಕ್ಷಸರು, ಮನುಷ್ಯರೂ ಯುದ್ಧಮಾಡಲು ಕಠಿಣದೇಹವುಳ್ಳ ರಾಹುತರು-ಮಾವುತರು ಬಳಸಿ ಸುತ್ತುವರಿದು ಬರುತ್ತಿರಲು ಅಂಧಕಾಸುರನು ಹೊರಹೊರಟು ಪುರದ ಹೊರಬೀಡನ್ನು ಬಿಟ್ಟನು. ೩೩. ಮಯನಿಂದ ನಿರ್ಮಿಸಲ್ಪಟ್ಟ ನಾನಾರೀತಿಯ ಬಾವುಟ, ಶಿಬಿರ, ಗುಡಾರಗಳು, ಸಾಗರದಷ್ಟು ವಿಸ್ತಾರವಾಗಿ ಚಾವಡಿ, ಹಜಾರ, ಕುದುರೆ-ಆನೆಗಳ ಲಾಯ ಮೊದಲಾದ ಬಿಡಾರಗಳು ಅಲ್ಲಲ್ಲಿ ಪ್ರಕಾಶಿಸಿದುವು. ಆಕಾಶ ಈದುದೋ ! ನೆಲಕ್ಕೆ ಹೆರಿಗೆಯಾಯಿತೊ ? ಎಲ್ಲ ಜಗತ್ತು ಇದನ್ನು ಹೆತ್ತುದೋ ! ಸಮುದ್ರ ಈ ಸೈನ್ಯವನ್ನು ಪಡೆಯಿತೋ ? ಇದು ಅಸಂಖ್ಯಾತವೆನ್ನುವಂತೆ ಊರೊಳಗಿನಿಂದ ಹೊರಡುತ್ತಿದ್ದಿತು. ಅದನ್ನು ಏನೆಂದು ಬಣ್ಣಿಸಲಿ ? ೩೪. ಕುಲಪರ್ವತಗಳಂತೆ ದಿಗ್ಗಜಗಳಂತೆ ಬರುವ ರಭಸಕ್ಕೆ ಭೂಮಿ ತಗ್ಗಲು, ಸುರಿಯುವ ಮೇಲು-ಕೆಳಗಿನ ಮದಜಲ ಭೀಕರವಾದ ಮಳೆಗಾಲವೆನ್ನಿಸಲು, ದೊಡ್ಡದಾದ ಕಿವಿಯ ಅಲುಗಾಟದಿಂದ ಹೊರಟ ಗಾಳಿ ಬೆಟ್ಟಗಳನ್ನು ಅಲ್ಲಾಡಿಸಲು, ಚಲಿಸುವ ಬಾಳೆಯೆಲೆಗಳಿಂದ ಉಂಟಾದ ಬಿರುಗಾಳಿ

CC-0. Jangamwadi Math Collection. Digitized by eGangotri

ವರಮರುಚ್ಛರದೃಷ್ಟಿ ಮನದ ಬೆಳಗಂಗಳಂ
ತ್ವರಿತದೊಳ್ ಜಿಂದೆನಿಸುತಾಯುತದೊಳಿಂದ್ರಾರ್ಕ
ಹರಸಖಾಶ್ವಂಗಳಂ ಕೀಳ್ಪಡಿಸುತಂಬರಕೆ ಲಂಘಿಸುತ್ತವನಿತಳವಂ
ಖುರಪುಟಂಗಳೊಳೆ ಕೆರೆವುತೆ ಕಡಿವ ಕಬ್ಬಿಗಳ
ಘುರುಘುರುಧ್ವನಿ ಹೇಷಿತಸ್ವನಂ ಕಟವಾಯ
ನೊರೆ ರನ್ನವಕ್ಕರಿಕೆಗಳ್ ಮೆರೆಯೆ ಬಂದತ್ತು ತುರಗಬಲವೇನೆಂಬೆನು ೩೫

ತಳಪ ಮಣಿವೆಳಗಿನಿಂ ಚಕ್ರರವದಿಂ ನಭದೊ
ಳಿಳೆಯೊಳ್ ಸಿಡಿಲ್ಮಿಂಚಿನೊಲ್ ಪೊಳೆದು ಮೊಳಗುತಿಹ
ಛಲವಾಜಿರಾಜಿಯಿಂ ಸೂತಹೂಂಕೃತಿಗಳಿಂ ಧೃತಶಸ್ತ್ರಜಾಲದಿಂದೆ
ಪಲತೆರದ ಕೇತನಂಗಳ ಕುರುಪಿನಿನ್ನಿಲ್ಲ
ದುಲಿವ ಘಂಟೆಯ ಘಣತ್ಕೃತವೊಗೆಯೆ ಬಂದತ್ತು
ನಳಿನಸಖ ಸುರಪರ ರಥಂಗಳಂ ಕೀಳ್ಪಡಿಸಿ ರಥಸೈನ್ಯಮೇನೆಂಬೆನು ೩೬

ಪಿಡಿದೆರಳ್ ಸತ್ತಿಗೆಗಳೆರಡೆರಳ್ ಚವರಗಳ
ನಡುವಗಲ್ಪಂಜುಗಳ ಡೌಡೆಜೇಗಟೆಗಳಾ
ಕಡುಬಿರುದುಗಳ ಬಿಂಕದಿಂ ನಡೆದು ಲಾಗಿಸುತೆ ಹೂಂಕರಿಸಿ ತೋಳ್ಪೊಯ್ವುತೆ

ಸೂರ್ಯನ ಬೆವರನೀರನ್ನು ಆರಿಸಲು. ಆಕಾಶಗಂಗೆಯ ನೀರನ್ನು ಚಿಮ್ಮಿಕೊಳ್ಳುತ್ತ ಆನೆಯ ಸೈನ್ಯ ಹೊರಟುಬಂದಿತು. ಅದ್ಭುತವನ್ನು ಏನೆಂದು ಹೇಳಲಿ ? ೩೫. ಶ್ರೇಷ್ಠ ವಾದ ಗಾಳಿಯು ಚಲಿಸುವ ನೋಟ–ಮನಸ್ಸಿನ ಬೆಳಕನ್ನು ವೇಗದಲ್ಲಿ ಹಿಂದು ಎನಿಸುತ್ತ, ಪರಾಕ್ರಮದಲ್ಲಿ ಇಂದ್ರ-ಸೂರ್ಯ-ಕುಬೇರರುಗಳ ಕುದುರೆಗಳನ್ನು ಕೀಳು ಎನಿಸುತ್ತ, ಆಕಾಶಕ್ಕೆ ಹಾರುತ್ತ, ಭೂಮಿಯ ತಳವನ್ನು ಗೊರಸಿನಿಂದ ಕೆರೆಯುತ್ತ, ಹಲ್ಲಿನಲ್ಲಿ ಕಡಿಯುವ ಕಡಿವಾಣಗಳ ಘುರುಘುರು ಶಬ್ದ-ಹೇಷಾರವದ ಧ್ವನಿ–ಕಟಬಾಯಿಯ ನೊರೆ–ಬಂಗಾರದ ಜೀನುಗಳು ಪ್ರಕಾಶಿಸುತ್ತಿರಲು ಕುದುರೆಯ ಸೈನ್ಯ ಬಂದಿತು, ಅದನ್ನು ಏನೆನ್ನಲಿ ? ೩೬. ಹೊಳೆಯುವ ರತ್ನಗಳ ಬೆಳಕಿನಿಂದ, ಚಕ್ರದ ಶಬ್ದದಿಂದ, ಆಕಾಶದಲ್ಲಿ-ಭೂಮಿಯಲ್ಲಿ ಸಿಡಿಲು-ಮಿಂಚಿನಂತೆ ಹೊಳೆದು ಮೊಳಗುತ್ತಿರುವ ಕೆಚ್ಚಿನಿಂದ ಕೂಡಿದ ಕುದುರೆಗಳ ಸಮೂಹದಿಂದ, ಸಾರಥಿಗಳ ಹೂಂಕಾರದಿಂದ, ಹಿಡಿದ ಶಸ್ತ್ರ ಸಮೂಹದಿಂದ, ನಾನಾರೀತಿಯ ಧ್ವಜಗಳ ಗುರುತಿನಿಂದ ಬಿಡದಂತೆ ಬಾರಿಸುವ ಗಂಟೆಯ ಘಣಘಣವೆಂಬ ಶಬ್ದ ಹೊಮ್ಮುತ್ತಿರಲು ಸೂರ್ಯ-ಇಂದ್ರರ ರಥಗಳನ್ನು ಕೀಳು ಮಾಡಿ ರಥಸೈನ್ಯ ಬಂದಿತು. ಏನೆಂದು ಹೇಳಲಿ ? ೩೭. ಎರಡು ಛತ್ರಿಗಳನ್ನು ಹಿಡಿದು, ಎರಡೆರಡು ಚಾಮರಗಳನ್ನು ಹಿಡಿದು, ಹಗಲು ದೀವಟಿಕೆಗಳ, ಸಣ್ಣ ಡೋಲು ಜಾಗಟೆಗಳ, ಪರಾಕ್ರಮದ ಬಿರುದುಗಳ ಬಿಂಕದಿಂದ ನಡೆದು ನೆಗೆಯುತ್ತ, ಹೂಂಕಾರಮಾಡಿ ತೋಳನ್ನು

CC-0. Jangamwadi Math Collection. Digitized by eGangotri

ಖಡುಗ ಖೇಟಕ ಸಬಳ ಕತ್ತಿ ಹೇರಿಟ್ಟಿ ವಂ
ಕುಡಿ ಪರಶು ತೋಮರ ಗದಾದಿಯಾಯುಧಮನುರೆ
ಜಡಿವುತ್ತೆ ಸಿಡಿಲ ಬಳಗಂಗಳೆನೆ ಬಂದುದು ಪದಾತಿಬಲಮೇನೆಂಬೆನು ೩೭

ಮತ್ತಗಜಘಟೆಗಳೊಂದೊಂದು ಪದ್ಮಂಗಳ
ತ್ಯುತ್ತಮವರೂಥಂಗಳೈದು ಪದ್ಮಂ ಕುದುರೆ
ಹತ್ತು ಪದ್ಮಂಗಳ್ ಪದಾತಿ ತಾನಿಪ್ಪತ್ತು ಪದ್ಮವೊರ್ವನ ಬಳಿಯೊಳು
ಸುತ್ತಲೋಲೈಪುದಿಂತಪ್ಪದೊರೆಗಳ್ಗಳೆಂ
ಬತ್ತೆಂಟುಕೋಟಿ ಮೊದಲಿಂಗಂಧಕಾಸುರಂ
ಗಿತ್ತಲಿದರಿನಿತಾತ್ಮಬಲಮದೆಲ್ಲಂ ಬಂದುದಾ ಕ್ಷಣದೊಳೇನೆಂಬೆನು ೩೮

ಕೆಳದಿಯರ್ ಸುತ್ತ ಬರುತಿರೆ ರಾಣಿವಾಸದಂ
ದಳರನ್ನ ಪಲ್ಲಕ್ಕಿ ಪನ್ನಂಗಗಳ್ ಮುಚ್ಚಿ
ತಳರ್ದುವಗಣಿತಮಾನೆ ಕುದುರೆಗಳ ಮೇಲೆ ಮೆಲ್ಮುಸುಕಿನಿಂ ಕೆಲಕೆಲಬರು
ಬಳಿಕೈದಲಿತ್ತ ದಂಡಿಗೆ ಮಂಚ ಪಲ್ಲಕ್ಕಿ
ಗಳನಡರ್ದೆತ್ತು ಕುದುರೆಗಳೇರಿಯಾಳಿಯರ್
ಬಳಸಿಬರೆ ಬಂದತ್ತು ವಾರಾಂಗನಾನಿವಹವೋರಂತೆ ಸಂಭ್ರಮದೊಳು ೩೯

ಬಂಡಿಯೊಳ್ ಕನಕಭೂಷಣವಸನಪರಿಮಳದ
ಭಂಡಾರಗಳ್ ಬರಲ್ ಘೃತತೈಲಮುಖ್ಯರಸ
ಭಾಂಡಂಗಳಖಿಳಧಾನ್ಯಂಗಳಾ ಪೇರ್ವೆತ್ತುಗಳ ಮೇಲೆ ಬರೆ ತಾವ್ರುದ

ತಟ್ಟುತ್ತ ಖಡ್ಗ, ಡಾಲು, ಭರ್ಜಿ, ಕತ್ತಿ, ಉದ್ದನಾದ ಈಟಿ, ಚಾವಟಿಯ ತುದಿ, ಕೊಡಲಿ, ತೋಮರ, ಗದೆ ಮೊದಲಾದ ಆಯುಧಗಳನ್ನು ಚೆನ್ನಾಗಿ ಝಳಪಿಸಿ ಬೀಸುತ್ತ, ಸಿಡಿಲ ಬಳಗಗಳೋ ಎನ್ನುವಂತೆ ಪದಾತಿಸೈನ್ಯ ಬಂದಿತು. ಅದನ್ನು ಏನೆಂದು ಹೇಳಲಿ ? ೩೮. ಮದಿಸಿದ ಆನೆಗಳು ಒಂದೊಂದು ಪದ್ಮಗಳು, ಅತ್ಯುತ್ತಮವಾದ ಶ್ರೇಷ್ಠ ರಥಗಳು ಐದ ಪದ್ಮ, ಕುದುರೆ ಹತ್ತು ಪದ್ಮಗಳು, ಪದಾತಿಸೈನ್ಯ ಇಪ್ಪತ್ತು ಪದ್ಮದಷ್ಟು ಒಬ್ಬನ ಬಳಿಯೇ ಇದ್ದಿತು. ಈ ರೀತಿಯಾದ ಎಂಬತ್ತು ಕೋಟಿ ನಾಯಕರು ಸುತ್ತಲೂ ಓಲೈ ಸುತ್ತ ಅಂಧಕಾಸುರನ ಬಳಿಯಿದ್ದರು. ಅವನ ಇಷ್ಟು ಸೈನ್ಯವೂ ಆ ಕ್ಷಣದಲ್ಲಿ ಬಂದಿತು. ೩೯. ಸಖಿಯರು ಸುತ್ತ ಬರುತ್ತಿರಲು ರಾಣಿವಾಸದ ಮೇನೆ, ರನ್ನದ ಪಲ್ಲಕ್ಕಿಗಳು ಮೇಲು ಹೊದಿಕೆಗಳನ್ನು ಮುಚ್ಚಿಕೊಂಡು ಹೊರಟುವು. ಅಸಂಖ್ಯಾತವಾದ ಆನೆಗಳ ಕುದುರೆಗಳ ಮೇಲೆ ಮೆಲ್ಮುಸುಕಿನಿಂದ ಕೆಲ ಕೆಲವರು ಜೊತೆಯಲ್ಲಿ ಬರಲು, ಇತ್ತಕಡೆ ವೀಣೆ, ಮಂಚ, ಪಲ್ಲಕ್ಕಿಗಳನ್ನು ಹೊತ್ತುಕೊಂಡಿರುವ ಎತ್ತು, ಕುದುರೆಗಳನ್ನು ಸೇವಕಿಯರು ಬಳಸಿ ಬರಲು, ಸೂಳೆಯರ ಸಮೂಹವು ಸಾಲಾಗಿ ಸಂಭ್ರಮದಿಂದ ಬಂದಿತು. ೪೦. ಬಂಡಿಗಳಲ್ಲಿ ಚಿನ್ನದಾಭರಣ, ವಸ್ತ್ರ, ಪರಿಮಳದ ಭಂಡಾರಗಳು ಬರಲು ; ತುಪ್ಪ, ಎಣ್ಣೆ ಮೊದಲಾದ ರಸದ ಪಾತ್ರೆಗಳು ; ಎಲ್ಲ ವಿಧವಾದ ಧಾನ್ಯಗಳೂ ದೊಡ್ಡ ಭಾರ ಹೊರುವ ಎತ್ತುಗಳ

CC-0. Jangamwadi Math Collection. Digitized by eGangotri

ಭಾಂಡತತಿ ಪೊಂಬೆಳ್ಳಿಗೊಪ್ಪರಿಗೆ ಕೊಡಪಾನ
ಗಿಂಡಿ ಪರಿಯಣ ಪಡಿಗ ಮಣೆಮಂಚ ಸುಪ್ಪತಿಗೆ
ಮಂಡೆ ಮಲಗುಗಳಡ್ಡೆವೊರೆಯಾಳ್ಗಳಟ್ಟಣೆಸಿ ನಡೆತಂದುದೇವೇಳ್ವೆನು ೪೦

ವಾಣಿಯರ್ ಚಿನ್ನವರದರ್ ದೂಸಿಗರ್ ಮುತ್ತು
ಮಾಣಿಕದ ಪರದರ್ ವಣಿಗ್ವರರ್ ಗಂಧಿಗರ್
ಬಾಣಸರ್ ತಾಂಬೂಲಿಗರ್ ಮಾಲೆಗಾರರಾ ಪಾಲ್ಮೊಸರ ಮಾರುವವರು
ಗಾಣಿಗರ್ ಚಿಪ್ಪಿಗರ್ ಮುಚ್ಚಿಗರ್ ಲಾಳಕರ್
ಸಾಣೆಗರ್ ಕೆಲಸಿಗರ್ ಮಡಿವಳರ್ ಬಿಸಿನೀರ
ಕೇಣಿಗರ್ ಜೂಜುಗಾರರ್ ಮುಖ್ಯರೊದಗಿ ಬರುತಿರ್ದರೇಂ ವಣ್ಣಿಸುವೆನು ೪೧

ಕೊಡಲಿ ಗುದ್ದಲಿ ಹಾರೆ ಮಚ್ಚು ಕುಡುಗೋಲವರ್
ಕೊಡನೀರ ಕೊಟ್ಟಣದವರ್ ಕಸಂಗಳನಿರದೆ
ಗುಡಿಪ ಕೂಲಿಗಳವರ್ ಬಳೆದೊಡಿಪ ಕುಂಟಣಿಯು ನಡೆಯಿಸುವ ಮುದಿವೆಣ್ಗಳು
ಅಡುಗೂಳವರ್ ದೋಸೆ ಕಜ್ಜಾಯ ರೊಟ್ಟಿ ಹೊಯಿ
ಗಡುಬತಿರಸಂಗಳುಪ್ಪಿನಕಾಯಿ ಹುರಿಮೆಣಸು
ಗಡಲೆ ಸಕ್ಕರೆ ಶುಂಠಿ ಕಬ್ಬುವಿಲ್ಲೆಗಳನುರೆ ಮಾರುವರ್ ಬರುತಿರ್ದರು ೪೨

ಕವಿ ಗಮಕಿ ವಾದಿ ಗಾಯಕ ವಾಗ್ಮಿ ನಟ ಹಾಸ್ಯ
ದವರಾದಿ ಚೌಷಷ್ಟಿಕಲೆಯವರ್ ಲೇಖನ
ವ್ಯವಹಾರ ಕೃಷಿ ಖಡ್ಗ ಗೋಪಾಲ ಯಾಚಕಂಗಳೆನಿಪ ಷಟ್ಕರ್ಮದಿಂದ

ಮೇಲೆ ಬರಲು ; ತಾಮ್ರದ ಪಾತ್ರೆಗಳು, ಚಿನ್ನ-ಬೆಳ್ಳಿಯ ಕೊಪ್ಪರಿಗೆ-ಕೊಡಗಳು, ಗಿಂಡಿ, ತಟ್ಟೆಗಳು, ಪೀಕದಾನಿ, ಮಣೆಮಂಚ, ಸುಪ್ಪತ್ತಿಗೆ-ತಲೆದಿಂಬುಗಳನ್ನು ಅಡ್ಡೆಯ ಮೇಲೆ ಹೊರುವ ಆಳುಗಳ ಸಾಲುಗಳು ನಡೆದುಬಂದುವು. ೪೧. ವ್ಯಾಪಾರಿಗಳು, ಚಿನ್ನದ ವ್ಯಾಪಾರಿಗಳು, ಜವಳಿ ವ್ಯಾಪಾರಿಗಳು, ಮುತ್ತು-ಮಾಣಿಕ್ಯದ ವ್ಯಾಪಾರಿಗಳು, ವರ್ತಕ ಶ್ರೇಷ್ಠರು. ಪರಿಮಳದ್ರವ್ಯ ಮಾರುವವರು, ಅಡಿಗೆಯವರು, ತಾಂಬೂಲ ಕೊಡುವವರು, ಹೂವಾಡಿಗರು, ಹಾಲು-ಮೊಸರನ್ನು ಮಾರುವವರು, ಗಾಣಿಗರು, ಬಟ್ಟೆ ಹೊಲಿಯು ವವರು, ಚಪ್ಪಲಿ ಹೊಲಿಯುವವರು, ಲಾಳವನ್ನು ಜೋಡಿಸುವವರು, ಆಯುಧಗಳನ್ನು ಸಾಣೆ ಹಿಡಿಯುವವರು, ಹಜಾಮರು, ಅಗಸರು, ಬಿಸಿನೀರನ್ನು ಮಾರುವವರು, ಜೂಜು ಗಾರರು ಮೊದಲಾದವರು ಬರುತ್ತಿದ್ದರು. ೪೨. ಕೊಡಲಿ, ಗುದ್ದಲಿ, ಹಾರೆ, ಮಚ್ಚು, ಕುಡುಗೋಲಿನವರು, ಕೊಡದಲ್ಲಿ ನೀರು ತರುವವರು, ಕೊಟ್ಟಣ ಕುಟ್ಟುವವರು, ಕಸ ಗುಡಿಸುವ ಕೂಲಿಗಳು, ಬಳೆಗಾರರು, ಸೂಳಗಾರಿಕೆ ನಡೆಸುವ ಮುದುಕಿಯರು, ಅಡಿಗೆ ಯವರು, ದೋಸೆ, ಕಜ್ಜಾಯ-ರೊಟ್ಟಿ-ಹೊಯ್ಗಡುಬು-ಅತಿರಸ-ಉಪ್ಪಿನಕಾಯಿ-ಹುರಿ ಮೆಣಸು, ಕಡಲೆ-ಸಕ್ಕರೆ-ಶುಂಠಿ-ಕಬ್ಬಿನ ಬಿಲ್ಲೆಗಳನ್ನು ಮಾರುವವರು ಬರುತ್ತಿದ್ದರು. ೪೩. ಕವಿ, ಗಮಕಿ, ವಾದಿ, ಗಾಯಕ, ವಾಗ್ಮಿ, ನಟ, ಹಾಸ್ಯಗಾರರೇ ಮುಂತಾದ ಅರವತ್ನಾಲ್ಕು ಕಲೆಯವರು ಲೇಖನ, ವ್ಯವಹಾರ, ಬೇಸಾಯ, ಖಡ್ಗಧಾರ, ದನಕಾಯುವ, ಭಿಕ್ಷೆ

CC-0. Jangamwadi Math Collection. Digitized by eGangotri

ತವೆ ಜೀವಿಪಷ್ಟಾದಶಂಗಳೆಂದೆನಿಪ ಜಾ
ತಿಪಳವರ್ ನೂರೊಂದು ಕುಲದವರ್ ತಂತಮ್ಮ
ಹವಣೆನುದ್ಯೋಗಂಗಳಿಂದಖಿಳಲೋಕದ ಜನಂ ಕೂಡಿ ಬರುತಿರ್ದರು ೪೩

ಕುದುರೆಗಳ ಜೀನ ಹಲ್ಲಣ ಲೇವೆ ಕಬ್ಬಿ ಕಂ
ದದ ಹಕ್ಕರಿಕೆ ಚಬುಕು ಮೊಗರಂಬ ವಾಘೆಗಳ್
ಮದಗಜದ ಹೊರಜೆ ರಂಚಿಕೆ ಗುಳಂ ಘಂಟೆ ಸರಪಳಿ ಮಿಳಿಗಳಾದಿಯಾಗಿ
ಪುದಿದ ಪರಿಕರವೆಸೆವ ರಾವ್ತವಾವ್ತರ್ಕಳಂ
ಗದ ಜೋಡು ವಜ್ರಾಂಗಿ ಕೊಳಗ ಸೀಸಕ ಭುಜಯು
ಗದ ರಕ್ಕೆ ಸುಂಡಾಯ್ತು ಕೈದುಗಳ್ ತುಂಬಿ ಬಂಡಿಗಳಗಣಿತಂ ಬಂದುವು ೪೪

ಹುರಿದ ಹೊಸಭಂಗಿ ಹದಗೆಯ್ದು ಪಿನಿಕೂಟದೊಳ್
ಬೆರೆದಮಲ್ ಜಾಯಿಕಾಯ್ ಪತ್ರೆ ಕಸಕಸೆಯೆಂಬ
ತರತರದೊಳೆಸೆವ ಲಹರಿಗಳುಮೆಲ್ಲಾ ಪಕ್ಷಿಮೃಗಕುಲದ ಮಾಂಸಂಗಳು
ಸುರೆ ಬಗಿನಿಯಿಚಲೋಲೆಯ ಮರಗಳಾದಿ ಮು
ತ್ತಿರದೆಸೆವ ಗಂಗಸಾಗರಮುಖ್ಯರಕ್ಕಸರ
ಪರಿಪರಿಯ ಭೋಜನದ್ರವ್ಯಂಗಳಿಡಿದ ಭಂಡಿಗಳ್ಕೈದೆ ಬರುತಿರ್ದುವು ೪೫

ತಪ್ಪಿದೆತ್ತೆಮ್ಮೆ ತೊತ್ತಿರ್ಮಕ್ಕಳಂ ಕೂಗು
ದಪ್ಪದರಸುತೆ ಹೇರ್ಗಳಂ ಬಿಸುಟ ಹೋರಿಗಳ
ಚಪ್ಪರಣೆಯಿಂ ನಿಲಿಸಿ ಮೂಗುನೇಣಮುತೆ ಹೇರ್ಗಳ ಹೊಲಿವುತೋಸರವನು

ಬೇಡುವ ಆರು ವೃತ್ತಿಗಳಿಂದ ಜೀವಿಸುವ ಹದಿನೆಂಟು ಜಾತಿ ಮುಖ್ಯರು, ನೂರೊಂದು ಕುಲದವರು ತಮ ತಮಗೆ ಯೋಗ್ಯವಾದ ಉದ್ಯೋಗಗಳಿಂದ ಎಲ್ಲ ಲೋಕದ ಜನರೂ ಕೂಡಿಕೊಂಡು ಬರುತ್ತಿದ್ದರು. ೪೪. ಕುದುರೆಗಳ ಜೀನು, ಥಡಿ, ಹೊಲಿದು ಸಿದ್ಧಪಡಿಸಿದ ಆಸನ, ಕಡಿವಾಣ, ಕುತ್ತಿಗೆಯ ಕೆಳಪಕ್ಕೆಯ ರಕ್ಷೆ, ಚಾಮಟ, ಮುಖವಾಡ, ಲಗಾಮುಗಳು, ಮದದಾನೆಯ ಕತ್ತಿನ ಹಗ್ಗ, ಅಂಬಾರಿ, ಗೊಂಡೆ, ಗಂಟೆ, ಸರಪಳಿ, ಚರ್ಮದ ಹಗ್ಗ ಮೊದಲಾಗಿ ತುಂಬಿದ ಸಾಮಾನುಗಳಿಂದ ಕೂಡಿದ ರಾವುತರು-ಮಾವುತರುಗಳು, ಶರೀರದ ಕವಚ, ಲೋಹದ ಅಂಗಿ, ಕರ್ಣಾಭರಣ, ಕಬ್ಬಿಣದ ಟೋಪಿ, ಎರಡೂ ಭುಜದ ರಕ್ಷೆ, ಮುಖರಕ್ಷೆ, ಆಯುಧಗಳನ್ನು ತುಂಬಿ ಅಸಂಖ್ಯಾತವಾದ ಬಂಡಿಗಳು ಬಂದುವು. ೪೫. ಹುರಿದ ಹೊಸದಾದ ಭಂಗಿಸೊಪ್ಪು, ಹದಮಾಡಿದ ಮಾದಕಪದಾರ್ಥದಲ್ಲಿ ಬೆರೆತ ಅಮಲಿನ ಜಾಕಾಯಿ-ಪತ್ರೆ, ಗಸಗಸೆಯೆಂಬ ನಾನಾ ರೀತಿಯ ಮಾದಕ ಪದಾರ್ಥಗಳು, ಎಲ್ಲಾ ಹಕ್ಕಿ, ಮೃಗಗಳ ಮಾಂಸಗಳು, ಹೆಂಡ, ಬಗಿನಿ, ಈಚಲು-ತಾಳೆಮರ ಮೊದಲಾಗಿ ಎಲ್ಲ ಪರಿಕರಗಳಿಂದ ಕೂಡಿದ ಸಾರಾಯಿ, ರಾಕ್ಷಸರ ನಾನಾರೀತಿಯ ಭೋಜನ ಪದಾರ್ಥಗಳಿಂದ ತುಂಬಿದ ಬಂಡಿಗಳು ಬರುತ್ತಿದ್ದುವು. ೪೬. ತಪ್ಪಿಸಿಕೊಂಡ ಎತ್ತು, ಎಮ್ಮೆ, ಆಳು ಮಕ್ಕಳನ್ನು ಕೂಗುತ್ತ, ಹುಡುಕುತ್ತ, ಹೇರು(ಹೊತ್ತಿದ್ದ ಪದಾರ್ಥ)ಗಳನ್ನು ಬಿಸುಟ ಹೋರಿಗಳನ್ನು ಚಪ್ಪರಿಸಿ ನಿಲ್ಲಿಸಿ ಮೂಗುದಾರ ಹಾಕುತ್ತ, ಹೇರು

CC-0. Jangamwadi Math Collection. Digitized by eGangotri

ಅಪ್ಪಿ ನೆಗಪುತ್ತೆ ಸತಿಯಂ ನಡೆಸುತತಿಭಾರ
ಮುಪ್ಪ ಪೊರೆಗಳನಿಳುಪುತಲ್ಲಲ್ಲಿ ನಿಲುತೆ ಕಡು
ಮುಪ್ಪು ಜವ್ವನದ ನಾನಾ ತೆರನ ಸದಳಿಗರ್ ನಡೆದು ಬರುತಿರ್ದರಂದು ೪೬

ಅಂತು ನಡೆತಂದು ನೆಲದಗಲದೊಳ್ ಬಿಟ್ಟುದು ತ
ದಂತರದೊಳಿನನಪರವಾರ್ಧಿಗಿಳಿಪಂ ತಮಂ
ಮುಂತಾದ ನಿಶಿಚಿಹ್ನಮೆದ್ದುವಾ ಸಂಜೆವರೆ ಮೊಳಗಿದುವು ಪಾಳೆಯದೊಳು
ಕಾಂತಿಯಿಂದೆಸೆದುವಗಣಿತದೀಪವೆಲ್ಲರುಂ
ಸಂತಸದೊಳುಂಡೊರಗುತಿರೆ ಪೂರ್ವಗಿರಿಯ ಶಿಖ
ರಾಂತರದ ಪದ್ಮರಾಗದ ಕಳಸವೆನೆ ಸೂರ್ಯಮಂಡಲಂ ರಂಜಿಸಿದುದು ೪೭

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ೪೮

ನಲವತ್ತೇಳನೆಯ ಸಂಧಿ ಸಂಪೂರ್ಣ

ಗಳನ್ನು ಹೊಲಿಯುತ್ತ, ವಾಸರವನ್ನು ಅಪ್ಪಿ ಎತ್ತುತ್ತ, ಹೆಂಡತಿಯರನ್ನು ನಡೆಸುತ್ತ, ಅತಿಭಾರವಾದ ಹೊರೆಗಳನ್ನು ಇಳಿಸುತ್ತ, ಅಲ್ಲಲ್ಲಿ ನಿಲ್ಲುತ್ತ ಅತಿಯಾದ ಮುದಿತನ ಮತ್ತು ಪ್ರಾಯದಿಂದ ಕೂಡಿದ ನಾನಾರೀತಿಯ ಧಾನ್ಯವ್ಯಾಪಾರಿಗಳು ನಡೆದು ಬರುತ್ತಿದ್ದರು. ೪೭. ಈ ರೀತಿ ನಡೆದುಬಂದು ವಿಸ್ತಾರವಾದ ಸ್ಥಳದಲ್ಲಿ ಸೈನ್ಯವು ಬೀಡುಬಿಟ್ಟಿತು. ಅಷ್ಟರಲ್ಲಿ ಸೂರ್ಯನು (ಮುಳುಗಿದನು) ಪಶ್ಚಿಮ ಸಮುದ್ರಕ್ಕೆ ಇಳಿದನು. ಕತ್ತಲು ಮೊದಲಾದ ರಾತ್ರಿಯ ಚಿಹ್ನೆಗಳು ಕಾಣಿಸಿಕೊಂಡುವು. ಆ ಸಂಜೆಯಾಯಿತೆಂಬುದನ್ನು ಸೂಚಿಸುವ ವಾದ್ಯಗಳು ಮೊಳಗಿದುವು. ಪಾಳೆಯದಲ್ಲಿ ಅಸಂಖ್ಯಾತವಾದ ದೀಪಗಳು ಬೆಳಗಿದುವು. ಎಲ್ಲರೂ ಸಂತೋಷದಿಂದ ಊಟಮಾಡಿ ನಿದ್ರಿಸುತ್ತಿರಲು ಪೂರ್ವ ಬೆಟ್ಟದ ಶಿಖರದ ಮೇಲೆ ಪದ್ಮರಾಗದ ಕಳಶದಂತೆ ಸೂರ್ಯ ಮಂಡಲವು ರಂಜಿಸಿತು. ೪೮. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯುವರೆವಿಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ, ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ನಲವತ್ತೇಳನೆಯ ಸಂಧಿ ಮುಗಿಯಿತು

CC-0. Jangamwadi Math Collection. Digitized by eGangotri

ನಲವತ್ತೆಂಟನೆಯ ಸಂಧಿ

ಸೂಚನೆ : ಸರ್ವಸನ್ನಾಹದಿಂದಂಧಕಾಸುರನಿರದೆ
ಸರ್ವೇಶ್ವರನ ಮೇಲೆ ದಂಡೆತ್ತಿ ಬರೆ ಕೇಳ್ದು
ಶರ್ವನತಿಕೋಪದಿಂದಾ ಖಳನ ಸಂಹರಿಪ ಲೀಲೆಯಿಂ ನಡೆತಂದನು

ಅಸಮಾಕ್ಷ ನತಪಕ್ಷ ಲಸದಮಳಹಸ್ತಧೃತ
ವಸು ವಿಶದಶಶಿಕಾಂತ ಸುಸಮುಸರ್ವಾಂಗ ಗ
ರ್ವಿಸಿದಖಿಳದಾನವಪ್ರಸರಾಭ್ರನಿರಸನಶ್ವಸನ ಮರುದಶನಭೂಷ
ಅಸಿತಗಳ ಭಸಿತಧರಹಸಿತಮುಖ ಲಸಿತಸುಖ
ಸಸಿದಲೆಯ ಬಿಸಿಗಣ್ಣ ಪಂಪಾವಿರೂಪಾಕ್ಷ
ವಸುಧೆಯಾನತರ ಪಾಲಿಸು ಕುಸುಮಶರದಹನಭಸಿತಭೂಷಿತವಿಗ್ರಹ ೧

ರಾಮ ಕೇಳೈಯಂಧಕಾಸುರಂ ಹರುಷದಿಂ
ತಾಮರಸಮಿತ್ರೋದಯಂಗಂಡು ಕೂಚಿಯಂ
ನೇಮಿಸಿ ಮಹಾಬಲಕೆ ಸಕಲಸನ್ನಾಹಸಂರಂಭದಿಂ ನಿಬಿಡಮಾದ
ಭೀಮವಿಕ್ರಮರಾಕ್ಷಸೇಂದ್ರರೈತರೆ ಸಮರ
ಭೀಮನೈದಿದನೈದುತಿರ್ಪ ಸೇನಾರಜದೆ
ಭೂಮಿಯಾಗಸ ದಿಶಾಮಂಡಲಮಭೇದಮೆನಲೇನೆಂಬೆನಚ್ಚರಿಯನು ೨

ಸೂಚನೆ : ಹೀಗೆ ಸಕಲ ಸಿದ್ಧತೆಯಿಂದ ಅಂಧಕಾಸುರನು ಕೂಡಲೆ ಈಶ್ವರನ ಮೇಲೆ ದಂಡೆತ್ತಿ ಹೊರಟನು. ಅದನ್ನು ಕೇಳಿ ಶಿವನು ಅತಿಯಾದ ಕೋಪದಿಂದ ಆ ರಾಕ್ಷಸನನ್ನು ಸಂಹಾರಮಾಡುವ ಲೀಲೆಯನ್ನು ಮೆರೆಯಲು ಬಂದನು. ೧. ಮುಕ್ಕಣ್ಣ, ಭಕ್ತರಪಕ್ಷ ಪಾತಿ, ಪ್ರಕಾಶಿಸುವ ಮಂಗಳಕರವಾದ ಕೈಯಲ್ಲಿ ಅಗ್ನಿಯನ್ನು ಧರಿಸಿದವನು, ಪ್ರಖ್ಯಾತ ನಾದ ಚಂದ್ರನಿಗೆ ಸಮನಾದ ಕಾಂತಿಯಿಂದ ಬೆಳಗುವ ದೇಹವುಳ್ಳವನು, ಗರ್ವಗೊಂಡ ರಾಕ್ಷಸರೆಂಬ ದಟ್ಟವಾಗಿ ಆವರಿಸಿದ ಕಪ್ಪು ಮೋಡಗಳನ್ನು ಚದುರಿಸುವ ವಾಯು ಸರ್ಪಾಭರಣ, ನೀಲಕಂಠ, ವಿಭೂತಿ ಧರಿಸಿದ, ನಗುಮುಖಿಯಾದ ಉಲ್ಲಸಿತವಾದ ಸುಖ ಪ್ರದನಾದ ಚಂದ್ರಶೇಖರನೂ, ಅಗ್ನಿನೇತ್ರನೂ, ಮನ್ಮಥನನ್ನು ಸುಟ್ಟು ಬೂದಿಯಿಂದ ಭೂಷಿತವಾದ ದೇಹವುಳ್ಳ ಪಂಪಾವಿರೂಪಾಕ್ಷನೇ ಈ ಲೋಕದ ಆನತ ಜನರನ್ನು ಕಾಪಾಡು. ೨. ಸಿದ್ಧರಾಮ, ಕೇಳಯ್ಯ. ಅಂಧಕಾಸುರನು ಸಂತೋಷದಿಂದ ಸೂರ್ಯೋ ದಯವನ್ನು ನೋಡಿ ಸೈನ್ಯಕ್ಕೆ ಮುಂದೆ ನಡೆಯಲು ಆಜ್ಞೆಯಿತ್ತು, ಸಕಲಸಿದ್ಧತೆಯ ಸಂಭ್ರಮದಿಂದ ಒತ್ತಾಗಿ ಭಯಂಕರ ಪರಾಕ್ರಮಿಗಳಾದ ರಾಕ್ಷಸನಾಯಕರು ಬರುತ್ತಿರಲು ಸಮರಭೀಮನು ಬರುತ್ತಿದ್ದನು. ಹಾಗೆ ಸಾಗುತ್ತಿದ್ದ ಸೈನ್ಯದ ಧೂಳಿನಿಂದ ಭೂಮಿ,

CC-0. Jangamwadi Math Collection. Digitized by eGangotri

ವಾಜಿಹೇಷಾರವಂ ಖುರಪುಟಧ್ವನಿ ಹಸ್ತಿ
ರಾಜಿಘಂಟಾಸ್ವನಂ ಬೃಂಹಿತಧ್ವಾನಂ ವಿ
ರಾಜಿಪ ವರೂಥಚಕ್ರದ ಘೋಷಮಖಿಳವಾದ್ಯಂಗಳಾರ್ಭಟಿತಂಗಳು
ಆಜಿಲಂಪಟಭಟರ ತೊಡರ ಘಲ್ಲಣೆ ಮದ್ಯ
ಭೋಜಿಗಳ ವಚದಬ್ಬರಂಗಳಿಡಿಕಿರಿಯಲಾ
ರಾಜೀವಜಾಂಡವಿರದೊಡೆಯದಿರದೆಂಬಿನಂ ಪಡೆ ನಡೆದುದೇನೆಂಬೆನು ೩

ಬಲಮಯಂ ಧಾತ್ರಿಯೆಲ್ಲಂ ಶತ್ರುಜಯಮನದ
ಛಲಮಯಂ ದೊರೆಗಳೆಲ್ಲಂ ಕಡಿವ ಸಾಹಸದ
ಕಲಿಮಯಂ ಸೇನೆಯೆಲ್ಲಂ ರಥಛತ್ರಚಾಮರಕೇತುಭಲ್ಲಗಳ
ಕುಲಮಯಂ ಗಗನವೆಲ್ಲಂ ಮೊರೆವ ವಾದ್ಯಸಂ
ಕುಲಮಯಂ ದೆಸೆಗಳೆಲ್ಲಂ ದನುಜಭೀತಿವಿ
ಹ್ವಲಮಯಂ ಲೋಕಂಗಳೆಲ್ಲಮೆನೆ ನಡೆದುದಾಬಲಮದೇಂ ವಣ್ಣಿಸುವೆನು ೪

ತಗ್ಗಿದುದು ಧಾತ್ರೀತಳಂ ಕುಲಾಚಲಚಯಂ
ನೆಗ್ಗಿದುದುಸಿರ್ಪೊಯ್ವ ಬಸಿರ ತಳ್ಳಂಕದಿಂ
ಮುಗ್ಗಿದುದು ದಿಕ್ಕರಿಕುಲಂ ಬಳಲಿ ಬಸವಳಿದು ಫಣಿಪತಿಫಣಾಸಹಸ್ರಂ
ಬಗ್ಗಿದುದು ತುಳಿದೊಡೆದ ಮಣ್ಣಕಪ್ಪರದಂತೆ
ನೆಗ್ಗಿದುದು ಕೂರ್ಮಖರ್ಪರಮಾ ಬಲದ ಭಾರ
ದಗ್ಗಳಿಕೆಯೆಂತೋ ಗಣಿತಕ್ಕಳವೆ ಸಿದ್ಧರಾಮೇಶ ಕೇಳ್ ಕೌತುಕವನು ೫

ಆಕಾಶ, ದಿಙ್ಮಂಡಲ ಇವುಗಳ ವ್ಯತ್ಯಾಸವನ್ನೇ ಅರಿಯಲಸಾಧ್ಯವೆನ್ನಲು ಆಶ್ಚರ್ಯವನ್ನು ಏನೆಂದು ಹೇಳಲಿ ? ೩. ಕುದುರೆಗಳ ಹೇಷಾರವ, ಗೊರಸಿನ ಶಬ್ದ, ಆನೆಗಳ ಸಮೂಹದ ಗಂಟೆಗಳ ಧ್ವನಿ, ಘೀಂಕಾರದ ಶಬ್ದ, ಪ್ರಕಾಶಿಸುವ ಉತ್ತಮ ರಥಗಳ ಘೋಷ, ಎಲ್ಲ ವಾದ್ಯಗಳ ಅಬ್ಬರ, ಯುದ್ಧಾಸಕ್ತ ಭಟರ ತೊಡವುಗಳ ಘಲ್ ಎಂಬ ಶಬ್ದ, ಹೆಂಡ ಕುಡುಕರ ಮಾತಿನ ಬಿರುಸುಧ್ವನಿ ತುಂಬಲು ಆ ಬ್ರಹ್ಮಾಂಡವು ಖಂಡಿತ ಒಡೆದು ಹೋಗದಿರದು ಎನ್ನುವ ರೀತಿಯಲ್ಲಿ ಸೈನ್ಯ ನಡೆಯುತ್ತಿತ್ತು. ೪. ಭೂಮಿಯೆಲ್ಲ ಸೈನ್ಯ ಮಯವಾಗಿತ್ತು. ದೊರೆಗಳೆಲ್ಲರ ಮನಸ್ಸಿನಲ್ಲಿ ಶತ್ರುಗಳನ್ನು ಜಯಿಸುವ ಛಲವೇ ಕೂಡಿತ್ತು. ಸೈನ್ಯವೆಲ್ಲ ಕಡಿಯುವ ಸಾಹಸ ಪರಾಕ್ರಮದಿಂದ ಕೂಡಿತ್ತು, ಆಕಾಶವೆಲ್ಲ ರಥ, ಛತ್ರ, ಚಾಮರ, ಧ್ವಜ, ಈಟಿಗಳ ಮಯವಾಗಿತ್ತು. ದಿಕ್ಕೆಲ್ಲ ಮೊಳಗುವ ವಾದ್ಯ ಸಮೂಹದ ಮಯವಾಗಿತ್ತು. ದಿಕ್ಕುಗಳೆಲ್ಲ ರಾಕ್ಷಸರ ಹೆದರಿಕೆಯಿಂದ ವಿಹ್ವಲಮಯ ವಾಗಿತ್ತು ಎನ್ನುವಂತೆ ಆ ಸೈನ್ಯ ನಡೆಯಿತು. ೫. ಭೂತಳ ತಗ್ಗಿತು, ಕುಲಪರ್ವತಗಳ ಸಮೂಹ ಕುಸಿಯಿತು. ಏದುಸಿರುಬಿಡುವ ಹೊಟ್ಟೆಯ ಅಲುಗಾಟದಿಂದ ದಿಗ್ಗಜಗಳ ಸಮೂಹ ಮುಗ್ಗರಿಸಿತು. ಬಳಲಿ ಆಯಾಸಗೊಂಡು ಆದಿಶೇಷನ ಸಾವಿರತಲೆಗಳು ಆಯಾಸಗೊಂಡು ದಣಿದು ಬಗ್ಗಿದುವು. ತುಳಿದು ಒಡೆದುಹಾಕಿದ ಮಣ್ಣ ಚಿಪ್ಪಿನಂತೆ ಆದಿಕೂರ್ಮನ ಬೆನ್ನಚಿಪ್ಪು ನೆಗ್ಗಿಹೋಯಿತು. ಆ ಸೈನ್ಯದ ಭಾರದ ಹೆಚ್ಚಳ ಎಷ್ಟೊ

CC-0. Jangamwadi Math Collection. Digitized by eGangotri

ರಥಮನೇರ್ದಾ ಖಳಂ ಪೋಗುತಿರೆ ಮುಗ್ಗಿ ಸಾ
ರಥಿ ಕೆಡೆದುವಶ್ವಂಗಳಂಡಿಸಿದುವಾ ಮುಂದೆ
ಪಥದೊಳಡಿಗಡಿಗೆ ದುಶ್ಶಕುನಂಗಳಗಣಿತಂಗಳ್ ನೆಗಳ್ದುವಾ ದೈತ್ಯನ
ಪೃಥುಕಿರೀಟಾಗ್ರದೊಳ್ ಪದ್ದು ಕುಳ್ಳಿರಲುಮವಿ
ತಥಮೆಂದು ತಿಳಿಯದೆ ತೆರಳ್ದನಸುರಂ ಮರಣ
ಕಥನಮಂ ತಿಳಿಯಲೀವುದೆ ಮನದಹಂಕೃತಂ ರಾಮ ಕೇಳಚ್ಚರಿಯನು ೬

ಗರ್ಬದಿಂದಿಂತು ನೆಲನಗಲದೊಳ್ ನಡೆವ ಚಾ
ತುರ್ಬಲಂ ಪಯಣಪಯಣದೊಳೆ ಖಂಡಂಗಳಂ
ಸರ್ಬದೇಶಂಗಳಂ ಘನಪರ್ವತಂಗಳಂ ಸಕಲಘೋರಾರಣ್ಯದ
ಪರ್ಬುಗೆಗಳಂ ನಗರ ನಿಗಮ ಖೇಡ ಮಡಂಬ
ಖರ್ಬಡ ಗ್ರಾಮಾಗ್ರಹಾರ ನಗರಂಗಳಂ
ಪೆರ್ಬೊಳೆಗಳಂ ದಾಂಟಿ ಕೈಲಾಸಪುರದ ರಾಜ್ಯದ ವಳಿತಮಂ ಪೊಕ್ಕುದು ೭

ಸೆರೆಸೂರೆ ತತಿಗಳಂ ಪಿಡಿದರಿದಿರಾದವರ
ನಿರಿದರಾಂತೊಡನೆ ಕಾದಿದ ದುರ್ಗತತಿಯ ಮೇ
ಲುರುಬಿ ಧೂಳ್ಗೋಂಟೆಯಂ ಕೊಂಡು ನೆಲಸರಿತಮಂ ಮಾಡುತಿರಲಸುರನಿತ್ತ
ನೆರೆಜಾಣ ಭಟ್ಟನೊರ್ವನ ಕರೆದು ನೀಂ ಪೋಗಿ
ಕರಿಗೊರಲನೊಡನೆ ನಮ್ಮಯ ವೈರಿಯಾದ ಸಿರಿ
ಯರೆಯನಂ ಕೊಟ್ಟು ಬಾಳ್ವನೊ ಬಂದು ಕಾದುವನೊ ಕೇಳ್ದು ಬಾ ಪೋಗೆಂದನು ೮

ಹೇಗೆ ಹೇಳಬಹುದು ? ಲೆಕ್ಕ ಹಾಕಲು ಸಾಧ್ಯವೇ ? ಸಿದ್ಧರಾಮೇಶ, ವಿಸ್ಮಯವನ್ನು ಕೇಳು. ೬. ಆ ರಾಕ್ಷಸನು ರಥವನ್ನು ಹತ್ತಿ ಹೋಗುತ್ತಿರಲು ಸಾರಥಿ ಮುಗ್ಗರಿಸಿ ಕೆಳಗುರುಳಿದನು. ಕುದುರೆಗಳು ಭೂಮಿಯ ಮೇಲೆ ಬಿದ್ದುವು ; ಮುಂದೆ ನಡೆಯದೆ ಹಿಮ್ಮೆಟ್ಟಿದುವು. ದಾರಿಯಲ್ಲಿ ಅಡಿಗಡಿಗೆ ಅಸಂಖ್ಯಾತ ಅಪಶಕುನಗಳಾದುವು. ದೊಡ್ಡ ಕಿರೀಟದ ತುದಿಯಲ್ಲಿ ಹದ್ದು ಕುಳಿತಿದ್ದರೂ ಸತ್ಯವೆಂದು ತಿಳಿಯದೆ ರಾಕ್ಷಸನು ಮುಂದುವರಿದನು. ಮರಣದ ಕಥೆಯನ್ನು ತಿಳಿಯಲು ಮನಸ್ಸಿನ ಅಹಂಕಾರ ಬಿಡುವುದೇ? ಸಿದ್ಧರಾಮ ಆಶ್ಚರ್ಯವನ್ನು ಕೇಳು: ೭. ಗರ್ವದಿಂದ ಈ ರೀತಿ ನೆಲವಗಲಕ್ಕೂ ನಡೆಯುವ ಚತುರಂಗಬಲ ಪ್ರಯಾಣಮಾರ್ಗದಲ್ಲಿ ಖಂಡಗಳನ್ನೂ, ಎಲ್ಲ ದೇಶಗಳನ್ನೂ, ದೊಡ್ಡ ಪರ್ವತಗಳು, ಘನವಾಗಿ ಹಬ್ಬಿದ್ದ ನಿಬಿಡವಾದ ಕಾಡುಗಳನ್ನೂ, ಗ್ರಾಮ, ನಗರ, ಪಟ್ಟಣ, ಹಳ್ಳಿ, ಊರು, ದೊಡ್ಡೂರು, ಗ್ರಾಮ, ಅಗ್ರಹಾರ,ನಗರಗಳನ್ನೂ, ದೊಡ್ಡ ನದಿಗಳನ್ನೂ ದಾಟಿ ಕೈಲಾಸಪುರದ ರಾಜ್ಯದ ಗಡಿಯನ್ನು ಪ್ರವೇಶಿಸಿತು. ೮. ಸೆರೆ ಹಿಡಿದರು, ಸೂರೆ ಮಾಡಿದರು, ಗುಂಪುಗಳನ್ನು ಹಿಡಿದರು, ಅಡ್ಡಿ ಬಂದವರನ್ನು ಇರಿದರು, ಎದುರಿಸಿದೊಡನೆ ಯುದ್ಧಮಾಡಿದ ಕೋಟೆಗಳ ಮೇಲೆ ಬಿದ್ದು ಧೂಳಿಪಟಮಾಡಿ ನೆಲಸಮ ಮಾಡುತ್ತಿರಲು' ಇತ್ತಕಡೆ ರಾಕ್ಷಸನು ಕಡುಜಾಣನಾದ ಭಟ್ಟನೊಬ್ಬನನ್ನು ಕರೆದು ನೀನು ಹೋಗಿ ವಿಷ ಕಂಠನೊಡನೆ ನಮ್ಮ ಶತ್ರುವಾದ (ಲಕ್ಷ್ಮೀಪತಿ) ವಿಷ್ಣುವನ್ನೂ ಕೊಟ್ಟು ಬದುಕುತ್ತಾ

CC-0. Jangamwadi Math Collection. Digitized by eGangotri

ಜಿಯ್ಯೆಂದೆರಂಗಿ ಬೀಳ್ಕೊಂಡು ಖಳಪಾತಕಂ
ರಯ್ಯಮಾದಶ್ವರತ್ನಮನೇರಿ ನಿಖಿಳಜಗ
ದಯ್ಯನಿರ್ಪಮಳ ಕೈಲಾಸದ ಬಹಿರ್ದ್ವಾರದೆಡೆಯೊಳೈತಂದುನಿಂದು
ಕಯ್ಯೆತ್ತಿಯಂಧಕಾಸುರನ ವೀರತ್ವಗಳಂ
ಪುಯ್ಯಲ್ಚುತಿರೆ ಶಂಕರಂ ಕೇಳ್ದು ಕರೆಸಲವ
ನೊಯ್ಯನೈತಂದೀಶನಿದಿರಿನೊಳ್ ನಿಂದು ಬಳಿಕಾ ಭಟ್ಟನಿಂತೆಂದನು ೯

ಧಾತ್ರೀವಿಲೋಲನಮರಣ್ಯನಿರ್ಮೂಲನಂ
ಗೋತ್ರಪ್ರಚೂರ್ಣಮಖಿಳಾಬ್ಧಿಶೋಷಣಮಿಂದು
ಮಿತ್ರಮಂಡಲಕಂಪಮುಡುಪತನ ಮಹಿಪಕರಿಕೂರ್ಮಪತ್ನೀಮಂಗಳ
ಸೂತ್ರಖಂಡಂಗಳಾದುವು ಮತ್ಪತೀದಂಡ
ಯಾತ್ರೆಯೊಳ್ ತವವಿಜಯಕಾರಣಂ ನೀಂ ಕಮಲ
ನೇತ್ರನಂ ಕೊಟ್ಟು ಕಾಣ್ಬೆಯೋ ಬಂದು ಕಾದುವೆಯೊ ಪೇಳೆಂದನಾ ಭಟ್ಟನು ೧೦

ತಾಪಮಾಯ್ತುಜಹರೀಂದ್ರರ್ಗಂಧಕಾಸುರಪ್ರ
ತಾಪಶಿಖಿ ಕಿವಿಗಳಂ ಪುಗೆ ಬಳಿಕ್ಕೊಡನಂತ
ಕೋಪಮಾಸುರಚರವಚಂಗೇಳ್ದು ನಂದೀಶ ವೀರೇಶ್ವರಾದಿಗಳ್ಗೆ
ಕೋಪಮಾವರಿಸಲಿವನಾರ್ ಬೆನ್ನನುಗಿ ಕರುಳ
ನೀ ಪಂಥಮಂ ಬಗುಳ್ವ ನಾಲಿಗೆಯನರಿ ಕಾಲೊ
ಳಾಪನಿತು ಸದೆಯನುತ್ತೆದ್ದು ತಮತಮಗೆ ಗರ್ಜಿಸಿದರೇಂ ವರ್ಣಿಸುವೆನು ೧೧

ನೆಯೋ ಅಥವಾ ಬಂದು ಯುದ್ಧಮಾಡುತ್ತಾನೋ ಕೇಳಿ ಬಾ ಹೋಗು ಎಂದನು. ೯. ಅಪ್ಪಣೆಯೆಂದು ನಮಸ್ಕರಿಸಿ ಬೀಳ್ಕೊಂಡು ರಾಕ್ಷಸನ ಹೊಗಳುಭಟ್ಟನು ಉತ್ತಮವಾದ ಕುದುರೆಯನ್ನೇರಿ ಎಲ್ಲ ಲೋಕದ ಒಡೆಯನೂ ಇರುವ ಪವಿತ್ರವಾದ ಕೈಲಾಸದ ಹೊರದ್ವಾರದ ಬಳಿಗೆ ಬಂದು ನಿಂತು ಕೈಯೆತ್ತಿ ಅಂಧಕಾಸುರನ ಪರಾಕ್ರಮವನ್ನು ಕೂಗಿ ಹೇಳುತ್ತಿರಲು ಶಂಕರನು ಕೇಳಿ ಅವನನ್ನು ಕರೆಸಿದನು. ಅವನು ತ್ವರೆಯಿಂದ ಬಂದು ಈಶ್ವರನ ಎದುರಿಗೆ ನಿಂತು, ಅನಂತರ ಹೀಗೆಂದನು. ೧೦. ನಿನ್ನನ್ನು ಜಯಿಸುವ ಕಾರಣದಿಂದ ನನ್ನ ಒಡೆಯನು ದಂಡೆತ್ತಿಬರಲು ಭೂಮಿ ಕಂಪಿಸಿತು. ದೇವತೆಗಳೆಂಬ ಕಾಡು ನಾಶವಾಯಿತು, ಪರ್ವತಗಳು ಚೂರಾದುವು, ಸಕಲ ಸಾಗರಗಳೂ ಬತ್ತಿದುವು. ಚಂದ್ರ-ಸೂರ್ಯ ಮಂಡಲಗಳು ಕಂಪಿಸಿದುವು, ನಕ್ಷತ್ರಗಳು ಉದುರಿದುವು. ಆದಿಶೇಷ, ದಿಗ್ಗಜ, ಆದಿಕೂರ್ಮರ ಹೆಂಡತಿಯರ ತಾಳಿಗಳು ತುಂಡಾದುವು. ನೀನು ವಿಷ್ಣುವನ್ನು ಕೊಟ್ಟು ಅವನನ್ನು ಕಂಡು ಬದುಕುತ್ತೀಯೋ ಅಥವಾ ಬಂದು ಯುದ್ಧಮಾಡುತ್ತೀಯೋ ಹೇಳು ಎಂದು ಆ ಭಟ್ಟನು ಶಿವನನ್ನು ಕೇಳಿದನು. ೧೧. ಅಂಧಕಾಸುರನ ಪ್ರತಾಪಾಗ್ನಿ ಕಿವಿಗಳನ್ನು ಹೊಗಲು ಬ್ರಹ್ಮ-ವಿಷ್ಣುಗಳಿಗೆ ತಾಪವಾಯ್ತು. ಬಳಿಕ ಆ ಯಮಸಮಾನನಾದ ರಾಕ್ಷಸನ ದೂತನ ಮಾತುಗಳನ್ನು ಕೇಳಿ ನಂದೀಶ-ವೀರೇಶ ಮೊದಲಾದವರಿಗೆ ಕೋಪ ಆವರಿಸಲು ಇವನಾರು? ಬೆನ್ನನ್ನು ಮುರಿ, ಕರುಳನ್ನು ಕೀಳು, ಈ ನಿರ್ಧಾರದ ಮಾತನ್ನು

CC-0. Jangamwadi Math Collection. Digitized by eGangotri

ಸಾಕುಸಾಕಾಯ್ತು ಹೋಹೋ ನಿಲ್ಲಿರೈ ನಿಮ್ಮ
ನೀ ಕಳಾವಂತನೇಗೈದನವನೆಂದುದಂ
ಜೋಕೆಯಿಗೆ ಪೇಳ್ದನಿವನಂ ಕೊಲ್ಲ ಸಲ್ಲದೆಂದೆಲ್ಲರಂ ನಿಲಿಸಿ ಬಳಿಕ
ಆ ಕುಮತಿಯುಂ ಕರೆದು ಹರಿಯೆತ್ತ ತಾನೆತ್ತ
ಲೇಕಹಂಕರಿಸುವಂ ಕಾದುವೆವು ಪೋಗೆನಲ್
ಜೋಕೆ ಮಿಗಲೀ ವರ್ತಮಾನವನವಂ ಬಂದು ಖಳಪತಿಗೆ ಸೂಚಿಸಿದನು ೧೨

ಮತ್ತೆ ಹೊಡಕರಿಸಿ ಕೋಪಾಗ್ನಿ ರಕ್ಕಸನ ಮೈ
ಪೊತ್ತಿದುದು ಕೈಲಾಸಪರ್ವತವನೀ ಕ್ಷಣಂ
ಮುತ್ತುವೆನೆನುತ್ತಿರುಳ್ಪಗಲಾಗಿ ದಂಡು ನಡೆತರುತಿರಲ್ಕಾ ಕ್ಷಣದೊಳು
ಇತ್ತಲಸುರನ ದಾಳಿಗರ್ಗೆ ಸೆರೆಸೂರೆಗಳ
ನಿತ್ತು ರಾಜ್ಯದ ಜನಂ ಪೊರಬಾಗಿಲೊಳ್ ಮೊರೆಯಿ
ಡುತ್ತಿರಲ್ ಕೇಳ್ದು ಕೋಪದೊಳೀಶ್ವರಂ ನಂದಿಕೇಶ್ವರಂಗಿಂತೆಂದನು ೧೩

ಅದ್ಯಂತದೇವರ್ಕಳಂ ಸಿದ್ಧಗಂಧರ್ವ
ವಿದ್ಯಾಧರಾಳಿಯುಂ ಭೂತವೇತಾಳ ಬಲ
ಚೋದ್ಯ ರುದ್ರಪ್ರಮಥಗಣಸೈನ್ಯಮುಂ ಬ್ರಹ್ಮವಿಷ್ಣುಗಳ ಸೇನೆಗಳನು
ಸದ್ಯಪ್ರಸನ್ನಾಹದಿಂದಂಧಕಾಸುರ ವ
ಧೋದ್ಯುಕ್ತರಾಗಿದಿರ್ವಂಡೆತ್ತಲೆಂದಮರ
ನದ್ಯಂಗನಾಥರಂ ನೇಮಿಸಲ್ ಕರೆಸಿದಂ ನಂದೀಶನುತ್ಸವದೊಳು ೧೪

ಬೊಗಳುವ ನಾಲಗೆಯನ್ನು ಸೀಳು, ಕಾಲಿನಲ್ಲಿ ಸಾಮರ್ಥ್ಯವಿದ್ದಷ್ಟೂ ಸದೆಬಡಿ ಎನ್ನುತ್ತ ತಾವುತಾವೇ ಗರ್ಜಿಸಿದರು. ೧೨. ಸಾಕು ಸಾಕು, ಆಯ್ತು, ಹೋ ಹೋ ನಿಲ್ಲಿರಯ್ಯಾ. ನಿಮ್ಮನ್ನು ಈ ಕಲಾವಂತನು ಏನು ಮಾಡಿದನು ? ಆ ರಾಕ್ಷಸನು ಹೇಳಿದುದನ್ನು ಇವನು ಎಚ್ಚರಿಕೆಯಿಂದ ಪೂರ್ಣವಾಗಿ ಹೇಳಿದನು. ಇವನನ್ನು ಕೊಲ್ಲುವುದು ಸರಿಯಲ್ಲ ಎಂದು ಎಲ್ಲರನ್ನೂ ತಡೆದು ಅನಂತರ ಆ ದುಷ್ಟಬುದ್ಧಿಯನ್ನು ಕರೆದು, ಹರಿಯೆಲ್ಲಿ ? ನಿನ್ನ ರಾಜನೆಲ್ಲಿ ? ಅದೇಕೆ ಅಹಂಕಾರಪಡುತ್ತಾನೆ ? ನಾವು ಯುದ್ಧ ಮಾಡುತ್ತೇವೆ, ಹೋಗು ಎಂದನು. ಅವನು ಹಿಂದಿರುಗಿ ಬಂದು ಆ ಸಂಗತಿಯನ್ನು ಚಾಚೂ ತಪ್ಪದಂತೆ ರಾಕ್ಷಸ ರಾಜನಿಗೆ ವಿವರಿಸಿದನು. ೧೩. ಮತ್ತೆ ಕೋಪಾಗ್ನಿ ಪ್ರಕಟವಾಗಿ ರಾಕ್ಷಸನ ಮೈ ಉರಿಯಿತು. ಕೈಲಾಸಪರ್ವತವನ್ನು ಈ ಕ್ಷಣ ಮುತ್ತುತ್ತೇನೆ ಎಂದು (ರಾತ್ರಿ ಹಗಲೂ) ಹಗಲಿರುಳೂ ಬಿಡದೆ ಸೇನೆ ಹೊರಟುಬರುತ್ತಿರಲು ಆ ಸಮಯದಲ್ಲಿ ಇತ್ತಲಾಗಿ ರಾಕ್ಷಸನ ದಾಳಿಕಾರರಿಗೆ ಸೆರೆಯಾಗಿ, ಸರ್ವಸ್ವವನ್ನೂ ಸೂರೆಗೊಟ್ಟ ರಾಜ್ಯದ ಜನರು ಊರ ಹೊರಬಾಗಿಲಿನಲ್ಲಿ ಮೊರೆಯಿಡುತ್ತಿರಲು ಕೇಳಿ, ಈಶ್ವರನು ಕೋಪದಿಂದ ನಂದಿಯನ್ನು ಕುರಿತು ಹೇಳಿದನು. ೧೪. ಎಲ್ಲ ದೇವರುಗಳನ್ನೂ, ಸಿದ್ಧ-ಗಂಧರ್ವ-ವಿದ್ಯಾಧರ ಸಮೂಹವನ್ನೂ, ಭೂತ-ಭೇತಾಳ ಬಲವನ್ನೂ, ವಿಸ್ಮಯಕರವಾದ ರುದ್ರ-ಪ್ರಮಥಗಣ ಸೈನ್ಯವನ್ನೂ, ಬ್ರಹ್ಮ-ವಿಷ್ಣುಗಳ ಸೈನ್ಯವನ್ನೂ ಸಕಲಸನ್ನಾಹದೊಡನೆ ಅಂಧಕಾಸುರನನ್ನೂ

CC-0. Jangamwadi Math Collection. Digitized by eGangotri

ಅನ್ನೆಗಂ ಸಿದ್ಧ ವಿದ್ಯಾಧರರ್ ಕಿಂಪುರುಷ
ಕಿನ್ನರರ್ ಗರುಡ ಗಂಧರ್ವಾಪ್ಸರರ್ ಯಕ್ಷ
ರುನ್ನತಪಿಶಾಚ ಗುಹ್ಯಕ ಭೂತನಿಕರ ಸಾಧ್ಯಾಳಿ ರಾಕ್ಷಸವೀರರು
ಸನ್ನುತ ಮಯೂರ ತುರಗರ್ ಸಕಲಲೋಕಗ
ಳ್ಗೆನ್ನೊಳ್ಪಲಂ ಬೆರಸಿ ಬರೆ ಸಕಲ ದಿಗಧಿಪರ್
ತನ್ನೆಡಬಲಂಗಳೊಳ್ ಬರೆ ಕರಿಯನೇರಿ ಸುರಪಾಲಕಂ ಪೊರಮಟ್ಟನು ೧೫

ತವಕದಿಂದಷ್ಟವಸುಗಳ ನವಬ್ರಹ್ಮರವ
ರವರ ಸಂತತಿಗಳಾ ದ್ವಾದಶಾದಿತ್ಯರೊ
ಪ್ಪುವ ಚತುರ್ದಶಮನುಗಳಖಿಳಗ್ರಹಾಳಿ ಖಳರಲ್ಲದಗಣಿತದನುಜರು
ಸುವಿವೇಕಿ ರಾಜಋಷಿಗಳ್ ಜಗದ ಖಗಮೃಗದ
ನಿವಹಾಧಿಪ ಸ್ಥಾವರರ್ ಜಂಗಮಾದಿಯೊಳ್
ತವೆ ಬಲ್ಲಿದರ್ ಬೆರಸಿಬರೆ ಬ್ರಹ್ಮನಂಚೆಯುನಡರ್ದಿರದೆ ಪೊರಮಟ್ಟನು ೧೬

ಅಗಣಿತ ಜನಾರ್ದನರನಂತಬ್ರಹ್ಮರ್ ಬಹಳ
ದಿಗಧಿಪರಸಂಖ್ಯಾತಲೋಕಪಾಲರ್ ಧರೆಯು
ಯುಗಯುಗದ ಬಹುಚಕ್ರವರ್ತಿಗಳಪಾರದ್ವೀಪಾಧಿಪರ್ ಖಂಡಂಗಳ
ಮಿಗೆ ಪಾರಿಪಪರಿಮಿತ ರಾಜರ್ಕಳಮಿತಭೂ
ಮಿಗಳನಾಳ್ವರಸುಗಳ್ ಬರೆ ಮಂತ್ರತಂತ್ರ ಮಾ
ಯೆಗಳೊಡನೆ ಬಲಮೊಡಂ ಬರೆ ವಿಷ್ಣು ಗರುಡನನಡರ್ದಿರದೆ ಪೊರಮಟ್ಟನು ೧೭

ಸಂಹರಿಸಲು ಸಿದ್ಧರಾಗಿ ಅವರ ಸೇನೆಗೆದುರಾಗಿ ದಂಡೆತ್ತಿಬರಲಿ ಎಂದು ಗಂಗಾಧರನು ಆಜ್ಞಾಪಿಸಲು ನಂದೀಶನು ಉತ್ಸಾಹದಿಂದ ಅವರನ್ನೆಲ್ಲ ಕರೆಸಿದನು. ೧೫. ಅಷ್ಟರಲ್ಲಿ ಸಿದ್ಧ-ವಿದ್ಯಾಧರರು, ಕಿಂಪುರುಷ-ಕಿನ್ನರರು, ಗರುಡ-ಗಂಧರ್ವ, ಅಪ್ಸರ-ಯಕ್ಷರು, ಭಯಂಕರವಾದ ಪಿಶಾಚ-ಗುಹ್ಯಕ, ಭೂತಸಮೂಹ, ಸಾಧ್ಯರ ಗುಂಪು, ರಾಕ್ಷಸವೀರರು, ಶ್ರೇಷ್ಠರಾದ ಮಯೂರ, ತುರಗರು, ಸಕಲಲೋಕಗಳವರೂ ತಮ್ಮ ಬಲವಾದ ಸೈನ್ಯವನ್ನು ಕೂಡಿಕೊಂಡು ಬರಲು, ಎಲ್ಲ ದಿಕ್ಪಾಲಕರೂ ತನ್ನ ಎಡ-ಬಲಗಳಲ್ಲಿ ಬರಲು ಆನೆಯನ್ನೇರಿ ದೇವೇಂದ್ರನು ಹೊರಟನು. ೧೬. ತ್ವರೆಯಿಂದ ಅಷ್ಟ ವಸುಗಳೂ, ಒಂಬತ್ತು ಜನ ಬ್ರಹ್ಮರೂ-ಅವರವರ ಸಮೂಹಗಳೂ, ಹನ್ನೆರಡು ಮಂದಿ ಸೂರ್ಯರೂ, ಶ್ರೇಷ್ಠರಾದ ಹದಿನಾಲ್ಕು ಮನುಗಳೂ, ಎಲ್ಲ ಗ್ರಹಗಳ ಸಮೂಹ, ದುಷ್ಟರಲ್ಲದ ಅಸಂಖ್ಯಾತ ರಾಕ್ಷಸರೂ, ಉತ್ತಮ ವಿವೇಕಿಗಳಾದ ರಾಜಋಷಿಗಳೂ, ಜಗತ್ತಿನ ಪಕ್ಷಿ-ಪ್ರಾಣಿಗಳ ಒಡೆಯರೂ, ಸ್ಥಾವರ-ಜಂಗಮಗಳಲ್ಲಿ ಬಲಶಾಲಿಗಳಾದವರೂ ತನ್ನನ್ನು ಜೊತೆಗೂಡಿ ಬರಲು ಬ್ರಹ್ಮನು ಹಂಸವನ್ನೇರಿ ಜಾಗ್ರತೆ ಹೊರಟನು. ೧೭. ಅಸಂಖ್ಯಾತ ವಿಷ್ಣುಗಳು, ಅಸಂಖ್ಯ ಬ್ರಹ್ಮರು, ಬಹಳವಾದ ದಿಕ್ಪಾಲಕರು, ಅಸಂಖ್ಯಾತ ಲೋಕಪಾಲರು, ಭೂಮಿಯ ನಾನಾಯುಗದ ಅನೇಕ ಚಕ್ರವರ್ತಿಗಳು, ಅಪಾರವಾದ ದ್ವೀಪಗಳ ದೊರೆಗಳು, ಖಂಡಗಳನ್ನು ಚೆನ್ನಾಗಿ ಪಾಲಿಸುವ ಅಪರಿಮಿತ–ರಾಜರುಗಳು, ದೊಡ್ಡ

CC-0. Jangamwadi Math Collection. Digitized by eGangotri

ವೀರೇಶ ಗುಹ ಗಣಪ ನಂದೀಶ ಭೃಂಗೀಶ
ಭೈರವರನೇಕಸೈನ್ಯಂ ಬೆರಸಿ ನಡೆವರತಿ
ಘೋರಾಂಗ ಕಾಪಾಲಿ ಕಾಲಲೋಹಿತ ಧೂಮ್ರವರ್ಣ ವಿಷಧರಲೋಚನ
ಕ್ರೂರಾಸ್ಯ ವಜ್ರದಂಷ್ಟ್ರಕನನಿಲವೇಗನಂ
ಗಾರ ಮುಖ್ಯಂತ್ಯಾಗ್ನಿ ಶರಭಮುಖಮುಖ್ಯಮಾ
ದಾ ರೌದ್ರರೂಪುಗಳ ರುದ್ರಗಣಮಗಣಿತಂ ಬಲವೆರಸಿ ನಡೆತಂದುದು ೧೮

ಕಾಲಾಪಹರಣ ಘಂಟಾಕರ್ಣ ಧೂಮಾಂಗ
ಹಾಲಾಹಲಾಶನ ವಿರೂಪಾಕ್ಷ ವಿಕಟಾಂಗ
ಕಾಲಸ್ವರೂಪ ರವಿಶಶಿಪಾತ ಪರ್ವತಾಭರಣ ವಡಭಾಗ್ನಿತಿಲಕ
ನೀಲಾಂಗ ವಹ್ನಿಮುಖ ಸಾಗರಾಪೋಷಕಂ
ಕಾಳಧರ ಸರ್ವಭಕ್ಷಕ ಮೃತ್ಯುಹರ ಮಹಾ
ಕಾಳ ನಂದಿಪ್ರಮುಖ ಪ್ರಮಥಗಣವೊಗ್ಗಾಗಿ ಸೈನ್ಯಸಹಿತೈತಂದುದು ೧೯

ವಾಮದೊಳ್ ಶಕ್ತೀಗಣಂ ಬೆರಸು ಪಾರ್ವತೀ
ಭಾಮೆ ಬರೆ ವೃಷಭಯೋಗಾಚಾರ್ಯರುಂ ಮುನಿ
ಸ್ತೋಮಮಾ ಬಲಗಡೆಯೊಳೈತರಲ್ ಮುಂದೆ ನಾನಾ ವೇದಮುಗ್ಗಡಿಸಲು
ಸಾಮಿಪ್ಯ ಸಾಲೋಕ್ಯ ಸಾರೂಪ್ಯದವರುಂ ಸ
ನಾಮದಗಣಿತರುದ್ರತತಿ ಮುಂಗೆಬರೆ ಕಾಲ
ಕಾಮಾಂತಕಂ ಮಹಾವೃಷಪತಿಯನೇರಿ ಕೈಲಾಸಮಂ ಪೊರಮಟ್ಟನು ೨೦

ದೊಡ್ಡ ರಾಜ್ಯಗಳನ್ನಾಳುವ ಅರಸರುಗಳು ಬರಲು ಮಂತ್ರ-ತಂತ್ರ-ಮಾಯೆಗಳು ಜೊತೆಯಲ್ಲಿಯೇ ಎಡ-ಬಲಗಳಲ್ಲಿ ಬರಲು ವಿಷ್ಣು ಗರುಡನನ್ನೇರಿ ಹೊರಟನು. ೧೮. ವೀರೇಶ, ಗುಹ, ಗಣಪತಿ, ನಂದೀಶ, ಭೃಂಗೀಶ, ಭೈರವರು ಅಪಾರ ಸೈನ್ಯದೊಡಗೂಡಿ ಬರಲು, ಅವರ ಜೊತೆಯಲ್ಲಿ ಅತಿಘೋರಾಂಗ, ಕಾಪಾಲಿ, ಕಾಲಲೋಹಿತ, ಧೂಮ್ರವರ್ಣ, ವಿಷಧರಲೋಚನ, ಕ್ರೂರಾಸ್ಯ, ವಜ್ರದಂಷ್ಟ್ರಕ, ನೀಲವೇಗ, ಅಂಗಾರಮುಖ್ಯರು, ಅಂತ್ಯಾಗ್ನಿ, ಶರಭಮುಖ ಮೊದಲಾದ ಆ ಭಯಂಕರರೂಪದ ರುದ್ರಗಣ ಅಸಂಖ್ಯಾತವಾಗಿ ಸೈನ್ಯದೊಡನೆ ಕೂಡಿಕೊಂಡು ಬಂದಿತು. ೧೯. ಕಾಲಾಪಹರಣ, ಘಂಟಾಕರ್ಣ, ಧೂಮಾಂಗ, ಹಾಲಾಹಲಾಸನ, ವಿರೂಪಾಕ್ಷ, ವಿಕಟಾಂಗ, ಕಾಲಸ್ವರೂಪ, ರವಿಶಶಿಪಾತ, ಪರ್ವತಾಭರಣ, ವಡಬಾಗ್ನಿತಿಲಕ, ನೀಲಾಂಗ, ವಹ್ನಿಮುಖ, ಸಾಗರಪೋಷಕ, ಕಂಕಾಳಧರ, ಸರ್ವಭಕ್ಷಕ, ಮೃತ್ಯುಹರ, ಮಹಾಕಾಳ, ನಂದಿಯೇ ಮೊದಲಾದ ಪ್ರಮಥಗಣ ಗುಂಪುಗೂಡಿ ಸೈನ್ಯಸಮೇತ ಹೊರಟುಬಂದಿತು. ೨೦. ಎಡದಲ್ಲಿ ಶಕ್ತಿಗಣದೊಡಗೂಡಿ ಪಾರ್ವತಿ ಬರಲು, ವೃಷಭ-ಯೋಗಾಚಾರ್ಯರು, ಮುನಿಸ್ತೋಮ ಆ ಬಲಗಡೆಯಲ್ಲಿ ಮುಂದೆ ನಾನಾ ವೇದ ಘೋಷಿಸುತ್ತಿರಲು, ಸಾಮಿಪ್ಯ-ಸಾಲೋಕ್ಯ-ಸಾರೂಪ್ಯದವರು, ತನ್ನ ಹೆಸರಿನವರೇ ಆದ ಅಸಂಖ್ಯಾತ ರುದ್ರಸಮೂಹ ಮುಂದೆ ಬರುತ್ತಿರಲು, ಯಮ-ಮನ್ಮಥರ ಸಂಹಾರಿಯಾದ ಈಶ್ವರನು ಮಹಾವೃಷಭಪತಿಯನ್ನು ಏರಿ ಕೈಲಾಸವನ್ನು

CC-0. Jangamwadi Math Collection. Digitized by eGangotri

ಎಲೆ ಸಿದ್ಧರಾಮ ಕೇಳ್ ಮಳೆಹನಿಗಳಂ ಭಗಣ
ಕುಲಮನೆಣಿಸಲ್ ಬಹುದು ಕಡಲೇಳರೊಳಗಿಪ್ಪ
ಮಳಲನೆಣಿಸಲ್ ಬಹುದು ಶಿವಗಣಂಗಳ ಬಲದ ಲೆಕ್ಕಮನಿತಿನಿತೆಂಬುದ
ಬಳಿಕಾ ಶಿವಂ ಬಲ್ಲನರಿಯನೆಂದೂಹಿಸುವೊ
ಡಳವಲ್ಲದಖಿಳಶಿವಗಣಮಂದು ದುರ್ಗದಿಂ
ದಿಳಿದು ಬೀಡಂ ಬಿಟ್ಟು ದಂಡೆತ್ತಿ ಪಯಣಪಯಣದೊಳೆ ನಡೆತರುತಿರ್ದುದು ೨೧

ಡವುಡೆ ಮುಂತಾಗಿರ್ದ ಬಹುವಾದ್ಯದಬ್ಬರಕೆ
ಕಿವುಡಾಯ್ತು ಜಗತೀಕುಲಂ ಬಲದ ಪದಹತಿಗೆ
ತವುಡಾಯ್ತು ಗಿರಿಸಂಕುಲಂ ಸೈನ್ಯಭಾರದಿಂ ಸೀರೆಯಂ ಸುತ್ತಿದಂತೆ
ಸಿವುಡಾದನಹಿರಾಜನಖಿಳದಿಗ್ಗಜರಾಜಿ
ಯವುಡೂರಿ ಮಣ್ಗಚ್ಚಿದುವು ಗಜಂ ತುಳಿದೊಡೆದ
ಕವುಡೆಯಂತಾಯ್ತು ಕಚ್ಛಪನ ಬೆನ್ ಸಿದ್ಧರಾಮೇಶ ಕೇಳದ್ಭುತವನು ೨೨

ಗೊಂದಣಿಸಿ ನಡೆವ ಮದಕರಿಗಳಿಂ ಹರಿಗಳಿಂ
ಮುಂದಣಿಂ ಮುಂಚುವ ಭಟರ್ಗಳಿಂ ತೇರ್ಗಳಿಂ
ದಂದಣದೊಳೈತಪ್ಪ ವೀರರಿಂ ಧೀರರಿಂದೆಸೆವ ಬಹುವಾದ್ಯದಿಂದೆ
ಒಂದನೆಣಿಸದೆ ಬರ್ಪ ಕಲಿಗಳಿಂ ಛಲಿಗಳಿಂ
ಸಂದಣಿಪ ಛತ್ರಧ್ವಜಾಳಿಯಿಂ ಧೂಳಿಯಿಂ
ಕುಂದದೆಸೆವದ್ಭುತರಸಂಗಳಿಂ ಕಂಗಳಿಂ ನೋಡೆ ಪಡೆ ಪಡಪಾದುದು ೨೩

ಬಿಟ್ಟು ಹೊರಟನು. ೨೧. ಎಲೆ ಸಿದ್ಧರಾಮ, ಕೇಳು. ಮಳೆಹನಿಗಳನ್ನು-ನಕ್ಷತ್ರ ಸಮೂಹವನ್ನು ಎಣಿಸಬಹುದು! ಸಪ್ತಸಾಗರದ ಮರಳನ್ನು ಎಣಿಸಬಹುದು ; ಶಿವಗಣದ ಲೆಕ್ಕ ಇಷ್ಟೇ ಎಂಬುದು ಆ ಶಿವನಿಗೂ ಸಹ ತಿಳಿದಿದೆಯೋ-ಇಲ್ಲವೋ ಎಂದು ಊಹಿಸಲು ಸಾಧ್ಯವಿಲ್ಲದಷ್ಟು ಎಲ್ಲ ಶಿವಗಣಗಳೂ ಅಂದು ಕೋಟೆಯಿಂದ ಇಳಿದು ಬೀಡುಬಿಟ್ಟು ದಂಡೆತ್ತಿ ಪ್ರಯಾಣಮಾಡುತ್ತ ಬರುತ್ತಿದ್ದರು. ೨೨. ಸಣ್ಣ ಡೋಲು ಮೊದಲಾದ ಅನೇಕ ವಾದ್ಯಗಳ ಆರ್ಭಟಕ್ಕೆ ಸಕಲ ಜಗತ್ತೂ ಕಿವುಡಾಯಿತು. ಸೈನ್ಯದ ಪಾದಾಘಾತಕ್ಕೆ ಪರ್ವತಸಮೂಹ ಧೂಳೀಪಟವಾಯಿತು. ಸೇನೆಯ ಭಾರದಿಂದ ಸೀರೆಯನ್ನು ಸುತ್ತಿದಂತೆ ಆದಿಶೇಷ ಸಿಂಬಿಯಾದನು. ಎಲ್ಲ ದಿಗ್ಗಜ ಸಮೂಹಗಳೂ ಅವಡೂರಿ ನೆಲ ಕಚ್ಚಿದುವು. ಆದಿಕೂರ್ಮನ ಬೆನ್ನು ಆನೆ ತುಳಿದು ಒಡೆದ ಕವಡೆಯಂತಾಯಿತು. ಸಿದ್ಧರಾಮೇಶ ಅದ್ಭುತವನ್ನು ಕೇಳು. ೨೩. ಗುಂಪುಗೂಡಿ ನಡೆಯುವ ಮದ್ದಾನೆಗಳಿಂದ, ಕುದುರೆಗಳಿಂದ, ಎಲ್ಲವನ್ನೂ ಮೀರಿ ಮುಂದುವರಿಯುವ ಭಟರುಗಳಿಂದ, ರಥಗಳಿಂದ, ಪಲ್ಲಕ್ಕಿಯಲ್ಲಿ ಬರುವ ವೀರರಿಂದ-ಧೀರರಿಂದ, ಶಬ್ದಮಾಡುತ್ತಿರುವ ನಾನಾ ವಾದ್ಯಗಳಿಂದ, ಒಂದೆ ನೋಡದೆ ಬರುವ ಕಲಿಗಳಿಂದ, ಛಲಗಾರರಿಂದ, ಗುಂಪುಗೂಡುವ ಛತ್ರ-ಧ್ವಜಗಳಿಂದ ಧೂಳಿನಿಂದ ಮುಸುಕಾಗದೆ ಪ್ರಕಾಶಿಸುವ ಅದ್ಭುತ ರಸಗಳಿಂದ, ಕಣ್ಣುಗಳಿಂದ ನೋಡಲು

CC-0. Jangamwadi Math Collection. Digitized by eGangotri

ಏನೆಂಬೆನ್ಯೆ ರಾಮ ಕೇಳತ್ತಣಿಂ ಹರನ
ಸೇನೆಯೈತಪ್ಪುದಂ ಕೇಳ್ದಿತ್ತಣಿಂ ಖಳನ
ಸೇನೆಯೈದಿದುದುಭಯಸೇನೆಯಾನೆಗಳ ಮೇಲಣಕೇತುಪಟವಾಗಲು
ಭಾನುಮಂಡಲಕೆ ಮುಸುಕಿರ್ದ ಧೂಳಂ ಬೀಸೆ
ಸಾನಂದದಿಂದೈದಿರ್ಬಲದ ಚೂಣಿಯ ಭ
ಟಾನೀಕಮುಭಯಬಲಮಂ ಕಂಡು ತೋಳ್ಪೊಯ್ದು ಬೊಬ್ಬಿರಿದುದಾ ಕ್ಷಣದೊಳು ೨೪

ಇರ್ದೆಸೆಯ ಕುದುರೆಗಾರರ್ ಚೂಣಿಯೊಳ್ ಕಾಣಿ
ತಾರ್ದು ನಿಡುಸೂಟಿಯೊಳ್ ನಿಲ್ಲದೋವಾಘೆಯೊಳ್
ವಿಾರ್ದು ಪದಳಂಗಳಂ ಸುಲಿದು ಸೆರೆತುರುಗಳಂ ಪಿಡಿದರಿದಿರಾದರೊಡನೆ
ಪೋರ್ದರಿರಿದರ್ ನೂಂಕಿದರ್ ಮರಳಿ ಪಿನ್ನೆಲೆಗೆ
ಸಾರ್ದು ಭೋಯೆಂದು ತಮತಮಗೆ ಪೊಯ್ದಾಡು
ತಿರ್ದುಬಲ್ಲಲ್ಲಿ ಬಳಿಕೊರ್ವರೊರ್ವರ್ಗೆ ತೆಗೆಯದೆ ನೂಂಕಿ ಬರಲೀಯದೆ ೨೫

ಬೇರೆಬೇರಾಚೆಯೊಳ್ ಪಿಂದಣಿಂ ಬಲ್ಗುದುರೆ
ಗಾರರಂ ಕಂಡು ಫೌಜಂ ಕಾಣುತೊಡಹಾಯ್ಸಿ
ತಾರುತಟ್ಟಂ ಮಾಡಿ ಕುದುರೆರಾವ್ತರ್ ಹಲ್ಲಣಂಗಳೊಂದೇ ಹೊಯಿಲಿಗೆ
ಹಾರಲಾರ್ತುಂಡಾಗಿ ಪರಿದ ರಕ್ತಂ ಪೊನಲ್
ವಿಾರೆ ಕಡಿತಲೆಗಳಂ ಕೊಂಡು ತಮ್ಮೊಡೆಯರ್ಗೆ
ತೋರಿಸಿ ನಿವಾಳಿಸಿ ಬಿಸುಟ್ಟರಿರ್ಬಲದ ಚೂಣಿಗರದೇಂ ವರ್ಣಿಸುವೆನು ೨೬

ಸೈನ್ಯ ಠೀವಿಯಿಂದ ಕೂಡಿದ್ದಿತು. ೨೪. ಏನು ಹೇಳಲಯ್ಯಾ, ಸಿದ್ಧರಾಮ ? ಕೇಳು, ಅತ್ತ ಕಡೆಯಿಂದ ಶಿವನ ಸೈನ್ಯ ಬರುತ್ತಿದ್ದುದನ್ನು ಕೇಳಿ ಇತ್ತ ಕಡೆಯಿಂದ ರಾಕ್ಷಸನ ಸೈನ್ಯ ಹೊರಟಿತು. ಎರಡೂ ಸೈನ್ಯದ ಆನೆಗಳ ಮೇಲಿನ ಧ್ವಜಪಟ ಆಗ ಸೂರ್ಯ ಮಂಡಲವನ್ನು ಮುಸುಕಿದ್ದ ಧೂಳನ್ನು ಚದುರಿಸಿತು. ಆನಂದದಿಂದ ಬಂದ ಎರಡೂ ಸೈನ್ಯದ ಮುಂಭಾಗದ ಭಟಸಮೂಹ ಉಭಯ ಸೈನ್ಯವನ್ನು ನೋಡಿ ಆ ಕ್ಷಣ ತೋಳು ತಟ್ಟಿ ಅಬ್ಬರಿಸಿತು. ೨೫. ಎರಡೂ ಕಡೆಯ ಕುದುರೆ ಸೈನಿಕರು ಚೂಣಿಯಲ್ಲಿ ಕಾಣಿಸಿ ಕೊಂಡು ಆರ್ಭಟಿಸಿ ಅತಿವೇಗವಾಗಿ ನಿಲ್ಲದೆ ಬಲವಾದ ಕಡಿವಾಣವನ್ನೂ ವಿಾರಿ ಆ ದಳ ಗಳನ್ನು ಸುಲಿದು ಸೆರೆಸಿಕ್ಕಿದ ಗುಂಪನ್ನು ಹಿಡಿದರು. ಎದುರಾದವರೊಡನೆ ಹೋರಾಡಿ ದರು, ಇರಿದರು, ನೂಕಿದರು. ಮತ್ತೆ ಹಿಂದೆ ಸರಿದು ಬೋ ಎಂದು ಅಬ್ಬರಿಸಿ ಮೇಲೆ ಬಿದ್ದು ತಾವು ಒಬ್ಬರಿಗೊಬ್ಬರು ಕಡಿಮೆಯಿಲ್ಲದಂತೆ ಹಿಂದೆಗೆಯದೆ ನುಗ್ಗಿ ಬರಲು ಅವಕಾಶ ವೀಯದಂತೆ ಹೋರಾಡುತ್ತಿದ್ದರು. ೨೬. ಬೇರೆ ಬೇರೆಯಾಗಿ ಆಚೆಯಿಂದ, ಹಿಂದಿ ನಿಂದ ಶೂರರಾದ ಕುದುರೆಯವರನ್ನು ನೋಡಿ ಸೈನ್ಯವನ್ನು ನೋಡುತ್ತ ಮೇಲೆ ಹಾಯಿಸಿ ಚೆಲ್ಲಾಪಿಲ್ಲಿ ಮಾಡಿ ಘಡಿಯ ಒಂದೇ ಹೊಡೆತಕ್ಕೆ ಕುದುರೆ ರಾವುತರು ಆರು ತುಂಡಾಗಿ ಹಾರಲು, ಹರಿದ ರಕ್ತವು ದೊಡ್ಡ ಕಾಲುವೆಯಾಗಿ ಹರಿಯಲು, ಕಡಿದ ತಲೆಗಳನ್ನು ತೆಗೆದು ಕೊಂಡು ತಮ್ಮ ನಾಯಕರಿಗೆ ತೋರಿಸಿ ಎರಡು ಸೈನ್ಯದ ಚೂಣಿಗರೂ ಅದನ್ನು ನಿವಾಳಿಸಿ

CC-0. Jangamwadi Math Collection. Digitized by eGangotri

ಭಟರೊಡನೆ ಭಟರಾನೆಗಳೊಳಾನೆಗಳ್ ಮಹಾ
ಚಟುಳರಥಿಕಾಳಿಯೊಳ್ ರಥಿಕಾಳಿ ರಾವ್ತರೊಳ್
ಪಟುತರದ ರಾವುತರ್ ನೂಂಕಿ ಬಳಿಕೆಚ್ಚು ಪೊಯ್ದಾಡುತಿರೆ ಮರಳಿ ಮರಳಿ
ಅಟಮಟಸಿ ಮಗುಳೊತ್ತಿ ಕತ್ತರಿಸಿ ಬಳಿಕೊಡ್ಡಿ
ದಿಟಮಲ್ಲ ಪುಸಿಪೊಯ್ಲಿದಂ ತೆಗೆಯೆನುತ್ತೆ ನಿ
ಚ್ಚಟದ ಕಲಿಗಳ್ ಕಾದುತಿರ್ದರಿರ್ಬಲದ ಮುಂಗುಡಿಯುವರದೇನೆಂಬೆನು ೨೭

ಬರುತಿರ್ದುದನಿತರೊಳ್ ಸಿದ್ಧರಾಮೇಶ ಕೇಳ್
ಶರಧಿಶರಧಿಗಳಿರದೆ ತಾಗುವಂತಾ ಮಹಾ
ಗಿರಿಗಿರಿಗಳಿದಿರಾಗುವಂತೆ ಪೇರಡವಿಪೇರಡವಿಗಳ್ ಸಂಧಿಪಂತೆ
ಧರೆನಭಂಗಳ್ ಸೋಂಕುವಂತೊಡನೆ ಪ್ರಳಯಜಲ
ಧರಜಲಧರಗಳೊರಸೊರಸುವಂತೆ ಕಣ್ಗೆ ಸೆದು
ವೆರಡರಸುದಳವನಿತರೊಳ್ ಪಶ್ಚಿಮಾಬ್ಧಿಗೃಹಮಂ ಭಾಸ್ಕರಂ ಪೊಕ್ಕನು ೨೮

ಮುಗಿದುದಬ್ಜಾಳಿ ಬಾಯ್ದೆಗೆದುದುತ್ಪಲನಿಕರ
ಮಗಲ್ದುದು ರಥಾಂಗಕುಲಮೊಗೆದುದಾಗಳೆ ಸಂಜೆ
ಜಗಜಗಿಸಿತುಡುಗಣಂ ಗಗನದಿಗ್ಧರೆಗಳಂ ಮಿಗೆ ಮುಸುಂಕಿದುದು ತಿಮಿರಂ
ತೆಗೆದುದಾ ಚೂಣಿಗಾಳೆಗವಾಗ ಬೇಗ ದಳ
ಯುಗಪತಿಗಳಾಜ್ಞೆಯಿಂ ತೆಗೆದೆರಳ್ದಂಡು ನೆಲ
ನಗಲದೊಳ್ ಬೀಡುಬೀಡುಗಳ್ಕೈದೆ ಬಿಟ್ಟುವಾರ್ ಪೊಗಳ್ವರವರೇಳ್ಗೆಗಳನು ೨೯

ಎಸೆದರು. ೨೭. ಭಟರೊಡನೆ ಭಟರು, ಆನೆಗಳೊಡನೆ ಆನೆಗಳು, ಮಹಾವೇಗದಿಂದ ಚಲಿಸುವ ರಥಿಕರೊಡನೆ ರಥಿಕರು, ರಾವುತರೊಡನೆ ರಾವುತರು ನೂಕಿ, ಅನಂತರ ಬಾಣ ಪ್ರಯೋಗಿಸಿ ಹೊಡೆದಾಡುತ್ತಿರಲು ಮತ್ತೆ ಮತ್ತೆ ಅವರಿಗೆ ತಿಳಿಯದಂತೆ ಪುನಃ ಮೇಲೆ ಬಿದ್ದು ಕತ್ತರಿಸಿ, ಮತ್ತೆ ಎದುರಾಗಿ ಇದು ಹುಸಿ ಹೊಡೆತ ತೆಗೆದುಕೊ ಎನ್ನುತ್ತ ಎರಡೂ ಕಡೆಯ ಮುಂಚೂಣಿಯ ನಿಶ್ಚಲವಾದ ಪರಾಕ್ರಮಿಗಳು ಹೋರಾಡುತ್ತಿದ್ದರು. ಅದನ್ನು ಏನು ಹೇಳಲಿ ? ೨೮. ಸಿದ್ಧರಾಮ, ಕೇಳು, ಅಷ್ಟರಲ್ಲಿ ಸಮುದ್ರ–ಸಮುದ್ರಗಳು ತಡೆಯದೆ ಒಂದಕ್ಕೊಂದು ಘಟ್ಟಿಸುವಂತೆ, ಆ ಮಹಾಪರ್ವತಗಳು ಒಂದಕ್ಕೊಂದು ಎದುರಾಗುವಂತೆ, ದೊಡ್ಡ ಕಾಡು ಮತ್ತೊಂದು ದೊಡ್ಡ ಕಾಡನ್ನು ಸಂಧಿಸುವಂತೆ, ಭೂಮ್ಯಾಕಾಶಗಳು ಸೋಕುವಂತೆ, ಪ್ರಳಯಕಾಲದ ಮೇಘಗಳು ಒಂದಕ್ಕೊಂದು ತಾಗುವಂತೆ ಬರುತ್ತಿದ್ದ ಎರಡು ದೊಡ್ಡ ಸೈನ್ಯಗಳೂ ಕಂಡುವು. ಅಷ್ಟರಲ್ಲಿ ಸೂರ್ಯನು (ಪಶ್ಚಿಮ ಸಮುದ್ರ ಗೃಹವನ್ನು ಪ್ರವೇಶಿಸಿದನು) ಮುಳುಗಿದನು. ೨೯. ಕಮಲಗಳು ಮುಚ್ಚಿಕೊಂಡುವು, ನೈದಿಲೆಗಳು ಅರಳಿದುವು, ಚಕ್ರವಾಕಪಕ್ಷಿಗಳು ಅಗಲಿದುವು. ಆಗಲೇ ಸಂಜೆಯಾವರಿಸಿತು, ನಕ್ಷತ್ರಸಮೂಹ ಜಗ-ಜಗಿಸಿತು, ಆಕಾಶ ದಿಕ್ಕುಗಳು ಮತ್ತು ಭೂಮಂಡಲವನ್ನು ಕತ್ತಲು ಪೂರ್ಣವಾಗಿ ಮುಸುಕಿತು. ಆಗ ಚೂಣಿಯ ಯುದ್ಧ ನಿಂತಿತು. ದಳಪತಿಗಳ ಆಜ್ಞೆಯಿಂದ ಎರಡೂ ಸೈನ್ಯಗಳು ಅನಂತರ ನೆಲದ ಅಗಲಕ್ಕೂ ಬೀಡು

CC-0. Jangamwadi Math Collection. Digitized by eGangotri

ಇಳಿಪು ಗಜವಾಜಿಗಳ ಗುಳಪಲ್ಲಣಂಗಳಂ
ಕಳಚು ತೇರ್ ತೇಜಿಗಳ ಕೊರಳ ನೊಗಗಳನೆತ್ತು
ಗಳ ಪೇರ್ಗಳಂ ನೂಂಕಿ ಬಿಡು ಸಬರವಂ ಜೀವಧನಕೆ ನೀರ್ಗಳನೀಂಟಿಸು
ಬಲಿದು ಗೂಂಟಗಳನೆತ್ತಾನೆ ಕುದುರೆಗಳ ನೀಂ
ದಳೆಯಿಕ್ಕು ಗುಡಿಗಳಂ ಪೊಯ್ದು ತೃಣಕಾಷ್ಠಾಗ್ನಿ
ಜಲಮುಖ್ಯಸಾಧನಮನೊದವಿಸೆಂದೆಂಬ ದನಿಯುಭಯಕಟಕದೊಳೆಸೆದುದು ೩೦

ನೀಲ ಕಲಧೌತ ಕನಕಾರುಣ ಮಹಾದ್ರಿಗಳ್
ತಾಳಿ ಬಹುರೂಪನೆರಡೊಡ್ಡಾದುವೆಂಬಂತೆ
ಸಾಲಾಗಿ ನೆಗಳ್ದುವಾ ಬಣ್ಣಬಗೆಗಳೊಳೆಸೆವ ಗೂಡಾರಗಳ್ ರುದ್ರನ
ಪಾಳೆಯದೊಳೆಣ್ದೆಸೆಗಳೊಳ್ ಬಿಟ್ಟುದಷ್ಟದಿ
ಕ್ಪಾಲರ್ ತದಂತರಂ ವೀರಾದಿಪ್ರಮಥರಿರೆ
ನೀಲಕಂಧರನೆಡಬಲಂಗಳೊಳ್ ಹರಿಯಜರ್ ಬಿಟ್ಟರದನೇನೆಂಬೆನು ೩೧

ಇಂತು ನೆಲದಗಲದೊಳ್ ಸಕಲವಿಭವಂಗಳಿಂ
ದಂತರಂತರದೊಳೀಶ್ವರನ ದಂಡಿಳಿದುದಿದ
ರಂತೆ ಪರಿವಿಡಿಯೊಳನಿತಗಲದೊಳಗಂಧಕಾಸುರನ ಪಾಳೆಯಮಿಳಿದುದು
ಕಾಂತಿಯಿಂದಂಗಡಿಗಳೊಳ್ ಸರ್ವಜನತಾಗೃ
ಹಾಂತದೊಳ್ ದೊರೆದೊರೆಗಳೋಲಗದೊಳೊಪ್ಪಿದುವ
ನಂತದೀಪಂ ದೊಡ್ಡದೀವಟಿಗೆಗಳ್ ನಭದ ನಕ್ಷತ್ರಜಾಲದಂತೆ ೩೨

ಗಳನ್ನು ಬಿಟ್ಟವು, ಅವರ ಉನ್ನತಿಯನ್ನು ಹೊಗಳುವವರು ಯಾರು? ೩೦. ಆನೆ-ಕುದುರೆಗಳ ಮೇಲ್ಮುಸುಕು ಜೀನುಗಳನ್ನು ಇಳಿಸು, ರಥದ ಕುದುರೆಗಳ ಕೊರಳ ನೊಗಗಳನ್ನು ಕಳಚು, ಎತ್ತುಗಳ ಹೇರುಗಳನ್ನು ನೂಕಿ ಥಡಿಗಳನ್ನು ಬಿಡು, ಪಶುಗಳಿಗೆ ನೀರನ್ನು ಕುಡಿಸು, ಗೂಟಗಳನ್ನು ಬಡಿದು ಎತ್ತು-ಆನೆ-ಕುದುರೆಗಳನ್ನು ನೀನು ಕಟ್ಟಿ ಹಾಕು, ಗುಡಾರವನ್ನು ಹಾಕಿ ಹುಲ್ಲು-ಸೌದೆ-ಬೆಂಕಿ-ನೀರು ಮೊದಲಾದ ಸಾಧನಗಳನ್ನು ಒದಗಿಸು ಎನ್ನುವ ಶಬ್ದ ಎರಡೂ ಸೈನ್ಯದಲ್ಲಿಯೂ ಕೇಳಿಬಂದಿತು. ೩೧. ನೀಲ, ಬೆಳ್ಳಿ, ಚಿನ್ನದ ಪರ್ವತಗಳು ನಾನಾರೂಪವನ್ನೆತ್ತಿ ಎರಡು ಸೈನ್ಯಸಮೂಹ ಗಾಳಿ ನಿಂತವು ಎನ್ನುವಂತೆ ಸಾಲಾಗಿ ಬಣ್ಣ ಬಣ್ಣಗಳಿಂದ ಗುಡಾರಗಳು ಪ್ರಕಾಶಿಸಿದುವು. ರುದ್ರನ ಪಾಳಯದಲ್ಲಿ ಎಂಟು ದಿಕ್ಕುಗಳಲ್ಲಿಯೂ ಅಷ್ಟದಿಕ್ಪಾಲಕರು ಬೀಡುಬಿಟ್ಟರು. ಅನಂತರ ವೀರಭದ್ರ ಮೊದಲಾದ ಪ್ರಮಥರು ಇರಲು (ನೀಲಕಂಠನ) ಶಿವನ ಎಡ-ಬಲಗಳಲ್ಲಿ ವಿಷ್ಣು-ಬ್ರಹ್ಮರು ಬೀಡುಬಿಟ್ಟರು. ೩೨. ಈ ರೀತಿ ನೆಲದಗಲದಷ್ಟಕ್ಕೂ ಸಕಲ ವೈಭವದಿಂದ ಅಂತರಂತರದಲ್ಲಿ ಈಶ್ವರನ ಸೈನ್ಯ ಇಳಿಯಿತು, ಅವರಂತೆ ಅನುಕ್ರಮವಾಗಿ ಅಷ್ಟೇ ವಿಶಾಲವಾದ ಸ್ಥಳದಲ್ಲಿ ಅಂಧಕಾಸುರನ ಪಾಳಯವೂ ಇಳಿಯಿತು. ಅಂಗಡಂಗಡಿಗಳಲ್ಲಿ, ಎಲ್ಲ ಗುಡಾರಗಳಲ್ಲಿ ಸೇನಾಧಿಪತಿಗಳ ಸಭಾಗೃಹ ಸಹಸ್ರಾರು ದೀಪಗಳು, ದೊಡ್ಡ ದೀವಟಿಕೆಗಳು ಆಕಾಶದಲ್ಲಿನ ನಕ್ಷತ್ರಗಳ ಸಮೂಹದಂತೆ ಕಾಂತಿಯಿಂದ

CC-0. Jangamwadi Math Collection. Digitized by eGangotri

ಸುತ್ತಲುಂ ಗೇರೆಯುಂ ಸೆಗಳ್ದವಾ ಪಾಳೆಯದೊ
ಳೆತ್ತೆತ್ತಲುಂ ಕೋಟಿವಾದ್ಯಘೋಷಂಗಳಿಂ
ಪೊತ್ತಿಸಿದ ಪಂಜುಗಳನೇಕದಿಂದೊಳಪಹರಿಗಳ್ ಮೆರೆದುವವರ ಪೊರೆಗೆ
ಬಿತ್ತರದೊಳಶ್ವ ಗಜ ರಥ ಪದಾತಿಗಳೊಡನೆ
ಹತ್ತು ಪದ್ಮ ಪ್ರಬಲಭಟರುಕ್ಕಡಂಗಳನಿ
ರುತ್ತಿರಲ್ಕುಭಯಶಿಬಿರಂಗಳುಂ ಪಲವುತೆರದೆಚ್ಚರಿಕೆಯಿಂದೆಸೆದುವು ೩೩

ಆ ರುದ್ರನೇಮದಿಂ ಬಲದ ಕಾವಲ್ ಕಾಲ
ಭೈರವನ ವಶವಾಯ್ತು ಸೇನಾಧಿಪತ್ಯಂ ಕು
ಮಾರಕಂಗಾದುದೀಶ್ವರನಲ್ಲದುಳಿದರೊಡೆತನವೀರಭದ್ರಂಗೆ ದಕ್ಷರಿಪುಗೆ
ಈ ರಕ್ಕಸರ ತಳವರಂ ಜಂಭನವನ ಪರಿ
ವಾರಾಧಿಪತಿಯೆ ಶತಮಾಯನಾ ಬಲದಾರ
ಭಾರವೇ ಶುಂಭಾಸುರಂಗಾದುದಿರುಳಿನೋಲಗದೊಳವರಿತ್ತಂಡದಾ ೩೪

ನಾಳೆ ಬಲ್ಗಾಳೆಗವೆನುತ್ತೆ ಸಾರಿದರೆರ
ಡ್ಪಾಳೆಯಂಗಳೊಳೋಲಗಂ ಪರೆದುವುಂಡು ನಿ
ದ್ರಾಲತಾಂಗಿಯ ಸೌಖ್ಯಮಂ ಪಡೆದುದಖಿಳಜನಮನಿತರೊಳ್ ಮುಂಬೆಳಗಿನ
ಕೇಳಿ ಕೂಗಿತು ಮೂಡದೆಸೆಗೆಂಪಡರ್ದುದ
ಬ್ಜಾಳಿಯರಳ್ದುವು ಮುಗಿದುವುತ್ಪಲಂ ಪೂರ್ವಾಂಗ
ನಾಲಲಿತಮಾಣಿಕ್ಯಮುಕುರದಂತುದಯಾದ್ರಿಯೊಳ್ ಭಾಸ್ಕರಂ ಮೆರೆದನು ೩೫

ಪ್ರಕಾಶಿಸಿದುವು. ೩೩. ಸುತ್ತಲೂ ಬೇಲಿ ಇದ್ದಿತು. ಪಾಳಯದಲ್ಲಿ ಎಲ್ಲೆಲ್ಲಿಯೂ ಲೆಕ್ಕವಿಲ್ಲದಷ್ಟು ವಾದ್ಯಗಳ ಶಬ್ದಗಳಿಂದ, ಹೊತ್ತಿಸಿದ ಅನೇಕ ಪಂಜುಗಳಿಂದ ಪಹರೆಯವರು ಇದ್ದರು. ಅವರ ರಕ್ಷಣೆಗೆ ಅಧಿಕ ಸಂಖ್ಯೆಯಲ್ಲಿ ಕುದುರೆ-ಆನೆ-ರಥ-ಪದಾತಿಗಳೊಡನೆ ಹತ್ತು ಪದ್ಮದಷ್ಟು ವೀರಸೈನಿಕರು ಕಾವಲು ಕಾಯುತ್ತಿರಲು ಎರಡು ಶಿಬಿರಗಳೂ ಹಲವು ರೀತಿಯಲ್ಲಿ ಎಚ್ಚರಿಕೆಯಿಂದ ಇದ್ದುವು. ೩೪. ಈಶ್ವರನ ಆಜ್ಞೆಯಿಂದ ಸೈನ್ಯದ ಕಾವಲು ಕಾಲಭೈರವನ ವಶಕ್ಕೆ ಬಂದಿತು. ಸೇನಾಧಿಪತ್ಯ ಷಣ್ಮುಖನಿಗಾಯಿತು. ಈಶ್ವರನನ್ನು ಬಿಟ್ಟು ಉಳಿದವರ ಮೇಲಿನ ಯಜಮಾನಿಕೆ ವೀರಭದ್ರನದಾಯಿತು. ಈ ರಾಕ್ಷಸರ ಕಾವಲುಗಾರ ಜಂಭ. ಅವನ ಪರಿವಾರದ ಅಧಿಪತಿ ಶತಮಾಯ. ಆ ಸೈನ್ಯಸಂಬಂಧವಾದ ಜವಾಬುದಾರಿಯೇ ಆ ಶುಂಭಾಸುರನದಾಯಿತು. ಈ ರೀತಿ ರಾತ್ರಿಯ ಓಲಗದಲ್ಲಿ ಎರಡೂ ತಂಡದಲ್ಲಿ ನೇಮಕಗಳಾದುವು. ೩೫. ನಾಳೆ ಘೋರವಾದ ಯುದ್ಧವಿದೆಯೆನ್ನುತ್ತ ಎರಡೂ ಪಾಳಯಗಳಲ್ಲಿ ಸಾರಿದರು. ಸಭೆಗಳು ಮುಕ್ತಾಯವಾದುವು. ಊಟಮಾಡಿ ಎಲ್ಲ ಜನಸಮೂಹವೂ ನಿದ್ರಾಂಗನೆಯ ಸುಖವನ್ನು ಅನುಭವಿಸಿತು. ಅಷ್ಟರಲ್ಲಿ ಮುಂಜಾವದ ಕೋಳಿ ಕೂಗಿತು. ಪೂರ್ವದಿಕ್ಕಿನಲ್ಲಿ ಕೆಂಪೇರಿತು. ಕಮಲಗಳು ಅರಳಿದುವು. ನೈದಿಲೆಗಳು ಮುಚ್ಚಿಕೊಂಡುವು. ಪೂರ್ವಾಂಗನೆಯ ಮನೋಹರವಾದ ಮಾಣಿಕ್ಯದ ಮೂಗುತಿಯಂತೆ ಉದಯಪರ್ವತದಲ್ಲಿ ಸೂರ್ಯನು ಪ್ರಕಾಶಿ

CC-0. Jangamwadi Math Collection. Digitized by eGangotri

ರುದ್ರನುಪ್ಪವಡಿಸಿದನೆಳ್ಚತ್ತರಾ ವೀರ
ಭದ್ರಮುಖ್ಯರ್ ಖಳನ ಪಾಳೆಯದೊಳೆಲ್ಲರ್ಗೆ
ನಿದ್ರೆ ತಿಳಿದುದು ಲಗ್ಗವರೆ ಮೊಳಗಿದುವು ನಿತ್ಯನಿಯಮಂಗಳಂ ತೀರ್ಚಿಸಿ
ಸದ್ರಾಜರಾಹವೋದ್ಯುಕ್ತಬಲರಾಗಿ ತ
ತ್ತದ್ರವ್ಯವಾಹನಂಗಳನಡರ್ದರ್ ತುರಗ
ಭದ್ರಗಜ ರಥ ಪದಾತಿಗಳ ಪೌಜುಗಳೆರಳ್ಬಲದೊಳಾಯತವಾದುದು ೩೬

ಎಲೆ ಸಿದ್ಧರಾಮ ಕೇಳ್ ಕಲಹ ಸಮಯಂಗಂಡು
ಲಳಿ ಮಸಗಿದುವು ಕುದುರೆಗಳ್ ದಂತಿಗಳ್ ತಮ್ಮ
ನೆಳಲನಿದಿರಾನೆಯೆಂದಪ್ಪಳಿಸಿದುವು ಪಟುಭಟರ್ ಮುಂಚಿ ತವಕಿಸಿದರು
ಬಳಿಕ ನಸುನಗುತಂಧಕಾಸುರಂ ತನ್ನ ಕೆಲ
ಬಲದ ಶುಕ್ರನ ಮೊಗಂ ನೋಡಿ ತೋರಿಸುವುದೀ
ಬಲದ ದೊರೆದೊರೆಗಳಂ ಬೇರೆಬೇರೆನೆ ಶುಕ್ರನಾ ಖಳಂಗಿಂತೆಂದನು ೩೭

ಲೇಸಾದುದಾಲಿಸೈ ದನುಜೇಂದ್ರ ನೆಗಳ್ದ ಕಣ್
ಸಾಸಿರದ ಪಿಡಿದ ವಜ್ರದ ಶುಭ್ರಗಜಕಂಧ
ರಾಸನದೊಳಿರ್ಪ ಗಾಡಿಯೆ ಸುತ್ತಲೆತ್ತಲುಂ ಬಳಸಿಕೊಂಡೊಪ್ಪುತಿರ್ಪ
ಆ ಸಕಲದಿಕ್ಪಾಲಕಾದಿ ಬೃಂದಾರಕಮ
ಹಾಸುಭಟಕೋಟಿಗಳ ಮಧ್ಯದೊಳ್ ನಾಡೆ ಸುವಿ
ಲಾಸದಿಂದಿರ್ಪಾತನೀತನೇ ಜಂಭಾರಿಯೆಂಬವಂ ನೋಡೆಂದನು ೩೮

ಸಿದನು. ೩೬. ರುದ್ರನು ಎದ್ದನು. ಆ ವೀರಭದ್ರನೇ ಮೊದಲಾದವರು ಎಚ್ಚರ ಗೊಂಡರು. ರಾಕ್ಷಸನ ಪಾಳಯದಲ್ಲಿ ಎಲ್ಲರಿಗೂ ಎಚ್ಚರವಾಯಿತು. ಕಾಳಗದ ವಾದ್ಯಗಳು ಮೊಳಗಿದುವು. ನಿತ್ಯವಿಧಿಗಳನ್ನು ತೀರಿಸಿ ರಾಜರು ಯುದ್ಧಕ್ಕಾಗಿ ಸೈನ್ಯವನ್ನು ಸಜ್ಜು ಗೊಳಿಸಿ ತಮ್ಮ ತಮ್ಮ ಉತ್ತಮವಾದ ವಾಹನಗಳನ್ನು ಏರಿದರು. ಕುದುರೆ, ಪಟ್ಟದ ಆನೆ, ರಥ, ಪದಾತಿಗಳ ಸೈನ್ಯಗಳು ಎರಡೂ ಕಡೆಯ ಸೇನೆಯಲ್ಲಿಯೂ ಸಜ್ಜಾದುವು. ೩೭. ಎಲೈ ಸಿದ್ಧರಾಮ, ಕೇಳು. ಯುದ್ಧಸಮಯ ನೋಡಿ ಆವೇಶ ಮತ್ತು ಉತ್ಸಾಹ ಹೆಚ್ಚಿತು. ಕುದುರೆಗಳು ಆನೆಗಳು ತಮ್ಮ ನೆರಳನ್ನು ತಮ್ಮ ಎದುರಾನೆ ಕುದುರೆ ಎಂದು ತಿಳಿದು ಅಪ್ಪಳಿಸಿದುವು. ಶೂರ ಸೈನಿಕರು ಬಹುವಾಗಿ ಉತ್ಸಾಹಿಸಿದರು. ಅನಂತರ ಅಂಧಕಾಸುರನು ನಸುನಗುತ್ತಾ ತನ್ನ ಪಕ್ಕದಲ್ಲಿದ್ದ ಶುಕ್ರನ ಮುಖವನ್ನು ನೋಡಿ ಪ್ರತ್ಯೇಕ ಪ್ರತ್ಯೇಕವಾಗಿ ಈ ಸೈನ್ಯದ ನಾಯಕರನ್ನು ತೋರಿಸೆನ್ನಲು ಶುಕ್ರನು ರಾಕ್ಷಸನಿಗೆ ಈ ರೀತಿ ಹೇಳಿದನು. ೩೮. ಒಳ್ಳೆಯದಾಯಿತು ಕೇಳಯ್ಯ, ರಾಕ್ಷಸೇಂದ್ರ, ಪ್ರಖ್ಯಾತವಾದ ಸಾವಿರಕಣ್ಣಿನ, ವಜ್ರಾಯುಧವನ್ನು ಹಿಡಿದ, ಬಿಳಿಯ ಆನೆಯ ಮೇಲೆ ಅಂಬಾರಿಯಲ್ಲಿರುವ, ಸೌಂದರ್ಯವೇ ಸುತ್ತಲೂ ಬಳಸಿ ಪ್ರಕಾಶಿಸುತ್ತಿರುವ, ಆ ಎಲ್ಲ ದಿಕ್ಪಾಲಕ ಮೊದಲಾದ ಕೋಟಿ ದೇವ ಸೈನಿಕರ ಮಧ್ಯದಲ್ಲಿ ಅತಿವಿಲಾಸದಿಂದ ಇರುವವನೇ ದೇವೇಂದ್ರನೆಂಬುವನು ನೋಡು

CC-0. Jangamwadi Math Collection. Digitized by eGangotri

ರಾಜಹಂಸನ ಮೇಲೆ ರಂಜಿಸುವ ನಾಲ್ಮೊಗದ
ತೇಜದವನೇ ಬ್ರಹ್ಮನೀತನಿಂದಾದರ್ ವಿ
ರಾಜಿಪ ನವಬ್ರಹ್ಮರವರಿಂದಮಿಾ ದನುಜರಾ ಸುರನರೋರಗಾದಿ
ಮೂಜಗಂಗಳೊಳ್ಕೆದೆ ತೋರ್ಪ ನಾನಾ ಜೀವ
ರಾಜಿಯುದಿಸಿದುದು ನಮ್ಮಯ ಸೇನೆಯೊಳಗೀತ
ನಾಜಿಗಿದಿರಾಪರಂ ಕಾಣೆನಿವನೇ ಲೋಕಪಿತನೊಲ್ದು ನೋಡೆಂದನು ೩೯

ಆಲಿಪ್ಪಿನ್ನಿತ್ತಲಾ ಪಕ್ಷಿರಾಜನ ಬೆನ್ನ
ಮೇಲೆ ರಂಜಿಪ ಶಂಖ ಚಕ್ರ ಗದ ಶಾರ್ಙ್ಗದ ವಿ
ಶಾಲಚಾತುರ್ಭುಜದ ಪೊಳೆವ ಪೀತಾಂಬರದ ಮಸ್ತಕದ ಮಣಿಮುಕುಟದ
ನೀಲಕಾಯದ ಕೌಸ್ತುಭಾಂಕಿತೋರಸ್ಥಳದ
ಲೀಲೆಯಿಂ ಸಕಲಲೋಕಂಗಳಂ ರಕ್ಷಿಸುವ
ಪೇಳಲೇನನ್ವರ್ಥನಾಮದಸುರಾಂತಕನಿವಂ ನೋಡು ನೀನೆಂದನು ೪೦

ಆರೈದು ನವಿಲಡರ್ದಾರ್ಮೊಗದ ಜಗದೇಕ
ವೀರನಂ ನೋಡು ಪಿಂದಖಿಳಲೋಕಂಗಳಂ
ತಾರಕಂ ತಿಂದು ತೇಗುತ್ತಿರಲ್ ವಿಧಿವಿಷ್ಣುಮುಖ್ಯದಿವಿಜರ್ ಮೊರೆಯಿಡೆ
ಮಾರಾರಿ ಕೇಳೀತನಂ ಪಡೆದೊಡೇಳ್ದಿನದೊ
ಳಾ ರಾಕ್ಷಸಪ್ರಾಣಮುಂ ಕೊಂಡನಿನ್ನಿವಂ
ಗಾರಿದಿರು ಶಿವಬಲಕೆ ಸೇನಾಧಿನಾಯಕನಿವಂ ನೋಡು ನೀನೆಂದನು ೪೧

ಎಂದನು. ೩೯. ರಾಜಹಂಸದ ಮೇಲೆ ಪ್ರಕಾಶಿಸುವ, ತೇಜಸ್ಸಿನಿಂದ ಕೂಡಿದ ನಾಲ್ಕು ಮುಖದವನೇ ಬ್ರಹ್ಮ. ಇವನಿಂದ ವಿರಾಜಿಸುವ ಒಂಬತ್ತು ಜನ ಬ್ರಹ್ಮರಾದರು.ಅವರಿಂದ ಈ ರಾಕ್ಷಸ ದೇವ, ಮಾನವ, ನಾಗರ ಮೊದಲಾದ ಮೂರು ಜಗತ್ತಿನಲ್ಲಿಯೂ ತುಂಬಿ ಕಾಣುವ ನಾನಾ ರೀತಿಯ ಜೀವರಾಶಿಗಳು ಹುಟ್ಟಿದುವು. ನಮ್ಮ ಸೈನ್ಯದಲ್ಲಿ ಈತನೊಡನೆ ಯುದ್ಧಕ್ಕೆ ಎದುರಾಗುವವರನ್ನು ನಾ ಕಾಣೆನು. ಇವನೇ ಲೋಕಕ್ಕೆಲ್ಲ ತಂದೆ, ಪ್ರೀತಿಯಿಂದ ನೋಡು ಎಂದನು. ೪೦. ಕೇಳಿನ್ನು, ಇದೋ ಇತ್ತಕಡೆ ಗರುಡನ ಬೆನ್ನಮೇಲೆ ವಿರಾಜಿಸುವ, ಶಂಖ, ಚಕ್ರ, ಗದೆ, ಶಾರ್ಙವೆಂಬ ಬಿಲ್ಲನ್ನು ಧರಿಸಿದ, ವಿಶಾಲವಾದ ನಾಲ್ಕು ಭುಜಗಳನ್ನು ಹೊಂದಿರುವ, ಹೊಳೆಯುವ ಪೀತಾಂಬರದ, ತಲೆಯ ಮಣಿಕಿರೀಟದ, ಶ್ಯಾಮಲ ಶರೀರದ, ಎದೆಯ ಮೇಲೆ ಕೌಸ್ತುಭರತ್ನ ಧರಿಸಿರುವ, ಆಡಾಡುತ್ತಲೇ ಎಲ್ಲ ಲೋಕಗಳನ್ನು ರಕ್ಷಿಸುವ–ಹೇಳುವುದಿನ್ನೇನು ? ಅಸುರಾಂತಕ ಎಂಬ ಅನ್ವರ್ಥನಾಮವುಳ್ಳ ವಿಷ್ಣುವೇ ಇವನು ನೀನು ನೋಡು ಎಂದನು. ೪೧. ವಿಚಾರಮಾಡಿ ನೋಡು. ನವಿಲನ್ನು ಏರಿರುವ, ಆರು ಮುಖದ, ಜಗದೇಕವೀರನನ್ನು ನೋಡು. ಹಿಂದೆ ಎಲ್ಲ ಲೋಕಗಳನ್ನು ತಾರಕನು ತಿಂದು ತೇಗುತ್ತಿರಲು ಬ್ರಹ್ಮ-ವಿಷ್ಣು ಮೊದಲಾದ ದೇವತೆಗಳು ಶಿವನಲ್ಲಿ ಮೊರೆಯಿಟ್ಟರು. ಅದನ್ನು ಕೇಳಿ ಶಿವನು ಇವನನ್ನು ಪಡೆದನು. ಹುಟ್ಟಿದ ಏಳು ದಿವಸಗಳಲ್ಲಿಯೇ ಆ ರಾಕ್ಷಸನ ಪ್ರಾಣವನ್ನು ತೆಗೆದುಕೊಂಡವನಿವನು. ಇವನಿಗೆ

CC-0. Jangamwadi Math Collection. Digitized by eGangotri

ಭೀಮರೂಪಿನ ಫಲಕಖಡ್ಗದಿಂದೆಸೆವ ನಿ
ಸ್ಸೀಮನೇ ವೀರೇಶನಿವನೀಶಕೋಪಾಗ್ನಿ
ಧಾಮದೊಳಗುದಿಸಿಯಜಹರಿಗಳಂ ಬಡಿದು ದಕ್ಷನ ಶಿರವನರಿದು ಬಳಿಕ
ಹೋಮದೊಳಗಿಟ್ಟು ನರಹರಿ ಪಂಚಮೇಢ್ರ ಬಹು
ಭೀಮವಿಕ್ರಮ ಜಲವ್ಯಾಳ ಸಿಂಹಾಸುರ
ಸೋಮವಂ ಮುಳಿದು ಸಂಹರಿಸಿದನಿವಂಗೊರ್ವರಿದಿರಿಲ್ಲ ಕೇಳೆಂದನು ೪೨

ಅವರ ನೋಡತ್ತಲಾಸುಂ ಮುನಿಯೆ ಲೋಕಸಂ
ಘವನುರುಪುವರ್ ಸಕಲಬ್ರಹ್ಮಾಂಡಭಾಂಡವುಂ
ತವೆ ನಿಮಿಷದೊಳಗೊಡೆವರಬ್ಧಿಗಳನಾಪೋಷಣಂಗೊಂಬರಾಗಸವನು
ಅವನಿಯುಂ ಕಿಳ್ತು ತಾಳವನೊತ್ತುವರ್ ಶೈಲ
ನಿವಹವಂ ಪುಡಿಗೈವರಹುದಲ್ಲವೆಂದೊಡೀ
ಶಿವನ ಲೆಕ್ಕಿಸದ ರುದ್ರ ಪ್ರಮಥ ಭೂತಗಣಮಗಣಿತಂಗಳನೆಂದನು ೪೩

ಲೀಲೆಯಿಂ ಪಂಚವದನದ ತ್ರಿಪಂಚಾಕ್ಷಿಗಳ
ಶೂಲ ವಜ್ರಾಭಯ ಮಹಾಖಡ್ಗ ಪರಶು ಸು
ವ್ಯಾಳಾಗ್ನಿ ಪಾಶಾಂಕುಶ ಪ್ರಘಂಟಾಯುಕ್ತ ಚಾರುಭುಜದಶಕದಿಂದೆ
ಆ ಲೋಲ ಫಣಿಕುಂಡಲದ ಕಂಠದೊಳ್ ಮೆರೆವ
ಹಾಲಾಹಲದ ಚಂದ್ರಕಾಂತಕಾಂತಿಯ ಶಿರೋ
ಮಾಲೆಗಳ ಚರ್ಮಾಂಬರದ ವೃಷಭವಾಹನದ ದೇವನಂ ನೋಡೆಂದನು ೪೪

ಇನ್ನಾರು ಎದುರು ? ಈಶ್ವರನ ಸೈನ್ಯಕ್ಕೆ ಇವನು ಸೇನಾಧಿಪತಿ, ನೀನು ನೋಡು ಎಂದನು. ೪೨. ಭಯಂಕರ ರೂಪದ ದೊಡ್ಡ ಗುರಾಣಿ, ಖಡ್ಗದಿಂದ ಪ್ರಕಾಶಿಸುವ ನಿಸ್ಸೀಮನೇ ವೀರಭದ್ರ. ಇವನು ಈಶ್ವರನ ಕೋಪಾಗ್ನಿಯಿಂದ ಹುಟ್ಟಿ ಬ್ರಹ್ಮ-ವಿಷ್ಣು ಗಳನ್ನು ಬಡಿದು, ದಕ್ಷನ ತಲೆಯನ್ನು ಕಡಿದು, ಅನಂತರ ಅದನ್ನು ಹೋಮಕುಂಡದಲ್ಲಿ ಹಾಕಿ, ನರಸಿಂಹ ಪಂಚಮೇಢ್ರ, ಬಹಳ ಭಯಂಕರ ಪರಾಕ್ರಮಿಯಾದ ಜಲವಾಳ, ಸಿಂಹ ಮುಂತಾದ ರಾಕ್ಷಸಸಮೂಹವನ್ನು ಕೋಪದಿಂದ ಸಂಹಾರಮಾಡಿದ. ಇವನಿಗೆ ಯಾರೂ ಎದುರಿಲ್ಲ, ಕೇಳು ಎಂದನು. ೪೩. ಅತ್ತ ಅವರನ್ನು ನೋಡು. ಅವರು ಕೋಪಗೊಂಡರೆ ಲೋಕಸಮೂಹಗಳನ್ನೆಲ್ಲ ಸುಟ್ಟುಹಾಕುವರು. ಎಲ್ಲ ಬ್ರಹ್ಮಾಂಡ ಗಳನ್ನೂ ಒಂದೇ ನಿಮಿಷದಲ್ಲಿ ಒಡೆದುಹಾಕುವರು. ಸಮುದ್ರಗಳನ್ನು ಆಪೋಶನ ತೆಗೆದು ಕೊಳ್ಳುವರು. ಆಕಾಶ-ಭೂಮಿಯನ್ನು ಕಿತ್ತು ತಾಳಹಾಕುವರು. ಪರ್ವತ ಸಮೂಹವನ್ನು ಪುಡಿಮಾಡುವರು. ಹೌದು-ಅಲ್ಲವೆಂದರೆ ಈ ಶಿವನನ್ನೂ ಲಕ್ಷಿಸದ ರುದ್ರಪ್ರಮಥ-ಭೂತಗಣಗಳಸಂಖ್ಯಾತವಿವೆ ಎಂದನು. ೪೪. ಲೀಲೆಯಿಂದ ಐದು ಮುಖದ, ಹದಿನೈದು ಕಣ್ಣುಗಳ, ತ್ರಿಶೂಲ, ವಜ್ರಾಯುಧ, ಅಭಯಹಸ್ತ, ಭೀಕರ ಖಡ್ಗ, ಕೊಡಲಿ, ಸರ್ಪ, ಅಗ್ನಿ, ಪಾಶ, ಅಂಕುಶ, ದೊಡ್ಡ ಗಂಟೆಯಿಂದ ಕೂಡಿದ ಮನೋಹರವಾದ ಹತ್ತು ಭುಜ ಗಳಿಂದ, ಅಲುಗಾಡುವ ಹಾವಿನ ಕಿವಿಯಾಭರಣದ, ಕುತ್ತಿಗೆಯಲ್ಲಿ ಮೆರೆಯುವ ಹಾಲಾಹಲ

CC-0. Jangamwadi Math Collection. Digitized by eGangotri

ಮರೆಯ ಮಾತಲ್ಲವಗಣಿತ ಹರಿಯಜೇಂದ್ರರಂ
ನೆರೆ ಸೃಜಿಸಿ ರಕ್ಷಿಸಿ ಲಯಂಗೆಯ್ದು ಮಾಣದುರೆ
ಮರುಪುಟ್ಟಿಸುವನೀ ಮಹಾತ್ಮನ ಮಹಾತ್ಮೆಯಂ ಶೇಷಂಗೆ ಪೊಗಳಲಳವೆ
ಮರೆವೊಕ್ಕರಂ ಕಾಯ್ವ ಮಾರಾಂತರಂ ಕೊಲ್ವ
ತರಿಸಂದ ಬಿರುದೀತನದು ಶರಣ್ಬೊಗು ಪಿಂದ
ನರಿದರಿದು ಪೇಳ್ದೆವು ಕೆಡಲ್ಬೇಡವೆನೆ ಖಳಂ ಖತಿಯೊಳಂದಿಂತೆಂದನು ೪೫

ಪಿಂದಣವರ್ಗಳೊಳಾನದೊರ್ವನೇಯಾರಯ್ಕೆ
ಬಂದು ಕರುಳಂ ತೊಳೆವೊಲಾಯ್ತಾಯ್ತು ಗುರುಗಳೇ
ನೆಂದರೇನೆನುತೆ ಕಿಡಿಕಿಡಿವೋಗಿ ಬಳಿಕಾ ಖಳಂ ತೀವ್ರ ಕೋಪದಿಂದೆ
ಪೊಂದೇರನಾರ್ಭಟಿಸಿ ನೂಂಕುತಿರಲಾ ಕ್ಷಣಂ
ಮುಂದುವರಿದುಭಯಸೇನಾಭಟರ್ ಚೂಣಿಯೊಳ್
ಸಂದಿಸಿ ಮಹಾಹವದೊಳೆಚ್ಚಾಡಿದರ್ ಬೊಬ್ಬೆಯಬ್ಬರಂ ಪರ್ಬುತಿರಲು ೪೬

ಗರ್ಬದಿಂ ಬಡಿದು ವಾದ್ಯಧ್ವನಿ ಧರಿತ್ರಿಯೊಳ್
ಪರ್ಬಿದುದು ಮಡಲಿರಿದು ಪಟುಭಟರ್ ತಂತಮ್ಮೊ
ಳೊರ್ಬೊರ್ಬರಂ ಜರೆದು ಹರಿಗೆ ಬಿಲ್ ಸಬಳ ಡೊಂಕಣಿ ಕತ್ತಿ ತವೆ ಮುಸುಂಡಿ
ಕರ್ಬುನದ ಕೋಲ್ ಮುಖ್ಯವಿವಿಧಾಯುಧಂಗಳಿಂ
ದಿರ್ಬಲದ ಕಾಲವರ್ ಪೊಯ್ದಾಡಿ ನೆತ್ತರಿನ
ಪೆರ್ಬೊಳೆಗಳೊಳ್ ತೇಂಕುತಿರ್ದರರೆನಿಮಿಷದೊಳ್ ರಾಮ ಕೇಳದ್ಭುತವನು ೪೭

ವಿಷದ, ಚಂದ್ರಕಾಂತಶಿಲೆಯ ಕಾಂತಿಯ, ರುಂಡಮಾಲೆಗಳ, ಚರ್ಮಾಂಬರದ, ವೃಷಭ ವಾಹನದ ದೇವನನ್ನು ನೋಡು ಎಂದನು. ೪೫. ಮುಚ್ಚುಮರೆಯ ಮಾತಲ್ಲ. ಅಸಂಖ್ಯಾತ ವಿಷ್ಣು-ಬ್ರಹ್ಮ-ಇಂದ್ರರನ್ನು ಸೃಷ್ಟಿಸಿ, ರಕ್ಷಿಸಿ, ನಾಶಮಾಡಿ, ಕೂಡಲೆ ಮತ್ತೆ ಸೃಷ್ಟಿ ಮಾಡುವನು. ಈ ಮಹಾತ್ಮನ ಮಹಿಮೆಯನ್ನು ಹೊಗಳಲು ಆದಿಶೇಷನಿಗೆ ಸಾಧ್ಯವೆ ? ಮರೆಹೋದವರನ್ನು ರಕ್ಷಿಸುವನು, ಪ್ರತಿಭಟಿಸಿದವರನ್ನು ನಾಶಮಾಡುವವನು ಎಂಬ ಬಿರುದುಳ್ಳವನೀತ. ಈತನಿಗೆ ಶರಣಾಗು. ಹಿಂದಿನದನ್ನು ತಿಳಿದು ಹೇಳಿದೆವು, ಕೆಡಬೇಡವೆನ್ನಲು, ರಾಕ್ಷಸನು ಕೋಪದಿಂದ ಈ ರೀತಿ ಹೇಳಿದನು. ೪೬. ಹಿಂದಿನವರಲ್ಲಿ ನಾನೊಬ್ಬನೇ, ಯೋಚಿಸಲು ಬಂದು ಕರುಳನ್ನು ತೊಳೆಯುವ ರೀತಿಯಾಯಿತು. ಗುರುಗಳು ಏನೆಂದರೇನು ಎನ್ನುತ್ತ ಕಿಡಿಕಿಡಿಯಾಗಿ ಬಳಿಕ ಆ ರಾಕ್ಷಸನು ವಿಪರೀತ ಕೋಪದಿಂದ ಆರ್ಭಟಿಸಿ, ಚಿನ್ನದ ರಥವನ್ನು ಮುಂದೆ ನಡೆಸಲು ಆ ಕ್ಷಣದಲ್ಲಿ ಎರಡೂ ಸೈನ್ಯದ ಮುಂಚೂಣಿಯ ಭಟರೂ ಚಲಿಸಿ, ಮುಂಭಾಗದಲ್ಲಿ ಸಂಧಿಸಿ, ಭಯಂಕರವಾದ ಯುದ್ಧದಲ್ಲಿ ಆರ್ಭಟದ ಅಬ್ಬರ ಹಬ್ಬುತ್ತಿರಲು ಹೋರಾಡಿದರು. ೪೭. ಗರ್ವದಿಂದ ಹೊಡೆದ ವಾದ್ಯಧ್ವನಿ ಭೂಮಿಯಲ್ಲೆಲ್ಲ ಹರಡಿತು. ಅತಿ ಶೂರಸೈನಿಕರು ಹರಡಿಕೊಂಡು ತಮ್ಮತಮ್ಮಲ್ಲಿ ಒಬ್ಬರನ್ನೊಬ್ಬರು ನಿಂದಿಸುತ್ತ, ಗುರಾಣಿ, ಬಿಲ್ಲು, ಈಟಿ, ಧ್ವಜಸ್ತಂಭ, ಕತ್ತಿ, ಮುಸುಂಡಿ, ಕಬ್ಬಿಣದ ಕೋಲು ಮೊದಲಾದ ನಾನಾರೀತಿಯ ಆಯುಧಗಳಿಂದ

CC-0. Jangamwadi Math Collection. Digitized by eGangotri

ಮತ್ತೆ ಶತಮಾಯು ಷಣ್ಮುಖರ ನೇಮಂಗಳಿಂ
ದೊತ್ತಿ ತಂದುಭಯಚಾತುರ್ಬಲಂ ಕವಿಕವಿಯೆ
ಮತ್ತೆ ರಥದೊಳ್ ತೇರ್ ತುರಂಗದೊಳ್ ಕುದುರೆ ಕರಿಯೊಳ್ ಗಜಂ ಭಟರೊಳಾಳು
ಒತ್ತಿದರ್ ದೊರೆದೊರೆಗಳೇ ಬೆನ್ನೊಳಿರ್ದು ನಡೆ
ಮುತ್ತು ತೆಗೆದೆಸು ನೂಂಕು ತಿದಿ ಪೊಡೆ ಪೊರಳ್ಚಿರಿದು
ಕತ್ತರಿಸು ಸೀಳ್ ವೋದು ನುಂಗೆನುತೆ ತಮತಮಗೆ ಕೈಕೊಂಡರೇವೇಳ್ವೆನು. ೪೮

ಹೊದರ ಝಲ್ಲಿಗಳಡಾಯುಧ ಕೆಯ್ಯ ಪೊಡೆ ಸರಳ
ಹೊದೆಗಳಂ ತತ್ತಸ್ಥಳಂಗಳೊಳ್ ಕಟ್ಟಿ ಬಿಲ್
ಹೆದೆಯುನಾರ್ಯೆದು ಗೊಲೆಗೇರಿಸುತೆ ಜೇವೊಡೆದು ಕರ್ಣಾಂತಕಂಬುದೊಟ್ಟು
ಕದಲದತ್ತಿತ್ತ ಮೂಡಿಯನಿಕ್ಕಿ ತೆಗೆದೆಸು
ತ್ತಿದಿರಂಬುಗಳನೊಡನೆ ಖಂಡಿಸುತ್ತೆಸುಗೆಗಂ
ದದೆ ಕೊರಳ್ ನಡುಗಳಿಕ್ಕಡಿಸಲೆಚ್ಚಾಡಿದರ್ ಬಿಲ್ಲಬಿನ್ನಣಿಗರಂದು ೪೯

ಪಲತೆರದ ಬಿರುದುಗಳ್ ಕಿರುಗತ್ತಿಗಳ ನೆಲ
ಕ್ಕಲೆವ ಝಲ್ಲಿಗಳಂಗದೊಳಗಮರ್ದ ಬಣ್ಣ ಬಗೆ
ಗಳ ಬೆಳ್ಳಿಪೊಂಗುಬ್ಬಿವರಿಗೆಯುಂ ತೊಡೆ ಚಾಟುಗೊಳುತೊಡನೆ ಖಡ್ಗಂಗಳ

ಎರಡೂ ಕಡೆಯ ಪದಾತಿದಳದವರು ಹೋರಾಡಿ ಅರ್ಧನಿಮಿಷದಲ್ಲಿ ರಕ್ತದ ದೊಡ್ಡ ಹೊಳೆಗಳಲ್ಲಿ ತೇಲಾಡುತ್ತಿದ್ದರು. ಸಿದ್ಧರಾಮ, ಅದ್ಭುತವನ್ನು ಕೇಳು. ೪೮. ಮತ್ತೆ ಶತಮಾಯು, ಷಣ್ಮುಖರ ಆಜ್ಞೆಗಳಿಂದ ಒತ್ತಿಬಂದ ಎರಡೂ ಕಡೆಯ ಚತುರಂಗ ಸೈನ್ಯ 'ಮುತ್ತು, ಮುತ್ತು' ಎನ್ನುತ್ತ ರಥದಲ್ಲಿ-ರಥ, ಕುದುರೆಯಲ್ಲಿ–ಕುದುರೆ, ಆನೆಯಲ್ಲಿ-ಆನೆ, ಸೈನಿಕರಲ್ಲಿ-ಸೈನಿಕರು ಎದುರಿಸಿದರು. ನಾಯಕ-ನಾಯಕರುಗಳೇ ಹಿಂದೆಯಿದ್ದು ನಡೆ ಮುತ್ತು, ತೆಗೆದು ಹೊಡೆ, ನೂಕು, ತಿವಿ, ಬಡಿ, ಹೊರಳಿಸು, ತಿವಿದು ಕತ್ತರಿಸು, ಸೀಳು, ಬಾರಿಸು, ನುಂಗು ಎನ್ನುತ್ತ ತಾವು ತಾವು ಯುದ್ಧ ಕೈಗೊಂಡರು, ಏನು ಹೇಳಲಿ ? ೪೯. ಅಸಂಖ್ಯಾತ ಜಲ್ಲೆಗಳನ್ನು, ತುದಿಬಾಗಿದ ಕತ್ತಿಗಳನ್ನು, ಕೈಯಲ್ಲಿ ಹಿಡಿದ ಬಾಣದ ಹಿಂಭಾಗವನ್ನು, ಬಾಣವಿಡುವ ಬತ್ತಳಿಕೆಯನ್ನು ಆಯಾ ಸ್ಥಳಗಳಲ್ಲಿ ಕಟ್ಟಿ ಬಿಲ್ಲಿನ ಹೆದೆಯನ್ನು ಪರೀಕ್ಷಿಸಿನೋಡಿ, ಬಿಲ್ಲಿನ ತುದಿಗೆ ಕಟ್ಟುತ್ತ ಠೇಂಕಾರ ಮಾಡಿ, ಕಿವಿಯವರೆಗೆ ಬಾಣವನ್ನು ಎಳೆದು, ಅತ್ತಿತ್ತ ಅಲುಗಾಡದೆ, ಮುಡಿಯೂರಿ, ತೆಗೆದುಬಿಡುತ್ತ, ತಡೆ ಯದೆ ತಕ್ಷಣ ಎದುರಿನಿಂದ ಬಂದ ಬಾಣಗಳನ್ನು ಕತ್ತರಿಸುತ್ತ, ಪುನಃ ಬಾಣಬಿಡಲು ಅಂಜದೆ ಕೊರಳು, ನಡುಗಳು ಎರಡು ತುಂಡಾಗುವಂತೆ ಕುಶಲರಾದ ಬಿಲ್ಗಾರರು ಆ ದಿನ ಹೋರಾಡಿದರು, ೫೦. ನಾನಾ ರೀತಿಯ ಬಿರುದುಗಳ, ಕಿರುಗತ್ತಿಗಳು, ನೆಲದವರೆಗೆ ತೂಗಾಡುವ ಜಲ್ಲೆಗಳು, ದೇಹವನ್ನಾವರಿಸಿರುವ ಬಣ್ಣಬಣ್ಣದ ಬೆಳ್ಳಿ-ಚಿನ್ನದ ಉಬ್ಬು ಗುರಾಣಿಗಳನ್ನು ತೊಡಲು ಚುರುಕುಗೊಳ್ಳುತ್ತ, ಕೂಡಲೇ ಕತ್ತಿಗಳನ್ನು ಝಳಪಿಸುತ್ತ,

CC-0. Jangamwadi Math Collection. Digitized by eGangotri

ಝಳಪಿಸುತೆ ಲಾವಣಿಗೆಯಿಂ ಕದಲದೊಡ್ಡುತ
ಪ್ಪಳಿಸಿ ಮೇಲ್ಕೀಳ್ವೊಯಿಲ್ಮೊನೆ ದಿವಿಗಳಿಂದೆ ಮೆ
ಯ್ಗಳ ತುಂಡುಗಳ್ ಬೀಳೆ ಮೂದಲಿಸಿ ಪೊಯ್ದಾಡುತಿರ್ದರಾ ಪರಿಗೆಯವರು ೫೦

ಮಿಗೆ ತನಗೆ ಸಂಜೋಗವಂ ತೊಟ್ಟು ಹಯತತಿಗೆ
ಮೊಗರಂಬ ಕಡಿಯಣಂಗಳನಿಟ್ಟು ಪಲ್ಲಣದ
ಬಿಗುಹುಗಳ ತಾಪಣೆಯ ಲೇವೆಗಳನಳವಡಿಸಿ ಬಲ್ಗಂದವಿಡಿದು ನಮಿಸಿ
ನೆಗೆದಡರಿ ನೇಜಯುಂಬೊತ್ತೇರಿ ತಿವಿದೊಡನೆ
ಚಿಗಿದೆತ್ತಿ ಬಿಸುಡುತ್ತೆ ರಾವ್ತಗುದುರೆಗಳನುಗಿ
ಬಗಿಮಾಡಿ ಕಾದುತ್ತಲಿರ್ದರಿರ್ಬಲದ ಘೋಟಾರೂಢರಾಹವದೊಳು ೫೧

ಹೊರಜೆ ಮಿಳಿ ಘಂಟೆ ಸರಪಳಿ ಕೊಂಬು ಕತ್ತಿಯುಂ
ಬರಕದಳಿ ರಂಚಿಕೆಗಳಂ ತಾಳ್ದ ಭದ್ರಮದ
ಕರಿಗಳನಡರ್ದು ಜೋದರ್ಕಳಂಕುಶದೊಳೊತ್ತಲ್ ಘೀಳಿಡುತ್ತಗಲಕೆ
ಪರಿದೆಡಬಲಂ ಪಿಂದುಮುಂದಣವರಂ ಕಾಲೊ
ಳರೆದು ತೇರ್ ಕುದುರೆಗಳನಪ್ಪಳಿಸಿ ಮಿಗೆ ಚಾರಿ
ವರಿದಾನೆಯಾನೆಯೊಳ್ ಕೈಗೊಟ್ಟು ತಿವಿದಾಡುತಿರ್ದರತಿಗಾಢದಿಂದೆ ೫೨

ವಾರುವಗಳಂ ಪೂಡಿ ಕೀಲಚ್ಚು ಬಳೆ ಮೊಳೆಯ
ನಾರೈದು ಸಿಂಧವಂ ನೆಗಪಿ ಶಸ್ತ್ರಾಸ್ತ್ರಮುಮ
ನೋರಂತೆ ತುಂಬಿ ಚಮ್ಮಟಿಗೆವಿಡಿದಾ ಸೂತನಿದಿರಾಗಿ ತಂದಿರಿಸಿದ

ಪ್ರತಿಭಟನೆಯನ್ನು ಕದಲದಂತೆ ಆಯುಧವನ್ನು ಒಡ್ಡುತ್ತ ಬರುವ ಸಮಿಾಪಿಸಿ ಮೇಲೆ ಕೆಳಗೆ ಹೊಡೆತ, ದಿಟ್ಟತನದಿಂದ ತಿವಿದಾಡುವುದರಿಂದ ಮೆಯ್ಗಳ ತುಂಡುಗಳು ಬೀಳಲು ಮೂದಲಸಿ ಕತ್ತಿಯವರು ಹೋರಾಡುತ್ತಿದ್ದರು, ೫೧. ತಾನು ಚೆನ್ನಾಗಿ ಕವಚವನ್ನು ತೊಟ್ಟು,ಕುದುರೆಯ ಸಮೂಹಕ್ಕೆ ಮುಖವಾಡವನ್ನು ಕಡಿವಾಣಗಳನ್ನು ಅಳವಡಿಸಿ ಜೇನು ಚೆನ್ನಾಗಿ ಬಿಗಿಯಾಗಿ ಇರುವಂತೆ ಸಿದ್ಧಗೊಳಿಸಿದ ಜೇನುಗಳನ್ನು ಅಳವಡಿಸಿ, ಗಂಧದಕಡ್ಡಿ ಬೆಳಗಿ ನಮಸ್ಕರಿಸಿ, ನೆಗೆದು ಹತ್ತಿ,ಕೈಯ ಹಿಡಿದು,ಮೇಲೆಬಿದ್ದು ತಿವಿದ ಕೂಡಲೇ ಜಿಗಿದು ಎತ್ತಿ ಬಿಸಾಡುತ್ತ ರಾವುತರು ಮತ್ತು ಕುದುರೆಗಳನ್ನು ತುಂಡು ತುಂಡು ಮಾಡಿ ಎರಡೂ ಸೈನ್ಯದ ಕುದುರೆಸವಾರರು ಯುದ್ಧದಲ್ಲಿ ಹೋರಾಡುತ್ತಿದ್ದರು. ೫೨. ಕತ್ತಿನ ಹಗ್ಗ, ಮಣಿ, ಘಂಟೆ, ಸರಪಳಿ, ಕೊಂಬು, ಕತ್ತಿ, ಆಕಾಶ ಬಾವುಟ, ಅಂಬಾರಿಗಳನ್ನು ಹೊಂದಿದ ಭೀಕರವಾದ ಪಟ್ಟದ ಮದ್ದಾನೆಗಳನ್ನು ಏರಿ ಮಾವುತರು ಅಂಕುಶದಿಂದ ಒತ್ತಲು ಅವು ಘೀಂಕಾರ ಮಾಡುತ್ತ, ಅಷ್ಟಗಲಕ್ಕೂ ಚಲಿಸಿ ಎಡ-ಬಲ, ಹಿಂದು-ಮುಂದಿನವರನ್ನು ಕಾಲಲ್ಲಿ ಅರೆದು, ರಥ-ಕುದುರೆಗಳನ್ನು ಅಪ್ಪಳಿಸಿ ಸಾಯಿಸಿ, ಯುಕ್ತಿಯಿಂದ ಮುಂದು ವರಿದು, ಆನೆ-ಆನೆಯೊಂದಿಗೆ ತಾಗಿ ಅತಿಗಾಢವಾಗಿ ತಿವಿದಾಡುತ್ತಿದ್ದರು. ೫೩. ಕುದುರೆ ಗಳನ್ನು ಹೂಡಿ ಕೀಲಚ್ಚು, ಬಳೆ, ಮೊಳೆಗಳನ್ನು ಪರಿಶೀಲಿಸಿ ಜೋಡಿಸಿ, ಬಾವುಟವನ್ನು ಎತ್ತಿ, ಶಸ್ತ್ರಾಸ್ತ್ರವನ್ನು ಓರಣದಿಂದ ತುಂಬಿ ಚಾವಟಿ ಹಿಡಿದು ಆ ಸಾರಥಿ ಎದುರಿಗೆ

CC-0. Jangamwadi Math Collection. Digitized by eGangotri

ತೇರ ತೇಜಿಗೆ ನಮಿಸುತೊಡನೇರಿ ಬಿಲ್ಲರಳ
ಸಾರದಿಂ ಕರಿ ತುರಗ ರಥ ಪಟುಭಟಾಳಿ ಸಂ
ಹಾರವಾಗಲ್ ನೆರೆ ವರೂಥದವರೆಚ್ಚಾಡುತಿರ್ದರತಿತವಕದಿಂದೆ ೫೩

ಪಸಿದ ಪೆರ್ಬುಲಿಯಂತೆ ಹುದುಗಿ ಮಿಗೆ ಲಂಘಿಪರ್
ಮುಸಗಿದಕ್ಕಲನಂತೆ ಪಾಯ್ದೆತ್ತಿ ಬಿಸುಡುವರ್
ಪೊಸಪಾವಿನಂತೆ ಮೇಲ್ವರಿವರ್ ಕೆರಳ್ದ ತಗರಂತೆ ತಾಗುವರಾಹವಂ
ಮುಸೆದಾನೆಯಂತೆ ಮಲೆತೊತ್ತುವರ್ ಕಾಳ್ಗೋಣ
ನೆಸಕಮೆನೆ ಪೊಯ್ದಾಡುವರ್ ಸಿಂಗದಂತೆ ಗ
ರ್ಜಿಸಿ ಬಡಿವರಾಹವೋದ್ರೇಕದಿಂದಿರ್ವಲದ ಸುಭಟರೇಂ ವಣ್ಣಿಸುವೆನು ೫೪

ಸೋಂಕುವರ್ ತರಿವರಿರಿವರ್ ಪರಿವ ರಕ್ತದೊಳ್
ತೇಂಕುವರ್ ಬೀಳ್ವರೇಳ್ವರ್ ತಿವಿದು ಕೆಡಪಿ ನೆಲ
ಕೌಂಕುವರ್ ಕಡಿವರುಡಿವರ್ ಸಮರನಿರ್ಭರಾವೇಶದಿಂ ಮೆಯ್ಮೆಯ್ಗಳಂ
ಸೋಂಕುವರ್ ಸಿಗಿವರಗಿವರ್ ಬಲಾಂಬುಧಿಯುಂ ಕ
ಲಂಕುವರ್ ಪಳಿವರಳಿವರ್ ಸೆಳೆದು ಕಕ್ಸದೊಳಿ
ರಿಂಕುವರ್ ಜಾರ್ವರೇರ್ವರ್ ಬಳಿಕ್ಕಿರ್ಬಲದ ಸುಭಟರ್ಕಳಾಹವದೊಳು ೫೫

ಪೆಣನ ಮೆದೆ ಮಾಂಸದೊಟ್ಟಿಲ್ ಬಸೆಯ ಪರಿಕಾಲ್ವೆ
ನೆಣನ ಪೆರ್ಬೆಟ್ಟ ಮಿದುಳಿನ ರಾಸಿ ಕರುಳ ತಿಂ
ತಿಣಿ ತೊರಳೆಗುಪ್ಪೆ ಮಜ್ಜೆಯ ತೆವರ್ ಸುಂಟಿಗೆಯ ಸಾಲ್ ತಳಿತ ಖಂಡಂಗಳ

ತಂದು ನಿಲ್ಲಿಸಿದ ರಥದ ಕುದುರೆಗಳಿಗೆ ನಮಸ್ಕರಿಸುತ್ತ ಕೂಡಲೇ ರಥವನ್ನು ಹತ್ತಿ ಬಿಲ್ಲಿನಿಂದ ಬಿಟ್ಟ ಉತ್ತಮ ಬಾಣಗಳಿಂದ ಶತ್ರುಸೈನ್ಯದ ಆನೆ-ಕುದುರೆ-ರಥ, ಸೈನಿಕರನ್ನು ಸಂಹರಿಸುತ್ತ ಅತಿಯಾದ ಉತ್ಸಾಹದಿಂದ ರಥಿಕರು ಹೋರಾಡುತ್ತಿದ್ದರು, ೫೪, ಹಸಿದ ಹೆಬ್ಬುಲಿಯಂತೆ ಬಚ್ಚಿಟ್ಟುಕೊಂಡು ಜೋರಾಗಿ ನೆಗೆಯುವರು. ಆವೇಶಗೊಂಡ ಕಾಡಹಂದಿಯಂತೆ ಹಾಯ್ದು ಎತ್ತಿ ಬಿಸಾಡುವರು. ಹೊಸ ಹಾವಿನಂತೆ ಮೇಲೆ ಬೀಳುವರು, ಕೆರಳಿದ ಟಗರಂತೆ ಯುದ್ಧದಲ್ಲಿ ತಾಗುವರು, ಚುರುಕಾದ ಆನೆಯಂತೆ ಕೊಬ್ಬಿ ಒತ್ತುವರು, ಕಾಡುಕೋಣದ ರೀತಿ ಎನ್ನುವಂತೆ ಹೊಡೆದಾಡುವರು, ಸಿಂಹದಂತೆ ಗರ್ಜಿಸಿ ಉದ್ರೇಕದಿಂದ ಎರಡೂ ಕಡೆಯ ಶೂರ ಸೈನಿಕರು ಬಡಿಯುವರು, ಅದನ್ನು ಏನೆಂದು ಬಣ್ಣಿಸುವೆನು ! ೫೫. ಎರಡೂ ಸೈನ್ಯದ ಶೂರಭಟರು ಯುದ್ಧದಲ್ಲಿ ತಾಗುವರು, ತರಿಯುವರು, ಇರಿಯುವರು, ಹರಿಯುವ ರಕ್ತದಲ್ಲಿ ತೇಲುವರು, ಬೀಳುವರು, ಏಳುವರು, ತಿವಿದು ಕೆಡಹಿ ನೆಲಕ್ಕೆ ಔಕುವರು, ಕಡಿಯುವರು, ತುಂಡು ಮಾಡುವರು, ಯುದ್ಧಾವೇಶದಿಂದ ಮೈ-ಮೈಗಳನ್ನು ಸೋಕುವರು, ಸಿಗಿಯುವರು, ಗರ್ಜಿಸುವರು, ಸೈನ್ಯ-ಸಾಗರವನ್ನು ಕಲಕುವರು, ಓಯಾಳಿಸುವರು, ಕೊಲ್ಲುವರು, ಎಳೆದು ಕಂಕುಳಲ್ಲಿ ಇರುಕಿಸಿಕೊಳ್ಳುವರು, ಜಾರುವರು, ಏರುವರು. ೫೬. ಹೆಣದ ಮೆದೆ, ಮಾಂಸದ ರಾಶಿ ಕೊಬ್ಬಿನ ಕಾಲುವೆ, ನೆಣದ ದೊಡ್ಡ ಬೆಟ್ಟ, ಮೆದುಳಿನ ರಾಶಿ, ಕರುಳ ಗುಡ್ಡೆ, ಗುಲ್ಮದ

CC-0. Jangamwadi Math Collection. Digitized by eGangotri

ಬಣಬೆ ನೆತ್ತರಿನ ಪೊಳೆ ಮೂಳೆಬಿಕ್ಕುಗಳ ಸಂ
ದಣಿ ಕೊಬ್ಬುದೆಕ್ಕೆ ಕಾಳಿಜಗಳೆಕ್ಕೆಕ್ಕೆ ತ
ದ್ರಣರಂಗದೆಲ್ಲೆಡೆಯೊಳುಂ ಕೀವೆ ಬಲವೆರಳ್ ಪೋಣರ್ದುವೇಂ ಬಣ್ಣಿಸುವೆನು ೫೬

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮನ
ನಂತ ಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ ೫೭

ನಲವತ್ತೆಂಟನೆಯ ಸಂಧಿ ಸಂಪೂರ್ಣ

ಗುಪ್ಪೆ, ಕರುಳಿನ ರಸದ ದಿನ್ನೆ, ಹೃದಯದ ಸಾಲು, ಹರಡಿದ ಖಂಡದ ಬಣವೆ, ರಕ್ತದ ಹೊಳೆ, ಮೂಳೆ-ಹೃದಯದ ಮಾಂಸಗಳ ಗುಂಪು, ಕೊಬ್ಬಿನ ತೆಕ್ಕೆ, ಅಗ್ರ ಮಾಂಸದ ಉಂಡೆಗಳು ಆ ರಣರಂಗದಲ್ಲಿ ಎಲ್ಲ ಕಡೆಯೂ ತುಂಬುವಂತೆ ಎರಡೂ ಸೈನ್ಯಗಳು ಹೋರಾಡಿದುವು. ಅದೇನೆಂದು ಬಣ್ಣಿಸಲಿ ? ೫೭. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿ ಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ನಲವತ್ತೆಂಟನೆಯ ಸಂಧಿ ಮುಗಿಯಿತು

CC-0. Jangamwadi Math Collection. Digitized by eGangotri

ನಲವತ್ತೊಂಬತ್ತನೆಯ ಸಂಧಿ

ಸೂಚನೆ : ಇರದೆ ಶುಂಭಾಸುರನ ಧುರಕೆ ನಿಲಲಾರದಾ
ಹರಿಯಜೇಂದ್ರಾದಿ ಸುರರೋಡುತಿರೆ ಕಾಣುತ್ತೆ
ಪರಕುಮಾರಂ ಸಕಲದೈತ್ಯರಂ ಮುರಿದು ತಿರುಗಿದನಧಿಕವಿಜಯದಿಂದೆ

ಭೀಮ ಪದನಮಿತಸುತ್ರಾಮ ಬೃಂದಾರಕ
ಪ್ರೇಮ ಸದ್ಗುಣಗುಣೋದ್ದಾಮ ಗೌರೀವದನ
ತಾಮರಸಸಾಹಸ್ರಧಾಮ ವರಲೋಕಾಭಿರಾಮ ಧೃತಸೋಮ ಜಯತು
ಕಾಮ ಸರ್ವಾಂಗನಿರ್ಧೂಮ ಘನಕೈಲಾಸ
ಧಾಮ ಸಲೆ ಸನ್ನುತಸುಸಾಮ ನಯುನಾಗ್ನಿಜಿತ
ಭೀಮ ಪಂಪಾವಿರೂಪಾಕ್ಷ ರಕ್ಷಿಸು ನತಸ್ತೋಮಮಂ ಲೀಲೆಯಿಂದೆ ೧

ಪ್ರೀತಿಯಿಂದಾಲಿಸೆಲೆ ಸಿದ್ಧರಾಮೇಶ್ವರ ಮ
ಹಾತಿಶಯವಿಕ್ರಮದೊಳಿರ್ಪಲಂ ಕಾದಲ್ಕ
ತೀತಕೋಪದೊಳೆ ದಿಕ್ಪಾಲಕರ್ ಮುಂಕೊಂಡು ಕೈಚಳಕದಿಂದೆಸುತಿರೆ
ಶಾತಕುಂಭವಿಚಿತ್ರಮಾರ್ಗಣಂಗಳ್ ಕರಿ
ವ್ರಾತಮಂ ಜೋಧರಂ ತುರಗಮಂ ತೇರ್ಗಳಂ
ಸೂತರ್ಕಳಂ ತುಂಡುತುಂಡಾಗೆ ಕತ್ತರಿಸುತಿರ್ದುವೇಂ ವಣ್ಣಿಸುವೆನು ೨

ಸೂಚನೆ : ಶುಂಭಾಸುರನ ಯುದ್ಧವನ್ನು ಎದರಿಸಿ ನಿಲ್ಲಲಾರದೆ ವಿಷ್ಣು-ಬ್ರಹ್ಮ-ಇಂದ್ರ ಮೊದಲಾದ ದೇವತೆಗಳು ಓಡಿದರು. ಅದನ್ನು ನೋಡಿ ಶಿವನ ಮಗನು ಎಲ್ಲ ರಾಕ್ಷಸರನ್ನೂ ಸೋಲಿಸಿ ಅಧಿಕವಾದ ವಿಜಯದಿಂದ ಹಿಂತಿರುಗಿದನು. ೧. ಭೀಮ ದೇವೇಂದ್ರನಿಂದ ಪಾದಗಳಿಗೆ ನಮಸ್ಕರಿಸಿಕೊಳ್ಳುವ ಶಿವನ, ದೇವತೆಗಳ ಪ್ರೇಮಿಯೆ, ಸದ್ಗುಣಗಳ ಸಮೂಹವನ್ನುಳ್ಳವನೆ, ಗೌರಿಯ ಮುಖಕಮಲಕ್ಕೆ ಸೂರ್ಯನೆ, ಲೋಕ ಸುಂದರನೆ, ಚಂದ್ರಶೇಖರ, ಕಾಮನನ್ನು ಸುಟ್ಟ ಬೂದಿಯನ್ನು ಮೈಗೆಲ್ಲ ಲೇಪಿಸಿಕೊಂಡ ವನಿಗೆ ಜಯವಾಗಲಿ, ಶ್ರೇಷ್ಠವಾದ ಕೈಲಾಸವನ್ನೇ ಮನೆಯಾಗಿ ಉಳ್ಳವ, ಸಾಮಗಾನ ದಿಂದ ಸ್ತುತಿಸಲ್ಪಡುವವನೆ, ಮೃತ್ಯುಂಜಯ, ಪಂಪಾವಿರೂಪಾಕ್ಷನೆ ನಮಸ್ಕರಿಸಿದ ಭಕ್ತ ಸಮೂಹವನ್ನು ಲೀಲೆಯಿಂದ ಕಾಪಾಡು. ೨. ಪ್ರೀತಿಯಿಂದ ಕೇಳಯ್ಯ ಸಿದ್ಧರಾಮ, ಅತಿಶಯವಾದ ಪರಾಕ್ರಮದಿಂದ ಎರಡು ಸೈನ್ಯಗಳೂ ಯುದ್ಧ ಮಾಡಲು ಎಲ್ಲೆ ಮೀರಿದ ಕೋಪದಿಂದ ದಿಕ್ಪಾಲಕರು ಮುಂದೆ ಬಂದು ಕೈಚಳಕದಿಂದ ಬಾಣಪ್ರಯೋಗ ಮಾಡು ತ್ತಿರಲು ಬಂಗಾರದ ವಿಚಿತ್ರವಾದ ಬಾಣಗಳು ಆನೆಗಳ ಸಮೂಹವನ್ನು, ಮಾವುತರನ್ನು, ಕುದುರೆಯನ್ನು, ರಥಗಳನ್ನು, ಸಾರಥಿಗಳನ್ನು ತುಂಡು ತುಂಡಾಗುವಂತೆ ಕತ್ತರಿಸುತ್ತಿದ್ದುವು.

CC-0. Jangamwadi Math Collection. Digitized by eGangotri

ತೊಟ್ಟ ಕಣೆಯೊಂದು ಕರ್ಣಂಬರಂ ತೆಗೆತೆಗೆದು
ಬಿಟ್ಟ ಕಣೆಗಳ್ ನೂರರಾತಿಸೈನಿಕದೊಳಗೆ
ನೆಟ್ಟ ಕಣೆಗಳ್ ಸಾಸಿರಂ ಲಕ್ಕಕೋಟಿ ಶತಕೋಟಿ ಪದ್ಮಂಗಳೆನಿಪ
ಕಟ್ಟಳೆಗಳಂ ಮೀರಿ ಪೆರ್ಚಿದುವು ಮಾರ್ಬಲದೊ
ಳಿಟ್ಟಣಿಪರಂ ಬಿಡದೆ ಕೊಚ್ಚಿದುವು ತನುಗಳಂ
ತಟ್ಟುರ್ಚಿ ಖಂಡಮಂ ಕಚ್ಚಿದುವು ದಿಕ್ಪಾಲರಾರ್ದೆಸುವ ಬಾಣಂಗಳು ೩

ಎಚ್ಚೊಡೊತ್ತರಿಸಿ ಕತ್ತರಿಸಿ ಕಡಿದಿರಿದು ನ
ಟ್ಟುಚ್ಚಳಿಸಿ ಪಾಯ್ದು ಪೊಯ್ದುರೆಯಟ್ಟಿ ಮುಟ್ಟಿ ಕಡು
ಚೆಚ್ಚರದೆ ತೂಳ್ದು ಸೀಳ್ದಾವರಿಸಿ ಡಾವರಿಸಿ ಹೇವರಿಸಲಹಿತರ್ಕಳು
ಅಚ್ಚರಿಯೊಳೊಡನೊಡನೆ ಕಂಗೆಡಿಸಿ ಬೆಂಗೆಡಿಸಿ
ಕೊಚ್ಚಿ ಕೊಯ್ದೆತ್ತಿ ಸುತ್ತಿಸಿ ಕೊಡಹಿ ಕೆಡಹಿ ನೆರೆ
ಹುಚ್ಚುಮಾಡಿದುವಾಡಿದುವು ಕಾಡಿದುವು ಬಲದೊಳಾಶಾಧಿಪರ ಕಣೆಗಳು ೪

ಕಡಿದುಡಿದ ತೋಳ್ ನೆಗೆದು ಕೆಡವುತಿರ್ದುವು ಬೀಳ್ವ
ತೊಡೆಯ ತುಂಡುಗಳೇಳ್ದು ಬಡಿವುತಿರ್ದುವು ಮುಂಡ
ವೊಡನೊಡನೆ ತೆಗೆದೆಸುವುತಿರ್ದುವುರೆ ಪರಿದ ತಲೆಗಳ್ ಬೊಬ್ಬಿಡುತ್ತಿರ್ದುವು
ಕಡುಗಲಿಗಳಾಂತು ಮಡಿವುತ್ತಿರ್ದರೊಡನೆ ಬೆಂ
ಗೊಡದಖಿಳಬಲವಳಿವುತಿರ್ದುದೇನೆಂಬೆನಾ
ವಡಬನಂ ತಾಗಿ ಬಯಲಪ್ಪ ಶರಧಿಯ ತೆರೆಗಳಂತೆ ದಿಗಧಿಪರಿದಿರೊಳು ೫

೩. ತೊಟ್ಟ ಬಾಣ ಒಂದು, ಕಿವಿಯವರೆಗೆ ಎಳೆದು ತೆಗೆತೆಗೆದು ಬಿಟ್ಟ ಬಾಣಗಳು ನೂರು, ಶತ್ರುಸೈನ್ಯದೊಳಗೆ ಚುಚ್ಚಿಕೊಂಡ ಬಾಣಗಳು ಸಾವಿರ, ಲಕ್ಷ, ಕೋಟಿ, ಸಾವಿರ-ಕೋಟಿ ಪದ್ಮಗಳೆನ್ನುವ ಲೆಕ್ಕವನ್ನು ಮೀರಿ ಹೆಚ್ಚಾದವು. ದಿಕ್ಪಾಲಕರು ಬಿಡುವ ಬಾಣಗಳು ಶತ್ರುಸೈನ್ಯದಲ್ಲಿ ಗುಂಪುಗೂಡುವವರನ್ನು ಬಿಡದೆ ಕತ್ತರಿಸಿದವು. ಶರೀರವನ್ನು ಜೋರಾಗಿ ಉಜ್ಜಿ ಮಾಂಸಖಂಡವನ್ನು ಕಚ್ಚಿದವು. ೪. ದಿಕ್ಪಾಲಕರ ಬಾಣಗಳು ಪ್ರಯೋಗಿಸಿದೊಡನೆ ನೂಕಿ, ಕತ್ತರಿಸಿ, ಕಡಿದು, ಸೀಳಿ, ನೆಟ್ಟು, ಕಿತ್ತು, ಹಾದು, ಹೊಡೆದು, ಹಿಂದಟ್ಟಿ, ದೇಹಕ್ಕೆ ತಾಗಿ, ಅತಿಯಾದ ಎಚ್ಚರಿಕೆಯಿಂದ ಬೆನ್ನಟ್ಟಿ, ಸೀಳಿ, ಮುತ್ತಿ, ಒಂದೇಸಮನೆ ತಿರುಗುವಂತೆಮಾಡಿ ಶತ್ರುಗಳು ತಿರುಗಿ ಒತ್ತಲು ಆಶ್ಚರ್ಯದಿಂದ ಜೊತೆಜೊತೆಗೇ ಕಂಗೆಡಿಸಿ ಬೆನ್ನುತೋರುಮತೆ ಮಾಡಿ, ಕೊಚ್ಚಿ, ಕೊಯ್ದು, ಎತ್ತಿ ಸುತ್ತಿಸಿ, ಕೊಡವಿ, ಕೆಡವಿ ಬಹಳವಾಗಿ ಹುಚ್ಚು ಮಾಡಿದವು, ಆಡಿ ಕಾಡಿದವು. ೫. ಕಡಿದುಬಿದ್ದ ತೋಳುಗಳು ಆಕಾಶಕ್ಕೆ ಹಾರಿ ಬೀಳುತ್ತಿದ್ದುವು. ಬೀಳುವ ತೊಡೆಯ ತುಂಡುಗಳು ಎದ್ದು ಹೊಡೆಯುತ್ತಿದ್ದುವು. ಮುಂಡಗಳು ಒಡನೊಡನೆ ತೆಗೆದು ಬಾಣ ಬಿಡುತ್ತಿದ್ದುವು. ಚೆನ್ನಾಗಿ ಹರಿದ ತಲೆಗಳು ಬೊಬ್ಬೆ ಹಾಕುತ್ತಿದ್ದುವು. ಶೂರರು ಎದುರಿಸಿ ಸಾವಪ್ಪುತ್ತಿದ್ದರು. ಏನು ಹೇಳಲಿ ? ದಿಕ್ಪಾಲಕರ ಎದುರಿನಲ್ಲಿ ಬಡಬಾಗ್ನಿಯನ್ನು ಎದುರಿಸಿ ಇಂಗಿಹೋಗುವ ಸಮುದ್ರದ ಅಲೆಗಳಂತೆ ಹಿಮ್ಮೆಟ್ಟಿದ ಎಲ್ಲ ಸೈನ್ಯವೂ

CC-0. Jangamwadi Math Collection. Digitized by eGangotri

ಬತ್ತಿದುದು ಮುಂಗಡಿಯಸೇನಾರ್ಣವಂ ಮುಂದ
ಕೊತ್ತಿದುದು ದಿಕ್ಪಾಲಬಲವಡಸಿ ಬೋಯೆಂದು
ಸುತ್ತೊಡನೆ ಬಲನಮುಚಿ ಜಂಭ ದುಂದುಭಿ ಮಹಾನಾಭ ಗಜಶಿರ ಶೂರ್ಪಕ
ಮತ್ತೆ ವೃತ್ರಾದಿಖಿಳರಾ ಪ್ರಳಯಸಮಯದ ಮ
ಹೋತ್ತುಂಗಮೇಘಾಳಿಗಳ್ ಕರೆವ ಮಳೆಗಳೆನ
ಲೆತ್ತಲುಂ ದಿಕ್ಪಾಲರಂ ತರುಬಿ ಶರವರುಷಮಂ ಕರೆದರೇನೆಂಬೆನು ೬

ಸುರಪನಂ ನಮುಚಿಯಗ್ನಿಯನಾ ಬಲಂ ದಂಡ
ಧರನನಾ ಜಂಭಂ ನೃವಾಹನನನಾ ಹಸ್ತಿ
ಶಿರನಬ್ಧಿಪಾಲನಂ ದುಂದುಭಿ ಜಗತ್ಪ್ರಾಣನಂ ಶೂರ್ಪಕಂ ಧನದನಂ
ವರಮಹಾನಾಭನೀಶಾನನಂ ವೃತ್ರನತಿ
ಭರದೊಳಿದಿರಾಗಿ ಕಾದುತಿರ್ದರಿತ್ತಲಾ
ಪುರುಹೂತನೆಚ್ಚ ಬಾಣಂಗಳಂ ಕತ್ತರಿಸಿ ನಮುಚಿ ಬಳಿಕಿಂತೆಂದನು ೭

ಎಲವೊ ಸುರಪಾಲ ನೂರಾರ್ಸೂಳೊಳಂ ನಿನ್ನ
ತಲೆಗೊಳ್ಳದುಳುಹಿ ಬಿಟ್ಟುದನರಿದು ಮತ್ತೆನ್ನ
ಕಲಹಕಿದಿರಾದೆ ನೀಂ ಪೆರಿಸಿ ದಿಕ್ಪಾಲರನಿಬರ ಶಿರಸ್ಸುಗಳನಿನ್ನು
ಕಳೆದುಕೊಂಬುದಕಿದೇ ಸಂಚಕಾರಂ ಕಡೆಗೆ
ತೊಲಗದಿರ್ ಕೊಳ್ಳೆನುತ್ತೊಂದು ಬಾಣದೊಳೆ ತೋ
ಳ್ಗಳನೆಚ್ಚು ಬೊಬ್ಬಿರಿಯಲಿಂದ್ರಂ ಮಹಾಕೋಪದಿಂದವಂಗಿಂತೆಂದನು ೮

ಕೂಡಲೇ ನಾಶವಾಗುತ್ತಿದ್ದುವು. ೬. ಮುಂಭಾಗದ ಸೇನಾಸಮುದ್ರ ಬತ್ತಿಹೋಯಿತು. ದಿಕ್ಪಾಲಕರ ಸೈನ್ಯ ಮುತ್ತಿ ಮುಂದಕ್ಕೆ ಒತ್ತಿತು. ಬೋಯೆನ್ನುತ್ತ ಕೂಡಲೇ ಬಲ, ನಮುಚಿ, ಜಂಭ, ದುಂದುಭಿ, ಮಹಾನಾಭ, ಗಜಶಿರ, ಶೂರ್ಪಕರೇ ಅಲ್ಲದೆ ವೃತ್ರ ಮೊದಲಾದ ಎಲ್ಲ ರಾಕ್ಷಸರೂ ಪ್ರಳಯಕಾಲದ ದೊಡ್ಡಮೋಡಗಳ ಸಮೂಹ ಸುರಿಸುವ ಮಳೆಯೆನ್ನುವಂತೆ ಎಲ್ಲೆಲ್ಲಿಯೂ ದಿಕ್ಪಾಲಕರನ್ನು ಎದುರಿಸಿ ಬಾಣಗಳ ಮಳೆಗರೆದರು. ಅದನ್ನು ಏನೆನ್ನಲಿ ? ೭. ದೇವೇಂದ್ರನನ್ನು ನಮುಚಿ, ಅಗ್ನಿಯನ್ನು ಆ ಬಲ, ಯಮನನ್ನು ಜಂಭನು, ನಿರುತಿಯನ್ನು ಗಜಶಿರ, ವರುಣನನ್ನು ದುಂದುಭಿ, ವಾಯುವನ್ನು ಶೂರ್ಪಕ, ಕುಬೇರನನ್ನು ಶ್ರೇಷ್ಠನಾದ ಮಹಾನಾಭ, ಈಶಾನನನ್ನು ವೃತ್ರನು ವೇಗದಿಂದ ಎದುರಿಸಿ ಯುದ್ಧಮಾಡುತ್ತಿದ್ದರು. ಇತ್ತಕಡೆ ಆ ಇಂದ್ರನು ಬಿಟ್ಟ ಬಾಣಗಳನ್ನು ಕತ್ತರಿಸಿ ನಮುಚಿ ಆನಂತರ ಹೀಗೆಂದನು. ೮. ಎಲವೋ ದೇವೇಂದ್ರ, ನೂರಾರುಬಾರಿ ನಿನ್ನ ತಲೆ ತೆಗೆಯದೆ ಉಳಿಸಿ ಬಿಟ್ಟುದನ್ನು ತಿಳಿದೂ ಮತ್ತೆ ನನ್ನೊಂದಿಗೆ ಯುದ್ಧಕ್ಕೆ ಎದುರಾದೆ, ನೀನೂ, ಕೂಡಿ ದಿಕ್ಪಾಲಕರೆಲ್ಲರ ತಲೆಗಳನ್ನೂ ಕಳೆದುಕೊಳ್ಳುವುದಕ್ಕೆ ಇದೇ (ಮುಂಚೆ ಕೊಡುವ ತೆರ) ಸಂಚಕಾರ, ಪಕ್ಕಕ್ಕೆ ಸರಿಯಬೇಡ, ತೆಗೆದುಕೋ ಎನ್ನುತ್ತ ಒಂದು ಬಾಣದಿಂದ ತೋಳುಗಳಿಗೆ ಹೊಡೆದು ಆರ್ಭಟಿಸಲು ಇಂದ್ರನು ಮಹಾ

CC-0. Jangamwadi Math Collection. Digitized by eGangotri

ಏನೆಲವೊ ಕಳ್ಗುಡುಹಿತನದ ಮಾತಿದು ನಿನಗೆ
ತಾನುಚಿತವೇ ಬಗುಳದಿರ್ ದನುಜಹಸ್ತಿಪಂ
ಚಾನನ ಶಿವಂ ಬೆನ್ನೊಳಿರ್ದಪಂ ನಿಂ ಬೆರಸಿಯುಂಧಾಸುರಾದಿಯಾದ
ದಾನವರ ಮಾಂಸಮಂ ಕಾಕ ಜಂಬುಕ ಪಿಶಾ
ಚಾನೀಕಕುಣಿಸುವೆಂ ನೋಡೆನುತೆ ಬಾಣಸಂ
ಧಾನದೊಳ್ ಖಳನ ರಥ ತುರಗ ಸಾರಥಿ ಧನುಗಳಂ ಕಡಿದು ಬೊಬ್ಬಿರಿದನು ೯

ಮತ್ತೊಂದು ರಥಕಡರ್ದಾ ಖಳಂ ರೋಷಾಗ್ನಿ
ಪೊತ್ತಿ ಕಿಡಿಗೆದರಿ ಭುಗಿಲೆಂದೊಡನೆ ದೇವೇಂದ್ರ
ನುತ್ತಮಾಂಗದ ಮುಕುಟ ಕವಚಕಾರ್ಮುಕ ವರೂಥಾಶ್ವ ಸೂತಾದಿಗಳನು
ತತ್ತರಿಂದರಿಯೆ ಪೊಸ ತೇರ್ಗಡರ್ದಿಂದ್ರನವ
ನೆತ್ತಿದ ಪತಾಕ ಚಾಮರ ತುರಗಸಾರಥಿಗ
ಳುತ್ತಮವರೂಥಮಂ ತರಿದು ನಮುಚಿಯ ಮನೋಗರ್ವಮಂ ಮುದ್ರಿಸಿದನು ೧೦

ನಿಮಿಷದೊಳ್ ಪೊಸರಥಕಡರ್ದೆಸುವನಾ ದನುಜ
ನಮರಪತಿ ತರಿವನಾ ತೇರಂ ಬಳಿಕ್ಕಿಂತು
ಕ್ರಮದೊಳ್ ವರೂಥಮುಗಣಿತಮಳಿದೊಡಂ ಮತ್ತೆ ಕಾದುತಿರೆ ರುದ್ರಾಸ್ತ್ರದಿಂ
ನಮುಚಿಯ ಶಿರಃಖಂಡನಂ ಮಾಡಿ ಸೇನೆಯುಂ
ಯಮನಗರಿಗೈದಿಸಲ್ ಕೇಳಿ ಬಲನಗ್ನಿಯುಂ
ಭ್ರಮೆಗೊಳಿಸಿ ಕೆಡಹಿ ಸುರಪಾಲನಿದಿರೊಳ್ ನಿಂದು ಕಣೆಗರೆವುತಿಂತೆಂದನು ೧೧

ಕೋಪದಿಂದ ಅವನನ್ನು ಕುರಿತು ಹೀಗೆ ಹೇಳಿದನು. ೯. ಏನೆಲವೋ ಹೆಂಡ ಕುಡಿದವರ ಮಾತಿದು. ನಿನಗೆ ಇದು ಉಚಿತವಾದುದೆ ? ಬಗುಳಬೇಡ, ರಾಕ್ಷಸರೆಂಬ ಆನೆಯನ್ನು ಕೊಲ್ಲುವ ಸಿಂಹನಾದ ಶಿವನು ನಮ್ಮ ರಕ್ಷಣೆಗೆ ಬೆಂಗಾವಲಾಗಿ ಇದ್ದಾನೆ. ನಿನ್ನನ್ನು ಸೇರಿಸಿ ಅಂಧಕಾಸುರ ಮೊದಲಾದ ಎಲ್ಲ ರಾಕ್ಷಸರ ಮಾಂಸವನ್ನೂ ಕಾಗೆ, ನರಿ, ಪಿಶಾಚ ಸಮೂಹಗಳಿಗೆ ಉಣಿಸುತ್ತೇನೆ, ನೋಡು ಎನ್ನುತ್ತ ಬಾಣ ಪ್ರಯೋಗಿಸಿ ರಾಕ್ಷಸನ ರಥ, ಕುದುರೆ, ಸಾರಥಿ, ಬಿಲ್ಲುಗಳನ್ನು ಕಡಿದು ಅಬ್ಬರಿಸಿದನು. ೧೦. ಮತ್ತೊಂದು ರಥವನ್ನು ಹತ್ತಿ ಆ ರಾಕ್ಷಸನು ರೋಷಾಗ್ನಿ ಹತ್ತಿ ಕಿಡಿಗೆದರಿ, ಭುಗಿಲೆಂದು ಕೂಡಲೇ ದೇವೇಂದ್ರನ ತಲೆಯ ಮೇಲಿನ ಕಿರೀಟ, ಬಿಲ್ಲು, ಶ್ರೇಷ್ಠವಾದ ರಥ-ಕುದುರೆ-ಸಾರಥಿಗಳನ್ನು ಚೂರು ಚೂರಾಗಿ ಕಡಿದನು. ದೇವೇಂದ್ರನು ಹೊಸ ರಥವನ್ನು ಏರಿ ಅವನ ಹಾರಾಡುವ ಬಾವುಟ, ಚಾಮರ, ಕುದುರೆ, ಸಾರಥಿಗಳನ್ನು ಉತ್ತಮವಾದ ರಥವನ್ನು ತರಿದು ನಮುಚಿಯ ಮನಸ್ಸಿನ ಗರ್ವಕ್ಕೆ ತಡೆಹಾಕಿದನು. ೧೧. ರಾಕ್ಷಸನು ನಿಮಿಷದಲ್ಲಿ ಹೊಸರಥವನ್ನು ಹತ್ತಿ ಬಾಣ ಬಿಡುವನು, ದೇವೇಂದ್ರನು ಆ ರಥವನ್ನು ನಾಶಮಾಡುವನು. ಬಳಿಕ ಈ ಕ್ರಮದಲ್ಲಿ ಶ್ರೇಷ್ಠವಾದ ಅನೇಕ ರಥಗಳು ನಾಶವಾದರೂ ಮತ್ತೆ ಯುದ್ಧ ಮಾಡುತ್ತಿರಲು ರುದ್ರಾಸ್ತ್ರದಿಂದ ನಮುಚಿಯ ತಲೆಯನ್ನು ಕತ್ತರಿಸಿ ಅವನ ಸೈನ್ಯವನ್ನು ಯಮಪುರಿಗೆ ಕಳುಹಿಸುತ್ತಿದ್ದುದನ್ನು (ನಾಶ ಮಾಡುತ್ತಿದ್ದುದನ್ನು) ಕೇಳಿ ಬಲನು ಅಗ್ನಿಯನ್ನು ಮೂರ್ಛೆಗೆಡವಿ

CC-0. Jangamwadi Math Collection. Digitized by eGangotri

ತಾಳ್ದಿವಿಜ ಖೂಳ ನೀಂ ನಮುಚಿಯಂ ಕೊಂದು ನಾಂ
ಬಾಳ್ದಪೆನೆನಲ್ ಬೇಡ ನಿನ್ನೊಡಲನೀ ಕ್ಷಣಂ
ಸೀಳ್ದಿತ್ತಿದಪೆನವನ ಪಗೆಯನೆಂದಂಬಿನಂಬೋಧಿಯಂ ತುಳ್ಕುತಿರಲು
ಪೂಳ್ದುವು ದಿಶಾವನಿ ನಭೋಮಂಡಲಂಗಳ್ ಜ
ಗುಳ್ದುವಾ ತಾರಾಗ್ರಹಾಳಿಗಳ್ ಕ್ಷಣದೊಳ್ ಮ
ಗುಳ್ದನಿತುಮಂ ಕಡಿದು ಕರ್ಣಾಂತಕಂಬುದೊಟ್ಟಿಂದ್ರನಸುರಂಗೆಂದನು ೧೨

ಬಾಯ್ಗೇಡಿತನದೊಳೇನೆಂದಾದೊಡಂ ಜರೆದು
ಬಯ್ಗುವೇ ಪಟುಭಟರ್ ನೋಡು ನಿನ್ನಂ ಪಡೆದ
ತಾಯ್ಗೆ ತವ ಮರಣಮಂ ಕೇಳಿಪೆಂ ನಮುಚಿಗಳಲುವೆಯೇಕೆ ನಿನ್ನಾತನ
ಮೆಯ್ಗಳೊಂದಪ್ಪಂತು ಗೆಯ್ದಪೆನೆನುತ್ತೆ ಪದಿ
ನಯ್ಗಣೆಗಳಿಂ ಬಲನ ಕಾಯಮಂ ಸೀಳಿ ನಿಡು
ಸುಯ್ಗಳಿಂ ಪೊಗೆ ನೆಗೆಯಲೊಂದಂಬಿನಿಂದಿಂದ್ರನಿಟಿಲಮಂ ಬಲನೆಚ್ಚನು ೧೩

ಕಣ್ಮುಚ್ಚಿ ಮೆಯ್ಮರೆದನರೆಘಳಿಗೆ ಬಳಿಕೆಚ್ಚ
ರುಣ್ಮಿದುದು ಸುರಪಂಗೆ ರೋಷಾಗ್ನಿ ಪುಟನೆಗೆದು
ಪೊಣ್ಮಿದುದು ಭಳಿರೆ ಭಾಪುರೆ ಬಲಾಸುರ ನೀನೆ ಜಗದ ಬಿಲ್ಲಾಳ್ಗಳೊಳಗೆ
ಜಾಣ್ಮೆಯುಳ್ಳವನಪ್ಪೆಯಾದೊಡೀ ಸರಳ ಸವಿ
ಗಾಣ್ಮಗುಳ್ದೆನುತೆ ಕವಲಂಬಿನಿಂದೆಚ್ಚೊಡಾ
ಗೋಣ್ಮೊದಲ್ ಕತ್ತರಿಸಿ ತಲೆಮುಂಡಮುರುಳ್ದುವು ಬಲಂ ಮಡಿದನಾಕ್ಷಣದೊಳು ೧೪

ದೇವೇಂದ್ರನ ಎದುರಿಗೆ ನಿಂತು ಬಾಣಗಳನ್ನು ಬಿಡುತ್ತ ಈ ರೀತಿ ಹೇಳಿದನು. ೧೨. ತಾಳಯ್ಯ, ಮೂರ್ಖನಾದ ದೇವತೆಯೆ! ನೀನು ನಮುಚಿಯನ್ನು ಕೊಂದು ಬದುಕುತ್ತೇನೆ ಎಂದುಕೊಳ್ಳಬೇಡ. ನಿನ್ನ ಶರೀರವನ್ನು ಈ ಕ್ಷಣದಲ್ಲಿ ಸೀಳಿಹಾಕಿ ಅವನ ಹಗೆ ತೀರಿಸುತ್ತೇನೆ ಎಂದು ಬಾಣಸಾಗರವನ್ನು ಚೆಲ್ಲುತ್ತಿರಲು ದಿಕ್ಕುಗಳು, ಭೂಮಿ-ಆಕಾಶ ಮಂಡಲಗಳು ಹೂಳಿಹೋದುವು, ನಕ್ಷತ್ರ-ಗ್ರಹಗಳ ಸಮೂಹ ಜಾರಿದುವು. ಕ್ಷಣದಲ್ಲಿ ಮತ್ತೆ ಅಷ್ಟನ್ನೂ ಕಡಿದು ಇಂದ್ರನು ಕಿವಿಯವರೆಗೆ ಬಾಣತೊಟ್ಟು ರಾಕ್ಷಸನಿಗೆ ಹೇಳಿದನು. ೧೩. ಶೂರರಾದ ಭಟರು ಬಾಯ್ಗೇಡಿತನದಿಂದ ಏನಾದರೂ ಹೀಯಾಳಿಸಿ ಬಯ್ಯುತ್ತಾರೆಯೆ ? ನೋಡು, ನಿನ್ನನ್ನು ಹೆತ್ತ ತಾಯಿಗೆ ನಿನ್ನ ಮರಣವಾರ್ತೆಯನ್ನು ಕೇಳಿಸುತ್ತೇನೆ. ನಮುಚಿಗಾಗಿ ಏಕೆ ಅಳುತ್ತೀಯೆ? ನಿನ್ನ-ಆತನ ಮೈಗಳು ಒಂದಾಗುವಂತೆ ಮಾಡುತ್ತೇನೆ ಎನ್ನುತ್ತ ಹದಿನೈದು ಬಾಣಗಳಿಂದ ಬಲನ ಶರೀರವನ್ನು ಸೀಳಿ ನಿಟ್ಟುಸಿರಿನಿಂದ ಹೊಗೆ ಹೊರಡಲು ಬಲನು ಒಂದು ಬಾಣದಿಂದ ಇಂದ್ರನ ಹಣೆಗೆ ಹೊಡೆದನು. ೧೪. ಇಂದ್ರನು ಕಣ್ಮುಚ್ಚಿ ಅರ್ಧಗಳಿಘೆ ಮೈಮರೆತನು. ಅನಂತರ ಅವನಿಗೆ ಎಚ್ಚರವಾಯಿತು. ರೋಷಾಗ್ನಿ ಪುಟನೆಗೆದು ಹೊಮ್ಮಿತು. ಭಲರೆ, ಭಲೆ, ಬಲಾಸುರ, ನೀನೇ ಜಗತ್ತಿನ ಬಿಲ್ಗಾರರೊಳಗೆ ಜಾಣ್ಮೆಯುಳ್ಳವನು. ಆದರೂ ಈ ಬಾಣದ ರುಚಿಯನ್ನು ನೋಡು ಎನ್ನುತ್ತ ಅರ್ಧಚಂದ್ರಾಕೃತಿಯುಳ್ಳ ಬಾಣದಿಂದ ಹೊಡೆಯಲು, ಕುತ್ತಿಗೆ ಮೊದಲು ಕತ್ತ

CC-0. Jangamwadi Math Collection. Digitized by eGangotri

ಭುಲ್ಲವಿಸಿತಮರಬಲವೊಡನೆ ದೆಸೆದೆಸೆಗಳ್ಗ
ಚೆಲ್ಲಿದುದು ಖಳರ ಬಲನೀ ವಾರ್ತೆಯುಂ ಕೇಳಿ
ನಿಲ್ಲದೀಶಾನಯಮನರ ಮೂರ್ಛೆವಡಿಸಿ ಗುಡುಗುಡಿಸಿ ಘನರೋಷದಿಂದೆ
ಎಲ್ಲಿ ಬಲನಂ ನಮುಚಿಯುಂ ಕೊಂದನಂ ತೋರಿ
ಸಲ್ಲಿಯವನಂ ಸೀಳ್ದು ದಿಗುಬಲಿಯನೀಯಬೇ
ಕಲ್ಲದೇ ಬಾಳ್ವುದೇಕೆನುತಿಂದ್ರನಂ ವೃತ್ರಜಂಭರಾರ್ದೆಚ್ಚರಂದು ೧೫

ಪರ್ಬಿದುವು ದೆಸೆದೆಸೆಗಳಂ ಖಳರ ಬಾಣತತಿ
ಯಾರ್ಬಣ್ಣಿಸುವರವರ ಪೆರ್ಮೆಯುಂ ನೋಡಿ ಬಳಿ
ಕಿರ್ಬರೆಡಬಲದೊಳೊಂದೇ ಬಾರಿ ತೆಗೆತೆಗೆದೆಸುತ್ತಿರಲ್ ಸುರಪನಂದು
ಒರ್ಬೊರ್ಬರೆಸುಗೆಯುಂ ಕತ್ತರಿಸುತುಂ ಮರ
ಳ್ದಿರ್ಬಲದ ಸುಭಟರೀಕ್ಷಿಸೆ ಬಳೆದುವತ್ತಿತ್ತ
ಪೆರ್ಬೆಟ್ಟದಂತೆ ಕಡಿದಂಬುಗಳ ರಾಸಿಗಳ್ ಪೇಳಲೇನದ್ಭುತವನು ೧೬

ಒಮ್ಮೊಮ್ಮೆ ರಕ್ಕಸರ್ ಮೆಯ್ಮರೆದು ಹಾಯೆಂದು
ಹಮ್ಮೈಪುದವರ ಪರಿವಾರಮಾ ಕ್ಷಣದೊಳಿಂ
ದ್ರಮೂರ್ಛೆಗೆಯ್ಕೆ ಕಣ್ಗೆಡುವುದೀ ಬಲವಿಂತು ಬಲ್ಪಿನಿಂ ಕಾದುತಿರಲು
ತಮ್ಮೊಳಂ ಖಳರೊಬ್ಬರೊಬ್ಬರಂ ಮೂದಲಿಸು
ತುಮ್ಮಗುಳೆ ದಿವ್ಯಾಸ್ತ್ರಮೆರಡರಿಂದೆಸೆಯಲಿಂ
ದ್ರಮ್ಮಹಿಗುರುಳ್ದನಾ ಸೇನೆಯುಂ ಜಂಭವೃತ್ರರ್ ಕೊಲುತಿರ್ದರಂದು ೧೭

ರಿಸಿ, ತಲೆ, ಶರೀರಗಳು ಉರುಳಿದುವು, ಆ ಕ್ಷಣದಲ್ಲಿ ಬಲನು ಸತ್ತನು. ೧೫. ದೇವತೆಗಳ ಸೈನ್ಯ ಸಂತೋಷದಿಂದ ಉಬ್ಬಿತು. ದಿಕ್ಕು-ದಿಕ್ಕುಗಳಿಗೆ ಈ ವಿಷಯವನ್ನು ರಾಕ್ಷಸಸೈನ್ಯ ಹರಡಿತು. ಇದನ್ನು ಕೇಳಿ ನಿಲ್ಲದೆ ಈಶಾನ-ಯಮರನ್ನು ಮೂರ್ಛೆಗೆಡವಿ ಗುಡುಗುಡಿಸಿ ಅತಿಯಾದ ಕೋಪದಿಂದ ಬಲನನ್ನೂ-ನಮುಚಿಯನ್ನೂ ಕೊಂದವನು ಎಲ್ಲಿ, ತೋರಿಸು, ಅಲ್ಲಿಯೇ ಅವನನ್ನು ಸೀಳಿ ದಿಗ್ಬಲಿಯನ್ನು ಕೊಡಬೇಕು. ಅಲ್ಲದಿದ್ದರೆ ಬದುಕುವುದೇಕೆ ? ಎನ್ನುತ್ತ ವೃತ್ರ-ಜಂಭರು ಗರ್ಜಿಸಿ ಇಂದ್ರನನ್ನು ಬಾಣದಿಂದ ಹೊಡೆದರು. ೧೬. ರಾಕ್ಷಸರ ಬಾಣಸಮೂಹ ದಿಕ್ಕು ದಿಕ್ಕುಗಳಲ್ಲೂ ಹರಡಿದುವು. ಅದನ್ನು ಯಾರು ಬಣ್ಣಿಸುವವರು ? ಅವರ ಅತಿಶಯತೆಯನ್ನು ದೇವೇಂದ್ರನು ನೋಡಿ, ಎಡ-ಬಲಗಳಲ್ಲಿ ಇಬ್ಬರೂ ಒಂದೇ ಬಾರಿ ಬಾಣಪ್ರಯೋಗಿಸುತ್ತಿರಲು ಅದನ್ನು ಕತ್ತರಿಸಲು ಎರಡೂ ಕಡೆಯ ಸೈನಿಕರೂ ನೋಡುತ್ತಿರುವಂತೆಯೇ ಕಡಿದುಹೋದ ಬಾಣಗಳ ರಾಶಿಗಳು ದೊಡ್ಡ ಬೆಟ್ಟಗಳಂತೆ ಅತ್ತ-ಇತ್ತ ಬೆಳೆದುವು, ಅದ್ಭುತವನ್ನು ಏನು ಹೇಳಲಿ ? ೧೭. ಒಮ್ಮೊಮ್ಮೆ ರಾಕ್ಷಸರು ಹಾಯೆಂದು ಮೂರ್ಛೆ ಹೊಂದಲು ಅವರ ಪರಿವಾರ ಹಾಯೆಂದು ಮೂರ್ಛೆಗೊಳ್ಳುವುದು. ಕ್ಷಣದಲ್ಲಿ ಇಂದ್ರ ಮೂರ್ಛೆಗೊಳ್ಳಲು ಈ ಸೈನ್ಯ ಕಂಗೆಡುವುದು. ಈ ರೀತಿ ಪರಾಕ್ರಮದಿಂದ ಯುದ್ಧ ಮಾಡುತ್ತಿರಲು ರಾಕ್ಷಸರು ತಮ್ಮಲ್ಲಿಯೇ ಒಬ್ಬರನ್ನೊಬ್ಬರು ಮೂದಲಿಸುತ್ತ ಕೂಡಲೇ ಎರಡು ದಿವ್ಯಾಸ್ತ್ರದಿಂದ ಹೊಡೆಯಲು ಇಂದ್ರನು

CC-0. Jangamwadi Math Collection. Digitized by eGangotri

ದಿವ್ಯಮಂತ್ರೌಷಧಂಗಳ ಶಿವಸ್ಮರಣೆಗಳ
ಸೇವ್ಯದೊಳ್ ಮೂರ್ಛೆತಿಳಿದೆಳ್ದಿಂದ್ರನಾ ಪ್ರಳಯ
ಹವ್ಯವಾಹನನಪರರೂಪಾಗಿ ರಥಮನಡರ್ದುಗ್ರಬಾಣಂಗಳೆರಡಂ
ಸವ್ಯಾಪಸವ್ಯದೊಳ್ ತೊಟ್ಟೆಸೆಯೆ ಭುಗಿಲೆಂಬ
ನವ್ಯಸ್ಫುಲಿಂಗಸಂತಾನಧೂಮುಂಗಳಿಂ
ಭೂವ್ಯೋಮವಿಡಿಯೆ ಬರುತಿರ್ದುವಾ ಬಾಣಂಗಳತಿಭರದೊಳೇನೆಂಬೆನು ೧೮

ಬಿತ್ತರಿಸಲಳವೆ ದನುಜರ ಸಾಹಸಂ ಮುಂದ
ಕೊತ್ತರಿಸಿ ಬರ್ಪ ಬಾಣಂಗಳೆರಡಂ ನಡುವೆ
ಕತ್ತರಿಸಲಿಳೆಗುರುಳ್ದುವು ಹಿಂದಣರ್ಧಂಗಳಗ್ರದ ಶರಂಗಳೊವಗಿ
ಕತ್ತರಿಸಿ ಕಡುವೇಗದಿಂದಾ ಮಹಾಮದೋ
ನ್ಮತ್ತಖಳವೃತ್ತಜಂಭರ ತಲೆಗಳಂ ಕಚ್ಚಿ
ಪೊತ್ತುರೆ ಸಮುದ್ರಕಾಗಸಕೆತ್ತಿ ಬಿಸುಟುವೆಲೆ ರಾಮ ಕೇಳಚ್ಚರಿಯನು ೧೯

ಬೀಳ್ದುವವರಟ್ಟೆಗಳ್ ಶೈಲಂಗಳುರುಳ್ವಂತೆ
ತಾಳ್ದುದು ಭಯಮನಹಿತಸೇನೆ ಬಾಣಂಗಳಿಂ
ಪೋಳ್ದುಸೆಣಸುವ ಭಟರನುಳಿದ ದಿಕ್ಪಾಲಕರ್ ಸಂಹರಿಸಿ ವಿಕ್ರಮದೊಳು
ಕೇಳ್ದು ಸುರಪನ ವಿಜಯವಾರ್ತೆಯುಂ ಸಂತಸದೊ
ಳಾಳ್ದು ಕೊಲತೊಡಗಿದರ್ ದೈತ್ಯರಂ ಕೇಳುತೆ ಕೆ
ರಳ್ದು ಕೇಸರಿಯಂತೆ ಖತಿಗೊಂಡು ಶತವಗಾಯನಾಹವಕ್ಕನುವಾದನು ೨೦

ನೆಲಕ್ಕೆ ಉರುಳಿದನು. ಆ ಸೇನೆಯನ್ನು ಜಂಭ-ವೃತ್ತರು ಕೊಲ್ಲುತ್ತಿದ್ದರು. ೧೮. ದಿವ್ಯವಾದ ಮಂತ್ರ-ಔಷಧಗಳ, ಶಿವಸ್ಮರಣೆಯ ಸೇವನೆಯಿಂದ ಇಂದ್ರನು ಮೂರ್ಛೆಯಿಂದ ಎಚ್ಚೆತ್ತು, ಪ್ರಳಯಾಗ್ನಿಯ ಅಪರಾವತಾರನಾಗಿ ರಥವನ್ನು ಏರಿ ಎರಡು ಉಗ್ರವಾದ ಬಾಣಗಳನ್ನು ಎಡಬಲಗಳಲ್ಲಿ ತೊಟ್ಟು ಪ್ರಯೋಗಿಸಲು ಭುಗಿಲ್ ಎನ್ನುವ ಹೊಸದಾದ ಬೆಂಕಿಯ ಉರುಳಿಗಳ ಸಮೂಹ, ಹೊಗೆಗಳಿಂದ ಭೂಮಿ-ಆಕಾಶ ತುಂಬಲು ಆ ಬಾಣಗಳು ಅತಿವೇಗವಾಗಿ ಬರುತ್ತಿದ್ದುವು, ಏನು ಹೇಳಲಿ ? ೧೯. ರಾಕ್ಷಸರ ಪರಾಕ್ರಮವನ್ನು ವಿವರಿಸುವ ಸಾಮರ್ಥ್ಯವುಂಟೆ ? ಮುಂದಕ್ಕೆ ನುಗ್ಗಿಬರುತ್ತಿರುವ ಎರಡು ಬಾಣಗಳನ್ನೂ ಮಧ್ಯದಲ್ಲಿಯೇ ಕತ್ತರಿಸಲು ಅವು ಭೂಮಿಗೆ ಬಿದ್ದುವು. ಬಾಣದ ಹಿಂದಿನ ಅರ್ಧಭಾಗಕ್ಕೆ ಮತ್ತೆ ಮುಂದಿನ ಭಾಗ ಸೇರಿಕೊಂಡು ಮದೋನ್ಮತ್ತ ರಾಕ್ಷಸರಾದ ವೃತ್ತ-ಜಂಭರ ತಲೆಗಳನ್ನು ಕತ್ತರಿಸಿ ಕಚ್ಚಿ ಹೊತ್ತುಕೊಂಡುಹೋಗಿ ಸಮುದ್ರಕ್ಕೆ-ಆಕಾಶಕ್ಕೆ ಬಿಸಾಡಿದುವು. ಎಲೆ ಸಿದ್ಧರಾಮ, ಆಶ್ಚರ್ಯವನ್ನು ಕೇಳು. ೨೦. ಪರ್ವತಗಳು ಉರುಳುವಂತೆ ಅವರ ಶರೀರಗಳು ಬಿದ್ದುವು, ಶತ್ರುಸೈನ್ಯ ಭಯಗೊಂಡಿತು, ಯುದ್ಧ ಮಾಡುತ್ತಿದ್ದ ಸೈನಿಕರನ್ನು ಉಳಿದ ದಿಕ್ಪಾಲಕರು ಬಾಣಗಳಿಂದ ಸೀಳಿ ಪರಾಕ್ರಮದಿಂದ ಸಂಹರಿಸಿದರು. ದೇವೇಂದ್ರನ ವಿಜಯದ ಸುದ್ದಿಯನ್ನು ಕೇಳಿ ಸೈನಿಕರು ಸಂತೋಷದಲ್ಲಿ ಮುಳುಗಿ ರಾಕ್ಷಸರನ್ನು ಕೊಲ್ಲತೊಡಗಿದರು. ಇದನ್ನು ಕೇಳುತ್ತಾ ಕೆರಳಿದ ಸಿಂಹ

CC-0. Jangamwadi Math Collection. Digitized by eGangotri

ಸೂಳೈಸಿದುವು ವಾದ್ಯನಿಖಿಳಮಾ ಖಳನೊಡನೆ
ಮೇಳೈಸುತಸುರತತಿ ಕರದ ಬಿಲ್ವೆದೆಯಂ ಚ
ಡಾಳೈಸುತಾಗ ಶತಮಾಯನಿಂದ್ರನ ಸರಿಸದೊಳ್ ನಿಂದು ನಿನ್ನ ಕೊಂದು
ಪಾಳೈಸುವೆಂ ನಾಕಲೋಕವಂ ಶೋಕವುಮು
ನೋಲೈಸಿಸುವೆನೆಲವೊ ನಿನ್ನಬಲೆಯರ್ಗೆ ಪಿಡಿ
ಯೋಳೈಸುವೆಂ ನೆರೆದ ನಿನ್ನ ತೆತ್ತಿಗರನೆನುತಾ ಖಳಂ ಕೋಲ್ಗರೆದನು ೨೧

ನೂರಂಬಿನಿಂದಿಂದ್ರನಂ ಶಿಖಿಯನಂಬು ಹದಿ
ನಾರರಿಂ ಯಮನನೈದಿಷುಗಳಿಂ ನಿರುತಿಯಂ
ಮೂರಂಬಿನಿಂ ವರುಣ ಮರುತ ಧನದೀಶಾನ ವಸು ಮನುಗಳೆಂಬನಿಬರ
ಆರಾರ್ ಶರಗಳಿಂದೆಚ್ಚವರ ತನುಗಳಿಂ
ಡೋರೆನಿಸಿಯಶ್ವ ಸಾರಥಿ ತೇರ್ಗಳಂ ತಿರುವ
ನೇರಿಸಿದ ಬಿಲ್ಗಳಂ ಕಡಿಕಡಿದು ಮತ್ತೆಮತ್ತೆಸುತಿರ್ದನೇವೇಳ್ವೆನು ೨೨

ಅತ್ಯುಗ್ರಖಳನ ರೂಪಂ ಕಂಡು ಸುರಬಲದ
ಪ್ರತ್ಯೇಕರೆಲ್ಲರುಂ ಮೂರ್ಛೆವಡೆದರ್ ದುಷ್ಟ
ದಿತ್ಯಾತ್ಮಜರ ಬಾಣವೃಷ್ಟಿಯಿಂ ನನೆಯದವರಿಲ್ಲವಾ ನಿರ್ಜರರೊಳು
ಮೃತ್ಯು ಪೊಕ್ಕಂತಾಯ್ತು ಪೇಳಲೇನಾ ಖಳಾ
ಘಾತ್ಯಮಂ ಮಿಗೆ ಯಕ್ಷ ಸಿದ್ಧ ವಿದ್ಯಾಧರಾ
ದಿತ್ಯ ವಸು ಮನುಕುಲಂ ಕಂಗೆಟ್ಟು ಬೆಂಗೊಟ್ಟು ಭಯದೊಳೋಡುತ್ತಿರ್ದರು ೨೩

ದಂತೆ ಕೋಪಗೊಂಡು ಶತಮಾಯನು ಯುದ್ಧರಂಗವನ್ನು ಪ್ರವೇಶಿಸಿದನು. ೨೧. ಆಗ ವಾದ್ಯಸಮೂಹಗಳು ಗಟ್ಟಿಯಾಗಿ ಧ್ವನಿ ಮಾಡಿದುವು. ರಾಕ್ಷಸನೊಡನೆ ಅಸುರಸೈನ್ಯ ಕೂಡಿಕೊಂಡು ಕೈಯಲ್ಲಿದ್ದ ಬಿಲ್ಲಿನ ಹೆದೆಯನ್ನು ಜೋಡಿಸುತ್ತ, ಆಗ ಶತಮಾಯನು ಇಂದ್ರನ ಎದುರಿನಲ್ಲಿ ನಿಂತು, ನಿನ್ನನ್ನು ಕೊಂದು ಸ್ವರ್ಗಲೋಕವನ್ನು ಪಾಳುಗೆಡವುತ್ತೇನೆ. ನಿನ್ನ ಹೆಂಡತಿಯರಿಗೆ ಶೋಕವನ್ನು ಉಂಟುಮಾಡುತ್ತೇನೆ. ನಿನ್ನ ಸೇವಕರನ್ನು ಹಿಡಿಸಿ ನಮ್ಮ ಆಳುಗಳನ್ನಾಗಿ ಮಾಡಿಕೊಳ್ಳುತ್ತೇನೆ ಎನ್ನುತ್ತಾ ಬಾಣಗಳನ್ನು ಬಿಟ್ಟನು. ೨೨. ನೂರು ಬಾಣಗಳಿಂದ ಇಂದ್ರನನ್ನು, ಹದಿನಾರು ಬಾಣಗಳಿಂದ ಅಗ್ನಿಯನ್ನು, ಐದು ಬಾಣಗಳಿಂದ ಯಮನನ್ನು, ಮೂರು ಬಾಣಗಳಿಂದ ನಿರುತಿಯನ್ನು, ವರುಣ–ವಾಯು, ಕುಬೇರ–ಈಶಾನ, ವಸು-ಮನುಗಳೆನ್ನುವವರನ್ನು ಆರಾರು ಬಾಣಗಳಿಂದ ಹೊಡೆದು ಅವರ ಶರೀರವನ್ನು ದೊಗರು ಮಾಡಿ, ಕುದುರೆ–ಸಾರಥಿ–ರಥಗಳನ್ನು, ಹೆದೆಯೇರಿಸಿದ ಬಿಲ್ಲುಗಳನ್ನೂ ತುಂಡು ತುಂಡರಿಸಿ ಮತ್ತೆ ಮತ್ತೆ ಬಾಣ ಬಿಡುತ್ತಿದ್ದನು. ಅದನ್ನು ಏನು ಹೇಳಲಿ ? ೨೩. ಅತ್ಯುಗ್ರವಾದ ರಾಕ್ಷಸನ ರೂಪವನ್ನು ನೋಡಿ ದೇವಸೈನ್ಯದ ಉಳಿದೆಲ್ಲರೂ ಮೂರ್ಛೆಹೋದರು. ದೇವತೆಗಳ ಸೈನ್ಯದಲ್ಲಿ ದುಷ್ಟ ರಾಕ್ಷಸರ ಬಾಣಗಳ ಮಳೆಯಿಂದ ತೊಯಿದುಹೋಗದವರಿಲ್ಲ. (ಆ ದೇವತೆಗಳ ಸಮೂಹಕ್ಕೆ) ಮೃತ್ಯು ಹೊಕ್ಕಂತಾಯಿತು, ಆ ರಾಕ್ಷಸನ ಹೊಡೆತವನ್ನು ಏನು ಹೇಳಲಿ ? ಯಕ್ಷ, ಸಿದ್ಧ, ವಿದ್ಯಾಧರ,

CC-0. Jangamwadi Math Collection. Digitized by eGangotri

ಸೋರ್ವ ನೆತ್ತರ ಸುರಿವ ಕರುಳ ನಡುಪಂಗದ ಬೆ
ಮರ್ವನಿಯ ಪರಿದೆಳೆವ ಪ್ಯೆಜೋಡ ಮೊಗದೊಳ್ ಮು
ಸುರ್ವ ಬಿಡುಗುರುಳ ಬೆನ್ನೊಳ್ ನಟ್ಟ ಸರಳ ತಬ್ಬಿಬ್ಬೆಸೆವ ನಡೆನುಡಿಗಳ
ಬೇರ್ವರಿದ ಭಯದ ಪಿನ್ನೋಟದೊಣವಾಯ ಕಡು
ಪಾರ್ವೆದೆಯ ಪೊಯ್ವಳ್ಳೆಗಳ ಪೊತ್ತ ನಾಣ್ಚಿಕೆಯ
ಸರ್ವದಿಕ್ಪಾಲರೋಟಂಗಾಣುತಜನಾಗ್ರಹಂದಾಳ್ದನಾ ಕ್ಷಣದೊಳು ೨೪

ಸಂತೈಸಿದಂ ಕೆಟ್ಟು ಮುರಿದೋಡಿ ಬರ್ಪಮರ
ಸಂತತಿಗಳಂ ಸರ್ವಸನ್ನಾಹದಿಂದಾತ್ಮ
ಸಂತಾನಮಗಣಿತಮೆಡಂ ಬಲಂ ಬರೆ ಮಹಾಕೋಪದಿಂ ರಥಮನಡರ್ದು
ಪಿಂತಖಿಳಲೋಕಮಂ ಪೆತ್ತಮಂ ಕೊಲೆಗೆಣಿಸ
ಲಂತಖಿಳಮಾಗದಿಹುದೇನೆನಲ್ ಬ್ರಹ್ಮನಾಂ
ತಾಂತ ಖಳರಂ ಕೊಂದುಕೊಳುತೆ ಶತಮಾಯನಂ ತಾಗಲವನಿಂತೆಂದನು ೨೫

ಪಡಪಡೆಲವೆಲವೊ ತೊಲತೊಲಗು ಲೋಕಂಗಳಂ
ಪಡೆದೆನೆಂಬಗ್ಗಳಿಕೆ ನಮ್ಮೊಡನೆ ಸಲ್ಲದಾ
ಪಡಪನುಳಿದೆಚ್ಚರಿಕೆಯಿಂ ಕಾದೆನುತ್ತೆಚ್ಚ ಖಳನ ಶರಜಾಲಂಗಳ
ತಡೆಗಡಿದು ಶತಮಾಯನೆಂಬಹಂಕಾರದಿಂ
ತಡೆದೆನೀನೆಮ್ಮ ನೀಂ ಪೆಸರಳಿವುದಿನ್ನಿನಗೆ
ತಡವಿಲ್ಲವೆಂದು ಪೊಸಮಸೆಯ ವಿಶಿಖಂಗಳಂ ಪದ್ಮಾಸನಂ ಕರೆದನು ೨೬

ಸೂರ್ಯ, ವಸು, ಮನುಷ್ಯವರ್ಗ ಎಲ್ಲವೂ ಕಂಗೆಟ್ಟು ಬೆನ್ನುಕೊಟ್ಟು ಭಯದಿಂದ ಓಡುತ್ತಿದ್ದರು. ೨೪. ಸೋರುವ ರಕ್ತದ, ಜೋತಾಡುವ ಕರುಳ, ನಡುಗುವ ಶರೀರದ, ಬೆವರಹನಿಯ, ಹರಿದು ಎಳೆದಾಡುವ ಮೈಚರ್ಮದ, ಮುಖದಲ್ಲಿ ಮುತ್ತುವ ಕೆದರಿದ ಕೂದಲ, ಬೆನ್ನಲ್ಲಿ ನಾಟಿದ ಬಾಣದ, ತಬ್ಬಿಬ್ಬಾಗುವ ನಡಿಗೆ-ಮಾತುಗಳ,' ಬೇರು ಬಿಟ್ಟ ಭಯದ, ಹಿಂದೋಡುವ, ಒಣಗಿದ ಬಾಯಿಯ, ಅತಿಯಾಗಿ ಬಡಿದುಕೊಳ್ಳುವ ಎದೆಯ, ಏದುಸಿರು ಬಿಡುವ ಪಕ್ಕೆಗಳ, ನಾಚಿಕೆ ಹೊತ್ತ ಎಲ್ಲ ದಿಕ್ಪಾಲಕರ ಓಟವನ್ನು ನೋಡಿ ಬ್ರಹ್ಮನು ಬಲು ಕೋಪಗೊಂಡನು. ೨೫. ದಿಕ್ಕೆಟ್ಟು ಹಿಂದಕ್ಕೋಡಿಬರುತ್ತಿರುವ ದೇವಸಮೂಹವನ್ನು ಸಂತಯಿಸಿದನು. ಸಕಲ ಸಿದ್ಧತೆಯಿಂದ ಅಗಣಿತವಾದ ಅವನ ಸಂತಾನ ಎಡಬಲಗಳಲ್ಲಿ ಬರಲು ಅತಿಯಾದ ಕೋಪದಿಂದ ರಥವನ್ನು ಏರಿ ಹಿಂದೆ ಎಲ್ಲ ಲೋಕಗಳನ್ನು ಸೃಷ್ಟಿ ಮಾಡಿದವನು ತಾನೇ ಎಲ್ಲವನ್ನೂ ನಾಶ ಮಾಡಲು ಆಶಿಸಿದರೆ ಇನ್ನಾವುದು ತಾನೆ ಆಗುವುದಿಲ್ಲ ಎನ್ನುವಂತೆ ಬ್ರಹ್ಮನು ಎದುರಾದ ರಾಕ್ಷಸರನ್ನು ಕೊಂದು ಹಾಕುತ್ತಾ ಶತಮಾಯನನ್ನು ಎದುರಿಸಲು ಅವನು ಹೀಗೆಂದನು. ೨೬. ಫಡ ಫಡ, ಎಲವೋ ತೊಲಗು ತೊಲಗು, ಲೋಕಗಳನ್ನು ಸೃಷ್ಟಿಸಿದೆನೆಂಬ ಗರ್ವ ನಮ್ಮಲ್ಲಿ ನಡೆಯದು. ಆ ಹೆಚ್ಚಳಿಕೆಯನ್ನು ಬಿಟ್ಟು ಎಚ್ಚರಿಕೆಯಿಂದ ಯುದ್ಧ ಮಾಡು ಎನ್ನುತ್ತ ಬಿಟ್ಟ ರಾಕ್ಷಸನ ಬಾಣಗಳ ಸಮೂಹವನ್ನು ತಡೆದು ಕತ್ತರಿಸಿ, ಶತಮಾಯನೆಂಬ ಅಹಂಕಾರದಿಂದ

CC-0. Jangamwadi Math Collection. Digitized by eGangotri

ಆ ಚತುರ್ಮುಖನೆಚ್ಚ ಬಾಣಂಗಳಂ ಕಡಿದು
ಭೂಚಕ್ರಮೆತ್ತ ನಭಮೆತ್ತ ದೆಸೆಯೆತ್ತ ತಾ
ರಾ ಚಂದ್ರಮಸ್ಸೂರ್ಯಮಂಡಲಂಗಳ ಗತಿಯದೆತ್ತ ನಾನಾ ಭಾವದ
ಈ ಚರಾಚರಮೆತ್ತಲೆಂಬುದೇಂ ಬ್ರಹ್ಮಂಗ
ಗೋಚರಮದಾಗಲಾ ಶತಮಾಯಕರತಳದ
ಹಾಚಾಪನಿರ್ಮುಕ್ತಬಾಣಾಬ್ಧಿ ಬ್ರಹ್ಮನಂ ಮುಸುಕಿತೇಂ ವರ್ಣಿಸುವೆನು ೨೭

ಮುಚ್ಚಿದ ಶರಂಗಳಂ ಕೊಚ್ಚಿ ಕೆಯ್ಯೊಡನೆ ಬ
ಲ್ಕೆಚ್ಚಿರ್ದೆಯ ಖಳನ ರಥದಚ್ಚು ನೊಗಗಾಲಿಯಂ
ನುಚ್ಚುಗಡಿದವನೆರ್ದೆಯನುಚ್ಚಳಿಸಲಂಬು ಕಣ್ಮುಚ್ಚಿ ಮೆಯ್ಮರೆದು ಖಳನು
ಜೆಚ್ಚರದೊಳೇಳ್ದು ಖತಿ ಪೆಚ್ಚಿ ದಿವ್ಯಾಸ್ತ್ರದಿಂ
ದೆಚ್ಚೊಡಾ ಬಾಣಮಂ ಕೊಚ್ಚಲಿವನಂ ಗೆಲ್ವ
ದಚ್ಚರಿಯೆ ತನಗೆನುತೆ ಮಚ್ಚರದೆ ಮಾಯೆಯಂ ಬಿಚ್ಚಿದಂ ಶತಮಾಯನು ೨೮

ಪೆಸರದೇಂ ಶತಮಾಯನವನ ಘನಮಾಯೆ ಬ
ಣ್ಣಿಸಲಳವೆ ಕೇಳ್ ಸಿದ್ಧರಾಮ ತತ್ಕ್ಷಣದೊಳಗೆ
ಮಸಿವಣ್ಣಮಾಯ್ತು ಬ್ರಹ್ಮಾಂಡಮಿನಶಶಿಕಿರಣಮಡಗಿದುವು ತಮಮೆತ್ತಲು
ಪಸರಿಸಿದುದಾ ಬ್ರಹ್ಮನೆಸುವ ಪ್ರತ್ಯಸ್ತ್ರದೊಂ
ದೆಸಕಮಂ ಮೀರಿ ಮೆಯ್ವೆಚ್ಚಿದುದು ಸಲೆ ಪೆಚ್ಚಿ
ಬಸವಳಿದರೆಲ್ಲರುಂ ಕಂಗೆಟ್ಟು ಬಾಯ್ಬಿಟ್ಟು ಮರವಟ್ಟರೇವೇಳ್ವೆನು ೨೯

ನೀನು ನಮ್ಮನ್ನು ತಡೆದೆ, ನಿನ್ನ ಈ ಹೆಸರು ಅಳಿಸಿಹೋಗುವುದು ದೂರದಲ್ಲಿಲ್ಲ ಎಂದು ಹೇಳುತ್ತ ಬ್ರಹ್ಮನು ಹೊಸದಾಗಿ ಮಸೆದ ಬಾಣಗಳನ್ನು ಬಿಟ್ಟನು. ೨೭. ಆ ಬ್ರಹ್ಮನು ಬಿಟ್ಟ ಬಾಣಗಳನ್ನು ಕಡಿದು ಭೂಮಿಯೆಲ್ಲಿ ? ಆಕಾಶವೆಲ್ಲಿ ? ದಿಕ್ಕು ಯಾವುದು ? ನಕ್ಷತ್ರ-ಚಂದ್ರ-ಸೂರ್ಯಮಂಡಲಗಳ ದಿಕ್ಕಾವುದು ? ನಾನಾ ರೀತಿಯ ಚರಾಚರವೆತ್ತ ಕಡೆ ಎನ್ನುವುದೇ ಬ್ರಹ್ಮನಿಗೆ ಅಗೋಚರವಾಗುವಂತೆ ಆ ಶತಮಾಯನ ಕೈಯ ಮಹಾ ಧನುಸ್ಸಿನಿಂದ ಹೊರಟ ಬಾಣಗಳ ಸಮುದ್ರ ಬ್ರಹ್ಮನನ್ನು ಮುಸುಕಿತು. ೨೮. ಮುಸು ಕಿದ ಬಾಣಗಳನ್ನು ಕೊಚ್ಚಿಹಾಕಿ ಕೂಡಲೇ ಬಹಳ ಧೈರ್ಯಶಾಲಿಯಾದ ರಾಕ್ಷಸನ ರಥದ ಅಚ್ಚು, ನೊಗ-ಗಾಲಿಯನ್ನು ನುಚ್ಚು-ನೂರು ಮಾಡಿ, ಅವನ ಎದೆಯನ್ನು ಬ್ರಹ್ಮನು ಬಿಟ್ಟ ಬಾಣವು ಭೇದಿಸಲು ಆ ರಾಕ್ಷಸನು ಕಣ್ಮುಚ್ಚಿ ಮೈಮರೆತನು. ತಕ್ಷಣ ಎದ್ದು, ಕೋಪ ಹೆಚ್ಚಿ, ದಿವ್ಯಾಸ್ತ್ರದಿಂದ ಹೊಡೆಯಲು ಬ್ರಹ್ಮನು ಆ ಬಾಣವನ್ನೂ ಕತ್ತರಿಸಲು ಇವನನ್ನು ಗೆಲ್ಲುವುದು ನನಗೆ ಆಶ್ಚರ್ಯವೆ ? ಎನ್ನುತ್ತ ಮಾತ್ಸರ್ಯದಿಂದ ಶತ ಮಾಯನು ಮಾಯಾಜಾಲವನ್ನು ಬೀಸಿದನು, ೨೯. ಹೆಸರೇ ಶತಮಾಯ, ಅವನ ಘನ ವಾದ ಮಾಯೆಯನ್ನು ಬಣ್ಣಿಸಲು ಸಾಧ್ಯವೆ ? ಸಿದ್ಧರಾಮ, ಕೇಳು, ಆ ಕ್ಷಣದಲ್ಲಿ ಬ್ರಹ್ಮಾಂಡವೆಲ್ಲ ಮಸಿಯ ಬಣ್ಣವಾಯಿತು. ಸೂರ್ಯ-ಚಂದ್ರರ ಕಿರಣಗಳು ಅಡಗಿ ಹೋದುವು. ಆ ಬ್ರಹ್ಮನು ಪ್ರಯೋಗಿಸುವ ಪ್ರತ್ಯಾಸ್ತ್ರದ ಶಕ್ತಿಯನ್ನೂ ಮೀರಿ ಎಲ್ಲೆಲ್ಲೂ

CC-0. Jangamwadi Math Collection. Digitized by eGangotri

ಪುಲಿ ಕರಡಿ ಪಂದಿಗಳ್ ಫಣಿ ಮಹಿಷ ವೃಕ ದಂತಿ
ಬಲಸಿಂಹ ಶರಭ ಭೇರುಂಡಾದಿ ಖಿಗಮೃಗದ
ಬಳಗಂ ನೆಗಳ್ ಮೊಸಳೆ ಕರ್ಕಟಕ ತಿಮಿ ತಿಮಿಂಗಿಲವಾದಿ ಜಲಚರಾಳಿ
ಮಳೆ ಮಿಂಚು ಬರಸಿಡಿಲ್ ಬಿರುಗಾಳಿ ಧೂಳಿ ಸೆಕೆ
ಚಳಿ ಕಿಚ್ಚು ಪೊಗೆಯಸ್ತ್ರ ಶಸ್ತ್ರತತಿ ಪೇರ್ಗುಂಡು
ಪೊಳೆಭೂತ ವೇತಾಳಕುಲಮೆಲ್ಲಮೆಡೆವಿಡದೆ ಬಲಮನುರೆ ನೋಯಿಸಿದುವು ೩೦

ಎತ್ತೆತ್ತಲುಂ ಪಳ್ಳ ಕೊಳ್ಳಮುಳ್ಳವನಿತಳ
ಮೆತ್ತೆತ್ತಲುಂ ಘಟ್ಟ ಬೆಟ್ಟ ನಟ್ಟಡವಿಗಳ
ವೆತ್ತೆತ್ತಲುಂ ಪಿರಿಯ ಕಮ್ಮರಿಯ ದರಿಯ ಭೀಕರಗುಹಾಗಂಹರಚಯಂ
ಎತ್ತಲುಂ ಲಯಕಾರಿ ಮಾರಿ ಭೂರಿಪಿಶಾಚ
ರೆತ್ತಲುಂ ಬಿಸಮುಂಡ ಕೊಂಡ ಕೆಂಡದ ಮಳೆಗ
ಳೆತ್ತಲುಂ ಘೋರ ಸಂಹಾರ ಕ್ರೂರ ಮೃಗಾಳಿಯಿರ್ದುದೇಂ ವಣ್ಣಿಸುವೆನು ೩೧

ಪಿಡಿವ ನುಂಗುವ ತೂಳ್ವ ಪೂಳ್ವ ಸೀಳ್ವರಿವ ನೆರೆ
ಕಡಿವ ಕೊಚ್ಚುವ ತಿವಿವ ಕವಿವ ಕಿವಿಯೊಳಗೆ ಬೊ
ಬ್ಬಿಡುವ ಪೊಂಚುವ ಪಾಯ್ವ ಪೊಯ್ವ ಕೊಯ್ವೆಳೆವ ತುಳಿವೊಳೆವ ಮುಳಿವಾಗಸಕ್ಕೆ
ಇಡುವೆಸುವ ತರಿವಿರಿವ ಕೊರೆವ ಬಿಸಿನೆತ್ತರಂ
ಕುಡಿವ ಕಚ್ಚುವ ಪೀರ್ವ ಕಾರ್ವ ಮಿರ್ಾರ್ವರೆಗೊಲೆಯ
ಗಡಣಂಗಳಿಂ ನೋವ ಸಾವ ಬೇವನಿಬರಂ ಪದ್ಮಾಸನಂ ಕಂಡನು ೩೨

ಕತ್ತಲೆ ಆವರಿಸಿತು, ಎಲ್ಲರೂ ಆಯಾಸಗೊಂಡು, ಕೆಂಗೆಟ್ಟು, ಬಾಯ್ಬಿಟ್ಟು-ಮರವಟ್ಟರು. ಏನು ಹೇಳಲಿ? ೩೦. ಹುಲಿ, ಕರಡಿ, ಹಂದಿಗಳು, ಹಾವು, ಎಮ್ಮೆ, ತೋಳ, ಆನೆ, ಬಲ ಶಾಲಿಯಾದ ಸಿಂಹ, ಶರಭ, ಭೇರುಂಡ ಮೊದಲಾದ ಪಕ್ಷಿ-ಮೃಗಗಳ ಬಳಗ, ಮೊಸಳೆ' ಏಡಿ, ಮೀನು-ತಿಮಿಂಗಲಾದಿ ಜಲಚರಗಳ ಸಮೂಹ, ಮಳೆ-ಮಿಂಚು-ಬರಸಿಡಿಲು, ಬಿರು ಗಾಳಿ, ಧೂಳು, ಶೆಕೆ, ಚಳಿ, ಬೆಂಕಿ, ಹೊಗೆಯ ಅಸ್ತ್ರಶಸ್ತ್ರಗಳ ಸಮೂಹ, ದೊಡ್ಡಗುಂಡು, ಹೊಳೆ, ಭೂತ-ಭೇತಾಳಕುಲವೆಲ್ಲ ಎಡೆಬಿಡದೆ ಸೈನ್ಯವನ್ನು ಬಹಳ ನೋಯಿಸಿದುವು. ೩೧. ಭೂತಳದ ಎಲ್ಲೆಲ್ಲಿಯೂ ಹಳ್ಳ, ಕೊಳ್ಳ, ಮುಳ್ಳುಗಳು, ಎಲ್ಲೆಲ್ಲಿಯೂ ಘಟ್ಟಬೆಟ್ಟ, ಭೀಕರ ಅಡವಿಗಳು, ಎಲ್ಲೆಲ್ಲಿಯೂ ದೊಡ್ಡ ಕಮರಿ, ದರಿ, ಭೀಕರ ಗುಹಾಗಹ್ವರಗಳ ಸಮೂಹ, ಎಲ್ಲೆಲ್ಲಿಯೂ ನಾಶಕಾರಕವಾದ ಮಾರಿ, ದೊಡ್ಡ ಪಿಶಾಚಿಗಳು, ಎಲ್ಲೆಲ್ಲಿಯೂ ವಿಷ ಮತ್ತು ಮುಂಡಗಳ ಕೊಂಡ, ಕೆಂಡದ ಮಳೆಗಳು, ಎಲ್ಲಿ ನೋಡಿದರೂ ಘೋರವಾದ ಸಂಹಾರ ಮಾಡುವ ಕ್ರೂರವಾದ ಮೃಗಗಳ ಸಮೂಹವಿದ್ದಿತು, ಏನೆಂದು ಬಣ್ಣಿಸಲಿ? ೩೨. ಹಿಡಿ ಯುವ, ನುಂಗುವ, ಬೆನ್ನಟ್ಟುವ, ಹೂಳುವ, ಸೀಳುವ, ಕತ್ತರಿಸುವ, ಚೆನ್ನಾಗಿ ಕಡಿಯುವ, ಕೊಚ್ಚುವ, ತಿವಿಯುವ, ಮುತ್ತುವ, ಕಿವಿಯಲ್ಲಿ ಬೊಬ್ಬೆಹಾಕುವ, ಹೊಂಚುಹಾಕುವ, ಮೇಲೆ ಹಾಯುವ, ಹೊಡೆಯುವ, ಕೊಯ್ಯುವ, ಎಳೆಯುವ, ತುಳಿಯುವ, ಹೊಳೆಯುವ, ಕೋಪಗೊಳ್ಳುವ, ಆಕಾಶಕ್ಕೆ ಎಸೆಯುವ, ತರಿಯುವ, ಇರಿಯುವ, ಕೊರೆಯುವ, ಬಿಸಿರಕ್ತ

CC-0. Jangamwadi Math Collection. Digitized by eGangotri

ಬೆರಗಾಗಿ ಕಮಲಭವನಿವನ ಮಾಯೆಯನೊಂದು
ತೆರದೊಳಪಹರಿಪೆನೆಂಬನಿತರೊಳ್ ಶತಮಾಯು
ನುರುಬಿ ಕಣ್ಗಳ್ಗೆ ಕಾಣಿಸಿಕೊಳ್ಳದೆಡಬಲಂ ಪಿಂದು ಮುಂದೆಲ್ಲೆಡೆಯೊಳು
ಕರೆವನಂಬುಗಳನವನರಿಯೆ ಸಿಡಿಲಂತದಂ
ಮುರಿಯೆ ಗಿರಿಯಂತದಂ ತರಿಯೆ ಕಡಲಂತದಂ
ಸುರಿಯೆ ಮತ್ತೊಂದೊಂದು ತೆರದೊಳೆಡೆವಿಡದೆ ಬಂದೆರಗಿದಂ ವಿಕ್ರಮದೊಳು ೩೩

ಈ ಸಕಲಸೃಷ್ಟಿಕರ್ತನ ಧುರಕೆ ನಿಲ್ವರುಂ
ಟೇ ಸಮಾನಂ ಕಾದಿ ಕಾದಿ ಶತಮಾಯನುರೆ
ಬೇಸತ್ತಡರ್ದಂಬರಾಂಗಣದೊಳಿರ್ದು ಬಲ್ಗತ್ತಲೆಯನೊತ್ತಿ ಕವಿಸಿ
ಮೋಸದೊಳ್ ಬಿಲ್ಲಂಬುಗಳ ಸದ್ದು ಪುಟ್ಟದಂ
ತೋಸರಿಸದೆಸುತಿರ್ದನುತ್ಕಾಲದ ಮೇಘ
ಮೇ ಸಾಣೆವಿಡಿದಂಬುಮಳೆಗಳಂ ಕರೆವುದೆನೆ ರಾಮ ಕೇಳದ್ಭುತವನು ೩೪

ಬಾನಿಂದಮೆತ್ತೆತ್ತಲುಂ ಕರೆವ ನಿಡುಸರಳ
ಸೋನೆಯಿಂದೆಲ್ಲರುಂ ಮೂರ್ಛೆವಡೆದರ್ ಬ್ರಹ್ಮ
ನೇನಾದನೆಂದರಿಯೆನರೆಜಾವಮನಿತರೊಳಗವನೆಸುವ ಬಾಣಂಗಳ

ವನ್ನು ಕುಡಿಯುವ, ಕಚ್ಚುವ, ಹೀರುವ, ಕಾರುವ, ಮಿತಿಮೀರುವ, ಅರ್ಧ ಕೊಲೆಯಾದ ವರ ನೋವಿನಿಂದ ಸಾಯುವ, ಬೇಯುವ ಅಷ್ಟು ಜನರನ್ನೂ ಬ್ರಹ್ಮನು ನೋಡಿದನು. ೩೩. ಬ್ರಹ್ಮನು ವಿಸ್ಮಯಗೊಂಡು ಇವನ ಮಾಯೆಯನ್ನು ಒಂದು ರೀತಿಯಲ್ಲಿ ಪರಿ ಹರಿಸುತ್ತೇನೆ ಎನ್ನುವಷ್ಟರಲ್ಲಿ ಶತಮಾಯನು ಮೇಲೆ ಬಿದ್ದು ಕಣ್ಣುಗಳಿಗೆ ಕಾಣಿಸಿ ಕೊಳ್ಳದೆ ಎಡ-ಬಲ, ಹಿಂದು–ಮುಂದು ಎಲ್ಲ ಜಾಗದಲ್ಲಿಯೂ ಸುರಿಯುವ ಬಾಣ ಗಳನ್ನು ಬ್ರಹ್ಮನು ತಿಳಿದು ಸಿಡಿಲಿನಂತೆ ಅದನ್ನು ಮುರಿದನು, ಪರ್ವತದಂತೆ ತರಿದನು, ಸಮುದ್ರದಂತೆ ಅದನ್ನು ಸುರಿಯಲು ಮತ್ತೊಂದು ರೀತಿಯಲ್ಲಿ ಪರಾಕ್ರಮದಿಂದ ಎಡೆಬಿಡದೆ ಬಂದು ಮೇಲೆ ಬಿದ್ದನು. ೩೪. ಈ ಸಕಲವನ್ನು ಸೃಷ್ಟಿಸುವ ಬ್ರಹ್ಮನ ಯುದ್ಧಕ್ಕೆ ಮುಂದೆ ನಿಲ್ಲುವವರಿದ್ದಾರೆಯೆ ? ಸಮನಾಗಿ ಯುದ್ಧ ಮಾಡಿ ಮಾಡಿ ಶತ ಮಾಯನು ಅಧಿಕವಾಗಿ ಆಯಾಸಗೊಂಡನು. ಆಕಾಶದ ಮೇಲೇರಿ ಭೀಕರ ಕತ್ತಲೆಯನ್ನು ಗಾಢವಾಗಿ ಕವಿಸಿ ಮೋಸದಿಂದ ಬಿಲ್ಲು-ಬಾಣಗಳ ಶಬ್ದ ಹುಟ್ಟದಂತೆ ಒಂದೇ ಸಮನೆ ಪ್ರಳಯಕಾಲದ ಮೋಡವೇ ಸಾಣೆಹಿಡಿದ ಬಾಣಗಳ ಮಳೆಯನ್ನು ಸುರಿಯುವುದೆನ್ನು ವಂತೆ ಬಾಣಗಳನ್ನು ಬಿಡುತ್ತಿದ್ದನು. ಸಿದ್ಧರಾಮ, ಅದ್ಭುತವನ್ನು ಕೇಳು. ೩೫. ಆಕಾಶ ದಿಂದ ಎಲ್ಲೆಲ್ಲಿಯೂ ಸುರಿಯುವ ಉದ್ದನಾದ ಬಾಣಗಳ ತುಂತುರಿನಿಂದ ಎಲ್ಲರೂ ಮೂರ್ಛೆಗೊಂಡರು. ಬ್ರಹ್ಮನು ಏನಾದನೆಂದು ತಿಳಿಯೆ ? ಅರ್ಧ ಜಾವದಷ್ಟು

CC-0. Jangamwadi Math Collection. Digitized by eGangotri

ನಾನಾಪ್ರಕಾರದಿಂ ಕಡಿದುಮವನೆರ್ದೆಗೆ ಸಂ
ಧಾನವಂ ಮಾಳ್ಪ ಬಗೆಯುಂ ಕಾಣದೀಶ್ವರ
ಧ್ಯಾನದಿಂದರಿದೊಡನೆ ಪ್ರಳಯರುದ್ರಾಸ್ತ್ರಮಂ ಸರಸಿಜಭವಂ ತೆಗೆದನು ೩೫

ಬತ್ತಳಿಕೆಯಿಂದುಗಿಯಲಾ ಮಾಯೆಗಳ್ ಕೂಡಿ
ಕೆತ್ತ ತಮಮಡಗಿದುದು ಹೆದೆಯೊಳ್ ತೊಡರ್ಚಲೆ
ತ್ತೆತ್ತಲುಂ ಬ್ರಹ್ಮಾಂಡಮುರಿದುದಾ ಬಾಣಮಂ ಕಿವಿವರೆಗೆ ತೆಗೆದು ಬಿಡಲು
ಮತ್ತೆ ನಭದೊಳಗೆಸೆವ ಶತಮಾಯಕಂಠಮಂ
ಕತ್ತರಿಸಿ ತಲೆಮುಂಡಮೆರಡನುಂ ಕಡಲೇಳ
ರತ್ತ ಮರುಭೂಮಿಗಿಟ್ಟುದು ಬೀಳ್ವ ಭರಕದೇನಾಯ್ತೊ ಭೂತಳಮೆಂದನು ೩೬

ಝಲ್ಲೆಂದು ಸುರಕುಸುಮವೃಷ್ಟಿ ಕರೆದತ್ತು ವಾ
ಗ್ವಲ್ಲಭನ ಸಿರಿಮುಡಿಗೆ ದೈತ್ಯಸೇನಾರ್ಣವಂ
ತಲ್ಲಣಿಸಿದುದು ಬೇಹ ರಕ್ಕಸರ್ ಸರಿದರಲ್ಲಲ್ಲಿ ಬಳಿಕಾ ಬ್ರಹ್ಮನು
ಬಿಲ್ಲೊಳಂಬಂ ತೊಟ್ಟು ನಡೆವುತಿರೆ ಕಾಳೆಗದ
ಗೆಲ್ಲದೊಳ್ ದಿಕ್ಪಾಲ ವಸು ಮನುಗಳಾದ್ಯಂತ
ರೆಲ್ಲರೊತ್ತಿದರಳಿದುದಗಣಿತಬಲಂ ಖಳರ ಸೇನೆಯೊಳ್ ನಿಮಿಷದೊಳಗೆ ೩೭

ಹೊತ್ತು ಅವನು ಬಿಡುವ ಬಾಣಗಳನ್ನು ನಾನಾ ರೀತಿಯಿಂದ ಕಡಿದು, ಅವನ ಎದೆಗೆ ಬಾಣ ಪ್ರಯೋಗಿಸುವ ರೀತಿಯನ್ನು ತಿಳಿಯದೆ ಈಶ್ವರಧ್ಯಾನದಿಂದ ಅದನ್ನು ತಿಳಿದು ಕೂಡಲೇ ಬ್ರಹ್ಮನು ಪ್ರಳಯವನ್ನುಂಟುಮಾಡುವಂತಹ ರುದ್ರಾಸ್ತ್ರವನ್ನು ಹೊರ ತೆಗೆದನು. ೩೬. ಅಸ್ತ್ರವನ್ನು ಬತ್ತಳಿಕೆಯಿಂದ ಹೊರಕ್ಕೆ ತೆಗೆಯಲು ಆ ಮಾಯೆಗಳಿಂದ ಕೂಡಿ ಆವರಿಸಿದ ಕತ್ತಲು ಅಡಗಿಹೋಯಿತು. ಅದನ್ನು ಹೆದೆಗೆ ಏರಿಸಲು ಎಲ್ಲೆಲ್ಲಿಯೂ ಬ್ರಹ್ಮಾಂಡ ಉರಿಯಿತು. ಬಾಣವನ್ನು ಕಿವಿಯವರೆಗೆ ಎಳೆದುಬಿಡಲು ಅದು ಆಕಾಶ ದಲ್ಲಿದ್ದ ಶತಮಾಯನ ಕುತ್ತಿಗೆಯನ್ನು ಕತ್ತರಿಸಿ, ತಲೆ-ಶರೀರ ಎರಡನ್ನೂ ಏಳು ಸಾಗರಗಳ ಆಚೆಯಿದ್ದ ಮರುಭೂಮಿಗೆ ಎಸೆಯಿತು. ಅದು ಬೀಳುವ ರಭಸಕ್ಕೆ ಭೂಮಿ ಏನಾಯಿತೊ ಎಂದನು. ೩೭. ವಾಣೀಪತಿಯಾದ ಬ್ರಹ್ಮನ ಸಿರಿಮುಡಿಯ ಮೇಲೆ ಝಲ್ಲೆಂದು ದೇವತೆಗಳಿಂದ ಕುಸುಮದ ಮಳೆ ಕರೆದಿತ್ತು, ರಾಕ್ಷಸಸೇನಾಸಮುದ್ರ ತಲ್ಲಣಿಸಿತು. ಗೂಢಚಾರಿಕೆಯ ರಾಕ್ಷಸರು ಅಲ್ಲಲ್ಲಿ ಜಾರಿಕೊಂಡರು. ಅನಂತರ ಆ ಬ್ರಹ್ಮನು ಬಿಲ್ಲಿನಲ್ಲಿ ಬಾಣವನ್ನು ತೊಟ್ಟು ನಡೆಯುತ್ತಿರಲು, ಯುದ್ಧದಲ್ಲಾದ ವಿಜಯದಲ್ಲಿ ದಿಕ್ಪಾಲ, ವಸು, ಮನುಗಳಾದಿಯಾಗಿ ಎಲ್ಲರೂ ಸೇರಿ ರಾಕ್ಷಸರ ಬಲದಲ್ಲಿ ಅಳಿದುಳಿದ ಅಗಣಿತ ಸೈನ್ಯವನ್ನು

CC-0. Jangamwadi Math Collection. Digitized by eGangotri

ವಿಕ್ರಮದೊಳೊತ್ತುವಾ ಬ್ರಹ್ಮನಂ ನಿಲಿಸುವ ಪ
ರಾಕ್ರಮಿಗಳೊರ್ವರಂ ಕಾಣೆನಾ ಖಳಸೈನ್ಯ
ಚಕ್ರಪತಿಯಳಿವನಾ ಶುಂಭಾಸುರಂ ಕೇಳ್ದು ಖೇದಸಂಯುಕ್ತನಾಗಿ
ವಕ್ರಮಾದುದೆ ಸಮರಜಯಮೆನುತೆ ವಿಗ್ರಹೋ
ಪಕ್ರಮಾವೇಶದಿಂ ತನ್ನ ಬಲಸಹಿತಂದ
ತಿಕ್ರಮಿಸಿ ನಡೆದನಾ ದಾನವಂ ಮೌನವಂ ನೀಗಲಿದಿರಾಂತ ಭಟನು ೩೮

ಮಿರ್ದುಬಹ ದೊದ್ದೆಗರ್ ತೆಗೆದೋಡಲೆರ್ದೆಯ ಕೆ
ಚ್ಚೆರ್ದಪರ್ ಬರಲಿ ಕಾಳೆಗಕೆನುತೆ ಕಡುಪಸಿದ
ಶಾರ್ದೂಲದಂತೆ ಶುಂಭಾಸುರಂ ರಥವಡರಿ ನಡೆಯೆ ಕಂಡಜಮುಖ್ಯರು
ಇರ್ದರೆಲ್ಲರ್ ಗರಂ ಪೊಡೆದಂತೆ ದುರ್ಜಯಂ
ಪೊರ್ದಿದುದು ಸುರಬಲಕೆ ಶುಂಭಾಸುರಂಗಾಂತು
ಪೋರ್ದರೊಡೆಯನ ರಿಣವ ನೀಗಿದರ್ ಬೀಗಿದರ್ ಸಾಗಿದರ್ ಕಂಡಕಡೆಗೆ ೩೯

ನೋಯನೊಂದಂ ಬ್ರಹ್ಮನಿಂದ್ರನೊಡಲೊಳಗೆ ಪೂ
ರಾಯಮಾಯ್ತೇರು ತದ್ದಿಕ್ಪಾಲರೆಲ್ಲರುಂ
ಗಾಯದಿಂ ಮೂರ್ಛೆವಡೆದರ್ ಮಿಕ್ಕರೇನಾದರೆಂದರಿಯೆನಾ ಪಥದೊಳು
ಖೋಯೆಂದು ತರುಬಿದರ್ ಖಳರಜೇಂದ್ರಾದ್ಯರ ಪ
ಲಾಯನದ ಹೇವಮಂ ಕಂಡನೀ ವಿಷ್ಣು ರೋ
ಷಾಯಮಾನಸನಾಗಿ ಸರ್ವಸನ್ನಾಹದಿಂ ಶುಂಭಂಗೆ ಮಾರಾಂತನು ೪೦

ನಿಮಿಷದಲ್ಲಿ ನಾಶಮಾಡಿದರು. ೩೮. ಶೌರ್ಯದಿಂದ ಮುನ್ನುಗ್ಗುತ್ತಿರುವ ಆ ಬ್ರಹ್ಮನನ್ನು ತಡೆಯುವ ಪರಾಕ್ರಮಿಗಳೊಬ್ಬರನ್ನೂ ಕಾಣೆ. ಆ ರಾಕ್ಷಸಸೈನ್ಯದ ಸೇನಾಪತಿಯ ಸಾವನ್ನು ಆ ಶುಂಭಾಸುರನು ಕೇಳಿ ಖೇದದಿಂದ ಕೂಡಿ ನಮಗೆ ಯುದ್ಧವಿಜಯ ಹಿಂದಾಯಿತೇ ? ಎನ್ನುತ್ತ ಎದುರಾದ ಭಟನು ಮೌನವನ್ನು ಮುರಿಯುವಂತೆ (ನೋವಿನಿಂದ ಕಿರಚಿಕೊಳ್ಳುವಂತೆ) ಯುದ್ಧಾವೇಶದಿಂದ ತನ್ನ ಸೈನ್ಯಸಹಿತ ಅಂದು ಅತಿಕ್ರಮಿಸಿ ಆ ರಾಕ್ಷಸನು ಮುನ್ನಡೆದನು. ೩೯. ಮಿಾರಿ ಬರುವ ಸೈನಿಕರು ಸರಿದು ಓಡಲಿ, ಎದೆಯಲ್ಲಿ ಧೈರ್ಯವಿದ್ದವರು ಯುದ್ಧಕ್ಕೆ ಬರಲಿ ಎನ್ನುತ್ತಾ ಅತಿಯಾಗಿ ಹಸಿದ ಶಾರ್ದೂಲದಂತೆ ಶುಂಭಾಸುರನು ರಥವನ್ನೇರಿ ನಡೆಯಲು ಅದನ್ನು ಕಂಡು ಬ್ರಹ್ಮ ಮೊದಲಾದವರೆಲ್ಲ ಗರಹೊಡೆದವರಂತೆ ಇದ್ದರು. ದೇವಬಲಕ್ಕೆ ಸೋಲುಂಟಾಯಿತು. ಶುಂಭಾಸುರನನ್ನು ಎದುರಿಸಿ ಹೋರಾಡಿದವರು ಒಡೆಯನ ಋಣವನ್ನು ತೀರಿಸಿದರು. ಗರ್ವಿಸಿದವರು ಸಿಕ್ಕ ಸಿಕ್ಕೆಡೆಗೆ ಓಡಿದರು. ೪೦. ಬ್ರಹ್ಮನು ಬಹುವಾಗಿ ನೊಂದನು. ಇಂದ್ರನ ಶರೀರದಲ್ಲಿ ಗಾಯಗಳು ತುಂಬಿದುವು. ಆ ದಿಕ್ಪಾಲರೆಲ್ಲರೂ ಗಾಯದಿಂದ ಮೂರ್ಛೆಗೊಂಡರು. ಮಿಕ್ಕವರು ಆ ಸಮಯದಲ್ಲಿ ಏನಾದರು ಎಂದು ನಾನು ತಿಳಿಯೆ. ರಾಕ್ಷಸರು ಬೋ ಎಂದು ಬೆನ್ನಟ್ಟಿದರು. ಬ್ರಹ್ಮ ಇಂದ್ರ ಮೊದಲಾದವರ ಪಲಾಯಾನದ ಹೀನ ಸ್ಥಿತಿಯನ್ನು ಈ ವಿಷ್ಣು ನೋಡಿ ರೋಷಚಿತ್ತನಾಗಿ ಸರ್ವಸನ್ನಾಹದಿಂದ ಶುಂಭನಿಗೆ

CC-0. Jangamwadi Math Collection. Digitized by eGangotri

ಸಾರ್ತನಗಿದಿರ್ಚಿ ನೀಂ ಬಾಳ್ವನೇ ನಿನ್ನನೈ
ನೂರ್ತುಂಡುಗೆಯ್ದು ಬಲಿಗೆದರ್ವೆನೆನಗಾಂತು ದುಃ
ಖಾರ್ತರಾದರ್ ನಿನ್ನ ಪೊಂದಿಗರ್ ಪೋಗೆನಲ್ ವಿಷ್ಣುವತಿಕೋಪದಿಂದೆ
ಆರ್ತನಗೆ ಸರಿಯೆಲವೊ ಸಾಯಬೇಡೆನುತವನ
ತೇರ್ತುಮುರ್ತುಮುರಾಗಲೆಚ್ಚು ವಸುಮತಿಗೆ ಕೆ
ನ್ನೀರ್ತುಳ್ಕೆ ತುಳ್ಕಿದಂ ಕೈಗೆಡದೆ ಸಾಯಕಸಮುದ್ರಮಂ ಶಾರ್ಙ್ಗಿ ಬಳಿಕ ೪೧

ಏರ್ದಾಳೆದು ನೊಂದ ಕಾಳ್ಪಂದಿಯಂತವನಾ ಧ
ನುರ್ದಂಡ ಶರಮನೊರ್ಕೈಗೊಂಡು ಗುಡುಗುಡಿಸಿ
ದೋರ್ದಂಡಮಂ ನೀಡಿ ವಿಷ್ಣುವಿನ ತೇರ ನೀಡುಬೊಗರೆವೊಲ್ ನಭಕಿಡಲ್ಕೆ
ಸಾರ್ದು ಬ್ರಹ್ಮಾಂಡಮಂ ಬೀಳ್ವ ರಥಮಂ ನಡುವೆ
ವಿಾರ್ದು ಹರಿ ಪುಟನೆಗೆದು ಗಗನದೊಳ್ ಮೇಘದಂ
ತಾರ್ದು ಶುಂಭನಮೇಲೆ ಬೀಳಲಿರ್ವರ್ ನೊಂದುರುಳ್ದು ಮೂರ್ಛಿತರಾದರು ೪೨

ಕ್ಷಣದೊಳೆಚ್ಚತ್ತು ಕಡುವೇಗದಿಂದಿರ್ವರುಂ
ಮಣಿವರೂಥಾರೂಢರಾಗಿ ಬಿಲ್ವಿಡಿದು ಮಾ
ರ್ಗಣಕೆ ಮಾರ್ಗಣಮೊಡನೆ ಗಾಯಕಂ ಗಾಯಮುಳಲಿಂಗಳಲ್ ಖತಿಗೆ ಖಾತಿ
ಸೆಣಸಿಂಗೆ ಸೆಣಸು ಮೂದಲೆಗೆ ಮೂದಲೆಗಳಿಂ
ಹೆಣಗಿದರ್ ಶರ ಖಡ್ಗ ಪರಶು ಗದೆ ಚಕ್ರ ಕಂ
ಪಣ ಮುಷ್ಟಿಯುದ್ಧಾದಿ ಸಕಲಾಯುಧಂಗಳಿಂ ಹೆರೆತೆಗೆಯದೋರೊರ್ವರು ೪೩

ಎದುರಾದನು. ೪೧. ನನ್ನನ್ನು ಎದುರಾಗಿ ನೀನು ಬಾಳುವವನೆ ? ದೂರಸರಿ. ನಿನ್ನನ್ನು ಐದುನೂರು ತುಂಡುಮಾಡಿ ಬಲಿಗೊಡುತ್ತೇನೆ. ನನ್ನನ್ನೆದುರಿಸಿ ನಿನ್ನ ಜೊತೆಯವರು ದುಃಖವನ್ನನುಭವಿಸಿದರು, ಹೋಗು ಎನ್ನಲು ವಿಷ್ಣುವು ಅತಿಯಾದ ಕೋಪದಿಂದ ನನಗೆ ಯಾರು ಸಮ ? ಎಲವೋ ಪಕ್ಕಕ್ಕೆ ಸರಿ ಸಾಯಬೇಡ ಎನ್ನುತ್ತ ಅವನ ರಥವನ್ನು ಚೂರುಚೂರಾಗುವಂತೆ ಹೊಡೆದನು. ಭೂಮಿಗೆ ರಕ್ತ ಚಿಮ್ಮುವಂತೆ ವಿಷ್ಣುವು ಅನಂತರ ಒಂದೇಸಮನೆ ಬಾಣಸಾಗರವನ್ನು ತುಳುಕಿದನು. ೪೨. ಗಾಯಗೊಂಡು ನೊಂದ ಕಾಡ ಹಂದಿಯಂತೆ ಅವನು ಆ ಬಿಲ್ಲು-ಬಾಣಗಳನ್ನು ಒಂದು ಕೈಯಲ್ಲಿ ಹಿಡಿದು ಗುಡುಗುಡಿಸಿ ಬಾಹುದಂಡವನ್ನು ಚಾಚಿ ವಿಷ್ಣುವಿನ ರಥವನ್ನು ಬುಗುರಿಯಂತೆ ಆಕಾಶಕ್ಕೆಸೆಯಲು ಅದು ಬ್ರಹ್ಮಾಂಡವನ್ನು ಸಮೀಪಿಸಿ ಬೀಳುವ ರಥವನ್ನು ಮಧ್ಯದಲ್ಲಿಯೇ ಬಿಟ್ಟು ವಿಷ್ಣು ಪುಟನೆಗೆದು ಆಕಾಶದಲ್ಲಿ ಮೋಡದಂತೆ ಅಬ್ಬರಿಸಿ ಶುಂಭನ ಮೇಲೆ ಬೀಳಲು ಇಬ್ಬರೂ ನೊಂದು ಕೆಳಕ್ಕೆ ಬಿದ್ದು ಮೂರ್ಛೆಹೋದರು. ೪೩. ಕ್ಷಣದಲ್ಲಿ ಎಚ್ಚರ ಗೊಂಡು, ಅತಿವೇಗದಿಂದ ಇಬ್ಬರೂ ಮಣಿಖಚಿತವಾದ ರಥವನ್ನು ಏರಿ, ಬಿಲ್ಲು ಹಿಡಿದು, ಬಾಣಕ್ಕೆ ಬಾಣ, ಗಾಯಕ್ಕೆ ಗಾಯ, ವೇದನೆಗೆ ವೇದನೆ, ಕೋಪಕ್ಕೆ ಕೋಪ, ಹೋರಾಟಕ್ಕೆ ಹೋರಾಟ, ಹೀಯಾಳಿಕೆಗೆ ಪ್ರತಿ ಹೀಯಾಳಿಕೆ, ಬಾಣ, ಕತ್ತಿ, ಕೊಡಲಿ, ಗದೆ, ಚಕ್ರ, ಕಂಪಣ, ಮುಷ್ಟಿಯುದ್ಧ ಮೊದಲಾದ ಎಲ್ಲ ಆಯುಧಗಳಿಂದಲೂ

CC-0. Jangamwadi Math Collection. Digitized by eGangotri

ನೀಲಪರ್ವತವೆರಡು ಪೋರ್ವಂತೆ ಸಂವರ್ತ
ಕಾಲಮೇಘದ್ವಯಂ ಸೆಣಸುವಂತಾ ಮಹಾ
ಸ್ಥೂಲಾಂಗರೆಚ್ಚಾಡುತಿರಲಿರ್ವರವಯವದ ಗಾಯಗಾಯಂಗಳೊಳಗೆ
ಮೇಲೆ ಮೇಲೊಸರ್ವ ನೆತ್ತರೊಳದ್ದು ಪೂವಾದ
ಪಾಲಾಶತರುಗಳೊಲ್ ನನೆದ ಜಾಜಿನಗಿರಿಯೊ
ಲಾ ಲಕ್ಷ್ಮಿಯರಸಶುಂಭಾಸುರರ್ ಪೋರ್ದರೇನೆಂದೆಂಬೆನವರದಟನು ೪೪

ಸಮನಪ್ಪನೀ ಹರಿಗೆ ಶುಂಭನಾ ಶುಂಭಂಗೆ
ಸಮನೀ ಮಹಾವಿಷ್ಣುವೆಂದೆರಳ್ತಂಡದವ
ರಮುಮು ಮರುಭು ಭಾಪೆನಲ್ ಕಾದಿದರನೇಕಸತ್ತ್ವದೆ ಬಳಿಕ್ಕಿಂತಿರ್ವರು
ಸಮರದೊಳ್ ಸರಿಯಾಗೆ ಶುಂಭನತಿಕೋಪದಿನ
ಸಮಬಾಣವೊಂದರಿಂದೆರ್ದೆಯನೆಚ್ಚೊಡೆ ಶಿರೋ
ಭ್ರಮಣದಿಂ ಮೂರ್ಛಿಸಿ ಮರಳ್ದೆಳ್ದು ವಿಷ್ಣು ದಿವ್ಯಾಸ್ತ್ರದಿಂ ಕೆಡೆಯೆಚ್ಚನು ೪೫

ಸರ್ಪಶಯನನ ಬಾಣಹತಿಗವನ ಮುಖದೆ ನೆ
ತ್ತರ್ಪರಿದುದೆತ್ತಲುಂ ಸುತ್ತಲುಂ ಕೋಪದಿಂ
ಕೂರ್ಪ ಸೋದರ ನಿಶುಂಭಾದಿಗಳ್ ವಿಷ್ಣುವಂ ತವೆ ಮುತ್ತಲಾ ಕ್ಷಣದೊಳು

ಒಬ್ಬೊಬ್ಬರೂ ಹಿಂದೆಗೆಯದೆ ಹೋರಾಡಿದರು. ೪೪. ಎರಡು ನೀಲಪರ್ವತಗಳು ಹೋರಾಡುವಂತೆ, ಪ್ರಳಯಕಾಲದ ಎರಡು ಕಪ್ಪುಮೋಡಗಳು ಒಂದಕ್ಕೊಂದು ಸೆಣಸುವಂತೆ, ಆ ಅತಿದೊಡ್ಡ ದೇಹದವರು ಬಾಣದಿಂದ ಹೋರಾಡುತ್ತಿರಲು ಅವರ ದೇಹದ ಗಾಯ ಗಾಯಗಳೊಳಗೆ ಮೇಲೆ ಮೇಲೆ ಸುರಿಯುವ ರಕ್ತದಲ್ಲಿ ನೆಂದು ಹೂ ಬಿಟ್ಟ ಮುತ್ತುಗದ ಮರದಂತೆ, ನೆನೆದ ಕೆಂಪುಕಲ್ಲಿನ ಪರ್ವತದಂತೆ ಆ ವಿಷ್ಣು ಮತ್ತು ಶುಂಭಾಸುರರು ಹೋರಾಡಿದರು. ಅವರ ಪರಾಕ್ರಮವನ್ನು ಏನು ಹೇಳಲಿ ? ೪೫. ಈ ವಿಷ್ಣುವಿಗೆ ಶುಂಭನು ಸಮನಾಗುತ್ತಾನೆ. ಆ ಶುಂಭನಿಗೆ ವಿಷ್ಣುವು ಸರಿಸಮ ಎಂದು ಎರಡೂ ಸೈನ್ಯದ ತಂಡದವರು ಅಯ್ಯಯ್ಯೋ ! ಭಲ ! ಭೇಷ್ ! ಎನ್ನಲು ಅನೇಕ ರೀತಿಯ ಪರಾಕ್ರಮದಿಂದ ಯುದ್ಧ ಮಾಡಿದರು. ಅನಂತರ ಇಬ್ಬರೂ ಈ ರೀತಿ ಯುದ್ಧದಲ್ಲಿ ಸಮರಾಗಲು ಶುಂಭನು ಅತಿಯಾದ ಕೋಪದಿಂದ ಅಸಾಮಾನ್ಯವಾದ ಬಾಣವೊಂದರಿಂದ ವಿಷ್ಣುವಿನ ಎದೆಗೆ ಹೊಡೆಯಲು ಅವನು ತಲೆ ತಿರುಗಿ ಮೂರ್ಛೆ ಗೊಂಡು ಮತ್ತೆ ಎಚ್ಚತ್ತು ಎದ್ದು ದಿವ್ಯಾಸ್ತ್ರದಿಂದ ಬೀಳುವಂತೆ ರಾಕ್ಷಸನನ್ನು ಹೊಡೆದನು. ೪೬. ವಿಷ್ಣುವಿನ ಬಾಣದ ಹೊಡೆತಕ್ಕೆ ಅವನ ಮುಖದಿಂದ ಎಲ್ಲ ಕಡೆಗೂ ರಕ್ತ ಸುರಿಯಿತು. ಕೋಪದಿಂದ ಕೂಡಿದ ಶುಂಭನ ಸೋದರರಾದ ನಿಶುಂಭ ಮೊದಲಾದವರು ಸುತ್ತಲೂ ವಿಷ್ಣುವನ್ನು ಮುತ್ತಿದರು. ಆ ಕ್ಷಣದಲ್ಲಿ ಎಚ್ಚರಗೊಂಡ ಶುಂಭನು

CC-0. Jangamwadi Math Collection. Digitized by eGangotri

ತೇರ್ಪತ್ತು ಶುಂಭನಿದಿರೊ ನೋಡಿ ಮುಳಿಸು ಮೂ
ರಿರ್ಪತ್ತುವಡಿಯಾಗೆ ವಿಷ್ಣುವಂ ಕಾಣುತಿ
ನ್ನೊರ್ಪತ್ತು ಬದುಕು ನೀಂ ಕಾಬೆನೆನುತುಗ್ರಶಕ್ತಿಯನಾರ್ದು ತೆಗೆದಿಟ್ಟನು ೪೬

ಪೇರುರವನುಗಿದುದಾ ಶಕ್ತಿ ಹರಿ ಮೆಯ್ಮರೆದು
ತೇರೊಳಗೆ ಬೀಳ್ವನಿನ್ನಿರಬಾರದೆಂದವನ
ಸಾರಥಿ ಮರಳ್ಚಿದಂ ಪಾಳೆಯುಕೆ ರಥಮನಾ ಬ್ರಹ್ಮೇಂದ್ರರಳವಳಿದರು
ಈ ರಾಕ್ಷಸಾಳಿ ಬೆಂಬತ್ತಿದುದು ನಿಡುಸರಳ
ಸಾರದಿಂ ತೊಡೆ ನಡು ಕೊರಳ್ ಪರಿಯೆ ಕೂಡೆ ಸಂ
ಹಾರವಾಯ್ತಾಗಳೈನೂರ್ಪದ್ಮ ಬಲಮುಳಿದುದೋಡಿ ಬೀಡಂ ಪೊಕ್ಕುದು ೪೭

ಕರಿ ತುರಗ ರಥ ಶರಾಳಿಯನಿರಿಸಿ ಕೈಮುಗಿದು
ಮರಳ್ತುತ್ತಡರ್ದು ಪುಲ್ಗಚ್ಚಿ ನೀರ್ವೊಕ್ಕು ಸಲೆ
ಬೆರಳುಗಳ್ ಬಾಯೊಳಿಟ್ಟಯ್ಯ ಕಾಯೆಂದು ಕಾಲ್ಗೆರಗಿ ಬಹುದೈನ್ಯವಾಂತು
ಕರುಣವನೆ ಪಡೆದು ಕಳುಹಿಸಿಕೊಂಡು ಕಾಲ್ವೇಗ
ವೆರಸಿ ತಿರುತಿರುಗಿ ನೋಡುತೆ ಪಾಳೆಯಂಬುಗುವ
ಸುರರ ಸೇನೆಯ ಸಡಗರಂಗಂಡು ಸೇನಾನಿಯುರಿದೆದ್ದನಾ ಕ್ಷಣದೊಳು ೪೮

ಎದುರುನೋಡಿ ಮೂರು ಇಪ್ಪತ್ತು ಪಟ್ಟು ಅಧಿಕ ಕೋಪದಿಂದ ವಿಷ್ಣುವನ್ನು ಕಂಡು ನೀನು ಇನ್ನೂ ಒಪ್ಪತ್ತು ಬದುಕು, ನೋಡುತ್ತೇನೆ ಎನ್ನುತ್ತ ಆರ್ಭಟಿಸಿ ಉಗ್ರವಾದ ಶಕ್ತಿಯನ್ನು ತೆಗೆದುಬಿಟ್ಟನು. ೪೭. ವಿಷ್ಣುವಿನ ವಿಶಾಲವಾದ ಎದೆಯನ್ನು ಆ ಶಕ್ತಿ ಪ್ರವೇಶಿಸಿತು. ವಿಷ್ಣು ಮೈಮರೆತು ರಥದಲ್ಲಿ ಬಿದ್ದನು. ಇನ್ನು ಇಲ್ಲಿರಬಾರದೆಂದು ಸಾರಥಿ ರಥವನ್ನು ಪಾಳಯಕ್ಕೆ ಹಿಂದಿರುಗಿಸಿದನು. ಆ ಬ್ರಹ್ಮ-ಇಂದ್ರರು ಕಳವಳ ಗೊಂಡರು. ರಾಕ್ಷಸರ ಸಮೂಹ ಅವರ ಬೆನ್ನಟ್ಟಿತು. ಉದ್ದವಾದ ಬಾಣಗಳ ಸಮೂಹದಿಂದ ತೊಡೆ, ಸೊಂಟ, ಕುತ್ತಿಗೆ ಕಡಿದುಹೋಗಲು ಐನೂರು ಪದ್ಮದಷ್ಟು ಸೈನ್ಯ ನಾಶವಾಯಿತು. ಉಳಿದ ಸೈನ್ಯ ಓಡಿಹೋಗಿ ಬಿಡಾರವನ್ನು ಸೇರಿತು. ೪೮. ಆನೆ, ಕುದುರೆ, ರಥ, ಬಾಣಗಳ ಸಮೂಹವನ್ನು ನೆಲದ ಮೇಲೆ ಇಟ್ಟು ನಮಸ್ಕರಿಸಿ, ಮರ, ಹುತ್ತವನ್ನು ಹತ್ತಿ, ಹುಲ್ಲು ಕಚ್ಚಿ, ನೀರನ್ನು ಹೊಕ್ಕು, ಬೆರಳುಗಳನ್ನು ಬಾಯ ಲ್ಲಿಟ್ಟು ಅಯ್ಯಾ ಕಾಪಾಡು ಎಂದು ಕಾಲಿಗೆ ಬಿದ್ದು ಅತಿಯಾಗಿ ದೈನ್ಯಗೊಂಡು, ಕರುಣೆ ಯನ್ನು ಪಡೆದು ಕಳಿಸಲ್ಪಟ್ಟು ವೇಗದಿಂದ ನಡೆದು ತಿರುತಿರುಗಿ ನೋಡುತ್ತ ಪಾಳೆಯ ವನ್ನು ಸೇರುವ ದೇವಸೇನೆಯ ಆತುರವನ್ನು ನೋಡಿ ತಕ್ಷಣ ಗುಹನು ಕೋಪದಿಂದ

CC-0. Jangamwadi Math Collection. Digitized by eGangotri

ಬಾಯನೊಡೆಬಡಿ ಮೀಸೆಗೀಳ್ ಕುರುಳ್ಗೊಯ್ ಪುಗಲ್
ತಾಯೊಡಲ್ ತೆರಪೀವುದೇ ನಿಮಗೆ ಪೊಯ್ದಾಡಿ
ಸಾಯಲೂಣೆಯುವಹುದೆ ಸುಡು ನಿಮ್ಮ ಬಾಳ್ಕೆಗಳನೆನುತೆ ಜರೆದಮರಕುಲಮಂ
ಖೋಯೆನುತೆ ಬಪ್ಪಸುರರು ಕಂಡು ತೇರೇರಿ
ಜೇಯನೇರಿಸಿ ಬಿಲ್ಲನೊದರಿಸುತೆ ಪ್ರಳಯಹರ
ನಾಯತಂದಾಳ್ದಾತ್ಮಬಲಸಹಂ ಷಣ್ಮುಖಂ ತರುಬಿದಂ ಪರಬಲವನು ೪೯

ಗಡಬಡಿಸಿದುದು ಲಗ್ಗೆವರೆ ಕೋಟಿ ಪಗೆಗಳಂ
ಕೆಡೆಕೆಡೆಯೆನುತ್ತೆ ಕಹಳೆಗಳೊದರ್ದುವಳ್ಳೆರ್ದೆಯ
ದಡದಡಂಗಳ್ ಮಾಣ್ದುದಮರರ್ಗೆ ಹರಿಯಜರ್ ತರಹರಿಸಿ ಧೈರ್ಯದಿಂದೆ
ಒಡನೊಡನೆ ಹುರಿಗಟ್ಟಿಯುರುಬುವಸುರಾಳಿಯಂ
ತಡೆತಡೆದು ಕಾದುತಿರ್ದಂ ಶುಂಭನಿಷುಗಳಂ
ಕಡಿಕಡಿದು ಖಾತಿಯಿಂದಾ ಷಣ್ಮುಖಂ ಸರಳ್ದೊಟ್ಟು ಮತ್ತಿಂತೆಂದನು ೫೦

ಸಾರಿದೆಂ ಕೆಡಬೇಡ ತೊಲಗು ಹರಿವಿಧಿಗಳಂ
ಗಾರಾಗಿಸಿದ ವಿಕ್ರಮೂ ಸಲ್ಲದೆಮಗೆ ಮೆ
ಯ್ದೋರಿ ಕಾದಿದ ದೈತ್ಯರೇನಾದರೆಂಬುದಂ ಪಿಂತೆ ನೀಂ ಕೇಳ್ದರಿಯೆಲಾ
ಕಾರಿಸುವೆನಮರರಂ ಜಯಿಸಿದುದನೆನುತೆ ಬಿ
ಲ್ಲಾಗ್ರರಧಿದೇವನೆಚ್ಚಂ ಕರದ ಬಲ್ಬಿಲ್ಗ
ಳಾರರಿಂ ಖಳನ ಸಾರಥಿ ರಥಾಶ್ವಂಗಳಿರದಡೆಗೆಡೆಯುಲೇನೆಂಬೆನು ೫೧

ಉರಿದೆದ್ದನು. ೪೯. ಬಾಯನ್ನು ಸೀಳು, ಬಡಿ, ಮೀಸೆಯನ್ನು ಕೀಳು, ತಲೆಯನ್ನು ಬೋಳಿಸು. ಅಡಗಿಕೊಳ್ಳಲು ತಾಯ ಹೊಟ್ಟೆ ನಿಮಗೆ ಅವಕಾಶ ಕೊಡುವುದೆ ? ಹೋರಾಡಿ ಸತ್ತರೆ ನಿಮಗೆ ಹೀನಾಯವಾಗುವುದೆ ? ನಿಮ್ಮ ಬಾಳುಗಳನ್ನು ಸುಡಲಿ ಎನ್ನುತ್ತ ದೇವಕುಲವನ್ನು ಹೀಯಾಳಿಸಿ, ಖೋಯೆಂದು ಬರುವ ರಾಕ್ಷಸರನ್ನು ನೋಡಿ ರಥವೇರಿ, ಹೆದೆಯೇರಿಸಿ, ಬಿಲ್ಲನ್ನು ಠೇಂಕಾರ ಮಾಡುತ್ತಾ ಪ್ರಳಯಕಾಲದ ಶಿವನ ಸಾಮರ್ಥ್ಯವನ್ನು ಪಡೆದು ತನ್ನ ಸೈನ್ಯಸಮೇತನಾಗಿ ಷಣ್ಮುಖನು ಶತ್ರುಸೈನ್ಯವನ್ನು ಎದುರಿಸಿದನು. ೫೦. ಲಗ್ಗೆಯವಾದ್ಯ ಗಡಬಡಿಸಿತು. ಕೋಟಿ ಶತ್ರುಗಳನ್ನು ಕೆಡಹು ಕೆಡಹು ಎನ್ನುತ್ತ ಕಹಳೆಗಳು ಆರ್ಭಟಿಸಿದುವು. ಹೇಡಿತನದಿಂದ ಹೊಡೆದುಕೊಳ್ಳುವ ದೇವತೆಗಳ ಎದೆಬಡಿತ ನಿಂತಿತು. ವಿಷ್ಣು–ಬ್ರಹ್ಮರು ಸಮಾಧಾನಗೊಂಡು ಧೈರ್ಯ ತಾಳಿ ಜೊತೆ ಜೊತೆಗೆ ಶಕ್ತಿಯನ್ನು ಕೂಡಿಸಿಕೊಂಡು, ಮೇಲೆ ಬೀಳುವ ರಾಕ್ಷಸಸಮೂಹವನ್ನು ತಡೆಯುತ್ತ ಯುದ್ಧ ಮಾಡುತ್ತಿದ್ದರು. ಶುಂಭನ ಬಾಣಗಳನ್ನು ಕಡಿಕಡಿದು ಕೋಪ ದಿಂದ ಷಣ್ಮುಖನು ಬಾಣತೊಟ್ಟು ಮತ್ತೆ ಹೀಗೆಂದನು. ೫೧. ನಾನು ಬಂದಿದ್ದೇನೆ. ಕೆಟ್ಟುಹೋಗಬೇಡ, ತೊಲಗು. ವಿಷ್ಣು–ಬ್ರಹ್ಮರನ್ನು ಗಾಸಿಗೊಳಿಸಿದ ಪರಾಕ್ರಮ ನಮ್ಮ ಬಳಿ ನಡೆಯದು. ಪರಾಕ್ರಮ ತೋರಿಸಿ ಹಿಂದೆ ಯುದ್ಧಮಾಡಿದ ರಾಕ್ಷಸರು ಏನಾದರೆಂಬುದನ್ನು ನೀನು ಕೇಳಿ ತಿಳಿದಿಲ್ಲವೆ ? ದೇವತೆಗಳನ್ನು ಜಯಿಸಿದುದನ್ನು

CC-0. Jangamwadi Math Collection. Digitized by eGangotri

ತೇರ್ಮುರಿಯೆ ಪೊಸತೇರನಳವಡಿಸಿ ಶುಂಭನೈ
ನೂರ್ಮಡಿಯು ಬೀರದಿಂ ಪೊಸಮಸೆಯು ಕಣೆಗಳಂ
ಕಾರ್ಮುಕದೊಳೊಂದಿಸಿ ಬಿಡಲ್ ದಿಶಾವನಿ ನಭೋಮಂಡಲಂಗಳೊಳೆಲ್ಲಿಯುಂ
ಕಾರ್ಮುಗಿಳೆಗಳೆನೆ ಕರೆದುವನಿತುಮಂ ನಿಮಿಷದೊಳ
ಗಾರ್ಮೊಗಂ ಕಡಿದವನ ಕೇತು ಚಾಮರ ಕವಚ
ಧರ್ಮ ಸಾರಥಿ ವರೂಥಂಗಳಂ ಕಡಿದು ವಿರಥನ ಮಾಡಿದಂ ಕ್ಷಣದೊಳು ೫೨

ವಿರಥನಾದಾ ಶುಂಭನೊಡನೆ ಗದೆವಿಡಿದು ಚೆ
ಚ್ಚರದೊಳೊದಗಲ್ಕದಂ ಕಡಿಯುಲಸಿವಿಡಿದು ನಿ
ರ್ಭರದೊಳೊದಗಲ್ಕದಂ ತರಿಯೆ ತೋಮರ ಚಕ್ರ ಪರಿಘ ಮುದ್ಗರ ಮುಸುಂಡಿ
ಪರಶು ಮೊದಲಾದ ಬತ್ತೀಸಾಯುಧಂಗಳೊಳ್
ಪರಿವಿಡಿಯುಲೊದಗಲನಿತಂ ಬೇಗದೊಳ್ ಮಹೇ
ಶ್ವರಸುತಂ ತರಿದವನ ಮೆಯ್ತುಂಬ ಗಾಯಮಂ ಕಾಣಿಸಿದನೇನೆಂಬೆನು ೫೩

ಇಂತು ನಾನಾವಿಧದ ಶಸ್ತ್ರಾಸ್ತ್ರಜಾಲಂಗ
ಳಿಂ ತಡೆಯದೊದಗಿ ಗುಹನಂಗದೊಳ್ ಗಾಯಂಗ
ಳಂತಾಗಿಸಲ್ ನೆರೆಯದಾತನಂ ಪಿಡಿದೆತ್ತಿ ನುಂಗಿದಪೆನೆಂಬ ಮನದ

ಕಾರಿಕೊಳ್ಳುವಂತೆ ಮಾಡುತ್ತೇನೆ ಎನ್ನುತ್ತ ಬಿಲ್ಗಾರರ ಅಧಿದೇವತೆಯಾದ ಷಣ್ಮುಖನು ಕೈಯಲ್ಲಿದ್ದ ಬಲವಾದ ಆರು ಬಿಲ್ಲುಗಳಿಂದ ರಾಕ್ಷಸನ ಸಾರಥಿ, ರಥ, ಕುದುರೆಗಳನ್ನು ಬಿಡದೆ ನಾಶಗೊಳಿಸಿದನು. ಅದನ್ನು ಏನೆನ್ನಲಿ ? ೫೨. ರಥ ಮುರಿದುಹೋಗಲು ಹೊಸದೊಂದನ್ನೇರಿ ಶುಂಭನು ಐನೂರು ಪಟ್ಟು ಪರಾಕ್ರಮದಿಂದ ಹೊಸದಾಗಿ ಮಸೆದ ಬಾಣಗಳನ್ನು ಬಿಲ್ಲಿಗಳವಡಿಸಿ ಬಿಡಲು ದಿಕ್ಕು, ಭೂಮಿ, ಆಕಾಶಮಂಡಲಗಳಲ್ಲಿ ಎಲ್ಲ ಕಡೆಯೂ ಬಾಣಗಳ ಮಳೆಯನ್ನೇ ಸುರಿಸಿದುವು. ಷಣ್ಮುಖನು ಅಷ್ಟನ್ನೂ ನಿಮಿಷದಲ್ಲಿ ಕಡಿದು ಅವನ ಧ್ವಜ, ಚಾಮರ, ಕವಚ, ಬಿಲ್ಲು, ಸಾರಥಿ, ರಥಗಳನ್ನು ಕಡಿದು ಕ್ಷಣದಲ್ಲಿ ಅವನನ್ನು ರಥವಿಲ್ಲದಂತೆ ಮಾಡಿದನು. ೫೩. ರಥವನ್ನು ಕಳೆದುಕೊಂಡ ಆ ಶುಂಭನು ಕೂಡಲೇ ಗದೆ ಹಿಡಿದು ಎಚ್ಚರಿಕೆಯಿಂದ ಮೇಲೆಬೀಳಲು ಅದನ್ನು ಕಡಿಯಲು ಕತ್ತಿಯನ್ನು ಹಿಡಿದು ಉತ್ಸಾಹದಿಂದ ಎದುರಿಸಲು ಅದನ್ನು ತರಿದನು. ಗದೆ, ಚಕ್ರ, ಮುಳ್ಳುಗದೆ, ಮುದ್ಗರ, ಮುಸುಂಡಿ, ಕೊಡಲಿ ಮೊದಲಾದ ಮೂವತ್ತೆರಡು ಆಯುಧಗಳಿಂದ ಅನುಕ್ರಮವಾಗಿ ಎದುರಿಸಲು ಅಷ್ಟನ್ನೂ ಕೂಡಲೇ ಕುಮಾರನು (ಷಣ್ಮುಖನು) ತರಿದು ಅವನ ಮೈತುಂಬ ಗಾಯಮಾಡಿದನು, ೫೪. ಹೀಗೆ ನಾನಾ ವಿಧವಾದ ಶಸ್ತ್ರಾಸ್ತ್ರ ಸಮೂಹಗಳಿಂದಲೂ ನಿಲ್ಲದೆ ಅಡ್ಡಗಟ್ಟಿ ಷಣ್ಮುಖನು ರಾಕ್ಷಸನ ಶರೀರದಲ್ಲಿ ಆ ರೀತಿ ಗಾಯಗಳನ್ನು ಮಾಡಿದರೂ ನಿಲ್ಲದೆ ಅವನನ್ನು ಹಿಡಿದೆತ್ತಿ ನುಂಗುವೆನು ಎನ್ನುವ ಮನಸ್ಸಿನ

CC-0. Jangamwadi Math Collection. Digitized by eGangotri

ಭ್ರಾಂತಿಯಿಂ ಮೇಲ್ವಾಯೆ ತಲೆಯನರಿವಾ ಬಾಣ
ಮಂ ತೆಗೆದಿವಂ ಗಿರಿಜೆಯಸ್ತ್ರಕ್ಕೆ ಮಿಾಸಲೆಂ
ದಂತದಂ ಬಿಟ್ಟು ಷಣ್ಮುಖನಾರ್ಶರಂಗಳಿಂ ಖಳನುರವನೊಡೆಯೆಚ್ಚನು ೫೪

ನಿಲವಿನಿಂ ಕೆಡೆದನವನನಿತರೊಳ್ ದೊರೆ ಬಿಳ್ದ
ನೆಲೆಲೆ ಕವಿಕವಿಯೆನುತೆ ಸುತ್ತಲೆತ್ತೆತ್ತಲವ
ನಳಲಿಗೆ ನಿಶುಂಭ ಕುಂಭ ನಿಕುಂಭ ಶರಭ ಗಜಶಿರ ಕಪಿಲ ವೃಷಪರ್ವರು
ಬಲಿ ವಿಲೋಚನ ಪಾಕ ಬಾಣ ವಿದ್ರಾವಣ ಶ
ಬಲ ಶಂಖಶಿರ ವಜ್ರನಾಭ ಮೊದಲಾಗಿರ್ದ
ಖಳರೊದಗಿ ಶುಂಭನಂ ಬೀಡಿಂಗೆ ಪೊರಿಸಿ ಕೆಣಕಿದರೊಡನೆ ಷಣ್ಮುಖನನು ೫೫

ಗಿರಿಯ ಬಳಗಂ ಮುತ್ತೆ ಕುಲಿಶಮಂಜುವುದೆ ವನ
ಕರಿಯ ಜಂಗುಳಿಯುರುಬೆ ಸಿಂಗಮಳ್ಕುವುದೆ ಮುದು
ನರಿಯ ಹಿಂಡುರವಣಿಸೆ ಪೆರ್ಬುಲಿ ಭಯಂಗೊಂಬುದೇ ಸಿದ್ಧರಾಮ ಕೇಳು
ತರತರದೊಳೆತ್ತೆತ್ತಲುಂ ಕವಿವ ರಕ್ಕಸರ
ನೆರವಿ ಷಣ್ಮುಖನಂ ತೆರಳ್ಚುವುದೆ ಕೂಡೆ ಸಂ
ಹರಿಸತೊಡಗಿದನವಂ ಪ್ರಳಯಹರನಪರಾವತಾರಮೆನೆ ಸಂಗರದೊಳು ೫೬

ಭ್ರಾಂತಿಯಿಂದ ರಾಕ್ಷಸನು ಮೇಲೆಬಿದ್ದನು. ಆಗ ಷಣ್ಮುಖನು ಇವನು ಗಿರಿಜೆಯ ಅಸ್ತ್ರಕ್ಕೆ ಮಿಾಸಲು ಎಂದು ಯೋಚಿಸಿ ತಲೆಗಡಿಯುವ ಬಾಣವನ್ನು ತೆಗೆದು ಅದನ್ನು ಬಿಟ್ಟು ಆರು ಬಾಣಗಳಿಂದ ರಾಕ್ಷಸನ ಎದೆ ಬಿರಿಯುವಂತೆ ಪ್ರಯೋಗಿಸಿದನು. ೫೫. ನಿಂತಿದ್ದಂತೆಯೇ ರಾಕ್ಷಸನು ಬಿದ್ದನು. ಅಷ್ಟರಲ್ಲಿ ಅಯ್ಯಯ್ಯೋ ದೊರೆ ಬಿದ್ದನು, ಮುತ್ತು, ಮುತ್ತು, ಎನ್ನುತ್ತ ಸುತ್ತಲೂ ಎಲ್ಲೆಲ್ಲಿಯೂ ಅವನ ದುಃಖಸಮಯಕ್ಕೆ ನಿಶುಂಭ, ಕುಂಭ, ನಿಕುಂಭ, ಶರಭ, ಗಜಶಿರ, ಕಪಿಲ, ವೃಷಪರ್ವರು, ಬಲಿ, ವಿಲೋಚನ, ಪಾಕ, ಬಾಣ, ವಿದ್ರಾವಣ, ಶಬಲ, ಶಂಖಶಿರ. ವಜ್ರನಾಭ ಮೊದಲಾದ ರಾಕ್ಷಸರು ಬಂದು ಶುಂಭನನ್ನು ಬೀಡಿಗೆ ಹೊರಿಸಿ ಕಳುಹಿಸಿದರು, ಒಡನೆಯೆ ಷಣ್ಮುಖನನ್ನು ಕೆಣಕಿದರು. ೫೬. ಗಿರಿಯ ಸಮೂಹ ಮುತ್ತಲು ವಜ್ರಾಯುಧವು ಅಂಜುವುದೆ ? ಕಾಡಾನೆಯ ಗುಂಪು ಮೇಲೆ ಬೀಳಲು ಸಿಂಹ ಅಳುಕುವುದೆ ? ಮುದಿನರಿಯ ಹಿಂಡು ವಿಜೃಂಭಿಸಲು ಹೆಬ್ಬುಲಿ ಭಯಪಡುತ್ತದೆಯೆ ? ಸಿದ್ಧರಾಮ, ಕೇಳು. ನಾನಾ ರೀತಿಯಿಂದಲೂ ಮುತ್ತುತ್ತಿರುವ ರಾಕ್ಷಸರ ಗುಂಪು ಷಣ್ಮುಖನನ್ನು ಹಿಂದಕ್ಕಟ್ಟುವುದೆ ? ಕೂಡಲೇ ಪ್ರಳಯಕಾಲದ ಹರನ ಅಪರಾವತಾರವೆನ್ನುವಂತೆ ಷಣ್ಮುಖನು ಸಂಗ್ರಾಮದಲ್ಲಿ ಎಲ್ಲರನ್ನೂ ಸಂಹಾರ

CC-0. Jangamwadi Math Collection. Digitized by eGangotri

ಇದಿರೊಳುರುಬಿದ ನಿಶುಂಭನನೆಚ್ಚು ಬಲದೊಳೊ
ತ್ತಿದ ಕುಂಭನಂ ಬಡಿದು ಪಾಮದೊಳ್ ಬಂದು ತಾ
ಗಿದ ಶರಭನಂ ಸದೆದು ಬೆಂಗಡೆಯೊಳೆಸುವ ಬಲಿಯುಂ ಕೆಡಪಿ ಮೇಲೆಮೇಲೆ
ಒದಗುವ ನಿಶುಂಭ ಪಾಕರನಿಳೆಗುರುಳ್ಚಿ ಮೋ
ಹಿದ ಶಬಲ ಶಂಬುಶಿರ ವಜ್ರನಾಭಾದಿ ಬಲ್
ಕದನಕರ್ಕಶ ದನುಜರಂ ಮೂರ್ಛೆವಡಿಸಿದಂ ಗುಹನೊಂದುನಿಮಿಷದೊಳಗೆ ೫೭

ಮಡಿವರ್ಗೆ ಗಡಿಯಿಲ್ಲ ವಾಹನದ ಮೇಗಣಿಂ
ಕೆಡೆವರ್ಗೆ ಮಿತಿಯಿಲ್ಲ ಗಾಯಂಗಳಿಂ ಮೂರ್ಛೆ
ವಡೆವರ್ಗೆ ಗಣನೆಯಿಲ್ಲರೆಜೀವವಾಗಿ ಕೈಕಾಲ್ಗಳುಡಿದರೆಗಂಗಳ
ಬಿಡುವರ್ಗೆ ಲೆಕ್ಕವಿಲ್ಲೆಸುಗೆಯುರುಬೆಯೊಳೆರ್ದೆಗ
ಳೊಡೆವರ್ಗೆ ಮೇರೆಯಿಲ್ಲೆತ್ತಲುಂ ಪರಿದು ಬೆಂ
ಗೊಡುವರ್ಗೆ ಕಡೆಯಿಲ್ಲವೆನೆ ಮುರಿದುದಾ ಬಲಂ ಪೇಳಲೇನದ್ಭುತವನು ೫೮

ಬೆಂಬತ್ತಿದುದು ವಿಷ್ಣು ವಿಧಿಮುಖ್ಯದೇವನಿಕು
ರುಂಬವೆತ್ತೆತ್ತಲುಂ ಖಳರಾನೆ ಕುದುರೆ ತೇ
ರಂ ಬಿಟ್ಟು ಕಂಗೆಟ್ಟು ಮತಿಯಳಿದು ಧೃತಿಗುಂದಿ ಬಹುದೈನ್ಯದಿಂ ಕೈಗಳಂ
ತಂಬುಲಕೆ ನೀಡಿ ಗಡ್ಡಂ ಮೀಸೆವೆರಸಿ ಬಸು
ರಿಂ ಬಂದ ಮಕ್ಕಳಾವ್ ನಿಮಗೆಂದು ಭಟಸಮೂ
ಹಂ ಬಿಡಿಸಿಕೊಂಡು ತಮ್ಮಯ ಪಾಳೆಯಂಬೊಕ್ಕುದೇನೆಂಬೆನಚ್ಚರಿಯನು ೫೯

ಮಾಡತೊಡಗಿದನು. ೫೭. ಎದುರಿನಲ್ಲಿ ಮೇಲೆಬಿದ್ದ ನಿಶುಂಭನನ್ನು ಬಾಣದಿಂದ ಹೊಡೆದು, ಬಲಗಡೆ ಒತ್ತಿದ ಕುಂಭನನ್ನು ಬಡಿದು, ಎಡಗಡೆಯಿಂದ ಎದುರಿಸಿದ ಶರಭನನ್ನು ಸದೆಬಡಿದು, ಹಿಂದುಗಡೆಯಲ್ಲಿ ಬಾಣಬಿಡುವ ಬಲಿಯನ್ನು ಕೆಡವಿ, ಮೇಲೆ ಮೇಲೆ ಬೀಳುವ ನಿಶುಂಭ–ಪಾಕರನ್ನು ನೆಲಕ್ಕೆ ಉರುಳಿಸಿ, ಹೊಡೆದ ಶಬಲ, ಶಂಬುಶಿರ, ವಜ್ರನಾಭ ಮೊದಲಾದ ಯುದ್ಧಶೂರ ರಾಕ್ಷಸರನ್ನು ಗುಹನು ಒಂದು ನಿಮಿಷದಲ್ಲಿ ಮೂರ್ಛೆಗೊಳಿಸಿದನು. ೫೮. ಸಾಯುವವರಿಗೆ ಮೇರೆಯಿಲ್ಲ. ವಾಹನದ ಮೇಲಿನಿಂದ ಬೀಳುವವರಿಗೆ ಮಿತಿಯಿಲ್ಲ. ಗಾಯಗಳಿಂದ ಮೂರ್ಛೆಗೊಳ್ಳುವವರಿಗೆ ಲೆಕ್ಕವಿಲ್ಲ. ಅರ್ಧಜೀವವಾಗಿ, ಕೈಕಾಲು ಕತ್ತರಿಸಿ ಅರ್ಧಕಣ್ಣುಗಳನ್ನು ಬಿಡುವವರಿಗೆ ಲೆಕ್ಕವಿಲ್ಲ. ಬಾಣದ ಉರುಬಿನಿಂದ ಎದೆಗಳು ಒಡೆಯುವವರಿಗೆ ಮೇರೆಯಿಲ್ಲ. ಎಲ್ಲೆಲ್ಲೂ ಸುಳಿದಾಡಿ ಬೆನ್ನು ಕೊಡುವವರಿಗೆ ಕೊನೆಯಿಲ್ಲವೆನ್ನಲು ಆ ರಾಕ್ಷಸಸೈನ್ಯ ಚದುರಿತು, ಅದ್ಭುತವನ್ನು ಏನು ಹೇಳಲಿ ? ೫೯. ವಿಷ್ಣು-ಬ್ರಹ್ಮ ಮೊದಲಾದ ದೇವಸಮೂಹ ಬೆನ್ನಟ್ಟಿತು. ರಾಕ್ಷಸರು ಆನೆ, ಕುದುರೆ, ತೇರುಗಳನ್ನು ಅಲ್ಲಲ್ಲಿಯೇ ಬಿಟ್ಟು ಕಂಗೆಟ್ಟು, ಭ್ರಮಿತರಾಗಿ, ಎದೆಗುಂದಿ ಅತಿಯಾದ ದೈನ್ಯದಿಂದ ಎಂಜಲಿಗೆ ಕೈನೀಡಿ, ಗಡ್ಡಮೀಸೆಯೊಡಗೂಡಿ, 'ನಿಮ್ಮ ಹೊಟ್ಟೆಯಿಂದ ಬಂದ ಮಕ್ಕಳು ನಾವು,' ಎಂದು ಭಟರ ಸಮೂಹ ಬಿಡಿಸಿಕೊಂಡು ತಮ್ಮ ಪಾಳಯವನ್ನು

CC-0. Jangamwadi Math Collection. Digitized by eGangotri

ಓಡುವಸುರಾಳಿಯಂ ಸುರರಿರಗೆ ಬೆಂಬತ್ತಿ
ಕೂಡೆ ಪೊಕ್ಕರ್ ಪಾಳೆಯಂಗಳಂ ಬಲ್ಸೂರೆ
ಮಾಡಿ ಗೂಡಾರವಂ ಕೊಯ್ದು ತಮತಮಗೆ ಸೂಳೆಯರ ಕೈಸೆರೆಯ ಪಿಡಿದು
ಮಾಡಿದರ್ ಸಕಲರ್ಗೆ ಭೀತಿಯಂ ಜಯದೊಳೋ
ಲಾಡಿದರ್ ಬಿಂಕದಿಂ ಜಯಭೇರಿಯಂ ಪೊಯ್ಸು
ತಾಡಲೇನಾ ಷಣ್ಮುಖಂ ತಿರುಗಿದಂ ತಮ್ಮ ಪಾಳೆಯಕೆ ಸಂಭ್ರಮದೊಳು ೬೦

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ ೬೧

ನಲವತ್ತೊಂಬತ್ತನೆಯ ಸಂಧಿ ಸಂಪೂರ್ಣ

ಸೇರಿತು, ಆಶ್ಚರ್ಯವನ್ನು ಏನು ಹೇಳಲಿ ? ೬೦. ಓಡುವ ರಾಕ್ಷಸಸಮೂಹವನ್ನು ದೇವತೆಗಳು ತಡೆಯದೆ ಬೆನ್ನಟ್ಟಿ, ಒಡನೆಯೇ ಅವರ ಪಾಳಯಗಳನ್ನು ಹೊಕ್ಕು ಸೂರೆ ಮಾಡಿ, ಗೂಡಾರವನ್ನು ಕೊಯಿದು, ಸೂಳೆಯರನ್ನು ಕೈಸೆರೆ ಹಿಡಿದು, ಎಲ್ಲರಿಗೂ ಭೀತಿಯನ್ನುಂಟುಮಾಡಿದರು, ತಮಗಾದ ವಿಜಯದಲ್ಲಿ ಓಲಾಡಿದರು, ಏನು ಹೇಳಲಿ ? ಬಿಂಕದಿಂದ ಜಯಭೇರಿಯನ್ನು ಹೊಡೆಸುತ್ತಾ ಷಣ್ಮುಖನು ಸಂಭ್ರಮದಿಂದ ತನ್ನ ಪಾಳಯಕ್ಕೆ ಹಿಂತಿರುಗಿದನು. ೬೧. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ, ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ನಲವತ್ತೊಂಬತ್ತನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ಐವತ್ತನೆಯ ಸಂಧಿ

ಸೂಚನೆ : ಧುರದೊಳಂಧಾಸುರಂ ಹರನೊಡನೆ ಕಾದಲಾ
ಪರಶಿವಂ ಶೂಲದಿಂದಿರಿದೆತ್ತೆ ನುತಿಸಲವ
ಕರುಣದಿಂದವನ ಹೃದಯಾಂಗಣದೆ ನಟಿಸಿ ಗಣಪದವಿಯಂ ಕೊಟ್ಟನೊಲಿದು

ಕಮಲನೇತ್ರಾಂಬಕ ಸುಪೂಜಿತಪದಾಂಭೋಜ
ಕಮಲಗರ್ಭೋದಯಕುಮಾರಕಶಿರಶ್ಛೇದ
ಕಮಲಸಖಪುತ್ರಗಾತ್ರಾರಣ್ಯಘನದಾವಕಮಲ ಕಮಲಾರಿಧರನೇ
ಕಮಲಮಿತ್ರಾಬ್ಜವಹ್ನಿತ್ರಿಲೋಚನಮೆಸೆವ
ಕಮಲಾಕುಮಾರದಹನೀಕೃತ ಸುಭಸಿತಾಂಗ
ಕಮಲಾಪ್ತಕೋಟಿಪ್ರಕಾಶ ಜಯ ಪಂಪಾವಿರೂಪಾಕ್ಷ ಸುಜನರಕ್ಷಾ ೧

ಘನಮಹಿಮ ಚೆನ್ನಬಸವಣ್ಣ ನೀಂ ಮುಂಗಥೆಯ
ನನುನಯದೆ ಪೇಳೆನಲ್ ಸಿದ್ಧರಾಮೇಶಂಗೆ
ವಿನಯದಿಂ ಪೇಳ್ದನಾ ಸಮಯದೊಳಗಿನನಪರವಾರ್ಧಿಗಿಳಿದಂ ಭರದೊಳು
ನೆನೆದು ರಣಭಂಗಮಂ ಸಕಲದೈತ್ಯರ್ ತಮ್ಮ
ಮನದಹಂಕೃತಮಳಿದು ದುಃಖದಿಂ ನೋವುತಿ
ರ್ಪನಮಂಧಕಾಸುರಂ ಕರೆಸಿದಂ ದೊರೆದೊರೆಗಳಂ ಮಂತಣಂಗೆಯ್ಯಲು ೨

ಸೂಚನೆ : ಅಂಧಾಸುರನು ಶಿವನೊಡನೆ ಯುದ್ಧಮಾಡಿದನು. ಪರಶಿವನು ಶೂಲದಿಂದ ಸೀಳಿ ಎತ್ತಲು ಅಂಧಾಸುರನು ಪ್ರಾರ್ಥಿಸಿದನು. ಆಗ ಶಿವನು ಕರುಣೆಯಿಂದ ಒಲಿದು ಅವನ ಹೃದಯದಲ್ಲಿ ನಟಿಸಿ ಪ್ರೀತಿಯಿಂದ ಗಣಪದವಿಯನ್ನು ಕೊಟ್ಟನು. ೧. ವಿಷ್ಣುವಿನಿಂದ ಪೂಜೆಗೊಳ್ಳುವ ಪಾದಕಮಲವುಳ್ಳವನು, ಬ್ರಹ್ಮನ ಮಗನಾದ ದಕ್ಷನ ಶಿರವನ್ನು ಕತ್ತರಿಸಿದವನು, ಸೂರ್ಯನ ಮಗನಾದ ಯಮನೆಂಬ ಭೀಕರವಾದ ಅರಣ್ಯಕ್ಕೆ ಕಾಳ್ಗಿಚ್ಚಿನಂತಿರುವವನೇ, ಚಂದ್ರಶೇಖರ, ಸೂರ್ಯ–ಚಂದ್ರ ಅಗ್ನಿಯನ್ನು ಮೂರುಕಣ್ಣಾಗಿ ಉಳ್ಳವ, ಖ್ಯಾತಳಾದ ಲಕ್ಷ್ಮಿಯ ಮಗ, ಮನ್ಮಥನನ್ನು ಸುಟ್ಟ ಬೂದಿಯನ್ನು ಶರೀರದಲ್ಲಿ ಲೇಪಿಸಿಕೊಂಡವನು, ಕೋಟಿಸೂರ್ಯ ಪ್ರಕಾಶ, ಸುಜನ ರಕ್ಷಕನಾದ ಪಂಪಾವಿರೂಪಾಕ್ಷ, ನಿನಗೆ ಜಯವಾಗಲಿ. ೨. ಘನ ಮಹಿಮೆಯುಳ್ಳವನಾದ ಚನ್ನಬಸವಣ್ಣ ನೀನು ಮುಂದಿನ ಕಥೆಯನ್ನು ಮನವೊಲಿದು ಹೇಳು ಎನ್ನಲು ಸಿದ್ಧರಾಮನಿಗೆ ವಿನಯದಿಂದ ಹೇಳಿದನು. ಆ ವೇಳೆಗೆ ಸೂರ್ಯನು ಬೇಗನೆ ಪಶ್ಚಿಮ ಸಮುದ್ರದಲ್ಲಿಳಿದನು ಎಂದರೆ (ಸೂರ್ಯಾಸ್ತವಾಯಿತು.) ಯುದ್ಧದ ಸೋಲನ್ನು ನೆನೆದು ಎಲ್ಲ ರಾಕ್ಷಸರೂ ತಮ್ಮ ಮನಸ್ಸಿನ ಅಹಂಕಾರವನ್ನು ಬಿಟ್ಟು ದುಃಖದಿಂದ ನೋಯುತ್ತಿರಲು ಅಂಧಕಾಸುರನು ನಾಯಕರುಗಳನ್ನು ಮಂತ್ರಾಲೋಚನೆಗಾಗಿ ಕರೆಸಿದನು.

CC-0. Jangamwadi Math Collection. Digitized by eGangotri

ಮುಸುಕುವಲೆಗಳ ಪೋದಹಂಕೃತದ ನಿಷ್ಕಳೆಯು
ಮುಸುಡುಗಳ ಮೆಲ್ಲಮೆಲ್ಲನೆ ಬರ್ಪ ನಡೆಯು ಜಾ
ನಿಸುವ ಬಗೆಗಳ ಪೊತ್ತ ದುಗುಡಗಳ ಕೆಳಗೆ ನಿಟ್ಟಿಪ ನೋಟಗಳ ಸನ್ನೆಯು
ಪಿಸುಮಾತುಗಳ ನೆಗಳ್ದ ಸುಯಿಲ ನಾಚಿಕೆಯು ಗುಹ
ನೆಸುಗೆಯಿಂ ಸೀಳ್ದ ಮೆಯ್ಗಳ ಖಳರ್ ಬಂದು ಮು
ಡಿಸಿದರೋರೊರ್ವರೊರ್ವರ ಮರೆಯೊಳತ್ತಿತ್ತ ಮಿಸುಕದೇಂ ವರ್ಣಿಸುವೆನು ೩

ಘೋರ್ಗರೆಯದೊಪ್ಪುವ ಸಮುದ್ರದಂತೊಂದರೆ ತ
ಳಿರ್ಗದಲದಿರ್ಪ ವನದಂತೆ ಗುಡುಗುಡು ಮಾಣ್ದ
ಕಾರ್ಗಾಲದಬ್ದಮಾಲೆಗಳಂತೆ ಮೌನಮಂ ತಾಳ್ದ ಮಹಾಸಭೆಯೊಳು
ದೋರ್ಗರ್ವಮುಳಿದ ಭಟರಂ ಮಿತ್ರರಂ ಬಂಧು
ವರ್ಗಂಗಳಂ ನೋಡಿ ಬೇರೆಬೇರನಿಬರ ಪೆ
ಸರ್ಗಳಿಂ ಕರೆದು ಪೊರೆಯೊಳ್ ಕುಳ್ಳಿರಿಸಿಯಂಧಕಾಸುರನವರ್ಗೆಂದವನು ೪

ಚಿಂತೆಯೇತಕ್ಕಿರಿತ ಮುರಿತಮಿವು ಸಮರದೊಳ
ಗೆಂತಪ್ಪವರ್ಗಾದೊಡಂ ಬರ್ಪುವೀ ವ್ಯರ್ಥ
ಭ್ರಾಂತಿ ಬೇಡೆಂದೆಲ್ಲರಂ ತಿಳಿಪಿ ತನ್ನಾಪ್ತರಂ ಕರೆದು ವಿನಯದಿಂದೆ
ಪಿಂತಾದ ಕಾಳಗದೊಳೆಮ್ಮಾ ಜಯಾಪಜಯ
ಮಂತಿರ್ಕೆ ಬಹುಕಾಲಮಾಯ್ತು ರಣಮಾ ಪಗೆಯ
ನೆಂತು ಸಂಹರಿಸವೇಳ್ಕೆಂಬುದಂ ತಿಳಿದೆಮಗೆ ಪೇಳಿರೈ ನೀವೆಂದನು ೫

೩. ಮುಸುಕು ಹಾಕಿದ ತಲೆಗಳ, ನಾಶವಾದ ಅಹಂಕಾರದ, ಕಳಾಹೀನವಾದ ಮುಖಗಳ, ಮೆಲ್ಲಮೆಲ್ಲಗೆ ಬರುವ ನಡಿಗೆಯ, ಆಲೋಚನಾಪರವಾದ ಮನಸ್ಸುಗಳ ಹೊತ್ತ ದುಗುಡಗಳ, ಕೆಳಗೆ ನೋಡುವ ನೋಟಗಳ, ಸನ್ನೆಯ, ಪಿಸುಮಾತುಗಳ, ಬಿಡುವ ನಿಟ್ಟುಸಿರ, ಅಪಮಾನಿತವಾದ, ಷಣ್ಮುಖನ ಬಾಣಗಳಿಂದ ಸೀಳಿದ ಮೈಗಳನ್ನುಳ್ಳ ರಾಕ್ಷಸರು ಬಂದು ಒಬ್ಬರ ಮರೆಯಲ್ಲಿ ಒಬ್ಬರು ಅತ್ತಿತ್ತ ಅಲ್ಲಾಡದೆ ಕುಳಿತರು. ಅದನ್ನು ಏನೆಂದು ವರ್ಣಿಸಲಿ ? ೪. ಭೋರ್ಗರೆಯದೆ ಇರುವ ಸಮುದ್ರದಂತೆ, ಕೊಂಬೆಯ ಒಂದು ಚಿಗುರು ಸಹ ಅಲ್ಲಾಡದ ಕಾಡಿನಂತೆ, ಗುಡು ಗುಡು ಶಬ್ದವನ್ನು ಬಿಟ್ಟ ಮಳೆಗಾಲದ ಮೋಡಗಳ ಸಮೂಹದಂತೆ, ಮೌನವನ್ನು ತಾಳಿದ ಆ ದೊಡ್ಡ ಸಭೆಯಲ್ಲಿ ಅತಿಯಾದ ಬಾಹುಬಲವುಳ್ಳವರೆಂಬ ಅಹಂಕಾರ ಬಿಟ್ಟ ಭಟರನ್ನು, ಸ್ನೇಹಿತರನ್ನು, ಬಂಧುವರ್ಗವನ್ನು ಅಂಧಕಾಸುರನು ನೋಡಿ ಬೇರೆಬೇರೆಯಾಗಿ ಅವರೆಲ್ಲರ ಹೆಸರುಗಳನ್ನು ಹೇಳಿ ಕರೆದು, ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಅವರಿಗೆ ಹೇಳಿದನು. ೫. ಚಿಂತೆಯೇಕೆ ? ಸೋಲು ಗೆಲವುಗಳು ಯುದ್ಧದಲ್ಲಿ ಎಂತಹವರಿಗಾದರೂ ಬರುವುದೇ ಸಹಜ. ಈ ವ್ಯರ್ಥವಾದ ಭ್ರಾಂತಿಬೇಡ ಎಂದು ಎಲ್ಲರಿಗೂ ತಿಳಿಯಹೇಳಿ ತನ್ನ ಆಪ್ತರನ್ನು ಕರೆದು ವಿನಯದಿಂದ ಹಿಂದೆ ಆಗಿ ಹೋದ ಯುದ್ಧದಲ್ಲಿ ನಮ್ಮ ಈ ಜಯಾಪಜಯಗಳು ಹಾಗಿರಲಿ ಯುದ್ಧ ಬಹಳ ಧೀರ್ಘವಾಯಿತು. ಆ ಶತ್ರುವನ್ನು ಯಾವ ರೀತಿ ಸಂಹಾರ ಮಾಡಬೇಕೆಂಬುದನ್ನು

CC-0. Jangamwadi Math Collection. Digitized by eGangotri

ಆ ಮಾತನೆಲ್ಲರುಂ ಕೇಳ್ದು ಮೌನಂದಾಳ್ದು
ತಾವೊರ್ವರೊರ್ವರ ಮೊಗಂ ನೋಡುತಿರೆ ಮಹಾ
ಭೀಮಾಂಗನಾ ಗಗನಮೂರ್ಧ್ನಿಯಂಧಾಸುರನ ಸಮ್ಮುಖದೊಳೆಳ್ದು ನಿಂದು
ಈ ಮಹಾಸಭೆಯ ವೀರರ್ಕಳಿರೆ ರಿಪುವಂ ವಿ
ರಾಮವೆನಿಪುದು ನಿನಗೆ ಚೋದ್ಯಮಲ್ಲಾದೊಡೆ
ನ್ನೀ ಮನಕೆ ತೋರಿದುದನುಸಿರ್ದಪೆನದಂ ಕೇಳಿಮೆಂದು ಮತ್ತಿಂತೆಂದನು ೬

ಅಂದು ಮೊದಲಾಗಿ ಪಗಲಿನ ಸಮರದಿಂದೆಮಗೆ
ಬಂದುದಪಜಯಮಾವ್ ನಿಶಾಚರರ್ ನೋಡಲದ
ರಿಂದಿರುಳ್ಗಾಳೆಗಂ ಜಯಮಪ್ಪುದೆಮಗೆ ನಮ್ಮಾ ಸರ್ವಶಕ್ತಿವೆರಸಿ
ಇಂದು ಜಯಿಸಿದ ಗೆಲ್ಲದೊಳ್ ಮೆಯ್ಗಳಂ ಮರೆದು
ಸಂದ ಗರ್ವದೊಳೊರಂಗಿದ ಸಕಲದೇವತಾ
ವೃಂದಮಂ ಕೊಲಲಕ್ಕುಮಿದು ನಿಶ್ಚಯಂ ಮನಕೆ ಬರ್ಪೊಡೆಸಗುವುದೆಂದನು ೭

ಸಹಜಮೆಂದಂ ಶುಂಭನೊಪ್ಪಿದಂ ಶರಭನದ
ಸಹುದೆಂದನಂಧಕಾಸುರನುಳಿದರೆಲ್ಲರುಂ
ವಹಿಸಿಕೊಂಡರ್ ಗಗನಮೂರ್ಧ್ನಿಮತಮೇ ತಮ್ಮ ಮತಮೆಂದು ತತ್ಕ್ಷಣದೊಳು
ಗಹಗಹಿಸಿದಂ ಪ್ರಹಲ್ಲಾದನರಿದರಿದು ಮರು
ಳಹರನುರೆ ಕಂಡುಕಂಡುಂ ಕಾಣದಿರ್ಪ ದು
ರ್ಮಹಿಪಸ್ವರೂಪರಂ ತಿಳಿಪಲೀಶಂಗೆ ವಶಮಲ್ಲಮೆಂದಿಂತೆಂದನು ೮

ತಿಳಿದು ನಮಗೆ ಹೇಳಿರಿ ಎಂದನು. ೬. ಆ ಮಾತನ್ನು ಕೇಳಿ ಎಲ್ಲರೂ ಮೌನ ವಹಿಸಿ, ಒಬ್ಬರ ಮುಖವನ್ನೊಬ್ಬರು ನೋಡುತ್ತಿರಲು, ಮಹಾಭೀಕರವಾದ ಆಕಾರದ ಗಗನ ಮೂರ್ಧ್ನಿ ಅಂಧಕಾಸುರನ ಎದುರಿಗೆ ಎದ್ದುನಿಂತು, ಈ ಮಹಾಸಭೆಯ ವೀರರುಗಳಿರು ವಾಗ ಶತ್ರುವನ್ನು ಸಂಪೂರ್ಣವಾಗಿ ನಾಶ ಮಾಡುವುದು ನಿಮಗೆ ಆಶ್ಚರ್ಯದ ಸಂಗತಿಯೇನೂ ಅಲ್ಲ. ಆದರೆ ನನ್ನ ಮನಸ್ಸಿಗೆ ತೋರಿದುದನ್ನು ಹೇಳುತ್ತೇನೆ, ಕೇಳಿ ಎಂದು ಮತ್ತೆ ಹೀಗೆಂದನು. ೭. ಇದೇ ಮೊದಲಬಾರಿಗೆ ಹಗಲಿನ ಯುದ್ಧದಲ್ಲಿ ನಮಗೆ ಸೋಲುಂಟಾಗಿದೆ. ನಾವು ನಿಶಾಚರರು. ಆದ್ದರಿಂದ ಆಲೋಚಿಸುವುದಾದರೆ ರಾತ್ರಿ ಯುದ್ಧದಲ್ಲಿ ನಮಗೆ ಜಯವಾಗುತ್ತದೆ. ನಮ್ಮ ಎಲ್ಲ ಶಕ್ತಿಯನ್ನೂ ಕೂಡಿಸಿಕೊಂಡರೆ ಈ ದಿನ ಗೆದ್ದ ಗೆಲುವಿನಲ್ಲಿ ಮೈಮರೆತು ಉಂಟಾದ ಅಹಂಕಾರದಿಂದ ನಿದ್ದೆ ಮಾಡುತ್ತಿರುವ ಎಲ್ಲ ದೇವತಾಸಮೂಹವನ್ನೂ ಕೊಲ್ಲಲು ಸಾಧ್ಯವಾಗುತ್ತದೆ. ಇದು ನಿಶ್ಚಯ. ನಿಮ್ಮ ಮನಸ್ಸಿಗೆ ಸರಿತೋರಿದರೆ ಅದರಂತೆ ಮಾಡುವುದು ಎಂದನು. ೮. ಶುಂಭನು ಇದು ಸಹಜವೆಂದನು. ಶರಭನು ಇದಕ್ಕೊಪ್ಪಿದನು. ಅಂಧಕಾಸುರನು ಕೂಡ ಇದು ಸರಿ ಯೆಂದನು. ಉಳಿದವರೆಲ್ಲರೂ ಗಗನಮೂರ್ಧ್ನಿಯ ಅಭಿಪ್ರಾಯವೇ ತಮ್ಮ ಅಭಿಪ್ರಾಯವೆಂದು ಒಪ್ಪಿಕೊಂಡರು. ಆಕ್ಷಣದಲ್ಲಿ ಪ್ರಹಲ್ಲಾದನು ಗಹಗಹಿಸಿ ನಕ್ಕನು. ತಿಳಿದೂ ತಿಳಿದೂ ಮೂರ್ಖರಾಗುವವರನ್ನೂ, ನೋಡಿ ನೋಡಿಯೂ ಕಾಣದೆಹೋಗುವ

CC-0. Jangamwadi Math Collection. Digitized by eGangotri

ಶತಮಾಯ ಜಂಭ ಬಲ ನಮುಚಿ ವೃತ್ರರ್ಗೆ ಮುಂ
ಪ್ರತಿಮಾನರುಂಟೆ ಸಮರದೊಳವರ್ ಮೊದಲಾದ
ರತಿಮಾನಮಡಗಿ ಮಡಿದರ್ ಸತ್ತು ಬಲಕೆ ಕಡೆಗಾಣೆನೀ ರಕ್ಕಸರೊಳು
ಕ್ಷತಮಾಗದವರದಾರ್ ತೋರಹಿತಬಲದೊಳಗೆ
ಹತಮಾದರಾರೆಣಿಸು ಬೇಗ ಶಿವನಡಿಗಳ್ಗೆ
ನತಮಾಗು ಮರುಳ್ವರಂ ನಂಬಿ ಕೆಡಬೇಡ ಪೇಳ್ದೆಂ ತ್ರಿವಚನದೊಳೆಂದನು ೯

ಎನೆ ಕೇಳ್ದು ಗುಡುಗುಡಿಸಿ ಕಣ್ಗಳೊಳ್ ಕಿಡಿಗೆದರಿ
ಕನಲುತಂಧಾಸುರಂ ನುಡಿದನಿವನಂತೆ ಯೋ
ಚನೆಗೆ ಕರೆದೆವೆ ನಿನ್ನನರಿಚಬೇಡೆಂದು ಪ್ರಹಲ್ಲಾದನಂ ಜರೆದು ನುಡಿಯೆ
ದನುಜಸೇನಾಪತಿತ್ವಕೆ ಗಗನಮೂರ್ಧ್ನಿಗುರೆ
ಮನವೊಲಿದು ಮೂರ್ಧ್ನಾಭಿಷೇಚನಂ ಗೆಯ್ದೀಗ
ನೆನೆದ ಕಾರ್ಯಮನೆಸಗಿಯೆಂದು ವೀಳೆಯವಿತ್ತು ಕಗ್ಗೊಲೆಗೆ ಬೀಳ್ಕೊಟ್ಟನು ೧೦

ಕರಿಯ ಘಂಟೆಗಳ ಕುದುರೆಗಳ ನಾಲಗೆಗಳಂ
ಸರಮುಣ್ಮದೊಲ್ ಕಟ್ಟಿ ಪಂಜುವೊತ್ತಿಸದೆ ಪರಿ
ಪರಿಯ ವಾದ್ಯಂಗಳಂ ಬಾಜಿಸದೆ ಗುಪ್ತದಿಂ ಸರ್ವಸನ್ನಾಹಮಾಗಿ
ದೊರೆದೊರೆಗಳೇ ಹೂಣೆಹೊಕ್ಕಂದಿನಲ್ಲಿ ತಮ
ಗೆರಡರೊಳಗೊಂದಾಗವೇಳ್ಕೆಂದು ಬಂದು ಪುರ
ಹರನ ಪಾಳೆಯದ ಸುತ್ತೆತ್ತಲುಂ ಮೋಹರಿಸಿ ನಿಂದರೇಂ ವಣ್ಣಿಸುವೆನು ೧೧

ಕೆಟ್ಟ ಕೋಣದಂಥವರಿಗೆ ಬುದ್ಧಿ ಹೇಳಲು ಈಶ್ವರನಿಗೂ ಸಾಧ್ಯವಿಲ್ಲವೆಂದು ಹೀಗೆ ಹೇಳಿದನು. ೯. ಶತಮಾಯ, ಜಂಭ, ಬಲ, ನಮುಚಿ, ವೃತ್ರರಿಗೆ ಮಿಗಿಲಾದ ಸಮರ್ಥರುಂಟೆ ? ಯುದ್ಧದಲ್ಲಿ ಅವರೇ ಮೊದಲಾದವರು ಅತಿಯಾದ ಮಾನವಡಗಿ ಸತ್ತುಹೋದರು. ಸತ್ತ ಸೈನಕ್ಕೆ ಲೆಕ್ಕವಿಲ್ಲ. ಈ ರಾಕ್ಷಸರಲ್ಲಿ ಗಾಯಗೊಳ್ಳದವರು ಯಾರು ? ಶತ್ರುಸೈನ್ಯದಲ್ಲಿ ಸತ್ತವರು ಯಾರು ತೋರಿಸು ? ಲೆಕ್ಕ ಹಾಕು. ಕೂಡಲೇ ಶಿವನ ಪಾದಗಳಿಗೆ ಶರಣಾಗು. ಮೂರ್ಖರನ್ನು ನಂಬಿ ಹಾಳಾಗಬೇಡ, ಮೂರು ಮಾತಿನಲ್ಲಿ ಹೇಳಿದ್ದೇನೆ ಎಂದನು. ೧೦. ಪ್ರಹ್ಲಾದನು ಹೀಗೆನ್ನಲು ಕೇಳಿ ಗುಡುಗುಡಿಸಿ ಕಣ್ಣುಗಳಲ್ಲಿ ಕಿಡಿಕಾರಿ ಕೋಪಗೊಳ್ಳುತ್ತ ಅಂಧಾಸುರನು : ಇವನು ಹೇಳಿದನಂತೆ ! ನಿನ್ನನ್ನು ಮಂತ್ರಾಲೋಚನೆಗೆ ಕರೆದೆವೆ ? ಬೊಗಳಬೇಡ ಎಂದು ಪ್ರಹ್ಲಾದನನ್ನು ಹೀಯಾಳಿಸಿ ಮಾತನಾಡಲು ರಾಕ್ಷಸಸೇನಾಧಿಪತ್ಯಕ್ಕೆ ಗಗನಮೂರ್ಧ್ನಿಗೆ ಮನಸ್ಸಿನಲ್ಲಿ ನಿಶ್ಚಯಿಸಿ ಅವನಿಗೆ ಸೇನಾಪತಿಯ ಪಟ್ಟಾಭಿಷೇಕವನ್ನು ಮಾಡಿ 'ಈಗ ನಾವು ಆಲೋಚಿಸಿದ ಕೆಲಸವನ್ನು ಮಾಡಿ' ಎಂದು ವೀಳೆಯ ಕೊಟ್ಟು ಕಗ್ಗೊಲೆಗೆ ಅವರನ್ನು ಕಳುಹಿಸಿದನು. ೧೧. ಆನೆಯ ಘಂಟೆಗಳು, ಕುದರೆಗಳ ನಾಲಿಗೆಗಳನ್ನು ಶಬ್ದ ಹೊರಡದಂತೆ ಕಟ್ಟಿ, ಪಂಜನ್ನು ಹತ್ತಿಸದೆ, ನಾನಾರೀತಿ ವಾದ್ಯಗಳನ್ನು ಬಾರಿಸದೆ, ಗುಪ್ತವಾಗಿ ಸಕಲ ಸನ್ನಾಹಮಾಡಿಕೊಂಡು ನಾಯಕ ನಾಯಕರುಗಳೇ ಪ್ರತಿಜ್ಞೆಮಾಡಿ ಆದಿನ ತಮಗೆ

CC-0. Jangamwadi Math Collection. Digitized by eGangotri

ಎಲೆ ಸಿದ್ಧರಾಮ ಕೇಳ್ ಖಳರನುರೆ ನೋಯಿಸಿದ
ಗೆಲವಿನೊಳ್ ಪಹರೆಪಡೆ ಕಳಮೆಲ್ಲಮುಂ ಮರೆದು
ಮಲಗಿದರ್ ಸಕಲರುಂ ಮತ್ತಲ್ಲದಾ ಖಳರ್ ಬೇಳುವೆಯ ಬೂದಿಯೂಡಿ
ತಳಿ ಬೇಲಿ ಬದ್ದರಗಳಂ ಮುರಿದುಕೊಂಡೊಯ್ಯ
ನೊಳಪೊಕ್ಕು ಸುರಪ ಹರಿ ಬ್ರಹ್ಮರಿಹ ಪಾಳೆಯಂ
ಗಳ ಮೇಲೆ ಬಿಳ್ದು ಕೊಲತೊಡಗಿದರ್ ತಮ್ಮಿಚ್ಛೆಯಿಂದದೇಂ ವರ್ಣಿಸುವೆನು ೧೨

ಮರೆದೊರಂಗಿದರನಿರಿದಿರಿದೌಂಕಿ ಕೊರಳ್ಗಳಂ
ಕೊರೆದೆಚ್ಚರೊಳಗೇಳ್ವರಂ ಮೆಟ್ಟಿ ಕಾಲ್ವಿಡಿದು
ಸರಸರನೆ ಸೀಳ್ದರೆಳ್ದೋಡುವರನಟ್ಟಿ ಪಿಡಿದೊತ್ತಿ ನಡು ಕೈಕಾಲ್ಗಳಂ
ಮುರಿದಿಟ್ಟರೆತ್ತಾನುಮಿದಿರಾದೊಡಲ್ಗಳಂ
ತರಿತರಿದು ಕತ್ತರಿಸಿ ಕೊಚ್ಚಿ ಖಂಡಿಸಿ ಪಲವು
ತೆರದೊಳರೆಗೊಲೆಗಳಂ ನೆರೆಕೊಂದು ಕೊಲೆಯಾಡಿದರ್ ಖಳರದೇಂ ಪೊಗಳ್ವೆನು ೧೩

ಆಳ ಕಾಲ್ವಿಡಿದು ಭಟರಂ ಬಡಿದು ಕುದುರೆಗಳ
ಬಾಲಮಂ ಪಿಡಿದು ತೇಜಿಗಳನಪ್ಪಳಿಸಿ ಶುಂ
ಡಾಲಂಗಳಂ ಪಿಡಿದು ಕರಿಗಳಂ ಸದೆದು ತೇರಿಂದಂ ವರೂಥಂಗಳ
ಸಾಲನಡಿಹುಡಿಮಾಡಿ ಭಂಡಾರಬೊಕ್ಕಸದ
ಶಾಲೆಗಳನುರೆ ಸೂರೆಮಾಡಿ ಪಲತೆರದೊಳಾ
ಕಾಳರಕ್ಕಸರಟ್ಟಿ ಮುಟ್ಟಿ ಕೊಲುತಿರ್ದರೇನೆಂದೆಂಬೆನಚ್ಚರಿಯನು ೧೪

ಎರಡರಲ್ಲಿ ಒಂದಾಗಬೇಕು ಎಂದು ಬಂದು ಶಿವನ ಪಾಳೆಯದ ಸುತ್ತ ಎಲ್ಲ ಕಡೆಯೂ ಗುಂಪುಗೂಡಿ ನಿಂತರು. ಅದೇನೆಂದು ಬಣ್ಣಿಸಲಿ ? ೧೨. ಎಲೆ ಸಿದ್ಧರಾಮ, ಕೇಳು, ರಾಕ್ಷಸರನ್ನು ಚೆನ್ನಾಗಿ ನೋಯಿಸಿದ ಜಯದಿಂದ ಪಹರೆಯ ಪಡೆ ಯುದ್ಧರಂಗವನ್ನೆಲ್ಲ ಮರೆತು ಮಲಗಿದರು. ಎಲ್ಲರನ್ನೂ ಮುತ್ತಿದುದಲ್ಲದೆ ಆ ರಾಕ್ಷಸರು ಚಿಂತೆಯ ಬೂದಿ ಎರಚಿ ಪಾಳೆಯ, ಬೇಲಿ, ಎತ್ತು, ಆನೆಗಳನ್ನು ನಾಶಮಾಡಿ ಬೇಗನೆ ಒಳಹೊಕ್ಕು ದೇವೇಂದ್ರ, ಬ್ರಹ್ಮ, ವಿಷ್ಣುಗಳಿರುವ ಪಾಳೆಯಗಳ ಮೇಲೆ ಬಿದ್ದು ತಮ್ಮ ಮನಸ್ಸಿಗೆ ಬಂದಂತೆ ಕೊಲ್ಲತೊಡಗಿದರು. ಅದೇನು ವರ್ಣಿಸಲಿ ? ೧೩. ಆ ಖಳರು ಮರೆತು ಮಲಗಿದವರನ್ನು ತಿವಿದು, ಔಕಿ, ಕುತ್ತಿಗೆಗಳನ್ನು ಕೊರೆದು, ಎಚ್ಚರಗೊಂಡು ಏಳುವವರನ್ನು ತುಳಿದು, ಕಾಲನ್ನು ಹಿಡಿದು ಸರಸರನೆ ಸೀಳಿದರು. ಎದ್ದೋಡುವವರನ್ನು ಬೆನ್ನಟ್ಟಿ ಹಿಡಿದು ಒತ್ತಿ, ಸೊಂಟ-ಕೈಕಾಲುಗಳನ್ನು ಮುರಿದು ಎಸೆದರು. ಹೇಗಾದರೂ ಎದುರಾದವರ ಶರೀರಗಳನ್ನೂ ತರಿತರಿದು ಕತ್ತರಿಸಿ, ಕೊಚ್ಚಿ ತುಂಡುಮಾಡಿ ಹಲವು ರೀತಿಯಲ್ಲಿ ಅರೆಜೀವ ಮಾಡಿ, ಕೊಂದು-ಕೊಲೆಮಾಡಿದರು. ೧೪. ಆಳುಗಳ ಕಾಲು ಹಿಡಿದು, ಭಟರನ್ನು ಬಡಿದು, ಕುದುರೆಗಳ ಬಾಲವನ್ನು ಹಿಡಿದು ಅಪ್ಪಳಿಸಿ, ಆನೆಗಳ ಸೊಂಡಿಲುಗಳನ್ನು ಹಿಡಿದು ಸದೆಬಡಿದು, ಗುಂಪುಗೂಡಿ ರಥಗಳ ಸಾಲನ್ನೂ ಪುಡಿ ಪುಡಿ ಮಾಡಿ, ಭಂಡಾರ–ಬೊಕ್ಕಸದ ಶಾಲೆಗಳನ್ನು ಸೂರೆಮಾಡಿ ಹಲವು ರೀತಿಯಲ್ಲಿ ಆ

CC-0. Jangamwadi Math Collection. Digitized by eGangotri

ಬೊಬ್ಬಾಟಮಾದುದೆಲ್ಲೆಲ್ಲಿಯುಂ ಸಕಲರುಂ
ಬೆಬ್ಬಳಿಸುತೆಲೆಲೆ ಹೋಹೋ ಕಡಿಯೆನುತ್ತೆ ಬಿಡ
ದಬ್ಬರಿಸಿ ನಿರ್ಗಂತದಿಂದೆಳ್ದು ಕೈದುವಂ ಮರೆದು ತಲೆಗೆದರಿ ಕೂಡೆ
ತಬ್ಬಿಬ್ಬುಗೊಂಡು ತಮ್ಮೊಳ್ ತಾವೆ ಸಿಲ್ಕಿದಂ
ತಬ್ಬಿಹಿಡಿ ಹೊಯ್ ಹೊಯ್ಯೆನುತ್ತೆ ಕೊಲ್ಲದ ಕೊಲೆಯು
ಹಬ್ಬದೊಳ್ ಮಣಿದು ಮರುಳಾದುದಮರವ್ರಜಂ ಪೇಳಲೇನಚ್ಚರಿಯನು ೧೫

ಮದಗಜಂಗಳ್ಗೆ ಪಲ್ಲಣಂಗಳಂ ಹಾಯ್ಕು ಬಲು
ಗುದುರೆಗಳ ಬೆಂಗೆ ರಂಚಿಕೆಯನೊಂದಿಸು ಕೆಯ್ಯ
ಮೊದಲೊಳಿಡು ವಜ್ರಾಂಗಿಯಂ ಮೆಯ್ಗೆ ತೊಡಿಸು ಸೂಳಾಯ್ತುಮಂ ಕಾಳೆಯಿಂದೆ
ಬೆದರದಿರಿ ನೇಜಯಂಗಳನೂದು ಹರಿಗೆಯಂ
ಕದಲಿಸು ವರೂಥಮಂ ತೊಡೆ ಚಾಟುಗೊಳ್ಳೆನುತೆ
ಕದನವಿಕ್ರಮರೆಲ್ಲರುಂ ಬೆದರಿ ಕಂಡಕಡೆಗೋಡಿದರದೇನೆಂಬೆನು ೧೬

ಸುರಭಟರ್ ಮುರಿದು ದಿಕ್ಪಾಲಕರ ಮೇಲೆಯಾ
ಸುರಭಟರ್ ದಿಕ್ಪಾಲರುಂ ವಿಧಿಯ ಮೇಲೆಯಾ
ಸುರಭಟರ್ ದಿಕ್ಪಾಲವಿಧಿಗಳುಂ ಮಾಧವನ ಮೇಲೆ ಕಡುವೇಗದಿಂದೆ
ಸುರಭಟರ್ ದಿಕ್ಪಾಲ ವಿಧಿ ಮಾಧವಾದಿಗಳ್
ಹರಗಣದ ಮೇಲೆ ಕಣ್ಗೆಟ್ಟು ಬೀಳಲ್ಕಾಗ
ದುರುಳರಕ್ಕಸರಿನಿಬರಂ ಸವರಿ ಸಾಹಸದೆ ಮುಂಬರಿದು ಬರುತಿರ್ಪರು ೧೭

ಕ್ರೂರ ರಾಕ್ಷಸರು ಅಟ್ಟಿ ಹಿಡಿದು ಕೊಲ್ಲುತ್ತಿದ್ದರು. ೧೫. ಎಲ್ಲೆಲ್ಲಿಯೂ ಬೊಬ್ಬಾಟವಾಯಿತು. ಎಲ್ಲರೂ ಗಾಬರಿಗೊಂಡು ಎಲೆಲೆ, ಹೋಹೋ ಕಡಿ ಎನ್ನುತ್ತ ಬಿಡದೆ ಆರ್ಭಟಿಸಿ ಯಾವ ಅಳುಕೂ ಇಲ್ಲದೆ ಎದ್ದು ಆಯುಧವನ್ನು ಮರೆತು, ತಲೆ ಕೆದರಿ ತಬ್ಬಿಬ್ಬಾಗಿ ತಮ್ಮಲ್ಲಿ ತಾವೆ 'ಸಿಕ್ಕಿದ, ತಬ್ಬಿ ಹಿಡಿ. ಹೊಡಿ, ಹೊಡಿ' ಎನ್ನುತ್ತ ಕೊಲ್ಲದ ಕೊಲೆಯ ಹಬ್ಬದಲ್ಲಿ ಬಾಗಿ ದೇವತೆಗಳ ಸಮೂಹ ಹುಚ್ಚಾಯಿತು. ೧೬. ಮದಿಸಿದ ಆನೆಗಳಿಗೆ ಥಡಿಗಳನ್ನು ಹಾಕು. ಬಲವಾದ ಕುದುರೆಗಳ ಬೆನ್ನಿಗೆ ಅಂಬಾರಿಯನ್ನು ಹೊಂದಿಸು. ಕೈಯ ಮುಂಭಾಗದಲ್ಲಿ ವಜ್ರಕವಚವನ್ನಿಡು. ಮೈಗೆ ಹಸ್ತರಕ್ಷೆಯನ್ನು ತೊಡಿಸು. ಕಹಳೆಯಿಂದ ಹೆದರಬೇಡಿ. ಭರ್ಜಿಯನ್ನು ಊದು. ಢಾಲನ್ನು ಕದಲಿಸು. ರಥವನ್ನು ತೊಡಲು ಮರೆಹೊಂದು ಎನ್ನುತ್ತ ಯುದ್ಧಶೂರರು ಹೆದರಿ ಸಿಕ್ಕ ಸಿಕ್ಕೆಡೆಗೆ ಓಡಿದರು. ೧೭. ದೇವಸೈನಿಕರು ಹಿಂದಿರುಗಿ ದಿಕ್ಪಾಲಕರ ಮೇಲೆ ಬಿದ್ದರು. ಆ ದೇವ ಸೈನಿಕರೂ ದಿಕ್ಪಾಲಕರೂ ಸೇರಿ ಬ್ರಹ್ಮನ ಮೇಲೆ ಬಿದ್ದರು. ಆ ದೇವಸೈನಿಕರೂ ದಿಕ್ಪಾಲಕರೂ ಬ್ರಹ್ಮನೂ ವಿಷ್ಣುವಿನ ಮೇಲೆ, ದೇವಸೈನಿಕರು–ದಿಕ್ಪಾಲಕರು–ಬ್ರಹ್ಮ-ವಿಷ್ಣುಗಳು ಒಟ್ಟಾಗಿ ಶಿವಗಣದ ಮೇಲೆ ಕಂಗೆಟ್ಟು ಬೀಳಲು ಕ್ರೂರ ರಾಕ್ಷಸರು ಅಷ್ಟು ಮಂದಿಯನ್ನೂ ಧ್ವಂಸಮಾಡಿ ಸಾಹಸದಿಂದ ಮುಂದುವರಿದು ಬರುತ್ತಿದ್ದರು.

CC-0. Jangamwadi Math Collection. Digitized by eGangotri

ಬರಿಯ ಮೆಯ್ಗಳ ಬಿಟ್ಟ ಮುಂಡೆಗಳ ಬಾಳ್ವಿಸು
ಟ್ಟೊರೆವಿಡಿದ ಕೆಯ್ದುಗಳ ಜಗುಳಿ ತಬ್ಬಿಬ್ಬಾಗಿ
ಮೆರೆವಂಗರಕ್ಷೆಗಳ ವಾಹನಂಗಳ ರಕ್ಕಸರ್ ಕಂಡಕಡೆಗಳಲ್ಲಿ
ಇರಿದ ಘಾಯುಂಗಳಿಂ ಹಜ್ಜೆಹಜ್ಜೆಗೆ ಬಿಡದೆ
ಕರೆವ ನೆತ್ತರ ಶಿವಾ ಸಲಹು ಸಲಹೆಂದೆಂಬ
ಮೊರೆಯ ಬಾಯ್ಗಳ ದಿವಿಜನಿಕರಮುಂ ಕಂಡು ರುದ್ರಪ್ರಮಥಗಣಮೆಳ್ದುದು ೧೮

ವೀರಭದ್ರಂ ಕಾರ್ತಿಕೇಯನುರುತರಕಾಲ
ಭೈರವಂ ನಂದೀಶ್ವರಂ ಮಹಾಕಾಳನಂ
ಗಾರವದನಂ ಧೂಮಕಾಯಂ ವಿರೂಪಾಕ್ಷನದ್ರಿಭೇದನನೊಪ್ಪುವ
ಸೂರೇಂದುಪಾತ ಘಂಟಾಕರ್ಣ ಬಡಬಾಗ್ನಿ
ದಾರ ಸುರಪೋಷ ಚಂಡೇಶಮುಖ್ಯರ್ ಸ್ವಪರಿ
ವಾರಸಹಮಾರ್ಬಟಿಸುತೆಳ್ದರೊಂದೇಬಾರಿ ರಾಮ ಕೇಳದ್ಭುತವನು ೧೯

ಭೂಗಗನಕಳತೆಯಿಟ್ಟಂತೇಳ್ದುದುರವಣಿಸಿ
ಸಾಗರಾಪೋಷಣನ ಸೈನ್ಯದ ಭಟಾಳಿಯಿಂ
ಬಾಗಿ ನೀಲಾದ್ರಿಗಳ್ ನೆಗಳ್ದಂತೆ ಪರ್ವತಾಭರಣನ ಬಲಂ ನೆರೆದುದು
ಮೇಗೆಮೇಗೊತ್ತುವಬ್ಧಿಯ ತೆರೆಗಳಂತೊದಗಿ
ತಾಗ ಕಾಲಾಪಹರಣನ ಸೇನೆ ಹೆರೆಯುಗಿದ
ಭೋಗಿಕುಲದಂತೆ ಕಂಕಾಳಧರಸೈನಿಕಂ ಮೊರೆದೆದ್ದುದೇನೆಂಬೆನು ೨೦

೧೮. ಬತ್ತಲೆಯ ಮೈಗಳ, ಏನೂ ಧರಿಸದಿರುವ ತಲೆಗಳ, ಕತ್ತಿಗಳನ್ನು ಬಿಸುಟು ಒರೆಗಳನ್ನು ಹಿಡಿದ ಆಯುಧಗಳ, ಜಾರಿ ತಬ್ಬಿಬ್ಬಾಗಿ ಕಾಣುತ್ತಿದ್ದ ಅಂಗರಕ್ಷೆಗಳ, ವಾಹನಗಳ ರಾಕ್ಷಸರು ಸಿಕ್ಕ ಸಿಕ್ಕ ಜಾಗದಲ್ಲಿ ತಿವಿದ ಗಾಯುಗಳಿಂದ, ಹೆಜ್ಜೆ ಹೆಜ್ಜೆಗೆ ಬಿಡದೆ ಸುರಿಯುವ ರಕ್ತದ ; ಶಿವಾ ಕಾಪಾಡು,ಕಾಪಾಡು ಎಂದು ಮೊರೆಯಿಡುವ ಬಾಯಿಗಳ ದೇವತೆಗಳ ಸಮೂಹವನ್ನು ನೋಡಿ ಶಿವನ ಪ್ರಮಥಗಣ ಎದ್ದಿತು. ೧೯. ವೀರಭದ್ರ, ಕಾರ್ತಿಕೇಯ ಭೀಕರನಾದ ಕಾಲಭೈರವ, ನಂದೀಶ್ವರ, ಮಹಾಕಾಳ, ಅಂಗಾರವದನ, ಧೂಮಕಾಯ, ವಿರೂಪಾಕ್ಷ, ಅದ್ರಿಭೇದ, ಪ್ರಖ್ಯಾತನಾದ ಸೂರೇಂದುಪಾತ, ಘಂಟಾಕರ್ಣ, ಬಡಬಾಗ್ನಿ ದಾರ, ಸುರಪೋಷ, ಚಂಡೇಶ ಮೊದಲಾದವರು ತನ್ನ ಸೈನ್ಯಸಮೇತರಾಗಿ ಆರ್ಭಟಿಸುತ್ತ ಒಂದೇ ಬಾರಿಗೆ ಎದ್ದರು. ಸಿದ್ಧರಾಮ, ಅದ್ಭುತವನ್ನು ಕೇಳು, ೨೦. ಸಾಗರಾಪೋಶನನ ಸೇನಾಸಮೂಹ ಭೂಮಿ–ಆಕಾಶಗಳಿಗೆ ಅಳತೆಹಾಕಿದಂತೆ ವಿಜೃಂಭಿಸಿ ಎದ್ದಿತು. ವಿಶಾಲವಾಗಿ ನೀಲಪರ್ವತಗಳು ಪ್ರಕಾಶಿಸುವಂತೆ ಪರ್ವತಾಭರಣನ ಸೇನೆ ಒಟ್ಟಾಗಿ ಸೇರಿತು. ಮೇಲೆ ಮೇಲೆ ಬೀಳುವ ಸಮುದ್ರದ ತೆರೆಗಳಂತೆ ಆಗ ಕಾಲಾಪಹರಣ ಸೈನ್ಯ ಒದಗಿತು. ಕಂಕಾಳಧರನ ಸೈನ್ಯ ಪೊರೆಕಳಚಿದ ಸರ್ಪಕುಲದಂತೆ ಮೊರೆಯುತ್ತ

CC-0. Jangamwadi Math Collection. Digitized by eGangotri

ಮತ್ತೊಂದುದೆಸೆಯೊಳಾ ಕಾಳಯಮ ನಿರುತಿಗಳ
ವೊತ್ತಮೆಳ್ದುದು ಬಳಿಕ್ಕೊಂದೆಡೆಯೊಳಾ ಮದೋ
ನ್ಮತ್ತಜಟ್ಟಿ ಗಭೀರಭೂತವೇತಾಳ ಗಣಕುಲದೊಡನೆ ಕವಿದುದಿರದೆ
ಇತ್ತ ಚಾಮುಂಡಿ ವಾರಾಹಿ ಭೈರವಿ ದುರ್ಗಿ
ಯತ್ತ ಕೌಮಾರಿ ವೈಷ್ಣವಿ ಮುಖ್ಯಶಕ್ತಿಕುಲ
ಮತ್ತೆತ್ತಲೆನ್ನದೊತ್ತರಿಸಿ ಕವಿದತ್ತೆಲೇ ರಾಮ ಕೇಳದ್ಭುತವನು ೨೧

ಒಡನೆ ವೀರೇಶ ಷಣ್ಮುಖರ ನೇಮಂಗಳಂ
ಪಡೆದು ರುದ್ರಪ್ರಮಥಗಣಮಾರ್ದು ಕೋಪದಿಂ
ಗುಡಿಗುಡಿಸಿ ಸುತ್ತಲುಂ ವೇಡೆಯಮನಿಕ್ಕಿಯೊಬ್ಬೊಬ್ಬರಂ ಮೂದಲಿಸುತೆ
ಪಿಡಿ ಬಾಚು ನುಂಗು ಕೊಯ್ ಕತ್ತರಿಸು ನೂಂಕು ಕಡಿ
ಕಡಿ ಕೊಚ್ಚು ಮೋದು ತುಂಡಿಸು ಸೀಳ್ದು ನೆತ್ತರಂ
ಕುಡಿ ಕರುಳ್ವಗಿಯೆನಿಪ್ಪಬ್ಬರಂಗಳ್ ಪೊಣ್ಮೆ ಕೊಲತೊಡಗಿತಾಕ್ಷಣದೊಳು ೨೨

ಕೂಡೆ ಹುರಿಗಟ್ಟಿತಾ ಹರಿಯಜೇಂದ್ರಾದಿ ಸುರ
ರೀಡಿರಿದುದಖಿಳದೆಸೆಯುಂ ವಾದ್ಯದಬ್ಬರಮು
ದೀಡಿರಿದುದೆಲ್ಲಿಯುಂ ತೇರಾನೆ ಕುದುರೆಗಳ್ ಕಾಲಾಳಬಲವೊದಗಿತು
ಓಡಿದವರೆಲ್ಲರುಂ ಕಲಿಯಾಗಿ ನಿಲ್ತು ಹೊ
ಯ್ದಾಡುತಿರ್ದರ್ ಕತ್ತಿವೆಳಗು ತೊಡವೆಳಗುಗಳ್
ಮಾಡೆ ಬೆಳಗಂ ರಾಕ್ಷಸಾಳಿ ಕಣ್ಗೆಡೆ ಸಿದ್ಧರಾಮ ಕೇಳದ್ಭುತವನು ೨೩

ಎದ್ದಿತು. ಅದನ್ನು ಏನೆನ್ನಲಿ ? ೨೧. ಮತ್ತೊಂದು ಕಡೆಯಲ್ಲಿ ಆ ಕಾಲಯಮ, ನಿರುತಿಗಳ ಗುಂಪೆದ್ದಿತು. ಬಳಿಕ ಒಂದು ಕಡೆಯಲ್ಲಿ ಆ ಮದೋನ್ಮತ್ತ ಜಟ್ಟಿ, ಗಂಭೀರ ಭೂತ ಬೇತಾಳಗಣಗಳ ಸಮೂಹ ಜೊತೆಜೊತೆಯಲ್ಲಿಯೇ ಮುತ್ತಿತು. ಇತ್ತ ಕಡೆ ಚಾಮುಂಡಿ, ವಾರಾಹಿ, ಭೈರವಿ, ದುರ್ಗಿ, ಅತ್ತಕಡೆ ಕೌಮಾರಿ, ವೈಷ್ಣವಿ ಮೊದಲಾದ ಶಕ್ತಿಸಮೂಹ ಅಲ್ಲಿ ಇಲ್ಲಿ ಎನ್ನದೆ ಎಲ್ಲ ಕಡೆಯಲ್ಲಿಯೂ ಮುತ್ತಿ ನುಗ್ಗಿತು. ಎಲೈ ಸಿದ್ಧರಾಮ, ಅದ್ಭುತವನ್ನು ಕೇಳು ! ೨೨. ತಕ್ಷಣ ವೀರಭದ್ರ-ಷಣ್ಮುಖರ ಆಜ್ಞೆಗಳನ್ನು ಪಡೆದುಕೊಂಡು ರುದ್ರ ಪ್ರಮಥಗಣ ಅರಚಿ ಕೋಪದಿಂದ ಗುಡುಗುಡಿಸಿ ಸುತ್ತಲೂ ಹಯಮಂಡಲವನ್ನು ರಚಿಸಿ ಒಬ್ಬೊಬ್ಬರನ್ನೂ ಹೀಯಾಳಿಸುತ್ತ, ಹಿಡಿ, ಬಾಚು, ನುಂಗು, ಕೊಯ್ಯಿ, ಕತ್ತರಿಸು, ನೂಕು, ಕಡಿ ಕಡಿ,ಕೊಚ್ಚು, ಹೊಡಿ, ತುಂಡಾಗಿಸು, ಸೀಳಿ ರಕ್ತವನ್ನು ಕುಡಿ, ಕರುಳನ್ನು ಬಗಿ ಎನ್ನುವ ಆರ್ಭಟಗಳು ಹೊಮ್ಮುವಂತೆ ಆಕ್ಷಣ ದಲ್ಲಿ ಕೊಲ್ಲತೊಡಗಿತು. ೨೩. ಕೂಡಲೇ ಯುದ್ಧ ಹುರಿಗಟ್ಟಿತು. ವಿಷ್ಣು-ಬ್ರಹ್ಮ-ಇಂದ್ರ ಮೊದಲಾದ ದೇವತೆಗಳ ಸಮೂಹ ತುಂಬಿತು. ಎಲ್ಲ ದಿಕ್ಕನ್ನೂ ವಾದ್ಯದ ಅಬ್ಬರ ಮುಸುಕಿತು. ಎಲ್ಲೆಲ್ಲಿಯೂ ರಥ, ಆನೆ, ಕುದುರೆ, ಪದಾತಿಗಳ ಸೈನ್ಯ ಬಂದು ಸೇರಿತು. ಓಡಿಹೋಗಿದ್ದವರೆಲ್ಲರೂ ಪರಾಕ್ರಮದಿಂದ ನಿಂತು, ಕತ್ತಿಯ ಬೆಳಕು, ಆಭರಣಗಳ ಹೊಳಪು ಇವು ಬೆಳಕನ್ನುಂಟುಮಾಡುತ್ತಿರಲು ರಾಕ್ಷಸಸಮೂಹ ಕಂಗೆಡುವಂತೆ

CC-0. Jangamwadi Math Collection. Digitized by eGangotri

ವಾಡಬಾಗ್ನಿಯ ಮೇಲೆ ಕಗ್ಗೊಲೆಗೆ ಸಕಲ ಜಲ
ಮೋಡಿಕವಿವಂತೆ ಮಾರಿಯ ಮನೆಗೆ ಕನ್ನಮಂ
ನಾಡೆ ಸವೆವಂತೆ ಶಂಕರನ ಪಾಳೆಯದೊಳಗೆ ಕಗ್ಗೊಲೆಯೆ ನಿಮಗೆನುತ್ತೆ
ಓಡುವರನಿರಿದಿರಿದು ಕೆಡೆಪಿ ಮಾರಾಂತು ಕೈ
ಮಾಡುವರನಲ್ಲಲ್ಲಿ ಸೆಣಸಿ ಭಟರಿಂತು ಪೊ
ಯ್ದಾಡಿದರ್ ಕೋಳಾಹಳಂಗಳಿಂ ಶಿವಗಣದ ಸೈನ್ಯದೊಳಗೇನೆಂಬೆನು ೨೪

ಕರವಾಳ್ಗಳಂ ಜಡಿದು ನೂಂಕುವರ್ ತಾಂಕುವರ್
ಕರೆಕರೆದು ಪಗೆಗಳಂ ಮುತ್ತುವರ್ ಕುತ್ತುವರ್
ತರತರದ ಪೆಣಗಳಂ ಮೆಟ್ಟುವರ್ ಕುಟ್ಟುವರ್ ತಲೆಗಳಂ ದೈತ್ಯಭಟರ
ಮೊರೆವ ವಾದ್ಯಧ್ವನಿಗೆ ಹಿಗ್ಗುವರ್ ಮುಗ್ಗುವರ್
ಕರದಿಂದೆ ಮುಂದಲೆಗೆ ತುಡುಕುವರ್ ಮಿಡುಕುವರ್
ಮರಳಿ ಪಜ್ಜೆಯನಿಡದೆ ಕಾದುವರ್ ಮೋದುವರ್ ಶಿವಬಲದ ವೀರಭಟರು ೨೫

ವೀರಭದ್ರನ ಬಲದ ಬಿರುಬು ಷಣ್ಮುಖನ ಪರಿ
ವಾರದಟ್ಟುಳಿ ಗಣೇಶನ ಸೈನ್ಯದುರುಬೆಯಾ
ಭೈರವನ ಸೈನಿಕದ ಕೋಳಾಹಳಂ ದಂಡಧರನ ಸೇನಾಕರ್ಕಶಂ
ವೀರಕಂಕಾಳಧರವಾಹಿನಿಯ ವಿಕ್ರಮಂ
ಸೂರೇಂದುಪಾತರಾ ಪಡೆಯ ಬಿರುಬಂ ತಡೆಯ
ದಾ ರಾಕ್ಷಸಪ್ರತಾನಂ ತಾಯ್ಗೆ ಮಕ್ಕಳಾಗದೆ ಕೂಡೆ ಬೆಂಗೊಟ್ಟುದು ೨೬

ಹೊಯ್ದಾಡುತ್ತಿದ್ದರು. ಸಿದ್ಧರಾಮ ಅದ್ಭುತವನ್ನು ಕೇಳು. ೨೪. ಬಡಬಾಗ್ನಿಯ ಮೇಲೆ ಕಗ್ಗೊಲೆಗೆ ಸಮಸ್ತ ನೀರೂ ಓಡಿ ಕವಿಯುವಂತೆ, ಮಾರಿಯ ಮನೆಗೇ ಕನ್ನವನ್ನು ಹಾಕುವಂತೆ, ಶಂಕರನ ಪಾಳಯದಲ್ಲಿ ನಿಮಗೆ ಕಗ್ಗೊಲೆಯೇ ಸರಿ ಎನ್ನುತ್ತ ಓಡುವವರನ್ನು ತಿವಿತಿವಿದು ಕೆಡವಿ, ಎದುರಿಸಿ ಕೈಮಾಡುವವರೊಡನೆ ಅಲ್ಲಲ್ಲಿ ಯುದ್ಧ ಮಾಡುತ್ತ ಶಿವಗಣದ ಸೈನ್ಯದಲ್ಲಿ ಭಟರು ಈ ರೀತಿ ಕೋಲಾಹಲದಿಂದ ಹೋರಾಡಿದರು, ಏನೆಂದು ಹೇಳಲಿ ? ೨೫. ಶಿವಸೈನದ ಭಟರು ಕತ್ತಿಗಳನ್ನು ಜಡಿದು ನೂಕುವರು, ತಾಗುವರು, ಕರೆಕರೆದು ಶತ್ರುಗಳನ್ನು ಮುತ್ತುವರು ತಿವಿಯುವರು. ನಾನಾರೀತಿಯ ಹೆಣಗಳನ್ನು ತುಳಿಯುವರು. ರಾಕ್ಷಸಸೈನಿಕರ ತಲೆಯನ್ನು ಕುಟ್ಟುವರು. ಆರ್ಭಟಿಸುವ ವಾದ್ಯದ ಶಬ್ದಕ್ಕೆ ಹಿಗ್ಗುವರು, ಮುಂದೆ ಬೀಳುವರು. ಕೈಯಿಂದ ಮುಂದಲೆಯನ್ನು ಹಿಡಿಯುವರು, ಉತ್ಸಾಹಿಸುವರು. ಹಿಂದಕ್ಕೆ ಹೆಜ್ಜೆಯನ್ನಿಡದೆ ಯುದ್ಧಮಾಡುವರು, ಹೊಡೆಯುವರು. ೨೬. ವೀರಭದ್ರನ ಸೈನ್ಯದ ಆವೇಶ, ಷಣ್ಮುಖನ ಪರಿವಾರದ ಹಿಂಸೆ, ಗಣೇಶನ ಸೈನ್ಯದ ಕಠೋರತೆ, ಭೈರವನ ಸೈನ್ಯದ ಕೋಲಾಹಲ, ಯಮನ ಸೈನ್ಯದ ಕಠಿಣತೆ, ವೀರ ಕಂಕಾಳಧರನ ಸೇನೆಯ ಪರಾಕ್ರಮ, ಸೂರೇಂದುಪಾತರ ಪಡೆಯ ಆವೇಶವನ್ನು ತಡೆಯಲಾರದೆ ರಾಕ್ಷಸಸಮೂಹ ತಾಯಿಗೆ ಹುಟ್ಟಿದ ಮಕ್ಕಳಲ್ಲವೋ ಎನ್ನುವಂತೆ ತಕ್ಷಣ

CC-0. Jangamwadi Math Collection. Digitized by eGangotri

ಅರಿಯದಿರ್ಪಂಧಕಾಸುರನೊಡನೆ ಹುಸಿಯುಸೆ
ಚ್ಚರಿಸಿ ಕಗ್ಗೊಲೆಗೆ ಚಾಚಿದ ಗಗನಮೂರ್ಧ್ನಿಯಂ
ತರಿದಕಟ ಗಗನಮೂರ್ಧ್ನಿಯ ಮಾಡಬೇಡವೇ ಶಿವಸುಭಟರೆಂದೆನುತ್ತೆ
ಮೊರೆಯಿಟ್ಟು ಬಾಯ್ಬಿಟ್ಟು ಕಣ್ಗೆಟ್ಟು ಮರವಟ್ಟು
ಕರಕರನೆ ಕಂದಿ ಧೃತಿಗುಂದಿ ಭೀತಿಯೊಳೊಂದಿ
ಪೆರೆತೆಗೆವರಂ ಕಂಡು ಬೆಂಬತ್ತಿ ಸುತ್ತಿ ಮುತ್ತಿರಿದರದನೇನೆಂಬೆನು ೨೭

ವೀರಭದ್ರಾದಿಗಣಸೈನಿಕದ ಭಾರಣೆಯ
ನಾರಾಂತು ನಿಂದಪರ್ ಖಳರು ಮುರಿದೋಡಲಾ
ಗೇರೆಯಮನುಗಿದು ಪಾಳೆಯಮನೊಳಪೊಕ್ಕು ಸತಿಯರನಿರದೆ ಪಿಡಿದು ಕೂಡೆ
ಸೇರಿ ಗೂಡಾರಂಗಳಂ ಕೊಯ್ದರಶ್ವ ಮದ
ವಾರಣಂಗಳನೈದೆ ಪಿಡಿದರವನಿಪರ ಭಂ
ಡಾರಂಗಳಂ ಸೂರೆಯಾಡಿದರ್ ಮಾಡಿದರ್ ಕಳಕಳವನಾಕ್ಷಣದೊಳು ೨೮

ದೂರಿದುದು ಜನಮಂಧಕಾಸುರಂಗತಿಕೋಪ
ಮೇರಿದುದು ಚಿತ್ತದೊಳ್ ನಯನದ್ವಯಂ ಕೆಂಪ
ಗಾರಿದುದು ಗುಡಿಗುಡಿಸುತೆಲ್ಲಿ ರಿಪುಭಟರೆನುತೆ ಸುಭಟರಂ ಕೂಡಿಕೊಂಡು
ಸಾರುತಿಹ ಕಹಳೆಗಳ ಗರ್ಜನೆಗೆ ಪರಿಪರಿವ
ಸೂರೆಗರ್ ಕೈಗುಂದಲಂಧಾಸುರಂ ತೇರ
ನೇರಿ ನಡೆದಂ ಪ್ರಲಯಕಾಲದಂತಕನಂತೆ ಪೇಳಲೇನದ್ಭುತವನು ೨೯

ಬೆನ್ನು ತೋರಿಸಿ ಓಡಿತು. ೨೭. ಏನೂ ತಿಳಿಯದ ಅಂಧಕಾಸುರರೊಡನೆ ಸುಳ್ಳನ್ನು ಹೇಳಿ ಕಗ್ಗೊಲೆಗೆ ಒಡ್ಡಿದ ಗಗನಮೂರ್ಧ್ನಿಯನ್ನು ಶಿವಭಟರು ತರಿದು ಅಯ್ಯೋ ! ಅವನ ತಲೆ ಆಕಾಶಕ್ಕೆ ಹೋಗುವಂತೆ ಮಾಡಬೇಡವೆ ? ಎನ್ನುತ್ತ, ಮೊರೆಯಿಟ್ಟು, ಬಾಯ್ಬಿಟ್ಟು, ಕಂಗೆಟ್ಟು, ಮರವಟ್ಟು, ಕರಕರನೆ ಕಂದಿ, ಎದೆಗುಂದಿ, ಭೀತಿಯಿಂದ ಕೂಡಿ ಹಿಂದೆಗೆಯುವವರನ್ನು ನೋಡಿ ಬೆನ್ನತ್ತಿ ಸುತ್ತಿ ಮುತ್ತಿ ಇರಿದರು. ಅದನ್ನು ಏನೆಂದು ಹೇಳಲಿ ? ೨೮. ವೀರಭದ್ರ ಮೊದಲಾದ ಶಿವಗಣದ ಸೈನಿಕರ ಹೊಡೆತವನ್ನು ಯಾರು ಎದುರಿಸಿ ನಿಲ್ಲುವರು ? ರಾಕ್ಷಸರು ಬೆನ್ನುಕೊಟ್ಟು ಓಡಲು ಆ ಪ್ರಕಾರವನ್ನು ಕಿತ್ತು, ಪಾಳಯವನ್ನು ಹೊಕ್ಕು, ಸ್ತ್ರೀಯರನ್ನು ಹಿಡಿದು-ಜೊತೆಗೂಡಿ, ಗೂಡಾರಗಳನ್ನು ಕೊಯ್ದರು. ಕುದುರೆ ಮದಿಸಿದ ಆನೆಗಳನ್ನು ಹಿಡಿದರು. ರಾಜರ ಭಂಡಾರಗಳನ್ನು ಸೂರೆಗೈದರು. ಆಕ್ಷಣದಲ್ಲಿ ಗಜಿಬಿಜಿ ಮಾಡಿದರು. ೨೯. ಜನ ದೂರಿತು. ಅಂಧಕಾಸುರನಿಗೆ ಮನಸ್ಸಿನಲ್ಲಿ ಅತಿಯಾದ ಕೋಪವುಂಟಾಯಿತು. ಎರಡೂ ಕಣ್ಣುಗಳು ಕಿಡಿಗಾರಿದುವು. ಗುಡುಗುಡಿಸುತ್ತ ಶತ್ರುಸೈನಿಕರೆಲ್ಲಿ ಎನ್ನುತ್ತ ಶೂರಸೈನಿಕರೊಡಗೂಡಿ ಮೊಳಗುತ್ತಿರುವ ಕಹಳೆಗಳ ಗರ್ಜನೆಗೆ ಓಡಾಡುವ ಲೂಟಿಗಾರರು ಶಕ್ತಿಗುಂದಲು ಪ್ರಳಯಕಾಲದ ಯಮನಂತೆ ರಥವನ್ನೇರಿ ಅಂಧಕಾಸುರನು ಹೊರಟನು. ಅದ್ಭುತವನ್ನು

CC-0. Jangamwadi Math Collection. Digitized by eGangotri

ಪರಿವ ಸೂರೆಗರ ನಡೆಗೆಡಪಿದರ್ ಮಡುಪಿದರ್
ಪರಿಪರಿಯ ಸೂರೆಯುಂ ಬಿಡಿಸಿದರ್ ಕಡಿಸಿದರ್
ಸರಳ ಬಿರುವಳೆಗಳಂ ಕವಿಸಿದರ್ ತವಿಸಿದರ್ ಸುರಭಟರ ವಿಕ್ರಮವನು
ಬಿರುದನಹಿತರ ಮುಂದೆ ದೂರಿದರ್ ಸಾರಿದರ್
ತುರಗಕರಿನಿಚಯಮಂ ನೂಂಕಿದರ್ ತಾಂಕಿದರ್
ಭರವಸದ ಸಮರದೊಳ್ ರಾವುತರ್ ಮಾವುತರ್ ಖಳನ ಸೇನಾಂಬುಧಿಯೊಳು ೩೦

ತಗುಳ್ದಿರಿದು ತರಿದು ಪಾಳೆಯದಿಂದೆ ಹಿಂದಕ್ಕೆ
ತೆಗೆಸಿದರ್ ಪೊರಗಂಧಕಾಸುರಂಗಂ ನಾಡೆ
ವಿಗಡವೀರೇಶಂಗೆ ಕಾಳೆಗಂ ತಳ್ತುದು ಕುಮಾರನೊಳ್ ಗಗನಮೂರ್ಧ್ನಿ
ತೆಗೆದನಂದಸಮಸಮರಂಗಮಂ ತಮತಮಗೆ
ತೆಗೆದೆಚ್ಚರಸುರರಂ ವೃಷಭ ಮೊದಲಾದ ಸಂ
ಯುಗಸಮರ್ಥರ್ ಬಳಿಕ್ಕಿತ್ತ ವೀರಾಂಧಕಾಸುರರಾವಹಂ ಬಲಿದುದು ೩೧

ಆರೀತನೆಮ್ಮೊಡನೆ ಕಾದಲನುಗೆಯ್ದವಂ
ವೀರಭದ್ರನೊ ಲೇಸುಲೇಸಂಧಕಾಸುರನ
ವೀರಮಂ ಮುನ್ನ ಕೇಳ್ದರಿಯೆಲಾ ಕೊಳ್ಳಾದೊಡೆನುತೆ ಚಾಪಮನೊದರಿಸಿ
ಭೂರಿಬಾಣಂಗಳಂ ತೆಗೆದೆಸಲ್ ಘನಶರಾ
ಸಾರಮೆತ್ತೆತ್ತಲುಂ ಕತ್ತಲಿಸಲಾ ಕ್ಷಣಂ
ಕಾರಮೇಘದ ಮರೆಯ ಸೂರಿಯನ ತೆರದೊಳಾ ವೀರನಂದಿಂತೆಂದನು ೩೨

ಏನು ಹೇಳುವುದು ? ೩೦. ರಾಕ್ಷಸನ ಸೈನ್ಯದಲ್ಲಿ ರಭಸದ ಯುದ್ಧದಲ್ಲಿ ರಾವುತರು-ಮಾವುತರು ಓಡುವ ಲೂಟಿಗರನ್ನು ತಡೆದರು, ಸಾಯಿಸಿದರು. ನಾನಾರೀತಿಯ ಸೂರೆಯನ್ನು ಬಿಡಿಸಿದರು, ಕಡಿಸಿದರು. ಬಾಣಗಳ ಬಿರುಮಳೆಯನ್ನು ಪುಳುಕಿಸಿದರು. ದೇವಸೈನಿಕರ ಪರಾಕ್ರಮವನ್ನು ನಾಶಗೊಳಿಸಿದರು. ಶತ್ರುಗಳ ಮುಂದೆ ಅವರ ಬಿರುದನ್ನು ದೂರಿದರು, ಸಾರಿದರು. ಕುದುರೆ-ಆನೆಗಳ ಸಮೂಹವನ್ನು ನೂಕಿದರು, ತಾಗಿದರು. ೩೧. ತಾಗಿ ತಿವಿದು ತರಿದು ಪಾಳೆಯದಿಂದ ಹಿಂದಕ್ಕಟ್ಟಿದರು. ಹೊರಗೆ ಅಂಧಕಾಸುರನಿಗೂ ಪ್ರರಾಕ್ರಮಿಯಾದ ವೀರೇಶನಿಗೂ ಯುದ್ಧ ಕೈಗೂಡಿತು. ಷಣ್ಮುಖನೊಂದಿಗೆ ಅಂದು ಗಗನಮೂರ್ಧ್ನಿ ಸಮಸಮನಾದ ಯುದ್ಧವಾರಂಭಿಸಿದ. ವೃಷಭ ಮೊದಲಾದ ಯುದ್ಧಸಮರ್ಥರು ತಮತಮಗೆ ಎದುರಾದ ರಾಕ್ಷಸರನ್ನು ಬಾಣಗಳಿಂದ ಹೊಡೆದರು. ಅನಂತರ ಇತ್ತಕಡೆ ವೀರೇಶ ಮತ್ತು ಅಂಧಕಾಸುರರ ಯುದ್ಧ ಬಿರುಸಾಯಿತು. ೩೨. ನಮ್ಮೊಡನೆ ಯುದ್ಧಮಾಡಲು ಸಿದ್ಧನಾದ ಇವನಾರು ? ವೀರೇಶನೋ ? ಸರಿ ಸರಿ, ಅಂಧಕಾಸುರನ ಪರಾಕ್ರಮವನ್ನು ಈ ಮೊದಲು ಕೇಳಿ ತಿಳಿದಿಲ್ಲವೇ ? ಹಾಗಾದರೆ ತೆಗೆದುಕೊ ಎಂದು ಬಿಲ್ಲನ್ನು ಜೇವೊಡೆದು ಶಕ್ತವಾದ ಬಾಣಗಳನ್ನು ತೆಗೆದು ಬಿಡಲು ಆ ಬಾಣಗಳ ಸಮೂಹ ಎಲ್ಲೆಲ್ಲೂ ಕತ್ತಲನ್ನುಂಟುಮಾಡಿತು. ಆಕ್ಷಣ ಕಪ್ಪುಮೋಡದ ಮರೆಯ ಸೂರ್ಯನ ರೀತಿಯಲ್ಲಿ ವೀರೇಶನು ಹೀಗೆಂದನು.

CC-0. Jangamwadi Math Collection. Digitized by eGangotri

ಮುನ್ನ ಕೇಳ್ದರಿವುದೇಂ ಕೆಯ್ಯ ಕಂಕಣಕೇಕೆ
ಕನ್ನಡಿ ಪರಾಕ್ರಮಂ ನಿನಗುಳ್ಳೊಡೀ ಕ್ಷಣದೊ
ಳೆನ್ನ ನಿನ್ನಂಬುಗಳ ಗುರುಲಘುಸ್ಥಿತಿ ಕಾಣಲಹುದೆನುತೆ ಚಾಪದಿಂದೆ
ಪನ್ನೆರಡು ಬಾಣಮನುರುಳ್ಚಲಹಿ ಗರುಡಭರ
ವುನ್ನೋಡಲಾತನೀತನ ಕಣೆಯೊಳಾದುದವ
ನ್ನಿವಂ ಕಡಿಯೆನುತ್ತಿನ್ನೂರುಬಾಣವಂ ಕೆನ್ನೆವರೆಗುಗಿದೆಚ್ಚನು ೩೩

ವೀರನಾತನ ಸರಳ ಸಾರವಂ ನಾಲ್ಕೆಂಟು
ಕೂರಂಬಿನಿಂ ಕಡಿದು ನಾರಿಯಂ ತೀಡುತೆ ವಿ
ಚಾರಿಸದೆ ನೀನೆನ್ನೊಳೋರಂತೆ ತೊಡಕಿದೆ ಮಹಾರಣಾಂಕಣದೊಳೆನಲು
ವೀರತ್ವದಳವರಿಯಲೆಚ್ಚತ್ತರಂಬುಗಳ
ಸಾರವಂ ಕಡಿದೊಡೇಂ ಯಜ್ಞದೀಕ್ಷಿತನಾದ
ಹಾರುವರೆ ನಾವೆನುತೆ ಘೋರಾಸ್ತ್ರಮಂ ಪೂಡಿ ವೀರನೊಡನಿಂತೆಂದನು ೩೪

ಉದ್ರೇಕದಾಹವಂ ಬೇಡ ನಿನ್ನಯ ಬಳಿಗೆ
ರುದ್ರನಂ ಕರೆಸಿಕೊಳ್ಳೆನ್ನಂಬಿನಿಂ ದೀರ್ಘ
ನಿದ್ರೆಯಾದಪುದು ನಿನಗೆನುತಂಧಕಾಸುರಂ ಕೋಪದಿಂ ತೆಗೆದೆಸೆಯಲು
ಮುದ್ರಿಸಿದುದಾಕಾಶ ಭೂಮಿ ದಿಗ್ಜಾಲಮತಿ
ರೌದ್ರಾಯಮಾನ ಛಟಛಟಧಗತ್ಕೃತಿ ವೀರ
ಭದ್ರನೀಕ್ಷಿಸಿ ಘನಪ್ರತ್ಯಸ್ತ್ರದಿಂದವಂ ಛಿದ್ರಿಸಿದನೇನೆಂಬೆನು ೩೫

೩೩. ಮೊದಲು ಕೇಳಿ ತಿಳಿಯುವುದೇತಕ್ಕೆ ? ಕೈಯ ಕಂಕಣಕ್ಕೆ ಕನ್ನಡಿ ಏಕೆ ? ಪರಾಕ್ರಮ ನಿನಗಿರುವುದಾದರೆ ಈ ತಕ್ಷಣ ನನ್ನ ನಿನ್ನ ಬಾಣಗಳ ಗುರು-ಲಘು ಸ್ಥಿತಿ ಕಾಣಬಹುದು ಎನ್ನುತ್ತಾ ಬಿಲ್ಲಿನಿಂದ ಹನ್ನೆರಡು ಬಾಣವನ್ನು ಬಿಟ್ಟನು.ಗರುಡನನ್ನು ನೋಡಿದ ಕೂಡಲೇ ಸರ್ಪ ಓಡುವಂತೆ ಅವನ-ಇವನ ಬಾಣಗಳಾದುವು. ರಾಕ್ಷಸನು ಇನ್ನು ಇವನ್ನು ಖಂಡಿಸು ಎನ್ನುತ್ತ ಇನ್ನೂರು ಬಾಣಗಳನ್ನು ಕೆನ್ನೆಯವರೆಗೆ ಎಳೆದು ಬಿಟ್ಟನು. ೩೪. ವೀರೇಶನು ಅವನ ಬಾಣಗಳ ಸಮೂಹಗಳನ್ನು ಹನ್ನೆರಡು ಚೂಪಾದ ಬಾಣಗಳಿಂದ ಖಂಡಿಸಿ ಬಿಲ್ಲಿನ ಹಗ್ಗವನ್ನು ತೀಡುತ್ತ-ಯೋಚಿಸದೆ ನೀನು ನನ್ನೊಡನೆ ಮಹಾರಣರಂಗದಲ್ಲಿ ಒಂದೇ ಸಮ ಯುದ್ಧ ಪ್ರಾರಂಭಿಸಿದೆ ಎಂದನು. ಪರಾಕ್ರಮದ ಪ್ರಮಾಣವನ್ನು ತಿಳಿಯಲು ಬಿಟ್ಟವರ ಬಾಣಗಳನ್ನು ಕಡಿದರೇನು ? ನಾವೇನು ಯಜ್ಞದೀಕ್ಷೆಗೊಂಡ ಬ್ರಾಹ್ಮಣರೆ ? ಎನ್ನುತ್ತ ರಾಕ್ಷಸನು ಘೋರವಾದ ಬಾಣವನ್ನು ಹೂಡಿ ವೀರೇಶನೊಡನೆ ಹೀಗೆ ಹೇಳಿದನು. ೩೫. ಉದ್ರೇಕದ ಯುದ್ಧ ಬೇಡ, ನಿನ್ನ ಬಳಿಗೆ ಈಶ್ವರನನ್ನು ಕರೆಸಿಕೊ. ನನ್ನ ಬಾಣದಿಂದ ನಿನಗೆ ಶಾಶ್ವತ ನಿದ್ದೆ ಬರುತ್ತದೆ ಎನ್ನುತ್ತ ಅಂಧಕಾಸುರನು ಕೋಪದಿಂದ ಬಾಣವನ್ನು ಸೆಳೆದು ಬಿಡಲು ಆಕಾಶ, ಭೂಮಿ, ದಿಕ್ಕುಗಳೆಲ್ಲ ಮುಚ್ಚಿಹೋದವು. ಅತಿಭಯಂಕರವಾದ ಛಟ ಛಟ-ಧಗ ಧಗ ಶಬ್ದವನ್ನು ವೀರಭದ್ರನು ಕೇಳಿ ಭಯಂಕರ

CC-0. Jangamwadi Math Collection. Digitized by eGangotri

ಮುರಳಿ ಖಳನಂಬುಗಳನಿಕ್ಕುವಂ ಸಿಕ್ಕುವಂ
ಕೆರಳಿ ವೀರನ ಕಣೆಯು ಕವಿಸುವಂ ತವಿಸುವಂ
ಸರಳಿಂದಲವನಿಯಂ ಮುಚ್ಚುವಂ ಪಚ್ಚುವಂ ದಿವಿಜರಂ ದೆಸೆದೆಸೆಯೊಳು
ಉರುಳುಗಡಿವಂ ವೀರನೊಲವಿನಿಂ ಗೆಲವಿನಿಂ
ತೆರಳದವನೊಡನೆಸೆವನುಬ್ಬಿನಿಂ ಕೊಬ್ಬಿನಿಂ
ತರಹರಿಸದವನೆಚ್ಚು ಕೂಗುವಂ ಬೀಗುವಂ ವೀರಭದ್ರಂ ಕ್ಷಣದೊಳು ೩೬

ಶರಕೆ ಶರಮುದಟಿಂಗದಟು ಬೊಬ್ಬೆಗೆ ಬೊಬ್ಬೆ
ಪರಮಶೌರ್ಯಕೆ ಶೌರ್ಯಮಾಯಾಸಕಾಯಾಸ
ಮಿರದೆ ಗಾಯಕೆ ಗಾಯಮತಿಜವಕ್ಕತಿಜವಂ ಮೊದಲೆಗೆ ಮೊದಲೆಗಳು
ಕರಚಮತ್ಕಾರಕ್ಕೆ ಕರಚಮತ್ಕೃತಿ ವಿನಿ
ಷ್ಠುರಕೆ ನಿಷ್ಠುರಮಿರ್ವರ್ಗೆ ಸರಿಯಾಗಲಂ
ದುರುಶಕ್ತಿಯಿಂ ವೀರಭದ್ರನಿಡೆ ಖಳನೆದೆಯಂನಾಕ್ಷಣಂ ಗರಿಯುಗಿದುದು ೩೭

ಭೋರ್ಗರೆದು ಸುರಿವರುಣವಾರಿಯಿಂ ಖಳರಾಜ
ನೊರ್ಗುಡಿಸಿ ಕೆಡೆದನಿಳೆಗೀತನಂ ನಾಂ ಕೊಲಲ್
ಭರ್ಗನಂಬುಗಳಿಗಾನಪರಾಧಿಯಾದಪೆಂ ಸಾಕೆನುತ್ತುಳಿದಸುರರ
ವರ್ಗಮಂ ಬೆಂಬತ್ತೆ ಖಳಗಗನಮೂರ್ಧ್ನಿಯಂ
ಸ್ವರ್ಗಮಂ ಕಾಣಿಸೆ ಗುಹಂ ತನಗೆ ಮಾರಾಂತ
ವರ್ಗಳಂ ಮಡುಪೆ ನಂದ್ಯಾದಿಗಳ್ ಸವರತೊಡಗಿದರಸುರಭಟವನವನು ೩೮

ವಾದ ಪ್ರತ್ಯಸ್ತ್ರದಿಂದ ಅದನ್ನು ನಾಶಮಾಡಿದನು. ಏನು ಹೇಳಲಿ? ೩೬. ಮತ್ತೆ ರಾಕ್ಷಸನು ಬಾಣಗಳನ್ನು ಬಿಡುವನು, ಸಿಕ್ಕುವನು. ಕೋಪಗೊಂಡು ವೀರಭದ್ರನ ಬಾಣಗಳನ್ನು ಮುಚ್ಚಿಸುವನು, ನಾಶಮಾಡುವನು. ಬಾಣದಿಂದ ಭೂಮಿಯನ್ನು ಮುಚ್ಚುವನು, ತುಂಡು ಮಾಡುವನು. ಅಂದು ದಿಕ್ಕು–ದಿಕ್ಕಿಗೆ ದೇವತೆಗಳನ್ನು ಕಡಿದು ಉರುಳಿಸುವನು. ವೀರ ಭದ್ರನು ಒಲವಿನಿಂದ, ಗೆಲವಿನಿಂದ, ಹಿಂದಿರುಗದೆ ಅವನೊಂದಿಗೆ ಹೋರಾಡುವನು. ಅವನ ಉಬ್ಬಿನಿಂದ ಕೊಬ್ಬಿನಿಂದ ಹೆದರದೆ ಹೊಡೆದು ಕೂಗುವನು. ಕ್ಷಣದಲ್ಲಿ ಹೆಮ್ಮೆಯಿಂದ ಉಬ್ಬುವನು. ೩೭. ಬಾಣ, ಪರಾಕ್ರಮ, ಆರ್ಭಟ, ಅತಿಯಾದ ಸಾಮರ್ಥ್ಯ, ಆಯಾಸ, ಗಾಯ, ವೇಗ, ಮೊದಲಿಕೆಗಳು, ಕರಚಮತ್ಕಾರ, ನಿಷ್ಠೂರ ಇವುಗಳಲ್ಲಿ ಇಬ್ಬರೂ ಅಂದು ಸಮನಾಗಲು ಭೀಕರವಾದ ಶಕ್ತ್ಯಾಯುಧದಿಂದ ವೀರಭದ್ರನು ಹೊಡೆಯಲು ಆಕ್ಷಣ ಅದು ರಾಕ್ಷಸನ ಎದೆಯನ್ನು ಗರಿಸಮೇತ ಹೊಕ್ಕಿತು. ೩೮. ಭೋರ್ಗರೆದು ಸುರಿಯುವ ರಕ್ತಪ್ರವಾಹದೊಡನೆ ಒಂದಾಗಿ ರಾಕ್ಷಸನು ನೆಲಕ್ಕೆ ಬಿದ್ದನು. ಈತನನ್ನು ನಾನು ಕೊಂದರೆ ಶಿವನ ಬಾಣಗಳಿಗೆ ಅಪರಾಧ ಮಾಡಿದಂತಾಗುತ್ತದೆ, ಸಾಕು ಎನ್ನುತ್ತ ಮಿಕ್ಕ ರಾಕ್ಷಸರ ಸಮೂಹವನ್ನು ಬೆನ್ನಟ್ಟಿಹೋಗಲು, ಗಗನಮೂರ್ಧ್ನಿಯನ್ನು ಕೊಲ್ಲಲು ತನಗೆದುರಾದವರನ್ನು ಗುಹನು ಸಾಯಿಸಲು ನಂದಿ ಮೊದಲಾದವರು ರಾಕ್ಷಸರ ಸೇನೆ

CC-0. Jangamwadi Math Collection. Digitized by eGangotri

ಇತ್ತಲಂಧಾಸುರನ ಪಾಳೆಯದೊಳಸುರರಂ
ತತ್ತರಂದರಿವುತ್ತೆ ವೀರಗುಹರೈತರ
ಲ್ಕತ್ತಲಾ ಖಳರಾಜನೆಚ್ಚತ್ತು ವೀರಭದ್ರನನರಸುತತಿಭರದೊಳು
ಚಿತ್ತಜಾರಿಯ ಸಮ್ಮುಖಕ್ಕಾಗಿ ನಡೆತರಲ್
ತತ್ತುದಾಹವವಿಾಶನೊಡನೆ ಕೂರಂಬುಗಳ
ಕಿತ್ತು ಕಿವಿವರೆಗುಗಿದು ಕರೆದನಾಕಾಶವೆಲ್ಲಂ ಬಾಣಮಯವಾಗಲು ೩೯

ಗಗನವಂ ತುಂಬಿದಂಧಾಸುರನ ಬಾಣಮಂ
ನಗೆವೊಗದೊಳೀಕ್ಷಿಸುತ್ತಭವಂ ಪಿನಾಕಮಂ
ನೆಗಪಿ ಜೇವೊಡೆದೊಂದುಬಾಣಮಂ ಪೂಡಿ ತೆಗೆದೆಸಲಾಕ್ಷಣಂ ನೋಡಲು
ಅಗಲದೊಳ್ ಪುದಿದಂಬುಗಳ್ ತುಂಡುತುಂಡಾಗಿ
ಪೊಗುತಿರ್ದವವನಿಯೊಳಗಂಧಾಸುರಂ ಕಂಡು
ಮಗುಳೆ ಕೋಟಾನುಕೋಟಿಯ ಮಾರ್ಗಣಂಗಳಂ ತುಳ್ಕಿದಂ ಬೇಗದಿಂದೆ ೪೦

ಹೇಮಾಚಲದ ಸರಿಸದೊಳ್ ಬೀಳ್ವ ವರುಷಧಾ
ರಾಮಹಾಗಣದಂತೆ ದೈತ್ಯನೆಸುಗೆಯ ಶರ
ಸ್ತೋಮಮಿಾಶನ ಸುತ್ತಲುಂ ಬಳಸೆ ಕಂಡು ಮತ್ತೊಂದು ಬಾಣವನಭವನು
ತಾಮಸಂಗೆಯ್ಯದೆಸಲಸುರನಂಬಂ ಕಡಿದು
ಭೂಮಿಯೊಳಗುದುರಿಸಿದುದೊಡನಂಧಕಾಸುರಂ
ಹೇಮಪುಂಖದ ಸರಳನಗಣಿತಮನೆಚ್ಚನಾ ವ್ಯೋಮಕೇಶನ ಸರಿಸಕೆ ೪೧

ಯೆಂಬ ಕಾಡನ್ನು ನಾಶಗೊಳಿಸತೊಡಗಿದರು. ೩೯. ಇತ್ತಲಾಗಿ ಅಂಧಕಾಸುರನ ಪಾಳಯದಲ್ಲಿ ರಾಕ್ಷಸರನ್ನು ತುಂಡುತುಂಡಾಗಿ ಕೊಚ್ಚುತ್ತ ವೀರಭದ್ರ-ಷಣ್ಮುಖರು ಬರುತ್ತಿರಲು ಅತ್ತ ಅಂಧಕಾಸುರನು ಎಚ್ಚರಗೊಂಡು ವೀರಭದ್ರನನ್ನು ಹುಡುಕುತ್ತ ವೇಗವಾಗಿ ಶಿವನಿಗೆದುರಾಗಿ ನಡೆದುಬಂದನು. ಈಶ್ವರನೊಡನೆ ಯುದ್ಧ ಸಂಧಿಸಿತು. ಆಕಾಶವೆಲ್ಲ ಬಾಣಮಯವಾಗುವಂತೆ ಚೂಪಾದ ಬಾಣಗಳನ್ನು ಹೊರತೆಗೆದು ಕಿವಿಯ ವರೆಗೆ ಎಳೆದುಬಿಟ್ಟು ಕವಿಸಿದನು. ೪೦. ಆಕಾಶವನ್ನು ತುಂಬಿದ ಅಂಧಕಾಸುರನ ಬಾಣ ವನ್ನು ನಗುಮುಖದಿಂದ ನೋಡುತ್ತಾ ಶಿವನು ಪಿನಾಕಧನುವನ್ನು ಎತ್ತಿಕೊಂಡು ಜೇವೊಡೆದು ಒಂದು ಬಾಣವನ್ನು ಹೂಡಿ ತೆಗೆದು ಬಿಟ್ಟನು. ನೋಡಲು ಆಕ್ಷಣದಲ್ಲಿ ಅಷ್ಟು ಅಗಲಕ್ಕೂ ಆವರಿಸಿದ್ದ ಬಾಣಗಳು ತುಂಡು ತುಂಡಾಗಿ ಭೂಮಿಗೆ ಬೀಳುತ್ತಿದ್ದವು. ಅಂಧಕಾಸುರನು ಅದನ್ನು ನೋಡಿ ಮತ್ತೆ ಕೋಟ್ಯಾನುಕೋಟಿ ಬಾಣಗಳನ್ನು ವೇಗದಿಂದ ಪ್ರಯೋಗಿಸಿದನು. ೪೧. ಹೇಮಾಚಲದ ಸಮೀಪದಲ್ಲಿ ಬೀಳುವ ಮಳೆಯಧಾರೆಯ ಸಮೂಹದಂತೆ ರಾಕ್ಷಸನು ಬಿಟ್ಟ ಬಾಣಗಳ ಗುಂಪು ಈಶ್ವರನ ಸುತ್ತಲೂ ಬಳಸಲು ನೋಡಿ ತಡಮಾಡದೆ ಈಶ್ವರನು ಮತ್ತೊಂದು ಬಾಣವನ್ನು ಬಿಟ್ಟನು. ಅದು ರಾಕ್ಷಸನ ಬಾಣವನ್ನು ಕತ್ತರಿಸಿ ಭೂಮಿಗೆ ಕೆಡವಿತು. ಕೂಡಲೇ ಅಂಧಕಾಸುರನು ಚಿನ್ನದ ಪುಕ್ಕ

CC-0. Jangamwadi Math Collection. Digitized by eGangotri

ಕಡುತವಕದಿಂ ಕಿಡಿಯನುಗುಳುತುಂ ತಗುಳುತುಂ
ಪೊಡವಿಗತಿಭೀತಿಯುಂ ಮಾಡುತುಂ ಕಾಡುತುಂ
ಬಿಡದುಡುಗಳಡಕಿಲಂ ತೂರುತುಂ ಸಾರುತುಂ ಖಳಪತಿಯ ವಿಕ್ರಮವನು
ನಡೆವಿಷುವ್ರಜವನೊಂದಂಬಿನಿಂ ಮುಂಬಿನಿಂ
ತಡೆಗಡಿದು ಬಿಡಲವಂ ಕೋಪದಿಂ ಚಾಪದಿಂ
ಮೊಚಕವಿಸಿದವನಿಷುಸ್ತೋಮಮುಂ ವ್ಯೋಮಮುಂ ತಾಳದಿರಲಖಿಳಜನರು ೪೨

ಪೇಳಲೇಂ ಭಾಂಡತತಿಗೊಂದು ಗುದುಗೆಯ ಪೆಟ್ಟು
ಸಾಲದೇ ಖಳನೆಚ್ಚ ಮಾರ್ಗಣವ್ರಾತಮಂ
ಶೂಲಪಾಣಿಯ ಬಾಣವೊಂದೆ ಕಡಿದವನ ಕರಕಾರ್ಮುಕವನುಂ ಛಿದ್ರಿಸಿ
ಸಾಲಸೀಸಕ ಜೋಡು ಬತ್ತಳಿಕೆ ಕೈಪೊಡೆಯ
ಮೇಳವುಂ ತರಿದಂಧಕಾಸುರನ ಗರ್ವಗಿರಿ
ಜಾಲಮುಂ ಸವರಿದುದು ಶಿವನ ಬಾಣದ ಚಮತ್ಕಾರಮಂ ಪೊಗಳಲಳವೆ ೪೩

ಚಂಡವಿಕ್ರಮನತುಳಕೋಪದಿಂದಂ ಹಲಗೆ
ಖಂಡೆಯಂಗಳನಾಂತು ಪೊಯ್ವೆನೆಂದುಬ್ಬಿನಿಂ
ಖಂಡಪರಶುವನಿರದೆ ಮೇಲ್ವಾಯಲುಭವಂ ತ್ರಿಶೂಲದಿಂದಿರಿದು ಬಳಿಕ
ಅಂಡಲೆವುತಾಕಾಶಕೆತ್ತಲಾ ಖಳನ ಮೆ
ಯ್ಯುಂಡ ರಕ್ತಂ ನಿಮಿಷಮಾತ್ರದೊಳ್ ಭೂತಳಕೆ
ಹಿಂಡಿ ಹಿಳಿದಂತೆ ಕರೆಯಲ್ ವಿಗತಮದನಾಗಿ ಕೊಂಡಾಡಿದಂ ಶಿವನನು ೪೪

ವಿರುವ ಅಸಂಖ್ಯಾತವಾದ ಬಾಣಗಳನ್ನು ವ್ಯೋಮಕೇಶನ ಮೇಲೆ ಬಿಟ್ಟನು. ೪೨. ಅತಿ ತವಕದಿಂದ ಕಿಡಿಯನ್ನು ಕಾರುತ್ತ, ತಗುಳುತ್ತ, ಲೋಕಕ್ಕೇ ಬಹಳ ಹೆದರಿಕೆಯನ್ನುಂಟು ಮಾಡುತ್ತ, ಕಾಡುತ್ತ, ನಕ್ಷತ್ರಗಳ ರಾಶಿಯನ್ನು ತೂರುತ್ತ, ರಾಕ್ಷಸನ ಪರಾಕ್ರಮವನ್ನು ಸಾರುತ್ತ ಬರುವ ಬಾಣಗಳ ಸಮೂಹವನ್ನು ಒಂದು ಬಾಣದಿಂದ ಮುಂದಿನಿಂದ ತಡೆದು ಕಡಿದುಬಿಡಲು ಅಂಧಕಾಸುರನು ಸಕಲ ಜನರೂ ತಾಳದಿರಲು ಬಾಣಗಳ ಸಮೂಹದಿಂದ ಆಕಾಶವನ್ನು ಮುಚ್ಚಿದನು. ೪೩. ಹೇಳುವುದೇನು ? ಮಡಕೆಯ ಸಮೂಹಕ್ಕೆ ಒಂದು ದೊಣ್ಣೆಯ ಪೆಟ್ಟು ಸಾಲದೆ ? ರಾಕ್ಷಸನು ಬಿಟ್ಟ ಬಾಣಸಮೂಹವನ್ನು ಶಿವನ ಬಾಣವೊಂದೇ ಕಡಿದು ಅವನ ಕೈಯ ಬಿಲ್ಲನ್ನು ಛಿದ್ರಗೊಳಿಸಿ, ಶಿರಸ್ತ್ರಾಣ, ಕವಚ, ಬತ್ತಳಿಕೆ ಅಂಗರಕ್ಷೆಗಳನ್ನೆಲ್ಲ ತರಿದು ಅಂಧಕಾಸುರನ ಗರ್ವವೆಂಬ ಗಿರಿಸಮೂಹವನ್ನು ಸವರಿತು. ಶಿವನ ಬಾಣದ ಚಮತ್ಕಾರವನ್ನು ಹೊಗಳಲು ಸಾಧ್ಯವೆ ? ೪೪. ಪ್ರಚಂಡ ಪರಾಕ್ರಮಿಯಾದ ಅಂಧಕಾಸುರನು ಬಹಳ ಕೋಪದಿಂದ ಗುರಾಣಿ ಕತ್ತಿಗಳನ್ನು ಹಿಡಿದು ಹೊಡೆಯುತ್ತೇನೆ ಎಂದು ಗರ್ವ ಮತ್ತು ಉತ್ಸಾಹಗಳಿಂದ ಕೂಡಲೇ ತ್ರಿಶೂಲಿಯ (ಶಿವನ) ಮೇಲೆ ಬೀಳಲು ಅವನು ತ್ರಿಶೂಲದಿಂದ ಇರಿದು ಅನಂತರ ತಿರುವಿ ಆಕಾಶಕ್ಕೆ ಎತ್ತಿದನು. ಆ ರಾಕ್ಷಸನ ಮೈಯುಂಡ ರಕ್ತ ನಿಮಿಷಮಾತ್ರದಲ್ಲಿ ಭೂಮಿಗೆ ಹಿಂಡಿ

CC-0. Jangamwadi Math Collection. Digitized by eGangotri

ಜಯ ಸಕಲಗುಣಧಾಮ ಜಯ ಸಜ್ಜನಪ್ರೇಮ
ಜಯ ದಿವಿಜನುತಚರಣ ಜಯ ಭುಜಂಗಾಭರಣ
ಜಯ ಹುತಾಶನನೇತ್ರ ಜಯ ಮನೋಹರಗಾತ್ರ ಜಯಭೀಮ ವಿಧೃತಸೋಮ
ಜಯ ದನುಜಲಯಕಾಲ ಜಯ ಸಕಲಜನಪಾಲ
ಜಯ ವಿಜಿತಸಮವರ್ತಿ ಜಯ ಚಾರುತರಕೀರ್ತಿ
ಜಯ ದಕ್ಷಮುಖಶಿಕ್ಷ ಜಯಜಯ ವಿರೂಪಾಕ್ಷ ಸಲಹೆಂದನಸುರೇಂದ್ರನು ೪೫

ಇಂತೆಂದು ಕೊಂಡಾಡಿದಂಧಾಸುರಂಗೊಲ್ದು
ಕಂತುಮರ್ದನ ಮೆಚ್ಚಿದೆಂ ಬೇಡು ಬೇಡೆನಲ್
ಸಂತೋಷಸಾಗರದೊಳದ್ದೆನ್ನ ವಕ್ಷದೊಳ್ ನಾಟ್ಯಮಂ ನಟಿಸಿ ಬಳಿಕ
ಮುಂತೆ ಚಿರಮಾದ ಗಣಪದವಿಯಂ ಪಾಲಿಸೆನ
ಲಂತೆ ಗೈದಪೆನೆಂದು ತಾಂಡವದ ಚಿಹ್ನಮಂ
ತಾಂ ತಳೆಯಲುದ್ಯೋಗಿಸಿದನವೇಂ ಭಕ್ತರಾಧೀನನೋ ಸರ್ವೇಶನು ೪೬

ಕುಂಜರ ವ್ಯಾಘ್ರಚರ್ಮಂಗಳಂ ದೇಸಿಯಿಂ
ಮುಂಜೆರಗು ಮಿಗಲುಟ್ಟು ಪೊಳೆವ ಮರಿವಾವಿನಿಂ
ಕೆಂಜಡೆಗಳಂ ಬಿಗಿದು ವರವಿಭೂತಿಯನೆಸೆವ ಸರ್ವಾಂಗದೊಳ್ ಧೂಳಿಸಿ

ಹಿಳಿದಂತೆ ಸುರಿಯಲು ಅವನ ಗರ್ವ ನಾಶವಾಗಿ ಶಿವನನ್ನು ಸ್ತುತಿಸಿದನು. ೪೫. ಸಕಲ ಗುಣಧಾಮ ಜಯವಾಗಲಿ, ಸಜ್ಜನರನ್ನು ಪ್ರೀತಿಸುವವನಿಗೆ ಜಯವಾಗಲಿ. ದೇವತೆಗಳಿಂದ ವಂದಿಸಿಕೊಳ್ಳುವ ಪಾದವುಳ್ಳವನಿಗೆ ಜಯವಾಗಲಿ. ಸರ್ಪಭೂಷಣನಿಗೆ ಜಯವಾಗಲಿ. ಅಗ್ನಿನೇತ್ರನಿಗೆ ಜಯವಾಗಲಿ. ಮನೋಹರವಾದ ಶರೀರವುಳ್ಳವನಿಗೆ ಜಯವಾಗಲಿ. ಭಯಂಕರ(ಭೀಮ)ನಿಗೆ ಜಯವಾಗಲಿ, ಚಂದ್ರಶೇಖರನಿಗೆ ಜಯವಾಗಲಿ, ರಾಕ್ಷಸರಿಗೆ ಕಾಲಯಮನಾದವನಿಗೆ ಜಯವಾಗಲಿ. ಸಕಲ ಜನರನ್ನೂ ರಕ್ಷಿಸುವವನಿಗೆ ಜಯವಾಗಲಿ, ವಿಜಯಶಾಲಿಗೆ ಜಯವಾಗಲಿ. ಮನೋಹರವಾದ ಕೀರ್ತಿಯುಳ್ಳವನಿಗೆ ಜಯವಾಗಲಿ. ದಕ್ಷನ ಯಾಗಶಿಕ್ಷಕನಿಗೆ ಜಯವಾಗಲಿ. ಜಯ ಜಯ ವಿರೂಪಾಕ್ಷ, ಕಾಪಾಡು ಎಂದು ರಾಕ್ಷಸನು ಪ್ರಾರ್ಥಿಸಿದನು. ೪೬. ಈ ರೀತಿ ಕೊಂಡಾಡಿದ ಅಂಧಕಾಸುರನಿಗೆ ಶಿವನು ಒಲಿದು–ಮೆಚ್ಚಿದೆನು, ಬೇಡು, ಬೇಡು ಎಂದನು. ರಾಕ್ಷಸನು ಸಂತೋಷಸಾಗರದಲ್ಲಿ ಮುಳುಗಿ (ಶಿವನನ್ನು ಕುರಿತು) ನನ್ನ ಹೃದಯದಲ್ಲಿ ನಾಟ್ಯವಾಡಿ ಅನಂತರ ಮುಂದೆ ಸ್ಥಿರವಾದ ಗಣಪದವಿಯನ್ನು ದಯಪಾಲಿಸು ಎಂದು ಕೇಳಲು ಹಾಗೆಯೇ ಮಾಡುವೆನೆಂದು ಈಶ್ವರನು ತಾಂಡವಸ್ವರೂಪವನ್ನು ಹೊಂದಲು ಉದ್ಯುಕ್ತನಾದನು. ಸರ್ವೇಶ್ವರನು ಅದೆಂತಹ ಭಕ್ತಪರಾಧೀನನೊ? ೪೭. ಆನೆ ಹುಲಿಗಳ ಚರ್ಮಗಳನ್ನು ವೈಯಾರದಿಂದ ಮುಂದಿನ ಸೆರಗು ಉದ್ದವಾಗಿ ಇಳಿಯಬೀಳುವಂತೆ ಉಟ್ಟು, ಹೊಳೆವ ಎಳೆಯ ಸರ್ಪದಿಂದ ಜಡೆಗಳನ್ನು ಬಿಗಿದು, ಶ್ರೇಷ್ಠವಾದ ವಿಭೂತಿಯನ್ನು ಪ್ರಕಾಶಿಸುವ ಶರೀರಕ್ಕೆಲ್ಲ

CC-0. Jangamwadi Math Collection. Digitized by eGangotri

ರಂಜಿಸುವ ಶರಪಿನಾಕಮನುಳಿದು ಶೂಲದಿಂ
ದಂ ಜವದೊಳಸುರನಂ ನೆಲಕಿಳುಪಿ ಶಂಭು ಪು
ಷ್ಪಾಂಜಳಿಯ ಗಮಕದಿಂದವನ ವಕ್ಷೋರಂಗಮಂ ಪೊಗಲ್ಕನುಗೈದನು ೪೭

ನಂದಿ ಮದ್ದಳೆಯನಬ್ಜಾಸನಂ ತಾಳಮಂ
ಕಂದರ್ಪಪಿತನೆಸೆವ ವಾಸಮಂ ಹರುಷದಿಂ
ದಿಂದಿರನುಪಾಂಗಮಂ ನಾರದಂ ವೀಣೆಯಂ ತುಂಬುರಂ ದಂಡಿಗೆಯನು
ಇಂದುಮೌಳಿಯ ಸುತ್ತಲುಂ ಪಿಡಿದು ತತ್ಕ್ರಿಯೆಗ
ಳಿಂದೆ ಬಾಜಿಸಿದರಂಬುಜಭವಾಂಡಂ ನೋಡ
ಲಂದು ಶಬ್ದಬ್ರಹ್ಮದಿಂ ಪೂರ್ಣಮಾದುದೆಂಬಂದವಾಯ್ತೇವೇಳ್ವೆನು ೪೮

ವೀರಭದ್ರಾದಿ ಗಣವಿತತಿ ತದ್ಬಾಣಸಂ
ಹಾರಶೇಷಾಸುರನಿಕಾಯಂ ಸಮಸ್ತಬ್ಬಂ
ದಾರಕವ್ರಜಮಖಿಳಭುವನಜನಮಳ್ಕರಿಂ ಶಿವನಾಟ್ಯಮಂ ನೋಡಲು
ಸಾರಸಂತೋಷದಿಂ ನೆರೆದುದು ಜಯಸ್ವನಂ
ಭೋರಿಡಲ್ ಶರಧಿ ನಿರ್ಘೋಷದಿಂ ದುರಿತಸಂ
ಹಾರನಂಧಾಸುರನ ವಕ್ಷದೊಳ್ ಪುಷ್ಪಾಂಜುಳಿಯನೆಸಗಿದಂ ಮುದದೊಳು ೪೯

ಇರದೆ ಪುಷ್ಪಾಂಜುಳಿಯ ಸಮನಂತರದೊಳೆ ವಿ
ಸ್ತರದಿಂದೆ ಧುತ ವಿಧುತವಾಧೂತವೆಂದೆನಿಪ
ಶಿರದ ಭೇದಂಗಳಿಂದಂ ಪರಾಕಾದಿ ಹಸ್ತಂಗಳ ವಿಡಾಯದಿಂದೆ

ಬಳಿದು, ರಂಜಿಸುವ ಬಾಣ ಪಿನಾಕಧನುವನ್ನು ತೊರೆದು, ಅಂಧಕಾಸುರನನ್ನು ತ್ರಿಶೂಲದ ತುದಿಯಿಂದ ಕೆಳಗಿಳಿಸಿ, ಸುಖಕರನಾದ ಶಿವನು ಪುಷ್ಪಾಂಜಲಿಯ ಬೆಡಗಿನ ನಡಿಗೆಯಿಂದ ಅಸುರನ ಹೃದಯರಂಗವನ್ನು ಪ್ರವೇಶಿಸಲು ಸಿದ್ಧನಾದನು. ೪೮. ನಂದಿ ಮದ್ದಳೆಯನ್ನು, ಬ್ರಹ್ಮನು ತಾಳವನ್ನು, ವಿಷ್ಣುವು ಆನಂದದಿಂದ ಕೊಳಲನ್ನು, ಇಂದ್ರನು ಉಪಾಂಗವನ್ನು, ನಾರದನು ವೀಣೆಯನ್ನು, ತುಂಬುರನು ಗೆಜ್ಜೆಗೋಲನ್ನು ಹಿಡಿದು, ಚಂದ್ರ ಶೇಖರನನ್ನು ಬಳಸಿ, ಅವುಗಳ ಕ್ರಿಯೆಗಳಿಗನುಸಾರವಾಗಿ ಬಾರಿಸಿದರು. ನೋಡಲು ಆ ದಿನ ಬ್ರಹ್ಮಾಂಡವೆಲ್ಲವೂ ಶಬ್ದಬ್ರಹ್ಮದಿಂದ ಪೂರ್ಣವಾಯಿತು ಎಂಬ ರೀತಿಯಾಯಿತು. ಅದನ್ನು ಏನು ಹೇಳಲಿ ? ೪೯. ವೀರಭದ್ರ ಮೊದಲಾದ ಗಣಸಮೂಹ, ಯುದ್ಧದಲ್ಲಿ ಬಾಣದಿಂದ ನಾಶವಾಗದೆ ಉಳಿದ ರಾಕ್ಷಸರ ಗುಂಪು, ಎಲ್ಲ ದೇವತೆಗಳ ಸಮೂಹ, ಸಕಲ ಲೋಕಗಳ ಜನ ಪ್ರೀತಿಯಿಂದ ನಟರಾಜನಾದ ಶಿವನ ನಾಟ್ಯವನ್ನು ನೋಡಲು ಅತಿಸಂತೋಷದಿಂದ ನೆರೆಯಿತು. ಜಯಧ್ವನಿ ಸಾಗರದ ನಿರ್ಘೋಷದಂತೆ ಮೊಳಗಲು ಪಾಪಸಂಹಾರಿಯಾದ ಶಿವನು ಅಂಧಕಾಸುರನ ಎದೆಯ ರಂಗಸ್ಥಳದಲ್ಲಿ ಸಂತೋಷದಿಂದ ಪುಷ್ಪಾಂಜಲಿಯನ್ನು ಹೊರಸೂಸಿದನು. ೫೦. ಪುಷ್ಪಾಂಜಳಿಯನಂತರ ವಿಸ್ತಾರವಾಗಿ ಧುತ, ವಿಧುತ, ಆಧೂತವೆಂದು ಪ್ರಖ್ಯಾತವಾದ ಶಿರದ ಭೇದಗಳಿಂದ, ಪರಾಕಾದಿ ಹಸ್ತಗಳ ತೋರಿಕೆಯಿಂದ, ಆಲೋಚಿಸಲು ಸಮಾಭುಗ್ನ, ಆಭುಗ್ನ ಮೊದಲಾದ

CC-0. Jangamwadi Math Collection. Digitized by eGangotri

ಪರಿಕಿಸೆ ಸಮಾಭುಗ್ನಮಾಭುಗ್ನ ಮುಖ್ಯಮಾ
ದುರದ ಭೇದಂಗಳಿಂದಂ ವಿವರ್ತಿತಮುಖ್ಯ
ಬಿರಿಯ ಭೇದಂಗಳಿಂದಾಡಿದಂ ಶಂಕರಂ ಪೇಳಲೇನಚ್ಚರಿಯನು ೫೦

ನಟಣೆಯಿಂ ಕಂಪಿತೋದ್ವಾಹಿತಚ್ಛಿಹ್ನಾದಿ
ಕಟಿಯ ಭೇದಂಗಳೈದಂ ಸವಿಸ್ತರವಾಗಿ
ನಿಟಿಲಾಂಬಕಂ ತೋರಿ ಸಮಪಂಚಿತಾದಿ ಪದಭೇದಂಗಳಂ ಕಾಣಿಸಿ
ಪಟುತರಪ್ರತ್ಯಂಗಭಾವಮಂ ಕೈಗೈದು
ಚಟುಲವಾಗಿರ್ದ ಕೊರಳೋಜೆಗಳನನುಗೊಳಿಸಿ
ನಟಿಸಿದಂ ಶಂಭು ನೋಟಕರ ದಿಟ್ಟಿಗಳೊಡನೆ ನಟಿಸಲ್ ವಿಲಾಸದಿಂದೆ ೫೧

ಇರದೂರ್ಧ್ವ ಮುಂತಾದ ಭುಜದ ಭೇದಂಗಳಂ
ಪರಿವಿಡಿಯೊಳರುಪಿ ಖಲ್ವಕ್ಷಾಮಮೆಂಬುದರ
ದುರುಭೇದಮಂ ತೋರಿ ವಲಿತ ಕಂಪಿತಮುಖ್ಯಮಾದೂರುಭೇದಂಗಳ
ಹರುಷದಿಂ ವಿಸ್ತರಂಗೆಯ್ದುವಾವರ್ತಿತಂ
ಪರಿಕಿಸಲ್ಕುನ್ನತೋಕ್ಷಿಪ್ತಾದಿ ಜಂಘೆಗಳ
ಪರಮ ಭೇದಂಗಳಂ ತೋರಿದಂ ಭುವನಜನಕೀಶಂ ಚಮತ್ಕೃತಿಯೊಳು ೫೨

ಪರಮ ಶೃಂಗಾರಾದಿರಸವೆಸಕದಿಂದೆ ವಿ
ಸ್ತರದ ಸಾತ್ವಿಕವರಸ್ಥಾಯಿಸಂಚಾರಿಗಳ
ಪರಿವಿಡಿಗಳಿಂದಲಾಂಗಿಕೆ ವಾಚಿಕಾಹಾರ್ಯ ಸಾತ್ವಿಕಾದ್ಯಭಿನಯಗಳ

ಶರೀರವನ್ನು ಕೊಂಕಿಸುವ ನಾನಾ ಭೇದಗಳಿಂದ, ವಿವರ್ತಿತ (ಸುತ್ತುವಿಕೆ) ಮೊದಲಾದ ಕಷ್ಟಕರವಾದ ಭೇದಗಳಿಂದ ಶಂಕರನು ನಾಟ್ಯವಾಡಿದನು. ಆಶ್ಚರ್ಯವನ್ನು ಏನು ಹೇಳಲಿ ? ೫೧. ನೋಡುವವರ ದೃಷ್ಟಿಯೂ ಶಂಕರನ ಜೊತೆಯಲ್ಲಿಯೇ ನಟಿಸಲು ನಿಟಿಲನೇತ್ರನು ವಿಲಾಸದಿಂದ ನಟನೆಯ ಮೂಲಕ ಕಂಪಿತಚಿಹ್ನ, ಉದ್ವಾಹಿತಚಿಹ್ನವೇ ಮೊದಲಾದ ಸೊಂಟದ ಐದು ಭೇದಗಳನ್ನು ವಿಸ್ತಾರವಾಗಿ ತೋರಿಸಿದನು. ಸಮವಂಚಿತ ಮೊದಲಾದ ಪಾದಗಳ ವಿಧಾನವನ್ನು ತೋರಿಸಿ, ಕಷ್ಟಕರವಾದ ಪ್ರತ್ಯಂಗಭಾವವನ್ನು ನಟಿಸಿ, ಸೊಗಸಿನಿಂದ ಕೂಡಿದ, ವೇಗವಾದ ಕೊರಳಿನ ರೀತಿಯನ್ನು ಅನುಗೊಳಿಸಿ ಶಂಭುವು ನಟಿಸಿದನು. ೫೨. ಮುಂದೆ ಊರ್ಧ್ವ ಮೊದಲಾದ ಭುಜದ ಭೇದಗಳನ್ನು ಕ್ರಮವಾಗಿ ತೋರಿಸಿ, ಖಲ್ವಕ್ಷಾಮ ಎಂಬುದರ ಹೆಚ್ಚಾದ ಪ್ರಭೇದವನ್ನು ತೋರಿಸಿ, ವಲಿತ-ಕಂಪಿತ ಮೊದಲಾದ ತೊಡೆಯ ಚಲನಭೇದಗಳನ್ನು ಸಂತೋಷದಿಂದ ವಿಸ್ತಾರ ಮಾಡಿ, ಆವರ್ತಿತವನ್ನು ಮತ್ತು ಉನ್ನತೋಕ್ಷಿಪ್ತಾದಿ ಜಂಘೆಗಳ ಪರಮ ಭೇದಗಳನ್ನು ಚಮತ್ಕಾರದಿಂದ ಲೋಕದ ಜನಕ್ಕೆ ತೋರಿಸಿದನು. ೫೩. ಶ್ರೇಷ್ಠವಾದ ಶೃಂಗಾರರಸದಿಂದ ವಿಸ್ತಾರವೂ ಶ್ರೇಷ್ಠವೂ ಆದ ಸಾತ್ವಿಕ, ಸ್ಥಾಯಿ-ಸಂಚಾರಿ ಭಾವಗಳನ್ನು ಅನುಕ್ರಮವಾಗಿ ಆಂಗಿಕೆ-ವಾಚಿಕೆ-ಆಹಾರ್ಯ ಸಾತ್ವಿಕಾದಿ ಅಭಿನಯಗಳನ್ನು ಶ್ರೇಷ್ಠತೆಯ

CC-0. Jangamwadi Math Collection. Digitized by eGangotri

ಗರುವಿಕೆಯ ಗಮಕದಿಂ ಪಾದಚಾರಿಗಳ ಲಘು
ಚರಣವಿನ್ಯಾಸದಿಂದೆಸೆವ ಕೋಪು ಕಳಾಸ
ತಿರುಪುಗಳ ಬೆಡಗುಬಿನ್ನಣದೆ ನಗಜಾಧವಂ ತೋರಿದು ತಾಂಡವವನು ೫೩

ಇವು ಮುಖ್ಯವಾದ ವರಭರತಶಾಸ್ತ್ರಕ್ರಮದ
ವಿವರಣೆಯನೆಲ್ಲಮಂ ವಿಸ್ತರಿಸಿಯುಂಬುರುಹ
ಭವನ ತಾಳಕೆ ನಂದಿ ಬಾಜಿಸುವ ಮದ್ದಳೆಯ ಗತಿಗೆ ವಾಸವಿಲಾಸಕೆ
ದಿವಿಜವಲ್ಲಭನುಪಾಂಗಶ್ರುತಿಗೆ ನಾರದೋ
ದ್ಭವ ಸುವೀಣಾಕಿಂಕಿಣೀಸ್ವನದ ಸಮ್ಮತಕೆ
ಭವನಾಡಿದಂ ಸಕಲಭುವನಜನದುತ್ಸವಂ ತವೆ ಪೆಚ್ಚೆ ಸಂತಸದೊಳು ೫೪

ತಲೆಯ ನದಿಯಲ್ಲಾಡೆ ಕಿರುಜಡೆಗಳೊಲೆದಾಡೆ
ಲಲಿತಮುಖರಸವೇರೆ ಬೆಮರಂಗದೊಳ್ ತೋರೆ
ಪುಲಿದೊವಲ್ ನೆಲಕಲೆಯೆ ರುಂಡಮಾಲೆಗಳೊಲೆಯೆ ಭರಮಾಗಿ ನಾಸಿಕದೊಳು
ಎಲರೊಡನೊಡನೆ ಸುಳಿಯೆ ತೆಳ್ವಸುರ್ ಬಳಿದಿಳೆಯೆ
ಸಲೆ ವಾದ್ಯತತಿ ಮೊಳಗೆ ಫಣಿಭೂಷಣಂ ತೊಳಗೆ
ನಳಿತೋಳ್ಗಳಂ ನೀಡಿ ಪಲವಂಗದಿಂದಾಡಿ ಮೆರೆದನುರೆ ಬಿನ್ನಣವನು ೫೫

ದೇವತೆಗಳರಲಮಳೆಯುಂ ಕರೆಯೆ ಜಯಜಯಾ
ರಾವದಿಂದಖಿಳಲೋಕದ ಜನಂ ಕೈಮುಗಿಯೆ
ದೇವನಂಧಾಸುರನ ವಕ್ಷದಿಂದಿಳಿದವಂಗಿತ್ತು ವರಗಣಪದವಿಯ

ನಡಿಗೆಯಿಂದ ಪಾದಚಾರಿಗಳ, ಲಘುಚರಣ ವಿನ್ಯಾಸದಿಂದ ಪ್ರಖ್ಯಾತವಾದ ಕೋಪು, ಕಳಾಸ, ತಿರುಪುಗಳ ಬೆಡಗು ಬಿನ್ನಾಣಗಳಿಂದ ಶಿವನು ತಾಂಡವನೃತ್ಯವನ್ನು ತೋರಿಸಿದನು. ೫೪. ಇವೇ ಮೊದಲಾದ ಶ್ರೇಷ್ಠವಾದ ಭರತನಾಟ್ಯ ಶಾಸ್ತ್ರಕ್ರಮದ ವಿವರಣೆಯೆಲ್ಲವನ್ನೂ ವಿಸ್ತರಿಸಿ ಬ್ರಹ್ಮನ ತಾಳಕ್ಕೆ, ನಂದಿಯು ಬಾರಿಸುವ ಮದ್ದಳೆಯ ಗತಿಗೆ, ಕೊಳಲಿನ ವಿಲಾಸಕ್ಕೆ, ದೇವೇಂದ್ರನ ಉಪಾಂಗದ ಶೃತಿಗೆ ನಾರದನು ಬಾರಿಸುವ ವೀಣೆಯ ಕಿಣಿ ಕಿಣಿ ಎಂಬ ಧ್ವನಿಯ ಒಡಂಬಡಿಕೆಗೆ ಎಲ್ಲ ಲೋಕದ ಜನರ ಸಂಭ್ರಮವು ಅತಿಯಾಗಿ ಹೊಮ್ಮಲು ಭವನು (ಶಿವನು) ಸಂತೋಷದಿಂದ ನಾಟ್ಯವಾಡಿದನು. ೫೫. ತಲೆಯ ಮೇಲಿನ ಗಂಗೆ ಅಲ್ಲಾಡಲು, ಕಿರುಜಡೆಗಳು ತೂಗಾಡಲು, ಮನೋಹರವಾದ ಮುಖವು ಆನಂದದಿಂದ ಶೋಭಿಸಲು, ದೇಹದಲ್ಲಿ ಬೆವರು ಕಾಣಿಸಿಕೊಳ್ಳಲು. ಹುಲಿದೊಗಲು ನೆಲದ ಮೇಲೆ ಅಲೆದಾಡಲು, ರುಂಡಮಾಲೆಗಳು ತೂಗಾಡಲು, ಮೂಗಿನಲ್ಲಿ ಗಾಳಿಯು ರಭಸದಿಂದ ಒಂದೇ ಸಮನೆ ಸುಳಿದಾಡಲು, ತೆಳುವಾದ ಹೊಟ್ಟೆಯು ಉಬ್ಬಿ ಇಳಿಯಲು, ವಾದ್ಯಸಮೂಹವು ಚೆನ್ನಾಗಿ ಮೊಳಗಲು, ಸರ್ಪಭೂಷಣವು ಹೊಳೆಯಲು, ಬಳ್ಳಿಯಂತೆ ಬಳುಕುವ ಕೋಮಲವಾದ ತೋಳುಗಳನ್ನು ಚಾಚಿ, ಹಲವು ರೀತಿಗಳಿಂದ ನರ್ತಿಸಿ ಜಾಣ್ಮೆಯನ್ನು ಚೆನ್ನಾಗಿ ಪ್ರದರ್ಶಿಸಿದನು. ೫೬. ದೇವತೆಗಳು ಹೂಮಳೆಯನ್ನು ಸುರಿಯಲು, ಜಯ ಜಯವೆಂಬ ಶಬ್ದ ಮಾಡುತ್ತ ಎಲ್ಲ ಲೋಕದ ಜನ ಕೈಮುಗಿಯಲು, ಶಿವನು

CC-0. Jangamwadi Math Collection. Digitized by eGangotri

ತೀವಿದ ಜನಂಗಳಂ ಬೀಳ್ಕೊಟ್ಟು ಕರುಣದಿಂ
ದೇವಿಯರ್ವೆರಸಿ ಕೈಲಾಸಗಿರಿಶಿಖರದ ಮ
ಹಾವಿಭವದರಮನೆಗೆ ಪೋಗಿ ಘನಹರುಷದಿಂದಿರ್ದಂ ವಿರೂಪಾಕ್ಷನು ೫೬

ಇಂತೆಸೆವ ಚೆನ್ನಬಸವೇಶನ ಪುರಾಣವಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ ೫೭

ಐವತ್ತನೆಯ ಸಂಧಿ ಸಂಪೂರ್ಣ

ಅಂಧಕಾಸುರನ ಎದೆಯ ಮೇಲಿಂದ ಇಳಿದು, ಅವನಿಗೆ ಶ್ರೇಷ್ಠವಾದ ಗಣಪದವಿಯನ್ನು ಕೊಟ್ಟು, ಅಲ್ಲಿ ಸೇರಿದ್ದ ಜನಗಳನ್ನು ಬೀಳ್ಕೊಟ್ಟು, ಕರುಣೆಯಿಂದ ಪಾರ್ವತೀದೇವಿಯೊಡಗೂಡಿ ಕೈಲಾಸಪರ್ವತ ಶಿಖರದ ಮಹಾವೈಭವದಿಂದ ಕೂಡಿದ ಅರಮನೆಗೆ ಹೋಗಿ ವಿರೂಪಾಕ್ಷನು ಅತ್ಯಾನಂದದಿಂದಿದ್ದನು. ೫೭. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿ ಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ಐವತ್ತನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ಐವತ್ತೊಂದನೆಯ ಸಂಧಿ

ಸೂಚನೆ : ಮೂಲೋಕವರಿಯಲೀಶ್ವರಗೊಲಿದು ಶ್ವೇತಭೂ
ಪಾಲಕನ ಮೊರೆಗೇಳ್ದು ಭಾಳಾಕ್ಷಿಯಗ್ನಿಯಿಂ
ಕಾಲನಂ ಸುಟ್ಟು ಮಗುಳ್ದಸುವಿತ್ತು ಶ್ವೇತನಂ ಕೈಲಾಸಪುರಕೊಯ್ದನು

ಹೆಂಡತಿಯ ಮಗನನರಿದನ ಮಗನ ಮಾವನಂ
ಮಂಡೆಯೊಳ್ ಧರಿಸಿ ಕರಜಾತಪ್ರಘಾತದಿಂ
ಪುಂಡರೀಕೈಕಕರಧೃತನಾಗಿ ತಜ್ಜಾತಸವನಪ್ರತಿಘ್ನನಾಗಿ
ಹೆಂಡತಿಯ ಲೀಲಾಕುಮಾರನಂ ಶಿರವನುರೆ
ಖಂಡಿಸಿದ ಪಂಪಾವಿರೂಪಾಕ್ಷ ನೀನೆ ಮುಂ
ಕೊಂಡು ರಕ್ಷಿಪುದು ಭೂಮಂಡಲದ ಸುಜನರಂ ಚಂಡಕರಕೋಟಿತೇಜ ೧

ಎಲೆ ಸಿದ್ಧರಾಮ ಕೇಳ್ ಪೂರ್ವದೊಳ್ ಶ್ವೇತನೆಂ
ಬಿಳೆಯಾಣ್ಮನುಂಟಾ ನೃಪಂ ಬಹಳಭಾಗ್ಯದಿಂ
ಬಲದಿಂ ಮಹಾದೇಶ ದುರ್ಗ ತಳತಂತ್ರಾದಿ ಸಕಲಸನ್ನಾಹದಿಂದೆ
ಇಳೆಯನಾಳುತ್ತೊಂದು ದಿವಸಮಾ ಭೂವರಂ
ತಳರ್ದನೊಲವಿಂದಲಾ ಚತುರಂಗಬಲವೆರಸಿ
ನಲವಿನಿಂ ವೈಹಾಳಿಗುದಧಿರವಮಂ ಮೀರಲಳ್ಳಿರಿವ ವಾದ್ಯಂಗಳು ೨

ಸೂಚನೆ : ಮೂರು ಲೋಕಗಳೂ ತಿಳಿಯುವಂತೆ ಶ್ವೇತರಾಜನ ಮೊರೆಯನ್ನು ಕೇಳಿ ಹಣೆಗಣ್ಣಿನ ಬೆಂಕಿಯಿಂದ ಯಮನನ್ನು ಸುಟ್ಟು, ಮತ್ತೆ ಪ್ರಾಣವಿತ್ತು, ಶ್ವೇತನನ್ನು ಕೈಲಾಸಕ್ಕೆ ಕರೆದುಕೊಂಡು ಹೋದನು. ೧. ಹೆಂಡತಿಯಾದ ಭೂದೇವಿಯ ಮಗ ನರಕಾಸುರನನ್ನು ಕತ್ತರಿಸಿದ ಕೃಷ್ಣನ ಮಗ ಪ್ರದ್ಯುಮ್ನನ ಸೋದರಮಾವನಾದ ಚಂದ್ರನನ್ನು ತಲೆಯಲ್ಲಿ ಧರಿಸಿದವನೆ, ಉಗುರಿನಿಂದ ಚಿವುಟಿದ ತಲೆಯೋಡನ್ನು ಕೈಯಲ್ಲಿ ಹಿಡಿದು, ಅದರಿಂದ ಉಂಟಾದ ದೋಷಪರಿಹಾರಕ್ಕಾಗಿ ಭಿಕ್ಷಾವೃತ್ತಿಯನ್ನು ಕೈಗೊಂಡವನೆ, ಹೆಂಡತಿಯ ಪ್ರೀತಿಯ ಮಗನಾದ ಗಣೇಶನ ತಲೆಯನ್ನು ಕತ್ತರಿಸಿದ ಪಂಪಾವಿರೂಪಾಕ್ಷ ಕೋಟಿ ಸೂರ್ಯಪ್ರಕಾಶ, ನೀನೇ ಮುಂದಾಗಿ ಭೂಲೋಕದ ಸಜ್ಜನರನ್ನು ರಕ್ಷಿಸು. ೨. ಎಲೈ ಸಿದ್ಧರಾಮ, ಕೇಳು. ಹಿಂದೆ ಶ್ವೇತನೆಂಬ ರಾಜನಿದ್ದನು. ಅವನು ಬಹಳ ಐಶ್ವರ್ಯದಿಂದ ಪರಾಕ್ರಮದಿಂದ, ವಿಸ್ತಾರದಿಂದ ದೇಶ, ಕೋಟೆ, ಸೈನ್ಯ ಮೊದಲಾದ ಎಲ್ಲ ಸನ್ನಾಹದಿಂದ ರಾಜ್ಯವನ್ನು ಆಳುತ್ತಿರಲು, ಒಂದು ದಿನ ಆ ರಾಜನು ಪ್ರೀತಿಯಿಂದ ಚದುರಂಗದೊಡಗೂಡಿ ಸಮುದ್ರಘೋಷವನ್ನು ಮೀರಿಸುವ ವಾದ್ಯಗಳ

CC-0. Jangamwadi Math Collection. Digitized by eGangotri

ಆ ಪುರದೊಳೊರ್ವ ಪರದಂ ಸಮುದ್ರಾಂತರ
ದ್ವೀಪಂಗಳೊಳ್ ತನ್ನ ಬೆವಹಾರಕ್ಕೈದಲವ
ನೋಪಳ್ ನೃಪಾಲಕಂ ವೈಹಾಳಿಗೈದುವುದನೀಕ್ಷಿಸುವ ತವಕದಿಂದೆ
ವ್ಯಾಪಿಸಿದ ಕನಕಮಣಿಗಣತೋರಣಾವಳಿಯ
ಗೋಪುರವನಡರಿ ನೋಡುತ್ತಿರಲ್ ಶಶಿಮುಖಿಯ
ರೂಪು ಯೌವನ ವಿಲಾಸಂಗಳಂ ಶ್ವೇತನೆಂಬವನೀಶನೀಕ್ಷಿಸಿದನು ೩

ಕಾರಿದುದು ಕರಣತತಿ ಲಜ್ಜೆಯಂ ನಿರ್ಮಿರ್ದು ಕಾ
ಲೂರಿದುದು ಹೃದಯದೊಳ್ ತಿಮಿರಂ ಗಭೀರಾಬ್ಧಿ
ಯಾರಿದುದು ಮನ್ಮಥಂ ಪೂಗಣೆಗಳಂ ಪೂಡಿದಂ ತನ್ನ ಕಬ್ಬುವಿಲ್ಗೆ
ಪಾರಿದುದು ಧೃತಿ ಪಲ್ಲಟಂಬೋಯ್ತು ತನುಬಲಂ
ಜಾರಿದುದು ಚಿಂತಾಲತಾವೃದ್ಧಿ ಪರ್ಬಿ ಕುಡಿ
ದೋರಿದುದು ಭೂಪಂಗೆ ಪರಸತಿಯ ಬೇಟವೇಂ ಪಥ್ಯವೋ ಮಾನವರ್ಗೆ ೪

ಅಂತರಂಗದೊಳಿನಿತು ಹದನಾಯ್ತು ಭೂಪತಿಗೆ
ಮುಂತಿರ್ಪ ಸಚಿವ ಸಾಮಂತಸೇನಾಧಿಪ
ರ್ಗಂ ತೋರುತವಳ್ಗೆ ಹರಣವನೊತ್ತೆಗೊಟ್ಟು ವೈಹಾಳಿಯ ಬಯಲ್ಗೆ ಪೋಗಿ
ತಿಂತಿಣಿಯ ತುರಗದೇರಾಟವುಂ ಕೈಗೊಡುವ
ದಂತಿಗಳ ಯುದ್ಧಟ ಸಘಾಟವುಂ ನೋಡದೆ ನೃ
ಪಂ ತಿರುಗಿದಂ ಚಿತ್ರಪಟದ ರೂಪಿನ ತೆರದಿನಂದಣದ ಗೊಂದಣದೊಳು ೫

ರಭಸದಿಂದ ವೈಹಾಳಿಗೆ ಹೊರಟನು. ೩. ಆ ಪಟ್ಟಣದಲ್ಲಿಯ ಒಬ್ಬ ವ್ಯಾಪಾರಿ ಸಮುದ್ರದಾಚೆಯ ದ್ವೀಪಕ್ಕೆ ತನ್ನ ವ್ಯಾಪಾರಕ್ಕಾಗಿ ಹೋಗಿದ್ದನು. ಆಗ ಅವನ ಹೆಂಡತಿ ರಾಜನು ವಿಹಾರಕ್ಕೆ ಹೋಗುವುದನ್ನು ನೋಡುವ ಉತ್ಸಾಹದಿಂದ ಕನಕಮಣಿಗಳ ಸಮೂಹದಿಂದ ಕೂಡಿದ ತೋರಣಗಳಿಂದ ಅಲಂಕೃತವಾದ ಗೋಪುರವನ್ನು ಹತ್ತಿ ನೋಡುತ್ತಿರಲು ಶ್ವೇತರಾಜನು ಆಕೆಯ ರೂಪು, ಯೌವನವಿಲಾಸವನ್ನು ನೋಡಿದನು. ೪. ಕೂಡಲೇ ಅವನ ಅಂಗಾಂಗಗಳು ಲಜ್ಜೆಯನ್ನು ತೊರೆದವು. ಹೃದಯವನ್ನು ಅಜ್ಞಾನ ಪೂರ್ಣವಾಗಿ ಆವರಿಸಿತು. ಗಂಭೀರತನ ತೊಲಗಿತು. ತನ್ನ ಕಬ್ಬಿನ ಬಿಲ್ಲಿಗೆ ಮನ್ಮಥನು ಹೂಬಾಣಗಳನ್ನು ಹೂಡಿದನು. ಧೈರ್ಯ ಹಾರಿಹೋಯಿತು. ಶರೀರದ ಶಕ್ತಿ ಪಲ್ಲಟ ವಾಯಿತು. ಧೈರ್ಯ ಜಾರಿತು. ರಾಜನಿಗೆ ಚಿಂತಾಲತೆ ಬೆಳೆದು ಹಬ್ಬಿ ಕುಡಿಯೊಡೆ ಯಿತು. ಮಾನವರಿಗೆ ಪರಸ್ತ್ರೀಯರ ಮೇಲಿನ ಪ್ರೀತಿ ಯೋಗ್ಯವಾದುದೇನು ? ೫. ರಾಜನಿಗೆ ಅಂತರಂಗದಲ್ಲಿ ಇಷ್ಟು ರೀತಿಯಾಯಿತು. ಮುಂದಿದ್ದ ಸಾಮಂತ, ಮಂತ್ರಿ, ಸೇನಾಧಿಪತಿಗಳಿಗೆ ಆಕೆಯನ್ನು ತೋರಿಸುತ್ತ, ಅವಳಿಗಾಗಿ ಪ್ರಾಣವನ್ನೇ ಒತ್ತೆಯಿಟ್ಟು, ವೈಹಾಳಿಯ ಬಯಲಿಗೆ ಹೋಗಿ ಸಮೂಹದ ಕುದುರೆಯ ಏರಾಟವನ್ನು, ಕೈ ಕೈ ಮಿಲಾಯಿಸುವ ಆನೆಗಳ ಯುದ್ಧದ ಆಧಿಕ್ಯವನ್ನು ನೋಡದೆ, ಚಿತ್ರಪಟದಲ್ಲಿ ಬರೆದ ಬೊಂಬೆಯ ರೀತಿಯಲ್ಲಿ ಪಲ್ಲಕ್ಕಿಯ ಸಮೂಹದೊಡನೆ ರಾಜನು ಹಿಂದಿರುಗಿದನು.

CC-0. Jangamwadi Math Collection. Digitized by eGangotri

ಅರಮನೆಯ ಮುಂದಂದಳವನಿಳಿದು ಭೂಪರಂ
ಬೆರಳ ಸನ್ನೆಯೊಳಾಲಯಂಗಳ್ಗೆ ಬೀಳ್ಕೊಟ್ಟು
ತರತರದೊಳಾರತಿಯನೆತ್ತುವಂಗನೆಯರಂ ಕಣ್ಗೋಣೆಯಿಂ ಜರ್ವುತೆ
ಸರಸಪರಿಮಳಪೂರಮಾದ ಶಯ್ಯಾಗೃಹ
ಕ್ಕರಸನೈತಂದು ಪವಡಿಸಿ ದಿನಮನೊಂದು ಸಾ
ಸಿರಮಾಗಿ ಕಳಿಯೆ ಮಾರ್ತಾಂಡನೈದಿದನಸ್ತಗಿರಿಯ ಮರೆಯಂ ಕ್ಷಣದೊಳು ೬

ಅರಳ್ದುದಾ ಕುಮುದಂ ಮುದಂ ಚಕೋರಕ್ಕಾಯ್ತು
ಹೊರಳ್ದುದಳಲಿಂ ಚಕ್ರವಾಕವಾ ಕಮಲದೊಳ್
ಸರಳ್ದುದುರೆ ತುಂಬಿ ತುಂಬಿದುದು ತಿಮಿರಂ ಶ್ವೇತನೃಪನ ಹೃತ್ತಿಮಿರದೊಡನೆ
ಮರುಳ್ದುದುಂ ನೀಡಕೆ ಖಗಾಳಿ ಗಾಳಿಯು ಕೂಡೆ
ತೆರಳ್ದುದೆಲ್ಲಾ ಕುಸುಮಪರಿಮಲಂ ಮಲತರ್ಗೆ
ಕೆರಳ್ದು ನಿಶಿಯೌಚಿತ್ಯಮೆಂದಂಗಜಂ ಗಜರಿ ಸರಳಂ ಪ್ರಯೋಗಿಸಿದನು ೭

ಎಲೆ ಸಿದ್ಧರಾಮ ಕೇಳಾ ಸಮಯದೊಳ್ ನೃಪಂ
ಕಳವಳಿಸಿ ವಿರಹದಿಂ ತನ್ನಾಪ್ತಸಖಿಯನೊ
ರ್ವಳನಿರದೆ ಕರೆದು ಕೇಳೆಲೆ ತರುಣಿ ರತ್ನವರ್ಣನ ಕಾಂತೆಯಂ ಪಗಲೊಳು
ಲಲಿತಸೌಧಾಗ್ರದೊಳ್ ಕಂಡೆನವಳಂ ತಂದು
ಕಳುಪದಿರಲೆನ್ನ ಹರಣಂ ಪೋಪುದೆನೆ ಮುನ್ನ
ಕಳುಪಿದವರೊಳಗಿದೇಂ ಘನವೆ ತಂದಪೆನೆಂದು ಬೀಳ್ಕೊಂಡು ನಡೆತಂದವಳು ೮

೬. ಅರಮನೆಯ ಮುಂದೆ ಪಲ್ಲಕ್ಕಿಯಿಂದಿಳಿದು, ರಾಜರನ್ನು ಬೆರಳ ಸನ್ನೆಯಿಂದ ಅವರವರ ಅರಮನೆಗಳಿಗೆ ಕಳುಹಿಸಿಕೊಟ್ಟು ನಾನಾ ರೀತಿಯಲ್ಲಿ ಆರತಿಯನ್ನೆತ್ತುವ ಸ್ತ್ರೀಯರನ್ನು ಕಣ್ಣ ಕೊನೆಯಿಂದ ನಿವಾರಿಸುತ್ತ, ಸರಸ ಪರಿಮಳದಿಂದಾವೃತವಾದ ಮಲಗುವ ಮನೆಗೆ ಬಂದು ಮಲಗಿದನು. ಒಂದು ದಿನವನ್ನು ಸಾವಿರ ದಿವಸಗಳಂತೆ ಕಳೆಯಲು ಕ್ಷಣದಲ್ಲಿ ಸೂರ್ಯನು (ಅಸ್ತಾಚಲದ ಹಿಂದೆ ಮರೆಯಾದನು) ಮುಳುಗಿದನು. ೭. ಆ ನೈದಿಲೆ ಅರಳಿತು. ಚಕೋರಕ್ಕೆ ಸಂತೋಷವಾಯಿತು. ಚಕ್ರವಾಕ ಸಂಕಟದಿಂದ ಹೊರಳಿತು. ಆ ಕಮಲದಲ್ಲಿ ದುಂಬಿ ಬಹುವಾಗಿ ಸರಳಿತು. ಶ್ವೇತಭೂಪನ ಹೃದಯದ ಕತ್ತಲೆ ಯೊಡನೆ ಹೊರಗಿನ ಕತ್ತಲೆಯೂ ತುಂಬಿತು. ಹಕ್ಕಿಗಳು ತಮ್ಮ ಗೂಡಿಗೆ ಮರಳಿದುವು. ಎಲ್ಲಾ ಹೂಗಳ ಪರಿಮಳವೂ ಗಾಳಿಯ ಜೊತೆಯಲ್ಲಿ ಹೊರಟುಹೋಯಿತು. ಕೊಬ್ಬಿ ದವರಿಗೆ ಕೆರಳಿ ಕತ್ತಲೆಯು ಉಚಿತವಾದ ವೇಳೆ ಎಂದು ಗರ್ಜಿಸಿ ಮನ್ಮಥನು ಬಾಣವನ್ನು ಪ್ರಯೋಗಿಸಿದನು. ೮. ಎಲೆ ಸಿದ್ಧರಾಮ, ಕೇಳು. ಆ ವೇಳೆಯಲ್ಲಿ ರಾಜನು ವಿರಹ ದಿಂದ ಕಳವಳ ಹೊಂದಿ ತಾಳಲಾರದೆ ತನ್ನ ಆಪ್ತಸಖಿಯೊಬ್ಬಳನ್ನು ಕರೆದು, ಎಲೆ ತರುಣಿ, ರತ್ನವರ್ಣನ ಹೆಂಡತಿಯನ್ನು ಈ ಬೆಳಗ್ಗೆ ಸುಂದರವಾದ ಸೌಧದಮೇಲೆ ನೋಡಿದೆ. ಅವಳನ್ನು ಕರೆತರದಿದ್ದರೆ ನನ್ನ ಪ್ರಾಣ ಹೋಗುವುದು' ಎನ್ನಲು 'ಈ ಮೊದಲು ಕರೆತಂದವರಲ್ಲಿ (ಹೋಲಿಸಿದರೆ) ಇವಳೇನು ಮಹಾ? ಈಗಲೇ ಕರೆತರುತ್ತೇನೆ'

CC-0. Jangamwadi Math Collection. Digitized by eGangotri

ಬಂದು ಪರದನ ಮನೆಯನೊಳಪೊಕ್ಕು ಪಲವುತೆರ
ದಿಂದಾತನರಸಿಯನೊಡಂಬಡಿಸಿ ಗುಪ್ತದಿಂ
ತಂದವನಿಪತಿಯ ಪೊರೆಯೊಳಗಿರಿಸಲಾತನಿವಳಂ ನೋಡಿ ವಿನಯದಿಂದೆ
ಇಂದುಮುಖಿ ಕೊಳ್ಳೆನುತೆ ಸಕಲಪರಿಮಳಕುಸುಮ
ವೃಂದಮಂ ಕೊಡುವನಿತರೊಳಗೆ ಚಂಪಕಪುಷ್ಪ
ವೊಂದು ಪಡಿಗದೊಳೆ ಬೀಳ್ವನಿತರೊಳ್ ಶಂಕರಾರ್ಪಿತವೆಂದನವನೀಶನು ೯

ಈತನೀ ತೆರದೆ ದುಷ್ಟವ್ಯಸನ ಪಾಪ ದು
ರ್ನೀತಿಯುತನಾಗಿರಲ್ಕಂತ್ಯಕಾಲಕ್ಕೆ ಯಮ
ದೂತರಿವನಂ ಕೊಂಡುಪೋಗಿ ಯಮರಾಜನಿದಿರೊಳ್ ನಿಲಿಪೆ ಕಂಡಾತನು
ಪಾತಕವ್ರಪಂಗಳೆಂತೆನೆ ಚಿತ್ರಗುಪ್ತರ್ ವಿ
ಜಾತಕಿಲ್ಬಿಷನಿವಂ ರೌರವಪ್ರಾಪ್ತಿ ಮಿಗೆ
ಭೂತನಾಥಂಗೆ ಬೀಳ್ದಲರನರ್ಪಿಸಿದ ಸದ್ಧರ್ಮಮಿರ್ದಪುದೆಂದರು ೧೦

ಆಗ ಮಾಡಿದ ಧರ್ಮದಿಂ ರಂಭೆಯೊಡನೆ ಸಂ
ಭೋಗಮೀತಂಗೊಂದು ರಾತ್ರಿಯೆಂದಾತನಂ
ಬೇಗದಿಂ ತಂದು ರಂಭೆಗೆ ರಹಸ್ಯದೊಳಿವನ ವರ್ತನಂಗಳನುಸಿರ್ದು
ರಾಗದಿಂದಿವನೊಳೀ ರಾತ್ರಿಯೊಳಗಿರ್ದೀವು
ದೀ ಗುಣವಿಹೀನನಂ ನಾಳೆ ನಮಗೆಂದವರ್
ಪೋಗಲೇಗುವೆನೆನ್ನ ಸಂಗದೊಳಗಿರ್ದಂಗೆ ನರಕವೇ ಹಾಯೆಂದಳು ೧೧

ಎಂದು ಅವಳು ರಾಜನಿಗೆ ಹೇಳಿ ಹೊರಟುಬಂದಳು. ೯. ಹಾಗೆ ಬಂದು ವ್ಯಾಪಾರಿಯ ಮನೆಯೊಳಕ್ಕೆ ಹೋಗಿ ಹಲವು ರೀತಿಯಲ್ಲಿ ಆತನ ಹೆಂಡತಿಯನ್ನು ಒಡಂಬಡಿಸಿ, ಅವಳನ್ನು ಗುಪ್ತವಾಗಿ ಕರೆತಂದು ರಾಜನ ಪಕ್ಕದಲ್ಲಿ ಬಿಟ್ಟಳು. ಆತನು ಇವಳನ್ನು ನೋಡಿ ವಿನಯದಿಂದ 'ಚಂದ್ರಮುಖಿ, ತೆಗೆದುಕೋ' ಎನ್ನುತ್ತ ಎಲ್ಲ ಪರಿಮಳದಿಂದ ಕೂಡಿದ ಹೂಗಳನ್ನು ಕೊಡುವಷ್ಟರಲ್ಲಿ ಒಂದು ಸಂಪಿಗೆಯ ಹೂಪೀಕದಾನಿಯೊಳಗೆ ಬಿದ್ದಿತು. ಅಷ್ಟರಲ್ಲಿ ರಾಜನು ಅದನ್ನು ಶಂಕರಾರ್ಪಿತವೆಂದನು. ೧೦. ಈತನು ಈ ರೀತಿಯಲ್ಲಿ ದುಷ್ಟವ್ಯಸನಿ, ಪಾಪಿ, ದುರ್ನೀತಿಯುತನಾಗಿರಲು ಸಾಯುವ ಕಾಲಕ್ಕೆ ಯಮದೂತರು ಇವನನ್ನು ಕರೆದುಕೊಂಡು ಹೋಗಿ ಯಮನ ಎದುರಿಗೆ ನಿಲ್ಲಿಸಿದರು. ಆತನು ಇವನನ್ನು ನೋಡಿ ಇವನ ಪಾಪವನ್ನು ಆಚರಿಸಿದುದು ಹೇಗೆ ಎಂದು ಕೇಳಿದನು. ಇವನು ಪಾಪದಲ್ಲಿಯೇ ಹುಟ್ಟಿದವನು. ಇವನಿಗೆ ರೌರವನರಕ ಪ್ರಾಪ್ತಿಯಾಗಿದೆ. ಆದರೆ ಕೆಳೆಗೆ ಬಿದ್ದ ಹೂವನ್ನು ಶಿವನಿಗೆ ಅರ್ಪಿಸಿದ ಧರ್ಮವೊಂದೇ ಇವನಿಗಿರುವುದು ಎಂದು ಚಿತ್ರಗುಪ್ತನು ಹೇಳಿದನು. ೧೧. ಆಗ ಮಾಡಿದ ಒಳ್ಳೆಯ ಕೆಲಸದಿಂದ ಒಂದು ರಾತ್ರಿ ಈತನಿಗೆ ರಂಭೆಯೊಡನೆ ಸಂಭೋಗಪ್ರಾಪ್ತಿ ಎಂದು ಆತನನ್ನು ಬೇಗನೆ ಕರೆತಂದು ರಂಭೆಗೆ ರಹಸ್ಯವಾಗಿ ಇವನ ವರ್ತನೆಯನ್ನು ಹೇಳಿ, ಪ್ರೀತಿಯಿಂದ ಈ ರಾತ್ರಿ ಇವನೊಡನೆ ಕಳೆದು ಈ ಗುಣಹೀನನನ್ನು ನಾಳೆ ನಮಗೆ ಕೊಡೆಂದು ಹೇಳಿ

CC-0. Jangamwadi Math Collection. Digitized by eGangotri

ಚಿಂತಿಸಿದೊಡೇನಭವಪೂಜೆಯಿಂದೀ ನೃಪತಿ
ಗಂತಕನ ಬಾಧೆಯಂ ಪಿಂಗಿಸುವೆನಾನೆನು
ತ್ತಂತರಂಗದೆ ತಿಳಿದು ಶ್ವೇತನಿರ್ದಮಲಪರ್ಯಂಕಮಂ ಸಾರ್ದು ನಿಲಲು
ಮಂತವಳನೀಕ್ಷಿಸಿ ರತಾರಂಭಚೇಷ್ಟೆಯಿಂ
ಕಾಂತೆಯಂ ಬರಸೆಳೆವುತಿತ್ತ ಬಾಯೆನಲವಳ್
ದಂತರುಚಿ ಭಿತ್ತಿಯನಲಂಕರಿಸೆ ನಸುನಗಲ್ ಭೂಮಿಪತಿಯಿಂತೆಂದನು ೧೨

ರೂಪು ಗುಣ ಸತ್ಕಲಾಪ್ರೌಢಿಯಿಲ್ಲೆನಗೆ ತ
ಕ್ಕೋಪನಿವನಲ್ಲೆಂದು ನಗುವಿಯೋ ನೀನೆನಲ್
ಭೂಪ ಕೇಳ್ ರತಿಗೆ ಲಟಕಟಿಪೆ ನಾಳಿನ ಯಮನ ಬಾಧೆಯಂ ನೋಡೆಯೆಂದು
ಈ ಪರಿಯೊಳಾಂ ನಕ್ಕೆನೆನಲಿಂದಿದೇಕೆ ನಿ
ನ್ನೀ ಪರಮಸಂಗಮಿದು ನಾಳೆ ಭಯಮೇಕೆನಲ್
ಪಾಪಿ ಕೇಳಾ ನಿನ್ನ ವಿಧಿಯನುಸಿರುವೆನೆನುತ್ತಬುಜಾಕ್ಷಿಯಿಂತೆಂದಳು ೧೩

ಮುನ್ನ ನೀಂ ಮಾಡಿದ ಮಹಾಪಾಪಮಂ ಪೇಳ
ಲೆನ್ನ ಹವಣಲ್ಲಪ್ರಯತ್ನದಿಂದೊಂದು ಕುಸು
ಮನ್ನೆಲಕೆ ಬೀಳಲೀಶಾರ್ಪಣಮೆನಲ್ ಬಂದುದೆನ್ನ ಸಂಭೋಗಮಿಂದು

ಹೋದವರು. ಏನು ಮಾಡಲಿ ? ನನ್ನ ಜೊತೆಯಲ್ಲಿದ್ದವನಿಗೆ ನರಕವೆ ? ಅಯ್ಯೋ ! ಎಂದು ರಂಭೆ ವ್ಯಥೆಪಟ್ಟಳು. ೧೨. ಚಿಂತಿಸಿದರೆ ಏನು ಪ್ರಯೋಜನ ? ಶಿವನ ಪೂಜೆಯಿಂದ ಈ ರಾಜನಿಗೆ ಯಮನ ಬಾಧೆಯು ಇಲ್ಲದಂತೆ ನಾನು ಮಾಡುತ್ತೇನೆ ಎಂದು ಮನಸ್ಸಿನಲ್ಲಿ ಆಲೋಚಿಸಿ ರಂಭೆಯು ಶ್ವೇತನು ಇದ್ದ ಶ್ರೇಷ್ಠವಾದ ಹಾಸಿಗೆ ಬಳಿ ಬಂದು ನಿಂತಳು. ರಾಜನು ಅವಳನ್ನು ನೋಡಿ ಸಂಭೋಗಾರಂಭದ ಚೇಷ್ಟೆಯಿಂದ ರಂಭೆಯನ್ನು ಬರಸೆಳೆಯುತ್ತ ಈಕಡೆ ಬಾ ಎನ್ನಲು ಅವಳ ಹಲ್ಲಿನ ಕಾಂತಿ ಗೋಡೆ ಯನ್ನು ಅಲಂಕರಿಸುವಂತೆ ನಸುನಕ್ಕಳು. ಅವಳನ್ನು ಕುರಿತು ರಾಜನು ಈ ರೀತಿ ಹೇಳಿದನು. ೧೩. ಇವನಿಗೆ ರೂಪ, ಗುಣ, ಸತ್ಕಲಾಪ್ರೌಢಿಮೆಗಳಿಲ್ಲ. ಇವನು ನನಗೆ ಯೋಗ್ಯನಾದ ಪ್ರಿಯನಲ್ಲ ಎಂದು ನಗುತ್ತಿರುವೆಯೋ ಎನ್ನಲು, ರಂಭೆಯು ರಾಜನೆ, ಕೇಳು, ಈಗ ರತಿಸುಖಕ್ಕೆ ಆತುರಪಡುತ್ತೀಯೆ. ಆದರೆ ನಾಳೆಯ ಯಮನ ಬಾಧೆಯನ್ನು ನೀನು ಯೋಚಿಸುವುದಿಲ್ಲ (ಅದು ನಿನಗೆ ತಿಳಿಯದು) ಎಂದು ಈ ರೀತಿ ನಕ್ಕೆ ಎಂದಳು. ಇಂದು ನಿನ್ನ ಶ್ರೇಷ್ಠವಾದ ಸಹವಾಸವಿದೆ. ನಾಳಿನ ಭಯ ಇಂದೇಕೆ ? ಎನ್ನಲು, ಆ ಕಮಲಾಕ್ಷಿಯು-ಎಲೈ ಪಾಪಿ, ನಿನ್ನ ಹಣೆಯ ಬರಹವನ್ನು ಹೇಳುತ್ತೇನೆ ಕೇಳು ಎಂದು ಹೀಗೆಂದಳು. ೧೪. ಹಿಂದೆ ನೀನು ಮಾಡಿದ ಪಾಪದ ವಿಷಯವನ್ನು ಹೇಳಲು ಸಾಧ್ಯ ವಿಲ್ಲ. ಅಪ್ರಯತ್ನಪೂರ್ವಕವಾಗಿ ಒಂದು ಹೂ ನೆಲಕ್ಕೆ ಬೀಳಲು ನೀನು ಶಿವಾರ್ಪಣ ವೆಂದೆ. ಅದರ ಫಲವಾಗಿ ನಿನಗೆ ಇಂದು ನನ್ನ ಸಹವಾಸ ಸುಖವು ಲಭಿಸಿತು. ಇನ್ನು

CC-0. Jangamwadi Math Collection. Digitized by eGangotri

ಇನ್ನಾಲಿಸೈ ಭಸ್ಮ ರುದ್ರಾಕ್ಷಿ ಶಿವಮಂತ್ರ
ಸನ್ನುತಿಯೊಳಭವನಂ ಭಜಿಸಿ ನಾಳಿನ ನರಕ
ಮನ್ನಿವಾರಿಪುದೆನಲ್ಕನಿತು ಬೇಗದೊಳಪ್ಪುದೇಯೆನಲ್ಕಿಂತೆಂದಳು ೧೪

ಅತಿಪಾಪಿಯೊರ್ವನೇ ಪಾಳ್ಗುಡಿಯೊಳಡೆಗೆಡೆದು
ಮೃತಸಮಯದಿಂದಿರಲ್ ಕಂಡೊಂದು ಶುನಕ
ಪ್ರತಿಹರುಷದಿಂ ತಿಂಬೆನೆಂದು ಕಾದಿರ್ದು ಜೀವಂಬೋಗದಿರೆ ಕಾಣುತೆ
ದ್ರುತದೊಳಾತನ ಪಣೆಯ ಪೆಟ್ಟಿ ಪೋಗಲ್ಕವಂ
ಹತವಾಗೆ ಯಮದೂತರೆಳೆಯೆ ಶಿವಚರರೈದಿ
ಸಿತಭಸಿತಮಿವನ ಪಣೆಯೊಳಗಿರ್ಪುದೆನುತೆ ಕೈಲಾಸಕ್ಕೆ ಕೊಂಡೊಯ್ದರು ೧೫

ವನದೊಳಗೆ ರುದ್ರಾಕ್ಷಿವಣ್ಗಳಂ ಕಂಡೊರ್ವ
ವನಚರಂ ಮೆಲ್ದದರ ಬೀಜಮಂ ಸರಗಟ್ಟಿ
ಶುನಕನ ಕೊರಳ್ಗೆ ಬಂಧಿಸಿ ಪಂದಿ ಪೊಯ್ದು ನಾಯ್‌ಸಾಯೆ ಯಮದೂತರೈದಿ
ಶುನಕನಂ ಪಿಡಿಯೆ ಶಿವದೂತರೈತಂದಂತ
ಕನ ದೂತರಂ ಬಡಿದು ಶಿವಲೋಕಕೊಯ್ಯರೇ
ಘನವಲಾ ಶಿವಲಾಂಛನಂ ಭೂಪ ಕೇಳೆಂದು ತರಳಾಕ್ಷಿಯಿಂತೆಂದಳು ೧೬

ಕೇಳು, ವಿಭೂತಿ, ರುದ್ರಾಕ್ಷಿ, ಶಿವಮಂತ್ರದ ಶ್ರೇಷ್ಠವಾದ ಸ್ತೋತ್ರಗಳಿಂದ ಶಿವನನ್ನು ಆರಾಧಿಸಿ ನಾಳೆ ಪ್ರಾಪ್ತವಾಗುವ ನರಕವನ್ನು ನಿವಾರಿಸಿಕೊ ಎನ್ನಲು ರಾಜನು ಅದು ಅಷ್ಟು ಬೇಗ ಸಾಧ್ಯವೆ ಎಂದನು. ಅದಕ್ಕೆ ರಂಭೆಯು ಹೀಗೆಂದಳು. ೧೫. ಅತಿ ಪಾಪಿಯೊಬ್ಬನು ಪಾಳುಬಿದ್ದಿದ್ದ ಗುಡಿಯಲ್ಲಿ ಬಿದ್ದು ಸಾಯುವ ಸ್ಥಿತಿಯಲ್ಲಿ ಇದ್ದನು. ಅವನನ್ನು ಒಂದು ನಾಯಿ ನೋಡಿ ಬಹಳ ಸಂತೋಷದಿಂದ ತಿನ್ನುತ್ತೇನೆಂದು ಕಾದಿದ್ದು ಅವನು ಸಾಯದಿರಲು ತೀವ್ರವಾಗಿ ಆತನ ಹಣೆಯನ್ನು ತುಳಿದುಕೊಂಡು ಹೋಯಿತು. ಅದರಿಂದ ಅವನು ಸಾಯಲು ಯಮದೂತರು ಎಳೆದೊಯ್ದರು. ಆಗ ಶಿವದೂತರು ಬಂದು ಇವನ ಹಣೆಯಲ್ಲಿ ಶ್ರೇಷ್ಠವಾದ ವಿಭೂತಿಯಿದೆ ಎನ್ನುತ್ತ ಅವನನ್ನು ಕೈಲಾಸಕ್ಕೆ ಕರೆದುಕೊಂಡು ಹೋದರು. ೧೬. ಒಬ್ಬ ಬೇಡನು ಕಾಡಿನಲ್ಲಿ ಸಂಚರಿಸುತ್ತ, ರುದ್ರಾಕ್ಷಿ ಹಣ್ಣುಗಳನ್ನು ನೋಡಿ ಅದನ್ನು ತಿಂದು ಅದರ ಬೀಜವನ್ನು ಸರಮಾಡಿ ನಾಯಿಯ ಕೊರಳಿಗೆ ಕಟ್ಟಿದನು. ಆ ನಾಯನ್ನು ಹಂದಿ ಹೊಡೆಯಲು ನಾಯಿ ಸತ್ತಿತು. ಯಮ ದೂತರು ಬಂದು ಆ ನಾಯಿಯನ್ನು ಹಿಡಿಯಲು ಶಿವದೂತರು ಬಂದು ಆ ಯಮ ದೂತರನ್ನು ಹೊಡೆದು ಅದನ್ನು ಶಿವಲೋಕಕ್ಕೆ ತೆಗೆದುಕೊಂಡು ಹೋದರು. ಶಿವ ಲಾಂಛನ ಏನು ಶ್ರೇಷ್ಠವಾದುದಯ್ಯಾ ! ರಾಜ, ಕೇಳು ಎಂದು ರಂಭೆ ಹೀಗೆಂದಳು.

CC-0. Jangamwadi Math Collection. Digitized by eGangotri

ಅರಸ ಕೇಳತಿಪಾಪಿಯೊರ್ವ ಶೂದ್ರಂ ತನ್ನ
ಮರಣಕಾಲದೊಳೆ ಮಗನಂ ಕರೆದು ಹೊಲನ ನೀಂ
ಹರಗಣಾಯೆನುತಸುವನುಳಿಯಲವನಂ ಶಿವನ ಪೊರೆಗೊಯ್ದರಿನ್ನಾಲಿಸು
ತರಣಿಜನಪುರಕ್ಕೈದಿ ಸಾನಂದಮುನಿವರಂ
ಪರಮಪಂಚಾಕ್ಷರೀಮಂತ್ರಮಂ ಸ್ಮರಿಸಲಾ
ನರಕಿಗಳ್ ಕೇಳ್ದು ತನ್ಮಂತ್ರದುಚ್ಚರಣೆಯಿಂ ಕೈಲಾಸಪುರಕ್ಕೈದರೇ ೧೭

ಮುನ್ನೊರ್ವ ಪಾರ್ವನತಿಪಾತಕಂ ಚಂಡಾಲ
ಕನ್ನೆಯೊಳ್ ನೆರೆಯಲವರಿರ್ವರಂ ಪೊರಡಿಸಲ್
ತನ್ನವಳ್ವೆರಸಿ ಕಾಂತಾರದೊಳಗಿರಲವಳ್ ಸಾಯಲವಳಾತ್ಮಜೆಯನು
ಗನ್ನದಿಂ ಕೂಡಿರುತೆ ಶೈವಾಲಯದೊಳೆ ದೀ
ಪನ್ನಂದುತಿರೆ ಕಳವು ಸಂದಿಸದೆನುತೆ ಬತ್ತಿ
ಯನ್ನೂಂಕೆ ಮರಣಕಾಲದೊಳಭವದೂತರವನಂ ಶಿವನ ಪೊರೆಗೊಯ್ದರು ೧೮

ಪನ್ನೆರಳ್ವರುಷದಾಯುಷ್ಯದ ಕುಮಾರನಂ
ಪನ್ನಗಾಭರಣನಿಂ ಪಡೆದಾ ಮೃಕಂಡುಮುನಿ
ತನ್ನಂದನಂ ದಿನಂ ಸಾರೆ ಬರೆ ಕಂಡು ಶಿವಪೂಜೆಯಂ ಮಾಡುತಿರಲು
ಉನ್ನತದ ಪಾಶದಿಂದಂತಕಂ ಕೋದೆಳೆಯೆ
ತನ್ನಿದಿರಲಿಂಗಮಂ ತಬ್ಬಿ ಶಿವಧ್ಹೋಯೆನಲ್
ಮನ್ನಿಸುತೆ ಮುನಿಪನಂ ಮೃತ್ಯುಂಜಯಂ ಶೂಲದಿಂದಂತಕನನಿರಿಯನೇ ೧೯

೧೭. ರಾಜ, ಕೇಳು. ಅತಿಪಾಪಿಯಾದ ಒಬ್ಬ ಶೂದ್ರನು ತನ್ನ ಅಂತ್ಯಕಾಲದಲ್ಲಿ ಮಗನನ್ನು ಕರೆದು ನೀನು ಹೊಲವನ್ನು ಹರಗಣ್ಣ (ಸಾಗುವಳಿ ಮಾಡಿ) ಎನ್ನುತ್ತ ಪ್ರಾಣ ಬಿಟ್ಟನು. ಅವನನ್ನು ಶಿವನ ಬಳಿಗೆ ಕರೆದುಕೊಂಡು ಹೋದರು. ಇನ್ನು ಕೇಳು, ಯಮನ ಪಟ್ಟಣಕ್ಕೆ ಹೋಗಿ ಸಾನಂದಮುನಿಶ್ರೇಷ್ಠನು ಅತ್ಯಂತ ಪವಿತ್ರವಾದ ಪಂಚಾಕ್ಷರೀಮಂತ್ರವನ್ನು ಸ್ಮರಿಸಲು ನರಕದಲ್ಲಿದ್ದವರು ಕೇಳಿ ಆ ಮಂತ್ರದ ಉಚ್ಚಾರಣೆಯಿಂದ ಕೈಲಾಸವನ್ನು ಸೇರಲಿಲ್ಲವೇ ? ೧೮. ಹಿಂದೊಬ್ಬ ಅತಿಪಾಪಿಯಾದ ಬ್ರಾಹ್ಮಣನು ಚಂಡಾಲಕನ್ಯೆಯಲ್ಲಿ ಕೂಡಲು ಅವರಿಬ್ಬರನ್ನೂ ಊರಿಂದ ಹೊರಕ್ಕೆ ಹಾಕಿದರು. ಆ ಬ್ರಾಹ್ಮಣನು ತನ್ನವಳೊಂದಿಗೆ ಅರಣ್ಯದಲ್ಲಿರಲು ಅವಳು ಸತ್ತಳು. ಅವನು ಮೋಸದಿಂದ ಅವಳ ಮಗಳೊಂದಿಗೆ ಶಿವಾಲಯದಲ್ಲಿ ಕೂಡಿರುತ್ತ, ದೇವರ ದೀಪ ಆರಿಹೋಗುತ್ತಿರಲು ಕಳ್ಳರು ಮೇಲೆಬೀಳದಂತಿರಲೆಂದು ಬತ್ತಿಯನ್ನು ಮುಂದೆ ನೂಕಿ ಉರಿಯುವಂತೆ ಮಾಡಲು ಅವನು ಸಾಯುವ ಕಾಲದಲ್ಲಿ ಶಿವದೂತರು ಅವನನ್ನು ಈಶ್ವರನ ಬಳಿಗೆ ಒಯ್ದರು. ೧೯. ಮೃಕಂಡುವೆಂಬ ಋಷಿಯು (ಶಿವ) ನಾಗಭೂಷಣನಿಂದ ಹನ್ನೆರಡು ವರ್ಷವಷ್ಟೇ ಆಯುಸ್ಸಿರುವ ಮಗನನ್ನು ಪಡೆದನು. ಆ ಮಗನ ಸಾವು ಹತ್ತಿರ ಬರುವುದನ್ನು ನೋಡಿ ಶಿವನ ಪೂಜೆಯನ್ನು ಮಾಡುತ್ತಿರಲು ಬಲವಾದ ಪಾಶದಿಂದ ಕಟ್ಟಿ ಯಮನು ಅವನನ್ನು ಎಳೆಯಲು ಆ ಕುಮಾರನು ತನ್ನ ಎದುರಿನಲ್ಲಿದ್ದ ಶಿವಲಿಂಗವನ್ನು ತಬ್ಬಿಕೊಂಡು ಶಿವನೇ ಕಾಪಾಡು ಎನ್ನಲು ಮೃತ್ಯುಂಜಯನು ಆ

CC-0. Jangamwadi Math Collection. Digitized by eGangotri

ಅರಸ ಕೇಳಿಂತು ದೈವಾಧೀನದಿಂ ಪೂರ್ವ
ಪುರುಷರೀಶನ ಪದಂಗಂಡರಿಂದೀಗ ನೀ
ನಿರದೆ ಶಿವಪೂಜೆಯಂ ಮಾಡು ಮಾಡಿದೊಡಂತಕನ ಭಯಂ ಪೋಪುದೆನುತೆ
ವರವಸ್ತ್ರ ಭಸಿತ ರುದ್ರಾಕ್ಷೆ ನಾನಾ ಕುಸುಮ
ಪರಿಮಳ ಸುಗಂಧ ನವಧೂಪದೀಪಂಗಳಂ
ತರಿಸಿ ತರತರದೊಳಿಂಬಿಡಿಸಿದಳ್ ರಂಭೆ ಶಂಭುವಿನಿದಿರೊಳಾಕ್ಷಣದೊಳು ೨೦

ಈಕ್ಷಿಸಿದನೀ ಸಕಲ ಪರಿಕರಂಗಳನರಸ
ನಾ ಕ್ಷಣದೊಳೆಲೆ ರಂಭೆ ಶಿವಪೂಜೆಯಂ ಮಾಡೆ
ದೀಕ್ಷೆಯೆನಗಿಲ್ಲ ಪಾಪಾತ್ಮನಂ ಪತಿಕರಿಸಿ ಕರುಣದಿಂ ಧರ್ಮಪಥಕೆ
ಶಿಕ್ಷಿಸಿದೆ ನೀನೆ ಗುರುವಲ್ಲದೆನಗಿನ್ನಾರು
ಪೇಕ್ಷಿಸದನುಜ್ಞೆಯಂ ಕೊಡುವುದೆನೆ ಕೇಳ್ದಂಬು
ಜಾಕ್ಷಿಯಾ ಶ್ವೇತಂಗೆ ದೀಕ್ಷೆಯಂ ಕೊಟ್ಟು ಶಿವಪೂಜೆಯಂ ತೊಡಗಿಸಿದಳು ೨೧

ಪರಿಪರಿಯ ಕಪ್ಪುರಸೊಡರ್ಗಳಿಂ ಧೂಪದಿಂ
ಗುರುತರದ ನೀರಾಜನಂಗಳಿಂ ಬಹುಭಕ್ಷ್ಯ
ಪರಡಿ ಪಾಯಸ ಮೋದಕಾಜ್ಯ ದಧಿ ದುಗ್ಧ ಶಾಲ್ಯನ್ನ ಸೂಪಂಗಳಿಂದೆ
ಪರಮಕರ್ಪೂರತಾಂಬೂಲದಿಂ ಭೂಮಿಪಂ
ಗಿರಿಜಾಧವನನರ್ಚಿಪನಿತರೊಳಗಿಂದ್ರದಿ
ಗ್ವರವಧೂಸೀಮಂತಮಣಿವೊಲುದಯಾದ್ರಿಯೊಳ್ ತರಣಿಮಂಡಲವೆಸೆದುದು ೨೨

ಋಷಿಕುಮಾರನ ಮೊರೆಯನ್ನು ಕೇಳಿ ಶೂಲದಿಂದ ಯಮನನ್ನು ಸೀಳಲಿಲ್ಲವೆ ? ೨೦. ರಾಜನೇ, ಕೇಳು, ಈ ರೀತಿ ದೈವವಶದಿಂದ ಹಿಂದೆ ಅನೇಕ ಪುರುಷರು ಶಿವನ ಪಾದಗಳನ್ನು ಪಡೆದರು. ಈಗ ನೀನು ತ್ವರಿತದಿಂದ ಶಿವಪೂಜೆಯನ್ನು ಮಾಡಿದರೆ ಯಮನ ಭಯ ತಪ್ಪುವುದು ಎನ್ನುತ್ತ ರಂಭೆಯು ಆ ಕೂಡಲೇ ಶ್ರೇಷ್ಠವಾದ ವಸ್ತ್ರ, ವಿಭೂತಿ, ರುದ್ರಾಕ್ಷಿ, ನಾನಾ-ರೀತಿಯ ಹೂಗಳು, ಪರಿಮಳ, ಸುಗಂಧ, ಹೊಸ ಧೂಪ-ದೀಪಗಳನ್ನು ತರಿಸಿ ಶಿವನ ಎದುರಿನಲ್ಲಿ ಅಣಿಮಾಡಿಟ್ಟಳು. ೨೧. ಶ್ವೇತರಾಜನು ರಂಭೆಯು ಸಿದ್ಧಪಡಿಸಿದ್ದ ಆ ವಸ್ತುಗಳನ್ನು ನೋಡಿ ಎಲೆ ರಂಭೆ, ಶಿವಪೂಜೆಯನ್ನು ಮಾಡಲು ನನಗೆ ದೀಕ್ಷೆಯಾಗಿಲ್ಲ. ಪಾಪಿಯಾದ ನನ್ನನ್ನು ಕೈಹಿಡಿದು ಕರುಣೆಯಿಂದ ಧರ್ಮಮಾರ್ಗಕ್ಕೆ ಕರೆತಂದೆ. ನೀನೇ ನನಗೆ ಗುರುವಲ್ಲದೆ ಬೇರೆ ಯಾರಿದ್ದಾರೆ. ಅಲಕ್ಷ್ಯ ಮಾಡದೆ ಅಪ್ಪಣೆಯನ್ನು ಕೊಡು ಎಂದನು. ಅದನ್ನು ಕೇಳಿ ಕಮಲಾಕ್ಷಿಯು ಆ ಶ್ವೇತನಿಗೆ ದೀಕ್ಷೆಯನ್ನು ಕೊಟ್ಟು ಶಿವಪೂಜೆಯಲ್ಲಿ ತೊಡಗಿಸಿದಳು. ೨೨. ನಾನಾ ರೀತಿಯ ಕರ್ಪೂರದ ಸೊಡರುಗಳಿಂದ, ಧೂಪದಿಂದ, ನೀರಾಜನಗಳಿಂದ, ಬಹು ವಿಧವಾದ ಭಕ್ಷ್ಯ, ಗೋದಿಶಾವಿಗೆಯ ಪಾಯಸ, ಕರಿಗಡಬು, ತುಪ್ಪ, ಮೊಸರು, ಹಾಲು, ಶಾಲ್ಯನ್ನ, ವ್ಯಂಜನಗಳಿಂದ ಶ್ರೇಷ್ಠವಾದ ಕರ್ಪೂರ ತಾಂಬೂಲದಿಂದ ರಾಜನು ಗಿರಿಜಾಪತಿಯಾದ ಶಿವನನ್ನು ಪೂಜಿಸುವಷ್ಟರಲ್ಲಿ ಪೂರ್ವದಿಕ್ಕೆಂಬ ಶ್ರೇಷ್ಠವಾದ ಸ್ತ್ರೀಯ ಸೀಮಂತಮಣಿಯಂತೆ

CC-0. Jangamwadi Math Collection. Digitized by eGangotri

ಓಡಿದುದು ತಿಮಿರಮಿಂದೀವರದ ನಗೆಮೊಗಂ
ಬಾಡಿದುದು ಮಿಗೆ ಚಕೋರಂಗಳ ಮನಂ ಬಿಆದೆ
ಕೋಡಿದುದು ಕಮಲಕುಲಮರಳಿದುದು ತೆರಳಿದುದು ಶೋಕಮೆಣೆವಕ್ಕಿಗಳ್ಗೆ
ತೀಡಿದುದು ತಣ್ಗಾಳಿ ತರಣಿಯ ಬಿಸಿಲ್ ದಾಳಿ
ಮಾಡಿದುದು ದೆಸೆಗಳೊಳ್ ತುಂಬಿವಿಂಡಲರ್ಗಳೊಳ್
ಪಾಡಿದುದು ಸಿದ್ಧರಾಮೇಶ ಕೇಳಾ ಸಮಯದೊಳಗೊಂದು ಕೌತುಕವನು ೨೩

ಮುನ್ನ ರಂಭೆಗೆ ಭೂಪನಂ ಕೊಟ್ಟು ಪೋದ ಯಮ
ನನ್ನರಾಳ್ಗಳ್ ಬಂದು ರಂಭೆ ಭೋಗಿಸಲೆಂದು
ನಿನ್ನಿರುಳ್ ನಿನಗಿತ್ತವನನೀವುದೆನಲಾಕೆಯಾತನಂ ತೋರಿಬಿಡಲು
ಪನ್ನಗಾಭರಣನಪರಾವತಾರದೊಳಿರ್ದು
ದನ್ನೋಡಿ ನೋಡಿ ವಿಸ್ಮಿತರಾಗಿ ಮುಟ್ಟಲ್ ಭ
ಯನ್ನಾಂಟಿ ಚಿತ್ತದೊಳ್ ದೂತರ್ಮೈತಂದಾ ಕೃತಾಂತನೊಡನಿಂತೆಂದರು ೨೪

ಜೀಯ ಚಿತ್ತಯಿಸು ನಿನ್ನಾಜ್ಞೆಯಿಂದಾ ಶ್ವೇತ
ರಾಯನಂ ಸುರಸತಿಗೆ ಕೊಟ್ಟು ಬಂದೆವು ನಿನ್ನೆ
ಮಾಯೆಯೇನೆಂದರಿಯೆವಿಂದಾತನಂ ತರಲ್ ಪೋಗಿ ನೋಡಲ್ಕಾತನು
ಕಾಯದ ವಿಭೂತಿ ರುದ್ರಾಕ್ಷಿಗಳ ಪೂಗಳ ನಿ
ಕಾಯದಿಂ ಮಾಳ್ಪಭವಪೂಜೆಗಳ ಹದನರಿದು
ಕಾಯಲಳವಲ್ಲದೆ ಬಂದೆವೆಂದು ಬಿನ್ನವಿಸೆ ಕಿಡಿಕಿಡಿಯಾದನಾ ಕೃತಾಂತಂ ೨೫

ಉದಯಾದ್ರಿಯಲ್ಲಿ ಸೂರ್ಯಮಂಡಲವು ಪ್ರಕಾಶಿಸಿತು. ೨೩. ಕತ್ತಲು ಓಡಿತು, ನೈದಿಲೆಯ ನಗೆಮುಖ ಬಾಡಿತು. ಚಕೋರಗಳ ಮನಸ್ಸು ಅತಿಯಾಗಿ ಬೆದರಿತು. ಕಮಲಸಮೂಹ ಅರಳಿತು. ಚಕ್ರವಾಕಪಕ್ಷಿಗಳ ದುಃಖ ದೂರವಾಯಿತು. ತಂಗಾಳಿ ಬೀಸಿತು. ಸೂರ್ಯನ ಬಿಸಿಲು ದಿಕ್ಕುಗಳನ್ನು ಆಕ್ರಮಿಸಿತು. ದುಂಬಿಗಳ ಸಮೂಹ ಹೂಗಳಲ್ಲಿ ಹಾಡಿದುವು. ಸಿದ್ಧರಾಮ, ಆ ಸಮಯದಲ್ಲಿ ನಡೆದ ಒಂದು ವಿಸ್ಮಯವನ್ನು ಕೇಳು. ೨೪. ಮೊದಲು ರಂಭೆಗೆ ರಾಜನನ್ನು ಕೊಟ್ಟುಹೋದ ಯಮಕಿಂಕರರು ಬಂದು ; ರಂಭೆ, ನಿನ್ನಿನ ರಾತ್ರಿ ನಿನ್ನನ್ನು ಭೋಗಿಸಲು ಕೊಟ್ಟವನನ್ನು ಹಿಂದಿರು ಗಿಸು– ಎಂದರು. ಆಕೆ ಅವನನ್ನು ತೋರಿಸಲು ಸರ್ಪಭೂಷಣನ ಅಪರಾವತಾರ ನಾಗಿದ್ದುದನ್ನು ನೋಡಿ ನೋಡಿ ಆಶ್ಚರ್ಯಪಟ್ಟವರಾಗಿ ಅವನನ್ನು ಮುಟ್ಟಲು ಮನಸ್ಸಿನಲ್ಲಿ ಅಂಜಿ ಆ ದೂತರು ಹಿಂದಕ್ಕೆ ಬಂದು ಯಮನೊಡನೆ ಹೀಗೆಂದರು. ೨೫. ಸ್ವಾಮಿಯೇ, ಕೇಳು. ನಿನ್ನ ಆಜ್ಞೆಯಂತೆ ನಿನ್ನೆ ಶ್ವೇತರಾಜನನ್ನು ಸುರಸತಿಯಾದ ರಂಭೆಗೆ ಕೊಟ್ಟು ಬಂದೆವು. ಏನು ಮಾಯೆಯಾಯಿತು ಎಂದು ತಿಳಿಯೆವು. ಇಂದು ಆತ ನನ್ನು ಹಿಂದಕ್ಕೆ ತರುವುದಕ್ಕಾಗಿ ಹೋಗಿ ನೋಡಲು ಆತನು ಶರೀರದ ವಿಭೂತಿ, ರುದ್ರಾಕ್ಷಿಗಳನ್ನು ಧರಿಸಿ ಹೂಗಳ ಸಮೂಹದಿಂದ ಮಾಡುವ ಶಿವನ ಪೂಜೆಯ ರೀತಿ ಯನ್ನು ತಿಳಿದು ಕಾಯಲು ಧೈರ್ಯವಿಲ್ಲದೆ ಬಂದೆವು ಎಂದು ವಿಜ್ಞಾಪಿಸಿಕೊಳ್ಳಲು.

CC-0. Jangamwadi Math Collection. Digitized by eGangotri

ಆಗಲದಕೇನಾಯ್ತು ರಂಭೆಯಂ ವಿಡಾಯಮಂ
ನೀಗಿಯವನೊಡನವಳನೆಳೆಕೊಂಡು ಬಹೆನೆಂದು
ಬೇಗದಿಂ ತನ್ನ ಕರಕಲಿತಭೀಷಣಗದಾದಂಡಮಂ ತವೆ ತಿರುಪುತೆ
ಆಗಳ್ ಯಮಂ ದೂತರಂ ಕೂಡಿಕೊಂಡು ಶತ
ಯಾಗಪುರಕ್ಕೈತಂದು ರಂಭೆಯಂ ಕರೆದೆಲೆಗೆ
ಚಾಗು ಚಾಗೆನ್ನವನನೇಕೆ ಕೊಡೆ ನೀನೆಂದು ಮೊರೆಯಲವಳಿಂತೆಂದಳು ೨೬

ಕೊಂಡುಪೋಗೆಲೆ ಕಾಲ ನಿನ್ನಾತನವಕೊ ನೀ
ನಂಡಲೆಯಬೇಡೆನಗೆನಲ್ ಕೇಳುತಾ ಯಮಂ
ಬಂಡತನವೇ ಶ್ವೇತ ನಡೆ ನರಕಕುಂಡಕ್ಕೆ ನೀನೆಂದು ಗರ್ಜಿಸಲ್ಕೆ
ಖಂಡಪರಶುವಿನ ಪೂಜಾವಿಧಿಯನುಳಿದೈದೆ
ಕಂಡವರ್ ನಗರೆ ನೀನಜ್ಞನೇ ಕಾಲ ಮಾ
ರ್ಕಂಡೇಯನಂ ಪಿಡಿಯೆ ಬಂದ ಸಂಕಟವನೇಂ ಮರೆದೆಯಾ ನೀನೆಂದನು ೨೭

ಎನೆ ರಂಭೆಯೆಂದಳೆಲೆ ಶಮನೆ ಶಿವಪೂಜಕರೆ
ಘನವನರಿಯಾ ರುದ್ರಮುದ್ರಾಸ್ಪದರನೆಂತು
ಕನಲ್ದಪೈ ಕನಲಿದೊಡೆ ಸೈರಿಪನೆ ಶಂಭು ಭಕ್ತರ ಭಕ್ತನಾತನಲ್ತೇ
ನಿನಗೆ ತಕ್ಕ ಜ್ಞಾನಭಕ್ತರಾಡಿದುದೆ ದೇ
ವನ ವಾಕ್ಯವವರೆಸಗಿದುದೆ ಶಿವನ ತಂತ್ರವೀ
ತನನುಳಿದು ಪೋಪುದೇ ಕಾರ್ಯವೆನೆ ಕಣ್ಗಳೊಳ್ ಕಿಡಿಗೆದರುತಿಂತೆಂದನು ೨೮

ಆ ಯಮನು ಕಿಡಿಕಿಡಿಯಾದನು. ೨೬. ಆಗಲಿ ಆದರೇನಾಯಿತು. ರಂಭೆಯ ಶಕ್ತಿಗರ್ವವನ್ನು ನಾಶಮಾಡಿ ಅವನೊಡನೆ ಅವಳನ್ನೂ ಎಳೆದುಕೊಂಡು ಬರುತ್ತೇನೆ ಎಂದು ಯಮನು ಬೇಗ ತನ್ನ ಕೈಯಲ್ಲಿದ್ದ ಭಯಂಕರವಾದ ಗದೆಯನ್ನು ಚೆನ್ನಾಗಿ ತಿರುಗಿಸುತ್ತ, ತನ್ನ ದೂತರೊಡನೆ ದೇವೇಂದ್ರನ ಪಟ್ಟಣಕ್ಕೆ ಬಂದು ರಂಭೆಯನ್ನು ಕರೆದು ; ಎಲೆ ಛೇಷ್ ಛಲೆ, ನೀನು ನನ್ನವನನ್ನು ಏಕೆ ಹಿಂದಿರುಗಿಸುವುದಿಲ್ಲ ಎಂದು ಅರ್ಭಟಿಸಲು ಅವಳು ಹೀಗೆಂದಳು. ೨೭. ಅಯ್ಯಾ ಯಮನೆ, ನಿನ್ನವನು ಅಲ್ಲಿದ್ದಾನೆ, ಕರೆದುಕೊಂಡು ಹೋಗು, ನೀನು ನನ್ನನ್ನು ಕಾಡಬೇಡ ಎಂದಳು. ಅದನ್ನು ಕೇಳಿ ಯಮನು ಶ್ವೇತನೇ ಬಂಡತನವೆ ? ನೀನು ನರಕಕುಂಡಕ್ಕೆ ನಡೆ ಎಂದು ಗರ್ಜಿಸಲು ಶ್ವೇತನು ಶಿವನ ಪೂಜೆಯನ್ನು ಬಿಟ್ಟುಬಂದರೆ ನೋಡಿದವರು ನಗುವುದಿಲ್ಲವೆ ? ನೀನೇನು ಅಜ್ಞಾನಿಯೆ ? ಯಮನೆ, ನೀನು ಮಾರ್ಕಂಡೇಯನನ್ನು ಹಿಡಿಯಲು ಬಂದಾಗ ನಿನಗೆ ಒದಗಿದ ಸಂಕಟವನ್ನು ಮರೆತುಹೋದೆಯಾ ಎಂದನು. ೨೮. ಆ ಮಾತಿಗೆ ರಂಭೆಯೆಂದಳು- ಎಲೆ ಯಮನೆ, ಶಿವಪೂಜಕರ ಮಹಿಮೆಯನ್ನು ತಿಳಿ. ರುದ್ರಲಾಂಛನವನ್ನು ಧರಿಸಿದವರ ಮೇಲೆ ಹೇಗೆ ಕೋಪಗೊಳ್ಳುವೆ ? ಕೋಪಗೊಂಡರೆ ಶಂಭುವು ಸೈರಿಸುತ್ತಾನೆಯೆ ? ಅವನು ಭಕ್ತರ ಭಕ್ತನಲ್ಲವೆ ? ಭಕ್ತರು ಹೇಳಿದ್ದೇ ದೇವರ ಮಾತು. ಅದೇ ನಿನಗೆ ಸರಿಯಾದ ತಿಳಿವಳಿಕೆ. ಅವರು ಮಾಡಿದುದೇ ಶಿವನ ಕಾರ್ಯ, ಈತನನ್ನು ಬಿಟ್ಟು

CC-0. Jangamwadi Math Collection. Digitized by eGangotri

ಪಾಶದಿಂದೆಳೆದು ಮತ್ಪುರಕೊಯ್ವೆನಿವನಂ ಸ
ದಾಶಿವನೆ ಬಿಡಿಸಿಕೊಳಲೆಂದು ಗುಡುಗುಡಿಸಿ ಕೀ
ನಾಶಂ ನೃಪಾಲಕನ ಕೊರಳ್ಗೆ ಪಾಶವನಿಕ್ಕಿ ಗರ್ಜಿಸುತೆ ಬರಸೆಳೆಯಲು
ಈಶ ಶಂಕರ ಸರ್ವಗತ ಮಹಾದೇವ ಭವ
ನಾಶ ಭಕ್ತಪ್ರಿಯ ಶಶಾಂಕಶೇಖರನೆ ಯಪಿ
ಘೋ ಶರಣು ಸಲಹಲಾಗದೆ ಸರ್ವದೋಷಕನನೆಂದು ಶ್ವೇತಂ ಚೀರ್ದನು ೨೯

ರಕ್ಷಿಸ್ಯೆ ಪಿಂತೆ ಮಾರ್ಕಂಡೇಯನಂ ಸಲಹಿ
ಶಿಕ್ಷಿಸದೆ ಮೃತ್ಯುವಂ ನತನ ಮೊರೆಯಂ ಕೇಳ್ದು
ಪೇಕ್ಷಿಸುವರೇ ಭಕ್ತಭಕ್ತನೆಂಬೀ ಬಿರುದನುಳಿವರೇ ದೇವ ನಿನ್ನ
ಈಕ್ಷಿಸಿದ ಮಾತ್ರದಿಂ ಸರ್ವಭಯಮುಡಗಿವಪು
ದಕ್ಷಿಣಮಹಿಮ ನೀನೇ ಕೆಯ್ಕೊಳಿರ್ದುಮಿತ
ರಕ್ಷೋಭೆಯೇಕೆಂದು ಭೂಮಿಪಂ ಪೊಗಳಲ್ಕೆ ರಾಮ ಕೇಳ್ ಕೌತುಕವನು ೩೦

ವಿಸ್ತರಿಪೆನೇನನೆಲೆ ರಾಮ ಶ್ವೇತನ ವಿಮಲ
ಹಸ್ತದೊಳ್ ಪೂಜೆಗೊಂಬತುಳತರಲಿಂಗಮೇ
ಮಸ್ತಕದ ಬಾಂದೊರೆಯ ಪೆರೆಯ ಕೆಂಜಡೆಯ ನಯನಾವಳಿಯ ಪಂಚಾಸ್ಯದ

ಹೋಗುವುದೇ ನಿನಗೆ ಸರಿಯಾದ ಕೆಲಸವೆನ್ನಲು ಯಮನು ಕಣ್ಣುಗಳಲ್ಲಿ ಕಿಡಿಕಾರುತ್ತ ಈ ರೀತಿ ಹೇಳಿದನು. ೨೯. ಪಾಶದಿಂದ ಎಳೆದು ನನ್ನ ಪಟ್ಟಣಕ್ಕೆ ಇವನನ್ನು ಕರೆದು ಕೊಂಡು ಹೋಗುತ್ತೇನೆ, ಶಿವನೇ ಬಂದು ಬಿಡಿಸಿಕೊಳ್ಳಲಿ ಎಂದು ಗುಡುಗುಡಿಸಿ ಯಮನು ರಾಜನ ಕೊರಳಿಗೆ ಪಾಶವನ್ನು ಹಾಕಿ ಗರ್ಜಿಸುತ್ತ ಜೋರಾಗಿ ಎಳೆಯಲು, ಈಶ-ಶಂಕರ-ಸರ್ವರಲ್ಲಿಯೂ ನೆಲಸಿರುವವನೆ, ಮಹಾದೇವ-ಭವನಾಶ-ಭಕ್ತಪ್ರಿಯ -ಚಂದ್ರಶೇಖರನೇ ಯವಿಘೋ, ನಿನಗೆ ಶರಣು, ಮಹಾಪಾಪಿಯನ್ನು ರಕ್ಷಿಸಲಾಗದೆ ಎಂದು ಶ್ವೇತನು ಆರ್ತನಾಗಿ ಕೂಗಿದನು. ೩೦. ಕಾಪಾಡಯ್ಯ, ಹಿಂದೆ ಮಾರ್ಕಂ ಡೇಯನನ್ನು ಕಾಪಾಡಿ ಯಮನನ್ನು ಶಿಕ್ಷಿಸಿದೆ. ಶರಣಾಗತನ ಪ್ರಾರ್ಥನೆಯನ್ನು ಕೇಳಿ ಅಲಕ್ಷಿಸುತ್ತಾರೆಯೆ ? ಭಕ್ತರಭಕ್ತನೆಂಬ ಬಿರುದನ್ನು ಬಿಡುತ್ತಾರೆಯೆ ? ದೇವನೇ ನಿನ್ನನ್ನು ನೋಡಿದ ಮಾತ್ರದಿಂದಲೇ ಎಲ್ಲ ಭಯವೂ ನಾಶವಾಗುವುದು. ಅವಿ ನಾಶಿಯಾದ ಮಹಾಮಹಿಮನೇ ನೀನೇ ನನ್ನ ಬಳಿಯಲ್ಲಿದ್ದು ಬೇರೆಯವರ ಕೋಟಲೆ ಏಕೆ ? ಎಂದು ರಾಜನು ಸ್ತೋತ್ರ ಮಾಡಲು ಸಿದ್ಧರಾಮ, ನಡೆದ ವಿಸ್ಮಯ ವನ್ನು ಕೇಳು. ೩೧. ಏನನ್ನು ವಿಸ್ತರಿಸಲಯ್ಯ, ಸಿದ್ಧರಾಮ, ಶ್ವೇತನ ಪರಿಶುದ್ಧವಾದ ಕೈಯಿಂದ ಪೂಜೆಗೊಳ್ಳುವ ಶ್ರೇಷ್ಠತರವಾದ ಲಿಂಗವೇ ತಲೆಯ ಮೇಲಿನ ಗಂಗೆಯ, ಚಂದ್ರನ, ಕೆಂಜಡೆಯ, ಕಣ್ಣುಗಳ ಸಮೂಹದ, ಐದು ಮುಖದ, ಕುತ್ತಿಗೆಯಲ್ಲಿ ಧರಿಸಿದ

CC-0. Jangamwadi Math Collection. Digitized by eGangotri

ನ್ಯಸ್ತಸುಶಿರೋಮಾಲೆಗಳ ಗಳದ ಫಣಿಗಳ ಸ
ಮಸ್ತಭೂಷಣದ ನಿಜಮೂರ್ತಿಯುಂ ತೋರೆ ಯಮ
ನಸ್ತಮಿಸಿದಂ ನಯನವಹ್ನಿಯಿಂ ಶಿವಭಕ್ತರಳಲದೇಂ ಪಥ್ಯಮಹುದೇ ೩೧

ಹೃದಯದೊಳ್ ತಲ್ಲಣಿಪ ದಿವಿಜರಂ ಕರೆದು ನೀಂ
ಬೆದರದಿರಿಮೆಮ್ಮ ಭಕ್ತಂಗೆ ಮಾಡಿದ ದ್ರೋಹ
ಮಿದು ಕೊಂದುದಿವನಂ ಸಮಸ್ತಲೋಕದೊಳೆನ್ನ ಭಕ್ತರೇ ಪ್ರಾಣಮೆನಗೆ
ಇದ ನೋಡಿ ನಡೆವುದಿಂತೆಂದಮರರಂ ತಿಳಿಪಿ
ಮುದದಿಂದೆ ರಂಭೆಯುಂ ಕರೆದು ನೀಂ ಶ್ವೇತಂಗೆ
ಮೊದಲನುಜ್ಞಿಸಿದೆ ನೀನೇ ಭಕ್ತೆ ಭಲರೆಂದು ಶ್ವೇತನಂ ಮನ್ನಿಸಿದನು ೩೨

ಸರಸಿಜೋದ್ಭವನಾಗಖಿಳದೇವವ್ರಾತ
ವೆರಸಿ ಶಂಕರನ ಪಾದಾಂಬುಜದೊಳಡೆಗೆಡೆದು
ಮರಳಿ ಮಣಿದೆದ್ದು ದೇವರದೇವ ನಿನ್ನ ಭಕ್ತದ್ರೋಹದಿಂ ಕಾಲನು
ಉರಿಯೊಳುರಿದಂ ಮುಂದೆ ಪಾಪಪುಣ್ಯಂಗಳಾ
ಧರಣಿಯೊಳಗೆಂತು ನಡೆದಪ್ಪುವು ಜೀವರ್ಗೆಂತು
ಮರಣಭಯಮಾದಪುದು ಬುದ್ಧಿಗಲಿಸೆಂದು ವಿಧಿ ತುತಿಸಿದಂ ಭಕ್ತಿಯಿಂದೆ ೩೩

ವಾರಿರುಹಸಂಜಾತ ನಿನ್ನ ನುಡಿ ತಥ್ಯಮಹು
ದಾರೆಮ್ಮ ಭಕ್ತರಂ ಮೀರಿದರವರ್ಗೆ ಸಂ
ಹಾರವೇ ವಿಧಿಯುಂತೆ ದಹಿಸಿದೆವು ಯಮನ ನೀಂ ಬದುಕಿಸುವುದನುಚಿತಮೆನೆ

ರುಂಡಮಾಲೆಗಳ, ಸರ್ಪಗಳ ಆಭರಣದ, ತನ್ನ ನಿಜರೂಪವನ್ನು ತೋರಲು ಶಿವನ ಕಣ್ಣಿನ ಬೆಂಕಿಯಿಂದ ಯಮನು ನಾಶವಾದನು. ತನ್ನ ಭಕ್ತರ ದುಃಖ ಶಿವನಿಗೆ ಸಹಿಸಲಾಗುತ್ತದೆಯೆ ? ೩೨. ಎದೆಯಲ್ಲಿ ಭೀತಿಗೊಂಡು ನಡುಗುತ್ತಿರುವ ದೇವತೆಗಳನ್ನು ಕರೆದು ಕರೆದು, ನೀವು ಹೆದರಬೇಡಿ, ನಮ್ಮ ಭಕ್ತನಿಗೆ ಮಾಡಿದ ದ್ರೋಹ ಇವನನ್ನು ನಾಶ ಮಾಡಿತು. ಸಕಲಲೋಕದಲ್ಲಿಯೂ ನನ್ನ ಭಕ್ತರೇ ನನಗೆ ಪ್ರಾಣ. ಇದನ್ನು ತಿಳಿದು ನಡೆಯತಕ್ಕದ್ದು ಎಂದು ದೇವತೆಗಳಿಗೆ ಬುದ್ಧಿ ಹೇಳಿ ಸಂತೋಷದಿಂದ ರಂಭೆಯನ್ನು ಕರೆದು ನೀನು ಶ್ವೇತನಿಗೆ ಮೊದಲು ಅಪ್ಪಣೆ ಕೊಟ್ಟೆ, ನೀನೇ ಭಕ್ತೆ, ಭಲೆ ಎಂದು ಶ್ವೇತನನ್ನು ಮನ್ನಿಸಿದನು. ೩೩. ಆಗ ಬ್ರಹ್ಮನು ಎಲ್ಲ ದೇವಸಮೂಹದೊಡಗೂಡಿ ಶಿವನ ಪಾದಗಳಿಗೆ ಅಡ್ಡಬಿದ್ದು ಮತ್ತೆ ನಮಸ್ಕರಿಸಿ ಎದ್ದು ದೇವರದೇವನೆ, ನಿನ್ನ ಭಕ್ತನಿಗೆ ಮಾಡಿದ ದ್ರೋಹದಿಂದ ಯಮನು ಬೆಂಕಿಯಲ್ಲಿ ಭಸ್ಮವಾದನು. ಮುಂದೆ ಆ ಭೂಲೋಕದಲ್ಲಿ ಪಾಪ ಪುಣ್ಯಗಳು ಯಾವರೀತಿ ನಡೆಯುತ್ತದೆ. ಜೀವಿಗಳಿಗೆ ಯಾವ ರೀತಿ ಮರಣಭಯವಾಗುತ್ತದೆ. ನಮ್ಮ ಬುದ್ಧಿಗೆ ತಿಳಿಹೇಳು ಎಂದು ಭಕ್ತಿಯಿಂದ ಪ್ರಾರ್ಥಿಸಿದನು. ೩೪. ಬ್ರಹ್ಮನೇ ನಿನ್ನ ಮಾತು ನಿಜವಾದದ್ದು, ಯಾರು ನಮ್ಮ ಭಕ್ತರನ್ನು ಮೀರುತ್ತಾರೆಯೊ ಅವರಿಗೆ ಸಂಹಾರವೇ ಶಾಸನ. ಅದರಂತೆ ಯಮನನ್ನು ದಹಿಸಿದೆವು,

CC-0. Jangamwadi Math Collection. Digitized by eGangotri

ಮಾರಹರ ಸರ್ವಾಪರಾಧಮಂ ಕ್ಷಮಿಸೊಂದು
ಬಾರಿಗೆಂದಂಬುಜಾಸನನಭವನಡಿಗೆರಗೆ
ಕಾರುಣ್ಯದಿಂದಿತ್ತೆವಸುವನೆನೆ ಮಲಗಿದವರೇಳ್ವಂತೆ ಯಮನೆದ್ದನು ೩೪

ಮೊಳಗಿದುವು ದೇವದುಂದುಭಿ ಸುರಿದುವರಲಮಳೆ
ನಲವೇರಿದಂ ಶ್ವೇತನಂಬುಜಭವಾದ್ಯಮರ
ಕುಲವೈದೆ ಕೊಂಡಾಡಿತಭವನಂ ಯಮನೆಳ್ದು ಕೆಯ್ಗಳಂ ಮುಗಿದುಕೊಂಡು
ಸಲಹೆನ್ನನೆಲೆ ಶಂಭು ಸರ್ವಪಾತಕನನ
ಸ್ಖಲಿತಮೂರ್ಖನನಜ್ಞನಂ ತಾಮಸನನರಿದು
ಸಲೆ ನೆನೆದನಪರಾಧಶತಮನೆಂದಂತಕಂ ಹರನಡಿಯೊಳಡೆಗೆಡೆದನು ೩೫

ಹರ ಹರ ತ್ರಾಹಿ ಸರ್ವೇಶ್ವರ ತ್ರಾಹಿ ಶಂ
ಕರ ಪಾಹಿಯೆಂದು ಕಾಲಂ ತುತಿಸೆ ಶಂಕರಂ
ಕರೆದು ನೀನೆಮ್ಮ ಭಕ್ತದ್ರೋಹಮಂ ಮಾಡಬೇಡೆನುತೆ ಶ್ವೇತಸಹಿತ
ತೆರಳಿದಂ ಕೈಲಾಸಕಂತಕಂ ತನ್ನವ
ರ್ಗಿರದೆ ನೇಮಿಸಿ ರುದ್ರಮುದ್ರೆಯಂ ತಾಳ್ದವರ
ಪೊರೆಗೈದಬೇಡೆಂದು ಪುರಕ್ಕೈದಿದಂ ಪರೆದರಮರರಾ ಬ್ರಹ್ಮಸಹಿತ ೩೬

ಅವನನ್ನು ನೀನು ಬದುಕಿಸುವುದು ಅನುಚಿತ ಎಂದನು. ಶಿವನೇ ಸರ್ವಾಪರಾಧವನ್ನೂ ಈ ಒಂದು ಸಲ ಕ್ಷಮಿಸು ಎಂದು ಬ್ರಹ್ಮನು ಶಿವನ ಪಾದಗಳಿಗೆ ನಮಸ್ಕರಿಸಲು ಶಿವನು ಕರುಣೆಯಿಂದ ಅವನಿಗೆ ಪ್ರಾಣವನ್ನು ಕೊಟ್ಟಿದ್ದೇವೆ ಎನ್ನಲು ಮಲಗಿದವರು ಏಳುವಂತೆ ಯಮನು ಎದ್ದನು. ೩೫. ದೇವದುಂದುಭಿಗಳು ಮೊಳಗಿದುವು, ಹೂಮಳೆ ಸುರಿದವು, ಶ್ವೇತರಾಜನು ಸಂತೋಷಗೊಂಡನು. ಬ್ರಹ್ಮ ಮೊದಲಾದ ದೇವಸಮೂಹ ಶಿವನನ್ನು ಕೊಂಡಾಡಿತು. ಯಮನು ಎದ್ದುನಿಂತು ಕೈಮುಗಿದುಕೊಂಡು ಶಿವನೆ, ಮಹಾಪಾಪಿಯನ್ನು,ಮೂರ್ಖತನದ ಅಪರಾವತಾರನನ್ನು, ಅಜ್ಞಾನಿಯನ್ನು, ತಾಮಸಿಯಾದ ನನ್ನನ್ನು ಕಾಪಾಡು. ತಿಳಿದು ತಿಳಿದೂ ನಾನು ಶತಾಪರಾಧವನ್ನು ಮಾಡಲು ಯೋಚಿಸಿದೆ ಎನ್ನುತ್ತ ಹರನ ಪಾದಗಳಿಗೆ ನಮಸ್ಕರಿಸಿದನು. ೩೬. ಶಿವ ಶಿವಾ, ಕಾಪಾಡು, ಸರ್ವೇಶ್ವರನೇ ಕಾಪಾಡು, ಶಂಕರನೇ ಪಾಹಿ ಎಂದು ಯಮನು ಪ್ರಾರ್ಥಿಸಲು ಶಿವನು ಅವನನ್ನು ಕರೆದು ನೀನು ನಮ್ಮ ಭಕ್ತರಿಗೆ ದ್ರೋಹವನ್ನು ಮಾಡಬೇಡ ಎಂದು ಹೇಳಿ ಶ್ವೇತನ ಸಹಿತನಾಗಿ ಕೈಲಾಸಕ್ಕೆ ಹೋದನು. ಯಮನು ತನ್ನ ದೂತರಿಗೆ ರುದ್ರನ ಮುದ್ರೆಯನ್ನು ಧರಿಸಿದವರ ಗೋಜಿಗೆ ಹೋಗಬೇಡಿರೆಂದು ಆಜ್ಞಾಪಿಸಿ ತನ್ನ ಪಟ್ಟಣಕ್ಕೆ ಹೋದನು.

CC-0. Jangamwadi Math Collection. Digitized by eGangotri

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದವರ್ಗರ್ಥಮಾ
ದ್ಯಂತಮುಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮುನ
ನಂತಸೌಭಾಗ್ಯಮುಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ೩೭

ಐವತ್ತೊಂದನೆಯ ಸಂಧಿ ಸಂಪೂರ್ಣ

ದೇವತೆಗಳೂ ಬ್ರಹ್ಮನ ಸಮೇತರಾಗಿ ಚದುರಿದರು. ೩೭. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿ ಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ, ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ಐವತ್ತೊಂದನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ಐವತ್ತೆರಡನೆಯ ಸಂಧಿ

ಸೂಚನೆ : ಹರಭಕ್ತ ಗೌತಮನ ಶಾಪದಿಂ ಋಷಿಗಳಂ
ದಿರದೆ ಪಾಷಂಡಿಮತರಾಗಿರಲ್ ಶಂಕರಂ
ಕರುಣದಿಂ ಸುಖಮೂರ್ತಿಯಾಗಿ ನಂದೀಶನಿಂ ತತ್ತ್ವಮಂ ಪೇಳಿಸಿದನು

ಪೊದೆದ ನಿಜವಸ್ತ್ರಮಂ ಕಂಡು ಕಡುಭೀತಿಯಿಂ
ಬೆದರಿ ಕರದಿಂದಿಳಿಯಬೀಳುತೆಡದೊಡೆಯೊಳಿಹ
ಸುದತಿಯು ವಿರಾಜಿಸುವ ನಗೆಗಣ್ಗಳಂ ಕಾಣುತುನ್ಮುಖತ್ವವನೆ ತಳೆದು
ಗದಗದಿಪ ಕರಕಮಲಮಂ ಕಂಡು ದಂತಿಚ
ರ್ಮದ ಪೊದಿಕೆಯಿಂದದಂ ಮುಚ್ಚಿ ಕರತಳದಿನಂ
ಕದ ಸತಿಯ ನಯನಮಂ ಮುಚ್ಚಿ ಸಂತಯಿಸುವ ವಿರೂಪಾಕ್ಷ ಸಲಹೆಮ್ಮನು ೧

ಇನ್ನಾಲಿಸೈ ರಾಮ ದಂಡಕಾರಣ್ಯದೊಳ್
ಮುನ್ನ ಗೌತಮಮುನೀಂದ್ರಂ ಸಕಲಶಾಸ್ತ್ರಸಂ
ಪನ್ನನಾಗಿರುತೆ ಶನಿ ರೋಹಿಣೀಶಕಟಮಂ ಭೇದಿಸುವನಿಳೆಯೊಳಿನ್ನು
ಪನ್ನೆರಡು ವರುಷಪರಿಯಂತರಂ ಬರನಪ್ಪು
ದಿನ್ನಿದಕುಪಾಯಮಂ ಕಾಣ್ಬೆ ನಾನೆಂದೆನುತೆ
ಪನ್ನಗಾಭರಣನಂ ಕೂರ್ತು ಮುನಿಪಾಲಕಂ ತೊಡಗಿದಂ ಘನತಪವನು ೨

ಸೂಚನೆ ; ಶಿವನ ಭಕ್ತನಾದ ಗೌತಮನ ಶಾಪದಿಂದ ಋಷಿಗಳು ಪಾಷಂಡಿಮತದವರಾಗಲು ಶಂಕರನು ಕರುಣೆಯಿಂದ ಸುಖಮೂರ್ತಿಯಾಗಿ ನಂದೀಶನಿಂದ ತತ್ತ್ವೋಪದೇಶ ಮಾಡಿಸಿದನು. ೧. ಧರಿಸಿದ್ದ ತನ್ನ ವಸ್ತ್ರವನ್ನು ನೋಡಿ ಅತಿಯಾದ ಭೀತಿಯಿಂದ ಹೆದರಿ ಕೈಯಿಂದ ಕೆಳಕ್ಕೆ ಇಳಿಬೀಳುತ್ತ, ಎಡ ತೊಡೆಯ ಮೇಲಿದ್ದ ಪಾರ್ವತಿಯು ಪ್ರಕಾಶಿಸುವ ನಗೆಗಣ್ಣುಗಳನ್ನು ಕಂಡು ಮತ್ತೆ ಮೇಲಕ್ಕೇರಿ ಹೋಗಿ ನಡುಗುತ್ತಿದ್ದ ತನ್ನ ಕರಕಮಲವನ್ನು ನೋಡಿ ಆನೆಯ ಚರ್ಮದ ಹೊದಿಕೆಯಿಂದ ಅದನ್ನು ಮುಚ್ಚಿ, ಕೈಯಿಂದ ತೊಡೆಯ ಮೇಲಿನ ಹೆಂಡತಿಯ ಕಣ್ಣನ್ನು ಮುಚ್ಚಿ ಸಂತಯಿಸುವ ವಿರೂಪಾಕ್ಷ ನಮ್ಮನ್ನು ಕಾಪಾಡು. ೨. ಇನ್ನು ಕೇಳಯ್ಯ ಸಿದ್ಧರಾಮ, ದಂಡಕಾರಣ್ಯದಲ್ಲಿ ಹಿಂದೆ ಗೌತಮಮಹಾಋಷಿಯು ಸಕಲ ಶಾಸ್ತ್ರಸಂಪನ್ನನಾಗಿರುತ್ತ ಶನಿಯು ಐದು ನಕ್ಷತ್ರಗಳ ಗುಂಪನ್ನು ಭೇದಿಸುತ್ತಾನೆ. ಭೂಮಿಯಲ್ಲಿ ಇನ್ನೂ ಹನ್ನೆರಡು ವರ್ಷಗಳವರೆಗೆ ಬರಗಾಲ ಉಂಟಾಗುತ್ತದೆ. ಇದಕ್ಕೆ ನಾನು ಉಪಾಯವನ್ನು ಹುಡುಕುತ್ತೇನೆ ಎಂದು ಶಿವನನ್ನು

CC-0. Jangamwadi Math Collection. Digitized by eGangotri

ತಿಳಿದನೀಶಂ ಮನದೊಳೀ ಗೌತಮಂ ತನ್ನ
ನೊಲಿಸೆ ಮಾಡುವ ತಪಸ್ಸೆಂದು ಕರುಣದೊಳಾಗ
ನಳಿನಾಕ್ಷನಂ ಕರೆದು ಬೆಸಸಿದಂ ನೀನೀ ಜಗತ್ತಿಂಗೆ ಕರ್ತನೆಂದು
ಇಳೆಗೈದಿ ಗೌತಮನ ಕೂಡೆ ವಾದವ ಮಾಡಿ
ಬಳಿಕ ಬಹುದೆನಲಂಜುವೆಂ ದೇವ ನೀವಿರ್ದು
ತಿಳಿಯಲಾಂ ಕರ್ತನಹ ಪರಿಯೆಂತು ವಾದವಂ ಮಾಡಲಂಜುವೆನೆಂದನು ೩

ಎನಲೀಶ್ವರಂ ನಕ್ಕು ಹರಿಯಜರ ಮೇಳದಿಂ
ಘನತರದ ವೈಷ್ಣವಾಕೃತಿಯನಂಗೀಕರಿಸು
ತನುನಯದೊಳಾ ತ್ರಿಯಂಬಕಪರ್ವತಕ್ಕೈದಿ ಗೌತಮಾನ ಮುಂದೆ ನಿಂದು
ಮುನಿಪಾಲ ನೀನಾರ ಕೂರ್ತು ತಪವಂ ಮಾಳ್ಪೆ
ಯೆನಗೆ ತಿಳಿಪೆನಲಾಗ ಕಣ್ದೆರೆದು ನೋಡಿಯಾಂ
ಮನಸಿಜಾರಿಯನೊಲಿಸೆ ಮಾಳ್ಪೆನೆನೆ ಕಪಟವೈಷ್ಣವ ನಗುತ್ತಿಂತೆಂದನು ೪

ಹರನೀವನೆ ನಿನಗೆ ವರವನದು ನಿಶ್ಚಯಂ
ಮರುಳೆ ನಿನಗೇತಕಜ್ಞಾನವಾ ಶಂಕರಂ
ತಿರುಕಂ ದಿಗಂಬರಂ ಬೂದಿಬಡಿಕಂ ಮಸಣಗಾಹಿಯೆಲುವಾಲೆಗೊರಲಂ

ಕುರಿತು ಆ ಮುನಿಯು ಘೋರವಾದ ತಪಸ್ಸಿಗೆ ತೊಡಗಿದನು. ೩. ಗೌತಮನು ತನ್ನನ್ನು ಒಲಿಸಲು ಮಾಡುವ ತಪಸ್ಸಿದೆಂದು ಈಶ್ವರನು ಮನಸ್ಸಿನಲ್ಲಿ ತಿಳಿದನು. ಆಗ ಕರುಣೆಯಿಂದ ವಿಷ್ಣುವನ್ನು ಕರೆದು ನೀನು ಭೂಮಿಗೆ ಹೋಗಿ ನೀನೇ ಈ ಜಗತ್ತಿಗೆ ಒಡೆಯನೆಂದು ಗೌತಮನ ಜೊತೆಯಲ್ಲಿ ವಾದಮಾಡಿ ಬಾ ಎಂದು ಆಜ್ಞಾಪಿಸಿದನು. ಅದಕ್ಕೆ ವಿಷ್ಣುವು 'ದೇವ ಇದಕ್ಕೆ ನಾನು ಹೆದರುತ್ತೇನೆ. ನೀನಿದ್ದೂ ಜಗತ್ತಿಗೆ ನಾನು ಒಡೆಯನೆಂದು ಹೇಗೆ ತಿಳಿಸಲಿ ? ಈ ರೀತಿ ವಾದ ಮಾಡಲು ಅಂಜುತ್ತೇನೆ'ಂದನು. ೪. ಹೀಗೆನ್ನಲು ಈಶ್ವರನು ನಕ್ಕು ವಿಷ್ಣು–ಬ್ರಹ್ಮರ ಸೇರುವಿಕೆಯಿಂದ ಶ್ರೇಷ್ಠವಾದ ವೈಷ್ಣವನ ರೂಪವನ್ನು ಧರಿಸಿ ಅನುನಯದಿಂದ ಆ ತ್ರಿಯಂಬಕ ಪರ್ವತಕ್ಕೆ ಹೋಗಿ ಗೌತಮನ ಮುಂದೆ ನಿಂತು 'ಋಷಿಶ್ರೇಷ್ಠನೆ, ನೀನು ಯಾರನ್ನು ಕುರಿತು ತಪಸ್ಸು ಮಾಡುತ್ತಿದ್ದೀಯೆ ? ನನಗೆ ಹೇಳು' ಎನ್ನಲು, ಆಗ ಆ ಋಷಿಯು ಕಣ್ಣನ್ನು ತೆರೆದು ನೋಡಿ ನಾನು ಶಿವನನ್ನು ಒಲಿಸಲು ತಪಸ್ಸು ಮಾಡುತ್ತೇನೆನ್ನಲು, ಕಪಟ ವೈಷ್ಣವನು ನಗುತ್ತ ಹೇಳಿದನು. ೫. ಶಿವನು ನಿನಗೆ ವರವನ್ನು ಕೊಡುತ್ತಾನೆ ಎಂಬುದು ಸತ್ಯವಾದ ಮಾತು ! ಅಯ್ಯೋ ಮೂರ್ಖ, ನಿನಗೇಕೆ ಈ ಅಜ್ಞಾನ ಉಂಟಾಯಿತು ? ಆ ಶಂಕರ ತಿರುಕ, ದಿಗಂಬರ, ಬೂದಿಬಡುಕ, ಸ್ಮಶಾನ ಕಾಯುವವ, ಎಲುಬಿನ ಮಾಲೆಯನ್ನು ಕೊರಳಲ್ಲಿ ಧರಿಸಿರುವವ. ಯೋಚಿಸಿ ನೋಡುವುದಾದರೆ ಅವನು ನಾಶಕಾರಕ. ಅವನನ್ನು ಬಿಟ್ಟು

CC-0. Jangamwadi Math Collection. Digitized by eGangotri

ಪರಿಕಿಪೊಡೆ ಸಂಹಾರಕಾರನಾತನ ಬಿಟ್ಟು
ಹರಿಯನೇ ಭಜಿಸು ಭಜಿಸಿದೊಡೆ ನಿನ್ನಿಷ್ಟಮಂ
ಕರುಣಿಪಂ ನಾ ವಿಷ್ಣು ಪೃಥ್ವಿಪತಿಯೆಂಬ ಶ್ರುತಿವಚನಮುಂಟಂತದಾಗಿ ೫

ಹರಿಯೆನಲ್ ಜ್ಞಾನರೂಪಂ ನಿತ್ಯನಚ್ಯುತಂ
ಪರಮಪುರುಷೋತ್ತಮಂ ಸಕಲರಂ ರಕ್ಷಿಪಂ
ಸಿರಿಯುರಸನೆಸೆವ ಪೀತಾಂಬರಧರಂ ಕೌಸ್ತುಭೋರಸ್ಥಲಂ ಸಾತ್ತ್ವಿಕಂ
ಉರುತರದ ಜಗತ್ಕರ್ತನಾತನೇ ಬ್ರಹ್ಮಾದಿ
ಸುರರೊಡೆಯನಹಿತರಂ ಸಂಹರಿಸಿ ಶಿಷ್ಟರಂ
ಪೊರೆವುತಿರ್ಪಂ ಸರ್ವಮುಂ ವಿಷ್ಣುಮಯ ಜಗತ್ತೆಂಬ ಶ್ರುತಿಯುಂಟದಾಗಿ ೬

ಹರನತಿರಹಸ್ಯದಿಂ ರಾಮಮಂತ್ರವನಂದು
ಗಿರಿಜೆಗುಪದೇಶವಂ ಮಾಡಲಾ ಶಿವೆಯೊಲ್ದು
ಕರುಣದಿಂ ಕಾಶಿಯೊಳಗಳಿವವರ ಕರ್ಣಂಗಳೊಳಗೆ ಬಿಡದೀ ಮಂತ್ರಮಂ
ಒರೆಯಲವರಿರದೆ ಸದ್ಯೋಸ್ಮುಕ್ತರಪ್ಪರಾ
ಪರಮಕಾಶಿಯೊಳೆ ವೇದವ್ಯಾಸನೆಂದೆಂಬ
ವರಮುನೀಶಂ ನ ದೈವಾತ್ ಕೇಶವಾತ್ಪರಂ ಎಂದು ತಾಂ ಕೆಯ್ಯೆತ್ತನೇ ೭

ಇನ್ನು ಕೇಳ್ಳೈ ಮುನಿಪ ರುದ್ರನೊಲವಿಂದೆ ಕೊ
ಟ್ಟುನ್ನತಪದಂಗಳಂ ಹರಿ ತೆಗೆದು ಹರಿಸನೇ
ಬನ್ನಬಡಿಸುತ್ತೆ ಖಳರಕ್ಕಸರನೆಲ್ಲರಂ ಸಂಹಾರವಂ ಮಾಡನೇ

ವಿಷ್ಣುವನ್ನೇ ಪ್ರಾರ್ಥಿಸು. ನೀನು ಅವನನ್ನು ಪ್ರಾರ್ಥಿಸಿದರೆ ಅವನು ನಿನ್ನ ಇಷ್ಟಾರ್ಥವನ್ನು ನೆರವೇರಿಸುತ್ತಾನೆ. ಏಕೆಂದರೆ ಅವನಿಗೆ 'ನಾ ವಿಷ್ಣು ಪೃಥ್ವೀಪತಿ' ಎಂದು ವೇದದಲ್ಲಿ ಉಕ್ತವಾದ ಹೆಸರುಂಟು. ೬. ಹರಿಯೆಂದರೆ ಜ್ಞಾನರೂಪ, ನಿತ್ಯನಾದವನು, ಅಚ್ಯುತ, ಪರಮ ಪುರುಷೋತ್ತಮ, ಎಲ್ಲರನ್ನೂ ರಕ್ಷಿಸುವವನು, ಲಕ್ಷ್ಮೀಪತಿ,ಪ್ರಕಾಶಿಸುವ ಪೀತಾಂಬರವನ್ನು ಧರಿಸಿದವನು, ಕೌಸ್ತುಭಮಾಲೆಯನ್ನು ಎದೆಯಲ್ಲಿ ಧರಿಸಿರುವವ, ಸತ್ವಗುಣದಿಂದ ಕೂಡಿರುವವನು, ಶ್ರೇಷ್ಠವಾದ ಜಗತ್ತಿನ ಕರ್ತ, ಅವನೇ ಬ್ರಹ್ಮ ಮೊದಲಾದ ದೇವತೆಗಳಿಗೆ ಒಡೆಯ, ದುಷ್ಟರನ್ನು ನಾಶಮಾಡಿ ಶಿಷ್ಟರನ್ನು ಕಾಪಾಡುತ್ತಿದ್ದಾನೆ. ಜಗತ್ತಲ್ಲಿ ಎಲ್ಲವೂ ವಿಷ್ಣುಮಯ ಎಂಬ ಶ್ರುತಿವಾಕ್ಯವಿದೆ. ೭. ಅಂದು ಶಿವನು ಅತಿರಹಸ್ಯವಾಗಿ ಗಿರಿಜೆಗೆ ರಾಮಮಂತ್ರವನ್ನು ಉಪದೇಶ ಮಾಡಿದನು. ಆಕೆ ಒಲಿದು ಕರುಣೆಯಿಂದ ಕಾಶಿಯಲ್ಲಿ ಪ್ರಾಣತ್ಯಾಗ ಮಾಡುವವರ ಕಿವಿಯಲ್ಲಿ ಆ ಮಂತ್ರ ಹೇಳಲು ಅವರು ಕೂಡಲೇ ಮುಕ್ತಿಯನ್ನು ಹೊಂದುತ್ತಾರೆ. ಆ ಪವಿತ್ರವಾದ ಕಾಶಿಯಲ್ಲಿಯೇ ವೇದವ್ಯಾಸನೆಂಬ ಮುನಿಶ್ರೇಷ್ಠ ಕೇಶವನನ್ನು ಬಿಟ್ಟು ಬೇರೆ ದೇವರಿಲ್ಲ ಎಂದು ಕೈಯೆತ್ತಿ ಘೋಷಿಸಲಿಲ್ಲವೆ ? ೮. ಇನ್ನೂ ಕೇಳಯ್ಯಾ, ಮುನಿಯೆ, ಶಿವನು ಪ್ರೀತಿಯಿಂದ ಕೊಟ್ಟ ಉನ್ನತವಾದ ಪದವಿಗಳನ್ನು ವಿಷ್ಣುವು ಇಲ್ಲದಂತೆ ಮಾಡಲಿಲ್ಲವೆ ? ಕ್ರೂರವಾದ ರಾಕ್ಷಸರನ್ನೆಲ್ಲ ಕಷ್ಟಕೊಟ್ಟು

CC-0. Jangamwadi Math Collection. Digitized by eGangotri

ತನ್ನ ನಾಭೀಕಮಲದಿಂದಜನ ಪಡೆಯನೇ
ಚೆನ್ನಾಗಿ ಹರಿಯನೇ ಭಜಿಸಲಾತಂ ನಿನಗೆ
ಸನ್ನುತಪದಂಗಳಂ ಕೊಟ್ಟು ರಕ್ಷಿಸುವನಿದು ನನ್ನಿ ನೀಂ ಕೇಳೆಂದನು ೮

ಎಂದಿಂತು ಕಪಟವೈಷ್ಣವನುಸುರೆ ಕೇಳ್ದು ಕಡು
ನೊಂದು ಮುನಿನಾಥ ನಾನಜ್ಞನೇ ಕೇಳೆಲವೊ
ಮಂದಮತಿ ವೈಷ್ಣವಂ ನೀಂ ನಿನಗೆ ಶಿವನ ಮಾಹಾತ್ಮೆಯುಂ ಪೊಗಳಲಳವೇ
ಇಂದುಧರನತ್ಯತಿಷ್ಠದ್ದಶಾಂಗುಲನಭವ
ನೆಂದು ಕೇಳೇಕಮೇವಾದ್ವಿತೀಯಂ ರುದ್ರ
ನೆಂದು ಶ್ರುತಿವಚನವುಂಟರಿಯದಾ ಹರಿಗಿರಿಯ ಸರಿಯೆಂದು ನುಡಿಯಬಹುದೇ ೯

ಹರಿಯೆ ತಾಂ ಜ್ಞಾನರೂಪಾದೊಡಂ ಭೃಗುಮುನಿಪ
ನರಸಿಯನದೇತಕಜ್ಞಾನದಿಂ ಕೊಂದನಂ
ದಿರದೆ ಮತ್ತಚ್ಯುತಂ ತಾನಾಗೆ ಸತ್ತು ಸತ್ತುಂ ಹುಟ್ಟುತಿರಲೇತಕೆ
ಪರಮಪುರುಷೋತ್ತಮಂ ತಾನಾಗೆ ಕಳವಿನಿಂ
ಪರಸತಿಯರಂ ಬಯಸಲೇಕೆ ಸರ್ವಂ ವಿಷ್ಣು
ವರಮಯಮದಾಗೆ ತನ್ನರಸಿಯಂ ಕದ್ದುಕೊಂಡೊಯ್ವಾಗಳೆಲ್ಲಿರ್ದನು ೧೦

ಹರಿಯೆ ರಕ್ಷಾಕರ್ತನೆಂದೆಲಾ ಮರುಳೆ ಕೇಳ್
ಹರನಂದು ತನ್ನ ಮಗನಂ ದಹಿಸೆ ಕಾಣುತ್ತೆ
ಮಱಳಿ ರಕ್ಷಿಸದಾದನೇತಕ್ಕೆ ಸಿರಿಯೆ ತನ್ನರಸಿಯಾದೊಡೆ ಧರೆಯೊಳು

ಸಂಹಾರ ಮಾಡಲಿಲ್ಲವೆ ? ತನ್ನ ಹೊಕ್ಕಳಿನಿಂದ ಬ್ರಹ್ಮನನ್ನು ಪಡೆಯಲಿಲ್ಲವೆ ? ಚೆನ್ನಾಗಿ ವಿಷ್ಣುವನ್ನೇ ಪ್ರಾರ್ಥಿಸಲು ಅವನು ನಿನಗೆ ಶ್ರೇಷ್ಠವಾದ ಪದವಿಗಳನ್ನು ಕೊಟ್ಟು ಕಾಪಾಡುವನು. ಇದು ಸತ್ಯವಾದ ಮಾತು. ನೀನು ನನ್ನ ಮಾತನ್ನು ಕೇಳು ಎಂದನು. ೯. ಎಂದು ಈ ರೀತಿಯಾಗಿ ಕಪಟವೈಷ್ಣವನು ಹೇಳಲು ಅದನ್ನು ಕೇಳಿ ಮುನಿಯು ಅತಿಯಾಗಿ ವ್ಯಥೆಗೊಂಡನು. ನಾನು ಅಜ್ಞಾನಿಯೆ ? ಎಲವೋ ಕೇಳು, ಮಂದಮತಿಯಾದ ವೈಷ್ಣವನು ನೀನು. ನಿನಗೆ ಶಿವನ ಮಹಾತ್ಮೆಯನ್ನು ಹೊಗಳಲು ಸಾಧ್ಯವೆ ? ಕೇಳು, ಚಂದ್ರಶೇಖರನು ಅತ್ಯತಿಷ್ಠದ್ದಶಾಂಗುಲನು, ಅಭವನು, ಎಂದೂ ಏಕಮೇವದ್ವಿತೀಯನು, ರುದ್ರನು ಎಂದು ವೇದಗಳಲ್ಲಿ ಹೇಳಿವೆ. ಅದನ್ನು ತಿಳಿಯದೆ ಹರಿಗಿರಿಯ ಸಮಾನನೆಂದು ಹೇಳುತ್ತಾರೆಯೆ ? ೧೦. ಹರಿಯೇ ಜ್ಞಾನರೂಪಾದರೆ ಭೃಗುಮುನಿಯ ಪತ್ನಿಯನ್ನು ಅಜ್ಞಾನದಿಂದ ಏಕೆ ಕೊಂದ ? ಅವನೇ ಅಚ್ಯುತನಾದರೆ ಸತ್ತು, ಸತ್ತು ಏಕೆ ಹುಟ್ಟುತ್ತಿದ್ದಾನೆ? ಪರಮ ಪುರುಷೋತ್ತಮನು ಅವನಾದರೆ ಕಳ್ಳತನದಿಂದ ಬೇರೆಯವರ ಪತ್ನಿಯರನ್ನು ಏಕೆ ಬಯಸುತ್ತಾನೆ ? ಎಲ್ಲವೂ ವಿಷ್ಣುಮಯವಾದರೆ ತನ್ನ ಪತ್ನಿಯನ್ನು ಕದ್ದುಕೊಂಡು ಹೋಗುವಾಗ ಅವನು ಎಲ್ಲಿದ್ದನು ? ೧೧. ಎಲವೋ ಮರುಳೆ, ಹರಿಯೇ ರಕ್ಷಾಕರ್ತನೆಂದು ಹೇಳಿದೆಯಲ್ಲಾ ಕೇಳು. ಆ ದಿನ ಶಿವನು ತನ್ನ ಮಗನನ್ನು ದಹಿಸಲು ಅದನ್ನು ನೋಡುತ್ತ ಮತ್ತೆ ಏಕೆ ಅವನನ್ನು ರಕ್ಷಿಸದಾದನು ? ಅವನ ಪತ್ನಿ

CC-0. Jangamwadi Math Collection. Digitized by eGangotri

ದೊರೆಗಳಂ ಸೇರಿರ್ಪ ಕಾರಣಮದೇತಕ್ಕೆ
ಹರಿಯಿೀ ಜಗತ್ತಿಂಗೆ ಕರ್ತನಾದೊಡೆ ತಾನೆ
ಮರಳಿ ಮಮ ಕರ್ತಂ ಮಹೇಶನೆಂದೆನಲೇಕೆ ವೈಷ್ಣವಾ ಕೇಳೆಂದನು ೧೧

ರಾಮಮಂತ್ರವೆ ಶಿವನ ನಿಜನಾಮವೆಂದರಿದು
ಪ್ರೇಮದಿಂ ಜಮದಗ್ನಿ ದಶರಥರ್ ಮಕ್ಕಳಂ
ರಾಮರೆಂದೇ ಕರೆಯೆ ನಾಮಕ್ಕೆ ಯೋಗ್ಯರಲ್ಲದೆ ಪಟ್ಟಕರ್ಹರಹರೇ
ಆ ಮಂತ್ರಮಂ ಗಿರಿಜೆ ಬೋಧಿಸಲ್ಕಳಿದವರ್
ಸೋಮರಾಗುದ್ಭವಿಪರಲ್ಲದಾ ಪರಶು ರಘು
ರಾಮರಾಗುದ್ಭವಿಪರೇ ಯಥಾ ಬೀಜಂ ತಥಾಂಕುರಮುಮೆಂದುದಾಗಿ ೧೨

ಪರಮಕಾಶಿಯೊಳೆ ವೇದವ್ಯಾಸನಕ್ಕರಿಂ
ಹರಿಯಲ್ಲದಿಲ್ಲೆಂದು ಕೆಯ್ಯೆತ್ತಲಾ ತೋಳ
ನಿರದೆ ನಂದೀಶ್ವರಂ ಮುರಿಯನೇ ಮರುಳೆ ಭಸ್ಮಾಸುರನ ದಶಕಂಠನ
ಪರಮೇಶನೊಲಿದಿತ್ತ ವರದಿಂದಲವರನಾ
ಹರಿ ಕೊಂದನೈಸೆ ಕೇಳೀಶ್ವರಾಜ್ಞೆಯ ಮೀರೆ
ಹರಿಗಿರಿಯಜಂಗಿಜಂ ಸಾಮರ್ಥ್ಯರೇ ಹರಿಯ ಮಗನಜನ ತಲೆಯೆ ಸಾಕ್ಷಿ ೧೩

ಲಕ್ಷ್ಮಿಯೇ ಆದರೆ ಅವಳು ಭೂಲೋಕದಲ್ಲಿ ರಾಜರನ್ನು ಆಶ್ರಯಿಸಿರುವ ಕಾರಣವೇನು ? ವಿಷ್ಣುವೇ ಈ ಜಗತ್ತಿನ ಕರ್ತನಾದರೆ ಮತ್ತೆ ನನ್ನ ಕರ್ತನು ಮಹೇಶನೆಂದು ತಾನೇ ಏಕೆ ಹೇಳುತ್ತಾನೆ ? ವೈಷ್ಣವ, ಕೇಳು ಎಂದನು. ೧೨. ರಾಮಮಂತ್ರವೇ ಶಿವನ ನಿಜವಾದ ಹೆಸರೆಂದು ತಿಳಿದು ಪ್ರೇಮದಿಂದ ಜಮದಗ್ನಿ ಮತ್ತು ದಶರಥರು ತಮ್ಮ ಮಕ್ಕಳನ್ನು ಆ ಹೆಸರಿನಿಂದಲೇ ಕರೆದರು. ಅವರು ಹೆಸರಿಗೆ ಯೋಗ್ಯರೇ ಹೊರತು ಆ ಪಟ್ಟಕ್ಕೆ ಅರ್ಹರಾಗುತ್ತಾರೆಯೆ ? ಆ ಮಂತ್ರವನ್ನು ಪಾರ್ವತಿ ಬೋಧಿಸಲು ಸತ್ತವರು ಶಿವರಾಗಿ ಹುಟ್ಟುತ್ತಾರೆಯೆ ಹೊರತು ಆ ಪರಶುರಾಮ, ರಘುರಾಮರಾಗಿ ಹುಟ್ಟುತ್ತಾರೆಯೆ ? ಬೀಜದಂತೆ ಮೊಳಕೆ ಎಂಬ ಮಾತಿಲ್ಲವೆ ? ೧೩. ಪವಿತ್ರವಾದ ಕಾಶಿಯಲ್ಲಿ ವೇದವ್ಯಾಸನು ವಿಷ್ಣುವಲ್ಲದೆ ಬೇರೆ ಯಾರೂ ಇಲ್ಲ ಎಂದು ಕೈಯೆತ್ತಿ ಘೋಷಿಸಲು ಆ ತೋಳನ್ನು ಕೂಡಲೇ ನಂದಿಯು ಕತ್ತರಿಸಲಿಲ್ಲವೆ ? ಮರುಳೆ, ಈಶ್ವರನು ಪ್ರೀತಿಯಿಂದ ಕೊಟ್ಟ ವರದಿಂದ ವಿಷ್ಣುವು ಭಸ್ಮಾಸುರನನ್ನೂ, ರಾವಣನನ್ನೂ ಕೊಂದನಯ್ಯಾ ಕೇಳು. ಈಶ್ವರನ ಆಜ್ಞೆಯನ್ನು ಮೀರಲು ವಿಷ್ಣುಗಿಷ್ಣುವೆ ಆಗಲಿ, ಬ್ರಹ್ಮಗಿಹ್ಮನೇ ಆಗಲಿ ಸಾಮರ್ಥ್ಯವನ್ನು ಹೊಂದಿದ್ದಾರೆಯೆ ? ಅದಕ್ಕೆ ವಿಷ್ಣುವಿನ ಮಗ ಮತ್ತು ಬ್ರಹ್ಮನ

CC-0. Jangamwadi Math Collection. Digitized by eGangotri

ಹರನ ವರದಿಂದಲುಪಮನ್ಯುಮುನಿ ಕ್ಷೀರಸಾ
ಗರವನುರೆ ಪಡೆದು ತತ್ಕ್ಷೀರಮಂ ಸೇವಿಸು
ತ್ತಿರಲದರೊಳಿರ್ದು ಕೃಷ್ಣಂ ಬಂದು ಬಾಯ್ಗಾನಲುಗುಳಲದರೊಳಗೆ ಬಿದ್ದು
ಮರಳಿ ಬರೆ ಕಂಡು ಕಡೆಗುಗುಳಲಾ ಹರಿ ಮುನಿಯ
ನಿರದೆ ನುತಿಗೆಯ್ದು ಶಿವದೀಕ್ಷೆಯಂ ಕೊಡುವುದೆನೆ
ಕರುಣದಿಂದಾ ಹರಿಗೆ ಮುನಿವರಂ ದೀಕ್ಷೆಯಂ ಕೊಟ್ಟುದಂ ಕೇಳ್ದರಿಯಲಾ ೧೪

ವರದಧೀಚಿಯ ಕೂಡೆ ಕ್ಷುಪಗಾಗಿ ಕಾದಲಾ
ಹರಿಯ ಚಕ್ರವನುಡಿದು ಬಿಸುಟು ಬೆಂಬತ್ತಲಾ
ಧುರದೊಳಿದಿರಾಗಲರಿಯದೆ ತಲೆಯ ಕೆದರಿಕೊಂಡೋಡಿದಂ ಕೇಳ್ದರಿಯಲಾ
ಪರಮಪಾವನಚರಿತ್ರಂ ಭೃಗುಮುನೀಶನಾ
ಹರಿಯುರಮನೊದೆಯಲದು ಕಂದಿ ಕಲೆಯಾಗಲದು
ಹರಿಗೆ ಶ್ರೀವತ್ಸಲಾಂಛನನೆಂಬ ಪೆಸರಾಯ್ತೆಂದುವುಂ ಕೇಳ್ದರಿಯಲಾ ೧೫

ತಾರಕಾಸುರನೊಡನೆ ಕಾದಿ ಮುರಿದೋಡಿ ಹರಿ
ಕ್ಷೀರಾಬ್ಧಿಯಂ ಪೊಕ್ಕು ಮೆಯ್ಗರೆದು ಬದುಕಿದಂ
ವೀರನಾ ಕಲಿಜಲಂಧರನೊಡನೆ ಕಾದಲವ ಪಿಡಿದು ನಿಡುಬೊಗರಿಯಂತೆ
ತಾರಾಪಥಕ್ಕೆ ಹಾಯ್ಕಿದನದಿಪ್ಪತ್ತೊಂದು
ಬಾರಿ ಮತ್ತಾ ಹರಿಯ ಪಿಡಿತಂದು ಮನೆಯೊಳಗೆ
ಘೋರದಿಂ ಮೂರು ನಿರ್ಬಂದ ವರ್ಷಪರಿಯಂತರಂ ಸೆರೆಯನಿಟ್ಟುದರಿಯಾ ೧೬

ತಲೆಯೇ ಸಾಕ್ಷಿ. ೧೪. ಶಿವನ ವರದಿಂದ ಉಪಮನ್ಯುಮುನಿಯು ಕ್ಷೀರಸಾಗರವನ್ನು ಹೊಂದಿ ಆ ಹಾಲನ್ನು ಸೇವಿಸುತ್ತಿರಲು ಅದರಲ್ಲಿದ್ದ ಕೃಷ್ಣನು ಬಾಯಿಗೆ ಬರಲು ಋಷಿಯು ಅವನನ್ನು ಉಗುಳಿದನು. ಕೃಷ್ಣನು ಹಾಲಿನಲ್ಲಿಯೇ ಬಿದ್ದು ಮತ್ತೆ ಬಾಯಿಗೆ ಬರಲು ಅದನ್ನು ನೋಡಿ ಋಷಿ ಪಕ್ಕಕ್ಕೆ ಉಗುಳಿದನು. ಆಗ ವಿಷ್ಣುವು ಮುನಿಯನ್ನು ಸ್ತುತಿಸಿ ಶಿವದೀಕ್ಷೆಯನ್ನು ಕೊಡು ಎನ್ನಲು ಆ ಮುನಿವರನು ಕರುಣೆಯಿಂದ ಹರಿಗೆ ದೀಕ್ಷೆಯನ್ನು ಕೊಟ್ಟದ್ದನ್ನು ಕೇಳಿ ತಿಳಿದಿಲ್ಲವೆ? ೧೫. ಕೇಳು, ಶ್ರೇಷ್ಠನಾದ ದಧೀಚಿಯೊಂದಿಗೆ ಕ್ಷುಪನಿಗಾಗಿ ಯುದ್ಧ ಮಾಡಲು ಆ ವಿಷ್ಣುವಿನ ಚಕ್ರವನ್ನು ಕಿತ್ತು ಬಿಸುಟು ಮುನಿಯು ವಿಷ್ಣುವಿನ ಬೆನ್ನಟ್ಟಲು ಆ ಯುದ್ಧದಲ್ಲಿ ಎದುರಿಸಲಾಗದೆ ತಲೆಯನ್ನು ಕೆದರಿಕೊಂಡು ಓಡಿದನು. ನೀನು ಇದನ್ನು ಕೇಳಿ ತಿಳಿದಿಲ್ಲವೆ? ಪರಮಪಾವನಚರಿತ್ರನಾದ ಭೃಗುಮುನಿಯು ಆ ವಿಷ್ಣುವಿನ ಎದೆಗೆ ಒದೆಯಲು ಅದು ಕಂದಿ ಕಲೆಯಾಯಿತು. ಅದರಿಂದ ವಿಷ್ಣುವಿಗೆ ಶ್ರೀವತ್ಸಲಾಂಛನನೆಂಬ ಹೆಸರಾಯಿತೆಂಬುದನ್ನು ಕೇಳಿಲ್ಲವೇ? ೧೬. ತಾರಕಾಸುರನೊಡನೆ ಯುದ್ಧ ಮಾಡಿ ಸೋತು ಓಡಿ ವಿಷ್ಣು ಕ್ಷೀರಸಮುದ್ರವನ್ನು ಸೇರಿ ಮೈಮರೆಸಿಕೊಂಡು ಬದುಕಿದ. ವೀರನಾದ ಆ ಜಲಂಧರನೊಡನೆ ಯುದ್ಧ ಮಾಡಲು ಅವನು ಇವನನ್ನು ಹಿಡಿದು ತಿರುಗಿಸಿ ಬಿಟ್ಟು ಬುಗುರಿಯಂತೆ ಇಪ್ಪತ್ತೊಂದು ಬಾರಿ ಆಕಾಶಕ್ಕೆ ಎಸೆದನು. ಅನಂತರ

CC-0. Jangamwadi Math Collection. Digitized by eGangotri

ಹರಿಯು ನೇಮದೊಳಜಂ ಸೃಷ್ಟಿಸಲ್ ಕಾಣುತಾ
ಕರಿಮುಖಂ ತನ್ನ ಪ್ರಾರ್ಥಿಸಿದುದಿಲ್ಲೆನುತಲಾ
ಹರಿಯಜರ್ಗಿರದೆ ಶಾಪವನೀಯಲವರೊಬ್ಬರೊಬ್ಬರುದರವನೆ ಪೊಕ್ಕು
ಬರಲಾರದಾ ಹರಿಯ ನಾಭಿಯಿಂದಜನುದಿಸೆ
ಸರಸಿಜೋದ್ಭವನೆಂಬ ಪೆಸರಾಯ್ತು ಮತ್ತೆ ಕೇಳ್
ಹರಿಯಜನ ಗುದದಿನುದ್ಭವಿಸಲಾ ಹರಿಗಧೋಕ್ಷಜನೆಂಬ ಪೆಸರಾದುದು ೧೭

ಹರಿಯಜರ್ ಮತ್ತೆ ಮತ್ಸರದಿಂದೆ ಕಾದುತಿರ
ಉರುಲಿಂಗಮುದಿಸೆ ಕಂಡದರ ಪದಮಸ್ತಕವ
ಹರಿಯಜರ್ ಹಂದಿ ಹಕ್ಕಿಗಳಾಗಿ ಕಾಣಲಾರದೆ ನುತಿಸಿ ಬಳಿಕ ಶಿವನ
ಕರುಣಮಂ ಪಡೆದು ಸುಖಮಿರುತಜಂ ಮತ್ತಹಂ
ಕರಿಸಲಾತನ ತಲೆಯನರಿದಭವನೈತಂದು
ಹರಿಯ ಮನೆಯಂ ಪೊಗಲ್ ನಿಲಿಸೆ ವಿಷ್ವಕ್ಸೇನನಂ ತ್ರಿಶೂಲದೊಳಿರಿಯನೇ ೧೮

ಹರನ ಬರವಂ ಕಂಡು ಹರಿ ತನ್ನ ಹಣೆಯ ನೆ
ತ್ತರನಜಕಪಾಲಕಾಗಂ ದಿವ್ಯಸಾಹಸ್ರ
ವರುಷಪರಿಯಂತರಂ ಕರೆದಾಗ ಪರಶಿವನ ಕರುಣಮಂ ತಾಂ ಪಡೆಯನೇ

ವಿಷ್ಣುವನ್ನು ಹಿಡಿದು ತಂದು ಮನೆಯೊಳಗೆ ಘೋರವಾದ ಮೂರು ನಿರ್ಬುದ ವರ್ಷದ ವರೆಗೆ ಸೆರೆಯಿಟ್ಟುದನ್ನು ತಿಳಿದಿಲ್ಲವೆ ? ೧೭. ವಿಷ್ಣುವಿನ ಆಜ್ಞೆಯಂತೆ ಬ್ರಹ್ಮನು ಲೋಕಸೃಷ್ಟಿಯನ್ನು ಮಾಡಲು ಅದನ್ನು ಗಣೇಶನು ನೋಡಿ ತನ್ನನ್ನು ಪ್ರಾರ್ಥಿಸಲಿಲ್ಲ ವೆಂದು ಕೂಡಲೇ ಆ ವಿಷ್ಣು-ಬ್ರಹ್ಮರಿಗೆ ಶಾಪವನ್ನು ಕೊಟ್ಟನು. ಅವರು ಒಬ್ಬರ ಹೊಟ್ಟೆಯನ್ನು ಮತ್ತೊಬ್ಬರು ಹೊಕ್ಕು ಹೊರಗೆ ಬರಲಾರದೆ ವಿಷ್ಣುವಿನ ಹೊಕ್ಕಳಿನಿಂದ ಬ್ರಹ್ಮನು ಹುಟ್ಟಲು ಅವನಿಗೆ ಕಮಲಭವನೆಂದು ಹೆಸರಾಯಿತು. ಮತ್ತೆ ಕೇಳು, ವಿಷ್ಣುವು ಬ್ರಹ್ಮನ ಗುದದಿಂದ ಹುಟ್ಟಲು ಅವನಿಗೆ ಅಧೋಕ್ಷಜನೆಂಬ ಹೆಸರಾಯಿತು. ೧೮. ವಿಷ್ಣು-ಬ್ರಹ್ಮರು ಹೊಟ್ಟೆಕಿಚ್ಚಿನಿಂದ ಯುದ್ಧ ಮಾಡುತ್ತಿರಲು ಶ್ರೇಷ್ಠವಾದ ಲಿಂಗವೊಂದು ಹುಟ್ಟಿತು. ಅದನ್ನು ನೋಡಿ ಪಾದ ಮತ್ತು ತಲೆಯನ್ನು ಕಾಣಲೋಸುಗ ವಿಷ್ಣು-ಬ್ರಹ್ಮರು ಹಂದಿ ಮತ್ತು ಪಕ್ಷಿಗಳಾದರು. ಆದರೆ ಅದನ್ನು ನೋಡಲು ಸಾಧ್ಯವಾಗದೆ ಕಡೆಗೆ ಪ್ರಾರ್ಥಿಸಿ ಅನಂತರ ಶಿವನ ಕರುಣೆಯನ್ನು ಪಡೆದು ಸುಖವಾಗಿದ್ದರು. ಮತ್ತೆ ಬ್ರಹ್ಮನು ಅಹಂಕಾರ ಹೊಂದಲು ಶಿವನು ಅವನ ತಲೆಯನ್ನು ಕಡಿದು ಬಂದು ವಿಷ್ಣುವಿನ ಮನೆಯನ್ನು ಹೊಕ್ಕನು. ವಿಷ್ವಕ್ಸೇನನು ಶಿವನನ್ನು ತಡೆಯಲು ಅವನನ್ನು ಶಿವನು ತ್ರಿಶೂಲದಿಂದ ಸೀಳಲಿಲ್ಲವೆ ? ೧೯. ಎಲೈ ವೈಷ್ಣವನೆ, ಕೇಳು, ಶಿವನು ಬಂದುದನ್ನು ನೋಡಿ ವಿಷ್ಣುವು ತನ್ನ ಹಣೆಯ ರಕ್ತವನ್ನು ಬ್ರಹ್ಮನ ತಲೆಬುರುಡೆಗೆ ದೇವಸಾವಿರ ವರ್ಷದವರೆಗೆ ಸುರಿಯಲು ಶಿವನ ಕರುಣೆಯನ್ನು ಪಡೆಯಲಿಲ್ಲವೆ ? ವಿಷ್ಣು ಶಿವನನ್ನು

CC-0. Jangamwadi Math Collection. Digitized by eGangotri

ವರಜಲಂಧರನ ಸಂಹರಿಸಿದಾ ಚಕ್ರಮಂ
ಹರಿ ಹರನ ಕುರಿತು ತಪವಂ ಮಾಡಿ ಬಳಿಕಲಾ
ಪರಶಿವನನೊಲಿಸಿ ತಚ್ಚಕ್ರಮುಂ ಪಡೆಯನೇ ವೈಷ್ಣವನೆ ಕೇಳೆಂದನು ೧೯

ಭೂಲೋಕಮುಂ ತೀವಿದುದಕದೊಳ್ ವಿಷ್ಣುವೊಂ
ದಾಲದೆಲೆಯೊಳ್ ತೇಲುತುಂ ಮುಳುಗುತಿರೆ ಶಿವಂ
ಲೀಲೆಯಿಂದಾ ಗಂಗೆಯಂ ಮಲ್ಲಿಕಾಕುಸುಮದೊಲ್ ಧರಿಸನೇ ಜಡೆಯೊಳು
ಕಾಳಕೂಟಂ ಸಕಲಜಗಮನುರಿಪಲ್ ಸುರರ್
ಘೋಳಿಟ್ಟು ಶಿವಗೆ ಮೊರೆಯಿಡೆ ಕೇಳ್ದು ತದ್ವಿಷವ
ನೀಲಮಣಿಯಂತಭವ ಕಂಠದೊಳ್ ತಾಳ್ದವರ ರಕ್ಷಿಸನೆ ಕೇಳ್ದರಿಯಲಾ ೨೦

ಮಾರಾರಿಯಲ್ಲೆಂದು ದಕ್ಷನತಿಗರ್ವದಿಂ
ನಾರಾಯಣಂಗಗ್ರಪೂಜೆಯಂ ಕೊಟ್ಟಿರದೆ
ವಾರಿಜಾಸನಮುಖ್ಯದೇವತೆಗಳಂ ನೆರೆಪಿ ಯಾಗಮಂ ಮಾಡುತಿರಲು
ವೀರಭದ್ರಂ ಸಕಲದಿವಿಜರಂ ಭಂಗಿಸಲ್
ವಾರಿಜಾಕ್ಷಂ ಕಾದಿಯೆರಳೆಯಾಗೋಡುತಿರೆ
ಕೂರಲಗಿನಿಂದೆಚ್ಚು ಪ್ರಾಣಮಂ ಕಾಯ್ದು ತಚ್ಚರ್ಮವಂ ಪೊದೆದನರಿಯಾ ೨೧

ಸಿರಿಯ ಮುಂದಲೆಗೊಯ್ದು ವಿಧಿಯ ಪಣೆಯಂ ಪೊಯ್ದು
ಸರಸತಿಯ ನಾಸಿಕವನರಿಸಿ ಚಂದ್ರನನೊರಸಿ
ಸುರಪತಿಯ ತೋಳ್ಗಳಂ ಕುತ್ತಿ ಶಚಿಗಚ್ಚೊತ್ತಿ ಶಿಖಿಯ ನಾಲಗೆಯ ಸೀಳಿ

ಕುರಿತು ತಪಸ್ಸುಮಾಡಿ ಅವನನ್ನೊಲಿಸಿ ಜಲಂಧರನನ್ನು ಸಂಹರಿಸಿದ ಆ ಚಕ್ರವನ್ನು ಶಿವನಿಂದ ಪಡೆಯಲಿಲ್ಲವೆ ? ಎಂದನು. ೨೦. ಭೂಲೋಕವನ್ನು ಆವರಿಸಿದ ನೀರಿನಲ್ಲಿ ವಿಷ್ಣುವು ಒಂದು ಆಲದೆಲೆಯ ಮೇಲೆ ತೇಲುತ್ತ ಮುಳುಗುತ್ತ ಇರಲು ಶಿವನು ಲೀಲೆಯಿಂದ ಆ ಗಂಗೆಯನ್ನು ಮಲ್ಲಿಗೆಹೂವಿನಂತೆ ಜಡೆಯಲ್ಲಿ ಧರಿಸಲಿಲ್ಲವೆ ? ಕಾಲಕೂಟ ವಿಷವು ಸಕಲ ಜಗತ್ತನ್ನು ನಾಶಮಾಡಲು ದೇವತೆಗಳು ಗೋಳಿಟ್ಟು ಶಿವನಿಗೆ ಮೊರೆಯಿಡಲು ಅದನ್ನು ಕೇಳಿ ಶಿವನು ಆ ವಿಷವನ್ನು ನೀಲಮಣಿಯಂತೆ ಕಂಠದಲ್ಲಿ ತಳೆದು ಅವರನ್ನು ರಕ್ಷಿಸಲಿಲ್ಲವೆ ? ಇದನ್ನು ನೀನು ಕೇಳಿಲ್ಲವೆ ? ೨೧. ದಕ್ಷನು ಅತಿಯಾದ ಗರ್ವದಿಂದ ಶಿವನನ್ನು ಲಕ್ಷಿಸದೆ ವಿಷ್ಣುವಿಗೆ ಅಗ್ರಪೂಜೆಯನ್ನು ಕೊಟ್ಟು. ಬ್ರಹ್ಮನೇ ಮೊದಲಾದ ದೇವತೆಗಳನ್ನು ಸೇರಿಸಿ ಯಾಗ ಮಾಡುತ್ತಿರಲು ವೀರಭದ್ರನು ಎಲ್ಲ ದೇವತೆಗಳನ್ನು ಸೋಲಿಸಲು ವಿಷ್ಣುವು ಯುದ್ಧಮಾಡಿ ಜಿಂಕೆಯಾಗಿ ಓಡಿಹೋಗುತ್ತಿರಲು ಹರಿತವಾದ ಬಾಣದಿಂದ ಹೊಡೆದು ಪ್ರಾಣವನ್ನು ಕಾಪಾಡಿ ಆ ಚರ್ಮವನ್ನು ಹೊದ್ದುದನ್ನು ತಿಳಿಯೆಯಾ ? ೨೨. ಲಕ್ಷ್ಮಿಯ ಮುಂದಲೆಯನ್ನು ಕೊಯ್ದು, ಬ್ರಹ್ಮನ ಹಣೆಯನ್ನು ಹೊಡೆದು, ಸರಸ್ವತಿಯ ಮೂಗನ್ನು ಕತ್ತರಿಸಿ, ಚಂದ್ರನನ್ನು ನಾಶಗೈದು, ದೇವೇಂದ್ರನ ತೋಳುಗಳನ್ನು ಕುತ್ತಿ, ಶಚಿಗೆ ಅಚ್ಚೊತ್ತಿ,

CC-0. Jangamwadi Math Collection. Digitized by eGangotri

ವರುಣನಂ ತುಳಿದು ಪೂಷನ ಪಲ್ಗಳಂ ಕಳಿದು
ಮರುತನೂರಂ ಕಡಿದು ಭಗನ ಕಣ್ಗಳನೊಡೆದು
ಸುರರೊಳಗ್ಗಳೆಯುರಂ ತರಿದು ಸ್ವಾಹಾಸ್ತನಂಗಳನರಿಯನೇ ವೀರನು ೨೨

ತಾರಕಾಸುರ ಜಲಂಧರನಂಧಕಾಸುರಂ
ವೀರವಿದ್ಯುನ್ಮಾಲಿ ಕಮಲಲೋಚನನೆಸೆವ
ತಾರಕಾಕ್ಷಂ ಗಜಾಸುರ ಸಿಂಹ ವ್ಯಾಘ್ರ ವ್ಯಾಳಾಸುರರ್ ಮುಖ್ಯರಾದ
ಕ್ರೂರರಕ್ಕಸರನುರೆ ಕೊಂದಾಗ ಸುರರನತಿ
ಕಾರುಣ್ಯದಿಂ ಕಾಯ್ದು ರಕ್ಷಿಸನೆ ಕೇಳ್ ಮರುಳೆ
ಮಾರಾರಿಯೇ ದುಷ್ಟನಿಗ್ರಹಂ ಶಿಷ್ಟಪ್ರತೀಪಾಲನೆಂದರಿಯುಲಾ ೨೩

ನೆಟ್ಟನಾ ಕಾಲ ಕಾಮ ತ್ರೈಪುರಂಗಳಂ
ಸುಟ್ಟುರುಪನೇ ಹರಂ ಪಶುಪತಿಯು ಪಟ್ಟಮಂ
ಕಟ್ಟಿ ಸರ್ವೇಂದ್ರಿಯಕ್ಕಕ್ಷಿ ಗಾತ್ರಸ್ಯ ಶಿರಸೇ ಪ್ರಧಾನಂಗಳೆಂದು
ವಿಟ್ಟುವುಂ ಬ್ರಹ್ಮನುಂ ಕಣ್ ತಲೆಗಳಂ ಶಿವಗೆ
ಕೊಟ್ಟು ಡಿಂಗರಿಗರಾದವರನೀಶಂಗೆ ಪಡಿ
ಗಟ್ಟುವರೆ ಕೇಳೆಲೋ ಭ್ರಷ್ಟವೈಷ್ಣವ ನಿನ್ನ ವಿಷ್ಣುವಿನ ವಿಧಿಯನಿನ್ನು ೨೪

ಗೋಪನಾ ಭೃಗುವಿನರಸಿಯು ಹತಿಸಲಾ ಮುನಿಯ
ಕೋಪದಿಂ ದಶಯೋನಿಯೊಳ್ ಪುಟ್ಟು ಪೋಗೆಂದು
ಶಾಪವಮಂ ಕೊಡಲದಂ ಕೆಯ್ಕೊಳುತ್ತಾ ವಿಷ್ಣು ಶರಧಿಯೊಳ್ ಪೊಕ್ಕು ಮತ್ಸ್ಯ

ಅಗ್ನಿಯ ನಾಲಗೆಯನ್ನು ಸೀಳಿ, ವರುಣನನ್ನು ತುಳಿದು, ಶೇಷನ ಹಲ್ಲುಗಳನ್ನು ಕಿತ್ತು, ವಾಯುವಿನ ತೊಡೆಯನ್ನು ಸೀಳಿ, ಸೂರ್ಯನ ಕಣ್ಣುಗಳನ್ನು ಒಡೆದು, ದೇವತೆಗಳಲ್ಲಿ ಶ್ರೇಷ್ಠರಾದವರನ್ನು ತರಿದು, ಅಗ್ನಿಯ ಹೆಂಡತಿಯ ಮೊಲೆಗಳನ್ನು ವೀರಭದ್ರನು ಕತ್ತರಿಸ ಲಿಲ್ಲವೆ ? ೨೩. ತಾರಕಾಸುರ, ಜಲಂಧರ, ಅಂಧಕಾಸುರ, ವೀರವಿದ್ಯುನ್ಮಾಲಿ, ಕಮಲ ಲೋಚನ, ಪ್ರಖ್ಯಾತನಾದ ತಾರಕಾಕ್ಷ, ಗಜಾಸುರ, ಸಿಂಹ, ವ್ಯಾಘ್ರ, ಸರ್ಪಾಸುರರೇ ಮೊದಲಾದ ಕ್ರೂರ ರಾಕ್ಷಸರನ್ನು ಕೊಂದು, ದೇವತೆಗಳನ್ನು ಅತಿಕರುಣೆಯಿಂದ ಕಾಪಾಡಿ ರಕ್ಷಿಸಲಿಲ್ಲವೆ ? ಕೇಳು ಮರುಳೆ, ಶಿವನೇ ದುಷ್ಟನಿಗ್ರಹ ಶಿಷ್ಟಪರಿಪಾಲಕನೆಂಬುದನ್ನು ತಿಳಿ. ೨೪. ಶಿವನು ಆ ಯಮ, ಮನ್ಮಥ, ತ್ರಿಪುರಗಳನ್ನು ಸುಟ್ಟು ಬೂದಿ ಮಾಡ ಲಿಲ್ಲವೆ ? ಪಶುಪತಿಯ ಪಟ್ಟವನ್ನು ಕಟ್ಟಿ ಎಲ್ಲ ಇಂದ್ರಿಯಗಳಿಗೂ ಕಣ್ಣು, ಶರೀರಕ್ಕೆಲ್ಲಾ ತಲೆಯೇ ಪ್ರಧಾನವಾದುದು ಎಂದು ವಿಷ್ಣುವೂ-ಬ್ರಹ್ಮನೂ ತಮ್ಮ ಕಣ್ಣು–ತಲೆಗಳನ್ನು ಶಿವನಿಗೆ ಕೊಟ್ಟು ಅವನ ಭಕ್ತರಾದರು. ಅಂತಹವರನ್ನು ಈಶ್ವರನಿಗೆ ಸಮನೆನ್ನುತ್ತಾರೆಯೆ? ಎಲವೋ ಭ್ರಷ್ಟ ವೈಷ್ಣವನೆ, ನಿನ್ನ ವಿಷ್ಣುವಿನ ಹಣೆಬರಹವನ್ನು ಇನ್ನೂ ಕೇಳು ? ೨೫. ವಿಷ್ಣುವು ಆ ಭೃಗುಮಹರ್ಷಿಯ ಪತ್ನಿಯನ್ನು ಕೊಲ್ಲಲು ಆ ಮುನಿಯು ಕೋಪ ದಿಂದ ಹತ್ತು ಯೋನಿಗಳಲ್ಲಿ ಹುಟ್ಟುವಂತೆ ಶಾಪ ಕೊಟ್ಟನು. ಶಾಪವನ್ನು ಪಡೆದು ವಿಷ್ಣು ಸಮುದ್ರವನ್ನು ಹೊಕ್ಕು ಮೀನಿನ ರೂಪದಿಂದ ಸೋಮನೆಂಬ ರಾಕ್ಷಸನನ್ನು ಕೊಂದು

CC-0. Jangamwadi Math Collection. Digitized by eGangotri

ರೂಪಿನಿಂ ಸೋಮನಂ ಕೊಂದಹಂಕರಿಸಲಗ
ಚಾಪನಾ ಮತ್ಸ್ಯಮಂ ಕೊಂದು ನೆಟ್ಟೆಲುವನುರೆ
ತಾ ಪಿಡಿಯೆ ವಿಷ್ಣುಕಂಕಾಳಧರನೆಂಬ ಪೆಸರುಂಟದುಂ ನೀನರಿಯಲಾ ೨೫

ಶರಧಿಯಂ ಮಥಿಸಲದಕಾಧಾರವಾಗಿಯಾ
ಹರಿ ಕಮಠರೂಪಿನಿಂ ತಾಳ್ದಿರ್ದು ಬಳಿಕಹಂ
ಕರಿಸಲಾ ಕಮಠನಂ ಕೊಂದದರ ತಲೆಯನುರುಹಾರದೊಳ್ ಶಿವ ಧರಿಸನೇ
ಧರಣಿಯಂ ಕದ್ದುಕೊಂಡೊಯ್ದ ಕನಕಾಕ್ಷನಂ
ಹರಿ ಹಂದಿಯಾಗಿ ತದ್ದನುಜನಂ ಹತಿಸಿ ತಾ
ನಿರದಹಂಕರಿಸಲಾ ಕ್ರೋಡನಂ ಕೊಂದದರ ಕೋರೆಯಂ ಹರ ಪಿಡಿಯನೇ ೨೬

ಹರಿ ಹರಿಯರೂಪಿನಿಂ ಖಳಹಿರಣ್ಯಕಶಿಪುವ
ನಿರದೆ ಸಂಹರಿಸಿ ನೆತ್ತರ್ಗುಡಿದಹಂಕರಿಸೆ
ಶರಭಾವತಾರದಿಂದಾ ಹರಿಯ ಹರಿಸಿ ತಚ್ಚರ್ಮಮಂ ಶಿವ ಪೊದೆಯನೇ
ಹರಿ ಸುರಪನನುಜನಾಗುದಿಸಿ ಬಂದಾ ಬಲಿಯ
ನಿರದೆ ಬಂಧಿಸಿ ತ್ರಿವಿಕ್ರಮರೂಪಿನಿಂ ಬಳೆಯೆ
ಹರನವನ ಸಂಹರಿಸಿ ಬೆನ್ನ ನಿಟ್ಟೆಲುವ ಖಟ್ವಾಂಗಮಂ ಮಾಡಿಕೊಳನೇ ೨೭

ಪ್ರೇಮದಿಂ ಜಮದಗ್ನಿಯರಸಿಯುದರದೆ ಪರಶು
ರಾಮವೆಸರಿಂದೊಗೆದು ಕ್ಷತ್ರಿಯರ ಹತಿಸಿ ರಘು
ರಾಮನೊಡನಿರದೆ ವಾದವ ಮಾಡಿ ಸೋಲ್ತು ಶಕ್ತಿಯ ನೀಗಿ ದುಃಖದಿಂದೆ

ಅಹಂಕಾರ ಹೊಂದಲು ಶಿವನು ಆ ಮೀನನ್ನು ಕೊಂದು ಬೆನ್ನಮೂಳೆಯನ್ನು ಹಿಡಿಯಲು ಆಗ ಶಿವನಿಗೆ ವಿಷ್ಣು ಕಂಕಾಳಧರನೆಂಬ ಹೆಸರಾಯಿತು. ಅದನ್ನು ನೀನು ತಿಳಿದಿಲ್ಲವೆ ? ೨೬. ಸಮುದ್ರವನ್ನು ಕಡೆಯಲು ಅದಕ್ಕೆ ಆಧಾರವಾಗಿ ಆ ವಿಷ್ಣು ಆಮೆಯ ರೂಪವನ್ನು ತಾಳಿದ್ದು ಅನಂತರ ಅಹಂಕಾರ ಹೊಂದಲು ಶಿವನೂ ಆ ಆಮೆಯನ್ನು ಕೊಂದು ಅದರ ತಲೆಯನ್ನು ತನ್ನ ಹಾರದಲ್ಲಿ ಧರಿಸಲಿಲ್ಲವೆ ? ಭೂಮಿಯನ್ನು ಕದ್ದು ತೆಗೆದುಕೊಂಡು ಹೋದ ಕನಕಾಕ್ಷನನ್ನು ವಿಷ್ಣು ಹಂದಿಯಾಗಿ ಕೊಂದು ಅಹಂಕಾರಗೊಳ್ಳಲು ಶಿವನು ಆ ಹಂದಿಯನ್ನು ಕೊಂದು ಅದರ ಕೋರೆಯನ್ನು ಹಿಡಿಯಲಿಲ್ಲವೇ ? ೨೭. ವಿಷ್ಣು ನರಸಿಂಹಾವತಾರದಿಂದ ಕ್ರೂರ ಹಿರಣ್ಯಕಶಿಪುವನ್ನು ಕೊಂದು ರಕ್ತವನ್ನು ಕುಡಿದು ಅಹಂಕಾರಗೊಳ್ಳಲು ಶಿವನು ಶರಭಾವತಾರದಿಂದ ಆ ನರಸಿಂಹನನ್ನು ಸಂಹಾರಮಾಡಿ ಆ ಸಿಂಹದ ಚರ್ಮವನ್ನು ಹೊದ್ದುಕೊಳ್ಳಲಿಲ್ಲವೆ ? ವಿಷ್ಣು ಇಂದ್ರನ ತಮ್ಮನಾಗಿ ಹುಟ್ಟಿಬಂದು ಆ ಬಲಿಯನ್ನು ಮಾತಿನಲ್ಲಿ ಕಟ್ಟಿಹಾಕಿ ತ್ರಿವಿಕ್ರಮನ ರೂಪದಲ್ಲಿ ಬೆಳೆಯಲು ಶಿವನು ಅವನನ್ನು ಸಂಹಾರ ಮಾಡಿ ಬೆನ್ನ ನಿಟ್ಟೆಲುಬನ್ನು ಕೊನೆಯಲ್ಲಿ ತಲೆಯಿರುವ ಗದೆಯನ್ನಾಗಿ ಮಾಡಿಕೊಳ್ಳಲಿಲ್ಲವೆ ? ೨೮. ಪ್ರೇಮದಿಂದ ಜಮದಗ್ನಿಯ ಪತ್ನಿಯ ಹೊಟ್ಟೆಯಲ್ಲಿ ಹುಟ್ಟಿ ಪರಶುರಾಮನೆಂಬ ಹೆಸರಿನಿಂದ ಪ್ರಖ್ಯಾತನಾಗಿ ಕ್ಷತ್ರಿಯರನ್ನು ಸಂಹಾರ ಮಾಡಿ, ರಘುರಾಮನೊಡನೆ ವಾದಮಾಡಿ, ಸೋತು, ಶಕ್ತಿಯನ್ನು ಕಳೆದುಕೊಂಡು ದುಃಖದಿಂದ ಭೂಮಿ

CC-0. Jangamwadi Math Collection. Digitized by eGangotri

ಭೂಮಿಯುಂ ಭೂಸುರರ್ಗಿತ್ತು ಶಿವಲಿಂಗಮಂ
ರಾಮೇಶನೆಂದು ಪೂಜಿಸಿ ತನ್ನ ಭವನ ನಿ
ರ್ನಾಮಮಂ ಮಾಡಿ ತಪಿಸುತ್ತಿರ್ಪ ಕಥೆಯ ನೀನೆಂದುಮುಂ ಕೇಳ್ದರಿಯಲಾ ೨೮

ರಾಮನೆಸರಿಂದೆ ದಶರಥನರಸಿಗುದಿಸಿ ತಾಂ
ಭೂಮಿಸುತೆಯುಂ ಮದುವೆಯಾಗಿ ವನವಾಸದೊಳ್
ಕಾಮಿನಿಯ ನೀಗಾಡಿಕೊಂಡು ರಾವಣನಿಂದೆ ನೊಂದು ತಾನವನ ಕೊಂದು
ಪ್ರೇಮದಿಂ ಸೀತೆಯುಂ ತಂದು ಸುತರಿಂದೆ ಸಂ
ಗ್ರಾಮದಿಂದಳಿದು ಮುನಿಯಿಂ ಮರಳಿ ಬದುಕಿ ಬಂ
ದಾ ಮಹಾದುಃಖದಿಂ ಶರಧಿಯೊಳ್ ಬಿದ್ದಳಿದ ಕಥೆಯ ನೀಂ ಕೇಳ್ದರಿಯಲಾ ೨೯

ವಸುದೇವ ದೇವಕಿಗೆ ಜನಿಸಿ ಕೃಷ್ಣಂ ಸಜೀ
ವಿಸಿದನಾ ಗೊಲ್ಲರಲ್ಲುಂಡುಟ್ಟು ಬೆಳೆದು ಪಾಲ್
ಮೊಸರು ಬೆಣ್ಣೆಯ ಕದ್ದು ಮೆಲ್ದು ಗೋವಂ ಕಾಯ್ದು ಗೋಪಾಂಗನೆಯರ ಕೂಡೆ
ನಸೆಮಾಡಿ ಹಾದರಕೆ ಹೊಕ್ಕು ಜಾರತ್ವದೊಂ
ದೆಸಕದಿಂ ಬಾಳ್ದು ದಿಂಡೆಯತನದೆ ಕೆಲವು ರ
ಕ್ಕಸರನುರೆ ಕೊಂದು ಕೆಲಬರ ಕೆಯ್ಯ ನೊಂದೋಡಿ ಬದುಕನೇ ಕೇಳೆಂದನು ೩೦

ಘಾಸಿಯಾದಂ ಜರಾಸಂಧನಿಂದಂ ಪೀತ
ವಾಸನಂದೆಂಬತ್ತುನಾಲ್ಕು ದುರ್ಗವ ಬಿಟ್ಟು
ವಾಸವಂ ಮಾಡಿಕೊಂಡಿರನೆ ಸಾಗರಮಧ್ಯದಲ್ಲಿ ಕಡುಭೀತಿಯಿಂದ

ಯನ್ನು ಬ್ರಾಹ್ಮಣರಿಗೆ ಕೊಟ್ಟು, ಶಿವಲಿಂಗವನ್ನು ರಾಮೇಶ್ವರನೆಂದು ಪೂಜೆಮಾಡಿ, ತನ್ನ ಸಂಸಾರಬಂಧನವನ್ನು ನೀಗಿಕೊಂಡು ತಪಸ್ಸುಮಾಡುತ್ತಿರುವ ಕಥೆಯನ್ನು ನೀನು ಎಂದೂ ಕೇಳಿ ತಿಳಿದಿಲ್ಲವೆ ? ೨೯. ರಾಮನೆಂಬ ಹೆಸರಿನಿಂದ ದಶರಥನಿಗೆ ಮಗನಾಗಿ ಹುಟ್ಟಿ, ಸೀತೆಯನ್ನು ಮದುವೆಯಾಗಿ, ವನವಾಸದಲ್ಲಿ ಹೆಂಡತಿಯನ್ನು ಕಳೆದುಕೊಂಡು, ರಾವಣನಿಂದ ನೊಂದು, ತಾನು ಅವನನ್ನು ಕೊಂದು, ಪ್ರೇಮದಿಂದ ಸೀತೆಯನ್ನು ಕರೆತಂದು, ಮಕ್ಕಳಿಂದ ಯುದ್ಧದಲ್ಲಿ ಸತ್ತು ಋಷಿಯ ಅನುಗ್ರಹದಿಂದ ಮತ್ತೆ ಬದುಕಿ ಬಂದು ಆ ದುಃಖದಿಂದ ಸಮುದ್ರದಲ್ಲಿ ಬಿದ್ದು ಮರಣಹೊಂದಿದ ಕಥೆಯನ್ನು ನೀ ಕೇಳಿಲ್ಲವೆ ? ೩೦. ವಸುದೇವ ದೇವಕಿಯರಿಗೆ ಮಗನಾಗಿ ಹುಟ್ಟಿ, ಕೃಷ್ಣನು ಆ ಗೊಲ್ಲರೊಡನೆ ಉಂಡು, ಉಟ್ಟು ಬೆಳೆದು ಜೀವಿಸಿದನು. ಹಾಲು ಮೊಸರು ಬೆಣ್ಣೆಯನ್ನು ಕದ್ದು ತಿಂದು, ದನವನ್ನು ಕಾದು, ಗೋಪಾಂಗನೆಯರೊಡನೆ ಕೂಡಿ, ಅವರೊಡನೆ ಹಾದರ ಮಾಡಿ ಜಾರತನದಿಂದ ಬಾಳಿ, ಉದ್ಧಟತನದಿಂದ ಕೆಲವು ರಾಕ್ಷಸರನ್ನು ಕೊಂದು, ಕೆಲವರ ಕೈಯಲ್ಲಿ ನೊಂದು ಓಡಿ ಬದುಕಲಿಲ್ಲವೇ, ಕೇಳು. ೩೧. ಜರಾಸಂಧನಿಂದ ಘಾಸಿಗೊಂಡು ಪೀತಾಂಬರ ವಿಷ್ಣುವು ಎಂಬತ್ನಾಲ್ಕು ದುರ್ಗಗಳನ್ನು ಬಿಟ್ಟು ಬಹಳ ಭಯದಿಂದ ಸಮುದ್ರಮಧ್ಯ ದಲ್ಲಿ ವಾಸಮಾಡಿಕೊಂಡಿರಲಿಲ್ಲವೆ ? ದಾಸಿಯ ಮಗನಾದ ವಿದುರನ ಮನೆಯಲ್ಲಿ ಊಟ

CC-0. Jangamwadi Math Collection. Digitized by eGangotri

ದಾಸಿಯಾತ್ಮಜನ ಮನೆಯೊಳಗುಂಡನೆಂದಧಿಕ
ಮೋಸದಿಂ ಕೌರವೇಶ್ವರ ಕಟ್ಟಿಹಾಯ್ಕಿಸನೆ
ದಾಸತ್ವದಿಂದಲರ್ಜುನನ ಬಂಡಿಯ ಬೋವನಾದುದಂ ಕೇಳ್ದರಿಯಲಾ ೩೧

ಪರಮೇಶನಂ ಕೂರ್ತು ಕೃಷ್ಣ ತಪವಂ ಮಾಡಿ
ಮರಳಿ ಮನ್ಮಥನ ಪಡೆಯನೆ ಸಹಸ್ರಾಂಬುಜದಿ
ಹರನ ಚರಣವನರ್ಚಿಸಲ್ಕೊಂದು ಕುಂದೆ ಬಲಗಣ್ಣ ತಾಂ ತೆಗೆದೇರಿಸಿ
ಹರನೊಲವಿನಿಂ ಮರಳಿ ಚಕ್ರಮುಂ ಪಡೆಯನೇ
ಮರುಳೆ ಕೇಳಾ ಕೃಷ್ಣನಳಿಯೆ ಹದಿನಾರುಸಾ
ಸಿರವುಂದಿ ಸತಿಯರುಂ ಸರ್ವರುಂ ನೋಡುತಿರೆ ಹೊಲೆಬೇಡರೆಳೆದೊಯ್ಯರೆ ೩೨

ಹರಿ ಮತ್ಸ್ಯ ಕೂರ್ಮ ಕಿಟಿ ಸಿಂಹ ವಾಮನರೂಪ
ಧರಿಸಹಂಕರಿಸಲವನೀಶ್ವರಂ ಕೂಡೆ ಸಂ
ಹರಿಸಿದನೆನಲ್ ನಿನಗೆ ನೋವಾಯ್ತೊ ಹುಲುಬೇಡನೆಸೆಯೆ ನಿನ್ನಯ ಕೃಷ್ಣನು
ಮರಣವಾಗನೆ ಬಳಿಕ್ಕಾ ಹೆಣನ ಸುಡಲಾಗ
ಲರೆಬೆಂದು ಕೈಕಾಲ್ಗಳುಡಿದು ಮೋಟಾಗಲದ
ನಿರದಾ ಜಗನ್ನಾಥನೆಂದು ಪೂಜಿಸುವರಿದು ಲೋಕಕ್ಕೆ ಪ್ರತ್ಯಾಂತವಿದೆಲಾ ೩೩

ಇನ್ನು ಕೇಳ್ ಬುದ್ಧಕಲ್ಕ್ಯವತಾರಂಗಳಿಂ
ನಿನ್ನ ಹರಿ ಜನಿಸೆ ಕೆಲದಿನದ ಮೇಲಳಿವನಿದು
ನನ್ನಿ ಕೇಳೀ ತೆರದೆ ಸತ್ತು ಹುಟ್ಟುತ್ತೆ ಬಹು ಭಂಗಿಯಾದಾ ಹರಿಯನು

ಮಾಡಿದನೆಂದು ಆ ದಿನ ಬಹು ಮೋಸದಿಂದ ಕೌರವನು ಕಟ್ಟಿಹಾಕಿಸಲಿಲ್ಲವೆ ? ಅರ್ಜುನನ ಸೇವಕನಾಗಿ ಅವನ ರಥದ ಸಾರಥಿಯಾದುದನ್ನು ಕೇಳಿತಿಳಿದಿಲ್ಲವೆ ? ೩೨. ಕೃಷ್ಣನು ಪರಮೇಶ್ವರನನ್ನು ಕುರಿತು ತಪಸ್ಸನ್ನು ಮಾಡಿ ಮತ್ತೆ ಮನ್ಮಥನನ್ನು ಪಡೆಯಲಿಲ್ಲವೆ ? ಸಾವಿರ ಕಮಲಗಳಿಂದ ಶಿವನ ಪಾದಗಳನ್ನು ಪೂಜಿಸುವಲ್ಲಿ ಒಂದು ಹೂ ಕಡಿಮೆಯಾಗಲು ತನ್ನ ಬಲಗಣ್ಣನ್ನೇ ತೆಗೆದು ಶಿವನ ಪಾದಗಳಿಗೆ ಅರ್ಪಿಸಲು ಶಿವನ ಒಲವಿನಿಂದ ಮತ್ತೆ ಚಕ್ರವನ್ನು ಪಡೆಯಲಿಲ್ಲವೆ ? ಮರುಳೆ, ಕೇಳು, ಆ ಕೃಷ್ಣನು ಕಾಲವಾಗಲು ಅವನ ಹದಿನಾರು ಸಾವಿರಮಂದಿ ಪತ್ನಿಯರನ್ನು, ಎಲ್ಲರೂ ನೋಡುತ್ತಿರಲು, ಹೊಲೆಬೇಡರು ಎಳೆದು ಕೊಂಡು ಹೋಗಲಿಲ್ಲವೆ ? ೩೩. ವಿಷ್ಣುವು ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನರೂಪುಗಳನ್ನು ಧರಿಸಿ ಅಹಂಕಾರ ತಾಳಲು ತಕ್ಷಣ ಈಶ್ವರನು ಅವನನ್ನು ಸಂಹಾರಮಾಡಿದನೆಂದು ಹೇಳಲು ನಿನಗೆ ನೋವಾಯಿತೆ ? ಸಾಮಾನ್ಯ ಬೇಡನೊಬ್ಬನು ಬಾಣ ಬಿಡಲು ನಿನ್ನ ಕೃಷ್ಣನು ಸಾಯಲಿಲ್ಲವೆ ? ಅನಂತರ ಆ ಹೆಣವನ್ನು ಸುಡಲು, ಆಗ ಅದು ಅರ್ಧ ಬೆಂದು ಕೈಕಾಲುಗಳು ಬಿದ್ದು ಮೊಂಡಾಗಲು ಅದನ್ನು ಜಗನ್ನಾಥ ಎಂದು ಪೂಜಿಸುವರು. ಇದು ಲೋಕಕ್ಕೆ ತಿಳಿದ ನಿದರ್ಶನವಾಗಿದೆಯಲ್ಲವೆ ? ೩೪.ಇನ್ನೂ ಕೇಳು, ಬುದ್ಧ-ಕಲ್ಕಿಯ ಅವತಾರಗಳಿಂದ ನಿನ್ನ ವಿಷ್ಣು ಹುಟ್ಟಿ ಕೆಲವು ದಿನದ ನಂತರ ಸಾಯುವನು, ಇದು ಸತ್ಯ, ಕೇಳು. ಈ ರೀತಿ ಸತ್ತು, ಹುಟ್ಟುತ್ತ ನಾನಾ ರೂಪು

CC-0. Jangamwadi Math Collection. Digitized by eGangotri

ಸನ್ನುತಮಹಾಮಹಿಮ ಪರಶಿವ ಪರಂಜ್ಯೋತಿ
ಯುನ್ನತ ಮಹಾದೇವ ಶಂಕರಂ ಶಶಿಧರಂ
ಪನ್ನಗಾಭರಣ ಪರಮೇಶೇಶನಭವಂಗೆ ಸರಿಯೆಂದು ನುಡಿಯಬಹುದೇ ೩೪

ಹರಿ ಹತ್ತು ಜನ್ಮದೊಳ್ ಬಂದಾ ಶರೀರದಿಂ
ದಿರದೆ ಲಿಂಗಂಗಳಂ ಭಜಿಸಿ ಪಾಪಂಗಳಂ
ಪರಿಪರಿಸಿಕೊಂಡನಿದಕಿಳೆಯೊಳಗೆ ರಾಮೇಶಲಿಂಗಂಗಳಿವೆಕೊ ಸಾಕ್ಷಿ
ಪರಮಕಾಶಿಯೊಳೆ ಹರಿಮುಖ್ಯದೇವಾಸುರರ್
ನಿರುತದಿಂ ತಂತಮ್ಮ ಪೆಸರಿಂದೆ ಪೂಜಿಸುವ
ವರಮಹಾಲಿಂಗಂಗಳಿವೆ ಲೋಕದೃಷ್ಟವೆಲೆ ವೈಷ್ಣವಂ ಕೇಳೆಂದನು ೩೫

ಹರಿಯಜೇಂದ್ರಾರ್ಕ ಶಶಿ ವಸು ದಿಶಾಧೀಶ ಕಿ
ನ್ನರ ಯಕ್ಷ ರಾಕ್ಷಸ ಪಿಶಾಚ ಗುಹ್ಯಕ ಸಿದ್ಧ
ಗರುಡ ಗಂಧರ್ವ ವಿದ್ಯಾಧರರ್ ಕಿಂಪುರುಷರುರಗ ಮನು ಮುನಿಮುಖ್ಯರು
ಪರಮಶಿವಲಿಂಗಂಗಳಂ ಧರಿಸಿ ತಂತಮ್ಮ
ಮರಣಂಗಳಂ ನೀಗಿಯಮರರೆಂದೆನಿಸಿದರ್
ಮರುಳೆ ನೀಂ ಕೇಳೆನಲ್ ನಸುನಗುತ್ತಾ ಕಪಟವೈಷ್ಣವನದಿಂತೆಂದನು ೩೬

ಹರನಲ್ಲದಿಲ್ಲೆಂದು ನುಡಿವುದಿದು ಸತ್ಯವೇ
ಹರಿಯಲ್ಲದಿಲ್ಲೆಂದು ಭಾಳದೊಳಗಕ್ಷಿಯನ
ದಿರದೆ ತೋರುವೆನೆನಲ್ ತೋರೆನಲ್ ಕಪಟವೈಷ್ಣವನಾಗ ತೋರೆ ಮುನಿಪ

ತಾಳಿದ ಆ ವಿಷ್ಣುವನ್ನು ಎಲ್ಲರ ಸ್ತುತಿಗೂ ಪಾತ್ರನಾದ ಮಹಿಮಾಶಾಲಿ, ಪರಶಿವ, ಪರಂಜ್ಯೋತಿ, ಉನ್ನತ ಮಹಾದೇವ, ಶಂಕರ, ಚಂದ್ರಶೇಖರ, ಸರ್ಪಭೂಷಣ, ಪರಮೇಶ, ಈಶ, ಅಭವನಿಗೆ ಸರಿಸಮನೆಂದು ಹೇಳಬಹುದೆ ? ೩೫. ವಿಷ್ಣು ಹತ್ತು ಜನ್ಮವೆತ್ತಿ ಬಂದು ಆ ಅವತಾರಗಳಲ್ಲೆಲ್ಲಾ ಶಿವಲಿಂಗಗಳನ್ನು ಪ್ರಾರ್ಥಿಸಿ ತನ್ನ ಪಾಪಗಳನ್ನು ಪರಿಹರಿಸಿಕೊಂಡನು. ಇದಕ್ಕೆ ಭೂಮಿಯಲ್ಲಿ ಇರುವ ರಾಮೇಶ್ವರ ಲಿಂಗಗಳೇ ಸಾಕ್ಷಿ. ಪುಣ್ಯಕ್ಷೇತ್ರವಾದ ಕಾಶಿಯಲ್ಲಿ ವಿಷ್ಣು ಮೊದಲಾದ ದೇವ-ದಾನವರು ನಿತ್ಯವೂ ತಮ್ಮ ತಮ್ಮ ಹೆಸರಿನಿಂದ ಪೂಜಿಸುವ ಪವಿತ್ರವಾದ ಮಹಾಲಿಂಗಗಳಿವೆ. ಇದು ಲೋಕಕ್ಕೆಲ್ಲ ತಿಳಿದ ವಿಷಯ, ಎಲೈ ವೈಷ್ಣವನೇ, ಕೇಳು ಎಂದನು. ೩೬. ವಿಷ್ಣು-ಬ್ರಹ್ಮ-ಇಂದ್ರ-ಸೂರ್ಯ-ಚಂದ್ರ-ವಸುಗಳು, ದಿಕ್ಪಾಲಕರು-ಕಿನ್ನರ-ಯಕ್ಷ-ರಾಕ್ಷಸ-ಪಿಶಾಚ-ಗುಹ್ಯಕ-ಸಿದ್ಧ-ಗರುಡ–ಗಂಧರ್ವ–ವಿದ್ಯಾಧರರು, ಕಿಂಪುರುಷ–ನಾಗ–ಮನುಮುನಿಮುಖ್ಯರು ಪರಮ ಶಿವಲಿಂಗಗಳನ್ನು ಧರಿಸಿ ತಮಗೆ ಸಾವಿಲ್ಲದಂತೆ ಮಾಡಿಕೊಂಡು ಅಮರರೆನಿಸಿದರು. ತಿಳಿಗೇಡಿಯೇ, ಕೇಳು ಎನ್ನಲು ನಸುನಗುತ್ತಾ ಕಪಟ ವೈಷ್ಣವನು ಹೀಗೆಂದನು. ೩೭. ಶಿವನಿಲ್ಲದೆ ಬೇರೆ ಇಲ್ಲ ಎಂದು ಹೇಳುವುದು ಸತ್ಯವಾದ ಮಾತೆ ? ವಿಷ್ಣುವನ್ನು ಬಿಟ್ಟು ಬೇರೆಯಿಲ್ಲವೆಂದು ಹಣೆಯಲ್ಲಿ ಕಣ್ಣನ್ನು ತಡೆಯದೆ ತೋರಿಸುತ್ತೇನೆನ್ನಲು ಮುನಿಯು ತೋರಿಸೆಂದನು. ಆಗ ಕಪಟ ವೈಷ್ಣವನು ಹಣೆಯಲ್ಲಿ ಕಣ್ಣನ್ನು ತೋರಿಸಿದನು, ಬೆಪ್ಪು ವೈಷ್ಣವ ನೋಡು ಶಿವ

CC-0. Jangamwadi Math Collection. Digitized by eGangotri

ಹರನಲ್ಲದಿಲ್ಲೆಂದು ಪಾದದೊಳಗಕ್ಷಿಯುಂ
ಮರುಳೆ ವೈಷ್ಣವ ನೋಡೆನುತ್ತೆ ತಾಂ ತೋರಲತಿ
ಕರುಣದಿಂ ಮುನಿವರನ ನಿಷ್ಠೆಯಂ ಹರಿಯಜಾದ್ಯರಿಗಭವ ತೋರಿಸಿದನು ೩೭

ಮೆಚ್ಚಿದಂ ಮುನಿವರನ ಶೈವಭಕ್ತಿಗೆ ಶಿವಂ
ಮುಚ್ಚಿದಂ ಕೃತಕವೇಷವನಾತನಿದಿರಿನೊಳ್
ಪೆಚ್ಚಿದಂ ನಿಜಚಿಹ್ನಮಂ ಹರಂ ರೋಮಾಂಚನದ ಸುಗ್ಗಿ ತಲೆದೋರಲು
ಪೆಚ್ಚಿದಂ ವಿಲಸಿತಾನಂದಾಶ್ರುವಾರಿಯುಂ
ಕಚ್ಚಿದಂ ಕಾಯಮಂ ಪಾರ್ವತಿಗೆ ದೇಹಮಂ
ಪಚ್ಚಿ ಕೊಟ್ಟಭವ ಸರ್ವಾಪರಾಧಂಗಳಂ ಕ್ಷಮಿಸೆಂದು ನುತಿಯಿಸಿದನು ೩೮

ಅಕಟ ನೀನೆಂದ ನುಡಿಯೆನಗೆ ಮಿಥ್ಯವೆ ಮಗನೆ
ಚಕಿತನಾಗದಿರು ನಿನ್ನಿಷ್ಟವೇನೆಂದು ಮ
ಸ್ತಕವನೆತ್ತಲ್ ಬಿತ್ತಿದಾ ಕ್ಷಣಂ ಸಕಲಧಾನ್ಯಂಗಳುಂ ಬೆಳೆವುದೆನಲು
ಆಕುಟಿಲಂಗಾ ವರವನಿತ್ತು ಮನ್ನಿಸಿ ತ್ರಿಯಂ
ಬಕನೈದಿದಂ ರಜತಗಿರಿಗೊಮ್ಮೆ ರೋಹಿಣೀ
ಶಕಟಮಂ ಶನಿ ಭೇದಿಸಲ್ಕಾಗ ಪನ್ನೆರಡು ವರುಷಂ ವರುಷಮುಡಗಿತು ೩೯

ಉದಯದೊಳ್ ನೋಡೆ ಮಂಜಿನ ಮಳೆ ಧರಿತ್ರಿಯುಂ
ಪುದಿದಿಹುದು ಮಧ್ಯಾಹ್ನದೊಳ್ ಘನಾಡಂಬರಂ
ಬೆದರಿಸುವುದಾಗಸಂ ರಾತ್ರಿಯೊಳ್ ನಿರ್ಮಲಿನಮಹುದಿಂತು ದಿನದಿನದೊಳು

ನಲ್ಲದೆ ಬೇರೆ ಇಲ್ಲ ಎಂದು ಋಷಿಯು ಪಾದದಲ್ಲಿ ಕಣ್ಣನ್ನು ತೋರಿಸಿದನು. ಅತಿಕರುಣೆಯಿಂದ ಶಿವನು ಮುನಿಶ್ರೇಷ್ಠನ ನಿಷ್ಠೆಯನ್ನು ವಿಷ್ಣು–ಬ್ರಹ್ಮರಿಗೆ ತೋರಿಸಿದನು. ೩೮. ಮುನಿಶ್ರೇಷ್ಠನ ಶೈವಭಕ್ತಿಗೆ ಶಿವನು ಮೆಚ್ಚಿದನು. ಕೃತಕವೇಷವನ್ನು ಮರೆಮಾಡಿದನು. ಅವನ ಎದುರಿನಲ್ಲಿ ತನ್ನ ನಿಜರೂಪವನ್ನು ಶಿವನು ಪ್ರಕಟಿಸಿದನು. ಮುನಿಗೆ ಮಹಾ ರೋಮಾಂಚನ ತಲೆದೋರಿತು, ಹೆಚ್ಚಿದ ಆನಂದಾಶ್ರು ಹರಿದು ಅವನ ದೇಹವನ್ನು ತೊಳೆಯಿತು. ಪಾರ್ವತಿಗೆ ಅರ್ಧ ದೇಹವನ್ನು ಹಂಚಿಕೊಟ್ಟ ಶಿವನೇ ನನ್ನ ಎಲ್ಲ ಅಪರಾಧಗಳನ್ನೂ ಕ್ಷಮಿಸು ಎಂದು ಪ್ರಾರ್ಥಿಸಿದನು. ೩೯. ಅಯ್ಯೋ ! ನನಗೆ ನೀನೆಂದ ಮಾತು ಸುಳ್ಳೆ ? ಮಗನೆ ಚಕಿತನಾಗಬೇಡ, ನಿನ್ನ ಇಷ್ಟವೇನು ಹೇಳು ಎಂದು ತಲೆಯನ್ನು ಹಿಡಿದು ಎತ್ತಲು, ಬಿತ್ತಿದ ಕ್ಷಣ ಧಾನ್ಯ ಬೆಳೆಯುವಂತೆ ಋಷಿ ವರವನ್ನು ಬೇಡಿದನು. ಕಪಟಿಯಲ್ಲದ ಋಷಿಗೆ ಆ ವರವನ್ನು ಕೊಟ್ಟು ಆಶೀರ್ವದಿಸಿ ಮುಕ್ಕಣ್ಣನು ಕೈಲಾಸಕ್ಕೆ ಹೋದನು. ಒಂದು ಬಾರಿ ಶನಿಯು ಐದು ನಕ್ಷತ್ರ (ರೋಹಿಣೀ ಶಕಟ) ಪುಂಜವನ್ನು ಭೇದಿಸಲು ಹನ್ನೆರಡು ವರ್ಷದವರೆಗೆ ಮಳೆಯಿಲ್ಲದಂತಾಯಿತು. ೪೦. ಸೂರ್ಯೋದಯದಲ್ಲಿ ನೋಡಿದರೆ ಮಂಜಿನ ಮಳೆ ಭೂಮಿಯನ್ನು ಆವರಿಸುವುದು, ಮಧ್ಯಾಹ್ನದಲ್ಲಿ ಗುಡುಗಿನ ಅರ್ಭಟ ಹೆದರಿಕೆಯನ್ನುಂಟುಮಾಡುವುದು, ರಾತ್ರಿ ಆಕಾಶ ನಿರ್ಮಲವಾಗಿರುವುದು. ಈ ರೀತಿ ದಿನ ದಿನಕ್ಕೆ ಉದುರುವ ಎಲೆಗಳ ಜೊತೆಯಲ್ಲಿ ನಾನಾ ಮರಗಳ

CC-0. Jangamwadi Math Collection. Digitized by eGangotri

ಉದಿರ್ವೆಲೆಗಳೊಡನೆ ನಾನಾ ವೃಕ್ಷರಾಜಿಯೊಣ
ಗಿದುವು ಕೆರೆ ತೊರೆ ಪಳ್ಳ ಕೊಳ್ಳ ಬಾವಿ ಬೆ
ಟ್ಟದ ಪೊನಲ್ಗಳ್ ನದಿ ನದಾಳಿ ಜಲರಾಶಿಗಳ್ ಪುಡಿವಟ್ಟುವೇವೇಳ್ವೆನು ೪೦

ಇಂತು ಬರನೆಲ್ಲೆಡೆಯೊಳುಂ ಪುದಿಯೆ ಕಂಡು ವಿ
ಭ್ರಾಂತರೆಂಬತ್ತೆಂಟುಸಾವಿರ ಮುನೀಶ್ವರರ್
ಕಂತುಹರನಿಂ ಗೌತಮಂ ಪಡೆದ ವರವರಿದು ದಾರುವನದಿಂ ತಳರ್ದು
ತಾಂ ತಡೆಯದೀತನಾಶ್ರಮಕೆ ಬರೆ ಕಂಡು ಮುನಿ
ಸಂತಸದೊಳನ್ನಪಾನಂಗಳಿಂ ಸತ್ಕರಿಸೆ
ತಂತಮ್ಮ ದೇಶಂ ಸುಭಿಕ್ಷಮಾದುವು ಪೋಪೆವೇಳೆಂದು ಯೋಚಿಸಿದರು ೪೧

ಕೇಳಿದಂ ಶಾಂಡಿಲ್ಯನವರ ನುಡಿಯಂ ಮುನಿಗೆ
ಪೇಳದೇಂ ಪೋಪುದುಚಿತವೆಯನ್ನದಾನದಿಂ
ಮೇಲಾದ ದಾನಮುಂಟೇ ಬರದೊಳೆಮ್ಮನೆಲ್ಲರನು ರಕ್ಷಿಸಿದನಿನ್ನು
ಪೇಳಿದಪೆನನ್ನದಾನದ ಕಥೆಯ ಗುಣನಿಧಿನೃ
ಪಾಲನೆಂಬಂ ಬೇಂಟೆಯಂ ಪೋಗಿ ಸಕಲ ಮೃಗ
ಜಾಲಮಂ ಕೊಲಿಸುತಿರೆ ಪೊದರಿಂದವೊಂದು ಸಿಂಹಂ ಪಾಯ್ದುದವನ ಮುಂದೆ ೪೨

ಬೆನ್ನಟ್ಟಿದಂ ಪರಿಯನತಿಜವದ ವಾರುವನ
ಬೆನ್ನೊಳಿರ್ದವನಿಪಂ ಸಿಂಹಮಂ ಪೊಯ್ವೆನೆಂ
ಬನ್ನಮದು ಪೂರ್ವಶಾಪದೆ ಮಾಯವಾಗಲರಸಂ ವಾಜಿಯಿಂದಿಳಿಯಲು

ಸಮೂಹ ಒಣಗಿದುವು. ಕೆರೆ, ತೊರೆ, ಹಳ್ಳ–ಕೊಳ್ಳ, ಬಾವಿ, ಬೆಟ್ಟದ ಝರಿಗಳು, ನದಿ–ನದಾಳಿ ಮೊದಲಾದ ನೀರ್ದಾಣಗಳು ಒಣಗಿ ಧೂಳಿನಿಂದ ತುಂಬಿತು. ಏನೆಂದು ಹೇಳಲಿ ? ೪೧. ಈ ರೀತಿ ಕ್ಷಾಮ ಎಲ್ಲ ಕಡೆಯಲ್ಲಿಯೂ ಹರಡಲು ಇದನ್ನು ನೋಡಿ ವಿಭ್ರಾಂತರಾದ ಎಂಬತ್ತೆಂಟು ಸಾವಿರ ಮಹಾಋಷಿಗಳು ಶಿವನಿಂದ ಗೌತಮನು ಪಡೆದ ವರವನ್ನು ತಿಳಿದು ದಾರುವನದಿಂದ ಹೊರಟು ಎಲ್ಲಿಯೂ ನಿಲ್ಲದೆ ಆಶ್ರಮಕ್ಕೆ ಬಂದರು. ಅವರನ್ನು ನೋಡಿ ಗೌತಮನು ಸಂತೋಷದಿಂದ ಅನ್ನ–ಪಾನಾದಿಗಳನ್ನು ಕೊಟ್ಟು ಸತ್ಕರಿಸಿದನು. ತಮ್ಮ ತಮ್ಮ ದೇಶಗಳು ಸುಭಿಕ್ಷವಾದುವು, ಇನ್ನು ಹೋಗೋಣವೆಂದು ಅವರೆಲ್ಲ ಯೋಚಿಸಿದರು. ೪೨. ಅವರ ಮಾತನ್ನು ಶಾಂಡಿಲ್ಯನು ಕೇಳಿದನು. ಋಷಿಗೆ ಹೇಳದೇ ಹೋಗುವುದು ಉಚಿತವಲ್ಲ, ಅನ್ನದಾನಕ್ಕಿಂತ ಮಿಗಿಲಾದ ದಾನ ಬೇರೆ ಇದೆಯೆ ? ಕ್ಷಾಮದಲ್ಲಿ ನಮ್ಮನೆಲ್ಲರನ್ನೂ ಕಾಪಾಡಿದನು. ಇನ್ನು ಅನ್ನದಾನದ ಕಥೆಯನ್ನು ಹೇಳುತ್ತೇನೆ, ಕೇಳಿ. ಗುಣನಿಧಿಯೆಂಬ ರಾಜನು ಬೇಟೆಗೆ ಹೋಗಿ ಎಲ್ಲ ಮೃಗಗಳ ಸಮೂಹವನ್ನೂ ಕೊಲ್ಲಿಸುತ್ತಿದ್ದನು. ಆಗ ಒಂದು ಪೊದರಿಂದ ಸಿಂಹವೊಂದು ಹೊರಟು ಅವನ ಮುಂದೆಯೇ ಹೋಯಿತು. ೪೩. ವೇಗವಾದ ಕುದುರೆಯ ಮೇಲಿದ್ದ ರಾಜನು ಸಿಂಹವನ್ನು ಬೆಂಬತ್ತಿ ಹೋದನು. ಸಿಂಹವನ್ನು ಹೊಡೆಯುತ್ತೇನೆ ಎನ್ನುವಷ್ಟರಲ್ಲಿ ಅದು

CC-0. Jangamwadi Math Collection. Digitized by eGangotri

ತನ್ನವ್ಯವಾಜಿಯುಂ ಬಯಲಾಗಿ ಪೋಗಲರ
ಸನ್ನೋಡಿ ನೋಡಿ ವಿಸ್ಮಿತನಾಗಿ ಬಳಿಕ ತನ
ಗನ್ನವಿಲ್ಲದೆ ಬಳಲಿ ಕಣ್ಗೆಡುವ ನೃಪತಿಯುಂ ಶಬರನೊರ್ವಂ ಕಂಡನು ೪೩

ಬಳಲಿದೈ ಭೂಪ ನಡೆ ನಿನಗೆ ನಾಂ ಭುಕ್ತಿಯುಂ
ಸಲಿಸುವೆನೆನುತ್ತೆ ಗುಡಿಲಿಂಗೆ ಕರೆತಂದು ಬಾ
ರೆಲಗೆ ಮುನ್ನಾಂ ತಂದ ಬಿದರಕ್ಕಿ ಜೇನುಮಂ ಭೂಪಂಗೆ ನೀಡೆನಲ್ಕೆ
ಬಳಿಕಲಾ ಶಬರಿಯಡಿಗೆಯ ಮಾಡಿ ನೀಡಿ ಮನ
ಮೊಲಿದು ಮಂಚಿಗೆಗೆ ಮಲಗಲ್ಕೆ ಭೂಪಾಲನಂ
ಕಳುಪಿ ಕೆಳಗಿರ್ವರುಮುಪಾಸವೊರಗಿರಲೊಂದು ಪುಲಿ ಕೊಂದು ತಿಂದುದವರ ೪೪

ಬೆಳಗಾದುದನಿತರೊಳಗವನಿಪಂ ಮಂಚಿಗೆಯ
ನಿಳಿದು ಮಡಿದಿಹ ವಧೂವರರನೀಕ್ಷಿಸಿ ಮನದೊ
ಳಳಲಿ ಶೇಷಾಂಗಮಂ ಸಂಸ್ಕರಿಸಿ ಮರಳಿ ನೆರೆದುದು ಸೇನೆ ನೃಪನ ಕೂಡೆ
ಪೊಳಲಿಗೈತಂದು ಮಜ್ಜನಭೋಜನಂಗಳಿಂ
ಬಳಲಿಕೆಯನಾರಿಸಿ ನೃಪಂ ಕೆಲವುಕಾಲಮುಂ
ಕಳಿವುತೊಂದಿವಸವೋಲಗದೊಳ್ ಪುರೋಹಿತಂಗವನೀಶನಿಂತೆಂದನು ೪೫

ಹಿಂದಿನ ಶಾಪದಿಂದ ಮಾಯವಾಯಿತು. ಆಗ ರಾಜನು ಕುದುರೆಯಿಂದ ಇಳಿಯಲು ಅದೂ ಮಾಯವಾಯಿತು, ಅದನ್ನು ನೋಡಿ ರಾಜನು ವಿಸ್ಮಯ ಹೊಂದಿ ಬಳಿಕ ಅನ್ನವಿಲ್ಲದೆ ಬಳಲಿ ಕಂಗೆಡುತ್ತಿದ್ದುದನ್ನು ಬೇಡನೊಬ್ಬನು ನೋಡಿದನು. ೪೪. ರಾಜನೆ ಆಯಾಸ ಗೊಂಡಿರುವೆ, ನಡೆ ನಾನು ನಿನಗೆ ಊಟವನ್ನು ಹಾಕುತ್ತೇನೆ ಎನ್ನುತ್ತ ಅವನನ್ನು ಗುಡಿಸಿಲಿಗೆ ಕರೆತಂದನು. ಎಲೈ, ನಾನು ಈ ಮೊದಲು ತಂದಿರುವ ಬಿದಿರಕ್ಕಿಯನ್ನೂ-ಜೇನನ್ನೂ ರಾಜನಿಗೆ ಕೊಡು ಎಂದು ತನ್ನ ಪತ್ನಿಗೆ ಹೇಳಿದನು. ಆಗ ಬೇಡತಿಯು ಅಡಿಗೆಯನ್ನು ಮಾಡಿ ರಾಜನಿಗೆ ಬಡಿಸಿದಳು. ಮಲಗುವುದಕ್ಕೆ ಪ್ರೀತಿಯಿಂದ ರಾಜನನ್ನು ಮಂಚಕ್ಕೆ ಕಳಿಸಿ ಅವರಿಬ್ಬರೂ ಉಪವಾಸದಿಂದ ಕೆಳಗಡೆ ಮಲಗಿರಲು ಹುಲಿಯೊಂದು ಅವರನ್ನು ಕೊಂದು ತಿಂದಿತು. ೪೫. ಅಷ್ಟರಲ್ಲಿ ಬೆಳಗಾಯಿತು. ರಾಜನು ಮಂಚದಿಂದ ಇಳಿದು ಸತ್ತಿದ್ದ ಪತಿ-ಪತ್ನಿಯರನ್ನು ನೋಡಿ ಮನಸ್ಸಿನಲ್ಲಿ ವ್ಯಥೆಪಟ್ಟು ಹುಲಿ ತಿಂದು ಉಳಿದಿದ್ದ ಅವರ ದೇಹಕ್ಕೆ ಸಂಸ್ಕಾರ ಮಾಡಿದನು. ಅಲ್ಲಿಂದ ಹಿಂದಿರುಗಿ ತನ್ನ ಸೈನ್ಯದೊಡನೆ ಸೇರಿಕೊಂಡು ಪಟ್ಟಣಕ್ಕೆ ಬಂದು ಸ್ನಾನ-ಭೋಜನಗಳಿಂದ ಆಯಾಸ ಪರಿಹಾರ ಮಾಡಿಕೊಂಡು ರಾಜನು ಕೆಲವು ಕಾಲವನ್ನು ಕಳೆದು ಒಂದು ದಿವಸ ರಾಜ ಸಭೆಯಲ್ಲಿರುತ್ತ ಪುರೋಹಿತನನ್ನು ಕುರಿತು

CC-0. Jangamwadi Math Collection. Digitized by eGangotri

ಧರೆಯೊಳ್ ಪ್ರಸಿದ್ಧವಿಾರೆಂಟು ದಾನಂಗಳಿಂ
ದಿರದವರೊಳತಿಮುಖ್ಯದಾನಮಾವುದು ತನ್ನೊ
ಳೊರೆಯೆನಲ್ಕನ್ನದಾನವೆ ಮುಖ್ಯಮದಕೊಂದು ಕಥೆಯುಂಟದಂ ಪೇಳ್ವೆನು
ಪುರಮುಂಟು ಗಂಗಾವತೀನಾಮವೊಂದದರೊ
ಳಿರುತಿರ್ಪನೊರ್ವ ಪಾರ್ವಂ ಪ್ರತಿದಿನಂ ಬಿಡದೆ
ಕರೆಮುಣ್ಬ ವೇಳೆಯೊಳಗನ್ನಪಾನಂಗಳಿಂ ವಿಪ್ರರಂ ಪೋಷಿಸುವನು ೪೬

ಒಂದಿನಂ ವೃದ್ಧಚಂಡಾಲನಾ ಪಟ್ಟಣಕೆ
ತಂದು ಕಟ್ಟಿಗೆಯ ಪೊರೆಯಂ ಮಾರುತಿರೆ ಮಳೆಯೊ
ಳಂದು ತೊಪ್ಪನೆ ತೊಯ್ದನಂತಭಟ್ಟನ ಗೃಹಬಹಿರ್ದ್ವಾರವೇದಿಕೆಯೊಳು
ಇಂಧನದ ಪೊರೆಯನೊರಗಿಸಿ ಮಹಾಶೀತಭಯ
ದಿಂದೆ ಪಲ್ಗಿಟಿಕಿರಿದು ನರಗಳೆಲ್ಲಂ ಸೇದಿ
ನೊಂದು ಕಡುಪಸಿವಿನಿಂ ಪಾಡಳಿದು ತದ್ವೇದಿಕಾಗ್ರದೊಳಗಿರುತಿರ್ದನು ೪೭

ಆ ಸಮಯದೊಳಗೀಯನಂತಭಟ್ಟಂ ನಿಜನಿ
ವಾಸದೊಳ್ ಭುಂಜಿಸುವುದಕ್ಕೆಂದಿನಂತೆ ಪರ
ದೇಸಿಗಳ್ ಪಸಿದವರ್ಗಳಿರ್ದಪರೊ ನೋಡಬೇಕೆಂದು ಬಾಗಿಲ್ಗೆ ಬಂದು
ಘಾಸಿಯಾದಂಗಸಂಕೋಚನದ ಪೊಲೆಯನಂ
ಲೇಸಾಗಿ ನೋಡಿ ನೀನಾರೆಂದು ಬೆಸಗೊಂಡು
ಭೂಸುರೋತ್ತಮನವನೊಳುತ್ತರಂ ಬಾರದಿರೆ ಮಗುಳೆ ನೀನಾರೆಂದನು ೪೮

ಹೇಳಿದನು. ೪೬. ಭೂಮಿಯಲ್ಲಿ ಹದಿನಾರು ದಾನಗಳು ಪ್ರಸಿದ್ಧಿ ಪಡೆದಿವೆ. ಅವುಗಳಲ್ಲಿ ಅತಿಮುಖ್ಯವಾದ ದಾನ ಯಾವುದು ? ನನಗೆ ತಿಳಿಸು ಎಂದನು. ಅನ್ನದಾನವೇ ಮುಖ್ಯವಾದುದು, ಅದಕ್ಕೆ ಒಂದು ಕಥೆಯಿದೆ, ಅದನ್ನು ಹೇಳುತ್ತೇನೆ ಎಂದು ಪುರೋಹಿತನು ಗಂಗಾವತಿ ಎಂಬ ಒಂದು ಪಟ್ಟಣವಿದೆ. ಅದರಲ್ಲಿ ಒಬ್ಬ ಬ್ರಾಹ್ಮಣನು ಇದ್ದಾನೆ. ಪ್ರತಿದಿನವೂ ತಪ್ಪದೆ ಊಟದ ಸಮಯದಲ್ಲಿ ಬ್ರಾಹ್ಮಣರನ್ನು ಕರೆದು ಅನ್ನ-ಪಾನಗಳಿಂದ ಪೋಷಿಸುತ್ತಿದ್ದಾನೆ. ೪೭. ಒಂದು ದಿನ ಮುದಿ ಚಂಡಾಲನೊಬ್ಬನು ಕಟ್ಟಿಗೆಯ ಹೊರೆಯನ್ನು ಪಟ್ಟಣಕ್ಕೆ ತಂದು ಮಾರುತ್ತಿರಲು ಆ ದಿನ ಮಳೆಯಲ್ಲಿ ತೊಪ್ಪನೆ ತೊಯ್ದು, ಅನಂತಭಟ್ಟನ ಮನೆಯ ಹೊರಗಿನ ಜಗುಲಿಯಲ್ಲಿ ಕಟ್ಟಿಗೆಯ ಹೊರೆಯನ್ನು ಒರಗಿಸಿ ಅತಿಯಾದ ಚಳಿಯಿಂದ ಹಲ್ಲು ಕಡಿಯುತ್ತ, ನರಗಳೆಲ್ಲ ಸೇದಿ ವ್ಯಥೆಪಟ್ಟು ಬಹಳ ಹಸಿವಿನಿಂದ ಗತಿಗೆಟ್ಟು ಆ ವೇದಿಕೆಯ ಮೇಲೆ ಒರಗಿದ್ದನು. ೪೮. ಆ ಸಮಯದಲ್ಲಿ ಈ ಅನಂತಭಟ್ಟನು ತನ್ನ ಮನೆಯಲ್ಲಿ ಊಟ ಮಾಡುವುದಕ್ಕೆಂದು ಎಂದಿನಂತೆ ಪರದೇಸಿಗಳು, ಹಸಿದಿರುವವರು ಇದ್ದಾರೆಯೋ ನೋಡಬೇಕೆಂದು ಬಾಗಿಲಿಗೆ ಬಂದು ಘಾಸಿಗೊಂಡು,ಮೈಮುದುರಿ ಕುಳಿತಿದ್ದ ಹೊಲೆಯನನ್ನು ಚೆನ್ನಾಗಿ ನೋಡಿ ನೀನ್ಯಾರೆಂದು ಕೇಳಿದನು. ಅವನಿಂದ ಉತ್ತರ ಬರದಿರಲು ಬ್ರಾಹ್ಮಣನು ಮತ್ತೆ ನೀನು ಯಾರೆಂದು

CC-0. Jangamwadi Math Collection. Digitized by eGangotri

ಅವಧರಿಸು ಜೀಯ ಚಂಡಾಲಿ ತಾನೀಪುರಕೆ
ತವೆ ತಂದೆನಿಂಧನದ ಪೊರೆಯನದು ಮಾರಿದಿ
ಲ್ಲವಿರಳಮಹಾವೃಷ್ಟಿಯಿಂ ನನೆದು ಸೇಡುಗೊಂಡೆಂ ನಡೆದುಪೋಗಲಾರೆ
ತವೆ ಗೃಹದ್ವಾರಕತಿದೂರದೊಳಗಿರ್ಪೆ ನಾ
ನವಗಡಿಸಬೇಡೆನ್ನಸೆಂದು ದೈನ್ಯಂಗೆಯ್ಯೆ
ಲವನೀಸುರೋತ್ತಮಂ ಕಾರುಣ್ಯದೃಷ್ಟಿಯಿಂ ನೋಡಿ ಮಗುಳಿಂತೆಂದನು ೪೯

ಚಂಡಾಲನಾದೊಡೇನಾಯ್ತಂಜದಿರ್ ನಿನ್ನ
ದಂಡಿಸುವರಲ್ಲ ನಿನ್ನಯ ಕಾಷ್ಠಭಾರಮಂ
ಕೊಂಡಪೆವದಕ್ಕೆ ಕ್ರಯವೇನೆನಲ್ ಪಣಚತುರ್ಥಾಂಶಮೆನೆ ಕೊಟ್ಟು ಬಳಿಕ
ಕೆಂಡಮಂ ತರಿಸಿಕೊಟ್ಟೀ ಕಾಷ್ಠದಿಂ ಕಾಸಿ
ಕೊಂಡು ಶೀತಮನಡಂಗಿಸಿಕೊಳ್ಳೆನಲ್ಕವಂ
ಕಂಡೆನಚ್ಚರಿಯನೀತನೊಳೆನುತೆ ಸರ್ವಾಂಗಮಂ ಕಾಸಿದಂ ಶಿಖಿಯೊಳು ೫೦

ತನುವನಾವರಿಸಿದ ಮಹಾಶೀತಮಡಗಲ್ಕೆ
ಘನಮಾದುದೀತಂಗೆ ಪಸಿವಿರದನಂತಭ
ಟ್ಟನನಯ್ಯ ಪಸಿದು ಕಣ್ಗೆಟ್ಟೆನೆನೆ ಕರುಣದಿಂ ಕೂಗಬೇಡೆಂದು ನಿಲಿಸಿ
ಮನೆಗೆ ಬಂದೊಂದು ಪೊಸಬಗರಿಗೆಯೊಳನ್ನಮಂ
ವಿನುತಸೂಪಾದಿಶಾಖಿಂಗಳಂ ಘೃತಮನು
ಪ್ಪಿನಕಾಯ್ಗಳಂ ಬೇರೆ ಬೇರಿರಿಸಿ ತಂದದಂ ಪೊಲೆಯಂಗೆ ನೀಡಿಸಿದನು ೫೧

ಕೇಳಿದನು. ೪೯. ಒಡೆಯನೆ ಕೇಳು, ನಾನೊಬ್ಬ ಚಂಡಾಲ. ಈ ಪಟ್ಟಣಕ್ಕೆ ಕಟ್ಟಿಗೆಯ ಹೊರೆಯನ್ನು ತಂದೆ. ಅದನ್ನು ಮಾರಿಲ್ಲ. ಅತಿಯಾದ ಮಳೆಯಿಂದ ನೆನೆದು ಸೆಟೆದಿದ್ದೇನೆ. ನಡೆದುಹೊಗಲಾರೆ. ತಮ್ಮ ಮನೆಯ ಬಾಗಿಲಿಗೆ ಬಹಳ ದೂರದಲ್ಲಿ ಇದ್ದೇನೆ. ತೊಂದರೆಪಡಿಸಬೇಡಿ ಎಂದು ದೈನ್ಯದಿಂದ ಬೇಡಿದನು. ಆಗ ಬ್ರಾಹ್ಮಣನು ಅವನನ್ನು ಕರುಣಾದೃಷ್ಟಿಯಿಂದ ನೋಡಿ ಮತ್ತೆ ಹೀಗೆಂದನು. ೫೦. ಚಂಡಾಲನಾದರೆ ಏನಾಯಿತು ? ಹೆದರಬೇಡ. ನಾವು ನಿನ್ನನ್ನು ದಂಡಿಸುವವರಲ್ಲ. ನಿನ್ನ ಸೌದೆ ಹೊರೆಯನ್ನು ಕೊಂಡುಕೊಳ್ಳುತ್ತೇವೆ. ಅದರ ಕ್ರಯವೇನು ಎಂದು ವಿಚಾರಿಸಿ ಒಂದು ನಾಣ್ಯದ ಕಾಲು ಭಾಗವೆಂದೆನ್ನಲು ಅದನ್ನು ಕೊಟ್ಟು, ಅನಂತರ ಕೆಂಡವನ್ನು ತರಿಸಿಕೊಟ್ಟು ಈ ಸೌದೆಯಿಂದ ಕಾಯಿಸಿಕೊಂಡು ಚಳಿಯನ್ನು ನಿವಾರಿಸಿಕೊ ಎನ್ನಲು ಆ ಚಂಡಾಲನು ಈತನಲ್ಲಿ ಆಶ್ಚರ್ಯವನ್ನು ಕಂಡೆ ಎನ್ನುತ್ತ ಬೆಂಕಿಯಲ್ಲಿ ತನ್ನ ಶರೀರವನ್ನೆಲ್ಲ ಕಾಯಿಸಿಕೊಂಡನು. ೫೧. ಶರೀರವನ್ನು ಮುತ್ತಿದ್ದ ಚಳಿ ಅಡಗಲು ಅವನಿಗೆ ವಿಪರೀತ ಹಸಿವಾಯಿತು. ಅದನ್ನು ತಡೆಯಲಾಗದೆ ಅನಂತಭಟ್ಟನನ್ನು ಕುರಿತು 'ಅಯ್ಯಾ ಹಸಿವಿನಿಂದ ಕಂಗೆಟ್ಟೆ' ನೆನ್ನಲು ಅವನು ಕರುಣೆಯಿಂದ, ಕೂಗಿಕೊಳ್ಳಬೇಡ ಎಂದು ತಡೆದು ಮನೆಗೆ ಬಂದು ಒಂದು ಹೊಸದಾದ ಅಗಲವಾದ ಬಾಯಿನ ಪಾತ್ರೆಯಲ್ಲಿ (ಬೋಗುಣಿಯಲ್ಲಿ) ಅನ್ನ ಸಾರು ಮೊದಲಾದ ತರಕಾರಿಗಳನ್ನು ತುಪ್ಪವನ್ನು, ಉಪ್ಪಿನಕಾಯಿ ಮೊದಲಾದುವನ್ನು

CC-0. Jangamwadi Math Collection. Digitized by eGangotri

ಉಂಡು ದಣಿದಿಂಧನಕ್ರಿಯುವನುಳಿದನ್ನವುಂ
ಪೆಂಡತಿಗೆ ತಂದಿತ್ತು ಪೊಲೆಯನೀ ವಿಪ್ರನಂ
ಕೊಂಡಾಡುತಿರಲತ್ತಲಿತ್ತ ಗಂಗಾವತಿಗೆ ಯೋಜನಾಂತರದೆಡೆಯೊಳು
ಮಂಡಲೇಶ್ವರ ಕೇಳ್ ಜಯಂತಿಪುರವುಂಟಲ್ಲಿ
ಚಂಡತರಬ್ರಹ್ಮರಾಕ್ಷಸನೊಂದು ಬಂದು ಮೆ
ಯ್ಯುಂಡಿಹುದು ತತ್ಪುರದ ಸರ್ವಜ್ಞನೆಂಬ ವಿಪ್ರಾತ್ಮಜನನನುದಿನದೊಳು ೫೨

ಆವಾವ ಮಂತ್ರತಂತ್ರಂಗಳಿಂ ಪೋಗದಿ
ರ್ಪೀ ವರ್ತಮಾನವನನಂತಭಟ್ಟಂ ಕೇಳ್ದು
ನಾವಾತನಂ ನೋಡಬೇಕೆಂದು ಸರ್ವಜ್ಞನಾಲಯಂಬೊಕ್ಕು ಬರಲು
ಆ ವಿಪ್ರಸುತನ ಮೇಲಿಹ ಭೂತಮತುಳಸ
ದ್ಭಾವದಿಂ ಕೈಮುಗಿಯೆ ಕೇಳಿದಂ ಮುನ್ನ ನೀ
ನಾವನೈಯೆನಗೆ ಕೈಮುಗಿದ ಹದನೇನೆನಲ್ಕಾ ಭೂತವಿಂತೆಂದುದು ೫೩

ಆದೊಡಾಲಿಸು ಪೂರ್ವಭವದೊಳಾವಿರ್ವರೊಡ
ನೋದಿದೆವು ವಿದ್ಯೆಯುಂ ತನಗಿಂದಮೆನಗಧಿಕ
ಮಾದುದೀತಂ ತಾಳದೆನ್ನ ಮಂಡೆಯ ಮೇಲೆ ಕಲ್ಲನುರೆ ಹಾಯ್ಕಿ ಕೊಂದಂ
ಈ ದುರಾತ್ಮನನೀಗ ಕೊಲ್ವೆನಾನೆಂದು ನೀ
ನಾದರದೆ ಪೊಲೆಯಗಿತ್ತನ್ನದಾನವನೀಯೆ
ಪೋದಪೆಂ ತಾನೆನಲ್ ಕೇಳ್ದು ಕೌತುಕದೆ ಸರ್ವಜ್ಞನಂದಿಂತೆಂದನು ೫೪

ಬೇರೆ ಬೇರೆಯಾಗಿ ಇರಿಸಿ ತಂದು ಅದನ್ನು ಹೊಲೆಯನಿಗೆ ಕೊಡಿಸಿದನು. ೫೨. ಊಟ ಮಾಡಿ ದಣಿದು ಸೌದೆಯನ್ನು ಮಾರಿದ ದುಡ್ಡನ್ನೂ, ಉಳಿದಿದ್ದ ಅನ್ನವನ್ನೂ ಹೆಂಡತಿಗೆ ತಂದುಕೊಟ್ಟು ಹೊಲೆಯನು ಈ ಕಡೆ ಬ್ರಾಹ್ಮಣನನ್ನು ಕೊಂಡಾಡುತ್ತಿದ್ದನು. ರಾಜನೇ ಕೇಳು, ಅತ್ತ ಗಂಗಾವತಿಗೆ ಯೋಜನ ದೂರದಲ್ಲಿ ಜಯಂತಿಪುರವಿದೆ. ಅಲ್ಲಿ ಭೀಕರ ವಾದ ಬ್ರಹ್ಮರಾಕ್ಷಸವೊಂದು ಬಂದು ಆ ಪಟ್ಟಣದ ಸರ್ವಜ್ಞನೆಂಬ ಬ್ರಾಹ್ಮಣನ ಮಗ ನನ್ನು ಪ್ರತಿದಿನವೂ ಹಿಡಿದುಕೊಳ್ಳುತ್ತಿದೆ. ೫೩. ಯಾವ ಯಾವ ಮಂತ್ರ–ತಂತ್ರ ಗಳಿಂದಲೂ ಆ ಬ್ರಹ್ಮರಾಕ್ಷಸವು ಹೋಗದಿರುವ ವಿಷಯವನ್ನು ಅನಂತಭಟ್ಟನು ಕೇಳಿ ನಾವು ಆತನನ್ನು ನೋಡಬೇಕೆಂದು ಸರ್ವಜ್ಞನ ಮನೆಗೆ ಬರಲು ಆ ಬ್ರಾಹ್ಮಣನ ಮಗನ ಮೈಮೇಲಿದ್ದ ಭೂತವು ಅತಿ ಒಳ್ಳೆಯ ಭಾವನೆಯಿಂದ ಕೈ ಮುಗಿಯಿತು. ನೀನು ಯಾರು ಎಂಬುದನ್ನು ಮೊದಲು ಹೇಳು. ನನಗೆ ಕೈ ಮುಗಿದ ಕಾರಣವೇನು ? ಎಂದು ಕೇಳಲು ಆ ಭೂತ ಹೀಗೆಂದಿತು. ೫೪. ಹಾಗಾದರೆ ಕೇಳು. ಹಿಂದಿನ ಜನ್ಮದಲ್ಲಿ ನಾವಿಬ್ಬರೂ ಒಟ್ಟಿಗೆ ಓದಿದೆವು. ವಿದ್ಯೆಯಲ್ಲಿ ತನಗಿಂತ ನಾನು ಮೀರಿಸಲು ಈತನು ಅದನ್ನು ಸಹಿಸದೆ ನನ್ನ ತಲೆಯ ಮೇಲೆ ಕಲ್ಲನ್ನು ಹಾಕಿ ಕೊಂದನು. ಈ ದುರಾತ್ಮನನ್ನು ಈಗ ನಾನು ಕೊಲ್ಲುತ್ತೇನೆ ಎಂದು ಹೇಳಿ, ನೀನು ಆದರದಿಂದ ಹೊಲೆಯನಿಗೆ ಕೊಟ್ಟ ಅನ್ನದಾನವನ್ನು ಕೊಡುವುದಾದರೆ ನಾನು ಹೋಗುತ್ತೇನೆ ಎನ್ನಲು ಅದನ್ನು ಕೇಳಿ ವಿಸ್ಮಯದಿಂದ

CC-0. Jangamwadi Math Collection. Digitized by eGangotri

ಪಿಂತೊರ್ವ ಪೊಲೆಯಂಗೆ ನೀಡಿದನ್ನದ ಮಹಿಮೆ
ಯಿಂತಾದುದೆಮ್ಮ ಬ್ರಾಹ್ಮಣಕುಟುಂಬವನೋವ
ಲೆಂತಹುದೊ ನಿನಗೆ ಸದ್ಧರ್ಮವೆಲೆ ಭೂಸುರೋತ್ತಮ ಪಾಲಿಸೈ ನಮ್ಮನು
ಇಂತೆಂದು ಸರ್ವಜ್ಞನೆಂಬ ವಿಪ್ರಂ ತನ್ನ
ಕಾಂತೆವೆರಸಿಯೆ ಅನಂತನ ಪದಕೆ ನಮಿಸಲ್ಕೆ
ಸಂತೈಸಿ ಪೊಲೆಯಗಿತ್ತನ್ನದಾನವನುದಕದಿಂದೆ ಧಾರೆಯನೆರೆದನು ೫೫

ಪಿಂಗಿತು ಪಿಶಾಚತ್ವಮಾತಂಗೆ ನೆರೆದ ದೇ
ವಾಂಗನೆಯರೋಳಿಯಿಂ ಮಣಿಮಯವರೂಥದೊಳ್
ಪೊಂಗುತಾತಂ ಪೋದನಾ ವಿಪ್ರನಂದನಂ ಜೀವಿಸಿದನೀತನಿಂದೆ
ತುಂಗವಿಕ್ರಮ ಪೇಳಲೇನನ್ನದಾನದು
ತ್ತುಂಗತೆಯನಿಂತೆನಲ್ ಭೂವರಂ ಕನಲಿ ದೃ
ಷ್ಟಂಗಳಂ ತೋರ್ ಬರಿದೆ ಗಳಹಬೇಡೆಂದೆನಲ್ ಭೂಮಿಸುರನಿಂತೆಂದನು ೫೬

ನಾಳೆ ನಿನಗೀ ದೃಷ್ಟಮಂ ಸರ್ವಥಾ ತಂದು
ಪೇಳದಿರೆನಾನೆನಲ್ ಪೋಗೆನಲ್ ಬಂದು ತ
ನ್ನಾಲಯದೊಳತುಳ ಚಿಂತಾಭಾರದಿಂ ಮಲಗೆ ಸ್ವಪ್ನದೊಳಗೀಶನೈದಿ
ಪೇಳಿದಂ ನಿಮ್ಮ ರಾಯಂಗೆಂಟು ದಿನಕೊರ್ವ
ಬಾಲನುದಿಸುವನಾತನುಸಿರುವನೆನಲ್ಕುದಯ
ಕಾಲದೊಳಗರಮನೆಗೆ ಬಂದು ಭೂಪಾಲನೊಡನೀ ವಿಪ್ರನಿಂತೆಂದನು ೫೭

ಸರ್ವಜ್ಞನು ಹೀಗೆಂದನು. ೫೫. ಹಿಂದೊಬ್ಬ ಹೊಲೆಯನಿಗೆ ಕೊಟ್ಟ ಅನ್ನದ ಮಹಿಮೆಯೇ ಇಷ್ಟಾದರೆ, ನಮ್ಮ ಬ್ರಾಹ್ಮಣಕುಟುಂಬವನ್ನು ಕಾಪಾಡಲು ನಿನಗೆ ಧರ್ಮ ಎಷ್ಟಾಗುವುದೋ ! ಎಲೆ ಬ್ರಾಹ್ಮಣ, ನಮ್ಮನ್ನು ಕಾಪಾಡು ಎಂದು ಸರ್ವಜ್ಞನೆಂಬ ಬ್ರಾಹ್ಮಣನು ತನ್ನ ಹೆಂಡತಿಯೊಡಗೂಡಿ ಅನಂತಭಟ್ಟನ ಕಾಲಿಗೆ ಬೀಳಲು ಅವರನ್ನು ಸಂತೈಸಿ ಹೊಲೆಯನಿಗೆ ಕೊಟ್ಟ ಅನ್ನದಾನವನ್ನು ನೀರಿನಿಂದ ಧಾರೆಯನ್ನೆರೆದನು. ೫೬. ಆತನಿಗೆ ಪಿಶಾಚದ ರೂಪ ಹೋಯಿತು. ಗುಂಪುಗೂಡಿದ ದೇವತಾಸ್ತ್ರೀಯರ ಸಮೂಹದೊಡನೆ ಆತನು ಮಣಿಖಚಿತವಾದ ರಥದಲ್ಲಿ ಆನಂದದಿಂದ ಹೋದನು. ಆ ಬ್ರಾಹ್ಮಣನ ಮಗನು ಇವನಿಂದ ಬದುಕಿಕೊಂಡನು. ಮಹಾಪರಾಕ್ರಮಿಯಾದ ರಾಜನೇ ಅನ್ನದಾನದ ಶ್ರೇಷ್ಠತೆಯನ್ನು ಇಷ್ಟೇ ಎಂದು ಹೇಗೆ ಹೇಳಲಿ ಎನ್ನಲು ರಾಜನು ಕೋಪಗೊಂಡು ಅದಕ್ಕೆ ಪ್ರಮಾಣಗಳನ್ನು ತೋರಿಸು, ಸುಮ್ಮನೆ ಮಾತನಾಡಬೇಡ ಎಂದನು. ಅದಕ್ಕೆ ಆ ಬ್ರಾಹ್ಮಣನು ಹೀಗೆಂದನು. ೫೭. ನಾಳೆ ನಿನಗೆ ಈ ಪ್ರಮಾಣವನ್ನು ನಿಜವಾಗಿಯೂ ನಾನು ತಂದು ಹೇಳದಿರುವುದಿಲ್ಲ ಎನ್ನಲು ರಾಜನು ಅವನನ್ನು ಹೋಗೆಂದು ಕಳಿಸಿಕೊಟ್ಟನು. ಆತನು ಬಂದು ತನ್ನ ಮನೆಯಲ್ಲಿ ಬಹಳ ಚಿಂತೆಯಿಂದ ಮಲಗಲು ಸ್ವಪ್ನದಲ್ಲಿ ಈಶ್ವರನು ಬಂದು ನಿಮ್ಮ ರಾಜನಿಗೆ ಇನ್ನು ಎಂಟು ದಿನಕ್ಕೆ ಒಬ್ಬ ಮಗನು ಹುಟ್ಟುತ್ತಾನೆ. ಅವನು ಇದನ್ನು ಹೇಳುತ್ತಾನೆ ಎನ್ನಲು ಬೆಳಗ್ಗೆ ಅರಮನೆಗೆ ಬಂದು

CC-0. Jangamwadi Math Collection. Digitized by eGangotri

ಅರಸ ಕೇಳಿಂದಿಗೆಂಟೇ ದಿನಕೆ ನೋಡು ನಿ
ನ್ನರಸಿಯುದರದೊಳೊರ್ವ ಸುಕುಮಾರಕಂ ಜನಿಪ
ನೊರೆದಪಂ ನಿನಗನ್ನದಾನಫಲಮಂ ನಿನ್ನ ಕುವರನೆನೆ ಭೂಪಾಲನು
ಶಿರವನೊಲೆದೊಲೆದು ತನ್ನಯ ಪಟ್ಟದರಸಿಯೊಳ್
ತರುಣನುದಿಸುವುದೊಂದು ಮೇಣೆಂಟು ದಿನಕೆಂಬು
ದೆರಡಾದ ಸಂಶಯಂ ಪೋಪುದೀ ಮೂರರಿಂದಂ ನೃಪಂ ಹರುಷಿಸಿದನು ೫೮

ನುಡಿದ ಕಾಲಂ ಬಂದುದನಿತರೊಳ್ ಬೇಗದಿಂ
ಪಡೆದಳರಸನ ರಾಣಿ ನವಮಾಸ ತುಂಬಲಾ
ಪೊಡವಿಪಂ ತನ್ನಯ ಪುರೋಹಿತಂ ಬೆರಸಿ ನಿಂದಿರೆ ಕಂಡು ಸುಕುಮಾರನು
ನುಡಿವುದೇನೈಯನ್ನದಾನಮಂ ನಿನಗೊಂದು
ಪಡಿ ಬಿದಿರತಂಡುಲಮನಿಕ್ಕಿದ ಮಹತ್ತ್ವದಿಂ
ಪೊಡವೀಶ ನಿನ್ನುದರದೊಳ್ ಬಂದೆ ನಾನೆಂದು ಶಿಶು ಮೌನಮಂ ತಾಳ್ದುದು ೫೯

ಅನ್ನದಾನದ ಮಹಿಮೆಯಿಂತಿನಿತು ಮುದಿಯಂ
ಮನ್ನಿಸಿದನೀ ಗೌತಮಂ ಮಹಾಕ್ಷಾಮದೊಳ
ಗಿನ್ನರಿಪದಾಂ ಪೋಪೆವೆಂತೆನಲ್ ಪೇಳಿ ಪೋ ನೀನೆನಲ್ ಕೆಲರದರೊಳು
ಗನ್ನಗತಕದೊಳೊಂದು ಗೋವನೊಡರಿಚಿ ಗೌತ
ಮನ್ನಡೆವ ಬಳಿಯ ಬೆಳೆಯೊಳ್ ನಿಲಿಸೆ ಕಂಡು ಮುನಿ
ಪನ್ನವ್ಯಗೋವಿದೆಲ್ಲಿಯದೆನುತೆ ಮೈದಡವೆ ಬಿದ್ದು ಗೋವಸುನೊರೆದುದು ೬೦

ಪುರೋಹಿತನು ರಾಜನೊಡನೆ ಹೀಗೆ ಹೇಳಿದನು. ೫೮. ರಾಜನೇ ಕೇಳು, ಇನ್ನು ಎಂಟೇ ದಿನಕ್ಕೆ ನಿನ್ನ ರಾಣಿಯಲ್ಲಿ ಮಗನು ಹುಟ್ಟುತ್ತಾನೆ, ನೋಡು. ಅವನು ನಿನಗೆ ಅನ್ನದಾನದ ಫಲವನ್ನು ಕುರಿತು ಹೇಳುತ್ತಾನೆ ಎಂದನು. ರಾಜನು ತಲೆದೂಗಿ ತನ್ನ ರಾಣಿಯಲ್ಲಿ ಮಗನಾಗುತ್ತಾನೆಂಬುದೊಂದು, ಎಂಟು ದಿನಕ್ಕೇ ಹುಟ್ಟುತ್ತಾನೆ ಎಂಬುದು ಎರಡು, ಉಂಟಾದ ಎರಡು ಸಂಶಯ ಹೋಗುವುದು ಎಂಬ ಮೂರರಿಂದ ಸಂತೋಷಿಸಿದನು. ೫೯. ಅಷ್ಟರಲ್ಲಿ ಹೇಳಿದ ಅವಧಿ ಬಂದಿತು. ಒಂಬತ್ತು ತಿಂಗಳು ತುಂಬಲು ರಾಣಿ ಮಗನನ್ನು ಹೆತ್ತಳು. ರಾಜನು ತನ್ನ ಪುರೋಹಿತನ ಸಂಗಡ ನಿಂತಿರಲು ಅವರನ್ನು ನೋಡಿ ಆ ಮಗುವು ಹೇಳಿತು–ಅನ್ನದಾನದ ಮಹಿಮೆಯನ್ನು ಹೇಳುವುದೇನಯ್ಯಾ ? ರಾಜನೇ, ನೀನು ಒಂದು ಪಡಿ ಬಿದಿರಕ್ಕಿಯನ್ನು ಇಟ್ಟುದರ ಮಹತ್ವದಿಂದ ನಿನ್ನ ಹೊಟ್ಟೆಯಲ್ಲಿ ನಾನು ಮಗನಾಗಿ ಹುಟ್ಟಿದೆ ಎಂದು ಮಗು ಮೌನವನ್ನು ತಾಳಿತು. ೬೦. ಅನ್ನದಾನದ ಮಹಿಮೆ ಇಷ್ಟು ಶ್ರೇಷ್ಠವಾದುದು. ಮಹಾಕ್ಷಾಮಕಾಲದಲ್ಲಿ ಇಷ್ಟು ಮಂದಿಯನ್ನೂ ಈ ಗೌತಮನು ಕಾಪಾಡಿದ. ಇನ್ನು ಅವನಿಗೆ ಹೇಳದೆ ಹೋಗುವುದು ಹೇಗೆ ಎನ್ನಲು ನೀನು ಹೇಳಿ ಹೋಗು ಎನ್ನಲು ಅವರಲ್ಲಿ ಕೆಲವರು ಮೋಸದಿಂದ ಹಸುವನ್ನು ಮಾಡಿ ಗೌತಮನು ಓಡಾಡುವ ದಾರಿಯಲ್ಲಿ ಬೆಳೆಯಲ್ಲಿ ನಿಲ್ಲಿಸಿದರು. ಅದನ್ನು ನೋಡಿ ಗೌತಮನು ಹೊಸ ಹಸುವೆಲ್ಲಿಯದು ಎನ್ನುತ್ತ ಮೈದಡವಲು ಆ ಹಸುವು ಬಿದ್ದು

CC-0. Jangamwadi Math Collection. Digitized by eGangotri

ಬೆಳೆಯು ತಿನ್ನದೆ ಸಮೀಪದೊಳಿರ್ದ ಗೋವನಿಂ
ತಳೆದನೀತನ ಮನೆಯೊಳನ್ನಪಾನವನೆಂತು
ಕೊಳಲಕ್ಕುಮೆಂದೆನುತಿವರ್ ಪೋಗೆ ಗೌತಮಂ ಕಾಲ್ವಿಡಿದು ಬೇಡಿಕೊಂಡು
ತಿಳಿಪಿ ನಿಷ್ಕೃತಿಯಾವುದಿದಕೆನಲ್ ಶಂಕರಂ
ತಳೆದ ಮಸ್ತಕದ ಗಂಗೆಯು ತಂದು ಗೋವಳಿದ
ಬಳಿಯೊಳೈದಿಸೆ ಪೋಪುದೆನೆ ಗೌತಮಂ ತಪದೊಳೀಶನಂ ಮೆಚ್ಚಿಸಿದನು ೬೧

ಮುನಿ ನಿನಗೆ ಬೇಳ್ಪುದೇನೆನೆ ಮಸ್ತಕದ ಗಂಗೆ
ಯುಸು ಕೊಡುವುದೆನೆ ಬಿಂದುಮಾತ್ರವಂ ಕೊಡಲಾತ
ನೆನಗೆ ಗೋಹತಿಯೇಕೆ ಬಂದುದೈ ಜಗದೀಶ ಪೇಳೆನಲು ನೀಂ ಬರದೊಳು
ಮನೆಯೊಳಗೆ ರಕ್ಷಿಸಿದ ಋಷಿಗಳಪಕಾರವೆನೆ
ಮುನಿ ಮುನಿದು ಮುನಿಗಳ್ಗೆ ಭಸಿತ ರುದ್ರಾಕ್ಷಿ ರು
ದ್ರನ ಭಕ್ತಿಗಳನುಳಿದು ಪಾಷಂಡಿಮತರಾಗಿ ಕೆಡಲೆಂದು ಶಾಪಿಸಿದನು ೬೨

ಬಳಿಕಮಾ ಗಂಗೆಯುಂ ತಂದು ಪಶುವಳಿದಿರ್ದ
ಬಳಿಯೊಳೈದಿಸೆ ಗೌತಮಂ ತಂದ ಕಾರಣಂ
ತಳೆದುದದು ಗೌತಮೀನಾಮಮಂ ಗೋ ಸೋಂಕೆ ಗೋದಾವರೀಯೆನಿಸಿತು
ಎಲೆ ಸಿದ್ಧರಾಮ ಶಂಕರನಿತ್ತ ವಿಷ್ಣುವಂ
ಬಳಿಗೆ ಕರೆದೆಮ್ಮ ಭಕ್ತನ ವಾಕ್ಯಮಂ ಒಂದು
ಗಳೆಯಬಾರದು ಜೈನ ಬೌದ್ಧ ಚಾರ್ವಾಕಾದಿಮತವ ನೀಂ ಬೆಳೆಸೆಂದನು ೬೩

ಪ್ರಾಣಬಿಟ್ಟಿತು. ೬೧. ಬೆಳೆಯನ್ನು ಮೇಯದೆ ಹತ್ತಿರದಲ್ಲಿದ್ದ ಹಸುವನ್ನು ಈತನು ಕೊಂದನು. ಇನ್ನು ಇವನ ಮನೆಯಲ್ಲಿ ಅನ್ನ-ಪಾನವನ್ನು ಸ್ವೀಕರಿಸಲು ಹೇಗೆ ಸಾಧ್ಯ ಎನ್ನುತ್ತ ಇವರೆಲ್ಲ ಹೊರಟುಹೋಗಲು ಗೌತಮನು ಅವರ ಕಾಲಿಗೆ ಬಿದ್ದು ಇದಕ್ಕೆ ವಿಮೋಚನೆಯನ್ನು ತಿಳಿಸಿ ಎಂದು ಬೇಡಿಕೊಂಡನು. ಶಿವನ ತಲೆಯ ಮೇಲಿನ ಗಂಗೆಯನ್ನು ತಂದು ಹಸು ಸತ್ತ ಜಾಗದಲ್ಲಿ ಹರಿಸಿದರೆ ಪಾಪನಿವಾರಣೆಯಾಗುತ್ತದೆ ಎಂದು ಅವರು ತಿಳಿಸಲು, ಗೌತಮನು ತಪಸ್ಸುಮಾಡಿ ಈಶ್ವರನನ್ನು ಮೆಚ್ಚಿಸಿದನು. ೬೨. ಋಷಿಯೆ ನಿನಗೆ ಏನು ಬೇಕು ಕೇಳು ಎನ್ನಲು ಅವನು ನಿನ್ನ ತಲೆಯ ಮೇಲಿರುವ ಗಂಗೆಯನ್ನು ಬೇಡಿದನು. ಈಶ್ವರನು ಒಂದು ತೊಟ್ಟು ಗಂಗೆಯನ್ನು ಮಾತ್ರ ಕೊಡಲು ಆತನು ಶಿವನೆ ನನಗೆ ಈ ಗೋಹತ್ಯದ ಪಾಪ ಏಕೆ ಬಂತು ? ನೀನು ಹೇಳು ಎಂದು ಕೇಳಿದನು. ಅದಕ್ಕೆ ಶಿವನು ಕ್ಷಾಮದ ಕಾಲದಲ್ಲಿ ನೀನು ಕಾಪಾಡಿದ ಋಷಿಗಳ ಅಪಕಾರದಿಂದ ಈ ಪಾಪ ಬಂತು ಎನ್ನಲು ಋಷಿಯು ಕೋಪಗೊಂಡು ವಿಭೂತಿ, ರುದ್ರಾಕ್ಷಿ, ಶಿವನ ಭಕ್ತಿ ಬಿಟ್ಟು ಪಾಷಂಡಿಗಳಾಗಿ ಅವರು ಕೆಡಲಿ ಎಂದು ಅವರಿಗೆ ಶಾಪ ಕೊಟ್ಟನು. ೬೩. ಅನಂತರ ಆ ಗಂಗೆಯನ್ನು ತಂದು ಹಸುವು ಸತ್ತಿದ್ದ ಜಾಗದಲ್ಲಿ ಹರಿಸಲು ಗೌತಮನು ತಂದ ಕಾರಣದಿಂದ ಗೌತಮಿ ಎಂಬ ಹೆಸರನ್ನು ಪಡೆಯಿತು. ಗೋವಿನ ಸ್ಪರ್ಶವಾದುದರಿಂದ ಗೋದಾವರೀ ಎನ್ನಿಸಿತು. ಎಲೆ ಸಿದ್ಧರಾಮ, ಇತ್ತಕಡೆ ಶಂಕರನು ವಿಷ್ಣುವನ್ನು ಸಮೀಪಕ್ಕೆ ಕರೆದು

CC-0. Jangamwadi Math Collection. Digitized by eGangotri

ಲೇಸಾದುದೆಂದು ಕಳುಹಿಸಿಕೊಂಡು ವಿಷ್ಣು ಕೈ
ಲಾಸದಿಂ ಧರೆಗಿಳಿದು ಬೌದ್ಧಾವತಾರದಿಂ
ಮೋಸವಂ ಮಾಡಿ ಜಿನ ಬೌದ್ಧ ಚಾರ್ವಾಕಾದಿ ಮತವನುರೆ ಸಂಸ್ಥಾಪಿಸಿ
ಈ ಸಕಲಮಾನವರೊಳೆಲ್ಲಿಯುಂ ಮಿಗೆ ಕೃತ್ತಿ
ವಾಸನ ಮಹಾಭಕ್ತಿಯುಂ ಮರೆಸಿ ಬಳಿಕಮಾ
ದೇಶದೊಳ್ ವೇದಬಾಹಿರರೆನಿಸಿ ಪಾಷಂಡಿಮತವನುರೆ ಪೆಚ್ಚಿಸಿದನು ೬೪

ಹರಿಯು ಕೃತ್ಯವನರಿದರತ್ರಿಮುನಿ ಕಶ್ಯಪಾಂ
ಗಿರಸ ಕೌಶಿಕ ಭರದ್ವಾಜಾದಿ ಮುನಿಗಳೀ
ಶ್ವರನಂ ತಪಸ್ಸಿನಿಂ ಮೆಚ್ಚಿಸಲ್ ಶಂಭು ನಿಮ್ಮಿಷ್ಟವಂ ಬೇಡಿಮೆನಲು
ಕರುಣಿಸೈ ಮತ್ಕುಲದ ಋಷಿಗಳಜ್ಞಾನಸಂ
ಭರಿತರಾದರ್ ನಿನ್ನ ಭಕ್ತಿ ವೇದಾಗವಂ
ದೊರೆಕೊಳ್ಳದವರನುದ್ಧರಿಸೆಂದು ಕೊಂಡಾಡೆ ಲೋಕೇಶನಿಂತೆಂದನು ೬೫

ಪೋಗಿ ಭಯಬೇಡ ನೀವೆರಡನೆಯ ನಮ್ಮ ರೂ
ಪಾಗಿ ಶ್ರೀಶೈಲಾದಿ ಬಂದು ಮುನಿವ್ರಜಕೆ ಶೈ
ವಾಗಮರಹಸ್ಯಮಂ ತಿಳಿಸಿ ಸುಜ್ಞಾನಮಂ ನೆಲೆಗೊಳಿಪನೆಂದು ಪೇಳ್ದು
ಭೋಗಿಭೂಷಣನವರ ಕಳುಪಿ ಸುಖವಹಮೂರ್ತಿ
ಯಾಗಿ ಶಿರವೊಂದು ಭುಜವೆರಡಕ್ಷಿ ಮೂರರಿಂ
ದಾಗಲಾ ವಿಮಲಶುದ್ಧಸ್ಫಟಿಕವರ್ಣದಿಂ ವೃಷಪತಿಗೆ ಬೋಧಿಸಿದನು ೬೬

ನಮ್ಮ ಭಕ್ತನ ಮಾತನ್ನು ಸುಳ್ಳಾಗಿಸಬಾರದು. ನೀನು ಜೈನ, ಬೌದ್ಧ, ಚಾರ್ವಕಮತಗಳನ್ನು ಬೆಳೆಸು ಎಂದನು. ೬೪. ಒಳ್ಳೆಯದು (ಹಾಗೆಯೇ ಆಗಲಿ) ಎಂದು ಬೀಳ್ಕೊಂಡು ವಿಷ್ಣುವು ಕೈಲಾಸದಿಂದ ಭೂಮಿಗೆ ಇಳಿದು ಬೌದ್ಧಾವತಾರದಿಂದ ಮೋಸ ಮಾಡಿ ಜಿನ, ಬೌದ್ಧ, ಚಾರ್ವಕ ಮೊದಲಾದ ಮತಗಳನ್ನು ಸ್ಥಾಪಿಸಿ ಈ ಎಲ್ಲ ಮನುಷ್ಯರಲ್ಲಿ ಎಲ್ಲಿಯೂ ಶಿವನ ಭಕ್ತಿ ಇಲ್ಲದಂತೆ ಮಾಡಿ ಬಳಿಕ ಆ ದೇಶದವರನ್ನು ವೇದಬಾಹಿರರನ್ನಾಗಿ ಮಾಡಿ ಪಾಷಂಡಿಮತದವರನ್ನು ಅಭಿವೃದ್ಧಿಗೊಳಿಸಿದನು. ೬೫. ಅತ್ರಿ, ಕಶ್ಯಪ, ಅಂಗೀರಸ, ಕೌಶಿಕ,ಭರದ್ವಾಜ ಮೊದಲಾದ ಋಷಿಗಳು ವಿಷ್ಣುವಿನ ಕಾರ್ಯವನ್ನು ತಿಳಿದು ಈಶ್ವರನನ್ನು ತಮ್ಮ ತಪಸ್ಸಿನಿಂದ ಮೆಚ್ಚಿಸಿದರು. ಶಂಭುವು ನಿಮಗೆ ಬೇಕಾದುದನ್ನು ಕೇಳಿ ಎನ್ನಲು 'ಕರುಣಿಸಯ್ಯ, ನಮ್ಮ ಕುಲದ ಮುನಿಗಳು ಅಜ್ಞಾನಿಗಳಾದರು. ನಿನ್ನ ಭಕ್ತಿ, ವೇದಾಗಮ ಮುಂತಾದುವು ದೊರೆಯದಂತಾಗಿದೆ, ಅವರನ್ನುದ್ಧರಿಸು' ಎಂದು ಕೊಂಡಾಡಲು ಲೋಕೇಶ್ವರನು ಹೀಗೆಂದನು. ೬೬. ನೀವು ಹೇದರಬೇಡಿ ಹೋಗಿ. ನಮ್ಮ ಎರಡನೆಯ ರೂಪದಿಂದ ಶ್ರೀಶೈಲಕ್ಕೆ ಬಂದು ಮುನಿಸಮೂಹಕ್ಕೆ ಶೈವಾಗಮ ರಹಸ್ಯವನ್ನು ತಿಳಿಸಿ, ಸುಜ್ಞಾನವನ್ನು ನೆಲೆ ನಿಲ್ಲಿಸುತ್ತೇನೆ ಎಂದು ಹೇಳಿ ಸರ್ಪಭೂಷಣನು ಅವರನ್ನು ಕಳಿಸಿಕೊಟ್ಟು ಆಗ ಸುಖವಹ ಮೂರ್ತಿಯಾಗಿ ಒಂದು ತಲೆ, ಎರಡು ಭುಜ, ಮೂರು ಕಣ್ಣಿನಿಂದ ಮಂಗಳಕರವಾದ ಶುದ್ಧವಾದ ಬಿಳಿಬಣ್ಣದಿಂದ ಕೂಡಿ ನಂದಿಗೆ

CC-0. Jangamwadi Math Collection. Digitized by eGangotri

ವೇದ ವೇದಾಂತ ಶಿವಶಾಸ್ತ್ರ ಪೌರಾಣಾಗ
ಮಾದಿಗಳನವನಿಯೊಳ್ ಪ್ರಜ್ವಲಿಸೆನುತ್ತೆ ಶೈ
ಲಾದಿಗೆಲ್ಲಾ ರಹಸ್ಯವನರಿಪಿ ಶಂಕರಂ ವೃಷರಾಜನಂ ಕಳುಪಲು
ಮೇದಿನಿಯೊಳಜ್ಞಾನಋಷಿಗಳ್ಗೆ ಶೈವಮಂ
ಬೋಧಿಸಿ ಶಿವಾಚಾರವಲ್ಲದನ್ಯಂಗಳುಮ
ನಾದರಂಗೆಯ್ವಂತೆ ಮಾಡಿ ವೃಷವಲ್ಲಭಂ ಕೈಲಾಸಮಂ ಪೊಕ್ಕನು ೬೭

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ ೬೮

ಐವತ್ತೆರಡನೆಯ ಸಂಧಿ ಸಂಪೂರ್ಣ

ಬೋಧಿಸಿದನು. ೬೭. ವೇದ, ವೇದಾಂತ, ಶಿವಶಾಸ್ತ್ರ, ಪುರಾಣ, ಆಗಮ ಮೊದಲಾದುವು ಗಳನ್ನು ಭೂಮಿಯಲ್ಲಿ ಬೆಳಗಿ ಪ್ರಚಾರ ಮಾಡು ಎನ್ನುತ್ತ ನಂದಿಗೆ ಎಲ್ಲಾ ರಹಸ್ಯವನ್ನೂ ತಿಳಿಸಿ ಶಿವನು ವೃಷಭರಾಜನನ್ನು ಕಳಿಸಲು, ಅವನು ಭೂಮಿಯಲ್ಲಿ ಆಜ್ಞಾನಿಗಳಾದ ಋಷಿಗಳಿಗೆ ಶೈವಬೋಧೆ ಮಾಡಿ ಶಿವಾಚಾರವನ್ನಲ್ಲದೆ ಅನ್ಯ ಮತಗಳನ್ನು ಆದರಿಸದಿರು ವಂತೆ ಮಾಡಿ ವೃಷಭೇಂದ್ರನು ಕೈಲಾಸಕ್ಕೆ ಹೋದನು. ೬೮. ಈ ರೀತಿಯಲ್ಲಿ ಶ್ರೇಷ್ಠ ವಾದ ಚೆನ್ನಬಸವಪುರಾಣವನ್ನು ಸಂತೋಷದಿಂದ ಪ್ರತಿಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ಐವತ್ತೆರಡನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ಐವತ್ತು ಮೂರನೆಯ ಸಂಧಿ

ಸೂಚನೆ : ಇಂದ್ರಕೀಲದೊಳರ್ಜುನಂ ತಪದೊಳಿರಲರಿದು
ಚಂದ್ರಧರನಾಗ ಶಾಬರನಾಗಿ ಬಂದಾ ನ
ರೇಂದ್ರಂಗೆ ಕರುಣದಿಂ ಪಾಶುಪತಬಾಣವಂ ಕೊಟ್ಟನತಿಸಂತಸದೊಳು

ಭಕ್ತಜನದೋಷನಿರ್ಮುಕ್ತ ಗುಹಗಣಪಾಂಗ
ಸಿಕ್ತಾನುಕಂಪರಸಯುಕ್ತ ಗಿರಿಜಾಕೂಲ
ರಕ್ತ ಸತ್ತ್ರಣವಸಂಪ್ರೋಕ್ತ ವೇದಾಗಮಾಸಕ್ತ ಮಹಿಮಾವಲಂಬ
ಮುಕ್ತಾಫಲಸ್ಫಟಿಕವ್ಯಕ್ತಾಂಗದಿಂ ದಶಾ
ದಿಕ್ತಟಾವೃತ ಘನವಿರಕ್ತಸಂಪ್ರೀತ ಹುತ
ಭಕ್ತರಣಿಹಿಮಧಾಮದೃಕ್ತತ್ತ್ವ ರಸಸುಧಾಭುಕ್ತ ವಿರುಪಾಕ್ಷ ಶರಣು ೧

ಆಲಿಸಿನ್ನೆಲೆ ಸಿದ್ಧರಾಮ ಮುನ್ನುಂಟು ಭೂ
ಪಾಲಕರ್ ಹಿಮಕರಾನ್ವಯಜಾತರೆನಿಸುವ ವಿ
ಶಾಲಮತಿಧರ್ಮಜಂ ಭೀಮಂ ಕಿರೀಟಿ ಮಾದ್ರೇಯರೆಂಬೈವರಿಂತು
ಪಾಲಿಸೆ ಧರಿತ್ರಿಯಂ ದಾಯಾದ್ಯರೊಳ್ ದ್ಯೂತ
ಕೇಳಿ ಸಮನಿಸೆ ತಮ್ಮ ದೇಶಕೋಶಂಗಳಂ
ಸೋಲದಿಂದೊಪ್ಪಿಸಿಯರಣ್ಯವಾಸದೊಳಿರ್ದರತುಳಶೋಕಾರ್ತರಾಗಿ ೨

ಸೂಚನೆ : ಇಂದ್ರಕೀಲಪರ್ವತದಲ್ಲಿ ಅರ್ಜುನನು ತಪಸ್ಸಿನಲ್ಲಿರಲು ಅದನ್ನು ತಿಳಿದು ಚಂದ್ರಶೇಖರನು ಬೇಡನಾಗಿ ಬಂದು ಅವನಿಗೆ ಕರುಣೆಯಿಂದ ಪಾಶುಪತಬಾಣವನ್ನು ಸಂತೋಷದಿಂದ ಕೊಟ್ಟನು. ೧. ಭಕ್ತರ ದೋಷವನ್ನು ನಿವಾರಿಸುವವನು, ಷಣ್ಮುಖ ಮತ್ತು ಗಣೇಶರಲ್ಲಿ ಅನುಕಂಪ–ಪ್ರೀತಿಯುಳ್ಳವನು, ಗಿರಿಜೆಯಲ್ಲಿ ಅನುಕೂಲವಾದ ಪ್ರೀತಿಯುಳ್ಳವನು, ಓಂಕಾರದಿಂದ ಪರಿಪೂರ್ಣನಾದವನು, ವೇದ–ಆಗಮಗಳಲ್ಲಿ ಆಸಕ್ತನಾದವನು, ಮಹಾಮಹಿಮ, ಮುತ್ತು ಮತ್ತು ಸ್ಫಟಿಕಶಿಲೆಯಂತೆ ಬಿಳಿಯಾದ ಬಣ್ಣದಿಂದ ಕೂಡಿದ ಶರೀರದಿಂದ ದಶದಿಕ್ಕುಗಳನ್ನು ತುಂಬಿರುವವನು, ಅತಿ ವಿರಕ್ತಿಯಲ್ಲಿ ಪ್ರೀತಿಯುಳ್ಳವ, ಪ್ರಾರ್ಥಿಸಿದ ಭಕ್ತರಿಗೆ ಆನಂದವನ್ನು ಕೊಡುವವ, ಕೈಲಾಸವಾಸಿ, ಪ್ರತ್ಯಕ್ಷವಾಗಿ ಕಾಣುವ ತತ್ತ್ವರಸವೆಂಬ ಅಮೃತವನ್ನು ಪಾನಮಾಡುವ ವಿರೂಪಾಕ್ಷನೇ ನಮಸ್ಕಾರ. ೨. ಇನ್ನು ಕೇಳಯ್ಯ ಸಿದ್ಧರಾಮ, ಹಿಂದೆ ಚಂದ್ರವಂಶದಲ್ಲಿ ಹುಟ್ಟಿದ ವಿಶಾಲಮತಿಯಾದ ಧರ್ಮರಾಜ, ಭೀಮ, ಅರ್ಜುನ, ನಕುಲ, ಸಹದೇವರೆಂಬ ಐದು ಮಂದಿ ರಾಜರಿದ್ದರು. ಅವರು ರಾಜ್ಯವಾಳುತ್ತಿರಲು ದಾಯಾದಿಗಳಲ್ಲಿ ಪಗಡೆಯಾಟ ಸಂಭವಿಸಿತು. ಅದರಲ್ಲಿ ತಮ್ಮ ದೇಶ–ಕೋಶಗಳನ್ನು ಸೋತು ದಾಯಾದಿಗಳಿಗೆ ಒಪ್ಪಿಸಿ

CC-0. Jangamwadi Math Collection. Digitized by eGangotri

ಒಂದು ದಿನವಾ ಭೂಪರಿರ್ದ ವನಭೂಮಿಗೈ
ತಂದು ವೇದವ್ಯಾಸಮುನಿ ನುಡಿದನೆಲೆ ಭೂಪ
ಬಂದುದು ಮಹಾಪತ್ತು ನಿನಗೆ ರಿಪುವೀರರಂ ನೀಂ ಜಯಿಸಬೇಕಾದೊಡೆ
ಇಂದುಧರನಲ್ಲಿ ಪಾಶುಪತಾಸ್ತ್ರಮಿರ್ದಪುದು
ತಂದುಕೊಂಡೊಡೆ ನಿನಗೆ ಮಲೆತ ರಾಯರ್ಗಳಂ
ಕೊಂದು ಕೊಡುವುದು ಸಂದೆಗಂ ಬೇಡವೆನೆ ಮುನಿಗೆ ಧರ್ಮಸುತನಿಂತೆಂದನು ೩

ಲೇಸನಾಡಿದೆ ಮುನೀಶ್ವರ ಭಗೀರಥಯತ್ನ
ವೈಸಲೇ ನೀವುಸುರಿದುದು ಶಂಭುವಂ ಕಾಣ
ಲೇಸರವರಾವ್ ಕಂಡೊಡಂ ಶರವನಿತ್ತಪನೆಯಿತ್ತೊಡದು ಸಂಹರಿಪ್ಪುದೆ
ಆ ಸದಾಶಿವನೆಮ್ಮೊಳಾರ್ಗೆ ಗೋಚರಿಪನೆನೆ
ವ್ಯಾಸಮುನಿಯೆಂದನೆಲೆ ಭೂಪ ಪಶುಪತಿ ಭಕ್ತ
ರಾಸೆಯುಂ ಸಲಿಸದವನೇ ಕೃಪಾಕರನೀವನಸ್ತ್ರಮಂ ಕೇಳೆಂದನು ೪

ತಿಳಿಯೆ ನಿಮ್ಮೈವರೊಳಗರ್ಜುನಂಗಿಂದುಧರ
ನೊಲಿವನಿಂತೆಂದು ಮಂತ್ರೋಪದೇಶವನಿತ್ತು
ನಲವಿನಿಂ ಮುನಿ ಪೋದನಿತ್ತಲರಸಂ ನರಂಗಾ ಮಂತ್ರಮಂ ನಿರವಿಸಿ

ಅತಿಯಾದ ದುಃಖದಿಂದ ಅರಣ್ಯವಾಸ ಮಾಡುತ್ತಿದ್ದರು. ೩. ಒಂದು ದಿನ ಆ ರಾಜರು ವಾಸಿಸುತ್ತಿದ್ದ ಅರಣ್ಯಕ್ಕೆ ವೇದವ್ಯಾಸಮುನಿ ಬಂದು ಹೇಳಿದನು. ರಾಜನೆ ನಿನಗೆ ದೊಡ್ಡ ವಿಪತ್ತು ಬಂದಿತು. ನೀನು ಪರಾಕ್ರಮಿಗಳಾದ ನಿನ್ನ ಶತ್ರುಗಳನ್ನು ಜಯಿಸ ಬೇಕಾದರೆ ಚಂದ್ರಶೇಖರನಲ್ಲಿ ಇರುವ ಪಾಶುಪತಾಸ್ತ್ರವನ್ನು ತಂದುಕೊಂಡರೆ ನಿನಗೆ ಪ್ರತಿಭಟಿಸಿ ನಿಂತ ರಾಜರನ್ನು ಕೊಂದುಹಾಕುವುದು, ಸಂದೇಹ ಬೇಡ ಎನ್ನಲು ಆ ಮುನಿಗೆ ಧರ್ಮರಾಜನು ಹೀಗೆ ಹೇಳಿದನು. ೪. ಮುನಿಶ್ರೇಷ್ಠನೇ, ಒಳ್ಳೆಯದನ್ನೇ ಹೇಳಿದೆ. ಆದರೆ ನೀನು ಹೇಳಿದ್ದು ಭಗೀರಥಪ್ರಯತ್ನವೇ ಅಲ್ಲವೆ ? ಶಿವನನ್ನು ಪ್ರತ್ಯಕ್ಷ ಮಾಡಿಕೊಳ್ಳಲು ನಾವು ಎಷ್ಟರವರು ? ಒಂದು ವೇಳೆ ಅವನನ್ನು ಕಂಡರೂ ಬಾಣವನ್ನು ಕೊಡುತ್ತಾನೆಯೇ ? ಕೊಟ್ಟರೂ ಅದು ಶತ್ರುನಾಶ ಮಾಡುತ್ತದೆಯೆ ? ಆ ಶಿವನು ನಮ್ಮಲ್ಲಿ ಯಾರಿಗೆ ಪ್ರತ್ಯಕ್ಷನಾಗುತ್ತಾನೆ ? ಎನ್ನಲು ವ್ಯಾಸಮುನಿ ಹೇಳಿದನು. ಎಲೈ ರಾಜನೆ, ಶಿವನು ಭಕ್ತರ ಆಸೆಯನ್ನು ಪೂರೈಸದವನೆ ? ಅವನು ಕೃಪಾಕರನು. ಅಸ್ತ್ರವನ್ನು ಕೊಡುತ್ತಾನೆ, ಕೇಳು ಎಂದನು. ೫. ಆಲೋಚಿಸಲು ನಿಮ್ಮ ಐದು ಜನರಲ್ಲಿ ಅರ್ಜುನನಿಗೆ ಶಿವನು ಒಲಿಯುತ್ತಾನೆ ಎಂದು ಅವನಿಗೆ ಮಂತ್ರೋಪದೇಶ ಮಾಡಿ ಸಂತೋಷದಿಂದ ಮುನಿಯು ಹೊರಟುಹೋದನು. ಇತ್ತ ಧರ್ಮರಾಜನು ಅರ್ಜುನನಿಗೆ ಆ ಮಂತ್ರವನ್ನು ನಿರೂಪಿಸಲು, ಅರ್ಜುನನು ತ್ವರಿತವಾಗಿ ಇಂದ್ರಕೀಲ

CC-0. Jangamwadi Math Collection. Digitized by eGangotri

ಕಳುಪಲೊಡನಿಂದ್ರಕೀಲಮನೈದಿ ಸರಸಿಯೊಳ್
ಮುಳುಗಿ ಶುಚಿಯಾಗಿ ಪಾದಾಂಗುಷ್ಠಮಂ ಧರಾ
ತಳದೊಳಾನಿಸಿ ಭುಜಂಗಳನೆತ್ತಿ ಶಿವಮೂರ್ತಿಯಂ ಮನಸ್ಸಿನೊಳಾಂತನು ೫

ಜಪಮಾಲೆ ಕರದೊಳ್ ವಿಭೂತಿ ಸರ್ವಾಂಗದೊಳ್
ವಿಪುಳರುದ್ರಾಕ್ಷಿಯಾಭರಣಮಂಗಂಗಳೊಳ
ಗಪರಭಾಗದೊಳಕ್ಷಯಾಸ್ತ್ರಪೂರಿತದ ಬತ್ತಳಿಕೆ ಚಾಪಂ ಪೆಗಲೊಳು
ವೀಪರೀತವರ್ತನಮೆನಲ್ಕೆ ತರಗೆಲೆಯುಂಡು
ತಪಿಸಿದಂ ಪಲದಿವಸಮನಿಲದಿಂದುದಕದಿಂ
ದಪಗತಾಹಾರದಿಂದಿರೆ ತತ್ತಪಸ್ತೇಜಮುಣ್ಮಿತು ತಪೋವನದೊಳು ೬

ಉರಿದುದು ಕುಜಪ್ರಕರವೆತ್ತಲುಂ ಸುತ್ತಲುಂ
ಕರಿಗುದು ಲತಾಪ್ರತತಿ ದಾಹದಿಂ ಮೋಹದಿಂ
ಸರಿದುದಗಲಕೆ ಮೃಗಮೃಗೀಕುಲಂ ವ್ಯಾಕುಲಂ ಖಗಗಣಕೆ ಪಿರಿದಾದುದು
ಜರಿದುದು ಶಿಖರಿಶಿಖರಮುರಿಗಳಿಂ ದರಿಗಳಿಂ
ದಿರದೋಡಿತಹಿಕುಲಂ ಭೀತಿಯಿಂ ಖ್ಯಾತಿಯಿಂ
ಪರಿದುದ ಋಷಿವ್ರಾತಮೋಟದಿಂ ಘಾಟದಿಂ ಪರಿಹರಿಪರಿಲ್ಲೆನುತ್ತೆ ೭

ಕಂಡನೀ ಮುನಿವರರ ಕೋಳಾಹಳವನಭ್ರ
ಮಂಡಲದೊಳಮರಮುನಿ ನಾರದಂ ತಾಪಸರ
ತಂಡಮಂ ಪೊರ್ದಲವರೆಲೆ ಮುನಿಪ ಪರಿಹರಿಸು ನೀನೆಂದು ಬೇಡಿಕೊಳಲು

ವನ್ನು ಸೇರಿ ಕೊಳದಲ್ಲಿ ಮುಳುಗಿ ಸ್ನಾನಮಾಡಿ ಶುಚಿಯಾಗಿ ಕಾಲಿನ ಹೆಬ್ಬೆರಳನ್ನು ನೆಲಕ್ಕೆ ಊರಿ, ತೋಳುಗಳನ್ನು ಮೇಲೆತ್ತಿ ಶಿವನ ಮೂರ್ತಿಯನ್ನು ಹೃದಯದಲ್ಲಿ ಪ್ರತಿಷ್ಠಾಪಿಸಿದನು. ೬. ಕೈಯಲ್ಲಿ ಜಪಮಾಲೆ, ದೇಹದಲ್ಲೆಲ್ಲ ವಿಭೂತಿ, ಶರೀರದಲ್ಲಿ ವಿಪುಲವಾದ ರುದ್ರಾಕ್ಷಿ ಮಾಲೆಯ ಆಭರಣ, ಹಿಂಭಾಗದಲ್ಲಿ (ಬೆನ್ನಿನಲ್ಲಿ) ಅಕ್ಷಯವಾದ ಅಸ್ತ್ರದಿಂದ ಕೂಡಿದ ಬತ್ತಳಿಕೆ, ಹೆಗಲಿನಲ್ಲಿ ಬಿಲ್ಲು, ವಿಪರೀತವಾದ ವರ್ತನೆಯಿದು ಎನ್ನಲು ತರಗೆಲೆಯನ್ನು ತಿಂದು ಕೆಲವು ದಿನಗಳು ತಪಸ್ಸು ಮಾಡಿದನು. ಕೆಲವು ದಿವಸ ಗಾಳಿಯಿಂದ, ಕೆಲವು ದಿವಸ ನೀರಿನಿಂದ, ಕೆಲವು ದಿವಸ ಉಪವಾಸದಿಂದಿರಲು ಅವನ ತಪಸ್ಸಿನ ತೇಜಸ್ಸು ಆ ತಪೋವನದಲ್ಲಿ ಹೆಚ್ಚಿ ಆವರಿಸಿತು. ೭. ಎಲ್ಲೆಲ್ಲಿಯೂ ಮರಗಳ ಸಮೂಹ ಉರಿದುಹೋಯಿತು. ಸುತ್ತಲೂ ಇದ್ದ ಬಳ್ಳಿಗಳ ಗುಂಪು ಸುಟ್ಟು ಕರಿಕಾಯಿತು. ಬಾಯಾರಿಕೆಯಿಂದ, ಮೋಹದಿಂದ ಗಂಡು-ಹೆಣ್ಣು ಪ್ರಾಣಿಗಳು ದೂರ ಸರಿದವು. ಪಕ್ಷಿಸಮೂಹಕ್ಕೆ ದುಃಖ ಹೆಚ್ಚಾಯಿತು. ಮರ-ಪರ್ವತಗಳು ಉರಿಯಿಂದ ಸರಿಯಿತು. ಸರ್ಪಗಳ ಸಮೂಹ ಹೆದರಿಕೆಯಿಂದ ಕೊಳ್ಳಗಳಲ್ಲಿರದೆ ಓಡಿತು. ಕಾಪಾಡುವವರಿಲ್ಲವೆನ್ನುತ್ತ ಋಷಿಗಳ ಸಮೂಹ ರಭಸದಿಂದ ಓಡಿಹೋಯಿತು. ೮. ಈ ಮುನಿಶ್ರೇಷ್ಠರ ಕೋಲಾಹಲವನ್ನು ಆಕಾಶದಿಂದ ದೇವಮುನಿಯಾದ ನಾರದನು ನೋಡಿದನು. ತಪಸ್ವಿಗಳ ತಂಡವನ್ನು ಸಮೀಪಿಸಲು ಅವರು, ಎಲೆ ಮುನಿಯೆ ನೀನು

CC-0. Jangamwadi Math Collection. Digitized by eGangotri

ಖಂಡಪರಶುವಿನೆಡೆಗೆ ಪೋಗಿ ನಿಮ್ಮುಪಹತಿಯ
ಖಂಡಿಸುವೆನೆಂದು ನಂಬುಗೆಯಿತ್ತು ಗಿರಿಸುತೆಯ
ಗಂಡನಂ ಕಂಡು ಕೊಂಡಾಡಿದಂ ಮಾಡಿದಂ ನಾರದಂ ಬಿನ್ನಪವನು ೮

ಹರ ಪರಾಮರಿಸಿಂದ್ರಕೀಲದೊಳ್ ತಪಿಸುತಿಹ
ನರನವಂ ಋಷಿಯಲ್ಲ ಋಷಿಗೇಕೆ ಕೋದಂಡ
ಶರ ಖಡ್ಗ ಭೂಷಣಂಗಳ್ ದುಷ್ಟತಪಸಿಯ ತಪೋವಹ್ನಿ ಮಸಗಲಾಗಿ
ತೆರಳ್ದುವಾ ಮುನಿಪರ ಜಪಂ ತಪಂ ನಿತ್ಯಕ
ರ್ಮರಹಸ್ಯಮಂತ್ರಂಗಳೇಗುವರ್ ಪೇಳೆಂದು
ಸುರಮುನಿ ಹರಂಗೆ ಬಿನ್ನವಿಸೆ ಕೇಳ್ದರಿದು ನಸುನಗುತಭವನಿಂತೆಂದನು ೯

ಆತನೆಮ್ಮಯ ಪರಮಭಕ್ತನವನಿಂದವ
ಗೇತರುಪಹತಿಯಿಲ್ಲ ನಾವೀಗ ಬಂದವ
ಗಾ ತಪೋವನವನೇ ಕೊಟ್ಟಪೆವು ನೀಂ ಪೋಗಿ ಬೆದರುತಿಹ ಮುನಿಪಾಲರ
ಭೀತಿಯಂ ಬಿಡಿಸೆಂದು ನಂದಿಯಂ ಕರೆದು ಗಣ
ಜಾತಕ್ಕೆ ಬೇಂಟೆಯಂ ಪೇಳೆಂದು ಹರನೆನಲ್
ಭೂತನಾಥನ ನೇಮದಿಂದೆ ನಂದೀಶ್ವರಂ ಪೊಯ್ಸಿದಂ ಡಂಗುರವನು ೧೦

ನಮ್ಮ ಕಷ್ಟವನ್ನು ಪರಿಹರಿಸು ಎಂದು ಬೇಡಿಕೊಳ್ಳಲು ನಾರದನು,–ಆ ಶಿವನ ಬಳಿಗೆ ಹೋಗಿ ನಿಮ್ಮ ಕಷ್ಟವನ್ನು ಹೋಗಲಾಡಿಸುತ್ತೇನೆ ಎಂದು ನಂಬಿಕೆ ಕೊಟ್ಟು ಈಶ್ವರನನ್ನು ನೋಡಿ ಕೊಂಡಾಡಿ ನಾರದನು ವಿಜ್ಞಾಪಿಸಿಕೊಂಡನು. ೯. ಶಿವನೆ ಪರಾಂಬರಿಸು, ಇಂದ್ರಕೀಲದಲ್ಲಿ ತಪಸ್ಸು ಮಾಡುತ್ತಿರುವ ಮನುಷ್ಯನು ಋಷಿಯಲ್ಲ. ಋಷಿಗೆ ಬಿಲ್ಲು-ಬಾಣ, ಕತ್ತಿ ಆಭರಣಗಳೇಕೆ ? ಆ ದುಷ್ಟ ತಪಸ್ವಿಯ ತಪೋಜ್ವಾಲೆ ಆವರಿಸಲು ಆ ಮುನಿಗಳ ಜಪ-ತಪ, ನಿತ್ಯಕರ್ಮ, ರಹಸ್ಯ ಮಂತ್ರಗಳು ಓಡಿಹೋದುವು. ಅವರು ಏನನ್ನುತಾನೆ ಮಾಡಲು ಸಾಧ್ಯ ಎಂದು ದೇವಮುನಿಯು ಶಿವನಿಗೆ ವಿಜ್ಞಾಪಿಸಿಕೊಳ್ಳಲು ಕೇಳಿ ಸಂಗತಿಯನ್ನು ತಿಳಿದು ನಸುನಗುತ್ತ ಶಿವನು ಹೀಗೆಂದನು. ೧೦. ಆತನು ನಮ್ಮ ಪರಮಭಕ್ತ. ಅವನಿಂದ ಋಷಿಗಳಿಗೆ ಯಾವ ತೊಂದರೆಯೂ ಇಲ್ಲ. ನಾವು ಈಗ ಬಂದು ಅವರಿಗೆ ಆ ತಪೋವನವನ್ನೇ ಕೊಡುತ್ತೇವೆ. ನೀನು ಹೋಗಿ ಹೆದರುತ್ತಿರುವ ಮುನಿಶ್ರೇಷ್ಠರ ಭೀತಿಯನ್ನು ಹೋಗಲಾಡಿಸು ಎಂದು ನಂದಿಯನ್ನು ಕರೆದು ಗಣಸಮೂಹಕ್ಕೆ ಬೇಟೆಯ ವಿಷಯವನ್ನು ತಿಳಿಸು ಎಂದು ಆಜ್ಞಾಪಿಸಿಲು ಶಿವನ

CC-0. Jangamwadi Math Collection. Digitized by eGangotri

ಕರದ ಬಲೆಗಳ ಕಾಲ ಕಣ್ಣಿಗಳ ಬಡಿಕೋಲ
ಹೊರಳಿಗಳ ಸೊಪ್ಪಿನುಡುಗೆಯ ಹಾಸುಗಳನಾಂತು
ಪರಿವ ಕುನ್ನಿಗಳ ಶಾಬರಗಣಂ ಬಿಡದೆ ಪೊರಮಟ್ಟುದಾಕ್ಷಣಮಭವನು
ವರಶಿರೋಮಾಲೆಯಂ ಕಳಚಿ ಚಲ್ಲಣಮನು
ಟ್ಟಿರದೆ ಗುಂಜಾಭರಣಮಂ ತೊಟ್ಟು ಲೀಲೆಯಿಂ
ಪಿರಿದೆನಿಪ ಶಾಬರವನನುಕರಿಸೆ ತದ್ರೂಪಿನಿಂದೆ ದೇವಿಯುರೆಸೆದರು ೧೧

ತೊಳಪ ಸುಲಿಪಲ್ಲ ಬಂದುಗೆವಾಯ ನಿರಿಗುರುಳ
ಪೊಳೆವಲರ್ಗಣ್ಣ ತೆಳ್ವಸುರ ನುಣ್ದೊಡೆಯ ಕೋ
ಮಲಕಾಯದಸಿಯ ನಡುವಿನ ಮುದ್ದುಮೊಗದ ನಳಿತೋಳ ಮೃದುಕರಚರಣದ
ಆಲಘುಜಘನದ ಕುಂಭಕುಚದ ಗಿಳಿನುಡಿಯ ಸ
ತ್ಕಲಹಂಸಗಮನದ ಸುನೀಲಕಾಂತಿಯ ಕಂಬು
ಗಳದ ನಾನಾ ಶಕ್ತಿಯರ್ ಪುಳಿಂದಿಯರಾಗಿಯುಮೆಯೊಡನೆ ನಡೆತಂದರು ೧೨

ವೇದಂಗಳುಂ ಪುರಾಣಂಗಳುಂ ಶಾಸ್ತ್ರಮುಂ
ಸಾದರದೊಳುಪನಿಷತ್ ಜಪ ತಪ ಸಮಾಧಿ ಮುಂ
ತಾದುವಾದುವು ಶುನಕ ನಿಡುಗೋಲ್ ಕವಣೆ ಖಡ್ಗಮತುಳಶರ ಜಾಲಂಗಳು

ಅಪ್ಪಣೆಯಂತೆ ನಂದಿಯು ಡಂಗೂರವನ್ನು ಹೊಡೆಸಿದನು. ೧೧. ಕೈಯಲ್ಲಿ ಹಿಡಿದಿದ್ದ ಬಲೆಗಳ, ಕಾಲಿನ ಹಗ್ಗಗಳ, ದೊಣ್ಣೆಯ ರಾಶಿಯ, ಸೊಪ್ಪಿನ ಉಡುಗೆಯ, ಹಾಸುಗಳನ್ನು ಹೊತ್ತು ನಡೆಯುವ, ನಾಯಿಗಳಿಂದ ಕೂಡಿದ ಬೇಡರಗಣ ಕೂಡಲೆ ಹೊರಟಿತು· ಆಕ್ಷಣ ಶಿವನು ಶ್ರೇಷ್ಠವಾದ ರುಂಡಮಾಲೆಯನ್ನು ತೆಗೆದು, ಚಲ್ಲಣವನ್ನು ಉಟ್ಟು, ಗುಂಜಾಭರಣವನ್ನು ತೊಟ್ಟುಕೊಂಡು ಲೀಲೆಯಿಂದ ದೊಡ್ಡದಾದ ಬೇಡರ ರೂಪವನ್ನು ಅನುಕರಿಸಲು ಆ ರೂಪದಿಂದಲೇ ಅವನ ಹೆಂಡತಿಯೂ ಪ್ರಕಾಶಿಸಿದಳು. ೧೨. ಹೊಳೆಯುವ ಬಿಳಿದಾದ ಹಲ್ಲಿನ, ದಾಸವಾಳದ ಹೂವಿನಂತಹ ಬಾಯಿಯ, ಗುಂಗುರು ಕೂದಲಿನ, ಹೊಳೆಯುವ ಹೂವಿನಂತಹ ಕಣ್ಣಿನ, ತೆಳುವಾದ ಹೊಟ್ಟೆಯ, ನುಣುಪಾದ ತೊಡೆಯ, ಕೋಮಲ ಶರೀರದ, ಸಣ್ಣನಡುವಿನ, ಮುದ್ದು ಮುಖದ, ಕೋಮಲವಾದ ಲತೆಯಂತೆ ಬಾಗಿದ ತೋಳಿನ, ಮೃದುವಾದ ಕೈಕಾಲಿನ, ದೊಡ್ಡ ಜಘನದ, ಗಡಿಗೆ ಮೊಲೆಯ, ಗಿಳಿಯಂತಹ ಮಾತಿನ, ಶ್ರೇಷ್ಠವಾದ ರಾಜಹಂಸದ ನಡಿಗೆಯ, ಮನೋಹರವಾದ ನೀಲಕಾಂತಿಯ, ಶಂಖದಂತಿರುವ ಕುತ್ತಿಗೆಯ ನಾನಾ ಶಕ್ತಿ ದೇವತೆಯರು ಬೇಡತಿಯರಾಗಿ ಪಾರ್ವತಿಯೊಡನೆ ಹೊರಟುಬಂದರು. ೧೩. ವೇದಗಳು, ಪುರಾಣಗಳು, ಶಾಸ್ತ್ರಗಳು, ಆದರದಿಂದ ಉಪನಿಷತ್, ಜಪ–ತಪ-ಸಮಾಧಿ ಮುಂತಾದುವು, ನಾಯಿ, ಉದ್ದವಾದ ಕೋಲು, ಕವಣೆ, ಕತ್ತಿ, ಲೆಕ್ಕವಿಲ್ಲದಷ್ಟು ಬಾಣಗಳ ಸಮೂಹಗಳಾದುವು.

CC-0. Jangamwadi Math Collection. Digitized by eGangotri

ಆ ದಿವಿಜಪ್ರಮಥಗಣವೇ ಶಬರರೂಪಾಗಿ
ಮಾದೇವನಂ ಪೊರ್ದಿದುದು ಸಕಲಭುವನಜನ
ವೀ ದಯಾಂಬುಧಿಯ ಲೀಲಾವಿನೋದವನೀಕ್ಷಿಪುತ್ಸುಕದೊಳೈತಂದುದು ೧೩

ತೆರಳಿದಂ ಹರನಿಂದ್ರಕೀಲಪರ್ವತಕಾಗಿ
ಮೊರೆವ ನಾನಾ ವಾದ್ಯರಭಸದಿಂ ಬರಬರ
ಲ್ಕುರಗಭೂಷಣವಾಗಿ ಹರನಂತೆ ಪಂಚಾಸ್ಯಯುಕ್ತದೆ ನೃಸಿಂಹನಂತೆ
ಹರಿವಿಲಾಸದಿನಂಬುನಿಧಿಯಂತೆ ಸಂತತಂ
ವರಪುಂಡರೀಕವಿಲಸಿತವಾಗಿ ಕೊಳನಂತೆ
ಪರಿಶೋಭಿಸಿತ್ತು ಕಾಂತಾರಂ ಮಹಾತಿಮಿರಘೋರಮಾ ಹರನಿದಿರೊಳು ೧೪

ನಾಗಪೂಗಂಗಳಿಂ ವಾಜಿರಾಜಿಗಳೊಳಿಂ
ಬಾಗಿರ್ದ ಸ್ಯಂದನೋದ್ರುಮಗಳಿಂದೆಸೆವ ಖ
ಡ್ಗಿಗಣದಿನವಗಡಿಪ ಭಲ್ಲನಿಕುರುಂಬದಿಂ ಕದಳಿಗಳ ಗಡಣದಿಂದೆ
ಮೇಗೆಸೆವ ಧನ್ವೀಕದಂಬದಿಂ ಕಡುರಯ್ಯ
ಮಾಗೇಳ್ವ ಪುಂಡರೀಕಾಳಿಯಿಂ ಶರಕುಲದೊ
ಳಾ ಗಿರೀಂದ್ರನ ಮಹಾಸೈನ್ಯಮೆನೆ ಬಳಸಿರ್ದ ಕಾನನಂ ಕಣ್ಗೆಸೆದುದು ೧೫

ಆ ದೇವಪ್ರಮಥಗಣಗಳೇ ಬೇಡರಾಗಿ ಶಿವನನ್ನು ಸೇರಿದುವು. ಎಲ್ಲ ಲೋಕದ ಜನರೂ ಈ ದಯಾಂಬುಧಿಯಾದ ಶಿವನ ಲೀಲಾವಿನೋದವನ್ನು ನೋಡುವ ಉತ್ಸಾಹದಿಂದ ಬಂದಿತು. ೧೪. ಶಿವನು ಇಂದ್ರಕೀಲಪರ್ವತದ ಕಡೆಗೆ ಹೊರಟನು. ಮೊರೆಯುವ ನಾನಾ ವಾದ್ಯರಭಸದಿಂದ ಬರುತ್ತಿರಲು ಶಿವನಂತೆ ಸರ್ಪದಿಂದ ಕೂಡಿ, ನರಸಿಂಹನಂತೆ ಪಂಚಾಸ್ಯಯುಕ್ತ (ಸಿಂಹಾಂಶ), ಸಮುದ್ರದಂತೆ ವಿಷ್ಣುವಿನ ವಿಲಾಸದಿಂದಲೂ ಮತ್ತು ಸಿಂಹ, ಕಪಿ ಮೊದಲಾದವುಗಳಿಂದಲೂ, ಕೊಳದಂತೆ ಕಮಲದಿಂದ ಕಂಗೊಳಿಸುವುದೂ ಮತ್ತು ಹುಲಿಯಿಂದ ಯುಕ್ತವೂ, ಕತ್ತಲೆಯಿಂದ ತುಂಬಿ ಘೋರವಾದ ಅರಣ್ಯವು ಶಿವನ ಎದುರಿನಲ್ಲಿ ಶೋಭಿಸುತ್ತಿತ್ತು. ೧೫. ಆ ಕಾಡು—ಆನೆಗಳ ಹಿಂಡುಗಳಿಂದಲೂ, ಪಕ್ಷಿ ಕುದುರೆಗಳ ಸಮೂಹದಿಂದಲೂ, ರಥ ಮತ್ತು ಹೊಳೆಗಳಿಂದ ಮತ್ತು ಮರಗಳಿಂದ (ರಥದ ಮೂಕೀ ಮರಗಳು ?), ಖಡ್ಗಧಾರಿಗಳಿಂದಲೂ ಖಡ್ಗ ಮೃಗಗಳಿಂದಲೂ ಹೆದರಿಸುವ ಒಂದು ರೀತಿಯ ಕರಡಿಗಳು ಮತ್ತು ಈಟಿಗಳ ಸಮೂಹದಿಂದ, ಜಿಂಕೆಗಳು ಮತ್ತು ಧ್ವಜಗಳ ಗುಂಪಿನಿಂದ, ಪ್ರಕಾಶಿಸುವ ಧನುರ್ಧಾರಿಗಳು ಮತ್ತು ಬಂಜರುಭೂಮಿಯ ಪ್ರದೇಶಗಳಿಂದಲೂ, ಬಿಳಿಯ ಕೊಡೆಗಳು ಮತ್ತು ಹುಲಿಗಳಿಂದಲೂ, ಬಾಣಸಂಘಾತ ಮತ್ತು ದರ್ಭೆಯ ಹುಲ್ಲಿನಿಂದಲೂ ಆವರಿಸಿ ಆ ಪರ್ವತ

CC-0. Jangamwadi Math Collection. Digitized by eGangotri

ಮಾತಂಗಯುತವಾಗಿ ಸದ್ವಂಶಹರವಲ್ತು
ಜಾತಿಸಂಕರವಾಗಿ ದ್ವಿಜಕುಲರಹಿತವಲ್ತು
ಖಾತಂ ಸದಾಪುಷ್ಪಿತಾಸಂಗಿಯಾಗಿ ಮತ್ತಪವಿತ್ರ ದೇಹಮಲ್ತು
ಪ್ರೀತಿ ಮಿಗೆ ಮದನವಿಜಯಾವೃದ್ಧಿಕರವಾಗಿ
ವೀತರಾಗಸ್ಥಾಣುದೂರರಮ್ಯಕಮಲ್ತು
ಮಾತೇಂ ಕಬಂಧಾಂಕವಾಗಿ ಶಿಖಿಮುಖದೂರಮಲ್ತೆನಿಸಿ ವನಮೆಸೆದುದು ೧೬

ಅಮೃತಾಶ್ರಯಂ ಮಹಾವಜ್ರಿಗೇಹಂ ನಾಡೆ
ಯಮರೀನಿವಾಸಮುಂ ಹರಿಚಂದನಾಲಯಂ
ಸುಮನೋಗೃಹಂ ನೆಗಳ್ದಿಂದ್ರಾಣಿಸದ್ಮಮದರಿಂದೆ ಭೂಸ್ವರ್ಗವೆನಿಸಿ
ಅಮಿತಶಿವಗಣಶರಣಮೀಶ್ವರಿಯ ಬೀಡು ಸಂ
ಭ್ರಮಿತಗಜಮುಖವಾಸಮಾ ಶರಭನಿಳಯಮಿ
ಕ್ರಮಯುತಂ ನಂದಿಭೃಂಗೀವಿನೋದದೊಳೆ ಕೈಲಾಸಮೆನೆ ವನಮೆಸೆದುದು ೧೭

ರಾಜನ ದೊಡ್ಡ ಸೈನ್ಯವೆನ್ನುವಂತೆ ಕಣ್ಣಿಗೆ ಕಾಣಿಸಿತು. ೧೬. ಆ ವನವು ಹೊಲೆಯರಿಂದ ಕೂಡಿದ್ದರೂ ಸತ್ಕುಲವಿನಾಶಕವಲ್ಲ—ಆನೆಗಳಿಂದ ಕೂಡಿದ್ದೂ ಒಳ್ಳೆಯ ಬಿದಿರುಗಳಿಗೆ ವಿನಾಶಕವಾಗಿರಲಿಲ್ಲ. ಜಾತಿಸಾಂಕರ್ಯವಿದ್ದರೂ ಬ್ರಾಹ್ಮಣವಂಶರಹಿತವಾಗಿರಲಿಲ್ಲ—ಪ್ರಾಣಿಸಂಕೀರ್ಣವಾಗಿದ್ದೂ ಪಕ್ಷಿರಹಿತವಾಗಿರಲಿಲ್ಲ. ಅಲ್ಲಿರುವ ನೀರಿನ ಹೊಂಡವು ಯಾವಾಗಲೂ ರಜಸ್ವಲಾಸಕ್ತವಾದರೂ ಅಪವಿತ್ರ ದೇಹವಲ್ಲ-ಸದಾ ಪುಷ್ಪಿತ ಲತೆಗಳಿಂದ ಕೂಡಿದ್ದೂ ದರ್ಭೆರಹಿತವಾದ ಪ್ರದೇಶವುಳ್ಳದ್ದಲ್ಲ. ಪ್ರೀತಿಯುಂಟುಮಾಡತಕ್ಕದ್ದೂ ಮನ್ಮಥವಿಜಯವನ್ನು ಹೆಚ್ಚಿಸುವುದೂ ಆಗಿದ್ದದ್ದಾದರೂ ಶಿವನಿಂದ ರಹಿತವಾಗಿ ರಮ್ಯವಾಗಿರಲಿಲ್ಲ—ಉಮ್ಮತ್ತಿ ಗಿಡ ಮತ್ತು ಪಕ್ಷಿಗಳ ಜಯ ಇವುಗಳಿಗೆ ವೃದ್ಧಿಕರವಾಗಿದ್ದೂ ವೀತರಾಗನಾದ ಶಿವನಿಂದ ರಹಿತವಾದದ್ದಲ್ಲ—(ಶಿವನು ಅಲ್ಲಿಗೆ ಬಂದುದರಿಂದ) ಜಲಯುಕ್ತವಾಗಿದ್ದರೂ ಅಗ್ನಿಸಾಮೀಪ್ಯದಿಂದ ದೂರವಾದದ್ದಲ್ಲ—ಜಲಸಹಿತವಾಗಿದ್ದು ನವಿಲು ಮೊದಲಾದವುಗಳಿಂದ ಕೂಡಿತ್ತು. ಹೀಗೆ ವನವು ಶೋಭಿಸಿತು. ೧೭. ಅಮೃತ (ನೀರು) ಕ್ಕೆ ಆಶ್ರಯಸ್ಥಾನ, ಇಂದ್ರ (ಎಲೆಗಳ್ಳಿ) ನ ಮನೆ ಅಧಿಕವಾದ ದೇವತಾಸ್ತ್ರೀ (ಅಮರಿ ಮರ) ಯರ ನಿವಾಸ, ದೇವಲೋಕದ ಐದು ಮರಗಳಲ್ಲಿ ಒಂದರ (ಶ್ರೀಗಂಧದ) ಆಲಯ, ದೇವತೆಗಳ (ಹೂಗಳ) ಮನೆ, ಪ್ರಖ್ಯಾತಳಾದ ಶಚಿಯ (ಲಕ್ಕಿಗಿಡ) ಆಶ್ರಯಸ್ಥಾನ. ಆದರಿಂದ ಭೂಲೋಕದ ಸ್ವರ್ಗವೆನಿಸಿ ಹೆಚ್ಚಾದ ಶಿವಗಣ (ನರಿ, ಹಾವು, ಗಿಳಿ, ನೆಲ್ಲಿಗಿಡ), ವಟವೃಕ್ಷಕ್ಕಾಶ್ರಯ, ಪಾರ್ವತಿಯ (ಈಶ್ವರಿ ಬಳ್ಳಿ) ಬೀಡು, ಸಂಭ್ರಮದಿಂದಿರುವ ಗಣೇಶ (ಶ್ರೇಷ್ಠ ಆನೆ)ನ ವಾಸಸ್ಥಾನ. ಆ ಶರಭಮೃಗದ ಮನೆ ಪರಾಕ್ರಮದಿಂದ ಕೂಡಿದ್ದು (ವಿಶಾಲ), ನಂದಿ (ನಂದಿಪುರ), ಭೃಂಗಿ (ಹೆಣ್ಣು

CC-0. Jangamwadi Math Collection. Digitized by eGangotri

ಆಲಮಾ ಬಸುರಿ ದಿಂಡಂ ತಂಡಸಂ ನೆಲ್ಲಿ
ಜಾಲಮಾ ಹೊನ್ನರಳಿಯತ್ತಿಯರನೆಲ್ಲಿಯಾ
ಬೇಲವರನೇರಿಲಾಮ್ರಂ ಹುಣಿಸೆ ತದಕು ತುಂಬುರು ಬೆಳಲ್ ಬೆಲ್ಲವತ್ತ
ಪಾಲಾಶಮರಟಾಳಮಾ ತಡಸು ಕಕ್ಕೆಯಂ
ಕೋಲೆ ತರೆಯುಂ ಹಲಸು ಹೇಸವಂ ಬಿಳಿಲ್ಬದರಿ
ಸಾಲಮಾ ಹೊನ್ನೆ ಚೆನ್ನಂಗಿ ಮೊದಲಾದ ವೃಕ್ಷಂಗಳಿಂ ವನಮೆಸೆದುದು ೧೮

ಕರಿಯಂತೆ ಕೊಳದಂತೆ ಹರಿಯಂತೆ ಪುರದಂತೆ
ಸರಸಿರುಹಭವನಂತೆ ಸುರಕುಲೇಶ್ವರನಂತೆ
ಪರಮಪುಷ್ಕರ ಪುಂಡರೀಕ ಶಿಖಿ ಕನ್ಯಕಾ ಗೋ ವಜ್ರಯುಕ್ತಮಾಗಿ
ಹರನಂತೆ ಮಖದಂತೆ ಗುಹನಂತೆ ರಣದಂತೆ
ಗಿರಿಜಾತೆಯಂತೆ ಮಿಗೆ ಹಂಸ ಸದ್ವಿಜ ಕೇಕಿ
ಶರ ಸಿಂಹಯುತಮಾಗಿ ಕಾನನಂ ಬಹಳರೌದ್ರಾನನಂ ಕಣ್ಗೆಸೆದುದು ೧೯

ತರಣಿಕಿರಣಾಭೇದ್ಯಕುಜಮಯಂ ಗಜಮಯಂ
ಪರಿವಿಡಿಯೊಳೆಸೆವ ಕೇಸರಿಮಯಂ ಹರಿಮಯಂ
ಪರಿಪೂರ್ಣವಾರಿಕಾಸರಮಯಂ ಸರಮಯಂ ನಾನಾ ತೃಣಾವಳಿಮಯಂ
ಧರಣಿತಳಮಿಳಿತಕಂಟಕಮಯಂ ಶುಕಮಯಂ
ಪರಿಪರಿಯ ನೆರೆದ ಸನ್ಮೃಗಮಯಂ ಖಗಮಯಂ
ಗಿರಿಯಿಂದೆ ಸೋರ್ವ ನಿರ್ಝರಮಯಂ ಶರಮಯಂ ತಾನೆನಿಸಿ ವನಮೆಸೆದುದು ೨೦

ದುಂಬಿ) ಇವುಗಳ ವಿನೋದದಲ್ಲಿ ಕೈಲಾಸವೆನ್ನುವಂತೆ ಕಾಡು ಕಂಡಿತು. ೧೮. ಆಲದ ಮರ, ಬಸರಿಮರ, ದಿಂಡಿಗದಮರ, ತಂಡಸದಮರ, ನೆಲ್ಲಿಗಿಡ, ಜಾಲಿಗಿಡ, ಹೊನ್ನೆ, ಆರಳಿ, ಅತ್ತಿ, ಅರನೆಲ್ಲಿ, ಬೇಲ, ಅರನೇರಿಳೆ, ಮಾವು, ಹುಣಿಸೆ, ತದಕೆಮರ, ತೂಬರೆಮರ, ಬೆಳವಲಮರ, ಬಿಲ್ಪತ್ರೆ, ಮುತ್ತುಗ, ಅರಟಾಳ, ತಡಸು, ಕಕ್ಕೆ, ಕೋಲೆ, ಹಿಪ್ಪಲಿ, ಹೇಸವ, ಬಿಳಲು, ಬದರಿ, ಸಾಲವೃಕ್ಷ, ಹೊನ್ನೆ, ಚೆನ್ನಂಗಿ ಮೊದಲಾದ ಮರಗಳಿಂದ ಕಾಡು ತುಂಬಿದ್ದಿತು. ೧೯. ಆನೆಯಂತೆ ಸೊಂಡಿಲು (ಕಮಲ), ಕೊಳದಂತೆ ಬೆಳ್ದಾವರೆ (ಹುಲಿ), ಸೂರ್ಯನಂತೆ ಬೆಂಕಿ (ನವಿಲು, ಕೃಷ್ಣಸರ್ಪ, ಮರ), ಪಟ್ಟಣದಂತೆ ಕನ್ನಿಕೆ (ಕನ್ನೆಗಿಡ), ಬ್ರಹ್ಮನಂತೆ ಸರಸ್ವತಿ (ಪಶು), ಇಂದ್ರನಂತೆ ವಜ್ರಾಯುಧ (ಕಳಿಣತೆ) ಯಿಂದ ಕೂಡಿ; ಶಿವನಂತೆ ಚಂದ್ರ (ಪಕ್ಷಿವಿಶೇಷ), ಯಜ್ಞದಂತೆ ಬ್ರಾಹ್ಮಣ (ಪಕ್ಷಿ, ಸರ್ಪ), ಷಣ್ಮುಖನಂತೆ ನವಿಲು (ನವಿಲು), ಯುದ್ಧದಂತೆ ಬಾಣ (ಹುಲ್ಲು), ಪಾರ್ವತಿಯಂತೆ ಸಿಂಹದಿಂದ (ಸಿಂಹ) ಕೂಡಿ ಬಹಳ ಭಯಂಕರವಾದ ಕಾಡು ಕಂಗೊಳಿಸಿತು. ೨೦. ಸೂರ್ಯನ ಕಿರಣಗಳಿಂದಲೂ ಭೇದಿಸಲಾಧ್ಯವಾದಂತಹ ಮರಗಳೂ, ಆನೆಗಳೂ, ಅನುಕ್ರಮವಾಗಿ ತುಂಬಿದ್ದ ಸಿಂಹಗಳೂ, ಕೋತಿಗಳೂ (ಸರ್ಪಗಳು), ನೀರಿನಿಂದ ತುಂಬಿದ್ದ ಸರೋವರಗಳೂ, ನಾನಾ ವಿಧವಾದ ಧ್ವನಿಗಳೂ, ನಾನಾ ರೀತಿಯ ಹುಲ್ಲಿನ ಸಮೂಹಗಳೂ, ನೆಲದಲ್ಲಿ ತುಂಬಿರುವ ಮುಳ್ಳುಗಿಡಗಳೂ, ಗಿಳಿಗಳೂ, ನಾನಾ ರೀತಿಯಲ್ಲಿ

CC-0. Jangamwadi Math Collection. Digitized by eGangotri

ಸರಳ್ಗಳಂ ತಿದ್ದಿ ಗರಿಗಟ್ಟುತುಂ ಬಿಲ್ಗಳಂ
ಹೆರೆದು ಹೆದೆಯಂ ಹೂಡುತುಂ ಕಲ್ಲಿಬಲೆಗಳಂ
ಸರಗೊಳಿಸುತುಂ ಹಾಸಮಂ ಪಸಂಗೆಯ್ವುತುಂ ನಾಯ್ಗಳಂ ಮೆಯ್ದಡವುತೆ
ಪೊರೆವ ದೀಹದ ಮಿಗಂಗಳ್ಗೆ ಮೇಹಂ ನೀಡಿ
ಕರೆದು ಬೇಂಟೆಗಳನುರೆ ಕಲಿಸುತುಂ ತಂತಮ್ಮ
ಪರಿವಿಡಿಯ ಜಾತಿವಿದ್ಯಂಗಳಿಂದೆಸೆವ ಲುಬ್ಧಾಶ್ರಯದೆ ವನಮೆಸೆದುದು ೨೧

ತಲೆನವಿರ್ ಜುಂಜುಳ್ಳಿಗಡ್ಡ ಕೆಮ್ಮೀಸೆ ಕ
ಣ್ಗಳ ಪಸುರ್ ಕೀನಿವಲ್ಲುಗಳ ಕಾರೊಡಲ ಜೋ
ಲ್ದಿಳಿವ ಬಸುರಿನ ಕೂನ ಬೆನ್ನ ಕುಗ್ಗಿದ ಕೊರಲ ಬೀಟೆಗಾಲ್ ಜಗ್ಗುನಡೆಯ
ಬಲೆ ಕಲ್ಲಿ ಕುಬ್ಬಿಗಳ ಪೊತ್ತ ಹೆಗಲಿನ ದಡ್ಡು
ಗಳ ಪಿಡಿದ ಬಲಕೋಲ ಕುಕ್ಕುರಂಗಳ ಕೆಯ್ಯೊ
ಳಳವಟ್ಟ ಗಿಡುಗ ಲಗುಡಗಳೆಸೆಯಲಲ್ಲಿ ವನಚರರಿಂದೆ ವನಮೆಸೆದುದು ೨೨

ವನಗಜದ ಮೌಕ್ತಿಕದ ತೊಡಗಳಂ ತೊಟ್ಟು ಮಾ
ವಿನ ತಳಿರನುಟ್ಟು ದಂತದ ಬಳೆಯನಿಟ್ಟು ಪೂ
ವಿನ ಪಚ್ಚೆಗಳೊಳಲಂಕರಿಸಿ ಪೊಸದಂತದೋಲೆಗಳ ಕಿವಿಗಳೊಳವರ್ಚಿಸಿ

ತುಂಬಿದ್ದ ಸಾಧುಪ್ರಾಣಿಗಳೂ-ಪಕ್ಷಿಗಳೂ, ಬೆಟ್ಟಗಳಿಂದ ಹರಿದುಬರುವ ಝರಿಗಳೂ ಒಂದು ಜಾತಿಯ ಹುಲ್ಲಿನ ಮಯವೆನ್ನಿಸಿ ಕಾಡು ಕಂಗೊಳಿಸಿತು. ೨೧. ಬಾಣಗಳನ್ನು ಚೂಪುಗೊಳಿಸಿ ಅದರ ಹಿಂಭಾಗಕ್ಕೆ ಗರಿಯನ್ನು ಕಟ್ಟುತ್ತ, ಬಿಲ್ಲುಗಳನ್ನು ಹೆರೆದು ಅದಕ್ಕೆ ಹೆದೆಯನ್ನು ಹೂಡುತ್ತ, ಕಲ್ಲಿಬಲೆಗಳನ್ನು ಶಬ್ದ ಮಾಡುತ್ತ, ನಾಯಿಯ ಕೊರಳಪಟ್ಟಿ ಹಗ್ಗಗಳನ್ನು ಹಸನು ಮಾಡುತ್ತ, ನಾಯಿಗಳ ಮೈದಡವುತ್ತ, ಬೇಟೆಯನ್ನು ಆಕರ್ಷಿಸಲು ಬಳಸುವ ಪ್ರಾಣಿಗಳು ಸಮೀಪಿಸಲು ಅವುಗಳಿಗೆ ಮೇವನ್ನು ಕೊಟ್ಟು ಕರೆದು ಬೇಟೆಗಳನ್ನು ಚೆನ್ನಾಗಿ ಕಲಿಸುತ್ತ ತಮತಮಗೆ ಅನುಕ್ರಮವಾದ ಜಾತಿವಿದ್ಯೆಗಳಿಂದ ಕೂಡಿದ್ದ ಬೇಟೆಗಾರರಿಂದ ಕಾಡು ತುಂಬಿತ್ತು. ೨೨. ತಲೆಗೂದಲಿನ, ಗಿಡ್ಡದಾದ, ಸುರುಳಿಯಾದ ಗಡ್ಡದ, ಕೆಂಪು ಮೀಸೆಯ, ಕಣ್ಣಲ್ಲಿನ ಪಿಸುರ, ಕಿಸಿದ ಹಲ್ಲಿನ, ಕಪ್ಪು ಶರೀರದ, ಜೋತು ಇಳಿದ ಹೊಟ್ಟೆಯ, ಗೂನುಬೆನ್ನಿನ, ಕುಗ್ಗಿದ ಕೊರಳಿನ, ಕಿಸಿದ ಕಾಲಿನ, ಜಗ್ಗು ಹಾಕಿದ ನಡಿಗೆಯ, ಬಲೆ, ಚೀಲ, ಬತ್ತಳಿಕೆಯನ್ನು ಹೊತ್ತು ಜಡ್ಡುಗಟ್ಟಿರುವ ಹೆಗಲಿನ, ಬಲೆ, ಮುಖವಾಡ, ನಾಯಿಗಳ ಕೈಯಲ್ಲಿ ಹಿಡಿದ ಗಿಡುಗ ? ದೊಣ್ಣೆಗಳು ಕಾಣುತ್ತಿರಲು ಬೇಟೆಗಾರರಿಂದ ಕಾಡು ಕಂಗೊಳಿಸಿತು. ೨೩. ಕಾಡಾನೆಯ ಕುಂಭಸ್ಥಳದ ಮುತ್ತಿನ ಆಭರಣಗಳನ್ನು ತೊಟ್ಟು, ಮಾವಿನ ಚಿಗುರನ್ನು ಉಟ್ಟು, ದಂತದ ಬಳೆಯನ್ನಿಟ್ಟು, ಹೂವಿನ ಹಚ್ಚೆಗಳಲ್ಲಿ ಅಲಂಕರಿಸಿಕೊಂಡು, ಹೊಸದಾದ ದಂತದ ಓಲೆ

CC-0. Jangamwadi Math Collection. Digitized by eGangotri

ವಿನುತಚಂದನದ ಮರದೊರಳ್ಗಳೊಳ್ ಬಿದಿರಕ್ಕಿ
ಯನೆ ಪೊಯ್ದು ಬಳಿಕಲುನ್ನತದಂತಿದಂತಂಗ
ಳೊನಕೆಯಿಂ ಪಿಡಿದು ತಳಿಸುತೆ ಪಾಡುತಿರ್ಪ ವನಚರಿಯರಿಂ ವನಮೆಸೆದುದು ೨೩

ಪರಿವಿಡಿಯೊಳಿಂತೆಸೆವ ವನಮನುರೆ ನೋಡಿಯುಂ
ದಿರದೆ ಬೆಳ್ಳಾರವಲೆ ತಡಿಕೆವಲೆ ಸಿಡಿವಲೆಯು
ಕರದೊಳಾಂತಾಗಲಾ ಹರಗಣಂ ಸುರಗಣಂ ಶಾಬರಗಣಂಗಳಂತೆ
ಕರಿ ಸಿಂಹ ಶರಭ ಶಾರ್ದೂಲ ಭೇರುಂಡಾದಿ
ಪರಿಪರಿಯೊಳೊಪ್ಪುವ ಮೃಗಂಗಳಂ ಪಾರಿವಂ
ಪುರುಳಿ ಲಾವುಗೆ ಗುಬ್ಬಿ ಮುಂತಾದ ಖಗಕುಲವನರಸುತ್ತೈತರುತಿರ್ದರು ೨೪

ವರಶರಭ ಶಾರ್ದೂಲ ಸಿಂಹಾದಿ ಮೃಗಕುಲಂ
ಪುರುಳಿ ಲಾವುಗೆ ಪಿಕಂ ಮುಂತಾದ ಖಗಕುಲಂ
ಪಿರಿದಾಗಿ ತೋರ್ಪ ಮಾಮರ ನೆಲ್ಲಿ ಕದವು ತಂಡಸ ಜಾಲ ಬೇಲಂಗಳು
ಪರಿಶೋಭಿಸುವ ಮಹಾರಣ್ಯಮಂ ಪೊಕ್ಕುಮುಂ
ತಿರದೆ ಬೆಳ್ಳಾರವಲೆ ತಡಿಕೆವಲೆ ಸಿಡಿವಲೆಯು
ಕರದೊಳಾಂತೆಸೆವ ಶಾಬರಗಣಂ ಸುರಗಣಂ ನೋಡಿ ಬೆರಗಾಗುತಿರಲು ೨೫

ಗಳನ್ನು ಕಿವಿಗಳಲ್ಲಿ ಹಾಕಿಕೊಂಡು, ಶ್ರೇಷ್ಠವಾದ ಗಂಧದ ಮರದ ಒರಳುಗಳಲ್ಲಿ ಬಿದಿರಿನ ಅಕ್ಕಿಯನ್ನು ಸುರಿದು ಆನಂತರ ಎತ್ತರವಾದ ಆನೆಗಳ ದಂತಗಳಿಂದ ಮಾಡಿದ ಒನಕೆ ಗಳನ್ನು ಹಿಡಿದು ಕುಟ್ಟುತ್ತ ಹಾಡುತ್ತಿರುವ ಬೇಡತಿಯರಿಂದ ಕಾಡು ರಂಜಿಸಿತು. ೨೪. ಕ್ರಮವಾಗಿ ಈ ರೀತಿಯಲಿ ಪ್ರಕಾಶಿಸುವ ಕಾಡನ್ನು ಚೆನ್ನಾಗಿ ನೋಡಿ ತಡೆಯಲಾರದೆ ಆದಿನ ಬಗ್ಗದ ಬಲೆ, ತಡಿಕೆವಲೆ, ಬೀಸುಬಲೆಗಳನ್ನು ಕೈಯಲ್ಲಿ ಹಿಡಿದು, ಆಗ ಹರಗಣ, ದೇವಗಣಗಳು ಬೇಡರ ಸಮೂಹದಂತೆ ಆನೆ, ಸಿಂಹ, ಶಾರ್ದೂಲ, ಭೇರುಂಡ ಮೊದಲಾದ ನಾನಾ ವಿಧದ ಮೃಗಗಳನ್ನು, ಪಾರಿವಾಳ, ಹೆಣ್ಣುಗಿಳಿ, ಲಾವುಗೆ, ಗುಬ್ಬಿ ಮುಂತಾದ ಪಕ್ಷಿಗಳ ಸಮೂಹವನ್ನು ಹುಡುಕುತ್ತ ಬರುತ್ತಿದ್ದರು. ೨೫. ಶ್ರೇಷ್ಠವಾದ ಶರಭ, ಶಾರ್ದೂಲ, ಸಿಂಹ ಮೊದಲಾದ ಪ್ರಾಣಿಸಂಕುಲ, ಗಿಳಿಯಮರಿ, ಲಾವುಗೆ, ಕೋಗಿಲೆ ಮುಂತಾದ ಪಕ್ಷಿಸಮೂಹ, ದೊಡ್ಡದಾಗಿ ಕಾಣುವ ಮಾವಿನಮರ, ನೆಲ್ಲಿಗಿಡ, ತಾಳೆ ಮರ (?), ತಂಡಸದಮರ, ಜಾಲಿ-ಬೇಲದ ಮರಗಳಿಂದ ಶೋಭಿಸುವ ದೊಡ್ಡ ಅರಣ್ಯ ವನ್ನು ಹೊಕ್ಕು, ಹಗ್ಗದಬಲೆ, ಚೌಕಟ್ಟಿನ ಜಾಳಿಗೆ, ಬೀಸುಬಲೆಗಳನ್ನು ಕೈಯಲ್ಲಿ ಹಿಡಿದು ಬೀಸುವ ಬೇಡರ ಸಮೂಹವು, ದೇವಗಣ ನೋಡಿ ಬೆರಗಾಗುತ್ತಿರಲು,

CC-0. Jangamwadi Math Collection. Digitized by eGangotri

ಇದೆ ಪಾವುಗಡಿದ ಸಾರಂಗಮೈದಿದ ಠಾಣ
ವಿದೆಕೊ ಸಾರಂಗಮಂ ಪುಲಿ ಕೊಂದ ಠಾಣವಿ
ಲ್ಲಿದೆ ಪುಲಿಯನೊಡೆಬಡಿದು ಕರಿ ಪೋದ ತಾಣವಿದೆ ಕರಿಯ ಹರಿ ಸೀಳ್ದ ಠಾವು
ಇದೆ ಹರಿಯ ಶರಭನುರೆ ಚಂಚುವಿಂ ಸೀಳ್ದ ಬಳಿ
ಯಿದೆ ಶರಭನಂ ಸವರಿ ಭೇರುಂಡನಡಿಯಿಟ್ಟ
ಪದದ ಕುರುಪೆಂದು ತಮತಮಗೆ ಸನ್ನೆಗಳಿಂದೆ ಶಬರರರಸುತ್ತಿರ್ದರು ೨೬

ಕೆಡಪು ಸಾರಂಗಮಂ ಸಿಂಗಮಂ ಪೊಯ್ ತಲೆಯ
ನೊಡೆ ಗಜದ ಪುಲಿಯನೆಬ್ಬಟ್ಟು ಪಂದಿಯನಿಟ್ಟು
ಮಡಿಪು ಖಡ್ಗಿಯ ಖಡ್ಗದಿಂದೆ ಮರ್ದಿಸು ಮರೆಯ ಪೊರೆಯಂ ತುಡುಂಕು
ಕಡಿ ನರಿಯನರಿ ಹರಿಯನಿಡು ಮೊಲನನುಡುಗಳಂ
ಬಡಿ ಚಮರಿವಾಲಮಂ ಪಿಡಿ ತಡೆಯದಡಿಯಿಡೆಂ
ದೊಡನೊಡನೆ ಗುಡುಗುಡಿಸಿ ಝಡಿತೆಯಿಂದುರುಬಿದರ್ ಬಿಡದೆ ಮಾಯಾಶಬರರು ೨೭

ಉದ್ಧರುಟುತನದಿಂದೆ ಬಲೆಯೊಳಗೆ ಬಿದ್ದು ಬಿ
ದ್ದೊದ್ದುಕೊಂಡುವು ಕೆಲವು ಶಿವಭಟರ ಗಾವಳಿಗೆ
ಮುದ್ದಾಡಿಸುವ ಮರಿಗಳಂ ಬಿಟ್ಟು ಕೊಟ್ಟೋಡಿದುವು ಕೆಲವು ಕಂಡಕಡೆಗೆ
ಉದ್ದಳಿತ ಬಾಣದಿಂ ತಂತಮ್ಮ ಹರಣಮಂ
ತಿದ್ದಿದುವು ಕೆಲವಿಂತು ಮಾಯಾಪುಳಿಂದತತಿ
ಮುದ್ದರೆದುದಖಿಳಮೃಗಸಂತತಿಗೆ ಪೇಳಲೇನದ್ಭುತವನಾ ವನದೊಳು ೨೮

೨೬. ಇದೇ ಹಾವಿನಿಂದ ಕಚ್ಚಿಸಿಕೊಂಡ ಗಂಡುಜಿಂಕೆ ಹೋದ ಜಾಗ, ಇದೋ ನೋಡು ಗಂಡು ಜಿಂಕೆಯನ್ನು ಹುಲಿಯು ಕೊಂದ ಜಾಗ, ಇಲ್ಲಿದೆ. ಹುಲಿಯನ್ನು ಚೂರಾಗುವಂತೆ ಬಡಿದು ಆನೆ ಹೋದ ಜಾಗ, ಇದೇ ಜಾಗ ಸಿಂಹವು ಆನೆಯನ್ನು ಸೀಳಿದ್ದು, ಸಿಂಹವನ್ನು ತನ್ನ ಕೊಕ್ಕಿನಿಂದ ಶರಭವು ಸೀಳಿದ ಜಾಗ ಇದು, ಶರಭನನ್ನು ಕೊಂದು ಭೇರುಂಡ ಹೆಜ್ಜೆಯಿಟ್ಟ ಪಾದದ ಗುರುತು ಇದು ಎಂದು ತಮ್ಮ ತಮ್ಮಲ್ಲಿ ಸನ್ನೆ ಮಾಡುತ್ತ ಬೇಡರು ಹುಡುಕುತ್ತಿದ್ದರು. ೨೭. ಸಾರಂಗವನ್ನು ಕೆಡವು, ಸಿಂಹವನ್ನು ಹೊಡೆ, ಆನೆಯ ತಲೆಯನ್ನು ಹೊಡೆದು ಹಾಕು, ಹುಲಿಯನ್ನು ಎಬ್ಬಿಸಿ ಬೆನ್ನಟ್ಟು, ಹಂದಿಯನ್ನು ಹೊಡೆದು ಸಾಯಿಸು, ಖಡ್ಗಮೃಗವನ್ನು ಕತ್ತಿಯಿಂದ ನಾಶಮಾಡು, ತನ್ನ ರಕ್ಷಣೆಯಲ್ಲಿರುವ ಜಿಂಕೆಯನ್ನು ಹಿಡಿ, ನರಿಯನ್ನು ಕಡಿದು ಹಾಕು, ಸಿಂಹವನ್ನು ಸೀಳು, ಮೊಲವನ್ನು ಇಡು, ಉಡುಗಳನ್ನು ಬಡಿ, ಚಮರಿಮೃಗದ ಬಾಲವನ್ನು ಹಿಡಿ, ಬೇಗ ಬೇಗ ಹೆಜ್ಜೆ ಹಾಕು ಎಂದು ಗುಡುಗುಡಿಸಿ ಆ ಮಾಯಾಬೇಡರು ಬಿಡದೆ ಮುಂದುವರಿದರು. ೨೮. ಒರಟುತನದಿಂದ ಕೆಲವು ಬಲೆಯಲ್ಲಿ ಬಿದ್ದು ಬಿದ್ದು ಒದ್ದಾಡಿದುವು, ಶಿವಭಟರ ಆರ್ಭಟಕ್ಕೆ ಮುದ್ದಾಡಿಸುತ್ತಿದ್ದ ಮರಿಗಳನ್ನು ಬಿಟ್ಟು ಕೆಲವು ದಿಕ್ಕೆಟ್ಟು ಕಂಡ ಕಂಡ ಎಡೆಗೆ ಓಡಿದುವು. ತಮ್ಮ ಶರೀರವನ್ನು ಸೀಳಿದ ಬಾಣದಿಂದ ಕೆಲವು ತಮ್ಮ ಪ್ರಾಣಗಳನ್ನು ನೀಗಿದುವು. ಈ ರೀತಿ ಮಾಯಾಬೇಡರು ಎಲ್ಲ ಪ್ರಾಣಿ

CC-0. Jangamwadi Math Collection. Digitized by eGangotri

ಗಜವೊಂದು ಪೋಗುತಿರೆ ಸಿಂಹವೈತಂದು ತ
ದ್ಗಜಕುಂಭವಂ ಸೀಳುತಿರೆ ಶರಭನಾರ್ಭಟಿಸಿ
ಗಜಸಿಂಹವೆರಡುಮಂ ಪಿಡಿಯಲಾ ಭೇರುಂಡನಾಗ ತುಂಡಂಗಳಿಂದೆ
ಗಜ ಸಿಂಹ ಶರಭ ಭೇರುಂಡಂಗಳಂ ಕಂಡು
ಗಜ ಸಿಂಹ ಶರಭಂಗಳಂ ಕಚ್ಚಿಪಾರುತಿರೆ
ತ್ರಿಜಗದೊಳ್ ಚೋದ್ಯವೆನಲೆಚ್ಚು ಕೆಡಪಿದನವಂ ಮಾಯಾಪುಳಿಂದನೊರ್ವಂ ೨೯

ತಡಿಕೆಯುಂ ಪಿಡಿದೊರ್ವ ಮಾಯಾಪುಳಿಂದನಡಿ
ಯಿಡುವುದುಂ ಕಂಡೊಂದು ಪುಲ್ಲೆ ತನ್ನೆರ್ದೆಯೊಳಂ
ನಡುಗಿ ಶಿವ ಶಿವ ಕಂಡೆನಚ್ಚರಿಯನೆತ್ತಲಾನುಂ ಚೇತನಂಬಡೆಯದ
ಗಿಡು ನಡೆವುದುಂಟೆ ಬರುತಿದೆ ಬಳಿಗೆಯಕಟಿಂದೆ
ಕಡೆಗಾಲವೋ ತಮಗೆಯಾದೊಡಂ ವಿಪರೀತ
ದೆಡೆಯೊಳಿರಬಾರದೆಂದೋಡುತಾ ಮೃಗವಿರದೆ ನಗಿಸಿದುದು ಗಣಕುಲದನು ೩೦

ಹುಲಿ ಹುಲ್ಲೆ ಹರಿಣಂ ಶಶಂ ಸೈರಿಭಂ ಬೆಕ್ಕು
ಮೊಲನೆಯ್ಕಮೃಗಮಾನೆ ಸಾರಂಗ ವೃಕ ಕರಡಿ
ಬಲಿಮುಖಂ ಪಂದಿ ಮುಂಗುಲಿ ಜಂಬುಕಂ ಗೋಧಿಕಾತ್ಮಜಂ ಮರೆ ಮೂಷಕಂ
ಸಲೆ ಶರಭ ಭೇರುಂಡ ಚಮರೀಮೃಗಂಗಳಂ
ಚಲಿಪ ಕತ್ತುರಿಯ ಮೃಗವಂ ಜವಾದಿಯ ಬೆಕ್ಕು
ಗಳನಿರದೆ ಪಿಡಿದು ಜಡಿದರ್ ಬಡಿದರಲ್ಲಲ್ಲಿ ಮಾಯಪುಳಿಂದರಾಗ ೩೧

ಸಮೂಹಕ್ಕೆ ಔಷಧಿಯನ್ನರೆದರು. ಆ ಅರಣ್ಯದಲ್ಲಿ ನಡೆದ ಅದ್ಭುತವನ್ನು ಏನೆಂದು ಹೇಳಲಿ ? ೨೯. ಆನೆಯೊಂದು ಹೋಗುತ್ತಿರಲು ಸಿಂಹವು ಬಂದು ಅದರ ಕುಂಭಸ್ಥಳವನ್ನು ಸೀಳುತ್ತಿರಲು, ಶರಭವು ಆರ್ಭಟಿಸಿ ಆನೆ-ಸಿಂಹ ಎರಡನ್ನೂ ಹಿಡಿಯಲು ಭೇರುಂಡವು ಕೊಕ್ಕುಗಳಿಂದ ಆನೆ-ಸಿಂಹ-ಶರಭಗಳನ್ನು ಕಚ್ಚಿ ಹಾರುತ್ತಿದ್ದಿತು, ಆ ಆನೆ–ಸಿಂಹ–ಶರಭ–ಭೇರುಂಡಗಳನ್ನು ನೋಡಿ ಮೂರು ಲೋಕದಲ್ಲಿಯೂ ಇದು ವಿಸ್ಮಯಕರವಾದುದು ಎನ್ನುವಂತೆ ಮಾಯಾಬೇಡನೊಬ್ಬ ಬಾಣದಿಂದ ಹೊಡೆದು ಅವನ್ನು ಕೆಡವಿದನು. ೩೦. ತಡಿಕೆಯನ್ನು ಹಿಡಿದು ಒಬ್ಬ ಬೇಡನು ಬರುತ್ತಿರಲು ಅದನ್ನು ನೋಡಿ ಒಂದು ಜಿಂಕೆ ತನ್ನ ಮನಸ್ಸಿನಲ್ಲಿ ಹೆದರಿ ನಡುಗಿ ಶಿವ ಶಿವಾ, ಎಂತಹ ಆಶ್ಚರ್ಯವನ್ನು ನೋಡಿದೆ ! ಎಲ್ಲಿಯಾದರೂ ಚೇತನವಿಲ್ಲದ ಗಿಡ ನಡೆಯುವುದುಂಟೆ ? ಸಮೀಪಕ್ಕೆ ಬರುತ್ತಿದೆ. ಅಯ್ಯೋ ! ಇಂದೇ ತಮಗೆ ಕೊನೆಗಾಲವೋ ? ಏನಾದರಾಗಲಿ ವಿಚಿತ್ರವಾದ ಈ ಜಾಗದಲ್ಲಿ ಇರಬಾರದು, ಎಂದು ಓಡುತ್ತಾ ಆ ಜಿಂಕೆ ಗಣಕುಲವನ್ನು ನಗಿಸಿತು. ೩೧. ಹುಲಿ, ಹುಲ್ಲೆ, ಜಿಂಕೆ, ಮೊಲ, ಕಾಡುಕೋಣ, ಬೆಕ್ಕು, ಮೊಲ, ಮುಳ್ಳುಹಂದಿ, ಆನೆ, ಸಾರಂಗ, ತೋಳ, ಕರಡಿ, ಕೋತಿ, ಹಂದಿ, ಮುಂಗುಸಿ, ನರಿ, ಉಡ ಒಂದುರೀತಿಯ ಜಿಂಕೆ, ಇಲಿ, ಶರಭ, ಭೇರುಂಡ, ಚಮರೀಮೃಗಗಳನ್ನೂ, ಓಡಾಡುವ ಕಸ್ತೂರಿಮೃಗವನ್ನೂ, ಪುನುಗುಬೆಕ್ಕುಗಳನ್ನೂ ತಡೆಯದೆ ಹಿಡಿದು ಮಾಯಾಬೇಡರು ಆಗ ಅಲ್ಲಲ್ಲಿ

CC-0. Jangamwadi Math Collection. Digitized by eGangotri

ಸೋಗೆ ಹದ್ದರಸಂಚೆ ಕೊಂಚೆ ಬಕ ಟಿಟ್ಟಿಭಂ
ಕೋಗಿಲರಗಿಳಿ ಪಾರಿವಂ ಲಾವಕಂ ಗುಬ್ಬಿ
ಗೂಗೆ ಚಾದಗೆ ಹರಡೆ ಹಂಗಂ ಚಕೋರಿ ತಿತ್ತಿರಿ ಸಾಳುವಂ ಗರುತ್ಮಾ
ಕಾಗೆ ಹೊಂಗಾಗೆ ಚರಣಾಯುಧಂ ಚಾಳಾಂಕಿ
ಯಾ ಗೌಜು ಕಂಕಂ ಭರದ್ವಾಜವೆಂಬ ನಾ
ನಾ ಖಗಸಮೂಹಂಗಳಂ ಪಿಡಿದರಾಗಲಾ ಮಾಯಾಪುಳಿಂದರಂದು ೩೨

ಮೃಗಮನುರೆ ಪಿಡಿದರಾ ಹರನಂತೆ ಹರಿಯಂತೆ
ಮಿಗೆ ಶಿಖಿಯನಾಂತರಾ ದ್ವಿಜನಂತೆ ಹರಿಯಂತೆ
ಮಗುಳೆ ಘನಪುಂಡರೀಕಮನರಸಿದರ್ ತುಂಬಿಯಂತೆ ಹರಿಯಂತೆ ಬಳಿಕ
ಸೆಗಿದರುರುನಾಗಮಂ ನವಿಲಂತೆ ಹರಿಯಂತೆ
ಸೊಗಸಾದರುಡುಗಳಿಂ ನಭದಂತೆ ಹರಿಯಂತೆ
ಬಿಗಿದರ್ ಖಗಾಳಿಯುಂ ಭಟರಂತೆ ಹರಿಯಂತೆ ಮಾಯಾಪುಳಿಂದರಂದು ೩೩

ಉರಗನಂ ಕೊಂದು ತಲೆವಣಿಗಳಿಂ ಗಿಣಿಗಳಿಂ
ಪರಿದು ಪೊಳೆವೆಳೆಯ ಸಾರಂಗಮುಂ ಸಿಂಗಮುಂ
ಕರಿಶಿರದ ಮೌಕ್ತಿಕದ ಜಾಲಮುಂ ವಾಲಮುಂ ನೆಗಳ್ದ ಚಮರೀನಿವಹದ
ಇರದೆ ಪಾರುವ ನವಿಲ ಮರಿಗಳಂ ಗರಿಗಳಂ
ಪರಿಪರಿಯ ಪಕ್ಕಿಗಳ ಗುದಿಗಳಂ ತಿದಿಗಳಂ
ನೆರೆ ಸುಲಿವ ಪುಲಿಯ ಚರ್ಮಂಗಳಂ ಪಣ್ಗಳಂ ಪಿಡಿದು ಶಬರರ್ ನಡೆದರು ೩೪

ಜಡಿದರು, ಬಡಿದರು. ೩೨. ನವಿಲು, ಹದ್ದು, ರಾಜಹಂಸ, ಕ್ರೌಂಚ, ಬಕಪಕ್ಷಿ, ಟಿಟ್ಟಿಭ, ಕೋಗಿಲೆ, ಅರಗಿಳಿ, ಪಾರಿವಾಳ, ಲಾವಗೆ, ಗುಬ್ಬಿ, ಗೂಬೆ, ಚಾತಕಪಕ್ಷಿ, ಕೊಕ್ಕರೆ, ಹಂಗ ವಕ್ಕಿ, ಚಕೋರಪಕ್ಷಿ, ತಿತ್ತಿರಿ, ಸಾಳುವ, ಗರುಡ, ಕಾಗೆ, ಹೊಂಗಾಗೆ, ಹುಂಜ, ಚಾಳಾಂಕಿ, ಗೌಜುಹಕ್ಕಿ, ರಣಹದ್ದು, ಭರದ್ವಾಜ ಎಂಬ ನಾನಾ ಪಕ್ಷಿಸಮೂಹಗಳನ್ನು ಆ ಮಾಯಾ ಬೇಡರು ಬೇಟೆಯಾಡುವಾಗ ಹಿಡಿದರು. ೩೩. ಆ ದಿನ ಮಾಯಾಬೇಡರು ಶಿವನಂತೆ, ಸಿಂಹದಂತೆ ಜಿಂಕೆ (ಮೃಗ) ಯನ್ನು ಚೆನ್ನಾಗಿ ಹಿಡಿದರು. ಬ್ರಾಹ್ಮಣ ಮತ್ತು ಸಮುದ್ರ ದಂತೆ ಬೆಂಕಿ (ನವಿಲು) ಯನ್ನು ಹಿಡಿದರು. ಮತ್ತೆ ದುಂಬಿಯಂತೆ, ಬ್ರಹ್ಮರಂತೆ ಬಿಳಿಯ ಕಮಲ (ಹುಲಿ) ವನ್ನು ಹುಡುಕಿದರು. ನವಿಲಿನಂತೆ, ಸಿಂಹದಂತೆ ದೊಡ್ಡ ಸರ್ಪ ಮತ್ತು ಆನೆಯನ್ನು ಸೀಳಿದರು. ಆಕಾಶದಂತೆ, ಚಂದ್ರನಂತೆ ನಕ್ಷತ್ರ (ಉಡು) ಗಳಿಂದ ಸೊಗಸಾಗಿ ಕಂಡರು. ಭಟರಂತೆ, ವಿಷ್ಣುವಿನಂತೆ ಬಾಣ (ಪಕ್ಷಿ ಸಮೂಹ) ವನ್ನು ಬಿಗಿದರು. ೩೪. ಹಾವುಗಳನ್ನು ಕೊಂದು ಅದರ ತಲೆಯ ರತ್ನಗಳಿಂದ-ಗಿಣಿಗಳಿಂದ, ಹೊಳೆಯುವ ಎಳೆಯ ಸಾರಂಗವನ್ನು-ಸಿಂಹವನ್ನು ಸೀಳಿ, ಆನೆಯ ಕುಂಭದ ಮುತ್ತಿನ ಸಮೂಹವನ್ನು–ಚಮರೀ ಮೃಗದ ಬಾಲವನ್ನು, ನಿಲ್ಲದೆ ಹಾರುವ ನವಿಲಿನ ಮರಿಗಳನ್ನು–ಗರಿಗಳನ್ನು, ನಾನಾ ರೀತಿಯ ಪಕ್ಷಿಗಳ ಗುಂಪನ್ನು-ಚರ್ಮಗಳನ್ನು, ಚೆನ್ನಾಗಿ ಸುಲಿಯುವ ಹುಲಿಯ ಚರ್ಮ

CC-0. Jangamwadi Math Collection. Digitized by eGangotri

ಇಂತು ಪಲತೆರದ ಬೇಂಟೆಯನಾಡುತಾಗಳ
ತ್ಯಂತಹರುಷದೊಳಖಿಳಮಾಯಾಪುಳಿಂದರಾ
ಕಾಂತಾರದೊಳಗೆ ಬರುತಿರಲವರ ಗಾವಳಿಗೆ ತದ್ಗಿರಿಗುಹಾಂತರದೊಳು
ಚಿಂತೆಯಿಲ್ಲದೆ ಜಗತ್ಪ್ರಳಯಸಮಯದ ಮಹೋ
ಗ್ರಾಂತಕನ ರೂಪಿನಿಂ ಮೂಕದಾನವನೆಂಬ
ನಂತರಿಸದತಿಭೀಕರಾಕಾರ ಸೂಕರಂ ತಾನಾಗಿ ಪೊರಮಟ್ಟನು ೩೫

ಜಡಜಜಂ ಸಿಡಿಲ ಪಡೆಯಿಂ ಪಿಡಿದು ಸೂಕರನ
ಕುಡಿದಾಡೆಯಂ ಸವೆದನೋ ತಟಜ್ವಾಲದಿಂ
ದೊಡರಿಚಿದನೋ ಕಣ್ಗಳಂ ರೋಮನಿಚಯಮಂ ಲೋಹದ ಶಲಾಕೆಯಿಂದೆ
ನಿಡಿದುಗೆಯ್ದನೊ ಕಠಿಣಮಾದ ಪೆರ್ಗುಂಡಿನಿಂ
ಕಡೆದು ಕಂಡರಿಸಿದನೊ ತನುವನಕಟೆನುತಾಗ
ಮೃಡನ ಸೇನೆಯ ಭಟರ್ ನಡುನಡುಗಲಾ ಪಂದಿ ತುಡುಕಿದುದು ಸುರಭಟರನು ೩೬

ಕೀರುತೆಡಬಲಕೆ ಮುರಿಮುರಿವ ಮರಿನಾಯ್ಗಳಂ
ಕೋರೆಯಿಂದೆರಗಿ ಖಂಡಿಸುತೆ ತರುಬಿದ ಭಟ
ರ್ಗೆರುಗಾಣಿಸುತಾಂತ ಬಲೆಗಳಂ ಸವರುತೆ ಸರೋಷಮನನಾಗಿ ಕೂಡೆ
ಕೀರುತ್ತೆ ಸಮ್ಮುಖದೊಳಾಂತ ತರುಲತೆಗಳಂ
ಹಾರಿಸುತೆ ಬೇಹ ಗಣಪಾಲರಂ ಶಂಭುವಿಗೆ
ದೂರಿಸುತೆ ಭೀಕರಾಕಾರನೈದಿದುದಾಗ ಕ್ರೋಡನಾ ವನದೆಡೆಯೊಳು ೩೭

ಗಳನ್ನು-ಹಣ್ಣುಗಳನ್ನು ಹಿಡಿದು ಬೇಡರು ನಡೆದರು. ೩೫. ಹೀಗೆ ನಾನಾ ರೀತಿಯ ಬೇಟೆಯಾಡುತ್ತ ಸಂತೋಷದಿಂದ ಎಲ್ಲ ಮಾಯಾಬೇಡರೂ ಆ ಕಾಡಿನಲ್ಲಿ ಬರುತ್ತಿರಲು ಅವರ ಗದ್ದಲಕ್ಕೆ ಆ ಪರ್ವತದ ಗುಹೆಯ ಒಳಗಡೆ ಏನೂ ಚಿಂತೆಯಿಲ್ಲದೆ ಜಗತ್ತಿನ ಪ್ರಳಯಕಾಲದ ಸಮಯದ ಬಹಳ ಭೀಕರನಾದ ಯಮನಂತೆ ಇದ್ದ ಮೂಕದಾನವನೆಂಬ ಭಯಂಕರ ಆಕಾರದ ಹಂದಿ ತಡೆಯದೆ ತಾನಾಗಿ ಹೊರಹೊರಟನು. ೩೬. ಅಯ್ಯೋ! ಬ್ರಹ್ಮನು ಸಿಡಿಲ ಪಡೆಯನ್ನು ಹಿಡಿದು ಈ ಹಂದಿಯ ತುದಿದಾಡೆಯನ್ನು ಮಾಡಿದನೋ? ಕಣ್ಣುಗಳನ್ನು ಮಿಂಚಿನ ಗೊಂಚಲಿನಿಂದ ಸೇರಿಸಿದನೋ! ಕಬ್ಬಿಣದ ಸಲಾಕೆಯಿಂದ ಅದರ ಕೂದಲನ್ನು ಉದ್ದ ಮಾಡಿದನೋ? ದೇಹವನ್ನು ಕಠಿಣವಾದ ದೊಡ್ಡ ಗುಂಡಿನಿಂದ ಕಡೆದು ಕೆತ್ತಿದನೋ ಎನ್ನುತ್ತ ಶಿವನ ಸೇನೆಯ ಭಟರು ಬಹುವಾಗಿ ನಡುಗಲು ಆ ಹಂದಿ ದೇವಭಟರನ್ನು ಹಿಡಿಯಿತು. ೩೭. ಕಿರಿಚುತ್ತ ಎಡ-ಬಲಗಳಿಗೆ ಓಡುವ ನಾಯಿಮರಿಗಳನ್ನು ಕೋರೆಯಿಂದ ತಿವಿದು ಸೀಳುತ್ತ, ಎದುರಿಸಿದ ಭಟರನ್ನು ಗಾಯಗೊಳಿಸುತ್ತ, ಹಿಡಿದ ಬಲೆಗಳನ್ನು ನಾಶಮಾಡುತ್ತ, ರೋಷಮನಸ್ಸಿನಿಂದ ಕೂಡಿ ಆರ್ಭಟಿಸುತ್ತ, ಎದುರಿನಲ್ಲಿ ಸಿಕ್ಕಿದ ಮರ-ಬಳ್ಳಿಗಳನ್ನು ಮೇಲಕ್ಕೆ ಹಾರಿಸುತ್ತ, ಗುಪ್ತಚಾರರಾದ ಗಣದವರು ಶಿವನಿಗೆ ದೂರು ಕೊಡುವಂತೆ ಮಾಡುತ್ತ ಭೀಕರಾಕಾರದ ಆ ಹಂದಿ ಆ ಕಾಡಿನಲ್ಲಿ

CC-0. Jangamwadi Math Collection. Digitized by eGangotri

ಎಲ್ಲಿ ತಾಗಿತು ಘಾಯಮಲ್ಲಿ ರುಧಿರದ ತೋಯ
ಮಲ್ಲಿಯುರುಬಿನ ಬೊಬ್ಬೆಯಲ್ಲಿ ಸುರಗಣದುಬ್ಬೆ
ಯೆಲ್ಲಿ ಖುರಚಯಪಾತಮಲ್ಲಿ ಮಾಂಸವ್ರಾತಮೆಲ್ಲಿ ಸುಳಿವಲ್ಲಿಯಳಿವು
ಎಲ್ಲಿ ಮೆಯ್ಯೊಲೆದಾಟಮಲ್ಲಿಯೆ ಕುಜೋತ್ಪಾಟ
ಮೆಲ್ಲಿ ಪದಸಂಘಟನಮಲ್ಲಿ ಧರಣೀನಟನ
ಮೆಲ್ಲಿಯುನ್ಮುಖಭಾವಮಲ್ಲಿ ದಿವಿಜರ ಹೇವಮಾ ಪಂದಿಯಿಂದಾದುದು ೩೮

ಮೂಕದಾನವನತಿಭಯಂಕರದೊಳೀ ಪರಿ ದಿ
ವೌಕಸರ ಸೇನೆಯುಂ ಸದೆವುದಂ ಕಂಡಿಂತು
ನೂಕದುಳಿದರೊಳೆಂದು ಚಾಪಮಂ ಜೇಗೆಯ್ದು ಹರನೆಚ್ಚು ಬೊಬ್ಬಿಡಲ್ಕೆ
ಆ ಕುಮತಿಯುಂ ತಾಗೆ ಪೊತ್ತಂಬುಸಹಿತೆ ಬಂ
ದಾ ಕಿರೀಟಿಯ ಮುಂದೆ ಗುಡುಗುಡಿಸಲಾ ಕ್ಷಣಂ
ಲೋಕನಾಥಧ್ಯಾನಮುಳಿಯೆ ಕಂಡಂ ವೈರಿಭೀಕರಂ ಸೂಕರನನು ೩೯

ಸೊಕ್ಕಿದೆಕ್ಕಲನೊಕ್ಕಲಿಕ್ಕುತೆ ವನದ್ರುಮವ
ನಿಕ್ಕೆಯುಂ ಬಿಟ್ಟೆತ್ತ ಪೊಕ್ಕು ಪೋದಪುದೊ ನೋ
ಟಕ್ಕೆ ಸೋಜಿಗಮಾಗೆ ರಕ್ಕಸನ ಪಗೆ ಬಲ್ಲನಕ್ಕೆನುತೆ ಬಾಣದಿಂದೆ
ಇಕ್ಕಲಾ ಸೂಕರಂ ಕಕ್ಕಸದ ಬಾಣದಿಂ
ದೊಕ್ಕುದೊಡಲಂ ನೆಲಕೆ ಪಕ್ಕನಸುವಂ ಬಿಡಲ್
ದಕ್ಕಿದುದು ಕಿಟಿಯೆನುತೆ ಮುಕ್ಕಣ್ಣನಟ್ಟಿದವನೆಕ್ಕತುಳದಿಂ ಪಿಡಿದನು ೪೦

ಬಂತು. ೩೮. ಆ ಹಂದಿಯಿಂದ ಎಲ್ಲಿ ತಾಗಿತೋ ಅಲ್ಲಿ ಗಾಯ ಮತ್ತು ರಕ್ತ ಸುರಿಯು ತ್ತಿತ್ತು. ಎಲ್ಲಿ ಅದರ ಆವೇಶದ ಆರ್ಭಟವೋ ಅಲ್ಲಿ ದೇವಗಣದ ಚೀರಾಟ, ಎಲ್ಲಿ ಕಾಲು ಗಳ ಒದೆತವೋ ಅಲ್ಲಿ ಮಾಂಸದ ಗುಡ್ಡೆ, ಅದು ಸುಳಿದ ಜಾಗದಲ್ಲಿ ಸಾವು, ಅದರ ಮೈ ತೊನೆದಾಡಿದಲ್ಲಿ ಮರಗಳು ಉರುಳುತ್ತಿದ್ದುವು. ಎಲ್ಲಿ ಅದರ ಪಾದ ಸೋಕುತ್ತಿತ್ತೋ ಅಲ್ಲಿ ನೆಲ ನಾಟ್ಯವಾಡಿದಂತಿತ್ತು, ಎಲ್ಲಿ ಅದರ ಮುಖ ಮೇಲೆ ಕಾಣುತ್ತಿತ್ತೋ ಅಲ್ಲಿ ದೇವತೆಗಳು ಸಂಕಟಪಡುವಂತೆ ಆಯಿತು. ೩೯. ಮೂಕದಾನವನು ಅತಿಭಯಂಕರ ವಾಗಿ ಹೀಗೆ ದೇವತೆಗಳ ಸಮೂಹವನ್ನು ನಾಶಮಾಡುವುದನ್ನು ನೋಡಿ ಸಾಯದೆ ಉಳಿದವರಿಗೆ ಧೈರ್ಯಹೇಳಿ ಬಿಲ್ಲನ್ನು ಠೇಂಕಾರ ಮಾಡಿ ಶಿವನು ಬಾಣ ಬಿಟ್ಟು ಆರ್ಭಟಿ ಸಲು ಅದು ಹಂದಿಯನ್ನು ತಾಗಿತು. ಮೈಯಲ್ಲಿ ನಾಟಿದ ಬಾಣಸಹಿತ ಆ ಹಂದಿಯು ಬಂದು ಅರ್ಜುನನ ಮುಂದೆ ಅಬ್ಬರಿಸಲು ಆ ಕ್ಷಣದಲ್ಲಿ ಶಿವನನ್ನು ಕುರಿತು ಮಾಡುತ್ತಿದ್ದ ಧ್ಯಾನಕ್ಕೆ ಭಂಗವುಂಟಾಯಿತು. ವೈರಿಭೀಕರನಾದ ಅರ್ಜುನನು ಆ ಹಂದಿಯನ್ನು ನೋಡಿ ದನು. ೪೦. ಸೊಕ್ಕಿದ ಹಂದಿ ಕಾಡಿನ ಮರವನ್ನು ನಾಶಮಾಡುತ್ತ ಜಾಗವನ್ನು ಬಿಟ್ಟು ಎತ್ತಕಡೆ ಹೊಕ್ಕು ಹೊರಟಿರುವುದೋ ? ಇದು ನೋಡಲು ಆಶ್ಚರ್ಯಕರ ಎಂದು ಅರ್ಜುನನು ಆಲೋಚಿಸುತ್ತ ರಾಕ್ಷಸನ ದ್ವೇಷ ಗೊತ್ತಿದೆಯಲ್ಲ ಎಂದು ಬಾಣದಿಂದ ಹೊಡೆದನು. ಆಗ ಆ ಕಠಿಣವಾದ ಬಾಣ ದೇಹವನ್ನು ಪ್ರವೇಶಿಸಲು ಆ ಹಂದಿ ನೆಲಕ್ಕೆ

CC-0. Jangamwadi Math Collection. Digitized by eGangotri

ಮುಂದಿವಾಳವೆ ನಮ್ಮ ಕೂಡೆಲೆ ಪುಳಿಂದ ನಾಂ
ಕೊಂದ ಪಂದಿಯನೊಯ್ದಪೈ ನಿನ್ನ ತೆತ್ತಿಗನ
ತಂದು ತೋರಾತನೇತರ ಸಮರ್ಥಂ ಕಾಣ್ಬೆನೆಂದರ್ಜುನಂ ನುಡಿಯಲು
ಇಂದುಧರನವನೆಂದ ನುಡಿಯನಾಲಿಸಿ ನಲವಿ
ನಿಂದೆ ಬಂದಂ ನರನ ಪೊರೆಗೆಲೆ ತಪಸ್ವಿದೇ
ನೆಂದು ನುಡಿದೈ ಪಂದಿ ನಮ್ಮದೆನೆ ಗುಡುಗುಡಿಸಿ ಕಲಿಪಾರ್ಥನಿಂತೆಂದನು ೪೧

ಸಾಕೆಲೆ ಕಿರಾತ ನಿನ್ನಯ ಬಲ್ಮೆಯೆಮ್ಮೊಡನೆ
ನೂಕುವದೆ ನಮ್ಮಂಬಿನಿಂದೆ ಬಿರ್ದುದು ಪಂದಿ
ಜೋಕೆ ಮಿಗೆ ತೆರಳಲ್ಲದೊಡೆ ಕೊಳ್ ಶರಾಳಿಯಂ ನೀನೆನುತೆ ಪಾರ್ಥನೆಸೆಯೆ
ಈ ಕಿರೀಟಿಯ ಬಾಣಸಂಕುಲಂ ಶಂಭುವಂ
ಸೋಂಕದುರೆ ಬಲವಂದುದಂ ಕಂಡು ಕೋಪದಿಂ
ಭೀಕರದ ಬಾಣಂಗಳಂ ಪೂಡಿದಂ ಪಾರ್ಥನೇನೆಂಬೆನಚ್ಚರಿಯನು ೪೨

ಅಬ್ಬರಿಸಿ ಪಾರ್ಥನೆಸೆ ಬಾಣಂಗಳಭವನಂ
ನಿಬ್ಬರದೊಳೈದಿ ನಸು ಸೋಂಕಿ ಸೋಂಕದೆ ಮರಳ
ಲುಬ್ಬೆಗದೊಳರ್ಜುನಂ ಮತ್ತೆ ಮತ್ತೊಡನೊಡನೆ ಮರಳಿ ಮರಳಿಷುಗಳಿಂದೆ

ಬಿದ್ದ ಕೂಡಲೇ ಪ್ರಾಣಬಿಟ್ಟಿತು. ಹಂದಿ ಸಿಕ್ಕಿತು ಎನ್ನುತ್ತ ಶಿವನಿಂದ ಕಳಿಸಲ್ಪಟ್ಟವನು ಅದನ್ನು ಪರಾಕ್ರಮದಿಂದ ತಕ್ಷಣ ಹಿಡಿದನು. ೪೧. ಎಲೆ ಬೇಡನೆ, ನಾನು ಕೊಂದ ಹಂದಿಯನ್ನು ತೆಗೆದುಕೊಂಡು ಹೋಗುತ್ತೀಯಲ್ಲ, ನಮ್ಮ ಕೂಡೆ ಸೊಕ್ಕಿನ ವರ್ತನೆಯೆ ? ನಿನ್ನ ಹೊಣೆಗಾರನನ್ನು ಕರೆತಂದು ತೋರಿಸು, ಅವನು ಎಷ್ಟು ಸಾಮರ್ಥ್ಯಶಾಲಿ ನೋಡುತ್ತೇನೆ ಎಂದು ಅರ್ಜುನನು ಹೇಳಲು ಚಂದ್ರಶೇಖರನು ಅವನು ಹೇಳಿದ ಮಾತನ್ನು ಕೇಳಿ ಸಂತೋಷದಿಂದ ಅರ್ಜುನನ ಬಳಿಗೆ ಬಂದನು. ಎಲೆ ತಪಸ್ವಿ, ಏನೆಂದು ಹೇಳಿದೆ ? ಹಂದಿ ನಮ್ಮದು ಎನ್ನಲು, ಆರ್ಭಟಿಸುತ್ತ ಶೂರ ಅರ್ಜುನನು ಹೀಗೆಂದನು. ೪೨. ಎಲೈ ಬೇಡನೇ ಸಾಕು, ನಿನ್ನ ಪೌರುಷ ನಮ್ಮಲ್ಲಿ ನಡೆಯುತ್ತದೆಯೆ? ನಮ್ಮ ಬಾಣದಿಂದ ಹಂದಿ ಸತ್ತಿತು. ಜೋಪಾನವಾಗಿ ಹೋಗು, ಇಲ್ಲದಿದ್ದರೆ ಬಾಣಸಮೂಹವನ್ನು ತೆಗೆದುಕೋ ಎನ್ನುತ್ತ ಪಾರ್ಥನು ಬಾಣ ಬಿಡಲು ಅವನ ಬಾಣಸಮೂಹ ಶಿವನನ್ನು ತಾಕದೆ ಪ್ರದಕ್ಷಿಣೆ ಹಾಕಿತು. ಅದನ್ನು ನೋಡಿ ಕೋಪದಿಂದ ಅರ್ಜುನನು ಭೀಕರವಾದ ಬಾಣಗಳನ್ನು ಹೂಡಿದನು. ಆಶ್ಚರ್ಯವನ್ನು ಏನೆಂದು ಹೇಳಲಿ ? ೪೩. ಆರ್ಭಟಿಸಿ ಅರ್ಜುನನು ಬಾಣ ಬಿಡಲು ಅದು ವೇಗದಿಂದ ಹೋಗಿ ಶಿವನನ್ನು ಸ್ವಲ್ಪ ತಾಗಿಯೂ ತಾಗದೆ ಹಿಂದಿರುಗಿತು. ಅರ್ಜುನನು ಉದ್ವೇಗಗೊಂಡು, ಕೊಬ್ಬಿದ ಕಿರಾತನೇ ಬೀಳು

CC-0. Jangamwadi Math Collection. Digitized by eGangotri

ಕೊಬ್ಬಿದ ಕಿರಾತ ನೀಂ ಬೀಳೆನುತೆ ಮುಸುಕೆ ಸರ
ಳುಬ್ಬಿದುವು ದೆಸೆಯೆತ್ತ ಹರನೆತ್ತ ನರನೆತ್ತ
ಸಬ್ಬ ತರುಗಿರಿಲತಾಳಿಗಳೆತ್ತ ಮುಗುಳೆತ್ತ ನಭಮೆನಲ್ ಪಸರಿಸಿದುವು ೪೩.

ಕಂಡು ಖಡ್ಗಮುಸುಗಿದು ದಕ್ಷಾರಿ ಚಾಪಮಂ
ಕೊಂಡು ಗುಹನುಗ್ರಪರಶುವನೆತ್ತಿ ಗಜಮುಖಂ
ಹಿಂಡುಹಿಂಡಾದ ಗಣಜಾಲವಾಯುಧವೆರಸಿ ತಾಪಸನ ಜೀವನವನು
ಹಿಂಡುವೆವೆನುತ್ತೈದೆ ಕಣ್ಸನ್ನೆಯಿಂ ನಿಲಿಸಿ
ಚಂಡವಿಕ್ರಮ ನರನ ಬಾಣಂಗಳನಿತುಮಂ
ಖಂಡಿಸುತೆ ಮರುಳ ತಮ್ಮಡಿ ಸಾಕು ಹೋಗೆನಲ್ಕರ್ಜುನಂ ಖತಿಗೊಂಡನು ೪೪

ಬಾಣಮಂ ಕಡಿದುರುಳ್ಚುವನಿವನಾದೇಂ ಪಂಚ
ಬಾಣಹರನೋ ಗುಹನೊ ರಾಮನೋ ರಾಮನೋ
ದ್ರೋಣನೋ ಭೀಷ್ಮನೋ ಕರ್ಣನೋ ಬಿಲ್ಬಲ್ಮೆಯಾವವಂಗಿಂತಪ್ಪುದು
ಕೇಣವೇಕಿದಕೆ ಭಳಿರೇ ಪುಳಿಂದಂಗೆ ಸರಿ
ಗಾಣೆನೆಂದೆನುತೆ ಬತ್ತಳಿಕೆಯಿಂದರ್ಜುನಂ
ಸಾಣೆಯುಲಗಿನ ಸರಿಯನುರೆ ಕರೆಯೆ ಕರೆಗೊರಲನನಿತುವಂ ಖಂಡಿಸಿದನು ೪೫

ಎಂದು ಮತ್ತೆ ಮತ್ತೆ ಜೊತೆ ಜೊತೆಯಲ್ಲಿ, ತಿರುಗಿ ತಿರುಗಿ ಬಾಣಗಳಿಂದ ಮುಚ್ಚಲು ಬಾಣಗಳು ಹೆಚ್ಚಿ ದಿಕ್ಕೆತ್ತ, ಬಾಣಗಳೆಲ್ಲಿ, ಶಿವನೆಲ್ಲಿ, ಅರ್ಜುನನೆಲ್ಲಿ, ಎಲ್ಲ ಮರ ಪರ್ವತ ಸಮೂಹಗಳೆಲ್ಲಿ, ಮತ್ತೆ ಆಕಾಶವೆಲ್ಲಿ ಎನ್ನುವುದೇ ತೋರದಂತೆ ಆವರಿಸಿದುವು. ೪೪. ಇದನ್ನು ನೋಡಿ ವೀರಭದ್ರನು ಕತ್ತಿಯನ್ನು ಹಿರಿದು, ಷಣ್ಮುಖನು ಬಿಲ್ಲನ್ನು ಹಿಡಿದು, ಗಣೇಶನು ಭಯಂಕರವಾದ ಕೊಡಲಿಯನ್ನು ಎತ್ತಿಕೊಂಡು, ಹಿಂಡು ಹಿಂಡಾದ ಗಣ ಸಮೂಹ ಆಯುಧಗಳನ್ನು ಹಿಡಿದು ತಪಸ್ವಿಯ ಜೀವನವನ್ನು ಹಿಂಡುತ್ತೇವೆ ಎನ್ನುತ್ತ ಬರಲು, ಶಿವನು ಕಣ್ಣಸನ್ನೆಯಿಂದ ಎಲ್ಲರನ್ನೂ ತಡೆದು ಚಂಡಪರಾಕ್ರಮಿಯಾದ ಅರ್ಜುನನ ಬಾಣಗಳಷ್ಟನ್ನೂ ಖಂಡಿಸುತ್ತ ಮರುಳ ಮುನಿಯೆ, ಸಾಕು, ಹೊರಡು ಎನ್ನಲು ಅರ್ಜುನನು ಬಹು ಕೋಪಗೊಂಡನು. ೪೫. ನನ್ನ ಬಾಣಗಳನ್ನು ಕಡಿದು ಉರುಳಿಸುತ್ತಿದ್ದಾನೆ. ಇವನೇನು ಮದನಾರಿಯಾದ ಶಿವನೊ ? ಷಣ್ಮುಖನೊ ? ಪರಶುರಾಮನೊ ? ರಾಮನೊ ? ದ್ರೋಣನೊ ? ಭೀಷ್ಮನೊ ? ಕರ್ಣನೊ ? ಈ ರೀತಿಯ ಬಿಲ್ಲವಿದ್ಯೆಯ ಸಾಮರ್ಥ್ಯ ಇನ್ನಾರಿಗಿದೆ ? ಇದಕ್ಕೆ ಮಾತ್ಸರ್ಯವೇಕೆ ? ಭಲಾ ! ಈ ಬೇಡನಿಗೆ ಸರಿಸಮನಾದವನನ್ನು ನೋಡಿಲ್ಲ ! ಎನ್ನುತ್ತ ಅರ್ಜುನನು ಬತ್ತಳಿಕೆಯಿಂದ ತೀಕ್ಷ್ಣವಾದ ಬಾಣಗಳನ್ನು ತೆಗೆದು ಸರಳಮಳೆಯನ್ನೆ ಸುರಿಯಲು

CC-0. Jangamwadi Math Collection. Digitized by eGangotri

ಮತ್ತೆ ಪೊಸಬಾಣವುಂ ಪೂಡುವಂ ನೋಡುವಂ
ಚಿತ್ತಜಾರಾತಿಯುಂ ಖಾತಿಯುಂ ತಾಳಿ ಪೋ
ಗತ್ತಲೆನುತೆಚ್ಚು ಮೂದಲಿಸುವಂ ನಿಲಿಸುವಂ ಬಾಣದದಟಂ ರುದ್ರನು
ಚಿತ್ತಕಾಶ್ಚರ್ಯಮಂ ಮಾಡುವಂ ಕಾಡುವಂ
ಪೊತ್ತ ಪರಿಭವಕೆ ನರನಾಕ್ಷಣಂ ತೀಕ್ಷಣಂ
ಬೆತ್ತಂಬನೊಡನೆಚ್ಚು ಬೀಗುವಂ ತೂಗುವಂಬಿಂದವಂ ಹರನರಿವನು ೪೬

ಶ್ವೇತವಾಹನನಾಗಳೆಸುವನಾ ಬಾಣಮಂ
ಭೂತನಾಥಂ ಕಡಿವನೊಡನೆಸುವನಾ ಪಾರ್ಥ
ನೀತನರಿವಂ ಮತ್ತೆ ಕವಿಸುವಂ ಪಾರ್ಥನವನುಂ ಕಡಿವನಿಂದುಧರನು
ಈ ತೆರದೊಳೆಚ್ಚೆಚ್ಚ ಬಾಣಮಂ ಕಡಿಯೆ ಸ
ತ್ವಾತಿಶಯದಿಂದ ಮಂತ್ರಾಸ್ತ್ರಂಗಳಂ ಪೂಡಿ
ಖಾತಿಯಿಂದಾರ್ದೆಸೆಯಲನಿತು ಮಂತ್ರಾಸ್ತ್ರಮಂ ನುಂಗಿದಂ ಹರನಾಗಳು ೪೭

ಗಿರಿಯ ಬಳಗಂ ಮುಸುಕೆ ವಜ್ರಮಳ್ಕುವುದೆ ವನ
ಕರಿಯ ಬಳಗಂ ಮುಸುಕೆ ಸಿಂಹಮೇನಂಜುವುದೆ
ಹರಿಯ ಬಳಗಂ ತೊಡರೆ ಗರುಡನಿರದೋಡುವನೆ ಕೇಳಿದ್ಯೆ ಸಿದ್ಧರಾಮ

ಶಿವನು ಅಷ್ಟನ್ನೂ ಖಂಡಿಸಿದನು. ೪೬. ಮತ್ತೆ ಹೊಸ ಬಾಣಗಳನ್ನು ಹೂಡುವನು, ಶಿವನನ್ನು ನೋಡುವನು. ಕೋಪವನ್ನು ತಾಳಿ, ಹೋಗತ್ತ ಎನ್ನುತ್ತ ಬಾಣಬಿಟ್ಟು ಮೂದಲಿಸುವನು. ಶಿವನು ಅರ್ಜುನನ ಬಾಣದ ಪರಾಕ್ರಮವನ್ನು ನಿಲ್ಲಿಸುವನು. ಅವನ ಮನಸ್ಸಿಗೆ ಆಶ್ಚರ್ಯವನ್ನುಂಟುಮಾಡುವನು, ಕಾಡುವನು. ತನಗೆ ಸೋಲು ಉಂಟಾದುದಕ್ಕೆ ಅರ್ಜುನನು ಆ ಕ್ಷಣ ತೀಕ್ಷ್ಣವಾದ ಬಾಣವನ್ನು ಬಿಟ್ಟು ಹೆಮ್ಮೆಪಡುವನು. ತೂಗುವ ಬಾಣದಿಂದ ಅದನ್ನು ಶಿವನು ಕತ್ತರಿಸುವನು. ೪೭. ಅರ್ಜುನನು ಆಗ ಬಾಣಗಳನ್ನು ಬಿಡುವನು. ಶಿವನು ಅದನ್ನು ಕಡಿಯುವನು. ಕೂಡಲೇ ಅರ್ಜುನನು ಬಾಣವನ್ನು ಮತ್ತೆ ಬಿಡುವನು. ಇವನು ಅದನ್ನು ಕತ್ತರಿಸುವನು. ಪುನಃ ಪಾರ್ಥನು ಶಿವನನ್ನು ಬಾಣದಿಂದ ಮುಸುಕುವನು. ಅವನ್ನು ಚಂದ್ರಶೇಖರನು ತುಂಡರಿಸುವನು. ಈ ರೀತಿಯಲ್ಲಿ ತಾನು ಬಿಟ್ಟ ಎಲ್ಲ ಬಾಣಗಳನ್ನೂ ಹರನು ಕಡಿಯಲು ಅತಿಶಯವಾದ ಶಕ್ತಿಯಿಂದ ಮಂತ್ರಾಸ್ತ್ರಗಳನ್ನು ಹೂಡಿ ಕೋಪದಿಂದ ಆರ್ಭಟಿಸಿ ಬಿಡಲು ಅಷ್ಟು ಮಂತ್ರಾಸ್ತ್ರಗಳನ್ನೂ ಶಿವನು ನುಂಗಿದನು. ೪೮. ಪರ್ವತಗಳ ಗುಂಪು ಮುಸುಕಲು ವಜ್ರಾಯುಧ ಅಳುಕುವುದೆ ? ಕಾಡಾನೆಯ ಬಳಗ ಮುತ್ತಲು ಸಿಂಹವೇನು ಹೆದರುವುದೆ? ಸರ್ಪಗಳ ಸಮೂಹ ತೊಡರಲು ಗರುಡನು ಬೆದರಿ ಓಡುವನೆ? ಇದನ್ನು ಕೇಳಿದೆಯಾ, ಸಿದ್ಧರಾಮ, ಅರ್ಜುನನ ಮಂತ್ರಾಸ್ತ್ರಗಳು ಆಕ್ಷಣ ವೇಗವಾಗಿ

CC-0. Jangamwadi Math Collection. Digitized by eGangotri

ನರನ ಮಂತ್ರಾಸ್ತ್ರಂಗಳಾ ಕ್ಷಣಂ ಪರಿಪರಿದು
ಹರನನಂಡಲೆಯಲಾರ್ಪುವೆ ನಿಮಿಷದೊಳಗುಮಾ
ವರನವಂ ಪರಿಹರಿಸೆ ಮಗುಳೆ ದಿವ್ಯಾಸ್ತ್ರಮಂ ತೊಟ್ಟೆಚ್ಚು ಬೊಬ್ಬಿರಿದನು ೪೮

ನರನೆಚ್ಚ ಬಾಣಮಂ ನುಗುಮಂ ಪೊಂಗುಮಂ
ಕೆರಳಿ ಮೂದಲೆವಾತನಾಡುಮಂ ನೋಡುಮಂ
ತಿರುತಿರುಗಿ ಪಾರ್ವತಿಗೆ ಸೂಚಿಪಂ ನಾಚಿಪಂ ಹಾಸ್ಯೋಕ್ತಿಯಿಂ ನರನನು
ಮರುಳೆ ತಮ್ಮಡಿ ಶೌರ್ಯ ಮುಗ್ಗಿತೇ ತಗ್ಗಿತೇ
ಸರಳ್ಗಳುಂ ತೀರಿ ಬಯಲಾದುವೇ ಪೋದುವೇ
ಧುರಕೆಮಗೆ ಸರಿಯಪ್ಪ ವೀರನೇ ಧೀರನೇ ನೀನೆನುತೆ ಹರನೆಂದನು ೪೯

ಕಾಡಬೇಡಂ ಹೀನಕುಲದವಂ ನಿನ್ನಂತೆ
ಬೇಡನಲ್ಲಾಂ ಕ್ಷತ್ರಿಯಂ ವೀರನೆನಲಾವು
ಬೇಡರೆಂಬುದು ದಿಟಂ ಮೂಲೋಕವರಿಯೆ ನೀಂ ಬೇಡಿ ತಪಮಂ ಮಾಡುತೆ
ಬೇಡನಲ್ಲೆನೆ ನಗರೆ ಮರುಳೆ ತಾಪಸ ನಿನ್ನ
ಮೂಡಿಗೆಯೊಳಂಬಿಲ್ಲ ವೀರನೆಂತಹೆ ನಿನ್ನ
ನೋಡಿ ಜರೆಯೆನಲೆನ್ನ ಪಳಿವವನೆ ನೀನೆನುತೆ ನಿಜಚಾಪದಿಂ ಬಡಿದನು ೫೦

ಬಂದು ಶಿವನನ್ನು ಹಿಂಸಿಸಲು ಸಾಧ್ಯವೆ ? ಒಂದೇ ನಿಮಿಷದಲ್ಲಿ ಗಿರಿಜಾಪತಿಯು ಅದನ್ನು ನಾಶಗೊಳಿಸಲು ಅರ್ಜುನನು ಮತ್ತೆ ದಿವ್ಯಾಸ್ತ್ರವನ್ನು ಹೂಡಿಬಿಟ್ಟು ಅಬ್ಬರಿಸಿದನು. ೪೯. ಅರ್ಜುನನು ಬಿಟ್ಟ ಬಾಣಗಳನ್ನು ಶಿವನು ನುಂಗಿ ಬೀಗುವನು. ಕೋಪಗೊಂಡು ಮೂದಲಿಕೆಯ ಮಾತುಗಳನ್ನಾಡುವನು, ನೋಡುವನು, ಮತ್ತೆ ಮತ್ತೆ ತಿರುಗಿ ಪಾರ್ವತಿಗೆ ಸೂಚಿಸುವನು. ಹಾಸ್ಯದ ಮಾತುಗಳಿಂದ ಅರ್ಜುನನು ನಾಚುವಂತೆ ಮಾಡುವನು. ತಿಳಿಗೇಡಿಯೆ ನಿನ್ನ ಶೌರ್ಯ ಮಾಯವಾಯಿತೆ ? ತಗ್ಗಿತೆ ? ಬಾಣಗಳೂ ಮುಗಿದುಹೋಗಿ ಮಾಯವಾದುವೆ ? ಹೋದುವೆ ? ಯುದ್ಧದಲ್ಲಿ ನಮಗೆ ಸರಿಯಾದ ವೀರನೆ ಧೀರನೇ ನೀನು ? ಎಂದು ಶಿವನು ಕೇಳಿದನು. ೫೦. ಕಾಡಿನ ಬೇಡನು ಕೀಳುಜಾತಿಯವ, ನಿನ್ನಂತೆ ನಾನು ಬೇಡನಲ್ಲ. ನಾನು ಕ್ಷತ್ರಿಯ, ವೀರ ಎನ್ನಲು, ಆ ಮಾತಿಗೆ ಶಿವನು ನಾವು ಬೇಡರೆಂಬುದು ನಿಜಸಂಗತಿ. ಮೂರು ಲೋಕವೂ ತಿಳಿದಿರುವಂತೆ ನೀನು ಬೇಡಿ ತಪಸ್ಸನ್ನು ಮಾಡುತ್ತ ಬೇಡನಲ್ಲ ಎಂದರೆ ನಗುವುದಿಲ್ಲವೆ ? ದಡ್ಡತಪಸ್ವಿ, ನಿನ್ನ ಬತ್ತಳಿಕೆಯಲ್ಲಿ ಬಾಣವಿಲ್ಲ. ಹೇಗೆ ವೀರನಾಗುತ್ತೀಯೆ ? ನಿನ್ನ ಸ್ಥಿತಿಯನ್ನು ನೋಡಿಕೊಂಡು ನನ್ನನ್ನು ಹೀಯಾಳಿಸು ಎನ್ನಲು, ಅರ್ಜುನನು ನನ್ನನ್ನು ಹಳಿಯುವವನೇ ನೀನು ಎನ್ನುತ್ತ ಅರ್ಜುನನು ತನ್ನ ಬಿಲ್ಲಿನಿಂದ ಶಿವನನ್ನು ಹೊಡೆದನು.

CC-0. Jangamwadi Math Collection. Digitized by eGangotri

ನಸುನಗೆಯೊಳಂದು ಪಾರ್ಥನ ಕರದ ಚಾಪಮಂ
ಸಸಿದಲೆಯನೀಳ್ದು ಕೊಳಲರ್ಜುನನದಾಯುಧದೆ
ಮಸಗಿ ತಿವಿಯಲ್ಕದುಂ ಕೊಳೆ ಕಲ್ಗಳಿಂ ಗುಂಡಿನಿಂ ಮರದ ಕೊಂಬಿನಿಂದೆ
ಬಿಸಗೊರಲನಂ ಸೆಣಸಲೆಲೆ ತವಸಿ ನೀನೀಗ
ಪೊಸತಾದ ಕೆಯ್ದುವುಳ್ಳೊಡೆ ಕೊಂಡು ಬಾರೆನ
ಲ್ಕಸಮಬಲನಾನೆನಗೆ ಕೆಯ್ದುವೇಕೈ ಮಲ್ಲಯುದ್ಧಕನುವಾಗೆಂದನು ೫೧

ನೋಡಿದ್ಯೆ ದೇವಿ ಪಾರ್ಥನನೆನುತ್ತಾ ಚಂದ್ರ
ಚೂಡನರ್ಜುನನಿದಿರಿನೊಳ್ ನಿಂದು ಕೆಯ್ಗಳಂ
ನೀಡಿ ಬಾಹುಗಳನಪ್ಪಳಿಸಿ ಬೊಬ್ಬಿಡುತೊರ್ವರೊರ್ವರಂ ತಡೆದು ಪಿಡಿದು
ಝಾಡಿಸುವ ತೆಗೆವ ತೊಡಚುವ ಪಿಡಿವ ನೇಮವಂ
ನೋಡುವ ನಿಧಾನಿಸುವ ಭೀಷಣಧ್ವನಿಗಳಂ
ಮಾಡುವ ವಿರೋಧಿಯಿಂಗಿತವರಿವ ಬಿನ್ನಣಂ ಹರನರರೊಳೆಸೆದಿರ್ದುದು ೫೨

ಬಿಗಿವನಭವಂ ಬಿಡಿಸುವಂ ಪಾರ್ಥನಾಗ ಪೆರೆ
ದೆಗೆವನೀಶಂ ಪಿಡಿವನರ್ಜುನಂ ಸಮ್ಮುಖಕೆ
ನೆಗೆವನಗಜಾಧವಂ ವಂಚಿಸುವನೀ ನರಂ ಬಂಧಿಸುವನಹಿಭೂಷನು
ಮುಗುಳೆ ಕಳಚುವನೀ ಕಿರೀಟಿ ಹರನಾರ್ಭಟಿಸಿ
ಪೊಗುವನುಬ್ಬೆದ್ದು ಪೊಕ್ಕೊಡೆ ಬಾಹುಸತ್ತ್ವದಿಂ
ತೆಗೆವ ತುಡುಕುವ ತಡೆವ ಸಾಹಸಂ ನರಚಂದ್ರಚೂಡರೊಳ್ ಪೊಸತಾದುದು ೫೩

೫೧. ಆಗ ಚಂದ್ರಶೇಖರನು ನಸುನಗುತ್ತ ಪಾರ್ಥನ ಕೈಯ ಬಿಲ್ಲನ್ನು ಕಿತ್ತುಕೊಳ್ಳಲು ಅರ್ಜುನನು ಮೇಲೆ ಬಿದ್ದು ಕತ್ತಿಯಿಂದ ಅವನನ್ನು ತಿವಿದನು. ಶಿವನು ಅದನ್ನೂ ಕಿತ್ತುಕೊಳ್ಳಲು ಕಲ್ಲುಗುಂಡುಗಳಿಂದ ಮರದಕೊಂಬೆಯಿಂದ ಚಂದ್ರಶೇಖರನ ಕೂಡೆ ಯುದ್ಧಮಾಡಿದನು. ಆಗ ಶಿವನು 'ಎಲೆ ತಪಸ್ವಿ, ನೀನು ಈಗ ಹೊಸದಾದ ಆಯುಧ ಗಳು ಇದ್ದರೆ ತೆಗೆದುಕೊಂಡು ಬಾ' ಎಂದನು. ಆಗ ಅರ್ಜುನನು 'ನಾನು ಅಸಮಾನ ಪರಾಕ್ರಮಿ. ನನಗೆ ಆಯುಧ ಏಕೆ ಬೇಕು ? ಮಲ್ಲಯುದ್ಧಕ್ಕೆ ಸಿದ್ಧವಾಗು' ಎಂದನು. ೫೨. ನೋಡಿದೆಯೊ ದೇವಿ ಅರ್ಜುನನ ಪರಾಕ್ರಮವನ್ನು ? ಎನ್ನುತ್ತಾ ಚಂದ್ರಚೂಡನು ಅರ್ಜುನನ ಎದುರಿನಲ್ಲಿ ನಿಂತು ಕೈಗಳನ್ನು ಚಾಚಿ, ತೋಳುಗಳನ್ನು ತಟ್ಟಿ ಆರ್ಭಟಿಸುತ್ತ, ಒಬ್ಬರನ್ನು ಒಬ್ಬರು ತಡೆದು–ಹಿಡಿದು ಝಾಡಿಸುವ, ತೆಗೆಯುವ, ತೊಡರುಹಾಕುವ, ಹಿಡಿಯುವ ನಿಯಮವನ್ನು ನೋಡುವ, ಯೋಚಿಸುವ, ಭೀಕರವಾದ ಧ್ವನಿಗಳನ್ನು ಮಾಡುವ ವಿರೋಧಿಯ ಮನದ ಅಭಿಪ್ರಾಯವನ್ನು ತಿಳಿಯುವ ಜಾಣ್ಮೆ ಶಿವ ಮತ್ತು ಅರ್ಜುನರಲ್ಲಿ ಕಾಣಿಸಿತು. ೫೩. ಶಿವನು ಬಿಗಿಯುವನು, ಅರ್ಜುನನು ಬಿಡಿಸಿಕೊಳ್ಳುವನು. ಈಶ್ವರನು ಹಿಮ್ಮೆಟ್ಟುವನು, ಅರ್ಜುನನು ಅವನನ್ನು ಹಿಡಿಯುವನು. ಶಿವನು ಎದುರಿಗೆ ಹಾರುವನು, ಅರ್ಜುನನು ತಪ್ಪಿಸಿಕೊಳ್ಳುವನು. ಸರ್ಪಭೂಷಣನು ಬಂಧಿಸುವನು, ಮತ್ತೆ ಕಿರೀಟಿಯು ಬಿಡಿಸಿಕೊಳ್ಳುವನು, ಶಿವನು ಆರ್ಭಟಿಸಿ ಮೇಲೆ ಬೀಳುವನು,

CC-0. Jangamwadi Math Collection. Digitized by eGangotri

ಕರವಳಯದಿಂದೆ ಡೊಕ್ಕರದಿಂದಮಂಗುಲದಿ
ನುರಗಬಂಧನದಿಂದಮಂತರಲಗಡಿಯಿಂದೆ
ಸರಿಸಮಂಕಡದಿಂದೆ ತೋರಹತ್ತದಿನನಿತುಮೊದಲಾಗಿ ಕಣ್ಗೊಳಿಸುವ
ಗುರುತರದ ಮಲ್ಲಯುದ್ಧದ ಜಾಣ್ಮೆ ನೋಳ್ಪವ
ರ್ಗರಿದೆನಿಸೆ ವಜ್ರನಿಭಮುಷ್ಟಿಯಿಂದರ್ಜುನಂ
ಹರನನೆರಗಲ್ ತಪಸಿ ನೀಂ ಕೆಟ್ಟೆ ಹೋಗೆನುತೆ ಶಿವನಾತನಂ ತಿವಿದನು ೫೪

ಕುಣಿದುವಿರ್ವರ ಮುಷ್ಟಿಯಿರ್ವರಂಗಂಗಳೊಳ್
ಖಣಿಖಟಿಲ್ ಖಟಿಲೆಂದು ರವಮುಣ್ಮೆ ಹತಿಗಗ್ನಿ
ಕಣಮೊಗೆಯೆ ಹೊಗೆಯೆ ಸ್ವೇದಾಂಬುವುಂ ರುಧಿರಜಲಮುಳವಳಿದು ನರನಾಗಳು
ಸೆಣಸಲೆನ್ನೊಳ್ ಸಮರ್ಥನೆ ಶಬರನಿವನೆನು
ತ್ತಣಕದಿಂದೆರಗೆ ವಂಚಿಸುತಭವನೀ ನರನ
ಪಣೆಯನಣೆಯಲ್ ನೊಂದು ನರನಳಲಿ ಮುಷ್ಟಿಯುಂ ನೆಗೆಪಿ ಬಳಿಕಿಂತೆಂದನು ೫೫

ಮಾಯದಿಂದೆನ್ನ ಶರನಿವಹಮಂ ಸವರಿದ ವಿ
ಡಾಯಕಿದೆ ಮದ್ದು ಮಂತ್ರಾಸ್ತ್ರಮಂ ತವೆ ನುಂಗಿ
ದಾಯತಿಕೆಗಿದೆ ಮೃತ್ಯು ಚಾಪಮಂ ಕೊಂಡ ಗರ್ವಾದ್ರಿಗಿದೆ ವಜ್ರದಂಡಂ

ಉತ್ಸಾಹಿಸಿ ಮೇಲೆಬಿದ್ದರೆ ತೋಳಬಲದಿಂದ ಬಿಡಿಸಿಕೊಳ್ಳುವ, ಹಿಡಿಯುವ, ತಡೆಯುವ ಸಾಹಸ ಅರ್ಜುನ ಮತ್ತು ಶಿವರಲ್ಲಿ ಹೊಸತಾಗಿ ಕಾಣಿಸಿತು. ೫೪. ಕರವಲಯದಿಂದ, ಗುದ್ದುವಿಕೆಯಿಂದ, ಬೆರಳಿನಿಂದ, ಸರ್ಪಬಂಧನದಿಂದ, ಅಂತರಲಗಡದಿಂದ ಸರಿಸಮುಂಕಡದಿಂದ, ಅಂಗೈತಳದಿಂದ ಹೀಗೆ ಅನೇಕ ರೀತಿಯಾಗಿ ಕಂಗೊಳಿಸುವ ಶ್ರೇಷ್ಠವಾದ ಮಲ್ಲಯುದ್ಧದ ಚಾತುರ್ಯವು ನೋಡುವವರಿಗೆ ಅಸಾಧ್ಯ ಎನ್ನಿಸಲು ವಜ್ರದಂತೆ ಕಠಿಣವಾದ ಮುಷ್ಟಿಯಿಂದ ಅರ್ಜುನನು ಬಲವಾಗಿ ಈಶ್ವರನ ಮೇಲೆ ಬೀಳಲು ಆಗ 'ತಪಸ್ವೀ ನೀನು ಕೆಟ್ಟೆ ಹೋಗು' ಎನ್ನುತ್ತ ಶಿವನು ಅವನನ್ನು ತಿವಿದನು, ೫೫. ಇಬ್ಬರ ಮುಷ್ಟಿಯು ಇಬ್ಬರ ದೇಹಗಳಲ್ಲಿಯೂ ಕುಣಿದುವು. ಖಣಿಖಟಿಲ್ ಖಟಿಲ್ ಎಂದು ಶಬ್ದ ಹೊಮ್ಮಲು, ಹೊಡೆತಕ್ಕೆ ಬೆಂಕಿಯ ಕಿಡಿ ಹೊರಟು ಹೊಗೆಯಾಡಲು, ಬೆವರೂ ರಕ್ತವೂ ಸುರಿಯಲು ಅರ್ಜುನನು ಶಕ್ತಿಗುಂದಿ ಆಗ, ಈ ಬೇಡನು ನನ್ನೊಡನೆ ಯುದ್ಧ ಮಾಡುವಷ್ಟು ಪರಾಕ್ರಮಿಯೆ ಎಂದು ಅಣಕವಾಡುತ್ತ ಶಿವನ ಮೇಲೆ ಬಿದ್ದನು. ಶಿವನು ಅವನಿಂದ ತಪ್ಪಿಸಿಕೊಂಡು ಅರ್ಜುನನ ಹಣೆಗೆ ಹೊಡೆಯಲು ನೊಂದು, ನರಳಿ ವ್ಯಥೆ ಪಟ್ಟು ಮುಷ್ಟಿ ತೆಗೆದು ಅನಂತರ ಹೀಗೆಂದನು. ೫೬. ಮಾಯದಿಂದ ನನ್ನ ಬಾಣಗಳ ಸಮೂಹವನ್ನು ನಾಶಮಾಡಿದ ಹೆಚ್ಚಳಕ್ಕೆ ಇದೇ ಔಷಧ. ಮಂತ್ರಾಸ್ತ್ರವನ್ನು ನುಂಗಿದ ಪರಾಕ್ರಮಕ್ಕೆ ಇದೇ ಮೃತ್ಯು. ಬಿಲ್ಲನ್ನು ಕಿತ್ತುಕೊಂಡ ಗರ್ವಪರ್ವತಕ್ಕೆ ಇದೇ

CC-0. Jangamwadi Math Collection. Digitized by eGangotri

ನೋಯಬೇಡೆಲವೆಲವೊ ಪೋಗು ಲುಬ್ಧಕ ನಿನ್ನ
ಕಾಯಕಿದೆ ಕಡೆಯೆನುತೆ ಪಾರ್ಥನುಬ್ಬೆದ್ದು ಪೂ
ರಾಯದಿಂ ಹರನ ವಕ್ಷಸ್ಥಳವನುರೆ ತಿವಿದು ನರನಾರ್ದು ಬೊಬ್ಬಿರಿದನು ೫೬

ಪರಿಹರಿಸಿ ನರನು ಧುರಾವನಿಯೊಳಡೆಗೆಡಹಿ
ಹರನಂದು ಮೆಟ್ಟಿ ಮೆಲ್ಲಡಿ ಸೋಂಕುಮಾತ್ರದಿಂ
ದರುಣಜಲಮು ಕಾರಿದಂ ಬಾಯೊಳುಂ ನಾಸಿಕದೊಳಮುರಿ ತೀವ್ರಮಾಗಿ
ಕರಗಿದುದು ಚಿತ್ತಮರ್ಜುನನಿರವನೀಕ್ಷಿಸುತೆ
ಕರುಣದಿಂ ಫಲ್ಗುಣಂ ನೊಂದನಕಟೆಂದು ಶಂ
ಕರನೆರ್ದೆಯೊಳಿರದೆ ಮರುಗಿದನತಿಕೃಪಾಳುವಲ್ಲಾ ಶಿವಂ ಭಕ್ತರೆಡೆಗೆ ೫೭

ಶಿವನ ಮೆಲ್ಲಡಿ ಸೋಂಕಲೊಡನೆ ಕೌಂತೇಯನವ
ಯವಮೆಲ್ಲ ನೆಗ್ಗಿ ಮೈಮರೆದು ಚೇತರಿಸಿ ಕ
ಣ್ಣೆವೆದೆರೆದು ನೋಡಿ ತನಗಾವ ಜನ್ಮದ ಮಹಾಪಾತಕಂ ಸಮನಿಸಿದುದೋ
ಶಿವಗೃಹಂಗಳನಳಿದು ಶಿವನ ಮತಮಂ ಪಳಿದು
ಶಿವಭಕ್ತರಂ ಜರೆದ ಕಾರಣಂ ತನಗೆ ಪರಿ
ಭವಮಾದುದೀತನಿಂದಾತನಂ ಮರೆವೊನೆಂದರ್ಜುನಂ ತಿಳಿದನು ೫೮

ವಜ್ರಾಯುಧ. ನೋಯಬೇಡ ಎಲವೆಲವೋ ಬೇಡ, ಹೋಗು, ನಿನ್ನ ಶರೀರಕ್ಕೆ ಇದೇ ಕೊನೆ ಎನ್ನುತ್ತ ಪಾರ್ಥನು ಉತ್ಸಾಹಿಸಿ ಸಂಪೂರ್ಣಶಕ್ತಿಯಿಂದ ಶಿವನ ಎದೆಯನ್ನು ಜೋರಾಗಿ ತಿವಿದು ಕೂಗಿ ಬೊಬ್ಬಿರಿದನು. ೫೭. ಅರ್ಜುನನನ್ನು ತಡೆದು ಯುದ್ಧ ಭೂಮಿಯಲ್ಲಿ ಕೆಳಕ್ಕೆ ಕೆಡವಿ ಅಂದು ಶಿವನು ತುಳಿಯಲು ಮೃದುವಾದ ಪಾದದ ತೂಗುವಿಕೆಯಿಂದಲೇ ಬಾಯಲ್ಲಿ, ಮೂಗಿನಲ್ಲಿ ರಕ್ತವು ತುಂಬಿಕೊಂಡು ಕಾರಿದನು. ಅರ್ಜುನನ ಶೋಚನೀಯ ಸ್ಥಿತಿಯನ್ನು ನೋಡಿ ಕೂಡಲೇ ಶಿವನ ಮನಸ್ಸು ಕರಗಿತು. ಅವನು ಕರುಣೆಯಿಂದ, ಅಯ್ಯೋ ಅರ್ಜುನನು ನೊಂದನು ಎಂದು ಮನಸ್ಸಿನಲ್ಲಿಯೇ ಮರುಗಿದನು. ಭಕ್ತರ ವಿಷಯದಲ್ಲಿ ಶಿವನು ಅತಿಕೃಪಾಳುವಲ್ಲವೆ ? ೫೮. ಶಿವನ ಮೃದುವಾದ ಪಾದ ಸೋಕಿದ ಕೂಡಲೇ ಅರ್ಜುನನ ಅಂಗಾಂಗವೆಲ್ಲ ನೆಗ್ಗಿ ಮೂರ್ಛೆ ಹೋಗಿ ಮತ್ತೆ ಎಚ್ಚರಗೊಂಡು ಕಣ್ಣರೆಪ್ಪೆ ತೆಗೆದು ನೋಡಿ, ನನಗೆ ಯಾವ ಜನ್ಮದ ಮಹಾಪಾಪ ಸಂಭವಿಸಿತೋ ? ಶಿವನ ದೇವಾಲಯಗಳನ್ನು ನಾಶಮಾಡಿ ಶೈವಧರ್ಮ ವನ್ನು ಹಳಿದು, ಶಿವಭಕ್ತರನ್ನು ಹೀಯಾಳಿಸಿದ ಕಾರಣದಿಂದ ನನಗೆ ಈತನಿಂದ ಪರಾಭವವಾಯಿತು. ಈಶ್ವರನನ್ನೇ ಮರೆಹೊಗುತ್ತೇನೆ ಎಂದು ಅರ್ಜುನನು ಯೋಚಿಸಿ

CC-0. Jangamwadi Math Collection. Digitized by eGangotri

ಎಸೆವ ಮಳಲಿಂ ಲಿಂಗಮಂ ಮಾಡಿ ಪರಿಪರಿಯ
ಕುಸುಮಂಗಳಂ ತಿರಿದುತಂದು ಭಕ್ತಿಯೊಳೆ ಪೂ
ಜೆಸಿ ಶೈವಮಂತ್ರಮಂ ಜಪಿಸಿ ಬಲವಂದು ಲಿಂಗವ ನೋಡಿ ಸಂತಸದೊಳು
ಅಸಮಾಕ್ಷ ದಕ್ಷಮುಖಶಿಕ್ಷ ಲೋಕಾಧ್ಯಕ್ಷ
ಹಸಗೆಡಿಸಿದಂ ಶಬರನೆನ್ನನಿನ್ನಿವನ ಶಿ
ಕ್ಷಿಸುವನಿತು ಸತ್ತ್ವಮಂ ಪಾಲಿಸೆಂದರ್ಜುನಂ ನುತಿಸಿ ಬಳಿಕತ್ತ ನೋಡೆ ೫೯

ಇತ್ತಲರ್ಜುನನಭವನಂ ಪೂಜಿಸಿದ ಕುಸುಮ
ಮತ್ತಲ್ ಕಿರಾತಮಸ್ತಕದೊಳಿರೆ ಕೌತುಕದೆ
ಮತ್ತೆ ಪೂಜಿಸಲವು ಕಿರಾತಮಂಡೆಯೊಳಿರಲ್ ಶಿವನೆಂದು ತಿಳಿದು ಕೂಡೆ
ಮತ್ತನಾದೆಂ ದೇವ ಕಾಯೆನುತ್ತೆರಗೆ ನರ
ನುತ್ತಮಾಂಗವನಿರದೆ ನೆಗಪಿ ಗಿರಿಜಾಧವಂ
ಬಿತ್ತರಿಸಿದಂ ತನ್ನ ನಿಜಮೂರ್ತಿಯಂ ಶಾಬರವನುಳಿದು ಸಂತಸದೊಳು ೬೦

ಎಳೆವೆರೆಯ ಬಾಂದೊರೆಯ ಪಂಚಾಸ್ಯ
ದೊಳೆ ಪೊಳೆವ ಪಂಚದಶಲೋಚನದ ದಶಭುಜದ
ಪುಲಿದೊವಲ ಢಕ್ಕೆ ಡಮರುಗ ಶೂಲ ಮುಖ್ಯಾಯುಧಂದಳೆದ ಹಸ್ತಂಗಳ
ಪೊಳೆವ ಶುದ್ಧಸ್ಫಟಿಕಸಂಕಾಶಕಾಯದು
ಜ್ವಲಿಪ ಸೂರ್ಯೇಂದುಶತಕೋಟಿತೇಜದ ತೊಡೆಯೊ
ಳೊಲಿದಿರ್ಪ ಪಾರ್ವತಿಯ ಪಂಪಾವಿರೂಪಾಕ್ಷನೊಪ್ಪಿದಂ ನರನಿದಿರೊಳು ೬೧

ದನು. ೫೯. ಪ್ರಕಾಶಿಸುವ ಮರಳಿನಿಂದ ಲಿಂಗವನ್ನು ಮಾಡಿ ನಾನಾ ರೀತಿಯ ಹೂಗಳನ್ನು ಕಿತ್ತು ತಂದು ಭಕ್ತಿಯಿಂದ ಪೂಜೆಮಾಡಿ, ಶಿವಮಂತ್ರವನ್ನು ಜಪಿಸಿ ಪ್ರದಕ್ಷಿಣೆ ಮಾಡಿ, ಲಿಂಗವನ್ನು ನೋಡಿ ಸಂತೋಷದಿಂದ ಮುಕ್ಕಣ್ಣನೆ, ದಕ್ಷನ ಯಾಗ ವನ್ನು ನಾಶಗೊಳಿಸಿದವನೆ, ಲೋಕದ ಒಡೆಯನೇ, ಬೇಡನು ನನ್ನನ್ನು ಪರಾಭವಗೊಳಿಸಿ ದನು. ಇನ್ನು ಇವನನ್ನು ಶಿಕ್ಷಿಸುವಷ್ಟು ಸಾಮರ್ಥ್ಯವನ್ನು ದಯಪಾಲಿಸು ಎಂದು ಅರ್ಜುನನು ಪ್ರಾರ್ಥಿಸಿ ಅನಂತರ ಅತ್ತಕಡೆ ನೋಡಲು ೬೦. ಇತ್ತ ಅರ್ಜುನನು ಶಿವನನ್ನು ಪೂಜಿಸಿದ ಹೂಗಳು ಅತ್ತ ಬೇಡನ ತಲೆಯಲ್ಲಿ ಕಾಣಿಸಿಕೊಳ್ಳಲು ಚಕಿತನಾಗಿ ಮತ್ತೆ ಪೂಜೆಮಾಡಿದನು. ಅವೂ ಕೂಡ ಕಿರಾತನ ತಲೆಯಲ್ಲಿ ಇರಲು ಅವನು ಶಿವನೇ ಎಂದು ತಿಳಿದು ತಕ್ಷಣ 'ದೇವ, ನಾನು ಗರ್ವಿತನಾದೆ. ಕಾಪಾಡು' ಎನ್ನುತ್ತ ಕಾಲಿಗೆ ಬಿದ್ದನು. ಶಿವನು ಅರ್ಜುನನ ತಲೆಯನ್ನು ಹಿಡಿದೆತ್ತಿ ತನ್ನ ಬೇಡನ ರೂಪವನ್ನು ಬಿಟ್ಟು ಸಂತೋಷದಿಂದ ನಿಜಸ್ವರೂಪವನ್ನು ತೋರಿಸಿದನು. ೬೧. ಬಾಲಚಂದ್ರನ, ದೇವಗಂಗೆಯ, ಕೆಂಜಡೆಯ, ಐದು ಮುಖಗಳಲ್ಲಿ ಹೊಳೆಯುವ ಹದಿನೈದು ಕಣ್ಣುಗಳ, ಹತ್ತು ತೋಳುಗಳ, ಹುಲಿಯ ಚರ್ಮದ, ಡಕ್ಕೆ, ಡಮರುಗ, ಶೂಲ ಮೊದಲಾದ ಆಯುಧಗಳನ್ನು ಹಿಡಿದ ಕೈಗಳ, ಶುದ್ಧವಾದ ಸ್ಫಟಿಕದಂತೆ ಪ್ರಕಾಶಿಸುವ ದೇಹದ, ಉಜ್ವಲಿಸುವ ನೂರು ಕೋಟಿ ಸೂರ್ಯ-ಚಂದ್ರರ ತೇಜವುಳ್ಳ, ತೊಡೆಯಲ್ಲಿ ಕುಳಿತಿದ್ದ

CC-0. Jangamwadi Math Collection. Digitized by eGangotri

ವೀರಭದ್ರಂ ಕುಮಾರಂ ನಂದಿ ಭೃಂಗಿಯುಂ
ಹೇರಂಬನಾದಿಯಾಗಿರ್ಪ ನಾನಾಪ್ರಮಥ
ವೀರರೆಲ್ಲಂ ಶಾಬರವನುಳಿದು ನಿಜರೂಪಿನಿಂ ಹರನ ಬಳಸಿರಲ್ಕೆ
ಪಾರಾಶರಾತ್ರಿಮುನಿಯಾಂಗಿರಸ ಕೌಶಿಕಮ
ಹಾಋಷಿ ವಶಿಷ್ಠಾದಿಗಳ್ ನರನ ದೆಸೆಯಿಂದ
ಮೀ ರಮ್ಯಮೂರ್ತಿಯಂ ಕಂಡೆವೆನುತೆರಗಿದರ್ ಜಯಯೆನುತೆ ಶಿವನಿದಿರೊಳು ೬೨

ದುಂದುಭಿಯ ರಭಸದಿಂದರಳಮಳೆಯುಂ ಸುರರ್
ಮಂದಾಕಿನೀಧರನ ಮಣಿಮಕುಟದೊಳ್ ಜಯಜ
ಯೆಂದು ಕರೆದರ್ ವೇದಶಾಸ್ತ್ರಾಗಮಂ ಪುರಾಣಂಗಳತಿಹರುಷದಿಂದೆ
ನಿಂದು ನಿಜರೂಪಿನಿಂ ಪೊಗಳುತಿರ್ದುವು ಮಹಾ
ನಂದದಿಂ ಶಿವಮೂರ್ತಿಯಂ ಕಂಡು ಪಾರ್ಥನಾ
ನಂದಾಶ್ರು ತುಳ್ಕಾಡೆ ಮನದಣಿಯೆ ಪೊಗಳುತಿರ್ದಂ ಮಹಾಭಕ್ತಿಯಿಂದೆ ೬೩

ರುದ್ರಾಯ ಗಿರಿಶಾಯ ಶರ್ವಾಯ ಕರುಣಾಸ
ಮುದ್ರಾಯ ಲೋಕನಾಥಾಯ ಗಜದಾನವ
ಚ್ಛಿದ್ರಾಯ ನುತಖಂಡಪರಶವೇ ದಕ್ಷಮಖಸಂಹಾರಕಾರಣಾಯ
ಭದ್ರಾಯ ಭರ್ಗಾಯ ಮೃತ್ಯುಂಜಯಾಯ ಬಹು
ರೌದ್ರಾಸ್ಪದಾಯ ದುರಿತಧ್ವಂಸಿನೇ ವರಹಿ
ಮಾದ್ರಿಜಾಕುಚಭೂಷಣಾಯ ಭೂತೇಶಾಯ ವಿಶ್ವಾತ್ಮನೇ ನಮಸ್ತೇ ೬೪

ಪಾರ್ವತಿಯ ಸಮೇತ ಪಂಪಾವಿರೂಪಾಕ್ಷನು ಅರ್ಜುನನ ಎದುರಿನಲ್ಲಿ ಕಂಗೊಳಿಸಿದನು. ೬೨. ವೀರಭದ್ರ, ಷಣ್ಮುಖ, ನಂದಿ, ಭೃಂಗಿ, ಗಣೇಶ ಮೊದಲಾಗಿದ್ದ ನಾನಾ ಪ್ರಮಥ ವೀರರೆಲ್ಲ ಬೇಡರೂಪವನ್ನು ಬಿಟ್ಟು ನಿಜರೂಪದಿಂದ ಶಿವನನ್ನು ಬಳಸಿರಲು, ಪರಾಶರ, ಅತ್ರಿ, ಆಂಗಿರಸ, ಕೌಶಿಕ ಮಹಾಋಷಿ, ವಶಿಷ್ಠಾದಿಗಳು ಅರ್ಜುನನ ದೆಸೆಯಿಂದ ಶಿವನ ಈ ಮನೋಹರವಾದ ಮೂರ್ತಿಯನ್ನು ನೋಡಿದೆವು ಎಂದು ಶಿವನ ಎದುರಿನಲ್ಲಿ ಜಯಕಾರ ಮಾಡುತ್ತ ನಮಸ್ಕರಿಸಿದರು. ೬೩. ದುಂದುಭಿಯ ಆರ್ಭಟದಿಂದ ಜಯ ಜಯ ಎನ್ನುತ್ತ ದೇವತೆಗಳು ಗಂಗಾಧರನ ರತ್ನದ ಕಿರೀಟದ ಮೇಲೆ ಹೂಮಳೆ ಕರೆದರು. ವೇದ-ಶಾಸ್ತ್ರ-ಆಗಮ-ಪುರಾಣಗಳು ಅತಿಯಾದ ಸಂತೋಷದಿಂದ ತಮ್ಮ ನಿಜರೂಪವನ್ನು ಧರಿಸಿ ನಿಂತು ಹೊಗಳುತ್ತಿದ್ದುವು. ಬಹಳ ಆನಂದದಿಂದ ಶಿವನ ಮೂರ್ತಿಯನ್ನು ನೋಡಿ ಪಾರ್ಥನು ಆನಂದಾಶ್ರು ಸುರಿಯುತ್ತಿರಲು ಮಹಾಭಕ್ತಿಯಿಂದ ಮನದಣಿಯ ಹೊಗಳುತ್ತಿದ್ದನು. ೬೪. ಹೇ ರುದ್ರನೇ, ಗಿರೀಶ, ಶರ್ವನೇ, ರುದ್ರಾಯ, ಗಿರಿಯು, ಕರುಣಾಸಮುದ್ರನೇ, ಲೋಕನಾಥ, ಗಜದಾನವನನ್ನು ಛಿದ್ರಿಸಿದವನೇ, ಖಂಡಪರಶುವೇ, ದಕ್ಷಯಜ್ಞದ ಸಂಹಾರಕಾರಣನೇ, ಭದ್ರನೇ, ಭರ್ಗನೇ, ಮೃತ್ಯುಂಜಯನೇ, ಬಹು ರೌದ್ರಾಸ್ಪದನೇ, ಪಾಪಗಳನ್ನು ಧ್ವಂಸಮಾಡುವವನೇ, ಗಿರಿಜೆಯ ಸ್ತನಗಳಿಗೆ ಭೂಷಣ

CC-0. Jangamwadi Math Collection. Digitized by eGangotri

ನಿರುಪಮ ನಿರಾಧಾರ ನಿತ್ಯನಿಷ್ಕಾಮಿ ಜಯ
ನಿರುತಂ ನಿಗಮದೂರ ನಿರ್ಮಾಯ ನಿರ್ಗುಣನೆ
ಪರಮಪಾವನ ಪಂಚಮುಖ ಪಂಚಬಾಣಹರ ಪಾರ್ವತೀಪ್ರಾಣನಾಥಾ
ಕರಿಚರ್ಮವಸನ ಕರಧೃತಕಮಲಭವವದನ
ಸುರ ನರೋರಗನಮಿತ ಸೂರ್ಯೇಂದುವಹ್ನಿಭಾ
ಸುರನಯನ ಸಲಹೆಂದು ಶಂಭುವಂ ಪೊಗಳಿದಂ ಪಾರ್ಥನತಿಭಕ್ತಿಯಿಂದೆ ೬೫

ದೇವ ಸಲಹರಿವಿಪಿನದಾವ ಸಲಹತುಳರಾ
ಜೀವಭವಶಕ್ರನುತಪಾವನಪದಾಬ್ಜ ಲೋ
ಕಾವಳೀಭಕ್ತಸಂಜೀವನ ಸುಜನಸೇವ್ಯ ಭಾವಿಸದಿರಪರಾಧವಂ
ಕಾವನಂ ಗೆಲ್ದ ಲೋಕಾವನತ ಸಲಹು ಭುವ
ನಾವಲಂಬನ ದೇವ ದೇವ ನಿಜಭಕ್ತನನ
ಭ್ಯಾವವಂ ಮಾಡದುರೆ ಕಾವುದೆಂದರ್ಜುನಂ ಸಾವಧಾನದೆ ಪೊಗಳ್ದನು ೬೬

ಕರಕಮಲದಿಂದೆ ನರನಂ ತೆಗೆದು ಬಿಗಿಯಪ್ಪಿ
ಕರಗದಿರ್ ನೀ ಮಾಡಿದುಪಹತಿಯೆ ಪೂಜೆ ನಿ
ನ್ನುರುಚಾಪಖಡ್ಗಬಾಣಂಗಳಂ ಕೊಳ್ಳೆನುತೆ ಕೊಟ್ಟು ನಿನ್ನಿಷ್ಟವೇನು

ದಂತಿರುವವನೇ, ಭೂತೇಶನೇ, ವಿಶ್ವಾತ್ಮನೇ ನಮಸ್ಕರಿಸುತ್ತೇನೆ. ೬೫. ನಿರುಪಮ, ನಿರಾಧಾರ, ನಿತ್ಯ, ನಿಷ್ಕಾಮಿಗೆ ಜಯವಾಗಲಿ. ನಿರುತ ನಿಗಮದೂರ, ನಿರ್ಮಾಯ, ನಿರ್ಗುಣನೆ, ಪರಶುಪಾವನನೆ, ಪಂಚಮುಖನೆ, ಮನ್ಮಥಧ್ವಂಸಿಯೆ, ಪಾರ್ವತಿಯ ಪ್ರಾಣನಾಥ, ಗಜಚರ್ಮಾಂಬರ, ಕೈಯಲ್ಲಿ ಬ್ರಹ್ಮನ ತಲೆಯನ್ನು ಹಿಡಿದಿರುವವನೆ, ದೇವ ಮಾನವ ನಾಗರಿಂದ ನಮಸ್ಕರಿಸಿಕೊಳ್ಳುವವನೆ, ಸೂರ್ಯ-ಚಂದ್ರ-ಅಗ್ನಿಯನ್ನೇ ಹೊಳೆಯುವ ಕಣ್ಣಾಗಿ ಉಳ್ಳವನೆ ಕಾಪಾಡು ಎಂದು ಪಾರ್ಥನು ಅತಿಭಕ್ತಿಯಿಂದ ಶಿವನನ್ನು ಹೊಗಳಿದನು. ೬೬. ದೇವ ಕಾಪಾಡು ಶತ್ರುಗಳೆಂಬ ಅರಣ್ಯಕ್ಕೆ ಕಾಳ್ಗಿಚ್ಚಿನಂತಿರುವವನೇ, ಸಲಹು, ಶ್ರೇಷ್ಠರಾದ ಬ್ರಹ್ಮ-ದೇವೇಂದ್ರರಿಂದ ನಮಸ್ಕರಿಸಿಕೊಳ್ಳುವ ಪಾದಕಮಲಗಳುಳ್ಳವನೇ, ಲೋಕದಲ್ಲಿ ಇರುವ ಎಲ್ಲ ಭಕ್ತರಿಗೂ ಸಂಜೀವನನೇ, ಸಜ್ಜನರಿಂದ ಸೇವೆ ಮಾಡಿಸಿಕೊಳ್ಳುವವನೇ ನನ್ನ ಅಪರಾಧವನ್ನು ಮನಸ್ಸಿಗೆ ತೆಗೆದುಕೊಳ್ಳಬೇಡ. ಮನ್ಮಥನನ್ನು ಗೆದ್ದ ಲೋಕಪೂಜ್ಯನೇ ಕಾಪಾಡು. ಲೋಕಕ್ಕೆಲ್ಲ ಆಧಾರನೆ, ದೇವ ದೇವ, ನಿನ್ನ ಭಕ್ತನನ್ನು ಕೈಬಿಡದೆ ಚೆನ್ನಾಗಿ ಕಾಪಾಡು ಎಂದು ಅರ್ಜುನನು ಸಾವಧಾನದಿಂದ ಹೊಗಳಿದನು. ೬೭. ಶಿವನು ಕೈಗಳಿಂದ ಅರ್ಜುನನನ್ನು ಎತ್ತಿ ಆಲಂಗಿಸಿಕೊಂಡು, ದುಃಖಿಸಬೇಡ ನೀನು ಕೊಟ್ಟ ತೊಂದರೆಯೇ ನನಗೆ ಪೂಜೆ, ನಿನ್ನ ಶ್ರೇಷ್ಠವಾದ ಬಿಲ್ಲು, ಕತ್ತಿ, ಬಾಣಗಳನ್ನು ತೆಗೆದುಕೋ ಎನ್ನುತ್ತ ಹಿಂದಕ್ಕೆ ಕೊಟ್ಟು ನಿನಗೇನು ಬೇಕು ಕೇಳು

CC-0. Jangamwadi Math Collection. Digitized by eGangotri

ಒರೆಯೆನಲ್ ದೇವ ಪಾಲಿಸು ಪಾಶುಪತಮಹಾ
ಶರವನೆನೆ ಕೊಟ್ಟನುಮೆಯಿತ್ತಳಂಜನಶರವ
ನಿರದಾಗ ಹರ ಸುರ ಗಣಾಧಿಪರ್ ಕೊಟ್ಟರೊಲಿದೊಂದೊಂದು ಬಾಣಂಗಳ ೬೭

ಕೊಂಡಾಡುವಖಿಳಮುನಿನಿಕರವಂ ಮನ್ನಿಸುತೆ
ಮುಂಡಾಡಿ ಫಲ್ಗುಣನನಳ್ಕರಿಂ ಬೀಳ್ಕೊಟ್ಟು
ಚಂಡಕರಪಾವಕಶಶಾಂಕನಯನಂ ರಜತಪರ್ವತಂಬೊಕ್ಕನಂದು
ಖಂಡಪರಶುವಿನ ಲೀಲೆಗಳಿಪ್ಪತ್ತೈದು ಕಡೆ
ಗಂಡುವೀಬಳಿಗೆನಲ್ ಪಾರ್ಥನಾ ಬಾಣವಂ
ಕೊಂಡದೇಗೈದನವನಾರ ಮಗನಾ ಕಥೆಯನುಸಿರೆನಲ್ಕಿಂತೆಂದನು ೬೮

ಇದು ಸಕಲ ವೀರಮಾಹೇಶ್ವರರ ಸದ್ವಿಮಲ
ಹೃದಯಾಬ್ಜಮಿತ್ರನುರುಷಟ್ಸ್ಥಲಬ್ರಹ್ಮವೆಂ
ಬುದಧಿವರ್ಧನಸೋಮನೆನಿಪ ಗುರುಸಿದ್ಧವೀರೇಶ್ವರನ ಕರಜಾತನು
ಸದಮಲಜ್ಞಾನಿ ಸಕಲಾಗಮಪುರಾಣಕೋ
ವಿದನಾ ವಿರೂಪಾಕ್ಷಪಂಡಿತಾರಾಧ್ಯರತಿ
ಮುದದೆ ಪೇಳ್ದೀ ಚೆನ್ನಬಸವಪೌರಾಣಕಥೆಯೊಳಗೆ ನಾಲ್ಕನೆಯ ಕಾಂಡಂ ೬೯

ಎಂದನು. ದೇವನೆ, ಪಾಶುಪತಬಾಣವನ್ನು ದಯಪಾಲಿಸು ಎನ್ನಲು ಶಿವನು ಅದನ್ನು ಕೊಟ್ಟನು. ಪಾರ್ವತಿಯು ಅಂಜನಾಸ್ತ್ರವನ್ನು ಕೊಟ್ಟಳು. ಆಗ ಶಿವಗಣ ಸುರಗಣ ನಾಯಕರೂ ಅರ್ಜುನನಿಗೊಲಿದು ಒಂದೊಂದು ಬಾಣಗಳನ್ನು ಕೊಟ್ಟರು. ೬೮. ಕೊಂಡಾಡುತ್ತಿರುವ ಎಲ್ಲ ಮುನಿಸಮೂಹವನ್ನೂ ಮನ್ನಿಸಿ, ಅರ್ಜುನನನ್ನು ಪ್ರೀತಿಯಿಂದ ಮುದ್ದಾಡಿ ಬೀಳ್ಕೊಟ್ಟು, ಸೂರ್ಯ-ಅಗ್ನಿ-ಚಂದ್ರರನ್ನೇ ಕಣ್ಣನ್ನಾಗಿ ಉಳ್ಳ ಶಿವನು ರಜತಗಿರಿಯನ್ನು ಪ್ರವೇಶಿಸಿದನು. ಇಲ್ಲಿಗೆ ಶಿವನ ಇಪ್ಪತ್ತೈದು ಲೀಲೆಗಳು ಕೊನೆಗೊಂಡುವು ಎನ್ನಲು, ಅರ್ಜುನನು ಆ ಬಾಣವನ್ನು ತೆಗೆದುಕೊಂಡು ಏನು ಮಾಡಿದನು ? ಅವನು ಯಾರ ಮಗ ? ಆ ಕಥೆಯನ್ನು ಹೇಳೆಂದು ಸಿದ್ಧರಾಮನು ಕೇಳಲು ಹೀಗೆಂದನು. ೬೯. ಎಲ್ಲ ವೀರ ಮಹೇಶ್ವರರ ನಿರ್ಮಲ ಹೃದಯಕಮಲಗಳಿಗೆ ಮಿತ್ರನಾದ ಸೂರ್ಯನಂಥವನು, ಶ್ರೇಷ್ಠವಾದ ಷಟ್‌ಸ್ಥಲಬ್ರಹ್ಮವೆಂಬ ಸಮುದ್ರವನ್ನು ಉಬ್ಬಿಸುವ ಚಂದ್ರನಂತಹವನಾದ ಗುರುಸಿದ್ಧ ವೀರೇಶ್ವರನ ಶಿಷ್ಯನೂ ವಿಮಲಜ್ಞಾನಿಯೂ ಎಲ್ಲ ಆಗಮ ಪುರಾಣಗಳಲ್ಲಿ ಕೋವಿದನೂ ಆದ ವಿರೂಪಾಕ್ಷ ಪಂಡಿತನು ಅತಿಪ್ರೀತಿಯಿಂದ ಬರೆದ ಚೆನ್ನಬಸವಪುರಾಣವೆಂಬ ಉತ್ತಮವಾದ ಕಥೆಯಲ್ಲಿ ಇದು ನಾಲ್ಕನೆಯ ಕಾಂಡವು.

CC-0. Jangamwadi Math Collection. Digitized by eGangotri

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತವಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖವಂ ಸಕಲಭೋಗವನ
ನಂತ ಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ೭೦

ಐವತ್ತುಮೂರನೆಯ ಸಂಧಿ ಸಂಪೂರ್ಣ

ಚತುರ್ಥ ಕಾಂಡಂ ಸಮಾಪ್ತಂ

೭೦. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವೇಶನ ಪುರಾಣವನ್ನು ಸಂತೋಷದಿಂದ ಪ್ರತಿಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದವರಿಗೆ, ವಾಚನಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ಐವತ್ತುಮೂರನೆಯ ಸಂಧಿ ಮುಗಿಯಿತು.

ನಾಲ್ಕನೆಯ ಕಾಂಡ ಸಮಾಪ್ತ

CC-0. Jangamwadi Math Collection. Digitized by eGangotri

ಪಂಚಮ ಕಾಂಡ

ಐವತ್ತುನಾಲ್ಕನೆಯ ಸಂಧಿ

ಸೂಚನೆ : ಸೋಮಸೂರ್ಯಾನ್ವಯವನವರೊಳಗೆ ಪಾಂಡವರ್
ಭೂಮಿಗೋಸುಗ ಬಂಧುಗಳ ವಧಿಸಿದುದ ಸಿದ್ಧ
ರಾಮ ನೀಂ ಕೇಳೆಂದು ಚೆನ್ನಬಸವೇಶ್ವರಂ ಕರುಣದಿಂ ನಿರವಿಸಿದನು

ವಿಷ್ಣುನೇತ್ರಾರ್ಚಿತಪದಾಂಭೋಜನಾ ಪರಮ
ವಿಷ್ಣುಸುಕುಮಾರದಹನೀಕೃತ ಸುಭಸಿತಾಂಗ
ವಿಷ್ಣುನಾಭೀಕಮಲಸಂಭವಶಿರಚ್ಛೇದ ವಿಷ್ಣುಕಂಕಾಳಧರನೇ
ವಿಷ್ಣುಸಾಯಕ ಮೇರುಚಾಪವಿಲಸಿತಹಸ್ತ
ವಿಷ್ಣುವಾಹನವೈರಿಭೂಷಣಕರಶ್ರವಣ
ವಿಷ್ಣುಪದಕೇಶ ಪಂಪಾವಿರೂಪಾಕ್ಷ ರಕ್ಷಿಸು ಸಕಲ ಭಕ್ತಜನರ ೧

ಆಲಿಸೈ ರಾಮ ಸೃಷ್ಟಿಯ ಮೊದಲೊಳಬುಜಜಂ
ಭಾಳಲೋಚನನ ವರದಿಂದವಯವಂಗಳೊಳ್
ಲೀಲೆಯಿಂದಂ ನವಬ್ರಹ್ಮರಂ ಪಡೆದನವರೊಳಗತ್ರಿಮುನಿಪನಿಂದೆ
ಪೇಳಲೇಂ ಚಂದ್ರನುದ್ಭವಿಸಲವನಿಂದಮೆ ವಿ
ಶಾಲತರಶಶಿವಂಶವಾಯ್ತಾತನಿಂ ಬುಧಂ
ಭೂಲತಾಂಗೀವರ ಪುರೂರವಂ ಬುಧನ ತನುಸಂಭವಂ ತಾನಾದನು ೨

ಸೂಚನೆ : ಚಂದ್ರ ಮತ್ತು ಸೂರ್ಯವಂಶದಲ್ಲಿ ಪಾಂಡವರು ರಾಜ್ಯಕ್ಕಾಗಿ ಬಂಧುಗಳನ್ನು ಕೊಂದ ವಿಷಯವನ್ನು ಸಿದ್ಧರಾಮ, ನೀನು ಕೇಳು ಎಂದು ಕರುಣೆಯಿಂದ ಚೆನ್ನಬಸವಣ್ಣನು ನಿರೂಪಿಸಿದನು. ೧. ವಿಷ್ಣುವಿನ ಕಣ್ಣಿನಿಂದ ಪೂಜೆಗೊಂಡ ಪಾದ ಕಮಲವುಳ್ಳವ, ಆ ಪರಮ ವಿಷ್ಣುವಿನ ಮಗನಾದ ಮನ್ಮಥನನ್ನು ಸುಟ್ಟು ಬೂದಿಯನ್ನು ದೇಹದಲ್ಲಿ ಧರಿಸಿರುವವ, ಬ್ರಹ್ಮನ ತಲೆಯನ್ನು ಕಡಿದವ, ವಿಷ್ಣುವಿನ ಎಲುಬನ್ನು ಧರಿಸಿರುವವನೂ, ವಿಷ್ಣುವನ್ನು ಬಾಣವನ್ನಾಗಿ ಮೇರುಪರ್ವತವನ್ನು ಬಿಲ್ಲನ್ನಾಗಿ ಕೈಯಲ್ಲಿ ಹಿಡಿದಿರುವವನೂ ವಿಷ್ಣುವಿನ ವಾಹನವಾದ ಗರುಡನ ವೈರಿಯಾದ ಸರ್ಪವನ್ನು ಆಭರಣವನ್ನಾಗಿ ಉಳ್ಳವನೂ ಆಕಾಶವನ್ನೇ ಕೂದಲನ್ನಾಗಿ ಉಳ್ಳವನೂ ಆದ ಪಂಪಾವಿರಾಪಾಕ್ಷನೇ ಸಕಲ ಭಕ್ತಜನರನ್ನೂ ಕಾಪಾಡು. ೨. ಕೇಳಯ್ಯ ಸಿದ್ಧರಾಮ, ಸೃಷ್ಟಿಯ ಮೊದಲಿಗೆ ಬ್ರಹ್ಮನು ಶಿವನ ವರದಿಂದ ತನ್ನ ಅವಯವಗಳಲ್ಲಿ ಲೀಲೆಯಿಂದ ಒಂಬತ್ತು ಜನ ಬ್ರಹ್ಮರನ್ನು ಪಡೆದ. ಅವರಲ್ಲಿ ಒಬ್ಬನಾದ ಅತ್ರಿಮುನಿಯಿಂದ ಚಂದ್ರನು ಹುಟ್ಟಿದ. ಅವನಿಂದಲೇ ವಿಶಾಲವಾದ ಚಂದ್ರವಂಶವಾಯಿತು. ಆ ಚಂದ್ರನ

CC-0. Jangamwadi Math Collection. Digitized by eGangotri

ಆ ಪುರೂರವಗವುರ್ವಶಿಗೆ ನಂದನನಾದ
ನೀ ಪರಿಯೊಳಾಯುಃಕುಮಾರನವನಿಂ ನಹುಷ
ನಾ ಪರಾಕ್ರಮು ನಹುಷನಿಂದಂ ಯಯಾತಿ ಯದು ಪೂರುಗಳ್ ತತ್ತನುಜರು
ಈ ಪೂರು ಯದುಗಳಿಂ ಸೋಮಕುಲವೆರಡಾಯ್ತು
ಭೂಪಾಲಯದುವಿನಿಂ ಯಾದವರ ಕುಲವಾಯ್ತು
ರೂಪಯುತ ಪೂರುವಿಂ ಪೌರವಾನ್ವಯುವಾದುದೆಲೆ ರಾಮು ಕೇಳೆಂದನು ೩

ಪೂರುವಿಂ ಜನಮೇಜಯಂ ತನ್ನೃಪಾಲಂಗೆ
ಧೀರಪ್ರಜಿಹ್ವನಾತಂಗೆ ಸಂಯಾತಿಯಾ
ಭೂರಮಣನಿಂದೆ ಹಂಪಾತಿಯುವನಿಂ ಸಾರ್ವಭೌಮನಾ ಭೂಮಿಪಂಗೆ
ವೀರಜಯಸೇನನವನಿಂದನಿಂದ್ರಂ ತದ್ಧ
ರಾರಮಣನಿಂ ಮಹಾಭೂಮನಾ ಭೂಪನ ಕು
ಮಾರನಯುತಾನೀತಮಾತನಿಂದು ಕ್ರೋಧನಾತನಿಂ ದೇವಾತಿಯು ೪

ದೇವಾತಿಯಿಂ ರುಚಿಕನಾತನಿಂ ರುಕ್ಷನಾ
ಭೂವರಂಗಂ ಮತಿವರಂ ತನ್ನೃಪಾಲಂಗೆ
ಕೋವಿದಂ ತೃಷ್ಣವಾತಂಗಿಲನುಮಾತಂಗೆ ದುಷ್ಯಂತನಾ ಭೂಪನ
ದೇವಿ ಶಾಕುಂತಳೆಯುವರ್ಗೆ ಭರತಂ ಸುತಂ
ಭಾವಿಸಲ್ ಭರತನ ಕುಮಾರಂ ಹುಮನ್ಯು ಮ
ತ್ತಾ ವಸುಧೆಯರಸಗೆ ಸುಹೋತ್ರನವನಿಂ ಹಸ್ತಿ ಹಸ್ತಿಗೆ ವಿಲೋಚನಾಖ್ಯಂ ೫

ಮಗ ಬುಧ. ಆ ಬುಧನಿಗೆ ರಾಜನಾದ ಪುರೂರವನು ಮಗನಾದನು. ೩. ಈ ರೀತಿಯಲ್ಲಿ ಆ ಪುರೂರವ ಮತ್ತು ಅವನ ಪತ್ನಿ ಊರ್ವಶಿಯರಿಗೆ ಆಯುಃಕುಮಾರನು ಮಗನಾದನು. ಅವನಿಂದ ನಹುಷನು ಹುಟ್ಟಿದನು. ಆ ಪರಾಕ್ರಮಿಯಾದ ನಹುಷನಿಗೆ ಯಯಾತಿ, ಯದು, ಪೂರು ಎಂಬ ಮೂವರು ಮಕ್ಕಳಾದರು. ಆ ಪೂರು ಮತ್ತು ಯದುಗಳಿಂದ ಚಂದ್ರವಂಶ ಎರಡು ಕವಲಾಯಿತು. ರಾಜನಾದ ಯದುವಿನಿಂದ ಯಾದವರ ಕುಲವಾಯಿತು. ಸುಂದರನಾದ ಪೂರುವಿನಿಂದ ಪೌರವಂಶವಾಯಿತು, ಎಲೆ ಸಿದ್ಧರಾಮು ಕೇಳು ಎಂದನು. ೪. ಪೂರುವಿನ ಮಗ ಜನಮೇಜಯ. ಆ ರಾಜನಿಗೆ ಪರಾಕ್ರಮಿಯಾದ ಪ್ರಜಿಹ್ವ ಮಗ. ಅವನಿಗೆ ಸಂಯಾತಿ. ಆ ರಾಜನಿಂದ ಹಂಪಾತಿಯೆಂಬುವ ಜನಿಸಿದ. ಆ ಹಂಪಾತಿಯು ಮಗ ಸಾರ್ವಭೌಮ ಎಂಬುವವನೂ, ಆ ರಾಜನಿಗೆ ವೀರನಾದ ಜಯಸೇನನೆಂಬುವವನೂ ಮಗನಾದನು. ಅವನಿಂದ ಇಂದ್ರನೆಂಬ ಮಗನಾದನು. ಆ ಮಹಾರಾಜನಿಗೆ ಮಹಾಭೂಮನೆಂಬುವ ಮಗ, ಆ ರಾಜನ ಮಗನೇ ಆಯುತಾನೀತ. ಅವನಿಂದ ಕ್ರೋಧನೆಂಬ ಮಗನಾದನು. ಅವನ ಮಗನೇ ದೇವಾತಿ. ೫. ದೇವಾತಿಗೆ ಮಗ ರುಚಿಕ. ಆತನಿಗೆ ರುಕ್ಷ ಮಗ. ಆ ರುಕ್ಷಭೂಪಾಲನ ಮಗ ಮತಿವರ. ಅವನಿಗೆ ಕೋವಿದನೆಂಬುವನು ಮಗ. ಆತನಿಗೆ ತೃಷ್ಣ. ಅವನಿಗೆ ಇಲ. ಅವನ ಮಗ ದುಷ್ಯಂತ. ದುಷ್ಯಂತರಾಜನ ಪತ್ನಿ ಶಕುಂತಲೆ. ಆ ಇಬ್ಬರಿಗೂ ಭರತ ಮಗನಾಗಿ ಹುಟ್ಟಿದ. ತಿಳಿದರೆ ಆ ಭರತನ ಮಗ

CC-0. Jangamwadi Math Collection. Digitized by eGangotri

ವರವಿಲೋಚನನಿಂದಜಾಮಿಳನವಂಗೆ ಸಂ
ವರಣನಾತಂಗೆ ದಿನಕರಪುತ್ರಿ ತಪತಿಯೊಳ್
ಕುರುವಾ ನೃಪಂಗಂ ಪರೀಕ್ಷಿತಂ ತತ್ಸುತಂ ಭೀಮಸೇನಂ ತಿಳಿಯಲು
ಧರಣಿಪತಿ ಭೀಮಸೇನಂಗಂ ಪ್ರದೀಪನಾ
ನರಪತಿಗೆ ಶಂತನಾ ಶಂತಭೂಪಾಲಂಗೆ
ವರವಸಿಷ್ಠನ ಶಾಪದಿಂದಂ ಪ್ರಭಾಸವ ಸುನಂದನಂ ತಾನಾದನು ೬

ಚಿತ್ತಹರುಷದ ಶಂತನಾತಂಗೆ ಭೀಷ್ಮನೆಂ
ದಿತ್ತು ಪೆಸರಂ ಸಲಹಲುಳಿದ ವಸುಗಳ ಬಲಂ
ಬೆತ್ತು ಭೀಷ್ಮಂ ಸುಪ್ರತಾಪದಿಂದಹಿತರಂ ಗೆಲ್ದು ಸುಖಮಿರಲಾಗಳು
ಅತ್ತಲಜಶಾಪದಿಂದದ್ರಿಕೆಯೆನಿಪ್ಪಮರಿ
ಯುತ್ತುಂಗ ಮತ್ಸ್ಯರೂಪಿಂ ಗಂಗೆಯೊಳಗಿರೆ ವಿ
ಯತ್ತಳದೊಳಿರ್ದುಪರಿಚರವಸುವಿನಿಂದ್ರಿಯಂ ಬೀಳಲದು ಗರ್ಭವಾಯ್ತು ೭

ಅದನೊರ್ವ ಜಾಲಗಾರಂ ತಂದು ಸೀಳಲದ
ರುದರದೊಳಗಿರ್ದ ಶಿಶುವೆರಡನಾ ಸೂತನತಿ
ಮುದದಿಂದೆ ವಸುಗೀಯೆ ಪೆಣ್ಣನಾತಂಗಿತ್ತು ಕುವರನಂ ತಾಂ ರಕ್ಷಿಸೆ
ಪಡೆದಾತನುಂ ಮತ್ಸ್ಯನೃಪನೆಂದು ಕರೆದನಾ
ಸುದತಿ ಘನಮತ್ಸ್ಯಗಂಧಿನಿಯುಂ ಪರಾಶರಂ
ನದಿಯ ತಟದೊಳ್ ಪ್ರೀತಿಯಿಂ ಕೂಡೆ ಜನಿಸಿದಂ ಮುನಿಪ ವೇದವ್ಯಾಸನು ೮

ಹುಮನ್ಯು. ಮತ್ತೆ ಆ ರಾಜನಿಗೆ ಮಗ ಸುಹೋತ್ರ. ಅವನಿಂದ ಹಸ್ತಿ ಹುಟ್ಟಿದ. ಹಸ್ತಿಗೆ ವಿಲೋಚನಾಖ್ಯ ಎಂಬ ಮಗನಾದ. ೬. ಶ್ರೇಷ್ಠನಾದ ವಿಲೋಚನನಿಂದ ಅಜಾಮಿಳ ನಾದ. ಅವನ ಮಗ ಸಂವರಣ. ಆತನಿಗೆ ಸೂರ್ಯನ ಮಗಳಾದ ತಪತಿಯೆಂಬುವಳಲ್ಲಿ ಕುರು ಎಂಬ ಮಗನು ಹುಟ್ಟಿದ. ಆ ಕುರುರಾಜನ ಮಗನೆ ಪರೀಕ್ಷಿತ. ಅವನ ಮಗ ಭೀಮಸೇನ. ಆ ಭೀಮಸೇನ ಭೂಪತಿಯ ಮಗ ಪ್ರದೀಪ. ಅವನ ಮಗ ಶಂತನು. ಶ್ರೇಷ್ಠರಾದ ವಸಿಷ್ಠಮುನಿಗಳ ಶಾಪದಿಂದ ಪ್ರಭಾಸನೆಂಬ ವಸುವು ಶಂತನುಮಹಾ ರಾಜನಿಗೆ ಹುಟ್ಟಿದ. ೭. ಸಂತೋಷದಿಂದ ಶಂತನು ಅವನಿಗೆ ಭೀಷ್ಮನೆಂಬ ಹೆಸರಿಟ್ಟು ಸಲಹಿದನು. ಮಿಕ್ಕ ವಸುಗಳ ಬಲವನ್ನೂ ಪಡೆದು ಭೀಷ್ಮನು ಬಹಳ ಪರಾಕ್ರಮದಿಂದ ಶತ್ರುಗಳನ್ನು ಗೆದ್ದು ಸುಖವಾಗಿದ್ದನು. ಆಗ ಅತ್ತಕಡೆ ಬ್ರಹ್ಮನ ಶಾಪದಿಂದ ಅದ್ರಿಕೆ ಯೆಂಬ ದೇವತಾಸ್ತ್ರೀ ದೊಡ್ಡದಾದ ಮೀನಿನ ರೂಪಿನಿಂದ ಗಂಗೆಯಲ್ಲಿರಲು ಆಕಾಶದಲ್ಲಿದ್ದ ಉಪರಿಚರ ಎಂಬ ವಸುವಿನ ವೀರ್ಯ ನೀರಿಗೆ ಬೀಳಲು ಅದನ್ನು ನುಂಗಿದ ಮೀನು ಗರ್ಭ ಧರಿಸಿತು. ೮. ಆ ಮೀನನ್ನು ಬೆಸ್ತನೊಬ್ಬನು ತಂದು ಸೀಳಲು ಅದರಲ್ಲಿ ಎರಡು ಮಕ್ಕಳಿದ್ದವು. ಆ ಬೆಸ್ತನು ಅತಿಯಾದ ಸಂತೋಷದಿಂದ ಅವನ್ನು ವಸುವಿಗೆ ಕೊಡಲು ಅವನು ಹೆಣ್ಣು ಮಗುವನ್ನು ಬೆಸ್ತನಿಗೆ ಕೊಟ್ಟು ಗಂಡು ಮಗುವನ್ನು ತಾನು ಸಾಕಲು ಆಶಿಸಿ ಅದಕ್ಕೆ ಮತ್ಸ್ಯನೃಪ ಎಂದು ಹೆಸರಿಟ್ಟನು. ಆ ಹೆಣ್ಣುಮಗಳಾದ ಶ್ರೇಷ್ಠ

CC-0. Jangamwadi Math Collection. Digitized by eGangotri

ಇಂತು ಯೋಜನಗಂಧಿಯಿರೆ ಬೇಟೆಗೈತಂದು
ಶಂತನಿವಳಂ ಕಂಡು ಭ್ರಮಿಸಿ ಕರೆಯಲ್ಕಾಗ
ಕಾಂತೆಯೊಲ್ಲದೊಡವಂ ಪೋಗಿ ಚಿಂತಿಸೆ ಭೀಷ್ಮನೀಕೆಯಂ ಕೆಯ್ಗೊಡಿಸೆ
ಅಂತವಳ ಗರ್ಭದೊಳ್ ಚಿತ್ರಾಂಗದಂ ಧರಾ
ಕಾಂತಂ ವಿಚಿತ್ರವೀರ್ಯಂ ಜನಿಸಿ ಪಗೆಗಳಿಂ
ದಂತವಾಗಲ್ಕೆ ವೇದವ್ಯಾಸನಿಂದವನ ಕಾಂತೆಯರ್ ಬೆಸಲಾದರು ೯

ಜನಿಸಿದರ್ ಧೃತರಾಷ್ಟ್ರ ಪಾಂಡು ವಿದುರರವರ್ಗೆ
ಜನಪ ಧೃತರಾಷ್ಟ್ರಂಗೆ ಕೌರವೇಶ್ವರನಾದಿ
ತನುಭವರ್ ನೂರ್ವರಾ ಪಾಂಡುವಿಗೆ ಧರ್ಮಜಾದ್ಯೈವರಾತ್ಮಜರಾದರು
ಮುನಿಶಾಪದಿಂ ಪಾಂಡುವಳಿಯೆ ಹಸ್ತಿನಪುರದೊ
ಳನಯಕೌರವ ಪಾಂಡವರ್ಗೆ ಮತ್ಸರಮಾಗಿ
ಮನವೊಲ್ದು ವಾರಣಾವತದೊಳಿರುತರಗುಮನೆಯಂ ಕಳೆದು ಪೊರಮಟ್ಟರು ೧೦

ಘೋರಕಾನನದೊಳ್ ಹಿಡಿಂಬನಂ ಮುರಿದಗ್ರ
ಹಾರದೊಳ್ ಬಕನ ಮರ್ದಿಸಿ ದ್ರುಪದನಂದನೆಗೆ
ಭೂರಮಣರೈವರುಂ ವರರಾಗಿ ಕೌರವರ ಪರಿಭವಿಸಿ ಮತ್ತೆ ಬಂದು

ಮತ್ಸ್ಯಗಂಧಿಯನ್ನು ನದೀತೀರದಲ್ಲಿ ಪರಾಶರಮುನಿಯು ಪ್ರೀತಿಯಿಂದ ಕೂಡಲು ಅವರಿಗೆ ಋಷಿಯಾದ ವೇದವ್ಯಾಸನು ಹುಟ್ಟಿದನು. ೯. ಈ ರೀತಿ ಯೋಜನಗಂಧಿ ಇರಲು ಬೇಟೆಗಾಗಿ ಬಂದ ಶಂತನು ಇವಳನ್ನು ನೋಡಿ ಭ್ರಮೆಗೊಂಡು ಕರೆದನು. ಆಗ ಆಕೆ ನಿರಾಕರಿಸಲಾಗಿ ಅವನು ಅಲ್ಲಿಂದ ತೆರಳಿ ಆಕೆಯನ್ನೇ ಕುರಿತು ಚಿಂತಿಸುತ್ತಿರಲು ಭೀಷ್ಮನು ಅವಳನ್ನು ತನ್ನ ತಂದೆಯೊಡನೆ ವಿವಾಹ ಮಾಡಿಸಿದನು. ಆಕೆಯ ಬಸಿರಲ್ಲಿ ಚಿತ್ರಾಂಗದ, ರಾಜನಾದ ವಿಚಿತ್ರವೀರ್ಯರು ಹುಟ್ಟಿ ಶತ್ರುಗಳಿಂದ ಮೃತರಾಗಲು ವೇದವ್ಯಾಸನಿಂದ ಅವರ ಪತ್ನಿಯರು ಗರ್ಭ ಧರಿಸಿದರು. ೧೦. ಅವರಿಗೆ ಧೃತರಾಷ್ಟ್ರ, ಪಾಂಡು, ವಿದುರರು ಮಕ್ಕಳಾಗಿ ಹುಟ್ಟಿದರು. ರಾಜನಾದ ಧೃತರಾಷ್ಟ್ರನಿಗೆ ಕೌರವೇಶ್ವರ (ದುರ್ಯೋಧನ) ಮೊದಲಾಗಿ ನೂರು ಜನ ಮಕ್ಕಳಾದರು. ಪಾಂಡುವಿಗೆ ಧರ್ಮಜ ಮೊದಲಾದ ಐದು ಜನ ಮಕ್ಕಳಾದರು. ಋಷಿಯ ಶಾಪದಿಂದ ಪಾಂಡುವು ಮೃತನಾಗಲು ಹಸ್ತಿನಾಪುರದಲ್ಲಿ ನೀತಿರಹಿತವಾದ ಕೌರವನಿಗೆ ಮತ್ತು ಪಾಂಡವರಿಗೆ ಮಾತ್ಸರ್ಯ ಹುಟ್ಟಿತು. ತಮ್ಮ ಇಚ್ಛೆಯಿಂದಲೇ ಪಾಂಡವರು ವಾರಣಾವತದಲ್ಲಿರುತ್ತ ಅರಗಿನ ಮನೆಯ ದುರಂತದಿಂದ ತಪ್ಪಿಸಿಕೊಂಡು ಅಲ್ಲಿಂದ ಹೊರಟರು. ೧೧. ಘೋರವಾದ ಅರಣ್ಯದಲ್ಲಿ ಹಿಡಿಂಬನನ್ನು ಕೊಂದು, ಅಗ್ರಹಾರದಲ್ಲಿ ಬಕನೆಂಬ ರಾಕ್ಷಸನನ್ನು ವಧಿಸಿ ಆ ಐದು ಜನ ರಾಜರೂ ದ್ರುಪದನ ಮಗಳಿಂದ ದ್ರೌಪದಿಗೆ ಪತಿಯರಾಗಿ ಕೌರವ

CC-0. Jangamwadi Math Collection. Digitized by eGangotri

ಓರಂತೆ ಭೂಪರಿಂದ್ರಪ್ರಸ್ಥಮಂ ಪೊಕ್ಕು
ಕೌರವನ ಕೂಡೆ ಜೂಜಾಡಿ ಸೋಲಲ್ಕವರ
ಧಾರುಣಿಯನಾ ಕೌರವಂ ಕೇಳಲ್ ಮತ್ತೆ ಘೋರಾರಣ್ಯಮಂ ಪೊಕ್ಕರು ೧೧

ಕೌರವರನೆಲ್ಲರಂ ಜಯಿಸಲೆಂದಾ ನರಂ
ಮಾರಹರನಂ ಮುನಿಯ ಮತವಿಡಿದು ಪಾಶುಪತ
ಘೋರಶರಮಂ ಪಡೆದು ನಾಕಮಂ ಪೊಕ್ಕಸುರರಂ ಕೊಂದು ಭೂಮಿಗೈದಿ
ಭೂರಮಣರಜ್ಞಾತವಾಸದಿಂ ಮತ್ಸ್ಯನನ
ಕಾರಣದೊಳೋಲಯಿಸಿಯಜ್ಞಾತದಿಂ ಮೇಲೆ
ಧಾರುಣಿಯ ಹುದುಭಾಗೆಗೋಸುಗಂ ಪಾಂಡವರ್ ಕಲಹಕುದ್ಯೋಗಿಸಿದರು ೧೨

ವಸುದೇವ ದೇವಕಿಗೆ ಜನಿಸಿ ಕೃಷ್ಣಂ ಬಳಿಕ
ವಸುಮತಿಯ ಭಾರಮಂ ಕಳೆಯೆ ಪಾರ್ಥಂಗಾಗ
ಳೆಸೆವ ಸಾರಥಿಯಾಗೆ ಪಾಶುಪತಬಾಣದ ಮಹಾತ್ಮೆಯಿಂ ನರನಾಗಳು
ಮಸಗಿ ಸಂಗರದೊಳಗ್ರಜಗುರುಪಿತಾಮಹಾ
ದ್ಯಸಮಕುರುಸೇನೆಯಂ ಬಿಡದೆ ಸಂಹರಿಸಿದಂ
ವಸುಧೆಯೊಳ್ ಮಣ್ ಪೆಣ್ಣಿಗಳಿಯುವವರಾರೆಂದು ಚೆನ್ನಬಸವಂ ನುಡಿದನು ೧೩

ರನ್ನು ಅವಮಾನಗೊಳಿಸಿದರು. ಮತ್ತೆ ಬಂದು ಇಂದ್ರಪ್ರಸ್ಥವನ್ನು ಸೇರಿ ಕೌರವನ ಜೊತೆಯಲ್ಲಿ ಜೂಜಾಡಿ ಸೋಲಲು ಅವರ ರಾಜ್ಯವನ್ನು ಆ ಕೌರವನು ವಶಪಡಿಸಿ ಕೊಂಡನು. ಅನಂತರ ಪಾಂಡವರು ಭಯಂಕರವಾದ ಕಾಡನ್ನು ಹೊಕ್ಕರು. ೧೨. ಕೌರವ ರನ್ನೆಲ್ಲ ಜಯಿಸುವುದಕ್ಕಾಗಿ ಆ ಅರ್ಜುನನು ಋಷಿಯ ಮಾತಿನಂತೆ ದೂರಹರನಾದ ಶಿವನನ್ನು ಮೆಚ್ಚಿಸಿ ಭಯಂಕರ ಪಾಶುಪತಬಾಣವನ್ನು ಪಡೆದು ಸ್ವರ್ಗಕ್ಕೆ ಹೋಗಿ ರಾಕ್ಷಸರನ್ನು ಕೊಂದು ಹಿಂದಿರುಗಿದನು. ಆ ದೊರೆಗಳು ಅಜ್ಞಾತವಾಸದಲ್ಲಿ ವೇಷ ಮರೆಸಿಕೊಂಡು ಅಕಾರಣವಾಗಿ ವಿರಾಟನನ್ನು ಸೇವಿಸಿ ಅಜ್ಞಾತವಾಸ ಮುಗಿಸಿ ಅನಂತರ ತಮ್ಮ ಪಾಲಿಗೆ ಬರಬೇಕಾದ ರಾಜ್ಯಕ್ಕಾಗಿ ಯುದ್ಧವನ್ನು ಹೂಡಲು ಪ್ರಯತ್ನಿಸಿದರು. ೧೩. ವಸುದೇವ-ದೇವಕಿಯರಿಗೆ ಮಗನಾಗಿ ಹುಟ್ಟಿ ಕೃಷ್ಣನು ಬಳಿಕ ಭೂಭಾರವನ್ನು ಕಳೆಯುವುದಕ್ಕಾಗಿ ಅರ್ಜುನನಿಗೆ ಸಾರಥಿಯಾದನು. ಪಾಶುಪತ ಬಾಣದ ಮಹಿಮೆಯಿಂದ ಅರ್ಜುನನು ಆವೇಶದಿಂದ ಯುದ್ಧದಲ್ಲಿ ಅಣ್ಣ, ಗುರು, ತಾತ ಮೊದಲಾದ ಅಸಮಾನವಾದ ಕೌರವಸೈನ್ಯವನ್ನು ಪೂರ್ಣವಾಗಿ ಸಂಹಾರ ಮಾಡಿದನು. ಭೂಮಿಯಲ್ಲಿ ಮಣ್ಣು ಮತ್ತು ಹೆಣ್ಣಿಗಾಗಿ ಸಾಯದವರು ಯಾರು ಎಂದು ಚೆನ್ನ

CC-0. Jangamwadi Math Collection. Digitized by eGangotri

ವಿರಚಿಸೆಲೆ ಚೆನ್ನಬಸವೇಶ ಪಾಂಡವರಿಂತು
ಧರೆಯ ಹುದುಭಾಗೆಗೋಸುಗವಳಿದರಿಂ ಮುಂದೆ
ತರುಣಿಗೋಸುಗವಳಿದರೆಂತೆನಲ್ವೇಳ್ವೆನಾಂ ಕೇಳಯ್ಯ ಸಿದ್ಧರಾಮ
ತರಣಿವಂಶದೊಳೆಸೆವ ರಘುರಾಮನೆಂಬಾತ
ನರಸಿಗೋಸುಗವಳಿದರೆನಲಾರವಗನಾತ
ನಿರದಾತನರಸಿಯಿಂದಳಿದ ಕಾರಣವನುಸಿರೆನಲಾಗಳಿಂತೆಂದನು ೧೪

ಒರೆವೆನಾಲಿಸು ರಾಮ ಸೂರ್ಯಾನ್ವಯದೊಳಾದ
ದೊರೆಗಳಾರೆಂಬುದಂ ವಿಸ್ತರಿಪೆ ಪೂರ್ವದೊಳ್
ಹರನಾಜ್ಞೆಯಿಂದಾದಿಬ್ರಹ್ಮನಂಗದಿ ಮರಿಚಿಯೆಂಬನುದಯಿಸಿದನಲ್ಲಾ
ಇರಲಾತನುದರದೊಳ್ ಕಶ್ಯಪಂ ಜನಿಸಿದಂ
ವರಕಶ್ಯಪಂಗಂ ವಿವತ್ಸುವಾತಂಗಾದ
ನುರುತರಚರಿತ್ರ ವೈವಸ್ವತಂ ಮನುವವಂಗಿಕ್ಷ್ವಾಕು ಮಗನಾದನು ೧೫

ಆತಂಗೆ ನಿಮಿ ವಿಕುಕ್ಷಿಗಳೆಂಬ ಪೆಸರ ತನು
ಜಾತರ್ ವಿಕುಕ್ಷಿಗೆ ಪುರಂಜಯಸುಭೂಪಾಲ
ನಾತಂಗೆ ನೇನಸ್ಸುವಾತಂಗೆ ಪೃಥುವಾ ನೃಪಾಲಕನ ಸಂತತಿಯೊಳು
ಜಾತನಾದಂ ಕುವಲಯಾಶ್ವನಾ ಸಂತತಿ
ವ್ರಾತದೊಳ್ ಯೌವನಾಶ್ವಂ ಜನಿಸಿದಂ ಬಹುತೃ
ಷಾತುರಂ ಯಾಗಮಂತ್ರೋದಕವನೀಂಟಲ್ ಮಹಂಧಾತ ಮಗನಾದನು ೧೬

ಬಸವಣ್ಣನು ಹೇಳಿದನು. ೧೪. ಚೆನ್ನಬಸವಣ್ಣ, ಪಾಂಡವರು ಈ ರೀತಿಯಾಗಿ (ತಮಗೆ ಬರಬೇಕಾದ) ಭೂಮಿಯ ಪಾಲಿಗಾಗಿ ಸತ್ತರು. ಮುಂದೆ ಸ್ತ್ರೀಗಾಗಿ ಯಾವ ರೀತಿ ನಾಶ ವಾದರು ಎಂಬುದನ್ನು ವಿವರಿಸು ಎಂದು ಸಿದ್ಧರಾಮನು ಕೇಳಿದನು. ಹೇಳುತ್ತೇನೆ ಕೇಳಯ್ಯ, ಸಿದ್ಧರಾಮ, ಸೂರ್ಯವಂಶದಲ್ಲಿ ಶ್ರೇಷ್ಠನಾದ ರಘುರಾಮನೆಂಬುವನು ತನ್ನ ರಾಣಿಗಾಗಿ ಅಳಿದನು ಎನ್ನಲು ಅವನು ಯಾರ ಮಗ ? ತನ್ನ ರಾಣಿಯಿಂದ ಅಳಿದ ಕಾರಣವೇನು ? ಹೇಳು ಎನ್ನಲು ಆಗ ಹೀಗೆಂದನು. ೧೫. ಹೇಳುತ್ತೇನೆ ಕೇಳಯ್ಯ, ಸಿದ್ಧರಾಮ, ಸೂರ್ಯವಂಶದಲ್ಲಿ ಜನಿಸಿದ ದೊರೆಗಳು ಯಾರೆಂಬುದನ್ನು ವಿಸ್ತಾರವಾಗಿ ಹೇಳುತ್ತೇನೆ. ಹಿಂದೆ ಶಿವನ ಆಜ್ಞೆಯಿಂದ ಆದಿಬ್ರಹ್ಮನ ಶರೀರದಿಂದ ಮರೀಚಿಯೆಂಬು ವನು ಹುಟ್ಟಿದನಲ್ಲಾ. ಹೀಗಿರಲು ಅವನ ಹೊಟ್ಟೆಯಲ್ಲಿ ಕಶ್ಯಪನು ಹುಟ್ಟಿದನು. ಶ್ರೇಷ್ಠ ನಾದ ಕಶ್ಯಪನಿಗೆ ವಿವತ್ಸುವೆಂಬುವನು ಮಗ. ಆತನಿಗೆ ಶ್ರೇಷ್ಠವಾದ ಚಾರಿತ್ರ್ಯವುಳ್ಳ ವೈವಸ್ವತಮನು ಎಂಬುವನು ಮಗನಾದನು. ಅವನಿಗೆ ಇಕ್ಷ್ವಾಕು ಮಗನಾದನು. ೧೬. ಆತನಿಗೆ ನಿಮಿ–ವಿಕುಕ್ಷಿಗಳೆಂಬ ಹೆಸರಿನ ಮಕ್ಕಳು. ವಿಕುಕ್ಷಿಗೆ ಪುರಂಜಯನೆಂಬ ರಾಜ ಮಗ. ಅವನಿಗೆ ನೇನಸ್ಸು ಮಗ. ಅವನ ಮಗ ಪೃಥು. ಆ ರಾಜನ ಸಂತತಿಯಲ್ಲಿ ಕುವಲಯಾಶ್ವನೆಂಬುವನು ಹುಟ್ಟಿದನು. ಆ ಸಂತತಿಯವರಲ್ಲಿ ಯೌವನಾಶ್ವ ಹುಟ್ಟಿದನು. ಬಹಳ ಬಾಯಾರಿಕೆಯಿಂದ ಅವನು ಯಾಗಮಂತ್ರದ ನೀರನ್ನು ಕುಡಿಯಲು

CC-0. Jangamwadi Math Collection. Digitized by eGangotri

ಅತಿದಾನಿ ಮಾಂಧಾತಗಂ ತದಂಗನೆ ಬಿಂದು
ಮತಿಗಂಬರೀಷ ಪುರುಕುತ್ಸರೆಂಬಿರ್ವರುಂ
ಸುತರಾದರೆಸೆವ ಪುರುಕುತ್ಸಸಂತತಿಯಲ್ಲಿ ಸತ್ಯವ್ರತಂ ಜನಿಸಿದಂ
ಅತುಳಬಲ ಸತ್ಯವ್ರತಂಗಾ ತ್ರಿಶಂಕುಭೂ
ಪತಿಯಾದನಾತಂಗೆ ಜನಿಸಿದಂ ಕೇಳು ಸೂ
ನೃತಹರಿಶ್ಚಂದ್ರನಾತಂಗೆ ಸಂಜನಿಸಿದಂ ಲೋಹಿತಾಶ್ವಕುಮಾರನು ೧೭

ಆ ಲೋಹಿತಾಶ್ವವಂಶಾವಳಿಯೊಳಾದಂ ನೃ
ಪಾಲಸಗರಂ ತದಾತ್ಮಜಸಮಂಜಸನವಗೆ
ಲೀಲೆಯಿಂದಂಶುಮಾನೆಂಬವಂ ಸುತನಾದನಾತಗೆ ದಿಳೀಪನೃಪನು
ಕೇಳಾದೊಡಾ ದಿಳೀಪಂಗಂ ಭಗೀರಥಂ
ಮೇಳದಾತ್ಮಜನಾ ಭಗೀರಥನ ವಂಶದೊಳ್
ಸ್ಥೂಲಬಾಹುವೆನಿಪ್ಪನಾವನಾತಂಗೆ ರಘು ರಘುನೃಪಂಗಜನಾದನು ೧೮

ಆ ಮಹೀಪತಿಯ ಗರ್ಭದೊಳುದಿಸಿದಂ ಸುಗುಣ
ಧಾಮ ದಶರಥನಾತನುದರದೊಳಗಂದು ರಘು
ರಾಮನುದ್ಭವಿಸಿ ತಾಂ ಬಾಲಲೀಲೆಯ ಕಳಿದು ತಾಟಕಿಯನುರೆ ಮರ್ದಿಸಿ
ಭೂಮಿಸುತೆಯುಂ ಮದುವೆಯಾಗಿ ಬರುತಾ ಪರಶು
ರಾಮನಡ್ಡೈಸಲಾತನ ಚಾಪಮಂ ಸೆಳೆದು
ಪ್ರೇಮದಿಂ ತಮ್ಮ ಪುರಮಂ ಪೊಕ್ಕು ತಂದೆಯಾಜ್ಞೆಯಲಿ ಕಾನನಕೈದಿದಂ ೧೯

ಮಾಂಧಾತನೆಂಬ ಮಗನು ಹುಟ್ಟಿದನು. ೧೭. ಮಹಾದಾನಿಯಾದ ಮಾಂಧಾತ ಮತ್ತು ಅವನ ಪತ್ನಿ ಬಿಂದುಮತಿಗೂ ಅಂಬರೀಷ, ಪುರುಕುತ್ಸ ಎಂಬ ಇಬ್ಬರು ಮಕ್ಕಳಾದರು. ಪ್ರಖ್ಯಾತವಾದ ಪುರುಕುತ್ಸುವಿನ ಸಂತತಿಯಲ್ಲಿ ಸತ್ಯವ್ರತನು ಜನಿಸಿದನು. ಅತುಳಬಲನಾದ ಸತ್ಯವ್ರತನಿಗೆ ತ್ರಿಶಂಕುರಾಜನು ಮಗನಾದನು ಕೇಳು. ಅವನಿಗೆ ಹರಿಶ್ಚಂದ್ರನು ಮಗ, ಅವನಿಗೆ ಲೋಹಿತಾಶ್ವ ಕುಮಾರನು ಹುಟ್ಟಿದನು. ೧೮. ಆ ಲೋಹಿತಾಶ್ವನ ವಂಶದಲ್ಲಿ ಸಗರಮಹಾರಾಜನು ಹುಟ್ಟಿದನು. ಅವನ ಮಗ ಸಮಂಜಸ. ಅವನಿಗೆ ಅಂಶುಮಾನ ಎಂಬ ಮಗನಾದನು. ಆತನ ಮಗ ದಿಲೀಪ. ಹೀಗಾಗಲು ಕೇಳು, ದಿಲೀಪನಿಗೆ ಭಗೀರಥನು ಮಗನಾದನು. ಆ ಭಗೀರಥನ ವಂಶದಲ್ಲಿ ಸ್ಥೂಲಬಾಹುವೆನಿಸುವವನು ಹುಟ್ಟಿದನು. ಆತನಿಗೆ ರಘು. ರಘುವಿಗೆ ಅಜನೃಪನು ಮಗನಾದನು. ೧೯. ಆ ಅಜಮಹಾರಾಜನ ಗರ್ಭದಲ್ಲಿ ಸುಗುಣಧಾಮನಾದ ದಶರಥನು ಹುಟ್ಟಿದನು. ಅವನ ಹೊಟ್ಟೆಯಲ್ಲಿ ರಘುರಾಮನು ಹುಟ್ಟಿ ಬಾಲಲೀಲೆಯನ್ನು ಕಳೆದು ತಾಟಕಿಯನ್ನು ಮರ್ದಿಸಿ, ಸೀತೆಯನ್ನು ಮದುವೆಯಾಗಿ ಬರುತ್ತ ಪರಶುರಾಮನು ಅಡ್ಡಬರಲು ಅವನ ಬಿಲ್ಲನ್ನು ಕಿತ್ತುಕೊಂಡು ಸಂತೋಷದಿಂದ ತನ್ನ ಪಟ್ಟಣವನ್ನು ಸೇರಿ, ತಂದೆಯ ಆಜ್ಞೆ

CC-0. Jangamwadi Math Collection. Digitized by eGangotri

ಭರತ ಶತ್ರುಘ್ನರೆಂಬನುಜರಲ್ಲಿಗೆ ಬಂದು
ಕರೆದೊಡೊಲ್ಲದೆ ತಮ್ಮ ಲಕ್ಷ್ಮಣಂ ತಾನು ತ
ನ್ನರಸಿಸಹಿತಿರುತಲ್ಲಿ ಶೂರ್ಪನಖಿಯೆಂಬ ರಕ್ಕಸಿಯ ನಾಸಿಕವನರಿದು
ಖರದೂಷಣಾದಿ ಖಳರಂ ಕೊಂದು ಹರುಷದಿಂ
ದಿರುತೆ ಹೊಮ್ಮಿಗ ಬರಲ್ ಕೊಲಪೋಗೆ ಸೀತೆಯಂ
ದುರುಳರಕ್ಕಸನೊಯ್ಯುತಿರೆ ತಡೆಯಲಾ ಜಟಾಯುವನಿರಬೆ ಮರ್ದಿಸಿದನು ೨೦

ಸತಿಯನಾ ರಾವಣಂ ಕದ್ದೊಯ್ಯಲೀ ರಾಮ
ನತಿದುಃಖಮಂ ಮಾಡುತಲ್ಲಿಂದೆ ಲೋಕಪ
ಸ್ನುತೆಯಪ್ಪ ಸೀತೆಯಂ ಬೆದಕುತ್ತೈತರುತಾ ಜಟಾಯುವಿರೆ ಕಂಡು ದಹಿಸಿ
ಗತಿಯಾವುದೆನುತಿರಲ್ ಹನುಮಂತ ಬರಲಾತ
ನತಿಶಯಂ ಕಂಡು ಕಾಣೆಸಿಕೊಂಡು ವಾಲಿಯಂ
ಹತಿಸಿ ಸುಗ್ರೀವನಂ ಕೂಡಿಕೊಂಡಬ್ಧಿಯು ಕಟ್ಟಿದರ್ ಸೇತುವೆಯನು ೨೧

ಹರುಷದಿಂ ಕಪಿಕಟಕವಂ ಕೂಡಿಕೊಂಡಾಗ
ಶರಧಿಯಂ ದಾಂಟಿ ರಾವಣ ಕುಂಭಕರ್ಣಾದಿ
ದುರುಳರಕ್ಕಸರನೆಲ್ಲರ ಹತಿಸಿ ಬಳಿಕವನ ತಮ್ಮಂಗೆ ಪಟ್ಟಗಟ್ಟಿ
ಮರಳಿ ಸೀತೆಯನು ಕೈವಿಡಿದು ರಾಮಂ ತನ್ನ
ಪುರಕೆ ಬಂದಂ ಸತಿಯರಿಂ ಕೆಟ್ಟರಿವರೆಂದು
ಕರುಣದಿಂ ಚೆನ್ನಬಸವೇಶ್ವರಂ ಸಿದ್ಧರಾಮೇಶಂಗೆ ನಿರವಿಸಿದನು ೨೨

ಯಂತೆ ಕಾಡಿಗೆ ಹೋದನು. ೨೦. ಭರತ-ಶತ್ರುಘ್ನರೆಂಬ ತಮ್ಮಂದಿರು ಬಂದು ಕರೆದರೂ ಒಪ್ಪದೆ ತಮ್ಮನಾದ ಲಕ್ಷ್ಮಣ, ಪತ್ನಿ ಸೀತೆ ಮತ್ತು ತಾನೂ ಅಲ್ಲಿಯೇ ಇರುತ್ತ ಶೂರ್ಪನಖಿಯೆಂಬ ರಾಕ್ಷಸಿಯ ಮೂಗನ್ನು ಕೊಯ್ದು, ಖರದೂಷಣ ಮೊದಲಾದ ರಾಕ್ಷಸರನ್ನು ಕೊಂದು ಸಂತೋಷದಿಂದ ಇರಲು ಬಂಗಾರದ ಜಿಂಕೆಯು ಬಂದಿತು. ಅದನ್ನು ಕೊಲ್ಲಲು ಹೋಗಲು ಸೀತೆಯನ್ನು ದುಷ್ಟನಾದ ರಾಕ್ಷಸನು ಹೊತ್ತುಕೊಂಡು ಹೋಗುತ್ತಿರಲು ಅವನನ್ನು ಜಟಾಯುವು ತಡೆಯಲು ಆ ರಾಕ್ಷಸನು ಜಟಾಯುವನ್ನು ಸಂಹಾರಮಾಡಿದನು. ೨೧. ಹೆಂಡತಿಯಾದ ಸೀತೆಯನ್ನು ಆ ರಾವಣನು ಕದ್ದುಕೊಂಡು ಹೋಗಲು ರಾಮನು ಅತಿಯಾದ ದುಃಖದಿಂದ ಅಲ್ಲಿಂದ ಲೋಕಪ್ರಖ್ಯಾತಳಾದ ಸೀತೆಯನ್ನು ಹುಡುಕುತ್ತ ಬರುತ್ತಿರಲು ಜಟಾಯುವನ್ನು ನೋಡಿ ಅವನ ಶರೀರವನ್ನು ಅಗ್ನಿಗರ್ಪಿಸಿ ಮುಂದೆ ದಾರಿ ಯಾವುದು ಎಂದು ಆಲೋಚಿಸುತ್ತಿದ್ದನು. ಆಗ ಹನುಮಂತ ಬರಲು ಅವನ ಅಸಾಧಾರಣವಾದ ಯೋಗ್ಯತೆಯನ್ನು ನೋಡಿ, ಅವನಿಗೆ ಕಾಣೆಸಿಕೊಂಡು ವಾಲಿಯನ್ನು ಸಂಹರಿಸಿ ಸುಗ್ರೀವನೊಡಗೂಡಿ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದರು. ೨೨. ಸಂತೋಷದಿಂದ ಕಪಿಸೇನೆಯನ್ನು ಕೂಡಿಕೊಂಡು ಸಮುದ್ರವನ್ನು ದಾಟಿ ರಾವಣ-ಕುಂಭಕರ್ಣ ಮೊದಲಾದ ದುಷ್ಟರಾಕ್ಷಸರೆಲ್ಲರನ್ನೂ ಕೊಂದು ಅನಂತರ ಅವನ ತಮ್ಮ ವಿಭೀಷಣನಿಗೆ ರಾಜ್ಯಾಭಿಷೇಕ ಮಾಡಿ ಮತ್ತೆ ಸೀತೆಯ ಕೈಹಿಡಿದು ರಾಮನು ಅಯೋಧ್ಯಾಪಟ್ಟಣಕ್ಕೆ ಹಿಂದಿರುಗಿದನು.

CC-0. Jangamwadi Math Collection. Digitized by eGangotri

ಎಲೆ ಚೆನ್ನಬಸವೇಶ ಪೇಳ್ವುದೆನಗಿನ್ನುಭಯ
ಕುಲದೊಳತಿದಾನಧರ್ಮೋಪಕಾರಂಗಳಿಂ
ದಿಳೆಯನಾಳಿದ ರಾಯರುಗಳದಾರ್ ಚಕ್ರವರ್ತಿತ್ವಮು ತಳೆದರಾರು
ಬಳಿಕಲವರೊಳಗೆ ಕೆಟ್ಟವರದಾರ್ ಸತ್ಕೀರ್ತಿ
ಗೊಳಗಾಗಿ ಬಾಳ್ದರಾರೆಂಬುದಂ ಕೇಳ್ವೆನೆನೆ
ಲೊಲವಿನಿಂ ಸಿದ್ಧರಾಮೇಶಂಗೆ ಚೆನ್ನಬಸವೇಶನಂದಿಂತೆಂದನು ೨೩

ಧರಣಿಪಹರಿಶ್ಚಂದ್ರ ನಳ ಪುರೂರವ ಸಗರ
ಪುರುಕುತ್ಸ ಕಾರ್ತವೀರ್ಯರ್ ಚಕ್ರವರ್ತಿಗಳ್
ಪರಿಗಣಿಸಲರುವರುಂ ವೈನ್ಯಂ ಸುಹೋತ್ರಂ ಮರುದ್ಧರಂ ಮೇಣ್ ತಿಳಿಯಲು
ಭರತನಾ ಭಾಗ ಶಶಿ ಬಿಂದ್ವಂಬರೀಷ ಗಯ
ಪರಿಕಿಸೆ ದಿಳೀಪನೃಪ ರಂತಿದೇವ ಯಯಾತಿ
ವರಭಗೀರಥ ರಾಮ ನಹುಷ ಮಾಂಧಾತೃಗಳ್ ಷೋಡಶಮಹೀಪಾಲರು ೨೪

ಆಲಿಸೆಲೆ ಸಿದ್ಧರಾಮೇಶ ಜೂಜಾಡಿ ಭೂ
ಪಾಲರೊಳ್ ನಳಧರ್ಮಜರ್ ಮದ್ಯದಿಂದೆ ಯದು
ಜಾಲಂ ಪರಾಂಗನಾವ್ಯಸನದಿಂದಿಂದ್ರ ಕೀಚಕ ವಾಲಿ ದಶವದನರು
ಪೇಳಲೇಂ ಮೃಗಯಾನಿಮಿತ್ತದಿಂ ದಶರಥನೃ
ಪಾಲಪಾಂಡುಗಳೈದೆ ನಿಂದೆಯಿಂ ಬ್ರಹ್ಮ ಶಿಶು
ಪಾಲ ದಕ್ಷರ್ ಗುರುದ್ರೋಹದಿಂದಿಂದು ತ್ರಿಶಂಕುಗಳ್ ಕೆಟ್ಟರಂದು ೨೫

ಹೆಣ್ಣಿನಿಂದ ಇವರು ಕೆಟ್ಟರು ಎಂದು ಕರುಣೆಯಿಂದ ಚೆನ್ನಬಸವಣ್ಣ ಸಿದ್ಧರಾಮನಿಗೆ ಹೇಳಿದನು. ೨೩. ಎಲೈ ಚೆನ್ನಬಸವೇಶ, ಎರಡೂ ವಂಶದಲ್ಲಿಯೂ ಅತಿಯಾದ ದಾನ ಧರ್ಮ ಉಪಕಾರಗಳಿಂದ ರಾಜ್ಯವನ್ನಾಳಿದ ದೊರೆಗಳು ಯಾರು ? ಚಕ್ರವರ್ತಿಪದವಿ ಯನ್ನು ಯಾರು ಪಡೆದರು ? ಅನಂತರ ಅವರೊಳಗೆ ಕೆಟ್ಟವರಾರು ? ಸತ್ಕೀರ್ತಿಯನ್ನು ಪಡೆದು ಬಾಳಿದವರು ಯಾರು ? ಎಂಬುದನ್ನು ಕೇಳುತ್ತೇನೆ, ನನಗೆ ಹೇಳು ಎಂದನು, ಆಗ ಕೇಳೆಂದು ಪ್ರೀತಿಯಿಂದ ಸಿದ್ಧರಾಮನಿಗೆ ಚೆನ್ನಬಸವಣ್ಣನು ಹೀಗೆಂದನು. ೨೪. ಭಾವಿಸಲು ರಾಜ ಹರಿಶ್ಚಂದ್ರ, ನಳ, ಪುರೂರವ, ಸಗರ, ಪಾರುಕುತ್ಸ, ಕಾರ್ತ ವೀರ್ಯರೆಂಬ ಆರು ಜನ ಚಕ್ರವರ್ತಿಗಳು, ವೈನ್ಯ, ಸುಹೋತ್ರ, ಮರುದ್ಧರ, ಅಲ್ಲದೆ ಭರತ, ಭಾಗ, ಶಶಿ, ಬಿಂದು, ಅಂಬರೀಷ, ಗಯ, ದಿಲೀಪರಾಜ, ರಂತಿದೇವ, ಯಯಾತಿ, ಶ್ರೇಷ್ಠನಾದ ಭಗೀರಥ, ರಾಮ, ನಹುಷ, ಮಾಂಧಾತೃಗಳೆಂಬುವರು ಹದಿನಾರು ಜನ ರಾಜರು. ೨೫. ಕೇಳಯ್ಯ ಸಿದ್ಧರಾಮ, ರಾಜರಲ್ಲಿ ಜೂಜಾಡಿ ನಳ-ಧರ್ಮರಾಯ ; ಮದ್ಯಪಾನದಿಂದ ಯದುಸಮೂಹ ; ಪರಸ್ತ್ರೀಯರ ವ್ಯಾಮೋಹದಿಂದ ಇಂದ್ರ, ಕೀಚಕ, ವಾಲಿ, ರಾವಣರು ; ಏನು ಹೇಳಲಿ ? ಬೇಟೆಯಿಂದ ದಶರಥ ಮಹಾರಾಜ, ಪಾಂಡುಗಳು ; ನಿಂದೆಯಿಂದ ಬ್ರಹ್ಮ, ಶಿಶುಪಾಲ, ದಕ್ಷಬ್ರಹ್ಮರು ; ಗುರುದ್ರೋಹದಿಂದ

CC-0. Jangamwadi Math Collection. Digitized by eGangotri

ಧರಣಿಯೊಳ್ ಬೇಡಿದರ್ಗಿತ್ತ ಮಾಂಧಾತನುಂ
ಹರಿಗೆ ರಣದೊಳ್ ಕವಚವಂ ಕೊಟ್ಟ ಕರ್ಣನುಂ
ಗರುಡನಹಿಯುಂ ಕಚ್ಚಿಕೊಲೆ ಜೀವಮಂ ಕೊಟ್ಟ ಜೀಮೂತವಾಹಾಖ್ಯನು
ಸುರಪತಿಗೆ ಬೆನ್ನೆಲುವನಿತ್ತಾ ದಧೀಚಿಯುಂ
ಧರೆಯುನಳೆದಸುರಾರಿಗಿತ್ತ ಬಲಿಯುಂ ಕೀರ್ತಿ
ಪುರುಷರೆನಿಸಿದರಲ್ಲದೀಶನು ಭಜಿಸಿ ಮುಕ್ತಿಗೆ ಸಂದುದಿಲ್ಲೆಂದನು ೨೬

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪರಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮುನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ೨೭

ಐವತ್ತುನಾಲ್ಕನೆಯ ಸಂಧಿ ಸಂಪೂರ್ಣ

ಚಂದ್ರ-ತ್ರಿಶಂಕುಗಳು ಕೆಟ್ಟರು. ೨೬. ಭೂಮಿಯಲ್ಲಿ ಕೇಳಿದವರಿಗೆ ಕೊಟ್ಟ ಮಾಂಧಾತನು, ಇಂದ್ರನಿಗೆ ಯುದ್ಧದಲ್ಲಿ ಕವಚವನ್ನು ಕೊಟ್ಟ ಕರ್ಣನು, ಗರುಡನು ಹಾವನ್ನು ಕಚ್ಚಿ ಕೊಲ್ಲಲು ತನ್ನ ಜೀವಕೊಟ್ಟ ಜೀಮೂತಾಖ್ಯನು, ದೇವೇಂದ್ರನಿಗೆ ಬೆನ್ನೆಲುಬನ್ನು ಕೊಟ್ಟ ಆ ದಧೀಚಿಯು, ಭೂಮಿಯನ್ನು ಅಳೆದು ವಿಷ್ಣುವಿಗೆ ಕೊಟ್ಟ ಬಲಿಯು ಕೀರ್ತಿಶಾಲಿಗಳಾದರು. ಅಷ್ಟಲ್ಲದೆ ಈಶ್ವರನನ್ನು ಪ್ರಾರ್ಥಿಸಿ ಮುಕ್ತಿ ಪಡೆದದ್ದಿಲ್ಲ ಎಂದನು. ೨೭. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವೇಶನ ಪುರಾಣವನ್ನು ಸಂತೋಷದಿಂದ ಪ್ರತಿಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ಐವತ್ತುನಾಲ್ಕನೆಯ ಸಂಧಿ ಮುಗಿಯಿತು

CC-0. Jangamwadi Math Collection. Digitized by eGangotri

ಐವತ್ತೈದನೆಯ ಸಂಧಿ

ಸೂಚನೆ : ಶೈವಶರಣರ ಕಥೆಯನೊಲವಿನಿಂ ಪೇಳೆನುತೆ
ಶೈವಸಿದ್ಧಾಂತಿಯಾ ಸಿದ್ಧರಾಮಂ ವೀರ
ಶೈವ ಸದ್ಗುರು ಚೆನ್ನಬಸವೇಶನಂ ಕೇಳ ಪೇಳ್ದಂ ಸವಿಸ್ತರದೊಳು

ತಾರಕಾಸುರ ಮತ್ತಮಾತಂಗಹರ್ಯಕ್ಷ
ತಾರಕಾಸುರವರದಮಸ್ತಕಸಧೃತಹಸ್ತ
ತಾರಕಾಸುರಸುತರ್ ತಾರಕಾಂಬಕಮುಖ್ಯದನುಜಪುರವನದವಾಗ್ನಿ
ತಾರಕಾಸುರರಿಪುಪಿತಾಮ ತನುಜಾರ್ಧಾಂಗ
ತಾರಕಾಪತಿಕಲಾಧರಜಟಾಮಕುಟತಟ
ತಾರಕಾಪಥಕೇಶ ಪಂಪಾವಿರೂಪಾಕ್ಷ ತಾರೆಮಗೆ ಸದ್ವರವನು ೧

ಚೆನ್ನಾಗಿ ತಿಳಿಪು ದೇವಾಸುರ ಮನುಷ್ಯರೊಳ್
ಮುನ್ನಿಂತು ಮುಕ್ತಿವಡೆಯದೆ ಕೆಟ್ಟರೀ ಶೈವ
ದಿನ್ನವ್ಯಮುಕ್ತಿಯಂ ಪಡೆದರಾರೆಂದೊಡನೆ ಸಿದ್ಧರಾಮಂ ಕೇಳಲು
ಇನ್ನಾಲಿಸೈ ಶೈವದಿಂ ಮುಕ್ತಿವಡೆದ ಮಹಿ
ಮೋನ್ನತರಚಾರಿತ್ರಮಂ ಪೇಳ್ವೆನಾನೆಂದು
ಚೆನ್ನಬಸವೇಶ್ವರಂ ಕರುಣದಿಂ ಶೈವರ ಸುಚಾರಿತ್ರಮಂ ಪೇಳ್ದನು ೨

ಸೂಚನೆ : ಶೈವಸಿದ್ಧಾಂತಿಯಾದ ಸಿದ್ಧರಾಮನು ವೀರಶೈವ ಸದ್ಗುರುವಾದ ಚೆನ್ನಬಸವಣ್ಣನನ್ನು ಕುರಿತು ಪ್ರೀತಿಯಿಂದ ಶಿವಶರಣರ ಕಥೆಯನ್ನು ಹೇಳೆನ್ನಲು ವಿಸ್ತಾರವಾಗಿ ಹೇಳಿದನು. ೧. ತಾರಕಾಸುರನೆಂಬ ಮದಿಸಿದ ಆನೆಗೆ ಸಿಂಹದಂತಿರುವವನು, (ಶಾಂಭವಾಸ್ತ್ರದಿಂದ ತಾರಕನನ್ನು ಗುಹನು ಸಂಹರಿಸಿದುದರಿಂದ ಹೀಗೆ ವರ್ಣಿಸಲಾಗಿದೆ.) ತಾರಕಾಸುರನಿಗೆ ವರವನ್ನು ಕೊಟ್ಟ ಬ್ರಹ್ಮನ ತಲೆಯನ್ನು ಕೈಯಲ್ಲಿ ಹಿಡಿದಿರುವವನು, ತಾರಕಾಸುರನ ಮಕ್ಕಳಾದ ತಾರಕಾಕ್ಷ ಮೊದಲಾದ ರಾಕ್ಷಸರ ಪಟ್ಟಣವೆಂಬ ಕಾಡಿಗೆ ಕಾಳ್ಗಿಚ್ಚಿನಂತಿರುವವನು, ತಾರಕಾಸುರನ ಶತ್ರುವಾದ ಷಣ್ಮುಖನ ತಾತನಾದ ಹಿಮವಂತನ ಮಗಳಾದ ಪಾರ್ವತಿಯನ್ನು ಅರ್ಧಶರೀರವನ್ನಾಗಿ ಉಳ್ಳವನು, ಚಂದ್ರಶೇಖರ, ವ್ಯೋಮಕೇಶ (ಆಕಾಶವನ್ನೇ ಕೂದಲನ್ನಾಗಿ ಉಳ್ಳವನು) ಆದ ಪಂಪಾವಿರೂಪಾಕ್ಷನೇ ನಮಗೆ ಒಳ್ಳೆಯ ವರವನ್ನು ನೀಡು. ೨. ದೇವ-ದಾನವ-ಮನುಷ್ಯರಲ್ಲಿ ಈ ಮೊದಲು ಮುಕ್ತಿಯನ್ನು ಹೊಂದದೆ ಹಾಳಾಗಿ ಈ ಶೈವಧರ್ಮದಿಂದ ಮುಕ್ತಿಯನ್ನು ಪಡೆದವ ರಾರು ? ಎಂಬುದನ್ನು ಚೆನ್ನಾಗಿ ತಿಳಿಸು ಎಂದು ಸಿದ್ಧರಾಮನು ಕೇಳಲು ಶೈವಧರ್ಮ ದಿಂದ ಮುಕ್ತಿ ಪಡೆದ ಮಹಾಮಹಿಮರ ಶ್ರೇಷ್ಠವಾದ ಚರಿತ್ರೆಯನ್ನು ನಾನು ಹೇಳು ತ್ತೇನೆ ಇನ್ನು ಕೇಳಯ್ಯ ಎಂದು ಚೆನ್ನಬಸವಣ್ಣನು ಕರುಣೆಯಿಂದ ಶಿವಶರಣರ ಪುಣ್ಯ

CC-0. Jangamwadi Math Collection. Digitized by eGangotri

ಹರಿಭಕ್ತನೊರ್ವನಿಂದ್ರದ್ಯುಮ್ನನೆಂಬರಸು
ಹರಿಯನೆರ್ದೆಯೊಳಗಿಟ್ಟು ಯೋಗದಿಂ ಜಾನಿಸು
ತ್ತಿರಲಗಸ್ತ್ಯಂ ಬಂದೊಡಾತನಂ ಸತ್ಕರಿಸದಿರಲವನು ಕೋಪದಿಂದೆ
ದುರುಳ ನಾಂ ಬರೆ ಮತ್ತನಾಗಿರ್ದ ಕಾರಣಂ
ಕರಿಯಾಗಿ ಪುಟ್ಟೆಂದು ಶಾಪಮಂ ಕೊಡಲಾಗ
ಧರಣಿಪಂ ಮದಗಜಾಕೃತಿಯಾಗಿರುತ್ತೊಂದು ಕಾಸಾರಕೈತಂದನು ೩

ಅದರೊಳಿರ್ಪೊಂದು ನೆಗಳೀ ಗಜೇಂದ್ರನದೊಂದು
ಪದಮನುರುದಂಷ್ಟ್ರದಿಂದವಚಿಕೊಳೆ ಭೀತಿಯಿಂ
ಮದನಪಿತ ರಕ್ಷಿಸೆನೆ ಚಕ್ರದಿಂ ನೆಗಳ ತಲೆಯಂ ವಿಷ್ಣುವರಿದು ಬಳಿಕ
ಉದಕದಿಂ ಪೊರಮಡಿಸೆ ಭಕ್ತಿಯಿಂದಾ ಹರಿಯ
ಪದಕೆರಗಿ ಮುಕ್ತಿಯಂ ಬೇಡಲೆನ್ನಿಂ ಹರಿಯು
ದಿದು ಕೀರ ಸರ್ಪಕರ್ಣಿಕೆಯರ್ಗೆ ವರವಿತ್ತ ಲಿಂಗವೊಂದಿಹುದೆಂದನು ೪

ಹರುಷದಿಂ ಗುಣಗರ್ಭನೆಂಬ ಶಿಷ್ಯಂ ತನ್ನ
ಗುರುರಾಜಹಂಸನಂಗದೊಳೊಂದು ಜೇಡನುರೆ
ಪರೆಯುಲದನವನಿಯೊಳ್ ತೆಗದಿಡಲು ಕಂಡು ನೀನುಂ ಜೇಡನಾಗೆನುತ್ತೆ

ಕಥೆಯನ್ನು ಹೇಳಿದನು. ೩. ವಿಷ್ಣುಭಕ್ತರಲ್ಲೊಬ್ಬನಾದ ಇಂದ್ರದ್ಯುಮ್ನ ಎಂಬ ದೊರೆಯು ವಿಷ್ಣುವನ್ನು ಮನಸ್ಸಿನಲ್ಲಿ ನೆಲೆಗೊಳಿಸಿ ಯೋಗದಿಂದ ಧ್ಯಾನಿಸುತ್ತಿರಲು ಅಗಸ್ತ್ಯಮುನಿಯು ಬಂದನು. ರಾಜನು ಅವನನ್ನು ಉಪಚರಿಸದಿರಲು ಅವನು ಕೋಪದಿಂದ 'ದುರುಳನೆ, ನಾನು ಬರಲು ಗರ್ವದಿಂದ ಕೂಡಿದ್ದುದರಿಂದ ನೀನು ಆನೆಯಾಗಿ ಹುಟ್ಟು' ಎಂದು ಶಾಪವನ್ನು ಕೊಟ್ಟನು. ಆಗ ರಾಜನು ಮದಿಸಿದ ಆನೆಯಾಗಿ ಇರುತ್ತ ಒಂದು ಸರೋವರಕ್ಕೆ ಬಂದನು. ೪. ಅದರಲ್ಲಿದ್ದ ಒಂದು ಮೊಸಳೆ ಈ ಆನೆಯ ಒಂದು ಕಾಲನ್ನು ಭಯಂಕರವಾದ ಹಲ್ಲುಗಳಿಂದ ಕಚ್ಚಿ ಹಿಡಿಯಿತು. ಆನೆಯು ಹೆದರಿಕೆಯಿಂದ ವಿಷ್ಣುವೇ ನನ್ನನ್ನು ಕಾಪಾಡೆಂದು ಮೊರೆಯಿಡಲು ವಿಷ್ಣುವು ಚಕ್ರದಿಂದ ಮೊಸಳೆಯ ತಲೆಯನ್ನು ಕತ್ತರಿಸಿ ಅನಂತರ ನೀರಿನಿಂದ ಹೊರಕ್ಕೆ ತಂದನು. ಆಗ ಆನೆಯು ಭಕ್ತಿಯಿಂದ ವಿಷ್ಣುವಿನ ಪಾದಕ್ಕೆ ನಮಸ್ಕರಿಸಿ ಮುಕ್ತಿಯನ್ನು ಕೊಡೆಂದು ಬೇಡಿತು. ಆಗ ವಿಷ್ಣುವು ಅದು ನನ್ನಿಂದ ಸಾಧ್ಯವಿಲ್ಲ. ಮುಂಗಸಿ ಮತ್ತು ಸರ್ಪಕರ್ಣಿಕೆಯರಿಗೆ ವರ ಕೊಟ್ಟ ಲಿಂಗವೊಂದಿದೆ ಎಂದನು. ೫. ಗುಣಗರ್ಭನೆಂಬ ಶಿಷ್ಯನು ತನ್ನ ಗುರುವಾದ ರಾಜಹಂಸನ ದೇಹದ ಮೇಲೆ ಒಂದು ಜೇಡರಹುಳುವು ಹರಿದಾಡಲು ಅದನ್ನು ತೆಗೆದು ನೆಲದ ಮೇಲೆ ಬಿಟ್ಟನು. ಅದನ್ನು ನೋಡಿ ಕೋಪಗೊಂಡ ಗುರುವು ನೀನೂ ಜೇಡನಾಗು ಎಂದು ಶಾಪಕೊಟ್ಟನು. ಅದರಿಂದ ಮುಕ್ತಿ ಪಡೆಯುವುದಕ್ಕಾಗಿ

CC-0. Jangamwadi Math Collection. Digitized by eGangotri

ಕೆರಳಿ ಶಪಿಸಲ್ ಮುಕ್ತಿವಡೆಯೆ ಪೂಜಿಸುತಾತ
ನಿರುತಿರ್ಪನಾ ಲಿಂಗಮಂ ನೀನುಮಾಸ್ಥಳ
ಕ್ಕಿರದೈದಿ ಪೂಜಿಸಲ್ ಮುಕ್ತಿಯಾದಪುದೆಂದು ಹರಿ ಕರಿಗೆ ನೇಮಿಸಿದನು ೫

ಇಂತೆಂದು ಪೇಳಲಾ ಸ್ಥಳಕಾಗಿ ನಡೆತಂದು
ದಂತಿರಾಜಂ ಜೇಡನಾ ಲಿಂಗಕರ್ಪಿಸುವ
ತಂತುವಂ ಪ್ರತಿದಿನಂ ಪರಿಹರಿಸಿ ತಾಂ ಪೂಜಿಸಲ್ಕಿದಶಿಕೋಪದಿಂದೆ
ಅಂತದರ ಸೊಂಡೆಯೊಳ್ ಪೊಕ್ಕು ಮಿದುಳಂ ಕಚ್ಚಿ
ದಂತಿಯುಂ ಜೇಡನುಂ ಹತವಾಗಲಾ ಕ್ಷಣಂ
ಕಂತುಹರನವರ ಭಕ್ತಿಗೆ ಮೆಚ್ಚಿ ನಿಮ್ಮಿಷ್ಟವಾವುದೆನಲಿಂತೆಂದರು ೬

ಕರುಣಿಸೆಲೆ ದೇವ ವರಮಂ ನಮ್ಮ ಪೆಸರಿನಿಂ
ತಿರುಕಳಾಹಸ್ತೀಶನೆಂಬ ನಿಜನಾಮದಿಂ
ಕರೆಸಿಕೊಂಡೆಮಗೆ ನಿಜಪದವಿಯುಂ ಕೊಟ್ಟು ಕಾಯೆಂದೆರಗಲಭವನೊಲಿದು
ಕರಿಯೆ ನೀಂ ಕರಿಕಾಲನಾಗುದಿಸು ಕಾಳ ನೀ
ನಿರದೆ ಕಳಚಂಗನಾಗುದ್ಭವಿಸು ನಿಮಗೆ ಸು
ಸ್ಥಿರಪದವಿಯುಂ ಕೊಡುವೆನೆನಲೆರಡು ಚೋಳರಾಜಾನ್ವಯದೊಳುದಯಿಸಿದುವು ೭

ಒರೆವೆನಾಲಿಸು ನಾಗಕನ್ಯೆಯರ ಶಾಪದಿಂ
ದುರಶಿವಾರ್ಚನೆಯ ಪೂವಂ ಪಾಸಿಸಲ್ ಕಂಡು
ಭರದೆ ಮಣ್ಮಳೆ ಬಂದು ಸತ್ತ ಚೋಳನ ಸತಿಗೆ ಕರಿಕಾಲಚೋಳನುದಿಸೆ

ಅವನು ಆ ಲಿಂಗವನ್ನು ಪೂಜಿಸುತ್ತಾ ಇದ್ದಾನೆ. ನೀನೂ ಆ ಜಾಗಕ್ಕೆ ಹೋಗಿ ಅವನ್ನು ಪೂಜಿಸಿದರೆ ಮುಕ್ತಿ ದೊರೆಯುತ್ತದೆಂದು ವಿಷ್ಣುವು ಗಜೇಂದ್ರನಿಗೆ ಆಜ್ಞಾಪಿಸಿದನು. ೬. ಹೀಗೆಂದು ಹೇಳಲು ಗಜರಾಜನು ಆ ಜಾಗಕ್ಕೆ ಬಂದು ಜೇಡನು ಆ ಲಿಂಗಕ್ಕೆ ಪ್ರತಿದಿನವೂ ಅರ್ಪಿಸುವ ದಾರವನ್ನು ತೆಗೆದುಹಾಕಿ ತಾನು ಪೂಜಿಸುತ್ತಿರಲು ಅದರಿಂದ ಬಹು ಕೋಪಗೊಂಡ ಜೇಡ ಆ ಆನೆಯ ಸೊಂಡಿಲಿನಲ್ಲಿ ಸೇರಿ ಮೆದುಳನ್ನು ಕಚ್ಚಲು ಆನೆ ಮತ್ತು ಜೇಡ ಎರಡೂ ಸತ್ತವು. ಆಕ್ಷಣದಲ್ಲಿ ಶಿವನು ಅವರ ಭಕ್ತಿಗೆ ಮೆಚ್ಚಿ ನಿಮ್ಮ ಇಷ್ಟವೇನು ಎನ್ನಲು ಹೀಗೆಂದರು. ೭. ದೇವ, ವರವನ್ನು ಕರುಣಿಸು. ನಮ್ಮ ಹೆಸರಿನಿಂದ ತಿರುಕಾಳ ಹಸ್ತೀಶ ಎಂದು ಪ್ರಸಿದ್ಧನಾಗಿ ನಮಗೆ ಮುಕ್ತಿಯನ್ನು ಕೊಟ್ಟು ಕಾಪಾಡು ಎಂದು ನಮಸ್ಕರಿಸಿದರು. ಈಶ್ವರನು ಒಲಿದು ಆನೆಯೆ, ನೀನು ಕರಿಕಾಲನಾಗಿ ಹುಟ್ಟು ; ಜೇಡನೆ, ನೀನು ಕಳಚಂಗನಾಗಿ ಹುಟ್ಟು. ನಿಮಗೆ ಉತ್ತಮವಾದ ಶಾಶ್ವತ ಪದವಿಯನ್ನು ಕೊಡುತ್ತೇನೆ ಎನ್ನಲು ಅವೆರಡೂ ಚೋಳರಾಜರ ವಂಶದಲ್ಲಿ ಹುಟ್ಟಿದವು. ೮. ಹೇಳುತ್ತೇನೆ ಕೇಳು, ನಾಗಕನ್ನಿಕೆಯರ ಶಾಪದಿಂದ ಶ್ರೇಷ್ಠವಾದ ಶಿವನ ಪೂಜೆಯ ಹೂವನ್ನು ಮೂಸಿ ನೋಡಲು ಅದನ್ನು ನೋಡಿ ಜೋರಾಗಿ ದೇಹವಿಕಾರದ ರೋಗ ಬಂದು ಸತ್ತ ಚೋಳನ

CC-0. Jangamwadi Math Collection. Digitized by eGangotri

ಧರಣೀಶ್ವರಂ ಕೂಡಿಕೊಂಡು ಕಾವೇರಿಗಂ
ದಿರದೆ ಕಟ್ಟೆಯಂಕಟ್ಟಿ ಮುಕ್ಕಣ್ಣಚೋಳನೆಂ
ಬರಸು ಬಾರದೊಡವನ ರೂಹು ಬರೆದಕ್ಷಿಯಂ ತಿವಿಯೆ ಪಣೆಗಣ್ಣೊಡೆದುದು ೮

ಬೀತಹಂಕಾರದಿಂ ಮುಕ್ಕಣ್ಣಚೋಳನೆಂ
ಬಾತನೀ ಕರಿಕಾಲಚೋಳನೆಡೆಗೈದಿ ಸಂ
ಪ್ರೀತಿಯಿಂ ನುತಿಸೆ ಪಣೆಗಣ್ಣಿತ್ತು ಕಟ್ಟೆಯಂ ಕಟ್ಟಿಸುತ್ತಿರಲತ್ತಲು
ಭೂತಾಳಾಧಿಪ ಪ್ರಭಾಕರಚೋಳನನುದಿನಂ
ಶಾತಕುಂಭದ ಪರಿಯಣಂ ಸಹಸ್ರದೊಳೆ ಖ
ದ್ಯೋತಂಗೆ ಷಡ್ರಸಾನ್ನಂ ಕಳುಪಲುಂಡವಂ ತಿರುಗಿ ಕಳುಪುವನಾಗಳು ೯

ಕರಿಕಾಲಚೋಳನಟ್ಟಿದ ಚರರ್ ಬಾರೆಂದು
ಕರೆಯಲೊಲ್ಲದೊಡಾಣೆಯಿಟ್ಟು ತಡೆಯಲ್ ಪೊನ್ನ
ಹರಿವಾಣಮನಿತುಂ ದಿವಾಕರನ ಪೊರೆಗೈದದಿರಲಾತನಿಳಿದು ಬಂದು
ಹರಭಕ್ತರೊಳ್ ವಿರೋಧಂ ಕೊಂಬುದೇ ಪೋಗಿ
ವಿರಚಿಸಾ ಕಟ್ಟೆಯಂ ನೀನೆಂದು ಪೇಳ್ದು ದಿನ
ಕರನಾ ಪ್ರಭಾಕರನನಟ್ಟಿದಂ ಶಿವಭಕ್ತರಂ ಮೀರಿ ಬಾಳ್ವರುಂಟೇ ೧೦

ಆಲಿಸೈ ಪಿಟ್ಟವ್ವೆಗಭವನಾತ್ಮಜನಾಗಿ
ಲೀಲೆಯಿಂ ಮಣ್ಣನಾ ಕಟ್ಟೆಗಡಕುತ್ತೊಲ್ದು
ಕೈಲಾಸಕಾಕೆಯಂ ಕೊಂಡೊಯ್ಯೆ ಚೋಳನೀಕ್ಷಿಸಿ ಶಂಭುವಂ ಮೆಚ್ಚಿಸಿ

ಹೆಂಡತಿಗೆ ಕರಿಕಾಲಚೋಳನು ಹುಟ್ಟಿದನು. ಅವನು ಒಟ್ಟಾಗಿ ಕೂಡಿಕೊಂಡು ಕಾವೇರಿಗೆ ಕಟ್ಟೆಯನ್ನು ಕಟ್ಟುತ್ತಿರಲು ಮುಕ್ಕಣ್ಣಚೋಳ ಎಂಬ ರಾಜನು ಬರದಿರಲು ಅವನ ಚಿತ್ರವನ್ನು ಬರೆದು ಅದರ ಕಣ್ಣನ್ನು ತಿವಿಯಲು ಆಗ ಮುಕ್ಕಣ್ಣಚೋಳನ ಹಣೆ ಗಣ್ಣೊಡೆಯಿತು. ೯. ಅಹಂಕಾರ ನಾಶವಾಗಿ ಮುಕ್ಕಣ್ಣಚೋಳನೆಂಬುವವನು ಕರಿ ಕಾಲಚೋಳನ ಬಳಿ ಬಂದು ಅತಿಶಯವಾದ ಪ್ರೀತಿಯಿಂದ ಸ್ತುತಿಸಲು ಅವನಿಗೆ ಹಣೆ ಗಣ್ಣನ್ನು ಕೊಟ್ಟು ಕಟ್ಟೆಯನ್ನು ಕಟ್ಟಿಸುತ್ತಿದ್ದನು. ಅತ್ತಲಾಗಿ ದೊರೆ ಪ್ರಭಾಕರ ಚೋಳನು ಪ್ರತಿದಿನವೂ ಸಾವಿರ ಚಿನ್ನದ ತಟ್ಟೆಯಷ್ಟು ಪ್ರಮಾಣದ ಷಡ್ರಸಾನ್ನವನ್ನು ಸೂರ್ಯನಿಗೆ ಕಳಿಸಲು ಅದನ್ನು ತಿಂದು ಅವನು ಹಿಂದಕ್ಕೆ ಕಳುಹಿಸುವನು. ಆಗ ೧೦. ಕರಿಕಾಲಚೋಳನು ಕಳಿಸಿದ ಸೇವಕರು ಬಾ ಎಂದು ಕರೆಯಲು ಅವನು ಒಪ್ಪಲಿಲ್ಲ. ಆಣೆ ಹಾಕಿ ತಡೆಯಲು ಆಗ ಚಿನ್ನದ ಹರಿವಾಣವಷ್ಟೂ ಸೂರ್ಯನ ಬಳಿ ಹೋಗದೆ ನಿಂತುಹೋಯಿತು. ಸೂರ್ಯನು ಇಳಿದುಬಂದು ಶಿವಭಕ್ತರಲ್ಲಿ ವಿರೋಧ ಮಾಡಿ ಕೊಳ್ಳುವುದೇ ? ನೀನು ಹೋಗಿ ಆ ಕಟ್ಟೆಯನ್ನು ಕಟ್ಟು ಎಂದು ಹೇಳಿ ಪ್ರಭಾಕರನನ್ನು ಕಳಿಸಿದನು. ಶಿವಭಕ್ತರನ್ನು ಉಲ್ಲಂಘಿಸಿ ಬಾಳುವವರಿದ್ದಾರೆಯೆ ? ೧೧. ಕೇಳಯ್ಯ, ಪಿಟ್ಟವ್ವೆಗೆ ಶಿವನು ಮಗನಾಗಿ ಲೀಲೆಯಿಂದ ಮಣ್ಣನ್ನು ಆ ಕಟ್ಟೆಗೆ ರಾಶಿ ಹಾಕುತ್ತ ಒಲಿದು ಆಕೆಯನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಲು ಚೋಳನು ಅದನ್ನು ನೋಡಿ

CC-0. Jangamwadi Math Collection. Digitized by eGangotri

ಪಾಲಿಸೆನ್ನಯ ರಾಜ್ಯದೊಳ್ ಪೊನ್ನಮಳೆಯನೆ
ನ್ನಾಲಯದೊಳಾದ ನೈವೇದ್ಯಮಂ ಸಲಿಸೆನಲ್
ಬಾಲೇಂದುಮೌಳಿ ಕೆಯ್ಕೊಂಡಂತೆ ಸಲಿಸಿದಂ ಭಕ್ತನ ಮನೋರಥವನು ೧೧

ಒಂದು ದಿನಮೀಶ್ವರಂ ತೆರೆಯ ಮರೆಯೊಳ್ ಮುನ್ನಿ
ನಂದದಿಂ ಚೆಪ್ಪರಿಪುತಾರೋಗಿಸದಿರಲಗಿ
ನಿಂದ ಮೆಚ್ಚಿಸೆ ಸಲಿಸೆ ಏಕೆನಲ್ ಮಾದಾರ ಚೆನ್ನಯ್ಯನೊಡನೆ ಸಲಿಸಿ
ಬಂದೆವೆನಲಾತನಂ ತೋರೆನಗೆನಲ್ ತೋರ
ಲಂದಾತನಡಿಗೆರಗಿ ಪೊಗಳುತಿರೆ ಗಿರಿರಾಜ
ನಂದನೆಯ ವರನಿರ್ವರಂ ತನ್ನ ಕೈಲಾಸಪುರಕಿರದೆ ಕರೆದೊಯ್ದನು ೧೨

ಒರೆವೆನಾಲಿಪುದು ಕಳಚಂಗಪೆರುಮಾಳೆಯಂ
ಬರಸಿನರ್ಧಾಂಗಿ ಚೊಲ್ಲಡಿನಾಚಿ ಬರುತಲಾ
ಹರನ ಪೂಜೆಯ ಪೂವನೊಂದ ವಾಸಿಸೆ ಕಂಡು ತೊಣೆಯಾಂಡಿ ಮೂಗರಿಯಲು
ಅರಸನೀಕ್ಷಿಸಿ ಮೊದಲೆ ತಪ್ಪಿದೀ ಕರವಿರ
ಲ್ಕರಿವರೇ ಮೂಗನೆಲೆ ಮರುಳೆ ನೀನೆನುತವಳ
ಕರವನರಿಯಲ್ಕಭವನೊಲಿದಿವರ್ ಮೂವರಂ ಕೈಲಾಸಪುರಕೊಯ್ದನು ೧೩

ಶಿವನನ್ನು ಮೆಚ್ಚಿಸಿ ನನ್ನ ರಾಜ್ಯದಲ್ಲಿ ಹೊನ್ನಿನ ಮಳೆಯನ್ನು ಸುರಿಸು. ನನ್ನ ಮನೆಯಲ್ಲಿ ಮಾಡಿದ ನೈವೇದ್ಯವನ್ನು ಸ್ವೀಕರಿಸು ಎನ್ನಲು ಚಂದ್ರಶೇಖರನು ಅದೇ ರೀತಿ ಭಕ್ತನ ಮನೋರಥವನ್ನು ಸಲ್ಲಿಸಿದನು. ೧೨. ಒಂದು ದಿವಸ ಈಶ್ವರನು ತೆರೆಯಮರೆಯಲ್ಲಿ ಎಂದಿನಂತೆ ಚಪ್ಪರಿಸುತ್ತ ಊಟ ಮಾಡದಿರಲು 'ಅಗಿಯುವುದನ್ನು ನಿಲಿಸಿದ್ದೀಯೆ ? ಮೆಚ್ಚಿಸೆ, ಊಟ ಮಾಡೆ, ಏಕೆ ಎನ್ನಲು ಮಾದಾರ ಚೆನ್ನಯ್ಯನೊಡನೆ ಊಟಮಾಡಿ ಬಂದಿದ್ದೇವೆ ಎಂದು ಶಿವನು ಹೇಳಿದನು. ಅವನನ್ನು ನನಗೆ ತೋರಿಸೆಂದು ಚೋಳನು ಕೇಳಿದನು. ಶಿವನು ಅವನನ್ನು ತೋರಿಸಲು ಚೋಳನು ಚೆನ್ನನ ಪಾದಗಳಿಗೆ ನಮಸ್ಕರಿಸಿ ಅವನನ್ನು ಹೊಗಳುತ್ತಿರಲು ಈಶ್ವರನು ಅವರಿಬ್ಬರನ್ನು ತನ್ನ ಕೈಲಾಸನಗರಕ್ಕೆ ಕೂಡಲೇ ಕರೆದುಕೊಂಡು ಹೋದನು. ೧೩. ಹೇಳುತ್ತೇನೆ ಕೇಳು, ಕಳಚಂಗ ಪೆರುಮಾಳೆ ಎಂಬ ರಾಜನ ಪತ್ನಿ ಚೊಲ್ಲಡಿನಾಚ್ಚಿ ಬರುತ್ತ ಆ ಶಿವನನ್ನು ಪೂಜಿಸಿದ್ದ ಒಂದು ಹೂವನ್ನು ವಾಸನೆ ನೋಡಿದಳು. ಅದನ್ನು ನೋಡಿ ತೊಣೆಯಾಂಡಿ ಆಕೆಯ ಮೂಗನ್ನು ಕತ್ತರಿಸಲು ರಾಜನು ನೋಡಿ ಅಯ್ಯೋ, ಮರುಳೆ, ಮೊದಲು ತಪ್ಪು ಮಾಡಿದ ಆ ಕೈಯಿರಲು ಮೂಗನ್ನು ಕತ್ತರಿಸುತ್ತಾರೆಯೆ, ನೀನು ? ಎಂದು ಅವಳ ಕೈಯನ್ನು ಕತ್ತರಿಸಲು ಶಿವನು

CC-0. Jangamwadi Math Collection. Digitized by eGangotri

ಆಲಿಸಿನ್ನೆಲೆ ರಾಮ ಸತ್ಯೇಂದ್ರಚೋಳಭೂ
ಪಾಲಂಗೆ ಮಿತವಚನ ಮಂತ್ರಲಕ್ಷಾಹ್ವಯದ
ಬಾಲರುಂಟಾ ಮಂತ್ರಲಕ್ಷನಂ ಕೂಡಿಕೊಂಡೊಂದಿನಂ ವೈಹಾಳಿಗೆ
ಲೀಲೆಯಿಂ ಮಿತವಚನನೈದೆ ಬರುತಿರಲೊರ್ವ
ಬಾಲೆ ತಿರುಕೊಳನಾಚಿಯಾತ್ಮಜಂ ಶಂಕರಂ
ಮೇಳದಿಂದಾಡುತಿರೆ ಮಂತ್ರಲಕ್ಷನ ಹಯದ ಖುರಹತಿಗೆ ತಲೆ ಹರಿದುದು ೧೪

ಕಂಡು ತಿರುಕೊಳನಾಚಿ ಮೊರೆಯಿಡುತೆ ತಲೆಯುಮಂ
ಕೊಂಡು ರಾಯಂಗೆ ದೂರಿಡೆ ಮಗನ ಶಿರವ ನೀಂ
ಖಂಡಿಸೆಂದಾ ಪ್ರಧಾನಿಗೆ ಬೆಸಸಲೊಡೆಯನ ಕುಮಾರನೆಂದುಳಿಹಿ ತನ್ನ
ಮಂಡೆಯಂ ಮನೆಗೆ ಬಂದರಿದುಕೊಳೆ ಮಂತ್ರಿಯು
ದ್ದಂಡಿಸಿದನೆಲವೊ ಸಂದಾಯಿ ನೀನೀತನಂ
ಕೊಂಡೊಯ್ದು ಮಸ್ತಕವನರಿಯೆನುತೆ ಮಂತ್ರಲಕ್ಷನನವನ ವಶಕಿತ್ತನು ೧೫

ಅರಸನಾಜ್ಞೆಯೊಳೆ ಶಿರವರಿಯೆ ಪಂಚಾಕ್ಷರಿಯ
ಸ್ಮರಣೆಯಿಂದಿರ್ಪ ಶಿರಮಂ ನೋಡಿ ಭೂಪನ
ಚ್ಚರಿವಟ್ಟದೇನೆನಲ್ ಚೋದ್ಯಮೇನೆನುತೆ ಸಂದಾಯಿ ತನ್ನಯ ಶಿರವನು
ಅರಿದೀಯಲಾ ಶಿರಂ ಪ್ರಣವಪಂಚಾಕ್ಷರಿಯ
ಸ್ಮರಿಸುತಿರೆ ಕಂಡು ತಿರುಕೊಳನಾಚಿ ಮತ್ಸುತಂ
ಗರಸನಣುಗಂ ಸಾಟಿಯಾತಂಗೆ ಪಳಿಯೆನುತೆ ತನ್ನ ತಲೆಯುಂ ಕೊಟ್ಟಳು ೧೬

ಒಲಿದು ಅವರು ಮೂವರನ್ನೂ ಕೈಲಾಸಕ್ಕೆ ಕರೆದೊಯ್ದನು. ೧೪. ಇನ್ನು ಕೇಳಯ್ಯ ಸಿದ್ಧರಾಮ, ಸತ್ಯೇಂದ್ರಚೋಳರಾಜನಿಗೆ ಮಿತವಚನ, ಮಂತ್ರಲಕ್ಷ ಎಂಬ ಇಬ್ಬರು ಮಕ್ಕಳಿದ್ದರು. ಆ ಮಂತ್ರಲಕ್ಷನನ್ನು ಕರೆದುಕೊಂಡು ಒಂದು ದಿನ ಸಂತೋಷದಿಂದ ಮಿತವಚನನು ವೈಹಾಳಿಗೆ ಬರುತ್ತಿರಲು ತಿರುಕೊಳನಾಚಿ ಎಂಬಾಕೆಯ ಮಗ ಶಂಕರನು ಜೊತೆಯವರೊಡನೆ ಆಡುತ್ತಿರಲು ಮಂತ್ರಲಕ್ಷನ ಕುದುರೆಯ ಗೊರಸಿನ ಹೊಡೆತಕ್ಕೆ ತಲೆ ಸೀಳಿತು. ೧೫. ಅದನ್ನು ನೋಡಿ ತಿರುಕೊಳನಾಚಿ ಮೊರೆಯಿಡುತ್ತಾ ತಲೆಯನ್ನು ತೆಗೆದುಕೊಂಡು ಸತ್ಯೇಂದ್ರಚೋಳರಾಜನಲ್ಲಿ ದೂರು ಕೊಡಲು ರಾಜನು ಮಗನ ತಲೆ ಯನ್ನು ಕತ್ತರಿಸು ಎಂದು ಮಂತ್ರಿಗೆ ಆಜ್ಞಾಪಿಸಿದನು. ಒಡೆಯನ ಮಗನೆಂದು ಅವನನ್ನು ಉಳಿಸಿ ಮಂತ್ರಿ ಮನೆಗೆ ಬಂದು ತನ್ನ ತಲೆಯನ್ನು ಕತ್ತರಿಸಿಕೊಂಡನು. ಮಂತ್ರಿಯು ನನ್ನ ಮಾತನ್ನು ಧಿಕ್ಕರಿಸಿದ. ಎಲವೊ ಸಂದಾಯಿ, ನೀನು ಇವನನ್ನು ಕರೆದುಕೊಂಡು ಹೋಗಿ ತಲೆಯನ್ನು ಕತ್ತರಿಸು ಎಂದು ಮಂತ್ರಲಕ್ಷನನ್ನು ಅವನ ವಶಕ್ಕೆ ಕೊಟ್ಟನು. ೧೬. ರಾಜನ ಆಜ್ಞೆಯಂತೆ ತಲೆಯನ್ನು ಕತ್ತರಿಸಲು ಅದು ಪಂಚಾಕ್ಷರಿ ಮಂತ್ರವನ್ನು ಜಪಿಸು ತ್ತಿತ್ತು. ಅದನ್ನು ನೋಡಿ ರಾಜನು ಆಶ್ಚರ್ಯಪಟ್ಟು ಇದೇನು ಎನ್ನಲು, ಚೋದ್ಯವೇನು ಎನ್ನುತ್ತಾ ಸಂದಾಯಿ ತನ್ನ ತಲೆಯನ್ನು ಕತ್ತರಿಸಿಕೊಂಡನು. ಆ ತಲೆಯೂ ಪ್ರಣವ ಪಂಚಾಕ್ಷರಿಯನ್ನು ಸ್ಮರಿಸುತ್ತಿರುವುದನ್ನು ನೋಡಿ ತಿರುಕೊಳನಾಚಿಯು ನನ್ನ ಮಗನಿಗೆ

CC-0. Jangamwadi Math Collection. Digitized by eGangotri

ಅನಿತರೊಳಗಾ ಪ್ರಧಾನಿಯ ಮಸ್ತಕಂ ಬೇಗ
ಜನಪತಿಯ ಪೊರೆಗೆ ಬರಲವಕವೇ ಸರಿಯಿಾತ
ನೆನಗಾಗಿ ಮಡಿದನೆಂದಾ ಕ್ಷಣಂ ತನ್ನುತ್ತಮಾಂಗಮಂ ನೃಪನರಿಯಲು
ಮನೆಯೊಳಿರ್ದಾ ಮಂತ್ರಲಕ್ಷನಂ ನಾನೊಯ್ಯ
ಲಿನಿತಾದುದೆನ್ನಿಂದೆನುತ್ತಲಾ ಮಿತವಚನ
ನನುನಯದ ತನ್ನ ಶಿರವರಿಯೆ ಪಂಚಾಕ್ಷರಿಯನುಚ್ಚರಿಸುತಿರ್ದುದಂದು ೧೭

ಇಂತಿನಿಬರೆಲ್ಲರುಂ ಬೆರಸಿ ತನ್ನಯ ಜೀವ
ಕಾಂತನಳಿದಂ ತನ್ನ ಪ್ರಾಣಮೇಕೆನುತೆ ನೃಪ
ಕಾಂತೆ ತನ್ನಯ ಶಿರವನರಿವನಿತರೊಳಗವಳ ಭಕ್ತಿಭಾವನೆಗೆ ಮೆಚ್ಚಿ
ಕಂತುಹರನಬಲೆ ವರವೇನೆನಲ್ ಶಂಕರಂ
ಗುಂತರಿಸದಸುವೀಯೆನಲ್ಕದಕೆ ಮೆಚ್ಚಿ ಭೂ
ಕಾಂತಾದಿಗಳ್ಗೆ ಹರಣವನಿತ್ತು ಬಳಿಕವರ ಕೈಲಾಸಪುರಕೊಯ್ದನು ೧೮

ಕರವೂರೆನಿಪ್ಪ ಪುರದೊಳ್ ಧರ್ಮಚೋಳನೆಂ
ಬರಸಂಗೆ ಭೀಮಚೋಳಾಹ್ವಯದ ಸುತನಿರು
ತ್ತಿರುತೆ ವೈಹಾಳಿಗೈದುವ ಸಮಯದೊಳಗೊಂದು ಪಸುವಿನೆಳೆಗರು ಸುಳಿಯಲು

ರಾಜನ ಮಗನು ಸಾಟಿ, ಇವನಿಗೆ ಪ್ರತಿಯೆಂದು ತನ್ನ ತಲೆಯನ್ನು ಕೊಟ್ಟಳು. ೧೭. ಅಷ್ಟರಲ್ಲಿ ಪ್ರಧಾನಿಯ ತಲೆಯು ಬೇಗನೆ ರಾಜನ ಬಳಿಗೆ ಬರಲು ಅದಕ್ಕೆ ಅದೇ ಸಾಟಿ. ಇವನು ನನಗಾಗಿ ಸತ್ತನು ಎನ್ನುತ್ತ ಆಕ್ಷಣವೇ ತನ್ನ ತಲೆಯನ್ನು ರಾಜನು ಕತ್ತರಿಸಿಕೊಂಡನು. ಮನೆಯಲ್ಲಿದ್ದ ಮಂತ್ರಲಕ್ಷನನ್ನು ನಾನು ಕರೆದುಕೊಂಡು ಹೋದುದ ರಿಂದ ನನ್ನಿಂದಾಗಿ ಇಷ್ಟೆಲ್ಲಾ ಆಯಿತು ಎನ್ನುತ್ತ ಆ ಮಿತವಚನನು ಅನುನಯದಿಂದ ತನ್ನ ತಲೆಯನ್ನು ಕತ್ತರಿಸಿಕೊಳ್ಳಲು ಅದೂ ಪಂಚಾಕ್ಷರಿಯನ್ನು ಉಚ್ಚರಿಸುತ್ತಿತ್ತು. ೧೮. ಹೀಗೆ ಇವರೆಲ್ಲರೊಡಗೂಡಿ ನನ್ನ ಪ್ರಾಣಪ್ರಿಯನು ಸತ್ತನು. ಇನ್ನು ನನಗೇಕೆ ಈ ಜೀವ ಎಂದು ರಾಣಿಯೂ ತಲೆಯನ್ನು ಕತ್ತರಿಸಿಕೊಳ್ಳುವಷ್ಟರಲ್ಲಿ ಅವಳ ಭಕ್ತಿಯ ಭಾವಕ್ಕೆ ಮೆಚ್ಚಿ ಶಿವನು ಅಬಲೆ, ಏನು ವರಬೇಕೆಂದು ಕೇಳಿದನು. ಆಕೆಯು ಶಿವನನ್ನು ಕುರಿತು, ಕೂಡಲೇ ಶಂಕರನಿಗೆ ಹೋದ ಪ್ರಾಣವನ್ನು ಕೊಡು ಎನ್ನಲು ಅದಕ್ಕೆ ಮೆಚ್ಚಿ ರಾಜ ಮೊದಲಾದವರ ಪ್ರಾಣವನ್ನೂ ಕೊಟ್ಟು ಅನಂತರ ಶಿವನು ಅವರನ್ನು ಕೈಲಾಸಕ್ಕೆ ಕರೆದುಕೊಂಡು ಹೋದನು. ೧೯. ಕರವೂರು ಎಂಬ ಪಟ್ಟಣದಲ್ಲಿ ಧರ್ಮಚೋಳ ಎಂಬ ರಾಜನಿಗೆ ಭೀಮಚೋಳ ಎಂಬ ಹೆಸರಿನ ಮಗನಿದ್ದನು. ಒಂದು ದಿನ ವೈಹಾಳಿಗೆ ಹೋಗುತ್ತಿದ್ದ ಸಮಯದಲ್ಲಿ ಒಂದು ಹಸುವಿನ ಕರು ಬರಲು ರಥದ ಚಕ್ರ ಅದರ ಮೇಲೆ ಹರಿಯಿತು. ರಾಜನು

CC-0. Jangamwadi Math Collection. Digitized by eGangotri

ಅರಿದುದು ವರೂಥಚಕ್ರಂ ರಾಯನವನ ತಾಂ
ಪರಿಹರಿಸೆ ಶಂಭು ಮೆಚ್ಚಿದೆನೆನಲ್ ಕರುವಿಗಸು
ದೊರೆಕೊಳ್ಳಲೆನೆ ಮತ್ತೆ ಮೆಚ್ಚಿ ಮಗನಸುವಿತ್ತು ಕೈಲಾಸಪುರಕೊಯ್ದನು ೧೯

ಉತ್ತುಂಗಚೋಳನೀಶ್ವರವರದೆ ಕುವರನಂ
ಪೆತ್ತನಯ್ವಡಿಚೋಳನಂ ಪುರದೊಳಾಡುತಿರೆ
ಮತ್ತಗಜವೈತರಲ್ ಕೊಂದು ತನ್ನಂಗುಷ್ಠದಿಂದವಚಿ ಬಿಸುಡಲಾಗಿ
ಸುತ್ತಣವನಿಪರಂಜಿ ಪೋಗಲೀತಂ ಕೇಳ್ದು
ಪತ್ತಿತೆನ್ನೊಳ್ ಪಾಪವೆನುತೆ ಶಿವಲಿಂಗಮಂ
ಬಿತ್ತರದೊಳೊಂದುಕೋಟಿ ಪ್ರತಿಷ್ಠೆಯನೆಸಗಿ ಕೈಲಾಸಪುರಕೈದಿದಂ ೨೦

ಲೀಲೆಯಿಂ ಚೇರಪಾಂಡ್ಯರ್ ವೆರಸಿ ರಾಜೇಂದ್ರ
ಚೋಳನಿಂದ್ರನ ಬಳಿಗೆ ನಿಚ್ಚಲುಂ ಪೋಗಿಯವ
ನೋಲಗದೊಳಿರ್ದಿರ್ದು ಬರುತೊಂದುದಿನ ಬಾಗಿಲೊಳ್ ಬಿಗಿದ ಪಾವುಗೆಗಳ
ಮೇಲೆ ಹಯಮಂ ನೆಗೆಪಿಕೊಂಡೊಯ್ಯೆ ಕೋಪಮಂ
ತಾಳಿ ತದ್ರಾಜ್ಯದೊಳ್ ಮಳೆಗರೆಯಬೇಡೆಂದು
ಪೇಳಲಿಂದ್ರಾಜ್ಞೆಯಿಂ ನಕ್ಷತ್ರತತಿಯನಾವೃಷ್ಟಿಯಂ ಪಸರಿಸಿದುವು ೨೧

ತಾವಿದಂ ಕೇಳ್ದಂದಿನಂದದಿಂ ಪೋಗಿಯಮ
ರಾವತಿಯೊಳಖಿಳನಕ್ಷತ್ರಂಗಳಂ ಪಿಡಿದು
ದೇವೇಂದ್ರನಂ ಮೀರಿ ಮನೆಯೊಳಗೆ ಸೆರೆಗೆಯ್ಯಲಮರಪತಿದಂಡು ನಡೆಯೆ

ತಾನು ಅವನ ತಲೆಯನ್ನು ಕತ್ತರಿಸಲು ಶಿವನು ಮೆಚ್ಚಿದೆ ಎನ್ನಲು ಕರುವಿಗೆ ಪ್ರಾಣ ಬರಲಿ ಎಂದುಕೊಳ್ಳಲು ಮತ್ತೆ ಮೆಚ್ಚಿ ಮಗನ ಪ್ರಾಣಕೊಟ್ಟು ಕೈಲಾಸಪುರಕ್ಕೆ ಒಯ್ದನು. ೨೦. ಉತ್ತುಂಗಚೋಳನು ಈಶ್ವರನ ವರದಿಂದ ಐಯ್ವಡಿಚೋಳನೆಂಬ ಮಗನನ್ನು ಪಡೆದನು. ಅವನು ಪಟ್ಟಣದಲ್ಲಿ ಆಡುತ್ತಿದ್ದಾಗ ಮದಿಸಿದ ಆನೆ ಬರಲು ಅದನ್ನು ಕೊಂದು ತನ್ನ ಹೆಬ್ಬೆರಳಿನಲ್ಲಿ ಒತ್ತಿ ಬಿಸಾಡಿದನು. ಆಗ ಸುತ್ತಲಿನ ರಾಜರು ಹೆದರಿ ಹೋಗಲು ಇವನು ಅದನ್ನು ಕೇಳಿ, ನನಗೆ ತಾಪ ಆವರಿಸಿತು ಎನ್ನುತ್ತ ಅತಿಶಯದಿಂದ ಒಂದು ಕೋಟಿ ಶಿವಲಿಂಗದ ಪ್ರತಿಷ್ಠೆ ಮಾಡಿಸಿ ಕೈಲಾಸಕ್ಕೆ ಹೋದನು. ೨೧. ವಿನೋದ ದಿಂದ ಚೋರ–ಪಾಂಡ್ಯರೊಡಗೂಡಿಕೊಂಡು ರಾಜೇಂದ್ರಚೋಳನು ನಿತ್ಯವೂ ಇಂದ್ರನ ಬಳಿಗೆ ಹೋಗಿ ಅವನ ರಾಜಸಭೆಯಲ್ಲಿ ಇದ್ದು ಬರುತ್ತಿದ್ದನು. ಒಂದು ದಿನ ಬಾಗಿಲಿನಲ್ಲಿ ಬಿಗಿದಿದ್ದ ಹಾವುಗೆಗಳ ಮೇಲೆ ಕುದುರೆಯನ್ನು ಹಾರಿಸಿಕೊಂಡು ಹೋಗಲು ಇಂದ್ರನು ಕೋಪಗೊಂಡು ಆ ರಾಜ್ಯದಲ್ಲಿ ಮಳೆ ಸುರಿಯಬೇಡ ಎಂದು ಆಜ್ಞಾಪಿಸಿದನು. ಅವನ ಆಜ್ಞೆಯಂತೆ ನಕ್ಷತ್ರಸಮೂಹ ಅನಾವೃಷ್ಟಿಯನ್ನುಂಟುಮಾಡಿದವು. ೨೨. ತಾವು ಇದನ್ನು ಕೇಳಿದ ದಿನದಿಂದ ಅಮರಾವತಿ ಹೋಗಿ ಎಲ್ಲ ನಕ್ಷತ್ರಗಳನ್ನೂ ಹಿಡಿದು, ದೇವೇಂದ್ರನನ್ನೂ ಮೀರಿಸಿ ಮನೆಯಲ್ಲಿ ಸೆರೆಹಾಕಿದರು. ದೇವೇಂದ್ರನ ಸೈನ್ಯ ಬರಲು

CC-0. Jangamwadi Math Collection. Digitized by eGangotri

ಕೋವಿದಂ ಚೊಕ್ಕನೈನಾರು ನರಿವಿಂಡಂ ಹ
ಯಾವಳಿಯ ಮಾಡಿಕೊಡಲವರ ಬಲ್ಪಿಂದಖಿಳ
ದೇವತೆಗಳಂ ಜಯಿಸಿ ಸುರಪನಂ ಪಿಡಿಯೆ ಮಳೆ ಬರುವಂತೆ ನೇಮಿಸಿದನು ೨೨

ಹರಿ ತಾರೆಗಳ್ವೆರಸಿ ಬೀಳ್ಕೊಂಡು ಪೋದನೀ
ಧರಣೀಶ ರಾಜೇಂದ್ರಚೋಳಂ ಕುಮಾರಿಯುಂ
ಹರುಷದಿಂ ರೇವಣಾಸಿದ್ಧಂಗೆ ಕೊಟ್ಟು ಶಿವಭಕ್ತರ್ಗೆ ಸಾಮ್ರಾಜ್ಯದ
ಸಿರಿಯಿತ್ತು ಕೈಲಾಸಕೈದಿದಂ ಪಾಂಡ್ಯಭೂ
ವರನಾತ್ಮರಾಜ್ಯಮಂ ಚೊಕ್ಕನಾಥೇಶ್ವರನ
ಪರಮವಿನಿಯೋಗಕಮರಿಸಿ ಕೊಟ್ಟು ವಿಭವದಿಂ ಕೈಲಾಸಮಂ ಪೊಕ್ಕನು ೨೩

ಜಡೆಯುನೈನಾರಿ ಯಸ್ಯಜ್ಞಾನಿದೇವಿಯುರ
ಪೊಡೆಯೊಳುದಿಸಿದ ನಂಬಿ ನರಸಿಂಗಮೊನೆಯಾರಿ
ಗೊಡನೆ ತಾಂ ಸಾಕುಮಗನಾಗಿ ಶಂಕಿಲೆಪರವೆಯುರವರಸಿಯಾ ಪರವೆಯು
ಕೊಡವೊಲೆಯೊಳಭವನಂ ನುಡಿಸಿ ಪಡಿಹೊನ್ನನುಂ
ಪಡೆದು ಸೋಮಸಿಯಾರ ಮಖಕೀಶನಂ ಕಳುಪಿ
ಬಿಡದೆ ಪೆರುಮಳಲೆಯ ಕುರುಂಬರಂ ಬೆರಸನಿಬರಂ ಶಿವಪುರಕ್ಕೊಯ್ದನು ೨೪

ಚೇರಮಂ ತದ್ವಾರ್ತೆಯಂ ಕೇಳ್ದು ಧರೆಯ ಭಂ
ಡಾರಮಂ ತಿರುನೀಲಕಂಠಪಾಣಿಗೆ ಕೊಟ್ಟು
ಮಾರಹರಭಕ್ತಿಯಿಂ ಕೈಲಾಸಪುರಕೆ ದಾಳಿಯನಿಟ್ಟನುತ್ಸವದೊಳು

ಕೋವಿದನಾದ ಚೊಕ್ಕನೈನಾರು ನರಿಗಳ ಸಮೂಹವನ್ನು ಕುದುರೆಗಳನ್ನು ಮಾಡಿ ಕೊಡಲು ಅದರ ಸಾಹಸದಿಂದ ಎಲ್ಲ ದೇವತೆಗಳನ್ನೂ ಗೆದ್ದು ದೇವೇಂದ್ರನನ್ನು ಹಿಡಿಯಲು ಮಳೆ ಸುರಿಯುವಂತೆ ಆಜ್ಞಾಪಿಸಿದನು. ೨೩. ದೇವೇಂದ್ರನು ನಕ್ಷತ್ರಗಳೊಡಗೂಡಿ ಬೀಳ್ಕೊಂಡು ಹೋದನು. ರಾಜನಾದ ರಾಜೇಂದ್ರ ಚೋಳನು ತನ್ನ ಮಕ್ಕಳನ್ನು ಸಂತೋಷದಿಂದ ರೇವಣಸಿದ್ಧನಿಗೆ ಕೊಟ್ಟು ಶಿವ ಭಕ್ತರಿಗೆ ಸಾಮ್ರಾಜ್ಯದ ಸಂಪತ್ತನ್ನು ಕೊಟ್ಟು ಕೈಲಾಸಕ್ಕೆ ಹೋದನು. ಪಾಂಡ್ಯ ರಾಜನೂ ತನ್ನ ರಾಜ್ಯವನ್ನು ಚೊಕ್ಕನಾಥೇಶ್ವರನ ಸೇವೆಗೆ ಸಿದ್ಧಮಾಡಿ ಕೊಟ್ಟು ವೈಭವ ದಿಂದ ಕೈಲಾಸಕ್ಕೆ ಹೋದನು. ೨೪. ಜಡೆಯುನೈನಾರಿ ಯಸ್ಯಜ್ಞಾನಿ ದೇವಿಯುರ ಹೊಟ್ಟೆಯಲ್ಲಿ ಹುಟ್ಟಿದ ನಂಬಿ, ನರಸಿಂಗಮೊನೆಯಾರಿಗೆ ಸಾಕು ಮಗನಾದನು. ಶಂಕಿಲೆ–ಪರವೆಯರನ್ನು ಮದುವೆಯಾದನು. ಪರವೆಯ ದುಂಡಾದ ಮೊಲೆಯಲ್ಲಿ ಶಿವನನ್ನು ಪ್ರತ್ಯಕ್ಷ ಮಾಡಿಸಿ ಮಾತನಾಡಿಸಿ ಪಡಿಹೊನ್ನನ್ನು ಪಡೆದು ಸೋಮಸಿಯರ ಯಜ್ಞಕ್ಕೆ ಈಶ್ವರನನ್ನು ಕಳಿಸಿ, ಪೆರುಮಳಲೆಯ ಕುರುಬರೂ ಸೇರಿದಂತೆ ಅವರೆಲ್ಲರನ್ನೂ ಕೈಲಾಸಕ್ಕೆ ಕರೆದೊಯ್ದನು. ೨೫. ಚೇರಮನು ಈ ಸುದ್ದಿಯನ್ನು ಕೇಳಿ ರಾಜ್ಯದ ಭಂಡಾರವನ್ನು ತಿರುನೀಲಕಂಠಪಾಣಿಗೆ ಕೊಟ್ಟು ಶಿವನ ಮೇಲಿನ ಭಕ್ತಿಯಿಂದ ಸಂಭ್ರಮದಿಂದ ಕೈಲಾಸಕ್ಕೆ

CC-0. Jangamwadi Math Collection. Digitized by eGangotri

ವೀರಚಂಡೇಶ್ವರಂ ಲಿಂಗಮಜ್ಜನಕೆ ಗೋ
ಕ್ಷೀರಮಂ ಕರೆಯೆ ಲಿಂಗಮಂನೊದೆದ ತಂದೆಯಂ
ಕ್ರೂರ ಹೋಗೆನುತೆ ಶಿರವರಿಯಲಭವಂ ಮೆಚ್ಚಿ ಕೈಲಾಸಪುರಕೊಯ್ದನು ೨೫

ಇಂತೆ ವೊನೆಧರಚೋಳನಖಿಳಸಾಮ್ರಾಜ್ಯಮಂ
ಸಂತೋಷದಿಂದಾಳುತಿರಲೊರ್ವ ಜಂಗಮಂ
ಕಾಂತೆಯಳಿಯಲ್ಕೆ ಬಹುದುಃಖದಿಂದವಳೊಡನೆ ಮಡಿವೆನೆನೆ ನೃಪತಿ ತನ್ನ
ಕಾಂತೆಯಂ ಕೊಟ್ಟು ಮಸ್ತಕದ ರತ್ನಮನಿತ್ತು
ಚಿಂತೆಯಂ ಬಿಟ್ಟು ಸೇವಕನಾಗಿ ನಡೆವುತಿರೆ
ಕಂತುಹರನಾತಂಗೆ ಕೈಲಾಸಪದವಿಯಂ ಕೊಟ್ಟನಧಿಕೋತ್ಸವದೊಳು ೨೬

ಆಲಿಸೆಲೆ ಸಿದ್ಧರಾಮೇಶ ನೀಳ ಕೈವಲ್ಯ
ಚೋಳನಹಿತರ ಮೇಲೆ ಪೋಗಿ ಮೂರಬ್ದಮಂ
ಜೋಲಿಯಾಗಲ್ ತನ್ನ ರಾಜ್ಯಕ್ಕೆ ಬರನೈದೆ ಸಿರಿವಂತಸೆಟ್ಟಿ ತನ್ನ
ಆಲಯದ ಧನವನಿತ್ತೆಲ್ಲರಂ ಸಲಹಲಾ
ಚೋಳನಾಲಿಸಿ ಸೆಟ್ಟಿಗುರೆ ಪಟ್ಟಮಂ ಕಟ್ಟಿ
ಪಾಲಿಸು ಧರಿತ್ರಿಯನೆನಲ್ಕೊಲ್ಲದಿರೆ ಶಿವಂ ಕೈಲಾಸಪುರಕೊಯ್ದನು ೨೭

ಹೋದನು. ವೀರ ಚಂಡೇಶ್ವರನು ಲಿಂಗದ ಅಭಿಷೇಕಕ್ಕಾಗಿ ಹಸುವಿನ ಹಾಲನ್ನು ಕರೆಯಲು ಲಿಂಗವನ್ನು ಒದ್ದ ತಂದೆಯನ್ನು ಕ್ರೂರಿ ಹೋಗು ಎನ್ನುತ್ತ ಅವನ ತಲೆಯನ್ನು ಕತ್ತರಿಸಲು ಶಿವನು ಮೆಚ್ಚಿ ಕೈಲಾಸಕ್ಕೆ ಕರೆದುಕೊಂಡು ಹೋದನು. ೨೬. ಹಿಂದೆ ಮೊನೆಧರ ಚೋಳನು ಸಕಲ ಸಾಮ್ರಾಜ್ಯವನ್ನು ಸಂತೋಷದಿಂದ ಆಳುತ್ತಿದ್ದನು. ಒಬ್ಬ ಜಂಗಮನು ತನ್ನ ಪತ್ನಿ ಮರಣ ಹೊಂದಲು ಬಹುವಾದ ದುಃಖದಿಂದ ಅವಳ ಜೊತೆಯಲ್ಲಿಯೇ ಸಾಯುತ್ತೇನೆ ಎನ್ನಲು ರಾಜನು ತನ್ನ ಅರಸಿಯನ್ನು ಅವನಿಗೆ ಕೊಟ್ಟು, ತಲೆಯ ಮೇಲಿನ ರತ್ನವನ್ನು ಕೊಟ್ಟು ಚಿಂತೆಯನ್ನು ಬಿಟ್ಟು ಸೇವಕನಾಗಿ ನಡೆದುಕೊಳ್ಳುತ್ತಿರಲು ಶಿವನು ಅವನಿಗೆ ಅಧಿಕವಾದ ಸಂತೋಷ ಸಂಭ್ರಮಗಳಿಂದ ಕೈಲಾಸ ಪದವಿಯನ್ನು ಕೊಟ್ಟನು. ೨೭. ನೀನು ಕೇಳಯ್ಯ, ಸಿದ್ಧರಾಮ ಕೈವಲ್ಯಚೋಳನು ಶತ್ರುಗಳ ಮೇಲೆ ದಂಡೆತ್ತಿ ಹೋಗಿ ಹಿಂತಿರುಗಲು ಮೂರು ವರ್ಷ ತಡವಾಗಲು, ಅವನ ರಾಜ್ಯಕ್ಕೆ ಬರಗಾಲ ಉಂಟಾಯಿತು. ಆಗ ಸಿರಿವಂತ ಸೆಟ್ಟಿ ತನ್ನ ಮನೆಯ ಸಂಪತ್ತನ್ನೆಲ್ಲ ಕೊಟ್ಟು ಪ್ರಜೆಗಳನ್ನೆಲ್ಲ ಕಾಪಾಡಲು ಅದನ್ನು ಚೋಳನು ಕೇಳಿ ಆ ಸೆಟ್ಟಿಗೆ ಪಟ್ಟವನ್ನು ಕಟ್ಟಿ ರಾಜ್ಯವನ್ನು ಆಳೆನ್ನಲು ಅವನು ಅದಕ್ಕೆ ಒಪ್ಪದಿರಲು ಶಿವನು ಅವನನ್ನು ಕೈಲಾಸಕ್ಕೆ

CC-0. Jangamwadi Math Collection. Digitized by eGangotri

ಮನುಜೇಂದ್ರ ಚೋಳಭೂಪಾಲಕಂ ಪೂಸಲನ
ಮನದೊಳೊಪ್ಪುವ ಶಿವಾಲಯವನೀಕ್ಷಿಸಿ ತಾನು
ಮನುನಯದೊಳನುಪಮ ಶಿವಾಲಯಂಗಟ್ಟಿ ಮಜ್ಜನಕೆಳ್ಳನೊಣಗಿಸುತಿರೆ
ಮುನಿರಾಜನೈದಿ ಭಕ್ಷಿಸೆ ಕಾಪಿಗರ್ ಕೊಂಡು
ಜನಪತಿಯ ಪೊರೆಗೆ ತರಲೇಕೆ ಮೆಲ್ದಪೆಯೆನ
ಲ್ಕನುದಿನಂ ಶಿವನಣುಗನಾಗಿ ಪುಟ್ಟುವೆನೆಂದು ಮೆಲ್ದಪೆಂ ಕೇಳೆಂದನು ೨೮

ಆದೊಡಾಂ ಶಿವಭಕ್ತರಣುಗನಹೆನೆನುತಹ
ಲ್ಲಾದದಿಂದವನ ಬಾಯೆಳ್ಳನೀತಂ ಮೆಲ
ಲ್ಕಾ ದೇವರಿವರಿರ್ವರಣಲಿಂದೆ ಬೀಳ್ವೆಳ್ಳ ಮೆಲಲೇಕೆ ಮೆಲ್ವೆಯೆನಲು
ಆದರದೆ ನಿಮಗೆ ಮಗನಹೆನೆಂದು ಮೆಲ್ವೆನೆನು
ತಾದಿಪುರುಷಂ ಮೆಚ್ಚಿ ಚೋಳ ಮುನಿರಾಜರುಮ
ನಾ ದಿವ್ಯ ಕೈಲಾಸಪುರಕೆ ಕೊಂಡೊಯ್ದನೆಲೆ ರಾಮ ನೀಂ ಕೇಳೆಂದನು ೨೯

ವೀರಚೋಳಂ ದಿನಂಪ್ರತಿ ಶಿವನ ಸಾಹಸ್ರ
ವಾರಿಜದೊಳರ್ಚಿಸುತ್ತೊಂದುದಿನಮೊಂದುಳಿಯೆ
ಧೀರತನದಿಂ ಶಿರವನರಿದೇರಿಸಲ್ ಶಿವಂ ಮೆಚ್ಚಿ ಶಿವಪುರಕೊಯ್ದನು
ಮಾರಹರಭಕ್ತಂ ಪಗಲ್ಚೋಳನೆಂದೆಂಬ
ಧಾರುಣೀಶಂ ಜಡೆಯ ತಲೆಗೆ ಮುಡಿದಲೆಯಿತ್ತು
ಕಾರುಣ್ಯಸಾಗರನ ಕೈಲಾಸಮಂ ಪೊಕ್ಕನೆಲೆ ರಾಮ ಕೇಳೆಂದನು ೩೦

ಕರೆದುಕೊಂಡು ಹೋದನು. ೨೮. ಮನುಜೇಂದ್ರನೆಂಬ ಚೋಳರಾಜನು ಪೂಸಲನ ಮನಸ್ಸಿನಲ್ಲಿ ಕಾಣುವ ಶಿವನ ಆಲಯವನ್ನು ನೋಡಿ ತಾನೂ ಸಹ ಅನುನಯದಿಂದ ಮನೋಹರವಾದ ಶಿವಾಲಯವನ್ನು ಕಟ್ಟಿ, ಸ್ನಾನಕ್ಕಾಗಿ ಎಳ್ಳನ್ನು ಒಣಗಿಸುತ್ತಿರಲು ಮುನಿರಾಜನು ಬಂದು ಅದನ್ನು ತಿಂದನು. ಕಾವಲಿನವರು ಅವನನ್ನು ಹಿಡಿದು ರಾಜನ ಬಳಿಗೆ ಕರೆತರಲು ಅವನು ಎಳ್ಳನ್ನು ತಿಂದುದೇಕೆಂದು ಕೇಳಿದನು. ಪ್ರತಿದಿನವೂ ಶಿವನ ಮಗನಾಗಿ ಹುಟ್ಟುತ್ತೇನೆಂದು ತಿಂದೆ ಕೇಳು ಎಂದನು. ೨೯. ಹಾಗಾದರೆ ನಾನು ಶಿವ ಭಕ್ತರ ಮಗನಾಗುತ್ತೇನೆ ಎನ್ನುತ್ತ ಸಂತೋಷದಿಂದ ಅವನ ಬಾಯಿಯ ಎಳ್ಳನ್ನು ಇವನು ತಿಂದನು. ಆ ದೇವನು ಇವರಿಬ್ಬರ ಬಾಯಿಂದ ಬೀಳುವ ಎಳ್ಳನ್ನು ತಿನ್ನಲು ಅವರು ಇವನನ್ನು ಕುರಿತು ಏಕೆ ತಿನ್ನುತ್ತೀಯೆ ಎಂದು ಕೇಳಿದರು. ಆದರದಿಂದ ನಿಮಗೆ ಮಗ ನಾಗುತ್ತೇನೆಂದು ತಿನ್ನುತ್ತೇನೆ ಎನ್ನುತ್ತ ಶಿವನು ಮೆಚ್ಚಿ ಚೋಳ–ಮುನಿರಾಜರಿಬ್ಬರನ್ನೂ ಆ ದಿವ್ಯವಾದ ಕೈಲಾಸಕ್ಕೆ ಕರೆದುಕೊಂಡು ಹೋದನು. ಎಲೆ ಸಿದ್ಧರಾಮ, ನೀನು ಕೇಳು ಎಂದನು. ೩೦. ವೀರಚೋಳನು ನಿತ್ಯವೂ ಶಿವನನ್ನು ಸಾವಿರ ಕಮಲದಿಂದ ಪೂಜಿಸುತ್ತಾ ಒಂದುದಿನ ಹೂವೊಂದು ಕಡಿಮೆಯಾಗಲು ಪರಾಕ್ರಮ ಮತ್ತು ಸ್ಥೈರ್ಯ ಗಳಿಂದ ತನ್ನ ತಲೆಯನ್ನೇ ಕತ್ತರಿಸಿ ಅರ್ಪಿಸಲು ಶಿವನು ಮೆಚ್ಚಿ ಕೈಲಾಸಕ್ಕೆ ಕರೆದೊಯ್ದನು. ಶಿವನ ಭಕ್ತ ಪಗಲ್ಚೋಳನೆಂಬ ರಾಜನು ಜಡೆಯ ತಲೆಗೆ ಮುಡಿಯ ತಲೆಯನ್ನು ಕೊಟ್ಟು

CC-0. Jangamwadi Math Collection. Digitized by eGangotri

ವೀರಪಾಂಡ್ಯಂ ಮಹೇಶಂಗೆ ಗಿರಿರಾಜಂ ಕು
ಮಾರಿಯಂ ಕೊಟ್ಟುದಂ ಕೇಳ್ದು ತಾನುಂ ತನ್ನ
ನಾರಿ ರತ್ನಾವತಿಯ ಗರ್ಭದಿಂ ಶರ್ವಾಣಿಯಂ ಪಡೆದು ಶಂಕರಂಗೆ
ಓರಂತೆ ಮದುವೆಯಂ ಮಾಡಿ ನಿಜರಾಜ್ಯ ಭಂ
ಡಾರಮಂ ಶಿವನ ಶರಣರ್ಗಿತ್ತು ಬಳಿಕವರ್
ಸಾರಸಂತೋಷದಿಂ ವಿಮಳಕೈಲಾಸಪುರವಂ ಪೊಕ್ಕರಾಕ್ಷಣದೊಳು ೩೧

ಧರಣಿಪಕುಲೋತ್ತುಂಗಚೋಳರಾಯಂ ತನ್ನ
ಪುರಕೆ ರೋಗದ ಮೇಲೆ ಬಿರುದಿಕ್ಕೆ ಜಂಗಮಂ
ಭರದೆ ಕುಷ್ಠವ್ಯಾಧಿಯಿಂ ಬರಲ್ ಕಂಡು ರಾಯಂ ಬಹಳ ಚಿಂತೆಯಿಂದೆ
ಧರಿಸಿದೆನ್ನಯ ವ್ರತಂ ವಿಘ್ನಮಾದುದೆನುತ್ತೆ
ಕೊರಳನರಿವನಿತರೊಳ್ ಶಂಕರಂ ಮೆಚ್ಚಿ ಭೂ
ವರನನಾ ಕೈಲಾಸಪಟ್ಟಣಕೆ ಕೊಂಡೊಯ್ದನೆಲೆ ರಾಮ ಕೇಳೆಂದನು ೩೨

ಹರುಷದಿಂ ಶ್ರೀಕಾಳಪಿಳ್ಳೆಯರ ಗರ್ಭದಿಂ
ದುರು ತಿರುಜ್ಞಾನಿಸಂಬಂಧಿಗಳ್ ಜನಿಸಿ ತಾಂ
ವರ ಚೋಳಭೂಪಂಗೆ ಗುರುವಾಗಿರುತ್ತಿರಲ್ ಚೋಳಂಗೆ ಮಗಳೆನಿಸುವ
ಗರುವೆ ಮಂಗಾಯಕ್ಕರಿಸಿ ಕೂನಪಾಂಡ್ಯಭೂ
ವರನ ಪೆಂಡತಿಯೊಮ್ಮೆ ತನ್ನ ಪಟ್ಟಣಕೆ ಸ
ದ್ಗುರುವ ಕರೆಸಲ್ ಬಂದು ಜೈನರೊಳ್ ವಾದದಿಂ ಗೆಲ್ವನತಿಸಂತಸದೊಳು ೩೩

ಕರುಣಾಸಾಗರನಾದ ಶಿವನ ಕೈಲಾಸವನ್ನು ಸೇರಿದನು, ಎಲೆ ಸಿದ್ಧರಾಮ, ಕೇಳು ಎಂದನು. ೩೧. ಮಹೇಶನಿಗೆ ಪರ್ವತರಾಜನು ಮಗಳನ್ನು ಕೊಟ್ಟದ್ದನ್ನು ಕೇಳಿ ವೀರಪಾಂಡ್ಯನು ತಾನು ಸಹ ತನ್ನ ಪತ್ನಿ ರತ್ನಾವತಿಯಲ್ಲಿ ಶರ್ವಾಣಿಯೆಂಬ ಮಗಳನ್ನು ಪಡೆದು ಶಂಕರನಿಗೆ ಮದುವೆ ಮಾಡಿಕೊಟ್ಟು ತನ್ನ ರಾಜ್ಯಭಂಡಾರವೆಲ್ಲವನ್ನೂ ಶಿವಶರಣರಿಗೆ ಕೊಟ್ಟು ಬಳಿಕ ಅವರು ಬಹಳ ಸಂತೋಷದಿಂದ ಆ ಕ್ಷಣದಲ್ಲಿ ಪವಿತ್ರವಾದ ಕೈಲಾಸವನ್ನು ಸೇರಿದರು. ೩೨. ಎಲೈ ಸಿದ್ಧರಾಮ, ಕೇಳು. ಕುಲೋತ್ತುಂಗ ಚೋಳರಾಜನು ತನ್ನ ರಾಜ್ಯದಲ್ಲಿ ಒಬ್ಬ ರೋಗಿಯೂ ಇಲ್ಲದಂತೆ ಮಾಡಬೇಕೆಂದು ನಿಯಮದಿಂದಿರಲು ಕುಷ್ಠವ್ಯಾಧಿಯಿಂದ ನರಳುತ್ತಿದ್ದ ಜಂಗಮನೊಬ್ಬನು ಬಂದನು. ಅವನನ್ನು ನೋಡಿ ರಾಜನು ಬಹಳವಾದ ಚಿಂತೆಯಿಂದ ನಾನು ಹಿಡಿದ ವ್ರತಕ್ಕೆ ವಿಘ್ನವಾಯಿತು ಎನ್ನುತ್ತ ತಲೆಯನ್ನು ಕತ್ತರಿಸಿ ಕೊಳ್ಳುವಷ್ಟರಲ್ಲಿ ಶಿವನು ಮೆಚ್ಚಿ ಕೈಲಾಸಕ್ಕೆ ಕರೆದುಕೊಂಡು ಹೋದನು. ೩೩. ಸಂತೋಷ ದಿಂದ ಶ್ರೀಕಾಳಪಿಳ್ಳೆಯರ ಹೊಟ್ಟೆಯಲ್ಲಿ ಶ್ರೇಷ್ಠವಾದ ತಿರುಜ್ಞಾನಿಸಂಬಂಧಿಗಳು ಹುಟ್ಟಿ ಚೋಳರಾಜನಿಗೆ ಗುರುವಾಗಿದ್ದರು. ಚೋಳನ ಮಗಳು ಕೂನಪಾಂಡ್ಯನ ಹೆಂಡತಿಯೂ ಆದ ಶ್ರೇಷ್ಠಳಾದ ಮಂಗಾಯಕ್ಕರಿಸಿ ಒಂದು ಬಾರಿ ತನ್ನ ಪಟ್ಟಣಕ್ಕೆ ಸದ್ಗುರುವನ್ನು

CC-0. Jangamwadi Math Collection. Digitized by eGangotri

ವರಕುಲಚ್ಚರೆಯುರಾಗಿಸಿದ ಹದಿನೆಂಟು ಸಾ
ವಿರ ಶೂಲದೊಳಗಾ ಪ್ರಮಾಣದ ಜಿನರ್ಕಳಂ
ತರತರದಿ ಬಸಿದು ಬಳಿಕಾ ಕೂನಪಾಂಡ್ಯನೀಶ್ವರಭಕ್ತನಾಗಿ ತನ್ನ
ತರುಣಿಯೊಳಗೊರ್ವ ಮಗಳಂ ಪಡೆದು ಶಂಭುಗಿ
ತ್ತರಸುಂ ತಿರುಜ್ಞಾನಿಸಂಬಂಧಿಗಳ್ ಕುಲ
ಚ್ಚರೆಯುರುಂ ತನ್ನರಸಿಯುಂ ವೆರಸಿ ಪರಶಿವನ ಕೈಲಾಸಮಂ ಪೊಕ್ಕರುಃ ೩೪

ಚತುರ ತಿರುವಲಿನಾಚಿಯನುಜಾತ ಪಾರ್ಶ್ವಪಂ
ಡಿತನಿರದೆ ಜೈನರ್ಗೆ ಗುರುವಾಗಿರಲ್ಕವನಿ
ಗತಿಶಯದ ಶೈವೋಪದೇಶಮಂ ಕೊಡಲವಂ ವಾಗೀಶನೆನಿಸಿ ತನ್ನ
ಸುತಶಿಷ್ಯನಃಪೂತಿವೆರಸಿ ತನಗುರೆ ಶೈವ
ಗತಿಯಿತ್ತ ತಿರುವಲ್ಲಿನಾಚಿಯರ್ ಸಹಿತೆ ಪಾ
ರ್ವತಿಯರಸನಮಳಕೈಲಾಸಮಂ ಪೊಕ್ಕರೆಲೆ ರಾಮೇಶ ಕೇಳೆಂದನು ೩೫

ಪರಿಕಿಸಲ್ ನಂಬಿಯುಂ ಮೆರೆಮಿಂಡನಂದು ನಿ
ಷ್ಠುರದಿಂ ಪೊರೆಗೆ ಶಂಕರಂ ನೋಡಿ ಕೊಂಡಾಡ
ಲಿರದೆ ನಾದವನಿಳಿಸಲೀಶನಂ ಮೆರೆಮಿಂಡನಂ ತನ್ನ ಪುರಕೊಯ್ದನು
ಹರನ ಕೆಯ್ಯಿಂ ಹಡಪಮಂ ಹೊರಿಸಿದಂ ನಂಬಿ
ಪರವಾದಿಯೆಂದು ಕಲಿಕಾಮನಾಡಲ್ ಶಿವಂ
ಕರುಣದಿಂ ಕಲಿಕಾಮನಂ ತಿಳಿಸಿ ಕೈಲಾಸಕೊಯ್ದನತಿಸಂಭ್ರಮದೊಳು ೩೬

ಕರೆಸಲು ಅವರು ಬಂದು ಜೈನರೊಡನೆ ವಾದಮಾಡಿ ಗೆದ್ದರು. ೩೪. ಶ್ರೇಷ್ಠನಾದ ಕುಲಚ್ಚರೆಯನು ಹದಿನೆಂಟು ಸಾವಿರ ಶೂಲಗಳನ್ನು ಮಾಡಿಸಿ ಅಷ್ಟುಜನ ಜೈನರನ್ನೂ ಶೂಲಕ್ಕೆ ಹಾಕಿಸಿದನು. ಅನಂತರ ಆ ಕೂನಪಾಂಡ್ಯನು ಈಶ್ವರಭಕ್ತನಾಗಿ ತನ್ನ ಹೆಂಡತಿಯಲ್ಲಿ ಒಬ್ಬ ಮಗಳನ್ನು ಪಡೆದು ಶಿವನಿಗೆ ಕೊಟ್ಟನು. ರಾಜನು ತಿರುಜ್ಞಾನಿ ಸಂಬಂಧಿಗಳು, ಕುಲಚ್ಚರೆಯುರು, ತನ್ನ ಪತ್ನಿ ಮೊದಲಾದವರೊಡಗೂಡಿ ಪರಮೇಶ್ವರನ ಆ ವಾಸಸ್ಥಾನವಾದ ಕೈಲಾಸವನ್ನು ಸೇರಿದನು. ೩೫. ಚತುರಳಾದ ತಿರುವಲಿನಾಚಿಯ ತಮ್ಮನಾದ ಪಾರ್ಶ್ವಪಂಡಿತನು ಜೈನರಿಗೆ ಗುರುವಾಗಿರಲು ಅವನಿಗೆ ಅತಿಶಯವಾದ ಶೈವಧರ್ಮದ ಉಪದೇಶವನ್ನು ಕೊಡಲು ಅವನು ವಾಗೀಶನೆಂದು ಹೆಸರು ಪಡೆದು ತನ್ನ ಪ್ರಿಯಶಿಷ್ಯನಾದ ಅಃಪೂತಿಯೊಡಗೂಡಿ ತನಗೆ ಶ್ರೇಷ್ಠವಾದ ಶೈವೋಪದೇಶವಿತ್ತ ತಿರುವಲಿನಾಚಿಯರ ಸಂಗಡ ಶಿವನ ಪವಿತ್ರವಾದ ಕೈಲಾಸವನ್ನು ಸೇರಿದನು, ಸಿದ್ಧರಾಮ ಕೇಳು ಎಂದನು. ೩೬. ಅಂದು ಮೆರೆಮಿಂಡನು ನಿಷ್ಠುರದಿಂದ ನಂಬಿಯನ್ನು ನಿಂದಿಸಲು ಅದನ್ನು ನೋಡಿ ಶಂಕರನು ಕೊಂಡಾಡಲು ಇರದೆ ನಾದವನ್ನಿಳಿಸಲು ಈಶನು ಮೆರೆಮಿಂಡನನ್ನು ತನ್ನ ಪಟ್ಟಣಕ್ಕೆ ಕರೆದೊಯ್ದನು. ಶಿವನ ಕೈಯಿಂದ ಹಡಪವನ್ನು ಹೊರಿಸಿ ನಂಬಿಯು ಶೈವನಲ್ಲ ಪರವಾದಿ ಎಂದು ಕಲಿಕಾಮನು ತೆಗಳಲು ಕರುಣೆಯಿಂದ ಶಿವನು ಕಲಿಕಾಮನಿಗೆ ಬುದ್ಧಿಹೇಳಿ ಅತಿಯಾದ ಸಂಭ್ರಮದಿಂದ ಕೈಲಾಸಕ್ಕೆ ಕರೆದೊಯ್ದನು.

CC-0. Jangamwadi Math Collection. Digitized by eGangotri

ತಿರುನೀಲಕಂಠರಂದೆಸೆವ ಖರ್ಪರದಿಂದ
ಮರನೀತಿಕೌಪಿನಿಂದಿರಿಭಕ್ತನಾನೆಯಂ
ಭರದೆ ಕೊಂದಸುವಿತ್ತಿಹಃಪಗೆಯನಂದು ಜಂಗಮಕೆ ಪೆಂಡತಿಯನಿತ್ತು
ತಿರುಕುರುಂಬೆಯ ತೊಂಡರಂದು ಕಂಥೆಯನೊಗೆದು
ತಿರುಮೂಲನೆಂಬುವಂ ಕಾಮಧೇನುವಿನಿಂದ
ಲಿರದೆ ತಿರುನಾಳ್ಪೋವರುಂ ಬಟ್ಟೆಯಿಂ ಪೋಗಿ ಕೈಲಾಸವಂ ಪೊಕ್ಕರು ೩೭

ಇಳೆಯಾಂಡಿಗುಡಿಮಾರನೆಂಬವಂ ಜಂಗಮಕೆ
ಮೊಳೆನೆಲ್ಲ ನೆಟ್ಟಿಕ್ಕಿ ಸೇದಿರಾಜಂ ತತ್ತ
ಕಲಹದೊಳ್ ಕಪಟಜಂಗಮವಿರಿಯೆ ಶಿವನೆಂದು ಕಾದುತೇಣಾದಿನಾಥಂ
ಅಲಗಿನಿಂ ಕಪಟಜಂಗಮವಿರಿಯೆ ಶಿವನೆಂದು
ಕೊಳಲನೈನಾರಿ ಕಕ್ಕಿಯಮರಂ ಶಿವನೆಂದು
ವಲಘಾಂಡಮೂರ್ತಿ ಮೊಳಕೆಯ್ಯ ಸಿರಿಗಂಧದಿಂ ಕೈಲಾಸವಂ ಪೊಕ್ಕರು ೩೮

ಕಾರಿಕಾಲಮ್ಮೆ ಪತಿಯಂ ಭಕ್ತನಂ ಮಾಡಿ
ಧೀರಚಂಡೇಶನಯ್ಯನ ತಲೆಯರಿದು ನಕ್ಕ
ನಾರುವಿನ ಮಡದಿ ನೀಲಕ್ಕ ಸೆಲದಿಯನೂದಿ ಕಣ್ಣಪ್ಪ ಕಣ್ಣನಿತ್ತು
ಮಾರಹರನಾಟ್ಯಮಂ ನೋಡಿ ನಾಟ್ಯನಿಮಿತ್ತಿ
ಯೋರಂತೆ ರುದ್ರಪಶುಪತಿ ಶಿವನ ವಿಷಮಂ ನಿ
ವಾರಿಸಿ ಪುನಃ ಪೂಜೆಯಿಂ ವಾಯಲಾರಿ ಕೈಲಾಸಮಂ ಪೊಕ್ಕರಂದು ೩೯

೩೭. ತಿರುನೀಲಕಂಠರು ಅಂದು ಹೊಳೆಯುವ ಭಿಕ್ಷಾಪಾತ್ರೆಯಿಂದ ಅಮರನೀತಿಯು ಕೌಪೀನದಿಂದ ಇರಿಭಕ್ತನೆಂಬುವನು ಆನೆಯನ್ನು ರಭಸದಿಂದ ಕೊಂದು ಮತ್ತೆ ಪ್ರಾಣ ಕೊಟ್ಟು, ಇಹ:ಪಗೆಯೆಂಬುವರು ಜಂಗಮನಿಗೆ ತನ್ನ ಹೆಂಡತಿಯನ್ನು ಕೊಟ್ಟು, ತಿರುಕುರುಂಬೆಯ ತೊಂಡರೆಂಬ ಶರಣರು ಅಂದು ಬಟ್ಟೆಯನ್ನು ಒಗೆದು, ತಿರುಮೂಲನೆಂಬುವನು ಕಾಮಧೇನುವಿನಿಂದ, ತಿರುನಾಳ್ಪೋವರು (ಒತ್ತಾಯದ ದುಡಿಮೆ) ಒತ್ತಾಯದಿಂದ ಹೋಗಿ ಕೈಲಾಸವನ್ನು ಪಡೆದರು. ೩೮. ಇಳೆಯಾಂಡಿ ಗುಡಿಮಾರನೆಂಬುವನು ಬತ್ತದ ಮೊಳಕೆಯನ್ನು ನಾಟಿಮಾಡಿ ಇಟ್ಟು, ಸೇದಿರಾಜನು ಜಗಳದಲ್ಲಿ ಕಪಟಜಂಗಮನು ತಿವಿಯಲು ಅವನನ್ನು ಶಿವನೆಂದೇ ಭಾವಿಸಿ ಸುಮ್ಮನಿದ್ದು, ಏಣಾದಿನಾಥನು ಕತ್ತಿಯಿಂದ ಕಪಟ ಜಂಗಮನು ತಿವಿಯಲು ಶಿವನೆಂದು ಭಾವಿಸಲು, ಕೊಳಲನೈನಾರಿ ಕಕ್ಕೆಯ ಮರವನ್ನೇ ಶಿವ ಎಂದು ತಿಳಿದು ಅಲಘಾಂಡ ಮೂರ್ತಿ ಮೊಳಕ್ಕೈಯಿಂದ ಶಿವನಿಗೆ ಶ್ರೀಗಂಧವನ್ನು ತೇದು ಕೈಲಾಸವನ್ನು ಪಡೆದರು. ೩೯. ಕರಿಕಾಲಮ್ಮೆ ಪತಿಯನ್ನು ಭಕ್ತನನ್ನಾಗಿ ಮಾಡಿ, ಧೀರ ಚಂಡೇಶನು ತನ್ನ ತಂದೆಯ ತಲೆಯನ್ನೇ ಕಡಿದು, ನಕ್ಕನಾರುವಿನ ಹೆಂಡತಿ ನೀಲಕ್ಕ ಜೇಡರಹುಳುವನ್ನು ಊದಿ, ಕಣ್ಣಪ್ಪ ಕಣ್ಣನ್ನು ಕೊಟ್ಟು, ಶಿವನ ನಾಟ್ಯವನ್ನು ನೋಡಿ, ನಾಟ್ಯ ನಿಮಿತ್ತಿಯು, ರುದ್ರಪಶುಪತಿಯು ಶಿವನ ವಿಷವನ್ನು ಪರಿಹಾರ ಮಾಡಿ,

CC-0. Jangamwadi Math Collection. Digitized by eGangotri

ಕಲಿಯ ನಯ್ನಾರಿ ದೀಪಕ್ಕೆ ನೆತ್ತರನೆರೆದು
ಕಲಿಕಂಬನೆಂಬವಂ ಪೆಂಡತಿಯ ಕರವರಿದು
ಕಲಿಚಿಟ್ಟನೀಶಭಕ್ತರ ನಿಂದೆಗೇಳದುರುವಾಳ್ತಂಡರೀಶ್ವರಂಗೆ
ಸಲುವ ನೈವೇದ್ಯದಾ ರಾಜಾನ್ನ ಭತ್ತಮುಗೆ
ನೆಲಕೆ ಶಿರವರಿದು ಕೊಂಗುಲಿಯ ಕಲಿಯುಂದು ಗು
ಗ್ಗುಳದ ನೇಮದೆ ಲಿಂಗಮುರುಗಿರಲ್ ತಿದ್ದಿ ಕೈಲಾಸಮಂ ಪೊಕ್ಕರಂದು ೪೦

ಸಿರಿಯಾಳನೀಶಂಗೆ ಮಗನನಟ್ಟಿಕ್ಕೆಯಾ
ಪರಿಯೊಳೇ ಮನುಚೋಳನುಂ ಮಗನನಟ್ಟಿಕ್ಕಿ
ಹರುಷದೆ ನಮಃಶಿವಾಯಾಖ್ಯಮುರುಘರ್ ಪರಮಪಂಚಾಕ್ಷರೀ ಮಂತ್ರದಿಂ
ವರಜಂಗಮಕೆ ಮಾನಕಂಜನಣುಗೆಯ ಮುಡಿಯ
ನರಿದಿತ್ತು ಸಾಂಖ್ಯತೊಂಡಂ ಕಲ್ಗಳಿಲ್ಲದೊಡೆ
ಶಿರವನರಿದಿಟ್ಟು ನಮಿನಂದಿ ದೀಪದ ನೇಮದಿಂ ಶಿವಪುರಂಬೊಕ್ಕರು ೪೧

ಕಡುಹುಲ್ಲನಂಬಿ ದೀಪದ ನೇಮದಿಂ ಶಿವನ
ಗುಡಿಯನೊಲವಿಂ ರಚಿಸಿ ನೈಯಾಂಡಿಕೊಲ್ಪುಲಿಯೆ
ಪಡಿಹೊನ್ನ ಪಡೆದು ವೆಳ್ಳೂತರುಂ ಗುರುವಿಂಗೆ ಶರಣೆಂದು ಬಲ್ಪರದೊಳು
ಎಡೆಗಣೆಯ ಪೆರುಮಾಳೆ ಜಂಗಮಕೆ ನೀಡಿ ಮೊನೆ
ಯಿಡುವರಂ ಕಾದಿ ಜಂಗಮಕೊಲವಿನಿಂ ನೀಡಿ
ಕಡವೂರಕಾರಿಯುಂ ನಗೆಯ ಕಾಯಕದಿಂದೆ ಕೈಲಾಸಮಂ ಪೊಕ್ಕರು ೪೨

ವಾಯಲಾರಿ ಮಾನಸಪೂಜೆಯಿಂದ ಅಂದು ಕೈಲಾಸವನ್ನು ಹೊಕ್ಕರು. ೪೦. ಕಲಿಯ ನಾಯನಾರು ದೀಪಕ್ಕೆ ರಕ್ತವನ್ನು ಎರೆದು ಕಲಿಕಂಬನೆನ್ನುವವನು ಹೆಂಡತಿಯ ಕೈಯನ್ನು ಕತ್ತರಿಸಿ, ಕಲಿ ಚಿಟ್ಟನು ಈಶ್ವರನ ಭಕ್ತರ ನಿಂದೆಯನ್ನು ಕೇಳದೆ, ಉರುವಾಳ್ತಂಡರು ಈಶ್ವರನಿಗೆ ಸಲ್ಲುವ ನೈವೇದ್ಯದ ರಾಜಾನ್ನ ಭತ್ತವು ನೆಲಕ್ಕೆ ಬೀಳಲು ತಮ್ಮ ತಲೆಯನ್ನೇ ಕತ್ತರಿಸಿಕೊಂಡು ಕೆಂಗುಲಿಯ ಕಲಿ ಆದಿನ ಧೂಪದ ನೇಮಕ್ಕಾಗಿ ಡೊಂಕಾದ ಲಿಂಗವನ್ನು ನೇರಮಾಡಿ ಅಂದು ಕೈಲಾಸವನ್ನು ಪಡೆದರು. ೪೧. ಸಿರಿಯಾಳನು ಈಶ್ವರನಿಗೆ ಮಗನನ್ನೇ ಅಡಿಗೆ ಮಾಡಿ ಬಡಿಸಿ, ಅದೇ ರೀತಿಯಾಗಿ ಮನುಚೋಳನು ಮಗನನ್ನು ಅಡಿಗೆ ಮಾಡಿ ಬಡಿಸಿ, ನಮಃ ಶಿವಾಯಾಖ್ಯ ಮುರುಘರು ಸಂತೋಷದಿಂದ ಶ್ರೇಷ್ಠವಾದ ಪಂಚಾಕ್ಷರಿಮಂತ್ರದಿಂದ, ಮಾನಕಂಜನು ಜಂಗಮನಿಗೆ ತನಗೆ ಪ್ರೀತಿಪಾತ್ರಳಾದವಳ ಮುಡಿಯನ್ನು ಕತ್ತರಿಸಿ ಕೊಟ್ಟು, ಸಾಂಖ್ಯತೊಂಡನು ಕಲ್ಲುಗಳಿಗೆ ಬದಲಾಗಿ ತಲೆಯನ್ನು ಕತ್ತರಿಸಿಟ್ಟು, ನಮಿಗಂದಿ ದೀಪದ ನೇಮದಿಂದ ಕೈಲಾಸವನ್ನು ಸೇರಿದರು. ೪೨. ಕಡು ಹುಲ್ಲ ನಂಬಿ ದೀಪದ ನೇಮದಿಂದ, ನೈಯಾಂಡಿ ಕೊಲ್ಪುಲಿ ಪ್ರೀತಿಯಿಂದ ಶಿವ ದೇವಾಲಯವನ್ನು ಕಟ್ಟಿಸಿ, ವೆಳ್ಳೂತರು ಪಡಿಹೊನ್ನನ್ನು ಪಡೆದು, ಗುರುವಿಗೆ ನಮಸ್ಕರಿಸಿ, ಎಡೆಗಣೆಯ ಪೆರುಮಾಳೆ, ಬರಗಾಲದಲ್ಲಿ ಜಂಗಮರಿಗೆ ಕೇಳಿದ್ದನ್ನು ಕೊಟ್ಟು, ಪ್ರತಿಭಟಿಸಿದವರೊಡನೆ ಯುದ್ಧಮಾಡಿ, ಜಂಗಮರಿಗೆ ಪ್ರೀತಿಯಿಂದ

CC-0. Jangamwadi Math Collection. Digitized by eGangotri

ಎಸೆವಚ್ಯುತಯ್ಯನುಂ ಜೂಜಾಡಿ ಗೊಲ್ಲಾಳ
ನೊಸೆದು ತಂದೆಯನರಿದು ಜಂಗಮಂ ಸಿಕ್ಕದೊಡೆ
ಪಸಿದು ನಾಲ್ವತ್ತುದಿನವುಪವಾಸಮಿರ್ದು ಚಿರುಪುಲಿಯಿರಿತ್ತಾಂಡಿ ಕುರುಡಂ
ಶಶಿಧರನ ಮಜ್ಜನಕೆ ಬಾವಿದೆಗೆವುತೆ ಜೈನ
ರಸುಗಳಂ ಸಂಹರಿಸಿ ಯಿರಿಭಕ್ತನುಂ ಮೊದಲ್
ವಸವಾದ ಮೀನನುರೆ ಬಿಡುವ ನೇಮದೊಳೆ ಕೈಲಾಸಮಂ ಪೊಕ್ಕರಂದು ೪೩

ಮಳೆಯುರಾಜಂ ತನ್ನ ನವಲಕ್ಕ ರಾಜ್ಯಮಂ
ತಳುವದಾ ಶಿವನ ಪುರಕೊಯ್ದನಾ ಮಲುಹಣಂ
ಮಲುಹಣೆಯುವೆರಸಿ ಕೈಲಾಸಕ್ಕೆ ಪೋದನಾ ಓಹಿಲಯ್ಯಂ ಧೂಪದ
ಬಲುನೇಮದಿಂದೆ ಕೈಲಾಸಕ್ಕೆ ಪೋದನಾ
ನಲುವಿಗೆಯ ಗುಡ್ಡವ್ವೆಯುಂ ಕುಷ್ಠಳೆಂದೆನುತೆ
ತಳುವದಾ ಮನೆಯ ಹೊರವಡಿಸೆ ಸೌರಾಷ್ಟ್ರಪತಿಯಿಂದೆ ಕಾಂತಿಯ ಪಡೆದಳು ೪೪

ಕತ್ತಲೆಯರಾಯನ ಕುಮಾರ ಕಾಳಿಂಗನಾ
ಭಿತ್ತಿಯಿಂ ಬರೆದ ಪುಲಿಗಂಜಿ ಪ್ರಾಣವ ಬಿಟ್ಟ
ಸತ್ತ ಹೆಣಕಾಗ ವಧುವಾಗಿ ಬಸವನ ನೋಂಪಿಯನ್ನೋಂತು ಧೈರ್ಯದಿಂದೆ
ಚಿತ್ತಜಾರಿಯನೊಲಿಸಿ ಗಂಡನಸುವಂ ಪಡೆದು
ಮುತ್ತಯ್ದೆಯಾಗಿ ಕೆಲದಿನವಿರ್ದು ಚೆನ್ನೆ ಬಳಿ
ಕುತ್ತಮದ ಪದವಿಯುಂ ಪಡೆದಳೆಲೆ ಸಿದ್ಧರಾಮೇಶ ನೀಂ ಕೇಳೆಂದನು ೪೫

ಕೊಟ್ಟು, ಕಡವೂರಕಾರಿಯು ಹಾಸ್ಯಗಾರನ ವೃತ್ತಿಯಿಂದ ಕೈಲಾಸವನ್ನು ಹೊಕ್ಕರು. ೪೩. ಪ್ರಖ್ಯಾತನಾದ ಅಚ್ಯುತಯ್ಯನು ಜೂಜಾಡಿ, ಗೊಲ್ಲಾಳನು ತಂದೆಯನ್ನು ಕತ್ತರಿಸಿ, ಚಿರುಪುಲಿಯಿರಿತ್ತಾಂಡಿ ಜಂಗಮರು ಸಿಗದೆ ಹೋದುದರಿಂದ ಹಸಿವೆಯಿಂದ ನಲವತ್ತು ದಿನದವರೆಗೆ ಉಪವಾಸವಿದ್ದು, ಕುರುಡ ಭಕ್ತನೊಬ್ಬನು ಶಿವನ ಮಜ್ಜನಕ್ಕಾಗಿ ಬಾವಿ ತೆಗೆಯುತ್ತ, ಜೈನರಾಜರನ್ನು ಸಂಹಾರ ಮಾಡಿ ಮೊದಲು ಸಿಕ್ಕಿದ ಮೀನನ್ನು ಶಿವನಿಗೆ ಅರ್ಪಿಸುವ ನಿಯಮದಿಂದ ಯಿರಿಭಕ್ತನೂ, ಬಲು ಹಿಂದೆ ಕೈಲಾಸವನ್ನು ಪಡೆದರು. ೪೪. ಮಳೆಯರಾಜನು ತನ್ನ ಒಂಬತ್ತು ಲಕ್ಷ ರಾಜ್ಯವನ್ನು ತಡಮಾಡದೆ ಕೈಲಾಸಕ್ಕೆ ಕರೆದೊಯ್ದನು. ಮಲುಹಣನು ಮಲುಹಣೆಯೊಡಗೂಡಿ ಕೈಲಾಸಕ್ಕೆ ಹೋದನು. ಆ ಓಹಿಲಯ್ಯನು ಧೂಪದ ವ್ರತದಿಂದ ಕೈಲಾಸಕ್ಕೆ ಹೋದನು. ಆ ನಲುವಿಗೆಯ ಗುಡ್ಡವ್ವೆಯನ್ನು ಕುಷ್ಠರೋಗಿಯೆಂದು ಮನೆಯಿಂದ ಹೊರಹಾಕಲು ಅವಳು ಸೌರಾಷ್ಟ್ರ ಸೋಮನಾಥನ ಅನುಗ್ರಹದಿಂದ ಆರೋಗ್ಯ ಹೊಂದಿ ಶೋಭಿಸಿದಳು. ೪೫. ಕತ್ತಲೆರಾಯನ ಮಗನಾದ ಕಾಳಿಂಗನು ಗೋಡೆಯ ಮೇಲೆ ಬರೆದಿದ್ದ ಹುಲಿಗೆ ಹೆದರಿ ಪ್ರಾಣಬಿಟ್ಟನು. ಸತ್ತ ಹೆಣವನ್ನೆ ಮದುವೆಯಾಗಿ ಬಸವನ ವ್ರತವನ್ನು ಆಚರಿಸಿ ಧೈರ್ಯದಿಂದ ಶಿವನನ್ನು ಒಲಿಸಿ ಗಂಡನ ಪ್ರಾಣವನ್ನು ಪಡೆದು ಮುತ್ತೈದೆಯಾಗಿ ಕೆಲಕಾಲವಿದ್ದು ಚೆನ್ನೆಯು ಅನಂತರ ಉತ್ತಮ ಪದವಿಯನ್ನು ಪಡೆದಳು, ಎಲೆ ಸಿದ್ಧರಾಮೇಶ, ಕೇಳು ಎಂದನು.

CC-0. Jangamwadi Math Collection. Digitized by eGangotri

ಹರುಷದಿಂದೆಂಟಾಲ ಮಲ್ಲಯ್ಯನೆಂಬವಂ
ಕರವೀರವೊಂದುಳಿಯೆ ಕಣ್ಣನರ್ಪಿಸಿ ಬಳ್ಳ
ಮುರುಲಿಂಗವೆಂದು ಬಳ್ಳೇಶ ಮಲ್ಲಯ್ಯನುಂ ಚಿರುತೊಣೆಯ ದಂಡಯ್ಯನುಂ
ತೆರಳುತಬಲೆಗೆ ಜಂಗಮಾರ್ಚನೆಯ ಮಾಡೆಂದು
ಪಿರಿದರ್ಥಮಂ ಕೊಡಲ್ ಬರದೊಳಗೆ ಬಂಧುಗ
ಳ್ಗಿರಿದಿಕ್ಕಿ ಬಂದು ಬಂಧುಗಳನರಿದಾಕೆಯಂ ಸೀಳ್ದು ಶಿವಪುರವೊಕ್ಕನು ೪೬

ಆಲಿಸು ಸುವರ್ಣಭಟ್ಟರ ಮಗಂ ಮಲುಹಣಂ
ಸೂಳೆ ಪದ್ಮಾವತಿಯ ತನುಜೆ ಮಲುಹಣೆಯನಿರ
ದಾಲೋಕನಂಗೈದು ಸಿಕ್ಕಿ ಹಣವೆಲ್ಲಮಂ ಕೊಟ್ಟು ತೀರಲ್ ಪೊರಡಿಸೆ
ಪೇಳಲೇಂ ಭ್ರಮೆಗೊಂಡವಳ್ವೆರಸಿ ವಿಜಯೇಶ
ನಾಲಯಕೆ ಪೋಗಿ ಮೆಚ್ಚಿಸಿ ಕೆಲವುದಿನವಿರ್ದು
ಕೈಲಾಸಕಂದು ಮಲುಹಣೆಸಹಿತ ಮಲುಹಣಂ ಪೋದನತಿಸಂಭ್ರಮದೊಳು ೪೭

ಉಡುಗಣೆಯ ಪೆರುಮಾಳೆ ರಾಜ್ಯಮಂ ಜಂಗಮಕೆ
ತಡೆಯದಿತ್ತೆಸೆವ ಪುಲಿಕಾಮನುಂ ನವನಿಧಿಯ
ಪಡೆದು ಕಣ್ಗಳ ವಿರೂಪಾಕ್ಷನಾ ಕಣ್ಗಳಂ ಕೊಟ್ಟಿರದೆ ಮಗುಳೆ ಪಡೆದು
ಇಡುಗಡೆಯ ಪೆರ್ಮಾಡಿ ಧನಧಾನ್ಯ ವಸ್ತುಗಳ
ನೊಡನೆ ಜಂಗಮಕಿತ್ತು ಶಿವಯೋಗಿ ದೇವಯ್ಯ
ನಡಿಗಡಿಗೆ ನಾಲಗೆಯನರಿದಿತ್ತು ಪಡೆದು ಕೈಲಾಸಮಂ ಪೊಕ್ಕರಂದು ೪೮

೪೬. ಎಂಟಾಲ ಮಲ್ಲಯ್ಯನೆಂಬುವನು ಶಿವಾರ್ಚನೆಗೆ .ಒಂದು ಗಣಿಗಲ ಹೂ ಸಾಲದುದರಿಂದ ಸಂತೋಷದಿಂದ ತನ್ನ ಕಣ್ಣನ್ನೇ ಅರ್ಪಿಸಿ, ಬಳ್ಳೇಶ ಮಲ್ಲಯ್ಯನು ಬಳ್ಳವನ್ನೆ ಶ್ರೇಷ್ಠವಾದ ಲಿಂಗವೆಂದು ತಿಳಿದು, ಚಿರುತೊಣೆಯ ದಂಡಯ್ಯನು ಹೋಗುತ್ತ ತನ್ನ ಹೆಂಡತಿಗೆ ಜಂಗಮಾರ್ಚನೆಯನ್ನು ಮಾಡು ಎಂದು ಅಧಿಕವಾದ ಹೊನ್ನನ್ನು ಕೊಡಲು ಆಕೆಯು ಬೇಗನೆ ಅದನ್ನು ಬಂಧುಗಳಿಗೆ ವಿನಿಯೋಗಿಸಲು ಆತನು ಬಂದು ನೆಂಟರನ್ನು ಕೊಂದು ಆಕೆಯನ್ನು ಸೀಳಿ ಕೈಲಾಸ(ಶಿವಪುರ)ವನ್ನು ಸೇರಿದನು. ೪೭. (ಸಿದ್ಧರಾಮನೇ) ಕೇಳು, ಸುವರ್ಣಭಟ್ಟರ ಮಗ ಮಲುಹಣನು ಪದ್ಮಾವತಿಯೆಂಬ ಸೂಳೆಯ ಮಗಳಾದ ಮಲುಹಣೆಯನ್ನು ನೋಡಿ ಆಕೆಗೆ ವಶನಾಗಿ ಹಣವೆಲ್ಲವನ್ನೂ ಕೊಟ್ಟು ಅದು ತೀರಿಹೋಗಲು ಅವನನ್ನು ಹೊರದೂಡಿದರು, ಏನು ಹೇಳಲಿ ? ಅವನು ಭ್ರಮೆಗೊಂಡು ಅವಳನ್ನೂ ಕೂಡಿಕೊಂಡು ವಿಜಯೇಶನ ಮನೆಗೆ ಹೋಗಿ ಅವನನ್ನು ಮೆಚ್ಚಿಸಿ ಕೆಲವು ದಿನಗಳಿದ್ದು ಮಲುಹಣೆ ಸಹಿತವಾಗಿ ಮಲುಹಣನು ಬಹಳ ಸಂಭ್ರಮದಿಂದ ಕೈಲಾಸಕ್ಕೆ ಹೋದನು. ೪೮. ಉಡುಗಣೆಯ ಪೆರುಮಾಳೆ ತಡಮಾಡದೆ ರಾಜ್ಯವನ್ನು ಜಂಗಮರಿಗೆ ಕೊಟ್ಟು, ಪ್ರಖ್ಯಾತನಾದ ಪುಲಿಕಾಮನು ನವನಿಧಿಯನ್ನು ಪಡೆದು, ಕಣ್ಗಳ ವಿರೂಪಾಕ್ಷನು ಕಣ್ಣುಗಳನ್ನು ಕೊಟ್ಟು ಮತ್ತೆ ಪಡೆದು, ಇಡುಗಣೆಯ ಪೆರ್ಮಾಡಿ ಧನ ಧಾನ್ಯವಸ್ತುಗಳನ್ನು ಜಂಗಮರಿಗೆ ಕೊಟ್ಟು, ಶಿವಯೋಗಿ ದೇವಯ್ಯನು ನಾಲಗೆಯನ್ನು ಕತ್ತರಿಸಿಕೊಟ್ಟು ಮರಳಿ

CC-0. Jangamwadi Math Collection. Digitized by eGangotri

ಕಾಳವ್ಮ್ಮನೆಂಬವಳ್ ಕಗ್ಗಲ್ಲಿನಿಂ ಕರೆದ
ಹಾಲನೀಶಂಗುಣಿಸಿದಳ್ ಕಣ್ಗಳಂ ಕೊಟ್ಟು
ಕಾಳಿದಾಸಂ ಮಗುಳೆ ಮೂಗಳದ ಕಣ್ಣಸುರೆ ಪಡೆದನೊಲವಿಂ ಹೇನನು
ಗೂಳಿಯೆಂದರಿದ ತಾಯೊಡಲನಿಬ್ಬಗಿಯಾಗಿ
ಸೀಳಿಯುಂ ರಾಮನಾಥಂ ವೀರಸಂಗಯ್ಯ
ನಾ ಲಲಿತತನುವನರಿದಿತ್ತು ಹೇರೂರ ನಾಚಯ್ಯನೂ ತನುವನಿತ್ತು ೪೯

ಶಿವರಾತ್ರಿ ಸಂಕಣಂ ಪುಲಿಗಂಜಿ ಬಿಲ್ವದಳ
ನಿವಹದಿಂ ಭಜಿಸಿ ಬಹೂರೂಪಿಣ್ಣಿಯಾರ್ ಕುಣಿಯು
ಲವಶವಾಗಲ್ಕೆ ಕರುಗಾಯ್ಸಿ ಕಳವಿಂದೆ ಸುಕುಮಾರಕಂ ಶುದ್ಧಬುದ್ಧಂ
ವಿವಿಧರಾಗಂಗಳಿಂ ಧೂಪದಾ ಗೊಗ್ಗವ್ವೆ
ನವಧೂಪದಿಂ ರಂಗವಲಿಯು ಸೋವಣನೆನಿ
ಪ್ಪವನೆಸೆವ ರಂಗವಲಿಯಿಂ ಚಿರುತ್ತೊಣಿಯಾಂಡಿ ಪಡಿಹೊನ್ನ ಪಡೆದು ಬಳಿಕ ೫೦

ಹುಲಿಗೆರೆಯ ಸೋವಣಂ ನಮಿಸಿ ಜಿನನಂ ಹತಿಸಿ
ಬಲುಲಿಂಗಮಂ ಮಾಡಿ ಮಾರುಡಿಗೆನಾಚನಾ
ಖಳಜೈನರಂ ಗೆಲ್ದು ಓಹಿಲಂ ಗುಗ್ಗುಳಂ ಬಿಲ್ವದಳ ನೇಮದಿಂದೆ
ಮಳೆಯರಾಜಂ ತನ್ನ ನವಲಕ್ಷಸೀಮೆಸಹ
ಕಲಿಯುದ್ಭಟಂ ತನ್ನ ಪುರವೆರಸಿ ಸರ್ವರುಂ
ನಲವಿನಿಂ ಕೈಲಾಸವಂ ಪೊಕ್ಕರೆಲೆ ಸಿದ್ಧರಾಮೇಶ ಕೇಳೆಂದನು ೫೧

ಪಡೆದು ಕೈಲಾಸವನ್ನು ಸೇರಿದರು. ೪೯. ಕಾಳಮ್ಮನೆನ್ನುವಳು ಕಗ್ಗಲ್ಲಿನಿಂದ ಕರೆದ ಹಾಲನ್ನು ಈಶ್ವರನಿಗೆ ಕುಡಿಸಿದಳು. ಕಣ್ಣನ್ನು ಕೊಟ್ಟು ಕಾಳಿದಾಸನು ಮತ್ತೆ ಮೂರನೆಯ ಕಣ್ಣನ್ನು ಪ್ರೀತಿಯಿಂದ ಪಡೆದನು. ಹೇನನ್ನೂ ಗೂಳಿಯೆಂದು ಸಾಯಿಸಿದ, ತಾಯ ಶರೀರ ವನ್ನು ಎರಡಾಗಿ ಸೀಳಿದ ರಾಮನಾಥನು, ವೀರಸಂಗಯ್ಯನು ಕೋಮಲವಾದ ಆ ಶರೀರ ವನ್ನು ಸೀಳಿಕೊಟ್ಟು, ಹೇರೂರ ನಾಚಯ್ಯನೂ ಶರೀರವನ್ನು ಅರ್ಪಿಸಿ, ೫೦. ಶಿವ ರಾತ್ರಿ ಸಂಕಣನು ಹುಲಿಗೆ ಹೆದರಿ, ಬಿಲ್ವಪತ್ರೆಯ ದಳಗಳಿಂದ ಪೂಜಿಸಿ, ಬಹುರೂಪಿಣ್ಣಿ ಯಾರ್ ನಾಟ್ಯವಾಡಿ ಶಿವನನ್ನು ವಶಮಾಡಿಕೊಂಡು, ಕರುವನ್ನು ಕಾಯುವಂತೆ ಮಾಡಿ ಸುಕುಮಾರಕನು, ಕಳ್ಳತನಮಾಡಿ ಶುದ್ಧಬುದ್ಧನು, ವಿವಿಧ ರಾಗಗಳಿಂದ, ಧೂಪದಾ ಗೊಗ್ಗವ್ವೆ ಹೊಸಧೂಪದಿಂದ, ರಂಗವಲಿಯ ಸೋವಣನೆನ್ನುವವನು ರಂಗವಲ್ಲಿಯಿಂದ, ಚಿರುತ್ತೊಣಿಯಾಂಡಿ ಪಡಿಹೊನ್ನನ್ನು ಪಡೆದು, ಬಳಿಕ. ೫೧. ಹುಲಿಗೆರೆಯ ಸೋವ ಣನು ನಮಸ್ಕಾರ ಮಾಡಿ ಜೈನನನ್ನು ಕೊಂದು, ದೊಡ್ಡ ಶಿವಲಿಂಗವನ್ನು ಮಾಡಿ ಮಾರು ಡಿಗೆ ನಾಚನು, ಆ ದುಷ್ಟ ಜೈನರನ್ನು ಗೆದ್ದು ಓಹಿಲನು, ಬಿಲ್ವಪತ್ರೆಯ ವ್ರತಹಿಡಿದು ಗುಗ್ಗಳನು, ಮಳೆಯರಾಜನು ತನ್ನ ಒಂಬತ್ತು ಲಕ್ಷ ಸೀಮೆಸಹಿತವಾಗಿ, ಶೂರ ಉದ್ಭಟನು ತನ್ನ ಪಟ್ಟಣ ಸಮೇತ, ಎಲ್ಲರೂ ಸಂತೋಷದಿಂದ ಕೈಲಾಸವನ್ನು ಹೊಕ್ಕರು, ಎಲೆ ಸಿದ್ಧ

CC-0. Jangamwadi Math Collection. Digitized by eGangotri

ಹರುಷದಿಂದೆಂಟಾಲ ಮಲ್ಲಯ್ಯನೆಂಬವಂ
ಕರವೀರವೊಂದುಳಿಯೆ ಕಣ್ಣನರ್ಪಿಸಿ ಬಳ್ಳ
ಮುರುಲಿಂಗವೆಂದು ಬಳ್ಳೇಶ ಮಲ್ಲಯ್ಯನುಂ ಚಿರುತೊಣೆಯ ದಂಡಯ್ಯನುಂ
ತೆರಳುತಬಲೆಗೆ ಜಂಗಮಾರ್ಚನೆಯ ಮಾಡೆಂದು
ಪಿರಿದರ್ಥಮಂ ಕೊಡಲ್ ಬರದೊಳಗೆ ಬಂಧುಗ
ಳ್ಗಿರಿದಿಕ್ಕಿ ಬಂದು ಬಂಧುಗಳನರಿದಾಕೆಯಂ ಸೀಳ್ದು ಶಿವಪುರವೊಕ್ಕನು ೪೬

ಆಲಿಸು ಸುವರ್ಣಭಟ್ಟರ ಮಗಂ ಮಲುಹಣಂ
ಸೂಳೆ ಪದ್ಮಾವತಿಯ ತನುಜೆ ಮಲುಹಣೆಯನಿರ
ದಾಲೋಕನಂಗೈದು ಸಿಕ್ಕಿ ಹಣವೆಲ್ಲಮಂ ಕೊಟ್ಟು ತೀರಲ್ ಪೊರಡಿಸೆ
ಪೇಳಲೇಂ ಭ್ರಮೆಗೊಂಡವಳ್ವೆರಸಿ ವಿಜಯೇಶ
ನಾಲಯಕೆ ಪೋಗಿ ಮೆಚ್ಚಿಸಿ ಕೆಲವುದಿನವಿರ್ದು
ಕೈಲಾಸಕಂದು ಮಲುಹಣೆಸಹಿತ ಮಲುಹಣಂ ಪೋದನತಿಸಂಭ್ರಮದೊಳು ೪೭

ಉಡುಗಣೆಯ ಪೆರುಮಾಳೆ ರಾಜ್ಯಮಂ ಜಂಗಮಕೆ
ತಡೆಯದಿತ್ತೆಸೆವ ಪುಲಿಕಾಮನುಂ ನವನಿಧಿಯ
ಪಡೆದು ಕಣ್ಗಳ ವಿರೂಪಾಕ್ಷನಾ ಕಣ್ಗಳಂ ಕೊಟ್ಟಿರದೆ ಮಗುಳೆ ಪಡೆದು
ಇಡುಗಡೆಯ ಪೇರ್ಮಾಡಿ ಧನಧಾನ್ಯ ವಸ್ತುಗಳ
ನೊಡನೆ ಜಂಗಮಕಿತ್ತು ಶಿವಯೋಗಿ ದೇವಯ್ಯ
ನಡಿಗಡಿಗೆ ನಾಲಗೆಯನರಿದಿತ್ತು ಪಡೆದು ಕೈಲಾಸಮಂ ಪೊಕ್ಕರಂದು ೪೮

೪೬. ಎಂಟಾಲ ಮಲ್ಲಯ್ಯನೆಂಬುವನು ಶಿವಾರ್ಚನೆಗೆ .ಒಂದು ಗಣಗಲ ಹೂ ಸಾಲದುದರಿಂದ ಸಂತೋಷದಿಂದ ತನ್ನ ಕಣ್ಣನ್ನೇ ಅರ್ಪಿಸಿ, ಬಳ್ಳೇಶ ಮಲ್ಲಯ್ಯನು ಬಳ್ಳವನ್ನೆ ಶ್ರೇಷ್ಠವಾದ ಲಿಂಗವೆಂದು ತಿಳಿದು, ಚಿರುತೊಣೆಯ ದಂಡಯ್ಯನು ಹೋಗುತ್ತ ತನ್ನ ಹೆಂಡತಿಗೆ ಜಂಗಮಾರ್ಚನೆಯನ್ನು ಮಾಡು ಎಂದು ಅಧಿಕವಾದ ಹೊನ್ನನ್ನು ಕೊಡಲು ಆಕೆಯು ಬೇಗನೆ ಅದನ್ನು ಬಂಧುಗಳಿಗೆ ವಿನಿಯೋಗಿಸಲು ಆತನು ಬಂದು ನೆಂಟರನ್ನು ಕೊಂದು ಆಕೆಯನ್ನು ಸೀಳಿ ಕೈಲಾಸ(ಶಿವಪುರ)ವನ್ನು ಸೇರಿದನು. ೪೭. (ಸಿದ್ಧರಾಮನೇ) ಕೇಳು, ಸುವರ್ಣಭಟ್ಟರ ಮಗ ಮಲುಹಣನು ಪದ್ಮಾವತಿಯೆಂಬ ಸೂಳೆಯ ಮಗಳಾದ ಮಲುಹಣೆಯನ್ನು ನೋಡಿ ಆಕೆಗೆ ವಶನಾಗಿ ಹಣವೆಲ್ಲವನ್ನೂ ಕೊಟ್ಟು ಅದು ತೀರಿಹೋಗಲು ಅವನನ್ನು ಹೊರದೂಡಿದರು, ಏನು ಹೇಳಲಿ ? ಅವನು ಭ್ರಮೆಗೊಂಡು ಅವಳನ್ನೂ ಕೂಡಿಕೊಂಡು ವಿಜಯೇಶನ ಮನೆಗೆ ಹೋಗಿ ಅವನನ್ನು ಮೆಚ್ಚಿಸಿ ಕೆಲವು ದಿನಗಳಿದ್ದು ಮಲುಹಣೆ ಸಹಿತವಾಗಿ ಮಲುಹಣನು ಬಹಳ ಸಂಭ್ರಮದಿಂದ ಕೈಲಾಸಕ್ಕೆ ಹೋದನು. ೪೮. ಉಡುಗಣೆಯ ಪೆರುಮಾಳೆ ತಡಮಾಡದೆ ರಾಜ್ಯವನ್ನು ಜಂಗಮರಿಗೆ ಕೊಟ್ಟು, ಪ್ರಖ್ಯಾತನಾದ ಪುಲಿಕಾಮನು ನವನಿಧಿಯನ್ನು ಪಡೆದು, ಕಣ್ಗಳ ವಿರೂಪಾಕ್ಷನು ಕಣ್ಣುಗಳನ್ನು ಕೊಟ್ಟು ಮತ್ತೆ ಪಡೆದು, ಇಡುಗಣೆಯ ಪೆರ್ಮಾಡಿ ಧನ ಧಾನ್ಯವಸ್ತುಗಳನ್ನು ಜಂಗಮರಿಗೆ ಕೊಟ್ಟು, ಶಿವಯೋಗಿ ದೇವಯ್ಯನು ನಾಲಗೆಯನ್ನು ಕತ್ತರಿಸಿಕೊಟ್ಟು ಮರಳಿ

CC-0. Jangamwadi Math Collection. Digitized by eGangotri

ಕಾಳವ್ವೆನೆಂಬವಳ್ ಕಗ್ಗಲ್ಲಿನಿಂ ಕರೆದ
ಹಾಲನೀಶಂಗುಣಿಸಿದಳ್ ಕಣ್ಗಳಂ ಕೊಟ್ಟು
ಕಾಳಿದಾಸಂ ಮಗುಳೆ ಮೂಗಳದ ಕಣ್ಣನುರೆ ಪಡೆದನೊಲವಿಂ ಹೇಸನು
ಗೂಳಿಯೆಂದರಿದ ತಾಯೊಡಲನಿಬ್ಬಗಿಯಾಗಿ
ಸೀಳಿಯುಂ ರಾಮನಾಥಂ ವೀರಸಂಗಯ್ಯ
ನಾ ಲಲಿತತನುವನರಿದಿತ್ತು ಹೇರೂರ ನಾಚಯ್ಯನೂ ತನುವನಿತ್ತು ೪೯

ಶಿವರಾತ್ರಿ ಸಂಕಣಂ ಪುಲಿಗಂಜಿ ಬಿಲ್ವದಳ
ನಿವಹದಿಂ ಭಜಿಸಿ ಬಹುರೂಪಿಣ್ಣಿಯಾರ್ ಕುಣಿಯು
ಲವಶಮಾಗಲ್ಕೆ ಕರುಗಾಯ್ದು ಕಳವಿಂದೆ ಸುಕುಮಾರಕಂ ಶುದ್ಧಬುದ್ಧಂ
ವಿವಿಧರಾಗಂಗಳಿಂ ಧೂಪದಾ ಗೊಗ್ಗವ್ವೆ
ನವಧೂಪದಿಂ ರಂಗವಲಿಯು ಸೋವಣನೆನಿ
ಪ್ಪವನೆಸೆವ ರಂಗವಲಿಯಿಂ ಚಿರುತ್ತೊಣಿಯಾಂಡಿ ಪಡಿಹೊನ್ನ ಪಡೆದು ಬಳಿಕ ೫೦

ಹುಲಿಗೆರೆಯ ಸೋವಣಂ ನಮಿಸಿ ಜಿನನಂ ಹತಿಸಿ
ಬಲುಲಿಂಗಮಂ ಮಾಡಿ ಮಾರುಡಿಗೆನಾಚನಾ
ಖಳಜೈನರಂ ಗೆಲ್ದು ಓಹಿಲಂ ಗುಗ್ಗುಳಂ ಬಿಲ್ವದಳ ನೇಮದಿಂದೆ
ಮಳೆಯರಾಜಂ ತನ್ನ ನವಲಕ್ಷಸೀಮೆಸಹ
ಕಲಿಯುದ್ಭಟಂ ತನ್ನ ಪುರವೆರಸಿ ಸರ್ವರುಂ
ನಲವಿನಿಂ ಕೈಲಾಸಮಂ ಪೊಕ್ಕರೆಲೆ ಸಿದ್ಧರಾಮೇಶ ಕೇಳೆಂದನು ೫೧

ಪಡೆದು ಕೈಲಾಸವನ್ನು ಸೇರಿದರು. ೪೯. ಕಾಳಮ್ಮನೆನ್ನುವಳು ಕಗ್ಗಲ್ಲಿನಿಂದ ಕರೆದ ಹಾಲನ್ನು ಈಶ್ವರನಿಗೆ ಕುಡಿಸಿದಳು. ಕಣ್ಣನ್ನು ಕೊಟ್ಟು ಕಾಳಿದಾಸನು ಮತ್ತೆ ಮೂರನೆಯ ಕಣ್ಣನ್ನು ಪ್ರೀತಿಯಿಂದ ಪಡೆದನು. ಹೇಸನ್ನೂ ಗೂಳಿಯೆಂದು ಸಾಯಿಸಿದ, ತಾಯ ಶರೀರ ವನ್ನು ಎರಡಾಗಿ ಸೀಳಿದ ರಾಮನಾಥನು, ವೀರಸಂಗಯ್ಯನು ಕೋಮಲವಾದ ಆ ಶರೀರ ವನ್ನು ಸೀಳಿಕೊಟ್ಟು, ಹೇರೂರ ನಾಚಯ್ಯನೂ ಶರೀರವನ್ನು ಅರ್ಪಿಸಿ, ೫೦. ಶಿವ ರಾತ್ರಿ ಸಂಕಣನು ಹುಲಿಗೆ ಹೆದರಿ, ಬಿಲ್ವಪತ್ರೆಯ ದಳಗಳಿಂದ ಪೂಜಿಸಿ, ಬಹುರೂಪಿಣ್ಣಿ ಯಾರ್ ನಾಟ್ಯವಾಡಿ ಶಿವನನ್ನು ವಶಮಾಡಿಕೊಂಡು, ಕರುವನ್ನು ಕಾಯುವಂತೆ ಮಾಡಿ ಸುಕುಮಾರಕನು, ಕಳ್ಳತನಮಾಡಿ ಶುದ್ಧಬುದ್ಧನು, ವಿವಿಧ ರಾಗಗಳಿಂದ, ಧೂಪದಾ ಗೊಗ್ಗವ್ವೆ ಹೊಸಧೂಪದಿಂದ, ರಂಗವಲಿಯ ಸೋವಣನೆನ್ನುವವನು ರಂಗವಲ್ಲಿಯಿಂದ, ಚಿರುತ್ತೊಣಿಯಾಂಡಿ ಪಡಿಹೊನ್ನನ್ನು ಪಡೆದು, ಬಳಿಕ. ೫೧. ಹುಲಿಗೆರೆಯ ಸೋವ ಣನು ನಮಸ್ಕಾರ ಮಾಡಿ ಜೈನನನ್ನು ಕೊಂದು, ದೊಡ್ಡ ಶಿವಲಿಂಗವನ್ನು ಮಾಡಿ ಮಾರು ಡಿಗೆ ನಾಚನು, ಆ ದುಷ್ಟ ಜೈನರನ್ನು ಗೆದ್ದು ಓಹಿಲನು, ಬಿಲ್ವಪತ್ರೆಯ ವ್ರತಹಿಡಿದು ಗುಗ್ಗಳನು, ಮಳೆಯರಾಜನು ತನ್ನ ಒಂಬತ್ತು ಲಕ್ಷ ಸೀಮೆಸಹಿತವಾಗಿ, ಶೂರ ಉದ್ಭಟನು ತನ್ನ ಪಟ್ಟಣ ಸಮೇತ, ಎಲ್ಲರೂ ಸಂತೋಷದಿಂದ ಕೈಲಾಸವನ್ನು ಹೊಕ್ಕರು, ಎಲೆ ಸಿದ್ಧ

CC-0. Jangamwadi Math Collection. Digitized by eGangotri

ನಿಂದಕರ ನುಡಿಗೆ ಭೋಜನಗುರುದ್ಭಟನಳಿಯ
ಲಂದವನ ಸುಟ್ಟು ಪೊಗೆಯಿಂ ಶಾಪದಿಂದಿರು
ತ್ತೊಂದುಳಿಯಲೇಳ್ನೂರು ಭೂತವಿಶಾಸನ ಪುರಕ್ಕೈದಲುಳಿದೊಂದು ಭೂತಂ
ಬಂದವಂ ಕಾಣದಳುತಿರೆ ಭೋಜನದರ ದೆಸೆ
ಯಿಂದೆ ಮಗುಳಾ ಗುರುವಿನಸ್ಥಿಗಳ ಪೊಗೆಯೊಳಗೆ
ಚಂದದಿಂದಖಿಳಜನವೆರಸಿ ವಟವೃಕ್ಷಮಂ ಪತ್ತಿ ಶಿವಪುರಕ್ಕೈದಿದಂ ೫೨

ವರಸಿಂಗಿದೇವ ಸಾತ್ವೀಕ ಸಂಗಯ್ಯ ದೇ
ವರ ಪಡೀಹಾರಿ ಬಸವಯ್ಯ ಕಾಮಲದೇವಿ
ಪರಿಕಿಸಲ್ ದೇವಯ್ಯ ರೇವಯ್ಯ ಮೋಳಿಗೆಯ ಸಂಗವ್ವೆ ಕನ್ನಮರಸಿ
ಇರದೆ ಪೂವಿನ ಬಾಚಿದೇವ ರೋಹಿಲ ಬೊಪ್ಪಿ
ನಿರುತಮುಂ ಬೊಮ್ಮಿಸೆಟ್ಟಿಗಳಿವರ್ ತೇರಸರ್
ತೆರದೊಳೆ ಪವಾಡಂಗಳಂ ಮಾಡಿ ಕೈಲಾಸಮಂ ಪೊಕ್ಕರಿವರೆಂದನು ೫೩

ಹರನಾಜ್ಞೆಯಿಂ ಗಿರಿಜೆಯಿಾರೆಂಟು ಕಳೆಗಳಂ
ಬೆರಸಿ ಗುಡ್ಡಾಪುರದೆ ಪೊನ್ನಯ್ಯ ಪಾಂಡ್ಯಭೂ
ವರ ಬೀರಿದೇವಯ್ಯ ಬೀಚಯ್ಯ ಹಂದಯ್ಯ ಕಿನ್ನರ ಬ್ರಹ್ಮಯ್ಯನು
ಇರದೆ ಗುಡ್ಡವ್ವೆ ಪೂವಿನ ಬಾಚಿದೇವನಾ
ವರ ಕಂದುಲಿಗೆ ನಾಗಿದೇವ ಬಾಚಲದೇವಿ
ಪರಿಕಿಸಲ್ ಕಲಿಕೇತಿದೇವಿ ಸೇನಾನಾಥ ಚಿಕ್ಕಲಿಗೆ ನಾಚಯ್ಯನು ೫೪

ರಾಮೇಶ, ಕೇಳು ಎಂದನು. ೫೨. ನಿಂದಿಸುವವರ ಮಾತಿಗೆ ಭೋಜನಗುರುವಾದ ಉದ್ಭಟನು ಸಾಯಲು ಅಂದು ಅವನನ್ನು ಸುಟ್ಟು ಹೊಗೆಯ ಮಹಿಮೆಯಿಂದ ಶಾಪ ಹೊಂದಿದ್ದ ಏಳು ನೂರು ಭೂತಗಳು ಕೈಲಾಸವನ್ನು ಸೇರಿದುವು. ಉಳಿದಿದ್ದ ಒಂದು ಭೂತವು ಬಂದು ಅವುಗಳನ್ನು ಕಾಣದೆ ಅಳುತ್ತಿರಲು ಭೋಜನು ಅದಕ್ಕಾಗಿ ಮತ್ತೆ ಆ ಗುರುವಿನ ಮೂಳೆಯಿಂದ ಹೊಗೆ ಮಾಡಲು ಸಂತೋಷದಿಂದ ಎಲ್ಲ ಜನರೊಡಗೂಡಿ ಆಲದಮರವನ್ನು ಹತ್ತಿ ಕೈಲಾಸಕ್ಕೆ ಹೋದನು. ೫೩. ಶ್ರೇಷ್ಠನಾದ ಸಿಂಗಿದೇವ, ಸಾತ್ವಿಕ ಸಂಗಯ್ಯ, ದೇವರಸ, ಪ್ರತಿಹಾರಿ ಬಸವಯ್ಯ, ಕಾಮಲದೇವಿ, ದೇವಯ್ಯ, ರೇವಯ್ಯ, ಮೋಳಿಗೆಯ ಸಂಗವ್ವೆ, ಕನ್ನಮರಸಿ, ಪೂವಿನ ಬಾಚಿದೇವ, ರೋಹಿಲ, ಬೊಪ್ಪಿ, ಬೊಮ್ಮಿಸೆಟ್ಟಿಗಳು ಇವರೆಲ್ಲ ಹದಿಮೂರು ಜನ ಗಣಗಳು ಅನೇಕ ಪವಾಡಗಳನ್ನು ಮಾಡಿ ಕೈಲಾಸವನ್ನು ಸೇರಿದರು. ೫೪. ಶಿವನ ಆಜ್ಞೆಯಂತೆ ಪಾರ್ವತಿಯು ಹದಿನಾರು ಕಲೆಗಳಿಂದ ಕೂಡಿಕೊಂಡು ಗುಡ್ಡಾಪುರದಲ್ಲಿ ಹೊನ್ನಯ್ಯ, ಪಾಂಡ್ಯರಾಜ, ಬಿರಿದೇವಯ್ಯ, ಬೀಚಯ್ಯ, ಹಂದಯ್ಯ, ಕಿನ್ನರಬೊಮ್ಮಯ್ಯ, ಗುಡ್ಡವ್ವೆ, ಪೂವಿನ ಬಾಚಿದೇವ, ಆ ಶ್ರೇಷ್ಠನಾದ ಕಂದುಲಿಗೆ ನಾಗಿದೇವ, ಬಾಚಲದೇವಿ, ಕಲಿಕೇತಿದೇವಿ, ಸೇನಾನಾಥ ಚಿಕ್ಕಲಿಗೆ ನಾಚಯ್ಯ,

CC-0. Jangamwadi Math Collection. Digitized by eGangotri

ಪಡಿಹಾರಿ ಸೋಮಯ್ಯ ಮುಂತಾದ ಪೆಸರ್ಗಳಂ
ಪಡೆದುದಿಸಿಯಣಪೂರ ಬ್ರಹ್ಮೇಶನಂ ಕಿತ್ತು
ನಡೆ ವಿಷ್ಣುವಂ ನಿಲಿಸಿ ಚಿಕ್ಕಲಿಗೆ ನಾಚಯ್ಯನ ಕನಸಿನೊಳ್ ಶಿವನುಸಿರಲು
ಒಡನೆ ಗುಡ್ಡಾದೇವಿಗರಿಪಲಲ್ಲಿಗೆ ಪೋಗಿ
ಮೃಡಮೂರ್ತಿಯಂ ಪ್ರತಿಷ್ಠಿಸಿ ಪರರ ಸಮಯಮಂ
ಜಡಿದು ಭಂಗಿಸಿ ಷೋಡಶರ್ ಮಹಾಕೈಲಾಸಪುರಕೆ ದಾಳಿಯನಿಟ್ಟರು ೪೪

ವರವೀರಘಂಟೆಯಾ ಮೈಲಿ ಕಾಮಲದೇವಿ
ಪರಿಕಿಸಲ್ ದೋರಿದೇವಯ್ಯ ಬೊಪ್ಪಲದೇವಿ
ಪರಿವಿಡಿಯೊಳಾ ಸಿಂಗಿದೇವ ಚೋಳವ್ವೆ ಬೀಚಲದೇವಿ ಮಾಯಿದೇವ
ಪರಮಶಿವಭಕ್ತನಾ ಸಿಂಗಿರಾಜಂ ಕನ್ನ
ಮರಸಿಯಿವರೇ ದಶಗಣಂಗಳೆಂದಾಗಲತಿ
ಕರುಣದಿಂ ಚೆನ್ನಬಸವೇಶನಾ ಸಿದ್ಧರಾಮೇಶಂಗೆ ನಿರವಿಸಿದನು ೪೫

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ೪೬

ಐವತ್ತೈದನೆಯ ಸಂಧಿ ಸಂಪೂರ್ಣ

೪೪. ಬಾಗಿಲು ಕಾಯುವ (ಪಡಿಹಾರಿ) ಸೋಮಯ್ಯ ಮೊದಲಾದ ಹೆಸರುಗಳನ್ನು ಪಡೆದು ಹುಟ್ಟಿದವರು. ಅಣಪೂರಿನ ಬ್ರಹ್ಮೇಶನನ್ನು ಕಿತ್ತು ವಿಷ್ಣುವನ್ನು ಸ್ಥಾಪಿಸಲು ಚಿಕ್ಕಲಿಗೆ ನಾಚಯ್ಯನ ಕನಸಿನಲ್ಲಿ ಶಿವನು ಬಂದು ಈ ವಿಷಯವನ್ನು ತಿಳಿಸಲು, ಕೂಡಲೇ ಗುಡ್ಡಾದೇವಿಗೆ ಇದನ್ನು ಹೇಳಲು ಅಲ್ಲಿಗೆ ಹೋಗಿ ಶಿವನ ಮೂರ್ತಿಯನ್ನು ಪ್ರತಿಷ್ಠಾಪಿಸಿ ಅನ್ಯಮತವನ್ನು ತೀವ್ರವಾಗಿ ಖಂಡಿಸಿ ಆ ಹದಿನಾರು ಗಣಗಳೂ ಮಹಾಕೈಲಾಸಪಟ್ಟಣಕ್ಕೆ ಹೋದರು. ೪೫. ವರ ವೀರಘಂಟೆಯ ಮೈಲಿದೇವಿ, ಕಾಮಲದೇವಿ, ದೋರಿದೇವಯ್ಯ, ಬೊಪ್ಪಲದೇವಿ, ಅನುಕ್ರಮವಾಗಿ ಆ ಸಿಂಗಿದೇವ, ಚೋಳವ್ವೆ, ಬೀಚಲದೇವಿ, ಮಾಯಿದೇವ, ಪರಮಶಿವಭಕ್ತನಾದ ಆ ಸಿಂಗಿರಾಜ, ಕನ್ನಮರಸಿ ಇವರೇ ಮೊದಲಾದವರು ಹತ್ತು ಗಣಗಳು ಎಂದು ಆಗ ಅತಿಕರುಣೆಯಿಂದ ಚೆನ್ನಬಸವೇಶನು ಆ ಸಿದ್ಧರಾಮನಿಗೆ ನಿರೂಪಿಸಿದನು. ೪೬. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿಮಾಡಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗವನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ಐವತ್ತೈದನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ಐವತ್ತಾರನೆಯ ಸಂಧಿ

ಸೂಚನೆ : ಸಾನಂದನೊಲಿದು ಧರ್ಮಾಧರ್ಮಮಂ ಕೇಳ್ದು
ತಾನಂದು ಯಮಪುರದ ನರಕಿಗಳನೆಲ್ಲರಂ
ಸಾನಂದದಿಂದೆ ಶಿವಪುರಕೊಯ್ದ ಕಥೆಯನಾ ಚೆನ್ನಬಸವಂ ಪೇಳ್ದನು

ನಾಗೇಂದ್ರಶಯನನೇತ್ರಾರ್ಚಿತಪದಾಂಭೋಜ
ನಾಗೇಂದ್ರವರಕಟಕಕುಂಡಲಕರಶ್ರವಣ
ನಾಗೇಂದ್ರವಾಹನಾದ್ಯಖಿಳ ದೇವವ್ರಾತಮಕುಟಮಂಡಿತಪದಾಬ್ಜ
ನಾಗೇಂದ್ರಸುರ ಮತ್ತಮಾತಂಗಪಂಚಾಸ್ಯ
ನಾಗೇಂದ್ರವೈರಿಯುಗವಹ್ನಿತ್ರಿಲೋಚನನೆ
ನಾಗೇಂದ್ರಸುಕುಮಾರಿಯರ್ಧಾಂಗ ಸಲಹು ಪಂಪಾವಿರೂಪಾಕ್ಷಲಿಂಗ ೧

ಚಿತ್ತಶುದ್ಧಿಯೊಳಾಲಿಸೆಲೆ ರಾಮ ಸಂಪೂರ್ಣ
ವಿತ್ತನೆಂಬೊರ್ವ ಋಷಿ ಹರವರದಿನಣುಗನಂ
ಪೆತ್ತು ಮಿಗೆ ಜಾತಕರ್ಮಂಗೆಯ್ದು ನಾಮಕರಣಮನಿರದೆ ಹರುಷದಿಂದೆ
ಬಿತ್ತರಿಸಿ ಸಾನಂದಪೆಸರೊಳುಪನಯನಮಂ
ಮತ್ತೆ ವಿರಚಿಸಿ ವಿಮಲಶೈವೋಪದೇಶಮುಮ
ನಿತ್ತು ಸಲಹಲ್ಕೆ ದಿನದಿನದೊಳಾತಂ ಬೆಳವುಶಿರ್ದನತ್ಯುತ್ಸವದೊಳು ೨

ಸೂಚನೆ : ಸಾನಂದಮುನಿಯು ಪ್ರೀತಿಯಿಂದ ಧರ್ಮಾಧರ್ಮವನ್ನು ಕೇಳಿ ತಾನು ಯಮನ ಪಟ್ಟಣದಲ್ಲಿದ್ದು ನರಕಿಗಳೆಲ್ಲರನ್ನೂ ಆನಂದದಿಂದ ಕೈಲಾಸಕ್ಕೆ ಕರೆದುಕೊಂಡು ಹೋದ ಕಥೆಯನ್ನು ಚೆನ್ನಬಸವಣ್ಣನು ಹೇಳಿದನು. ೧. ವಿಷ್ಣುವಿನ ಕಣ್ಣಿನಿಂದ ಪೂಜೆಗೊಂಡ ಪಾದಕಮಲವುಳ್ಳವನೆ, ನಾಗೇಂದ್ರನನ್ನೇ ಕೈಕಡಗ ಮತ್ತು ಕರ್ಣಕುಂಡಲ, ಆಭರಣಗಳನ್ನಾಗಿ ಉಳ್ಳವನೆ, ದೇವೇಂದ್ರ ಮೊದಲಾದ ಎಲ್ಲ ದೇವತೆಗಳ ಕಿರೀಟದಿಂದ ನಮಸ್ಕರಿಸಿಕೊಳ್ಳುವ ಪಾದಕಮಲಗಳುಳ್ಳವನೆ ನಾಗ, ಇಂದ್ರ, ದೇವತೆಗಳೆಂಬ ಮದಿಸಿದ ಆನೆಗಳಿಗೆ ಸಿಂಹವೆ, ರಾಹುವಿಗೆ ವೈರಿಗಳಾದ ಸೂರ್ಯ, ಚಂದ್ರ ಮತ್ತು ಅಗ್ನಿಯನ್ನೇ ಮೂರು ಕಣ್ಣುಗಳನ್ನಾಗಿ ಉಳ್ಳವನೆ, ಪರ್ವತರಾಜನ ಮಗಳಾದ ಪಾರ್ವತಿಯನ್ನು ಅರ್ಧದೇಹವನ್ನಾಗಿ ಉಳ್ಳ ಪಂಪಾವಿರೂಪಾಕ್ಷಲಿಂಗ ಕಾಪಾಡು. ೨. ಚಿತ್ತಶುದ್ಧಿಯಿಂದ ಕೇಳಯ್ಯ ಸಿದ್ಧರಾಮ, ಸಂಪೂರ್ಣವಿತ್ತನೆಂಬ ಒಬ್ಬ ಋಷಿಯು ಶಿವನ ವರದಿಂದ ಮಗನನ್ನು ಪಡೆದು ಚೆನ್ನಾಗಿ ಜಾತಕರ್ಮ, ನಾಮಕರಣ ಮೊದಲಾದುವನ್ನು ಸಂತೋಷದಿಂದ ಮಾಡಿ ಸಾನಂದನೆಂಬ ಹೆಸರಿನಿಂದ ಉಪನಯನ ಮಾಡಿಸಿದನು. ಮತ್ತೆ ಶ್ರೇಷ್ಠವಾದ ಶೈವೋಪದೇಶವನ್ನಿತ್ತು ಸಲಹಲು ಆತನು ದಿನದಿನಕ್ಕೆ ಅತಿ

CC-0. Jangamwadi Math Collection. Digitized by eGangotri

ತಿಳಿಯಲೀಶ್ವರಭಕ್ತಿಯೇ ವಿಮಳರೂಪಾಂತು
ಬಳೆವಂತೆ ಪ್ರಣವಪಂಚಾಕ್ಷರಿಯೆ ದೇಹವಂ
ತಳೆದಂತೆ ಶುಕ್ಲಪಕ್ಷೇಂದುಮಂಡಲದಂತೆ ದಿನದಿನಕೆ ಪೆರ್ಚಿ ಬಳೆದು
ಸಲವಿನಿಂ ಬಾಲತ್ವಮಂ ನಟಿಸಿ ಬಳಿಕದಂ
ಕಳಿದು ಸುಜ್ಞಾನಯುತನಾಗಿ ಮುನಿರಾಜಕುಲ
ತಿಲಕನೆಂದೆನಿಪ ಸಾನಂದಮುನಿನಾಥನಿರುತಿರ್ದನತ್ಯುತ್ಸವದೊಳು ೩

ವೇದಶಾಸ್ತ್ರಾಗಮಪುರಾಣಂಗಳಂ ತೀರ
ಲೋದಿ ಪರಿಣತನಾಗಿ ಮತ್ತುಳಿದ ಸತ್ಕಲಾ
ಭೇದಂಗಳಂ ತಿಳಿದು ವರಕಮಂಡಲ ದಂಡ ಕಾವಿ ಕಾಷಾಂಬರಗಳ
ಸಾದರದೊಳಾಂತು ತ್ರಿಪುಂಡ್ರ ಪಂಚಾಕ್ಷರೀ
ನಾದ ರುದ್ರಾಕ್ಷಭೂಷಿತನಾಗಿ ಬಹುಶುಭ್ರ
ಮಾದ ಸುಲಿಪಲ್ ಕರ್ಣಕುಂಡಲದಿನಪರಪರಶಿವನಂತೆ ರಂಜಿಸಿದನು ೪

ಇಂತೆಸೆವ ಸಾನಂದಮುನಿನಾಥನಿರುತಲತಿ
ಸಂತಸದೊಳೀಶನಂ ಕುರ್ತು ತಪವಂ ಮಾಡೆ
ಕಂತುಹರನಾ ಮುನಿಗೆ ಮೆಚ್ಚಿ ಶೈವೋಪದೇಶವನಿತ್ತು ಗಣಪದವನು
ತಾಂ ತಡೆಯದಿತ್ತಮಳಪುಷ್ಪಕವನಾಗಳ
ತ್ಯಂತವಿನಿಯೋಗದವರಂ ಕೊಟ್ಟು ಪೋಗೆ ಮುನಿ
ಸಂತತಿಗಳಂ ಕೂಡಿಕೊಂಡು ಸಾನಂದಗಣನಾಥನೊಲವಿಂದಿರ್ದನು ೫

ಸಂತೋಷದಿಂದ ಬೆಳೆಯುತ್ತಿದ್ದನು. ೩. ಆಲೋಚಿಸಲು ಈಶ್ವರಭಕ್ತಿಯೇ ಮಂಗಳಕರವಾದ ರೂಪವನ್ನು ಪಡೆದು ಬೆಳೆಯುವಂತೆ, ಪ್ರಣವಪಂಚಾಕ್ಷರಿಯೇ ದೇಹವನ್ನು ತಾಳಿದಂತೆ, ಶುಕ್ಲಪಕ್ಷದ ಚಂದ್ರಮಂಡಲದಂತೆ ದಿನದಿನಕ್ಕೆ ವೃದ್ಧಿಹೊಂದಿ ಬೆಳೆದು ಸಂತೋಷದಿಂದ ಬಾಲ್ಯತ್ವವನ್ನು ನಟಿಸಿ ಬಾಲ್ಯವನ್ನು ಕಳೆದನು. ಸುಜ್ಞಾನಿಯಾಗಿ ಮುನಿಕುಲಶ್ರೇಷ್ಠನಾದ ಸಾನಂದಮುನಿಯು ಸಂತೋಷದಿಂದ ಇರುತ್ತಿದ್ದನು. ೪. ವೇದ-ಶಾಸ್ತ್ರ, ಆಗಮ–ಪುರಾಣಗಳನ್ನು ಸಂಪೂರ್ಣವಾಗಿ ಓದಿ ಪರಿಣತನಾಗಿ, ಮಿಕ್ಕ ಸತ್ಕಲೆಗಳ ಭೇದಗಳನ್ನು ತಿಳಿದು, ಶ್ರೇಷ್ಠವಾದ ಕಮಂಡಲು-ದಂಡ-ಕಾವಿ–ಕಾಷಾಯವಸ್ತ್ರಗಳನ್ನು ಆದರದಿಂದ ಧರಿಸಿ, ವಿಭೂತಿ, ಪಂಚಾಕ್ಷರೀಮಂತ್ರ, ರುದ್ರಾಕ್ಷಿಗಳಿಂದ ಅಲಂಕೃತನಾಗಿ, ಶುಭ್ರವಾದ ಹೊಳೆಯುವ ಹಲ್ಲಿನಿಂದ, ಕಿವಿಯ ಆಭರಣದಿಂದ ಪರಶಿವನ ಅಪರಾವತಾರಿಯಂತೆ ಕಾಣಿಸಿದನು. ೫. ಈ ರೀತಿಯಾಗಿ ಸಾನಂದಮುನಿಯು ಇರುತ್ತ ಅತಿಮುದದಿಂದ ಶಿವನನ್ನು ಕುರಿತು ತಪಸ್ಸು ಮಾಡಿದನು. ಶಿವನು ಆ ಮುನಿಗೆ ಮೆಚ್ಚಿ ಶೈವೋಪದೇಶವನ್ನು ಮಾಡಿ ಗಣಪದವಿಯನ್ನು ಕೊಟ್ಟು, ಪುಷ್ಪಕ ವಿಮಾನ, ಊಳಿಗದವರನ್ನು ಕೊಟ್ಟು ಹೋಗಲು ಋಷಿಸಮೂಹವನ್ನು ಕೂಡಿಕೊಂಡು

CC-0. Jangamwadi Math Collection. Digitized by eGangotri

ಒಂದು ದಿನಮತುಳಸದ್ಭಕ್ತಿಯುತ ಮುನಿವರರ
ಸಂದಣಿಯು ಸದ್ಗೋಷ್ಠಿಯೊಳಗಿರ್ಪ ವಿಮಳಸಾ
ನಂದಮುನಿಗೊರ್ವ ಋಷಿ ಮಾತುಮಾತಿನಲಿ ಧರ್ಮಾಧರ್ಮನಿರ್ಣಯವನು
ಎಂದನೀ ಲೋಕದೊಳ್ ಪುಣ್ಯಪಾಪದ ಬಹಳ
ವೃಂದಮಂ ಮಾಳ್ಪರಂ ಯಮದೂತರಿರದೊಯ್ವ
ಚಂದಮಂ ಪೇಳ್ವೆ ಲಾಲಿಪುದೆಂದು ವಿನಯದಿಂದಾತನೊಡನಿಂತೆಂದನು ೬

ಎಲ್ಲಿ ಮನೆ ಮನೆವಾರ್ತೆ ತಾಯ್ತಂದೆ ಸತಿಸುತರ
ದೆಲ್ಲಿಯಗ್ರಜ ಬಂಧುಬಾಂಧವರ್ಗಳೆಲ್ಲಿ ತಾ
ನೆಲ್ಲಿಗೈದುವೆನೆಂಬ ದುಃಖಮೆಳ್ಳನಿತಾದೊಡಂ ಮನಕೆ ತೋರದಂತೆ
ಎಲ್ಲೆಲ್ಲಿಯುಂ ಬಿಗಿದ ಗುಡಿತೋರಣಂಗಳುಮ
ದೆಲ್ಲೆಲ್ಲಿಯುಂ ನರ್ತಿಪಂಗನಾಸಂಕುಲಮ
ದೆಲ್ಲೆಲ್ಲಿಯುಂ ಪುದಿದ ಧೂಪಧೂಮಂಗಳಿಂದಾ ಪಥಂ ಕಣ್ಗೆಸೆದುದು ೭

ದಾರಿಯೊಳಗಳವಟ್ಟ ಝಲ್ಲಿಪಟ್ಟೆಗಳ ವಿ
ಸ್ತಾರಫಲಕುಸುಮಮಾಲೆಗಳ ಮೇಲ್ಕಟ್ಟನಿಂ
ದೋರಣದ ತೋರಣದ ಪೂರಣದ ಶೋಭೆಯಿಂದೀ ತೆರದೊಳುಂ ರಂಜಿಪ
ಸಾರಮುತ್ತಿನ ಸೂಸಕಂಗಳಿಂ ತಳಿದ ಪ
ನ್ನೀರ ಚಳೆಯಂಗಳಿಂದಿಕ್ಕಿದರವಟ್ಟಿಗೆಯ
ನಾರಿಯರ ಸೊಂಪಿನಿಂ ಧರ್ಮಿಗಳ ಕಣ್ಗೆ ಕೌತುಕಮನಿರದಾಗಿಸುವುದು ೮

ಸಾನಂದಗಣನಾಥನು ಒಲವಿನಿಂದ ಇರುತ್ತಿದ್ದನು. ೬. ಒಂದು ದಿನ ಅತುಳವಾದ ಸದ್ಭಕ್ತಿಯಿಂದ ಕೂಡಿದ ಮುನಿಶ್ರೇಷ್ಠರ ಗೋಷ್ಠಿಯಲ್ಲಿ ಇದ್ದ ಸಾನಂದಮುನಿಗೆ ಒಬ್ಬ ಋಷಿಯು ಮಾತಿನ ಮಧ್ಯದಲ್ಲಿ ಧರ್ಮಾಧರ್ಮ ನಿರ್ಣಯವನ್ನು ಕುರಿತು ಹೇಳಿದನು. ಈ ಲೋಕದಲ್ಲಿ ಅತಿಯಾಗಿ ಪುಣ್ಯ ಪಾಪ ಮಾಡಿದವರನ್ನು ಯಮದೂತರು ಕರೆದು ಕೊಂಡು ಹೋಗುವ ರೀತಿಯನ್ನು ಕುರಿತು ಹೇಳುತ್ತೇನೆ, ಕೇಳುವುದು ಎಂದು ವಿನಯ ದಿಂದ ಆತನೊಡನೆ ಹೀಗೆಂದನು. ೭. ಮನೆಯೆಲ್ಲಿ ? ಗೃಹಕೃತ್ಯವೆಲ್ಲಿ ? ತಾಯಿ-ತಂದೆ, ಹೆಂಡತಿ ಮಕ್ಕಳೆಲ್ಲಿ ? ಅಣ್ಣ, ಬಂಧು ಬಾಂಧವರುಗಳೆಲ್ಲಿ ? ನಾನು ಎಲ್ಲಿಗೆ ಹೋಗು ತ್ತೇನೆ ? ಎಂಬ ದುಃಖ ಸ್ವಲ್ಪವಾದರೂ ಮನಸ್ಸಿಗೆ ಅನುಭವವಾಗದಂತೆ ಎಲ್ಲೆಲ್ಲಿಯೂ ಕಟ್ಟಿದ ಬಾವುಟ–ತೋರಣ, ಎಲ್ಲೆಲ್ಲಿಯೂ ನರ್ತಿಸುವ ಸ್ತ್ರೀಸಮೂಹ, ಎಲ್ಲೆಲ್ಲಿಯೂ ತುಂಬಿದ ಧೂಪದ ಹೊಗೆಗಳಿಂದ ಆ ಮಾರ್ಗವು ಮನೋಹರವಾಗಿ ಕಂಡಿತು. ೮. ದಾರಿಯಲ್ಲಿ ಅಳವಡಿಸಿದ ಗೊಂಡೆಪಟ್ಟೆಗಳ ವಿಸ್ತಾರದಿಂದ, ಹಣ್ಣು–ಹೂಮಾಲೆಗಳ ಮೇಲ್ಕಟ್ಟಿನಿಂದ, ಓರಣವಾದ ತೋರಣ-ಪೂರ್ಣ ಶೋಭೆಯಿಂದ, ಈ ರೀತಿ ರಂಜಿಸುವ ಅಚ್ಚಮುತ್ತಿನ ಆಭರಣಗಳಿಂದ, ಚಿಮುಕಿಸಿದ ಪನ್ನೀರಿನಿಂದ, ಅರವಟ್ಟಿಗೆಯ ಸ್ತ್ರೀಯರ ಸೌಂದರ್ಯದಿಂದ ಧರ್ಮಾತ್ಮರ ಕಣ್ಣಿಗೆ ಬಹುಕೌತುಕವನ್ನುಂಟುಮಾಡುವುದು.

CC-0. Jangamwadi Math Collection. Digitized by eGangotri

ಬಲನೆಡನೊಳೆಡೆಯೆಡೆಯೊಳೆಸೆವ ನವವೀಥಿಯುವ
ರೊಳಗೆ ನಾನಾ ಪುಷ್ಪಲತೆ ಫಲಿತವೃಕ್ಷಮುಂ
ತಿಳಿಗೊಳಂ ಮಣಿಮಂಟಪವ ರಚಿಸಿದರಮನೆಯೊಳುಲಿವ ಶುಕಪಿಕಸಮೂಹಂ
ಸುಳಿವ ನವಿಲರಸಂಚೆ ಕೊಂಚೆಗಳ್ ಸೊಂಪಿನಿಂ
ಕಳಗೀತಮಂ ಪಾಡುವಳಿಯುಲೆವ ತಂಗಾಳಿ
ನಲಿದಾಡುವೆಳೆವೆಂಡಿರಲ್ಲದಿಲ್ಲೆಂತುಟೋ ಧರ್ಮದ ಮಹತ್ತ್ವಂಗಳು ೯

ಹರುಷದಿಂ ಧರ್ಮಿಗಳ್ ಬರ್ಪುದಂ ಕಾಣುತ
ಲ್ಲಿರುತಿರ್ಪ ಜನರ್ಗಳೆಲೆ ಧರ್ಮಾತ್ಮರಿರ ನಿಮ್ಮ
ದರುಶನದೊಳಾವ್ ಧನ್ಯರಾದೆವೀ ಮಂಟಪಕೆ ಚಿತ್ತೈಸಿ ಕರುಣದಿಂದೆ
ಪರಿಮಳವ ಗಂಧಮಿದೆ ಕತ್ತುರಿಜವಾದಿಗಳ
ಭರಣಿಯಿವೆ ಕಜ್ಜಾಯಮಿವೆ ಷಡುರಸಾನ್ನವಿವೆ
ಪರಿಪರಿಯ ಪನ್ನೀರ್ಗಳಿವೆಕೊ ಕೈಕೊಳ್ಳಿಮೆಂದುಪಚರಿಪರೊಲವಿನಿಂದೆ ೧೦

ಬಿರಿದ ರಸದಾಳಿಂಬವಣ್ಗಳಿವೆ ಚಿತ್ತೈಸಿ
ಪರಿಮಳಿಪ ಕುಸುಮಮಾಲೆಗಳನಂಗೀಕರಿಸಿ
ಸರಸಕರ್ಪೂರ ತಾಂಬೂಲಮಿವೆಯವಧರಿಸಿ ದೇವಾಂಗವಸ್ತ್ರಂಗಳ
ಹೊರಳೆಯುಂ ಕೈಕೊಳ್ಳಿ ರನ್ನಭಂಗಾರಗಳ
ನಿರದಲಂಕರಿಸಿ ನಾನಾವಿಧ ರಸಾಯನಂ
ವರನಾಳಿಕೇರಫಲಮಿವೆ ಸವಿಯಬೇಕೆಂದು ಪೇಳುವರ್ ದೈನ್ಯದಿಂದೆ ೧೧

೯. ಎಡ-ಬಲಗಳಲ್ಲಿ, ಎಡೆಯೆಡೆಯಲ್ಲಿ ಪ್ರಕಾಶಿಸುವ ಹೊಸ ಬೀದಿ, ಅದರೊಳಗೆ ನಾನಾ ಹೂಬಳ್ಳಿಗಳು, ಫಲಬಿಟ್ಟ ಮರಗಳು. ತಿಳಿನೀರಿನ ಕೊಳಗಳು, ರತ್ನಮಂಟಪಗಳನ್ನು ನಿರ್ಮಿಸಿದ ಅರಮನೆಗಳಲ್ಲಿ ಕೂಗುವ ಗಿಳಿ-ಕೋಗಿಲೆಗಳ ಸಮೂಹ, ಓಡಾಡುವ ನವಿಲು, ರಾಜಹಂಸ ಕ್ರೌಂಚಗಳು, ಸೊಂಪಾಗಿ ಝೇಂಕಾರ ಗೀತಹಾಡುವ ದುಂಬಿ, ಬೀಸುವ ತಂಗಾಳಿ, ನಲಿದಾಡುವ ಕನ್ಯೆಯರು, ಇಷ್ಟಲ್ಲದೆ ಇಲ್ಲಿ ಧರ್ಮದ ಮಹತ್ವ ಇನ್ನು ಯಾವ ರೀತಿಯಾದುದೋ ? ೧೦. ಸಂತೋಷದಿಂದ ಧರ್ಮಿಗಳು ಬರುತ್ತಿದ್ದುದನ್ನು ನೋಡಿ ಅಲ್ಲಿರುವ ಜನಗಳು ಅಯ್ಯಾ ಧರ್ಮಾತ್ಮರೆ, ನಿಮ್ಮ ದರ್ಶನದಿಂದ ನಾವು ಧನ್ಯರಾದೆವು. ಈ ಮಂಟಪಕ್ಕೆ ಕರುಣೆಯಿಟ್ಟು ಬನ್ನಿ. ಪರಿಮಳದ ಗಂಧವಿದೆ. ಕಸ್ತೂರಿ-ಜವಾಜಿಗಳ ಭರಣಿ ಇವೆ. ಕಜ್ಜಾಯವಿದೆ, ಷಡ್ರಸಾನ್ನಗಳಿವೆ. ನಾನಾ ರೀತಿಯ ಪನ್ನೀರುಗಳಿವೆ. ಇದೋ ತೆಗೆದುಕೊಳ್ಳಿ ಎಂದು ಪ್ರೀತಿಯಿಂದ ಉಪಚರಿಸುವರು. ೧೧. ಬಿರಿದ ರಸ ದಾಳಿಂಬೆ ಹಣ್ಣುಗಳಿವೆ, ಕೇಳಿ. ಸುವಾಸನೆ ಬೀರುವ ಹೂವಿನ ಹಾರಗಳನ್ನು ತೆಗೆದು ಕೊಳ್ಳಿ. ಪಚ್ಚಕರ್ಪೂರದಿಂದ ಕೂಡಿದ ತಾಂಬೂಲಗಳಿವೆ ಸ್ವೀಕರಿಸಿ. ದೇವತಾವಸ್ತ್ರಗಳ ಸುರುಳಿಯಿವೆ ತೆಗೆದುಕೊಳ್ಳಿ. ರತ್ನಗಳ ಮತ್ತು ಚಿನ್ನದ ಆಭರಣಗಳನ್ನು ಧರಿಸಿಕೊಳ್ಳಿ. ನಾನಾ ವಿಧವಾದ ರಸಾಯನ, ತೆಂಗಿನಕಾಯಿಗಳಿವೆ, ರುಚಿ ನೋಡಿ ಎಂದು ದೈನ್ಯದಿಂದ

CC-0. Jangamwadi Math Collection. Digitized by eGangotri

ಸಾನಂದಮುನಿಪ ಕೇಳ್ ಧರ್ಮನಿಷ್ಠರನಿಂತು
ನಾನಾವಿಧೋಪಚಾರಂಗಳಿಂ ಸತ್ಕರಿಸ
ಲಾನಂದದಿಂದೆ ಯಮದೂತರೊಡೆಯನ ಮುಂದೆ ನಿಂದಿರಿಸಿ ಬಿನ್ನವಿಸಲು
ಏನಿವರ ಧರ್ಮಭೇದಂಗಳೆಂದಂತಕಂ
ತಾನಿರದೆ ಚಿತ್ರಗುಪ್ತರ್ಗಳಂ ಕೇಳಲ್ಕೆ
ನೂನಮಿನಿತಿಲ್ಲದವರವರೆಸಗಿದಖಿಳ ಸದ್ಧರ್ಮಮಂ ಪೇಳ್ದರಂದು ೧೨

ಪರಮಪರಪುರುಷಾರ್ಥನೀತನೀತಂ ದಯಾ
ಪರನತುಳ ಸತ್ಕಲಾದಾನಿಯಿತಂ ಬಿಡದೆ
ಗುರುಹಿರಿಯರೆಂದರಿದು ನಡೆದಾತನೀತನೀತಂ ಸಕಲಸನ್ಮಾರ್ಗನು
ಇರದೆ ಭೂದಾನವಿತ್ತಾತನೀತಂ ವಸ್ತ್ರ
ದುರುದಾನಮಂ ಕೊಟ್ಟನೀತನೀತಂ ಮಹೋ
ತ್ಕರದ ಗೋದಾನಮಂ ಮಾಡಿದವನೀತನೆಂದೋದಿದರ್ ಶಮನಿದಿರೊಳು ೧೩

ವರಧೇನು ಧನ ಧಾನ್ಯ ವಸ್ತ್ರ ವಾಹನಸಮು
ತ್ಕರ ಗೃಹ ಕ್ಷೇತ್ರ ಪರಿಮಳಕುಸುಮ ತಾಂಬೂಲ
ಪರಿಮಳೋದಕ ಷಡ್ರಸಾನ್ನ ನಾನಾವಿಧ ಫಲಾನೀಕಪಾನಂಗಳ
ಕರೆಕರೆದು ಸತ್ಪಾತ್ರಸಂತತಿಗೆ ಸಂತತಂ
ಹರುಷದಿಂದಿತ್ತನಿವನಿವನೀತನೀತನೆಂ
ದಿರದೆ ವಿವರಿಸಿ ತೋರಿದರ್ ಧರ್ಮರಾಜನಿದಿರೊಳ್ ಧರ್ಮಕೋವಿದರನು ೧೪

ಹೇಳುವರು. ೧೨. ಎಲೈ ಸಾನಂದಮುನಿಯೇ ಕೇಳು, ಧರ್ಮಾತ್ಮರನ್ನು ಈ ರೀತಿಯಾಗಿ ನಾನಾ ವಿಧವಾದ ಉಪಚಾರಗಳಿಂದ ಸತ್ಕರಿಸಲು ಆನಂದದಿಂದ ಯಮದೂತರು ತಮ್ಮ ಒಡೆಯನ ಮುಂದೆ ನಿಲ್ಲಿಸಿ ಇದನ್ನು ಬಿನ್ನವಿಸಿಕೊಳ್ಳಲು ಯಮನು ಇವರ ಧರ್ಮಭೇದಗಳೇನು ಎಂದು ಚಿತ್ರಗುಪ್ತರನ್ನು ಕೇಳಲು ಸ್ವಲ್ಪವೂ ವ್ಯತ್ಯಾಸವಿಲ್ಲದೆ ಅವರವರು ಮಾಡಿದ ಎಲ್ಲ ಧರ್ಮಕಾರ್ಯವನ್ನೂ ಅಂದು ಹೇಳಿದರು. ೧೩. ಇವನು ಪರಮಪುರುಷಾರ್ಥನು. ಇವನು ದಯಾಪರನು. ಇವನು ಸತ್ಕಲಾದಾನಿ ಗುರುಹಿರಿಯರೆಂದು ತಿಳಿದು ನಡೆದವನು, ಇವನು. ಇವನು ಸಕಲ ಸನ್ಮಾರ್ಗಿ, ಭೂದಾನವನ್ನು ಕೊಟ್ಟವನಿವನು. ಬಹು ವಸ್ತ್ರದಾನ ಮಾಡಿದವನೀತ. ಮಹತ್ತಾದ ಗೋದಾನವನ್ನು ಮಾಡಿದವನು ಇವನು ಎಂದು ಯಮನ ಎದುರು ಓದಿದರು. ೧೪. ಶ್ರೇಷ್ಠವಾದ ಗೋ, ಧನ, ಧಾನ್ಯ, ವಸ್ತ್ರ, ವಾಹನಗಳನ್ನೂ, ಮನೆ ಭೂಮಿ, ಸುಗಂಧಪೂರಿತ ಹೂ, ತಾಂಬೂಲ, ಪನ್ನೀರು, ಷಡ್ರಸಾನ್ನ, ನಾನಾ ವಿಧವಾದ ಫಲಸಮೂಹ, ಪಾನೀಯಗಳನ್ನು ಕರೆಕರೆದು ಸತ್ಪಾತ್ರರಾದವರಿಗೆ ಯಾವಾಗಲೂ ಸಂತೋಷದಿಂದ ಕೊಟ್ಟವನು ಇವನು, ಇವನು, ಈತನು, ಈತನೇ ಎಂದು ಕ್ರಮವಾಗಿ ತಡೆಯದೆ ವಿವರಿಸಿ ಯಮನ

CC-0. Jangamwadi Math Collection. Digitized by eGangotri

ಪ್ರಾಣದಾನವನಿತ್ತನೀತಂ ಸುಕ
ಲ್ಯಾಣಮಂ ಮಾಡಿದಂ ಭಕ್ತಿಯಿಂ ಜಂಗಮ
ಶ್ರೇಣಿಯಂ ಮನ್ನಿಸಿದನೀತನೀತಂ ಗುರುಪದಾರಾಧಕಂ ತಿಳಿಯಲು
ಮಾಣದೀತಂ ಪುಷ್ಪವಾಟಿಯಂ ರಚಿಸಿದಂ
ಜಾಣನೀತಂ ಸಕಲಧರ್ಮಮಂ ಮಾಡಿದಂ
ಸ್ಥಾಣುವಿಂಗಲಸದಭಿಷೇಕಮಂ ಮಾಡಿದವನೀತನವಧರಿಸೆಂದರು ೧೫

ಪಶುವಿಗುದಕವನೆರೆದನೀತನಮೃತಾನ್ನಮಂ
ಪಸಿದವರ್ಗಿಕ್ಕಿದವನೀತಂ ಸುಭಕ್ತಿಯಿಂ
ಭಸಿತರುದ್ರಾಕ್ಷಧಾರಕರನೊಲವಿಂ ಕಂಡು ನಮಿಸುತುಂ ಸಂತಸದೊಳು
ಎಸೆವ ಪಂಚಾಕ್ಷರೀಮಂತ್ರಮಂ ಬಿಡದೆ ಜಪಿ
ಯಿಸುವನೀತಂ ಶಿವಂಗನುದಿನಂ ಮಿಗಲೊಂದು
ಕುಸುಮಮುಮನರ್ಪಿಸಿದನೀತನೆಂದೋದಿದರ್ ಚಿತ್ರಗುಪ್ತರ್ ಮುದದೊಳು ೧೬

ಈತಂ ತಟಾಕಮಂ ಕಟ್ಟಿದಂ ಸದ್ಧನ
ವ್ರಾತಮಂ ನಿಕ್ಷೇಪಿಸಿದನಿವಂ ವಿಪ್ರಜನ
ಕೋತು ವೈವಾಹಮಂ ಮಾಡಿದನಿವಂ ಶಿವಾಲಯಮನೀತಂ ರಚಿಸಿದಂ
ಈತಂ ವನಂಗಳಂ ಬಿತ್ತಿದಂ ಶಿವಕಥಾ
ಪೊತಪೌರಾಣವನಿವಂ ಪೇಳಿಸಿದನತಿ
ಪ್ರೀತಿಯಿಂದಂ ಸುಪುತ್ರರನಿರದೆ ಪಡೆದಾತನೀತನವಧರಿಸೆಂದರು ೧೭

ಎದುರಿನಲ್ಲಿ ಧರ್ಮಾತ್ಮರನ್ನು ತೋರಿಸಿದನು. ೧೫. ಪ್ರಾಣದಾನ ಮಾಡಿದವನಿವನು. ಇವನು ಮದುವೆಗಳನ್ನು ಮಾಡಿಸಿದವನು. ಭಕ್ತಿಯಿಂದ ಜಂಗಮರ ಸಮೂಹವನ್ನು ಮನ್ನಿಸಿದವನು ಇವನು. ಈತ ಗುರುವಿನ ಪಾದದಾರಾಧಕ. ಇವನು ಪುಷ್ಪವಾಟಿಕೆಯನ್ನು ನಿರ್ಮಿಸಿದನು. ಈ ಜಾಣನು ಎಲ್ಲ ಧರ್ಮಗಳನ್ನೂ ಮಾಡಿದ. ಶಿವನಿಗೆ ಅಭಿಷೇಕವನ್ನು ಇವನು ಉದಾಸೀನವಿಲ್ಲದ ಮನಸ್ಸಿನಿಂದ ಮಾಡಿದ ಕೇಳು ಎಂದರು. ೧೬. ಹಸುವಿಗೆ ನೀರನ್ನು ಎರೆದವನು ಈತ. ಹಸಿದಿದ್ದವರಿಗೆ ಅಮೃತಾನ್ನವನ್ನು ಉಣಬಡಿಸಿದವನು ಇವನು. ಈತನು ಭಕ್ತಿಯಿಂದ ವಿಭೂತಿ, ರುದ್ರಾಕ್ಷಿಯನ್ನು ಧರಿಸಿದವನನ್ನು ಪ್ರೀತಿಯಿಂದ ನೋಡಿ ನಮಸ್ಕರಿಸುತ್ತ, ಸಂತೋಷದಿಂದ ಪವಿತ್ರವಾದ ಪಂಚಾಕ್ಷರೀಮಂತ್ರವನ್ನು ಯಾವಾಗಲೂ ಜಪಿಸಿದನು. ಇವನು ಪ್ರತಿದಿನವೂ ಶಿವನಿಗೆ ಹೂವನ್ನು ಅರ್ಪಿಸಿದವನು ಎಂದು ಸಂತೋಷದಿಂದ ಚಿತ್ರಗುಪ್ತರು ಓದಿದರು. ೧೭. ಇವನು ಕೆರೆಯನ್ನು .ಕಟ್ಟಿದನು. ಉತ್ತಮವಾದ ಧನಸಮೂಹವನ್ನು ಇವನು ಬಡವರಿಗೆ ಹಂಚಿದನು. ಪ್ರೀತಿಯಿಂದ ಬ್ರಾಹ್ಮಣರಿಗೆ ಮದುವೆ ಮಾಡಿದವನಿವನು. ಇವನು ಶಿವದೇವಾಲಯವನ್ನು ಕಟ್ಟಿಸಿದ. ಉದ್ಯಾನಗಳನ್ನು ನಿರ್ಮಿಸಿದವನೀತ. ಈತ ಶಿವಕಥೆಯಿಂದ ಕೂಡಿದ ಪುರಾಣಗಳನ್ನು ಹೇಳಿಸಿದ. ಅತಿಪ್ರೀತಿಯಿಂದ

CC-0. Jangamwadi Math Collection. Digitized by eGangotri

ವರದಯಾಪರನಿವಂ ದಾಕ್ಷಿಣ್ಯಯುತನಿವಂ
ಪರಮಸದ್ಗುಣಿಯಿವಂ ಸತ್ಯಸಂಭ್ರಮನಿವಂ
ಗುರುಭಕ್ತಿಪರನಿವಂ ಮಾತೃಪಿತೃಸೇವಾಸಮನ್ವಿತನಿವಂ ತಿಳಿಯಲು
ಕರುಣಾಕಟಾಕ್ಷನಿವನತಿಶಮದಮಾನ್ವಿತಂ
ಪರಿಕಿಸಲ್ಕಿವನೆ ಪರಪುರುಷಾರ್ಥಕಾರಿಯಿವ
ಸುರುತರ ಸುಧರ್ಮಂಗಳಂ ಮಾಡಿದವನೆಂದು ಕೇಳೆಂದು ಪೇಳ್ದರಂದು ೧೮

ದಾರಿಯೊಳಗರವಟಿಗೆಯಿಕ್ಕಿದನಿವಂ ಮುದದೆ
ಹೋರಿಗಳ ಬಸವಂ ಬರೆದವನಿವಂ ಬಹಳ
ದಾರಿದ್ರರಂ ರಕ್ಷಿಸಿದನಿವಂ ಪರ್ವತಕೆ ಕಂಬಿಯನಿವಂ ಪೊತ್ತನು
ಭೂರಿಯಿಂದನ್ನಛತ್ರಂಗಳಂ.ಮಾಡಿಸಿದು
ದಾರನೀತಂ ಸುಜನರಂ ಪೊರೆವ ಸುಪರೋಪ
ಕಾರಿಯಿತಂ ಸದಾಶುಚಿ ಏಕಪತ್ನೀವ್ರತಸ್ಥನಿವನೆಂದೊರೆದರು ೧೯

ಇಂತಿವರ ಧರ್ಮಂಗಳಿವಕಮಾ ಲೋಕಲೋ
ಕಾಂತರದ ಭೋಗಂಗಳುಮವರ್ಗಿನಿತಿನಿತು ದಿನ
ಸಂತೋಷದಿಂದುಂಡು ತೀರಿಸಲ್ವೇಳ್ಕುಮೆಂದವರಂತಕಂಗೆ ಪೇಳೆ
ಮುಂತಿರ್ದ ದೂತರಂ ಕರೆದಿವಂ ಬೆಸಸೆಯುಚಿ
ತಾಂತರದೊಳಮಳಮಣಿಗಣವಿಮಾನಂಗಳೊಳ
ಗಂತರವನಾ ಲೋಕಲೋಕದೊಳ್ ತಂದಿರಿಸಲವರಲ್ಲಿ ಸುಖಮಿರ್ಪರು ೨೦

ಉತ್ತಮರಾದ ಮಕ್ಕಳನ್ನು ಪಡೆದವನಿವ, ಕೇಳು ಎಂದರು. ೧೮. ಉತ್ತಮ ದಯಾಪರನಿವ. ದಾಕ್ಷಿಣ್ಯದಿಂದ ಕೂಡಿದವನಿವನು. ಮಹಾ ಸದ್ಗುಣಿ ಇವನು. ಸತ್ಯಸಂಧನಿವನು. ಈತನು ಗುರುಭಕ್ತಿಯುಳ್ಳವನು. ತಾಯಿ–ತಂದೆಯರ ಸೇವಾನಿರತನಿವನು. ಇವನು ಕರುಣಾಶಾಲಿ. ಅತಿಯಾದ ಸಹನೆ-ಶಾಂತಿಯುಳ್ಳವನು ಇವನು. ನೋಡಲು ಪರಮ ಪುರುಷಾರ್ಥಕಾರಿಯಿವನು. ಈತನು ಶ್ರೇಷ್ಠವಾದ ಉತ್ತಮ ಧರ್ಮಗಳನ್ನು ಮಾಡಿದವನು ಕೇಳಯ್ಯ, ಎಂದು ವಿವರಿಸಿದರು. ೧೯. ದಾರಿಯಲ್ಲಿ ಅರವಟ್ಟಿಗೆಯನ್ನು ಇಟ್ಟವನು ಇವನು. ಸಂತೋಷದಿಂದ ಹೋರಿಗಳನ್ನು, ಬಸವನನ್ನು ಬರೆದವನು ಇವನು. ಅತಿಯಾದ ದಾರಿದ್ರ್ಯದಿಂದ ಕೂಡಿದವರನ್ನು ಇವನು ಕಾಪಾಡಿದನು. ಇವನು ಪರ್ವತಕ್ಕೆ (ನೀರಿನ) ಅಡ್ಡೆಯನ್ನು ಹೊತ್ತವನು. ಅದ್ದೂರಿಯಾಗಿ ಅನ್ನಛತ್ರಗಳನ್ನು ಮಾಡಿಸಿದ ಉದಾರನಿವನು. ಇವನು ಉತ್ತಮರನ್ನು ಕಾಪಾಡುವ ಪರೋಪಕಾರಿ. ಸದಾಕಾಲವೂ ಶುಚಿಯಾಗಿ ಏಕಪತ್ನೀವ್ರತಸ್ಥನಾದವನಿವನು ಎಂದು ಹೇಳಿದರು. ೨೦. ಹೀಗಿವೆ ಇವರ ಧರ್ಮಕಾರ್ಯಗಳು. ಈ ಕೆಲಸಗಳಿಗೆ ಈ ಲೋಕ ಲೋಕಾಂತರದ ಭೋಗಗಳು ಇವರಿಗೆ ಇಷ್ಟಿಷ್ಟು ದಿನ. ಇವರು ಅದನ್ನು ಸಂತೋಷದಿಂದ ಅನುಭವಿಸಿ ತೀರಿಸಬೇಕು ಎಂದು ಅವರು ಯಮಧರ್ಮನಿಗೆ ಹೇಳಲು ಯಮನು ತನ್ನ ಮುಂದಿದ್ದ ಸೇವಕರನ್ನು ಕರೆದು ಹಾಗೆಯೇ ಆಜ್ಞಾಪಿಸಲು ಅವರವರ ಧರ್ಮಕಾರ್ಯ

CC-0. Jangamwadi Math Collection. Digitized by eGangotri

ಒರೆವೆನಿನ್ನಾಲಿಸೈ ಸಾನಂದಮುನಿ ದುಃಖ
ಮರಣಕಾಲದೊಳೈದೆ ಕರ್ಮಿಗಳನಂತಕನ
ಚರರೈದಿ ಕಡಿ ಕೆಡಪು ಬಡಿಯೆಲ್ವನುಡಿ ತಲೆಯು ಪೊಡೆ ಪೊಡೆಯನೊಡನೆ ಸೀಳು
ಕರುಳನುಗಿ ಕಾಲೊಳೊದೆ ತಿದಿಯ ಸುಲಿ ಕಿವಿ ಮೂಗ
ನರಿಯಡಸಿ ತಿನ್ನೆನುತೆ ಗುಡುಗುಡಿಸಿ ರೌದ್ರದಿಂ
ಮೊರೆದು ಕಿಡಿಗೆದರುತಡಿವಿಡಿದೆಳೆದು ಸೆಳೆದುಕೊಂಡೊಯ್ವರತಿಕೋಪದಿಂದೆ ೨೧

ಎಡೆವಿಡದೆ ಕಾಲ್ಗಡರ್ವ ಕಲ್ಗಳಿಂ ಮುಳ್ಗಳಿಂ
ದೊಡನೆ ಭೀಕರಮಾದ ಘಟ್ಟದಿಂ ಬೆಟ್ಟದಿಂ
ದಿಡಿದ ಕಂಟಕವೃಕ್ಷಜಾತದಿಂ ಭೂತದಿಂ ಪ್ರೇತದಿಂದಂಗೈಸುವ
ಬಡಿವ ಪುಲಿ ಕರಡಿವಿಂಡೋಳಿಯಿಂ ಪಾಳಿಯಿಂ
ದಡರಿ ಛಿಟಛಿಟಿಪ ಕಾಳ್ಗಿಚ್ಚಿನಿಂ ಪೆಚ್ಚಿನಿಂ
ಪೊಡೆವ ಸಿಡಿಲ್ಮಿಂಚುಗಳ ಹೊಯ್ಗಳಿಂ ಬಯ್ಗಳಿಂ ತತ್ಪಥಮುಗುರ್ವಿಸಿದುದು ೨೨

ಸರುಗಳಿಂ ದರಿಗಳಿಂ ಹಳ್ಳದಿಂ ಕೊಳ್ಳದಿಂ
ಮುರುಡಿನಿಂ ಮುಕ್ಕಿನಿಂ ತಗ್ಗಿನಿಂ ತೆವರಿನಿಂ
ಪರಳಿನಿಂ ಪುತ್ತದಿಂ ಪೊಗೆಗಳಿಂ ಪಗೆಗಳಿಂ ಕಾಲ್ತೊಡರ್ವ ಪಾವ್ಗಳಿಂದೆ
ಉರಿಗಳಿಂದೋರೆಯಿಂ ಪೋರೆಯಿಂದಿಡಿದ ಕ
ಮ್ಮರಿಗಳಿಂ ಕರೆವ ಕೆಂಡದ ಮಳೆಗಳಿಂ ಗಜರ್ವ
ಮರುಳ್ಗಳಿಂ ಶಾಕಿನಿಯರಿಂ ಡಾಕಿನಿಯರಿಂದಮಾ ಪಥಂ ಬೆದರಿಸುವುದು ೨೩

ಗಳಿಗೆ ಉಚಿತವಾದ ಶ್ರೇಷ್ಠವಾದ ಮಣಿಖಚಿತ ವಿಮಾನಗಳಲ್ಲಿ ಅವರನ್ನು ಆಯಾ ಲೋಕಗಳಲ್ಲಿ ತಂದುಬಿಡಲು ಅಲ್ಲಿ ಅವರು ಸುಖವಾಗಿರುವರು. ೨೧. ಇನ್ನು ದುಃಖವನ್ನು ಕುರಿತು ಹೇಳುತ್ತೇನೆ ಕೇಳಯ್ಯಾ ಸಾನಂದಮುನಿ, ಮರಣಕಾಲದಲ್ಲಿ ಪಾಪಿಗಳನ್ನು ಯಮದೂತರ ಕಡಿ, ಕೆಡವು, ಬಡಿ, ಎಲುಬನ್ನು ಮುರಿ, ತಲೆಯನ್ನು ಒಡಿ, ಹೊಟ್ಟೆಯನ್ನು ಕೂಡಲೇ ಸೀಳು, ಕರುಳನ್ನು ಕೀಳು, ಕಾಲಿನಲ್ಲಿ ಒದೆ, ಚರ್ಮವನ್ನು ಸುಲಿ, ಕಿವಿ-ಮೂಗನ್ನು ಕತ್ತರಿಸು, ಕಿತ್ತು ತಿನ್ನು ಎನ್ನುತ್ತ ಗುಡುಗುಡಿಸಿ ಭಯಂಕರವಾಗಿ ಆರ್ಭಟಿಸಿ ಕಿಡಿಕಾರುತ್ತ ಕಾಲನ್ನು ಹಿಡಿದೆಳೆದು ಅತಿಕೋಪದಿಂದ ಎಳೆದುಕೊಂಡು ಹೋಗುವರು. ೨೨. ಎಲ್ಲೆಲ್ಲಿಯೂ ಕಾಲಿಗೆ ಸಿಕ್ಕುವ ಕಲ್ಲುಗಳಿಂದ, ಮುಳ್ಳುಗಳಿಂದ, ಭೀಕರವಾದ ಘಟ್ಟದಿಂದ-ಬೆಟ್ಟದಿಂದ, ಆವರಿಸಿದ ಮುಳ್ಳುಗಳ ಮರದಿಂದ, ಭೂತಪ್ರೇತದಿಂದ, ಹೊಡೆಯುವ ಹುಲಿ, ಕರಡಿಗಳ ಸಮೂಹದಿಂದ, ಮುತ್ತಿ ಛಿಟಿ ಛಿಟಿ ಗುಟ್ಟುವ ಭಯಂಕರ ಕಾಳ್ಗಿಚ್ಚಿನಿಂದ, ಹೊಡೆಯುವ ಸಿಡಿಲು-ಮಿಂಚುಗಳಿಂದ, ಬಯ್ಗಳಿಂದ ಆ ದಾರಿ ಅತಿಭಯಂಕರವಾಗಿತ್ತು. ೨೩. ಕಣಿವೆ (ಗುಹೆ) ಯಿಂದ, ಕಂದರದಿಂದ, ಹಳ್ಳ-ಕೊಳ್ಳಗಳಿಂದ, ಕಂಟಿಯಿಂದ, ಸಣ್ಣಭಾಗದಿಂದ, ತಗ್ಗಿನಾದ-ದಿಣ್ಣೆಯಿಂದ, ಕಲ್ಲಿನಿಂದ, ಹುತ್ತದಿಂದ, ಹೊಗೆಯಿಂದ, ಶತ್ರುಗಳಿಂದ, ಕಾಲಿಗೆ ತೊಡರುವ ಹಾವುಗಳಿಂದ, ಉರಿಯಿಂದ, ಇಳಿಜಾರಿನಿಂದ, ಬಿಲಗಳಿಂದ ತುಂಬಿದ ಕಮರಿಗಳಿಂದ, ಸುರಿಯುವ ಕೆಂಡದ

CC-0. Jangamwadi Math Collection. Digitized by eGangotri

ನೀರಿಲ್ಲದಂಗುಳಗಳೊಣಗುತುಂ ನೆಳಲ್ಗಳುಂ
ದಾರಿಯೊಳಗಿಲ್ಲದಂಗಂಗಳುಂ ಬೇವುತುಂ
ಗೋರಿಕಲ್ಗಳ್ ಸೋಂಕಿ ಕಾಲ್ಗಳಿಂ ಶೋಣಿತಂ ಬಸಿವುತುಂ ಮುಳ್ಗಳಿಂದೆ
ಕ್ರೂರವೆನೆ ಮೇಗಾಲ್ಗೆ ಮೂಡುತುಂ ಯಮಚರರ್
ಸೇರದಡಿಗಡಿಗೆ ತಿವಿತಿವಿದೆಳೆವುತಂತಿಂತು
ಘೋರದುಃಖಂಗೊಳಿಸಿ ಕೊಂಡುಪೋಪಂಡಲೆಯನೇನೆಂಬೆನಾ ಪಥದೊಳು ೨೪

ಆದಲೇನಾ ದಾರಿಯೆಲ್ಲವುಂ ಬರಿಯ ಸುಡು
ಗಾಡಲ್ಲಿ ಚರಿಪರೆಲ್ಲರ್ ಭೂತರಾಕ್ಷಸರ್
ಕೂಡೆ ತಿರುಗುವ ಮೃಗಂಗಳ್ ದುಷ್ಟಮೃಗವಲ್ಲಿ ವೃಕ್ಷವೇ ಬೆಂದ ಕೊರಡು
ರೂಢಿಸುವ ಝಳಮಲೆವ ಬಿರುಗಾಳಿ ಬಿರುಬಿನಿಂ
ಕಾಡುತಿಹ ಯಮದೂತರೀ ತೆರದೊಳಡಿಗಡಿಗೆ
ಕೋಡುತುಂ ಶೋಕಮಂ ಮಾಡುತುಂ ದೆನ್ಯಮುಮನಾಡುತುಂ ಪೋಪರಂದು ೨೫

ಉರಿಗಳೊಳ್ ಪೊಗಿಸುತುಂ ದರಿಗಳೊಳ್ ನೂಂಕುತುಂ
ಕರದಿಂದೆ ಮೋದುತುಂ ಚಾಟಿಯೊಳ್ ಬಡಿವುತುಂ
ಸರಳ್ಗಳಂ ಪೊಸೆವುತುಂ ಭೂತದಿಂ ಪೊಯ್ಸುತುಂ ಪುತ್ತದೊಳ್ ಕೈಯಿಡಿಸುತೆ
ಮರುಳ್ಗಳಿಂ ಪಿಡಿಸುತುಂ ಚೋರರಿಂ ಕೊರಿಸುತುಂ
ಭರದೆಳೆದು ಪೊಯ್ವುತುಂ ಜರೆದಿರದೆ ಬಯ್ವುತುಂ
ಗರಳದೊಳಗದ್ದುತುಂ ಬಿರುಬಿನಿಂ ಗುದ್ದುತುಂ ಬಳಲಿಸುವರೇನೆಂಬೆನು ೨೬

ಮಳೆಗಳಿಂದ, ಆರ್ಭಟಿಸುವ ಮರುಳುಗಳಿಂದ, ಶಾಕಿನಿಯರಿಂದ-ಡಾಕಿನಿಯರಿಂದ ಆ ದಾರಿ ಭಯವುಂಟುಮಾಡುವುದು. ೨೪. ನೀರಿಲ್ಲದೆ ಗಂಟಲು ಒಣಗುತ್ತ, ದಾರಿಯಲ್ಲಿ ನೆರಳಿಲ್ಲದೆ ಶರೀರಗಳು ಬೇಯುತ್ತ, ಬೆಣಚುಕಲ್ಲುಗಳು ತಾಗಿ ಕಾಲುಗಳಿಂದ ರಕ್ತ ಸುರಿಯುತ್ತ, ಮುಳ್ಳುಗಳಿಂದ ಕ್ರೂರವಾಗಿ ಮೇಲಿನ ಕಾಲಿಗೆ ಚುಚ್ಚುತ್ತ ಯಮದೂತರು ಇವರನ್ನು ದ್ವೇಷದಿಂದ ಮತ್ತೆ ಮತ್ತೆ ತಿವಿತಿವಿದು, ಎಳೆಯುತ್ತ ಹೀಗೆ ಘೋರವಾದ ತೊಂದರೆ ಉಂಟುಮಾಡಿ ಆ ಮಾರ್ಗದಲ್ಲಿ ತೆಗೆದುಕೊಂಡು ಹೋಗುವ ಪೀಡೆಯನ್ನು ಏನೆಂದು ಹೇಳಲಿ ? ೨೫. ಏನು ಹೇಳಲಿ ? ಆ ದಾರಿಯೆಲ್ಲ ಬರಿಯ ಸ್ಮಶಾನ. ಅಲ್ಲಿ ಸಂಚರಿಸುವವರು ಭೂತಗಳು. ರಾಕ್ಷಸರು ಅವರೊಂದಿಗೆ ತಿರುಗುವ ಮೃಗಗಳು ದುಷ್ಟ ಪ್ರಾಣಿಗಳು. ಬೆಂದ ಕೊರಡೇ ಅಲ್ಲಿಯ ಮರ. ರೂಢಿಸುವ ಝಳ, ಬೀಸುವ ಬಿರುಗಾಳಿ, ನಿಷ್ಕರುಣೆಯಿಂದ ಭಯಂಕರವಾಗಿ ಕಾಡಿಸುತ್ತಿರುವ ಯಮದೂತರು, ಈ ರೀತಿ ಹೆಜ್ಜೆ ಹೆಜ್ಜೆಗೂ ಹಿಂಜರಿಯುತ್ತ, ಗೋಳಾಡುತ್ತ, ದೈನ್ಯದ ಮಾತನ್ನಾಡುತ್ತ ಹೋಗುವರು. ೨೬. ಬೆಂಕಿಯಲ್ಲಿ ನುಗ್ಗಿಸುತ್ತ, ಕಂದರಗಳಲ್ಲಿ ನೂಕುತ್ತ, ಕೈಯಿಂದ ಹೊಡೆಯುತ್ತ, ಚಾಟಿಯಿಂದ ಬಾರಿಸುತ್ತ, ಬಾಣಗಳನ್ನು ಝಳಪಿಸುತ್ತ, ಭೂತದಿಂದ ಹೊಡೆಸುತ್ತ, ಹುತ್ತದಲ್ಲಿ ಕೈ ಇಡಿಸುತ್ತ, ಪ್ರೇತಗಳಿಂದ ಹಿಡಿಸುತ್ತ, ಕಳ್ಳರಿಂದ ಹಿಂಸೆ ಮಾಡಿಸುತ್ತ, ರಭಸವಾಗಿ ಎಳೆದು ಹೊಡೆಯುತ್ತ, ಜರೆಯುತ್ತ, ಬೈಯುತ್ತ, ವಿಷದಲ್ಲಿ ಅದ್ದುತ್ತ, ಕ್ರೂರತನದಿಂದ

CC-0. Jangamwadi Math Collection. Digitized by eGangotri

ಸೊಕ್ಕಿದೆಕ್ಕಲಗಳಿಂ ಪೊಯ್ಸುತುಂ ಕರಡಿಯಿಂ
ಜಕ್ಕುಲಿಸುತುಂ ಕೆಂಡವಳೆಗೆ ಮೈಗೊಡಿಸುತುಂ
ನಕ್ಕು ಮೂದಲಿಸುತುಂ ಪಸಿದ ಪಾವುಗಳಿಂದೆ ಹರಿಸುತುಂ ಗೋರಿಗೊಳಿಸಿ
ಬಿಕ್ಕಿಬಿರಿದಳಿಸುತುಂ ಪಸಿದ ಶಾಕಿನಿಯರಿಂ
ದೊಕ್ಕಲಿಕ್ಕಿಸುತೆ ಬುಸುಗುಟ್ಟುತಿಹ ದನುಜರಿಂ
ಮುಕ್ಕುರಿಕಿಸುತೆ ಮುಳಿದು ಗರ್ಜಿಸುತೆ ಕರ್ಮಿಗಳನೊಯ್ವರದನೇನೆಂಬೆನು ೨೭

ಇಂತು ನಾನಾವಿಧದೆ ಬಾಧಿಸುತೆ ಕರ್ಮಿಗಳ
ನಂತಕನ ಪೊರೆಯೊಳಗೆ ನಿಲಿಸಲ್ಕೆ ರೌದ್ರರೂ
ಪಂ ತಾಳ್ದು ಚಿತ್ರಗುಪ್ತರನೆಯ್ದೆ ನೋಡುತಿವರೇಗೆಯ್ದರೆಂದು ಕೇಳೆ
ಇಂತಿವಂ ಕೆರೆಯೊಡೆದನರ್ಥಮುಂ ವಂಚಿಸಿದ
ನಿಂತಿವಂ ಬ್ರಹ್ಮಹತಿಗೆಯ್ದನಿವನಭವಗೃಹ
ಮಂ ತಾಳದಳಿದಂ ವನಂಗಡಿದನಭವಕೃತಿಯುಂ ಜರೆದನಿವನೆಂದರು ೨೮

ಪರವಧೂಗಮನಮಂ ಮಾಡಿದನಿವಂ ಬಿಡದೆ
ಗುರುವಿನುಪದೇಶಮುಂ ಜರೆದನೀತಂ ಪರಮ
ಪರಭಕ್ತರಂ ನೋಯೆನುಡಿದನೀತಂ ಕೂಟಸಾಕ್ಷಿಯುಂ ಪೇಳ್ದನಿವನು
ಇರದಾಶ್ರಿತರನುಪೇಕ್ಷಿಸಿದನೀತಂ ನಂಬಿ
ದರಸಿಗಪರಾಧಮುಂ ಗೆಯ್ದನೀತಂ ಮಿತ್ರ
ನರಸಿ ಮಗಳನುಜೆ ಸೊಸೆ ಸೂತಕಿಯ ನೆರೆದನಿವನಿವನೆಂದು ಸೂಚಿಸಿದರು ೨೯

ಗುದ್ದುತ್ತ ಆಯಾಸ ಉಂಟುಮಾಡುವರು. ಅದನ್ನು ಏನೆಂದು ಹೇಳಲಿ ? ೨೭. ಕೊಬ್ಬಿದ ಹಂದಿಗಳಿಂದ ಹೊಡೆಸುತ್ತ, ಕರಡಿಯಿಂದ ಕಚ್ಚಿ ಆಡಿಸುತ್ತ, ಕೆಂಡದ ಮಳೆಗೆ ಮೈ ಒಡ್ಡಿಸುತ್ತ, ನಕ್ಕು ಹೀಯಾಳಿಸುತ್ತ, ಹಸಿದ ಹಾವುಗಳನ್ನು ಹರಿಸುತ್ತ, ಹಿಂಸಿಸಿ ಬಿಕ್ಕಿ ಬಿಕ್ಕಿ ಅಳಿಸುತ್ತ, ಹಸಿದ ಶಾಕಿನಿಯರಿಂದ ಹೊಡೆಸುತ್ತ, ಹಿಂಸಿಸುತ್ತಲಿರುವ ರಾಕ್ಷಸರನ್ನು ಮೇಲೆ ಬೀಳಿಸುತ್ತ, ಕೋಪಗೊಂಡು ಘರ್ಜಿಸುತ್ತ ಪಾಪಿಗಳನ್ನು ಕರೆದುಕೊಂಡುಹೋಗುವರು. ೨೮. ಈ ರೀತಿ ನಾನಾ ವಿಧವಾಗಿ ಬಾಧೆಕೊಡುತ್ತ ಪಾಪಿಗಳನ್ನು ಯಮನ ಎದುರಿಗೆ ನಿಲ್ಲಿಸಲು ಅವನು ಭಯಂಕರ ರೂಪವನ್ನು ತಾಳಿ ಚಿತ್ರಗುಪ್ತರನ್ನು ನೋಡುತ್ತ ಇವರು ಮಾಡಿದ ಪಾಪಕಾರ್ಯವೇನೆಂದು ಕೇಳಲು, ಇವನು ಕೆರೆಯನ್ನು ಒಡೆದ. ಇವನು ಹಣಕ್ಕೆ ಮೋಸ ಮಾಡಿದ. ಇವನು ಬ್ರಹ್ಮಹತ್ಯೆ ಮಾಡಿದ. ಇವನು ಶಿವಾಲಯವನ್ನು ಅಸಹನೆಯಿಂದ ನಾಶಮಾಡಿದ. ಇವನು ಕಾಡನ್ನು ಕಡಿದ. ಇವನು ಶಿವನು ಮಾಡಿದ ಕೆಲಸವನ್ನು ಹೀಯಾಳಿಸಿದ ಎಂದರು. ೨೯. ಇವನು ಅನ್ಯಸ್ತ್ರೀಸಂಗವನ್ನು ಮಾಡಿದನು. ಗುರುವಿನ ಉಪದೇಶವನ್ನು ಜರೆದನಿವನು. ಶ್ರೇಷ್ಠರಾದ ಶಿವಭಕ್ತರ ಮನಸ್ಸಿಗೆ ನೋವುಂಟಾಗುವಂತೆ ಇವನು ಮಾತನಾಡಿದನು. ಇವನು ಸುಳ್ಳು ಸಾಕ್ಷ್ಯವನ್ನು ಹೇಳಿದ. ಆಶ್ರಯ ಪಡೆದಿದ್ದವರನ್ನು ಇವನು ಉಪೇಕ್ಷೆ ಮಾಡಿದ. ನಂಬಿದ್ದ ರಾಜನಿಗೆ ಇವನು ಅನ್ಯಾಯ ಮಾಡಿದ. ಸ್ನೇಹಿತನ ಹೆಂಡತಿ, ಮಗಳು, ತಂಗಿ, ಸೊಸೆ, ಮುಟ್ಟಾದವಳು. ಇವರೆಲ್ಲರೊಡನೆ ಇವನು

CC-0. Jangamwadi Math Collection. Digitized by eGangotri

ಇವ ನಾಗರಂಗಳಂ ತರಿದವಂ ಕೊಂಡೆಯುವ
ನಿವನುಸಿರ್ದನಬಲೆಯುಂ ಕೊಂದನಿವನೀತನೀ
ಗವನೀಸುರರ್ಗೀವ ಗೋದಾನ ಭೂದಾನ ಮುಖ್ಯಂಗಳಂ ತಡೆದನು
ಇವನೆಸೆವ ಹಿರಿಯರಂ ನಿಷ್ಕಾರಣಂ ಪಳಿದ
ನಿವನಮಳಭಸಿತರುದ್ರಾಕ್ಷೆಯುಂ ನಿಂದಿಸಿದ
ನಿವನರ್ಥದಾಶೆಗನ್ಯಾಯುವಮಂ ಪೇಳ್ದವಂ ಕೇಳೆಂದು ಪೇಳ್ದರಂದು ೩೦

ಜಾತಿಧರ್ಮಂಗಳಂ ಬಿಟ್ಟು ಸಲೆ ನಡೆದಾತ
ನೀತನತಿಮಾನ್ಯರಪಮಾನಂಗಳಂ ಕೊಂಡ
ನೀತನಾಚರಿಪ ಸುವ್ರತಭಂಗನಾದವಂ ಖಳನಿವಂ ಕ್ರೂರನಿವನು
ಮಾತೆಪಿತರಂ ಬಯ್ವನಿವನುಗ್ರದಿಂ ಬಂಧು
ಜಾತಮಂ ದಟ್ಟಿಸಿದನುದಕಕೈತಂದ ಗೋ
ವ್ರಾತಮಂ ಪೊಡೆದು ದಟ್ಟಿಸಿದಾತನಿವನೆಂದು ಪ್ರೇತಪತಿಯೊಳ್ ಪೇಳ್ದರು ೩೧

ಇವನುತ್ತಮರ ಮನೆಯುನತಿದುರ್ಜನರಿಗಿತ್ತ
ನಿವನಿರದೆ ಸಜ್ಜನರ ಕೆಯ್ಯ ದಂಡಂಗೊಂಡ
ನಿವನತುಳಮದದೆ ಶಿವಪೂಜೆಯುಂ ಮಾಡದಾದಂ ಬಹಳನಿಷ್ಠುರದೊಳು
ಇವನಶ್ವಹತಿಗೆಯ್ದನಿವನತಿಥಿಯುಂ ಪೊಯ್ದ
ನಿವನೀಶನಿರ್ಮಾಲ್ಯಮಂ ನಿಂದೆಯಿಂದುಳಿದ
ನಿವನೊಡೆಯನಂ ಕೊಂದನಿವನಭಕ್ಷ್ಯಂ ತಿಂವನೆಂದವರ್ ಪೇಳ್ದರಂದು ೩೨

ಸಂಭೋಗಿಸಿದನು ಎಂದು ತಿಳಿಸಿದರು. ೩೦. ಇವನು ನಾಗರಹಾವುಗಳನ್ನು ಕೊಂದನು. ಇವನು ಚಾಡಿಹೇಳಿದ. ಸ್ತ್ರೀಯನ್ನು ಕೊಂದವನಿವನು. ಈತನು ಬ್ರಾಹ್ಮಣರಿಗೆ ಕೊಡುವ ಗೋದಾನ, ಭೂದಾನ ಮೊದಲಾದುವನ್ನು ಅಡ್ಡಿಪಡಿಸಿದನು. ಇವನು ಖ್ಯಾತರಾದ ಹಿರಿಯರನ್ನು ನಿಷ್ಕಾರಣವಾಗಿ ನಿಂದಿಸಿದನು. ಇವನು ಪವಿತ್ರವಾದ ವಿಭೂತಿ, ರುದ್ರಾಕ್ಷಿಯನ್ನು ನಿಂದಿಸಿದನು. ಇವನು ಹಣದ ಆಸೆಗೆ ಅನ್ಯಾಯುವನ್ನು ಹೇಳಿದ, ಕೇಳೆಂದು ಚಿತ್ರಗುಪ್ತರು ಹೇಳಿದರು. ೩೧. ಇವನು ಜಾತಿ-ಧರ್ಮಗಳನ್ನು ಬಿಟ್ಟು ನಡೆದವನು. ಈತ ಮಾನ್ಯರಾದವರಿಗೆ ಅತಿಯಾಗಿ ಅಪಮಾನ ಮಾಡಿದವನು. ಆಚರಿಸುತ್ತಿದ್ದ ಒಳ್ಳೆಯ ವ್ರತವನ್ನು ಭಂಗಗೊಳಿಸಿದವನು ಇವನು. ಇವನು ದುಷ್ಟ, ಇವನು ಕ್ರೂರಿ, ತಾಯಿ-ತಂದೆಯರನ್ನು ಬಯ್ಯುವವನಿವನು. ಉಗ್ರವಾಗಿ ಬಂಧುಬಾಂಧವರನ್ನು ಹೆದರಿಸಿದವನು ಇವನು. ನೀರನ್ನು ಕುಡಿಯಲು ಬಂದ ಗೋವುಗಳ ಸಮೂಹವನ್ನು ಹೊಡೆದು ಗದರಿಸಿದವನಿವನೆಂದು ಯಮುನ ಸಂಗಡ ಹೇಳಿದರು. ೩೨. ಇವನು ಉತ್ತಮರ ಮನೆಯನ್ನು ದುರ್ಜನರಿಗೆ ಕೊಟ್ಟ. ಇವನು ಒಳ್ಳೆಯವರಿಂದ ದಂಡ ವಸೂಲು ಮಾಡಿದನು. ಇವನು ಅತಿಯಾದ ಗರ್ವದಿಂದ ಶಿವಪೂಜೆಯನ್ನು ಮಾಡದೇ ಹೋದ. ಬಹಳ ನಿಷ್ಠುರವಾಗಿ ಇವನು ಕುದುರೆಯನ್ನು ಕೊಂದನು. ಅತಿಥಿಯನ್ನು ಇವನು ಹೊಡೆದ. ಈಶ್ವರನ ಪೂಜೆ ಮಾಡಿದ ನಿರ್ಮಾಲ್ಯವನ್ನು ಇವನು ಬೈದು ತಿರಸ್ಕರಿಸಿದ. ಇವನು ತನ್ನ ಯಜಮಾನ

CC-0. Jangamwadi Math Collection. Digitized by eGangotri

ಮಾಡಿದುಪಕಾರವಂ ನೆನೆಯನಿವನಕ್ಕರಿಂ
ಕೂಡಿದೆಡೆಗೆರಡುವಂ ಬಗೆದನಿವನಿರದೆ ಕೊಂ
ಡಾಡುತಿಹ ಬಡವ ಬಲ್ಲಿದರೊಳಗೆ ಬಲ್ಲಿದರ ಪಕ್ಷದಿಂ ನುಡಿದನಿವನು
ಬೇಡಿದರ್ಗಿಲ್ಲೆಂದು ಗರ್ಜಿಪನಿವಂ ಪರರ
ಕೇಡನೀಕ್ಷಿಸಿ ಸಂತಸಂಬಡುವನಿವನಿವಂ
ರೋಡಾಡಿ ಸತ್ಪುರುಷರಂ ನಗುವನಿವನೆಂದು ಚಿತ್ರಗುಪ್ತರ್ ಪೇಳ್ದರು ೩೩

ಪರಗೃಹದೊಳುಂಡುಂಡು ಜೀವಿಪನಿವಂ ತನ್ನ
ಗುರುವಲ್ಲದನ್ಯರಂ ಸೇವಿಪನಿವಂ ಪಥದೊ
ಳಿರದೆ ಕಲ್ಮುಳ್ಗಳಂ ಪರಪಿದನಿವಂ ವೇಶ್ಯೆಯೊಡನುಂಡನೀ ಖೂಳನು
ಇರದಲನ್ಯಾಹಾರಮಂ ಕೊಂಡನಿವನಿವಂ
ದುರುಳರೊಡನಾಡಿದಂ ದೂಷಕನಿವಂ ಪರರ
ಸಿರಿಗೆ ಕರುಬಿಸಿದಾತನೀತನೆಂದೋದಿದರ್ ಚಿತ್ರಗುಪ್ತರ್ ಮುದದೊಳು ೩೪

ಪರಮಶಿವಪೂಜಕರ ಕಂಡು ನಿಂದಿಪನಿವಂ
ಪರಮಪ್ರಸಾದಮುಮನೆಂಜಲೆಂಬುವನಿವಂ
ಪರಮಪಂಚಾಕ್ಷರಿಯ ಮಂತ್ರಮಂ ಜಪಿಪರಂ ಹಾಸ್ಯಂಗಳಾಡುವನಿವಂ
ಪರದೈವಕಂ ಮುಡುಹ ಮುಡಿಯನಿತ್ತವನಿವಂ
ಪರಧನವ ಪರಸತಿಯರಂ ಬಯಸುತಿಹನಿವಂ
ಪರಮಸತ್ಪುರುಷರಂ ಬಡಿದು ಬಾಧಿಸಿ ದಂಡಮಂ ಕೊಂಡನಿವನೆಂಬರು ೩೫

ನನ್ನೇ ಕೊಂದವನು. ಇವನು ತಿನ್ನಬಾರದುದನ್ನು ತಿಂದ ಎಂದು ಅವರು ವರದಿಮಾಡಿದರು. ೩೩. ಮಾಡಿದ ಉಪಕಾರವನ್ನು ಇವನು ಸ್ಮರಿಸುವುದಿಲ್ಲ. ಪ್ರೀತಿಯಿಂದ ಸೇರಿದ ಜಾಗದಲ್ಲಿ ಎರಡು ಬಗೆದವನಿವನು. ತನ್ನನ್ನು ಹೊಗಳುತ್ತಿರುವ ಬಡವ-ಸಾಹುಕಾರರಲ್ಲಿ ಇವನು ಸಾಹುಕಾರರ ಪಕ್ಷ ವಹಿಸಿದ. ಬೇಡಿದವರಿಗೆ ಇಲ್ಲವೆಂದು ಗದರುವನಿವನು. ಇವನು ಬೇರೆಯವರ ಕೇಡನ್ನು ಕಂಡು ಸಂತೋಷಿಸುವವನು. ಇವನು ಸತ್ಪುರುಷರನ್ನು ಅನಾದರದಿಂದ ಕಂಡು ನಗುವನು ಎಂದು ಚಿತ್ರಗುಪ್ತರು ಹೇಳಿದರು. ೩೪. ಬೇರೆ ಯವರ ಮನೆಗಳಲ್ಲಿ ತಿಂದು ತಿಂದು ಜೀವಿಸುವವನಿವನು. ತನ್ನ ಗುರುವನ್ನು ಬಿಟ್ಟು ಇತರರ ಸೇವೆ ಮಾಡುವವನು ಇವನು. ದಾರಿಯಲ್ಲಿ ಕಲ್ಲು-ಮುಳ್ಳುಗಳನ್ನು ಹರಡಿದವ ನಿವನು. ಈ ಖೂಳನು ವೇಶ್ಯೆಯೊಂದಿಗೆ ಊಟಮಾಡಿದ. ಬೇರೆಯವರ ಆಹಾರವನ್ನು ಇವನು ಕಸಿದುಕೊಂಡವನು. ಇವನು ದುರುಳರೊಡನೆ ಆಡಿದ ನಿಂದಕನಿವನು. ಬೇರೆ ಯವರ ಐಶ್ವರ್ಯವನ್ನು ನೋಡಿ ಹೊಟ್ಟೆಕಿಚ್ಚುಪಟ್ಟವನು ಇವನು ಎಂದು ಉತ್ಸಾಹ ದಿಂದ ಚಿತ್ರಗುಪ್ತರು ಹೇಳಿದರು. ೩೫. ಶ್ರೇಷ್ಠರಾದ ಶಿವಪೂಜಕರನ್ನು ನೋಡಿ ನಿಂದಿಸುವವನಿವನು. ಪವಿತ್ರವಾದ ಪ್ರಸಾದವನ್ನು ಎಂಜಲೆನ್ನುವನು ಇವನು. ಪರಮ ಪಂಚಾಕ್ಷರೀಮಂತ್ರವನ್ನು ಜಪಿಸುವವರನ್ನು ಹಾಸ್ಯಮಾಡುವವನು ಇವನು. ಮುಡು ಪಾಗಟ್ಟಿದ್ದ ಮುಡಿಯನ್ನು ಬೇರೆ ದೇವರಿಗೆ ಕೊಟ್ಟವನು ಈತ. ಇವನು ಬೇರೆಯವರ

CC-0. Jangamwadi Math Collection. Digitized by eGangotri

ಬೆಟ್ಟಕ್ಕೆ ಬೇಗೆಯಿಕ್ಕಿದನಿವಂ ಸಾಲಮಂ
ಕೊಟ್ಟುದಿಲ್ಲೆಂದು ಬಾಯಾರಿದನಿವಂ ಪರರು
ಬಿಟ್ಟ ಬಸವನ ಮೇಲೆ ಹೇರಿದನಿವಂ ಗೊಡ್ಡುಹಸುವ ಕಟ್ಟುತ್ತವನಿವಂ
ಬಟ್ಟೆಯಂ ಬಡಿದು ಬಾಳಿದವನಿವಂ ಪರರೊಲಿದು
ಕೊಟ್ಟ ಪುರಮಾನ್ಯಮಂ ಸೆಳೆದುಕೊಂಡವನಿವಂ
ಕೊಟ್ಟ ದಾನವ ನೆನೆದು ಮರುಗುತಿರ್ಪವನಿವಂ ಕೇಳೆಂದು ಪೇಳ್ದರಂದು ೩೬

ಪಸುವ ಕೊಂದವನಿವಂ ಶಿಶುವ ಕೊಂದವನಿವಂ
ಹುಸಿದು ಚಹಡಿಯ ಮಾತನುಸಿರ್ದು ಬಾಳ್ದವನಿವಂ
ಬಸವನಂ ಕೊಂದು ತಿಂದವನಿವಂ ಬಸವಿಯಂ ಕೊಂದ ಕಡುಪಾತಕನಿವಂ
ವ್ಯಸನಸಪ್ತಕದೆ ಮೆಯ್ಮರೆದಿಹನಿವಂ ಮುಂದೆ
ಯೆಸೆವಪ್ಪ ಮದದೆ ಮುಂಗಾಣದಿರುತಿರ್ಪನಿವ
ನಸಮಸಂಗ್ರಾಮದಲ್ಲೋಡಿ ಪುಲ್ಗಚ್ಚಿ ಪುತ್ತಡರ್ದನಂ ಕೊಂದನಿವನು ೩೭

ನಂಬಿದರಿಗೆರಡ ಬಗೆದವನಿವಂ ತನ್ನಯ ಕು
ಟುಂಬವಂ ಸಲಹಲಾರದೆ ಬಿಟ್ಟು ಪೋದನಿವ
ನುಂಬಾಗ ಬಂದತಿಥಿಗನ್ನವಿಕ್ಕದನಿವಂ ಸರ್ವಸಾಮಗ್ರಿವವು
ತುಂಬಿರ್ದ ಮನೆಗೆ ಕಿಚ್ಚಿಕ್ಕಿ ಸುಟ್ಟವನಿವಂ
ತಂಬುಲಕೆ ಕೆಯ್ಯಾಂತು ಪೆಸರಿಟ್ಟು ಕುಲಗೆಟ್ಟು
ತಾಂ ಬದುಕಿದವನಿವಂ ಮೃಗ ಪಕ್ಷಿ ಜಲಚರಾಳಿಗಳನುರೆ ಕೊಂದವನಿವಂ ೩೮

ಹಣವನ್ನು, ಪರಸ್ತ್ರೀಯನ್ನು ಬಯಸುವವನು. ಶ್ರೇಷ್ಠರಾದ ಸತ್ಪುರುಷರನ್ನು ಹೊಡೆದು ಹಿಂಸಿಸಿ ದಂಡಿಸಿದವನು ಇವನು ಎಂದರು. ೩೬. ಬೆಟ್ಟಕ್ಕೆ ಬೆಂಕಿಯಿಟ್ಟವನು ಇವನು. ಇವನು ಕೊಟ್ಟ ಸಾಲವನ್ನು ಇಲ್ಲವೆಂದ ಬಾಯ್ಬಡಿಕ. ಬೇರೆಯವರು ಬಿಟ್ಟ ಬಸವನ ಮೇಲೆ ಇವನು ಹೊರೆ ಹೊರಿಸಿದ. ಗೊಡ್ಡುಹಸುವನ್ನು ಕಟ್ಟಿ ಹೊಲವನ್ನು ಉತ್ತವನು ಇವನು. ದಾರಿಯಲ್ಲಿ ದರೋಡೆ ಮಾಡಿ ಬಾಳಿದವ ಇವನು. ಬೇರೆಯವನು ಪ್ರೀತಿಯಿಂದ ಕೊಟ್ಟ ಪುರಮಾನ್ಯವನ್ನು ಕಿತ್ತುಕೊಂಡವನು ಇವನು. ಮಾಡಿದ ದಾನವನ್ನೇ ಕುರಿತು ಗೋಳಾಡುತ್ತಿರುವವನು ಇವನು ಕೇಳು ಎಂದು ಹೇಳಿದರು. ೩೭. ಹಸುವನ್ನು ಕೊಂದವ ನೀತ. ಇವನು ಮಗುವನ್ನು ಕೊಂದವನು. ಸುಳ್ಳು ಹೇಳಿ ಚಾಡಿ ಹೇಳಿ ಬಾಳಿದವನಿವನು. ಬಸವನನ್ನು ಕೊಂದು ತಿಂದವನೀತ. ಬಸವಿಯನ್ನು ಕೊಂದ ಕಡುಪಾಪಿಯಿವನು. ಸಪ್ತ ವ್ಯಸನದಿಂದ ಮೈಮರೆತಿರುವವನು ಇವನು. ತುಂಬಿರುವ ಅಷ್ಟ-ಮದದಿಂದ ಮುಂಗಾಣ ದಿರುವವನು ಇವನು. ಭಯಂಕರ ಯುದ್ಧದಲ್ಲಿ ನಿಲ್ಲಲಾರದೆ ಹೆದರಿ ಓಡಿ ಹುಲ್ಲು ಕಚ್ಚಿ, ಹುತ್ತವನ್ನು ಹತ್ತಿದವನನ್ನು ಕೊಂದವನಿವನು. ೩೮. ನಂಬಿದವರಿಗೆ ಎರಡು ಬಗೆದವ ನಿವನು. ತನ್ನ ಸಂಸಾರವನ್ನು ಸಾಕಲಾರದೆ ಬಿಟ್ಟುಹೋದವ ಈತ. ಊಟ ಮಾಡುವಾಗ ಬಂದ ಅತಿಥಿಗೆ ಅನ್ನವನ್ನಿಡದವನು ಇವನು. ಸರ್ವಸಾಮಗ್ರಿಯು ತುಂಬಿದ್ದ ಮನೆಗೆ ಬೆಂಕಿಯಿಟ್ಟು ಸುಟ್ಟವನು ಇವನು. ಎಂಜಲಿಗೆ ಕೈಯೊಡ್ಡಿ ಅವರನ್ನು ಹೊಗಳಿ, ಕುಲಗೆಟ್ಟು

CC-0. Jangamwadi Math Collection. Digitized by eGangotri

ಗಂಡ ಮಾಡುವ ದಾನಕಡ್ಡಲಾಗುವಳಿವಳ್
ಕೊಂಡೆಯುಂಗೇಳ್ದು ಪತಿಯಂ ನಿಂದಿಸಿದಳಿವಳ್
ಕಂಡವರಕೂಡೆ ನಸುನಗುತಿರ್ಪಳಿವಳನ್ಯಪುರುಷರುಗಳಂ ಕಾಣುತೆ
ಕೊಂಡಾಡುತಿಹಳತ್ತೆ ಮಾವ ಮೈದುನರುಗಳ
ನಂಡಲೆದು ಬಯ್ದು ಕೆಲದಾಡುತಿರ್ಪವಳಿವಳ್
ಗಂಡನಿರೆ ಕಳವಿನಿಂದನ್ಯಪುರುಷರ ನೆರೆವಳಿವಳೆಂದು ಪೇಳ್ದರಂದು ೩೯

ಇವಳೆ ಭಿಕ್ಷಕ್ಕೆ ಬಂದತಿಥಿಯಂ ಪೊರಡಿಸಿದ
ಳಿವಳೆ ಪಂತಿಯಲಿ ಪ್ರಪಂಚುವಂ ಮಾಡಿದವ
ಳಿವಳೆಯರೆಯೂಟವಿಕ್ಕೆಬ್ಬಿಸಿದಳಿವಳೆ ಹುಸಿಯಂ ನುಡಿವಳಿವಳೆ ಕಳ್ಳೆ
ಇವಳೆ ಪತಿಯೊಡನೆ ನಿಷ್ಕಾರಣಂ ವಾದಿಸುವ
ಳಿವಳೆ ಬಂಧುಗಳೊಡನೆ ಕಲಹಂಗಳಂ ತೆಗೆವ
ಳಿವಳೆ ಗಂಡನ ತಲೆಯಮೇಲೆ ಕಲ್ಲಂ ಹಾಯ್ಕಿ ಕೊಂದ ಪಾತಕಿಯೆಂದರು ೪೦

ಎಂದು ಬಿನ್ನವಿಸುತಿಹ ಚಿತ್ರಗುಪ್ತರ ನುಡಿಯ
ನಂದು ಕೇಳುತ್ತೆ ಯಮರಾಜನತಿರೌದ್ರದಿಂ
ನಿಂದು ನಿಟ್ಟಿಸಲಾಗ ಕಣ್ಗಳೊಳ್ ಕಿಡಿಗೆದರಿ ಕೋಪದಿಂ ಗುಡುಗುಡಿಸುತೆ
ಮುಂದಿರ್ದ ದೂತರೊಳ್ ಪಾತಕದ್ರೋಹಿಗಳ
ಮುಂದಲೆಯ ಪಿಡಿದೆಳೆದುಕೊಂಡೊಯ್ದು ಕೈಕಾಲ
ಸಂದುಗಳ ಬಿಡಿಸಿ ಕೊರೆದಿರಿದರಿದು ಬಾಧಿಸುವುದೆಂದಾಗ ನೇಮಿಸಿದನು ೪೧

ತಾನು ಬದುಕಿದವನಿವನು. ಮೃಗ-ಪಕ್ಷಿ-ಜಲಚರಗಳ ಸಮೂಹವನ್ನು ಕೊಂದವನಿವನು. ೩೯. ಗಂಡನು ಮಾಡುವ ದಾನಕ್ಕೆ ಅಡ್ಡಿ ಮಾಡುವವಳಿವಳು. ಚಾಡಿಮಾತನ್ನು ಕೇಳಿ ಪತಿಯನ್ನು ನಿಂದಿಸಿದವಳಿವಳು. ಬೇರೆಯವರೊಡನೆ ನಸುನಗುತ್ತಿರುವವಳಿವಳು. ಇವಳು ಅನ್ಯಪುರುಷರನ್ನು ನೋಡಿ ಕೊಂಡಾಡುವವಳು. ಅತ್ತೆ, ಮಾವ, ಮೈದುನರುಗಳನ್ನು ಪೀಡಿಸಿ ಬೈದು ಭಂಗಿಸುತ್ತಿರವವಳು ಈಕೆ. ಗಂಡನಿದ್ದು ಕಳ್ಳತನದಿಂದ ಬೇರೆ ಪುರುಷ ರೊಡನೆ ಕೂಡುವವಳಿವಳು ಎಂದು ಹೇಳಿದರು. ೪೦. ಇವಳೇ ಭಿಕ್ಷಕ್ಕೆ ಬಂದ ಅತಿಥಿ ಯನ್ನು ಹೊರಡಿಸಿದವಳು. ಪಂಕ್ತಿಯಲ್ಲಿ ಭೇದ ಮಾಡಿದವಳು ಇವಳೆ. ಅರ್ಧ ಊಟ ಹಾಕಿ ಎಬ್ಬಿಸಿದವಳೀಕೆ. ಇವಳು ಸುಳ್ಳು ಹೇಳುವವಳು. ಇವಳು ಕಳ್ಳಿ, ಪತಿಯೊಡನೆ ಕಾರಣವಿಲ್ಲದೆ ವಾದಿಸುವಳು ಈಕೆ. ಇವಳೇ ಬಂಧುಗಳೊಡನೆ ಜಗಳ ತೆಗೆಯುವವಳು. ಗಂಡನ ತಲೆಯ ಮೇಲೆ ಕಲ್ಲನ್ನು ಎತ್ತಿಹಾಕಿ ಕೊಂದ ಪಾಪಿ ಈಕೆ. ೪೧. ಎಂದು ವಿಜ್ಞಾಪಿಸುತ್ತಿರುವ ಚಿತ್ರಗುಪ್ತರ ಮಾತನ್ನು ಕೇಳುತ್ತ ಯಮನು ಅತಿಭಯಂಕರನಾಗಿ ಕೋಪಿಸಿ ನಿಂತು ನಿಟ್ಟಿಸಲು, ಆಗ ಕಣ್ಣುಗಳಲ್ಲಿ ಕಿಡಿಗೆದರಿ ಕೋಪದಿಂದ ಗುಡುಗುಡಿಸಿ ಮುಂದೆ ಇದ್ದ ಸೇವಕರನ್ನು ಕುರಿತು ಪಾಪಮಾಡಿದ ದ್ರೋಹಿಗಳ ಮುಂದಲೆಗಳನ್ನು ಹಿಡಿದು ಎಳೆದುಕೊಂಡು ಹೋಗಿ ಕೈಕಾಲಿನ ಸಂದುಗಳನ್ನು ಬಿಡಿಸಿ, ಕೊರೆದು, ಇರಿದು,

CC-0. Jangamwadi Math Collection. Digitized by eGangotri

ಕಡಿ ಕೊಚ್ಚು ತಿವಿಯೆಲುವನುಡಿ ಬಸುರನುಗಿಯುಷ್ಟ
ಒಡಿ ಕಾಸು ಕೊರೆ ಕುಸುರಿದರಿ ಕೆತ್ತಿ ತಲೆಯನೊಡೆ
ಬಡಿ ಬಸಿದ ಶೂಲದಲಿ ಹಾಯ್ಕಿ ಚಿನಿಖಂಡವಂ ಕಡಿಕಡಿದು ದಿಗುಬಲಿಯನು
ಕೊಡಿ ಕೀಸಿ ಕಿವಿ ಮೂಗನರಿ ದುಂದುಭಿಯ ಕಟ್ಟಿ
ಸುಡಿ ಚಬುಕ ಚಾಟಿ ಚಮ್ಮಟಿಗೆಯಿಂದರಿಚರಿಚ
ಒಡಿದು ನಾನಾತೆರದೆ ಕೊಂದು ಬಾಧಿಸಿ ಭಂಗಬಡಿಸೆಂದು ನಿರವಿಸಿದನು ೪೨

ಅಸಿ ಪರಶು ತೋಮರ ಕಠಾರಿ ಕಕ್ಕಡೆ ಕುಂತ
ಮುಸಲ ಮುದ್ಗರ ಭಿಂಡಿವಾಳ ಗದೆ ಸಬಳ ಪ
ಟ್ಟಿಸ ಪಟ್ಟೆ ಖಡ್ಗ ಕರವಾಳ ಕರಗಸ ಶೂಲ ಶಕ್ತಿ ಸೆಲ್ಲೆಯ ಬಲ್ಲೆಯ
ಎಸೆವ ಪರಿಘವು ಲೌಡಿ ಚಕ್ರ ಬಾಣಾದಿ ರಾ
ಜಿಸುವ ಬತ್ತಿಸಾಯುಧಂಗಳಿಂದಿರಿದು ಮ
ನ್ನಿಸದೆ ಸಂಹರಿಸಿಯೆಕ್ಕಲನರಕದೊಳ್ ಹಾಯ್ಕು ಹೋಗೆಂದು ನೇಮಿಸಿದನು ೪೩

ಎಂದು ನೇಮಿಸಲಾಗ ದೂತರಾ ಪಾತಕರ
ಮುಂದಲೆಗಳಂ ಪಿಡಿದು ಕೊಂಡೊಯ್ದು ತಮ್ಮೊಡೆಯ
ನೆಂದುದಕೆ ಶತಸಹಸ್ರಾಧಿಕ್ಯಮಡಿಯಾಗಿ ನಾನಾಪ್ರಕಾರದಿಂದೆ
ಕೊಂದು ಕೊಲೆಯಾಡಿ ನಾಯಕನರಕದಲ್ಲಿರದೆ
ತಂದು ಹಾಯ್ಕುವರಾಗ ಪಾತಕರ್ ನರಕದ
ಲ್ಲಿಂದು ರವಿಯುಳ್ಳನ್ನ ಬರತೆಗೆಯದಲ್ಲಿರ್ಪರೆಂದು ಋಷಿ ಪೇಳ್ದನೆಂದು ೪೪

ಕತ್ತರಿಸಿ ಬಾಧೆಯುಂಟುಮಾಡುವಂತೆ ನೇಮಿಸಿದನು. ೪೨. ಕಡಿ, ಕೊಚ್ಚು, ತಿವಿ, ಎಲುಬನ್ನು ಮುರಿ, ಹೊಟ್ಟೆಯನ್ನು ಸೀಳು, ಒಡಿ, ಕಾಯಿಸು, ಕೊರಿ, ಚೂರು-ಚೂರಾಗಿ ಕತ್ತರಿಸು, ಕೆತ್ತಿ ತಲೆಯನ್ನು ಹೋಳುಮಾಡು, ಹೊಡಿ, ಚೂಪಾದ ಶೂಲದಲ್ಲಿ ಹಾಕಿ ಸಣ್ಣ ಸಣ್ಣ ಭಾಗವನ್ನು ಕಡಿಕಡಿದು ದಿಗ್ಬಲಿಯನ್ನು ಕೊಡಿ, ಕಿವಿ-ಮೂಗನ್ನು ಕೊರೆದು ಕತ್ತರಿಸು. ನಗಾರಿಯನ್ನು ಕಟ್ಟಿ ಸುಡಿ. ಚಬುಕ-ಚಾವುಟಿ, ಚಮ್ಮಟಿಗೆಯಿಂದ ಅರಚಿ ಕೊಳ್ಳುವಂತೆ ಹೊಡೆದು ನಾನಾರೀತಿಯಲ್ಲಿ ಹಿಂಸಿಸಿ ಕೊಂದು ಬಾಧೆಪಡಿಸಿ ಭಂಗಪಡಿಸು ಎಂದು ಆಜ್ಞಾಪಿಸಿದನು. ೪೩. ಕತ್ತಿ, ಕೊಡಲಿ, ಭರ್ಜಿ, ಕಠಾರಿ, ಕಕ್ಕಡೆ, ಈಟಿ, ಒನಕೆ, ಮುಳ್ಳುಗದೆ, ಭಿಂಡಿವಾಳ, ಗದೆ, ಸಬಳ, ಪಟ್ಟಿಸ, ಪಟ್ಟಿ, ಖಡ್ಗ, ಕರವಾಳ, ಗರಗಸ, ಶೂಲ, ಶಕ್ತ್ಯಾಯುಧ, ಶಲ್ಯ, ಭಲ್ಲೆ, ಪರಿಘ, ಲೌಡಿ, ಚಕ್ರ, ಬಾಣ ಇವೇ ಮೊದಲಾದ ಮೂವತ್ತೆರಡು ಆಯುಧಗಳಿಂದ ಇರಿದು ಕರುಣೆತೋರದೆ ಸಾಯಿಸಿ ಭಯಂಕರ ನರಕದಲ್ಲಿ ನೂಕಿ ಹೋಗಿ ಎಂದು ಆಜ್ಞಾಪಿಸಿದನು. ೪೪. ಹಾಗೆ ಆಜ್ಞಾಪಿಸಲು ಆಗ ದೂತರು ಆ ಪಾಪಿಗಳ ಮುಂದಲೆ ಹಿಡಿದುಕೊಂಡು ಎಳೆದುಕೊಂಡು ಹೋಗಿ ತಮ್ಮ ಯಜಮಾನನು ಹೇಳಿದುದಕ್ಕೆ ನೂರುಪಟ್ಟು, ಸಾವಿರಪಟ್ಟು ಅಧಿಕವಾಗಿ ನಾನಾರೀತಿ ಯಿಂದ ಕೊಂದು ಕೊಲೆಯಾಡಿ ಅಷ್ಟಕ್ಕೆ ಬಿಡದೆ ನಾಯಕ-ನರಕದಲ್ಲಿ ತಂದುಹಾಕುವರು. ಆ ಪಾಪಿಗಳು ಸೂರ್ಯ-ಚಂದ್ರರಿರುವವರೆವಿಗೂ ಚಲಿಸದೆ ನರಕದಲ್ಲಿಯೇ ಇರುತ್ತಾರೆಂದು

CC-0. Jangamwadi Math Collection. Digitized by eGangotri

ಎಂದಿಂತಧರ್ಮಿಗಳ ವೃತ್ತಾಂತಮಂ ಮುನಿಪ
ನಂದು ಪೇಳಲ್ ಕೇಳ್ದು ಸಾನಂದಮುನಿವರಂ
ನೊಂದು ಶಿವಶಿವ ಮಹಾದೇವ ಮುಂದರಿಯದಜ್ಞಾನದಿಂ ಮಾಡಲವರ
ಕೊಂದು ಬಾಧಿಸಬಹುದೆ ಯಮಧರ್ಮರಾಜ ತಾ
ನೆಂದೆನಿಸಿಕೊಳಲೇಕೆ ಶಿವಶಿವಾ ಪ್ರಾಣಿಗಳ್
ನೊಂದರಲ್ಲಾ ಮಹಾದೇವ ನೀವಿಂತಿವರ ಕೊಲಿಸಿ ನೋಡುವುದುಚಿತವೇ ೪೫

ಹರಹರಾ ಪ್ರಾಣಿಗಳನಿಂತು ಸಂಹರಿಸಿದೊಡೆ
ಪರಿಹರಿಪರಾರುಂಟು ಶಿವನಲ್ಲದಿನ್ನು ಶಂ
ಕರ ಸರ್ವಗತ ಸರ್ವಜೀವನದಯಾಪರನೆನಿಪ್ಪ ಬಿರುದೆಲ್ಲಿ ನಿಮಗೆ
ಕೆರಹುಗಾಲಿಂದೊದೆಯಲೊಲಿದೆ ನೀಂ ಬಿಲ್ಲಿನಿಂ
ಭರದಿಂದೆ ಪೊಯ್ಯೆ ಮೆಚ್ಚಿದೆ ಕಲ್ಲಿಲಿಡೆ ನಿಮ್ಮ
ಪುರಕೆ ಕೊಂಡೊಯ್ದೆಯಾ ಪರಿಯಲ್ಲಿ ಕರುಣವಿರಬೇಡವೇ ಸರ್ವರಲ್ಲಿ ೪೬

ಹರಹರ ನಮಶ್ಶಿವಾಯಯೆನುತ್ತೆ ಮನದೊಳತಿ
ಕರುಣದಿಂ ಪ್ರಾಣಿಗಳ್ ನೊಂದರಿನ್ನೀಗಲಾ
ತರಣಿಜನಪುರದ ವೈತರಣಿಯೊಳಗಿರ್ದ ಪಾತಕರನೆಲ್ಲರನು ಶಿವನ
ಪುರಕೆ ಕೊಂಡೊಯ್ವೆನೆಂದಾಗಲಾ ಸಾನಂದ
ವರಮುನಿಪನೇಳಲೆದ್ದುದು ಮುನಿಸ್ತೋಮಮಂ
ದಿರದೆ ನವರತ್ನಮಯ ಪುಷ್ಪಕವನೇರಿ ತಳರಿದನಧಿಕಸಂಭ್ರಮದೊಳು ೪೭

ಆ ದಿನ ಋಷಿ ಹೇಳಿದನು. ೪೫. ಎಂದು ಹೀಗೆ ಅಧರ್ಮಿಗಳ ಸಂಗತಿಯನ್ನು ಋಷಿಯು ಹೇಳಲು ಅದನ್ನು ಕೇಳಿ ಸಾನಂದಮುನಿಶ್ರೇಷ್ಠನು ನೊಂದು ಶಿವಶಿವಾ ! ಮಹಾದೇವ ! ಮುಂದಿನದನ್ನು ತಿಳಿಯದೆ ಅಜ್ಞಾನದಿಂದ ಪಾಪಮಾಡಿದರೆ ಅವರನ್ನು ಕೊಂದು ಹಿಂಸಿಸ ಬಹುದೆ ? ತಾನು ಯಮಧರ್ಮರಾಜನೆಂದು ಕರೆಸಿಕೊಳ್ಳುವುದೇತಕ್ಕೆ ? ಶಿವ ಶಿವಾ ಆ ಪ್ರಾಣಿಗಳು ನೊಂದರಲ್ಲಾ ! ಮಹಾದೇವ, ನೀನು ಈ ರೀತಿ ಇವರನ್ನು ಕೊಲ್ಲಿಸಿ ನೋಡುವುದು ಸರಿಯೆ? ೪೬. ಹರಹರಾ, ಪ್ರಾಣಿಗಳನ್ನು ಈ ರೀತಿ ಸಂಹರಿಸುವುದಾದರೆ ಶಿವನಲ್ಲದೆ ಇನ್ನಾರು ಪರಿಹರಿಸಬಲ್ಲರು ? ಶಂಕರ ಸರ್ವಗತ, ಸರ್ವಜೀವದಯಾಪರ ಎಂಬ ನಿಮ್ಮ ಬಿರುದೆಲ್ಲಿ ಹೋಯಿತು ? ಚಪ್ಪಲಿಯ ಕಾಲಿನಿಂದ ಒದೆಯಲು ನೀನು ಒಲಿದೆ. ಬಿಲ್ಲಿನಿಂದ ರಭಸವಾಗಿ ಹೊಡೆಯಲು ಮೆಚ್ಚಿದೆ. ಕಲ್ಲಿನಿಂದ ಬಾರಿಸಲು ನಿನ್ನ ಪಟ್ಟಣಕ್ಕೆ ಕೊಂಡೊಯ್ದೆ. ಆ ರೀತಿಯಾಗಿ ಎಲ್ಲರಲ್ಲಿಯೂ ಕರುಣವಿರಬೇಡವೆ ? ೪೭. ಹರಹರ, ನಮಶ್ಶಿವಾಯ ಎನ್ನುತ್ತ ಮನಸ್ಸಿನಲ್ಲಿ ಅತಿಕರುಣೆಯಿಂದ ಪ್ರಾಣಿಗಳು ನೊಂದರು. ಇನ್ನು ಈಗ ಆ ಯಮನ ಪಟ್ಟಣದ ವೈತರಣೀನದಿಯಲ್ಲಿ ಇರುವ ಪಾಪಿಗಳೆಲ್ಲರನ್ನೂ ಕೈಲಾಸಕ್ಕೆ ಕರೆದೊಯ್ಯುತ್ತೇನೆ ಎಂದು ಆಗ ಶ್ರೇಷ್ಠನಾದ ಸಾನಂದ ಮುನಿಯು ಏಳಲು ಮುನಿಸಮೂಹವೂ ಎದ್ದಿತು. ಅಂದು ತಡಮಾಡದೆ ನವರತ್ನ ಮಯವಾದ ಪುಷ್ಪಕವಿಮಾನವನ್ನು ಹತ್ತಿ ಅಧಿಕವಾದ ಸಂಭ್ರಮದಿಂದ ಸಾನಂದ

CC-0. Jangamwadi Math Collection. Digitized by eGangotri

ಭೇರೀ ಮೃದಂಗ ದುಂದುಭಿ ಶಂಖವಾದಿ ನಾ
ನಾರವದ ವಾದ್ಯನಿರ್ಘೋಷವಾ ದಿಕ್ತಟವ
ಪೂರೈಸಿ ಮುಂದೆ ಕೀರ್ತಿಸುವ ನರ್ತಕರಿಂ ಸುಗಾಯಕರ ಕೈವಾರದಿಂ
ಮಾರಾರಿಯಣುಗ ಸಾನಂದಮುನಿ ದುರಿತಸಂ
ಹಾರನಿದೆ ಬಂದನಘ ತೊಲಗೆಂಬ ಕಹಳಾಸು
ಭೂರಿನಾದಂಗಳಿಂ ಮುನಿಗಣಸಮೇತದಿಂದೆಮಪುರಕೆ ಬರುತಿರ್ದನು ೪೮

ದೂರದಿಂ ಬರೆ ಕಂಡು ಚರನೈದಿ ಶಮನೊಡನೆ
ಮಾರಾರಿಯಣುಗ ಸಾನಂದಮುನಿನಾಥನೆ
ಮ್ಮೂರಿಗಿದೆ ನಡೆತಪ್ಪನೆನೆ ಕೇಳ್ದು ತನ್ನ ನಗರಿಯನಲಂಕರಿಸವೇಳ್ದು
ಭೂರಿವಾದ್ಯಧ್ವನಿಯ ಗಡಣದಿಂ ಸಕಲ ಸುರ
ನಾರಿಯರ ಮಂಗಳಾರತಿ ಕಳಸ ಕನ್ನಡಿಯ
ಸೇರುವೆಯೊಳೆಮರಾಜನಧಿಕವೈಭವದಿಂದಿದಿರ್ಗೊಳಲ್ ಪೊರಮಟ್ಟನು ೪೯

ಅತ್ತಲಾ ಸಾನಂದಗಣನಾಥನಖಿಳಮುನಿ
ಪೋತ್ತಮರ ಗಡಣದಿಂ ಸಕಲಸಂಭ್ರಮದಿಂದೆ
ಚಿತ್ತಹರುಷದೊಳೆ ನಡೆತಂದು ಯಮಪುರದ ಬಾಗಿಲೊಳೆ ಪುಷ್ಪಕವಿಳಿದನು
ಬಿತ್ತರದ ಪಾವುಗೆಯ ಮೆಟ್ಟಿ ನಡೆತರುತಿರ
ಲ್ಕತ್ತಲತಿವಿಭವದಿಂ ಯಮರಾಜನೊಲಿದು ಬಾ
ಹತ್ತರನಿಯೋಗದವರಂ ಕೂಡಿಕೊಂಡು ಬರುತಿರ್ದನತಿಸಂತಸದೊಳು ೫೦

ಮುನಿಯು ಹೊರಟನು. ೪೮. ಭೇರಿ, ಮೃದಂಗ, ದುಂದುಭಿ, ಶಂಖ ಮೊದಲಾದ ನಾನಾ ವಾದ್ಯಗಳ ಶಬ್ದವು ದಿಗಂತವನ್ನು ಆವರಿಸಿ, ಮುಂದೆ ಸ್ತುತಿಸುವ ಪಾಠಕರಿಂದ, ನರ್ತಕರಿಂದ, ಗಾಯಕರ ಹೊಗಳಿಕೆಯಿಂದ ಶಿವನ ಮಗನಾದ ಸಾನಂದಮುನಿ, ಪಾಪ ಸಂಹಾರಕ ಇದೋ ಬಂದೆನು, ಪಾಪವೇ ತೊಲಗು ಎಂಬ ಕಹಳೆ ಮೊದಲಾದವುಗಳ ಭಾರಿ ಶಬ್ದದಿಂದ ಮುನಿಗಣಗಳ ಸಮೇತನಾಗಿ ಯಮನ ಪಟ್ಟಣಕ್ಕೆ ಬರುತ್ತಿದ್ದನು. ೪೯. ದೂರದಿಂದಲೇ ಬರುತ್ತಿರುವುದನ್ನು ನೋಡಿದ ಸೇವಕನು ಶಿವನ ಮಗನಾದ ಸಾನಂದಮುನಿಯು ನಮ್ಮೂರಿಗೆ ಇದೋ ಬರುತ್ತಿದ್ದಾನೆ ಎಂದು ಯಮನೊಡನೆ ಹೇಳಿದನು. ಅದನ್ನು ಕೇಳಿದ ಯಮನು ತನ್ನ ಪಟ್ಟಣವನ್ನು ಶೃಂಗರಿಸಲು ಹೇಳಿ ಭಯಂಕರ ವಾದ್ಯಗಳ ಧ್ವನಿಯ ಸಮೂಹದಿಂದ, ಎಲ್ಲ ದೇವತಾಸ್ತ್ರೀಯರ ಮಂಗಳಾರತಿ, ಕಳಶ, ಕನ್ನಡಿಯ ಸಮೇತನಾಗಿ ಅಧಿಕ ವೈಭವದಿಂದ ಎದುರುಗೊಳ್ಳಲು ಹೊರಟನು. ೫೦. ಅತ್ತಕಡೆ ಆ ಸಾನಂದಗಣನಾಥನು ಸಕಲ ಮುನಿಶ್ರೇಷ್ಠರ ಸಮೇತನಾಗಿ ಸಕಲ ಸಂಭ್ರಮದಿಂದ, ಮನಸ್ಸಿನಲ್ಲಿ ಸಂತೋಷ ತುಂಬಿ, ಹೊರಟುಬಂದು ಯಮನ ಪಟ್ಟಣದ ಬಾಗಿಲಿನಲ್ಲಿ ಪುಷ್ಪಕವನ್ನು ಇಳಿದನು. ದೊಡ್ಡದಾದ ಹಾವುಗೆಗಳನ್ನು ಮೆಟ್ಟಿ ನಡೆದು ಬರುತ್ತಿರಲು ಅತಿವೈಭವದಿಂದ ಯಮರಾಜನು ಒಲಿದು ಎಪ್ಪತ್ತೆರಡು ಜನ ಅಧಿಕಾರಿ

CC-0. Jangamwadi Math Collection. Digitized by eGangotri

ಕಂಡನೆಮರಾಜನಾ ಸಾನಂದಮುನಿವರನ
ದಂಡಿಯಂ ಪೊಸತೆನುತೆ ಕಾಣ್ಕೆಯುಂ ಮುಂದಿರಿಸಿ
ದಿಂಡುಗೆಡೆದೆದ್ದು ಮಗುಳೆರಗಲಾ ತರಣಿಜನ ನೋಡುತತಿಕರುಣದಿಂದೆ
ಮಂಡೆಯಂ ಪಿಡಿದೆತ್ತಿ ವಿನಯದಿಂದೊಲಿದು ಬೆಸ
ಗೊಂಡನೆಲೆ ಮಗನೆ ಕುಶಲವೆಯೆನಲ್ ಭಕ್ತಿಯಿಂ
ಕೊಂಡಾಡುತೆಲೆ ದೇವ ನೀವಿರಿಸಿದಂತಿಪ್ಪೆನೆನುತೆ ಮಗುಳಿಂತೆಂದನು ೫೧

ದೇವ ಚಿತ್ತೈಸೆನ್ನ ಮೇಲಣತಿಪ್ರೇಮದಿಂ
ಪಾವನವ ಮಾಡಲೈತಂದಿರಿಂ ನಾಂ ಮಾಳ್ಪ
ಸೇವೆಯೇನೆಂದು ಬಿನ್ನವಿಸಲಾ ಸಾನಂದಮುನಿನಾಥನೆಮನ ಮನವ
ಭಾವದಿಂ ತಿಳಿದಾಗಲೆಲೆ ಮಗನೆ ನೀಂ ಮಾಳ್ಪ
ಸೇವೆಯನೆ ನೋಡಬಂದೆವು ತೋರಬೇಕೆನಲ್
ತಾವರೆಯಸಖನ ಸುಕುಮಾರಕಂ ಕೆಯ್ಗೊಟ್ಟು ಕರೆತಂದನುತ್ಸವದೊಳು ೫೨

ಪರಮಋಷಿಗಣದೊಡನೆ ಸಾನಂದಮುನಿಪನಾ
ತರಣಿಜನ ಕೈಲಾಗಿನಿಂದೆ ಕಾಲ್ನಡೆಯೊಳುಂ
ಪುರವನೊಳಪೊಕ್ಕು ಬರುತಿರೆ ಮುಂದೆ ಬೀದಿ ಬೀದಿಗಳ ಸಿಂಗರವನೊಲಿದು
ಹರುಷದಿಂದೆಮನಿರದೆ ತೋರಿಸುತೆ ಬರಲಾಗ
ಕರುಣದಿಂ ಸಾನಂದಮುನಿವರಂ ನಮಗೆ ವೈ
ತರಣಿಗಳನೆಲ್ಲವಮಂ ತೋರಿಸೆನೆ ಜೀಯ ಚಿತ್ತೈಸೆನುತ್ತಿಂತೆಂದನು ೫೩

ಗಳೊಡಗೂಡಿ ಅತಿಯಾದ ಸಂತೋಷದಿಂದ ಬರುತ್ತಿದ್ದನು. ೫೧. ಸಾನಂದಮುನಿಯ ಶಕ್ತಿಪ್ರಭಾವ ಹೊಸದೆನ್ನುತ್ತ ಯಮರಾಜನು ಅವನಿಗೆ ಕಾಣಿಕೆಯನ್ನು ಮುಂದಿಟ್ಟು ದಿಂಡುಗೆಡೆದು ಸಾಷ್ಟಾಂಗ ನಮಸ್ಕಾರ ಮಾಡಲು ಆವನು ಯಮನನ್ನು ನೋಡುತ್ತ ಅತಿ ಕರುಣೆಯಿಂದ ತಲೆಯನ್ನು ಹಿಡಿದೆತ್ತಿ ವಿನಯದಿಂದ ಪ್ರಸನ್ನನಾಗಿ ಕೇಳಿದನು. ಎಲೆ ಮಗನೆ, ಕ್ಷೇಮವೇ ಎನ್ನಲು ಯಮನು ಭಕ್ತಿಯಿಂದ ಸ್ತುತಿಸುತ್ತ ಎಲೈ ದೇವ, ನೀವು ಇರಿಸಿದಂತೆ ನಾನು ಇದ್ದೇನೆ ಎಂದು ಮತ್ತೆ ಹೀಗೆಂದನು. ೫೨. ದೇವ ಕೇಳು, ನನ್ನ ಮೇಲಿನ ಅತಿಪ್ರೀತಿಯಿಂದ ನನ್ನನ್ನು ಪಾವನ ಮಾಡಲು ಬಂದಿರಿ. ನಾನು ನಿಮಗೇನು ಸೇವೆ ಮಾಡಲಿ ಎಂದು ವಿಜ್ಞಾಪಿಸಿಕೊಳ್ಳಲು ಸಾನಂದಮುನಿಯು ಯಮನ ಮನಸ್ಸಿನ ಅಭಿಪ್ರಾಯವನ್ನು ಭಾವಿಸಿ ತಿಳಿದುಕೊಂಡು ಎಲೆ ಮಗನೆ, ನೀನು ಮಾಡುತ್ತಿರುವ ಕೆಲಸ ವನ್ನೇ ನೋಡಲು ಬಂದೆವು, ಅದನ್ನು ತೋರಿಸು ಎಂದನು. ಯಮನು ಮುನಿಗೆ ಕೈ ಕೊಟ್ಟು ಸಂಭ್ರಮದಿಂದ ಕರೆತಂದನು. ೫೩. ಶ್ರೇಷ್ಠವಾದ ಮುನಿಸಮೂಹದೊಡನೆ ಸಾನಂದಮುನಿಯು ಆ ಯಮನ ಕೈಯಾಸರೆಯಿಂದ ಕಾಲುನಡಿಗೆಯಲ್ಲಿ ಪುರವನ್ನು ಪ್ರವೇಶಿಸಿ ಬರುತ್ತಿರಲು ಮುಂದೆ ಬೀದಿ ಬೀದಿಗಳ ಅಲಂಕಾರವನ್ನು ಒಲಿದು ಸಂತೋಷ ದಿಂದ ಯಮನು ತೋರಿಸುತ್ತಾ ಬಂದನು. ಆಗ ಕರುಣೆಯಿಂದ ಸಾನಂದಮುನಿ ಶ್ರೇಷ್ಠನು ನಮಗೆ ವೈತರಣಿಗಳೆಲ್ಲವನ್ನೂ ತೋರಿಸು ಎಂದನು. ಜೀಯ ಕೇಳು,

CC-0. Jangamwadi Math Collection. Digitized by eGangotri

ಎರಡನೆಯ ಮೃಡಮೂರ್ತಿ ಸಾನಂದತಂದೆ ವೈ
ತರಣಿಯುಂ ನೋಡಬಾರದು ನುಡಿಯಬಾರದಾ
ನರಕಿಗಳ ನೋಡಿದೊಡೆ ಪಾತಕಂ ಸಂಭವಿಪುದೆಂದಾತ ಬಿನ್ನವಿಸಲು
ಹರ ಹರ ನಮಶ್ಶಿವಾಯಾ ಮಹಾದೇವ ಶಂ
ಕರ ಸರ್ವಗತ ಸದಾಶಿವ ಶಿವಾಯೆನುತಲತಿ
ಕರುಣದಿಂದೆಮಧರ್ಮರಾಜನೆಮಗೀಗಲಾ ನರಕಿಗಳ ತೋರಬೇಕು ೫೪

ಎಂದು ನಿರವಿಸಲಾಗ ತರಣಿಜಂ ಮನದೊಳತಿ
ನೊಂದು ಬಾಹ್ಯೋಪಚಾರಂಗಳಿಂ ಸಾನಂದ
ತಂದೆ ಚಿತ್ತೈಸೆನುತೆ ಕರೆತಂದು ಸಕಲ ನಿರಯಂಗಳಿಹ ಬಲ್ಗೇರಿಯ
ಮುಂದೆ ನಿಂದಲ್ಲಿ ಕಡುಪಾತಕವ ಮಾಡಿದರ
ನುದಾಗ ತೋರಲೆಮದೂತರಾ ಪಾತಕರ
ಕೊಂದು ಕೊಲೆಯಾಡಿ ಮೂದಲಿಸಿ ಬಾಧಿಸುತಿರ್ಪ ದಂದುಗವನೇನೆಂಬೆನು ೫೫

ಗುಡುಗುಡಿಸುತಾಗ ಪಾತಕರ ಮುಂದಲೆಗಳಂ
ಪಿಡಿದುಕೊಂಡೆಳೆದೆಳೆದು ಕುಸಿಕಿರಿದು ಪೊಡವಿಗಂ
ಕೆಡಹಿ ಕೈಕಾಲ್ಗಳಿಂ ಸದೆಯೆ ಕಂಗೆಟ್ಟವರ್ ಬಾಯ್ಬಿಡುತೆ ಬಸವಳಿಯಲು
ಹೆಡಗುಡಿಯ ಕಟ್ಟಿ ಬಲ್ಸಾಟಿ ಚಮ್ಮಟಿಗೆಯಿಂ
ಪೊಡೆಯೆ ಮೊರೆಯಿಕ್ಕುತಿರೆ ಬಾಯ್ಗಳಂ ಕೆಯ್ಗಳಿಂ
ಬಡಿವುತುಂ ನಾನಾಪ್ರಕಾರದಿಂ ಕೊಲುತಿರ್ದರೇನೆಂಬೆನದ್ಭುತವನು ೫೬

ಎನ್ನುತ್ತಾ ಯಮನು ಹೀಗೆಂದನು. ೫೪. ಎರಡನೆ ಶಿವನೆ, ಸಾನಂದತಂದೆಯೆ, ವೈತರಣಿಯನ್ನು ನೋಡಬಾರದು, ಅದರ ವಿಷಯವನ್ನು ಮಾತನಾಡಲೂಬಾರದು. ಆ ನರಕಿಗಳನ್ನು ನೋಡಿದ್ದಾದರೆ ಪಾಪ ಸಂಭವಿಸುತ್ತದೆ, ಎಂದು ಅವನು ವಿಜ್ಞಾಪಿಸಿ ಕೊಳ್ಳಲು, ಹರಹರ, ನಮಃ ಶಿವಾಯ, ಮಹಾದೇವ, ಶಂಕರ, ಸರ್ವಗತ, ಸದಾಶಿವ, ಶಿವಾ ಎನ್ನುತ್ತ ಅತಿಕರುಣೆಯಿಂದ ಯಮಧರ್ಮರಾಜನು ನಮಗೆ ಈಗ ಆ ಪಾಪಿ ಗಳನ್ನು ತೋರಿಸಬೇಕು. ೫೫. ಎಂದು ಆಜ್ಞೆಮಾಡಲು ಯಮನು ಮನಸ್ಸಿನಲ್ಲಿ ಅತಿಯಾಗಿ ನೊಂದು, ಹೊರಗಿನ ಉಪಚಾರಗಳಿಂದ ಸಾನಂದತಂದೆಯೆ ಚಿತ್ತೈಸು ಎನ್ನುತ್ತಾ ಅವನನ್ನು ಕರೆತಂದು ಎಲ್ಲ ನರಕಗಳೂ ಇರುವ ದೊಡ್ಡ ಬೀದಿಯ ಮುಂದೆ ನಿಂತು ಅಲ್ಲಿ ಕಡುಪಾಪವನ್ನು ಮಾಡಿದವರನ್ನು ಆಗ ತೋರಿಸಿದನು. ಯಮದೂತರು ಆ ಪಾಪಿಗಳನ್ನು ಕೊಂದು, ಕೊಲೆ ಮಾಡಿ ಮೂದಲಿಸಿ ಬಾಧೆಯನ್ನು ಕೊಡುತ್ತಿದ್ದ ತೊಂದರೆಯನ್ನು ಏನೆಂದು ಹೇಳಲಿ ? ೫೬: ಆರ್ಭಟಿಸುತ್ತ ಆ ಪಾಪಿಗಳ ಮುಂದಲೆ ಗಳನ್ನು ಹಿಡಿದುಕೊಂಡು ಎಳೆದೆಳೆದು ಕೆಳಕ್ಕೆ ಕುಕ್ಕರಿಸಿ ನೆಲಕ್ಕೆ ಕೆಡವಿ, ಕೈಕಾಲ್ಗಳಿಂದ ಸದೆಬಡಿಯಲು ಅವರು ಕಂಗೆಟ್ಟು ಬಾಯ್ಬಿಡುತ್ತ ಶಕ್ತಿಗುಂದಲು ಹಿಂಗಟ್ಟು ಮುಂಗಟ್ಟು ಕಟ್ಟಿ ಬಲಶಾದ ಚಾವಟಿ, ಚಮ್ಮಟಿಗೆಗಳಿಂದ ಹೊಡೆಯುತ್ತಿದ್ದರು. ಅವರು ಮೊರೆಯಿಡುತ್ತಲಿರಲು ಅವರನ್ನು ಕೈಗಳಿಂದ ಬಾಯ್ಬಡಿಯುತ್ತ ನಾನಾರೀತಿಯಲ್ಲಿ

CC-0. Jangamwadi Math Collection. Digitized by eGangotri

ಸರಸರನೆ ಸೀಳ್ದು ನೆಲಕಪ್ಪಳಿಸಿ ಸಬಳದಿಂ
ದಿರಿದಿರಿದು ಪೊಡವಿಗಂ ಕೆಡೆಪಿ ಕರಗಸದಿಂದೆ
ಕೊರೆಕೊರೆದು ಸಂದುಗಳ ಬಿಡಿಸಿ ಬಿಸುಡುತ್ತಾಗ ಕೀಸಿ ಕಿವಿ ಮೂಗನರಿದು
ಜರೆಜರೆದು ಖಡ್ಗದಿಂ ಕತ್ತರಿಸಿ ಚರ್ಮವಂ
ಪರಿಪರಿದು ರಕ್ತಮಂ ಚೆಲ್ಲುತುಮೆಲುವುಗಳಂ
ಮುರಿಮುರಿದು ಮೂದಲಿಸಿ ದೂತರಾ ಪಾತಕರನರಿಚರಿಚೆ ಕೊಲುತಿರ್ದರು ೫೭

ಎಲೆ ತಂದೆಗಳಿರ ಕೊಲದಿರಿ ಕೊರೆಯದಿರಿ ಮಹಾ
ಬಳಲಿದೆವು ಬಾಡಿದೆವು ಬತ್ತಿದೆವು ಬಸವಳಿದೆ
ವೆಳೆಯದಿರಿ ತುಳಿಯದಿರಿ ಕೊಚ್ಚದಿರಿ ಚುಚ್ಚದಿರಿ ಕಾಸದಿರಿ ಕರಗಿಸದಿರಿ
ಕಳಲಿದೆವು ಕಂದಿದೆವು ಕುಂದಿದೆವು ಮುಂದುಗೆ
ಟ್ಟಳವಳಿದೆವೆಮ್ಮಯ್ಯ ದಮ್ಮಯ್ಯ ಸಾಕೆಮ್ಮ
ನುಳುಹಿಕೊಳಿ ದಾತರಿರ ತಾತರಿರ ದೂತರಿರಯೆಂದು ಮೊರೆಯಿಡೆ ಖಾತಿಯಿಂ ೫೮

ಸುರಗಿಯಿಂ ತಿವಿದು ಶೂಲದಿನಿರಿದು ಕತ್ತಿಯಿಂ
ದಿರದೆ ಕತ್ತರಿಸಿ ಕರಗಸೆದಿಂದೆ ಕೊರೆದು ಮು
ದ್ಗರದಿಂದೆ ಮೋದಿ ಮುಸಲದೆ ಬಡಿದು ಗದೆಗಳಿಂದಪ್ಪಳಿಸಿ ಕೈಕಾಲ್ಗಳ
ಕರವಾಳಿನಿಂದೆ ಖಂಡಿಸಿ ಖಡ್ಗದಿಂದೊಡನೆ
ಶಿರವನರಿದಿಟ್ಟಿಯಿಂದಿಟ್ಟು ನಾನಾಯುಧದ
ಪರಿಕರಗಳಿಂದೆ ಪಾತಕರ ಯಮನಾಳ್ಗಳತಿಭರವಸದೆ ಕೊಲುತಿರ್ದರು ೫೯

ಕೊಲ್ಲುತ್ತಿದ್ದರು. ಆ ಅದ್ಭುತವನ್ನು ಏನೆಂದು ಹೇಳಲಿ? ೫೭. ಸರಸರನೆ ಸೀಳಿ ನೆಲಕ್ಕೆ ಅಪ್ಪಳಿಸುತ್ತಿದ್ದರು. ಭರ್ಜಿಯಿಂದ ತಿವಿದು ತಿವಿದು ನೆಲಕ್ಕೆ ಕೆಡವುತ್ತಿದ್ದರು. ಗರಗಸದಿಂದ ಕೊಯ್ದು ಸಂದುಗಳನ್ನು ಬಿಡಿಸಿ ಬಿಸುಡುತ್ತಿದ್ದರು. ಜಗ್ಗಿ ಕಿವಿ ಮೂಗನ್ನು ಕತ್ತರಿಸುತ್ತಿದ್ದರು. ಮೂದಲಿಸಿ ಕತ್ತಿಯಿಂದ ಕತ್ತರಿಸಿ, ಚರ್ಮವನ್ನು ಸುಲಿದು, ರಕ್ತವನ್ನು ಚೆಲ್ಲುತ್ತಾ ಎಲುಬುಗಳನ್ನು ಮುರಿದು ಮುರಿದು ಹೀಯಾಳಿಸಿ ಯಮದೂತರು ಆ ಪಾಪಿಗಳನ್ನು ಅರಚಿಕೊಳ್ಳುವಂತೆ ಕೊಲ್ಲುತ್ತಿದ್ದರು. ೫೮. ಎಲೆ ತಂದೆಗಳಿರೇ ಕೊಲ್ಲದಿರಿ, ಕೊಯ್ಯಬೇಡಿ, ಬಹಳವಾಗಿ ಆಯಾಸಗೊಂಡಿದ್ದೇವೆ. ಬಾಡಿದ್ದೇವೆ, ಬತ್ತಿದ್ದೇವೆ, ಶಕ್ತಿಗುಂದಿದ್ದೇವೆ, ಎಳೆಯಬೇಡಿ, ತುಳಿಯಬೇಡಿ, ಕೊಚ್ಚಬೇಡಿ, ಚುಚ್ಚಬೇಡಿ, ಕಾಸಬೇಡಿ, ಕರಗಿಸಬೇಡಿ. ಎಚ್ಚರತಪ್ಪಿದೆವು, ಕಂದಿದೆವು, ಕುಂದಿದೆವು, ಮುಂಗಾಣದೆ ದುಃಖಗೊಂಡೆವು. ಅಪ್ಪಾ, ದಮ್ಮಯ್ಯ ಸಾಕು, ನಮ್ಮನ್ನು ಉಳಿಸಿಕೊಳ್ಳಿ, ಬೇಡಿದ್ದನ್ನು ಕೊಡುವವರೆ, ತಾತಂದಿರೆ, ದೂತರೆ ಎಂದು ಪ್ರಾರ್ಥಿಸಲು ಕೋಪದಿಂದ, ೫೯. ಕತ್ತಿಯಿಂದ ತಿವಿದು, ಶೂಲದಿಂದ ಇರಿದು, ಕತ್ತಿಯಿಂದ ಕತ್ತರಿಸಿ, ಗರಗಸದಿಂದ ಕೊಯ್ದು, ಮುದ್ಗರದಿಂದ ಬಾರಿಸಿ, ಒನಕೆಯಿಂದ ಬಡಿದು, ಗದೆಗಳಿಂದ ಅಪ್ಪಳಿಸಿ ಕೈಕಾಲು ಗಳನ್ನು ಕುಡುಗೋಲಿನಿಂದ ಕತ್ತರಿಸಿ, ಖಡ್ಗದಿಂದ ಕೂಡಲೇ ತಲೆಯನ್ನು. ಕಡಿದು, ಈಟಿಯಿಂದ ತಿವಿದು, ನಾನಾರೀತಿಯ ಆಯುಧಸಾಮಗ್ರಿಗಳಿಂದ ಯಮನ ಆಳುಗಳು ಪಾಪಿ

CC-0. Jangamwadi Math Collection. Digitized by eGangotri

ಕಡಿವ ಕೊಚ್ಚುವ ತೋಳ್ವ ಪೋಳ್ವ ಸೀಳ್ವರಿವ ನೆರೆ
ಪಿಡಿದು ನುಂಗುವ ಕವಿವ ತಿವಿವ ಕಿವಿಯೊಳಗೆ ಬೊ
ಬ್ಬಿಡುವ ಗುದ್ದುವ ಪಾಯ್ವ ಪೊಯ್ವ ಕೊಯ್ವೆಳೆವ ತುಳಿದೆಳೆವ ಮುಳಿದಾಗಸಕ್ಕೆ
ಇಡುವೆಸೆವ ತರಿವಿರಿವ ಕೊರೆವ ಬಿಸಿನೆತ್ತರಂ
ಕುಡಿವ ಕರ್ಚುವ ಸೀರ್ವ ಪಾರ್ವಮಿರ್ಾವರೆಗೊಲೆಯು
ಗಡಣಂಗಳಿಂ ನೋವ ಸಾವ ಬೇವನಿಬರಂ ಸಾನಂದಮುನಿ ಕಂಡನು ೬೦

ಈ ತೆರದೆ ಕೊಂದಿವರನೇನ ಮಾಡುವಿರೆಂದು
ಪ್ರೇತಪತಿಯಂ ಕೇಳೆ ದೇವ ಕೇಳೀ ಮಹಾ
ಪಾತಕವ ಮಾಡಿದವರಂ ಮಹಾನರಕಕುಂಡದಲಿ ಹಾಯ್ಕುವರೆಂದೆನೆ
ಈ ತೆರದ ಕುಂಡವದನೆಮಗೆ ತೋರೆನುತತಿ
ಪ್ರೀತಿಯಿಂ ಕೇಳೆ ಕೆಯ್ಗೊಟ್ಟು ಕರೆದೊಯ್ದು ಘನ
ಪಾತಕವ ಮಾಡಿದವರಿಪ್ಪ ಕುಂಡವ ತೋರೆ ಸಾನಂದಮುನಿ ಕಂಪಸು ೬೧

ಕಂಡು ಶಿವಶಿವ ಮಹಾದೇವಯೆಂದೆನುತೆ ಬೆಸ
ಗೊಂಡನಿಂತಪ್ಪ ಪಾತಕರಿಪ್ಪ ಘನತರದ
ಕುಂಡಂಗಳೆಷ್ಟೆಂದು ಕೇಳಲಿಪ್ಪತ್ತೆಂಟುಕೋಟಿ ನಾಯಕನರಕವು

ಗಳನ್ನು ರಭಸದಿಂದ ಕೊಲ್ಲುತ್ತಿದ್ದರು. ೬೦. ಕಡಿಯುವ, ಕೊಚ್ಚುವ, ಹೊಡೆದಟ್ಟುವ, ತುಂಡುಮಾಡುವ, ಸೀಳುವ, ಕತ್ತರಿಸುವ, ಚೆನ್ನಾಗಿ ಹಿಡಿದು ನುಂಗುವ, ಮುತ್ತುವ, ತಿವಿಯುವ, ಕಿವಿಯೊಳಗೆ ಆರ್ಭಟಿಸುವ, ಗುದ್ದುವ, ಮೇಲೆಬೀಳುವ, ಹೊಡೆಯುವ, ಕೊಯ್ಯುವ, ಎಳೆಯುವ, ತುಳಿದು ಎಳೆಯುವ, ಕೋಪದಿಂದ ಆಕಾಶಕ್ಕೆ ಎಸೆಯುವ, ಬೀಸಾಡುವ, ತರಿಯುವ, ಇರಿಯುವ, ಕೊರೆಯುವ, ಬಿಸಿರಕ್ತವನ್ನು ಕುಡಿಯುವ, ಕಚ್ಚುವ, ತೂರುವ, ಹಾರುವ, ಮಿತಿಮೀರಿದ ಕಠಿಣವಾದ ಕೊಲೆಗಳಿಂದ ನೋಯುವ, ಸಾಯುವ, ಬೇಯುವ ಅವರೆಲ್ಲರನ್ನೂ ಸಾನಂದಮುನಿಯು ನೋಡಿದನು. ೬೧. ಈ ರೀತಿ ಕೊಂದು ಇವರನ್ನು ಏನು ಮಾಡುತ್ತೀರಿ, ಎಂದು ಯಮನನ್ನು ಆ ಮುನಿಯು ಕೇಳಿದನು. ದೇವ ಕೇಳು, ಈ ಮಹಾಪಾಪ ಮಾಡಿದವರನ್ನು ದೊಡ್ಡ ನರಕಕುಂಡದಲ್ಲಿ ಹಾಕುವರು ಎಂದನು. ಆಗ ಈ ರೀತಿಯ ಕುಂಡವನ್ನು ನಮಗೆ ತೋರಿಸು ಎಂದು ಮುನಿಯು ಕೇಳಲು ಯಮನು ಅವರನ್ನು ಕೈಹಿಡಿದು ನಡೆಸಿಕೊಂಡು ಬಂದು ಅತಿ ಪಾಪ ಮಾಡಿದವರಿರುವ ಕುಂಡವನ್ನು ತೋರಿಸಲು ಸಾನಂದಮುನಿಯು ನೋಡಿದನು. ೬೨. ನೋಡಿ ಶಿವಶಿವಾ, ಮಹಾದೇವ ಎನ್ನುತ್ತ ಈ ರೀತಿ ಪಾಪಿಗಳಿರುವ ಘನತರವಾದ ಕುಂಡಗಳು ಎಷ್ಟಿವೆ ಎಂದು ಕೇಳಿದನು. ಇಪ್ಪತ್ತೆಂಟು ಕೋಟಿ ನಾಯಕ ನರಕವು,

CC-0. Jangamwadi Math Collection. Digitized by eGangotri

ತಂಡ ತಂಡದ ಮಂತ್ರಿ ಮನ್ನೆಯ ಸಪರಿವಾರ
ಕುಂಡಂಗಳಗಣಿತಂ ದೇವ ಕೇಳೆಂದು ಮಾ
ರ್ತಂಡಸುತನಾಗ ಬಿನ್ನವಿಸೆ ಸಾನಂದಮುನಿ ಕೇಳುತತಿವಿಸ್ಮಯದೊಳು ೬೨

ಶಿವಶಿವ ನಮಶ್ಶಿವಾಯಾಯೆಂದು ನುಡಿಯಲಾ
ಶಿವಮಂತ್ರದುಚ್ಚರಣೆ ನಿರಯದೊಳಗಿರ್ದವರ
ಕಿವಿಗಳೊಳ್ ಮಂತ್ರೋಪದೇಶವಂ ಮಾಡಿದಂದದೊಳಾಗ ಪಾಪಿಷ್ಠರ
ನಿವಹವೆಲ್ಲಂ ಕೇಳ್ದು ಗುರುವೀತನೆಮಗೆಂದು
ಶಿವ ಶಿವಾಯೆಂದೆನಲ್ ನಿರಯವೆಲ್ಲಂ ಬತ್ತೆ
ಶಿವ ಶಿವ ನಮಶ್ಶಿವಾಯಾಯೆನುತೆ ಸರ್ವರುಂ ನಿರಯದಿಂ ಪೊರಮಟ್ಟರು ೬೩

ಓರಂತೆ ಶಿವಮಂತ್ರಮಂ ಬಿಡದೆ ಜಪಿಸೆಂದು
ಸಾರಿದರ್ ಡಂಗುರವ ನಿರಯಂಗಳಿರುತಿರ್ಪ
ಕೇರಿಕೇರಿಯ ಸಂದುಸಂದು ಪಾತಾಳಾದಿ ನಿರಯಂಗಳೆಲ್ಲೆಡೆಯೊಳು
ಘೋರಪಾತಕವ ಮಾಡಿದರೆಲ್ಲರುಂ ಕೇಳು
ತಾರೈದು ಶಿವಶಿವ ನಮಶ್ಶಿವಾಯಾಯೆನುತೆ
ಸೇರಿದರ್ ಬಂದು ಸಾನಂದಮುನಿಯಂ ಜವನ ದೂತರಂ ದಂಡಿಸುತಲಿ ೬೪

ತಮತಮಗೆ ಸರ್ವರುಂ ಶಿವಮಂತ್ರಮಂ ಜಪಿಸು
ತೆಮದೂತರಂ ತಾವು ಕೊಂದು ಕೊಲೆಯಾಪುತುಂ
ಕ್ರಮದೊಳಾ ಚಿತ್ರಗುಪ್ತರುಗಳಂ ಜಡಿದು ಕಡಿತಂಗಳಂ ಸೆಳೆದು ಬಿಸುಟು

ಗುಂಪುಗುಂಪಾದ ಮಂತ್ರಿಶ್ರೇಷ್ಠ ಪುರುಷರು, ರಾಜಪರಿವಾರದ ಕುಂಡಗಳು ಲೆಕ್ಕ ವಿಲ್ಲದಷ್ಟು, ದೇವ ಕೇಳು ಎಂದು ಯಮನು ಆಗ ವಿಜ್ಞಾಪಿಸಿಕೊಳ್ಳಲು ಸಾನಂದ ಮುನಿಯು ಕೇಳಿ ಅತಿಯಾದ ವಿಸ್ಮಯದಿಂದ, ೬೩. ಶಿವ ಶಿವಾ ನಮಃ ಶಿವಾಯ ಎಂದು ಹೇಳಲು ಆ ಶಿವಮಂತ್ರದ ಉಚ್ಚಾರವು ನರಕದಲ್ಲಿದ್ದವರ ಕಿವಿಗಳಲ್ಲಿ ಮಂತ್ರೋಪದೇಶ ಮಾಡಿದಂತಾಯಿತು. ಆಗ ಪಾಪಿಗಳ ಸಮೂಹವೆಲ್ಲ ಅದನ್ನು ಕೇಳಿ ಈತನು ನಮಗೆ ಗುರು ಎಂದು ಶಿವ ಶಿವಾ ಎಂದು ಹೇಳಲು ಅವರ ನರಕವೆಲ್ಲ ಬತ್ತಿ ಹೋಯಿತು. ಶಿವ ಶಿವಾ ನಮಃ ಶಿವಾಯ ಎನ್ನುತ್ತ ಎಲ್ಲರೂ ನರಕದಿಂದ ಹೊರಟರು. ೬೪. ಒಂದೇಸಮನೆ ಶಿವಮಂತ್ರವನ್ನು ಬಿಡದೆ ಜಪಿಸಿ ಎಂದು ನರಕಗಳಿದ್ದ ಕೇರಿಕೇರಿ ಯಲ್ಲಿ ಸಂದು ಸಂದುಗಳಲ್ಲಿ, ಪಾತಾಳ ಮೊದಲಾದ ನರಕಗಳಲ್ಲೆಲ್ಲಾ ಡಂಗೂರವನ್ನು ಸಾರಿದರು. ಘೋರವಾದ ಪಾಪ ಮಾಡಿದವರೆಲ್ಲರೂ ಅದನ್ನು ಕೇಳಿ, ವಿಚಾರಿಸಿ, ಶಿವ ಶಿವಾ ನಮಃ ಶಿವಾಯ ಎನ್ನುತ್ತ ಯಮನ ದೂತರನ್ನು ದಂಡಿಸುತ್ತ ಬಂದು ಸಾನಂದಮುನಿಯೊಡಗೂಡಿದರು. ೬೫. ತಾವು ತಾವು ಎಲ್ಲರೂ ಶಿವಮಂತ್ರವನ್ನು ಜಪಿಸುತ್ತ, ಯಮದೂತರನ್ನು ತಾವೇ ಕೊಂದು ಕೊಲೆಮಾಡುತ್ತ, ಕ್ರಮವಾಗಿ ಆ ಚಿತ್ರಗುಪ್ತರನ್ನು ಹೊಡೆದು ಕಡತಗಳನ್ನು ಕಿತ್ತುಕೊಂಡು ಬಿಸಾಡಿ ಒಳ್ಳೆಯ ಮನಸ್ಸಿನಿಂದ

CC-0. Jangamwadi Math Collection. Digitized by eGangotri

ಐವತ್ತೇಳನೆಯ ಸಂಧಿ

ಸೂಚನೆ : ವೀರಶೈವಾಚಾರಸಂಪನ್ನರಾದರ ಸು
ಚಾರಿತ್ರಮಂ ಚೆನ್ನಬಸವರಾಜಂ ಸವಿ
ಸ್ತಾರದಿಂದಾಗಲಾ ಸಿದ್ಧರಾಮೇಶಂಗೆ ಕರುಣದಿಂ ನಿರವಿಸಿದನು

ನಿರುಪಮಂ ನಿಷ್ಕಾಮಿ ನಿಷ್ಕಲಂ ನಿರ್ಮಲಂ
ನಿರುಪಾಧಿಕಂ ನಿಃಸ್ಪೃಹಂ ನಿರ್ವಿಕಾರಗುಣ
ಭರಿತಂ ನಿರಾಭಾರಿ ನಿಶ್ಚಿಂತಮತಿನಿರ್ವಿಕಲ್ಪಂ ನಿರಾಕಾರನು
ನಿರಪೇಕ್ಷಕಂ ನಿಷ್ಕಳಂಕಂ ನಿರಾಮಯಂ
ನಿರತಿಶಯಭರಿತಂ ನಿರಾಲಂಬಕಂ ನಿರಾ
ವರಣಂ ನಿರಂಜನಂ ಪಂಪಾವಿರೂಪಾಕ್ಷ ಪಾಲಿಸುವುದಖಿಳಜನರ ೧

ಆಲಿಸೈ ರಾಮ ಶೈವಾಚರಣೆಯಿಂದವರ್
ಕೈಲಾಸಮಂ ಪೊಕ್ಕರೆನೆ ಶೈವನಿಷ್ಠೆಯಿಂ
ಕೈಲಾಸಮಂ ಪೊಗುವ ಸಾಮರ್ಥ್ಯಮಿರಲಿಷ್ಟಲಿಂಗಮಿನ್ನೇತಕೆನಲು
ಕೈಲಾಸಪುರದ ಬಾಗಿಲೊಳವರ್ಗೆ ಲಿಂಗಮಂ
ಶೈಲಾದಿ ಕಟ್ಟಿ ಮಿಗೆ ವೀರಶೈವಂ ಮಾಡಿ
ಲೀಲೆಯಿಂ ಪೊಗಿಸುವರೆನಲ್ಕವರ ಕಥೆಯನೆನಗುಸಿರೆನಲ್ಕಿಂತೆಂದನು ೨

ಸೂಚನೆ : ವೀರಶೈವಾಚಾರಸಂಪನ್ನರಾದವರ ಶ್ರೇಷ್ಠವಾದ ಚರಿತ್ರೆಯನ್ನು ಚೆನ್ನಬಸವಣ್ಣನು ಸಿದ್ಧರಾಮಣ್ಣನಿಗೆ ಕರುಣೆಯಿಂದ ವಿಸ್ತಾರವಾಗಿ ಹೇಳಿದನು. ೧. ಉಪಮಾತೀತನು, ನಿಷ್ಕಾಮಿ, ನಿಷ್ಕಲ, ನಿರ್ಮಲ, ತೊಂದರೆಯಿಲ್ಲದವನು, ನಿಃಸ್ಪೃಹ, ನಿರ್ವಿಕಾರಿ, ಯಾರಿಗೂ ಋಣಿಯಿಲ್ಲದವನು, ನಿಶ್ಚಿಂತೆಯಾದ ಮನಸ್ಸುಳ್ಳವನು, ವಿಕಲ್ಪವಿಲ್ಲದ ಬುದ್ಧಿಯುವ, ನಿರಾಕಾರ, ನಿರಪೇಕ್ಷ, ನಿಷ್ಕಳಂಕ, ನಿರಾಮಯ. ನಿರತಿಶಯಭರಿತನಾದವನು, ನಿರಾಲಂಬ, ನಿರಾವರಣ, ನಿರಂಜನನಾದ ಪಂಪಾವಿರೂಪಾಕ್ಷ ಸಕಲ ಜನರನ್ನೂ ಕಾಪಾಡು. ೨. ಕೇಳಯ್ಯ ಸಿದ್ಧರಾಮ, ಶೈವಾಚರಣೆಯಿಂದ ಅವರು ಕೈಲಾಸವನ್ನು ಹೊಕ್ಕರು ಎಂದು ಹೇಳಲು ಹಾಗಾದರೆ ಶೈವನಿಷ್ಠೆಯಿಂದ ಕೈಲಾಸಕ್ಕೆ ಹೋಗುವ ಸಾಮರ್ಥ್ಯವಿರಲು ಇನ್ನು ಇಷ್ಟಲಿಂಗವೇಕೆ ಎಂದು ಸಿದ್ಧರಾಮನು ಕೇಳಲು ಕೈಲಾಸಪಟ್ಟಣದ ಬಾಗಿಲಲ್ಲಿ ಅವರಿಗೆ ನಂದಿ ಮುಂತಾದವರು ಲಿಂಗವನ್ನು ಕಟ್ಟಿ ವೀರಶೈವರನ್ನಾಗಿ ಮಾಡಿ ಸಂತೋಷದಿಂದ ಹೊಗಿಸುತ್ತಾರೆಂದು ಹೇಳಲು ಅವರ ಕಥೆ

CC-0. Jangamwadi Math Collection. Digitized by eGangotri

ನೀತಿವಿದ ಸಾಮವೇದಿಗಳೆನಿಪ ಮಹಿಮಂಗೆ
ಜಾತಿಸೂತಕವಿಲ್ಲ ನಿಂಬವ್ವೆಯೆಂಬವಳ್ಗೆ
ಪ್ರೇಮಸೂತಕವಿಲ್ಲ ನಿಂಬಿಗಂ ನಿತ್ಯಸೂತಕವಿಲ್ಲ ಸಿಂಧುಮುಂಗೆ
ಜಾತಸೂತಕವಿಲ್ಲ ಬಿಬ್ಬಿಬಾಚಯ್ಯನೆಂ
ಬಾತಂಗೆ ತಿಳಿಯಲೆಂಜಲ ಸೂತಕಮದಿಲ್ಲ
ಭೂತಳಾಧಿಪ ಕಾಚಿರಾಜನುಂ ಪಾದೋದಕದ ಮಹಾತ್ಮ್ಯೆಯ ಪುರುಷನು ೩

ವೀರಶಂಕರದಾಸನುರೆ ಕನಸಿನೊಳ್ ಭವಿಯ
ಸೇರಿ ಮುಟ್ಟಿದೆನೆಂದು ಕಾದ ಕೊಪ್ಪರಿಗೆಗೆ ಶ
ರೀರಮಂ ಕೊಟ್ಟ ವಿಗೆ ಕರುಳಕೇತಯ್ಯನುಂ ಲಿಂಗಕರ್ಪಿಸದೆ ಮರೆಡು
ಕ್ಷೀರಮಂ ಕೊಂಡೆನೆಂದುರೆ ಕರುಳ್ಗಳಂ ತೆಗೆದ
ಧೀರಶೀಲದ ಪರ್ವತಂ ತಾಯ್ನುಡಿಯೆ ಕರುಳ
ತೋರಣಂಗಟ್ಟಿದಂ ಕೇಳೆಂದು ಸಿದ್ಧರಾಮೇಶಂಗೆ ನಿರವಿಸಿದನು ೪

ಗಂಡಗತ್ತರಿಯ ನಾಚಂ ಶಿವನ ನಿಂದಿಸಲ್
ತುಂಡುತುಂಡಾಗಿ ಕಡಿಯಲ್ಕೆ ಪರಸಮಯದವರ
ರಂಡಲೆದು ಮುತ್ತೆ ತಲೆಯುಂ ಗಂಡಗತ್ತರಿಗೆ ಕೊಡೆ ರಾಚಮಲ್ಲಯ್ಯನು
ಕೊಂಡು ತಾಳವನೊತ್ತೆ ಚಿಕರಾಚಮಲ್ಲನು
ದ್ದಂಡದಿಂ ಪಾಡಲಿಪ್ಪತ್ತೈದು ಲೀಲೆಯಿಂ
ಮುಂಡಮುರೆ ಕುಣಿದಾಡಿ ಮತ್ತೆ ಶಿರಮಂ ಪಡೆದುದೇನೆಂಬೆನಚ್ಚರಿಯನು ೫

ಗಳನ್ನು ನನಗೆ ಹೇಳು ಎಂದು ಸಿದ್ಧರಾಮನು ಕೇಳಿದನು. ೩. ನೀತಿವಿದನಾದ ಸಾಮವೇದಿಗಳೆನಿಸುವ ಮಹಿಮನಿಗೆ ಜಾತಿಯ ಸೂತಕವಿಲ್ಲ, ನಿಂಬವ್ವೆಯೆನ್ನುವವಳಿಗೆ ಪ್ರೇಮದ ಸೂತಕವಿಲ್ಲ, ನಿಂಬಕ್ಕನಿಗೆ ನಿತ್ಯ ಸೂತಕವಿಲ್ಲ, ಸಿಂಧುಮನಿಗೆ ಜನನಸೂತಕವಿಲ್ಲ. ಬಿಬ್ಬಿ ಬಾಚಯ್ಯನೆಂಬುವವನಿಗೆ ಎಂಜಲಿನ ಸೂತಕ ಇಲ್ಲ. ದೊರೆ ಕಾಶಿರಾಜನು ಪಾದೋದಕದ ಮಹಾತ್ಮೆಯುಳ್ಳವನು. ೪. ವೀರಶಂಕರದಾಸನು ಕನಸಿನಲ್ಲಿ ಭವಿಯನ್ನು ಸೇರಿ ಮುಟ್ಟಿದೆನೆಂದು ಕಾದ ಕೊಪ್ಪರಿಗೆಯಲ್ಲಿ ಹಾರಿದ. ಕರುಳಕೇತಯ್ಯನು ಲಿಂಗಕ್ಕೆ ಅರ್ಪಿಸದೆ ಮರೆತು ಹಾಲನ್ನು ಕುಡಿದೆನೆಂದು ಕರುಳನ್ನು ಬಗೆದುಕೊಂಡನು. ಧೀರ ಚಾರಿತ್ರ್ಯವುಳ್ಳ ಪರ್ವತನೆನ್ನುವವನು ತಾಯಿಯ ಮಾತಿನಂತೆ ಕರುಳಿನ ತೋರಣ ಕಟ್ಟಿದ, ಕೇಳು ಎಂದು ಸಿದ್ಧರಾಮನಿಗೆ ನಿರೂಪಿಸಿದನು. ೫. ಗಂಡಗತ್ತರಿಯ ನಾಚಯ್ಯನು ಶಿವನಿಂದಕನನ್ನೂ ತುಂಡುತುಂಡಾಗಿ ಕತ್ತರಿಸಿದನು. ಆಗ ಅನ್ಯಜಾತಿಯವರು ಮೇಲೆ ಬಿದ್ದು ಮುತ್ತಲು ತನ್ನ ತಲೆಯನ್ನೂ ಗಂಡಗತ್ತರಿಗೆ ಕೊಟ್ಟು ಕತ್ತರಿಸಿಕೊಂಡನು. ರಾಚಮಲ್ಲಯ್ಯ ತಾಳ ಹಾಕಲು, ಚಿಕರಾಚಮಲ್ಲನು ಗಟ್ಟಿಯಾಗಿ ಹಾಡಲು ಇಪ್ಪತ್ತೈದು ಲೀಲೆಯಿಂದ ಮುಂಡವು ಚೆನ್ನಾಗಿ ಕುಣಿದಾಡಿ ಮತ್ತೆ ತಲೆಯನ್ನು ಕೂಡಿಕೊಂಡಿತು.

CC-0. Jangamwadi Math Collection. Digitized by eGangotri

ಸುಮನದಿಂ ಸಾನಂದಮುನಿಗೆರಗಲೆಲ್ಲರಂ
ವಿಮಲಪುಷ್ಪಕದೊಳಿಂಬಿಟ್ಟು ಮುನಿಗಣಸಹಿತ
ರಮಣೀಯಮಾದ ಕೈಲಾಸಕೈದಿದನಖಿಳವಾದ್ಯನಿರ್ಘೋಷದಿಂದೆ ೬೫

ಇತ್ತಲೆಮರಾಜನತಿಖೇದದಿಂ ತನ್ನ ಬಾ
ಹತ್ತವಿನಿಯೋಗದವರಂ ಕೂಡಿಕೊಂಡು ತಲೆ
ಗುತ್ತಿ ಚಿಂತಿಸುತಿರಲ್ ಚಿತ್ರಗುಪ್ತರ್ ನೋಡಿ ಚಿಂತೆಯೇಕಿನ್ನು ಜೀಯ
ಚಿತ್ತಜಹರಂಗೆ ಬಿನ್ನವಿಸಿ ಬಳಿಕಾತಂಗೆ
ಮತ್ತೆ ತಕ್ಕುದನೆಸಗಬೇಕೆಂದು ಪೇಳಲದ
ಚಿತ್ತಕ್ಕೆ ಸರಿತಂದುಕೊಂಡು ಬಳಿಕೆಮನೆದ್ದನಖಿಳರಂ ಕೂಡಿಕೊಂಡು ೬೬

ಬಂದನನಿಬರ್ಗೂಡಿ ಶಿವಪುರದ ಬಾಗಿಲ್ಗೆ
ನಂದೀಶನಂ ಸಮಯವರಿದು ತಾನೊಳಯಿಕ್ಕೈ
ತಂದೀಶನಂ ಮಹಾಸಭೆಯೊಳಗೆ ಕಂಡು ಬೇಗದಿ ಬೀಗಮುದ್ರೆಗಳನು
ಮುಂದಿರಿಸಿ ನಮಿಸಿ ಬಿನ್ನವಿಸಿದಂ ದೇವ ಸಾ
ನಂದಮುನಿ ಮಾಡಿದುದ ನೋಡಿದಿರೆ ಸಾಕೆನಗ
ದೆಂದೆಂದಿಗಿಂತಪ್ಪ ಮಣಿಹವೇ ಸಾಕು ಸಾಕೆಂದೆರಗಿ ಬಿನ್ನವಿಸಿದಂ ೬೭

ಎಂದಿಂತು ಬಿನ್ನವಿಸಲೀಶ್ವರಂ ನಸುನಗುತೆ
ಮುಂದರಿಯದಿಂದು ಮಾಡಿದನಿನ್ನು ಮನದೊಳತಿ
ನೊಂದುಕೊಳಬೇಡೆಂದು ಸಂತೈಸಿ ಬೀಗಮುದ್ರೆಯನಿತ್ತು ಸಲೆ ಮನ್ನಿಸಿ

ಸಾನಂದಮುನಿಗೆ ನಮಸ್ಕರಿಸಿದರು. ಎಲ್ಲರನ್ನೂ ಮನೋಹರವಾದ ಪುಷ್ಪಕವಿಮಾನ ದಲ್ಲಿ ಕೂಡಿಸಿಕೊಂಡು ಎಲ್ಲ ವಾದ್ಯಗಳ ಧ್ವನಿಯೊಡನೆ ಮುನಿಗಣ ಸಮೇತ ರಮಣೀಯ ವಾದ ಕೈಲಾಸಕ್ಕೆ ಬಂದನು. ೬೬. ಇತ್ತಕಡೆ ಯಮರಾಜನು ಅತಿಯಾದ ವಿಷಾದದಿಂದ ತನ್ನ ಎಪ್ಪತ್ತೆರಡು ಮಂದಿ ಅಧಿಕಾರಿಗಳನ್ನು ಕೂಡಿಕೊಂಡು ತಲೆ ತಗ್ಗಿಸಿ ಚಿಂತಿಸುತ್ತಿರಲು ಚಿತ್ರಗುಪ್ತರು ನೋಡಿ ಇನ್ನು ಏಕೆ ಚಿಂತೆ, ದೇವ ? ಈಶ್ವರನಿಗೆ ವಿಜ್ಞಾಪಿಸಿಕೊಂಡು ಅನಂತರ ಅವನಿಗೆ ತಕ್ಕದ್ದನ್ನು ಮಾಡಬೇಕೆಂದು ಹೇಳಲು ಸರಿ ಎಂದು ಅದನ್ನು ಮನಸ್ಸಿಗೆ ತಂದುಕೊಂಡು ಅನಂತರ ಯಮನು ಎದ್ದು ಎಲ್ಲರನ್ನೂ ಕೂಡಿಕೊಂಡು ೬೭. ಅಷ್ಟು ಜನರೊಡಗೂಡಿ ಕೈಲಾಸದ ಬಾಗಿಲಿಗೆ ಬಂದನು. ನಂದೀಶನನ್ನು ಶಿವನ ಸಮಯ ಕೇಳಿ ತಿಳಿದುಕೊಂಡು ತಾನು ಒಳಕ್ಕೆ ಬಂದು ಮಹಾಸಭೆಯಲ್ಲಿ ಈಶ್ವರನನ್ನು ನೋಡಿ ಬೇಗ ಬೀಗಮುದ್ರೆಗಳನ್ನು ಮುಂದಿಟ್ಟು ನಮಸ್ಕರಿಸಿ ವಿಜ್ಞಾಪಿಸಿಕೊಂಡನು. ದೇವ, ಸಾನಂದಮುನಿ ಮಾಡಿದ್ದನ್ನು ನೋಡಿದಿರಾ ? ಸಾಕು ನಮಗೆ ಎಂದೆಂದಿಗೂ ಇಂತಹ ಕೆಲಸವೇ ಸಾಕು ಸಾಕು ಎಂದು ನಮಸ್ಕರಿಸಿ ವಿನಂತಿಸಿದನು. ೬೮. ಎಂದು ಈ ರೀತಿ ಬಿನ್ನವಿಸಲು ಈಶ್ವರನು ನಸುನಗುತ್ತ ಅವನು ಮುಂದಾಲೋಚನೆಯಿಲ್ಲದೆ ಈ ದಿನ ಮಾಡಿದ. ಇನ್ನು ಮನಸ್ಸಿನಲ್ಲಿ ಅತಿಯಾಗಿ ನೊಂದುಕೊಳ್ಳಬೇಡ ಎಂದು ಸಮಾಧಾನ ಪಡಿಸಿ ಬೀಗಮುದ್ರೆಯನ್ನು ಹಿಂದಿರುಗಿ ಕೊಟ್ಟು ಸೂಕ್ತವಾಗಿ ಸನ್ಮಾನಿಸಿ ಚಂದ್ರ

CC-0. Jangamwadi Math Collection. Digitized by eGangotri

ಇಂದುಧರನೊಲಿದೆಮನ ಕಳುಹಿ ಬಳಿಕತ್ತ ಸಾ
ನಂದಂಗೆ ಗಣಪದವನಿತ್ತಾತನಾಗ ಕರೆ
ತಂದರ್ಗೆ ಸಾಲೋಕ್ಯಪದವಿಯಂ ಕೊಟ್ಟನೆಲೆ ರಾಮೇಶ ಕೇಳೆಂದನು ೬೮

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತವಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖವಂ ಸಕಲಭೋಗವಮ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ ೬೯

ಐವತ್ತಾರನೆಯ ಸಂಧಿ ಸಂಪೂರ್ಣ

ಶೇಖರನು ಪ್ರೀತಿಯಿಂದ ಯಮನನ್ನು ಅವನ ಲೋಕಕ್ಕೆ ಕಳುಹಿಸಿದನು. ಅನಂತರ ಇತ್ತಕಡೆ ಸಾನಂದನಿಗೆ ಗಣಪದವಿಯನ್ನು ಕೊಟ್ಟು ಆತನು ಕರೆತಂದಿದ್ದವರಿಗೆಲ್ಲ ಸಾಲೋಕ್ಯಪದವಿಯನ್ನು ಕೊಟ್ಟನು, ಎಲೈ ಸಿದ್ಧರಾಮೇಶ, ಕೇಳು ಎಂದನು.
೬೯. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವಪುರಾಣವನ್ನು ಸಂತೋಷದಿಂದ ಪ್ರತಿ ಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದವರಿಗೆ, ವಾಚನಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ ಎಲ್ಲ ಭೋಗಗಳನ್ನೂ ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ಐವತ್ತಾರನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ಐವತ್ತೇಳನೆಯ ಸಂಧಿ

ಸೂಚನೆ : ವೀರಶೈವಾಚಾರಸಂಪನ್ನರಾದರ ಸು
ಚಾರಿತ್ರಮಂ ಚೆನ್ನಬಸವರಾಜಂ ಸವಿ
ಸ್ತಾರದಿಂದಾಗಲಾ ಸಿದ್ಧರಾಮೇಶಂಗೆ ಕರುಣದಿಂ ನಿರವಿಸಿದನು

ನಿರುಪಮಂ ನಿಷ್ಕಾಮಿ ನಿಶ್ಚಲಂ ನಿರ್ಮಲಂ
ನಿರುಪಾಧಿಕಂ ನಿಃಸ್ಪೃಹಂ ನಿರ್ವಿಕಾರಗುಣ
ಭರಿತಂ ನಿರಾಭಾರಿ ನಿಶ್ಚಿಂತಮತಿನಿರ್ವಿಕಲ್ಪಂ ನಿರಾಕಾರನು
ನಿರಪೇಕ್ಷಕಂ ನಿಷ್ಕಳಂಕಂ ನಿರಾಮಯಂ
ನಿರತಿಶಯಭರಿತಂ ನಿರಾಲಂಬಕಂ ನಿರಾ
ವರಣಂ ನಿರಂಜನಂ ಪಂಪಾವಿರೂಪಾಕ್ಷ ಪಾಲಿಸುವುದಖಿಳಜನರ ೧

ಆಲಿಸೈ ರಾಮ ಶೈವಾಚರಣೆಯಿಂದವರ್
ಕೈಲಾಸಮಂ ಪೊಕ್ಕರೆನೆ ಶೈವನಿಷ್ಠೆಯಿಂ
ಕೈಲಾಸಮಂ ಪೊಗುವ ಸಾಮರ್ಥ್ಯಮಿರಲಿಷ್ಟಲಿಂಗಮಿನ್ನೇತಕೆನಲು
ಕೈಲಾಸಪುರದ ಬಾಗಿಲೊಳಿವರ್ಗೆ ಲಿಂಗಮಂ
ಶೈಲಾದಿ ಕಟ್ಟಿ ಮಿಗೆ ವೀರಶೈವಂ ಮಾಡಿ
ಲೀಲೆಯಿಂ ಪೊಗಿಸುವರೆನಲ್ಕವರ ಕಥೆಯನೆನಗುಸಿರೆನಲ್ಕಿಂತೆಂದನು ೨

ಸೂಚನೆ : ವೀರಶೈವಾಚಾರಸಂಪನ್ನರಾದವರ ಶ್ರೇಷ್ಠವಾದ ಚರಿತ್ರೆಯನ್ನು ಚೆನ್ನಬಸವಣ್ಣನು ಸಿದ್ಧರಾಮಣ್ಣನಿಗೆ ಕರುಣೆಯಿಂದ ವಿಸ್ತಾರವಾಗಿ ಹೇಳಿದನು. ೧. ಉಪಮಾತೀತನು, ನಿಷ್ಕಾಮಿ, ನಿಶ್ಚಲ, ನಿರ್ಮಲ, ತೊಂದರೆಯಿಲ್ಲದವನು, ನಿಃಸ್ಪೃಹ, ನಿರ್ವಿಕಾರಿ, ಯಾರಿಗೂ ಋಣಿಯಿಲ್ಲದವನು, ನಿಶ್ಚಿಂತೆಯಾದ ಮನಸ್ಸುಳ್ಳವನು, ವಿಕಲ್ಪವಿಲ್ಲದ ಬುದ್ಧಿಯುವ, ನಿರಾಕಾರ, ನಿರಪೇಕ್ಷ, ನಿಷ್ಕಳಂಕ, ನಿರಾಮಯ. ನಿರತಿಶಯಭರಿತನಾದವನು, ನಿರಾಲಂಬ, ನಿರಾವರಣ, ನಿರಂಜನನಾದ ಪಂಪಾವಿರೂಪಾಕ್ಷ ಸಕಲ ಜನರನ್ನೂ ಕಾಪಾಡು. ೨. ಕೇಳಯ್ಯ ಸಿದ್ಧರಾಮ, ಶೈವಾಚರಣೆಯಿಂದ ಅವರು ಕೈಲಾಸವನ್ನು ಹೊಕ್ಕರು ಎಂದು ಹೇಳಲು ಹಾಗಾದರೆ ಶೈವನಿಷ್ಠೆಯಿಂದ ಕೈಲಾಸಕ್ಕೆ ಹೋಗುವ ಸಾಮರ್ಥ್ಯವಿರಲು ಇನ್ನು ಇಷ್ಟಲಿಂಗವೇಕೆ ಎಂದು ಸಿದ್ಧರಾಮನು ಕೇಳಲು ಕೈಲಾಸಪಟ್ಟಣದ ಬಾಗಿಲಲ್ಲಿ ಅವರಿಗೆ ನಂದಿ ಮುಂತಾದವರು ಲಿಂಗವನ್ನು ಕಟ್ಟಿ ವೀರಶೈವರನ್ನಾಗಿ ಮಾಡಿ ಸಂತೋಷದಿಂದ ಹೊಗಿಸುತ್ತಾರೆಂದು ಹೇಳಲು ಅವರ ಕಥೆ

CC-0. Jangamwadi Math Collection. Digitized by eGangotri

ನೀತಿವಿದ ಸಾಮವೇದಿಗಳೆನಿಪ ಮಹಿಮಂಗೆ
ಜಾತಿಸೂತಕವಿಲ್ಲ ನಿಂಬವ್ವೆಯೆಂಬವಳ್ಗೆ
ಪ್ರೇಮಸೂತಕವಿಲ್ಲ ನಿಂಬಿಗಂ ನಿತ್ಯಸೂತಕವಿಲ್ಲ ಸಿಂಧುಮಂಗೆ
ಜಾತಸೂತಕವಿಲ್ಲ ಬಿಬ್ಬಿಬಾಚಯ್ಯನೆಂ
ಬಾತಂಗೆ ತಿಳಿಯಲೆಂಜಲ ಸೂತಕಮದಿಲ್ಲ
ಭೂತಳಾಧಿಪ ಕಾಚಿರಾಜನುಂ ಪಾದೋದಕದ ಮಹಾತ್ಮ್ಯೆಯ ಪುರುಷನು ೩

ವೀರಶಂಕರದಾಸನುರೆ ಕನಸಿನೊಳ್ ಭವಿಯ
ಸೇರಿ ಮುಟ್ಟಿದೆನೆಂದು ಕಾದ ಕೊಪ್ಪರಿಗೆಗೆ ಶ
ರೀರಮಂ ಕೊಟ್ಟ ಬಿಗೆ ಕರುಳಕೇತಯ್ಯನುಂ ಲಿಂಗಕರ್ಪಿಸದೆ ಮರೆದು
ಕ್ಷೀರಮಂ ಕೊಂಡೆನೆಂದುರೆ ಕರುಳ್ಗಳಂ ತೆಗೆದ
ಧೀರಶೀಲದ ಪರ್ವತಂ ತಾಯ್ನುಡಿಯೆ ಕರುಳ
ತೋರಣಂಗಟ್ಟಿದಂ ಕೇಳೆಂದು ಸಿದ್ಧರಾಮೇಶಂಗೆ ನಿರವಿಸಿದನು ೪

ಗಂಡಗತ್ತರಿಯ ನಾಚಂ ಶಿವನ ನಿಂದಿಸಲ್
ತುಂಡುತುಂಡಾಗಿ ಕಡಿಯಲ್ಕೆ ಪರಸಮಯದವ
ರಂಡಲೆದು ಮುತ್ತೆ ತಲೆಯಂ ಗಂಡಗತ್ತರಿಗೆ ಕೊಡೆ ರಾಚಮಲ್ಲಯ್ಯನು
ಕೊಂಡು ತಾಳವನೊತ್ತೆ ಚಿಕರಾಚಮಲ್ಲನು
ದ್ದಂಡದಿಂ ಪಾಡಲಿಪ್ಪತ್ತೈದು ಲೀಲೆಯಿಂ
ಮುಂಡಮುರೆ ಕುಣಿದಾಡಿ ಮತ್ತೆ ಶಿರಮಂ ಪಡೆದುದೇನೆಂಬೆನಚ್ಚರಿಯನು ೫

ಗಳನ್ನು ನನಗೆ ಹೇಳು ಎಂದು ಸಿದ್ಧರಾಮನು ಕೇಳಿದನು. ೩. ನೀತಿವಿದನಾದ ಸಾಮವೇದಿಗಳೆನಿಸುವ ಮಹಿಮನಿಗೆ ಜಾತಿಯ ಸೂತಕವಿಲ್ಲ, ನಿಂಬವ್ವೆಯೆನ್ನುವವಳಿಗೆ ಪ್ರೇಮದ ಸೂತಕವಿಲ್ಲ, ನಿಂಬಕ್ಕನಿಗೆ ನಿತ್ಯ ಸೂತಕವಿಲ್ಲ, ಸಿಂಧುಮನಿಗೆ ಜನನಸೂತಕವಿಲ್ಲ. ಬಿಬ್ಬಿ ಬಾಚಯ್ಯನೆಂಬುವವನಿಗೆ ಎಂಜಲಿನ ಸೂತಕ ಇಲ್ಲ. ದೊರೆ ಕಾಶಿರಾಜನು ಪಾದೋದಕದ ಮಹಾತ್ಮೆಯುಳ್ಳವನು. ೪. ವೀರಶಂಕರದಾಸನು ಕನಸಿನಲ್ಲಿ ಭವಿಯನ್ನು ಸೇರಿ ಮುಟ್ಟಿದೆನೆಂದು ಕಾದ ಕೊಪ್ಪರಿಗೆಯಲ್ಲಿ ಹಾರಿದ. ಕರುಳಕೇತಯ್ಯನು ಲಿಂಗಕ್ಕೆ ಅರ್ಪಿಸದೆ ಮರೆತು ಹಾಲನ್ನು ಕುಡಿದೆನೆಂದು ಕರುಳನ್ನು ಬಗೆದುಕೊಂಡನು. ಧೀರ ಚಾರಿತ್ರ್ಯವುಳ್ಳ ಪರ್ವತನೆನ್ನುವವನು ತಾಯಿಯ ಮಾತಿನಂತೆ ಕರುಳಿನ ತೋರಣ ಕಟ್ಟಿದ, ಕೇಳು ಎಂದು ಸಿದ್ಧರಾಮನಿಗೆ ನಿರೂಪಿಸಿದನು. ೫. ಗಂಡಗತ್ತರಿಯ ನಾಚಯ್ಯನು ಶಿವನಿಂದಕನನ್ನೂ ತುಂಡುತುಂಡಾಗಿ ಕತ್ತರಿಸಿದನು. ಆಗ ಅನ್ಯಜಾತಿಯವರು ಮೇಲೆ ಬಿದ್ದು ಮುತ್ತಲು ತನ್ನ ತಲೆಯನ್ನೂ ಗಂಡಗತ್ತರಿಗೆ ಕೊಟ್ಟು ಕತ್ತರಿಸಿಕೊಂಡನು. ರಾಚಮಲ್ಲಯ್ಯ ತಾಳ ಹಾಕಲು, ಚಿಕರಾಚಮಲ್ಲನು ಗಟ್ಟಿಯಾಗಿ ಹಾಡಲು ಇಪ್ಪತ್ತೈದು ಲೀಲೆಯಿಂದ ಮುಂಡವು ಚೆನ್ನಾಗಿ ಕುಣಿದಾಡಿ ಮತ್ತೆ ತಲೆಯನ್ನು ಕೂಡಿಕೊಂಡಿತು.

CC-0. Jangamwadi Math Collection. Digitized by eGangotri

ಹರಶರಣನೆಸೆವ ಹಾವಿನಹಾಳ ಕಲ್ಲಯ್ಯ
ನಿರುತ ವಿಪ್ರರ ವಾದದಿಂದೆ ಶುನಕನ ಕೆಯ್ಯ
ಲಿರವೆ ವೇದವನೋದಿಸಿದನಂತೆ ಜಂಬೂರಕಾಳಯ್ಯನೊಲಿದೋದಿಸಿ
ಶಿರವನರಿದಕ್ಕರಿಂ ಲಿಂಗಕಾರತಿಯೆತ್ತಿ
ಮರಳಿ ಪತ್ತಿಸಲಣುಗ ಗೋವಿಂದಭಟ್ಟನಾ
ಶಿರವದೇ ನಿರ್ಮಾಲ್ಯವೆನುತೆ ಮಸ್ತಕವರಿದು ಮೂರುದಿನದೊಳ್ ಪಡೆದನು ೬

ಹರಭಕ್ತನಂದು ಮೊರಟದ ಬಂಕಿದೇವನುರೆ
ಕೊರಡಪತ್ರೆಯನೆಸೆವ ಗೊಡ್ಡಹಸುವಿನ ಹಾಲ
ನಿರದೆ ಬರತಿರ್ದ ಚಿಲುಮೆಯ ನೀರನಿತ್ತು ಜಂಗಮಕೆ ತನ್ನಯ ಲಿಂಗಕೆ
ಶಿರವನರಿದಾರತಿಯನೆತ್ತಿ ಮುಗುಳುದಿಸಲವ
ನರಿದಿತ್ತಲಿಂತುಟರುವತ್ತೆರಡು ಬಾರಿಯೊಳ್
ಮರಳಿ ಮರಳುದಿಸಲಾ ಮಸ್ತಕಂಗಳ್ಗೆ ಬೇರಂಗಂಗಳಂ ಪಡೆದನು ೭

ಪರರ ಲಿಂಗಸ್ಪರ್ಶನದ ನೇಮದವನೊರ್ವ
ಹರಶರಣ ಬೊಮ್ಮಯ್ಯನನ್ಯಂ ಸ್ವಲಿಂಗಮಂ
ಕರದೆ ಮುಟ್ಟಲ್ಕಳಿವ ನೇಮದವನೊರ್ವ ಬೊಮ್ಮಯ್ಯನಿರ್ವರ್ ಬಸವನ

ಆಶ್ಚರ್ಯವನ್ನು ಏನೆಂದು ಹೇಳಲಿ ? ೬. ಶಿವಶರಣರಲ್ಲಿ ಪ್ರಖ್ಯಾತನಾದ ಹಾವಿನ ಹಾಳ ಕಲ್ಲಯ್ಯನು ವಿಪ್ರರೊಡನೆ ವಾದ ಹೂಡಿ ನಾಯಿಯ ಕೈಯಲ್ಲಿ ವೇದವನ್ನೋದಿಸಿದ. ಅದೇ ರೀತಿ ಜಂಬೂರ ಕಾಳಯ್ಯನೂ ನಾಯಿಯಿಂದ ವೇದವನ್ನೋದಿಸಿದನಂತರ ತಲೆಯನ್ನು ಪ್ರೀತಿಯಿಂದ ಕಡಿದುಕೊಂಡು ಲಿಂಗಕ್ಕೆ ಆರತಿಯನ್ನೆತ್ತಿ ಮತ್ತೆ ತಲೆಯನ್ನು ಸೇರಿಸಿಕೊಂಡನು. ಅವನ ಮಗ ಗೋವಿಂದಭಟ್ಟನು ಶಿವನಿಗೆ ಅರ್ಪಿಸಿದ ಕಾರಣದಿಂದ ನಿರ್ಮಾಲ್ಯವಾದ ತಲೆಯನ್ನು ಮತ್ತೆ ಧರಿಸಿಕೊಳ್ಳುವುದು ಸರಿಯಲ್ಲವೆಂದು ತನ್ನ ತಲೆಯನ್ನು ಕತ್ತರಿಸಿಕೊಂಡು ಮೂರು ದಿನಗಳನಂತರ ಹೊಸ ತಲೆಯನ್ನು ಪಡೆದನು. ೭. ಆದಿನ ಹರಭಕ್ತನಾದ ಮೊರಟದ ಬಂಕಿದೇವನು ಒಣಗಿದ ಮೋಟುಮರವನ್ನು ಚಿಗುರಿಸಿ, ಗೊಡ್ಡು ಹಸುವಿನಿಂದ ಹಾಲನ್ನು ಕರೆದು, ಬತ್ತಿದ್ದ ಚಿಲುಮೆಯಲ್ಲಿ ನೀರನ್ನು ಹುಟ್ಟಿಸಿ ಜಂಗಮರಿಗೆ ಕೊಟ್ಟನು. ಲಿಂಗಕ್ಕೆ ತನ್ನ ತಲೆಯನ್ನು ಕತ್ತರಿಸಿ ಆರತಿಯನ್ನೆತ್ತಿದನು. ಮತ್ತೆ ತಲೆ ಹುಟ್ಟಲು ಅದನ್ನು ಕತ್ತರಿಸಿದನು. ಈ ರೀತಿ ಅರವತ್ತೆರಡು ಬಾರಿ ಹುಟ್ಟಲು ಮತ್ತೆ ಮತ್ತೆ ಕತ್ತರಿಸಿ ಆ ತಲೆಗಳಿಗೆ ಬೇರೆ ಬೇರೆ ಶರೀರಗಳನ್ನು ಪಡೆದನು. ೮. ಬೇರೆಯವರ ಲಿಂಗವನ್ನು ಮುಟ್ಟುವುದಿಲ್ಲವೆಂಬ ನಿಯಮವುಳ್ಳ ಶಿವಶರಣ ಬೊಮ್ಮಯ್ಯನೊಬ್ಬ. ಬೇರೆಯವನು ತನ್ನ ಲಿಂಗವನ್ನು ಕೈಯಲ್ಲಿ ಮುಟ್ಟಲು ತಾನು ಸಾಯುವ ನಿಯಮವುಳ್ಳ ಬೊಮ್ಮಯ್ಯನೊಬ್ಬ. ಹೀಗೆ ಈ ಇಬ್ಬರು ಬೊಮ್ಮಯ್ಯರೂ ಬಸವಣ್ಣನ ಅರಮನೆಗೆ ಬಂದು ಶಿವಪೂಜೆಯನ್ನು ಮಾಡಿಕೊಳ್ಳು

CC-0. Jangamwadi Math Collection. Digitized by eGangotri

ಅರಮನೆಗೆ ಬಂದು ಶಿವಪೂಜೆಯಂ ಮಾಡಿಕೊಳು
ತಿರಲವನ ಲಿಂಗಮಂ ಮುಟ್ಟಿ ಪೊಡಮಡೆ ಜೀವ
ವಿರದೆ ಪೋದುದು ಮುಟ್ಟಿದೊಡೆ ಹರಣಮಂ ಬಿಡುವ ಬೊಮ್ಮಯ್ಯನೊಡಲಿನಿಂದೆ ೮

ಹರಹರ ಮಹಾದೇವ ತಪ್ಪಾದುದೆನುತಸುವ
ನಿರಮುಳಿದನೀತನುಂ ಮೇಣಿರ್ವರುಂ ಕಂಡು
ತರಹರಿಸದಸುವುಳಿದನಿನ್ನೊರ್ವ ಬೊಮ್ಮಯ್ಯನೀ ಮೂವರಂ ಕಾಣುತೆ
ಹರಣಮಂ ಬಸವಣ್ಣನುಳಿಪೆನೆಂಬನಿತರೊಳ್
ಕೊರಲಿಗಲಗಂ ಪೂಡಿ ವೀರಬಂಕಯ್ಯನಂ
ದಿರದೆ ಮೂವರ ಜೀವಮಂ ಪಡೆದನೆಲೆ ಸಿದ್ಧರಾಮ ಕೇಳಚ್ಚರಿಯನು ೯

ತೆಲುಗಬೊಮ್ಮಯ್ಯನೆಂದೆಂಬವಂ ಗಂಧರ್ವ
ರೊಲವಿನಿಂ ಮೃಗವಾಗಿರಲ್ಕೆಚ್ಚು ಮುಕ್ತಿಗುರೆ
ಸಲಿಸಿ ಶಿವನಿಂದೆಯಂ ಮಾಡುವ ಪುರಾಣಿಕನನಿರಿಯೆ ಹೆಮ್ಮಡಿರಾಯನು
ಮುಳಿಸಿನಿಂ ಕರೆದು ಪಾರ್ವನನಿರಿದೆಯೇಕಿದಂ
ತಿಳಿಪೆನಲ್ ಶಿವನ ನಿಂದಿಸಿದನೆಂದಾತನಂ
ಹುಳುರಾಸಿಯಂ ಮಾಡಿ ತೋರಿದಂ ಸಿದ್ಧರಾಮೇಶ ಕೇಳಚ್ಚರಿಯನು ೧೦

ತ್ತಿರಲು ಅವನ ಲಿಂಗವನ್ನು ಮುಟ್ಟಿ ನಮಸ್ಕರಿಸಲು ಹಾಗೆ ಮುಟ್ಟಿದ ಬೊಮ್ಮಯ್ಯನ ಜೀವ ಹೋಯಿತು. ತನ್ನ ಲಿಂಗವನ್ನು ಮುಟ್ಟಿದ ಕೂಡಲೇ ಮತ್ತೊಬ್ಬ ಬೊಮ್ಮಯ್ಯನು ಶರೀರದಿಂದ ಪ್ರಾಣ ಬಿಡುವನು. ೯. ಹರ ಹರ, ಮಹಾದೇವ, ತಪ್ಪಾಯಿತು ಎನ್ನುತ್ತ ಪ್ರಾಣಬಿಟ್ಟ ಈತನನ್ನೂ, ಈ ಇಬ್ಬರನ್ನೂ ಕಂಡು ತಡೆಯಲಾರದೆ ಪ್ರಾಣ ಬಿಟ್ಟ ಮತ್ತೊಬ್ಬ ಬೊಮ್ಮಯ್ಯ ಈ ಮೂವರನ್ನೂ ನೋಡುತ್ತ ಬಸವಣ್ಣ ತಾನೂ ಪ್ರಾಣ ಬಿಡುತ್ತೇನೆನ್ನುವಷ್ಟರಲ್ಲಿ ಕುತ್ತಿಗೆಗೆ ಕತ್ತಿಯನ್ನು ಹೂಡಿ ವೀರನಾದ ಬಂಕಯ್ಯನು ಅಂದು ಮೂವರ ಪ್ರಾಣವನ್ನು ಪಡೆದನು. ಎಲೆ ಸಿದ್ಧರಾಮ ಆಶ್ಚರ್ಯವನ್ನು ಕೇಳು. ೧೦. ತೆಲುಗು ಬೊಮ್ಮಯ್ಯನೆಂಬುವವನು ಗಂಧರ್ವರು ಮೃಗಗಳಾಗಿರಲು ಬಾಣದಿಂದ ಹೊಡೆದು ಅವರಿಗೆ ಮುಕ್ತಿ ದೊರಕಿಸಿಕೊಟ್ಟನು. ಶಿವನಿಂದೆಯನ್ನು ಮಾಡುವ ಪುರಾಣಿಕನನ್ನು ಇರಿಯಲು ಕೋಪದಿಂದ ಹೆಮ್ಮಾಡಿರಾಜನು ಅವನನ್ನು ಕರೆದು ಬ್ರಾಹ್ಮಣನನ್ನು ಏಕೆ ಸೀಳಿದೆ ? ಇದನ್ನು ಹೇಳು ಎನ್ನಲು ಶಿವನನ್ನು ಆತನು ಹೀಯಾಳಿಸಿದನೆಂದು ಹುಳುಗಳ ರಾಶಿಯನ್ನಾಗಿ ಮಾಡಿ ತೋರಿಸಿದನು. ಸಿದ್ಧರಾಮ ಆಶ್ಚರ್ಯವನ್ನು ಕೇಳು.

CC-0. Jangamwadi Math Collection. Digitized by eGangotri

ಜಿನಭಕ್ತನೆನಿಪ ದೇಸಿಂಗ ಬಲ್ಲಾಳನಾ
ತನ ಮಡದಿ ಸುಗ್ಗಲೆಯು ಶಿವಭಕ್ತೆ ತನ್ನ ಗುರು
ವೆನಿಪ ದೇವರದಾಸನಂ ಜಿನರ ಕೂಡೆ ವಾದಂಗೆಯ್ಯೆ ಪೆಟ್ಟಿಗೆಯೊಳು
ತೊನೆವ ಘಟಸರ್ಪನಂ ಚಂದ್ರಕಾಂತದ ಲಿಂಗ
ವನೆ ಮಾಡಿ ಗೆಲಿಸಿ ಜೈನರಿಗಾಜ್ಞೆಯುಂ ಮಾಡಿ
ಜನಪತಿಯನಂದು ಶಿವಭಕ್ತನಂ ಮಾಡಿದಳದೇನೆಂಬೆನಚ್ಚರಿಯನು ೧೧

ಇನ್ನಾಲಿಸೈ ಸಿದ್ಧರಾಮ ಹೆಂಡದಮಾರ
ತನ್ನ ಕೆಯ್ಯಂ ಕಡಿದು ಕೋಲಶಾಂತಂ ಚಿತ್ರ
ಮಂ ನೋಡಿ ಜಂಗಮುವನಿರಿದನಂ ಕೊಂದು ಕಕ್ಕಯ್ಯನಾ ಶಂಕರನನು
ಪನ್ನಗಾರಿಧ್ವಜನ ಭಜಕನೆಂದನನರಿದು
ಮುನ್ನಂ ಪ್ರಭಾತಯ್ಯನಣುಗನಳವಿಗೆ ಸತ್ತ
ಕನ್ನೆಗಸುವಂ ಕೊಟ್ಟು ಮಹಿಮೆಯುಂ ಮೆರೆದನದನೇನೆಂಬೆನಚ್ಚರಿಯನು ೧೨

ಉರಗರಾಯಣ್ಣನೆಂಬವನೊರ್ವ ಸೂಳೆಮನೆ
ಯುರಿಯಲ್ಲಿ ಬೇಯಲದಕವಳ ಜಂಗಮದೇವ
ರಿರದೆ ಹರವಳಿಸಲಗ್ನಿಯ ಮುಖದಿನಾಕೆಯನುಗುಳ್ಚಿದಂ ಸಾಹಸದೊಳು
ವರಜೋದ ಮಾಯಣ್ಣ ಜಂಗಮಂ ಬೇಡಲ್ಕೆ
ಕರಿಯನಿತ್ತಂ ರಕ್ಕಸಬ್ರಹ್ಮನೆಂಬೋರ್ವ
ನರಸು ನಿಜಸಮಯಚಾರದ ಜಂಗಮಂ ಪೋಗೆ ತಲೆಯನರಿದಸುವಿತ್ತನು ೧೩

೧೧. ಪ್ರಖ್ಯಾತನಾದ ದೇಸಿಂಗ ಬಲ್ಲಾಳನು ಜಿನಭಕ್ತನು. ಆತನ ಹೆಂಡತಿ ಸುಗ್ಗಲೆ ಶಿವಭಕ್ತೆ. ತನ್ನ ಗುರುವಾದ ದೇವರದಾಸನು ಜೈನರೊಂದಿಗೆ ವಾದಮಾಡಲು ಪೆಟ್ಟಿಗೆಯಲ್ಲಿ ತೂಗುವ ಘಟಸರ್ಪವನ್ನು ಚಂದ್ರಕಾಂತದ ಲಿಂಗವನ್ನಾಗಿ ಮಾಡಿ ಗೆಲ್ಲಿಸಿ ಜೈನರಿಗೆ ಆಜ್ಞೆಯನ್ನು ಮಾಡಿ ರಾಜನನ್ನು ಶಿವಭಕ್ತನನ್ನಾಗಿ ಮಾಡಿದಳು. ಆಶ್ಚರ್ಯವನ್ನು ಏನೆಂದು ಹೇಳಲಿ? ೧೨. ಇನ್ನು ಕೇಳಯ್ಯ ಸಿದ್ಧರಾಮ, ಹೆಂಡದ ಮಾರಯ್ಯನು ತನ್ನ ಕೈಯನ್ನು ಕಡಿದು, ಕೋಲ ಶಾಂತಯ್ಯನು ಚಿತ್ರವನ್ನು ನೋಡಿ ಅದರಲ್ಲಿದ್ದ ಜಂಗಮನನ್ನು ಇರಿದವನನ್ನು ಕೊಂದು. ಕಕ್ಕಯ್ಯನು ಆ ಶಿವನನ್ನು ವಿಷ್ಣುವಿನ ಭಕ್ತನೆಂದು ಹೇಳಿದವನನ್ನು ಇರಿದು, ಪ್ರಭಾತಯ್ಯನು ತನ್ನ ಮಗನ ಸಾವನ್ನು ನೋಡಿ ಸತ್ತ ಕನ್ಯೆಗೆ ಪ್ರಾಣವನ್ನು ಕೊಟ್ಟು ಮಹಿಮೆಯನ್ನು ತೋರಿದರು. ಆಶ್ಚರ್ಯವನ್ನು ಏನೆಂದು ಹೇಳಲಿ? ೧೩. ಸೂಳೆಯೊಬ್ಬಳು ಮನೆಯ ಬೆಂಕಿಯಲ್ಲಿ ಬೇಯಲು ಆವಳ ವಿಟ ಜಂಗಮನು ವ್ಯಥೆಪಡುತ್ತಿರುವುದನ್ನು ನೋಡಿ ಉರಗರಾಯಣ್ಣನೆಂಬುವನು ಸಾಹಸ ದಿಂದ ಅಗ್ನಿಮುಖದಿಂದ ಆಕೆಯನ್ನು ಈಚೆಗೆ ಬರಿಸಿದನು. ಶ್ರೇಷ್ಠನಾದ ಜೋದ ಮಾಯಣ್ಣ ಎಂಬುವನು ಜಂಗಮನು ಬೇಡಲು ಆನೆಯನ್ನು ಕೊಟ್ಟನು. ರಕ್ಕಸ ಬ್ರಹ್ಮನೆಂಬ ಒಬ್ಬ ರಾಜನು ತನ್ನ ಧರ್ಮಕ್ಕೆ ಸೇರಿದ ಜಂಗಮನು ಹೋಗಲು ತಲೆಯನ್ನು

CC-0. Jangamwadi Math Collection. Digitized by eGangotri

ಓರಂತೆ ಜಂಗಮಕೆ ಸಲಿಸವೇಳಲ್ಕವರ್
ಬಾರದಿರೆ ಲಕ್ಕಮುಂ ತೊಂಭತಾರ್ಸಾಸಿರದ
ಸಾರಲಿಂಗಂಗಳಂ ಗಾಣವಾಕಣ್ಣಪ್ಪನಿರದೆ ಸೆಳೆದಂ ರಕ್ಕಸ
ಮಾರಣ್ಣನೆಂಬವಂ ಪೆಂಡತಿಯು ತನ್ನೆಡೆಯು
ನಾರಯ್ಯದಾ ಜಂಗಮುಂ ತನ್ನೆಡೆಗಳನುಣೆ
ಕೂರಲಗಿನಿಂದರಿದು ತನ್ನ ಪಾಲಂ ಕೊಂಡು ಜಂಗಮಕ್ಕಸುವಿತ್ತನು ೧೪

ವರಮುಷ್ಟಿ ಚೌಡಯ್ಯನಂದು ಮುಷ್ಟಿಯ ಹಣ್ಣ
ನುರುತರದ ಜಂಗಮಕ್ಕಮೃತಫಲಮ ಮಾಡಿ
ಪರಿಕಿಸಲ್ ಪೂಳಿರ್ದ ಬಸವಗಸುವಂ ಪಡೆದು ಸತ್ತವಳನೆಬ್ಬಿಸಿದನು
ಇರದೆ ಕೋವೂರ ಬೊಮ್ಮಯ್ಯನೊಲವಿಂದೆ ಜೈ
ನರ ವಾದದಿಂ ದಹಿಸಿದಾಲವಂ ಮೊದಲಂತೆ
ಮರಳಿ ನಿರ್ಮಿಸಿ ಸತ್ತ ಕುವರಂಗೆ ಪರಣಮಂ ಕೊಟ್ಟನರುದಿಂಗಳೆಡೆಗೆ ೧೫

ವರವೇಮಣಾರಾಧ್ಯರಂ ಕಂಡು ಧರಣಿಪಂ
ಶರಣೆನ್ನೆ ಪರಸದಿರೆ ನಿಂದಿಸುತೆ ಮನೆಗೆ ಬರ
ಲುರಗದಷ್ಟದಿನಳಿಯಲವನರಸಿ ಬೇಡಿಕೊಳಲರಸಗಂದಸುವಿತ್ತನು
ಗುರುದರುಶನಕೆ ಕದುರ ರೇಮಯ್ಯನೈದುತ್ತ
ಪುರವೊಂದರೊಳ್ ಸೋಮನಾಥನೆಂಬನ ತನುಜ
ನುರಗದಷ್ಟದಿನಳಿಯಲುರೆ ಸಮಾಧಿಯನಿಕ್ಕಿದೇಳ್ದಿವಸಕೆಬ್ಬಿಸಿದನು ೧೬

ಕತ್ತರಿಸಿಕೊಂಡು ಪ್ರಾಣ ಕೊಟ್ಟನು. ೧೪. ಜಂಗಮರಿಗೆ ಸಲಿಸಬೇಕೆಂದು ಬಿನ್ನಹ ಮಾಡಿ ಅವರು ಬಾರದಿರಲು ಲಕ್ಷ ತೊಂಬತ್ತಾರು ಸಾವಿರ ಜಂಗಮರ ಲಿಂಗಗಳನ್ನೇ ಗಾಣದ ಕಣ್ಣಪ್ಪನು ಆಕರ್ಷಿಸಿದನು. ರಕ್ಕಸ ಮಾರಣ್ಣ ಎಂಬುವವನು ಹೆಂಡತಿಯು ತಿನ್ನಬೇಕಾದ ತನ್ನ ಎಡೆಯನ್ನು ಆಲೋಚಿಸದೆ ಆ ಜಂಗಮನು ಉಣ್ಣಲು ಕತ್ತಿಯಿಂದ ಅವನನ್ನು ಇರಿದು ತನ್ನ ಪಾಲನ್ನು ತೆಗೆದುಕೊಂಡು ಮತ್ತೆ ಜಂಗಮನಿಗೆ ಪ್ರಾಣ ಕೊಟ್ಟನು. ೧೫. ಶ್ರೇಷ್ಠನಾದ ಮುಷ್ಟಿಚೌಡಯ್ಯನು ಆ ದಿನ ಮುಷ್ಟಿಯ ಹಣ್ಣನ್ನು ರುಚಿಕರವಾದ ಹಣ್ಣನ್ನಾಗಿ ಮಾಡಿ ಜಂಗಮರಿಗೆ ಕೊಟ್ಟನು. ಹೂತಿದ್ದ ಬಸವನಿಗೆ ಪ್ರಾಣವನ್ನು ಕೊಟ್ಟು, ಸತ್ತವಳನ್ನು ಎಬ್ಬಿಸಿದನು. ಕೋವೂರ ಬೊಮ್ಮಯ್ಯನು ಪ್ರೀತಿಯಿಂದ ಜೈನರೊಡನೆ ವಾದ ಮಾಡುವಾಗ ಅವರು ಸುಟ್ಟಿದ್ದ ಆಲದ ಮರವನ್ನು ಮೊದಲಿನಂತೆ ಮತ್ತೆ ನಿರ್ಮಿಸಿದನು, ಸತ್ತ ಮಗನಿಗೆ ಆರು ತಿಂಗಳ ನಂತರ ಪ್ರಾಣವನ್ನು ಕೊಟ್ಟನು. ೧೬. ಶ್ರೇಷ್ಠರಾದ ವೇಮಣಾರಾಧ್ಯರನ್ನು ನೋಡಿ ರಾಜನು ಶರಣೆನ್ನಲು ಅವರು ಹರಸಲಿಲ್ಲ. ಆಗ ಅವರನ್ನು ಬೈಯುತ್ತ ಮನೆಗೆ ಬರಲು ಸರ್ಪ ಕಡಿದು ರಾಜನು ಸತ್ತನು, ಅವನ ಪತ್ನಿ ಬೇಡಿಕೊಳ್ಳಲು ಅರಸನಿಗೆ ಪ್ರಾಣಕೊಟ್ಟನು. ಗುರುದರ್ಶನಕ್ಕಾಗಿ ಕದುರ ರೇಮಯ್ಯನು ಹೋಗುತ್ತ ಪಟ್ಟಣವೊಂದರಲ್ಲಿ ಸೋಮನಾಥನೆಂಬುವನ ಮಗನು ಹಾವು ಕಡಿದು ಸಾಯಲು ಅವನನ್ನು ಸಮಾಧಿ ಮಾಡಿದ ಏಳು ದಿವಸದ ನಂತರ ಎಬ್ಬಿಸಿದನು.

CC-0. Jangamwadi Math Collection. Digitized by eGangotri

ಅಮರಗುಂಡದ ಮಲ್ಲಿಕಾರ್ಜುನಾರಾಧ್ಯರು
ತ್ತಮಪಾದುಕೆಗಳಂಘ್ರಿಯಿಂ ಸೋಂಕೆ ಕಾಲ್ಗಡಿದು
ನಿಮಿಷದೊಳಗವರಾಜ್ಞೆಯಿಂ ಶೂಲಮಂ ಪತ್ತಿ ಗುರುಭಕ್ತನಂಘ್ರಿ ಪಡೆದಂ
ವಿಮಲಪ್ರೌಢಾವತಿಯನೊರ್ವ ಗುರುಭಕ್ತಾಂಡಿ
ನಮಿತವಚನದಿ ಕರೆಯೆ ಗುರು ನೆರೆದುದಂ ಪೇಳೆ
ಭ್ರಮೆಗೊಳಿಸಿದಕ್ಷಿಗಳನಾ ಕ್ಷಣಂ ಕಿತ್ತು ಗುರುಕರುಣದಿಂ ಪಡೆದನಂದು ೧೭

ವೆಲ್ಲಗೊಂಡದ ಮಹಾದೇವನುಮುಷಃಕಾಲ
ದಲ್ಲಿ ಶಿವಪೂಜೆ ಮಾಡುವ ನೇಮವೊಂದುದಿನ
ದಲ್ಲಿ ಮರೆದೊರಗಲಿನಬಿಂಬಮಂ ಕಂಡು ಕಣ್ಗಳನುಗಿದು ಮರಳಿ ಪಡೆದಂ
ಸಲ್ಲಲಿತ ಗುರುಪಂಡಿತಾರಾಧ್ಯರುಪಕರಣ
ದಲ್ಲಿ ತನ್ನಂಘ್ರಿಗಳ್ ಸೋಂಕೆ ಕಾಲ್ಗಳನರಿದು
ಮೆಲ್ಲನಂ ಗುರುಕರುಣದಿಂ ಮಗುಳೆ ಪಾದಂಗಳಂ ಪಡೆದನೇನೆಂಬೆನು ೧೮

ಒಯ್ಯನೀಶ್ವರನಿಂದೆ ಪಡೆದು ಶಂಕರದಾಸಿ
ಮಯ್ಯಂ ನೊಸಲ್ಗಣ್ಣನನ್ಯದೈವಂಗಳಂ
ಕೆಯ್ಯೊಡನೆ ನೋಡಿ ದಹಿಸುವನೀಶನಿಂದೆ ತವನಿಧಿಯ ಜೇಡರ ದಾಸನು
ಕೆಯ್ಯಾರೆ ಪಡೆದು ಭತ್ತಗಳ ಶಂಕರದಾಸಿ
ಮಯ್ಯನಾಲಯಕಟ್ಟಲಾತನೀಕ್ಷಿಸಿ ತನ್ನ
ಕೆಯ್ಯೊಳವನಡಗಿಸಲ್ಕಡಗಿತಾತಂ ಪಡೆದ ತವನಿಧಿಯದಾಕ್ಷಣದೊಳು ೧೯

೧೭. ಅಮರಗುಂಡದ ಮಲ್ಲಿಕಾರ್ಜುನಾರಾಧ್ಯರ ಉತ್ತಮ ಪಾದುಕೆಗಳು ಕಾಲಿಗೆ ಸೋಕಲು ಕಾಲನ್ನು ಕಡಿದು ನಿಮಿಷದಲ್ಲಿ ಅವರ ಆಜ್ಞೆಯಂತೆ ಶೂಲವನ್ನು ಹತ್ತಿ ಗುರು ಭಕ್ತನು ಕಾಲನ್ನು ಮತ್ತೆ ಪಡೆದನು. ಪ್ರೌಢಾವತಿಯೆಂಬುವಳನ್ನು ಗುರುವಿನ ಪ್ರೇಯಸಿ ಯೆಂದು ತಿಳಿಯದೆ ಗುರುಭಕ್ತಾಂಡಿಯು ಅವಳನ್ನು ಅನೇಕ ವಿಧವಾಗಿ ಕರೆದನು. ಅನಂತರ ಅವಳಿಂದ ತನ್ನ ಗುರುವು ಅವಳಲ್ಲಿ ಕೂಡಿದುದನ್ನು ತಿಳಿದು ತನ್ನನ್ನು ಭ್ರಮೆ ಗೊಳಗುಮಾಡಿದ ಕಣ್ಣುಗಳನ್ನು ಆ ಕ್ಷಣ ಕಿತ್ತುಕೊಂಡು ಮತ್ತೆ ಗುರುವಿನ ಕರುಣೆ ಯಿಂದ ಪಡೆದನು. ೧೮. ವೆಲ್ಲಗೊಂಡದ ಮಹಾದೇವನು ಉಷಃಕಾಲದಲ್ಲಿ ಶಿವಪೂಜೆ ಯನ್ನು ಮಾಡುವ ನಿಯಮವನ್ನು ಮರೆತು ಒಂದು ದಿನ ಮಲಗಿರಲು ಸೂರ್ಯಬಿಂಬ ವನ್ನು ನೋಡಿ ಕಣ್ಣುಗಳನ್ನು ಕಿತ್ತುಹಾಕಿ ಮತ್ತೆ ಪಡೆದನು. ಶ್ರೇಷ್ಠರಾದ ಗುರು ಪಂಡಿತಾರಾಧ್ಯರ ಉಪಕರಣಗಳಿಗೆ ತನ್ನ ಕಾಲುಗಳು ಸೋಕಲು ಆ ಕಾಲುಗಳನ್ನು ಕತ್ತರಿಸಿ ಕೊಂಡು ಮೆಲ್ಲನೆ ಗುರುವಿನ ಕರುಣೆಯಿಂದ ಮತ್ತೆ ಪಾದಗಳನ್ನು ಪಡೆದನು, ಏನು ಹೇಳಲಿ. ೧೯. ಶಂಕರ ದಾಸಿಮಯ್ಯನು ಈಶ್ವರನಿಂದ ಹಣೆಗಣ್ಣನ್ನು ಪಡೆದು ಬೇರೆ ದೇವರು ಗಳನ್ನು ಕೂಡಲೇ ನೋಡಿ ಸುಡುವನು. ಈಶ್ವರನಿಂದ ಶ್ರೇಷ್ಠವಾದ ನಿಧಿಯನ್ನು ಪಡೆದು ಜೇಡರ ದಾಸಿಮಯ್ಯನು ಶಂಕರ ದಾಸಿಮಯ್ಯನ ಮನೆಗೆ ಬತ್ತವನ್ನು ಕಳಿಸಲು ಅದನ್ನು ನೋಡಿ ಅವನು ತನ್ನ ಕೈಯಲ್ಲಿ ಅವನ್ನು ಮರೆಮಾಡಲು ಆತನು ಪಡೆದ ನಿಧಿಯು ಆ

CC-0. Jangamwadi Math Collection. Digitized by eGangotri

ಬಂದು ಕೊಂಡಾಡೆ ಶಂಕರದಾಸನೊಕ್ಕ ನೆ
ಲ್ಲಿಂದೆ ತವನಿಧಿಯಾಗುವಂತೆ ನೇಮಿಸಿ ಬಳಿಕ
ಬಂದೊರ್ವ ಮಸಣದಾ ಮಾರಯ್ಯನೆಂಬವಂ ಮಸಣೆಯುಂ ಕುಣಿಸೆ ತನ್ನ
ಮುಂದೆ ಮಸಣೆಯೆಯೆನುತೆ ಪಣೆಗಣ್ಣ ತೆಗೆಯೆ ಬೆರ
ಳಿಂದದಂ ಬೆರಟಿ ನುಂಗಲ್ಕಹಂಕರಿಸಿರ್ದೆ
ನೆಂದು ಪೊಗಳಲ್ ಮಸಣೆಯಿಂದೆ ಬಳಿಕಾತಂಗೆ ಪಣೆಗಣ್ಣನುಗುಳಿಸಿದನು ೨೦

ಜಂಗಮಕೆ ಸಂನ್ಯಾಸಿ ಮಂಚಣ್ಣನಿತ್ತನುರೆ
ಪೊಂಗಳಂ ಪಿಡಿದ ಕಂಕರಿಗೋಲಿನಿಂದೆ ತ
ನ್ನಂಗದೊಳ್ ಪೊರೆದ ಮಣ್ಣಂ ಪರುಷವಂ ಮಾಡಿ ಮಾರನ ವೇಮಯ್ಯನಿತ್ತ
ಪಿಂಗದ ಸುವರ್ಣಮಯದಂಡುಕೋಲುಗಳನಿ
ತ್ತಂ ಗಣಿಸದಾ ಮೋಳಿಗಯ್ಯನಾ ತೆರದೊಳೇ
ಪೊಂಗೋಲ್ಗಳಂ ನುಲಿಯಚಂದಯ್ಯನಿತ್ತನೆಲೆ ರಾಮೇಶ ಕೇಳೆಂದನು ೨೧

ಬೊಂತೆಯನುದುರ್ಚಿ ಬೊಂತಾದೇವಿಯೆಂದೆಂಬ
ಕಾಂತೆ ಜಂಗಮಕೆ ಪೊನ್ನಿತ್ತಳುರೆ ಮಾರಗೌ
ಡಂ ತವೆ ಸಹಸ್ರಸಂಖ್ಯೆಯ ಪೊಂಗಳಂ ಕೊಟ್ಟಂ ಜಂಗಮಕೆ ಶೂಲಾಯುಧಂ
ಸಂತಸದೆ ಚಿತ್ರದೊಳಗಿರ್ದ ಪೆಣ್ಣಂ ಕೊಟ್ಟ
ಮುಂತೆ ವರ ಗೌಳಭಟ್ಟಾರಕಂ ಮುಕುರದೊಳ್
ಕಂತುಹರಮೂರ್ತಿಯಂ ಜಂಗಮಕೆ ತೋರಿದಂ ರಾಮೇಶ ಕೇಳೆಂದನು ೨೨

ಕ್ಷಣದಲ್ಲಿ ಮಾಯವಾಯಿತು. ೨೦. ಜೇಡರ ದಾಸಿಮಯ್ಯನು ಬಂದು ಕೊಂಡಾಡಲು ಶಂಕರದಾಸನು ಒಕ್ಕಿದ ನೆಲ್ಲಿನಿಂದ ತವನಿಧಿಯಾಗುವಂತೆ ಮಾಡಿದನು, ಬಳಿಕ ಬಂದ ಒಬ್ಬ ಮಸಣದ ಮಾರಯ್ಯ ಎಂಬುವನು ಮಸಣೆಯನ್ನು ಕುಣಿಸಿದನು. ತನ್ನ ಮುಂದೆ ಮಸಣೆಯೆ ಎನ್ನುತ್ತ ಜೇಡರ ದಾಸಿಮಯ್ಯನು ಹಣೆಗಣ್ಣನ್ನು ತೆರೆಯಲು ಬೆರಳಿನಿಂದ ಅದನ್ನು ಎಬ್ಬಿ ನುಂಗಿದನು, ಅಹಂಕಾರಗೊಂಡಿದ್ದೆನೆಂದು ಹೊಗಳಲು ಮಸಣೆಯಿಂದ ಅನಂತರ ಅವನಿಗೆ ಹಣೆಗಣ್ಣನ್ನು ಉಗುಳಿಸಿದನು. ೨೧. ಸಂನ್ಯಾಸಿ ಮಂಚಣ್ಣನು ತಾನು ಹಿಡಿದ ದಂಡದಿಂದ ಜಂಗಮರಿಗೆ ಹೊನ್ನುಗಳನ್ನು ಕೊಟ್ಟನು. ಮಾರನ ವೇಮಯ್ಯನು ತನ್ನ ಶರೀರದ ಮೇಲಿದ್ದ ಮಣ್ಣನ್ನು ಚಿನ್ನವನ್ನಾಗಿ ಮಾಡಿಕೊಟ್ಟ ಮೋಳಿಗಯ್ಯನು ಬಂಗಾರ ಮಯವಾದ ದಂಡಗೋಲುಗಳನ್ನು ಲೆಕ್ಕವಿಲ್ಲದಷ್ಟು ಕೊಟ್ಟನು. ಅದೇ ರೀತಿ ಹೊನ್ನಿನ ಕೋಲುಗಳನ್ನು ನುಲಿಯ ಚಂದಯ್ಯನು ಕೊಟ್ಟನು, ಎಲೆ ಸಿದ್ಧರಾಮ ಕೇಳು ಎಂದನು. ೨೨. ಬೊಂತಾದೇವಿ ಎಂಬಾಕೆ ತನ್ನ ಮೈಮೇಲಿನ ವಸ್ತ್ರವನ್ನು ಒದರಿ ಜಂಗಮರಿಗೆ ಚಿನ್ನ ಕೊಟ್ಟಳು. ಮಾರಗೌಡನು ಸಹಸ್ರಸಂಖ್ಯೆಯಲ್ಲಿ ಹೊನ್ನನ್ನು ಕೊಟ್ಟನು. ಶೂಲಾಯುಧನು ಸಂತೋಷದಿಂದ ಚಿತ್ರದೊಳಗಿನ ಹೆಣ್ಣುಗಳಿಗೆ ಪ್ರಾಣ ಬರಿಸಿ ಜಂಗಮರಿಗೆ ಕೊಟ್ಟನು. ಶ್ರೇಷ್ಠನಾದ ಗೌಳಭಟ್ಟಾರಕನು ಜಂಗಮರಿಗೆ ಕನ್ನಡಿಯಲ್ಲಿ ಶಿವನ ರೂಪ

CC-0. Jangamwadi Math Collection. Digitized by eGangotri

ಕೆಂಬಾವಿ ಭೋಗಣ್ಣನಭವನುತ್ಯಜನಾಗಿ
ತಾಂ ಬರಲ್ ಪೂಜಿಸಿದನೆಂದು ವಿಪ್ರರ್ ನಗರ
ಮಂ ಬಿಟ್ಟು ಪೊರಡಿಸಲ್ಕೂರಲಿಂಗಂಗಳಾತನ ಕೂಡೆ ವಲಸೆದೆಗೆಯೆ
ಎಂಬುಗೇ ಚೋದ್ಯಮುಂ ಮರಳಿ ಬರೆ ಲಿಂಗದ ಕ
ದಂಬನೊಡನೈತಂದು ಪೀಠಂಗಳೊಳ್ ಪಲ್ಲ
ಟಂಬೋಗಿ ನೆಲಸಿದುವು ಪೇಳ್ವೆನೇಂ ಸಿದ್ಧರಾಮೇಶ ಕೇಳಚ್ಚರಿಯುಸು ೨೩

ಎಸೆವಗ್ರಹಾರ ಪೋರಾಂಡಲದ ಸೂರಾಂಬೆ
ಬಿಸಕಂಠನಂತ್ಯಜಾಕೃತಿಯೊಳೈತರೆ ಕಾಣು
ತೊಸೆದು ಪೂಜಿಸೆ ವಿಪ್ರಜನಮವಳ ಮನೆಯಸುತ್ತಂ ಮುತ್ತಿ ಪತ್ತಿ ಕೆಲೆಯೆ
ರಸಮುಮಂ ಸುರಿದು ಚಪ್ಪರಿದುಣುತೆ ಕೆಟ್ಟೆನಾಂ
ಬಸಮಲ್ಲ ಕೊಂದಪರ್ ಬುಧರೆನುತೆ ಶಂಭು ತವ
ಕಿಸಲಭಯಮುಂ ಕೊಟ್ಟಳಭವನಾ ಕ್ಷಣದೊಳೇ ಬಯಲಾದನೇನೆಂಬೆನು ೨೪

ಎಸೆವ ತೆಲುಗೇಶನುರೆ ನವಲಿಂಗಮುಮನರಿದು
ಮುಸಣಯ್ಯನೆಂಬುವಂ ಲಿಂಗದೊಳ್ ನೋಡಿ ಸಮ
ರಸಭಾವದಿಂ ಡಕ್ಕೆಬ್ರಹ್ಮಯ್ಯನೊಪ್ಪುವಷ್ಟಾವರಣದಿಂದೆ ಬಳಿಕೆ
ಒಸೆದಭವನಾ ಭಾನುದೇವಂಗೆ ಗುರುವಾಗಿ
ಯುಸಮಾಂಗಲಿಂಗಸಂಬಂಧಗಾಣಿಸಿದನಾ
ಲಿಸು ಬಡಿಬ್ರಹ್ಮನಾ ಕನಸಿನೊಳ್ ಬಡಿಹೋರಿಕಾಯಕಮನುರೆ ಪಡೆದನು ೨೫

ವನ್ನು ತೋರಿಸಿದನು, ಸಿದ್ಧರಾಮ ಕೇಳು ಎಂದನು. ೨೩. ಕೆಂಬಾವಿ ಭೋಗಣ್ಣನು ಈಶ್ವರನು ಅಂತ್ಯಜನಾಗಿ ಬರಲು ಅವನನ್ನು ಪೂಜಿಸಿದನೆಂದು ಬ್ರಾಹ್ಮಣರು ನಗರವನ್ನು ಬಿಟ್ಟು ಹೊರಡಿಸಿದರು, ಆಗ ಊರಿನ ಎಲ್ಲ ಲಿಂಗಗಳೂ ಅವನ ಜೊತೆಯಲ್ಲಿಯೇ ಹೊರಟವು. ಆ ಆಶ್ಚರ್ಯವನ್ನು ಹೇಳುವುದೇನು ? ಅವನು ಹಿಂದಿರುಗಲು ಆ ಲಿಂಗದ ಗುಂಪೂ ಅವನ ಜೊತೆಯಲ್ಲಿಯೇ ಬಂದು ಪೀಠಗಳಲ್ಲಿ ವ್ಯತ್ಯಾಸಗೊಂಡು ಕುಳಿತವು, ಏನು ಹೇಳಲಿ ಸಿದ್ಧರಾಮ, ಆಶ್ಚರ್ಯವನ್ನು ಕೇಳು. ೨೪. ಅಗ್ರಹಾರದಲ್ಲಿದ್ದ ಪೋರಾಂಡಲದ ಸೂರಾಂಬೆಯು, ವಿಷಕಂಠನು ಅಂತ್ಯಜನ ರೂಪದಿಂದ ಬರಲು ಅವನನ್ನು ನೋಡಿ ಭಕ್ತಿಯಿಂದ ಪೂಜೆ ಮಾಡಿದಳು, ಆಗ ಬ್ರಾಹ್ಮಣರು ಅವಳ ಮನೆಯ ಸುತ್ತಲೂ ಮುತ್ತಿ, ಹತ್ತಿ ಆರ್ಭಟಿಸಲು, ಸಾರನ್ನು ಹೀರಿ ಚಪ್ಪರಿಸಿ ಉಣ್ಣುತ್ತ ಶಿವನು 'ನಾನು ಕೆಟ್ಟೆ, ನನ್ನ ಕೈಯಲ್ಲಾಗದು, ಬ್ರಾಹ್ಮಣರು ನನ್ನನ್ನು ಸಾಯಿಸುತ್ತಾರೆ' ಎನ್ನುತ್ತ ತವಕಿಸುತ್ತಿರಲು ಸೂರಾಂಬೆಯು ಅವನಿಗೆ ಅಭಯವನ್ನು ಕೊಟ್ಟಳು. ಶಿವನು ಕೊಡಲೇ ಮಾಯವಾದನು, ಏನು ಹೇಳಲಿ ? ೨೫. ಪ್ರಖ್ಯಾತನಾದ ತೆಲುಗೇಶನು ನವಲಿಂಗ ಸಂಧಾನವನ್ನರಿತು, ಮುಸಣಯ್ಯನೆಂಬುವನು ಲಿಂಗವನ್ನು ಸಮರಸಭಾವದಿಂದ ನೋಡಿ, ಡಕ್ಕೆಯ ಬ್ರಹ್ಮಯ್ಯನು ಅಷ್ಟಾವರಣದಿಂದ, ಅನಂತರ ಭಾನುದೇವನಿಗೆ ಗುರುವಾಗಿ ಶಿವನು ಅಸಮಾನವಾದ ರೀತಿಯಲ್ಲಿ ಲಿಂಗಾಂಗ ಸಂಬಂಧವನ್ನು ತೋರಿಸಿಕೊಟ್ಟನು ಕೇಳು,

CC-0. Jangamwadi Math Collection. Digitized by eGangotri

ಮಿಗೆಯೆಲೇಶ್ವರದ ಕೇತಯ್ಯಂ ತನೂಜಂಗೆ
ಮಗಳನೇ ಮದುವೆಯಂ ಮಾಡಿದಂ ಹುರಿದ ಬೀ
ಜಗಣಂಗಳಂ ಬಿತ್ತಿ ಬೆಳದನಾ ತಣಿಯೂರ ಬಾಚಯ್ಯನಂತೆ ಗೆಯ್ದು
ಒಗೆದ ಮರುಕೂಳೆಯೊಳ್ ತೆನೆಗಳಂ ಕೊಯ್ದನುರೆ
ಸುಗುಣನಿಳೆಹಾಳ ಬೊಮ್ಮಯ್ಯನುಂ ಬಿತ್ತದೇ
ಬಗೆಬಗೆಯ ಧಾನ್ಯಂಗಳಂ ಬೆಳೆದನೆಲೆ ಸಿದ್ಧರಾಮೇಶ ಕೇಳೆಂದನು ೨೬

ಆಲಿಸೈ ಜಂಗಮಕ್ಕಳತಿಯಾ ಚೆಂದಯ್ಯ
ನಾ ಲಲಿತಚಿಂತಾಮಣಿಯನೊಲಿದುಕೊಟ್ಟನಾ
ಕಾಳಿರಾಜಂ ತನ್ನ ಲಿಂಗಕ್ಕೆ ಷಡ್ರಸಾನ್ನಂಗಳಂ ತಾನುಣಿಸುವಂ
ಪೇಳಲೇನೈಚತಂ ಲಿಂಗಕ್ಕೆ ತಾನುಂಡ
ಮೇಲೆ ತದ್ರಸರಸಾಯನವನರ್ಪಿಸುವನಾ
ಶೀಲವಂತಂ ಕೇತಿತಂದೆ ನಿಚ್ಚಂ ಮಳೆಯನೀರನೊಲವಿಂ ತರಿಸುವಂ ೨೭

ಶೂಲಾಯುಧಂ ಚಿತ್ರದಿಂ ಬರೆದ ಹೆಣ್ಣನತಿ
ಲೀಲೆಯಿಂ ನಿಜಮಾಡಿ ಜಂಗಮಕ್ಕಿತ್ತನಾ
ಕಾಳಿರಾಜಂ ತನ್ನ ಲಿಂಗಕ್ಕೆ ಷಡುರಸಾನ್ನಂಗಳಂ ತಾನುಣಿಸುವಂ
ಪೇಳಲೇನೈಚತಂ ಸಲಿಸಿದ ರಸಾಯನವ
ಮೇಲೆ ತನ್ನಯ ಲಿಂಗಕರ್ಪಿಸಿದನನುದಿನಂ
ಶೀಲವಂತಂ ಕೇತಿತಂದೆ ನಿಚ್ಚಂ ಮಳೆಯ ನೀರನೊಲವಿಂ ತರಿಸುವಂ ೨೭ಅ

ಬಡಿಬ್ರಹ್ಮನು ಆ ಕನಸಿನಲ್ಲಿ ಬಡಿಹೋರಿಕಾಯಕವನ್ನು ಪಡೆದನು. ೨೬. ಏಲೇಶ್ವರದ ಕೇತಯ್ಯನು ಮಗನಿಗೆ ಮಗಳನ್ನೇ ಕೊಟ್ಟು ಮದುವೆ ಮಾಡಿದನು. ಆ ತಣಿಯೂರ ಬಾಚಯ್ಯನು ಹುರಿದ ಬೀಜಗಳನ್ನೇ ಬಿತ್ತಿ ಬೆಳೆದನು, ಅದೇ ರೀತಿ ಮಾಡಿ ಸುಗುಣಯ್ಯನು ಕೊಯ್ದ ಕೊಳೆಯಲ್ಲಿ ಮತ್ತೆ ತೆನೆಗಳನ್ನು ಕೊಯ್ದನು, ಇಳೆಹಾಳಬೊಮ್ಮಯ್ಯನೂ ಬಿತ್ತದೆಯೇ ಬಗೆಬಗೆಯ ಧಾನ್ಯಗಳನ್ನು ಬೆಳೆದನು, ಸಿದ್ಧರಾಮೇಶ ಕೇಳು ಎಂದನು. ೨೭. ಕೇಳಯ್ಯ, ಅಳತಿಯ ಚೆಂದಯ್ಯನು ಜಂಗಮರಿಗೆ ಪ್ರೀತಿಯಿಂದ ಮನೋಹರವಾದ ಚಿಂತಾಮಣಿಯನ್ನು ಕೊಟ್ಟನು. ಆ ಕಾಳಿರಾಜನು ತನ್ನ ಇಷ್ಟಲಿಂಗಕ್ಕೆ ಷಡ್ರಸಾನ್ನಗಳನ್ನು ಉಣಿಸುವನು. ಏನು ಹೇಳಲಿ ? ಐಚತನು ತಾನು ತಿಂದ ನಂತರ ಉಳಿದ ರಸಭರಿತ ರಸಾಯನವನ್ನು ಲಿಂಗಕ್ಕೆ ಅರ್ಪಿಸುವನು. ಆ ಶೀಲವಂತನಾದ ಕೇತಿತಂದೆಯು ಪ್ರತಿದಿನವೂ ಮಳೆಯನ್ನು ಸುರಿಸುವನು. ೨೭ಅ. ಶೂಲಾಯುಧನು ಚಿತ್ರದಲ್ಲಿ ಬರೆದ ಹೆಣ್ಣನ್ನು ಸುಲಭವಾಗಿ ನಿಜವಾದ ಹೆಣ್ಣನ್ನಾಗಿ ಮಾಡಿ ಜಂಗಮರಿಗೆ ಕೊಟ್ಟನು. ಕಾಳಿರಾಜನು ತಾನು ತನ್ನ ಲಿಂಗಕ್ಕೆ ಷಡ್ರಸಾನ್ನವನ್ನು ಉಣಿಸುವನು. ಏನು ಹೇಳಲಿ ? ಐಚತನು ಪ್ರತಿದಿನವೂ ತಾನು ಉಂಡನಂತರ ರಸಭರಿತವಾದ ರಸಾಯನವನ್ನು ಲಿಂಗಕ್ಕೆ ಅರ್ಪಿಸುವನು. ಶೀಲವಂತನಾದ ಕೇತಿತಂದೆಯು ಪ್ರೀತಿಯಿಂದ ದಿನವೂ ಮಳೆಯನ್ನು

CC-0. Jangamwadi Math Collection. Digitized by eGangotri

ಪುಲಿಕಾಮುನೊಲವಿನಿಂ ತವನಿಧಿಯ ಪಡೆದನೈ
ಬಳಿಕಲಾ ಕೋಟೆಯಾ ಶಿವದೇವನಾಗ ಶಿವ
ನೊಲವಿನಿಂದಿರದೆ ಧಾನ್ಯದ ಮಳೆಯ ಬರಿಸಿದನದಂಬಿಗರ ಚೌಡಯ್ಯನು
ನಲಿದು ಸಂಸಾರಸಾಗರವ ದಾಂಟಿದನಾಗ
ಕಲಿಚಂಡಕೇಶಿಮಾರಾ ಭಕ್ತರಿಬ್ಬರುಂ
ಸಲೆ ಲಿಂಗದಲ್ಲಿ ಪೊಕ್ಕಡಗಿದರ್ ಸಿದ್ಧರಾಮೇಶ ನೀಂ ಕೇಳೆಂದನು ೨೮

ಚಿಕ್ಕಲಿಗೆ ನಾಚಯ್ಯನಿರದೆ ಗೀತವ ಪಾಡೆ
ಮುಕ್ಕಣ್ಣನೊಲಿದು ಪ್ರಸಾದಮಂ ಕೊಟ್ಟನಾ
ಕಕ್ಕಯ್ಯಗಂದು ಕಂಕರಿಗತಿಗೆ ಕುಣಿದನಾ ಭೂಧರಂಗೊಲಿದು ಕುಣಿದ
ಚಿಕ್ಕಯ್ಯಗೊಲಿದು ನಿಜಲಿಂಗವಾದಂ ಸೊಲ್ಲೆ
ಗಕ್ಕಿಮಾರಣ್ಣನುಂ ಜಂಗಮಕೆ ಮೃಷ್ಟಾನ್ನ
ವಿಕ್ಕಲಾತಂಗೊಲಿದನೆಲೆ ಸಿದ್ಧರಾಮೇಶ ಕೇಳೆಂದು ನಿರವಿಸಿದನು ೨೯

ಉಡುಗಣೆಯ ಪೆರುಮಾಳೆ ಜಂಗಮಕೆ ರಾಜ್ಯವಿ
ತ್ತಿಡುಗಡಲ ಪೇರ್ಮಾಡಿ ಸುಧನಧಾನ್ಯಮಂ ಕೊಟ್ಟು
ನಿಡುಗುಡಿಯ ಮಾರನಾ ಸತಿಯ ಸೀರೆಯನಿತ್ತು ಸಿಂಧುಬಲ್ಲಾಳ ತನ್ನ
ಮಡದಿಯುಂ ಕೊಟ್ಟಾಯಿದಕ್ಕಿಯಾ ಮಾರನಂ
ದೊಡನೆ ಸತಿಯುಂ ಕೊಟ್ಟಹಪ್ಪಗೆಯನುಂ ತನ್ನ
ಮಡದಿಯುಂ ಕೊಟ್ಟು ಮುಕ್ತಿಯನಾಂತರೆಲೆ ಸಿದ್ಧರಾಮೇಶ ಕೇಳೆಂದನು ೩೦

ಸುರಿಸುವನು. ೨೮. ಪುಲಿಕಾಮನು ಒಲವಿನಿಂ॰ ಎಂದೂ ನಾಶವಾಗದ ಐಶ್ವರ್ಯವನ್ನು ಪಡೆದನು. ಅನಂತರ ಆ ಕೋಟೆಯ ಶಿವದೇವ ಶಿವನ ಅನುಗ್ರಹದಿಂದ ಧಾನ್ಯದ ಮಳೆಯನ್ನು ಸುರಿಸಿದನು. ಅಂಬಿಗರ ಚೌಡಯ್ಯ ಸಂತೋಷದಿಂದ ಸಂಸಾರಸಾಗರವನ್ನು ದಾಟಿದನು. ಆ ಕಲಿಗಳಾದ ಚಂಡಕೇಶಿ ಮತ್ತು ಮಾರರೆಂಬ ಭಕ್ತರಿಬ್ಬರು ಲಿಂಗದಲ್ಲಿ ಐಕ್ಯರಾದರು, ಸಿದ್ಧರಾಮೇಶ, ನೀನು ಕೇಳು ಎಂದನು. ೨೯. ಚಿಕ್ಕಲಿಗೆ ನಾಚಯ್ಯನು ಹಾಡಲು ಶಿವನು ಒಲಿದು ಪ್ರಸಾದವನ್ನು ಕೊಟ್ಟನು. ಅಂದು ಕಕ್ಕಯ್ಯನ ದೊಡ್ಡ ಬಾರುಕೋಲಿನ ಲಯಕ್ಕೆ ಕುಣಿದನು. ಆ ಭೂಧರನಿಗೆ ಒಲಿದು ಕುಣಿದನು. ಚಿಕ್ಕಯ್ಯನಿಗೆ ಒಲಿದು ಲಿಂಗರೂಪದಲ್ಲಿ ನೆಲೆಸಿದನು. ಸೊಲ್ಲೆಗಕ್ಕಿ ಮಾರಣ್ಣನು ಜಂಗಮರಿಗೆ ಮೃಷ್ಟಾನ್ನ ಭೋಜನ ಮಾಡಿಸಲು ಅವನಿಗೆ ಶಿವನು ಅನುಗ್ರಹಿಸಿದನು, ಸಿದ್ಧರಾಮೇಶ ಕೇಳು ಎಂದು ನಿರೂಪಿಸಿದನು. ೩೦. ಉಡುಗಣೆಯ ಪೆರುಮಾಳೆ ಜಂಗಮರಿಗೆ ರಾಜ್ಯವನ್ನು ಕೊಟ್ಟು ಇಡುಗಡಲ ಪೇರ್ಮಾಡಿ ಧನಧಾನ್ಯವನ್ನು ಕೊಟ್ಟು, ನಿಡುಗುಡಿಯ ಮಾರನು ತನ್ನ ಹೆಂಡತಿಯ ಸೀರೆಯನ್ನು ಕೊಟ್ಟು, ಸಿಂಧುಬಲ್ಲಾಳನು ತನ್ನ ಹೆಂಡತಿಯನ್ನೇ ಕೊಟ್ಟು, ಆಯ್ದಕ್ಕಿಯ ಮಾರಯ್ಯನು ತನ್ನ ಪತ್ನಿಯನ್ನು ಕೊಟ್ಟು, ಇಹಃಪಗೆಯನೂ ತನ್ನ ಸತಿಯನ್ನು ಕೊಟ್ಟು ಮುಕ್ತಿಯನ್ನು ಪಡೆದರು, ಎಲೈ ಸಿದ್ಧರಾಮೇಶ, ಕೇಳು ಎಂದನು.

CC-0. Jangamwadi Math Collection. Digitized by eGangotri

ಗುರುವೀರಬ್ರಹ್ಮಯ್ಯನೊಲಿದು ಪರವಾದಿ ಶಂ
ಕರಕೂಚಿಗನ ಕೊಂದು ವೀರಬಲದೇವನಂ
ದಿರದೆ ವೆಲನಾಡ ಚೋಳನ ತಲೆಯನರಿದು ಸಗರದ ಬ್ರಹ್ಮದೇವನಾಗ
ಪರವಾದಿ ಕ್ಷಪಣನಂ ಕೊಂದು ರಾಜಬ್ರಹ್ಮ
ನರಿದು ಸುಕುಮಾರಸೆಟ್ಟಿಯ ತಲೆಯನರಿದು ಶಂ
ಕರನನುರೆ ಮೆಚ್ಚಿಸಿದರೆಲೆ ಸಿದ್ಧರಾಮೇಶ ಕೇಳೆಂದು ನಿರವಿಸಿದನು ೩೧

ಪರಮಭಕ್ತಂ ತನ್ನ ಗುರುವಳಿಯೆ ತಾಂ ತನ್ನ
ಹರಣವಿತ್ತವರನುಳುಹಿದನು ಬಿಲ್ಲಮರಾಯ
ನಿರದೆ ತನ್ನಯ ಗುರುವ ಶಿವಲೋಕಕೊಯ್ದನಾ ಗೂಗೆಯಾ ಮಾರಣ್ಣನು
ಗುರುವಿನುಪದೇಶದಿಂ ಮುಕ್ತಿವಡೆದಂ ಮಗನ
ಗುರುವರನ ಹೆಸರಿಟ್ಟು ಕಾಯಸಿದ್ಧಿಯನಾಗ
ಲಿರದೆ ಪಡೆದಂ ಬೊಪ್ಪಿದೇವನೆಲೆ ಸಿದ್ಧರಾಮೇಶ ನೀಂ ಕೇಳೆಂದನು ೩೨

ಒಲಿದು ಶಿವಲಿಂಗಮಂ ಮಾದಾರಧೂಳಯ್ಯ
ನುಳಿಯ ಮೊನೆಯಲ್ಲಿ ತೋರಿದನು ಮಾಚಯ್ಯಂಗೆ
ಬಲೆಯಲ್ಲಿ ತೋರಿದನು ಚಿಕ್ಕಲಿಗೆಲಿಂಗನಾ ಭೀಮರಸಗಂ ತೋರಿದಂ
ಬಳಿಕವುರಿಲಿಂಗವಾ ಪೆದ್ದಯ್ಯನಿದಿರಿನಿಂ
ಪೊಳೆದು ತೋರಿದನು ಸೊಡ್ಡಳಬಾಚಿದೇವಂಗೆ
ನೆಲಸಿ ಸೌರಾಷ್ಟ್ರಸೋಮೇಶಂ ಕೊಟಾರದಿಂ ತೋರಿದಂ ಕೇಳೆಂದನು ೩೩

೩೧. ಗುರು ವೀರಬ್ರಹ್ಮಯ್ಯನು ಪರವಾದಿಯಾದ ಶಂಕರಕೂಚಿಗನನ್ನು ಕೊಂದು, ವೀರಬಲದೇವನು ವೆಲನಾಡ ಚೋಳನ ತಲೆಯನ್ನು ಕತ್ತರಿಸಿ, ಸಗರದ ಬ್ರಹ್ಮದೇವನು ಅನ್ಯಮತೀಯನಾದ ಭಿಕ್ಷುವನ್ನು ಕೊಂದು, ರಾಜಬ್ರಹ್ಮನು ಸುಕುಮಾರಶೆಟ್ಟಿಯ ತಲೆಯನ್ನು ತರಿದು ಶಿವನನ್ನು ಮೆಚ್ಚಿಸಿದರು, ಎಲೆ ಸಿದ್ಧರಾಮೇಶ, ಕೇಳು ಎಂದು ನಿರೂಪಿಸಿದನು. ೩೨. ಪರಮಭಕ್ತಯ್ಯನು ತನ್ನ ಗುರುವು ಮರಣ ಹೊಂದಲು ತನ್ನ ಪ್ರಾಣವನ್ನಿತ್ತು ಅವರನ್ನು ಬದುಕಿಸಿದನು. ಬಿಲ್ಲಮರಾಯನು ತನ್ನ ಗುರುವನ್ನು ಶಿವಲೋಕಕ್ಕೆ ಕರೆದೊಯ್ದನು. ಗೂಗೆಯ ಮಾರಣ್ಣ ಗುರುವಿನ ಉಪದೇಶದಿಂದ ಮುಕ್ತಿಯನ್ನು ಪಡೆದನು. ಬೊಪ್ಪಿದೇವನು ತನ್ನ ಮಗನಿಗೆ ಗುರುವಿನ ಹೆಸರನ್ನಿಟ್ಟು ಕಾಯಸಿದ್ಧಿಯನ್ನು ಪಡೆದನು, ಎಲೆ ಸಿದ್ಧರಾಮ, ಕೇಳು ಎಂದನು. ೩೩. ಮಾದಾರಧೂಳಯ್ಯನು ಮಾಚಯ್ಯನಿಗೆ ಉಳಿಯ ಮೊನೆಯಲ್ಲಿ ಶಿವಲಿಂಗವನ್ನು ತೋರಿಸಿದನು. ಚಿಕ್ಕಲಿಗೆ ಲಿಂಗನು ಭೀಮರಸನಿಗೆ ಬಲೆಯಲ್ಲಿ ಲಿಂಗವನ್ನು ತೋರಿಸಿದನು. ಪೆದ್ದಯ್ಯನು ಇದಿರಿನಿಂದಲೇ ಉರಿಲಿಂಗವನ್ನು ಹೊಳೆದು ತೋರಿಸಿದನು. ಸೌರಾಷ್ಟ್ರ ಸೋಮೇಶನು ದವಸದ ಕಣದಲ್ಲಿ ಸೊಡ್ಡಳ ಬಾಚಿದೇವನಿಗೆ ಲಿಂಗವನ್ನು ತೋರಿಸಿದನು, ಕೇಳು ಎಂದನು.

CC-0. Jangamwadi Math Collection. Digitized by eGangotri

ವೀರರೇಚಯ್ಯನಾ ಲಿಂಗಕ್ಕೆ ಶಿರವನರಿ
ದಾರತಿಯನೆತ್ತೆತ್ತಿ ಮರಳಿ ಪಡೆದಂ ಸದಾ
ಚಾರಿಯೆಂದಾ ಕೇಶಿತಂದೆ ತನ್ನಯ ತಲೆಯದಾಗ ಭವಿ ಮುಟ್ಟುತಿರಲು
ಬಾರದೆಂದಾ ತಲೆಯನರಿದು ಪಡೆದಂ ತನಗೆ
ಮಾರಹರಪೂಜೆ ತಪ್ಪಿದುದೆನುತೆ ಬಾಚಯ್ಯ
ನೋರಂತೆ ತನ್ನ ತಲೆಯುಂ ತರಿದು ಪಡೆದನೆಲೆ ರಾಮೇಶ ಕೇಳೆಂದನು ೩೪

ಕಲಿಸೋಮಿದೇವಯ್ಯನೆಸೆವ ಲಿಂಗಕೆ ತನ್ನ
ತಲೆಯ ನಲಿದಾರತಿಯನೆತ್ತಿ ಬಳಿಕಾಗಲಾ
ತಲೆಯ ಪಡೆದಂ ಜೈನವಾದದಿಂದೇಕಾಂತರಾಮಯ್ಯನಾಗ ತನ್ನ
ತಲೆಯನರಿದೇಳ್ದಿನದಮೇಲೆ ಪಡೆದಂ ಮತ್ತೆ
ಹುಲಿಗೆರೆಯ ಸೋಮಣ್ಣ ನಮಿಸಿ ಜಿನನಂ ಹತಿಸಿ
ಬಲುಲಿಂಗಮಂ ಮಾಡೆ ಮಾರುಡಿಗೆನಾಚಯ್ಯನುಂ ಜಿನರನುರೆ ಹತಿಸಿದಂ ೩೫

ಹರಭಕ್ತನಾದಯ್ಯನರಸಿ ಪದ್ಮಾವತಿಯು
ಮಿರದೆ ಜಂಗಮಕೆಂದು ಮಾಡಿದನ್ನವ ಜಿನರ
ಚರುವೆಗೆಂದೊಯ್ಯಲಾ ಸತಿಯ ಕೊಲೆ ಜೈನರಿಂ ಹುಲಿಗೆರೆಯ ಸೋಮೇಶನ
ಕರೆದು ತಂದಲ್ಲದುಣೆನೆಂದು ಹಾಸ್ಯವನಾಡೆ
ಸುರಹೊನ್ನೆಯೆಂಬ ಬಸದಿಗೆ ಬೇಗ ಹುಲಿಗೆರೆಯ
ಪುರದ ಸೋಮೇಶನಂ ಕರೆದು ತಂದಾದಯ್ಯನಿರದೆ ಜೈನರ ಹತಿಸಿದಂ ೩೬

೩೪. ಶಿವಲಿಂಗಕ್ಕೆ ವೀರ ರೇಚಯ್ಯನು ತಲೆಯನ್ನು ತರಿದು ಆರತಿಯನ್ನು ಎತ್ತಿ ಮತ್ತೆ ತಲೆಯನ್ನು ಪಡೆದನು. ಸದಾಚಾರಿಯಾದ ಕೇಶಿತಂದೆ ತನ್ನ ತಲೆಯನ್ನು ಭವಿಯು ಮುಟ್ಟಲಾಗಿ ಇರಬಾರದೆಂದು ತಲೆಯನ್ನೇ ಕತ್ತರಿಸಿಕೊಂಡು ಮತ್ತೆ ಪಡೆದನು. ತನಗೆ ಶಿವನ ಪೂಜೆ ತಪ್ಪಿಹೋಯಿತೆಂದು ಬಾಚಯ್ಯನು ತನ್ನ ತಲೆಯನ್ನು ಕತ್ತರಿಸಿಕೊಂಡು ಮರಳಿ ಪಡೆದನು, ಎಲೆ ಸಿದ್ಧರಾಮೇಶ, ಕೇಳು ಎಂದನು. ೩೫. ಕಲಿಸೋಮಿ ದೇವಯ್ಯನು ತನ್ನ ತಲೆಯನ್ನು ಕತ್ತರಿಸಿ ಹೊಳೆಯುತ್ತಿದ್ದ ಶಿವಲಿಂಗಕ್ಕೆ ಆರತಿಯನ್ನೆತ್ತಿ ಅನಂತರ ಆ ತಲೆಯನ್ನು ಪಡೆದನು. ಜೈನರೊಡನೆ ವಾದಮಾಡಿ ಏಕಾಂತರಾಮಯ್ಯನು ತನ್ನ ತಲೆಯನ್ನು ತರಿದುಕೊಂಡು ಏಳು ದಿನದ ಮೇಲೆ ಪುನಃ ಅದನ್ನು ಪಡೆದನು. ಹುಲಿಗೆರೆಯ ಸೋಮಣ್ಣನು ಜಿನನನ್ನು ಕೊಂದು ಶಿವಲಿಂಗವನ್ನು ಮಾಡಿದನು. ಮಾರುಡಿಗೆ ನಾಚಯ್ಯನೂ ಜೈನರನ್ನು ಕೊಂದನು. ೩೬. ಶಿವಭಕ್ತ ಆದಯ್ಯನ ಪತ್ನಿ ಪದ್ಮಾವತಿಯು ಜಂಗಮರಿಗೆಂದು ಮಾಡಿದ ಅನ್ನವನ್ನು ಜೈನರ ಊಟಕ್ಕೆಂದು ತೆಗೆದುಕೊಂಡು ಹೋಗಲು ಹೆಂಡತಿಯನ್ನು ಕೊಂದನು. ಹುಲಿಗೆರೆಯ ಸೋಮೇಶನನ್ನು ಕರೆದುತಂದಲ್ಲದೆ ಊಟ ಮಾಡೆನು ಎಂದು ಜೈನರಿಂದ ಹಾಸ್ಯಕ್ಕೆ ಒಳಗಾಗಿ ಸುರಹೊನ್ನೆ ಎಂಬ ಜೈನರ ಬಸದಿಗೆ ತಕ್ಷಣ ಹುಲಿಗೆರೆ ಪಟ್ಟಣದ

CC-0. Jangamwadi Math Collection. Digitized by eGangotri

ಹರುಷದಿಂ ಮೂರ್ಖನೈನಾರ್ ಶಿವಂ ಜೂಜಾಡಿ
ಭರವೆ ಸೋಲಲ್ ಕಟ್ಟಿಹಾಯ್ಕೆ ಪಣೆಗಣ್ದೋರೆ
ನಿರುತ ಜಂಗಮದೊಡವೆಯೆನುತೆ ಹುರುಗೊಂಡನಾ ಚಿರುತೊಣೆಯನುದ್ದಂಡನು
ತೆರಳುತಬಲೆಗೆ ಜಂಗಮಾರ್ಚನೆಯ ಮಾಡೆಂದು
ಪಿರಿದರ್ಥಮಂ ಕೊಡಲ್ ಭರದೊಳಗೆ ಬಂಧುಗಳಿ
ಗಿರದಿಕ್ಕೆ ಬಂದು ಬಂಧುಗಳನರಿದಾಕೆಯುಂ ಸೀಳ್ದು ಶಿವಪುರಕ್ಕೈದಿದಂ ೩೭

ಸಿರಿಯಾಳಸೆಟ್ಟಿ ಮಗನಂ ಕೊಂದು ನೀಡಿದಂ
ಹರನದಂ ಭುಂಜಿಸಿದನೀರ್ವರುಂ ಹೊರಗೆನಲ್
ಗಿರಿಜೆಯುಂ ಚಂಗಳೆಯುಮಾ ಹಲಾಯುಧನ ಮನೆಗೈತಂದು ಬೇಡಿಕೊಳಲು
ಮರಳಿಯೊಳಗನಿಸಿದಂ ಬಾಹೂರ ಬೊಮ್ಮಣ್ಣ
ಕರಿಯು ಕೊಂದಸುವಿತ್ತು ಜೋಳರಾಸಿಯೊಳೆ ಶಂ
ಕರನನೋಯೆನಿಸಿ ಕಬ್ಬಂ ಕಲ್ಲನಂದಿಗಂ ಮೇಯ್ಸಿದಂ ಭಕ್ತಿಯಿಂದೆ ೩೮

ಕಾಳಮ್ಮನೆಂಬಾಕೆ ಕಗ್ಗಲ್ಲಿನಿಂ ಕರೆದ
ಹಾಲನೀಶಂಗುಣಿಸಿದಳ್ ಬಳಿಕ್ಕಿರದೆಯಾ
ಕೋಳೂರಕೊಡಗೂಸು ಹಾಲನೀಶಂಗೆರೆದಳೊಲವಿನಿಂ ಬಲುಹೇನನು
ಗೂಳಿಯೆಂದಿರಿದಾತನೊಡಲನಿಬ್ಬಗಿಮಾಡಿ
ಸೀಳಿದಂ ರಾಮನಾಥಂ ಗೊಲ್ಲಳಂ ತಂದೆ
ಕಾಲಿಂದೆ ಲಿಂಗಮಂ ನೂಂಕೆ ಸಿರವರಿದನೆಲೆ ರಾಮೇಶ ಕೇಳೆಂದನು ೩೯

ಸೋಮೇಶನನ್ನು ಕರೆತಂದು ಆ ಆದಯ್ಯನು ಜೈನರನ್ನು ಕೊಲ್ಲಿಸಿದನು. ೩೭. ಮೂರ್ಖನೈನಾರ ಸಂತೋಷದಿಂದ ಶಿವನೊಡನೆ ಜೂಜಾಡಿ ಅವನನ್ನು ಸೋಲಿಸಿ (ಅವನು ಪಣವನ್ನು ಕೊಡದಿರಲು ಅವನನ್ನು) ಕಟ್ಟಿಹಾಕಿದನು. ಶಿವನು ಹಣೆಗಣ್ಣನ್ನು ತೋರಿಸಲು ಜಂಗಮದ ಒಡವೆಯೆನ್ನುತ್ತ ಉತ್ಸಾಹಗೊಂಡನು. ಚಿರುತೊಣೆಯನುದ್ದಂಡನು ಹೊರಗೆ ಹೋಗುತ್ತ ತನ್ನ ಪತ್ನಿಗೆ ಜಂಗಮಾರ್ಚನೆಯ ಮಾಡು ಎಂದು ಬಹಳಷ್ಟು ಹಣವನ್ನು ಕೊಟ್ಟನು. ಆಕೆ ಅದನ್ನು ಕೂಡಲೇ ಬಂಧುಗಳಿಗೆ ಕೊಡಲು ಹಿಂದಿರುಗಿದ ಚಿರುತೊಣೆಯ ಇದನ್ನು ತಿಳಿದು ಬಂಧುಗಳನ್ನು ಕೊಂದು, ಆಕೆಯನ್ನು ಸೀಳಿ ಕೈಲಾಸಕ್ಕೆ ಹೋದನು. ೩೮. ಸಿರಿಯಾಳ ಶೆಟ್ಟಿಯು ಮಗನನ್ನು ಕೊಂದು ಶಿವನಿಗೆ ಊಟಕ್ಕೆ ನೀಡಿದನು. ಹರನು ಅದನ್ನು ಉಂಡನು. ಆಗ ಅವರಿಬ್ಬರನ್ನೂ ಹೊರಹಾಕಲು ಗಿರಿಜೆಯೂ, ಚಂಗಳೆಯೂ ಆ ಹಲಾಯುಧನ ಮನೆಗೆ ಬಂದು ಬೇಡಿಕೊಂಡರು. ಆಗ ಮತ್ತೆ ಅವನು ಅವರಿಬ್ಬರನ್ನೂ ಒಳಕ್ಕೆ ಕರೆದುಕೊಂಡನು. ಬಾಹೂರ ಬೊಮ್ಮಣ್ಣನು ಆನೆಯನ್ನು ಕೊಂದು ಮತ್ತೆ ಪ್ರಾಣ ಬರಿಸಿದನು. ಜೋಳದ ರಾಶಿಯಲ್ಲಿ ಶಿವನನ್ನು ಮಾತನಾಡಿಸಿ ಕಲ್ಲಿನ ನಂದಿಗೆ ಭಕ್ತಿಯಿಂದ ಕಬ್ಬನ್ನು ತಿನ್ನಿಸಿದನು. ೩೯. ಕಾಳಮ್ಮನೆಂಬಾಕೆ ಕಗ್ಗಲ್ಲಿನಿಂದ ಕರೆದ ಹಾಲನ್ನು ಶಿವನಿಗೆ ಉಣಿಸಿದಳು. ಆ ಕೋಳೂರ ಕೊಡಗೂಸು ಒಲವಿನಿಂದ ಈಶ್ವರನಿಗೆ ಹಾಲನ್ನೆರೆದಳು. ಬಲುಹೇನನು ಗೂಳಿಯೆಂದು ಇರಿದಾತನ ಶರೀರವನ್ನು ರಾಮನಾಥನು ಎರಡಾಗಿ ಸೀಳಿದನು. ಗೊಲ್ಲಳನು ತಂದೆ

CC-0. Jangamwadi Math Collection. Digitized by eGangotri

ಕಂಗಳ ವಿರೂಪಾಕ್ಷನೊಲವಿನಿಂದಾಗ ಶಿವ
ಲಿಂಗಾರ್ಚನೆಯ ಕಾಲದಲ್ಲಿ ತನ್ನಯವೆರಡು
ಕಂಗಳಂ ತೆಗೆದು ಪೂಜಿಸಿ ಮಗುಳೆ ಪಡೆದನಾ ಕಂಗಳಾ ದೇವಯ್ಯನು
ಕಂಗಳಂ ತೆಗೆದುಪೂಜಿಸಲಾಗ ದೋಷಕಜ
ನಂಗಳತಿಹಾಸ್ಯವಂ ಮಾಡೆ ಮಾರ್ಜಾಲಕನ
ಕಂಗಳಂ ತೆಗೆದದಕೆ ಮಗುಳೆ ಪಡೆದಂ ಸಿದ್ಧರಾಮೇಶ ಕೇಳೆಂದನು ೪೦

ಶಿವರಾತ್ರಿಸಂಕಣ್ಣ ಪುಲಿಗಂಜಿ ಬಿಲ್ವದಳ
ನಿವಹದಿಂದರ್ಚಿಸಿದನಧಿಕತರಭಕ್ತಿಯಿಂ
ಶಿವರಾತ್ರಿಭದ್ರಯ್ಯನಾ ತೆರದೊಳರ್ಚಿಸಿದನೆಂಟಾಲಮಲ್ಲಯ್ಯನು
ಶಿವಲಿಂಗಪೂಜೆಗಂ ಕರವೀರವೊಂದುಳಿಯೆ
ತವೆ ತನ್ನ ಕಣ್ಣ ಕಳೆದರ್ಚಿಸಿ ಮರಳಿ ಪಡೆದ
ಶಿವಯೋಗಿ ದೇವಯ್ಯನುಂ ತನ್ನ ನಾಲಗೆಯನರಿದಿತ್ತು ಮರಳಿ ಪಡೆದಂ ೪೧

ಉರಿಲಿಂಗ ಪೆದ್ದಯ್ಯನತಿಭಕ್ತಿಯಿಂದೊಲಿದು
ಶರಣನೇ ಸತಿ ಲಿಂಗವೇ ಪತಿಯೆನಲ್ಕಾಗ
ಉರದಲ್ಲಿ ಮೊಲೆಗಳೇ ಮೂಡಿದುವು ಹೇರೂರಹೆಣ್ಣು ತಾಂ ಗಂಡಾದಳು
ಪರಿವಳಿಗೆ ವೈಜಕವ್ವಂ ಜಂಗಮಕ್ಕಿಕ್ಕ
ಲಿರದೆ ಗಂಡಂ ಜೈನ ಪೊರಡಿಸಿದೊಡೈದಿ ಶಂ
ಕರನೆಂದು ಜಿನನಪ್ಪಿದೊಡೆದೊಡೆದು ವೈಜಕೇಶ್ವರಲಿಂಗವಾದುದೊಲಿದು ೪೨

ಕಾಲಿನಿಂದ ಲಿಂಗವನ್ನು ನೂಕಲು ಅವನ ತಲೆಯನ್ನು ಕತ್ತರಿಸಿದನು, ಎಲೆ ಸಿದ್ಧರಾಮ, ಕೇಳು ಎಂದನು. ೪೦. ಕಂಗಳ ವಿರೂಪಾಕ್ಷನು ಪ್ರೀತಿಯಿಂದ ಶಿವಲಿಂಗಾರ್ಚನೆಯ ಕಾಲದಲ್ಲಿ ತನ್ನ ಎರಡೂ ಕಣ್ಣುಗಳನ್ನು ತೆಗೆದು ಪೂಜೆ ಮಾಡಿ ಅವುಗಳನ್ನು ಮತ್ತೆ ಪಡೆದನು. ಆ ಕಂಗಳ ದೇವಯ್ಯನು ಕಣ್ಣುಗಳನ್ನು ತೆಗೆದು ಪೂಜಿಸಲು ಕೆಟ್ಟ ಜನಗಳು ಅವನನ್ನು ಅತಿಯಾಗಿ ಹಾಸ್ಯಮಾಡಿದರು. ಆಗ ಅವನು ಬೆಕ್ಕಿನ ಕಣ್ಣುಗಳನ್ನು ಕಿತ್ತು ಮತ್ತೆ ಪಡೆದನು, ಸಿದ್ಧರಾಮ ಕೇಳು ಎಂದನು. ೪೧. ಶಿವರಾತ್ರಿ ಸಂಕಣ್ಣನು ಹುಲಿಗೆ ಹೆದರಿ ಶಿವನನ್ನು ಬಹುಭಕ್ತಿಯಿಂದ ಬಿಲ್ವಪತ್ರೆಗಳಿಂದ ಪೂಜೆ ಮಾಡಿದನು. ಅದೇ ರೀತಿ ಬಹಳ ಭಕ್ತಿಯಿಂದ ಶಿವರಾತ್ರಿ ಭದ್ರಯ್ಯನೂ ಪೂಜಿಸಿದನು. ಎಂಟಾಲ ಮಲ್ಲಯ್ಯ ಶಿವಲಿಂಗಪೂಜೆಗೆ ಒಂದು ಕಣಗಿಲೆ ಹೂ ಸಾಲದೆ ಬರಲು ತನ್ನ ಕಣ್ಣನ್ನೇ ಕಿತ್ತು ಪೂಜಿಸಿ ಮತ್ತೆ ಪಡೆದನು. ಶಿವಯೋಗಿ ದೇವಯ್ಯನು ಕೂಡ ತನ್ನ ನಾಲಗೆಯನ್ನು ಸೀಳಿಕೊಟ್ಟು ಮತ್ತೆ ಪಡೆದನು. ೪೨. ಉರಿಲಿಂಗ ಪೆದ್ದಯ್ಯನು ಅತಿಭಕ್ತಿಯಿಂದ ಕೂಡಿ ಶರಣನೇ ಸತಿ ಲಿಂಗವೇ ಪತಿಯೆನಲು ಆಗ ಅವನ ಎದೆಯ ಮೇಲೆ ಮೊಲೆಗಳೇ ಮೂಡಿದುವು. ಹೇರೂರ ಹೆಂಗಸು ತಾನು ಗಂಡಾದಳು. ಪರಿವಳಿಗೆಯ ವೈಜಕವ್ವೆ ಜಂಗಮರಿಗೆ ಊಟಕ್ಕಿಡಲು ಜೈನನಾದ ಅವಳ ಗಂಡನು ಮನೆಬಿಟ್ಟು ಹೊರಡಿಸಿದನು. ಅವಳು ಹೊರಟುಬಂದು ಶಿವನೆಂದು ಜಿನನನ್ನು ತಬ್ಬಿಕೊಳ್ಳಲು

CC-0. Jangamwadi Math Collection. Digitized by eGangotri

ಶಿವ ಕುಣಿಯಲಾರದೊಡೆ ಬಹುರೂಪಿನಿಣಿಯರುಂ
ಜವದಿಂದೆ ಕರುಗಾಯ್ಸಿ ಬಹುರೂಪಚೌಡನುಂ
ಶಿವನ ಮುಂಡಾಡಿ ಕುಂಬಾರಗುಂಡಯ್ಯನುಂ ಗತಿಗತಿಗೆ ಶಿವನ ಕುಣಿಸಿ
ತವೆ ರಾಗಮಂ ಪಾಡಿ ಶುದ್ಧಬುದ್ಧಂ ಬಳಿ
ಕ್ಕವನಂತೆ ಭದ್ರಗಾಯಕನಲ್ಲಮಯ್ಯ ಕೇ
ಶವರು ರಾಗಂಗಳಂ ಪಾಡಿ ಮುಕ್ತಿಯನಾಂತರೆಲೆ ರಾಮ ಕೇಳೆಂದನು ೪೬

ರಂಗವಲಿಸೇವೆಯಿಂ ಸೋವಣ್ಣ ಕಳವಿನಿಂ
ಹಿಂಗದಾ ಸುಕುಮಾರಕಂ ವಿರತಮಾಣಿಕಂ
ಲಿಂಗಮಂ ಮೆಟ್ಟಿ ಪುಷ್ಪದ ದಂಡಿಲಿಂಗಮಂ ಪೂಗರಡಿಗೆಯಲಿ ಬಡಿದು
ಅಂಗುಗಯ್ಯನ ಗುರುವ ಶಿವ ತೋರೆ ಕೇಶವಂ
ಲಿಂಗಮಂ ಬೇಗೆ ಬರಲೊಡಲಿನಲ್ಲಿಂಬಿಟ್ಟು
ಲಿಂಗದಲ್ಲಿಯೆ ಮುಕ್ತಿವಡೆದರೆಲೆ ಸಿದ್ಧರಾಮೇಶ ನೀಂ ಕೇಳೆಂದನು ೪೭

ವೀರಸಂಗಯ್ಯನಾ ಪರವಾದಿಗಳ ಹತಿಸೆ
ಸಾರಿ ಜಂಗಮವಾಗಿ ಬರೆ ತನುವನಿತ್ತನಾ
ಹೇರೂರ ನಾಚಯ್ಯನುಂ ಜಂಗಮಕ್ಕೆ ತನ್ನಯ ತನುವನಿರಿದಿತ್ತನು
ಧೀರಸೋಮಯ್ಯ ಕಾಲೊಳ್ ಮೊಳೆಗಳಂ ಬೆಟ್ಟಿ
ನೀರ ತಂದೀಶಂಗೆ ಮಜ್ಜನಕ್ಕೆರೆದನಾ
ವೀರಭೋಗಣ್ಣನುಂ ತನುವ ಬತ್ತೀಸಾಯುಧಂಗಳಿಂದರಿಕೊಂಡನು ೪೮

ಆಗ ಪ್ರತ್ಯಕ್ಷನಾಗಲು ಆ ಬಲ್ಲಿದನಾದ ಭಕ್ತನು ಶಿವನಿಗೇ ಲಿಂಗವನ್ನು ಕಟ್ಟಿ ಗುರುವಾದನು, ಎಲೆ ಸಿದ್ಧರಾಮ, ಕೇಳು ಎಂದನು. ೪೬. ಶಿವನು ಕುಣಿಯಲಾರದಿರಲು ಬಹುರೂಪಿಣಿಯರು ಕೂಡಲೇ ಎರಕಹೊಯ್ದು, ಬಹುರೂಪ ಚೌಡನು ಶಿವನನ್ನು ಮುದ್ದಾಡಿ, ಕುಂಬಾರ ಗುಂಡಯ್ಯನು ಮಡಿಕೆ ತಟ್ಟುವ ಗತಿಗೆ ಸರಿಯಾಗಿ ಶಿವನನ್ನು ಕುಣಿಸಿ, ಶುದ್ಧಬುದ್ಧನು ಚೆನ್ನಾಗಿ ರಾಗ ಹಾಡಿ, ಅವನಂತೆಯೇ ಭದ್ರಗಾಯನಾದ ಅಲ್ಲಮಯ್ಯ ಮತ್ತು ಕೇಶವರೂ ರಾಗಗಳನ್ನು ಹಾಡಿ ಮುಕ್ತಿಯನ್ನು ಪಡೆದರು, ಎಲೆ ಸಿದ್ಧರಾಮ, ಕೇಳು ಎಂದನು. ೪೭. ಸೋವಣ್ಣನು ರಂಗವಲ್ಲಿಯ ಸೇವೆಯಿಂದಲೂ, ಸುಕುಮಾರನು ಕಳ್ಳತನದ ಕಾಯಕದಿಂದಲೂ, ವಿರತ ಮಾಣಿಕನು ಲಿಂಗವನ್ನು ಮೆಟ್ಟಿಯೂ, ಪುಷ್ಪದ ದಂಡಿಯು ಲಿಂಗವನ್ನು ಹೂವಿನ ಕರಡಿಗೆಯಿಂದ ಬಡಿದೂ, ಅಂಗುಗಯ್ಯನ ಗುರುವನ್ನು ಶಿವನು ತೋರಿಸಲು ತಾಪವುಂಟಾಗಲು ಕೇಶವನು ಲಿಂಗವನ್ನು ಶರೀರದಲ್ಲಿ ಜೋಪಾನವಾಗಿ ಇಟ್ಟು ಲಿಂಗದಲ್ಲಿಯೇ ಮುಕ್ತಿ ಪಡೆದರು, ಎಲೆ ಸಿದ್ಧರಾಮೇಶ, ನೀನು ಕೇಳು ಎಂದನು. ೪೮. ಪರವಾದಿಗಳನ್ನು ಕೊಲ್ಲುತ್ತಿದ್ದ ವೀರಸಂಗಯ್ಯನು ಶಿವನು ಜಂಗಮವೇಷದಿಂದ ಬರಲು ಅವನಿಗೆ ಶರೀರವನ್ನು ಕೊಟ್ಟನು. ಹೇರೂರ ನಾಚಯ್ಯನೂ ಜಂಗಮರಿಗೆ ತನ್ನ ದೇಹವನ್ನು ಸೀಳಿಕೊಟ್ಟನು. ಧೀರಸೋಮಯ್ಯನು ಕಾಲಿನಲ್ಲಿ ಮೊಳೆಗಳನ್ನು ನೆಟ್ಟುಕೊಂಡು ನೀರನ್ನು ತಂದು ಈಶ್ವರನಿಗೆ ಮಜ್ಜನ ಮಾಡಿಸಿದನು. ವೀರಭೋಗಣ್ಣನು ತನ್ನ ಶರೀರವನ್ನು ಮೂವತ್ತೆರಡು

CC-0. Jangamwadi Math Collection. Digitized by eGangotri

ಪರವಾದಿ ಜೈನರಂದಾ ಮೋಟಮಲ್ಲನಂ
ಕರೆದು ಜಂಗಮರೂಪಿನಿಂದೆ ದಸರಯ್ಯಗಳ
ಪೊರೆಗೆ ಕಳುಪಲ್ಕವಂ ಬಂದು ಮೋಟುಗಳಿಂದೆ ತಿವಿಯೆ ಕೈಕಾಲ್ಬಂದುವು
ಕರದ ಲಿಂಗಂ ಮಡುವಿನೊಳ್ ಬೀಳೆ ಕಾಣುತುಂ
ಶರಣನೇ ಸತಿಯೆಂದು ಕೊಂಡಾಟೆ ಲಿಂಗವ
ಲ್ಲಿರದೆ ಮೊದಲಂತೆ ಬಂದುದು ಕೇಶಿರಾಜದಂಡೇಶಂಗೆ ಕೇಳೆಂದನು ೪೯

ಎಸೆವ ಶಿವದೇವನಾ ಬಚ್ಚಲೋದಕದಲ್ಲಿ
ಹಸನಾಗಿ ತೊನ್ನುಗಳ ಮಾಣಿಸಿದನಾಗ ಲಾ
ಲಿಸಿ ಮಿಂದ ನೀರಿನಿಂದೇಳ್ನೂರುಮಂದಿಗೊಲವಿಂದಾಗ ದೂಸದೇವಂ
ಬಸಿದು ಸೋರುವ ಮಹಾತೊನ್ನುಗಳನಾಗ ಮಾ
ಣಿಸಿದನಾ ಸಿಂಗಿದೇವಂ ನಿಷ್ಠೆಯಿಂ ರೋಗ
ವಿಸರಂಗಳೆಂಬವರ ಮೇಲೆ ಬಿರುದಿಕ್ಕಿದಂ ರಾಮೇಶ ಕೇಳೆಂದನು ೫೦

ಇನ್ನು ಕೇಳ್ ನಿರ್ವಿಷದ ಸಂಗಣ್ಣನಿರಲೊಂದು
ಪನ್ನಗಂ ಕಡಿದಳಿಯಲದಕೆ ಹರಣವನಿತ್ತ
ನುನ್ನತದ ಧರ್ಮಯ್ಯನುಂ ಕಲ್ಲಿನಾಥಯ್ಯನೆಂಬೀರ್ವರಿರಲವರನು
ಪನ್ನಗಂಗಳ್ ಕಚ್ಚಿ ಸಾಯ್ಲುವಕೆ ಪ್ರಾಣವಂ
ಚೆನ್ನಾಗಿ ಕೊಟ್ಟು ಬದುಕಿಸಿದನುದ್ಭಟದೇವ
ನುನ್ನತದ ಪುರಸಹಿತೆ ಕೈಲಾಸಕೈದಿದಂ ರಾಮೇಶ ಕೇಳೆಂದನು ೫೧

ಆಯುಧಗಳಿಂದ ಇರಿದುಕೊಂಡನು. ೪೯. ಪರವಾದಿಗಳಾದ ಜೈನರು ಆದಿನ ಮೋಟ ಮಲ್ಲನನ್ನು ಕರೆದು ಜಂಗಮನ ರೂಪದಿಂದ ದಸರಯ್ಯನ ಬಳಿಗೆ ಕಳಿಸಿದರು. ಅವನು ಬಂದು ಮೊಂಡು ಬೊಡ್ಡಿನಿಂದ ತಿವಿಯಲು ಕೈಕಾಲುಗಳು ಬಂದುವು. ಕೈಯಲ್ಲಿದ್ದ ಲಿಂಗವು ಕೊಳದಲ್ಲಿ ಬೀಳಲು ಅದನ್ನು ನೋಡಿ ಕೇಶಿರಾಜ ದಂಡೇಶನು ಶರಣನೇ ಸತಿ ಯೆಂದು ಕೊಂಡಾಡಲು ಆಗ ಆ ಲಿಂಗವು ಅಲ್ಲಿರದೆ ಮೊದಲಿನಂತೆ ಅವನ ಬಳಿಗೆ ಬಂದಿತು ಕೇಳು ಎಂದನು. ೫೦. ಖ್ಯಾತನಾದ ಶಿವದೇವನು ಬಚ್ಚಲನೀರಿನಿಂದ ತೊನ್ನುಗಳನ್ನು ನಿವಾರಿಸಿದನು. ಅದನ್ನು ಕೇಳಿ ಸ್ನಾನ ಮಾಡಿದ ನೀರಿನಿಂದ ಏಳ್ನೂರು ಮಂದಿಗೆ ಬಸಿದು ಸೋರುವ ಮಹಾ ತೊನ್ನುಗಳನ್ನು ದೂಸದೇವನು ಹೋಗಲಾಡಿಸಿ ದನು. ಆ ಸಿಂಗಿದೇವನು ನಿಷ್ಠೆಯಿಂದ ರೋಗಗಳನ್ನು ಓಡಿಸತಕ್ಕವರು ಎಂದು ಅವರಿಗೆ ಬಿರುದು ಕೊಟ್ಟನು, ಸಿದ್ಧರಾಮೇಶ ಕೇಳು ಎಂದನು. ೫೧. ಇನ್ನು ಕೇಳು. ನಿರ್ವಿಷದ ಸಂಗಣ್ಣನು ತನ್ನನ್ನು ಕಚ್ಚಿ ಸತ್ತ ಹಾವನ್ನು ಮತ್ತೆ ಬದುಕಿಸಿದನು. ಅದೇ ರೀತಿ ಮಹಿಮ ರಾದ ಧರ್ಮಯ್ಯ ಮತ್ತು ಕಲ್ಲಿನಾಥಯ್ಯ ಎಂಬಿಬ್ಬರು ತಮ್ಮನ್ನು ಕಚ್ಚಿದ ಸರ್ಪಗಳು ಸಾಯಲು ಅವುಗಳನ್ನು ಪ್ರಾಣವಿತ್ತು ಬದುಕಿಸಿದರು. ಉದ್ಭಟದೇವನು ತನ್ನ ಪಟ್ಟಣದ

CC-0. Jangamwadi Math Collection. Digitized by eGangotri

ಆಲಿಸೈ ಕಿನ್ನರಬ್ರಹ್ಮಯ್ಯನಿಲ್ಲಿಯು ನೃ
ಪಾಲಕಂ ಕೇಳೆ ತ್ರಿಪುರಾಂತಕನ ನುಡಿಸಿದಂ
ಪೇಳಲೇನೀ ಮಡಿವಳಯ್ಯನೇ ಬಿಜ್ಜಳನ ಪಡೆಯನುರೆ ಹತಿಸಿ ನುತಿಸೆ
ಮೇಲವರ ಬದುಕಿಸಿದನೀಯಮುಗಿದೇವರುಗ
ಳಾಲಯವ ಪೊರಡಿಸಲ್ ತನ್ನ ಲಿಂಗದ ತಲೆಯ
ಮೇಲೆ ತನ್ನಯ ಮನೆಯ ಮುಟ್ಟುಗಳನೆಲ್ಲವಂ ಹೊರಿಸಿಕೊಂಡೊಯ್ದಾತನು ೫೨

ಈತನೇ ಕಲಕೇತಬ್ರಹ್ಮಯ್ಯನಧಿಕಧನ
ವ್ರಾತವಂ ಸುಂಕದಾ ಬಂಕಯ್ಯನೆಂದೆನಿ
ಪ್ಪಾತಂಗೆ ತಗರ ಕೋಡಿಂದಿತ್ತನೀತನೇ ಕನ್ನದ ಬ್ರಹ್ಮಯ್ಯನು
ಭೀತಿಯಿಲ್ಲದೆ ಕನ್ನಗಳವಿನಿಂದಂ ಹಾಗ
ವೇ ತನಗೆ ಕಾಯಕಂಗೊಂಡು ಕನ್ನದ ಮಣ್ಣ
ನೋತು ಚಿನ್ನದ ರಾಶಿಯಂ ಮಾಡಿಕೊಟ್ಟನೆಲೆ ರಾಮೇಶ ಕೇಳೆಂದನು ೫೩

ಹಾದರದ ಬೊಮ್ಮಣ್ಣನಳಿಯಲಾತನ ಮಡದಿ
ಹಾದರದಿ ಕಾಯಕವ ತಂದು ಪಾಕವಮಾಡಿ
ಮೋದದಿಂ ಜಂಗಮಂ ಹಸಿದರೇಳೆಂದಾಗ ಗಂಡನಸುವಂ ಪಡೆದಳು
ಸಾದುನಿರ್ಲಜ್ಜೆಯಾ ಶಾಂತಯ್ಯನರಸಿಯು ವಿ
ನೋದದಿಂ ಶಿವನು ಶೀತಃಪರಿಹರಂ ಕೇಳೆ
ಚೋದ್ಯಮೆನೆ ಸತಿಪತಿಯರಿರ್ವರುಂ ಕೌಪ್ಪುಗಳನಿತ್ತರ್ ದಿಗಂಬರದೊಳು ೫೪

ಸಮೇತ ಕೈಲಾಸಕ್ಕೆ ಹೋದನು, ರಾಮೇಶ, ಕೇಳು ಎಂದನು. ೫೨. ಕೇಳಯ್ಯಾ ಸಿದ್ಧರಾಮ, ಕಿನ್ನರಿ ಬ್ರಹ್ಮಯ್ಯನು ಈ ಊರಿನ ರಾಜನು ಕೇಳಲು ತ್ರಿಪುರಾಂತಕನನ್ನು ಮಾತನಾಡಿಸಿದನು. ಏನು ಹೇಳಲಿ ? ಮಡಿವಳಯ್ಯನು ಬಿಜ್ಜಳನ ಸೈನ್ಯವನ್ನು ನಾಶ ಮಾಡಿ, ಅವನು ಪ್ರಾರ್ಥಿಸಲು ಮತ್ತೆ ಅವರನ್ನು ಬದುಕಿಸಿದನು. ಅಮುಗಿದೇವರು ಮನೆಯಿಂದ ತನ್ನನ್ನು ಹೊರಕ್ಕೆ ಹಾಕಲು ತನ್ನ ಲಿಂಗದ ತಲೆಯ ಮೇಲೆ ತನ್ನ ಮನೆಯ ಮರಮುಟ್ಟುಗಳನ್ನೆಲ್ಲ ಹೊರಿಸಿಕೊಂಡು ಹೋದನು. ೫೩. ಈತನೇ ಕಲಕೇತ ಬ್ರಹ್ಮಯ್ಯನು–ಅಧಿಕವಾದ ಹಣವನ್ನು ಸುಂಕದ ಬ್ರಹ್ಮಯ್ಯನಿಗೆ ಟಗರಿನ ಕೊಂಬಿನಿಂದಲೇ ತೆಗೆದುಕೊಟ್ಟವನು. ಈತನೇ ಕನ್ನದ ಬ್ರಹ್ಮಯ್ಯನು–ಅಂಜಿಕೆಯಿಲ್ಲದೆ ಕನ್ನಗಳವಿನಿಂದ ಒಂದು ಆಣೆ ಮತ್ತು ಎರಡು ಕಾಸನ್ನೇ ತನ್ನ ಕಾಯಕವನ್ನಾಗಿ ಹೊಂದಿ ಕನ್ನದ ಮಣ್ಣನ್ನು ಚಿನ್ನದ ರಾಶಿಯನ್ನಾಗಿ ಮಾಡಿಕೊಟ್ಟನು, ಎಲೆ ಸಿದ್ಧರಾಮೇಶ,ಕೇಳು ಎಂದನು. ೫೪. ಹಾದರದ ಬೊಮ್ಮಣ್ಣನು ಮೃತನಾಗಲು, ಆತನ ಹೆಂಡತಿ ಹಾದರದ ಕಾಯಕದಿಂದ ಸಂಪಾದಿಸಿದ ಹಣದಿಂದ ಪದಾರ್ಥಗಳನ್ನು ತಂದು ಅಡಿಗೆ ಮಾಡಿ ಸಂತೋಷದಿಂದ 'ಜಂಗಮರು ಹಸಿದಿದ್ದಾರೆ ಏಳು' ಎಂದು ಆಗ ಗಂಡನ ಪ್ರಾಣವನ್ನು ಮತ್ತೆ ಪಡೆದಳು, ಸಾದುವೂ, ನಿರ್ಲಜ್ಜಳೂ ಆದ ಶಾಂತಯ್ಯನ ಹೆಂಡತಿಯನ್ನು ಶಿವನು ವಿನೋದದಿಂದ ಚಳಿಯನ್ನು ತಡೆಯಲು ಬಟ್ಟೆಯನ್ನು ಕೇಳಲು, ಆಶ್ಚರ್ಯ ಎನ್ನುವಂತೆ, ಗಂಡ-ಹೆಂಡತಿ

CC-0. Jangamwadi Math Collection. Digitized by eGangotri

ಇರದೆ ಕಾಳಿಂಗದೇಶದಿ ಬಂದನಿಲ್ಲಿಗೀ
ಮರುಳಶಂಕರದೇವರಿಲ್ಲಿಯೇ ಹನ್ನೆರಡು
ವರುಷಪರಿಯಂತರಂ ಸುಪ್ರಸಾದದೆ ಮುಕ್ತಿವಡೆದನೀ ಘನಮಹಿಮನು
ಹರನರಸಿಯಂಶವೇ ಧರೆಯೊಳುಡುತಡಿಯೆಂಬ
ಪುರದೊಳುದ್ಭವಿಸಿ ಭವಿಯೆಂದು ಕೌಶಿಕನ ಪರಿ
ಹರಿಸಿ ಘನವಿರತಿಯಿಂ ಬಂದಳೀ ಮಹದೇವಿಯಕ್ಕ ನೀಂ ಕೇಳೆಂದನು ೫೫

ಈತನೇ ನಿಜಗುಣಮಹಾರಾಜನೆಂಬಾತ
ನೀತನೇ ಚಂದಿಮರಸಂ ಸಚಿವರಿರ್ವರುಂ
ಪ್ರೀತಿಯಿಂ ವಿರತರಾದರ್ ಬಳಿಕ್ಕೀತನೇ ಸಪ್ಪಿಯಲ್ಲಮದೇವನು
ಈತನೇ ಮಿಂಡಸಂಗಯ್ಯನೆಂದೆಂಬಾತ
ನೀತನೇ ಮುಗ್ಧ ಸಂಗಯ್ಯನೆಂದೆಂಬಾತ
ನೀತನೇ ಸತ್ಯಣ್ಣನೆಂಬಾತನೆಲೆ ಸಿದ್ಧರಾಮೇಶ ಕೇಳೆಂದನು ೫೬

ಈತನೇ ಮೇದಾರಕೇತಯ್ಯನೆಂಬಾತ
ನೀತನೇ ಡೋಹಾರ ಕಕ್ಕಯ್ಯನೆಂಬಾತ
ನೀತನೇ ಹೊಡೆಹುಲ್ಲ ಬಂಕಯ್ಯನೀತನೇ ತಳವಾರ ರಾಮಯ್ಯನು
ಈತ ಭರಿತಾರ್ಪಣದ ಸಂಗಯ್ಯನೆಂಬಾತ
ನೀತನೇ ವೈದ್ಯ ಸಂಗಣ್ಣನೆಂದೆಂಬಾತ
ನೀತನರುವಿನ ಮಾರಿತಂದೆ ಕೇಳೀತಂ ಪ್ರಸಾದಿಭೋಗಣ್ಣತಂದೆ ೫೭

ಯರಿಬ್ಬರೂ ತಾವು ದಿಗಂಬರರಾಗಿ ಉಟ್ಟ ಬಟ್ಟೆಯನ್ನೇ ಕೊಟ್ಟರು. ೫೫. ಕಳಿಂಗ ದೇಶದಿಂದ ಇಲ್ಲಿಗೆ ಬಂದ ಈ ಘನಮಹಿಮನಾದ ಮರುಳ ಶಂಕರದೇವನು ಇಲ್ಲಿಯೇ ಹನ್ನೆರಡು ವರ್ಷಗಳವರೆಗೆ ಪ್ರಸಾದಸೇವನೆಯಿಂದಲೇ ಮುಕ್ತಿ ಪಡೆದನು. ಪಾರ್ವತಿಯ ಮಹತ್ವದ ಅಂಶವೇ ಭೂಮಿಯಲ್ಲಿ ಉಡುತಡಿಯೆಂಬ ಪಟ್ಟಣದಲ್ಲಿ ಹುಟ್ಟಿ ಭವಿಯೆಂದು ಕೌಶಿಕನನ್ನು ತೊರೆದು ಶ್ರೇಷ್ಠವಾದ ವಿರಕ್ತಿಯಿಂದ ಈ ಮಹದೇವಿಯಕ್ಕ ಎಂಬ ಹೆಸರಿನಿಂದ ಬಂದಳು, ನೀನು ಕೇಳು ಎಂದನು. ೫೬. ಇವನೇ ನಿಜಗುಣ ಮಹಾರಾಜನೆಂಬುವವನು. ಈತನೇ ಚಂದಿಮರಸನು. ಸಚಿವರಾಗಿದ್ದ ಈ ಇಬ್ಬರೂ ಪ್ರೀತಿಯಿಂದ ವಿರಕ್ತರಾದರು, ಈತನೇ ಸಪ್ಪಿಯಲ್ಲಮದೇವನು, ಇವನೇ ಮಿಂಡ ಸಂಗಯ್ಯನೆನ್ನುವವನು. ಈತನೇ ಮುಗ್ಧ ಸಂಗಯ್ಯ ಎಂಬಾತನು. ಈತನೇ ಸತ್ಯಣ್ಣ ಎನ್ನುವವನು, ಎಲೆ ಸಿದ್ಧರಾಮ ಕೇಳು ಎಂದನು. ೫೭. ಈತನೇ ಮೇದಾರ ಕೇತಯ್ಯನೆಂಬಾತ. ಇವನೇ ಡೋಹಾರ ಕಕ್ಕಯ್ಯ ಎನ್ನುವವನು. ಈತ ಹೊಡೆಹುಲ್ಲ ಬಂಕಯ್ಯ, ಇವನು ತಳವಾರ ರಾಮಯ್ಯ. ಈತ ಭರಿತಾರ್ಪಣದ ಸಂಗಯ್ಯ. ಈತನೇ ವೈದ್ಯ ಸಂಗಣ್ಣನೆಂಬುವವನು. ಇವನು ಅರಿವಿನ ಮಾರಿತಂದೆ ಕೇಳು, ಈತ ಪ್ರಸಾದಿ ಭೋಗಣ್ಣತಂದೆ ಎಂಬುವವನು.

CC-0. Jangamwadi Math Collection. Digitized by eGangotri

ಈತನೇ ದಾಸೋಹಿಸಂಗಣ್ಣನೆಂಬಾತ
ನೀತನೇ ಬಾಚಿಯಾ ಕಾಯಕದ ಬಸವಪ್ಪ
ನೀತನೇ ನಗೆಯಮಾರಣ್ಣನೆಂದೆಂಬಾತನೀತನೇ ಘಟ್ಟಿವುರಸ
ಈತನೇ ಒಕ್ಕಲಿಗ ಮುದ್ದಯ್ಯನೆಂಬಾತ
ನೀತನೇ ಲದ್ದೆಯಾ ಸೋಮಯ್ಯನೆಂಬಾತ
ನೀತ ಗಾವುದಿಮಾರಿತಂದೆ ಕೇಳಿನ್ನೀತನೇ ಲೆಂಕ ಬಂಕಣ್ಣನು ೫೮

ಈತನೇ ರಾಯಸದ ಮಂಚಣ್ಣನೆಂಬಾತ
ನೀತನೇಯವಸರದ ಲೆಂಕಣ್ಣನೆಂಬಾತ
ನೀತನೇ ಪಡಿಹಾರಿಯುತ್ತಣ್ಣನೀತನೇ ಬೊಕ್ಕಸದ ಚಿಕ್ಕಣ್ಣನು
ಈತನೇ ಭಂಡಾರಿ ಶಾಂತಯ್ಯನೆಂಬಾತ
ನೀತನೇ ಹಡಪದಪ್ಪಣ್ಣನೆಂದೆಂಬಾತ
ನೀತ ಚವುರದ ನಾಚಿತಂದೆ ಕೇಳೀತನೇ ಕಾಳಾಂಜಿಯಪ್ಪಣ್ಣನು ೫೯

ಈತನೇ ಭಟ್ಟಮಾರಣ್ಣನೆಂದೆಂಬಾತ
ನೀತನಿರದುಗ್ಗಡಿಪ ಗಬ್ಬಿದೇವಯ್ಯ ಕೇ
ಳೀತ ಕೂಗಿನ ಮಾರಿತಂದೆ ಕೇಳಿನ್ನೀತನೇ ಕೋಲಶಾಂತಯ್ಯನು
ಈತನೇ ಪ್ರಹರಿಯಾ ಮಾರಣ್ಣನೆಂಬಾತ
ನೀತನೇ ತುರುಗಾಹಿ ಮಾರಣ್ಣನೆಂಬಾತ
ನೀತ ಕೇಳಗ್ಗಣಿಯ ಹೊನ್ನಯ್ಯನೀತನೇ ಸತ್ತಿಗೆಯ ಶಾಂತಯ್ಯನು ೬೦

ಇವರು ಮೊದಲಾದೇಳುನೂರೆಪ್ಪತಮರಗಣ
ನಿವಹಮಂ ಕೂಡಿಕೊಂಡೀ ಬಸವರಾಜನೊ
ಲ್ದವನಿಯೊಳ್ ವೀರಶೈವಾಚಾರಮಂ ಪ್ರತಿಷ್ಠಿಸುವೆನೆಂದೈತಂದನು

೫೮. ಈತನೇ ದಾಸೋಹಿ ಸಂಗಣ್ಣ ಎಂಬಾತ. ಈತನೇ ಬಾಚಿಯ ಕಾಯಕದ ಬಸವಪ್ಪ. ಈತ ನಗೆಯ ಮಾರಣ್ಣನೆಂಬಾತ. ಇವನು ಘಟ್ಟಿವುರಸ. ಇವನೇ ಒಕ್ಕಲಿಗ ಮುದ್ದಯ್ಯ ಎನ್ನುವವನು. ಈತನೇ ಲದ್ದೆಯ ಸೋಮಯ್ಯ. ಈತ ಗಾವುದಿ ಮಾರಿತಂದೆ. ಈತನೇ ಭಕ್ತನಾದ ಬಂಕಣ್ಣನು. ೫೯. ಈತ ರಾಯಸದ ಮಂಚಣ್ಣ. ಈತನೇ ಅವಸರದ ಲೆಂಕಣ್ಣನೆನ್ನುವವನು. ಇವನು ಪಡಿಹಾರಿ ಉತ್ತಣ್ಣ. ಈತನೇ ಬೊಕ್ಕಸದ ಚಿಕ್ಕಣ್ಣ, ಇವ ಭಂಡಾರಿ ಶಾಂತಯ್ಯ ಎಂಬಾತ. ಈತ ಹಡಪದ ಅಪ್ಪಣ್ಣ. ಇವನು ಚವುರದ ನಾಚಿತಂದೆ, ಕೇಳು. ಇವನೇ ಕಾಳಾಂಜಿ ಅಪ್ಪಣ್ಣ. ೬೦. ಈತನು ಭಟ್ಟ ಮಾರಣ್ಣ. ಇವನು ಸ್ತುತಿಪಾಠಕ ಗಬ್ಬಿದೇವಯ್ಯ. ಈತ ಕೂಗಿನ ಮಾರಿತಂದೆ. ಈತನೇ ಕೋಲ ಶಾಂತಯ್ಯ. ಈತನೇ ಪ್ರಹರಿ (ಕಾವಲುಗಾರ) ಮಾರಣ್ಣ, ಈತ ತುರುಗಾಹಿ ಮಾರಣ್ಣ. ಈತ ಅಗ್ಗಣಿಯ ಹೊನ್ನಯ್ಯ. ಈತನೇ ಸತ್ತಿಗೆಯ ಶಾಂತಯ್ಯ. ೬೧. ಇವರು ಮೊದಲಾಗಿ ಏಳುನೂರ ಎಪ್ಪತ್ತು ಮಂದಿ ಅಮರಗಣ ಸಮೂಹವನ್ನು ಕೂಡಿಕೊಂಡು ಈ ಬಸವಣ್ಣನು ಮನವೊಲಿದು ಭೂಮಿಯಲ್ಲಿ ವೀರಶೈವಾಚಾರವನ್ನು ನೆಲೆಗೊಳಿಸುವೆನು

CC-0. Jangamwadi Math Collection. Digitized by eGangotri

ಇವರ ಮಹಾತ್ಮೆಗಳನುಸಿರಲೆನ್ನಳವಲ್ಲ
ವವಿರಳಾನಂದ ಬಸವೇಶ್ವರನ ಮಹಿಮೆಯುಂ
ವಿವರಿಸುವ ಕೇಳೆಂದು ಚೆನ್ನಬಸವಂ ಸಿದ್ಧರಾಮಂಗೆ ನಿರವಿಸಿದನು ೬೧

ಈತನಾರೆಂದು ತಿಳಿದಯ್ ಮಲ್ಲಗಣಪನೆಂ
ಬಾತನುರೆ ಮೇಖಲಾಸುರನನರಿದಿವರ ಸಂ
ಗಾತ ಮರ್ತ್ಯಕೆ ಬಂದು ಕಲಕೇತಬ್ರಹ್ಮನೆಂದೆನಿಸಿ ಬಿಜ್ಜಳನ ತಗರ
ಘಾತಿಸಿ ತದೀಯ ಶೃಂಗಂಬಿಡಿದು ಮಗುಳೆ ಬಂ
ದಾತನೊಲವಿಂ ತುತಿಸಲದಕೆ ಹರಣಮನಿತ್ತು
ಪ್ರೀತಿಯಿಂದದರ ಕೋಡಿಂ ಪೊನ್ಗಳಂ ಬಂಕನೆಂಬವಂಗೊಲಿದಿತ್ತನು ೬೨

ಮೃಡನರಸಿಯಂಶವೇ ಧರಣಿಯೊಳಗೊಪ್ಪುತಿ
ರ್ಪುಡುತಡಿಯೆನಿಪ್ಪ ಪಟ್ಟಣದಲ್ಲಿ ಜನಿಸಲಾ
ಪೊಡವೀಶ ಕೌಶಿಕಂ ಕಾಮದಿಂ ಪಿಡಿದೊಡೊಲ್ಲದೆ ದಿಗಂಬರಿಯಳಾಗಿ
ಕಡುವಿರಕ್ತಿಯೊಳೀ ಮಹಾದೇವಿಯಕ್ಕ ತಾಂ
ನಡೆದಿಲ್ಲಿಗೈತಂದಳೀಕೆಯ ಮಹಾತ್ಮೆಯುಂ
ನುಡಿಯಲೆನ್ನಳವಲ್ಲವೆನುತಲಾ ಸಿದ್ಧರಾಮೇಶಂಗೆ ನಿರವಿಸಿದನು ೬೩

ರಾಮ ಕೇಳೆಂದು ಹರಿಯಜಮುಖ್ಯನಿರ್ಜರ
ಸ್ತೋಮಮಂ ಗೆಲ್ದು ದಕ್ಷನ ಶಿರವನರಿದು ಸು
ಪ್ರೇಮದಿಂ ಮಗುಳೆ ಬರ್ದುಕಿಸಿ ಮರ್ತ್ಯನೊಳಗೆ ಪರವಾದಿಗಳನಪಹರಿಸಲು

ಎಂದು ಬಂದನು. ಇವರ ಮಹಾತ್ಮೆಗಳನ್ನು ವಿವರಿಸಲು ನನ್ನಿಂದ ಸಾಧ್ಯವಿಲ್ಲ, ಅತಿಯಾದ ಆನಂದವನ್ನುಂಟುಮಾಡುವ ಬಸವೇಶ್ವರನ ಮಹಿಮೆಯನ್ನು ವಿವರಿಸುವೆನು ಕೇಳು, ಎಂದು ಚೆನ್ನಬಸವಣ್ಣನು ಸಿದ್ಧರಾಮನಿಗೆ ನಿರೂಪಿಸಿದನು. ೬೨. ಇವನು ಯಾರೆಂದು ತಿಳಿದೆ ? ಮಲ್ಲಗಣಪನೆನ್ನುವವನು, ಮೇಖಲಾಸುರನನ್ನು ಕೊಂದು ಇವರ ಕೂಡೆ ಭೂಮಿಗೆ ಬಂದು ಕಲಕೇತ ಬ್ರಹ್ಮಯ್ಯನೆಂಬ ಹೆಸರನ್ನು ಪಡೆದು, ಬಿಜ್ಜಳನ ಟಗರನ್ನು ಕೊಂದು ಅದರ ಕೊಂಬನ್ನು ಹಿಡಿದು, ಮತ್ತೆ ಬಂದು ಅವನು ಪ್ರೀತಿಯಿಂದ ಪ್ರಾರ್ಥಿಸಲು ಅದಕ್ಕೆ ಪ್ರಾಣವನ್ನು ಕೊಟ್ಟು, ಅದರ ಕೊಂಬಿನಿಂದ ಬಂಕನೆಂಬುವವನಿಗೆ ಹೊನ್ನುಗಳನ್ನು ಆದರಿಸಿ ಕೊಟ್ಟನು. ೬೩. ಪಾರ್ವತಿಯ ಅಂಶವೇ ಭೂಮಿಯಲ್ಲಿರುವ ಉಡುತಡಿಯೆನ್ನುವ ಪಟ್ಟಣದಲ್ಲಿ ಜನಿಸಲು ಆ ಪಟ್ಟಣದ ರಾಜ ಕೌಶಿಕನು ಕಾಮಾತುರನಾಗಿ ಹಿಡಿದರೆ, ಅವನನ್ನು ಒಲ್ಲದೆ ದಿಗಂಬರಳಾಗಿ ಘನವಿರಕ್ತಿಯಿಂದ ಈ ಮಹದೇವಿಯಕ್ಕ ಇಲ್ಲಿಗೆ ನಡೆದುಬಂದಳು. ಈಕೆಯ ಮಹಾತ್ಮೆಯನ್ನು ಹೇಳಲು ನನ್ನಿಂದ ಸಾಧ್ಯವಿಲ್ಲ ಎಂದು ಆ ಸಿದ್ಧರಾಮೇಶನಿಗೆ ವಿವರಿಸಿದನು. ೬೪. ಸಿದ್ಧರಾಮ, ಕೇಳು. ಆದಿನ ವಿಷ್ಣು-ಬ್ರಹ್ಮ ಮೊದಲಾದ ಮುಖ್ಯ ದೇವತೆಗಳ ಸಮೂಹವನ್ನು ಗೆದ್ದು, ದಕ್ಷನ ತಲೆಯನ್ನು ಕಡಿದು ಪ್ರೇಮದಿಂದ ಮತ್ತೆ ಬದುಕಿಸಿ ಭೂಮಿಯಲ್ಲಿ ಪರವಾದಿ

CC-0. Jangamwadi Math Collection. Digitized by eGangotri

ಈ ಮಹಿಗೆ ಬಂದು ಬಿಜ್ಜಳನ ಬಲಮುಂ ವಿನಿ
ರ್ನಾಮಮಂ ಮಾಡಿ ಮಗುಳಸುವಿತ್ತು ಭಕ್ತರ ಮ
ಹಾಮನದ ಮೈಲಿಗೆಯ ತೊಳೆದನೀ ಮಡಿವಳಂ ಸಾಮಾನ್ಯನಲ್ಲೆಂದನು ೬೪

ಎಲೆ ರಾಮನೀ ಬಸವನಾರೆಂಬುದಂ ನಿನಗೆ
ತಿಳಿಪುವೆಂ ಪ್ರಣವಸ್ವರೂಪಂ ದ್ವಿತೀಯಶಿವ
ನೊಲವಿಂ ಶಿಲಾದಮುನಿ ತಪನೆ ಮೆಚ್ಚಿಸಿ ಬೇಡೆ ಮಗನಾಗಿ ತಾಂ ತಪದೊಳು
ಸಲೆ ಶಿವನ ಮೆಚ್ಚಿಸಿ ಸುಭಕ್ತಿಯುಂ ಪಡೆದು ತಾಂ
ತಳೆದೀಶನಂ ಸುಖದೊಳಿರೆ ಹರಿಬ್ರಹ್ಮಾದಿ
ಗಳ ಗಡಣದಿಂ ಮಹಾದೇವನೊಡ್ಡೋಲಗದೊಳಿರ್ಪ ಸಮನಂತರದೊಳು ೬೫

ಸುರಪನಖಿಳಾಮರಕದಂಬಕಂಬೆರಸು ಶಂ
ಕರನೋಲಗಕ್ಕೈದುತೀಶನಿದಿರಿನೊಳಿರ್ದ
ವರನಂದಿಯಂ ಸೋಂಕಿ ಬರೆ ಬಾಲದಿಂ ಬಡಿಯೆ ಕಡುನೊಂದು ದೇವೇಂದ್ರನು
ಗರುಡ ಹಂಸೈರಾವತೋಚ್ಚೈಶ್ರವಾದಿಗಳಿ
ವಿರಲೀಯನಡ್ವವಾಹನವೇಕೆ ಶಿವಗೆಂದು
ಸುರರೊಡನೆ ನುಡಿವುತಿರಲಾ ಮಾತುಗೇಳದಂದದೊಳೀಶನಿರುತಿರ್ದನು ೬೬

ಶಿವನಿದನುಪೇಕ್ಷಿಸಿದನೆಂದು ನಂದೀಶ್ವರಂ
ತವಕದಿಂ ಮುನಿದ್ಯೆದೆ ನಾರದಂ ಬಂದು ಶಂ
ಭುವಿನೊಡನೆ ತದ್ವಾರ್ತೆಯಂ ಪೇಳಲಭವಂ ಸುರಪನೆಂದ ವಾಹಂಗಳ

ಗಳನ್ನು ನಾಶಮಾಡಲು, ಈ ಲೋಕದಲ್ಲಿ ಅವತರಿಸಿ ಬಿಜ್ಜಳನ ಸೈನ್ಯವನ್ನು ನಾಶಮಾಡಿ ಮತ್ತೆ ಅವರಿಗೆ ಪ್ರಾಣದಾನ ಮಾಡಿ ಭಕ್ತರ ಮನಸ್ಸಿನ ಕೊಳೆಯನ್ನು ತೊಳೆದ ಈ ಮಡಿವಾಳ ಮಾಚಯ್ಯನು ಸಾಮಾನ್ಯನಲ್ಲ. ೬೫. ಎಲೆ ಸಿದ್ಧರಾಮ, ಈ ಬಸವಣ್ಣನು ಯಾರೆಂದು ನಿನಗೆ ತಿಳಿಸುತ್ತೇನೆ. ಇವನು ಓಂಕಾರಸ್ವರೂಪಿ, ಎರಡನೇ ಶಿವ, ಶಿಲಾದ ಮುನಿಯು ತಪಸ್ಸಿನಲ್ಲಿ ಇವನನ್ನು ಮೆಚ್ಚಿಸಿ ವರವನ್ನು ಬೇಡಲು ಅವನಿಗೆ ಮಗನಾಗಿ ಹುಟ್ಟಿದನು. ತಾನು ತಪಸ್ಸು ಮಾಡಿ ಶಿವನನ್ನು ಮೆಚ್ಚಿಸಿ, ಉತ್ತಮ ಭಕ್ತಿಯನ್ನು ಪಡೆದು ಈಶನನ್ನು ಸೇರಿ ಸುಖದಲ್ಲಿರಲು ವಿಷ್ಣು-ಬ್ರಹ್ಮ ಮೊದಲಾದವರ ಸಮೂಹ ದಿಂದ ಶಿವನು ಒಡ್ಡೋಲಗದಲ್ಲಿರುವ ಸಮಯದಲ್ಲಿ ೬೬. ದೇವೇಂದ್ರನು ದೇವತಾ ಸಮೂಹದೊಡಗೂಡಿ ಶಿವನ ಸಭೆಗೆ ಬಂದನು. ಶಿವನ ಎದುರಿನಲ್ಲಿದ್ದ ನಂದಿಯನ್ನು ಸೋಕಲು ಅವನು ಬಾಲದಿಂದ ಹೊಡೆದನು. ಆಗ ಇಂದ್ರನು ಅತಿಯಾಗಿ ನೊಂದು ಗರುಡ, ಹಂಸ, ಐರಾವತ, ಉಚ್ಚೈಶ್ರವ ಮೊದಲಾದುವುಗಳಿರಲು ಈ ಎತ್ತಿನ ವಾಹನ ಶಿವನಿಗೇಕೆ ಎಂದು ದೇವತೆಗಳೊಡನೆ ಹೇಳುತ್ತಿರಲು ಈಶ್ವರನು ಆ ಮಾತು ಕೇಳದವ ನಂತೆ ಇದ್ದನು. ೬೭. ಶಿವನು ಇದನ್ನು ಉಪೇಕ್ಷಿಸಿದನು ಎಂದು ನಂದೀಶ್ವರನು ಕೂಡಲೇ ಕೋಪಗೊಂಡು ಹೊರಟುಹೋದನು. ನಾರದನು ಬಂದು ಈ ವಾರ್ತೆ ಯನ್ನು ಶಿವನೊಡನೆ ಹೇಳಿದನು. ಆಗ ಶಿವನು ದೇವೇಂದ್ರನು ಹೇಳಿದ ವಾಹನಗಳ

CC-0. Jangamwadi Math Collection. Digitized by eGangotri

ನಿವಹವೆಮ್ಮಂ ಧರಿಸಲಾರ್ಪುವೇ ಮದ್ಧರ್ಮ
ಮವಯವಂಗಳನಾಂತ ನಂದಿ ನೀನೆಂದ ನುಡಿ
ಗವಗಡದೊಳ್ಮೈಡಿದಂ ಕರೆತರ್ಪುದೆನಲಿಂದ್ರನಾಕ್ಷಣಂ ಬೀಳ್ಕೊಂಡನು ೬೭

ಚತುರಂಗಸೇನೆಯುಂ ದಿಕ್ಪಾಲಕರ್ವೆರಸಿ
ಶತಮುಖಂ ಪೋಗಿ ನಂದಿಯು ಕರೆಯಲೊಲ್ಲದಿರೆ
ವಿತತಿ ಯಮವರುಣಪಾಶಂಗಳಂ ಗಳಕಿಕ್ಕಿ ಗಾಢದಿಂ ಬರಸೆಳೆಯಲು
ಅತಿಕೋಪದಿಂ ಪಾದದಿಂದೆ ಕೆರೆದಿಟ್ಟ ಮ
ಣ್ಣಾತುಳಕೇತಾರ ಮುಕ್ತಿಯುಗಳಾದುವು ಶೃಂಗ
ಹತಿಯೊಳಿಡೆ ಸಿಂಗಳಂ ತಾನಾದುದದುವೆ ಮಾನಸಸರೋವರವಾದುದು ೬೮

ಪಾಶಂಗಳಂ ಪರಿದು ಹೂಂಕರಿಸಲಾತನು
ಚ್ಛ್ವಾಸ ನಿಶ್ವಾಸದಿಂದಮರೇಂದ್ರಮುಖನಾಕ
ವಾಸಿಗಳ್ ತರಗೆಲೆಗಳಂತೆಡಬಲಕ್ಕೊಲೆಯುದೆಡೆಯಾಡುತಿರ್ದು ಬಳಿಕೆ
ವಾಸವಂ ಕಡುನೊಂದು ಸುಜ್ಞಾನಯುತನಾಗಿ
ಲೇಸಾಗಿ ನಂದಿಯುಂ ಕೊಂಡಾಡೆ ಮೆಚ್ಚಿ ಸುವಿ
ಲಾಸದಿಂ ವರವದೇನೆನಲಮರಪತಿ ವೃಷಭರಾಜನೊಡನಿಂತೆಂದನು ೬೯

ಸಮೂಹ ನಮ್ಮನ್ನು ಧರಿಸುವ ಸಾಮರ್ಥ್ಯ ಹೊಂದಿದೆಯೆ ? ನನ್ನ ಧರ್ಮವನ್ನೇ ಅಂಗಾಂಗವಾಗಿ ಉಳ್ಳ ನಂದಿಯು ನೀನು ಎಂದ ಮಾತಿನಿಂದ ಕೋಪಗೊಂಡು ಹೊರಟು ಹೋದನು. ನೀನು ಹೋಗಿ ಕರೆದುಕೊಂಡು ಬಾ ಎನ್ನಲು ಇಂದ್ರನು ತಕ್ಷಣ ಹೊರಟನು. ೬೮. ಚತುರಂಗಸೇನೆಯನ್ನು ಮತ್ತು ದಿಕ್ಪಾಲಕರನ್ನು ಜೊತೆಯಲ್ಲಿ ಕರೆದು ಕೊಂಡು ದೇವೇಂದ್ರನು ಹೋಗಿ ನಂದಿಯನ್ನು ಕರೆದನು. ಅವನು ಬರಲೊಪ್ಪದಿರಲು ಪಸರಿಸಿದ ಯಮ ಮತ್ತು ವರುಣಪಾಶಗಳನ್ನು ಕೊರಳಿಗೆ ಹಾಕಿ ರಭಸವಾಗಿ ಎಳೆಯಲು ನಂದಿಯು ಅತಿಯಾಗಿ ಕೋಪಗೊಂಡು ಪಾದದಿಂದ ಕೆರೆದು ಚಿಮ್ಮಿಸಿದ ಮಣ್ಣು ಶ್ರೇಷ್ಠ ವಾದ ಕೇದಾರ ಮತ್ತು ಮಕ್ತಾಪಟ್ಟಣಗಳಾದುವು. ಕೊಂಬಿನಿಂದ ತಿವಿಯಲು ಎದ್ದು ಹಾರಿದ ಮಣ್ಣೇ ಸಿಂಹಳದ್ವೀಪವಾಯಿತು. ಅದು ತೋಡಿದ ಗುಳಿಯೇ ಮಾನಸ ಸರೋವರವಾಯಿತು. ೬೯. ಆ ಪಾಶಗಳನ್ನು ಹರಿದು ಹೂಂಕಾರ ಮಾಡಲು ಅವನ ಶ್ವಾಸೋಚ್ಛ್ವಾಸದ ಗಾಳಿಯಿಂದ ದೇವೇಂದ್ರ ಮೊದಲಾದ ದೇವತೆಗಳು ತರಗೆಲೆಗಳಂತೆ ಎಡಬಲಕ್ಕೆ ಓಲಾಡುತ್ತಿದ್ದರು. ಅನಂತರ ದೇವೇಂದ್ರನು ಅತಿಯಾಗಿ ನೊಂದು ಸುಜ್ಞಾನವನ್ನು ಪಡೆದು ನಂದಿಯನ್ನು ಚೆನ್ನಾಗಿ ಕೊಂಡಾಡಲು ಅವನು ಮೆಚ್ಚಿ ಸಂತೋಷದಿಂದ ವರವೇನು ಬೇಕು ಕೇಳು ಎನ್ನಲು ದೇವೇಂದ್ರನು ವೃಷಭರಾಜನೊಡನೆ

CC-0. Jangamwadi Math Collection. Digitized by eGangotri

ನಂದೀಶ ಕೇಳ್ದುದೀ ಭಾಗ್ಯಮಸ್ಥಿರಮಿದರ
ದಂದುಗವನೊಲ್ಲೆ ನಾಂ ಪ್ರಾಣಲಿಂಗವನಿತ್ತು
ಮುಂದೆ ನಿಜಸುಖಮಿವುದೆನಲೀ ಶರೀರದಿಂದಾಗದದು ನರಜನ್ಮದಿಂ
ಬಂದು ವರಶೈವನಿಷ್ಠೆಯೊಳಿರಲ್ ಕೊಡುವೆನೆನ
ಲಿಂದಿರಂ ಕೆಯ್ಕೊಂಡು ಬಳಿಕಲಾ ಪಟ್ಟಗ
ಲ್ಲೆಂದೆಂಬ ಪುರದ ಚಾಳೋಕ್ಯಕುಲ ತ್ರೈಲೋಕ್ಯಚೂಡಾಮಣೀಶನರಸಿ ೭೦

ತರುಣಿ ಸುಮಹರ್ಲೇಖೆಯುದರದೊಳ್ ವಸುದೀಪ್ಯ
ವರನಾಮದಿಂದುದಿಸಿದನಿಮಿಷಂ ಚತುರಂಗ
ವೆರಸಿ ಬೇಂಟೆಗೆ ಪೋಗಿ ಬಳಲಿಯೊಂಟಿಗನಾಗಿ ಹಯಮಿಳಿಯೆ ಬಯಲಾಗಲು
ದರುಶನಕೆ ಲಿಂಗಮಿಲ್ಲದೆ ಪಸಿದ ಭೂವರನ
ಸರಿಸದೊಳ್ ಮುನ್ನಿತ್ತ ವರಕಾಗಿ ನಂದಿ ಸಂ
ಚರಿಸಲೀಕ್ಷಿಸಿ ಲಿಂಗಮಂ ಕೇಳಲಿಷ್ಟಲಿಂಗೋಪದೇಶಂಗೆಯ್ದನು ೭೧

ಸಲೆ ಪ್ರಾಣಲಿಂಗಸಂಬಂಧಿಯಂ ಮಾಡಿ ಮ
ತ್ತೊಲಿದು ನಿಜಸುಖಮಿತ್ತು ಪೋಗಲಾತನ ಮಂತ್ರಿ
ಕುಲಮಿರದೆ ಗುಡಿಗಟ್ಟಿ ಮಿಗೆ ಸಮಾಧಿಸ್ಥಿತನ ಮಾಡಿ ಪೋಗಲ್ಕತ್ತಲು
ಸಲವಿನಿಂ ನಾರದಂ ಪೋಗಿ ಶಿವಪುರದ ಬಾ
ಗಿಲನಿರದೆ ಕಾಯ್ವರೊಳ್ ನಂದೀಶನನಿಮಿಷಂ
ಗೊಲವಿನಿಂ ಪ್ರಾಣಲಿಂಗವನಿತ್ತು ಬಹನೆನಲ್ ಸಿಂಹಿಕೇಶದ್ರುವಿಡರು ೭೨

ಹೀಗೆಂದನು. ೭೦. ನಂದೀಶ, ಕೇಳು, ಈ ಭಾಗ್ಯವೆಂಬುದು ಅಶಾಶ್ವತವಾದುದು. ಇದರ ತೊಂದರೆ ನನಗೆ ಬೇಡ. ಪ್ರಾಣಲಿಂಗವನ್ನು ಕೊಟ್ಟು ಮುಂದೆ ಶಾಶ್ವತವಾದ ಮುಕ್ತಿಯನ್ನು ಕೊಡು ಎಂದನು. ಆಗ ನಂದಿಯು ಈ ಶರೀರದಿಂದ ಅದು ಸಾಧ್ಯವಿಲ್ಲ. ಮಾನವಜನ್ಮವೆತ್ತಿ ಶೈವನಿಷ್ಠೆಯಿಂದಿರಲು ಪ್ರಾಣಲಿಂಗವನ್ನು ಕೊಡುತ್ತೇನೆಂದನು. ಅದೇರೀತಿ ವರಪಡೆದು ದೇವೇಂದ್ರನು ಅನಂತರ ಪಟ್ಟದಕಲ್ಲೆಂಬ ಪಟ್ಟಣದ ರಾಜನಾದ ಚಾಲುಕ್ಯಕುಲದ ತ್ರೈಲೋಕ್ಯಚೂಡಾಮಣಿಯ ರಾಣಿ ೭೧. ತರುಣಿಯಾದ ಸುಮುಹರ್ಲೇಖೆಯ ಬಸುರಿನಲ್ಲಿ ವಸುದೀಪ್ಯನೆಂಬ ಶ್ರೇಷ್ಠವಾದ ಹೆಸರಿನಿಂದ ಹುಟ್ಟಿದ (ದೇವೇಂದ್ರನು) ಅನಿಮಿಷನು ಚತುರಂಗಸೇನೆಗೂಡಿ ಬೇಟೆಗೆ ಹೋಗಿ ಬಳಲಿ ಒಂಟಿಯಾಗಿ ಕುದುರೆಯಿಂದ ಇಳಿಯಲು ಅದು ಮಾಯವಾಯಿತು. ದರ್ಶನ ಮಾಡಲು ಲಿಂಗವಿಲ್ಲದೆ ಹಸಿದಿದ್ದ ರಾಜನ ಸಮೀಪದಲ್ಲಿ ಮೊದಲೇ ಕೊಟ್ಟಿದ್ದ ವರಪಾಲಿಸುವುದಕ್ಕಾಗಿ ನಂದಿಯು ಓಡಾಡಲು ಅವನನ್ನು ನೋಡಿ ಲಿಂಗವನ್ನು ಕೇಳಿದನು. ಆಗ ನಂದಿಯು ಅವನಿಗೆ ಇಷ್ಟಲಿಂಗೋಪದೇಶ ಮಾಡಿದನು. ೭೨. ಇಂದ್ರನನ್ನು ಪೂರ್ಣ ಪ್ರಾಣಲಿಂಗ ಸಂಬಂಧಿಯನ್ನು ಮಾಡಿ ಮತ್ತೆ ಒಲಿದು ಅವನಿಗೆ ಮೋಕ್ಷವನ್ನು ಕೊಟ್ಟು ನಂದಿಯು ಹೋಗಲು ಆತನ ಮಂತ್ರಿಗಳ ಸಮೂಹ ಸುತ್ತುಗಟ್ಟಿ ಅವನನ್ನು ಸಮಾಧಿಸ್ಥಿತನನ್ನಾಗಿ ಮಾಡಿ ಹೋದರು. ಅತ್ತಕಡೆ ನಾರದನು ಆನಂದದಿಂದ ಹೋಗಿ ಕೈಲಾಸದ ಬಾಗಿಲನ್ನು ಕಾಯುವವರೊಂದಿಗೆ ನಂದಿಯು ಅನಿಮಿಷನಿಗೆ ಪ್ರಾಣಲಿಂಗವನ್ನು ಕೊಟ್ಟು

CC-0. Jangamwadi Math Collection. Digitized by eGangotri

ಭವಿಯೆಂದು ಬಾಗಿಲಿಗೆ ಬಂದ ನಂದಿಯು ತಡೆಯೆ
ಶಿವನರಿದು ಬಂದು ಸರ್ವಾಂಗಲಿಂಗಿಯನಿಂತು
ಭವಿಯೆಂದ ಕಾರಣಂ ಮರ್ತ್ಯದೊಳ್ ಭವಿಗಳಾಗುದ್ಭವಿಸಿ ನಂದೀಶನ
ನವಮಹತ್ತ್ವಮನರಿದು ಬನ್ನಿಮೆನಲವದಿರು
ದ್ಭವಿಸಿದರ್ ಕನ್ನೇಶ ಬಿಜ್ಜಳಾಖ್ಯದೊಳತ್ತ
ಶಿವನಿರದೆ ನಂದಿಯಂ ಸಂತಯಿಸಿಯೊಂದಿನದೊಳೊಡ್ಡೋಲಗದೊಳಿರ್ದನು ೭೩

ನಾರದಂ ಬಂದು ಶಿವನಡಿಗೆರಗಿ ದೇವ ಕೇಳ್
ಧಾರಿಣೀಮಂಡಲದೊಳಡಗಿತನುಪಮಶಿವಾ
ಚಾರಮದನುದ್ಧರಿಸಬೇಕೆನಲ್ಕೀಶ್ವರಂ ನಂದಿಯಂ ಕರೆದು ನೀನು
ವೀರಶೈವಾಚಾರಮಂ ನಿಲಿಸಿ ಬಿಜ್ಜಳಂ
ಗೋರಂತೆ ನಿನ್ನ ಮಹಿಮೆಯನರಿಪಿ ಬಾರೆನಲ್
ಮಾರಾರಿಯಾಜ್ಞೆಯಿಂದಮರಗಣವೆರಸಿ ನಂದೀಶ್ವರಂ ಬೀಳ್ಕೊಂಡನು ೭೪

ಎಸೆವ ಮಾದರಸ ಮಾದಾಂಬೆಯರ ಗರ್ಭದಿಂ
ಬಸವನೆಂದೆಂಬ ನಾಮದೆ ಜನಿಸಿ ವಿಪ್ರಸುತ
ನಸಮಕೂಪದೊಳಿಳ್ದು ಬಿದ್ದು ಸಾಯಲ್ಕವನ ತಾಯ್ತಂದೆಗಳ್ ಭರದೊಳು
ಬಸವನಂ ಬೆಂಬತ್ತಲೋಡಿ ನದಿಯುಂ ಕಾಣು
ತೆಸಕದಿಂದಿರ್ಭಾಗಮಂ ಮಾಡಿ ಪೋಗಿ ಸಂ
ತಸದೆ ಸಂಗಮನಾಥನಿಂದೆ ತಾಂ ಕೊಂದುದಿಲ್ಲೆನಿಸಿದಂ ಚೋದ್ಯಮೆನಲು ೭೫

ಬರುತ್ತಿದ್ದಾನೆಂದು ಹೇಳಿದನು. ಆಗ ಸಿಂಹಕೇಶ-ದ್ರವಿಡರು ೭೩. ಭವಿಯೆಂದು ಬಾಗಿಲಿಗೆ ಬಂದ ನಂದಿಯನ್ನು ತಡೆದರು. ಶಿವನು ಅದನ್ನು ತಿಳಿದು ಅಲ್ಲಿಗೆ ಬಂದು ಸರ್ವಾಂಗಲಿಂಗಿಯನ್ನು ಈ ರೀತಿ ಭವಿಯೆಂದ ಕಾರಣ ಭೂಮಿಯಲ್ಲಿ ಭವಿಗಳಾಗಿ ಹುಟ್ಟಿ ನಂದೀಶನ ಮಹಿಮೆಯನ್ನು ತಿಳಿದುಬನ್ನಿರೆಂದು ಶಾಪಕೊಟ್ಟನು. ಅವರು ಭೂಮಿಯಲ್ಲಿ ಕನ್ನೇಶ-ಬಿಜ್ಜಳರಾಗಿ ಹುಟ್ಟಿದರು. ಅತ್ತಕಡೆ ಶಿವನು ನಂದಿಯನ್ನು ಸಮಾಧಾನಪಡಿಸಿ ಒಂದು ದಿನ ಒಡ್ಡೋಲಗದಲ್ಲಿ ಇದ್ದನು. ೭೪. ನಾರದನು ಬಂದು ಶಿವನ ಪಾದಗಳಿಗೆ ನಮಸ್ಕರಿಸಿ ದೇವ, ಕೇಳು, ಭೂಮಂಡಲದಲ್ಲಿ ಅನುಪಮವಾದ ಶಿವಾಚಾರವು ಕುಂದಿತು. ಅದನ್ನು ಉದ್ಧರಿಸಬೇಕೆಂದು ಹೇಳಲು ಈಶ್ವರನು ನಂದಿಯನ್ನು ಕರೆದು, ನೀನು ವೀರಶೈವಾಚಾರವನ್ನು ಸ್ಥಾಪಿಸಿ ಬಿಜ್ಜಳನಿಗೆ ನಿನ್ನ ಮಹಿಮೆಯನ್ನು ತಿಳಿಸಿ ಬಾರೆಂದು ಆಜ್ಞಾಪಿಸಿದನು. ಶಿವನ ಆಜ್ಞೆಯಂತೆ ದೇವಗಣಸಮೇತನಾಗಿ ನಂದೀಶ್ವರನು ಹೊರಟುಬಂದನು. ೭೫. ಪ್ರಖ್ಯಾತರಾದ ಮಾದರಸ-ಮಾದಾಂಬೆಯರ ಗರ್ಭದಲ್ಲಿ ಬಸವನೆಂಬ ಹೆಸರಿನಿಂದ ಹುಟ್ಟಿದನು. ಬ್ರಾಹ್ಮಣನ ಮಗನು ದೊಡ್ಡದಾದ ಬಾವಿಯಲ್ಲಿ ಬಿದ್ದು ಸಾಯಲು ಅವನ ತಾಯಿ-ತಂದೆಗಳು ಕೂಡಲೇ ಬಸವಣ್ಣನನ್ನು ಬೆನ್ನತ್ತಿ ಬಂದರು. ಆಗ ಅವನು ಓಡಿಹೋಗಿ ನದಿಯು ಅಡ್ಡವಾಗಲು ತನ್ನ ಶಕ್ತಿಯಿಂದ ಅದನ್ನು ಎರಡು ಭಾಗ ಮಾಡಿ ದಾಟಿಹೋಗಿ ಸಂತೋಷದಿಂದ ಸಂಗಮನಾಥನಿಂದ ಆಶ್ಚರ್ಯ ಎನ್ನುವಂತೆ ತಾನು ಆ ಬ್ರಾಹ್ಮಣನ ಮಗನನ್ನು ಕೊಲ್ಲಲಿಲ್ಲ.

CC-0. Jangamwadi Math Collection. Digitized by eGangotri

ಮೇಲೆ ಕಲ್ಯಾಣಪುರಕಗ್ರಭವವೆರಸಿ ಬಂ
ದಾ ಲಲಿತಬಲದೇವಮಂತ್ರಿಯ ಕುಮಾರಿಯಂ
ಮೇಳದಿಂ ಮದುವೆಯಾಗಾತನಳಿಯಲ್ಕವನ ಪಟ್ಟಕಧಿನಾಥನಾಗಿ
ಭಾಳಾಕ್ಷನಟ್ಟಿದ ಮಹಾಲಿಪಿಯನೋದಿ ಸ
ಲ್ಲೀಲೆಯಿಂದರುವತ್ತುಕೋಟಿ ಧನಮಂ ತೆಗೆಸಿ
ಪೇಳಲೇಂ ಬಿಜ್ಜಳಂಗಿತ್ತನೆಲೆ ಸಿದ್ಧರಾಮೇಶ ಕೇಳಚ್ಚರಿಯನು ೭೬

ಮತ್ತೆ ಹಗರಣೆಯಾಟದವರನೀ ಬಸವಣ್ಣ
ನುತ್ತಮದ ಜಂಗಮಂ ಮಾಡಿ ಜೋಳಂಗಳಂ
ಮುತ್ತುಗಳ ಮಾಡಿ ಜಂಗಮಕಿತ್ತು ಜಂಗಮಕೆ ಮುಕುರದೊಳ್ ಪಣೆಗಣ್ಣನು
ಬಿತ್ತರದೆ ತೋರಿ ಪೆಟ್ಟಿಗೆಪವಾಡಂ ಮೆರೆದು
ಕತ್ತಿಯಿಂ ತೆಗೆದ ಕನ್ನದ ಮಣ್ಣನಾ ಕ್ಷಣಂ
ವಿತ್ತಮಂ ಮಾಡಿ ಲೆಕ್ಕದ ಪವಾಡಕೆ ರವಿಯ ಪನ್ನೊಂದಿನಂ ತಡೆದನು ೭೭

ಬಳಿಕೆ ಮಜ್ಜಿಗೆಪವಾಡಂ ಲಿಂಗಕೊಲ್ದು ಕೂ
ದಲನಿರದೆ ತೋರಿದ ಪವಾಡಮಾ ಮೇಲೆ ಕುಂ
ಬಳದಕಾಯ್ಗಳ ಪವಾಡಂ ಕೇತಕೀಪ್ರಸೂನದ ಪವಾಡಂ ಬಸವನ
ತಳೆದುಂಗುರದ ಪವಾಡಂ ಗುಪ್ತಮಂಚಣ್ಣ
ನೊಲವಿನ ಪವಾಡಮುಂ ತೇಜಿಯ ಪವಾಡಮುಂ
ಸಲೆ ವಿಪದ ಬಲುಪವಾಡಂಗಳಂ ಮೆರೆದನೀ ಬಸವನೇಂ ಸಾಮಾನ್ಯನೇ ೭೮

ಎಂದು ಹೇಳಿಸಿದನು. ೭೬. ಆನಂತರ ಕಲ್ಯಾಣಪಟ್ಟಣಕ್ಕೆ ದೊಡ್ಡವರೆನ್ನಿಸಿದ್ದ ಆ ಬಲದೇವಮಂತ್ರಿಯ ಹಿರಿಯ ಮಗಳನ್ನು ಸಂತೋಷದಿಂದ ಮದುವೆಯಾಗಿ ಆತನು ಸತ್ತ ನಂತರ ಅವನ ಪಟ್ಟಕ್ಕೆ ತಾನೇ ಅಧಿಕಾರಿಯಾಗಿ ಶಿವನು ಕಳಿಸಿದ ಮಹಾಲಿಪಿಯನ್ನು ಓದಿ ಸಲ್ಲೀಲೆಯಿಂದ ಅರವತ್ತು ಕೋಟಿಯಷ್ಟು ಧನವನ್ನು ಬಿಜ್ಜಳನಿಗೆ ತೆಗೆಸಿ ಕೊಟ್ಟನು. ಹೇಳುವುದೇನು ? ಸಿದ್ಧರಾಮ, ಆಶ್ಚರ್ಯವನ್ನು ಕೇಳು. ೭೭. ಬಳಿಕ ಬಡಾಯಿ ಆಟದವರನ್ನು ಈ ಬಸವಣ್ಣನು ಉತ್ತಮರಾದ ಜಂಗಮರನ್ನಾಗಿ ಮಾಡಿ, ಜೋಳಗಳನ್ನು ಮುತ್ತುಗಳನ್ನಾಗಿ ಮಾಡಿ ಜಂಗಮರಿಗೆ ಕೊಟ್ಟನು. ಕನ್ನಡಿಯಲ್ಲಿ ಜಂಗಮರಿಗೆ ಹಣೆಗಣ್ಣನ್ನು ತೋರಿಸಿದನು. ಪೆಟ್ಟಿಗೆ ಪವಾಡವನ್ನು ಮೆರೆದು ಕತ್ತಿಯಿಂದ ತೆಗೆದ ಕನ್ನದ ಮಣ್ಣನ್ನು ಆ ಕ್ಷಣ ಹಣವನ್ನಾಗಿ ಮಾಡಿ, ಲೆಕ್ಕದ ಪವಾಡಕ್ಕಾಗಿ ಸೂರ್ಯನ ಚಲನೆಯನ್ನು ಹನ್ನೊಂದು ದಿನಗಳವರೆಗೆ ತಡೆದನು. ೭೮. ಅನಂತರ ಮಜ್ಜಿಗೆ ಪವಾಡ, ಲಿಂಗದಲ್ಲಿ ಕೂದಲನ್ನು ತೋರಿಸಿದ ಪವಾಡ, ಆಮೇಲೆ ಕುಂಬಳದ ಕಾಯ್ಗಳ ಪವಾಡ, ಕೇದಗೆಹೂವಿನ ಪವಾಡ, ಬಸವನು ತಳೆದಿದ್ದ ಉಂಗುರದ ಪವಾಡ, ಗುಪ್ತಮಂಚಣ್ಣನ ಒಲವಿನ ಪವಾಡ, ಕುದುರೆಯ ಪವಾಡ,

CC-0. Jangamwadi Math Collection. Digitized by eGangotri

ಹರವಿಯೊಳಗಿರ್ದ ನೀರಂ ಘಟ್ಟಿಮಾಡಿ ಮೇ
ಣೆರದೆ ಕಾಷ್ಠದಜಂಗಮುವನ್ನೆದೆ ನಿಜವಾಗಿ
ಪರಿರಚಿಸಿ ಮೀಮಾಂಸಕನನತುಳವಾದದಿಂ ಗೆಲ್ದು ಶಿವನಾಗಯ್ಯನ
ಬೆರಲೊಳಗೆ ಪಾಲನುರೆ ಕರೆದು ನಾಗಾಂಬಿಕೆಗೆ
ವರಶಿಶುತ್ವಮನಾಂತು ಸೀರೆಯು ಪವಾಡದ
ಚ್ಚರಿಯನಾಗಿಸಿ ಬಳಿಕ ಕರುವಿನ ಪವಾಡಮಂ ಮೆರೆದನೀ ಬಸವಣ್ಣನು ೭೯

ಕರವೀರಕುಸುಮಮಂ ಸಂಪಗೆಯ ಪೂವಾಗಿ
ವಿರಚಿಸಿ ನಿಜಾಂಗಮಂ ಕಚ್ಚಿ ಸತ್ತಹಿಗಿತ್ತು
ಹರಣಮಂ ಚಿತ್ರದೊಳ್ ಬರೆದ ಹಲಸಿನಹಣ್ಣನೇ ನಿಜದ ಹಣ್ಣಾಗಿಸಿ
ಸುರೆಯನಮೃತಂ ಮಾಡಿ ಬಿಜ್ಜಳನೃಪಾಲಕನ
ತರುಣಿಯರನೇ ಜಂಗಮಂಗಳಂ ಮಾಡಿ ಮೇ
ಣರಮನೆಯೊಳವರ್ಗಳಂ ತೋರಿಸಿದನೀತನ ಪವಾಡಂಗಳುಸಿರಲಳವೇ ೮೦

ಮುದದಿಂದೆ ತೊಗರಿಯಂ ಮಾಣಿಕಂ ಮಾಡಿ ತೋ
ರಿದನಂದು ಜಂಗಮಕೆ ವಾರಕದ ವಸ್ತುವಂ
ಪಡೆದಿತ್ತು ಮರಳಿ ತೋರಿದನಿರದೆ ಲಿಂಗದೊಳ್ ಭಕ್ತನಂ ತೋರಿಯುವನ
ಹೃದಯದೊಳ್ ಲಿಂಗಮಂ ತೋರಿದಂ ಬಳಿಕ ಚಿ
ತ್ರದ ಜಂಗಮುವನಿರಿದನಂ ಕೊಂದು ಮಗುಳೆತ್ತಿ
ಬದನೆಗಾಯಂ ಸಹಜಲಿಂಗಮಂ ಮಾಡಿದಂ ಬಸವನಾಲಿಪುದೆಂದನು ೮೧

ವಿಷದ ಪವಾಡಗಳನ್ನೂ ಮೆರೆದನು. ಈ ಬಸವಣ್ಣನೇನು ಸಾಮಾನ್ಯನೆ ? ೭೯. ಗಡಿಗೆ ಯಲ್ಲಿದ್ದ ನೀರನ್ನು ಗಟ್ಟಿಯಾಗಿ ಮಾಡಿದನು. ಕಟ್ಟಿಗೆಯ ಜಂಗಮನು ಬರಲು ನಿಜ ವಾದ ಜಂಗಮನನ್ನಾಗಿ ಮಾಡಿದನು. ಮೀಮಾಂಸಕನನ್ನು ದೊಡ್ಡದಾಗಿ ವಾದಮಾಡಿ ಗೆದ್ದನು. ಶಿವನಾಗಯ್ಯನ ಬೆರಳಿನಲ್ಲಿ ಹಾಲನ್ನು ಕರೆದನು. ಶ್ರೇಷ್ಠವಾದ ಮಗುವಾಗಿ ನಾಗಾಂಬಿಕೆಗೆ ಸೀರೆಯ ಪವಾಡದ ಆಶ್ಚರ್ಯವನ್ನು ತೋರಿಸಿ ಅನಂತರ ಈ ಬಸವಣ್ಣನು ಕರುವಿನ ಪವಾಡವನ್ನು ಮೆರೆದನು. ೮೦. ಕೆಂಪು ಕಣಗಿಲೆಯ ಹೂವನ್ನು ಸಂಪಿಗೆ ಯನ್ನಾಗಿ ಮಾಡಿ, ತನ್ನ ಶರೀರವನ್ನು ಕಚ್ಚಿ ಪ್ರಾಣಬಿಟ್ಟ ಹಾವಿಗೆ ಪ್ರಾಣವಿತ್ತು, ಚಿತ್ರ ದಲ್ಲಿ ಬರೆದ ಹಲಸಿನ ಹಣ್ಣನ್ನೇ ನಿಜವಾದ ಹಣ್ಣನ್ನಾಗಿ ಮಾಡಿ, ಹೆಂಡವನ್ನು ಅಮೃತ ವನ್ನಾಗಿ ಮಾಡಿ, ಬಿಜ್ಜಳರಾಯನ ತರುಣಿಯರನ್ನು ಜಂಗಮರನ್ನಾಗಿ ಮಾಡಿದುದಲ್ಲದೆ ಅವರನ್ನು ಅರಮನೆಯಲ್ಲಿ ತೋರಿಸಿದನು. ಇವನ ಪವಾಡ (ಅತಿಮಾನುಷ ಕಾರ್ಯ) ಗಳನ್ನು ಹೇಳಲು ಸಾಧ್ಯವೆ ? ೮೧. ಬಸವಣ್ಣನು ತೊಗರಿಯನ್ನು ಮಾಣಿಕ್ಯವನ್ನಾಗಿ ಮಾಡಿ ತೋರಿಸಿದನು. ಆದಿನ ಜಂಗಮರಿಗೆ ಬಳುವಳಿಯ ವಸ್ತುವನ್ನು ಪಡೆದು ಕೊಟ್ಟು ಮತ್ತೆ ತಡೆಯದೆ ಲಿಂಗದಲ್ಲಿ ಭಕ್ತನನ್ನು ತೋರಿಸಿದುದಲ್ಲದೆ ಅವನ ಹೃದಯದಲ್ಲಿ ಲಿಂಗ ವನ್ನು ತೋರಿಸಿದನು. ಬಳಿಕ ಚಿತ್ರದ ಜಂಗಮನನ್ನು ಇರಿದವನನ್ನು ಕೊಂದು ಮತ್ತೆ ಪ್ರಾಣ ಬರಿಸಿದನು. ಬದನೆಕಾಯನ್ನು ನಿಜವಾದ ಲಿಂಗವನ್ನಾಗಿ ಮಾಡಿದನು, ಕೇಳು

CC-0. Jangamwadi Math Collection. Digitized by eGangotri

ಲೀಲೆಯಿಂ ಬಸವನಾ ಪೋಟಂಗೆ ಕೊಡನೆ ಕೈ
ಕಾಲ ಶರಣೆಂದೆರಗೆ ಮಾಸ್ತಿ ಮುತ್ತೈಯ್ದಿಯಾ
ಗೇಳೆನಲ್ಕವಳ ಗಂಡನ ಪ್ರಾಣಮೈದದೇ ಮಣ್ಣಹೋರಿಯನೆತ್ತನು
ಪೇಳಲೇಂ ಮಾಡನೇ ಸತ್ತ ಬಸವಂಗಸುವ
ನಾಲೋಕಿಸಿದ ಮಾತ್ರದಿಂ ಕೊಡನೆ ಜನವರಿಯೆ
ಹಾಲ ಕರಿಸನೆ ಹುಲಿಯ ಕಪಿಲೆಯಂ ಮಾಡಿ ಬಸವಂಗಾವನೆಣೆಯೆಂದನು ೮೨

ಹರುಷದಿಂ ಮಜ್ಜನೋದಕದಲ್ಲಿ ಮಾಡಿದಂ
ಪರುಷವಂ ಹಾವಲೇವಳವನಡಪಂ ಹಾಯ್ಕಿ
ತರಿಸಿದಂ ದ್ರವ್ಯಮಂ ಸುಣ್ಣಮಂ ಪಾಯಸಪ್ರಸಾದವೆನೆ ಕೆಯ್ಕೊಂಡನು
ಧರೆಯರಿಯೆ ಹಡಪದಪ್ಪಣ್ಣಗಳ ಬೊಟ್ಟಿನಿಂ
ಗಿರಿಯನೆತ್ತಿಸಿದನೀತನ ಪವಾಡಂಗಳ
ಚ್ಚರಿಯನಭಿವರ್ಣಿಸಲ್ಕೆನ್ನಳವೆ ಸಿದ್ಧರಾಮೇಶ ನೀಂ ಕೇಳೆಂದನು ೮೩

ಜಂಗಮಕೆ ತನ್ನ ಸತಿಯಂ ಕೊಟ್ಟನಾ ಮಿಂಡ
ಜಂಗಮಕೆ ಸತಿಯ ಹೊನ್ನೋಲೆಯಂ ಕೊಡಿಸಿದಂ
ಜಂಗಮಂ ಬಾರದಿರೆ ತಲೆಯರಿದು ಪತ್ತಿಪಂ ಗೊಡ್ಡಾಕಳಂ ಕರಿಸಿದಂ
ಜಂಗಮದ ಕೂಡೆ ಪ್ರಾಣವ ಬಿಟ್ಟನಾ ಮಿಂಡ
ಜಂಗಮಕೆ ಲಿಂಗಪ್ರಸಾದಮಂ ಕಳುಪುವಂ
ಹಿಂಗದಲಗಿಂ ತಿವಿಯೆ ನಿರ್ದೇಹಿಯಾದನೀ ಬಸವ ನೀಂ ಕೇಳೆಂದನು ೮೪

ಎಂದನು. ೮೨. ಅತಿ ಸುಲಭರೀತಿಯಲ್ಲಿ ಆ ಬಸವನು ಪೋಟನಿಗೆ ಕೈಕಾಲುಗಳನ್ನು ಕೊಡದಿರುತ್ತಾನೆಯೆ ? ಮಹಾಸತಿ ಶರಣೆಂದು ನಮಸ್ಕರಿಸಲು ಮುತ್ತೈದೆಯಾಗಿ ಏಳು ಎಂದು ಅವನು ಹೇಳಲು ಕೂಡಲೇ ಅವಳ ಗಂಡನ ಪ್ರಾಣ ಬರದಿರುತ್ತದೆಯೆ ? ಹೇಳುವುದೇನು ? ಮಣ್ಣಿನ ಹೋರಿಯನ್ನು ಎತ್ತನ್ನಾಗಿ ಮಾಡಲಿಲ್ಲವೆ ? ನೋಡಿದ ಮಾತ್ರದಿಂದಲೇ ಸತ್ತ ಬಸವನಿಗೆ ಪ್ರಾಣವನ್ನು ಕೊಡದಿರುವನೆ ? ಹುಲಿಯನ್ನು ಹಸುವನ್ನಾಗಿ ಮಾಡಿ ಜನರು ನೋಡುವಂತೆ ಹಾಲನ್ನು ಕರೆಸದಿರುತ್ತಾನೆಯೆ ? ಬಸವಣ್ಣನಿಗೆ ಯಾರು ಸಮಾನರು ? ಎಂದನು. ೮೩. ಸಂತೋಷದಿಂದ ಸ್ನಾನದ ನೀರಿನಲ್ಲಿ ಸ್ಪರ್ಶಶಿಲೆಯನ್ನು ಮಾಡಿದನು. ಹಾವಿನ ಒಡ್ಯಾಣವನ್ನು ಒತ್ತೆಯಿಟ್ಟು ಹಣವನ್ನು ತರಿಸಿದ. ಸುಣ್ಣವನ್ನು ಪಾಯಸದ ಪ್ರಸಾದವೆನ್ನಲು ತೆಗೆದುಕೊಂಡನು. ಲೋಕವೆಲ್ಲ ತಿಳಿಯುವಂತೆ ಹಡಪದ ಅಪ್ಪಣ್ಣನ ಬೆರಳಿನಿಂದ ಪರ್ವತವನ್ನು ಎತ್ತಿಸಿದ. ಇವನ ಪವಾಡಗಳ ಆಶ್ಚರ್ಯವನ್ನು ವರ್ಣಿಸಲು ನನ್ನ ಕೈಯಲ್ಲಿ ಸಾಧ್ಯವೆ ? ಸಿದ್ಧರಾಮೇಶ, ನೀನು ಕೇಳು ಎಂದನು. ೮೪. ಜಂಗಮರಿಗೆ ತನ್ನ ಸತಿಯರನ್ನು ಕೊಟ್ಟನು. ಆ ಮಿಂಡ ಜಂಗಮರಿಗೆ ಹೆಂಡತಿಯ ಚಿನ್ನದ ಓಲೆಯನ್ನು ಕೊಡಿಸಿದನು. ಜಂಗಮನು ಬರದಿರಲು ತಲೆಯನ್ನು ಕತ್ತರಿಸಿ ಮತ್ತೆ ಸೇರಿಸಿದನು. ಗೊಡ್ಡು ಹಸುವಿನಿಂದ ಹಾಲನ್ನು ಕರೆಸಿದ ಜಂಗಮರ ಜೊತೆಯಲ್ಲಿ ಪ್ರಾಣಬಿಟ್ಟನು. ಆ ಮಿಂಡ ಜಂಗಮರಿಗೆ ಲಿಂಗಪ್ರಸಾದವನ್ನು ಕಳಿಸಿದನು. ಹಿಂದೆಗೆಯದೆ ಅಲಗಿನಿಂದ ತಿವಿಯಲು ಈ ಬಸವಣ್ಣನು ನಿರ್ದೇಹಿಯಾದನು.

CC-0. Jangamwadi Math Collection. Digitized by eGangotri

ಇನ್ನಾಲಿಸೈ ಬಿಜ್ಜಳಂ ಕಟಕಿಯಿಂದಾಗ
ತನ್ನ ಹಡಪದ ಬಸವನಂ ಬಸವ ಬಾರೆನಲ್
ಪನ್ನಗಂ ಕಚ್ಚಿ ನೃಪನಳಿಯಲುಲವಗಸುವಿತ್ತನಗ್ಗಣಿಯನೊಲಿದು ತರುವ
ಹೊನ್ನಯ್ಯನಂ ಕುಷ್ಠನೆನಲರಸನಾಗಲಾ
ತೊನ್ನನುರೆ ಪರಿಹರಿಸಿದಂ ಮೋಟಭಟ್ಟಂಗೆ
ಚೆನ್ನಾಗಿ ಕೈಕಾಲ್ಗಳಂ ಕೊಟ್ಟನೀ ಬಸವನೆಲೆ ರಾಮು ಕೇಳೆಂದನು ೮೫

ಸತ್ತಿಗೆಯುವಂ ಕಪಟ ಚರರೂಪಿನಿಂದೆ ಬರೆ
ಚಿತ್ತದಿಂ ತಿಳಿದು ನಿಜಜಂಗಮವ ಮಾಡಿದಂ
ಮತ್ತೆ ವಿಪ್ರನ ಸುತನ ಕೊಂದನೆನಲಿಲ್ಲೆಂದು ಸಂಗಮೇಶನ ನುಡಿಸಿದಂ
ಸತ್ತ ಪ್ರಾಣಂಗಳವನಂತರ್ಗೆ ಕರುಣದಿಂ
ದಿತ್ತನೀ ಬಸವನ ಮಹಾಪವಾಡಂಗಳಂ
ಬಿತ್ತರಿಸಿ ಪೇಳಲೆನ್ನಳವಲ್ಲ ಸಿದ್ಧರಾಮೇಶ ನೀಂ ಕೇಳೆಂದನು ೮೬

ಒರೆವೆನಾಲಿಸು ರಾಮು ಪೂರ್ವದೊಳಗಲ್ಲಮಂ
ಗುರುತರದ ನಿರ್ಮಾಯನೆನಿಪ ಗಣನಾಥನಂ
ದಿರದೆ ನಿರಹಂಕಾರ ಸುಜ್ಞಾನಿಯೆಂಬವರ್ಗೊಲ್ದು ಶಿಶುವಾಗಿ ಬಳೆದು
ಗಿರಿಜೆಯಟ್ಟಿದ ಮಾಯೆಯುಂ ಜರೆದು ಬಂದು ಸ
ದ್ಗುರುವೆನಿಸುವನಿಮಿಷನ ಕೆಯ್ಯ ಲಿಂಗಂಗೊಂಡು
ಹರುಷದಿಂ ಗೊಗ್ಗಯ್ಯ ಮುಕ್ತಾಯಿಗಳ್ಗೆ ಬೋಧಿಸಿ ಮುಕ್ತಿಯುಂ ಕೊಟ್ಟನು ೮೭

೮೫. ಇನ್ನು ಕೇಳಯ್ಯಾ, ಬಿಜ್ಜಳನು ಕೊಂಕುಮಾತಿನಿಂದ ತನ್ನ ಹಡಪದ ಬಸವನನ್ನು 'ಬಸವಾ, ಬಾ' ಎಂದು ಕರೆಯಲು ಹಾವು ಕಚ್ಚಿ ರಾಜನು ಮೃತನಾಗಲು ಬಸವಣ್ಣನು ಅವನಿಗೆ ಮತ್ತೆ ಪ್ರಾಣ ಕೊಟ್ಟನು. ಅಭಿಷೇಕದ ನೀರನ್ನು ಭಕ್ತಿಯಿಂದ ತರುವ ಹೊನ್ನಯ್ಯನನ್ನು ರಾಜನು ಕುಷ್ಠರೋಗಿ ಎಂದೆನ್ನಲು ಆಗ ಆ ತೊನ್ನನ್ನು ಪೂರ್ಣವಾಗಿ ಹೋಗಲಾಡಿಸಿದನು. ಮೋಟ ಭಟ್ಟನಿಗೆ ಈ ಬಸವಣ್ಣನು ಕೈಕಾಲ್ಗಳನ್ನು ಕೊಟ್ಟನು, ಎಲೆ ಸಿದ್ಧರಾಮು, ಕೇಳು ಎಂದನು. ೮೬. ಸತ್ತಿಗೆಯವನು ಕಪಟ ಜಂಗಮನ ರೂಪದಿಂದ ಬರಲು ಮನಸ್ಸಿನಲ್ಲಿ ಇದನ್ನು ತಿಳಿದು ಅವನನ್ನು ನಿಜವಾದ ಜಂಗಮನನ್ನಾಗಿ ಮಾಡಿದನು. ಮತ್ತೆ ಬ್ರಾಹ್ಮಣನ ಮಗನನ್ನು ಕೊಂದನು ಎಂದಾಗ ಕೊಂದಿಲ್ಲವೆಂದು ಸಂಗಮೇಶನಿಂದ ಹೇಳಿಸಿದನು. ಸತ್ತ ಪ್ರಾಣಗಳನ್ನು ಅವನು ಅಂಥವರಿಗೆ ಕರುಣೆಯಿಂದ ಕೊಟ್ಟನು. ಈ ಬಸವನ ಮಹಾಪವಾಡಗಳನ್ನು ವಿಸ್ತರಿಸಿ ಹೇಳಲು ನನ್ನಿಂದ ಸಾಧ್ಯವಿಲ್ಲ, ಸಿದ್ಧರಾಮೇಶ, ನೀನು ಕೇಳು ಎಂದನು. ೮೭. ಹೇಳುತ್ತೇನೆ ಕೇಳಯ್ಯಾ, ಸಿದ್ಧರಾಮು, ಹಿಂದೆ ಅಲ್ಲಮನು ಶ್ರೇಷ್ಠವಾದ ನಿರ್ಮಾಯ ಎಂಬ ಗಣನಾಥನಿದ್ದನು. ಅವನು ನಿರಹಂಕಾರ ಸುಜ್ಞಾನಿ ಎನ್ನುವವರಿಗೆ ಒಲಿದು ಶಿಶುವಾಗಿ ಬೆಳೆದು ಪಾರ್ವತಿ ಕಳಿಸಿದ್ದ ಮಾಯೆಯನ್ನು ಹೀಯಾಳಿಸಿ ಬಂದು ಸದ್ಗುರುವೆನ್ನಿಸುವ ಅನಿಮಿಷನ ಕೈಯ ಲಿಂಗವನ್ನು ಪಡೆದು ಸಂತೋಷದಿಂದ ಗೊಗ್ಗಯ್ಯ, ಮುಕ್ತಾಯಕ್ಕರಿಗೆ ಉಪದೇಶ ಮಾಡಿ ಮುಕ್ತಿಯನ್ನು ಕೊಟ್ಟನು.

CC-0. Jangamwadi Math Collection. Digitized by eGangotri

ಅಲ್ಲಿಂದೆ ನಿನ್ನ ಪುರಕೈತಂದು ನೀಂ ಮಾಳ್ಪು
ದೆಲ್ಲಮಂ ನೋಡಿ ನಿನ್ನಂ ಜರೆದು ಶಿವತತ್ತ್ವ
ಮೆಲ್ಲಮಂ ತಿಳಿಪಿ ಕರದಿಷ್ಟಲಿಂಗದ ಹದನನರಿಪಲೋಸುಗ ನಿನ್ನನು
ಇಲ್ಲಿಗೊಡಗೊಂಡು ಬಂದಂ ಪರಮಗುರುವೆನಿಸು
ವಲ್ಲಮಪ್ರಭುವೀತನೇಂ ಸದರವೇ ಜಗದ
ವಲ್ಲಭಂ ಕೇಳೆಂದು ಸಿದ್ಧರಾಮೇಶಂಗೆ ಚೆನ್ನಬಸವಂ ಪೇಳ್ದನು ೮೮

ಪಾವನಚರಿತ್ರರಿವರೀಗ ಕೇಳ್ಕೆ ವೀರ
ಶೈವವೀ ಧರೆಯೊಳೆಂಭತ್ತುನಾಲ್ಕುಂ ಲಕ್ಷ
ಜೀವರೊಳ್ ಗೋಜನ್ಮಮುತ್ತಮಮದಕ್ಕೆಯುಂ ನರರಧಿಕಮಾ ನರರೊಳು
ಭಾವಿಸಲ್ ಶಿವಭಕ್ತರೇ ಘನಮದಕೆ ವೀರ
ಶೈವವೇ ವೆಗ್ಗಳಮದಕ್ಕೆಯುಂ ಷಟ್ಸ್ಥಲಂ
ಕೋವಿದರ ಮತವೆ ವೆಗ್ಗಳಮದಕೆ ಪರಮಾವುದಿನ್ನಿಲ್ಲ ಕೇಳೆಂದನು ೮೯

ಅದು ಕಾರಣಂ ಷಟ್ಸ್ಥಲಬ್ರಹ್ಮಯುತರನ
ಲ್ಲದೆ ಪುಗಿಸರೀ ಬಾಗಿಲಿಂದತ್ತಲಿಷ್ಟಲಿಂ
ಗದ ನೇಮಮಿಲ್ಲ ನಿನ್ನಂ ಪೊಗಿಪರೆಂತೆನಲ್ಕಲ್ಲಿರ್ದ ಶರಣರೆಲ್ಲ
ಇದು ಸಹಜಮಿಷ್ಟಲಿಂಗಮುಮಿಲ್ಲದಿರ್ಪವರ
ವದನಮಂ ನೋಳ್ಪುದನುಚಿತಮೆನಲ್ಕಲ್ಲಮಂ
ಸದಮಲಂ ಸಿದ್ಧರಾಮಂಗಿಷ್ಟಲಿಂಗಮೇಕೆಂದು ಮತ್ತಿಂತೆಂದನು ೯೦

೮೮. ಅಲ್ಲಿಂದ ನಿನ್ನ ಪಟ್ಟಣಕ್ಕೆ ಬಂದು ನೀನು ಮಾಡುವುದೆಲ್ಲವನ್ನೂ ನೋಡಿ ನಿನ್ನನ್ನು ಹೀಯಾಳಿಸಿ ಶಿವತತ್ತ್ವವೆಲ್ಲವನ್ನೂ ತಿಳಿಸಿ ಕೈಯಲ್ಲಿದ್ದ ಇಷ್ಟಲಿಂಗದ ರೀತಿಯನ್ನು ತಿಳಿಸಲಿಕ್ಕಾಗಿ ನಿನ್ನನ್ನು ಇಲ್ಲಿಗೆ ಜೊತೆಯಲ್ಲಿ ಕರೆದುಕೊಂಡು ಬಂದ ಪರಮ ಗುರುವೆನ್ನಿಸಿದ ಅಲ್ಲಮಪ್ರಭು ಇವನೇ. ಇವನೇನು ಸಾಮಾನ್ಯನೇ ? ಅವನು ಲೋಕದ ಒಡೆಯ ಕೇಳು ಎಂದು ಸಿದ್ಧರಾಮನಿಗೆ ಚೆನ್ನಬಸವನು ಹೇಳಿದನು. ೮೯. ಇವರೆಲ್ಲ ಪಾವನ ಚರಿತ್ರೆಯುಳ್ಳವರು. ಈಗ ಕೇಳಯ್ಯ ವೀರಶೈವವನ್ನು ಹೊಂದಿರುವವರು ಈ ಭೂಮಿಯಲ್ಲಿ ಎಂಬತ್ತುನಾಲ್ಕು ಲಕ್ಷ ಜೀವಿಗಳಿದ್ದಾರೆ. ಅವರಲ್ಲಿ ಗೋಜನ್ಮ ಉತ್ತಮವಾದುದು. ಅದರಲ್ಲಿಯೂ ನರಜನ್ಮ ಶ್ರೇಷ್ಠ. ಆ ನರರಲ್ಲಿ ಆಲೋಚಿಸಲು ಶಿವಭಕ್ತರೇ ಶ್ರೇಷ್ಠರು. ಅದರಲ್ಲಿಯೂ ವೀರಶೈವರೇ ಅಧಿಕ ಉತ್ತಮರು. ಷಟ್ಸ್ಥಲಜ್ಞಾನಿಗಳ ಮತವೇ ಅಧಿಕವಾದುದು. ಅದಕ್ಕೆ ಅಧಿಕವಾದುದು ಯಾವುದೂ ಇಲ್ಲ ಕೇಳು ಎಂದನು. ೯೦. ಆದಕಾರಣ ಷಟ್ಸ್ಥಲಬ್ರಹ್ಮಿಗಳನ್ನಲ್ಲದೆ ಬೇರೆಯವರನ್ನು ಈ ಬಾಗಿಲಿನಿಂದ ಅತ್ತ ಕಡೆಗೆ ಹೋಗಗೊಡುವುದಿಲ್ಲ. ಇಷ್ಟಲಿಂಗದ ನೇಮವಿಲ್ಲದ ನಿನ್ನನ್ನು ಹೇಗೆ ಹೋಗಗೊಡುತ್ತಾರೆ ಎನ್ನಲು ಅಲ್ಲಿದ್ದ ಶರಣರೆಲ್ಲ ಇದು ಸಹಜವಾದುದು, ಇಷ್ಟಲಿಂಗ ಧರಿಸದವರ ಮುಖವನ್ನು ನೋಡುವುದು ಯೋಗ್ಯವಲ್ಲ ಎನ್ನಲು ಅಲ್ಲಮನು

CC-0. Jangamwadi Math Collection. Digitized by eGangotri

ಅಂಬರವನಡರ್ವವಂಗಟ್ಟಗೋಲೇಕೆ ಬಿಡ
ದಂಬುಧಿಯ ದಾಂಟುವಂಗೇಕೆ ಹರುಗೋಲ್ ಸೀಮೆ
ಯೆಂಬುದಂ ಮಿರಿದೀ ನಿಸ್ಸೀಮ ಸಿದ್ಧರಾಮಂಗಿಷ್ಟಲಿಂಗವೇಕೆ
ತಾಂ ಬಗೆಯೆ ಸರ್ವಾಂಗಲಿಂಗಿಯೆನೆ ಚೆನ್ನಬಸ
ವಂ ಬಳಿಕ ಸಿದ್ಧರಾಮನೊಳಿಷ್ಟಲಿಂಗವೆಂ
ದೆಂಬುದೇ ಮುನ್ನಿಲ್ಲ ಸರ್ವಾಂಗಲಿಂಗಿಯಾದಂದವಂ ಪೇಳೆಂದನು ೯೧

ಚೆನ್ನಬಸವೇಶ ನೀಂ ನೋಡೆನುತೆ ಹರುಷದಿಂ
ತನ್ನಂಗದೊಳ್ ಲಿಂಗಚಯದ ಗೊಂಚಲ್ಗಳಂ
ಚೆನ್ನಾಗಿ ತೋರಲ್ಕೆ ಸರ್ವಾಂಗಲಿಂಗತ್ವಮಿಂತೆ ಹಗರಣೆಯಾಟದ
ಗನ್ನಮಲ್ಲದೆ ಏಕಲಿಂಗನಿಷ್ಠಾಪರಂ
ಮುನ್ನಲ್ಲ ಮನೆಗೆ ಬಂದಲ್ಲಮನ ದಹಿಸಲ್ಕೆ
ನಿನ್ನ ಪಣೆಗಣ್ದೆರೆದ ಜಂಗಮದ್ರೋಹಿ ನೀನೆಲೆ ರಾಮ ಹೋಗೆಂದನು ೯೨

ಮೆಲ್ಲನೀ ಜಂಗಮದ್ರೋಹಿಯಂ ಕರೆದುತಂ
ದಿಲ್ಲಿ ಸರ್ವಾಂಗಲಿಂಗಮನುಂಟುಮಾಡುತಿ
ಪ್ಪಲ್ಲಮಂ ನೀಂ ಗುರುವನಳಿದು ಲಿಂಗವ ತಂದೆ ನೀನದೇಂ ಸಾಮಾನ್ಯನೇ
ಸಲ್ಲದಿರ್ವರ ಮೊಗಂ ನೋಳ್ಪುದೆನೆ ಕೇಳ್ದು ಬಳಿ
ಕಲ್ಲಮಂ ಗುರುವನಳಿದಾ ಲಿಂಗಮಂ ತಂದು
ದಿಲ್ಲ ಮದ್ಗುರು ಸುಚಿತ್ಕಳೆಯುಮಿ ಲಿಂಗದೊಳಗಿದೆ ತಿಳಿದು ನೋಡೆಂದನು ೯೩

ಪರಿಶುದ್ಧನಾದ ಸಿದ್ಧರಾಮನಿಗೆ ಇಷ್ಟಲಿಂಗವೇಕೆ ಎಂದು ಮತ್ತೆ ಹೀಗೆಂದನು. ೯೧. ಆಕಾಶವನ್ನು ಹತ್ತುವವನಿಗೆ ಎತ್ತರವಾದ ಕೋಲೇತಕ್ಕೆ ? ಸಮುದ್ರವನ್ನೇ ದಾಟುವವನಿಗೆ ಹರಿಗೋಲೇಕೆ ? ಸೀಮೆಯನ್ನೇ ದಾಟಿದ ನಿಸ್ಸೀಮನಾದ ಈ ಸಿದ್ಧರಾಮನಿಗೆ ಇಷ್ಟಲಿಂಗವೇಕೆ ? ಅವನು ಸರ್ವಾಂಗಲಿಂಗಿ ಎನ್ನಲು ಬಳಿಕ ಚೆನ್ನಬಸವನು ಸಿದ್ಧರಾಮನಿಗೆ ಇಷ್ಟಲಿಂಗವೆಂಬುದೇ ಮೊದಲಿಲ್ಲ. ಅವನು ಸರ್ವಾಗಲಿಂಗಿ ಆದ ರೀತಿಯನ್ನು ಹೇಳು ಎಂದನು. ೯೨. ಚೆನ್ನಬಸವೇಶ ನೀನು ನೋಡು ಎನ್ನುತ್ತ ಸಂತೋಷದಿಂದ ತನ್ನ ಶರೀರದಲ್ಲಿ ಲಿಂಗಗಳ ಗೊಂಚಲುಗಳನ್ನೇ ಪ್ರತ್ಯಕ್ಷ ತೋರಿಸಲು ಸರ್ವಾಲಿಂಗತ್ವ ಈ ರೀತಿ ದೊಂಬರಾಟದ ಠಕ್ಕುತನವಲ್ಲದೆ ನೀನು ಏಕಲಿಂಗನಿಷ್ಠಾಪರನಲ್ಲ. ಮನೆಗೆ ಬಂದ ಅಲ್ಲಮನನ್ನು ಸುಡಲು ನಿನ್ನ ಹಣೆಗಣ್ಣನ್ನು ತೆರೆದ ಜಂಗಮದ್ರೋಹಿ ನೀನು, ಎಲೈ ಸಿದ್ಧರಾಮ, ಹೋಗು ಎಂದನು. ೯೩. ಮೆಲ್ಲನೆ ಈ ಜಂಗಮದ್ರೋಹಿಯನ್ನು ಕರೆದು ತಂದು ಇಲ್ಲಿ ಸರ್ವಾಂಗಲಿಂಗವನ್ನು ಉಂಟುಮಾಡುತ್ತಿರುವ ಅಲ್ಲಮ, ನೀನು ಗುರುವನ್ನು ಅಳಿದು ಬಳಿಕ ಲಿಂಗವನ್ನು ತಂದೆ. ನೀನೇನು ಸಾಮಾನ್ಯನೆ ? ನಿಮ್ಮಿಬ್ಬರ ಮುಖವನ್ನು ನೋಡುವುದು ಸರಿಯಾದುದಲ್ಲ ಎನ್ನಲು, ಅದನ್ನು ಕೇಳಿ ಅಲ್ಲಮನು ಗುರುವನ್ನು ಇಲ್ಲದಂತೆ ಮಾಡಿ ಅನಂತರ ಆ ಲಿಂಗವನ್ನು ತರಲಿಲ್ಲ. ನನ್ನ ಗುರುವಿನ ಚಿತ್ಕಳೆ ಈ ಲಿಂಗದಲ್ಲಿದೆ,

CC-0. Jangamwadi Math Collection. Digitized by eGangotri

ಪರಿಕಿಸಲ್ಕೆಮ್ಮ ಗುರುವರನ ಶಿವಸೋದರಂ
ಗುರುವಲಾ ನೀನೆನಗೆ ನೀನೆ ಗುರುವೀತನೇ
ಪರಮಗುರು ಬಸವಣ್ಣನಿರೆ ಗುರುವನೆಂತಳಿದನೆನೆ ಕೇಳ್ದು ಶರಣರೆಲ್ಲ
ಪರಿತೋಷದಿಂದೊಪ್ಪೆ ಸಿದ್ಧರಾಮಂ ಪ್ರಭುವಿ
ಗೊರೆದನೆನಗಾವಗತಿಯೆನಲಿಷ್ಟಲಿಂಗಮಂ
ನಿರುತದಿಂ ಪಡೆದಲ್ಲದಾಗದೆನಲೆನಗೆ ದೀಕ್ಷೆಯನೀವರಾರೆಂದನು ೯೪

ಬಸವ ಮೊದಲಾದೇಳುನೂರೆಪ್ಪತಮರಗಣ
ಮೊಸೆದು ಮರ್ತ್ಯಕೆ ವೀರಶೈವಮಂ ಬಿಡದುದ್ಧ
ರಿಸಲೆಂದು ಬಂದುದಿವರಿಗೆ ಪ್ರಾಣಲಿಂಗಸಂಬಂಧದುರುಷಟ್ಸ್ಥಲವನು
ವಸುಧೆಯೊಳ್ ಬೋಧಿಸಲ್ ಶಿವಚಿತ್ಕಳಾರೂಪು
ವಸಮಪ್ರಸಾದಮುಖದಿಂ ಬಂದುದೀ ಚೆನ್ನ
ಬಸವಣ್ಣನೆಂಬ ನಾಮದೊಳಿಷ್ಟಲಿಂಗಮಂ ನಿನಗೆ ಪಾಲಿಸುವನೆನಲು ೯೫

ಹರುಷದಿಂದೆದ್ದು ಸಾಷ್ಟಾಂಗವಿನಮಿತನಾಗಿ
ಮರಳೆದ್ದು ಕೊಂಡಾಡಿ ಗುರು ಚೆನ್ನಬಸವೇಶ
ನಿರುತಮೆಂಬತ್ತುನಾಲ್ಕುಂ ಲಕ್ಷ ಜೀವರಾಸಿಗೆ ಮುಖ್ಯ ಗೋಜನ್ಮವು
ನರಜನ್ಮಮದಕಧಿಕಮೆಂದೆಲಾ ತಜ್ಜೀವ
ಪರಿಭೇದಮಂ ತನ್ಮನುಷ್ಯಜನ್ಮದ ಪಿಂಡ
ದಿರವನದರುದಯಮಂ ಪೇಳ್ದೆನಗೆ ದೀಕ್ಷೆಯಂ ಪಾಲಿಸೆನಲಿಂತೆಂದನು ೯೬

ತಿಳಿದು ನೋಡು ಎಂದನು. ೯೪. ಆಲೋಚಿಸಲು ನಮ್ಮ ಗುರುವರನ ಶಿವಸೋದರನಾದ ನೀನೇ ನನಗೆ ಗುರುವಲ್ಲವೆ ? ಈತನು ಪರಮಗುರು ಬಸವಣ್ಣ. ಇವನಿರಲು ಗುರುವನ್ನು ಯಾವ ರೀತಿ ಅಳಿದವನಾಗುತ್ತೇನೆ ? ಎನ್ನಲು ಅದನ್ನು ಕೇಳಿ ಶರಣರೆಲ್ಲ ಅತಿಯಾದ ಸಂತೋಷದಿಂದ ಒಪ್ಪಲು, ಸಿದ್ಧರಾಮನು ಅಲ್ಲಮಪ್ರಭುವನ್ನು ಕುರಿತು ನನಗೇನು ಗತಿ ? ಎಂದನು. ಇಷ್ಟಲಿಂಗವನ್ನು ಪಡೆದಲ್ಲವೆ ಆಗದೆನ್ನಲು ಅದನ್ನು ಕೇಳಿ ನನಗೆ ದೀಕ್ಷೆಯನ್ನು ಕೊಡುವವರು ಯಾರು ? ಎಂದು ಸಿದ್ಧರಾಮನು ಕೇಳಿದನು. ೯೫. ಬಸವಣ್ಣನೇ ಮೊದಲಾದ ಏಳುನೂರ ಎಪ್ಪತ್ತು ದೇವಗಣ ಪ್ರೀತಿಯಿಂದ ವೀರಶೈವಾಚಾರವನ್ನು ಉದ್ಧರಿಸಲು ಭೂಮಿಗೆ ಬಂದಿದೆ. ಇವರಿಗೆ ಪ್ರಾಣಲಿಂಗಸಂಬಂಧದ ಶ್ರೇಷ್ಠವಾದ ಷಟ್ಸ್ಥಲವನ್ನು ಭೂಮಿಯಲ್ಲಿ ಬೋಧಿಸಲು ಶಿವನ ಚಿತ್ಕಳರೂಪವು ಅಸಮಾನವಾದ ಪ್ರಸಾದಮುಖದಿಂದ ಚೆನ್ನಬಸವಣ್ಣ ಎಂಬ ಹೆಸರಿನಿಂದ ಬಂದಿತು. ಇವನು ನಿನಗೆ ಇಷ್ಟಲಿಂಗವನ್ನು ಕರುಣಿಸುವನು ಎನ್ನಲು ೯೬. ಸಂತೋಷದಿಂದ ಎದ್ದು ಸಾಷ್ಟಾಂಗ ನಮಸ್ಕಾರ ಮಾಡಿ ಮತ್ತೆ ಎದ್ದು ಅವನನ್ನು ಕೊಂಡಾಡಿ ಗುರು ಚೆನ್ನಬಸವೇಶ ನಿಜವಾಗಿಯೂ ಎಂಬತ್ತುನಾಲ್ಕು ಲಕ್ಷ ಜೀವರಾಶಿಯಲ್ಲಿ ಗೋಜನ್ಮವು ಮುಖ್ಯವಾದುದು. ಅದರಲ್ಲಿ ಮನುಷ್ಯಜನ್ಮ ಶ್ರೇಷ್ಠವಾದದ್ದು ಎಂದೆಯಲ್ಲಾ ! ಆ ಜೀವಪರಿಭೇದವನ್ನು ಆ ಮನುಷ್ಯಜನ್ಮ ಪಿಂಡದ ಇರುವಿಕೆಯನ್ನು, ಅದರ ಉದಯವನ್ನು ಹೇಳಿ ನನಗೆ ದೀಕ್ಷೆಯನ್ನು ದಯಪಾಲಿಸು ಎನ್ನಲು, ಚೆನ್ನಬಸವನು ಹೀಗೆ ಹೇಳಿ

CC-0. Jangamwadi Math Collection. Digitized by eGangotri

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗವನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ ೯೭

ಐವತ್ತೇಳನೆಯ ಸಂಧಿ ಸಂಪೂರ್ಣ

ದನು. ೯೭. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿ ಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ಐವತ್ತೇಳನೆಯ ಸಂಧಿ ಮುಗಿಯಿತು

CC-0. Jangamwadi Math Collection. Digitized by eGangotri

ಐವತ್ತೆಂಟನೆಯ ಸಂಧಿ

ಸೂಚನೆ : ಎಸೆವ ಪಿಂಡೋತ್ಪತ್ತಿಯುಂ ಬಳಿಕ್ಕಾ ಕರಣ
ಹಸಿಗೆಯುಂ ಜ್ಞಾನತ್ರಯುಂಗಳ ವಿಭೇದವುಂ
ಹಸನಾಗಿ ಸಿದ್ಧರಾಮೇಶಂಗೆ ಗುರು ಚೆನ್ನಬಸವಂ ನಿರೂಪಿಸಿದನು

ಶಿವ ಶಿವವಿಭೂಷ ಭೂಷಿತಸೋಮ ಸೋಮ ಘನ
ಭವ ಭವವಿನಾಶ ನಾಶಾಭಾವ ಭಾವಸಂ
ಭವದಹನ ದಹನಾನ್ವಿತಾಕ್ಷಾಕ್ಷಪಾದಪ್ರಣತ ನತಾಂಬೊಧೀಚಂದ್ರ
ಪ್ರವಿಮಳಾಕಾರ ಕಾರಣರೂಪ ರೂಪಯುತ
ಯುವತಿಯರ್ಧಾಂಗ ಗಂಗಾಂಬುಸಂಭೃತಜೂಟ
ದಿವಿಜನುತ ಪಂಪಾವಿರೂಪಾಕ್ಷ ಪಕ್ಷದಿಂ ರಕ್ಷಿಪುದು ನತಜನವನು ೧

ಇನ್ನಾಲಿಸೈ ರಾಮ ನಿನಗೆ ನಾ ಮುಂ ಪೇಳ್ದ
ಸನ್ನುತಸುಧರ್ಮಿಗಳ್ ಸುರಲೋಕಭೋಗಮುಂ
ಚೆನ್ನಾಗಿ ತೀರಲನುಭವಿಸಿ ಕರ್ಮಿಗಳೆಮನಪಟ್ಟಣದ ನರಕಂಗಳ
ಬನ್ನದಿಂ ತೀರಲನುಭವಿಸಿ ಬಳಿಕಿರ್ತಂಡ
ಮುನ್ನಭೋನಿಲ ವಾರಿ ಧರೆಗಳೆಂಬೀ ನಾಲ್ಕು
ಮುನ್ನತ ಭವದ್ವಾರಮಿವುಮಿವರೊಳೊಂದಿ ಭೂಲೋಕದೊಳ್ ಸಂಜನಿಪರು ೨

ಸೂಚನೆ : ಪಿಂಡೋತ್ಪತ್ತಿಯನ್ನೂ ಅನಂತರ ದೇಹದ ವಿಭೇದಗಳನ್ನೂ ಜ್ಞಾನ ತ್ರಯಗಳ ಭೇದಗಳನ್ನೂ ವಿವರವಾಗಿ ಸಿದ್ಧರಾಮನಿಗೆ ಗುರುವಾದ ಚೆನ್ನಬಸವಣ್ಣನು ನಿರೂಪಿಸಿದನು. ೧. ಶಿವ, ವೇದಭೂಷಿತ, ಚಂದ್ರಶೇಖರ, ಉಮಾಸಹಿತನು, ಶ್ರೇಷ್ಠನಾದ ಶಂಭು, ಸಂಸಾರನಾಶ ನಾಶವಿಲ್ಲದವನು, ಮನ್ಮಥನನ್ನು ಸುಟ್ಟವನು, ಅಗ್ನಿನೇತ್ರ, ಗೌತಮ ನಿಂದ ನಮಸ್ಕರಿಸಿಕೊಂಡವ, ಭಕ್ತರೆಂಬ ಸಾಗರಕ್ಕೆ ಚಂದ್ರನಂತಿರುವವನು, ನಿರ್ಮಲಾಕಾರ, ಕಾರಣರೂಪ, ರೂಪಸಂಪನ್ನೆಯಾದ ಪಾರ್ವತಿಯನ್ನು ಅರ್ಧಾಂಗವಾಗಿ ಉಳ್ಳವನು, ಗಂಗಾಧರ, ದೇವತೆಗಳಿಂದ ನಮಸ್ಕರಿಸಿಕೊಳ್ಳುವವನು ಆದ ಪಂಪಾವಿರೂಪಾಕ್ಷನೆ ನಿನ್ನನ್ನು ಶರಣುಹೊಕ್ಕ ಭಕ್ತಜನರನ್ನು ಪ್ರೀತಿಯಿಂದ ಕಾಪಾಡು. ೨. ಇನ್ನು ಕೇಳಯ್ಯ, ಸಿದ್ಧರಾಮ, ನಿನಗೆ ಈ ಮೊದಲು ನಾನು ಹೇಳಿದ ಶ್ರೇಷ್ಠವಾದ ಉತ್ತಮ ಧರ್ಮಾಚರಣೆ ಮಾಡಿದವರು ದೇವಲೋಕದ ಭೋಗವನ್ನು ಚೆನ್ನಾಗಿ ಪೂರ್ಣವಾಗಿ ಅನುಭವಿಸಿ; ಪಾಪ ಕರ್ಮ ಮಾಡಿದವರು ಯಮನ ಪಟ್ಟಣದ ನರಕಗಳನ್ನು ಕಷ್ಟದಿಂದ ಪೂರ್ಣವಾಗಿ ಅನು ಭವಿಸಿ, ಅನಂತರ ಎರಡೂ ತಂಡದವರೂ ಮುಂದೆ ಆಕಾಶ, ವಾಯು, ಜಲ, ಭೂಮಿ ಗಳೆಂಬ ಈ ನಾಲ್ಕು ಶ್ರೇಷ್ಠವಾದ ಜನ್ಮದ ಬಾಗಿಲನ್ನು ಸೇರಿ ಭೂಲೋಕದಲ್ಲಿ ಹುಟ್ಟು

CC-0. Jangamwadi Math Collection. Digitized by eGangotri

ಸ್ಥಾವರಂ ಲಕ್ಷವಿಪ್ಪತ್ತುಬಗೆ ಯೋನಿ ಜನ
ಜೀವಂಗಳೊಂಭತ್ತುಲಕ್ಷವಿಾ ಕ್ರಿಮಿಕುಲಂ
ಭಾವಿಸಲ್ ಪನ್ನೊಂದು ಲಕ್ಷಮುಂ ಪಕ್ಷಿಗಳ್ ದಶಲಕ್ಷಭೇದಂಗಳು
ಗೋವು ಮುಂತಾದ ಪಶುಜಾತಿ ತ್ರಿಂಶಲ್ಲಕ್ಷ
ವಿಾ ವಿಧದೆ ನಾಲ್ಕುಲಕ್ಷಂ ಮನುಜಯೋನಿಯುಂ
ತೀವಿ ಭೇದದೊಳೆ ಚೌರಾಶೀತಿಲಕ್ಷ ಜೀವಂಗಳಿವು ಕೇಳೆಂದನು ೩

ಸ್ವೇದಜಾಂಡೋದ್ಭಿಜ ಜರಾಯುಜಾಖ್ಯದ ಚತು
ರ್ಭೇದಜನನದೊಳುದಿಸಿ ತಜ್ಜಾತಿಧರ್ಮಸಂ
ಪಾದನೆಯ ಪರಿಕರಮನುಂಡು ತತ್ಕ್ರಿಯೆಗಳೊಳ್ ಕಣ್ಗೆಟ್ಟು ಗೋಜನ್ಮಕೆ
ಆದಿಸಂಚಿತದಿನೈತಂದು ಬಳಿಕತ್ಯಧಿಕ
ಮಾದ ನರಜನ್ಮದೊಳಗೈದುವಂ ಜೀವನದ
ನಾದರಿಸಿ ಪೇಳ್ದಪೆಂ ಋತುಕಾಲದೊಳ್ ದಂಪತಿಗಳೊಂದೆ ಪಿಂಡವಹುದು ೪

ಮಾತೆಯ ರಜಸ್ಸು ಪಿತೃವೀರ್ಯಂಗಳೊಂದಾಗಿ
ಸಾತಿಶಯದಿಂ ಪ್ರಥಮದಿನದಲ್ಲಿ ಕಲಲಮಹು
ದಾ ತೆರದೊಳೈದುರಾತ್ರಿಗೆ ಬೊಬ್ಬುಳಿಕೆಯಾಗಿ ಹತ್ತನೆಯ ದಿವಸದೊಳಗೆ
ಖ್ಯಾತಿಯಿಂ ರಕ್ತಬಲಿದಾ ಚತುರ್ದಶದಿನ
ವ್ರಾತದೊಳ್ ಮಾಂಸವೆಂದೆನಿಸಿ ವಿಂಶತಿದಿನ
ಕ್ಕೋತು ತನ್ಮಾಂಸವೇ ಘಟ್ಟಿಗೊಂಬುದು ಸಿದ್ಧರಾಮ ಕೇಳಚ್ಚರಿಯನು ೫

ವರು. ೩. ಇವುಗಳಲ್ಲಿ ಸ್ಥಾವರವು ಇಪ್ಪತ್ತು ಲಕ್ಷ ಬಗೆ. ಯೋನಿ ಜನಜೀವಗಳು ಒಂಬತ್ತು ಲಕ್ಷ. ಆಲೋಚಿಸಲು ಈ ಕ್ರಿಮಿಜಾತಿಯು ಹನ್ನೊಂದು ಲಕ್ಷ ಪಕ್ಷಿಗಳಲ್ಲಿ ಹತ್ತು ಲಕ್ಷ ಭೇದಗಳಿವೆ. ಹಸು ಮುಂತಾದ ಪಶುಜಾತಿ ಮೂವತ್ತು ಲಕ್ಷ. ಈ ರೀತಿಯಾಗಿ ನಾಲ್ಕು ಲಕ್ಷ ಮನುಜಯೋನಿಯೂ ಕೂಡಿಕೊಂಡು ಒಟ್ಟು ಎಂಬತ್ತುನಾಲ್ಕು ಲಕ್ಷದಷ್ಟು ಬೇರೆ ಬೇರೆ ಜೀವಿಗಳಿವೆ ಕೇಳು ಎಂದನು. ೪. ಸ್ವೇದಜ, ಅಂಡಜ, ಉದ್ಭಿಜ, ಜರಾಯುಜಗಳೆಂಬ ನಾಲ್ಕು ತರಹದ ಜನನದಲ್ಲಿ ಹುಟ್ಟಿ ಆಯಾ ಜಾತಿಧರ್ಮಕ್ಕನುಗುಣವಾಗಿ ಸಂಪಾದನೆಯ ಪರಿಕರವನ್ನು ಉಂಡು, ಅವುಗಳ ಕ್ರಿಯೆಗಳಿಂದ ಕಂಗೆಟ್ಟು, ಹಿಂದೆ ಮಾಡಿದ ಪುಣ್ಯದಿಂದ ಗೋಜನ್ಮಕ್ಕೆ ಬಂದು, ಅನಂತರ ಜೀವನು ಅತಿಶ್ರೇಷ್ಠವಾದ ಮಾನವಜನ್ಮದಲ್ಲಿ ಹುಟ್ಟುವನು, ಆದರದಿಂದ ಹೇಳುತ್ತೇನೆ ಕೇಳು. ಸ್ತ್ರೀಯರ ಋತುಕಾಲದಲ್ಲಿ ದಂಪತಿಗಳು ಕೂಡಲು ಪಿಂಡವಾಗುತ್ತದೆ. ೫. ತಾಯಿಯ ರಜಸ್ಸು ತಂದೆಯ ವೀರ್ಯದಲ್ಲಿ ಒಂದಾಗಿ ಕೂಡಿ ಮೊದಲ ದಿನದಲ್ಲಿ ಗರ್ಭಾಣುವಾಗುವುದು. ಆ ರೀತಿಯಲ್ಲಿ ಐದು ರಾತ್ರಿಯಲ್ಲಿ ಗುಳ್ಳೆಯಾಗಿ, ಹತ್ತನೆಯ ದಿವಸದ ಒಳಗೆ ರಕ್ತ ಬಲಿತು, ಹದಿನಾಲ್ಕು ದಿನಕ್ಕೆ ಮಾಂಸವಾಗಿ, ಇಪ್ಪತ್ತು ದಿನಕ್ಕೆ ಆ ಮಾಂಸವೇ ಗಟ್ಟಿಯಾಗುವುದು ಸಿದ್ಧರಾಮ,

CC-0. Jangamwadi Math Collection. Digitized by eGangotri

ಅವಯವಾಂಕುರವಾಗಿ ತೋರ್ಪುದಿಪ್ಪತ್ತೈದು
ದಿವಸಕಾಮೇಲೆ ತಿಂಗಳಿಗೆ ಶಿರವುದಯಿಪುದು
ಸವಡಿತಿಂಗಳ್ಗೆ ತೋಳ್ತೊಡೆಗಳಪ್ಪುವು ಮೂರುತಿಂಗಳ್ಗೆ ವ್ಯಕ್ತವಾಗಿ
ತವೆ ಹಸ್ತಪಾದ ಸರ್ವಾಂಗುಲಿಗಳ್ಮೆದೆ ಪು
ಟ್ಟುವುವು ತಿಂಗಳ್ ನಾಲ್ಕಕಕ್ಷಿ ನಾಸಾಪುಟಂ
ಶ್ರವಣ ಗುದ ಮೇಢ್ರ ರೋಮಂಗಳಪ್ಪುವು ಸಿದ್ಧರಾಮೇಶ ಕೇಳೆಂದನು ೬

ಎಲೆ ಸಿದ್ಧರಾಮ ಕೇಳ್ ಐದನೆಯ ತಿಂಗಳ್ಗೆ
ಸಲೆ ನವದ್ವಾರ ಜಠರಂಗಳಿಂಬಾಗುವುವು
ತಿಳಿಯೆ ನಖಕೇಶವಾರಕೆ ಮೊಳೆವುವೇಳರೊಳಗವಯವಾದಿಗಳೆ ಬಲಿದು
ಇಳಿವುದಾ ಮಾತೆಯುಂಡನ್ನರಸವುದರುದರ
ದೊಳಗೆ ತನ್ನಾಭಿಸೂತ್ರದೊಳೆಂಟುತಿಂಗಳ್ಗೆ
ನೆಲೆಯಹುದು ಜಾತಿಸ್ಮರತ್ವಮುಂ ಸುಜ್ಞಾನಮಾ ಶಿಶುವಿಗೇನೆಂಬೆನು ೭

ನವಮಾಸದೊಳ್ ಶಿವಧ್ಯಾನಪರನಾಗಿ ಸಂ
ಭವಿಸಿದೆಂ ಭವಭವದೊಳಿಂತು ಗುರುಕರುಣದಿಂ
ಶಿವಪರಾಯಣನಾಗಿ ಮುಕ್ತನಹೆನೆನುತಿರಲ್ ಸೂತಿಕಾವಾಯುವಿಂದೆ
ತವೆ ಕೆಳಗುದಲೆಯಾಗಿ ಬೀಳುತುಂ ವಿಷ್ಣುವಾ
ಯುವಿನಿಂದಲಜ್ಞಾನಯುತನಾಗಿ ಧರೆಗೆ ದೂ
ರುವ ಪಾಂಗಿನಿಂ ತನ್ನ ದುಃಖಮಂ ಚೀರುತುಂ ನಡುಗುತುಂ ಜನಿಯಿಸುವುದು ೮

ಆಶ್ಚರ್ಯವನ್ನು ಕೇಳು. ೬. ಇಪ್ಪತ್ತೈದು ದಿವಸಕ್ಕೆ ಅವಯವಗಳು ಹುಟ್ಟಿ ಕಾಣಿಸಿಕೊಳ್ಳುವುವು. ಆಮೇಲೆ ಒಂದು ತಿಂಗಳಿಗೆ ತಲೆಯು ಮೂಡುವುದು. ಎರಡು ತಿಂಗಳಿಗೆ ತೋಳು ತೊಡೆಗಳು ಉಂಟಾಗುವುವು. ಮೂರು ತಿಂಗಳಿಗೆ ಕೈಕಾಲು ಎಲ್ಲ ಬೆರಳುಗಳೂ ಚೆನ್ನಾಗಿ ಕಣ್ಣಿಗೆ ಕಾಣುವಂತೆ ಹುಟ್ಟುವುವು. ನಾಲ್ಕು ತಿಂಗಳಿಗೆ ಕಣ್ಣು, ಮೂಗು, ಕಿವಿ, ಪೃಷ್ಠ, (ಪುರುಷನ) ಜನನೇಂದ್ರಿಯ, ಕೂದಲುಗಳು ಉಂಟಾಗುವುವು, ಸಿದ್ಧರಾಮೇಶ ಕೇಳು ಎಂದನು. ೭. ಎಲೆ ಸಿದ್ಧರಾಮ, ಕೇಳು ಐದನೆಯ ತಿಂಗಳಿಗೆ ಚೆನ್ನಾಗಿ ನವದ್ವಾರ ಜಠರಗಳು ಉಂಟಾಗುವುವು. ಆರನೆಯ ತಿಂಗಳಿಗೆ ಉಗುರು, ತಲೆಗೂದಲು ಮೊಳೆಯುವುವು. ಏಳನೆಯ ತಿಂಗಳಿನಲ್ಲಿ ಅವಯವಗಳು ಬಲಿತು ಹೊಕ್ಕಳುಬಳ್ಳಿಯ ಮೂಲಕ ತಾಯಿಯು ಊಟ ಮಾಡಿದ ಅನ್ನರಸವು ಮಗುವಿನ ಹೊಟ್ಟೆಯೊಳಕ್ಕೆ ಇಳಿಯುವುದು. ಎಂಟನೆಯ ತಿಂಗಳಿಗೆ ಮಗುವಿಗೆ ಹಿಂದಿನ ಜನ್ಮದ ನೆನಪೂ ಸುಜ್ಞಾನವೂ ನೆಲೆಗೊಳ್ಳುವುವು. ೮. ಒಂಬತ್ತನೆಯ ತಿಂಗಳಿನಲ್ಲಿ ಶಿವಧ್ಯಾನಪರನಾಗಿ ಜನ್ಮಜನ್ಮಾಂತರದಲ್ಲಿ ಹೀಗೆ ಜನಿಸಿದೆನು. ಗುರುಕರುಣೆಯಿಂದ ಶಿವಧ್ಯಾನಪರಾಯಣನಾಗಿ ಮುಕ್ತನಾಗುತ್ತೇನೆ. ಎನ್ನುತ್ತಿರಲು ಸೂತಿಕಾವಾಯುವಿನಿಂದ ತಲೆಕೆಳಗಾಗಿ ಬಿದ್ದು, ವಿಷ್ಣುವಾಯುವಿನಿಂದ ಅಜ್ಞಾನಿಯಾಗಿ ಭೂಮಿಗೆ ತನ್ನ ದುಃಖವನ್ನು ದೂರಿಕೊಳ್ಳುತ್ತದೆಯೋ ಎನ್ನುವಂತೆ

CC-0. Jangamwadi Math Collection. Digitized by eGangotri

ಸತಿ ಋತುಸ್ನಾತೆಯಾದೊಂದನೆಯ ದಿವಸದೊಳ್
ರತಿಕೇಳಿಯಂ ಮಾಡೆ ಕುಲಗೇಡಿಯಹ ಕುಮಾ
ರತಿಯುದಿಪಳೆರಡನೆಯ ದಿವಸದೊಳ್ ಪಾತಕಂ ಪುಟ್ಟುವಂ ಮೂರರಲ್ಲಿ
ಅತಿಚೋರನುದಯಿಪಂ ನಾಲ್ಕನೆಯ ದಿವಸದೊಳ್
ಕೃತಕಿ ಸಂಜನಿಪನೈದಕೆ ಬುದ್ಧಿವಂತನಾ
ರ‍್ರುತುದಿವಸದೊಳ್ ಕೂಡೆ ವ್ರತಗೇಡಿ ಜನಿಯಿಸುವನೆಲೆ ರಾಮ ಕೇಳೆಂದನು ೯

ಏಳನೆಯ ದಿನದೊಳ್ ದಯಾಪರನುಮೆಂಟುದಿನ
ಕಾಲಿಸು ದರಿದ್ರನೊಂಬತ್ತಕೆ ಧನಾಢ್ಯನಾ
ಮೇಲೆ ಹತ್ತಕೆ ಕಾಮಿ ನಿಷ್ಕಾಮಿ ಪನ್ನೊಂದು ದಿವಸದೊಳ್ ಪನ್ನೆರಡಕೆ
ಪೇಳಲೇಂ ಕೋಪಿ ಪದಿಮೂರಕ್ಕೆ ಪಂಡಿತಂ
ವ್ಯಾಲೋಲರೋಗಿ ಪದಿನಾಲ್ಕರೊಳ್ ಮೇದಿನೀ
ಪಾಲಕಂ ಪದಿನೈದು ದಿನಕೆ ಪದಿನಾರರೊಳ್ ಶಿವಯೋಗಿ ಸಂಜನಿಪನು ೧೦

ಯೋಗದೊಳ್ ಸತಿ ಪುರುಷರಿರ್ವರ್ ಪರಧ್ಯಾನ
ರಾಗಿರಲ್ ಜಾರನುದಿಪಂ ಶಿವಧ್ಯಾನಪರ
ರಾಗಿರಲ್ ಶಿವಯೋಗಿ ಜನಿಸುವಂ ರವಿಯುದಯಕಾಲದೊಳ್ ಜನಿಸಿದವನು
ಭೂಗಧಿಕ ಕೋಪಿ ಮಧ್ಯಾಹ್ನದೊಳ್ ಪಾಪಿ ಸಂ
ಧ್ಯಾಗಮದೊಳುದಿಪಂ ಕುತಾಪಿ ರಾತ್ರೆಯೊಳುದಿಸಿ
ದಾ ಗುಣಾನ್ವಿತನಮಳಶಾಂತಿಯುತನಾಗುವಂ ರಾಮೇಶ ಕೇಳೆಂದನು ೧೧

ಚೀರುತ್ತ ನಡುಗುತ್ತ ಹುಟ್ಟುವುದು. ೯. ಪತ್ನಿಯು ಋತುಸ್ನಾನ ಮಾಡಿದ ಮೊದಲನೆಯ ದಿನದಲ್ಲಿ ಸಂಭೋಗ ನಡೆಸಿದರೆ ಕುಲಗೇಡಿಯಾದ ಮಗಳು ಹುಟ್ಟುತ್ತಾಳೆ. ಎರಡನೆಯ ದಿನವಾದರೆ ಪಾಪಿಯು ಹುಟ್ಟುತ್ತಾನೆ. ಮೂರನೆಯ ದಿನದಲ್ಲಿ ಕಳ್ಳನು ಹುಟ್ಟುವನು. ನಾಲ್ಕನೆಯ ದಿನದಲ್ಲಿ ಕಪಟಿ ಹುಟ್ಟುತ್ತಾನೆ. ಐದನೆಯ ದಿನದಲ್ಲಿ ಬುದ್ಧಿವಂತನು ಜನಿಸುತ್ತಾನೆ. ಆರನೆಯ ದಿವಸದಲ್ಲಿ ಪತ್ನಿಯೊಡನೆ ಕೂಡಿದರೆ ವ್ರತಗೇಡಿ ಮಗನು ಹುಟ್ಟುತ್ತಾನೆ, ಎಲೈ ಸಿದ್ಧರಾಮ, ಕೇಳು ಎಂದನು. ೧೦. ಏಳನೆಯ ದಿನದಲ್ಲಿ ದಯಾಗುಣವುಳ್ಳವನು, ಎಂಟನೆಯ ದಿನಕ್ಕೆ ದರಿದ್ರನು, ಒಂಬತ್ತನೆಯ ದಿನಕ್ಕೆ ಐಶ್ವರ್ಯವಂತನು, ಅನಂತರ ಹತ್ತಕ್ಕೆ ಕಾಮಾಂಧನು, ಹನ್ನೊಂದನೆಯ ದಿವಸಕ್ಕೆ ವೈರಾಗ್ಯಶಾಲಿಯು, ಹೇಳುವುದೇನು ಹನ್ನೆರಡನೆಯ ದಿನದಲ್ಲಿ ಕೋಪಿಷ್ಠನು, ಹದಿಮೂರಕ್ಕೆ ಪಂಡಿತನು, ಹದಿನಾಲ್ಕನೆಯ ದಿನದಲ್ಲಿ ಚಂಚಲಸ್ವಭಾವದವನು, ಹದಿನೈದನೆಯ ದಿನಕ್ಕೆ ರಾಜನು, ಹದಿನಾರನೆ ದಿವಸಕ್ಕೆ ಶಿವಯೋಗಿಯು ಜನಿಸುವನು. ೧೧. ಕೂಡುವ ಕಾಲದಲ್ಲಿ ಪತಿ-ಪತ್ನಿಯರಿಬ್ಬರೂ ಅನ್ಯರಲ್ಲಿ ಮನಸ್ಸಿದ್ದರೆ ಹುಟ್ಟುವ ಮಗನು ಜಾರನಾಗುವನು. ಶಿವಧ್ಯಾನದಲ್ಲಿದ್ದರೆ ಶಿವಯೋಗಿಯು ಹುಟ್ಟುವನು. ಸೂರ್ಯೋದಯಕಾಲದಲ್ಲಿ ಹುಟ್ಟುವವನು ಭೂಮಿಯಲ್ಲಿ ಬಹಳ ಕೋಪಿಷ್ಠನಾಗಿ ಇರುವನು. ಮಧ್ಯಾಹ್ನದಲ್ಲಿ ಹುಟ್ಟಿದವನು ಪಾಪಿಷ್ಠ. ಸಂಜೆಯ ಸಮಯದಲ್ಲಿ ಜನಿಸುವವನು ತಾಪವನ್ನುಂಟುಮಾಡುವನು. ರಾತ್ರಿಯಲ್ಲಿ ಹುಟ್ಟಿದವನು ಗುಣಾಢ್ಯನೂ,

CC-0. Jangamwadi Math Collection. Digitized by eGangotri

ಪರಿಕಿಸಲ್ ಪಿತ್ತಮುಂ ಶ್ಲೇಷ್ಮಮುಂ ತಿಳಿಯುಲೊಂ
ದೆರಡು ಬಳ್ಳಂ ಮಾಂಸ ಬಸೆ ರಕ್ತ ಮೇದಸ್ಸು
ವರಶುಕ್ಲ ಸರ್ವಾಂಗಸಂದೋಹವಿಪ್ಪತ್ತು ಪತ್ತು ಪತ್ತೈದುಮೂರು
ಇರದೆ ಪನ್ನೆರಡುಸಾಸಿರ ಹಲದ ಗಣನೆಯಿಂ
ನರರ ದೇಹಂ ರೋಮತತಿ ಮೂರುವರೆಕೋಟಿ
ನಿರುತ ಮುನ್ನೂರರುವತಸ್ಥಿಗಳ್ ಸೇರಿರ್ಪುವೆಲೆ ರಾಮ ಕೇಳೆಂದನು ೧೨

ನರ ರೋಮ ಶುಕ್ಲಾಸ್ಥಿಗಳ್ ತಂದೆಯುಂಶಂಗ
ಳುರು ಚರ್ಮ ಮಾಂಸರಕ್ತಂಗಳೇ ತಾಯುಂಶ
ಮಿರದಿವೇಳುಂ ಸಪ್ತಧಾತುಗಳ್ ಶುಕ್ಲಾಧಿಕತ್ವದಿಂ ಪುರುಷನಹನು
ಪರಿಕಿಸಲ್ ರಕ್ತಾಧಿಕತ್ವದಿಂ ಸ್ತ್ರೀ ಜನಿಪ
ಳೆರಡುಂ ಸಮಾನವಾಗಲ್ ನಪುಂಸಕನಾಗಿ
ಧರೆಯೊಳುದಯಿಪನೆಂದು ಸಿದ್ಧರಾಮೇಶಂಗೆ ಚೆನ್ನಬಸವಂ ಪೇಳ್ದನು ೧೩

ಪಂಚಭೂತಂಗಳಿಂತಾದುವೆಲೆ ರಾಮ ಕೇಳ್
ಪಂಚವಿಂಶತಿ ತತ್ವಮೆಂತೆನಲ್ ಜ್ಞಾನಾದಿ
ಪಂಚಕರಣಂಗಳಾಕಾಶದಿಂದಾದುವಾ ಮರುತನಿಂ ಪ್ರಾಣವಾದಿ
ಪಂಚವಾಯುಗಳಾದುವಗ್ನಿಯಿಂ ಶ್ರೋತ್ರಾದಿ
ಪಂಚಸುಜ್ಞಾನೇಂದ್ರಿಯಂಗಳಾ ವಾರಿಯಿಂ
ಪಂಚವಿಷಯಂಗಳಾ ಪೃಥ್ವಿಯಿಂ ಪಂಚಕರ್ಮಾಖ್ಯಂಗಳುದಯಿಸಿದುವು ೧೪

ಶಾಂತಸ್ವಭಾವದವನಾಗಿಯೂ ಇರುವನು, ಸಿದ್ಧರಾಮ ಕೇಳು ಎಂದನು. ೧೨. ಆಲೋಚಿಸಲು ಪಿತ್ತವು ಶ್ಲೇಷ್ಮವು ಕ್ರಮವಾಗಿ ಒಂದು ಮತ್ತು ಎರಡು ಬಳ್ಳದಷ್ಟು ಇರುತ್ತದೆ. ಮಾಂಸ ಇಪ್ಪತ್ತು, ಕೊಬ್ಬು ಹತ್ತು, ರಕ್ತ ಹತ್ತು, ಮೇದಸ್ಸು ಐದು ಮತ್ತು ವೀರ್ಯ ಮೂರರ ಪ್ರಮಾಣದಲ್ಲಿ ದೇಹದಲ್ಲಿರುತ್ತವೆ. ಅಲ್ಲದೆ ಹನ್ನೆರಡು ಸಾವಿರ ಹಲದ ಲೆಕ್ಕದಲ್ಲಿ ಮನುಷ್ಯರ ದೇಹ ಮೂರುವರೆ ಕೋಟಿ ಕೂದಲ ಸಮೂಹ ಮತ್ತು ಮುನ್ನೂರರವತ್ತು ಮೂಳೆಗಳಿಂದ ಕೂಡಿರುತ್ತದೆ, ಎಲೆ ಸಿದ್ಧರಾಮ ಕೇಳು ಎಂದನು. ೧೩. ನರ, ಕೂದಲು, ರೇತಸ್ಸು ಮತ್ತು ಮೂಳೆಗಳು ತಂದೆಯ ಅಂಶದವು. ಮಾಂಸ, ರಕ್ತಗಳೇ ತಾಯಿಯ ಅಂಶದವು. ಇವು ಏಳು ಸಪ್ತಧಾತುಗಳು. ರೇತಸ್ಸು ಅಧಿಕವಾದರೆ ಗಂಡಾಗುವನು, ರಕ್ತದ ಆಧಿಕ್ಯದಿಂದ ಹೆಣ್ಣು ಹುಟ್ಟುತ್ತಾಳೆ. ಇವೆರಡೂ ಸಮನಾಗಿದ್ದರೆ ನಪುಂಸಕನಾಗಿ ಹುಟ್ಟುತ್ತಾನೆ ಎಂದು ಸಿದ್ಧರಾಮನಿಗೆ ಚೆನ್ನಬಸವನು ಹೇಳಿದನು. ೧೪. ಸಿದ್ಧರಾಮ, ಪಂಚಭೂತಗಳು ಈ ರೀತಿಯಾದವು, ಕೇಳು: ಪಂಚವಿಂಶತಿತತ್ತ್ವವು ಯಾವ ರೀತಿ ಎಂದರೆ ಜ್ಞಾನ ಮೊದಲಾದ ಪಂಚೇಂದ್ರಿಯಗಳು ಆಕಾಶದಿಂದ ಆದುವು. ಆ ವಾಯುವಿನಿಂದ ಪ್ರಾಣ ಮೊದಲಾದ ಪಂಚವಾಯುಗಳಾದವು. ಅಗ್ನಿಯಿಂದ ಕಿವಿ ಮೊದಲಾದ ಐದು ಸುಜ್ಞಾನೇಂದ್ರಿಯಗಳಾದುವು. ಜಲದಿಂದ ಪಂಚವಿಷಯಗಳೂ ಭೂಮಿಯಿಂದ ಪಂಚಕರ್ಮಾಖ್ಯಗಳೂ

CC-0. Jangamwadi Math Collection. Digitized by eGangotri

ಇಂ ಚಮತ್ಕಾರದಿಂ ಪಿಂಡ ಬ್ರಹ್ಮಾಂಡವ
ಪಂಚಮಂ ಪೇಳ್ವೆನಾಲಿಸು ರಾಮ ಮುಂ ಪೇಳ್ದ
ಪಂಚಭೂತಂಗಳೇ ಪಂಚಾಂಶ ಪಂಚೀಕೃತಿಯನೈದಿ ದೇಹವಾಯ್ತು
ಪಂಚಭೂತಂ ಧರಣಿ ಜಲತೇಜ ಹರಿ ನಭಂ
ಪಂಚಾಂಶವಸ್ಥಿತ್ವಕ್ನಾಡಿ ಮಾಂಸಂ ರೋಮ
ಸಂಚಯಮಿವೈದುವುಂ ಪೃಥ್ವಿಯಿಂದಾದುವಾಲಿಸು ರಾಮ ನೀನೆಂದನು ೧೫

ಸ್ವೇದ ಜೊಲ್ ಮೂತ್ರ ಶುಕ್ಲಂ ಶೋಣಿತಂ ಜಲದಿ
ನಾದುವು ತೃಷಾ ನಿದ್ರೆಯಾಲಸ್ಯ ಸಂಗ ಕ್ಷು
ತ್ತಾದುವಗ್ನಿಯೊಳಿರದೆ ಪರಿವ ಪಾರುವ ಸುಳಿವ ಕೂಡುವಗಲ್ವವು ವಾಯುವಿಂ
ಆದುವುರೆ ಮೋಹ ರಾಗದ್ವೇಷ ಲಜ್ಜೆ ಭೀ
ತ್ಯಾದಿಗಳ್ ಗಗನದಿಂ ತತ್ಪಂಚಭೂತದಿಂ
ದಾದುವಿಪ್ಪತ್ತೈದು ಗುಣವುವಕ್ಕೊಂದೊಂದಕ್ಕೈದೈದು ಗಣನೆಯಿಂದೆ ೧೬

ಧರೆಗೆ ವಿಷಯಂಗಳೈದಂಬುವಿಗೆ ನಾಲ್ಕಗ್ನಿ
ಗಿರದೆ ಮೂರನಿಲಂಗವೆರಡಾಗಸಕ್ಕೊಂದು
ಪರಿಕಿಸಲ್ಕೀ ಮಿಶ್ರಮಿಪ್ಪತ್ತೈದಹುದು ಪಂಚೀಕೃತಿಯನಿನ್ನಾಲಿಸು

ಹುಟ್ಟಿದವು. ೧೫. ಇನ್ನು ಚಮತ್ಕಾರವಾಗಿ ಪಿಂಡ, ಬ್ರಹ್ಮಾಂಡ ವಿವರವನ್ನು ಹೇಳುತ್ತೇನೆ ಕೇಳು ಸಿದ್ಧರಾಮ. ಈ ಮೊದಲು ಹೇಳಿದ ಪಂಚಭೂತಗಳೇ ಪಂಚಾಂಶ ಪಂಚೀಕೃತಿಯನ್ನು ಹೊಂದಿ ದೇಹವಾಯಿತು. ಪಂಚಭೂತ ಭೂಮಿ, ನೀರು, ಅಗ್ನಿ, ವಾಯು, ಆಕಾಶಗಳು. ಐದು ಅಂಶವಾದ ಅಸ್ಥಿ, ಚರ್ಮ, ನಾಡಿ, ಮಾಂಸ, ಕೂದಲ ಸಮೂಹ ಇವೈದೂ ಭೂಮಿಯಿಂದ ಆದುವು, ಸಿದ್ಧರಾಮ ಕೇಳು ಎಂದನು, ೧೬. ಬೆವರು, ಜೊಲ್ಲು, ಮೂತ್ರ, ರೇತಸ್ಸು, ರಕ್ತ ಇವು ಜಲದಿಂದ ಆದುವು. ಬಾಯಾರಿಕೆ, ನಿದ್ರೆ, ಆಲಸ್ಯ, ಸಂಗ, ಹಸಿವು ಮೊದಲಾದುವು ಅಗ್ನಿಯಿಂದ ಆದುವು. ಓಡಾಟ, ಹಾರಾಟ, ಸುಳಿದಾಟ, ಕೂಡುವಿಕೆ–ಅಗಲುವಿಕೆ ಇವುಗಳು ವಾಯುವಿನಿಂದ ಆದುವು. ಮೋಹ, ಪ್ರೀತಿ–ದ್ವೇಷ, ನಾಚಿಕೆ, ಹೆದರಿಕೆ ಮುಂತಾದುವು ಆಕಾಶದಿಂದ ಆದುವು. ಈ ರೀತಿ ಪಂಚಭೂತದಿಂದ ಒಂದೊಂದಕ್ಕೂ ಐದರ ಲೆಕ್ಕದಿಂದ ಇಪ್ಪತ್ತೈದು ಗುಣಗಳಾದುವು. ೧೭. ಭೂಮಿಗೆ ಐದು ವಿಷಯಗಳು, ಜಲಕ್ಕೆ ನಾಲ್ಕು, ಅಗ್ನಿಗೆ ಮೂರು, ವಾಯುವಿಗೆ ಎರಡು, ಆಕಾಶಕ್ಕೆ ಒಂದು,[1] ಇವುಗಳ[2] ಒಟ್ಟು ಮಿಶ್ರಣ ಇಪ್ಪತ್ತೈದಾಗುವುದು.

---

[1]ಭೂಮಿಗೆ = ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಜಲಕ್ಕೆ = ಶಬ್ದ, ಸ್ಪರ್ಶ, ರೂಪ, ರಸ, ಅಗ್ನಿಗೆ = ಶಬ್ದ, ಸ್ಪರ್ಶ, ರೂಪ, ವಾಯುವಿಗೆ = ಶಬ್ದ, ಸ್ಪರ್ಶ, ಆಕಾಶಕ್ಕೆ = ಶಬ್ದ.[2] ಇವುಗಳ = ಮುಂದೆ ಹೇಳತಕ್ಕ ಗುದ ಮೊದಲಾದುವುಗಳ (ರಂ)

CC-0. Jangamwadi Math Collection. Digitized by eGangotri

ಧರೆ ಪಾಯು ಗಂಧ ನಾಸಿಕ ಪ್ರಾಣ ಚಿತ್ತಂಗ
ಳುರುತರದ ಪೃಥ್ವಿಪಂಚಕಮೈದು ಗುಹ್ಯ ರಸ
ಪರಮಜಿಹ್ವಾಪಾನ ಬುದ್ಧಿಗಳಿವಪ್ಪುವಿಂದೆಲೆ ರಾಮ ಕೇಳೆಂದನು ೧೭

ಪಾದ ರೂಪಾಕ್ಷಿಗಳುದಾನಮುಮಹಂಕಾರ
ಮಾದುವಗ್ನಿಯೊಳಿರದೆ ಪಾಣಿ ಸ್ಪರುಶ ತ್ವಕ್ಕು
ಭೇದಿಸಲ್ ವ್ಯಾನ ಮನಮನಿಲನಿಂ ವಾಕ್ ಶಬ್ದ ಶ್ರುತಿಸಮಾನ ಜ್ಞಾನಮುಂ
ಆದುವಾಕಾಶದಿಂ ಶ್ರೋತ್ರೇಂದ್ರಿಯಕೆ ಭೂತ
ಮಾ ದಿವಂ ದಿಕ್ಕುಗಳ್ ದೇವತೆ ವಿಷಯ ಶಬ್ದ
ಮಾಂಕರದಿನಕ್ಷರಾನಕ್ಷರಂಗಳ್ ಶಬ್ದಭೇದಮಾಲಿಪ್ಪುದೆಂದನು ೧೮

ಭಾವಿಸಲ್ ತ್ವಕ್ಕಿಗೆ ಮರುತ್ ಭೂತಮಿಂದ್ರನಧಿ
ದೇವತೆಯದಕ್ಕೆ ವಿಷಯಂ ಸ್ಪರ್ಶ ಮೃದುಕಠಿಣ
ಮಾವರಿಪ ಶೀತೋಷ್ಣಮೆಂಬ ನಾಲ್ಕುಂ ಸ್ಪರ್ಶಭೇದಮಕ್ಷೀಂದ್ರಿಯಕ್ಕೆ
ಪಾವಕಂ ಭೂತಮಾ ರೂಪು ವಿಷಯ ಶ್ವೇತ
ಭಾವಾದಿ ಷಡ್ವರ್ಣಮಾ ರೂಪಭೇದಮಿ
ನ್ನಾ ವಿಮಲಜಿಹ್ವೇಂದ್ರಿಯಕ್ಕಪ್ಪು ಭೂತಮುರೆ ವರುಣನಧಿದೈವಮದಕೆ ೧೯

ರಸ ವಿಷಯಮದಕೆ ಮಾಧುರ್ಯ ಲವಣಾದಿ ಷ
ಡ್ರಸಮೆ ತದ್ಭೇದಮಾ ಘ್ರಾಣೇಂದ್ರಿಯಕ್ಕಿರದೆ
ರಸೆ ಭೂತಮಶ್ವಿನೀದೇವತೆಗಳಧಿದೈವಮದಕೆ ಗಂಧಂ ವಿಷಯವು

ಇನ್ನು ಪಂಚೀಕೃತಿಯನ್ನು ಕೇಳು. ಗುದ, ಗಂಧ, ಮೂಗು, ಪ್ರಾಣ, ಮನಸ್ಸುಗಳು ಶ್ರೇಷ್ಠವಾದ ಭೂಮಿಯ ಐದರ ಗುಂಪು. ಜನನಾಂಗ, ರಸ, ನಾಲಿಗೆ, ಅಪಾನ, ಬುದ್ಧಿಗಳು ಇವು ಜಲದಿಂದ ಆದುವು, ಎಲೆ ಸಿದ್ಧರಾಮ ಕೇಳು ಎಂದನು. ೧೮. ಪಾದ, ರೂಪ, ಕಣ್ಣುಗಳು, ಉದಾನ, ಅಹಂಕಾರಗಳು ಅಗ್ನಿಯಿಂದ ಆದುವು. ಕೈ, ಸ್ಪರ್ಶ, ಚರ್ಮ, ವ್ಯಾನ, ಮನಸ್ಸು, ವಾಯುವಿನಿಂದಾದುವು. ಮಾತು, ಶಬ್ದ, ಕಿವಿ, ಸಮಾನ, ಜ್ಞಾನಗಳು ಆಕಾಶದಿಂದ ಆದುವು. ಕರ್ಣೇಂದ್ರಿಯಕ್ಕೆ ಆಕಾಶವೇ ಭೂತ, ದಿಕ್ಕುಗಳೇ ದೇವತೆ, ಶಬ್ದವೇ ವಿಷಯ, ಶಬ್ದಭೇದಗಳು ಅಕ್ಷರ-ಅನಕ್ಷರಗಳು. ೧೯. ತಿಳಿದುನೋಡಲು ಚರ್ಮಕ್ಕೆ ವಾಯುವು ಭೂತ. ಇಂದ್ರನು ಅಧಿದೇವತೆ. ಅದಕ್ಕೆ ಸ್ಪರ್ಶವೇ ವಿಷಯ. ಮೃದು-ಕಠಿಣ, ಆವರಿಸುವ ಶೀತೋಷ್ಣ ಎಂಬ ನಾಲ್ಕು ಸ್ಪರ್ಶ ಭೇದಗಳಿವೆ. ಕಣ್ಣೆಂಬ ಇಂದ್ರಿಯಕ್ಕೆ ಅಗ್ನಿಯೇ ಭೂತ. ಆ ರೂಪವೇ ವಿಷಯ. ಬಿಳಿ ಮೊದಲಾದ ಆರು ಬಣ್ಣಗಳೇ ರೂಪವಿಭೇದಗಳು. ಇನ್ನೂ ಶ್ರೇಷ್ಠವಾದ ನಾಲಗೆಗೆ ಜಲವೇ ಭೂತ. ವರುಣನು ಅಧಿದೇವತೆ. ೨೦. ಅದಕ್ಕೆ ವಿಷಯ ರಸ. ಆ ರಸಬೇಧಗಳು ಮಾಧುರ್ಯ-ಉಪ್ಪು ಮೊದಲಾದ ಆರು ಬಗೆಯುಂಟು. ಆ ಮೂಗೆಂಬ ಇಂದ್ರಿಯಕ್ಕೆ ಭೂಮಿಯೇ ಭೂತ. ಅಶ್ವಿನೀದೇವತೆಗಳೇ ಅಧಿದೇವತೆಗಳು. ಅದಕ್ಕೆ

CC-0. Jangamwadi Math Collection. Digitized by eGangotri

ಸುಸುಗಂಧ ದುರ್ಗಂಧವೆರಡು ಗಂಧದ ಭೇದ
ಮುಸಮು ವಾಗಿಂದ್ರಿಯಕೆ ನಾಗ ಮರುತಂ ವಾಣಿ
ಯೆಸೆವ ದೈವಂ ಸುವಾಕ್ಯಂಗಳುಂ ದುರ್ವಾಕ್ಯಸಂಕುಲಂ ವಿಷಯಂಗಳು ೨೦

ಒರೆವೆನಾಲಿಸು ರಾಮ ಪಾಣೇಂದ್ರಿಯಕೆ ಕೂರ್ಮ
ಮರುತನಿಂದ್ರಂ ದೈವಮಾದಾನ ದಾನವೆಂ
ಬೆರಡು ವಿಷಯಂ ಪದೇಂದ್ರಿಯಕೆ ಕೃಕರಂ ವಾಯು ವಿಷ್ಣುವಧಿದೈವಮದಕೆ
ಇರವೆ ಗಮನಾಗಮನ ವಿಷಯಮಾ ಗುಹ್ಯಕ್ಕೆ
ವರ ದೇವದತ್ತ ಮರುತಂ ಮೃತ್ಯುವಧಿದೈವ
ಪರಿಕಿಸಲ್ಕಾನಂದ ವಿಷಯಮಾ ಪಾಯುಗೆ ಧನಂಜಯಾಖ್ಯಂ ಮರುತನು ೨೧

ಪರಮೇಷ್ಠಿ ದೈವಂ ವಿಸರ್ಜನಂ ವಿಷಯಮಿ
ನ್ನಿರವೆ ಕೇಳ್ ದಶವಾಯುಗಳ ನಿರ್ಣಯಂಗಳಂ
ಪರಿಕಿಸಲ್ ಪ್ರಾಣ ಮರುದಿಂದ್ರನೀಲದ ವರ್ಣಮದು ಹೃದಯದೊಳಗೆ ನೆಲೆಸಿ
ಹಿರಿಯ ಬೆರಳಿಂದೆ ವಾಲಾಗ್ರಪರಿಯಂತರಂ
ಸ್ಥಿರದೆ ಸತ್ಪ್ರಾಣಿಸುತಮುಚ್ಛ್ವಾಸ ನಿಶ್ವಾಸ
ಮೆರಡನಾಗಿಸಿಯನ್ನಜೀರ್ಣಮಂ ಮಾಡುವುದು ರಾಮ ನೀಂ ಕೇಳೆಂದನು ೨೨

ಗುದದೊಳಗಪಾನಹರಿಯಿರ್ದು ಮಲಮೂತ್ರಮುಮ
ನೊವವಲೀಯದೆ ವಿಸರ್ಜಿಸಿಯಧೋದ್ವಾರಮಂ
ಪದೆದು ಬಲಿದನ್ನರಸವಂ ವ್ಯಾಪ್ತಿಯಂ ಮಾಡುತಿಹುದನುದಿನಂ ಮರೆಯದೆ

ವಿಷಯವು ಗಂಧ, ಸುಗಂಧ, ದುರ್ಗಂಧ ಎಂಬ ಗಂಧದ ಎರಡು ಭೇದಗಳುಂಟು. ಅಸಮವಾದ ವಾಕ್ಕು ಎಂಬ ಇಂದ್ರಿಯಕ್ಕೆ ನಾಗನೇ ವಾಯು. ಸರಸ್ವತಿಯೇ ಅಧಿದೇವತೆ. ಸುವಾಕ್ಯ-ದುರ್ವಾಕ್ಯಗಳ ಸಮೂಹವೇ ವಿಷಯಗಳು. ೨೧. ಹೇಳುತ್ತೇನೆ ಕೇಳಯ್ಯಾ ಸಿದ್ಧರಾಮ, ಕೈಯೆಂಬ ಇಂದ್ರಿಯಕ್ಕೆ ಆಮೆ ವಾಯು, ಇಂದ್ರನೇ ದೈವ, ಆದಾನ-ದಾನವೆಂಬ ಎರಡು ವಿಷಯಗಳು. ಪಾದೇಂದ್ರಿಯಕ್ಕೆ ಕೃಕರ. ವಾಯು ವಿಷ್ಣುವು ಅದಕ್ಕೆ ಅಧಿದೈವ. ಅದಕ್ಕೆ ಗಮನ-ಆಗಮನವೇ ವಿಷಯಗಳು. ಗುಹ್ಯೇಂದ್ರಿಯಕ್ಕೆ ಶ್ರೇಷ್ಠವಾದ ದೇವದತ್ತ ವಾಯು. ಮೃತ್ಯುವೇ ಅಧಿದೇವತೆ. ಆನಂದವೇ ವಿಷಯ. ಪೃಷ್ಠಕ್ಕೆ ದನಂಜಯಾಖ್ಯನೇ ವಾಯುವು. ೨೨. ಪರಮೇಷ್ಠಿ ದೈವ. ವಿಸರ್ಜನವೇ ವಿಷಯ. ಇನ್ನು ಮುಂದೆ ಹತ್ತು ವಾಯುಗಳ ನಿರ್ಣಯಗಳನ್ನು ಕೇಳಯ್ಯ, ಪರೀಕ್ಷಿಸಲು ಪ್ರಾಣವಾಯುವು ಇಂದ್ರನೀಲದ ಬಣ್ಣವುಳ್ಳದ್ದು. ಅದು ಹೃದಯದಲ್ಲಿ ನೆಲೆಸಿದ್ದು ಹೆಬ್ಬೆರಳಿನಿಂದ ತಲೆಕೂದಲಿನವರೆಗೆ ದೇಹದಲ್ಲಿ ವ್ಯಾಪಿಸಿ ಉಚ್ಛ್ವಾಸ-ನಿಶ್ವಾಸ ಎಂಬ ಎರಡು ಕ್ರಿಯೆಗಳನ್ನು ಮಾಡಿ ಅನ್ನವನ್ನು ಜೀರ್ಣಿಸುವಂತೆ ಮಾಡುವುದು, ಸಿದ್ಧರಾಮ ಕೇಳು ಎಂದನು. ೨೩. ಪೃಷ್ಠದಲ್ಲಿ ಅಪಾನವಾಯು ವಿದ್ದು ಮಲಮೂತ್ರಗಳನ್ನು ನಿಲ್ಲಲು ಬಿಡದೆ ವಿಸರ್ಜಿಸಿ ಕೆಳಗಿನ ದ್ವಾರವನ್ನು ಮುಚ್ಚಿ ಪ್ರತಿದಿನವೂ ಅನ್ನರಸವನ್ನು ವ್ಯಾಪನಗೊಳಿಸುವುದು. ಸಮಾನ ವಾಯುವು ನೀಲಿಬಣ್ಣ

CC-0. Jangamwadi Math Collection. Digitized by eGangotri

ವಿಗಿತಂ ಸಮಾನಾನಿಲಂ ನೀಲವರ್ಣಮಿ
ರ್ಪುದು ನಾಭಿಯಾ ಪಾದಮಸ್ತಕಂಬರಮವಯ
ವದೊಳೆ ಪಸರಿಸಿಕೊಂಡು ಕೊಂಡನ್ನರಸವನೆಲ್ಲಾ ರೋಮಕ್ಕೈದಿಸುವುದು ೨೩

ಎಳೆಮಿಂಚುವಣ್ಣದೊಳಪಾನಾನಿಲಂ ಕಂಠ
ದೊಳಗಿರ್ದು ಸೀನ್ ಕೆಮ್ಮು ಕನಸುಗಳ ಕಾಂಬ ವೆುಯ್
ವಳಿಯೊಳೇಳಿಪ ಕುಳ್ಳಿರಿಪ ಛರ್ದಿಯುಂ ನಿರೋಧಂಗಳಂ ಮಾಡಿಸುತ್ತೆ
ಇಳಿವನ್ನರಸವನುತ್ಥಾಪನಂಗೆಯ್ವುತ್ತೆ
ನೆಲೆಸಿರ್ಪುದಾ ವ್ಯಾನವಾಯು ಕ್ಷೀರದಬಣ್ಣ
ವೊಲವಿನಿಂ ಸರ್ವಾಂಗಸಂಧಿಗಳೊಳಿರ್ಪುದೆಲೆ ರಾಮ ನೀಂ ಕೇಳೆಂದನು ೨೪

ಮುದುಡಿರ್ದುದಂ ತಿದ್ದಿಯನ್ನಪಾನಾದಿಗಳ
ನೊದವಿಸುವದಲ್ಲಲ್ಲಿ ಮೇಣ್ ನಾಗವಾಯುವೆಂ
ಬುದು ಪೀತವರ್ಣಮುರೆ ರೋಮನಾಳದೊಳಿರ್ದು ನಿಶ್ಚಲದೆ ಪಾಡಿಸುವುದು
ಉದರಭಾಳದೊಳಿರ್ದು ಕೂರ್ಮವಮರುತಂ ಸುಧವ
ಳದ ವರ್ಣ ತನುವಿಗಾಧಾರಮಾಗಿರ್ದಪುದು
ಪದೆದು ಕಣ್ಬಾಯ್ಗಳಂ ಮುಚ್ಚಿ ತೆರೆಸುತ್ತಿಹುದು ಕೇಳೆಂದು ನಿರವಿಸಿದನು ೨೫

ಕೃಕರವೆಂಬಾ ವಾಯುವಂಜನದಕಾಂತಿ ನಾ
ಸಿಕದುದಿಯೊಳಿರ್ದು ಕ್ಷುತ್ತಾದಿ ಧರ್ಮಂಗಳಂ
ಪ್ರಕಟಿಸುತೆ ಗಮನಾಗಮನ ಕಾರ್ಯಮಂ ಮಾಡುವುದು ದೇವದತ್ತವಾಯು

ವುಳ್ಳದ್ದು. ಹೊಕ್ಕುಳ ಜಾಗದಲ್ಲಿ ಇದ್ದು ಪಾದದಿಂದ ತಲೆಯವರೆಗೆ ಅವಯವದ ಎಲ್ಲೆಡೆಯೂ ವ್ಯಾಪಿಸಿಕೊಂಡು ತೆಗೆದುಕೊಂಡ ಅನ್ನರಸವು ಎಲ್ಲ ಕೂದಲಿಗೂ ಹೋಗು ವಂತೆ ಮಾಡುತ್ತದೆ. ೨೪. ಎಳೆಮಿಂಚುಬಣ್ಣದಿಂದ ಕೂಡಿದ ಉದಾನವಾಯುವು ಕಂಠದೊಳಗಿದ್ದು ಸೀನು, ಕೆಮ್ಮು, ಕನಸುಕಾಣುವ ಮೈಮರೆವನಿಂದ ಎಬ್ಬಿಸುವ ಕೂಡಿ ಸುವ, ವಾಂತಿಯನ್ನು ಮಾಡುತ್ತ ಮತ್ತೆ ಅದನ್ನು ವಿರೋಧಿಸುತ್ತ ಇಳಿಯುವ ಅನ್ನರಸ ವನ್ನು ಮತ್ತೆ ಮೇಲಕ್ಕೆ ಏರಿಸುತ್ತ ನೆಲೆಸಿರುವುದು. ಆ ವ್ಯಾನವಾಯುವು ಹಾಲಿನ ಬಣ್ಣದಿಂದ ಇದ್ದು ಎಲ್ಲ ಅಂಗಗಳ ಕೀಲುಗಳಲ್ಲಿ ಇರುತ್ತದೆ, ಎಲೆ ಸಿದ್ಧರಾಮ ಕೇಳು ಎಂದನು. ೨೫. ಮುದುಡಿಕೊಂಡಿದ್ದನ್ನು ಸರಿಮಾಡಿ ಅನ್ನ–ಪಾನಾದಿಗಳನ್ನು ಅಲ್ಲಿಗಲ್ಲಿಗೆ ಒದಗಿಸುವುದು. ಅಲ್ಲದೆ ನಾಗವಾಯುವೆಂಬುದು ಹೊಂಬಣ್ಣವುಳ್ಳದ್ದು. ರೋಮನಾಳ ದಲ್ಲಿದ್ದು ನಿಶ್ಚಲತೆಯಿಂದ ಹಾಡಿಸುವುದು. ಉದರ ಹಣೆಯಪ್ರದೇಶದಲ್ಲಿದ್ದು ಕೂರ್ಮ ವಾಯುವು ಉತ್ತಮವಾದ ಬಿಳಿಯ ಬಣ್ಣದಿಂದ ಕೂಡಿದ್ದು ಶರೀರಕ್ಕೆ ಆಧಾರವಾಗಿರು ವುದು. ಕಣ್ಣು-ಬಾಯಿಗಳನ್ನು ಮುಚ್ಚಿಸುತ್ತ-ತೆಗೆಸುತ್ತ ಇರುತ್ತದೆ ಕೇಳು ಎಂದನು. ೨೬. ಕೃಕರವೆಂಬ ಆ ವಾಯು ಅಂಜನದ ಬಣ್ಣದಿಂದ ಕೂಡಿದ್ದು ಮೂಗಿನ ತುದಿ ಯಲ್ಲಿದ್ದು ಹಸಿವು ಮುಂತಾದ ಧರ್ಮಗಳನ್ನು ಪ್ರಕಟಪಡಿಸುತ್ತ ಹೋಗುವಿಕೆ-ಬರುವಿಕೆ ಯನ್ನು ಮಾಡುವುದು. ದೇವದತ್ತವಾಯುವು ಊನವಿಲ್ಲದೆ ಗುಪ್ತಾಂಗ ಮತ್ತು

CC-0. Jangamwadi Math Collection. Digitized by eGangotri

ವಿಕಲವಿಲ್ಲದೆ ಗುಹ್ಯಕಟಿದೇಶದೊಳಗೆ ಸ್ಫ
ಟಿಕವರ್ಣದಿಂದಿರ್ದು ಕಳ್ಳಿರಿಸುವೇಳಿಸುವ
ಸಕಲಭೇದಂಗೆಯ್ವುತೊರಲಿ ಮಾತಾಡಿಸುವುದೆಲೆ ರಾಮ ಕೇಳೆಂದನು ೨೬

ವರಧನಂಜಯವಾಯು ಬ್ರಹ್ಮರಂಧ್ರದೊಳಿರ್ಪು
ದುರುನೀಲವರ್ಣಮದು ಕರ್ಣಂಗಳೊಳ್ ಬಿಡದೆ
ಶರಧಿನಿರ್ಘೋಷಂಗಳಂ ಘೋಷಿಸುತೆ ಮರಣದಲ್ಲಿ ನಿರ್ಘೋಷವಾಗಿ
ಇರುತಿರ್ಪುದೆಲೆ ಸಿದ್ಧರಾಮ ದಶವಾಯುಗಳ
ಪರಿಯನಿನ್ನಾಲಿಸೈ ಮುಂದಿರದೆ ಪೇಳ್ವಪೆಂ
ಕರಣಭೇದಂಗಳಂ ವಿಸ್ತರದೊಳೆನುತಲಾ ಚೆನ್ನಬಸವಂ ನುಡಿದನು ೨೭

ಮತ್ತೆ ಕೇಳಾತ್ಮನಾಗಸವೊಂದೆ ಜ್ಞಾನಮಾ
ದತ್ತು ವಾಯುವನೊಂದೆ ಮನವೊಂದುವಗ್ನಿಯೊಳ್
ಬಿತ್ತರದಿನೊಂದಲ್ಕಹಂಕಾರಮಾಯ್ತುದಕಮಂ ಕೂಡೆ ಬುದ್ಧಿಯಾಯ್ತು
ಚಿತ್ತಮಾಯ್ತಾ ಭೂಮಿಯೊಳ್ ಬೆರಸೆ ಮೇಣಿವಿನಿ
ತುತ್ತಮಜ್ಞಾನಾದಿಯಂತಃಕರಣಮಾಲಿ
ಸುತ್ತರವನಾ ಮನಸ್ಸಿಗೆ ವಾಯುಭೂತಮಾ ಚಂದ್ರನಧಿದೈವಮದಕೆ ೨೮

ಸತತಮದು ಸಂಕಲ್ಪಮಂ ವಿಕಲ್ಪಂಗಳಂ
ಪ್ರತಿದಿನಂ ಮಾಡುವುದಹಂಕೃತಿಗೆ ರುದ್ರದೇ
ವತೆಯಗ್ನಿಭೂತವೊಡನೊಡನಹಂಕರಿಸುತಿಪ್ಪುದು ಬುದ್ಧಿಗಪ್ಪುಭೂತಂ

ಸೊಂಟಪ್ರದೇಶಗಳಲ್ಲಿ ಸ್ಫಟಿಕಬಣ್ಣದಿಂದಿದ್ದು ಕೂಡಿಸುವ ಬಿಳಿಸುವ ಮೊದಲಾದ ಕೆಲಸಗಳನ್ನು ಮಾಡುತ್ತ ಕೂಗಿ ಮಾತನಾಡಿಸುವುದು, ಎಲೆ ಸಿದ್ಧರಾಮ, ಕೇಳು ಎಂದನು. ೨೭. ಶ್ರೇಷ್ಠ ಧನಂಜಯವಾಯು ಬ್ರಹ್ಮರಂಧ್ರದಲ್ಲಿರುತ್ತದೆ. ಅದು ನೀಲಿಬಣ್ಣವುಳ್ಳದ್ದು. ಕಿವಿಗಳಲ್ಲಿ ಸಮುದ್ರಘೋಷಗಳನ್ನುಂಟುಮಾಡುತ್ತ ಸಾವಿನಲ್ಲಿ ಸದ್ದನ್ನು ಕಳೆದುಕೊಂಡು ಇರುತ್ತದೆ. ಎಲೆ ಸಿದ್ಧರಾಮ ಇದು ದಶವಾಯುಗಳ ರೀತಿ. ಇನ್ನು ಮುಂದೆ ಕರಣಭೇದಗಳನ್ನು ವಿಸ್ತಾರವಾಗಿ ಹೇಳುತ್ತೇನೆ ಕೇಳು ಎನ್ನುತ್ತ ಆ ಚೆನ್ನಬಸವನು ನುಡಿದನು. ೨೮. ಮತ್ತೆ ಕೇಳು, ಆತ್ಮನು ಆಕಾಶದಲ್ಲಿ ಬೆರೆಯಲು ಜ್ಞಾನವು ಆಯಿತು. ವಾಯುವಿನಲ್ಲಿ ಸೇರಲು ಮನಸ್ಸಾಯಿತು. ಅಗ್ನಿಯಲ್ಲಿ ವಿಸ್ತಾರವಾಗಿ ಕೂಡಲು ಅಹಂಕಾರವಾಯಿತು. ಜಲದಲ್ಲಿ ಹೊಂದಲು ಬುದ್ಧಿಯಾಯಿತು. ಆ ಭೂಮಿಯಲ್ಲಿ ಕೂಡಲು ಚಿತ್ತವಾಯಿತು. ಇವುಗಳಷ್ಟೂ ಉತ್ತಮ ಜ್ಞಾನ ಮೊದಲಾದ ಅಂತಃಕರಣಗಳು. ಉಳಿದುದನ್ನು ಕೇಳು, ಆ ಮನಸ್ಸಿಗೆ ವಾಯುವು ಭೂತ, ಆ ಚಂದ್ರನು ಅದಕ್ಕೆ ಅಧಿದೈವ. ೨೯. ಸತತವಾಗಿ ಅದು ಸಂಕಲ್ಪ-ವಿಕಲ್ಪಗಳನ್ನು ಪ್ರತಿದಿನ ಮಾಡುವುದು. ಅಹಂಕಾರಕ್ಕೆ ರುದ್ರ ದೇವತೆ, ಅಗ್ನಿ ಭೂತ, ಅಹಂಕಾರ ತಳೆಯುವುದೇ ಅದರ ಕೆಲಸ. ಬುದ್ಧಿಗೆ ಜಲಭೂತ,

CC-0. Jangamwadi Math Collection. Digitized by eGangotri

ಚತುರಾನನಂ ದೈವಬುದ್ಧಿಯುಂ ನಿಶ್ಚಯಿಪು
ದತುಳಚಿತ್ತಕೆ ಪೃಥ್ವಿಯೆಂಬ ಭೂತವುಮಾತ್ಮ
ವಿತತಿ ದೈವಂ ಸ್ಥಿರದೊಳವಧರಿಸುತಿರ್ಪುದೆಲೆ ರಾಮೇಶ ಕೇಳೆಂದನು ೨೯

ಇಂತುಟಿಪ್ಪತ್ತುನಾಲ್ಕುಂ ತತ್ವಮೇ ದೇಹ
ಮುತದಂ ತಾಳ್ದಿರ್ಪ ದೇಹಿಯಾತ್ಮಂ ತನಗೆ
ಸಂತತಂ ಜ್ಞಾನೇಂದ್ರಿಯಂಗಳ್ ಚಿದಾಕಾರಮಧಿದೈವಮುದಕೀಶನು
ಸಂತಸದೊಳಖಿಳ ಸರ್ವಾಂಗಪ್ರದೇಶಮಂ
ತಾಂ ತುಂಬಿಕೊಂಡು ಚೈತನ್ಯರೂಪಾಗಿ ಸ
ತ್ಕಾಂತಿಯುಮನೈದಿಸುತ್ತಿರ್ಪನಾತ್ಮಂ ಮೂರು ಭೇದಮಾಲಿಪುದೆಂದನು ೩೦

ಪರಿಕಿಸಲ್ ಜೀವಾತ್ಮನಂತರಾತ್ಮಂ ಬಳಿಕ
ಪರಮಾತ್ಮನೆಂದು ಸಂಸಾರಸುಖದುಃಖದೊಳ್
ಪರಿಬದ್ಧನಾದವಂ ಜೀವಾತ್ಮನವರೊಳಗೆ ಸಲೆ ಹೊದ್ದೆಯುಂ ಹೊದ್ದದೆ
ಇರುತಿಪ್ಪನಂತರಾತ್ಮಂ ತತ್ಪ್ರಪಂಚದೊಳ್
ಬರದೆ ಸಿಲ್ಕದೆ ನಿರಾಕಾರರೂಪಿನೊಳಿಹಂ
ಪರಮಾತ್ಮನಿಂತುಟಾತ್ಮತ್ರಯದ ನಿರ್ಣಯಂ ಕೇಳೆಂಸು ನಿರವಿಸಿದನು ೩೧

ಪ್ರಿಯದೆ ಪೇಳ್ವೆಂ ಸ್ಥೂಲ ಸೂಕ್ಷ್ಮ ಕಾರಣತನು
ತ್ರಯದೊಳಾ ಸ್ಥೂಲತನುವೇ ಪಂಚಭೂತಗಳ
ಮಯಮಿಂದ್ರಿಯಂಗಳೀರೈದು ವಾಯುಗಳೈದು ತನ್ಮನೋಬುದ್ಧಿಯೆರಡು

ಬ್ರಹ್ಮ ದೈವಬುದ್ಧಿಯನ್ನು ನಿಶ್ಚಯಿಸುವುದು, ಅಸಮಾನವಾದ ಚಿತ್ತಕ್ಕೆ ಭೂಮಿಯೆಂಬುದೇ ಭೂತ, ಆತ್ಮಸಮೂಹವೇ ದೈವವು. ಅದು ಸ್ಥಿರವಾಗಿ ಕೇಳುತ್ತಿರುವುದು ಎಲೆ ಸಿದ್ಧರಾಮೇಶ, ಕೇಳು ಎಂದನು. ೩೦. ಈ ರೀತಿ ಇಪ್ಪತ್ತನಾಲ್ಕು ತತ್ತ್ವವೇ ದೇಹ. ಹಾಗೆ ಆ ದೇಹವನ್ನು ತಾಳಿರುವ ಆತ್ಮನಿಗೆ ಜ್ಞಾನೇಂದ್ರಿಯಗಳೇ ಚಿತ್ಸ್ವರೂಪವಾಗಿರುವುದು. ಅದಕ್ಕೆ ಆಧಿದೇವತೆ ಈಶ್ವರನು, ಸಂತೋಷದಿಂದ ಸರ್ವಾಂಗದಲ್ಲಿಯೂ ತುಂಬಿಕೊಂಡು ಚೈತನ್ಯರೂಪವಾಗಿ ಕಾಂತಿಯನ್ನುಂಟುಮಾಡುತ್ತಿರುವನು. ಆತ್ಮನ ಮೂರು ಭೇದವನ್ನು ಕೇಳು ಎಂದನು. ೩೧. ಪರೀಕ್ಷಿಸುವುದಾದರೆ ಜೀವಾತ್ಮ, ಅಂತರಾತ್ಮ ಮತ್ತು ಪರಮಾತ್ಮನೆಂದು ಮೂರು ಬಗೆ, ಸಂಸಾರ ಸುಖ-ದುಃಖಗಳಲ್ಲಿ ಕಟ್ಟಲ್ಪಟ್ಟಿರುವನು. ಜೀವಾತ್ಮನೂ ಅದರೊಳಗೆ ಇದ್ದೂ-ಇಲ್ಲದಂತಿರುವನು ಅಂತರಾತ್ಮನು. ಆ ಪ್ರಪಂಚದಲ್ಲಿ ಬರದೆ, ಸಿಕ್ಕಿಕೊಳ್ಳದೆ ನಿರಾಕಾರ ರೂಪಿನಲ್ಲಿ ಇರುವವನು ಪರಮಾತ್ಮ. ಈ ರೀತಿ ಆತ್ಮತ್ರಯದ ನಿರ್ಣಯ ಕೇಳು ಎಂದು ನಿರೂಪಿಸಿದನು. ೩೨. ಪ್ರೀತಿಯಿಂದ ಹೇಳುತ್ತೇನೆ, ಸ್ಥೂಲ-ಸೂಕ್ಷ್ಮ-ಕಾರಣಗಳೆಂದು ಮೂರು ಬಗೆಯ ಶರೀರಗಳು. ಅವುಗಳಲ್ಲಿ ಆ ಸ್ಥೂಲಶರೀರವೇ ಪಂಚಭೂತಗಳಮಯುವಾದುದು. ಐದು ಇಂದ್ರಿಯಗಳು

CC-0. Jangamwadi Math Collection. Digitized by eGangotri

ನಿಯುತವಿಾ ಸಪ್ತದಶಕಂ ಲಿಂಗಭೌತಿಕಾ
ಹ್ವಯಮಿದೇ ಸೂಕ್ಷ್ಮತನುವಾತ್ಮ ಚಿತ್ತಾಹಂಕೃ
ತಿಯುಮಿರದೆ ಸಂಯೋಗವಾಗೆ ಕಾರಣತನುತ್ರಯಮಿವುಂ ಹೀಗೆಂದನು ೩೨

ಎಸೆವಂಗ ಪ್ರತ್ಯಂಗ ಸಾಂಗಾಂಗ ಸಮುಪಾಂಗ
ವಿಸರಭೇದಂಗಳ್ ಶಿರೋವಕ್ಷಮೂರು ಭುಜ
ಮುಸಮಾಂಗಮಾನನಂ ನಾಸಿಕಂ ಶ್ರುತಿಯಧರ ಲೋಚನಾಂಗುಲಿಯೆಂಬಿವು
ಸಸಿನದಿಂ ಪ್ರತ್ಯಂಗಮಿಂತು ಸಾಂಗಾಂಗ ಭಾ
ವಿಸೆ ನಾಲ್ಕು ಕರಣ ವಸ್ತ್ರಾಭರಣ ಲೇಪ ಕೂ
ರಸಿತತಿಯುಪಾಂಗಮಿಂತಂಗಂ ಚತುಷ್ಟಯುಂ ದಶನಾಡಿಯುಂ ಪೇಳ್ವೆನು ೩೩

ಮೇಲೆನಿಸುವಿಡ ಪಿಂಗಳನಾಡಿ ಚಂದ್ರರವಿ
ನಾಳದೊಳಗಾ ಸುಷುಮ್ನಂ ಮಧ್ಯನಾಳದೊಳ್
ತಾಳಿರಲ್ ಗಾಂಧಾರಿ ಬಲದಕ್ಷಿಯೊಳ್ ಹಸ್ತಿಜಿಹ್ವೆಯೆಡದಕ್ಷಿಯೊಳಗೆ
ಲೀಲೆಯಿಂದೆಡಬಲದ ಕಿವಿಯೊಳ್ ಪಯಸ್ವಿನಿ ವಿ
ಶಾಲ ಪೂಷಂಗಳಾಲಂಬಮಿರ್ಪುದು ಮೇಢ್ರ
ನಾಳದೊಳ್ ಪಾಯುವೊಳ್ ನಕುಹಮಾ ಶಂಕಿನಿಯೆ ನಾಭಿನಾಳದೊಳಿರ್ಪುದು ೩೪

ಧರೆ ಸಲಿಲ ಪಾವಕಾನಿಲ ಗಗನ ರವಿ ನಿಶಾ
ಕರರಾತ್ಮರೇಯಷ್ಟಮೂರ್ತಿಗಳ ಮದಮಿವಾ
ಧರೆಯ ಮದವೆತ್ತೆ ತನುಗುಣಭರಿತನಾಗಿಹು ಸಲಿಲಮದವೆತ್ತಿದಲ್ಲಿ

ದಶವಾಯುಗಳು. ಆ ಮನೋಬುದ್ಧಿಗಳೆರಡು ನಿಯುತವಾದ ಈ ಹದಿನೇಳು ತತ್ತ್ವಗಳಿಂದ ಕೂಡಿದ ಲಿಂಗಭೌತಿಕವೇ ಸೂಕ್ಷ್ಮತನು. ಆತ್ಮ, ಚಿತ್ತ, ಅಹಂಕಾರಗಳು ಸಂಯೋಗವಾಗಲು ಕಾರಣತನುವಾಗುತ್ತದೆ, ತನುತ್ರಯಗಳು ಹೀಗೆ ಎಂದನು. ೩೩. ಪ್ರಕಾಶಿಸುವ ಅಂಗ, ಪ್ರತ್ಯಂಗ, ಸಾಂಗಾಂಗ, ಸಮುಪಾಂಗಗಳ ಗುಂಪಿನ ಭೇದಗಳಲ್ಲಿ ತಲೆ, ಎದೆ, ತೊಡೆ, ಭುಜ ಇವು ಅಂಗಗಳು. ಮುಖ, ಮೂಗು, ಕಿವಿ. ತುಟಿ. ಕಣ್ಣು, ಬೆರಳು ಎಂಬುವುಗಳು ಸರಿಯಾಗಿ ಪ್ರತ್ಯಂಗಗಳು. ಆಲೋಚಿಸಿ ನೋಡಿದರೆ ನಾಲ್ಕು ಕರಣಗಳು ಸಾಂಗಾಂಗಗಳು. ವಸ್ತ್ರ, ಆಭರಣ, ಲೇಪನ, ಹರಿತವಾದ ಖಡ್ಗಸಮೂಹ ಉಪಾಂಗಗಳು. ಈ ರೀತಿ ನಾಲ್ಕು ಅಂಗಗಳು. ಇನ್ನು ಹತ್ತು ನಾಡಿಯನ್ನು ಹೇಳುತ್ತೇನೆ. ೩೪. ಮೇಲಾದ ಈಡ-ಪಿಂಗಳ ನಾಡಿಗಳು ಚಂದ್ರ-ಸೂರ್ಯ ನಾಳದೊಳಗೆ ಸುಷುಮ್ನ ಮಧ್ಯದೊಳಗೆ ಇರಲು ಬಲಗಣ್ಣಿನಲ್ಲಿ ತಾಳಿರಲು ಗಾಂಧಾರಿ, ಎಡಗಣ್ಣಿನಲ್ಲಿ ಹಸ್ತಿಜಿಹ್ವೆಯು, ಎಡ-ಬಲದ ಕಿವಿಗಳಲ್ಲಿ ಪಯಸ್ವಿನಿ ಮತ್ತು ವಿಶಾಲವಾದ ಪೂಷನಾಡಿಗಳಿರುತ್ತವೆ. ಮೇಢ್ರನಾಳದೊಳಗೆ ಆಲಂಬನವು, ಗುದನಾಳದೊಳಗೆ ನಕುಹವು, ಹೊಕ್ಕುಳನಾಳದಲ್ಲಿ ಶಂಕಿನಿ ಇರುತ್ತವೆ. ೩೫. ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮಗಳೇ ಅಷ್ಟಮೂರ್ತಿಗಳ ಸಂಬಂಧದ ಮದಗಳು. ಭೂಮಿಯ ಮದ ಹತ್ತಿದರೆ ಶರೀರಕ್ಕೆ ಸಂಬಂಧಿಸಿದ ಅಪೇಕ್ಷೆಯುಳ್ಳವನಾಗುವನು. ಜಲಮದ ಹತ್ತಿದಲ್ಲಿ

CC-0. Jangamwadi Math Collection. Digitized by eGangotri

ಇರದೆ ಸಂಸಾರಮದನಾಗಿಪಂ ಶಿಖಿಮದೋ
ತ್ಕರವಾಗೆ ಕಾಮಮದನಾಗಿಪಂ ಪವನಮದ
ಭರಿತನಾಗಲ್ ಗಮನಮದನಪಂ ಗಗನಮದಕೇರುವಂ ವಾಹನವನು ೩೫

ತರಣಿಮದವೆತ್ತೆ ಕೋಪಾಗ್ನಿಯೊಳ್ ಪುದಿದಿಹಂ
ಪರಮಶಿಮದವೆತ್ತೆ ಚಿಂತೆಯೊಳ್ ಕೂಡಿರ್ಪ
ನಿರದಾತ್ಮಮದವೆತ್ತೆ ಬಳಿಕಹಂಕಾರಯುತನಾಗುವಂ ಕೇಳ್ವುದಿನ್ನು
ನಿರುತಮಿ ಸಪ್ತಧಾತುತ್ಪತ್ತಿವರ್ಣಾಂಶ
ದುರುತರದ ಕರ್ಮಂಗಳೆಂತೆನಲ್ ರಸಕೆ ಭಾ
ಸುರಕಪಿಲವರ್ಣಮುಂ ಪೃಥ್ವ್ಯಂಶಮುಂಗಮುಂ ಭರದಿನಳ್ಕಿಸುತಿರ್ಪುದು ೩೬

ತವೆ ರುಧಿರಮದು ನೀಲವರ್ಣಮಪ್ಪುವಿನಂಶ
ಮವಯವದ ನಡುಗಿಸುತ್ತಿಹುದು ಮಾಂಸಂ ರಕ್ತ
ನಿವಹವರ್ಣಮಗ್ನಿಯುಂಶಂ ಶರೀರಮಂ ಕಳವಳಿಸುತಿರುತಿರ್ಪುದು
ವಿವರಿಸಲ್ ಮೇದಸ್ಸು ಮಾಂಜಿಷ್ಠವರ್ಣಮದು
ಪವನಾಂಶಮುಂಗಮುಂ ಬೆದರಿಸುತ್ತಿಹುದು ಮೇ
ಲವಿರಳಾಸ್ಥಿಗಳ್ಬೆದೆ ಕೃಷ್ಣವರ್ಣಂ ಗಗನದಂಶಮಾಗಿರುತಿರ್ಪುದು ೩೭

ಮರುಳಾಗಿ ನುಡಿಯಿಪ್ಪುದು ಮಜ್ಜೆ ತಾಮ್ರಚ್ಛಾಯೆ
ತರಣಿಯಂಶಂ ಶರೀರಮನೊತ್ತರದೊಳೆ ಕನ
ವರಸಿ ನುಡಿಸುತ್ತಿಹುದು ಶುಕ್ಲಮೇ ಶ್ವೇತವರ್ಣಂ ಚಂದ್ರನಂಶಿಕಮದು

ಸಂಸಾರಮದನಾಗಿರುವನು. ಅಗ್ನಿಮದ ಉತ್ಪತ್ತಿಯಾದಲ್ಲಿ ಕಾಮಮದನಾಗಿರುವನು, ವಾಯುಮದಭರಿತನಾದರೆ ಸಂಚಾರಮದವುಳ್ಳವನಾಗುವನು. ಆಕಾಶಮದ ಹತ್ತಿದವನು ವಾಹನವನ್ನು ಏರುವನು. ೩೬. ಸೂರ್ಯನ ಮದ ಹತ್ತಿದರೆ ಕೋಪಾಗ್ನಿಯಿಂದ ಕೂಡಿರುವನು. ಚಂದ್ರನ ಮದ ಹತ್ತಿದರೆ ಚಿಂತೆಯಿಂದ ಕೂಡಿರುವನು. ಆತ್ಮಮದ ಹತ್ತಿದಲ್ಲಿ ಅಹಂಕಾರದಿಂದ ಕೂಡುವನು. ಇನ್ನು ಕೇಳು, ಈ ಸಪ್ತಧಾತುಗಳ ಉತ್ಪತ್ತಿ, ವರ್ಣಾಂಶದ ಶ್ರೇಷ್ಠವಾದ ಕರ್ಮಗಳು ಹೇಗೆಂದರೆ ರಸಪ್ರಕಾಶಮಾನವಾದ ಕಪಿಲವರ್ಣದಿಂದ ಕೂಡಿರುತ್ತದೆ. ಪೃಥ್ವಿಯ ಅಂಶ ದೇಹವನ್ನು ಜೋರಾಗಿ ನಡುಗಿಸುತ್ತಿರುವುದು. ೩೭. ರಕ್ತವು ನೀಲಿಬಣ್ಣದಿಂದ ಕೂಡಿ ನೀರಿನಂಶವಾಗಿರುತ್ತದೆ. ಅದು ಅವಯವಗಳನ್ನು ನಡುಗಿಸುತ್ತಿರುವುದು. ಮಾಂಸವು ರಕ್ತಸಮೂಹದ ಬಣ್ಣದಿಂದ ಕೂಡಿದ್ದು ಅಗ್ನಿಯ ಅಂಶವುಳ್ಳದ್ದು. ಅದು ಶರೀರಕ್ಕೆ ಕಳವಳವನ್ನುಂಟುಮಾಡುತ್ತಿರುತ್ತದೆ. ಮೇದಸ್ಸು ಅತ್ಯಂತ ಪ್ರಕಾಶಮಾನವಾದ ಕೆಂಪುಬಣ್ಣವುಳ್ಳದ್ದು, ವಾಯುವಿನ ಅಂಶ ಹೊಂದಿ ಶರೀರವನ್ನು ಬೆದರಿಸುತ್ತಿರುವುದು. ನಿಬಿಡವಾದ ಮೂಳೆಗಳು ಕಪ್ಪುಬಣ್ಣ ಹೊಂದಿದ್ದು ಆಕಾಶದ ಅಂಶದಿಂದ ಕೂಡಿರುತ್ತವೆ. ೩೮. ಇವು ಹುಚ್ಚು ಹುಚ್ಚಾಗಿ ಮಾತನಾಡುವಂತೆ ಮಾಡುವುವು, ಮಜ್ಜೆಯು ತಾಮ್ರಬಣ್ಣವುಳ್ಳದ್ದು, ಸೂರ್ಯವಂಶದಿಂದ ಕೂಡಿ ಶರೀರವನ್ನು ಒತ್ತರಿಸಿ ಕನವರಿಸಿ ಮಾತನಾಡುವಂತೆ ಮಾಡುತ್ತದೆ. ವೀರ್ಯವು ಬಿಳಿಯಬಣ್ಣದಿಂದಿದ್ದು

CC-0. Jangamwadi Math Collection. Digitized by eGangotri

ಇರದೆ ಕಳವಳಮುಮಂ ಕಂಪನಮನೆಸಗುತೀ
ಪರಿ ಸಪ್ತಧಾತುಗಳ ನಿರ್ಣಯಂ ತನುಮನಂ
ವರಧನಂ ರಾಜ್ಯ ವಿಶ್ವೋತ್ಸಾಹ ಸೇವಕಾದಿಗಳಿವೇ ವ್ಯಸನಂಗಳು ೩೮

ತನುವಿನ ವ್ಯಸನವಾದಲ್ಲಿ ತನು ಬಡವಾದ
ನೆನುತಿಹಂ ಮೇಣ್ ಮನೋವ್ಯಸನವಾದಲ್ಲಿಯೊ
ಯ್ಯನೆ ಕಳವು ಪಾದರಂಗಳ ಬಯಸುತಿರ್ಪನರ್ಥವ್ಯಸನವಾದಾಗಳು
ಧನಕೆ ಚಿಂತಿಸುತಿಹಂ ರಾಜ್ಯವ್ಯಸನವಾಗೆ
ವಿನುತವಸ್ತ್ರಾಭರಣ ವಾಹನಂಗಳ ಬಯಪ
ನನುಪಮಿತ ವಿಶ್ವವ್ಯಸನಮಾಗೆ ಸದ್ಗೃಹಕ್ಷೇತ್ರಮಂ ಬಯಸುತಿಹನು ೩೯

ಆಲಿಸುತ್ಸಾಹಮದವಾದಲ್ಲಿ ಪುತ್ರ ಮಿ
ತ್ರಾಳಿಯಂ ಬಯಸುವಂ ಸೇವಕವ್ಯಸನಮಂ
ತಾಳಲ್ಕೆ ಕೊಂಡು ಕೊಟ್ಟುಂಡುಡಲ್ ಬೇಕೆಂಬ ಕೋಟಲೆಯೊಳೊಂದಿರ್ಪನು
ಪೇಳಲಿವು ಸಪ್ತವ್ಯಸನಮಿ ಷಡೂರ್ಮಿಗಳ
ಕೇಳ್ದೊಡಾ ಕ್ಷುತ್ ಪಿಪಾಸೆ ಶೋಕಂ ಮೋಹ
ಮಾಲೋಕಿಸಲ್ ಜನನ ಮರಣಾದಿಗಳ್ ಕ್ಷುತ್ ಪಿಪಾಸೆಗಳ್ ಪ್ರಾಣಧರ್ಮಂ ೪೦

ವರಮೋಹ ಶೋಕಂ ಮನೋಧರ್ಮಮಾ ಜನನ
ಮರಣಮೆರಡುಂ ದೇಹಧರ್ಮ ಕಾಮಕ್ರೋಧ
ಮುರುಲೋಭ ಮೋಹ ಮದ ಮತ್ಸರಂಗಳ್ ತಿಳಿಯಲಾರುಮರಿವರ್ಗಂಗಳು

ಚಂದ್ರನ ಅಂಶವುಳ್ಳದ್ದು. ಇದು ಕಳವಳವನ್ನೂ ಕಂಪನವನ್ನೂ ಉಂಟುಮಾಡುತ್ತದೆ. ಈ ರೀತಿ ಸಪ್ತಧಾತುಗಳ ನಿರ್ಣಯ ಶರೀರ, ಮನಸ್ಸು, ಧನ, ರಾಜ್ಯ, ವಿಶ್ವಉತ್ಸಾಹ. ಸೇವಕಾದಿಗಳೇ ವ್ಯಸನಗಳು. ೩೯. ಶರೀರದ ವ್ಯಸನ ಉಂಟಾದಲ್ಲಿ ಶರೀರ ಬಡವಾಯಿತೆನ್ನುವನು ಅಥವಾ ಮನೋವ್ಯಥೆ ಉಂಟಾದಲ್ಲಿ ಕೂಡಲೇ ಕಳವು, ಹಾವರಗಳನ್ನು ಬಯಸುವನು. ಅರ್ಥ್ಯವ್ಯಸನ ಉಂಟಾದರೆ ಹಣಕ್ಕಾಗಿ ಚಿಂತಿಸುವನು. ರಾಜ್ಯವ್ಯಸನವಾದರೆ ಶ್ರೇಷ್ಠವಾದ ವಸ್ತ್ರಾಭರಣ, ವಾಹನಗಳನ್ನು ಬಯಸುವನು. ವಿಶ್ವವ್ಯಸನವುಂಟಾದಲ್ಲಿ ಮನೆ, ಹೊಲ-ಗದ್ದೆಗಳನ್ನು ಬಯಸುವನು. ೪೦. ಕೇಳು, ಉತ್ಸಾಹ (ಮದ) ವ್ಯಸನವುಂಟಾದಲ್ಲಿ ಮಗ-ಸ್ನೇಹಿತರ ಸಮೂಹವನ್ನು ಬಯಸುತ್ತಾನೆ. ಸೇವಕವ್ಯಸನವನ್ನು ತಾಳಿದರೆ ಕೊಳ್ಳುವೆನು-ಕೊಡುವೆನು ಉಣ್ಣುವೆನು ಎಂಬ ಚಿಂತೆಯನ್ನು ಹೊಂದುತ್ತಾನೆ. ಇವು ಸಪ್ತ ವ್ಯಸನಗಳು. ಹಾಗಾದರೆ ಷಡೂರ್ಮಿಗಳನ್ನು ಕೇಳು. ಹಸಿವು, ಬಾಯಾರಿಕೆ, ದುಃಖ, ಮೋಹ, ಹುಟ್ಟು-ಸಾವುಗಳು ಇವುಗಳಲ್ಲಿ ಹಸಿವು-ಬಾಯಾರಿಕೆಗಳು ಪ್ರಾಣಧರ್ಮ. ೪೧. ಮೋಹ-ಶೋಕಗಳು ಮನೋಧರ್ಮಗಳ ಹುಟ್ಟು-ಸಾವು. ಎರಡೂ ದೇಹಧರ್ಮ. ಕಾಮ-ಕ್ರೋಧ, ಹೆಚ್ಚಾದ ಲೋಭ-ಮೋಹ-ಮದ-ಮಾತ್ಸರ್ಯ ಮೊದ

CC-0. Jangamwadi Math Collection. Digitized by eGangotri

ಮುಂತೆ ಸುಜ್ಞಾನವೊದಗುವುದು ತತ್ಜ್ಞಾನದಿರ
ವೆಂತೆನಲ್ ಮೂರು ತೆರನವರಭೇದಂಗಳಂ
ನೀಂ ತಿಳಿವುದೆಂದು ದಯದಿಂ ಸಿದ್ಧರಾಮಂಗೆ ಚೆನ್ನಬಸವಂ ಪೇಳ್ದನು ೪೭

ಹಿಂಗದೀ ಪ್ರತ್ಯಕ್ಷಮುಂ ಪರೋಕ್ಷಾಪರೋ
ಕ್ಷಂಗಳೆಂಬುರುತರಜ್ಞಾನತ್ರಯಂ ನೋಡೆ
ಕಂಗೊಳಿಪುವೀ ತನುತ್ರಯದೊಳಂ ಶ್ರೋತ್ರಾದಿ ಜ್ಞಾನತ್ರಯಂಗಳಿಂದೆ
ತುಂಗಶಬ್ದಾದಿವಿಷಯಂಗಳಿಂ ಜ್ಞಾನಾದಿ
ಪೊಂಗುವಂತಃಕರಣವೈದರಿಂದರಿವುದೇ
ಕಂಗೊಳಿಸುವಮಲಪ್ರತ್ಯಕ್ಷಮಾಲಿಸು ಸಿದ್ಧರಾಮೇಶ ನೀನೆಂದನು ೪೮

ವರದೇಶ ಕಾಲಮುಂ ಲೋಕಾಂತರಂಗಳಂ
ಪರಮಜನ್ಮಾಂತರದ ಸುಖ ದುಃಖ ದುಷ್ಕರ್ಮ
ಮುರುಸುಕರ್ಮದ ಬಂಧಮೋಕ್ಷಂಗಳೆಂಬಿವಂ ವೇದಾಗಮಂಗಳಿಂದೆ
ಇರದರಿವುದೇ ಪರೋಕ್ಷಂ ಬಾಹಿರಂಗದ
ಲ್ಲಿರುತಿರ್ಪ ಭೂತಪಂಚಕಮಂತರಂಗದ
ಲ್ಲಿರುತಿರ್ಪ ಸೂಕ್ಷ್ಮಭೂತಂಗಳೊಂದೆಂದರಿದು ಸಿದ್ಧರಾಮೇಶ ಕೇಳು ೪೯

ಮುಂದೆ ತದ್ಗುಣಧರ್ಮವಿಷಯಮುಂ ತಾನಲ್ಲ
ವೆಂದರಿದು ಜೀವಾತ್ಮ ಪರಮಾತ್ಮರೇಕಾರ್ಥ
ವೆಂದು ನಿಶ್ಚಯಿಸಿ ಮಿಗೆ ತನ್ನ ನಿಜವೆಂದರಿದು ಶ್ರೀಗುರುಕಟಾಕ್ಷದಿಂದೆ

ಸ್ವರೂಪ ಹೇಗೆಂದರೆ ಮೂರು ರೀತಿ. ಅದರ ಭೇದಗಳನ್ನು ನೀನು ತಿಳಿದುಕೊ ಎಂದು ದಯೆಯಿಂದ ಸಿದ್ಧರಾಮನಿಗೆ ಚೆನ್ನಬಸವನು ಹೇಳಿದನು. ೪೮. ಹಿಂಗದ ಈ ಪ್ರತ್ಯಕ್ಷ, ಪರೋಕ್ಷ, ಅಪರೋಕ್ಷಗಳೆನ್ನುವ ಶ್ರೇಷ್ಠವಾದ ಜ್ಞಾನತ್ರಯಗಳು. ಪ್ರಕಾಶಿಸುವ ಈ ತನುತ್ರಯದಲ್ಲಿಯೂ, ಶ್ರೋತ್ರಾದಿ ಜ್ಞಾನತ್ರಯಗಳಿಂದ, ಅಧಿಕವಾದ ಶಬ್ದ ಮೊದಲಾದ ವಿಷಯಗಳಿಂದ, ಜ್ಞಾನ ಮೊದಲಾದ ಹೊಮ್ಮುವ ಐದು ಅಂತಃಕರಣದಿಂದ ತಿಳಿಯುವುದೇ ಪ್ರಕಾಶಿಸುವ ವಿಮಲವಾದ ಪ್ರತ್ಯಕ್ಷನೆಂಬುದು, ಸಿದ್ಧರಾಮೇಶ ನೀನು ಕೇಳು ಎಂದನು. ೪೯. ದೇಶ-ಕಾಲಗಳನ್ನು, ಲೋಕಾಂತರವನ್ನು, ಜನ್ಮಾಂತರದ ಸುಖ-ದುಃಖಗಳನ್ನು, ದುಷ್ಕರ್ಮ-ಸುಕರ್ಮದ ಬಂಧ ಮೋಕ್ಷಗಳನ್ನು ವೇದಾಗಮಾದಿಗಳಿಂದ ತಿಳಿದುಕೊಳ್ಳುವುದೇ ಪರೋಕ್ಷವು ಬಹಿರಂಗದಲ್ಲಿರುವ ಪಂಚಭೂತಗಳು, ಅಂತರಂಗದಲ್ಲಿರುವ ಸೂಕ್ಷ್ಮಭೂತಗಳು ಒಂದೆಂದು ತಿಳಿದು ಸಿದ್ಧರಾಮೇಶ ಕೇಳು ಎಂದನು. ೫೦. ಮುಂದೆ ಆ ಗುಣಧರ್ಮ ವಿಷಯವು ತಾನಲ್ಲವೆಂದು ತಿಳಿದು, ಜೀವಾತ್ಮ-ಪರಮಾತ್ಮರು ಒಂದೇ ಎಂದು ನಿಶ್ಚಯಿಸಿ, ಶ್ರೀಗುರುವಿನ ಕಟಾಕ್ಷದಿಂದ ಸಂದೇಹವಿಲ್ಲದೆ ಜೀವಾತ್ಮ-ಪರಮಾತ್ಮರಿಬ್ಬರೂ ತಾನಲ್ಲದೆ ಬೇರೆ ಅಲ್ಲವೆಂದು ತಿಳಿಯುವ ರೀತಿ, ಅಪ

CC-0. Jangamwadi Math Collection. Digitized by eGangotri

ಸಂದೇಹಮಿಲ್ಲದರಿವಂದಮುಪರೋಕ್ಷಮಿಾ
ಸಂದ ಸಂವಿತ್ರಯಮಿಾಯೀಗೆಂದು ಪೇಳಲಾ
ನಂದದಿಂ ಸಿದ್ಧರಾಮಂ ಚೆನ್ನಬಸವನಡಿಗೆರಗಿ ಮಗುಳಿಂತೆಂದನು ೫೦

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗವುನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ೫೧

ಐವತ್ತೆಂಟನೆಯ ಸಂಧಿ ಸಂಪೂರ್ಣ

ರೋಕ್ಷವು ಈ ಶ್ರೇಷ್ಠವಾದ ಸಂವಿತ್ತ್ರಯವು ಈ ರೀತಿ ಎಂದು ಹೇಳಲು ಆನಂದದಿಂದ ಸಿದ್ಧರಾಮನು ಚೆನ್ನಬಸವೇಶನ ಪಾದಗಳಿಗೆ ನಮಸ್ಕರಿಸಿ ಮತ್ತೆ ಹೀಗೆಂದನು. ೫೧. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿ ಮಾಡಿದ ವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದವರಿಗೆ, ವಾಚನ ಮಾಡಿದ ವರಿಗೆ, ಓದಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ಐವತ್ತೆಂಟನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ಐವತ್ತೊಂಬತ್ತನೆಯ ಸಂಧಿ

ಸೂಚನೆ : ಮೋಕ್ಷಮಂ ಕೊಟ್ಟಿನ್ನು ಸಿದ್ಧರಾಮೇಶನಂ
ರಕ್ಷಿಸುವೆನೆನುತಾಗ ಚೆನ್ನಬಸವಂ ಲಿಂಗ
ದೀಕ್ಷೆಯುಂ ಮಾಡಿ ಗುರು ಲಿಂಗ ಜಂಗಮದ ಮಾಹಾತ್ಮ್ಯಮಂ ವಿರಚಿಸಿದನು

ಪುಷ್ಕರಾಂಬಕನಯನಪೂಜಿತಪದಾಂಭೋಜ
ಪುಷ್ಕರಾಪ್ತೇಂದುವಹ್ನಿತ್ರಿಲೋಚನವೆಸೆವ
ಪುಷ್ಕರಾಸನಶಿರಶ್ಛೇದಕಂ ಪುಷ್ಕರಾಸನ ಪಾರ್ವತೀವಲ್ಲಭ
ಪುಷ್ಕರಕರಾಸುರ ಸುಗರ್ವಪರ್ವತಕುಲಿಶ
ಪುಷ್ಕರಕಳಂಬಕಂಗಾರಣ್ಯಘನದಾವ
ಪುಷ್ಕರಸುಕೇಶ ದಿಗ್ವಸನ ಪಂಪಾವಿರೂಪಾಕ್ಷ ರಕ್ಷಿಸು ನತರನು ೧

ಎನ್ನ ಸುದ್ಗುರು ಚೆನ್ನಬಸವೇಶ ಪೇಳ್ವುದೆನ
ಗಿನ್ನಾವ ಗತಿಯೆನಲ್ ಶೈವಾಗವಾರ್ಥ ಸಂ
ಪನ್ನರಾಗಿರ್ಪ ವರಗುರುಕರುಣದಿಂದಲಷ್ಟಾವರಣದಿರವನರಿದು
ಚೆನ್ನಾಗಿ ವೀರಶೈವೋಪದೇಶಂಬಡೆದು
ನಿನ್ನ ಭವಮಂ ತೊಲಗಿಸೆನೆ ನೀನೆ ಗುರುವಲ್ಲ
ದಿನ್ನೆನಗೆ ಬೇರೆ ಗುರುವಿಲ್ಲ ಕರುಣಿಪುದೆಂದು ಮುಗುಳೆರಗಲಿಂತೆಂದನು ೨

ಸೂಚನೆ : ಮೋಕ್ಷವನ್ನು ಕೊಟ್ಟು ಇನ್ನು ಸಿದ್ಧರಾಮೇಶನನ್ನು ಸಲಹುತ್ತೇನೆ ಎಂದು ಆಗ ಚೆನ್ನಬಸವಣ್ಣನು ಅವನಿಗೆ ಲಿಂಗದೀಕ್ಷೆಯನ್ನು ಕೊಟ್ಟು ಗುರು-ಲಿಂಗ-ಜಂಗಮದ ಮಹಾತ್ಮೆಯನ್ನು ವಿವರಿಸಿದನು. ೧. ವಿಷ್ಣುವಿನ ಕಣ್ಣಿಂದ ಪೂಜೆಗೊಂಡ ಪಾದಕಮಲವುಳ್ಳವ, ಸೂರ್ಯ, ಚಂದ್ರ, ಅಗ್ನಿಯನ್ನೇ ಮೂರು ಕಣ್ಣಾಗಿ ಉಳ್ಳವ, ಪ್ರಖ್ಯಾತನಾದ ಬ್ರಹ್ಮನ ತಲೆಯನ್ನು ಕಡಿದವ, ಕಮಲವೇ ಆಸನವಾಗಿ ಉಳ್ಳವನು (ಮಂತ್ರಶಾಸ್ತ್ರದಲ್ಲಿ ಹೀಗೆ ವರ್ಣಿಸಿದೆ—ಸರಸಿಜನಿಲಯ), ಪಾರ್ವತೀಪತಿ, ಗಜಾಸುರನೆಂಬ ಗರ್ವಪರ್ವತಕ್ಕೆ ವಜ್ರಾಯುಧ, ಮನ್ಮಥನಿಗೆ ಕಾಳ್ಗಿಚ್ಚು ಆದವನು, ಆಕಾಶವನ್ನೇ ಜಟೆಯಾಗಿ ಉಳ್ಳವನು, ದಿಗಂಬರನಾದ ಪಂಪಾವಿರೂಪಾಕ್ಷನೇ ನಮಸ್ಕರಿಸಿದವರನ್ನು ಕಾಪಾಡು. ೨. ನನ್ನ ಸದ್ಗುರುವಾದ ಚೆನ್ನಬಸವೇಶನೆ, ನನಗೆ ಇನ್ನಾವ ದಾರಿ ಹೇಳಬೇಕೆಂದು ಕೇಳಲು ಶೈವಾಗಮಾರ್ಥಸಂಪನ್ನನಾಗಿರುವ ಶ್ರೇಷ್ಠನಾದ ಗುರುವಿನ ಕರುಣೆಯಿಂದ ಅಷ್ಟಾವರಣದ ರೀತಿಯನ್ನು ತಿಳಿದು ಚೆನ್ನಾಗಿ ವೀರಶೈವೋಪದೇಶವನ್ನು ಪಡೆದು ನಿನ್ನ ಸಂಸಾರಬಂಧನವನ್ನು ಕಳೆದುಕೋ ಎಂದು ಚೆನ್ನಬಸವನು ಹೇಳಿದನು. ನೀನೇ ನನಗೆ ಗುರುವಲ್ಲದೆ ಬೇರೆ ಗುರುವಿಲ್ಲ, ಕರುಣಿಸು ಎಂದು ಮತ್ತೆ ಸಿದ್ಧರಾಮನು ನಮಸ್ಕರಿಸಲು

CC-0. Jangamwadi Math Collection. Digitized by eGangotri

ಒರೆವೆನಾಲಿಸು ರಾಮ ಗುರುವಿನ ಸುಲಕ್ಷಣಮು
ನುರುಶಿವಾಗಮ ಪುರಾಣಂಗಳಂ ತಿಳಿದಮಳ
ಪರಮಶಾಂತಂ ಶುಚಿ ಶಿವಾಚಾರಸಂಪನ್ನನುತ್ತಮಂ ಪೂರ್ಣಾಂಗನು
ವರಜಿತೇಂದ್ರಿಯನತುಳಗುರುಸಂಪ್ರದಾಯಕಂ
ನಿರುಪಮಿತ ಸದ್ವಂಶಜಾತಂ ಶಿವಧ್ಯಾನ
ಪರರಾದವರಲ್ಲಿ ನೀಂ ದೀಕ್ಷೆಯಂ ಮಾಡಿಕೊಳ್ಳೆನಲಾತನಿಂತೆಂದನು ೩

ಪರಮಸುದ್ಗುರು ಚೆನ್ನಬಸವೇಶ ನೀಂ ಪೇಳ್ದ
ವರಲಕ್ಷಣಂಗಳೆಲ್ಲಂ ನಿನ್ನೊಳಿವೆ ನೀನೆ
ಪರಶಿವನ ಚಿತ್ಕಳಾರೂಪ ನೀಂ ಬಸವಣ್ಣ ಮೊದಲಾದ ಪ್ರಮಥಗಣಕೆ
ವಿರಚಿಸಿದೆ ಪ್ರಾಣಲಿಂಗೋಪದೇಶವನೆನಗೆ
ಕರುಣದಿಂ ದೀಕ್ಷೆಯಂ ಮಾಡಿ ಭವಪಾಶಮಂ
ಪರಿಹರಿಸಿ ರಕ್ಷಿಸೆನೆ ಚೆನ್ನಬಸವೇಶ್ವರಂ ಕರುಣದಿಂದಿಂತೆಂದನು ೪

ಎಲೆ ಸಿದ್ಧರಾಮ ಕೇಳ್ ವೀರಶೈವಂ ನಿನಗೆ
ಸುಲಭವೇ ಖಡ್ಗಧಾರೆಯ ಮಧು ಮಹಾಫಣಿಯ
ತಲೆಯ ಮಾಣಿಕವಿದಾರ್ಗಳವಹುದು ಬಹಳ ಧೀರೋದ್ಧಾರಣಂಗಲ್ಲದೆ
ಸಲೆ ಮಲತ್ರಯ ಪಂಚಸೂತಕಾದಿಗಳನತಿ
ಗಳೆದನ್ಯಭವಿನಾಸ್ತಿಯಾಗಿರುತೆ ನಿರುತ ನಿ
ರ್ಮಲದ ಪಂಚಾಚಾರದಿಂ ನಡೆಯಬೇಕೆನಲ್ಕವನೆನಗೆ ತಿಳಿಪೆಂದನು ೫

ಚೆನ್ನಬಸವನು ಹೀಗೆಂದನು. ೩. ಗುರುವಿನ ಸಲ್ಲಕ್ಷಣವನ್ನು ಹೇಳುತ್ತೇನೆ ಕೇಳಯ್ಯ ಸಿದ್ಧರಾಮ. ಶ್ರೇಷ್ಠವಾದ ಶೈವಾಗಮ ಪುರಾಣಗಳನ್ನು ತಿಳಿದ ಪರಿಶುದ್ಧನು, ಪರಮ ಶಾಂತನು, ಶುಚಿಯು, ಶಿವಾಚಾರಸಂಪನ್ನನು, ಉತ್ತಮನು, ಪೂರ್ಣಾಂಗನು, ಇಂದ್ರಿಯ ವನ್ನು ಗೆದ್ದವನು, ಅತುಳವಾದ ಗುರುಸಂಪ್ರದಾಯವನ್ನು ಅನುಸರಿಸುವನು, ಉತ್ತಮ ವಾದ ವಂಶದಲ್ಲಿ ಹುಟ್ಟಿದವನು, ಶಿವಧ್ಯಾನಪರನಾದ ಸತ್ಪುರುಷನಲ್ಲಿ ನೀನು ದೀಕ್ಷೆ ಯನ್ನು ಪಡೆದುಕೋ ಎನ್ನಲು ಆತನು ಹೀಗೆಂದನು. ೪. ಪರಮ ಸದ್ಗುರುವಾದ ಚೆನ್ನಬಸವೇಶ, ನೀನು ಹೇಳಿದ ಶ್ರೇಷ್ಠ ಲಕ್ಷಣಗಳೆಲ್ಲ ನಿನ್ನಲ್ಲಿ ಇವೆ, ನೀನೇ ಪರಶಿವನ ಚಿತ್ಕಳಾರೂಪ. ನೀನು ಬಸವಣ್ಣ ಮೊದಲಾದ ಪ್ರಮಥಗಣಗಳಿಗೆ ಪ್ರಾಣಲಿಂಗೋಪ ದೇಶವನ್ನು ಮಾಡಿದೆ. ನನಗೆ ಕರುಣೆಯಿಂದ ದೀಕ್ಷೆಯನ್ನು ಕೊಟ್ಟು ಭವಬಂಧನವನ್ನು ಪರಿಹಾರ ಮಾಡಿ ಕಾಪಾಡು ಎನ್ನಲು ಚೆನ್ನಬಸವೇಶ್ವರನು ಕರುಣೆಯಿಂದ ಹೀಗೆಂದನು. ೫. ಎಲೈ ಸಿದ್ಧರಾಮ, ಕೇಳು. ವೀರಶೈವ ನಿನಗೆ ಸುಲಭಸಾಧ್ಯವೇ ? ಅದು ಕತ್ತಿಯ ಅಲಗಿನ ಮೇಲಿರುವ ಜೇನುತುಪ್ಪ, ಸರ್ಪದ ತಲೆಯ ಮೇಲಿನ ಮಾಣಿಕ್ಯ, ಇದು ಬಹಳ ಧೀರೋದ್ಧಾರಗಣನಿಗಲ್ಲದೆ ಮಿಕ್ಕ ಯಾರಿಗೆ ಸಾಧ್ಯ ? ಮಲತ್ರಯ, ಪಂಚಸೂತಕಾದಿ ಗಳನ್ನು ಪೂರ್ಣವಾಗಿ ತ್ಯಜಿಸಿ, ಇತರ ಭವಿಗಳ ಸಂಗವನ್ನು ದೂರಮಾಡಿ, ಸದಾ ನಿರ್ಮಲವಾದ ಪಂಚಾಚಾರದಿಂದ ನಡೆಯಬೇಕು. ಎನ್ನಲು ಅವನ್ನು ನನಗೆ ತಿಳಿಸೆಂದು

CC-0. Jangamwadi Math Collection. Digitized by eGangotri

ಇನ್ನಾಲಿಸೈ ಸಿದ್ಧರಾಮ ತ್ರಿಮಲದಿರವ
ನೆನ್ನ ಪಿತೃ ಮಾತೃ ಸುತರೆಂಬುದಾಣವಮಲವ
ಮುನ್ನತದ ಕುಲಗೋತ್ರಮೆಂದೆನಲ್ ಮಾಯಾಮಲಂ ಧನಂ ಕಾರ್ಮಿಕಮಲಂ
ಮುನ್ನಿದಂ ಬಿಡಬೇಕದೆಂತೆನಲ್ ಶಿವ ಶಿವೆಯು
ರೆನ್ನ ಪಿತೃ ಮಾತೃಗಳ ಶಿವಕುಲಂ ಶಿವನೊಡವೆ
ಯೆನ್ನವಲ್ಲೆಂಬುವಂಗಿಲ್ಲಾ ಮಲತ್ರಯಂ ಕೇಳೆಂದು ನಿರವಿಸಿದನು ೬

ಜಾತಿಸೂತಕ ಜನನಸೂತಕಂಗಳ್ ಮಹಾ
ಪ್ರೇತಸೂತಕ ನಿತ್ಯಸೂತಕಮದುಚ್ಚಿಷ್ಟ
ಸೂತಕಮಿವೇ ಪಂಚಸೂತಕಂ ಸ್ಥಾವರಾದ್ಯನ್ಯಲಿಂಗದ ಭಜನೆಯುಂ
ಓತನ್ಯತೀರ್ಥಮನ್ಯಕ್ಷೇತ್ರಯಾತ್ರೆಗ
ಳ್ಗಾತುರದೆ ಪೋಪುದೀಗನ್ಯದೇವಾರ್ಚನೆ ವಿ
ನೀತಭವಿಯಾದವರ ತನ್ನ ತಾಯ್ತಂದೆ ಬಂಧುಗಳೆನಲ್ ಭವಿಸಂಗವು ೭

ಎನ್ನ ಸದ್ಗುರುವೆ ಸುರತರುವೆ ಮುಕ್ತಿಯ ಕರುವೆ
ಚೆನ್ನಬಸವೇಶ ಭವನಾಶ ನೀಂ ಪೇಳ್ದುದಂ
ಮುನ್ನವೇ ಬಿಟ್ಟೆನಿನ್ನೇನೇನುಮಂ ಬಿಡುವುದೆನಲದಂ ಬಿಡುವೆನೆನಗೆ
ಚೆನ್ನಾಗಿ ವೀರಶೈವೋಪದೇಶವನೆ ಕೊ
ಟ್ಟೆನ್ನ ಭವಪಾಶಮಂ ಪರಿವುದೆನುತೆರಗಲಾ
ಚೆನ್ನಬಸವಂ ಕರುಣದಿಂ ಸಿದ್ಧರಾಮನಂ ನೋಡುತಂದಿಂತೆಂದನು ೮

ಸಿದ್ಧರಾಮನು ಕೇಳಿದನು. ೬. ತ್ರಿಮಲದ ರೀತಿಯನ್ನು ಇನ್ನು ಕೇಳಯ್ಯ, ಸಿದ್ಧರಾಮ. ನನ್ನ ತಂದೆ, ನನ್ನ ತಾಯಿ, ನನ್ನ ಮಕ್ಕಳು ಎಂಬುದು ಆಣವಮಲ. ನನ್ನದು ಶ್ರೇಷ್ಠವಾದ ಕುಲಗೋತ್ರವೆನ್ನಲು ಮಾಯಾಮಲ. ಸಂಪತ್ತು ಕಾರ್ಮಿಕಮಲ. ಮೊದಲು ಇವನ್ನು ಬಿಡಬೇಕು, ಅದು ಹೇಗೆಂದರೆ ಶಿವ-ಪಾರ್ವತಿಯರು ನನ್ನ ತಂದೆ-ತಾಯಿಯರು. ಶಿವನಕುಲ ನನ್ನದು, ಇವು ಶಿವನ ಒಡವೆ ನನ್ನವುಗಳಲ್ಲ ಎನ್ನುವವನಗೆ ಮಲತ್ರಯಗಳು ಇಲ್ಲ ಕೇಳೆಂದು ವಿವರಿಸಿದನು. ೭. ಜಾತಿಸೂತಕ, ಜನನಸೂತಕಗಳು, ಪ್ರೇತಸೂತಕ, ನಿತ್ಯಸೂತಕ ಮತ್ತು ಉಚ್ಚಿಷ್ಟಸೂತಕ ಇವುಗಳೇ ಪಂಚಸೂತಕಗಳು. ಸ್ಥಾವರಾದಿ ಬೇರೆ ಲಿಂಗದ ಸ್ತುತಿ, ಪೂಜೆಯಿಂದ ಬೇರೆ ತೀರ್ಥ, ಬೇರೆ ಕ್ಷೇತ್ರಯಾತ್ರೆಗಳಿಗೆ ಆತುರದಿಂದ ಹೋಗುವುದು ಮೊದಲಾದುವುಗಳು, ಅನ್ಯದೇವತಾರ್ಚನೆ, ಲಿಂಗವಿಹೀನರಾದವರನ್ನು ನನ್ನ ತಾಯಿ-ತಂದೆ, ಬಂಧುಗಳೆನ್ನುವುದು ಭವಿಸಂಗವಾಗುತ್ತದೆ. ೮. ನನ್ನ ಸದ್ಗುರುವೆ, ಕಲ್ಪವೃಕ್ಷವೆ, ಮುಕ್ತಿಯ ಕರುವೆ, ಚೆನ್ನಬಸವೇಶ, ಭವನಾಶ ನೀನು ಹೇಳಿದುದನ್ನು ಕೂಡಲೇ ಬಿಟ್ಟಿದ್ದೇನೆ. ಇನ್ನೇನನ್ನು ಬಿಡಬೇಕೆಂದು ಹೇಳಿದರೆ ಅದನ್ನೂ ಬಿಡುತ್ತೇನೆ. ನನಗೆ ಚೆನ್ನಾಗಿ ವೀರಶೈವೋಪದೇಶವನ್ನು ಕೊಟ್ಟು ನನ್ನ ಜನ್ಮಾಂತರಗಳ ಬಂಧನವನ್ನು ಹರಿದುಹಾಕು ಎನ್ನುತ್ತ ನಮಸ್ಕರಿಸಲು ಆ ಚೆನ್ನಬಸವನು ಕರುಣೆಯಿಂದ

CC-0. Jangamwadi Math Collection. Digitized by eGangotri

ಶರಣರೆಲ್ಲರ್ ಕೇಳ್ವುದೀ ಸಿದ್ಧರಾಮನಾ
ಪರಶಿವನ ಪ್ರತಿಬಿಂಬಮೆಂತೆನಲ್ ಪೂರ್ವದೊಳ್
ಗಿರಿಜೇಶನಡಿಗೆ ಗಂಧರ್ವರೈತರುತೆ ಭೃಂಗೀಶನಂ ಕಂಡು ನಗಲು
ಕೆರಳಿ ಭೃಂಗೀಶ್ವರಂ ಗಂಧರ್ವರಂ ನೋಡಿ
ನರಜನ್ಮದೊಳ್ ಭವಿಗಳಾಗಿ ಸಂಜನಿಸಿ ಬಳಿ
ಕಿರದೆ ದಂಪತಿಗಳಾಗೆಂದು ಶಾಪವನೀಯಲವರಾಗಳಿಂತೆಂದರು ೯

ತಂದೆ ಕರುಣಿಸು ವಿಶಾಪವನರಿಯದಜ್ಞಾನ
ದಿಂದೆ ನಕ್ಕೆವು ಕಾವುದೆನುತಲಡಿಗೆರಗಲಾ
ನಂದದಿಂ ಭೃಗೀಶ್ವರಂ ನಿಮ್ಮ ಗರ್ಭದೊಳ್ ಶಿವಯೋಗಿ ಸಂಜನಿಸಲು
ಅಂದಿಗೆ ವಿಶಾಪಮೆನೆ ಗಂದರ್ವರಾಗ ನಡೆ
ತಂದು ಶಂಕರಗೆರಗಿ ಭೃಂಗಿಯಿಂ ತಮಗಾದ
ದಂದುಗವನೆಲ್ಲವಂ ಪೇಳಲೀಶ್ವರನಂದು ಕೃಪೆಯೊಳೊಲಿದಿಂತೆಂದನು ೧೦

ಅಂಜದಿರಿ ನಿಮ್ಮ ಜಠರದೊಳೆಮ್ಮ ನಿಜರೂಪು
ಸಂಜನಿಸಿ ನಿಮಗೆ ಮುಕ್ತಿಯನೀವನೆನಲಿರ್ವ
ರುಂ ಜವದೊಳೈತಂದು ಸೊನ್ನಲಿಗೆಯೊಳಗೊಪ್ಪುತಿರ್ಪ ಕುಡಿಯೊಕ್ಕಲಿಗರ
ರಂಜಿಸುವ ಗರ್ಭಂಗಳಿಂದುದಿಸಿ ಪುಣ್ಯದ ಸು
ಪುಂಜಂಗಳಂತೆ ಮೊರಡೆಯ ಮುದ್ದಗೌಡನಾ
ಕಂಜಮುಖಿ ಸುಗ್ಗಾಯ್ಗಳೆಂಬ ನಾಮದೆ ಬಳೆದು ದಂಪತಿಗಳಾದರೊಲಿದು ೧೧

ಸಿದ್ಧರಾಮನನ್ನು ನೋಡುತ್ತ ಹೀಗೆಂದನು. ೯. ಎಲ್ಲ ಶರಣರೂ ಕೇಳಿ, ಈ ಸಿದ್ಧರಾಮನು ಆ ಪರಶಿವನ ಪ್ರತಿಬಿಂಬ. ಹೇಗೆಂದರೆ ಹಿಂದೆ ಶಿವನ ಬಳಿಗೆ ಗಂಧರ್ವರು ಬರುತ್ತಿದ್ದಾಗ ಭೃಂಗೀಶನನ್ನು ನೋಡಿ ನಗಲು ಭೃಂಗೀಶನು ಕೋಪಗೊಂಡು, ಗಂಧರ್ವರನ್ನು ನೋಡಿ ಮನುಷ್ಯಜನ್ಮದಲ್ಲಿ ಭವಿಗಳಾಗಿ ಹುಟ್ಟಿ ಅನಂತರ ದಂಪತಿಗಳಾಗಿ ಎಂದು ಶಾಪವನ್ನು ಕೊಡಲು ಅವರು ಆಗ ಹೀಗೆಂದರು. ೧೦. ತಂದೆಯೆ, ಶಾಪವಿಮೋಚನೆಯನ್ನು ಕರುಣಿಸು, ತಿಳಿಯದೆ ಅಜ್ಞಾನದಿಂದ ನಕ್ಕೆವು, ಕಾಪಾಡಬೇಕು ಎನ್ನುತ್ತ ಕಾಲಿಗೆ ಬೀಳಲು ಆಗ ಭೃಂಗೀಶ್ವರನು ಆನಂದದಿಂದ ನಿಮ್ಮ ಬಸುರಿನಲ್ಲಿ ಶಿವಯೋಗಿ ಹುಟ್ಟಲು ಅಂದಿಗೆ ನಿಮ್ಮ ಶಾಪವಿಮೋಚನೆ ಎಂದನು. ಆಗ ಗಂಧರ್ವರು ಅಲ್ಲಿಂದ ಹೊರಟುಬಂದು ಶಂಕರನಿಗೆ ನಮಸ್ಕರಿಸಿ ಭೃಂಗಿಯಿಂದ ತಮಗಾದ ತೊಂದರೆಯೆಲ್ಲವನ್ನೂ ಹೇಳಲು ಆಗ ಈಶ್ವರನು ಕೃಪೆಯಿಂದ ಹೀಗೆಂದನು. ೧೧. ಹೆದರಬೇಡಿ, ನಿಮ್ಮ ಹೊಟ್ಟೆಯಲ್ಲಿ ನನ್ನ ನಿಜರೂಪನೇ ಹುಟ್ಟಿ ನಿಮಗೆ ಮುಕ್ತಿಯನ್ನು ಕೊಡುತ್ತಾನೆ ಎಂದು ಹೇಳಲು ಅವರಿಬ್ಬರೂ ಬೇಗನೆ ಹೊರಟು ಬಂದು ಸೊನ್ನಲಿಗೆಯಲ್ಲಿ ಶೋಭಿಸುತ್ತಿದ್ದ ಕುಡಿಯೊಕ್ಕಲಿಗರ ಪ್ರಕಾಶವಾದ ಗರ್ಭಗಳಿಂದ ಹುಟ್ಟಿ ಪುಣ್ಯದ ಸಮೂಹಗಳಂತೆ ಮೊರಡೆಯ ಮುದ್ದೇಗೌಡ ಮತ್ತು ಕಮಲಮುಖಿ ಸುಗ್ಗಾಯಿ ಎಂಬ ಹೆಸರಿನಿಂದ ಬೆಳೆದು ಪ್ರೀತಿಯಿಂದ ಗಂಡ-

CC-0. Jangamwadi Math Collection. Digitized by eGangotri

ಇಂತೆಸೆವ ದಂಪತಿಗಳಿರಲವರ ಗರ್ಭದಿಂ
ಕಂತುಮದಹರನ ಪ್ರತಿಬಿಂಬಮೇ ಜನಿಸಿದನ
ನಂತರಂ ಸಿದ್ಧರಾಮೇಶನೆಂದೆಂಬ ನಾಮವನಾಂತು ಶ್ರೀಶೈಲಕೆ
ಸಂತಸದೆ ಪೋಗಿಯಾ ಮಲ್ಲಿಕಾರ್ಜುನಲಿಂಗ
ಮಂ ತನ್ನ ಪುರಕೆ ಕರೆತಂದು ಪೂಜಿಸುತಲಾ
ಕಂತು ಬರೆ ಗೆಲಿದು ಯಮಗೊಂಡದಲ್ಲಿರ್ಪರಂ ಕೈಲಾಸಕಿರದೊಯ್ದನು ೧೨

ಬಸವೇಶನಂ ತನ್ನ ಹೃದಯಮಂ ಬಗಿದು ತೋ
ರಿಸಿದನೀ ಸಿದ್ಧರಾಮೇಶನ ಮಹಾತ್ಮೆಗಳ
ನುಸಿರಲಳವೇ ಶಿವಪ್ರತಿಬಿಂಬಮೆನೆ ಸಿದ್ಧರಾಮನತಿಭಕ್ತಿಯಿಂದೆ
ಹಸನಾಯ್ತು ನಿಮ್ಮ ಭೃತ್ಯರ ಭೃತ್ಯನೆಂದು ಭಾ
ವಿಸುತಿಷ್ಟಲಿಂಗಮಂ ಪಾಲಿಸೆಲೆ ಗುರುಚೆನ್ನ
ಬಸವೇಶ ನೀನೆಂದು ಸಾಷ್ಟಾಂಗದಿಂದೆರಗಿ ನುತಿಪ ಸಮನಂತರದೊಳು ೧೩

ಅಲ್ಲಮಂ ಬಸವ ಮೊದಲಾದಸಂಖ್ಯಾತಗಣ
ರೆಲ್ಲರುಂ ಚೆನ್ನಬಸವೇಶ ಕೇಳ್ ನೀಂ ಕರುಣ
ದಲ್ಲಿ ಬಿಡದೀ ಸಿದ್ಧರಾಮೇಶ್ವರಂಗೆ ದೀಕ್ಷೆಯನಿತ್ತು ಸಂತಸದೊಳು
ಸಲ್ಲಲಿತ ಮೋಕ್ಷಮಂ ಕೊಟ್ಟು ರಕ್ಷಿಪುದೆನಲ್
ಮೆಲ್ಲನಾ ಚೆನ್ನಬಸವೇಶ್ವರಂ ತನ್ನ ಕರ
ಪಲ್ಲವದೆ ಸಿದ್ಧರಾಮೇಶ್ವರನ ಮಕುಟಮಂ ಪಿಡಿದೆತ್ತಲಾ ಕ್ಷಣದೊಳು ೧೪

ಹೆಂಡಿರಾದರು. ೧೨. ಈ ರೀತಿ ಪ್ರಖ್ಯಾತರಾದ ದಂಪತಿಗಳು ಇರಲು ಅವರ ಗರ್ಭದಿಂದ ಶಿವನ ಪ್ರತಿಬಿಂಬವೇ ಹುಟ್ಟಿದನು. ಆನಂತರ ಸಿದ್ಧರಾಮೇಶನೆಂಬ ಹೆಸರನ್ನು ಹೊಂದಿ ಮುದದಿಂದ ಶ್ರೀಶೈಲಕ್ಕೆ ಹೋಗಿ ಆ ಮಲ್ಲಿಕಾರ್ಜುನನ ಲಿಂಗವನ್ನು ತನ್ನ ಪುರಕ್ಕೆ ಕರೆತಂದು ಪೂಜಿಸುತ್ತಿರಲು ಆ ಕಾಮನು ಬರಲು ಅವನನ್ನು ಗೆದ್ದು ನರಕದಲ್ಲಿದ್ದವರನ್ನು ಕೈಲಾಸಕ್ಕೆ ಕರೆದುಕೊಂಡು ಹೋದನು. ೧೩. ತನ್ನ ಹೃದಯವನ್ನು ಸೀಳಿ ಬಸವಣ್ಣನನ್ನು ತೋರಿಸಿದನು. ಈ ಸಿದ್ಧರಾಮನ ಮಹಾತ್ಮೆಗಳನ್ನು ಹೇಳಲು ಸಾಧ್ಯವೆ ? ಇವನು ಶಿವನ ಪ್ರತಿಬಿಂಬವೆನ್ನಲು ಸಿದ್ಧರಾಮನು ಬಹುಭಕ್ತಿಯಿಂದ ಚೆನ್ನಾಗಿ ಹೇಳಿದಿರಿ, ನಿಮ್ಮ ಸೇವಕರ ಸೇವಕ ನಾನು ಎಂದು ತಿಳಿದು ನೀನು ಇಷ್ಟಲಿಂಗವನ್ನು ದಯಪಾಲಿಸಯ್ಯಾ ಗುರು ಚೆನ್ನಬಸವೇಶ ಎಂದು ಸಾಷ್ಟಾಂಗ ನಮಸ್ಕಾರ ಮಾಡಿ ಪ್ರಾರ್ಥಿಸುವ ಸಮಯದಲ್ಲಿ ೧೪. ಅಲ್ಲಮಪ್ರಭು, ಬಸವಣ್ಣ ಮೊದಲಾದ ಅಸಂಖ್ಯಾತವಾದ ಗಣಗಳೆಲ್ಲರೂ ಚೆನ್ನಬಸವೇಶ, ಕೇಳು. ನೀನು ಕರುಣೆಯಿಂದ ಈ ಸಿದ್ಧರಾಮನಿಗೆ ದೀಕ್ಷೆಯನ್ನು ಕೊಟ್ಟು ಸಂತೋಷದಿಂದ ಶ್ರೇಷ್ಠವಾದ ಮೋಕ್ಷವನ್ನು ಕೊಟ್ಟು ಕಾಪಾಡು ಎನ್ನಲು ಆ ಚೆನ್ನ ಬಸವಣ್ಣನು ಮೆಲ್ಲನೆ ತನ್ನ ಕೈಗಳಿಂದ ಸಿದ್ಧರಾಮೇಶನ ತಲೆಯನ್ನು ಹಿಡಿದು ಎತ್ತಲು ಆ

CC-0. Jangamwadi Math Collection. Digitized by eGangotri

ನವರತ್ನಮಯುವಾದ ತನ್ಮಾಹಾಮಂಟಪವ
ನವದುಕೂಲಂಗಳಿಂ ನವಕುಸುಮಮಾಲೆಯಿಂ
ತವೆ ಝಲ್ಲಿ ಪಟ್ಟಿಗಳ ಮುತ್ತುಗಳ ಪೊಸಫಲದ ಗೊಂಚಲ್ಗಳಿಂ ವಿರಚಿಸಿ
ಅವಿರಳದ ಕತ್ತುರಿಯ ಸಾರಣೆಯ ಕಣ್ಗೊಳಿಪ
ವಿವಿಧ ಮುತ್ತಿನ ರಂಗವಲಿಯಿಂದಲಂತಿಂತು
ಪವಣಿಸಿದ ಸುಸ್ಥಳದೊಳಂದಿರವೆ ತಂಡುಲದ ಚೌಕವಂ ಕೆಯ್ಗೆಯ್ದರು ೧೫

ಪೊಳೆಪೊಳೆವ ಜಲಪೂರ್ಣವಾಗಿರ್ದ ಸತ್ಪಂಚ
ಕಳಶಂಗಳಂ ಸ್ಥಾಪನಂಗೆಯ್ದು ಪೊಸನೂಲಿ
ನೆಳೆಗಳ್ಗೆದಂ ಸುತ್ತಿಯಷ್ಟವಿಧಪೂಜೆಯಿಂವರ್ಚಿಸಿ ತದಾಜ್ಞೆಯಿಂದೆ
ಬಳಿಕಲಾ ಸಿದ್ಧರಾಮಂ ಭಸಿತ ವೀಳೆಯಂ
ಗಳನಖಿಳಗಣಕುಲದ ಮುಂದಿರಿಸಿ ನಮಿಸಲ್ಕೆ
ನಲವಿನಿಂದಾತನಂ ಚೆನ್ನಬಸವಂ ಚೌಕಮಧ್ಯದೊಳ್ ಕುಳ್ಳಿರಿಸಿದಂ ೧೬

ವರವಿಭೂತಿಯ ಪಟ್ಟಗಟ್ಟಿ ರುದ್ರಾಕ್ಷಿಯಿಂ
ದಿರದಲಂಕರಿಸಿ ದರ್ಭಾಂಕುರವೆ ತತ್ಕಲಶ
ಭರಿತಜಲವಂ ತಳೆದು ನಾಲ್ವರಾಚಾರ್ಯರೊಡನಾ ಕಲಶಪಂಚಕವನು
ಹರುಷದಿಂ ಮೂರುಸೂಳಾ ಸಿದ್ಧರಾಮನುರು
ಶಿರಕೆತ್ತಿಯಭಿಷೇಚನಂಗೆಯ್ದು ಕಳಶವಂ
ಮರಳಿ ತತ್ತಸ್ಸ್ಥಳದೊಳಿರಿಸಿ ಪರಿಶುದ್ಧನಂ ಮಾಡಿದಂ ಕರುಣದಿಂದೆ ೧೭

ಕ್ಷಣದಲ್ಲಿ ೧೫. ನವರತ್ನಮಯವಾದ ಆ ಮಹಾಮಂಟಪವನ್ನು ಹೊಸದಾದ ರೇಷ್ಮೆ ವಸ್ತ್ರಗಳಿಂದ, ಹೊಸ ಹೂವಿನ ಹಾರಗಳಿಂದ, ಝಲ್ಲಿಪಟ್ಟಿಗಳ, ಮುತ್ತುಗಳ, ಹೊಸದಾದ ಫಲಗಳ ಗೊಂಚಲುಗಳಿಂದ ಮನೋಹರವಾಗಿ ರಚಿಸಿ, ಕಸ್ತೂರಿಯಿಂದ ಸಾರಿಸಿ, ಪ್ರಕಾಶಮಾನವಾದ ವಿವಿಧ ರೀತಿಯ ಮುತ್ತಿನ ರಂಗವಲ್ಲಿಯಿಂದ ನಾನಾರೀತಿ ಅಣಿಗೊಳಿಸಿದ ಆ ಶ್ರೇಷ್ಠವಾದ ಸ್ಥಳದಲ್ಲಿ ಅಕ್ಕಿಯಿಂದ ಚೌಕಟ್ಟನ್ನು ರಚಿಸಿದರು. ೧೬. ಪ್ರಕಾಶಿಸುವ ಉದಕದಿಂದ ತುಂಬಿದ್ದ ಉತ್ತಮವಾದ ಪಂಚಕಳಶಗಳನ್ನು ಸ್ಥಾಪಿಸಿ, ಹೊಸ ದಾರದ ಐದು ಎಳೆಗಳನ್ನು ಸುತ್ತಿ, ಎಂಟು ವಿಧವಾದ ಪೂಜೆಯಿಂದ ಅರ್ಚನೆ ಮಾಡಿ, ಅವರ ಆಜ್ಞೆಯಿಂದ ಅನಂತರ ಆ ಸಿದ್ಧರಾಮನು ವಿಭೂತಿ, ತಾಂಬೂಲಗಳನ್ನು ಎಲ್ಲಾ ಗಣಕುಲದ ಮುಂದೆ ಇಟ್ಟು ನಮಸ್ಕರಿಸಲು ಆತನನ್ನು ಚೆನ್ನಬಸವಣ್ಣನು ಪ್ರೀತಿಯಿಂದ ಚೌಕದ ಮಧ್ಯದಲ್ಲಿ ಕೂಡಿಸಿದನು. ೧೭. ಶ್ರೇಷ್ಠವಾದ ವಿಭೂತಿಯ ಪಟ್ಟೆ ಹಾಕಿ ರುದ್ರಾಕ್ಷಿಯಿಂದ ಅಲಂಕಾರ ಮಾಡಿ ದರ್ಭೆಯಿಂದ ಆ ಕಳಶದಲ್ಲಿ ತುಂಬಿದ್ದ ನೀರನ್ನು ಚಿಮುಕಿಸಿ ನಾಲ್ಕು ಜನ ಆಚಾರ್ಯರೊಡನೆ ಆ ಐದು ಕಳಶವನ್ನೂ ಸಂತೋಷದಿಂದ ಮೂರು ಬಾರಿ ಸಿದ್ಧರಾಮನ ಉತ್ತಮವಾದ ತಲೆಯ ಮೇಲೆತ್ತಿ ಅಭಿಷೇಕ ಮಾಡಿ ಕಳಶಗಳನ್ನು ಮತ್ತೆ ಅವರವರ ಜಾಗದಲ್ಲಿ ಇಟ್ಟು ಕರುಣೆಯಿಂದ ಪರಿಶುದ್ಧನನ್ನಾಗಿ

CC-0. Jangamwadi Math Collection. Digitized by eGangotri

ವಿವರಿಸಲ್ ಬಳಿಕಲಾ ಚೆನ್ನಬಸವೇಶ್ವರಂ
ತ್ರಿವಿಧದೀಕ್ಷೆಗಳಿಂದೆ ತ್ರಿವಿಧಲಿಂಗಂಗಳಂ
ತ್ರಿವಿಧಾಂಗದೊಳ್ ದೀಕ್ಷೆಯಂ ಮಾಡಿ ತ್ರಿವಿಧಮಲಮಂ ಬಿಡವೆ ಛೇದಿಸಲ್ಕೆ
ತವೆ ಸಿದ್ಧರಾಮನಾ ಗುರುಮುಖ್ಯ ಸಕಲಗಣ
ನಿವಹಕ್ಕೆ ಸಾಷ್ಟಾಂಗದಿಂದೆರಗಿ ಕುಳಿತು ಮ
ತ್ತವಿರಳಾನಂದದಿಂದೀ ಕಲಶದಿರವನೆನಗುಸಿರೆಂದೊಡಿಂತೆಂದನು ೧೮

ಆದೊಡಾಲಿಸು ರಾಮ ಪರಶಿವಂ ತಾಂ ತ್ರಿವಿಧ
ಭೇದದಿಂ ಗುರುಲಿಂಗಚರವೆನಿಸಿ ತನ್ನಯ ವಿ
ನೋದದಿಂ ಪಂಚಸಾದಾಖ್ಯದಿಂ ಪಂಚಕಲೆಗಳನ್ನೈದೆ ಗುರುವೆ ಬಳಿಕ
ಸಾದರದೊಳಾ ನಂದಿವಾಹಂ ಪರಾಶಕ್ತಿ
ನಾದ ಚಿತ್ಪ್ರಣವಮಂತ್ರಂ ಮಿಸುನಿಗಳಸದಿಂ
ದಾ ದಯಾಂಬುಧಿಯೆನಿಪ ಸದ್ಗುರುವೆ ನಾಲ್ವರ್ಗೆ ದೀಕ್ಷೆಯಂ ಪಾಲಿಸಿದನು ೧೯

ವಿವರಿಸುವೆನಾ ನಾಲ್ವರಾರೆನಲ್ಕಾ ಸದಾ
ಶಿವನೀಶ್ವರಂ ಮಹೇಶಂ ರುದ್ರರೆನಿಪವರ್
ಶಿವದೀಕ್ಷೆವಡೆದಾರ್ಯರಾಗಿಯಾ ಸಕಲಗಣಕುಲಕೆ ದೀಕ್ಷೆಯನೆ ಮಾಡಿ
ತವೆ ಹರಿಯಜೇಂದ್ವರ್ಕ ಶಕ್ರಾದಿ ದಿಕ್ಪಾಲ
ನಿವಹಕಂ ನರ ಸುರೋರಗ ಗರುಡ ಗಂಧರ್ವ
ವಿವಿಧ ರಾಕ್ಷಸ ಯಕ್ಷ ಸಿದ್ಧ ವಿದ್ಯಾಧರಾಪ್ಸರರ್ಗೆ ಕಿನ್ನರವಿತತಿಗೆ ೨೦

ಮಾಡಿದನು. ೧೮. (ವಿವರಿಸಿ ಹೇಳುವುದಾದರೆ) ಅನಂತರ ಚೆನ್ನಬಸವೇಶನು ತ್ರಿವಿಧ ದೀಕ್ಷೆಗಳಿಂದ, ತ್ರಿವಿಧ ಲಿಂಗಗಳನ್ನು ತ್ರಿವಿಧವಾದ ಅಂಗಗಳಲ್ಲಿ ದೀಕ್ಷೆಮಾಡಿ ತ್ರಿವಿಧ ಮಲವನ್ನು ನಾಶಗೊಳಿಸಲು ಸಿದ್ಧರಾಮನು ಆ ಗುರು ಮೊದಲ್ಗೊಂಡು ಎಲ್ಲ ಗಣ ಸಮೂಹಕ್ಕೂ ಸಾಷ್ಟಾಂಗ ನಮಸ್ಕಾರ ಮಾಡಿ ಕುಳಿತುಕೊಂಡು ಮಹಾ ಸಂತೋಷ ದಿಂದ ಈ ಕಳಸದ ವಿಚಾರವನ್ನು ನನಗೆ ಹೇಳೆನ್ನಲು ಚೆನ್ನಬಸವೇಶನು ಹೀಗೆಂದನು. ೧೯. ಹಾಗಾದರೆ ಕೇಳಯ್ಯ, ಸಿದ್ಧರಾಮ, ಪರಮೇಶ್ವರನು ತಾನು ಮೂರು ವಿಧವಾದ ಭೇದದಿಂದ ಗುರು ಲಿಂಗ ಜಂಗಮನೆನ್ನಿಸಿ ತನ್ನ ವಿನೋದದಿಂದ ಪಂಚಸಾದಾಖ್ಯದಿಂದ ಪಂಚಕಲೆಗಳನ್ನು ಹೊಂದಿದನು. ಅನಂತರ ಆದರದಿಂದ ಆ ನಂದಿವಾಹನನು ಪರಾಶಕ್ತಿ, ನಾದ, ಚಿತ್,ಪ್ರಣವ ಮಂತ್ರ ಚಿನ್ನದ ಕಳಶಗಳಿಂದ ಆ ದಯಾಸಾಗರನಾದ ಆ ಸದ್ಗುರುವೇ ನಾಲ್ಕು ಜನಕ್ಕೆ ದೀಕ್ಷೆಯನ್ನು ಅನುಗ್ರಹಿಸಿದನು. ೨೦. ಆ ನಾಲ್ಕು ಜನ ಯಾರೆಂದು ವಿವರಿಸುತ್ತೇನೆ. ಸದಾಶಿವ, ಈಶ್ವರ, ಮಹೇಶ, ರುದ್ರರೆನ್ನುವವರು ಶಿವದೀಕ್ಷೆಯನ್ನು ಪಡೆದು ಆಚಾರ್ಯರಾಗಿ ಎಲ್ಲ ಗಣಕುಲಕ್ಕೆ ದೀಕ್ಷೆಯನ್ನು ಮಾಡಿ, ವಿಷ್ಣು, ಬ್ರಹ್ಮ, ಚಂದ್ರ, ಸೂರ್ಯ, ದೇವೇಂದ್ರ ಮೊದಲಾದ ದಿಕ್ಪಾಲಕರ ಸಮೂಹಕ್ಕೆ ಮನುಷ್ಯ, ದೇವತೆ, ನಾಗ, ಗರುಡ, ಗಂಧರ್ವ, ನಾನಾ ರೀತಿಯ ರಾಕ್ಷಸ, ಯಕ್ಷ, ಸಿದ್ಧ, ವಿದ್ಯಾಧರ,

CC-0. Jangamwadi Math Collection. Digitized by eGangotri

ತಿಳಿಯೆ ಮನು ಮುನಿ ಪಿಶಾಚಾವಳಿಗೆ ಕಿಂಪುರುಷ
ಕುಲಕೆ ವರಶೈವಾಗಮೋಕ್ತಪ್ರಕಾರದಿಂ
ನಲವಿನಿಂ ದೀಕ್ಷೆಯುಂ ಮಾಡಿ ಮರ್ತ್ಯದ ಜನರ ಭವಬಂಧಮಂ ಕಳೆಯಲು
ಇಳೆಯೊಳವರಂಶದಿಂ ರೇವಣಾಸಿದ್ಧ ನಿ
ರ್ಮಲ ಮರುಳಸಿದ್ಧನೇಕೋರಾಮನತುಳಗುಣ
ನಿಳಯರಾ ಪಂಡಿತಾರಾಧ್ಯರಾದರ್ ಕ್ರಮದೊಳವರಿರವ ನೀಂ ಕೇಳ್ವುದು ೨೧

ಪರಿವಿಡಿಯೊಳಾ ರೇವಣಂಗಾದಿಶಕ್ತಿ ತ
ತ್ಪುರುಷಮುಖವೆಂಟುಜಡೆ ಯೋಗದಂಡಂ ಪೆಯ್ಗೆ
ಕರಿಯ ಕಂಬಳಿಯ ಕುಪ್ಪಸಕಂಥೆ ಬ್ರಹ್ಮಚರಿಯಾಶ್ರಮಂ ಲೋಹದಿಂದೆ
ವಿರಚಿಸಿದ ಮುರಿಪಾತ್ರೆಯುಂ ಕುಂಡಲಂ ತನ್ನ
ಕರದಿನಗಲದ ಶಾಂತಮಲ್ಲಿಕಾರ್ಜುನಲಿಂಗ
ಮುರುಪ್ರಣವಮಂತ್ರಮಾ ಋಗ್ವೇದಮತುಳ ಕೇಸರಿವಾಹನಂ ಕೇಳ್ವುದು ೨೨

ನಕ್ಷತ್ರಪರ್ವತದ ತಟದೊಳಿರ್ಪಂ ಕಲ್ಪ
ವೃಕ್ಷದಡಿಯಲ್ಲಿ ಪದ್ಮಾಸನಕ್ಕೆಸೆವ ತಾ
ರಕ್ಷುಚರ್ಮದೊಳೆ ಗದ್ದುಗೆ ಭಸ್ಮರುದ್ರಾಕ್ಷೆಯಿಂ ತನ್ನ ಶಿಷ್ಯಕುಲಕೆ
ದೀಕ್ಷೆಗೆಯ್ವಲ್ಲಿ ವರಪಾರಿಜಾತದ ತಳಿರ
ಪಕ್ಷದಿಂದೆಸೆವ ಲೋಹದ ಕಳಶಮಂ ಸಹ
ಸ್ರಾಕ್ಷದಿಕ್ಕಿನೊಳಿಟ್ಟು ಪೂಜಿಪರ್ ಸಿದ್ಧರಾಮೇಶ ನೀಂ ಕೇಳೆಂದನು ೨೩

ಅಪ್ಸರರಿಗೆ, ಕಿನ್ನರ ಸಮೂಹಕ್ಕೆ ೨೧. ಮನು, ಋಷಿ, ಪಿಶಾಚಿಗಳ ಸಮೂಹಕ್ಕೆ ಕಿಂಪುರುಷ ಕುಲಕ್ಕೆ ಶ್ರೇಷ್ಠವಾದ ಶಿವಾಗಮದಲ್ಲಿ ಹೇಳಿರುವ ರೀತಿಯಲ್ಲಿ ಸಂತೋಷದಿಂದ ದೀಕ್ಷೆಯನ್ನು ಕೊಟ್ಟು ಪ್ರಪಂಚದ ಜನರ ಹುಟ್ಟು ಸಾವುಗಳ ಬಂಧನವನ್ನು ಕಳೆಯಲು ಭೂಮಿಯಲ್ಲಿ ಅವರ ಅಂಶದಿಂದ ರೇವಣಸಿದ್ಧ, ನಿರ್ಮಲರಾದ ಮರುಳಸಿದ್ಧ, ಏಕೋರಾಮ, ಶ್ರೇಷ್ಠಗುಣಕ್ಕೆ ಆಗರರೆನಿಸಿದ ಆ ಪಂಡಿತಾರಾಧ್ಯರು ಆದರು. ಕ್ರಮವಾಗಿ ಅವರ ರೀತಿಯನ್ನು ಕೇಳು. ೨೨. ಕ್ರಮವಾಗಿ ಆ ರೇವಣಸಿದ್ಧನಿಗೆ ಆದಿಶಕ್ತಿ, ತತ್ಪುರುಷ ಮುಖ, ಎಂಟು ಜಡೆ, ಯೋಗದಂಡ, ಕರಿಯ ಕಂಬಳಿಯ ಕುಪ್ಪಸ, ಕಂಥೆ, ಬ್ರಹ್ಮಚರ್ಯಾಶ್ರಮ, ಲೋಹದಿಂದ ಮಾಡಿದ ಮುರಿಪಾತ್ರೆ, ಕುಂಡಲ, ತನ್ನ ಕೈಯಲ್ಲಿ ನೆಲೆಸಿರುವ ಶಾಂತಮಲ್ಲಿಕಾರ್ಜುನಲಿಂಗ, ಶ್ರೇಷ್ಠವಾದ ಓಂಕಾರಮಂತ್ರ, ಋಗ್ವೇದ, ಸಿಂಹವಾಹನ ಉಂಟು, ಕೇಳು. ೨೩. ನಕ್ಷತ್ರಪರ್ವತದ ತೀರದಲ್ಲಿರುವವನು ಕಲ್ಪವೃಕ್ಷದ ಕೆಳಗೆ ಹುಲಿಯ ಚರ್ಮದ ಗದ್ದುಗೆಯಲ್ಲಿ ಪದ್ಮಾಸನದಲ್ಲಿ ಕುಳಿತು ಭಸ್ಮ ರುದ್ರಾಕ್ಷೆಯಿಂದ ಅಲಂಕೃತನಾಗಿ ತನ್ನ ಶಿಷ್ಯಕುಲಕ್ಕೆ ದೀಕ್ಷೆಯನ್ನು ಕೊಡುವಾಗ ಶ್ರೇಷ್ಠವಾದ ಪಾರಿಜಾತ ಚಿಗುರಿನ ಪಕ್ಷದಿಂದ (ಗರಿ ?) ಪ್ರಕಾಶಿಸುವ ಲೋಹದ ಕಳಶವನ್ನು ಪೂರ್ವದಿಕ್ಕಿನಲ್ಲಿಟ್ಟು

CC-0. Jangamwadi Math Collection. Digitized by eGangotri

ತಿಳಿ ಮರುಳಸಿದ್ಧೇಶ್ವರಂಗಘೋರಾಸ್ಯಮಾ
ಪೊಳೆವ ಬಹುಶಿಖಿಗಳಿಚ್ಛಾಶಕ್ತಿ ಸೆರಗುಗಂ
ಬಳಿಗಂಥೆ ಲೋಹದಿಂ ಮಾಡಿದೆಡಮುರಿಪಾತ್ರೆಯುಂ ಕುಂಡಲಂ ಕೆಯ್ಯೊಳು
ತೊಳಗುವ ಕುಠಾರದಂಡಂ ಬಾಯೊಳಮುಳ್ಳೈಕ್ಯ
ದೊಳೆ ಕಪಿಲಸಿದ್ಧ ಸನ್ಮಲ್ಲಿಕಾರ್ಜುನಲಿಂಗ
ದೊಲವಾ ಷಡಕ್ಷರಿಯ ಮಂತ್ರಂ ಯಜುರ್ವೇದಮಾತಂಗೆ ಕೇಳೆಂದನು ೨೪

ಬಿಡದೆ ಪುಲಿವಾಹನಂ ಯತ್ಯಾಶ್ರಮಂ ಸಮಂ
ಬಡೆ ಕುಮಾರಾದ್ರಿಗತಮಂದಾರತರುತಟಂ
ಬಿಡಿದು ಮೃಗಚರ್ಮದೊಳ್ ಗೋಮುಖಾಸನದೊಳಿರ್ಪಂ ಭಸ್ಮರುದ್ರಾಕ್ಷಿಯ
ತೊಡಗಳಿಂ ಶಿಷ್ಯರ್ಗೆ ದೀಕ್ಷೆಯುಂ ಕರುಣದಿಂ
ಕೊಡುವಲ್ಲಿ ದೂರ್ವಾಂಕುರಾದಿಕುಸುಮದೆ ತೆಂಕ
ಣೆಡೆಯು ಲೋಹದ ಕಳಶಮಾತಂಗೆ ಸಿದ್ಧರಾಮೇಶ ನೀಂ ಕೇಳೆಂದನು ೨೫

ಕ್ರಮದಿನೇಕೋರಾಮತಂದೆಗಂ ವಾಮದೇ
ವಮುಖಮೈಜಡೆ ಕಾವಿಯುಂಬರಂ ತಾಮ್ರದಿಂ
ಸಮೆದ ಮುರಿಯುಂ ಪಾತ್ರೆ ಕುಂಡಲಂ ಚಿತ್ರದಂಡಂ ಜ್ಞಾನಶಕ್ತಿ ಶಿಖಿಗೆ
ಅಮರ್ದಿಪ್ಪ ವರಭೋಗಮಲ್ಲಿಕಾರ್ಜುನಲಿಂಗ
ಮಮಿತಪ್ರಸಾದಪಂಚಾಕ್ಷರೀಮಂತ್ರಮು
ತ್ತಮಸಾಮವೇದಂ ಮರಾಳವಾಹನಮೆಸೆವುದಾತಂಗೆ ಕೇಳೆಂದನು ೨೬

ಪೂಜಿಸುವರು, ಸಿದ್ಧರಾಮ ನೀನು ಕೇಳು ಎಂದನು. ೨೪. ಕೇಳು, ಮರುಳ ಸಿದ್ಧೇಶ್ವರನಿಗೆ ಅಘೋರಾಸ್ಯ, ಆ ಹೊಳೆಯುವ ಬಹುಶಿಖಿಗಳು, ಇಚ್ಛಾಶಕ್ತಿ, ಸೆರಗು ಕಂಬಳಿ ಕಂಥೆ, ಲೋಹದಿಂದ ಮಾಡಿದ ಎಡಮುರಿಪಾತ್ರೆ, ಕರ್ಣಕುಂಡಲ, ಕೈಯಲ್ಲಿ ಹೊಳೆಯುವ ಕೊಡಲಿಯ ದಂಡ, ಬಾಯಲ್ಲಿ ಶ್ರೇಷ್ಠವಾದ ಕಪಿಲಸಿದ್ಧ ಸನ್ಮಲ್ಲಿಕಾರ್ಜುನಲಿಂಗದ ಆರಾಧನೆ, ಷಡಕ್ಷರಿಯ ಮಂತ್ರ, ಆತನದು ಯಜುರ್ವೇದ ಎಂದನು. ೨೫. ಹುಲಿವಾಹನ ಯತಿಯ ಆಶ್ರಮ ಉಂಟಾಗಲು ಕುಮಾರಾದ್ರಿಯಲ್ಲಿರುವ ಮಂದಾರವೃಕ್ಷದ ಬುಡದಲ್ಲಿ ಜಿಂಕೆಚರ್ಮದ ಮೇಲೆ ಗೋಮುಖಾಸನನಾಗಿ ಕುಳಿತಿರುವನು, ಭಸ್ಮ ರುದ್ರಾಕ್ಷಿಯ ಆಭರಣಗಳಿಂದ ಕೂಡಿ ಶಿಷ್ಯರಿಗೆ ದೀಕ್ಷೆಯನ್ನು ಕರುಣೆಯಿಂದ ಕೊಡುವಲ್ಲಿ ಗರಿಕೆ ಮೊದಲಾದ ಹೂಗಳಿಂದ ಕೂಡಿದ ದಕ್ಷಿಣದಿಕ್ಕಿಗೆ ಮುಖ ಮಾಡಿದ ಲೋಹದ ಕಳಶ ಆತನದು, ಸಿದ್ಧರಾಮ ಕೇಳು ಎಂದನು. ೨೬. ಕ್ರಮವಾಗಿ ಏಕೋರಾಮತಂದೆಗೆ ವಾಮದೇವಮುಖ, ಐದು ಜಡೆ, ಕಾವಿಯ ವಸ್ತ್ರ, ತಾಮ್ರದಿಂದ ಮಾಡಿದ ಮುರಿಪಾತ್ರೆ, ಕುಂಡಲ, ಚಿತ್ರದಂಡ, ಜ್ಞಾನಶಕ್ತಿ, ತಲೆಯಲ್ಲಿ ಧರಿಸಿರುವ ಭೋಗಮಲ್ಲಿಕಾರ್ಜುನ ಲಿಂಗವನ್ನು ಆರಾಧಿಸುವನು. ಅಮಿತ ಪ್ರಸಾದ ಪಂಚಾಕ್ಷರೀಮಂತ್ರ, ಉತ್ತಮವಾದ

CC-0. Jangamwadi Math Collection. Digitized by eGangotri

ಭೂತಿ ರುದ್ರಾಕ್ಷೆ ವಾನಪ್ರಸ್ಥದಾಶ್ರಮದೊ
ಳಾತನಿರ್ಪಂ ಮೇರುಗಿರಿತಟದ ವಟವೃಕ್ಷ
ದಾ ತಡಿಯೊಳೆಸೆವ ಭದ್ರಾಸನಕ್ಕಮರ್ದ ಕಾಪಾಂಬರದ ಗದ್ದುಗೆಯೊಳು
ಪ್ರೀತಿಯಿಂ ದೀಕ್ಷೆಯಂ ಕೊಡುವಲ್ಲಿ ಪೊಂಬಾಳೆ
ಯೇ ತನಗಲಂಕಾರಮಾ ತಾಮ್ರದುರುಕಳಶ
ಯೇ ತನಗಲಂಕಾರಮಾ ತಾಮ್ರದುರುಕಳಶ ಕೇಳೆಂದನು ೨೭

ವರಪಂಡಿತಾರಾಧ್ಯರಿಗೆ ಕ್ರಿಯಾಶಕ್ತಿ ಸಿಂ
ಗರದೇಕಶಿಖಿ ಬಿಳಿದಿನುಡೆ ಬೆಳ್ಳಿಯಿಂ ಸಮೆದ
ಮುರಿಯುಮಾ ಪಾತ್ರೆ ಮೌಕ್ತಿಕಕುಂಡಲಂ ಮುಖಕೆ ವಿಮಲಸದ್ಯೋಜಾತಮುಂ
ಕರದೊಳಾದೊಡಮಥಿಕಕಕ್ಷದೊಳಗಾದೊಡಂ
ಧರಿಸಿಹುದು ವರಚೆನ್ನಮಲ್ಲಿಕಾರ್ಜುನಲಿಂಗ
ಮುರುಹಂಸ ಪಂಚಾಕ್ಷರೀಮಂತ್ರಮೆಸೆವಥರ್ವಣವೇದಮವರ್ಗೆಂದನು ೨೮

ಮತ್ತಗಜವಾಹಂ ಗೃಹಸ್ಥಾಶ್ರಮುಂ ಚೆಲ್ವು
ವೆತ್ತೆಸೆಯಲಾ ತ್ರಿಕೂಟಾದ್ರಿತಟದಿನಿಮಾವಿ
ನೊತ್ತಿನೊಳಗುರುಸುಖಾಸನಕಮರ್ದ ಪೊಸರನ್ನಗಂಬಳಿಯ ಗದ್ದುಗೆಯೊಳು
ಬಿತ್ತರದೆ ಕುಳ್ಳಿರ್ದ ಶಿಷ್ಯರ್ಗೆ ದೀಕ್ಷೆಗಳ
ನಿತ್ತು ರಕ್ಷಿಸುವಲ್ಲಿ ನಾಗವಲ್ಲೀದಳಂ
ಬೊತ್ತ ಬೆಳ್ಳಿಯ ಕಳಶದಿಂದೊಪ್ಪುಗುಂ ವರುಣದಿಕ್ಕಿನೊಳ್ ಕೇಳೆಂದನು ೨೯

ಸಾಮದೇವ ಹಂಸವಾಹನ ಆತನದು ಕೇಳು ಎಂದನು. ೨೭. ವಿಭೂತಿ–ರುದ್ರಾಕ್ಷಿ ಯನ್ನು ಧರಿಸಿ ವಾನಪ್ರಸ್ಥಾಶ್ರಮದಲ್ಲಿ ಆತನಿರುವನು. ಮೇರುಪರ್ವತದ ತಪ್ಪಲಿನಲ್ಲಿ ಆಲದ ಮರದ ಕೆಳಗೆ ಕಾವಿಬಟ್ಟೆಯ ಮೇಲೆ ಭದ್ರಾಸನದಲ್ಲಿ ಕುಳಿತಿರುವನು. ಪ್ರೀತಿ ಯಿಂದ ದೀಕ್ಷೆಯನ್ನು ಕೊಡುವಾಗ ಆತನಿಗೆ ಹೊಂಬಾಳೆಯೇ ಅಲಂಕಾರ. ಆತನದು ಶ್ರೇಷ್ಠವಾದ ತಾಮ್ರದ ಕಳಶ. ಅದು ಉತ್ತರ ದಿಕ್ಕಿನಲ್ಲಿರುವುದು. ಇದು ಸಾಮ್ಯ ಲಕ್ಷಣ ಕೇಳು ಎಂದನು. ೨೮. ಶ್ರೇಷ್ಠವಾದ ಪಂಡಿತ್ಯಾರಾಧ್ಯರಿಗೆ ಕ್ರಿಯಾಶಕ್ತಿ, ಶೃಂಗಾರಗೊಂಡ ಒಂದೇ ಜಡೆ, ಬಿಳಿಯ ಉಡುಗೆ, ಬೆಳ್ಳಿಯಿಂದ ಮಾಡಿದ ಮುರಿಪಾತ್ರೆ, ಮುತ್ತಿನ ಕುಂಡಲ, ವಿಮಲ ಸದ್ಯೋಜಾತಮುಖ, ಕೈಯಲ್ಲಾಗಲಿ ಅಥವಾ ಕಂಕುಳಲ್ಲಿಯಾಗಲಿ ಶ್ರೇಷ್ಠವಾದ ಮಲ್ಲಿಕಾರ್ಜುನ ಲಿಂಗವನ್ನು ಧರಿಸಿರುವನು. ಹಂಸ ಪಂಚಾಕ್ಷರೀ ಮಂತ್ರ ಜಪ, ಪ್ರಖ್ಯಾತ ವಾದ ಅಥರ್ವಣವೇದಾಧ್ಯಯನ ಆತನದು ಎಂದನು. ೨೯. ಮದಿಸಿದ ಆನೆ ವಾಹನ, ಗೃಹಸ್ಥಾಶ್ರಮ, ಮನೋಹರವಾಗಿ ಕಂಗೊಳಿಸುತ್ತಿರಲು ಅತ್ರಿಕೂಟ ಪರ್ವತದ ಸಿಹಿ ಮಾವಿನ ಮರದ ಸಮೀಪದಲ್ಲಿ ಹೊಸ ಚಿನ್ನದ ಕಂಬಳಿ ಗದ್ದುಗೆಯ ಮೇಲೆ ಸುಖಾಸನ ದಲ್ಲಿರುವನು. ಸುತ್ತಲೂ ಕುಳಿತಿರುವ ಶಿಷ್ಯರಿಗೆ ದೀಕ್ಷೆಗಳನ್ನು ಕೊಟ್ಟು ಕಾಪಾಡುವಲ್ಲಿ ವೀಳೆಯದೆಲೆಯಿಂದ ಕೂಡಿದ ಬೆಳ್ಳಿಯ ಕಳಶವು ಪಶ್ಚಿಮ ದಿಕ್ಕಿನಲ್ಲಿ ಶೋಭಿಸುತ್ತಿರುವುದು

CC-0. Jangamwadi Math Collection. Digitized by eGangotri

ಹರುಷದಿಂದಾ ನಾಲ್ವರಾಚಾರ್ಯರೊಲವಿನಿಂ
ಬರುತಿರ್ಪರುಗಯುಗಂಗಳೊಳುಮತಿಕರುಣದಿಂ
ಧರೆಯ ಭಕ್ತರ್ಗೆ ದೀಕ್ಷೆಯನಿತ್ತು ರಕ್ಷಿಸುತ್ತಿರಲಾಗಿಯಾ ವಂಶದಿಂ
ಪಿರಿಯರುಮುಮಾ ನಾಲ್ಕು ಕಳಶಮಂ ನಾಲ್ದೆಸೆಯೊ
ಳಿರಿಸಿ ತನ್ಮಧ್ಯದೊಳ್ ಗುರುಕಳಶಮಂ ನಿಲಿಸಿ
ಪರಮಶಕ್ತಿಯೊಳೆ ತತ್ಕಳಶಮಂ ಗುರುಭಾವದೊಳ್ ಕಂಡು ಪೂಜಿಸುವುದು ೩೦

ಕರುಣದಿಂ ದೀಕ್ಷೆಯಂ ಕೊಡುವಲ್ಲಿ ಶಿಷ್ಯರುಂ
ಕರಚರಣ ಮುಖಮಾದವಯವದೊಳೆಳ್ಳನಿತು
ಪರಿಕಿಸಲ್ಕೂನವಿಲ್ಲದೆ ಹೀನಜಾತರಲ್ಲದ ನಾಲ್ಕು ವರ್ಣದವರ್ಗೆ
ತರತರದೊಳಾ ವಿಪ್ರರೊಳ್ ಮೂರು ವರುಷಮಂ
ತರಸುಮಕ್ಕಳನಾರು ವರುಷಮಾ ವೈಶ್ಯರಂ
ನಿರುತವೊಂಬತ್ತು ವರುಷಂ ಶೂದ್ರರುಗಳನೀರಾರು ವರುಷಂ ನೋಳ್ಪುದು ೩೧

ಇಂತವರ ಮನದ ಪಕ್ವಾಪಕ್ವ ಭೇದಮಂ
ತಾಂ ತಿಳಿದು ನೋಡಿ ದೀಕ್ಷಾತ್ರಯಂಗಳನೊಲ್ದು
ಸಂತೋಷದಿಂ ತ್ರಿವಿಧಲಿಂಗಮಂ ತ್ರಿವಿಧಾಂಗದೊಳ್ ಪ್ರತಿಷ್ಠಿಸುವರೆನಲು
ಕಂತುಹರನಪರಾವತಾರ ದೀಕ್ಷಾತ್ರಯಮು
ದೆಂತು ಲಿಂಗತ್ರಯಮುದಾವುದಂಗತ್ರಯಮು
ನಿಂ ತಿಳಿಯಪೇಳೆನಲ್ ಸಿದ್ಧರಾಮೇಶ ಕೇಳಾ ಗುರುವೆ ಕರುಣದಿಂದೆ ೩೨

ಎಂದನು. ೩೦ ಸಂತೋಷದಿಂದ ಆ ನಾಲ್ಕು ಆಚಾರ್ಯರು ಯುಗ ಯುಗದಲ್ಲಿಯೂ ಬರುತ್ತಿರುವರು. ಅತಿಕರುಣೆಯಿಂದ ಧರೆಯಲ್ಲಿನ ಭಕ್ತರಿಗೆ ದೀಕ್ಷೆಯನ್ನು ಕೊಟ್ಟು ರಕ್ಷಿಸುತ್ತಿರಲು ಆ ವಂಶದಲ್ಲಿ ಹಿರಿಯರಾದವರು ಆ ನಾಲ್ಕು ಕಳಶವನ್ನು ನಾಲ್ಕು ದಿಕ್ಕಿನಲ್ಲಿ ಇಟ್ಟು, ಅದರ ಮಧ್ಯೆ ಗುರುಕಳಶವನ್ನು ಸ್ಥಾಪಿಸಿ, ಪರಮಶಕ್ತಿಯಿಂದ ಆ ಕಳಶವನ್ನು ಗುರುಭಾವದಿಂದ ಕಂಡು ಪೂಜಿಸಬೇಕು. ೩೧. ಕರುಣೆಯಿಂದ ದೀಕ್ಷೆಯನ್ನು ಕೊಡುವಾಗ ಶಿಷ್ಯರ ಕೈ-ಕಾಲು ಮುಖ ಮೊದಲಾದ ಅಂಗಾಂಗಗಳಲ್ಲಿ ಸ್ವಲ್ಪವೂ ಊನವಿಲ್ಲದೆ ನೀಚಜಾತಿಯವರಲ್ಲದ ನಾಲ್ಕು ವರ್ಣದವರಿಗೆ ದೀಕ್ಷೆ ನೀಡಬಹುದು. ನಾನಾ ರೀತಿಯಲ್ಲಿ ಬ್ರಾಹ್ಮಣರನ್ನು ಮೂರು ವರ್ಷ, ಕ್ಷತ್ರಿಯರನ್ನು ಆರು ವರ್ಷ, ವೈಶ್ಯರನ್ನು ಒಂಬತ್ತು ವರ್ಷ, ಶೂದ್ರರನ್ನು ಹನ್ನೆರಡು ವರ್ಷದವರೆಗೆ ಪರೀಕ್ಷಿಸಬೇಕು. ೩೨. ಈ ರೀತಿ ಅವರ ಮನಸ್ಸಿನ ಪರಿಪಕ್ವತೆ ಅಥವಾ ಅಪಕ್ವತೆಗಳನ್ನು ಪರೀಕ್ಷಿಸಿ ನೋಡಿ ಮೂರು ವಿಧ ದೀಕ್ಷೆಗಳನ್ನು ಸಂತೋಷದಿಂದ ಕೊಟ್ಟು ತ್ರಿವಿಧ ಲಿಂಗಗಳನ್ನು ತ್ರಿವಿಧಾಂಗದಲ್ಲಿ ಪ್ರತಿಷ್ಠಾಪಿಸುವರು ಎನ್ನಲು, ಕಂತುಹರನಾದ ಶಿವನ ಅಪರಾವತಾರನೇ ದೀಕ್ಷಾತ್ರಯ ಯಾವುದು ? ಲಿಂಗತ್ರಯ ಯಾವುದು ? ಅಂಗತ್ರಯವನ್ನು ನೀನು ತಿಳಿಸು ಎನ್ನಲು

CC-0. Jangamwadi Math Collection. Digitized by eGangotri

ಉರುತರಜ್ವಲಿತ ಕಾಲಾಗ್ನಿರುಚಿಯುಂ ಜರೆವ
ಪರಮವಿದ್ಯುತ್ಕೋಟಿಕಾಂತಿಯುಂ ಪಳಿವ ಭಾ
ಸುರಶಿಖಾಚಕ್ರದೊಳ್ ಸೂಕ್ಷ್ಮದಿಂ ಚಿದ್ರೂಪಿನಿಂದೆಸೆವ ಚಿತ್ಕಲೆಯನು
ಗುರುವರಂ ಭಾವಕ್ಕೆ ತಂದು ತದ್ಭಾವದಿಂ
ದಿರದಾ ಮನಸ್ಸಿಂಗೆ ತಂದು ತನ್ಮನದಿಂದೆ
ಭರದೆ ದೃಕ್ಕಿಗೆ ತಂದು ತದ್ದೃಕ್ಕಿನಿಂದಿರದೆ ವರಕರಸ್ಥಲಕೆ ತಂದು ೩೩

ಕರುಣದಿಂ ಶಿಷ್ಯನುರುಮಸ್ತಕದೆ ಹಸ್ತವಿ
ಟ್ಟಿರದೆ ವೇದಾದೀಕ್ಷೆಯಿಂ ಭಾವಲಿಂಗಮಂ
ಪರಮ ಕಾರಣತನುವಿನೊಳ್ ಕರ್ಣದೊಳ್ ವಿರಾಜಿಸುವ ಮಂತ್ರಾದೀಕ್ಷೆಯಿಂ
ಉರುತರ ಪ್ರಾಣಲಿಂಗವ ಸೂಕ್ಷ್ಮ ತನುವಿನೊಳ್
ಕರದಿಂ ಕ್ರಿಯಾದೀಕ್ಷೆಯಿಂದಿಷ್ಟಲಿಂಗಮಂ
ನಿರುತಮಾ ಸ್ಥೂಲತನುವಿನೊಳುಂ ಪ್ರತಿಷ್ಠಿಸುವರೆಲೆ ರಾಮ ಕೇಳೆಂದನು ೩೪

ಗುರುವರಂ ಲಿಂಗಮಂ ಕೊಡುವುದೇ ದೀಯೆಂಬು
ದಿರದಾ ಮಲತ್ರಯವ ಛೇದಿಪ್ಪುದೆ ಕ್ಷೇಯೆಂಬು
ದೆರಡುಮಾ ದೀಕ್ಷಾಭಿಧಾನಮಿನ್ನಾಲಿಸೈ ಗುರುವಿನ ಮಹಾತ್ಮೆಗಳನು
ಸರಸಿಜಾಸನ ವಿಷ್ಣು ರುದ್ರ ನಂದೀಶ್ವರಂ
ವರಸದಾಶಿವ ತತ್ತ್ವನಿಚಯದಾಕಾರನುಂ
ಪರಮಚೈತನ್ಯಾತ್ಮ ಶಾಶ್ವತಂ ಶಾಂತಂ ನಿರಂಜನಂ ನಿರ್ಮಲಿನನು ೩೫

ಚೆನ್ನಬಸವಣ್ಣನು ಸಿದ್ಧರಾಮೇಶ ಕೇಳು, ಆ ಗುರುವೆ ಕರುಣೆಯಿಂದ ೩೩. ಪ್ರಳಯ ಕಾಲಾಗ್ನಿಯ ತೇಜಸ್ಸನ್ನು ಕೂಡ ಧಿಕ್ಕರಿಸುವ ಶ್ರೇಷ್ಠವಾದ ಕೋಟಿ ಮಿಂಚಿನ ಕಾಂತಿಯನ್ನು ಹಳಿಯುವ ಪ್ರಕಾಶಮಾನವಾದ ಶಿಖಾಚಕ್ರದಲ್ಲಿ ಸೂಕ್ಷ್ಮವಾಗಿ ಚಿದ್ರೂಪದಿಂದ ಕಂಗೊಳಿಸುವ ಚಿತ್ಕಳೆಯನ್ನು ಗುರುವರನು ಭಾವಕ್ಕೆ ತಂದು, ಆ ಭಾವದಿಂದ ಮನಸ್ಸಿಗೆ ತಂದು, ಮನಸ್ಸಿನಿಂದ ದೃಷ್ಟಿಗೆ ತಂದು, ದೃಷ್ಟಿಯಿಂದ ತಡೆಯದೆ ಶ್ರೇಷ್ಠವಾದ ಅಂಗೈಗೆ ತಂದು ೩೪. ಕರುಣೆಯಿಂದ ಶಿಷ್ಯನ ಶ್ರೇಷ್ಠವಾದ ತಲೆಯ ಮೇಲೆ ಕೈಯನ್ನಿಟ್ಟು, ವೇದದೀಕ್ಷೆಯಿಂದ ಭಾವಲಿಂಗವನ್ನು ಶ್ರೇಷ್ಠವಾದ ಕಾರಣತನುವಿನಲ್ಲಿ ನೆಲೆಗೊಳಿಸುವನು. ಕಿವಿಯಲ್ಲಿ ಪ್ರಕಾಶಮಾನವಾದ ಮಂತ್ರದೀಕ್ಷೆಯನ್ನು, ಶ್ರೇಷ್ಠತರವಾದ ಪ್ರಾಣಲಿಂಗವನ್ನು ಸೂಕ್ಷ್ಮ ಶರೀರದಲ್ಲಿಯೂ, ಕ್ರಿಯಾದೀಕ್ಷೆಯಿಂದ ಇಷ್ಟಲಿಂಗವನ್ನು ಕೈಮೂಲಕ ಯಾವಾಗಲೂ ಸ್ಥೂಲ ಶರೀರದಲ್ಲಿಯೂ ಪ್ರತಿಷ್ಠಿಸುವರು, ಎಲೈ ಸಿದ್ಧರಾಮ, ಕೇಳು ಎಂದನು. ೩೫. ಪೂಜ್ಯನಾದ ಗುರುವು ಲಿಂಗವನ್ನು ಕೊಡುವುದೇ 'ದೀ' ಎನ್ನುವುದು. ತಡೆಯದೆ ಆ ಮಲತ್ರಯವನ್ನು ನಾಶಮಾಡುವುದೇ 'ಕ್ಷೇ' ಎನ್ನುವುದು. ಈ ಎರಡೂ ಸೇರಿ 'ದೀಕ್ಷೆ' ಯೆಂಬ ಹೆಸರಾಯಿತು. ಇನ್ನುಗುರುವಿನ ಮಹಾತ್ಮೆಗಳನ್ನು ಕೇಳಯ್ಯಾ. ಗುರುವು ಬ್ರಹ್ಮ, ವಿಷ್ಣು, ರುದ್ರ, ನಂದೀಶ್ವರ, ಸದಾಶಿವ, ತತ್ತ್ವಸಮೂಹದ ಆಕಾರ,ಪರಮ ಚೈತನ್ಯಾತ್ಮ,

CC-0. Jangamwadi Math Collection. Digitized by eGangotri

ನಿರುತಮಾ ನಾದ ಬಿಂದು ಕಳಾವ್ಯತೀತನುಂ
ಪರಮಷಟ್ತ್ರಿಂಶತ್ಸುತತ್ತ್ವಮಾಲಾಭೂಷ
ಸುರುತರಜ್ಞಾನಶಕ್ತಿಪ್ರಯುಕ್ತಂ ನಿತ್ಯನಿಂತಪ್ಪ ಗುರುವಿನಿಂದೆ
ಪರವಿಲ್ಲವಾಗಿ ನಗುರೋರಧಿಕಮೆಂದು ಶ್ರುತಿ
ಯೊರೆವುತಿರ್ಪುದು ರಾಮು ಕೇಳೆನಲ್ಕಿಂತಪ್ಪ
ಪರಮಗುರು ನೀನೆ ನೀಂ ಪೇಳ್ದ ಲಿಂಗತ್ರಯದ ಭೇದಮಂ ತಿಳಿಪೆಂದನು ೩೬

ಒರೆವೆನಾಲಿಸು ರಾಮು ನಿನಗೆ ನಾಂ ಮುಂ ಪೇಳ್ದ
ವರಮಹಾಲಿಂಗವೇ ನಿಷ್ಕಲದೆ ಭಾವಕೊ
ಲ್ದಿರದೆ ಗೋಚರಮಾಗೆ ಭಾವಲಿಂಗಮದಾಯ್ತದೇ ಮನಕೆ ಗೋಚರಿಸಲು
ಉರುಸಕಲನಿಷ್ಕಲದೆ ಪ್ರಾಣಲಿಂಗಮದಾಯ್ತು
ಪರಿಕಿಸಲದೇ ಕಣ್ಗೆ ಗೋಚರಿಸೆ ಸಕಲದಿಂ
ಪರಿವಿಡಿಯೊಳಿಷ್ಟಲಿಂಗಮದಾಯ್ತು ತಲ್ಲಿಂಗದಿರವ ನೀಂ ಕೇಳೆಂದನು ೩೭

ಪರಿಕಿಸಲ್ಕತ್ಯತಿಷ್ಠದ್ದಶಾಂಗುಲಮಜಂ
ನಿರುಪಮಂ ನಿತ್ಯಂ ನಿರಾಮಯಂ ನಿರ್ಗುಣಂ
ನಿರಘಂ ನಿರಂಜನಂ ನಿರ್ದ್ವಂದ್ವಮವ್ಯಕ್ತಮವ್ಯಯಂ ನಿಃಶೂನ್ಯನು
ವರಸಾಕ್ಷಿರೂಪಕಮಕರ್ತೃಕಮಭೋಕ್ತೃಕಂ
ನಿರುತಮಿರದೇಕಮೇವಾದ್ವಿತೀಯಂ ಬ್ರಹ್ಮ
ಪರಕೆ ಪರಮೆನಿಸುವ ಪರಬ್ರಹ್ಮಮಿಾ ಲಿಂಗಮೆಲೆ ರಾಮು ಕೇಳೆಂದನು ೩೮

ಶಾಶ್ವತ, ಶಾಂತ, ನಿರಂಜನ, ನಿರ್ಮಲಿನನು. ೩೬. ಸದಾ ಆ ನಾದಬಿಂದು ಕಳೆಗೆ ಅತೀತ ನಾದವನು. ಶ್ರೇಷ್ಠವಾದ ಷಟ್‌ತ್ರಿಂಶಸುತತ್ತ್ವಮಾಲಾಭೂಷಣನು, ಶ್ರೇಷ್ಠತರವಾದ ಜ್ಞಾನಶಕ್ತಿಯಿಂದ ಕೂಡಿರುವನು, ನಿತ್ಯನು. ಇಂತಹ ಗುರುವಿನಿಂದ ಬೇರೆ ಇಲ್ಲವಾಗಿ 'ಗುರುವಿಗಿಂತ ಅಧಿಕನು ಇಲ್ಲ' ಎಂದು ವೇದಗಳು ಹೇಳುತ್ತಿವೆ. ಸಿದ್ಧರಾಮು, ಕೇಳು ಎನ್ನಲು, ಈ ರೀತಿಯಾದ ಮಹಾಗುಣಗಳಿಂದ ಕೂಡಿರುವ ಪರಮಗುರು ನೀನೆ. ನೀನು ಹೇಳಿದ ಲಿಂಗತ್ರಯದ ಭೇದವನ್ನು ತಿಳಿಸು ಎಂದನು. ೩೭. ಹೇಳುತ್ತೇನೆ ಕೇಳಯ್ಯ, ಸಿದ್ಧರಾಮು, ನಿನಗೆ ನಾನು ಈ ಮೊದಲೇ ಹೇಳಿದ ಶ್ರೇಷ್ಠ ಮಹಾಲಿಂಗವೇ ನಿಷ್ಕಲದಿಂದ ಭಾವಕ್ಕೆ ಗೋಚರಿಸಲು ಭಾವಲಿಂಗವಾಯ್ತು. ಅದೇ ಮನಸ್ಸಿಗೆ ಗೋಚರವಾಗಲು ನಿಷ್ಕಲವಾಗಿ ಪ್ರಾಣಲಿಂಗವಾಯ್ತು. ಅದೇ ಕಣ್ಣಿಗೆ ಕಾಣಿಸಲು ಸಕಲದಿಂದ ಕ್ರಮವಾಗಿ ಇಷ್ಟಲಿಂಗವಾಯಿತು. ಆ ಇಷ್ಟಲಿಂಗದ ಸ್ಥಿತಿಯನ್ನು ಕೇಳು. ಎಂದನು. ೩೮. ಯೋಚಿಸಲು ಅತ್ಯತಿಷ್ಠದ್ದಶಾಂಗುಲನು ಬ್ರಹ್ಮನು ಉಪಮಾತೀತನು, ಶಾಶ್ವತನು ನಿರಾಮಯನು ನಿರ್ಗುಣನು ಪಾಪದೂರನು ನಿರಂಜನನು ದ್ವಂದ್ವದೂರನು ಅವ್ಯಕ್ತ ಅವ್ಯಯ ನಿಃಶೂನ್ಯ ಸಾಕ್ಷೀರೂಪ ಅಕರ್ತೃಕ ಅಭೋಕ್ತೃಕ ನಿರುತನು ಏಕಮೇವಾದ್ವಿತೀಯನು ಬ್ರಹ್ಮ ಪರಕ್ಕೆ ಪರನೆನಿಸುವ ಪರಬ್ರಹ್ಮ ಈ ಇಷ್ಟಲಿಂಗವು ಎಲೆ ರಾಮು, ಕೇಳೆಂದನು.

CC-0. Jangamwadi Math Collection. Digitized by eGangotri

ಇಂತಪ್ಪ ಲಿಂಗಮಂ ಶಿರದೊಳಮಳ್ಳೈಕ್ಯದೊಳ್
ಸಂತತಂ ಗಳ ಬಾಹು ಕಕ್ಷೆ ವಕ್ಷಂಗಳೊಳ್
ಸಂತಸವೆ ಧರಿಸವೇಳ್ಪುದು ನಾಭಿಯಿಂ ಕೆಳಗೆ ಧರಿಸೆ ಪಾತಕಮರಿವುದು
ಮುಂತೆ ಮಜ್ಜನ ಭೋಜನಂಗಳೊಳ್ ಮಲ ಮೂತ್ರ
ಮಂ ತವೆ ವಿಸರ್ಜಿಸುವ ಕಾಲದೊಳ್ ನಿದ್ರೆಯೊಳ್
ಕಾಂತೆಯರ ರತಿ ರಾಜಭಯಮಾದಿಗಳೊಳಂಗದಿಂದಗಲದಿರವೇಳ್ಪುದು ೩೯

ಎಲೆ ಸಿದ್ಧರಾಮೇಶ ಕೇಳ್ವುದೀ ಲಿಂಗಕ್ಕೆ
ತಿಳಿಯಲಾ ಜಂಗಮವೆ ವದನಮಾ ಜಂಗಮದ
ಲಲಿತಮುಖದಿಂದೆ ಲಿಂಗಕೆ ತೃಪ್ತಿಯೆಂದೊಡಾ ಜಂಗಮದ ಲಕ್ಷಣವನು
ನಲವಿನಿಂ ತಿಳಿಪೆನಲ್ಕಾದಿಮಧ್ಯಾಂತಮಂ
ಕಳೆವವಂ ನಿತ್ಯಪರಿಪೂರ್ಣಂ ನಿರಾಮಯಂ
ಸಲೆ ಸಗುಣನಿರ್ಗುಣಂ ಹರಿಯಜ ಮಹೇಂದ್ರ ಶಿವಮುಖ್ಯಪೂಜಿತನೆಂದನು ೪೦

ಜಂಗಮವೆನಲ್ ಜನನಮಾ ಮರಣವರ್ಜಿತಂ
ಜಂಗಮವೆನಲ್ ನಾದಬಿಂದುಕಳೆಸಂಯುತಂ
ಜಂಗಮವೆನಲ್ ಸ್ವರ್ಗ ಮರ್ತ್ಯ ಪಾತಾಳಾದಿ ಸಕಲಭುವನಾಧಾರನು
ಜಂಗಮವೆನಲ್ ಸಚ್ಚಿದಾನಂದರೂಪಕಂ
ಜಂಗಮವೆನಲ್ ತ್ರಿವಿಧಮೂರ್ತಿಸ್ವರೂಪಕಂ
ಜಂಗಮವೆನಲ್ ತ್ರಿವಿಧತತ್ತ್ವಾತ್ಮಕಂ ಸಿದ್ಧರಾಮೇಶ ಕೇಳೆಂದನು ೪೧

೩೯. ಇಂತಹ ಲಿಂಗವನ್ನು ತಲೆಯಲ್ಲಿ ಅಮಳ್ಳೈಕ್ಯದಲ್ಲಿ ಸದಾ ಕುತ್ತಿಗೆಯಲ್ಲಿ ತೋಳಿನಲ್ಲಿ ಕಂಕುಳಿನಲ್ಲಿ ಎದೆಯಲ್ಲಿ ಸಂತೋಷದಿಂದ ಧರಿಸಬೇಕು. ಹೊಕ್ಕಳಿನಿಂದ ಕೆಳಗೆ ಧರಿಸಿದಲ್ಲಿ ಪಾಪ ಬರುವುದು. ಸ್ನಾನ, ಊಟಗಳಲ್ಲಿ, ಮಲ ಮೂತ್ರಗಳನ್ನು ವಿಸರ್ಜಿಸುವ ಕಾಲದಲ್ಲಿ, ನಿದ್ರೆಯಲ್ಲಿ, ಪತ್ನಿಯರಲ್ಲಿ ಸಂಭೋಗಿಸುವ ಕಾಲದಲ್ಲಿ, ರಾಜಭಯ ಮೊದಲಾದ ಸಮಯಗಳಲ್ಲಿ ದೇಹದಿಂದ ತೆಗೆಯಕೂಡದು. ೪೦. ಎಲೆ ಸಿದ್ಧರಾಮ ಕೇಳು, ಈ ಲಿಂಗಕ್ಕೆ ಜಂಗಮವೇ ಮುಖ. ಆ ಮನೋಹರ ಮುಖದಿಂದ ಲಿಂಗಕ್ಕೆ ತೃಪ್ತಿ ಎನ್ನಲು ಆ ಜಂಗಮದ ಲಕ್ಷಣವನ್ನು ಪ್ರೀತಿಯಿಂದ ತಿಳಿಸೆನ್ನಲು ಆದಿ-ಮಧ್ಯ-ಅಂತ್ಯವನ್ನು ಕಳೆಯುವನು ನಿತ್ಯನು ಪರಿಪೂರ್ಣ ನಿರಾಮಯನು ಸಗುಣ ನಿರ್ಗುಣನು ವಿಷ್ಣು-ಬ್ರಹ್ಮ-ಇಂದ್ರ ಶಿವ ಮೊದಲಾದವರಿಂದ ಪೂಜೆಗೊಳ್ಳುವವನೇ ಜಂಗಮನು ಎಂದನು. ೪೧. ಜಂಗಮವೆನ್ನಲು ಜನನ-ಮರಣವರ್ಜಿತನು. ಜಂಗಮವೆನ್ನಲು ನಾದ ಬಿಂದು ಕಳೆಯಿಂದ ಕೂಡಿದವನು. ಜಂಗಮವೆನ್ನಲು ಸ್ವರ್ಗ-ಮರ್ತ್ಯ-ಪಾತಾಳ ಮೊದಲಾದ ಎಲ್ಲ ಪ್ರಪಂಚಕ್ಕೂ ಆಧಾರನು. ಜಂಗಮವೆನ್ನಲು ಸಚ್ಚಿದಾನಂದಸ್ವರೂಪನು. ಜಂಗಮವೆನ್ನಲು ತ್ರಿಮೂರ್ತಿಸ್ವರೂಪನು. ಜಂಗಮವೆನ್ನಲು ತ್ರಿವಿಧ ತತ್ತ್ವಾತ್ಮಕನು

CC-0. Jangamwadi Math Collection. Digitized by eGangotri

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮುನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಳ್ಕರಿಂದೆ ೪೨

ಐವತ್ತೊಂಬತ್ತನೆಯ ಸಂಧಿ ಸಂಪೂರ್ಣ

ಸಿದ್ಧರಾಮೇಶ ಕೇಳು ಎಂದನು. ೪೨. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿ ಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆಗೂ ಹೇಳಿದವರಿಗೆ. ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪಾರವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ಐವತ್ತೊಂಬತ್ತನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ಅರವತ್ತನೆಯ ಸಂಧಿ

ಸೂಚನೆ : ಭಸಿತ ರುದ್ರಾಕ್ಷೆ ಪಂಚಾಕ್ಷರಿಯ ಮಹಿಮೆಗಳ
ನೊಸೆದು ಪಾದೋದಕ ಪ್ರಸಾದದ ಮಹಾತ್ಮೆಗಳ
ನಸಮಲಿಂಗಾರ್ಚನಾ ಭೇದಮಂ ಗುರುಚೆನ್ನಬಸವಂ ನಿರೂಪಿಸಿದನು

ಈಶ್ವರಿಯ ನಿರ್ಮಲಾನನಸರೋರುಹಮಿತ್ರ
ಶಾಶ್ವತಂ ಸರ್ವಸಾಕ್ಷಿಕ ಸುಭಸ್ಮೋದ್ಧಾಗತ್ರ
ವಿಶ್ವಾಧಿಕೋರುದ್ರ ಭವಗಣಾಂಬುಧಿಛತ್ರ ಸನ್ಮುನಿಸ್ತೋತ್ರಪಾತ್ರ
ಭಾಸ್ವತ್ಸುಲೀಲಾಸವಿಶ್ವನಾಟಕಸೂತ್ರ
ವೈಶ್ವಾನರೋವಿಧುವಿವಸ್ವಾನುಗುಣನೇತ್ರ
ನೈಶ್ವರ್ಯಮಂ ಕೊಟ್ಟು ಸಲಹು ಧನಪತಿಮಿತ್ರ ವಿಮಲಸುದ್ಗುಣಚರಿತ್ರ ೧

ಪರಮಸದ್ಗುರು ಚೆನ್ನಬಸವೇಶ ನೀಂ ಪೇಳ್ದ
ಗುರುಲಿಂಗಜಂಗಮಮಹಾತ್ಮೆಗಳನರಿದೆನಾಂ
ಕರುಣದಿಂ ಮುಂತೆ ಲಿಂಗಾರ್ಚನೆಯ ಮಾಳ್ಪ ತೆರನಂ ನಿರೂಪಿಸುವುದೆನಲು
ಒರೆವೆನಾಲಿಸು ರಾಮ ಪೂರ್ಣ ನಕ್ಷತ್ರಂಗ
ಳಿರುತಿರ್ಪ ಕಾಲಮುತ್ತಮಮವೆಲ್ಲಂ ನಾಡೆ
ಪರೆವಾಗ ಮಧ್ಯಮಂ ರವಿಯುದಯಕಾಲದರ್ಚನೆಯೆ ತಿಳಿಯಲ್ಕಧಮವು ೨

ಸೂಚನೆ : ವಿಭೂತಿ ರುದ್ರಾಕ್ಷಿ ಪಂಚಾಕ್ಷರೀಮಂತ್ರದ ಮಹಿಮೆಗಳನ್ನೂ, ಪಾದೋದಕ ಪ್ರಸಾದದ ಮಹಾತ್ಮೆಗಳನ್ನೂ, ಅಸಮಾನವಾದ ಲಿಂಗಾರ್ಚನಾವಿಧಾನವನ್ನೂ ಪ್ರೀತಿಯಿಂದ ಗುರು ಚೆನ್ನಬಸವಣ್ಣನು ವಿವರಿಸಿದನು. ೧. ಪಾರ್ವತಿಯ ನಿರ್ಮಲವಾದ ಮುಖಕಮಲಕ್ಕೆ ಸೂರ್ಯ ಶಾಶ್ವತ ಸರ್ವಸಾಕ್ಷಿ ವಿಭೂತಿಯನ್ನು ಧರಿಸಿದ ಶರೀರವುಳ್ಳವ ವಿಶ್ವಾಧಿಕನು ರುದ್ರ ಅತಿಭಯಂಕರವಾದ ಸಂಸಾರಸಾಗರವನ್ನು ದಾಟಿಸುವ ಹಡಗು, ಶ್ರೇಷ್ಠರಾದ ಮುನಿಗಳ ಹೊಗಳಿಕೆಗೆ ಪಾತ್ರನಾದವ, ಪ್ರಕಾಶಮಾನವಾದ ಮನೋಹರವಾದ ವಿಶ್ವನಾಟಕದ ಸೂತ್ರಧಾರಿ, ಅಗ್ನಿ-ಚಂದ್ರ ಮತ್ತು ಸೂರ್ಯರನ್ನು ಕಣ್ಣನ್ನಾಗಿ ಉಳ್ಳವನು, ಕುಬೇರನ ಸ್ನೇಹಿತ, ವಿಮಲವಾದ ಸದ್ಗುಣಗಳ ಚರಿತ್ರೆಯುಳ್ಳವನು (ಆದ ವಿರೂಪಾಕ್ಷನೇ) (ಮುಕ್ತಿಯೆಂಬ) ಐಶ್ವರ್ಯವನ್ನು ಕೊಟ್ಟು ಕಾಪಾಡು. ೨. ಪರಮ ಸದ್ಗುರುವಾದ ಚೆನ್ನಬಸವೇಶ್ವರನೆ, ನೀನು ವಿವರಿಸಿದ ಗುರು-ಲಿಂಗ-ಜಂಗಮದ ಮಹಾತ್ಮೆಗಳನ್ನು ನಾನು ತಿಳಿದುಕೊಂಡೆ. ಇನ್ನು ಮುಂದೆ ಕರುಣೆಯಿಂದ ಲಿಂಗಾರ್ಚನೆಯನ್ನು ಮಾಡುವ ರೀತಿಯನ್ನು ವಿವರಿಸು ಎನ್ನಲು, ಹೇಳುತ್ತೇನೆ ಕೇಳಯ್ಯಾ ಸಿದ್ಧರಾಮ, ಸಂಪೂರ್ಣವಾಗಿ ನಕ್ಷತ್ರಗಳು ಇರುವಂಥ ಪರ್ವಕಾಲವು ಉತ್ತಮವಾದುದು. ಅವೆಲ್ಲವೂ ಚದುರಿಹೋಗುತ್ತಿರುವ ಕಾಲವು ಮಧ್ಯಮವು.

CC-0. Jangamwadi Math Collection. Digitized by eGangotri

ಉತ್ತಮದ ಕಾಲದೊಳ್ ಶಿವನ ನೆನೆವುತ್ತಲೆ
ಚ್ಚೆತ್ತು ಮೆಯ್ಮುರಿದೆದ್ದು ಮಲಮೂತ್ರಮಂ ತ್ಯಜಿಸಿ
ಮೃತ್ತಿಕಾಶೌಚಮಂ ಮಾಡಿ ಹಸ್ತಾಂಘ್ರಿಗಳನೊಲವಿನಿಂ ತೊಳೆದು ಬಳಿಕ
ಬಿತ್ತರದೆ ಪಾಲ್ಮುಳ್ಗಳುಳ್ಳ ಮರದೊಳ್ ಖದಿರ
ಮುತ್ತಮಂ ತತ್ಕಾಷ್ಠದಿಂ ದಂತಧಾವನಾ
ವೃತ್ತಮಂ ತೀರ್ಚಿ ಲಿಂಗೋದಕದೆ ಗಂಡೂಷಮಂ ಮಾಡಬೇಕೆಂದನು ೩

ಬಳಿಕ ಮುಖಮಜ್ಜನಂಗೆಯ್ದು ಮಡಿವರ್ಗಮಂ
ತಳೆದು ವಿಮಲೇಶಾನದಿಕ್ಕಿನೊಳಗಿರದೆ ಕ
ಣ್ಗೊಳಿಪ ಶಿವಪೂಜಾಮಂಟಪಕೆ ಬಂದು ಸಮ್ಮಾರ್ಜನಂಗೆಯ್ದು ಮೇಲೆ
ಸಲೆ ರಂಗವಲಿಯಿಂದಲಂಕರಿಸಿ ಭಕ್ತಿಯಿಂ
ಲಲಿತಪದ್ಮಾಸನದೊಳೈದೆ ಮಂಡಿಸಿ ಸುನಿ
ಶ್ಚಲಚಿತ್ತನಾಗಿ ಶಿವಪೂಜೋಪಕರಣಮಂ ತರತರದೊಳಿರಿಸಿಕೊಂಡು ೪

ರಾಮ ಕೇಳ್ ಬಳಿಕ ಭಸ್ಮಸ್ನಾನಮಂ ಮಾಡಿ
ನೇಮದಿಂ ಭಸಿತದುದ್ಧೂಳನಂಗೆಯ್ದು ಸು
ಪ್ರೇಮದಿಂ ವರತ್ರಿಪುಂಡ್ರಂ ವಿಮಳರುದ್ರಾಕ್ಷೆಯಿಂದಲಂಕರಿಸಿಕೊಂಡು
ಆಮೇಲೆ ಶಿವಮಂತ್ರದಿಂದಲುಪಕರಣಸಂ
ಸ್ತೋಮಮುಮನರ್ಚಿಸಿ ಶಿವಾರ್ಚನಂಗೆಯ್ವುದೆನೆ
ಸ್ವಾಮಿ ನೀವಿವರ ಭೇದಂಗಳಂ ವಿಸ್ತರಿಸಿ ಪೇಳ್ವುದೆನಲಿಂತೆಂದನು ೫

ಸೂರ್ಯೋದಯಕಾಲದಲ್ಲಿ ಮಾಡಿದ ಪೂಜೆಯು ಎಲ್ಲಕ್ಕಿಂತ ಅಧಮವು. ೩. ಉತ್ತಮವಾದ ಕಾಲದಲ್ಲಿ ಶಿವನನ್ನು ನೆನೆಯುತ್ತ ಎಚ್ಚೆತ್ತು, ಮೈಮುರಿದೆದ್ದು, ಪ್ರಾತರ್ವಿಧಿಗಳನ್ನು ತೀರಿಸಿ, ಮೃತ್ತಿಕಾಶೌಚವನ್ನು ಮಾಡಿ, ಕೈ–ಕಾಲ್ಗಳನ್ನು ತೊಳೆದು, ಅನಂತರ ವಿಸ್ತಾರವಾಗಿ ಹಾಲಿರುವ-ಮುಳ್ಳಿರುವ ಮರಗಳಲ್ಲಿ ಉತ್ತಮವಾದ ಖದಿರಕಡ್ಡಿಯಿಂದ ಹಲ್ಲನ್ನುಜ್ಜಿ ಲಿಂಗೋದಕದಿಂದ ಬಾಯನ್ನು ಮುಕ್ಕಳಿಸಬೇಕು ಎಂದನು. ೪. ಅನಂತರ ಮುಖವನ್ನು ತೊಳೆದು ಮಡಿಯುಟ್ಟು ಈಶಾನ್ಯದಿಕ್ಕಿನಲ್ಲಿ ಶೋಭಿಸುವ ಶಿವಪೂಜಾಮಂಟಪಕ್ಕೆ ಬಂದು ಸಾರಿಸಿ, ಚೆನ್ನಾಗಿ ರಂಗೋಲೆಯಿಂದ ಅಲಂಕಾರ ಮಾಡಿ, ಭಕ್ತಿಯಿಂದ ಮನೋಹರವಾದ ಪದ್ಮಾಸನದಲ್ಲಿ ಕುಳಿತು ತದೇಕ ಮನಸ್ಸುಳ್ಳವನಾಗಿ ಶಿವಪೂಜೋಪಕರಣಗಳನ್ನು ನಾನಾರೀತಿಯಲ್ಲಿ ಸಿದ್ಧಪಡಿಸಿಕೊಂಡು, ೫. ಸಿದ್ಧರಾಮ ಕೇಳು, ಬಳಿಕ ಭಸ್ಮಸ್ನಾನಮಾಡಿ, ನೇಮದಿಂದ ವಿಭೂತಿಯನ್ನು ಧರಿಸಿ, ಪ್ರೇಮದಿಂದ ಶ್ರೇಷ್ಠವಾದ ತ್ರಿಪುಂಡ್ರ, ಶ್ರೇಷ್ಠವಾದ ರುದ್ರಾಕ್ಷಿಯಿಂದ ಅಲಂಕಾರ ಮಾಡಿಕೊಂಡು, ಆಮೇಲೆ ಶಿವಮಂತ್ರದಿಂದ ಉಪಕರಣಸಮೂಹವನ್ನು ಪೂಜಿಸಿ ಶಿವಾರ್ಚನೆಯನ್ನು ಮಾಡಬೇಕು– ಎನ್ನಲು, ಸ್ವಾಮಿ ನೀವು ಇವರ ಭೇದಗಳನ್ನು ವಿಸ್ತಾರವಾಗಿ ಹೇಳಬೇಕು ಎನ್ನಲು

CC-0. Jangamwadi Math Collection. Digitized by eGangotri

ವಿದಿತಸದ್ಯೋಜಾತಮುಖದಿನಾದುದು ಪೃಥ್ವಿ
ಯದರಿಂ ನಿವೃತ್ತಿಕಳೆಯಾ ಕಳೆಗೆ ಕಪಿಲವ
ರ್ಣದ ನಂದೆಯೆಂಬ ಗೋವದರ ಗೋಮಯದಿನಾದುದು ಭೂತಿ ವಾಮದೇವ
ವದನದಿಂ ಜಲವಾದುದದರಿಂ ಪ್ರತಿಷ್ಠಕಲೆ
ಯದರೊಳಗೆ ಕೃಷ್ಣವರ್ಣದ ಭದ್ರೆಯೆಂಬ ಗೋ
ವದರ ಗೋಮಯದಿಂದೆ ಭಸಿತವಾದುದು ಸಿದ್ಧರಾಮೇಶ ಕೇಳೆಂದನು ೬

ಪೊಳೆವಘೋರಾಸ್ಯದಿಂ ತೇಜವುದರಿಂ ವಿದ್ಯ
ಕಲೆಯದರಿನರುಣವರ್ಣದ ಸುರಭಿಯದರಿನಿಂ
ದಿಳಿದ ಗೋಮಯದೊಳಾದುದು ಭಸ್ಮವೆಸೆವ ತತ್ಪುರುಷಮುಖದಿಂ ಮರುತನು
ಸುಳಿದುದದರಿಂದಾಯ್ತು ವರಶಾಂತಿಯೆಂದೆಂಬ
ಕಲೆ ಶುಭ್ರವರ್ಣದ ಸುಶೀಲೆ ಗೋವಾಯ್ತು ತ
ತ್ಕಲೆಯಿಂದಲದರ ಗೋಮಯದೊಳಾದುದು ಕ್ಷಾರವೆಲೆ ರಾಮ ಕೇಳೆಂದನು ೭

ಭೂತೇಶನೀಶಾನ್ಯಮುಖದೆ ನಭವಾಯ್ತು ಶಾಂ
ತ್ಯಾತೀತಕಲೆಯದರೊಳಾ ಕಲೆಯೊಳಾದುದೈ
ಸಾತಿಶಯಚಿತ್ರವರ್ಣದ ಸುಮನೆಯದರ ಗೋಮಯದಿಂದೆ ರಕ್ಷೆಯಾಯ್ತು
ಭೂತಿಯಿಂ ಸಿರಿ ಭಸಿತದಿಂ ಜ್ಞಾನ ಭಸ್ಮದಿಂ
ಪಾತಕಹರಂ ಕ್ಷಾರದಿಂ ವಿಪತ್ತಿಲ್ಲಖಿಳ
ಭೀತಿಯಂ ಕೆಡಿಸಿ ರಕ್ಷಿಸುವುದೇ ರಕ್ಷೆಯಿಂತಿವರ ಪರಿ ಕೇಳೆಂದನು ೮

ಹೀಗೆಂದನು. ೬. ಪ್ರಖ್ಯಾತವಾದ ಸದ್ಯೋಜಾತಮುಖದಿಂದ ಭೂಮಿ ಉತ್ಪನ್ನ ವಾಯಿತು. ಅದರಿಂದ ನಿವೃತ್ತಿ ಕಳೆಯಾಯಿತು. ಆ ಕಳೆಗೆ ಕಂದುಬಣ್ಣದ ನಂದೆ ಎಂಬ ಹಸುವಾಯಿತು. ಆ ಹಸುವಿನ ಸಗಣಿಯಿಂದಾದುದು ವಿಭೂತಿಯು. ವಾಮದೇವ ಮುಖದಿಂದ ಉದಕ ಆಯಿತು. ಅದರಿಂದ ಪ್ರತಿಷ್ಠ ಕಲೆಯಾಯಿತು. ಅದರೊಳಗೆ ಕಪ್ಪುಬಣ್ಣದ ಭದ್ರೆಯೆನ್ನುವ ಹಸುವಾಯಿತು. ಅದರ ಸಗಣಿಯಿಂದಾದುದೇ ಭಸಿತ, ಸಿದ್ಧರಾಮ ಕೇಳು ಎಂದನು. ೭. ಹೊಳೆಯುವ ಅಘೋರಮುಖದಿಂದ ತೇಜಸ್ಸು ಉತ್ಪನ್ನವಾಯಿತು. ಅದರಿಂದ ವಿದ್ಯೆಯೆಂಬ ಕಳೆಯಾಯಿತು. ಆ ಕಳೆಯಿಂದ ಕೆಂಪು ಬಣ್ಣದ ಹಸು ಹುಟ್ಟಿತು. ಆ ಹಸುವಿನ ಸಗಣಿಯಿಂದ ಆದುದು ಭಸ್ಮ. ಪ್ರಖ್ಯಾತವಾದ ತತ್ಪುರುಷಮುಖದಿಂದ ವಾಯುವು ಹುಟ್ಟಿತು. ಅದರಿಂದ ಶ್ರೇಷ್ಠವಾದ ಶಾಂತಿ ಎಂಬ ಕಳೆಯಾಯಿತು. ಬಿಳಿಯಬಣ್ಣದ ಹಸುವು ಅದರಲ್ಲಿ ಹುಟ್ಟಿತು. ಅದರ ಸಗಣಿಯಿಂದ, ಆದದ್ದು ಕ್ಷಾರ, ಎಲೆ ಸಿದ್ಧರಾಮ, ಕೇಳು ಎಂದನು. ೮. ಶಿವನ ಈಶಾನಮುಖ ದಿಂದ ಆಕಾಶವಾಯಿತು. ಅದರಲ್ಲಿ ಶಾಂತ್ಯಾತೀತ ಕಳೆ ಹುಟ್ಟಿತು. ಅದರಲ್ಲಿ ಅತಿಶಯ ವಾದ ಚಿತ್ರವರ್ಣದ ಸುಮನೆಯೆಂಬ ಹಸುವು ಆಯಿತು. ಅದರ ಸಗಣಿಯಿಂದ ರಕ್ಷೆ ಯಾಯಿತು. ಭೂತಿಯಿಂದ ಸಂಪತ್ತು, ಭಸಿತದಿಂದ ಜ್ಞಾನ, ಭಸ್ಮದಿಂದ ಪಾಪನಾಶ, ಕ್ಷಾರದಿಂದ ವಿಪತ್ತಿನ ಪರಿಹಾರ, ಎಲ್ಲ ಹೆದರಿಕೆಗಳನ್ನು ನಾಶಮಾಡಿ ರಕ್ಷಿಸುವುದೇ ರಕ್ಷೆ

CC-0. Jangamwadi Math Collection. Digitized by eGangotri

ಎಲೆ ರಾಮ ಕೇಳಭಕ್ಷಣೆ ವತ್ಸರಹಿತೆ ರುಜೆ
ಸಲೆ ಶಕ್ತಿಹೀನೆ ವಿಕಟಾಂಗಿ ಬಹುಭಕ್ಷೆ ಬರೆ
ಗೊಳಗಾದುದತ್ಯಂಗಹೀನೆ ನಿರ್ವೀರ್ಯೆ ವಂಧ್ಯಾದ್ಯಲಕ್ಷಣಪಶುಗಳಂ
ಕಳೆದು ಸಲ್ಲಕ್ಷಣದ ಗೋವಿತ್ತ ಗೋಮಯಂ
ನೆಲಕಿಳಿಯದಂತಾಂತುಕೊಂಡದಂ ಘನಭಕ್ತಿ
ಯೊಳೆ ಗ್ರಹಣ ಕಬಳ ಶೋಷಣ ದಹನ ಪ್ಲವಶೋಧನಾಭಿಮಂತ್ರಂಗಳಿಂದೆ ೯

ವಿರಚಿಸಿದ ಭಸಿತವಿಲ್ಲದೊಡೆ ಪರರಿತ್ತುದಂ
ವರಭಕ್ತಿಯಿಂ ಕೊಂಡು ಸಿರ ವದನ ಹೃದ್ಗುಹ್ಯ
ಚರಣಯುಗ ಸರ್ವಾಂಗಕೀಶಾನ ತತ್ಪುರುಷಯುಗಮಘೋರಂ ಕ್ರಮದೊಳು
ಉರುವಾಮದೇವ ಸದ್ಯೋಜಾತವೆಂಬಿವಂ
ಪರಮಪಂಚಾಕ್ಷರಿಗಳಿಂ ವಿಭೂತಿಸ್ನಾನ
ಪರಿಶುದ್ಧನಾದವಂಗಿಲ್ಲ ಭವಬಂಧನಂ ರಾಮ ನೀಂ ಕೇಳೆಂದನು ೧೦

ಮಳೆ ಬಿಸಿಲ್ಗೂಡಿ ಬರಲದುವೆ ದಿವ್ಯಸ್ನಾನ
ಮಿಳೆಯ ಗೋಧೂಳಿ ಗಾಳಿಗೆ ತೋರೆ ವಾಯವ್ಯ
ಮೊಲವಿನಿಂ ಜಲದಿನಪ್ಪುದು ವಾರುಣಂ ತಜ್ಜಲಕ್ಕೆ ಗಂಗಾಸ್ನಾನದಿಂ

ಹೀಗೆ ಇವುಗಳ ರೀತಿ ಕೇಳು ಎಂದನು. ೯. ಎಲೆ ಸಿದ್ಧರಾಮ, ಕೇಳು ಕೆಟ್ಟ ಪದಾರ್ಥಗಳನ್ನು ತಿನ್ನುವ, ಕರುವಿಲ್ಲದ, ರೋಗದಿಂದ ಕೂಡಿದ, ಬಲಹೀನವಾದ, ಅಂಗವಿಕಾರವುಳ್ಳ, ಅತಿಯಾಗಿ ತಿನ್ನುವ, ಬರೆ ಹಾಕಿರುವ, ಅಂಗಹೀನವಾದ, ನಿರ್ವೀರ್ಯವಾದ, ಬಂಜೆಯಾದ ಕೆಟ್ಟಲಕ್ಷಣಗಳುಳ್ಳ ಹಸುಗಳನ್ನು ಬಿಟ್ಟು ಉತ್ತಮ ಲಕ್ಷಣಗಳುಳ್ಳ ಹಸುಗಳು ಹಾಕಿದ ಸಗಣಿಯನ್ನು ನೆಲಕ್ಕೆ ಬೀಳುವ ಮೊದಲೇ ಆತುಕೊಂಡು ಅದನ್ನು ಅತಿಯಾದ ಭಕ್ತಿಯಿಂದ ಗ್ರಹಿಸುವುದು, ಉಂಡೆ ಮಾಡುವುದು, ಒಣಗಿಸುವುದು, ಸುಡುವುದು, ಶೋಧಿಸುವುದು ಮೊದಲಾದ ಅಭಿಮಂತ್ರಗಳಿಂದ, ೧೦. ಮಾಡಿದ ಭಸಿತವಿಲ್ಲದಿದ್ದರೆ ಬೇರೆಯವರು ಕೊಟ್ಟುದನ್ನು ಬಹಳ ಭಕ್ತಿಯಿಂದ ತೆಗೆದುಕೊಂಡು ತಲೆ, ಮುಖ, ಎದೆ, ಗುಹ್ಯ ಎರಡೂ ಕಾಲುಗಳು, ಮೈಗೆಲ್ಲಾ ಕ್ರಮವಾಗಿ ಈಶಾನ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತ ಎಂಬ ಶ್ರೇಷ್ಠವಾದ ಪಂಚಾಕ್ಷರಿಗಳಿಂದ ವಿಭೂತಿಸ್ನಾನದಿಂದ ಪರಿಶುದ್ಧನಾದವನಿಗೆ ಹುಟ್ಟು–ಸಾವಿನ ಬಂಧನವಿಲ್ಲ. ಸಿದ್ಧರಾಮ ನೀನು ಕೇಳು. ೧೧. ಬಿಸಿಲಿನಿಂದ ಕೂಡಿದ ಮಳೆಯಿಂದ ಮಾಡುವ ಸ್ನಾನ ದಿವ್ಯಸ್ನಾನ, ಗೋವಿನ ಗೊರಸಿನಿಂದ ಎದ್ದ ಭೂಮಿಯ ಧೂಳು ಗಾಳಿಯಲ್ಲಿ ಒಂದುಗೂಡಲು ವಾಯವ್ಯಸ್ನಾನ, ಪ್ರೀತಿಯಿಂದ ನೀರಿನಿಂದ ಮಾಡುವ ಸ್ನಾನ ವಾರುಣಸ್ನಾನ. ಆ ನೀರಿಗೆ ಗಂಗಾಸ್ನಾನಕ್ಕಿಂತ ಹೆಚ್ಚಾದ

CC-0. Jangamwadi Math Collection. Digitized by eGangotri

ಫಲಮಧಿಕವೀಶ್ವರಧ್ಯಾನಂ ಮನಸ್ನಾನ
ಮೆಲೆ ರಾಮ ಭಸ್ಮದಿಂದಪ್ಪುದಾಗ್ನೇಯಮಿವ
ರೊಳಗೆಲ್ಲವಾಗ್ನೇಯಮಲ್ಲದಿನ್ನಿಲ್ಲುತ್ತಮಸ್ನಾನ ಕೇಳೆಂದನು ೧೧

ಒರೆವೆನಾಲಿಪುದು ಭಸ್ಮೋದ್ಧೂಳನಂಗೆಯ್ದು
ಪರಿಶುದ್ಧನಾಗಿ ವರಮಧ್ಯಮಾಂಗುಷ್ಠಯುಗ
ಮಿರದನಾಮಿಕೆಗಳಿಂ ಧರಿಯಿಸು ತ್ರಿಪುಂಡ್ರಮಂ ತದ್ಧೃತಸ್ಥಾನಂಗಳು
ಶಿರದೊಳಗೆ ಶಿವ ಭಾಳದೊಳ್ ಮಹೇಶ್ವರ ಕರ್ಣ
ಕುರುರುದ್ರ ಚರಣದ್ವಯಂಗಳೊಳ್ ಶ್ರೀಕಂಠ
ವರಶಂಭು ಭುಜಯುಗದೊಳೀಶ ಸುಮಹಾದೇವ ವಕ್ಷದೊಳ್ ಘನಪಶುಪತಿ ೧೨

ವರನಾಭಿಯೊಳಗೆ ಶಂಕರ ಪೃಷ್ಠದೊಳ್ ವೃಷಭ
ವರಯಾನ ಕಕುದಿನೊಳ್ ಪರಮಾತ್ಮಮಂತ್ರದಿಂ
ಧರಿಯಿಪುದು ಪೂರ್ವೋಕ್ತದೇಕಾದಶಸ್ಥಳದೊಳಿಮ್ಮುಂದೆ ರಾಮ ಕೇಳು
ಪರಿಕಿಸಲ್ ಮೂರ್ಧ್ನ ಭಾಳ ಶ್ರವಣ ದೃಙ್ನಾಸ
ಪರಮಾಸ್ಯ ಬಾಹು ಭುಜ ಕುಚ ಕುಕ್ಷಿ ಮಣಿಬಂಧ
ಮುರುಪಾರ್ಶ್ವ ನಾಭಿ ಮೇಢ್ರೋತ್ಸೃಷ್ಠ ಜಾನು ಜಂಘೋರುಪಾಯ್ವಂಘ್ರಿಗಳಿವು ೧೩

ಫಲವು, ಈಶ್ವರಧ್ಯಾನ, ಮನಸ್ನಾನ, ಎಲೆ ಸಿದ್ಧರಾಮ ಭಸ್ಮದಿಂದಾದುದು ಆಗ್ನೇಯ ಸ್ನಾನ. ಇವುಗಳಲ್ಲೆಲ್ಲಾ ಆಗ್ನೇಯಸ್ನಾನವಲ್ಲದೆ ಶ್ರೇಷ್ಠವಾದದ್ದು ಬೇರೆಯಿಲ್ಲ ಕೇಳು ಎಂದನು. ೧೨. ಹೇಳುತ್ತೇನೆ ಕೇಳು, ಭಸ್ಮವನ್ನು ಬಳಿದುಕೊಂಡು ಪರಿಶುದ್ಧನಾಗಿ ಶ್ರೇಷ್ಠವಾದ ಮಧ್ಯದ ಎರಡು ಬೆರಳು ಮತ್ತು ಅನಾಮಿಕೆಗಳಿಂದ ಆಯಾ ಸ್ಥಳಗಳಲ್ಲಿ ಆಯಾ ದೇವರನ್ನು ಸ್ಮರಿಸಿ ತ್ರಿಪುಂಡ್ರವನ್ನು ಧರಿಸಬೇಕು. ತಲೆಯೊಳಗೆ ಶಿವ, ಹಣೆಯಲ್ಲಿ ಮಹೇಶ್ವರ, ಕಿವಿಯಲ್ಲಿ ಶ್ರೇಷ್ಠನಾದ ರುದ್ರ, ಎರಡೂ ಪಾದಗಳಲ್ಲಿ ಶ್ರೀಕಂಠ-ಶಂಭು, ಎರಡು ಭುಜಗಳಲ್ಲಿ ಈಶ್ವರ–ಮಹಾದೇವ, ಎದೆಯಲ್ಲಿ ಪಶುಪತಿ, ೧೩. ಹೊಕ್ಕಳಿನಲ್ಲಿ ಶಂಕರ, ಪೃಷ್ಠದಲ್ಲಿ ವೃಷಭ, ತುದಿಯಲ್ಲಿ ಪರಮಾತ್ಮ ಎಂಬ ಮಂತ್ರಗಳಿಂದ ಮೊದಲು ಹೇಳಿದ ಹನ್ನೊಂದು ಸ್ಥಳಗಳಲ್ಲಿ ಧರಿಸಬೇಕು, ಇನ್ನು ಮುಂದೆ ಕೇಳು ಸಿದ್ಧರಾಮ. ಪರಿಶೀಲಿಸಲು ತಲೆ, ಹಣೆ, ಕಿವಿ (೨), ಕಣ್ಣು (೨), ಮೂಗು (೨ ಹೊಳ್ಳೆಗಳು), ಮುಖ, ತೋಳು (೨), ಭುಜ (೨), ಸ್ತನ (೨), ಹೊಟ್ಟೆ, ಮುಂಗೈ (೨), ಪಕ್ಕೆ (೨), ಹೊಕ್ಕಳು, ಜನನೇಂದ್ರಿಯ, ಬೆನ್ನು, ಮುಂಡಿ, ಮೊಣಕಾಲುಗಳು (೨), ತೊಡೆ (೨), ಮೀನಖಂಡ (೨)

CC-0. Jangamwadi Math Collection. Digitized by eGangotri

ಮೂವತೆರಡುಂ ಧೃತಸ್ಥಾನವಿವಕಾರದೊಡೆ
ಭಾವಿಸು ಶಿರೋಭಾಳಕರ್ಣಗಳ ಬಾಹು ಸ
ದ್ಭಾವದೊಳ್ ಮಣಿಬಂಧ ಹೃದಯ ಪೃಷ್ಠೋನ್ನಾಭಿ ಭುಜಪೋಷ್ಠವೆಂದೆನಿಸುವ
ಈ ವಿಮಲ ಷೋಡಶಸ್ಥಾನವಿವಕಾರದೊಡೆ
ತೀವುವುದು ಭಾಳಗಳ ಭುಜ ಹೃದಯ ನಾಭಿಯುಪ
ರಾವಳಿಯೆನಿಪ್ಪಷ್ಟಮಸ್ಥಾನವಿವನುಳಿಸಬಾರದಾಲಿಪುದೆಂದನು ೧೪

ಇರದೆ ಭೂತ ಪ್ರೇತ ಘನತರಾಪಸ್ಮಾರ
ಪರಮಪೈಶಾಚತತಿಜಟ್ಟಿ ಗಂಭೀರರುರು
ತರಬ್ರಹ್ಮರಾಕ್ಷಸಾದ್ಯಖಿಳ ದುಷ್ಟಗ್ರಹಕೆ ದುಷ್ಟಮೃಗಸಂದೋಹಕೆ
ಉರಗ ವೃಶ್ಚಿಕಭಯುಂ ಸಿಡಿಲ ಭಯ ರಾಜಾಗ್ನಿ
ವರಚೋರ ರೋಗ ಭಯಚಯಕಾ ವಿಭೂತಿಯುದು
ಬೆರಲ ಸೋಂಕಿದೊಡೆ ಪರಿಹರಿಸುವುದದೇ ಮಹೇಶ್ವರರೂಪವಹುದೆಂದನು ೧೫

ರಾಮ ಕೇಳ್ ಮುಂದೆ ರುದ್ರಾಕ್ಷಿಯ ಮಹತ್ತ್ವವಂ
ಕಾಮಮದಮರ್ದನಂ ಪೂರ್ವದೊಳ್ ತ್ರಿಪುರನಿ
ರ್ಧೂಮಮಂ ಮಾಳ್ಪಂದು ಪುಟ್ಟಿದುವು ತನ್ನಯನಜಲದಿಂದೆ ಶಿಖಿಯೊಳೊಂದು
ಪ್ರೇಮದಿಂ ನೆತ್ತಿಯೊಳ್ ಮೂರ್ ಶಿರಕೆ ಷಟ್ತ್ರಿಂಶ
ದಾ ಮಹಾಕರಣಕ್ಕೆಯೊಂದೊಂದು ಗಳದೊಳು
ದ್ದಾಮ ದ್ವಾತ್ರಿಂಶತ್ತು ರೋಮಾಳಿಗೈವತ್ತು ನೂರೆಂಟುಮುಪವೀತಕೆ ೧೬

ಗುದ, ಪಾದಗಳು (೨) ಇವು ೧೪. ಮೂವತ್ತೆರಡು ಧರಿಸತಕ್ಕ ಸ್ಥಾನಗಳು. ಇವಕ್ಕೆ ಸಾಧ್ಯವಿಲ್ಲದಿದ್ದಲ್ಲಿ ತಲೆ, ಹಣೆ, ಕಿವಿ, ಕುತ್ತಿಗೆ, ತೋಳು, ಮುಂಗೈ, ಎದೆ, ಪೃಷ್ಠ, ಹೊಕ್ಕುಳು, ಭುಜ, ತುಟಿ ಎನ್ನುವ ಈ ಹದಿನಾರು ಸ್ಥಾನಗಳಿಗೆ ಧರಿಸಬೇಕು. ಇದಕ್ಕೂ ಸಾಧ್ಯವಿಲ್ಲದಿದ್ದಲ್ಲಿ ಹಣೆ, ಕುತ್ತಿಗೆ, ಭುಜ, ಎದೆ, ಹೊಕ್ಕುಳು, ಬೆನ್ನು (೨) ಎಂಬ ಈ ಎಂಟು ಸ್ಥಾನಗಳಲ್ಲಿ ತಪ್ಪದೆ ಧರಿಸಬೇಕು ಕೇಳು ಎಂದನು. ೧೫. ಭೂತ, ಪ್ರೇತ, ಭಯಂಕರವಾದ ಅಪಸ್ಮಾರ, ಪಿಶಾಚ ಸಮೂಹ, ಕ್ಷುದ್ರದೇವತೆ ಜಟ್ಟಿ, ಬ್ರಹ್ಮರಾಕ್ಷಸ ಮೊದಲಾದ ಎಲ್ಲ ದುಷ್ಟಗ್ರಹಗಳಿಗೂ, ದುಷ್ಟ ಮೃಗಗಳ ಸಮೂಹಕ್ಕೆ ಹಾವು-ಚೇಳುಗಳ ಭಯ, ಸಿಡಿಲಿನ ಭಯ, ರಾಜ, ಬೆಂಕಿ, ಕಳ್ಳ, ರೋಗ ಮೊದಲಾದ ಭಯಗಳ ಸಮೂಹ ವನ್ನು ಈ ವಿಭೂತಿಯು ಬೆರಳಿನಲ್ಲಿ ಸೋಕಿದ ಕೂಡಲೇ ಪರಿಹರಿಸುವುದು. ಇದೇ ಮಹೇಶ್ವರನ ಪ್ರತಿರೂಪ ಎಂದನು. ೧೬. ರಾಮ ಮುಂದೆ ರುದ್ರಾಕ್ಷಿಯ ಮಹತ್ವ ವನ್ನು ಕೇಳು. ಶಿವನು ಹಿಂದೆ ತ್ರಿಪುರವನ್ನು ಬೂದಿ ಮಾಡುವ ಕಾಲದಲ್ಲಿ ಅವನ ಕಣ್ಣಿನ ನೀರಿನಿಂದ ಇವು ಹುಟ್ಟಿದುವು. ಜಡೆಯಲ್ಲೊಂದು, ನೆತ್ತಿಯಲ್ಲಿ ಮೂರು, ತಲೆಗೆ ಮೂವತ್ತಾರು, ಆ ಕಿವಿಗಳಿಗೆ ಒಂದೊಂದು, ಕೊರಳಿಗೆ ಮೂವತ್ತೆರಡು, ಕೂದಲುಗಳಿಗೆ

CC-0. Jangamwadi Math Collection. Digitized by eGangotri

ವರಭುಜದ್ವಯಕೆ ಪದಿನಾರು ಮಣಿಬಂಧಕ್ಕೆ
ತರಣಿಸಂಖ್ಯೆಗಳಕ್ಷಮಾಲೆಗಂ ನೂರೆಂಟು
ಪರಿಗಣನೆಯಿಂದೆ ತತ್ತತ್ಸ್ಥಳದೊಳಕ್ಕರಿಂದೀಶಸ್ವರೂಪವೆಂದು
ಧರಿಸೆ ಶಿರದೊಳ್ ಕೋಟಿ ದಶಕೋಟಿ ಕಿವಿಗಳ್ಗೆ
ಪರಮಶತಕೋಟಿ ಕಂಠಕೆ ಸಹಸ್ರಂಕೋಟಿ
ಯುರುಬಾಹುಗಳ್ಗೆ ಪ್ರಮಾಣದಫಲಂ ತಿಳಿಯೆ ಮಣಿಬಂಧದೊಳ್ ಧರಿಸಲು ೧೭

ಪರಿಕಿಸಲ್ ಮೋಕ್ಷಮದು ಪಂಚವಿಂಶತಿಮಣಿಯ
ಸರದಿಂದಮಷ್ಟವಿಂಶತಿಗೆ ಪೌಷ್ಟಿಕೆಯಾಲಿ
ಸಿರದೆಯಿಪ್ಪತ್ತೇಳನುಳ್ಳ ಸರದಿಂ ಭುಕ್ತಿ ಮೂವತ್ತು ಮೇಲಾರರಿಂ
ಸಿರಿದರ್ಥಮಹುದು ಮೂವತ್ತೆರಡನುಳ್ಳಮಳ
ಸರದಿಂದೆ ವಿಜಯಮಪ್ಪುದು ಪಂಚದಶಕದಿಂ
ದರಿದೆನಿಸುವಾಭಿಚಾರಕಮಹುದು ಕೇಳೆಂದು ಚೆನ್ನಬಸವಂ ನುಡಿದನು ೧೮

ಒರೆವೆನಾಲಿಸು ರಾಮ ಪ್ರಣಮದುತ್ಪತ್ತಿಯಂ
ಪರಶಿವನ ಚಿತ್ತೆ ಚಿತ್ಕ್ರಣವಮಾಯ್ತದರಿಂದ
ಲುರು ನಾದ ಬಿಂದು ಕಳೆಗಳ್ ಪುಟ್ಟಿದುವು ನಾದ ಬಿಂದು ಕಳೆಗಳ್ ಕ್ರಮದೊಳು

ಐವತ್ತು, ಉಪದೀತಕ್ಕೆ ನೂರೆಂಟು, ೧೭. ಶ್ರೇಷ್ಠವಾದ ಎರಡು ಭುಜಗಳಿಗೆ ಪದಿನಾರು, ಮುಂಗೈಗೆ ಹನ್ನೆರಡು, ಜಪಮಾಲೆಗೆ ನೊರೆಂಟು ಎನ್ನುವ ಲೆಕ್ಕದಿಂದ ಆಯಾ ಸ್ಥಳಗಳಲ್ಲಿ ಪ್ರೀತಿಯಿಂದ ಈಶ್ವರಸ್ವರೂಪ ಎಂದು ಧರಿಸಲು ತಲೆಯಲ್ಲಿ ಕೋಟಿ, ಕಿವಿಗಳಿಗೆ ಹತ್ತು ಕೋಟಿ, ಕುತ್ತಿಗೆಗೆ ನೂರುಕೋಟಿ, ಭುಜಗಳಿಗೆ ಸಾವಿರಕೋಟಿ ಪ್ರಮಾಣದ ಫಲವುಂಟಾಗುತ್ತದೆ. ಮುಂಗೈನಲ್ಲಿ ಧರಿಸಿದರೆ ಲೆಕ್ಕವಿಲ್ಲದಷ್ಟು ಫಲ ಉಂಟಾಗುತ್ತದೆ. ೧೮. ಆಲೋಚಿಸಲು ಇಪ್ಪತ್ತೈದು ಮಣಿಯ ಸರ ಧರಿಸಿದರೆ ಮೋಕ್ಷವು. ಇಪ್ಪತ್ತೆಂಟರ ಸರದಿಂದ ದೇಹಕ್ಕೆ ಪುಷ್ಟಿಯು. ಇನ್ನು ಕೇಳು, ಇಪ್ಪತ್ತೇಳು ಮಣಿಯುಳ್ಳ ಸರ ಧರಿಸಿದರೆ ಮೃಷ್ಟಾನ್ನ ಭೋಜನವು. ಮೂವತ್ತಾರರ ಸರ ಧರಿಸಿದರೆ ಬಹಳ ಐಶ್ವರ್ಯ ದೊರೆಯುತ್ತದೆ. ಮೂವತ್ತೆರಡುಳ್ಳ ಶ್ರೇಷ್ಠವಾದ ಸರದಿಂದ ಜಯ ಉಂಟಾಗುತ್ತದೆ. ಐವತ್ತರ ಸರದಿಂದ ವ್ಯಾಪಕತೆಯುಂಟಾಗುವುದು ಕೇಳು ಎಂದು ಚೆನ್ನಬಸವಣ್ಣನು ಹೇಳಿದನು. ೧೯. ಓಂಕಾರದ ಉತ್ಪತ್ತಿಯನ್ನು ಹೇಳುತ್ತೇನೆ ಕೇಳಯ್ಯಾ ಸಿದ್ಧರಾಮ, ಪರಶಿವನ ಚಿತ್ತೆ ಚಿತ್ಕ್ರಣವ ಆಯಿತು. ಅದರಿಂದ ಶ್ರೇಷ್ಠವಾದ ನಾದ-ಬಿಂದು-ಕಳೆಗಳು ಹುಟ್ಟಿದುವು. ಕ್ರಮವಾಗಿ ನಾದ-ಬಿಂದು-ಕಳೆಗಳೇ ಅ ಕಾರ,

CC-0. Jangamwadi Math Collection. Digitized by eGangotri

ಇರದಕಾರೋಕಾರ ವರಮಕಾರತ್ರಯುಂ
ಪರಿಕಿಸಲವೊಂದಾಗಲೋಂಕಾರವೆಂದೆನಿಪ
ಪರತತ್ತ್ವಪ್ರಣವಮಾದುದು ಪ್ರಣವದಿಂ ಪಂಚಲಕ್ಷಣಂ ಜನಿಯಿಸಿದುವು ೧೯

ತಾರಕಂ ದಂಡಕಂ ಕುಂಡಲಮುಮರ್ಧೇಂದು
ವಾರಯ್ಯೆ ಬಿಂದುವುಂ ಪಂಚಲಕ್ಷಣಮಿಂತು
ತಾರಕಾಕಾರಂ ನಕಾರಂ ಮಕಾರಮೇ ದಂಡಕಂ ಕುಂಡಲಮದು
ತೋರುವ ಶಿಕಾರಮರ್ಧೇಂದುವೆ ವಕಾರಮದ
ಸೇರಿರ್ಪ ಬಿಂದುವೆ ಯಕಾರಮಿಂತೈದು ಕೇಳ್
ತಾರಕಬ್ರಹ್ಮಮೆಂದೆನಿಪ ಚಿತ್ಪ್ರಣವದಿಂದಾದುವವನಿನ್ನಾಲಿಸು ೨೦

ಪಂಚಾಕ್ಷರಂಗಳಿಂದಾದುವೆಲೆ ರಾಮ ಕೇಳ್
ಪಂಚಸಂಜ್ಞಾಳಿಯಾ ಪಂಚಸಂಜ್ಞಾಳಿಯೇ
ಪಂಚಸಾದಾಖ್ಯಮಾ ಪಂಚಸಾದಾಖ್ಯಮೇ ಪಂಚವದನಂಗಳವರಿಂ
ಪಂಚಕಲೆಯಾದುವಾ ಪಂಚಕಲೆಗಳ್ ಮೆರೆವ
ಪಂಚಶಕ್ತಿಗಳೆನಿಪರವರಿಂದಲಾದುವಾ
ಪಂಚಭೂತಂಗಳವರಿಂ ಪಂಚವಿಂಶತಿಸುತತ್ತ್ವಂಗಳುದಯಿಸಿದುವು ೨೧

ಇಂತೆಸೆವ ಪ್ರಣವಪಂಚಾಕ್ಷರೀಮಂತ್ರಮಿದ
ನಂತಮಗಣಿತಕೋಟಿಮಂತ್ರಕ್ಕೆ ಮಾತೆಯಿದ
ಸಂತತಂ ಜಪಿಸುವಂ ಸಾಕ್ಷಾಚ್ಛಿವಂ ಸಿದ್ಧರಾಮ ಕೇಳೀ ಮಂತ್ರದಿಂ

ಓ ಕಾರ, ಶ್ರೇಷ್ಠವಾದ ಮ ಕಾರ ತ್ರಯಗಳು. ಪರೀಕ್ಷಿಸಲು ಅವು ಒಂದಾಗಿ ಓಂಕಾರವೆನ್ನಿಸುವ ಪರತತ್ತ್ವಪ್ರಣವ ಆಯಿತು. ಪ್ರಣವದಿಂದ ಪಂಚ ಲಕ್ಷಣಗಳು ಹುಟ್ಟಿದುವು. ೨೦. ತಾರಕ, ದಂಡಕ, ಕುಂಡಲ, ಅರ್ಧಚಂದ್ರ, ಬಿಂದು ಎಂಬ ಪಂಚಲಕ್ಷಣಗಳಾದುವು. ಈ ರೀತಿ ತಾರಕಾಕೃತಿಯೇ ನ ಕಾರವು. ಮ ಕಾರವೇ ದಂಡಕವು. ಕುಂಡಲವು ಶಿ ಕಾರವು, ಅರ್ಧಚಂದ್ರವೇ ವ ಕಾರವು. ಅದನ್ನು ಸೇರಿರುವ ಬಿಂದುವೇ ಯ ಕಾರವು. ಕೇಳು ಈ ರೀತಿ ಐದು ತಾರಕಬ್ರಹ್ಮವೆನ್ನಿಸುವ ಚಿತ್ಪ್ರಣವದಿಂದಾದುವು, ಇನ್ನು ಕೇಳು, ೨೧. ಎಲೆ ರಾಮ ಕೇಳು, ಪಂಚಾಕ್ಷರಗಳಿಂದ ಪಂಚಸಂಜ್ಞಾಳಿಗಳಾದುವು. ಪಂಚ ಸಂಜ್ಞಾಳಿಯಿಂದ ಪಂಚಸಾದಾಖ್ಯಗಳು. ಆ ಪಂಚಸಾದಾಖ್ಯಗಳೇ ಪಂಚವದನಗಳು. ಅವು ಗಳಿಂದ ಪಂಚಕಲೆಯಾದುವು. ಪಂಚಕಲೆಗಳು ಪ್ರಖ್ಯಾತರಾದ ಪಂಚಶಕ್ತಿಗಳೆನಿಸುವರು. ಅದರಿಂದ ಪಂಚಭೂತಗಳು ಆದುವು. ಅವರಿಂದ ಇಪ್ಪತ್ತೈದು ಉತ್ತಮ ತತ್ತ್ವಗಳು ಹುಟ್ಟಿದುವು. ೨೨. ಈ ರೀತಿ ಖ್ಯಾತವಾದ ಪ್ರಣವಪಂಚಾಕ್ಷರೀ ಮಂತ್ರವು ಅಸಂಖ್ಯಾತ ವಾದ ಕೋಟಿ ಮಂತ್ರಕ್ಕೆ ತಾಯಿ. ಇದನ್ನು ಸದಾ ಜಪಿಸುವವನು ಸಾಕ್ಷಾತ್ ಶಿವ, ಸಿದ್ಧ ರಾಮ ಕೇಳು. ಈ ಮಂತ್ರದಿಂದ ಮೊದಲು ಎಲ್ಲ ಉಪಕರಣಗಳನ್ನೂ ಶುದ್ಧಿಮಾಡಿ

CC-0. Jangamwadi Math Collection. Digitized by eGangotri

ಮುಂತೆ ಸಕಲೋಪಕರಣಂಗಳಂ ಶುದ್ಧಿಯಿಂ
ಸಂತಸದೆ ಮಾಡಿ ತದನಂತರದೆ ಶಿವಪೂಜೆ
ಯಂತಧಿಕಭಕ್ತಿಯಿಂ ಮಾಳ್ಪುದದರಿರವ ನೀಂ ಕೇಳೆಂದು ನಿರವಿಸಿದನು ೨೨

ಹರುಷದಿಂದರ್ಘ್ಯ ಪಾದ್ಯಾಚಮಾನಂಗಳಿಂ
ದಿರದೆ ಗಂಧೋದಕಂ ಪುಷ್ಪೋದಕಂ ಸುವಿ
ಸ್ತರದ ಮಂತ್ರೋದಕಂ ಸ್ವರ್ಣ ರತ್ನೋದಕಾದ್ಯಖಿಳೋದಕಂಗಳಿಂದೆ
ಪರಿಕಿಸಲ್ ಪಂಚಾಮೃತಾಭಿಷೇಕಂಗಳಿಂ
ಪರಿವಿಡಿಯೊಳಭಿಷೇಕವಂ ಮಾಡಿ ಬಳಿಕ ತ
ತ್ಪರಮಪಾದೋದಕಂಗೊಂಬುದೆನಲದನೆನಗೆ ವಿಸ್ತರಿಸಿ ಪೇಳೆಂದನು ೨೩

ಆದೊಡಿನ್ನಾಲಿಸೆಲೆ ರಾಮೇಶ ನೀಂ ಕೇಳ್ದ
ಪಾದೋದಕಂಗಳಿರವೆಂತೆನಲ್ ತಾಂ ತ್ರಿವಿಧ
ಭೇದದಿಂ ವರ್ತಿಸುಗು ಗುರುವಿನ ಸುಪಾದೋದಕಂ ತಿಳಿಯೆ ಕರುಣೆಜಲವು
ಸಾದರದೊಳೀ ಮಹಾಲಿಂಗದಿಂದಾದ ತ
ತ್ಪಾದೋದಕಂ ವಿನಯಜಲಮಮಳಜಂಗಮದ
ಪಾದೋದಕಂ ಸಮತೆಜಲವೆಂದು ಕರುಣದಿಂ ಚೆನ್ನಬಸವಂ ಪೇಳ್ದನು ೨೪

ಗುರು ಲಿಂಗ ಜಂಗಮದ ಪಾದೋದಕಂಗಳಿಂ
ಪರಿವಿಡಿಯು ಸಂಚಿತಂ ಪ್ರಾರಬ್ಧವಾಗಾಮಿ
ಯುರುತರದ ಕರ್ಮಂಗಳಿರದೆ ಪೋಪುವು ಕೇಳ್ವುದೆನಲದರ ಭೇದಂಗಳ

ಅನಂತರ ಅಧಿಕಭಕ್ತಿಯಿಂದ ಶಿವಪೂಜೆಯನ್ನು ಮಾಡಬೇಕು. ಅದರ ರೀತಿಯನ್ನು ಕೇಳು ಎಂದು ನಿರೂಪಿಸಿದನು. ೨೩. ಸಂತೋಷದಿಂದ ಅರ್ಘ್ಯಪಾದ್ಯ, ಆಚಮನಗಳಿಂದ ಗಂಧೋದಕ, ಪುಷ್ಪೋದಕ, ಮಂತ್ರೋದಕ, ಚಿನ್ನ-ರತ್ನೋದಕ ಮೊದಲಾದ ಜಲಗಳಿಂದ ಪಂಚಾಮೃತಾಭಿಷೇಕಗಳಿಂದ ಕ್ರಮವಾಗಿ ಅಭಿಷೇಕ ಮಾಡಿ ಅನಂತರ ಆ ಪರಮಶ್ರೇಷ್ಠವಾದ ಪಾದೋದಕವನ್ನು ತೆಗೆದುಕೊಳ್ಳಬೇಕು ಎನ್ನಲು ಅದನ್ನು ನನಗೆ ವಿಸ್ತರಿಸಿ ಹೇಳು ಎಂದನು. ೨೪. ಹಾಗಾದರೆ ಇನ್ನು ಕೇಳಯ್ಯ ಸಿದ್ಧರಾಮ, ನೀನು ಕೇಳಿದ ಪಾದೋದಕಗಳ ಲಕ್ಷಣಗಳು ಏನೆಂದರೆ ಅವು ಮೂರು ರೀತಿ ಭೇದಗಳಿಂದ ಕೂಡಿದೆ. ಗುರುವಿನ ಪಾದೋದಕವು ಕರುಣಜಲವು. ಆದರದಿಂದ ಈ ಮಹಾಲಿಂಗದಿಂದಾದ ಅದರ ಪಾದೋದಕವು ವಿನಯ ಜಲ. ಶ್ರೇಷ್ಠವಾದ ಜಂಗಮದ ಪಾದೋದಕ ಸಮತೆ-ಜಲವೆಂದು ಚೆನ್ನಬಸವನು ಹೇಳಿದನು. ೨೫. ಗುರು ಲಿಂಗ ಜಂಗಮದ ಪಾದೋದಕಗಳಿಂದ ಅನುಕ್ರಮವಾಗಿ ಸಂಚಿತ, ಆಗಾಮಿ, ಪ್ರಾರಬ್ಧ ಎಂಬ ಕರ್ಮಗಳು ನಾಶವಾಗುವುವು ಕೇಳು ಎನ್ನಲು ಅದರ ಭೇದಗಳನ್ನು ವಿವರಿಸೆಂದನು. ಅದಕ್ಕೆ ಚೆನ್ನ

CC-0. Jangamwadi Math Collection. Digitized by eGangotri

ವಿರಚಿಸೆನೆ ಜನನದಜ್ಞಾನಮಂ ಕಳೆದು ಸ
ತ್ಪರಮಸುಜ್ಞಾನಮಂ ಕೊಡುವುದೇ ಸಂಚಿತಂ
ನಿರುತದಿಂದಿಹಲೋಕಭೋಗಮಂ ಬಿಡಿಸಿ ಶಿವಲೋಕಪದಮಂ ಕೊಡುವುದೇ ೨೫

ಪರಿಕಿಸಲ್ ಪ್ರಾರಬ್ಧಮಿದು ಭವಭವಾಂತರದೆ
ಬರಲೀಯದಿಹಪರಕ್ಕೆಡೆಯಾಡಗೊಡದಾಗ
ಪರಶಿವನೊಳೊಂದಿಸುವುದಾಗಾಮಿ ಕೇಳಿನ್ನು ತ್ರಿವಿಧೋದಕಂಗಳಿರವ
ಪರಮಪಂಚಾಕ್ಷರೀಮಂತ್ರದಿಂ ತನ್ನ ಮನೆ
ಗಿರದೆ ತಂದುದೆ ಸುಮಂತ್ರೋದಕಂ ತಜ್ಜಲದಿ
ಹರುಷದಿಂದಿಷ್ಟಲಿಂಗಕೆ ಮಜ್ಜನಕ್ಕೆರೆದುದೇ ಪರಮಪಾದೋದಕಂ ೨೬

ಲಿಂಗಕೆ ಸಮರ್ಪಿಸಿದುದೇ ಪ್ರಸಾದೋದಕಂ
ಹಿಂಗದೀ ತ್ರಿವಿಧೋದಕಂಗಳಿಂ ಮಾಳ್ಪ ಕ
ಜ್ಜಂಗಳಂ ಪೇಳ್ವೆನೀ ಮಂತ್ರೋದಕದೊಳೆ ಪಾಕಪ್ರಯತ್ನಂಗೆಯ್ವುದು
ಮಂಗಳಮೆನಿಪ್ಪ ಪಾದೋದಕದೆ ಮುಖಮಜ್ಜ
ನಂಗೈವುದೀ ಪ್ರಸಾದೋದಕವನೀಂಟುವುದು
ಲಿಂಗವಂತಂಗಿವೇ ಮುಖ್ಯಮಿನ್ನಾಲಿಸೈ ಲಿಂಗಪೂಜಾವಿಧಿಯನು ೨೭

ಅಷ್ಟವಿಧಪೂಜೆಯಿಂದುಪಚಾರಷೋಡಶದೊ
ಳಿಷ್ಟಲಿಂಗವನೆ ಪೂಜಿಸಿ ಮಹಾಭಕ್ತಿಯಿಂ
ಮೃಷ್ಟಾನ್ನಮಂ ಸಮರ್ಪಿಸಿ ತತ್ಪ್ರಸಾದಮಂ ಸುಯಿಧಾನದಿಂದೆ ಕೊಡೆ

ಬಸವಣ್ಣನು, ಹುಟ್ಟಿನ ಅಜ್ಞಾನವನ್ನು ಕಳೆದು ಶ್ರೇಷ್ಠವಾದ ಸುಜ್ಞಾನವನ್ನು ಕೊಡುವುದೇ ಸಂಕುಚಿತವು. ನಿರುತವಾಗಿ ಈ ಪ್ರಪಂಚದ ಭೋಗವನ್ನು ಬಿಡಿಸಿ ಶಿವಲೋಕಪದವನ್ನು ಕೊಡುವುದೇ ೨೬. ಪರೀಕ್ಷಿಸಲು ಪ್ರಾರಬ್ಧಕರ್ಮವು. ಜನ್ಮಜನ್ಮಾಂತರಗಳಲ್ಲಿ ಬರಲು ಬಿಡುವುದಿಲ್ಲ. ಇಹ-ಪರಗಳಿಗೆ ಓಡಾಡಲು ಬಿಡದು, ಆ ಪರಶಿವನೊಡನೆ ಸೇರಿಸುವುದು–ಇದೇ ಆಗಾಮಿಕರ್ಮ. ಇನ್ನು ತ್ರಿವಿಧೋದಕಗಳ ಇರವನ್ನು ಕೇಳು, ಶ್ರೇಷ್ಠವಾದ ಪಂಚಾಕ್ಷರೀಮಂತ್ರದಿಂದ ತನ್ನ ಮನೆಗೆ ತಂದದ್ದೇ ಒಳ್ಳೆಯ ಮಂತ್ರೋದಕ. ಉದಕದಿಂದ ಸಂತೋಷದಿಂದ ಇಷ್ಟಲಿಂಗಕ್ಕೆ ಮಜ್ಜನಕ್ಕೆಎರೆದುದೇ ಶ್ರೇಷ್ಠವಾದ ಪಾದೋದಕವು. ೨೭. ಲಿಂಗಕ್ಕೆ ಸಮರ್ಪಿಸಿದುದೇ ಪ್ರಸಾದೋದಕ. ಈ ತ್ರಿವಿಧವಾದ ಜಲಗಳಿಂದ ಮಾಡುವ ಕೆಲಸವನ್ನು ಹೇಳುತ್ತೇನೆ. ಈ ಮಂತ್ರಜಲದಿಂದ ಅಡಿಗೆಗೆ ಪ್ರಯತ್ನ ಮಾಡುವುದು. ಮಂಗಳವೆನ್ನಿಸುವ ಪಾದೋದಕದಿಂದ ಮುಖಮಜ್ಜನ ಮಾಡುವುದು. ಪ್ರಸಾದೋದಕವನ್ನು ಕುಡಿಯುವುದು, ಲಿಂಗವಂತನಿಗೆ ಇದೇ ಮುಖ್ಯವಾದುದು. ಇನ್ನು ಲಿಂಗಪೂಜಾವಿಧಿಯನ್ನುಕೇಳಯ್ಯಾ. ೨೮. ಎಂಟು ವಿಧವಾದ ಪೂಜೆಯಿಂದ, ಹದಿನಾರು ರೀತಿಯ ಉಪಚಾರದಿಂದ ಇಷ್ಟ-ಲಿಂಗವನ್ನು ಪೂಜಿಸಿ ಮಹಾಭಕ್ತಿಯಿಂದ ಮೃಷ್ಟಾನ್ನವನ್ನು ಸಮರ್ಪಿಸಿ, ಆ ಪ್ರಸಾದವನ್ನು ಎಚ್ಚರಿಕೆಯಿಂದ, ನಿಷ್ಠೆಯಿಂದ ತಿಂದು ನೀರನ್ನು ದೇಹಕ್ಕೆ ಸಂತೋಷ

CC-0. Jangamwadi Math Collection. Digitized by eGangotri

ನಿಷ್ಠೆಯಿಂ ಸವಿದು ತದ್ರವವುನಿರದಂಗಕ್ಕೆ
ಹೃಷ್ಟಮಾನಸನಾಗಿ ಲೇಪಿಸುವುದೆನೆ ಕೇಳು
ತೆಷ್ಟುವಿಧವಿಾ ಪ್ರಸಾದಂ ತಿಳಿಯೆ ಪೇಳ್ವುದೆನೆ ಕೃಪೆಯೊಳೊಲಿದಿಂತೆಂದನು ೨೮

ಸಿದ್ಧರಾಮೇಶ ಕೇಳ್ವುದು ತತ್ಪ್ರಸಾದಮದು
ಶುದ್ಧ ಸಿದ್ಧ ಪ್ರಸಿದ್ಧಮೆಂದು ಮೂರುಬಗೆ
ಶುದ್ಧಮೇ ಗುರುಭುಕ್ತಶೇಷಮಿಾ ಶಿವಲಿಂಗಕರ್ಪಿಸಿದುದೇ ತಿಳಿಯಲು
ಸಿದ್ಧಮದು ಜಂಗಮಸುಭುಕ್ತಶೇಷವೆ ಸುಪ್ರ
ಸಿದ್ಧಮೆನೆ ಕೇಳ್ದೆಲ್ಲಮಂ ತಿಳಿಯೆ ಪೇಳ್ದೆನ್ನ
ನುದ್ಧರಿಸಿದ್ಯೆ ಗುರುವೆ ಶಿವಪೂಜೆಯಂ ಮಾಡುವಂದಮಂ ಪೇಳೆಂದನು ೨೯

ಆದೊಡೀ ಶಿವಪೂಜೆಯಂ ಮಾಳ್ಪುದೇ ತ್ರಿವಿಧ
ಭೇದಮವು ರಾಜಸಂ ತಾಮಸಂ ಸಾತ್ತ್ವಿಕಂ
ವೇದಾಗಮಂಗಳಂ ಮನ್ನಿಸದೆ ಮನಕೆ ಬಂದಂತರ್ಚಿಪುದೆ ರಾಜಸಂ
ವೇದಾಗಮಂಗಳಹುದೆಂದುದಲ್ಲೆಂದುದಂ
ಮಾದು ಮನಬಂದಂತೆ ಪೂಜಿಪುದೆ ತಾಮಸಂ
ವೇದಾಗಮೋಕ್ತಿಯಿಂ ಭಕ್ತಿಯಿಂದರ್ಚಿಪುದೆ ಸಾತ್ತ್ವಿಕಮದೆಂದರಿವುದು ೩೦

ಇನ್ನಾಲಿಸೈ ಶುದ್ಧ ಮಿಶ್ರ ಸಂಕೀರ್ಣಮಂ
ಬುನ್ನತಜ್ಞಾನಪೂಜಾವಿಧಿಯನೊಲವಿನಿಂ
ತನ್ನ ಲಿಂಗದೊಳೆಸೆವಖಂಡಪರಿಪೂರ್ಣತೇಜೋರಾಶಿಯೆನಿಪ ಶಿವನಂ

ಚಿತ್ತನಾಗಿ ಬಳಿದುಕೊಳ್ಳುವುದು ಎನ್ನಲು ಈ ಪ್ರಸಾದವು ಎಷ್ಟು ವಿಧವೆನ್ನು ವುದನ್ನು ತಿಳಿಯುವಂತೆ ಹೇಳು ಎಂದನು. ಚೆನ್ನಬಸವನು ಕೃಪೆಯಿಂದ ಒಲಿದು ಹೀಗೆಂದನು. ೨೯. ಸಿದ್ಧರಾಮೇಶ ಕೇಳು, ಆ ಪ್ರಸಾದವು ಶುದ್ಧ, ಸಿದ್ಧ, ಪ್ರಸಿದ್ಧ ವೆಂದು ಮೂರು ಬಗೆ. ಗುರುವು ತಿಂದುಳಿದುದೇ ಶುದ್ಧವು. ಶಿವಲಿಂಗಕ್ಕೆ ಅರ್ಪಿಸಿ ದುದೇ ಸಿದ್ಧವು. ಜಂಗಮರು ತಿಂದುಳಿದುದೇ ಸುಪ್ರಸಿದ್ಧ ಎನ್ನಲು ಎಲ್ಲವನ್ನೂ ತಿಳಿಯ ಹೇಳಿ ನನ್ನನ್ನು ಉದ್ಧಾರ ಮಾಡಿದೆಯಯ್ಯಾ ಗುರುವೇ. ಶಿವಪೂಜೆಯನ್ನು ಮಾಡುವ ರೀತಿಯನ್ನು ಹೇಳು ಎಂದನು. ೩೦. ಹಾಗಾದರೆ ಈ ಶಿವಪೂಜೆಯನ್ನು ಮಾಡು ವುದೇ ರಾಜಸ, ತಾಮಸ, ಸಾತ್ವಿಕ ಎಂದು ಮೂರು ರೀತಿ ವೇದಾಗಮಗಳನ್ನು ಲೆಕ್ಕಿಸದೆ ಮನಸ್ಸಿಗೆ ಬಂದಂತೆ ಪೂಜಿಸುವುದೇ ರಾಜಸ. ವೇದಾಗಮಗಳು ಸರಿಯೆಂದು ಹೇಳಿ ದುದನ್ನೂ–ಅಲ್ಲವೆಂದು ಹೇಳಿದುದನ್ನೂ ಆಯ್ದು ಮನಸ್ಸಿಗೆ ಬಂದಂತೆ ಪೂಜೆಮಾಡುವುದು ತಾಮಸ. ವೇದಾಗಮದಲ್ಲಿ ಹೇಳಿದಂತೆ ಭಕ್ತಿಯಿಂದ ಪೂಜಿಸುವುದೇ ಸಾತ್ತ್ವಿಕ ಎಂದು ತಿಳಿಯುವುದು. ೩೧. ಶುದ್ಧ, ಮಿಶ್ರ, ಸಂಕೀರ್ಣ ಎಂಬ ಉನ್ನತ ಜ್ಞಾನ ಪೂಜಾವಿಧಿ ಯನ್ನು ಇನ್ನು ಕೇಳಯ್ಯಾ. ತನ್ನ ಲಿಂಗದಲ್ಲಿ ಅಖಂಡ ಪರಿಪೂರ್ಣ ತೇಜೋರಾಶಿಯಾದ

CC-0. Jangamwadi Math Collection. Digitized by eGangotri

ನನ್ನಿಯಿಂ ಭಾವಿಸುತ್ತರ್ಚಿಪುದೆ ಶುದ್ಧ ಮಿರ
ದನ್ನೋಡೆ ತಲ್ಲಿಂಗದಿಂ ಪಂಚಮುಖಮೆಸೆವ
ಸನ್ನುತಾಕ್ಷಿಗಳೆ ಪದಿನೈದು ದಶಬಾಹು ಶುದ್ಧಸ್ಫಟಿಕಸಂಕಾಶದ ೩೧

ವರಸದಾಶಿವನೆಂದು ಭಾವದಿಂ ತಿಳಿದು ಸು
ಸ್ಥಿರದಿಂದೆ ಪೂಜಿಪುದೆ ಮಿಶ್ರಮಿಾ ಲಿಂಗದಿಂ
ದುರುಶಕ್ತಿಸಹಿತೆ ಹರಿಯಜಸುರೇಂದ್ರಾದಿ ದಿವಿಜರ ನಡುವೆ ಕಣ್ಗೊಳಿಸುವ
ಪರಮಮಾಹೇಶನಂ ಭಾವಿಸುತ್ತರ್ಚಿಪುದೆ
ನಿರುತದಿಂ ಸಂಕೀರ್ಣಮೆಲೆ ರಾಮು ಕೇಳಿನ್ನು
ಹರುಷದಿಂ ಕರ್ಮ ಭಕ್ತಿ ಜ್ಞಾನಪೂಜಾವಿಧಾನಂಗಳಂ ಪೇಳ್ವೆನು ೩೨

ಇರದೆ ವರ್ಣಾಶ್ರಮ ಸುಧರ್ಮಕರ್ಮಂಗಳಂ
ಬೆರಸಿಕೊಂಡೊಲವಿನಿಂ ಫಲಪದಂಗಳ ಬಯಸಿ
ಪರಿಕಿಸಲುಪಾಧಿಯಂ ಮುಂದಿಟ್ಟುಕೊಂಡು ಪೂಜಿಸುವುದೇ ಜಡಕರ್ಮವು
ಪರಮವರ್ಣಾಶ್ರಮ ಸುಧರ್ಮಕರ್ಮಂಗಳಂ
ಪರಿಹರಿಸಿ ಭವಿ ಭಕ್ತಭೇದಮಂ ತಿಳಿದು ಸ
ದ್ವರ ಪದಂಗಳ ಬಯಸದರ್ಚಿಪುದು ನಿರುಪಾಧಿಯಜಡಸದ್ಭಕ್ತಿ ಕೇಳಾ ೩೩

ಎಸೆವ ವರ್ಣಾಶ್ರಮ ಸುಧರ್ಮ ಕರ್ಮಂಗಳಾ
ವಿಸರಂಗಳಂ ನೇತಿಗಳೆದು ಒಳಿಕೊಲವಿನಿಂ
ದೊಸೆದು ಸತ್ಫಲಪದಂಗಳ ಮಿಾರಿ ಪೂಜ್ಯ ಪೂಜಕಮೇಕಮೆಂದು ತಿಳಿದು

ಶಿವನು ಇದ್ದಾನೆಂದು ನಿಜವಾಗಿ ಭಾವಿಸಿ ಪೂಜಿಸುವುದೇ ಶುದ್ಧ. ಆ ಲಿಂಗದಲ್ಲಿ ಪಂಚ ಮುಖ, ಪ್ರಕಾಶಿಸುವ ಹದಿನೈದು ಕಣ್ಣುಗಳು, ಹತ್ತು ತೋಳುಗಳು, ಶುದ್ಧವಾದ ಸ್ಫಟಿಕದ ಬಣ್ಣ, ೩೨. ಇವುಗಳನ್ನುಳ್ಳ ಸದಾಶಿವನೆಂದು ಮನಸ್ಸಿನಲ್ಲಿ ತಿಳಿದು ಸ್ಥಿರವಾಗಿ ಪೂಜಿಸುವುದೆ ಮಿಶ್ರವು. ಈ ಲಿಂಗದಲ್ಲಿ ಭಯಂಕರ ಶಕ್ತಿಸಹಿತವಾಗಿ ವಿಷ್ಣು, ಬ್ರಹ್ಮ, ದೇವೇಂದ್ರ ಮೊದಲಾದ ದೇವತೆಗಳ ನಡುವೆ ಕಂಗೊಳಿಸುವ ಮಹೇಶ್ವರನನ್ನು ತಿಳಿದು ಪೂಜಿಸುವುದು ನಿಜವಾಗಿ ಸಂಕೀರ್ಣವು. ಸಿದ್ಧರಾಮ ಇನ್ನು ಸಂತೋಷದಿಂದ ಕರ್ಮ, ಭಕ್ತಿ, ಜ್ಞಾನ, ಪೂಜಾಕ್ರಮಗಳನ್ನು ಹೇಳುತ್ತೇನೆ, ಕೇಳು. ೩೩. ವರ್ಣಾಶ್ರಮ ಧರ್ಮ, ಕರ್ಮಗಳನ್ನು ಕೂಡಿಕೊಂಡು ಪ್ರೀತಿಯಿಂದ ಹಲವು ಫಲಾಪೇಕ್ಷೆಯಿಂದ ಉದ್ದೇಶವನ್ನು ಮುಂದಿಟ್ಟುಕೊಂಡು ಪೂಜಿಸುವುದೇ ಜಡಕರ್ಮ. ಶ್ರೇಷ್ಠವಾದ ವರ್ಣಾಶ್ರಮ ಧರ್ಮಕರ್ಮಗಳನ್ನು ಪರಿಹರಿಸಿ ಭವಿ–ಭಕ್ತರ ಭೇದವನ್ನು ತಿಳಿದು ಫಲಾ ಪೇಕ್ಷೆಯಿಲ್ಲದೆ ಪೂಜಿಸುವುದು ನಿರುಪಾದಿಯ ಜಡಸದ್ಭಕ್ತಿ ಕೇಳಯ್ಯಾ. ೩೪. ವರ್ಣಾ ಶ್ರಮ ಧರ್ಮಕರ್ಮಗಳನ್ನೆಲ್ಲಾ ಅಪ್ರಯೋಜಕವಾದುದೆಂದು ತಿರಸ್ಕರಿಸಿ ಅನಂತರ ಒಲವಿ ನಿಂದ ಕೂಡಿ ಫಲಾಪೇಕ್ಷೆಗಳನ್ನು ಮಿಾರಿ ಪೂಜ್ಯ–ಪೂಜಕಗಳು ಎರಡೂ ಒಂದೇ ಎಂದು

CC-0. Jangamwadi Math Collection. Digitized by eGangotri

ಹಸನಾದ ಸ್ವಾನುಭಾವದೆ ಸಿದ್ಧನಾಗಿ ರಾ
ಜಿಸುವ ನಿರ್ವಾಣನಿಜಪದವಿಯೆಂದೊಲಿದು ಪೂ
ಜಿಸುವುದೇ ಸುಜ್ಞಾನವಿದುವೆ ಸದ್ಯೋನ್ಮುಕ್ತಿಯೆಲೆ ರಾಮ ಕೇಳೆಂದನು ೩೪

ಪರಮಸದ್ಗುರು ಚೆನ್ನಬಸವೇಶ ನೀನೆನಗೆ
ಕರುಣದಿಂ ಪೇಳ್ದ ಶಿವಪೂಜಾವಿಧಾನಮಂ
ಪರಿವಿಡಿಯೊಳರಿದು ಕೃತಕೃತ್ಯನಾದೆಂ ಮುಂದೆ ಶಿವತತ್ತ್ವಭೇದಂಗಳ
ವಿರಚಿಸಿ ಕೃತಾರ್ಥನಂ ಮಾಡೆಂದು ಬಿನ್ನವಿಸೆ
ಪರಮಕಾರುಣ್ಯದಿಂ ಸಿದ್ಧರಾಮೇಶಂಗೆ
ಪಿರಿದನಿಸುವಮಳಶಿವತತ್ತ್ವಮಂ ಪೇಳಲುದ್ಯೋಗಿಸಿದನೇನೆಂಬೆನು ೩೫

ಪರಶಿವಂ ಚಿತ್ತದೆ ಪ್ರವೃತ್ತಿಯಂ ನೆನೆಯಲುಂ
ದುರುತರದ ಚಿತ್ತೆ ಚಿಚ್ಛಕ್ತಿಯಾಯ್ತದರಿಂದೆ
ವರಮಹಾಲಿಂಗಮಾಯ್ತದರಿಂದೆ ಪಂಚಕಲೆಯಾದುವಾ ಘನಲಿಂಗವೇ
ಪರಮೆಂದು ಗೂಢಮೆಂದುಂ ಶರೀರಸ್ಥಮೆಂ
ದುರುಲಿಂಗ ಸುಕ್ಷೇತ್ರಮೆಂದನಾದಿಯುಮೆಂದು
ಪರಿಕಿಸಲ್ ಪಂಚಸಂಜ್ಞೆಗಳಾದುವವನಿನ್ನು ವಿಸ್ತರಿಪೆನಾಲಿಸೊಲಿದು ೩೬

ಪರಮೆಂದು ಸಕಲತತ್ತ್ವಂಗಳ್ಗೆ ತಾನೆ ತ
ತ್ಪರತತ್ತ್ವವಾದಕಾರಣದಿಂದೆ ಪರವಾದು
ದಿರದೆ ತಾಂ ಮೂರ್ತಿಯುಲ್ಲದೆ ಸಕಲಮೂರ್ತಿಯಂ ತನ್ನಿಂದಲೇ ಪುಟ್ಟಿಸಿ

ತಿಳಿದು ಸ್ವಾನುಭಾವದಿಂದ ಪಕ್ವಗೊಂಡು ಪ್ರಕಾಶಿಸುವ ಮುಕ್ತಿಯೇ ನಿಜವಾದ ಪದವಿಯೆಂದು ತಿಳಿದು ಪೂಜಿಸುವುದೇ ಸುಜ್ಞಾನ, ಇದೇ ಸದ್ಯೋನ್ಮುಕ್ತಿಯೆನ್ನುವುದು ಎಲೆ ರಾಮ, ಕೇಳು ಎಂದನು. ೩೫. ಪರಮ ಸದ್ಗುರುವಾದ ಚೆನ್ನಬಸವೇಶನೇ, ನೀನು ನನಗೆ ಕರುಣೆಯಿಂದ ಹೇಳಿದ ಶಿವಪೂಜಾ ವಿಧಾನವನ್ನು ಕ್ರಮವಾಗಿ ತಿಳಿದು ಕೃತಾರ್ಥನಾದೆ.ಮುಂದೆ ಶಿವತತ್ತ್ವಭೇದಗಳನ್ನು ವಿವರಿಸಿ ಕೃತಾರ್ಥನನ್ನಾಗಿ ಮಾಡು ಎಂದು ವಿಜ್ಞಾಪಿಸಿಕೊಳ್ಳಲು ಚೆನ್ನಬಸವಣ್ಣನು ಅತಿಕರುಣೆಯಿಂದ ಸಿದ್ಧರಾಮನಿಗೆ ಮಹತ್ವವಾದ ಶ್ರೇಷ್ಠವಾದ ಶಿವತತ್ತ್ವವನ್ನು ಹೇಳಲು ಪ್ರಾರಂಭಿಸಿದನು. ೩೬. ಪರಶಿವನು ಮನಸ್ಸಿನಲ್ಲಿ ಪ್ರವೃತ್ತಿಯನ್ನು ನೆನೆಯಲು ಆಂದು ಶ್ರೇಷ್ಠವಾದ ಮನಸ್ಸೇ ಚಿಚ್ಛಕ್ತಿಯಾಯಿತು. ಅದರಿಂದ ಶ್ರೇಷ್ಠವಾದ ಮಹಾಲಿಂಗವಾಯಿತು. ಅದರಿಂದ ಪಂಚಕಲೆಯಾದುವು. ಆ ಘನಲಿಂಗವೇ ಪರ ಎಂದು, ಗೂಢ ಎಂದು, ಶರೀರಸ್ಥ ಎಂದು, ಉರುಲಿಂಗ ಸುಕ್ಷೇತ್ರವೆಂದು, ಅನಾದಿಯೆಂದು ತಿಳಿಯಲು ಐದು ಸಂಜ್ಞೆಗಳಾದುವು. ಅವನ್ನು ಇನ್ನೂ ವಿವರಿಸುತ್ತೇನೆ, ಪ್ರೀತಿಯಿಂದ ಕೇಳು. ೩೭. ಪರವೆಂದು ಎಲ್ಲ ತತ್ತ್ವಗಳಿಗೆ ತಾನೇ ಆ ಪರತತ್ತ್ವವಾದ ಕಾರಣದಿಂದ ಪರವೆನ್ನಿಸಿತು. ತಾನೇ ಮೂರ್ತಿಯಾಗುವುದಲ್ಲದೆ ಸಕಲ ಮೂರ್ತಿಗಳನ್ನೂ

CC-0. Jangamwadi Math Collection. Digitized by eGangotri

ಪರಿಕಿಸಲ್ ಗೋಪ್ಯದಿಂದಿರೆ ಗೂಢವೆನಿಸಿತಂ
ದುರುಸಕಲ ಚರಾಚರಂಗಳಂ ಸೃಜಿಸಿ ಮ
ತ್ತಿರದವಕ್ಕಾಧಾರವಾಗಲ್ ಶರೀರಸ್ಥವೆಂದೆನಿಸಿತೊಲವಿನಿಂದ ೩೭

ಕಂಗೊಳಿಪ ಸಕಲ ಚರಾಚರಂಗಳನೆ ತ
ನ್ನಂಗದಿಂ ಸೃಜಿಸಿ ವಿಲಯಕ್ಕೆ ಕಾರಣವಾದ
ತುಂಗಸುಕ್ಷೇತ್ರವೆಂದೆನಿಪ ಕಾರಣದೆ ಲಿಂಗಕ್ಷೇತ್ರವೆಂದೆನಿಸಿತು
ಹಿಂಗದೆ ಶಿವಾದಿ ರುದ್ರಾಂತವಾದಖಿಳ ತ
ತ್ತ್ವಂಗಳ್ಗೆ ತಾನನಾದಿಯುವೆನಿಪ ಕಾರಣಂ
ಮಂಗಳವೆನಿಪ್ಪನಾದಿಯುವೆನಿಸಿತಲೆ ಸಿದ್ಧರಾಮ ನೀಂ ಕೇಳೆಂದನು ೩೮

ಒರೆವೆನಾಲಿಸು ಪಂಚಕಲೆಯ ನಾಮಂಗಳಂ
ಪರಮಶಾಂತ್ಯಾತೀತೆ ಶಾಂತಿಯುರುವಿದ್ಯೆ ಮ
ತ್ತಿರದಾ ಪ್ರತಿಷ್ಠೆ ಸುನಿವೃತ್ತಿಯೆನಿಸುವ ಕಳಾಶಕ್ತಿಯರಿವೈದು ಮೊದಲೆ
ವಿರಚಿಸಿದ ಪಂಚಸಂಜ್ಞೆಗಳೆನಿಸುತಿಹ ಮಹಾ
ಪರಮಸಾದಾಖ್ಯಂಗಳ್ಳೆದು ಪರಶಿವನೊಂದು
ಪರಿಕಿಸಲ್ ಪನ್ನೊಂದು ಶಿವತತ್ತ್ವವೆಲೆ ಸಿದ್ಧರಾಮೇಶ ಕೇಳೆಂದನು ೩೯

ಲಿಂಗತತ್ತ್ವಂಗಳಿವು ಪನ್ನೊಂದು ಮೊದಲೆ ನಿನ
ಗಂಗತತ್ತ್ವಂಗಳಿಪ್ಪತ್ತೈದು ಪೇಳ್ವೆನುಭ
ಯಂಗಳೇ ಷಟ್ತ್ರಿಂಶ ತತ್ತ್ವಂಗಳೆಲೆ ರಾಮ ಕೇಳೆಂದು ಪೇಳಲಂದು

ತನ್ನಿಂದಲೇ ಹುಟ್ಟಿಸಿ ಪರೀಕ್ಷಿಸಲು ಗೋಪ್ಯವಾಗಿರುವುದರಿಂದ ಗೂಢವೆನ್ನಿಸಿತು. ಆಗ ಎಲ್ಲ ಚರಾಚರ ವಸ್ತುಗಳನ್ನು ಸೃಜಿಸಿ ಅವುಗಳಿಗೆ ಆಧಾರವಾಗಲು ಶರೀರಸ್ಥವೆಂದೆನಿಸಿತ್ತು. ೩೮. ಪ್ರಕಾಶಿಸುವ ಎಲ್ಲ ಚರಾಚರಗಳನ್ನು ತನ್ನ ಶರೀರದಿಂದಲೇ ಸೃಷ್ಟಿಮಾಡಿ ತಾನೇ ಅವುಗಳ ನಾಶಕ್ಕೂ ಕಾರಣವಾದ ಉನ್ನತವಾದ ಸುಕ್ಷೇತ್ರವೆನ್ನಿಸುವ ಕಾರಣದಿಂದ ಲಿಂಗ ಕ್ಷೇತ್ರವೆನ್ನಿಸಿತು. ಶಿವಾದಿ-ರುದ್ರಾಂತವಾದ ಎಲ್ಲ ತತ್ತ್ವಗಳಿಗೆ ತಾನು ಅನಾದಿಯೆನ್ನಿಸುವ ಕಾರಣದಿಂದ ಮಂಗಳವಾದ ಅನಾದಿಯೆನ್ನಿಸಿತು, ಎಲೆ ಸಿದ್ಧರಾಮ ನೀನು ಕೇಳು ಎಂದನು. ೩೯. ಪಂಚಕಲೆಯ ಹೆಸರುಗಳನ್ನು ಹೇಳುತ್ತೇನೆ ಕೇಳು, ಪರಮಶಾಂತ್ಯಾತೀತೆ, ಶಾಂತಿ, ವಿದ್ಯೆ ಪ್ರತಿಷ್ಠೆ, ಸುನಿವೃತ್ತಿ ಎನ್ನಿಸುವ ಕಳಾಶಕ್ತಿಯರು ಐದು. ಈ ಮೊದಲೇ ಹೇಳಿದ ಪಂಚ ಸಂಜ್ಞೆಗಳೆನ್ನಿಸಿರುವ ಪರಮ ಸಾದಾಖ್ಯಗಳೈದೂ ಪರಶಿವನು ಒಂದು-ಈ ರೀತಿ ತಿಳಿಯಲು ಹನ್ನೊಂದು ಶಿವತತ್ತ್ವಗಳು, ಎಲೆ ಸಿದ್ಧರಾಮ, ಕೇಳು ಎಂದನು. ೪೦. ಈ ಲಿಂಗತತ್ತ್ವಗಳು ಹನ್ನೊಂದು. ಈ ಮೊದಲೆ ನಿನಗೆ ಹೇಳಿದ ಅಂಗತತ್ತ್ವಗಳು ಇಪ್ಪತ್ತೈದು. ಈ ಎರಡೂ ಸೇರಿ ಮೂವತ್ತಾರು ತತ್ತ್ವಗಳು. ಎಲೆ ಸಿದ್ಧರಾಮ, ಕೇಳು ಎಂದು ಹೇಳಲು, ಸಿದ್ಧರಾಮನು ಮಂಗಳಾತ್ಮಕನಾದ ಮಹಾಗುರುವೇ

CC-0. Jangamwadi Math Collection. Digitized by eGangotri

ಮಂಗಳಾತ್ಮಕ ಮಹಾಗುರುವೆ ನೀಂ ಪೇಳ್ದ ತ
ತ್ತ್ವಂಗಳಂ ಕೇಳ್ದು ಕೃತಕೃತ್ಯನಾದೆಂ ಷಟ್ಸ್ಥ
ಲಂಗಳಂ ಪೇಳ್ದಿನ್ನು ರಕ್ಷಿಸುವುದೆನೆ ಚೆನ್ನಬಸವೇಶನಿಂತೆಂದನು ೪೦

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ವಾಚಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮುನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ೪೧

ಅರುವತ್ತನೆಯ ಸಂಧಿ ಸಂಪೂರ್ಣ

ನೀನು ಹೇಳಿದ ತತ್ತ್ವಗಳನ್ನು ಕೇಳಿ ಕೃತಕೃತ್ಯನಾದೆ, ಷಟ್ಸ್ಥಲಗಳನ್ನು ಹೇಳಿ ಇನ್ನು ಕಾಪಾಡು ಎಂದನು. ಆಗ ಚೆನ್ನಬಸವನು ಹೀಗೆಂದನು. ೪೧. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪಾರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಸಕಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ಅರುವತ್ತನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ಅರುವತ್ತೊಂದನೆಯ ಸಂಧಿ

ಸೂಚನೆ : ಷಟ್ಸ್ಥಲಬ್ರಹ್ಮಿಯಹ ಚೆನ್ನಬಸವೇಶ್ವರನೆ
ಷಟ್ಸ್ಥಲವ ನಿರವಿಸೆನೆ ಸಿದ್ಧರಾಮೇಶಂಗೆ
ಷಟ್ಸ್ಥಲಬ್ರಹ್ಮೋಪದೇಶಮಂ ಮಾಡಿದಂ ಸಕಲ ಶರಣರ್ ತಿಳಿಯಲು

ಪುಂಡರೀಕಾಕ್ಷ ಸುಕುಮಾರಹರಭಸಿತಾಂಗ
ಪುಂಡರೀಕೋದ್ಭವಶಿರಶ್ಛೇದಕಂ ವಿಮಲ
ಪುಂಡರೀಕಾಪ್ತೇಂದುವಹ್ನಿತ್ರಿಲೋಚನಂ ಪುಂಡರೀಕಾಜಿನಧರ
ಪುಂಡರೀಕಾಪ್ತಪುತ್ರಾರಣ್ಯಘನದಾವ
ಪುಂಡರೀಕಾಂಬಕ ಸುನಯನಪೂಜಿತಪಾದ
ಪುಂಡರೀಕಾತ್ಮಜಮುಖಧ್ವಂಸಿ ಪಂಪಾವಿರೂಪಾಕ್ಷ ಸಲಹೆಮ್ಮನು ೧

ಎಲೆ ಸಿದ್ಧರಾಮೇಶ ಕೇಳಿನ್ನು ಮುಂದೆ ಷ
ಟ್ಸ್ಥಲಸುಮಾರ್ಗವನು ಮಹದಾದಿತತ್ತ್ವಂಗಳ್ಗೆ
ನೆಲೆಯಾಗಿ ಪ್ರಕೃತಿ ಪುರುಷಾತ್ಮಕದ ವಿಶ್ವಕ್ಕೆ ಲಯಜನ್ಮಭೂಮಿಯೆನಿಸಿ
ವಿಲಸತ್ಸದಾನಂದನತ್ಯತಿಷ್ಠದ್ದಶಾಂ
ಗುಲನದ್ವಿತೀಯಂ ಪರಬ್ರಹ್ಮವೆನಿಪ ನಿ
ರ್ಮಲನಾದ ಪರಶಿವಂ ತಾನಿರಲದೇ ಮಹಾಸ್ಥಲವೆಂಬ ಪೆಸರಾದುದು ೨

ಸೂಚನೆ : ಷಟ್ಸ್ಥಲಬ್ರಹ್ಮಿಯಾದ ಚೆನ್ನಬಸವೇಶ್ವರನೇ ಷಟ್ಸ್ಥಲವನ್ನು ನಿರೂಪಿಸೆನ್ನಲು ಸಿದ್ಧರಾಮೇಶನಿಗೆ ಷಟ್ಸ್ಥಲಬ್ರಹ್ಮೋಪದೇಶವನ್ನು ಎಲ್ಲ ಶರಣರೂ ತಿಳಿಯುವಂತೆ ಮಾಡಿದನು. ೧. ಮನ್ಮಥನನ್ನು ಸುಟ್ಟು ಅವನ ಬೂದಿಯನ್ನು ಶರೀರಕ್ಕೆಲ್ಲ ಬಳಿದುಕೊಂಡಿರುವವನು, ಬ್ರಹ್ಮನ ತಲೆಯನ್ನು ಕತ್ತರಿಸಿದವನು, ಮಂಗಳಕರವಾದ ಸೂರ್ಯ–ಚಂದ್ರ ಮತ್ತು ಅಗ್ನಿಯನ್ನು ಮೂರು ಕಣ್ಣನ್ನಾಗಿ ಉಳ್ಳವನು, ಗಜಚರ್ಮಾಂಬರಧಾರಿ, ಯಮನೆಂಬ ಅರಣ್ಯಕ್ಕೆ ಕಾಳ್ಗಿಚ್ಚು, ವಿಷ್ಣುವಿನ ಕಣ್ಣಿನಿಂದ ಪೂಜಿಸಿಕೊಂಡ ಪಾದವುಳ್ಳವ. ದಕ್ಷ ಬ್ರಹ್ಮನ ಯಜ್ಞವನ್ನು ನಾಶಮಾಡಿದವನೂ ಆದ ಪಂಪಾವಿರೂಪಾಕ್ಷನೇ ನಮ್ಮನ್ನು ಕಾಪಾಡು. ೨. ಎಲೆ ಸಿದ್ಧರಾಮೇಶ ಇನ್ನು ಮುಂದೆ ಷಟ್ಸ್ಥಲ ಸುಮಾರ್ಗವನ್ನು ಕೇಳು. ಮಹತ್ತಾದ ಆದಿತತ್ವಗಳಿಗೆ ನೆಲೆಯಾಗಿ, ಪ್ರಕೃತಿ–ಪುರುಷಾತ್ಮಕವಾದ ಜಗತ್ತಿಗೆಲ್ಲ ಲಯಸ್ಥಾನ ಎನ್ನಿಸಿರುವ ಪ್ರಕಾಶಮಾನವಾದ ಆತ್ಯತಿಷ್ಠದ್ದಶಾಂಗುಲನೂ, ಅದ್ವಿತೀಯನೂ, ಪರಬ್ರಹ್ಮನೂ ಎನ್ನಿಸಿರುವ ನಿರ್ಮಲನಾದ ಪರಶಿವನು ಇರುವ ಜಾಗವೇ ಮಹಾಸ್ಥಲ ಎಂದು ಹೆಸರಾಯಿತು.

CC-0. Jangamwadi Math Collection. Digitized by eGangotri

ಎಸೆವ ಪರಶಿವನೆ ತನ್ನೊಳ್ ಲೀನವಾಗಿ ರಾ
ಜಿಸುವ ಚಿಚ್ಛಕ್ತಿಯಾ ಸ್ಫುರಣೆಯಿಂದಿರದೆ ಸಂ
ತಸದೊಳಾ ಸೇವ್ಯಸೇವಕ ಭೇದದಿಂದೆ ಲಿಂಗಾಂಗವೆಂದುಭಯವಾಯ್ತು
ಮಿಸುಪ ಲಿಂಗವೆ ಸೇವ್ಯನಂಗವೇ ಸೇವಕನ
ದೆಸಕದಿಂದಾದುದಾ ಪರತತ್ತ್ವವೊಂದೆ ಭಾ
ವಿಸಿ ನೋಡೆ ಲಿಂಗಸ್ಥಲಾಂಗಸ್ಥಲಂಗಳೆಂದೆರಡಾಯ್ತು ಕೇಳೆಂದನು ೩

ಪರಮಲಿಂಗತ್ವಮಂಗತ್ವಂ ಶಿವತ್ವಮು
ದಿರದೆ ಪರಮಾತ್ಮತ್ವಮೆಂಬೀ ವಿಭೇದದಿಂ
ಪರಿಯಾಯ ಗುಣನಾಮದಿಂದೆ ಸುಸ್ಥಲಮೆಂಬ ಸಂಜ್ಞೆಯಾ ಶಿವತತ್ತ್ವವೇ
ಪರಿವಿಡಿಯೊಳೆರಡಾಗಲಾ ಮಹಾಶಕ್ತಿ ತಾ
ನೆರಡಾದಳೆಂತೆನಲ್ ತನ್ನ ಸ್ವತಂತ್ರದಿಂ
ಪರಶಿವಸಮಾನಧರ್ಮಂಗಳಿಂ ಲಿಂಗಾಂಗವೇ ನಿಜನಿವಾಸಮಾಗೆ ೪

ಪರಮಲಿಂಗಸ್ಥಲವನಾಶ್ರಯಿಸಿದಾ ಶಕ್ತಿ
ಪರಿಯೆನಿಸಿಕೊಂಡುದಂಗಸ್ಥಲವನಾಶ್ರಯಿಸಿ
ಯಿರುವ ಶಕ್ತಿಯೆ ಭಕ್ತಿಯೆನಿಸಿತ್ತು ಸಿದ್ಧರಾಮೇಶ ನೀಂ ಕೇಳ್ವುದಿನ್ನು
ಉರಿವ ವಹ್ನಿಜ್ವಾಲೆ ಭೇದವಡೆದಾಗ ವಿ
ಸ್ಫುರಿಸಿ ತೋರುವ ಜ್ಯೋತಿಯಾದಂತೆ ಪರಶಿವನ
ಪರಮಚಿತ್ತೇ ಶಕ್ತಿ ಭಕ್ತಿಯಾಯ್ತೆಲೆ ಸಿದ್ಧರಾಮೇಶ ಕೇಳೆಂದನು ೫

೩. ಪರಶಿವನೇ ತನ್ನಲ್ಲಿ ಒಂದಾಗಿ ಪ್ರಕಾಶಿಸುವ ಚಿಚ್ಛಕ್ತಿಯು ಸ್ಫುರಣೆಗೊಂಡು ಆ ಸೇವ್ಯ ಸೇವಕ ಭೇದದಿಂದ ಲಿಂಗ-ಅಂಗ ಎಂದು ಎರಡು ವಿಭಾಗವಾಯಿತು. ಹೊಳೆಯುವ ಲಿಂಗವೇ ಸೇವ್ಯ, ಅಂಗವೇ ಸೇವಕ. ಆ ಕಾರಣದಿಂದ ಆ ಪರತತ್ತ್ವ ಒಂದೇ, ತಿಳಿದು ನೋಡಲು ಲಿಂಗಸ್ಥಳ-ಅಂಗಸ್ಥಳ ಎಂದು ಎರಡಾದುವು ಕೇಳು ಎಂದನು. ೪. ಶ್ರೇಷ್ಠ ವಾದ ಲಿಂಗತ್ವ-ಅಂಗತ್ವ, ಶಿವತ್ವ-ಪರಮಾತ್ಮತ್ವ ಎನ್ನುವ ವಿಭೇದದಿಂದ ಪರ್ಯಾಯ ಗುಣ ಮತ್ತು ಹೆಸರಿನಿಂದ ಸುಸ್ಥಲವೆಂಬ ಸಂಜ್ಞೆಯಾದ ಆ ಶಿವತತ್ತ್ವವೇ ಕ್ರಮವಾಗಿ ಎರಡಾಗಲು ಆ ಮಹಾಶಕ್ತಿಯೂ ಸಹ ಎರಡಾಯಿತು. ಅದು ಹೇಗೆಂದರೆ ತನ್ನ ಸ್ವಾತಂತ್ರ್ಯ ದಿಂದ ಪರಶಿವನ ಸಮಾನಧರ್ಮಗಳಿಂದ ಲಿಂಗ-ಅಂಗಗಳೇ ತನ್ನ ವಾಸಸ್ಥಾನವಾಗಲು ೫. ಪರಮಲಿಂಗಸ್ಥಳವನ್ನು ಆಶ್ರಯಿಸಿದ ಆ ಶಕ್ತಿಯೆ ಪರಿಯೆನ್ನಿಸಿಕೊಂಡಿತು. ಅಂಗ ಸ್ಥಳವನ್ನು ಆಶ್ರಯಿಸಿರುವ ಶಕ್ತಿಯೆ ಭಕ್ತಿಯೆನಿಸಿಕೊಂಡಿತು-ಸಿದ್ಧರಾಮ ನೀನು ಕೇಳು. ಇನ್ನು ಉರಿಯುವ ಬೆಂಕಿಯ ಜ್ವಾಲೆ ವಿಭಾಗಗೊಂಡಾಗ ಪ್ರಕಾಶಗೊಂಡು ಕಾಣುವ ದೀಪವಾದಂತೆ ಪರಶಿವನ ಪರಮಚಿತ್ತೇ ಶಕ್ತಿ ಭಕ್ತಿ-ಆಯಿತು, ಎಲೆ ಸಿದ್ಧರಾಮ

CC-0. Jangamwadi Math Collection. Digitized by eGangotri

ತಿಳಿಯಲನಲಜ್ವಾಲೆ ಧೂಮದಾವರಣದಿಂ
ಬೆಳಗದೆ ತಮೋಮಯದೊಳಿರ್ಪಂತೆ ಶಕ್ತಿ ತಾ
ನೊಲವಿನಿಂದಿಹುದು ವಾಸನೆವಿಡಿದು ಶಕ್ತಿ ನಿರ್ವಾಸನೆಯೊಳಿಹುದೆಂತೆನೆ
ಬೆಳಗಿನಿಂದೆಸೆವ ನಿರ್ಮಲಿನದೀಪಿಕೆಯಂತೆ
ಹೊಳೆವ ಘನಸಚ್ಚಿದಾನಂದಸ್ವರೂಪಮಂ
ಗಳವೆನಿಪ ಭಕ್ತಿಯಾ ಶಕ್ತಿಯಿಂದಧಿಕವೆಲೆ ರಾಮೇಶ ಕೇಳೆಂದನು ೬

ಶಕ್ತಿ ಪ್ರವೃತ್ತಿಮಾರ್ಗವನುಳ್ಳುದಾ ವಿಮಲ
ಭಕ್ತಿಯೆ ನಿವೃತ್ತಿಮಾರ್ಗವನುಳ್ಳುದಾ ಪರಮ
ಶಕ್ತಿ ಮಾಯಾಪ್ರಪಂಚುಳ್ಳುದಾ ಭಕ್ತಿಯಾ ಮಾಯಾಪ್ರಪಂಚುರಹಿತಂ
ಶಕ್ತಿ ಪುಣ್ಯಫಲಪ್ರದಂಗಳಂ ಕೊಡುವುದಾ
ಭಕ್ತಿ ಶಿವನಲ್ಲಿ ಯುಕ್ತಂ ಮಾಳ್ಪುದಾ ಪರಮ
ಶಕ್ತಿ ತಾನೇಯಧೋಮುಖಿ ಭಕ್ತಿಯೂರ್ಧ್ವಮುಖಿ ರಾಮೇಶ ಕೇಳೆಂದನು ೭

ವಿಸೆವ ಲಿಂಗಸ್ಥಲದೆ ಶಿವನೆನಿಸಿಕೊಳುತೆ ಸಂ
ತಸದಿಂದುಪಾಸ್ಯವಾಗಿರುತಿರ್ಪುದಾ ಶಕ್ತಿ
ಮಿಸುಗುವಂಗಸ್ಥಲದೆ ಜೀವನೆನಿಸಿತ್ತುಪಾಸಕವಾಗಿ ಭಕ್ತಿಯಿಹುದು
ಪಸರಿಸುವ ಲಿಂಗಸ್ಥಲಾಂಗಸ್ಥಲಂಗಳೆಂ
ದೊಸೆದುಭಯಸಂಗವೆ ಶಿವೈಕ್ಯವಾ ಶಿವನೆ ಭಾ
ವಿಸಿ ನೋಡೆ ಮೂರು ತೆರನಾದನೆಲೆ ಸಿದ್ಧರಾಮೇಶ ನೀಂ ಕೇಳೆಂದನು ೮

ಕೇಳು ಎಂದನು. ೬. ಬೆಂಕಿಯ ಜ್ವಾಲೆ ಹೊಗೆಯ ಆವರಣದಿಂದ ಪ್ರಕಾಶಿಸದೆ ಮಂಕಾಗಿರುವಂತೆ ಶಕ್ತಿಯು ತಾನು ವಾಸನಾಸಹಿತವಾಗಿರುವುದು. ಶಕ್ತಿ ನಿರ್ವಾಸನೆಯಿಂದ ಇರುವುದು. ಹೇಗೆಂದರೆ ಪ್ರಕಾಶದಿಂದ ಕಾಣುವ ನಿರ್ಮಲವಾದ ದೀಪದಂತೆ ಹೊಳೆಯುವ ಘನ ಸಚ್ಚಿದಾನಂದಸ್ವರೂಪವೂ, ಮಂಗಳವೂ ಎನ್ನಿಸುವ ಭಕ್ತಿಯು ಆ ಶಕ್ತಿಗಿಂತ ಅಧಿಕವಾದುದು, ಎಲೆ ಸಿದ್ಧರಾಮ ಕೇಳು ಎಂದನು. ೭. ಶಕ್ತಿಯು ಪ್ರವೃತ್ತಿಮಾರ್ಗವುಳ್ಳದ್ದು. ಆ ವಿಮಲವಾದ ಭಕ್ತಿಯು ನಿವೃತ್ತಿಮಾರ್ಗ ಉಳ್ಳದ್ದು. ಆ ಪರಮಶಕ್ತಿ ಮಾಯಾಪ್ರಪಂಚವುಳ್ಳದು. ಆ ಭಕ್ತಿಯು ಮಾಯಾಪ್ರಪಂಚರಹಿತವಾದದ್ದು. ಶಕ್ತಿ ಪುಣ್ಯಫಲವನ್ನು ಕೊಡುವುದು. ಆ ಭಕ್ತಿಯು ಶಿವನಲ್ಲಿ ಸೇರಿಸುವುದು. ಆ ಶಕ್ತಿಯಾದರೋ ತಾನು ಅಧೋಮುಖಿ, ಭಕ್ತಿ ಊರ್ಧ್ವಮುಖಿ ರಾಮೇಶ ಕೇಳು ಎಂದನು. ೮. ಪ್ರಕಾಶಿಸುವ ಲಿಂಗಸ್ಥಳದಲ್ಲಿ ಶಿವನೆನ್ನಿಸಿಕೊಳ್ಳುತ್ತ ಸಂತೋಷದಿಂದ ಪೂಜೆಗೊಳ್ಳುತ್ತ ಆ ಶಕ್ತಿಯು ಇರುವುದು. ಹೊಳೆಯುವ ಅಂಗಸ್ಥಳದಲ್ಲಿ ಜೀವ ಎನಿಸಿಕೊಂಡು ಪೂಜೆ ಮಾಡುವವನಾಗಿ ಭಕ್ತಿಯು ಇರುವುದು. ವಿಸ್ತಾರವಾಗಿ ಲಿಂಗಸ್ಥಳ-ಅಂಗಸ್ಥಳಗಳೆಂದು ಹೆಸರುಗೊಂಡ ಉಭಯಸಂಗವೇ ಶಿವೈಕ್ಯ. ಆ ಶಿವನೆ ತಿಳಿದುನೋಡಲು ಮೂರು ರೀತಿಯಾದನು, ಎಲೆ

CC-0. Jangamwadi Math Collection. Digitized by eGangotri

ವೇದಮಂತ್ರಕ್ರಿಯೆಗಳಿಂ ಬಳಿಕ್ಕಾ ಮಹಾ
ನಾದ ಬಿಂದುವು ಕಳೆಗಳಿಂ ಲಿಂಗವೇ ತ್ರಿವಿಧ
ಭೇದದಿಂ ಭಾವಲಿಂಗಂ ಪ್ರಾಣಲಿಂಗವೆಂದಿಷ್ಟಲಿಂಗಂಗಳೆಂದು
ಆದುದಾ ಭಾವಲಿಂಗವೆ ನಿಷ್ಕಲಂ ಮಹ
ತ್ತಾದ ತತ್ಪ್ರಾಣಲಿಂಗವೆ ಸಕಲನಿಷ್ಕಲಂ
ಭೇದಿಸಲ್ಕಿಷ್ಟಲಿಂಗವೆ ಸಕಲವೆಲೆ ಸಿದ್ಧರಾಮೇಶ ಕೇಳೆಂದನು ೯

ತಿಳಿಯೆ ಸದ್ರೂಪವೇ ಭಾವಲಿಂಗಂ ಮನಕೆ
ಹೊಳೆವ ಚಿದ್ರೂಪವೇ ಪ್ರಾಣಲಿಂಗಂ ಕಣ್ಗೆ
ಬೆಳಗುವಾನಂದವೇ ಇಷ್ಟಲಿಂಗಂ ಬಳಿಕ್ಕಸಿಪದವೆ ಭಾವಲಿಂಗಂ
ನೆಲೆವೆತ್ತ ತ್ವಂಪದವೆ ಪ್ರಾಣಲಿಂಗಂ ಸುನಿ
ಶ್ಚಲವಾದ ತತ್ಪದವಮದಿಷ್ಟಲಿಂಗಂ ಮಹಾ
ಸ್ಥಲವಾದ ತತ್ತ್ವಮಸಿಯೆಂಬುದೇ ತ್ರಿವಿಧಲಿಂಗಂಗಳಿವು ಕೇಳೆಂದನು ೧೦

ಎಸೆವ ಪರತತ್ತ್ವವೇ ಭಾವಲಿಂಗಂ ಸೂಕ್ಷ್ಮ
ಪೆಸರಾಂತ ತತ್ತ್ವವೇ ಪ್ರಾಣಲಿಂಗಂ ಸ್ಥೂಲ
ದೆಸಕ ತತ್ತ್ವವೆ ತಿಳಿಯಲಿಷ್ಟಲಿಂಗಂ ಸ್ಥೂಲತತ್ತ್ವವೇ ಹೊರಗೆನಿಸಿತು
ಪಸರಿಸುವ ಸೂಕ್ಷ್ಮತತ್ತ್ವವೆ ತಾನೆಯೊಳಗೆನಿಸಿ
ತಸಮಪರತತ್ತ್ವವೇ ನೋಡಲೆಡೆವಿಡದೆ ರಾ
ಜಿಸುವ ಖಂಡಿತವೆನಿಸಿತಿಂತಪ್ಪ ಮೂರುಲಿಂಗಂಗಳಿರದಾರಾದುವು ೧೧

ಸಿದ್ಧರಾಮೇಶ ಕೇಳು ಎಂದನು. ೯. ವೇದಮಂತ್ರಕ್ರಿಯೆಗಳಿಂದ, ಅನಂತರ ಆ ಮಹಾ ನಾದ ಬಿಂದು ಕಳೆಗಳಿಂದ, ಲಿಂಗವೇ ಮೂರು ರೀತಿಯಿಂದ ಭಾವಲಿಂಗ, ಪ್ರಾಣಲಿಂಗ,ಇಷ್ಟ ಲಿಂಗಗಳೆಂದು ಆದುವು. ಆ ಭಾವಲಿಂಗವೇ ನಿಷ್ಕಲವು. ಮಹತ್ತಾದ ಆ ಪ್ರಾಣಲಿಂಗ ಸಕಲ ನಿಷ್ಕಲ, ಇಷ್ಟಲಿಂಗವೇ ಸಕಲ—ಎಲೆ ಸಿದ್ಧರಾಮ ಕೇಳು ಎಂದನು. ೧೦. ತಿಳಿಯಲು ಸದ್ರೂಪವೇ ಭಾವಲಿಂಗವು. ಮನಸ್ಸಿಗೆ ಹೊಳೆಯುವ ಚಿದ್ರೂಪವೇ ಪ್ರಾಣಲಿಂಗ, ಕಣ್ಣಿಗೆ ಕಾಣುವ ಆನಂದವೇ ಇಷ್ಟಲಿಂಗ. ಅನಂತರ 'ಅಸಿ' ಪದವೇ ಭಾವಲಿಂಗ, ಪ್ರಖ್ಯಾತವಾದ 'ತ್ವಂ'ಪದವೇ ಪ್ರಾಣಲಿಂಗ, ಸ್ಥಿರವಾದ 'ತತ್' ಪದವೇ ಇಷ್ಟಲಿಂಗ, ಮಹಾಸ್ಥಲವಾದ 'ತತ್ತ್ವಮಸಿ' ಎನ್ನುವುದೇ ಮೂರು ವಿಧದ ಲಿಂಗಗಳು ಕೇಳು ಎಂದನು. ೧೧. ಪರ ತತ್ತ್ವವೇ ಭಾವಲಿಂಗ, ಸೂಕ್ಷ್ಮವೆಂಬ ಹೆಸರನ್ನು ಪಡೆದ ತತ್ತ್ವವೇ ಪ್ರಾಣಲಿಂಗ, ಸ್ಥೂಲವೆಂಬ ತತ್ತ್ವವೇ ಇಷ್ಟಲಿಂಗ, ಸ್ಥೂಲತತ್ತ್ವವೇ ಹೊರಗಿನದೆನ್ನಿಸಿತು. ವಿಸ್ತಾರವಾದ ಸೂಕ್ಷ್ಮತತ್ತ್ವವೇ ಒಳಗೆನಿಸಿತು. ಅಸಮವಾದ ಪರತತ್ತ್ವವೇ ನೋಡಲು ಎಡೆಬಿಡದೆ ಪ್ರಕಾಶಿಸುವ ಅಖಂಡವೆನ್ನಿಸಿತು. ಈ ರೀತಿಯಾದ ಮೂರು' ಲಿಂಗಗಳು ಆರಾದುವು.

CC-0. Jangamwadi Math Collection. Digitized by eGangotri

ಪರಿವಿಡಿಯೊಳಾ ಭಾವಲಿಂಗದೇ ತಿಳಿಯಲಾ
ಪರಮಹಾಲಿಂಗಂ ಪ್ರಸಾದಾಖ್ಯಲಿಂಗವೆಂ
ದೆರಡಾಯ್ತು ಪ್ರಾಣಲಿಂಗವೆ ತಿಳಿಯೆ ಚರಲಿಂಗವೆಂದು ಶಿವಲಿಂಗವೆಂದು
ಎರಡಾಯ್ತದಿಷ್ಟಲಿಂಗವೆ ತಿಳಿದುನೋಡಲಾ
ಗುರುಲಿಂಗವೆಂದು ಬಳಿಕಾಚಾರಲಿಂಗವೆಂ
ದೆರಡಾಯ್ತು ಮೂರು ಲಿಂಗಂಗಳಾರಾಗಲಾ ಶಕ್ತಿ ತಾನಾರಾದುವು ೧೨

ಹೊಳೆವ ನಿರ್ಮಳ ನಿತ್ಯ ಶಾಂತ್ಯತೀತೋತ್ತರಾ
ಕಳೆಯೆ ಚಿಚ್ಛಕ್ತಿ ಶಾಂತಾತೀತೆಯೆಂದೆಂಬ
ಕಳೆಯೇ ಪರಾಶಕ್ತಿ ಶಾಂತಿಯೆಂದೆನಿಸುವಾ ಕಳೆಯೆ ತಾನಾದಿಶಕ್ತಿ
ಬಳಿಕ ವಿದ್ಯೆಯೆನಿಪ್ಪ ಕಳೆಯದಿಚ್ಛಾಶಕ್ತಿ
ತಿಳಿಯಲ್ ಪ್ರತಿಷ್ಠೆಕಳೆಯೇ ಜ್ಞಾನಶಕ್ತಿ ಥಳ
ಥಳಿಸುವ ನಿವೃತ್ತಿಕಳೆಯೇ ಕ್ರಿಯಾಶಕ್ತಿಯೆಲೆ ರಾಮೇಶ ಕೇಳೆಂದನು ೧೩

ಇಂತು ಚಿಚ್ಛಕ್ತಿಕ್ರಮದಿಂದೆ ಷಡ್ವಿಧಕಳೆಯ
ನಾಂತು ಷಡ್ವಿಧಶಕ್ತಿಯಾದಳಾ ಪರಶಿವಂ
ಪಿಂತೆ ಷಡ್ವಿಧಲಿಂಗವಾಗಿರ್ದು ಕ್ರಮದೊಳೀ ಶಕ್ತಿಯರೊಳೊಡಗೂಡಿದ
ಎಂತೆಂದೊಡಾದ್ಯಂತಶೂನ್ಯಮಮಲಂ ಪರಂ
ಸಂತತಂ ಚಿಚ್ಛಕ್ತಿಸಂಯುತಂ ಶಿವತತ್ತ್ವ
ಮಿಂತಿದೇ ನಿಷ್ಕಲಂ ಭಾವಗಮ್ಯಂ ಮಹಾಲಿಂಗಮಿದು ಕೇಳೆಂದನು ೧೪

೧೨. ಕ್ರಮವಾಗಿ ಆ ಭಾವಲಿಂಗವೇ ತಿಳಿಯಲು ಮಹಾಲಿಂಗ–ಪ್ರಾಸಾದಾಖ್ಯ ಲಿಂಗವೆಂದು ಎರಡಾಯಿತು. ಪ್ರಾಣಲಿಂಗವೇ ಚರಲಿಂಗವೆಂದು-ಶಿವಲಿಂಗವೆಂದು ಎರಡಾಯಿತು. ಇಷ್ಟಲಿಂಗವೇ ತಿಳಿದುನೋಡಲು ಗುರುಲಿಂಗವೆಂದು ಮತ್ತು ಆಚಾರಲಿಂಗವೆಂದು ಎರಡಾಯಿತು. ಮೂರು ಲಿಂಗಗಳು ಆರಾಗಲು ಆ ಶಕ್ತಿಗಳು ತಾವೂ ಆರಾದುವು. ೧೩. ಹೊಳೆಯುವ, ನಿರ್ಮಲವಾದ, ನಿತ್ಯವಾದ ಶಾಂತ್ಯತೀತೋತ್ತರಾ ಕಳೆಯೇ ಚಿಚ್ಛಕ್ತಿ, ಶಾಂತಾತೀತೆಯೆನ್ನುವ ಕಳೆಯೆ ಪರಾಶಕ್ತಿ, ಶಾಂತಿ ಎಂದೆನ್ನುವ ಕಳೆಯೆ ಆದಿಶಕ್ತಿ. ಅನಂತರ ವಿದ್ಯೆಯೆನ್ನುವ ಕಳೆಯು ಇಚ್ಛಾಶಕ್ತಿ. ತಿಳಿಯಲು ಪ್ರತಿಷ್ಠೆ ಕಳೆಯೇ ಜ್ಞಾನಶಕ್ತಿ. ಥಳಥಳಿಸುವ ನಿವೃತ್ತಿಕಳೆಯೇ ಕ್ರಿಯಾಶಕ್ತಿ–ಎಲೆ ರಾಮೇಶ, ಕೇಳು ಎಂದನು. ೧೪. ಈ ರೀತಿ ಚಿಚ್ಛಕ್ತಿ ಕ್ರಮವಾಗಿ ಆರು ರೀತಿಯ ಕಳೆಯನ್ನು ಹೊಂದಿ ಆರು ರೀತಿ ಶಕ್ತಿಯಾದಳು. ಆ ಪರಶಿವನು ಹಿಂದೆಯೇ ಆರು ವಿಧವಾದ ಲಿಂಗವಾಗಿದ್ದು ಕ್ರಮವಾಗಿ ಈ ಶಕ್ತಿಯರ ಜೊತೆಗೂಡಿದ. ಹೇಗೆಂದರೆ ಆದಿ-ಅಂತ್ಯವಿಲ್ಲದವನು, ನಿರ್ಮಲನು, ಪರನು, ನಿತ್ಯನು, ಚಿಚ್ಛಕ್ತಿಯೊಡಗೂಡಿದವನು, ಶಿವತತ್ತ್ವನು–ಈ ರೀತಿ ಇದೇ ನಿಷ್ಕಲವು. ಭಾವಗಮ್ಯವಾದದ್ದು–ಇದು ಮಹಾಲಿಂಗ ಕೇಳು ಎಂದನು.

CC-0. Jangamwadi Math Collection. Digitized by eGangotri

ಪರತರಂ ಜ್ಯೋತಿಸ್ವರೂಪಕಂ ಜ್ಞಾನಗೋ
ಚರನಾ ಪರಾಶಕ್ತಿಸಂಯುತಂ ನಿರ್ಮಲಂ
ನಿರುಪಮಂ ಸಾದಾಖ್ಯತತ್ತ್ವಪ್ರಸಾದಾಖ್ಯಲಿಂಗಮಿದು ಕೇಳೆಂದನು
ಪರಿಕಿಸಲ್ ಜ್ಯೋತಿರ್ಮಯಂ ಸಕಲನಿಷ್ಕಲಂ
ಪರಮಪುರುಷಂ ಮನಕೆ ಗೋಚರನಮೂರ್ತಕನ
ದಿರದಾದಿಶಕ್ತಿಸಂಯುಕ್ತಮಿದು ಚರಲಿಂಗವೆಲೆ ರಾಮ ಕೇಳೆಂದನು ೧೫

ಥಳಥಳಿಸಿ ಹೊಳೆವ ತೇಜೋಮೂರ್ತಿಯಾಗಿ ಪ್ರ
ಜ್ವಲಿಸುತಿಚ್ಛಾಶಕ್ತಿಯೊಡಗೂಡಿ ವ್ಯಕ್ತದಿಂ
ನಲಿದಹಂಕಾರಕ್ಕೆ ಗೋಚರಿಸುತಿರ್ಪುದೇ ಶಿವಲಿಂಗವಿನ್ನು ಕೇಳು
ಲಲಿತತೇಜೋರಾಶಿಯಾಗಿ ಕರ್ತೃತ್ವಮಂ
ತಳೆದು ಸುಜ್ಞಾನಶಕ್ತಿಯ ಕೂಡಿ ಬುದ್ಧಿಗಂ
ಒಲಿದು ಗೋಚರಿಪುದೇ ಗುರುಲಿಂಗವೆಲೆ ಸಿದ್ಧರಾಮೇಶ ಕೇಳೆಂದನು ೧೬

ಸಕಲತತ್ತ್ವಾಶ್ರಯಂ ನಿತ್ಯಕರ್ಮಾತ್ಮಕಂ
ಪ್ರಕಟಿಸುವ ಸತ್ಕ್ರಿಯಾಶಕ್ತಿಯುಕ್ತಂ ನೋಡ
ಲಕಳಂಕಚಿತ್ತ ಕರಣಗ್ರಾಹ್ಯನಚಲನಾಧಾರನಧಿಕಾರೂಢನು
ವಿಕರಿಸಿ ನಿವೃತ್ತಿಮಾರ್ಗಾಭಿಧಾನವನುಳ್ಳ
ಸುಕರವೆನಿಸುವ ಸದಾಚಾರಲಿಂಗವಿದೆಂದು
ಮುಕುತಿದಾಯಕನೆನಿಪ ಚೆನ್ನಬಸವಂ ಸಿದ್ಧರಾಮಂಗೆ ನಿರವಿಸಿದನು ೧೭

೧೫. ಪರತರನು, ಜ್ಯೋತಿಸ್ವರೂಪನು, ಜ್ಞಾನಗೋಚರನು, ಪರಾಶಕ್ತಿಯೊಡಗೂಡಿದವನು, ನಿರ್ಮಲನು, ನಿರುಪಮನು, ಸಾದಾಖ್ಯತತ್ತ್ವನು. ಇದು ಪ್ರಸಾದ ಲಿಂಗ ಕೇಳು ಎಂದನು. ನೋಡಲು ಜ್ಯೋತಿರ್ಮಯನು, ಸಕಲ ನಿಷ್ಕಲನು, ಪರಮ ಪುರುಷನು, ಮನಸ್ಸಿಗೆ ಗೋಚರನಾದವನು, ಅಮೂರ್ತಕನು, ಆದಿಶಕ್ತಿಯ ಒಡಗೂಡಿರುವವನು–ಚರಲಿಂಗ, ಎಲೆ ಸಿದ್ಧರಾಮ ಕೇಳು ಎಂದನು. ೧೬. ಥಳಥಳಿಸಿ ಹೊಳೆಯುವ ತೇಜೋಮೂರ್ತಿಯಾಗಿ ಪ್ರಕಾಶಿಸುತ್ತ ಇಚ್ಛಾಶಕ್ತಿಯೊಡಗೂಡಿ ವ್ಯಕ್ತವಾಗಿ ಸಂತೋಷಿಸಿ ಅಹಂಕಾರಕ್ಕೆ ಗೋಚರಿಸುತ್ತಿರುವುದೇ ಶಿವಲಿಂಗವು. ಇನ್ನು ಕೇಳು, ಲಲಿತ ತೇಜೋರಾಶಿಯಾಗಿ ಕರ್ತೃತ್ವವನ್ನು ತಾಳಿ ಸುಜ್ಞಾನಶಕ್ತಿಯನ್ನು ಕೂಡಿ ಬುದ್ಧಿಗೆ ಒಲಿದು ಕಾಣಿಸುವುದೇ ಗುರುಲಿಂಗ, ಎಲೆ ಸಿದ್ಧರಾಮ ಕೇಳು ಎಂದನು. ೧೭. ಸಕಲ ತತ್ತ್ವಕ್ಕೂ ಆಶ್ರಯನು, ನಿತ್ಯಕರ್ಮಾತ್ಮಕನು, ಸತ್ಕ್ರಿಯಾಶಕ್ತಿಯ ಜೊತೆ ಕೂಡಿರುವವನು. ನೋಡಲು ಅಕಳಂಕವಾದ ಮನವುಳ್ಳವನು, ಚಿತ್ತಗಮ್ಯನು, ಸ್ಥಿರನು, ಆಧಾರನು, ಮಹಾಯೋಗಿಯು ವ್ಯತ್ಯಾಸಗೊಂಡು ನಿವೃತ್ತಿಮಾರ್ಗಾಭಿಧಾನವನ್ನು ಹೊಂದಿರುವ ಸುಕರವೆನ್ನಿಸುವ ಸದಾಚಾರಲಿಂಗವಿದು ಎಂದು ಮುಕ್ತಿದಾಯಕನೆನ್ನಿಸುವ ಚೆನ್ನಬಸವನು

CC-0. Jangamwadi Math Collection. Digitized by eGangotri

ಇಂತೀ ಮಹಾಲಿಂಗವಾದಿ ಷಡ್ವಿಧಲಿಂಗ
ವಂತಾಗ ತಮ್ಮ ಷಡ್ವಿಧಶಕ್ತಿಯರ ಕೂಡಿ
ಸಂತಸದಿ ಕರಣಷಡ್ವಿಧಗ್ರಾಹ್ಯದಿಂದೆ ತತ್ಸೇವ್ಯದಿಂದಿರುತಿರ್ದರು
ಮುಂತೆ ತತ್ಸೇವ್ಯಕವಿಭೇದದಿಂದಾತ್ಮತ
ತ್ತ್ವಂ ತಾನೆ ತನ್ನ ಸದ್ಭಕ್ತಿಯು ವಿಚಿತ್ರದೆ ನಿ
ರಂತರಂ ಯೋಗಾಂಗ ಭೋಗಾಂಗ ತ್ಯಾಗಾಂಗವೆಂದು ತಾಂ ತ್ರಿವಿಧವಾಯ್ತು ೧೮

ಯೋಗಾಂಗವೆನೆ ಶಿವನ ಸಂಯೋಗವಾ ವಿಮಲ
ಭೋಗಾಂಗವೆನೆ ಶಿವಂ ಸಹವಾಗಿ ಭೋಗಿಪ್ಪುದು
ತ್ಯಾಗಾಂಗವೆನೆ ಶಿವಂ ಶಿವಭಕ್ತರಲ್ಲದನ್ಯರಸಂಗವಂ ತ್ಯಜಿಪ್ಪುದು
ಯೋಗಾಂಗವೇ ಸುಕಾರಣತನುವೆನಿಪ್ಪುದಾ
ಭೋಗಾಂಗವೇ ಸೂಕ್ಷ್ಮತನುವೆನಿಪ್ಪುದಾ ವಿಮಲ
ತ್ಯಾಗಾಂಗವೆನಿಪ್ಪುದೇ ಸ್ಥೂಲತನುವೆಲೆ ಸಿದ್ಧರಾಮೇಶ ಕೇಳೆಂದನು ೧೯

ಬಳಿಕಲಾ ಯೋಗಾಂಗವೇ ಪ್ರಾಜ್ಞನಾ ಮನಕೆ
ಹೊಳೆವ ಭೋಗಾಂಗವೇ ತೈಜಸಂ ಕಣ್ಗಳ್ಗೆ
ಸುಳಿವ ತ್ಯಾಗಾಂಗವೇ ವಿಶ್ವನಾ ಯೋಗಾಂಗವೇ ಸುಷುಪ್ತಿಯೊಳಿರ್ಪುದು
ತಿಳಿಯಲಾ ಭೋಗಾಂಗವೇ ಸ್ವಪ್ನದಲ್ಲಿ ಥಳ
ಥಳಿಪ್ಪುದಾ ತ್ಯಾಗಾಂಗವೇ ಜಾಗ್ರವಿಂತು ನಿ
ರ್ಮಳವೆನಿಪ್ಪಂಗತ್ರಯಂಗಳೇ ತತ್ತ್ರಿವಿಧವಸ್ಥೆಗಳೊಳಿರುತಿರ್ಪುವು ೨೦

ಸಿದ್ಧರಾಮನಿಗೆ ನಿರೂಪಿಸಿದನು. ೧೮. ಹೀಗೆ ಈ ಮಹಾಲಿಂಗ ಮೊದಲಾದ ಆರು ವಿಧ ಲಿಂಗಗಳೂ ಆಗ ತಮ್ಮ ಆರು ವಿಧವಾದ ಶಕ್ತಿಯರನ್ನು ಕೂಡಿ ಸಂತೋಷದಿಂದ ಷಡಂಗ ಗಳಿಗೆ ಗೋಚರವಾಗಿ ಆ ಸೇವೆಯಿಂದ ಇರುತ್ತಿದ್ದರು. ಮುಂದೆ ಆ ಸೇವಕ ವಿಭೇದದಿಂದ ಆತ್ಮತತ್ತ್ವವು ತಾನೇ ತನ್ನ ಸದ್ಭಕ್ತಿಯ ವಿಚಿತ್ರದಿಂದ ಸದಾ ಯೋಗಾಂಗ, ಭೋಗಾಂಗ, ತ್ಯಾಗಾಂಗವೆಂದು ಮೂರು ವಿಧವಾಯಿತು. ೧೯. ಯೋಗಾಂಗವೆಂದರೆ ಶಿವನ ಐಕ್ಯಾನು ಸಂಧಾನ. ಆ ವಿಮಲವಾದ ಭೋಗಾಂಗ ಎಂದರೆ ಶಿವನ ಸಮೇತನಾಗಿ ಸೇವಿಸಿ ಸುಖಿಸು ವುದು. ತ್ಯಾಗಾಂಗವೆಂದರೆ ಶಿವ-ಶಿವಭಕ್ತರಲ್ಲದ ಬೇರೆಯವರ ಸಂಗವನ್ನು ಬಿಡುವುದು. ಯೋಗಾಂಗವೇ ಕಾರಣತನುವೆನಿಸುವುದು. ಭೋಗಾಂಗವೇ ಸೂಕ್ಷ್ಮತನು ಎನಿಸುವುದು. ವಿಮಲವಾದ ತ್ಯಾಗಾಂಗವೇ ಸ್ಥೂಲತನು–ಎಲೆ ಸಿದ್ಧರಾಮ ಕೇಳು ಎಂದನು. ೨೦. ಅನಂತರ ಆ ಯೋಗಾಂಗವೇ ಪ್ರಾಜ್ಞ, ಆ ಮನಸ್ಸಿಗೆ ಹೊಳೆಯುವ ಭೋಗಾಂಗ ತೈಜಸ, ಕಣ್ಣುಗಳಿಗೆ ಕಾಣುವ ತ್ಯಾಗಾಂಗವೇ ವಿಶ್ವ. ಆ ಯೋಗಾಂಗವೇ ಸುಷುಪ್ತಿಯಲ್ಲಿ ಇರುವುದು. ಆ ಭೋಗಾಂಗವೇ ಸ್ವಪ್ನದಲ್ಲಿ ಥಳಥಳಿಸುವುದು. ಆ ತ್ಯಾಗಾಂಗವೇ ಜಾಗೃತವಾಗಿರುವುದು. ಹೀಗೆ ನಿರ್ಮಲವೆನಿಸುವ ಮೂರು ಅಂಗಗಳೇ ಆ ಮೂರು

CC-0. Jangamwadi Math Collection. Digitized by eGangotri

ಯೋಗಾಂಗವೆಂಬುದೇ ಪರಮಾತ್ಮನಾ ವಿಮಲ
ಭೋಗಾಂಗವೆಂಬುದೇಯಂತರಾತ್ಮಂ ಮಹಾ
ತ್ಯಾಗಾಂಗವೆಂಬುದೇ ಜೀವಾತ್ಮವಿಂತು ನಾಮಂಗಳಿಂದೆಸೆವುತಿರ್ಪ
ಯೋಗ ಭೋಗ ತ್ಯಾಗವೆಂಬೀ ತ್ರಯಾಂಗವೇ
ರಾಗದಿಂದೊಂದೊಂದು ತಮ್ಮೊಳ್ ವಿಲಾಸದಿಂ
ದಾಗಳೆರಡೆರಡಾದುವೆಲೆ ಸಿದ್ಧರಾಮೇಶ ಕೇಳೆಂದು ನಿರವಿಸಿದನು ೨೧

ಮಿಸುಪ ಯೋಗಾಂಗವೆಂದೈಕ್ಯನುಂ ಶರಣನಂ
ದೆಸೆವ ಭೋಗಾಂಗವೇ ಪ್ರಾಣಲಿಂಗಿ ಪ್ರಸಾದಿ
ಯುಸಿರಲೇಂ ತ್ಯಾಗಾಂಗವೇ ಮಹೇಶಂ ಭಕ್ತನೆಂದು ಷಟ್ಸ್ಥಲವಾದುದು
ಪಸರಿಸುವ ತನ್ನ ಸದ್ಭಕ್ತಿಯ ವಿಚಿತ್ರದೊಂ
ದೆಸಕದಿಂದಂಗವೇ ಷಟ್ಸ್ಥಲವನೈದೆ ರಾ
ಜಿಸುವ ತದ್ಭಕ್ತಿ ತಾನಾರಾದುದೆಲೆ ಸಿದ್ಧರಾಮೇಶ ಕೇಳೆಂದನು ೨೨

ಪರಮಸಮರಸಭಕ್ತಿಯಾನಂದಭಕ್ತಿ ಮ
ತ್ತಿರಲದನುಭವಭಕ್ತಿಯವಧಾನಭಕ್ತಿ ಸು
ಸ್ಥಿರದಿಂದೆ ನೈಷ್ಠಿಕಾಭಕ್ತಿಯದು ಸದ್ಭಕ್ತಿಯೆಂದು ಷಡ್ವಿಧವನಾಂತು
ಪರಿವಿಡಿಯೊಳೈಕ್ಯಸ್ಥಲವನೆ ಸಮರಸಭಕ್ತಿ
ಶರಣಸ್ಥಲವನೆ ಮತ್ತಾನಂದಭಕ್ತಿಯಾ
ಪರಿಯೊಳಾ ಪ್ರಾಣಲಿಂಗಿಸ್ಥಲವನನುಭಾವಭಕ್ತಿ ತತ್ಕ್ರಮದೊಳಿನ್ನು ೨೩

ರೀತಿಯ ಅವಸ್ಥೆಗಳಲ್ಲಿ ಇರುತ್ತಿರುವುವು. ೨೧. ಯೋಗಾಂಗವೆಂಬುದೇ ಪರಮಾತ್ಮ. ಆ ವಿಮಲವಾದ ಭೋಗಾಂಗವೆಂಬುದೇ ಅಂತರಾತ್ಮ. ಮಹಾತ್ಯಾಗಾಂಗವೆನ್ನುವುದೇ ಜೀವಾತ್ಮ. ಈ ರೀತಿ ಹೆಸರು ಪಡೆದಿರುವ ಯೋಗ ಭೋಗ-ತ್ಯಾಗ ಎಂಬ ಈ ಮೂರು ಅಂಗಗಳೇ ಪ್ರೀತಿಯಿಂದ ತಮ್ಮ ಲೀಲೆಯಿಂದ ಎರಡೆರಡಾದುವು, ಎಲೆ ಸಿದ್ಧರಾಮ ಕೇಳು ಎಂದು ನಿರೂಪಿಸಿದನು. ೨೨. ಪ್ರಕಾಶಿಸುವ ಯೋಗಾಂಗವು ಐಕ್ಯ ಮತ್ತು ಶರಣವೆಂದೂ, ಖ್ಯಾತವಾದ ಭೋಗಾಂಗವೇ ಪ್ರಾಣಲಿಂಗಿ, ಪ್ರಸಾದಿಯೆಂದೂ, ಹೇಳುವುದೇನು, ತ್ಯಾಗಾಂಗವೇ ಮಹೇಶ ಮತ್ತು ಭಕ್ತನೆಂದೂ ಷಟ್ಸ್ಥಲಗಳಾದುವು. ಹರಡಿರುವ ತನ್ನ ಉತ್ತಮ ಭಕ್ತಿಯ ವಿಚಿತ್ರವಾದ ಕಾರಣದಿಂದ ಅಂಗವೇ ಷಟ್ಸ್ಥಲಗಳಾಗಲು ಪ್ರಕಾಶಿಸುವ ಆ ಭಕ್ತಿ ತಾನೂ ಸಹ ಆರಾಗಿ ಒಡೆಯಿತು, ಸಿದ್ಧರಾಮ, ಕೇಳು ಎಂದನು. ೨೩. ಪರಮ ಸಮರಸಭಕ್ತಿ, ಆನಂದಭಕ್ತಿಯೆಂತಲೂ, ಆ ಅನುಭವಭಕ್ತಿ ಅವಧಾನ ಭಕ್ತಿ ಎಂತಲೂ, ಸುಸ್ಥಿರವಾಗಿ ನೈಷ್ಠಿಕಾಭಕ್ತಿ ಸದ್ಭಕ್ತಿಯೆಂದೂ ಆರು ವಿಧವಾಗಿ ಅನುಕ್ರಮವಾಗಿ ಐಕ್ಯಸ್ಥಲವನ್ನು ಸಮರಸಭಕ್ತಿಯೂ, ಶರಣಸ್ಥಲವನ್ನು ಆನಂದಭಕ್ತಿಯೂ ಇದೇ ರೀತಿ ಪ್ರಾಣಲಿಂಗಿಸ್ಥಲವನ್ನು ಅನುಭಾವಭಕ್ತಿಯೂ, ಅದೇ ಕ್ರಮದಿಂದ ಇನ್ನು

CC-0. Jangamwadi Math Collection. Digitized by eGangotri

ವರಪ್ರಸಾದಿಸ್ಥಲವನವಧಾನಭಕ್ತಿಯಾ
ಪರಿ ಮಹೇಶಸ್ಥಲವ ನೈಷ್ಠಿಕಾಭಕ್ತಿ ಮ
ತ್ತಿರದೆ ಭಕ್ತಸ್ಥಲವನೆಸೆವ ಸದ್ಭಕ್ತಿಯಿಂತಂಗಸ್ಥಲಂಗಳಾರು
ಪರಿವಿಡಿಯೊಳಾ ಭಕ್ತಿ ತಾನೆ ಷಡ್ವಿಧರೂಪ
ಧರಿಸಿಯೊಡಪೆರೆದಳೈಕ್ಯಾದಿ ಭಕ್ತಾಂತವಾ
ಗಿರುತಿರ್ಪ ಷಟ್ಸ್ಥಲವನೆಲೆ ಸಿದ್ಧರಾಮೇಶ ಕೇಳೆಂದು ನಿರವಿಸಿದನು ೨೪

ಎಲೆ ಸಿದ್ಧರಾಮೇಶ ಕೇಳ್ವುದಿನ್ನಂಗಷ
ಟ್ಸ್ಥಲಮುಂ ಪ್ರವೃತ್ತಿಮಾರ್ಗದೊಳುದಿಸಿದುದನೊಲಿದು
ಪೊಳೆವ ಚಿಚ್ಛಕ್ತಿಯುಂ ಶಿವನೇ ಮಹಾಲಿಂಗಮೆನಿಸಿ ತತ್ಸೇವಕದೊಳು
ಬಳಿಕಲೈಕ್ಯಸ್ಥಳವದಾಯ್ತಾ ಮಹಾಲಿಂಗ
ದೊಳೆ ಪರಾಶಕ್ತಿಯನುಭವದಿಂ ಪ್ರಸಾದಾಖ್ಯ
ದಲಿ ಮೆರೆವ ಲಿಂಗಮಾಯ್ತವರುಪಾಸಕದೆ ಶರಣಸ್ಥಲಂ ತಾನಾದುದು ೨೫

ವರಸುಪ್ರಸಾದಲಿಂಗದಿನಾದಿಶಕ್ತಿಯುಂ
ಬೆರಸಿ ಚರಲಿಂಗವಾಯ್ತುದರುಪಾಸಕದೊಳಂ
ದಿರದೆ ಸತ್ಪ್ರಾಣಲಿಂಗಿಸ್ಥಲವದಾಯ್ತು ಚರಲಿಂಗದಿಂದುದಿಸಿ ಬಳಿಕೆ
ನಿರುತದಿಚ್ಛಾಶಕ್ತಿಯಾಗೆ ತತ್ಸಂಗದಿಂ
ಪರಿಕಿಸಲ್ ಶಿವಲಿಂಗವಾಯ್ತುದರ ಸೇವಕದಿ
ಪರಮಪ್ರಸಾದಿಯು ಸ್ಥಲವಾಯ್ತು ಸಿದ್ಧರಾಮೇಶ ನೀಂ ಕೇಳೆಂದನು ೨೬

೨೪. ಶ್ರೇಷ್ಠವಾದ ಪ್ರಸಾದಿಸ್ಥಲವನ್ನು ಅವಧಾನಭಕ್ತಿ, ಮಹೇಶಸ್ಥಲವನ್ನು ನೈಷ್ಠಿಕಾ ಭಕ್ತಿ, ಭಕ್ತಿಸ್ಥಲವನ್ನು ಸದ್ಭಕ್ತಿ- ಈ ರೀತಿ ಅಂಗಸ್ಥಲಗಳಾರು. ಕ್ರಮವಾಗಿ ಆ ಭಕ್ತಿ ತಾನೆ ಆರು ವಿಧ ರೂಪ ಧರಿಸಿ ಒಡಗೂಡಿದಳು. ಐಕ್ಯ ಮೊದಲಾಗಿ ಭಕ್ತಸ್ಥಲ ಕೊನೆಯಾಗಿ ಉಳ್ಳ ಷಟ್ಸ್ಥಲವನ್ನು ಸಿದ್ಧರಾಮೇಶ, ಕೇಳು ಎಂದು ವಿವರಿಸಿದನು. ೨೫. ಎಲೆ ಸಿದ್ಧರಾಮೇಶ ಇನ್ನು ಪ್ರವೃತ್ತಿಮಾರ್ಗದಲ್ಲಿ ಹುಟ್ಟಿದ ಅಂಗಷಟ್ಸ್ಥಲವನ್ನು ಪ್ರೀತಿಯಿಂದ ಕೇಳು. ಹೊಳೆಯುವ ಚಿಚ್ಛಕ್ತಿಯಿಂದ ಶಿವನೇ ಮಹಾಲಿಂಗವೆನಿಸಿದನು. ಅನಂತರ ಅದಕ್ಕೆ ಐಕ್ಯಸ್ಥಳವು ಉಪಾಸಕವಾಯಿತು. ಆ ಮಹಾಲಿಂಗದಲ್ಲಿಯೇ ಪರಾಶಕ್ತಿಯ ಸ್ಫುರಣದಿಂದ ಪ್ರಸಾದಾಖ್ಯದಲ್ಲಿ ಪ್ರಕಾಶಿಸುವ ಲಿಂಗವಾಯಿತು. ಅದಕ್ಕೆ ಶರಣಸ್ಥಳ ಉಪಾಸಕವಾಯಿತು. ೨೬. ಶ್ರೇಷ್ಠವಾದ ಪ್ರಸಾದಲಿಂಗದೊಡನೆ ಆದಿಶಕ್ತಿ ಕೂಡಲು ಚರಲಿಂಗ ಹುಟ್ಟಿತು. ಇರದೆ ಸತ್ಪ್ರಾಣಲಿಂಗಿಸ್ಥಳವು ಅದರ ಉಪಾಸಕವಾಯಿತು. ಚರಲಿಂಗದಿಂದ ಹುಟ್ಟಿ ಬಳಿಕ, ಇಚ್ಛಾಶಕ್ತಿಯಾಗಲು ಅದರ ಸಂಗದಿಂದ ಶಿವಲಿಂಗ ವಾಯಿತು. ಅದರ ಸೇವೆಗೆ ಪರಮಪ್ರಸಾದಿಸ್ಥಲವಾಯಿತು, ಸಿದ್ಧರಾಮೇಶ, ನೀನು

CC-0. Jangamwadi Math Collection. Digitized by eGangotri

ಎಸೆವ ಶಿವಲಿಂಗದಿಂ ಜ್ಞಾನಶಕ್ತಿಯು ಕೂಟ
ದೆಸಕದಿಂ ಗುರುಲಿಂಗವಾಯಲ್ಲಿ ತತ್ಸೇವಕದಿ
ಪಸರಿಪ ಮಹೇಶ್ವರಸ್ಥಲವಾಯ್ತು ಗುರುಲಿಂಗದಿಂ ಕ್ರಿಯಾಶಕ್ತಿಯೊಡನೆ
ಬೆಸುಗೆಯಿಂದಾಚಾರಲಿಂಗಮಾಯ್ತದನು ಪೂ
ಜಿಸುವ ಭಕ್ತಿಯೊಳೆ ಭಕ್ತಸ್ಥಲವದಾಯ್ತು ರಾ
ಜಿಸುವ ಷಡ್ವಿಧಲಿಂಗದಿಂದಲೈಕ್ಯಾದಿ ಭಕ್ತಾಂತ ಷಟ್ಸ್ಥಲವಾದುದು ೨೭

ಪರಮ ಷಟ್ಸ್ಥಲವನಾಂತಂಗವೆನಿಪಾತ್ಮನಿಂ
ದಿರದೆ ಗಗನಂ ಗಗನದಿಂ ವಾಯು ವಾಯುವಿಂ
ಮರುತಾಪ್ತನಾ ಮರುತಸಖನಿಂದೆ ವಾರಿ ತದ್ವಾರಿಯಿಂ ಪೃಥ್ವಿಯಾಯ್ತು
ಪರತತ್ತ್ವದಿಂದೆ ಭಾವಂ ಭಾವದಿಂ ಜ್ಞಾನ
ವಿರದೆ ಸುಜ್ಞಾನದಿಂ ಮನವಾ ಮನಸ್ಸಿನಿಂ
ದುರುತರದಹಂಕಾರವದರಿಂದೆ ಬುದ್ಧಿಯಾ ಬುದ್ಧಿಯಿಂ ಚಿತ್ತವಾಯ್ತು ೨೮

ಪರಿಯೊಳೈಕ್ಯಸ್ಥಲವೆ ನಿರ್ಮಳಾತ್ಮಾಂಗವಾ
ಶರಣಸ್ಥಲಂ ತಿಳಿಯೆ ಗಗನಾಂಗವಾಗಲಂ
ದಿರದಿನ್ನು ಪ್ರಾಣಲಿಂಗಸ್ಥಲವೆ ಮರುತಾಂಗವೀ ಕ್ರಮದೊಳಿನ್ನು ಮುಂದೆ
ಪರಮಪ್ರಸಾದಿಸುಸ್ಥಲವೆಯನಲಾಂಗವಾ
ವರಮಹೇಶಸ್ಥಲವೆ ಜಲದಂಗವಿನ್ನು ಸು
ಸ್ಥಿರದಿಂದಲೆಸೆವೆ ಭಕ್ತಸ್ಥಲವೆ ಭೂಮ್ಯಂಗವೆಲೆ ರಾಮ ಕೇಳೆಂದನು ೨೯

ಕೇಳು ಎಂದನು. ೨೭. ಪ್ರಕಾಶಿಸುವ ಶಿವಲಿಂಗದೊಡನೆ ಜ್ಞಾನಶಕ್ತಿಯು ಕೂಡಲು ಗುರುಲಿಂಗವಾಯಿತು. ಅದರ ಸೇವೆಗೆ ವಿಶಾಲವಾದ ಮಹೇಶ್ವರಸ್ಥಲವಾಯಿತು. ಗುರುಲಿಂಗವು ಕ್ರಿಯಾಶಕ್ತಿಯೊಡನೆ ಸೇರಲು ಆಚಾರಲಿಂಗವು ಜನಿಸಿತು. ಅದನ್ನು ಪೂಜಿಸುವ ಭಕ್ತಿಯಿಂದ ಭಕ್ತಿಸ್ಥಲವಾಯಿತು. ಪ್ರಕಾಶಿಸುವ ಆರು ವಿಧ ಲಿಂಗದಿಂದ ಐಕ್ಯ ವೊದಲಾಗಿ ಭಕ್ತಿ ಕೊನೆಯಾದ ಷಟ್ಸ್ಥಲವಾಯಿತು. ೨೮. ಪರಮ ಶ್ರೇಷ್ಠವಾದ ಷಟ್ಸ್ಥಲವನ್ನು ಹೊಂದಿದ ಅಂಗವೆನಿಸುವ ಆತ್ಮನಿಂದ ಆಕಾಶವೂ, ಆಕಾಶದಿಂದ ವಾಯುವೂ, ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ಜಲವೂ, ಆ ಜಲದಿಂದ ಭೂಮಿಯೂ ಆಯಿತು. ಪರತತ್ತ್ವದಿಂದ ಭಾವ, ಭಾವದಿಂದ ಜ್ಞಾನ, ಸುಜ್ಞಾನದಿಂದ ಮನಸ್ಸು, ಆ ಮನಸ್ಸಿನಿಂದ ಅಹಂಕಾರ, ಅದರಿಂದ ಬುದ್ಧಿ, ಬುದ್ಧಿಯಿಂದ ಚಿತ್ತವಾಯಿತು. ೨೯. ಕ್ರಮವಾಗಿ ಐಕ್ಯಸ್ಥಲವೇ ನಿರ್ಮಲವಾದ ಆತ್ಮಾಂಗ. ಆ ಶರಣಸ್ಥಲ ತಿಳಿಯಲು ಗಗನಾಂಗವಾಗಲು, ಇನ್ನು ಪ್ರಾಣಲಿಂಗಸ್ಥಲವೇ ಮರುತಾಂಗ. ಹೀಗೆ ಪರಮ ಪ್ರಸಾದಿಸ್ಥಲವೇ ಅನಲಾಂಗ. ಆ ಶ್ರೇಷ್ಠವಾದ ಮಹೇಶ್ವರಸ್ಥಲವೇ ಜಲದಂಗ. ಇನ್ನು ಸುಸ್ಥಿರವಾಗಿ

CC-0. Jangamwadi Math Collection. Digitized by eGangotri

ಇಂತು ಷಡ್ವಿಧವನಾಂತೈಕ್ಯಾದಿ ಭಕ್ತಸ್ಥ
ಲಾಂತಂಗಳಂ ಕ್ರಮದೊಳೊಂದರಿಂದೊಂದಂ ಗು
ಣಾಂತರವಿಲಕ್ಷಣಂಗಳ ಬೇರೆ ಬೇರೆ ಪೇಳುವೆನೊಲಿದು ಕೇಳ್ವುದಿನ್ನು
ಎಂತೆಂದೊಡಾದಿಯೊಳಗಾನು ನೀನೆಂಬುಭಯ
ವಾಂತಾ ಮನಃಪ್ರಾಣದೇಹೇಂದ್ರಿಯಾದಿಗಳ
ನಂತವೆನ್ನೊಳಗುದಿಸವೆಂದರಿದ ಸಮರಸವೆ ತಾನೀಗವೈಕ್ಯಸ್ಥಲಂ ೩೦

ಎಸೆವ ದೇಹೇಂದ್ರಿಯದ ಪರಿಯಾಯಗಳನು ಭಾ
ವಿಸಿ ತನ್ನ ರೂಪೆಂದು ಕಂಡಖಿಳವಿಷಯಮಂ
ಹಸನಾಗಿ ಕೂಡಿಕೊಂಡಾನಂದಭಕ್ತಿಯಿಂದಿರ್ಪುದೇ ಶರಣಸ್ಥಲಂ
ಮಿಸುಪ ತತ್ಪ್ರಾಣೇಂದ್ರಿಯಾದ್ಯಹಂ ಮಮತೆ ರಾ
ಜಿಸುವ ಮೋಹ ಭ್ರಾಂತಿಗಳನಳಿದು ಪರಮಸಂ
ತಸದಿಂದೆ ತತ್ವಾನುಭವದೊಳೊಪ್ಪಿರ್ಪುದೇ ಪ್ರಾಣಲಿಂಗಿಯ ಸುಸ್ಥಲಂ ೩೧

ಆವುದೊಂದಿಂದ್ರಿಯದ ಸುಖವನೆಲ್ಲವ ತನುವ
ನಾವರಿಸುವುದರಿಂದೆ ಮುನ್ನ ಲಿಂಗಕೆ ಕೊಟ್ಟು
ಸಾವಧಾನದ ಭಕ್ತಿಯಿಂದದಂ ಕೆಯ್ಕೊಂಬುದೇ ಸುಪ್ರಸಾದಿಸ್ಥಲಂ
ಆವಗಂ ವ್ರತ ನಿಯಮ ನಿತ್ಯಕರ್ಮಾದಿ ವಿವಿ
ಧಾವಳಿಯ ಕ್ರಿಯೆಗಳಿಗಸಾಧ್ಯನೆಂದರಿದು ಸ
ದ್ಭಾವದಿಂ ಶಿವಲಿಂಗನಿಷ್ಠೆಯಿಂ ಸುಖಿಯಿರ್ಪುದೇ ವರಮಹೇಶಸ್ಥಲಂ ೩೨

ಕಂಗೊಳಿಸುವ ಭಕ್ತಸ್ಥಲವೇ ಭೂಮ್ಯಂಗ, ಎಲೆ ರಾಮ, ಕೇಳು ಎಂದನು. ೩೦. ಹೀಗೆ ಆರು ವಿಧವನ್ನು ಹೊಂದಿರುವ ಐಕ್ಯ ಮೊದಲಾಗಿ ಭಕ್ತಸ್ಥಲದವರೆಗೆ ಕ್ರಮವಾಗಿ ಒಂದೊಂದರ ಗುಣ, ವ್ಯತ್ಯಾಸ, ವಿಲಕ್ಷಣಗಳನ್ನು ಬೇರೆ ಬೇರೆ ಹೇಳುತ್ತೇನೆ, ಪ್ರೀತಿಯಿಂದ ಇನ್ನು ಕೇಳು. ಹೇಗೆಂದರೆ ಆದಿಯಲ್ಲಿ ನಾನು ನೀನು ಎಂಬ ಎರಡನ್ನು ಹೊಂದಿ ಮನಸ್ಸು, ಪ್ರಾಣ, ದೇಹ, ಇಂದ್ರಿಯ ಮೊದಲಾದವುಗಳು ನನ್ನೊಳಗೆ ಹುಟ್ಟುವುದಿಲ್ಲ ಎಂದು ತಿಳಿದ ಸಾಮರಸ್ಯಭಾವವೇ ಐಕ್ಯಸ್ಥಲವು. ೩೧. ದೇಹ-ಇಂದ್ರಿಯದ ವ್ಯತ್ಯಾಸ ಗಳನ್ನು ತಿಳಿದು ಇವೆರಡೂ ತನ್ನ ರೂಪವೇ ಎಂದು ಅರಿತು ಎಲ್ಲ ವಿಷಯಗಳನ್ನೂ ಸಮನಾಗಿ ಕೂಡಿಕೊಂಡು ಆನಂದಭಕ್ತಿಯಿಂದ ಇರುವುದೇ ಶರಣಸ್ಥಲ. ಹೊಳೆಯುವ ಆ ಪ್ರಾಣ–ಇಂದ್ರಿಯ ಮೊದಲಾದವುಗಳ ಅಹಂಕಾರ, ಮಮತೆ, ಮೋಹ, ಭ್ರಾಂತಿ ಗಳನ್ನು ಬಿಟ್ಟು ಪರಮಸಂತೋಷದಿಂದ ತತ್ತ್ವಾನುಭವದಲ್ಲಿ ಇರುತ್ತಿರುವುದೇ ಪ್ರಾಣ ಲಿಂಗಿಯ ಸುಸ್ಥಲ. ೩೨. ಯಾವ ಒಂದು ಇಂದ್ರಿಯದ ಸುಖವೆಲ್ಲವನ್ನೂ ತಾನು ಅನುಭವಿಸುವುದಕ್ಕೆ ಮುನ್ನ ಲಿಂಗಕ್ಕೆ ಅರ್ಪಿಸಿ ಸಾವಧಾನವಾದ ಭಕ್ತಿಯಿಂದ ಅದನ್ನು ಸ್ವೀಕರಿಸುವುದೇ ಸುಪ್ರಸಾದಿಸ್ಥಲವು. ಯಾವಾಗಲೂ ವ್ರತ, ನಿಯಮ, ನಿತ್ಯಕರ್ಮ ಮೊದಲಾದ ವಿವಿಧ ರೀತಿಯ ಕ್ರಿಯೆಗಳಿಗೆ ಅಸಾಧ್ಯನು ಎಂದು ತಿಳಿದು ಒಳ್ಳೆಯ ಭಾವ ದಿಂದ, ಶಿವಲಿಂಗನಿಷ್ಠೆಯಿಂದ ಸುಖವಾಗಿ ಇರುವುದೇ ಶ್ರೇಷ್ಠವಾದ ಮಹೇಶಸ್ಥಲ.

CC-0. Jangamwadi Math Collection. Digitized by eGangotri

ಪರಿಕಿಸೆ ಶರೀರತತ್ಪ್ರಾಣಧರ್ಮಂಗಳ
ಸ್ಥಿರವೆಂದು ತಿಳಿದು ಸತ್ಕ್ರಿಯೆಗಳಿಂದೆಲ್ಲವಂ
ಪರಿಹರಿಸಿ ವಿಮಲಸದ್ಭಕ್ತಿಯಿಂದಾವಾಗಲಿರ್ಪುದೇ ಭಕ್ತಸ್ಥಲಂ
ಪರಿವಿಡಿಯೊಳಿಂತೆಸೆವ ಷಡ್ವಿಧಾಂಗಸ್ಥಲದ
ಪರಿಯಾಯ ಗುಣ ನಾಮ ಲಕ್ಷಣವಿದೆಂದಾಗ
ಕರುಣದಿಂ ಚೆನ್ನಬಸವೇಶ್ವರಂ ಸಿದ್ಧರಾಮೇಶಂಗೆ ನಿರವಿಸಿದನು ೩೩

ತಿಳಿವುದಿನ್ನೈಕ್ಯಂಗೆ ಸದ್ಭಾವಹಸ್ತವಂ
ದಳವಟ್ಟ ಶರಣಂಗೆ ಸುಜ್ಞಾನಹಸ್ತವಿ
ನ್ನೊಲಿದು ಸತ್ಪ್ರಾಣಲಿಂಗಿಗೆ ಸುಮನಹಸ್ತವಾ ಸುಪ್ರಸಾದಿಗೆ ಭಾವಿಸೆ
ಪೊಳೆವ ನಿರಹಂಕಾರಹಸ್ತಂ ಮಹೇಶಂಗೆ
ಸಲೆ ಬುದ್ಧಿಯೇ ಹಸ್ತವಿನ್ನು ಭಕ್ತಂಗೆ ಥಳ
ಥಳಿಸುವ ಸುಚಿತ್ತವೇ ಹಸ್ತವೆಲೆ ಸಿದ್ಧರಾಮೇಶ ನೀಂ ಕೇಳೆಂದನು ೩೪

ಇಂತು ಷಡ್ವಿಧವನಾಂತಂಗಸ್ಥಲಂಗಳಂ
ಪಿಂತೆ ಷಡ್ವಿಧವಾಂತ ಲಿಂಗಸ್ಥಲಂಗಳಂ
ಸಂತಸದುಪಾಸ್ಯೋಪಾಸಕ ಸೇವ್ಯಸೇವಕ ಸುಪೂಜ್ಯಪೂಜಕಭಾವದಿಂ
ಅಂತರಿಸದಾ ತಮ್ಮ ಭಕ್ತಿಯ ವಿಲಾಸದಿಂ
ದಂ ತಳೆದು ತಮ್ಮ ಹಸ್ತಂಗಳಿಂದರ್ಚಿಸಿದ
ರಿಂತಿದರ ಸಂಸ್ಥಿತಿಗಳಾದ್ಯಂತ ಲಕ್ಷಣಂಗಳನೊರೆವೆನಾಲಿಸಿನ್ನು ೩೫

೩೩. ಪರೀಕ್ಷಿಸಲು ಶರೀರ ಅದರ ಪ್ರಾಣಧರ್ಮಗಳನ್ನು ಅಸ್ಥಿರವೆಂದು ತಿಳಿದು ಒಳ್ಳೆಯ ಕೆಲಸಗಳಿಂದ ಅವೆಲ್ಲವನ್ನೂ ಪರಿಹರಿಸಿಕೊಂಡು ವಿಮಲ ಸದ್ಭಕ್ತಿಯಿಂದ ಯಾವಾಗಲೂ ಇರುವುದೇ ಭಕ್ತಸ್ಥಲವು. ಅನುಕ್ರಮವಾಗಿ ಈ ರೀತಿಯ ಷಡ್ವಿಧಾಂಗ ಸ್ಥಲದ ಬೇರೆ ಬೇರೆ ಗುಣ, ಹೆಸರು, ಲಕ್ಷಣಗಳಿವು ಎಂದು ಆಗ ಕರುಣೆಯಿಂದ ಚೆನ್ನಬಸವೇಶ್ವರನು ಸಿದ್ಧರಾಮನಿಗೆ ವಿವರಿಸಿದನು. ೩೪. ಇನ್ನು ತಿಳಿದುಕೋ, ಐಕ್ಯನಿಗೆ ಸದ್ಭಾವ ಹಸ್ತ, ಶರಣನಿಗೆ ಸುಜ್ಞಾನ ಹಸ್ತ, ಸತ್ಪ್ರಾಣಲಿಂಗಿಗೆ ಸುಮಡ ಹಸ್ತ, ಆ ಸುಪ್ರಸಾದಿಗೆ ತಿಳಿಯಲು ಹೊಳೆಯುವ ನಿರಹಂಕಾರ ಹಸ್ತ, ಮಹೇಶನಿಗೆ ಬುದ್ಧಿಯೇ ಹಸ್ತ, ಇನ್ನು ಭಕ್ತನಿಗೆ ಥಳ ಥಳಿಸುವ ಸುಚಿತ್ತವೇ ಹಸ್ತ, ಎಲೆ ಸಿದ್ಧರಾಮೇಶ, ನೀನು ಕೇಳು ಎಂದನು. ೩೫. ಹೀಗೆ ಷಡ್ವಿಧವನ್ನು ಹೊಂದಿದ ಅಂಗಸ್ಥಳಗಳನ್ನು, ಮೊದಲೇ ಷಡ್ವಿಧಗಳನ್ನು ಹೊಂದಿದ್ದ ಲಿಂಗಸ್ಥಳಗಳನ್ನು, ಸಂತೋಷದಿಂದ ಉಪಾಸ್ಯ-ಉಪಾಸಕ, ಸೇವ್ಯ-ಸೇವಕ ಸುಪೂಜ್ಯ-ಪೂಜಕ ಭಾವದಿಂದ ತಡಮಾಡದೆ ತಮ್ಮ ಭಕ್ತಿಯ ಭಾವದಿಂದ ಹೊಂದಿ ತಮ್ಮ ಹಸ್ತಗಳಿಂದ ಪೂಜಿಸಿದರು. ಈ ರೀತಿಯಾಗಿ ಅದರ ರೀತಿ ನೀತಿಗಳ ಆದ್ಯಂತವಾದ ಲಕ್ಷಣ

CC-0. Jangamwadi Math Collection. Digitized by eGangotri

ತಿಳಿಯಲಾತ್ಮಾಂಗದೊಳ್ ಸದ್ಭಾವಹಸ್ತದಿಂ
ಪೊಳೆವ ಸಮರಸಭಕ್ತಿಯಿಂದ ಚಿಚ್ಛಕ್ತಿಯೊಳ್
ಬೆಳಗುವ ಮಹಾಲಿಂಗವಂ ಧರಿಸಿ ಪೂಜಿಸುವನೇ ಪರಮಲಿಂಗೈಕ್ಯನು
ಬಳಿಕ ಗಗನಾಂಗದೊಳ್ ಸುಜ್ಞಾನಹಸ್ತದಿಂ
ತೊಳಗುವಾನಂದಭಕ್ತಿಯೊಳೆ ಪರಶಕ್ತಿಸ
ಮ್ಮಿಳಿತಪ್ರಸಾದಲಿಂಗವ ಧರಿಸಿ ಪೂಜೆಯಂ ಮಾಡುವಾತನೆ ಶರಣನು ೩೬

ಶ್ವಸನಾಂಗದೊಳ್ ಸುಮನಹಸ್ತದಿಂ ಪರಮಸಂ
ತಸದಲನುಭವಭಕ್ತಿಯಿಂದಾದಿಶಕ್ತಿಯೊಳ್
ಬೆಸುಗೆಯಿಂದಿರ್ಪ ಚರಲಿಂಗವಂ ಧರಿಸಿ ಪೂಜಿಸುವನೇ ಪ್ರಾಣಲಿಂಗಿ
ಮಿಸುಗುವನಲಾಂಗದೊಳಹಂಕಾರಹಸ್ತದಿಂ
ಪಸರಿಪವಧಾನಭಕ್ತಿಯೊಳಗಿಚ್ಛಾಶಕ್ತಿ
ಯೊಸೆದು ಕೂಡಿರ್ಪ ಶಿವಲಿಂಗಮಂ ಧರಿಸಿ ಪೂಜಿಸುವನೇ ಸುಪ್ರಸಾದಿ ೩೭

ವರಜಲಾಂಗದೊಳಾ ಸುಬುದ್ಧಿಯುರುಹಸ್ತದಿಂ
ಪರಮನಿಷ್ಠಾಭಕ್ತಿಯಿಂ ಜ್ಞಾನಶಕ್ತಿಯೊಳ್
ಬೆರಸಿ ಸುಖದಿಂದಿರ್ಪ ಗುರುಲಿಂಗಮಂ ಧರಿಸಿ ಪೂಜಿಪನೆ ಮಾಹೇಶನು
ಧರಣಿಯಂಗದೊಳಾ ಸುಚಿತ್ತದುರುಹಸ್ತದಿಂ
ಬಿರದೆ ಸದ್ಭಕ್ತಿಯಿಂದಾ ಕ್ರಿಯಾಶಕ್ತಿಯೊಡ
ವೆರಸಿದಾಚಾರಲಿಂಗವ ಧರಿಸಿ ಪೂಜೆಯಂ ಮಾಡುವಾತನೆ ಭಕ್ತನು ೩೮

ಗಳನ್ನೂ ವಿವರಿಸುತ್ತೇನೆ ಕೇಳು. ೩೬. ತಿಳಿಯಲು ಆತ್ಮಾಂಗದಲ್ಲಿ ಸದ್ಭಾವ ಹಸ್ತದಿಂದ ಹೊಳೆಯುವ ಸಮರಸ ಭಕ್ತಿಯಿಂದ ಚಿಚ್ಛಕ್ತಿಯಲ್ಲಿ ಕೂಡಿ ಪ್ರಕಾಶಿಸುವ ಮಹಾಲಿಂಗವನ್ನು ಧರಿಸಿ ಪೂಜಿಸುವವನೇ ಪರಮಲಿಂಗೈಕ್ಯನು. ಅನಂತರ ಗಗನಾಂಗದಲ್ಲಿ ಸುಜ್ಞಾನ ಹಸ್ತದಿಂದ ಪ್ರಕಾಶಿಸುವ ಆನಂದಭಕ್ತಿಯಿಂದ ಪರಶಕ್ತಿಯೊಡಗೂಡಿದ ಪ್ರಸಾದಲಿಂಗವನ್ನು ಧರಿಸಿ ಪೂಜೆಯನ್ನು ಮಾಡುವಾತನೇ ಶರಣನು. ೩೭. ಶ್ವಸನಾಂಗದಲ್ಲಿ ಸುಮನ ಹಸ್ತದಿಂದ ಪರಮಸಂತೋಷದಿಂದ ಅನುಭವಭಕ್ತಿಯಿಂದ ಆದಿಶಕ್ತಿಯಲ್ಲಿ ಕೂಡಿಕೊಂಡಿರುವ ಚರಲಿಂಗವನ್ನು ಧರಿಸಿ ಪೂಜಿಸುವವನೇ ಪ್ರಾಣಲಿಂಗಿ. ಹೊಳೆಯುವ ಅನಲಾಂಗದಲ್ಲಿ ಅಹಂಕಾರಹಸ್ತದಿಂದ ಆವರಿಸುವ ಅವಧಾನಭಕ್ತಿಯಿಂದ ಇಚ್ಛಾಶಕ್ತಿಯೊಡನೆ ಪ್ರೀತಿಯಿಂದ ಕೂಡಿರುವ ಶಿವಲಿಂಗವನ್ನು ಧರಿಸಿ ಪೂಜೆ ಮಾಡುವವನೇ ಸುಪ್ರಸಾದಿ. ೩೮. ಶ್ರೇಷ್ಠವಾದ ಜಲಾಂಗದಲ್ಲಿ ಸುಬುದ್ಧಿಯೆಂಬ ಪವಿತ್ರವಾದ ಹಸ್ತದಿಂದ, ಪರಮ ನಿಷ್ಠೆಯಿಂದ ಕೂಡಿದ ಭಕ್ತಿಯಿಂದ ಜ್ಞಾನಶಕ್ತಿಯಲ್ಲಿ ಕೂಡಿ ಸುಖವಾಗಿರುವ ಗುರುಲಿಂಗವನ್ನು ಧರಿಸಿ ಪೂಜೆಮಾಡುವವನೇ ಮಾಹೇಶನು. ಭೂಮ್ಯಂಗದಲ್ಲಿ ಸುಚಿತ್ತದ ಪವಿತ್ರಹಸ್ತದಿಂದ ಕ್ರಿಯಾಶಕ್ತಿಯೊಡನೆ ಕೂಡಿಕೊಂಡಿರುವ ಆಚಾರಲಿಂಗವನ್ನು

CC-0. Jangamwadi Math Collection. Digitized by eGangotri

ಹಿಂಗದೀ ಪರಿಯೊಳೈಕ್ಯಾದಿಭಕ್ತಾಂತವಾ
ಲಿಂಗಂಗಳಂ ಧರಿಸಿ ಪೂಜಿಸುವರಿಂತಿದೇ
ಲಿಂಗಾಂಗಸಂಯೋಗವೆಂದೆನಿಪ್ಪುದದರ ಪರಿಯಾಯುಮಂ ಪೇಳ್ವೆನಿನ್ನು
ಲಿಂಗವೆನಿಪ್ಪುದೆ ತತ್ಪದಂ ತ್ವಂಪದಂ ತಾನೆ
ಯಂಗಮುಭಯದ ನಿತ್ಯಸಂಯೋಗಮುಸಿಪದಂ
ಲಿಂಗಮೆನಿಪ್ಪುದೆ ನಾದಮಂಗವೆನಿಪ್ಪುದೆ ಬಿಂದು ಸಂಯೋಗವೇ ಚಿತ್ಕಳೆ ೩೯

ಲಿಂಗವೇ ಪರಬ್ರಹ್ಮಮಂಗವೆ ಚಿದಾತ್ಮನಾ
ಸಂಗವೇ ಸಂಯೋಗವೆಂದೆನಿಪ್ಪುದಾ ವಿಮಲ
ಲಿಂಗವೇ ಸನ್ಮಾತ್ರಮಂಗವೇ ಚಿನ್ಮಾತ್ರಮಾನಂದವೇ ಯೋಗವು
ಲಿಂಗವೇ ಮಂತ್ರಮಂದಂಗವೇ ಕ್ರಿಯೆಯುಮರ
ಸಂಗವೇ ಸಂಯೋಗಮದರಿಂದಲಿದು ಮಹಾ
ಲಿಂಗಾಂಗಸಂಯೋಗಮೆಂದೆನಿಪ್ಪುದೆಲೆ ಸಿದ್ಧರಾಮೇಶ ಕೇಳೆಂದನು ೪೦

ಒರೆವೆನಿಂ ಸರ್ವಾಂಗಲಿಂಗಸಾಹಿತ್ಯಮಂ
ಪರಿಕಿಸಲ್ ಹೃದಯಾಂಗದೊಳ್ ಮಹಾಲಿಂಗಮಾ
ಪರಿಯಲ್ಲಿ ಶ್ರೋತ್ರಾಂಗದೊಳ್ ಪ್ರಸಾದಾಖ್ಯಲಿಂಗಂ ಸತ್ವಗಂಗದಲ್ಲಿ
ಚರಲಿಂಗಮಾ ದೃಗಂಗದೊಳೆ ಶಿವಲಿಂಗಮಂ
ದಿರದೆ ಜಿಹ್ವಾಂಗದೊಳ್ ಗುರುಲಿಂಗಮುನ್ನಿರಂ
ತರದೊಳಾ ನಾಸಿಕಾಂಗದೆ ಸದಾಚಾರಲಿಂಗಂಗಳೊಲಿದಿರುತಿರ್ಪುವು ೪೧

ಧರಿಸಿ ಪೂಜೆಯನ್ನು ಮಾಡುವವನೇ ಭಕ್ತನು. ೩೯. ಹೀಗೆ ಐಕ್ಯ ಮೊದಲಾಗಿ ಭಕ್ತ ಕೊನೆಯಾದ ಲಿಂಗಗಳನ್ನು ಧರಿಸಿ ಪೂಜಿಸುವ ರೀತಿ, ಇದೇ ಲಿಂಗಾಂಗ ಸಂಯೋಗವೆನಿಸುತ್ತದೆ. ಅದರ ಭೇದಗಳನ್ನು ಇನ್ನು ಹೇಳುತ್ತೇನೆ. ಲಿಂಗವೆನ್ನಿಸುವುದೇ 'ತತ್'ಪದ, ಅಂಗವೇ 'ತ್ವಂ' ಪದವೆನ್ನಿಸುತ್ತದೆ. ಈ ಎರಡರ ನಿತ್ಯಸಂಯೋಗವೇ 'ಅಸಿ' ಪದ, ಲಿಂಗವೆನ್ನಿಸುವುದೇ ನಾದ, ಅಂಗವೆನ್ನಿಸುವುದೇ ಬಿಂದು, ಇವುಗಳ ಸಂಯೋಗವೇ ಚಿತ್ಕಳೆ. ೪೦. ಲಿಂಗವೇ ಪರಬ್ರಹ್ಮ, ಅಂಗವೇ ಚಿದಾತ್ಮ. ಅವುಗಳ ಸಂಗವೇ ಸಂಯೋಗ ಎನಿಸುತ್ತದೆ. ಆ ವಿಮಲಲಿಂಗವೇ ಸನ್ಮಾತ್ರ, ಅಂಗವೇ ಚಿನ್ಮಾತ್ರ, ಆನಂದವೇ ಯೋಗವು, ಲಿಂಗವೇ ಮಂತ್ರ, ಅಂಗವೇ ಕ್ರಿಯೆ, ಇವೆರಡರ ಸಂಗವೇ ಸಂಯೋಗ, ಆದರಿಂದ ಅದು ಮಹಾಲಿಂಗಾಂಗಸಂಯೋಗ ಎನಿಸುತ್ತದೆ ಎಲೆ ಸಿದ್ಧರಾಮೇಶ, ಕೇಳು ಎಂದನು. ೪೧. ಇನ್ನು ಎಲ್ಲ ಲಿಂಗಾಂಗಗಳ ಸಂಯೋಗಕ್ರಮವನ್ನು ಹೇಳುತ್ತೇನೆ. ಪರೀಕ್ಷಿಸಲು ಹೃದಯಾಂಗದಲ್ಲಿ ಮಹಾಲಿಂಗ. ಅದೇ ರೀತಿ ಶ್ರೋತ್ರಾಂಗದಲ್ಲಿ ಪ್ರಸಾದಾಖ್ಯಲಿಂಗ, ಆ ತ್ವಕ್ ಅಂಗದಲ್ಲಿ ಚರಲಿಂಗ, ಆ ದೃಗಂಗದಲ್ಲಿ ಶಿವಲಿಂಗ, ಜಿಹ್ವಾಂಗದಲ್ಲಿ ಗುರುಲಿಂಗ,

CC-0. Jangamwadi Math Collection. Digitized by eGangotri

ಪರಿವಿಡಿಯೊಳಿನ್ನು ಸುಜ್ಞಾನೇಂದ್ರಿಯಂಗಳ
ಲ್ಲಿರುವಂತೆ ಲಿಂಗವಾ ಕರ್ಮೇಂದ್ರಿಯಂಗಳ
ಲ್ಲಿರುತಿರ್ಪುವೆಂತೆನಲ್ ಜ್ಞಾನೇಂದ್ರಿಯಂಗಳಲ್ಲೊಂದು ತದ್ವಿಷಯವೊಂದು
ಇರದೆ ಕರ್ಮೇಂದ್ರಿಯಲ್ಲೊಂದು ಪರವಿಷಯವೊಂ
ದುರುತರದ ಭೂತವಲ್ಲೊಂದಿಂತಿವೈದಕ್ಕೆ
ಪರಿಕಿಸಲ್ ಶಿವಮೂರ್ತಿಯಲ್ಲಿಯೊಂದಧಿದೈವವೆಲೆ ರಾಮ ಕೇಳೆಂದನು ೪೨

ಪರಮಸುಜ್ಞಾನೇಂದ್ರಿ ಕರ್ಮೇಂದ್ರಿಯಂಗಳೆಂ
ಬೆರಡಕೊಂದೇ ಮೂರ್ತಿಯಧಿದೈವವಾದುದಂ
ಪರಿವಿಡಿಯೊಳೊರೆವೆನಿಂ ಶ್ರೋತ್ರ ವಾಕ್ ಶಬ್ದ ವಚನಂ ಗಗನವೆಂಬೈವಕೆ
ಪರಿಕಿಸಲ್ಕೀಶಾನಮೂರ್ತಿಯಧಿದೈವವಾ
ಪರಿಯೊಳುಂ ತ್ವಕ್ಪಾಣಿ ಸ್ಪರ್ಶ ದಾನಂಗಳಾ
ಮರುತಂಗೆ ತತ್ಪುರುಷನಧಿದೈವವೆಲೆ ಸಿದ್ಧರಾಮೇಶ ಕೇಳೆಂದನು ೪೩

ಇರದೆ ದೃಕ್ ಪಾದವಾ ರೂಪು ಗಮನಾಗ್ನಿಗಂ
ಪರಿಕಿಸಲ್ಕಘೋರಮೂರ್ತಿಯಧಿದೈವವ
ತ್ಯುರತರದ ಜಿಹ್ವೆ ಗುಹ್ಯಂ ರಸಮುಮಾನಂದವಾರಿಗಂ ವಾಮದೇವ
ವರಮೂರ್ತಿಯಧಿದೈವಮಿನ್ನು ನಾಸಿಕ ಪಾಯು
ಗಿರದೆ ಗಂಧಂ ವಿಸರ್ಜನಭೂಮಿಗಂ ನಿರಂ
ತರದಿ ಸದ್ಯೋಜಾತಮೂರ್ತಿಯಧಿದೈವಮಿಂತಿವಕೆ ಹೃದಯವೆ ನೆಲೆವನೆ . ೪೪

ಸದಾಕಾಲವೂ ನಾಸಿಕಾಂಗದಲ್ಲಿ ಸದಾಚಾರಲಿಂಗಗಳು ಇರುತ್ತವೆ. ೪೨. ಈ ಕ್ರಮದಲ್ಲಿ ಇನ್ನು ಜ್ಞಾನೇಂದ್ರಿಯಗಳಲ್ಲಿ ಇರುವಂತೆ ಲಿಂಗವು ಆ ಕರ್ಮೇಂದ್ರಿಯಗಳಲ್ಲಿಯೂ ಇರುತ್ತಿರುವುವು, ಹೇಗೆಂದರೆ ಒಂದು ಜ್ಞಾನೇಂದ್ರಿಯ, ಅದಕ್ಕೊಂದು ವಿಷಯ. ಒಂದು ಕರ್ಮೇಂದ್ರಿಯ, ಅದಕ್ಕೊಂದು ವಿಷಯ. ಈ ಒಂದೊಂದಕ್ಕೂ ಒಂದೊಂದು ಶ್ರೇಷ್ಠವಾದ ಭೂತ. ಈ ರೀತಿ ಪರೀಕ್ಷಿಸಲು ಇವು ಐದೈದಕ್ಕೂ ಶಿವಮೂರ್ತಿಗಳಲ್ಲಿ ಒಂದೊಂದು ಅಧಿದೈವವುಂಟು. ಎಲೈ ಸಿದ್ಧರಾಮ ಕೇಳು ಎಂದನು. ೪೩. ಶ್ರೇಷ್ಠವಾದ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳೆಂಬ ಎರಡಕ್ಕೂ ಒಂದೇ ಮೂರ್ತಿಯು ಅಧಿದೈವವಾದುದನ್ನು ಕ್ರಮವಾಗಿ ಹೇಳುತ್ತೇನೆ. ಶ್ರೋತ್ರ-ವಾಕ್-ಶಬ್ದ-ವಚನ-ಗಗನ ಎಂಬ ಐದಕ್ಕೂ ಈಶಾನಮೂರ್ತಿಯು ಅಧಿದೈವ. ಆ ರೀತಿಯಲ್ಲಿ ತ್ವಕ್-ಪಾಣಿ-ಸ್ಪರ್ಶ-ದಾನ-ಮರುತ ಇವುಗಳಿಗೆ ತತ್ಪುರುಷನು ಅಧಿದೈವ, ಎಲೈ ಸಿದ್ಧರಾಮೇಶ, ಕೇಳು ಎಂದನು. ೪೪. ದೃಕ್-ಪಾದ-ರೂಪು-ಗಮನ-ಅಗ್ನಿಗಳಿಗೆ ಅಘೋರಮೂರ್ತಿಯು ಅಧಿದೈವ. ಜಿಹ್ವೆ-ಗುಹ್ಯ-ರಸ-ಆನಂದ-ವಾರಿ ಮೊದಲಾದುವುಗಳಿಗೆ ವರಮೂರ್ತಿ ವಾಮದೇವನೇ ಅಧಿದೈವ. ಇನ್ನು ಮೂಗು-ಪಾಯು-ಗಂಧ-ವಿಸರ್ಜನ ಭೂಮಿ ಮುಂತಾದುವುಗಳಿಗೆ ಎಂದಿಗೂ ಸದ್ಯೋಜಾತಮೂರ್ತಿಯೇ ಅಧಿದೈವ. ಇವುಗಳಿಗೆ ಹೃದಯವೇ ಆವಾಸ

CC-0. Jangamwadi Math Collection. Digitized by eGangotri

ಅದುಕಾರಣಂ ಜ್ಞಾನಕರ್ಮೇಂದ್ರಿಯಂಗಳ್ಗೆ
ಹೃದಯವೇ ನೆಲೆವೀಡು ತಿಳಿಯಲಾ ಹೃದಯಕ್ಕೆ
ಹೃದಯವಾ ಶ್ರೋತ್ರಕ್ಕೆ ಶ್ರೋತ್ರವಾ ತ್ವಕ್ಕಿಂಗೆ ತೊಕ್ಕು ನೇತ್ರಕೆ ನೇತ್ರವು
ಮೃದುಳಜಿಹ್ವೆಗೆ ಜಿಹ್ವೆ ನಾಸಿಕಕೆ ನಾಸಿಕಂ
ಉದಿತವಾಕ್ಕಿಗೆ ವಾಕ್ಕು ಪಾಣಿಗೆ ಸುಪಾಣಿ ಆ
ಪದಕೆ ಪದ ಗುಹ್ಯಕೆ ಸುಗುಹ್ಯ ಪಾಯುಗೆ ಪಾಯುವಾಗಿಹುದು ಲಿಂಗಮುಖವು ೪೫

ಪರಮಹೃದಯದ ಹೃದಯವೇ ಮಹಾಲಿಂಗಮಂ
ದಿರದೆ ಶ್ರೋತ್ರದ ಶ್ರೋತ್ರವೇ ಪ್ರಸಾದಸುಲಿಂಗ
ಮುರುತರದ ತೊಕ್ಕಿನ ಸುತೊಕ್ಕಿ ಜಂಗಮಲಿಂಗಮೆಸೆವ ನೇತ್ರದ ನೇತ್ರವೇ
ವರದ ಶಿವಲಿಂಗವಾ ಜಿಹ್ವೆಯ ಸುಜಿಹ್ವೆಯೇ
ಗುರುಲಿಂಗವಿನ್ನು ನಾಸಿಕದ ನಾಸಿಕವದೇ
ಪರಿಕಿಸಲ್ಕಾಚಾರಲಿಂಗವೆಲೆ ಸಿದ್ಧರಾಮೇಶ ನೀಂ ಕೇಳೆಂದನು ೪೬

ಪರಿವಿಡಿಯೊಳಿಂತಿವು ಪ್ರವೃತ್ತಿಮಾರ್ಗಂ ಮುಂದೆ
ಪರಿಕಿಸೆ ನಿವೃತ್ತಿಮಾರ್ಗಾಭಿಧಾನವನುಳ್ಳ
ಪರಮಷಟ್ಚಕ್ರಭೇದಂಗಳಂ ಪೇಳ್ವೆನಾದರದಿಂದೆ ಕೇಳ್ವುದಿನ್ನು
ನಿರುತದಿಂದಾಧಾರಲಿಂಗ ನಾಭೌ ಹೃದಯ
ಸರಸಿಜಂ ತಾಲು ಭ್ರೂಮಧ್ಯಮಿಂತಾರವರೊ
ಳೆರಡು ಹದಿನಾರು ಹನ್ನೆರಡು ಹತ್ತಾರು ನಾಲ್ಕೆನಿಸುವ ದಳಂಗಳಲ್ಲಿ ೪೭

ಸ್ಥಾನ. ೪೫. ಆ ಕಾರಣದಿಂದ ಜ್ಞಾನ ಮತ್ತು ಕರ್ಮೇಂದ್ರಿಯಗಳಿಗೆ ಹೃದಯವೇ ನೆಲೆಬೀಡು. ತಿಳಿಯುವುದಾದರೆ ಆ ಹೃದಯಕ್ಕೆ-ಹೃದಯ, ಶ್ರೋತ್ರಕ್ಕೆ-ಶ್ರೋತ್ರ, ತ್ವಕ್ಕಿಗೆ-ತ್ವಕ್ಕು, ನೇತ್ರಕ್ಕೆ-ನೇತ್ರವು, ಮೃದುವಾದ ಜಿಹ್ವೆಗೆ-ಜಿಹ್ವೆ, ನಾಸಿಕಕ್ಕೆ-ನಾಸಿಕ, ಹುಟ್ಟುವ ವಾಕ್ಕಿಗೆ-ವಾಕ್ಕು, ಪಾಣಿಗೆ-ಪಾಣಿ, ಪಾದಕ್ಕೆ-ಪಾದ, ಗುಹ್ಯಕ್ಕೆ-ಗುಹ್ಯ ಮತ್ತು ಪಾಯುವಿಗೆ-ಪಾಯುವು ಲಿಂಗಮುಖವಾಗಿರುವುವು. ೪೬. ಶ್ರೇಷ್ಠವಾದ ಹೃದಯದ ಹೃದಯವೇ ಮಹಾಲಿಂಗ, ಶ್ರೋತ್ರದ ಶ್ರೋತ್ರವೇ ಪ್ರಸಾದಲಿಂಗ, ಉರುತರದ ತ್ವಕ್ಕಿನ ತ್ವಕ್ಕೇ ಜಂಗಮಲಿಂಗ, ನೇತ್ರದ ನೇತ್ರವೇ ಶಿವಲಿಂಗ, ಆ ಜಿಹ್ವೆಯ ಜಿಹ್ವೆಯೇ ಗುರುಲಿಂಗ, ನಾಸಿಕದ ನಾಸಿಕವೇ ನೋಡಲು ಆಚಾರಲಿಂಗ ಎಲೆ ಸಿದ್ಧರಾಮೇಶ, ಕೇಳು ಎಂದನು. ೪೭. ಕ್ರಮವಾಗಿ ಹೀಗೆ ಇವು ಪ್ರವೃತ್ತಿಮಾರ್ಗವು. ಇನ್ನು ಮುಂದೆ ನಿವೃತ್ತಿಮಾರ್ಗವೆಂಬ ಹೆಸರುಳ್ಳ ಶ್ರೇಷ್ಠವಾದ ಷಟ್ಚಕ್ರ ಭೇದಗಳನ್ನು ಹೇಳುತ್ತೇನೆ, ಆದರದಿಂದ ಕೇಳು. ಸದಾ ಕಾಲವೂ ಆಧಾರ, ಲಿಂಗ, ನಾಭಿ, ಹೃದಯಕಮಲ, ತಾಲು, ಭ್ರೂಮಧ್ಯ ಈ ರೀತಿ ಆರು. ಅವುಗಳಲ್ಲಿ ಎರಡು, ಹದಿನಾರು, ಹನ್ನೆರಡು, ಹತ್ತು, ಆರು ಮತ್ತು ನಾಲ್ಕು ಎಂಬ

CC-0. Jangamwadi Math Collection. Digitized by eGangotri

ವಾಸಾಂತ ಬಾಲಮಧ್ಯಂಡಪಕಟಾಂತಂಗ
ಳಂ ಸೇರುವೆಯೊಳಕಾರಾದಿಹಂಕ್ಷಂಗಳೆಂ
ಬೀ ಸುತದ್ದಳದಕ್ಷರಂಗಳಾಜ್ಞಾದಿ ಷಟ್ಚಕ್ರಮಧ್ಯದೊಳೊಪ್ಪುವ
ಭಾಸುರಪ್ರಣವಂ ಯಕಾರಂ ವಕಾರಂಗ
ಳಾ ಸಮೀಪದ ಶಿಕಾರಂ ಮಕಾರಂ ತಿಳಿಯ
ಲೋಸರಿಸದಾ ನಕಾರಂಗಳೆಂಬಾರು ಷಟ್ಚಕ್ರಮಧ್ಯದೊಳಿರ್ಪುವು ೪೮

ಬಳಿಕಲಾಚಾರಲಿಂಗವೆ ನಕಾರಂ ಮುಂದೆ
ಹೊಳೆವ ಗುರುಲಿಂಗವೆ ಮಕಾರವಾ ಕಣ್ಗೆ ಥಳ
ಥಳಿಪ ಶಿವಲಿಂಗವೆ ಶಿಕಾರವಾ ಚರಲಿಂಗವೇ ತಿಳಿಯೆ ವಾಕಾರವು
ಬೆಳಗು ಪ್ರಸಾದಲಿಂಗವೆ ಯಕಾರಂ ಸಮು
ಜ್ವಲಿಸುವ ಮಹಾಲಿಂಗವೇ ಪ್ರಣವಮಿಂತು ನಿ
ರ್ಮಳಷಡಕ್ಷರಗಳೇ ಷಡ್ಲಿಂಗವೆಲೆ ಸಿದ್ಧರಾಮೇಶ ಕೇಳೆಂದನು ೪೯

ಪರಮಚಿತ್ರಣವಮವೇ ತ್ವಕ್ಕಿನೆಲ್ಲೆಡೆಯೊಳೊಲಿ
ದಿರುವುದಿನ್ನಾ ನಕಾರವೆ ರುಧಿರದಲ್ಲಿ ತಾ
ನಿರುವುದು ಮಕಾರವೇ ಮಾಂಸದಲ್ಲಿರುವುದು ಶಿಕಾರ ಮೇದಸ್ಸಿನಲ್ಲಿ
ಇರುವುದಿನ್ನಾ ವಕಾರವೆಯಸ್ಥಿಯಲ್ಲಿ ತಾ
ನಿರುವುದು ಯಕಾರವೇ ಮಜ್ಜೆಯಲ್ಲಿರುವುದಾ
ವರಷಡಕ್ಷರಿಗಳೇ ಶುಕ್ಲದಲ್ಲಿರುವುವೆಲೆ ರಾಮೇಶ ಕೇಳೆಂದನು ೫೦

ದಳಗಳಲ್ಲಿ ೪೮. 'ವ' ಯಿಂದ 'ಸ' ವರೆಗೆ, 'ಬ' ಯಿಂದ 'ಲ' ವರೆಗಿನ ಮಧ್ಯದ ಅಕ್ಷರಗಳು, 'ಡ' ಯಿಂದ 'ಪ', 'ಕ' ಯಿಂದ 'ಟ' ವರೆಗಿನವು-ಇದೇ ಕ್ರಮದಲ್ಲಿ 'ಅ'ಕಾರ ಮೊದಲಾದ ಅಕ್ಷರಗಳು ಮತ್ತು 'ಹಂ'-'ಕ್ಷಂ'ಗಳೆಂಬ ಇಷ್ಟು ಅಕ್ಷರಗಳೂ ಇರುವುವು. ಆಜ್ಞಾದಿ ಷಟ್ಚಕ್ರಮಧ್ಯದಲ್ಲಿ ಪ್ರಕಾಶಮಾನವಾದ 'ಓಂ'ಕಾರ, 'ಯ'ಕಾರ, 'ವ' ಕಾರಗಳು, 'ಶಿ' ಕಾರ-'ಮ' ಕಾರಗಳು, 'ನ'ಕಾರ ಎಂಬ ಆರೂ ಷಟ್ಚಕ್ರಮಧ್ಯದಲ್ಲಿ ಇರುವುವು. ೪೯. ಅನಂತರ ಆಚಾರಲಿಂಗವೇ 'ನ'ಕಾರ, ಹೊಳೆಯುವ ಗುರುಲಿಂಗವೇ 'ಮ' ಕಾರ, ಆ ಕಣ್ಣುಗಳಿಗೆ ಥಳಥಳಿಸುವ ಶಿವಲಿಂಗವೇ 'ಶಿ'ಕಾರ, ಆ ಚರಲಿಂಗವೇ 'ವಾ'ಕಾರವು ಹೊಳೆಯುವ ಪ್ರಸಾದಲಿಂಗವೇ 'ಯ'ಕಾರ, ಬೆಳಗುತ್ತಿರುವ ಮಹಾಲಿಂಗವೇ 'ಓಂ'ಕಾರ. ಈ ರೀತಿ ನಿರ್ಮಲವಾದ ಆರು ಅಕ್ಷರಗಳೇ ಆರು ಲಿಂಗಗಳು, ಎಲೆ ಸಿದ್ಧರಾಮೇಶ, ಕೇಳು ಎಂದನು. ೫೦. ಮಂಗಳಕರವಾದ ಚಿತ್ರಣವವೇ ಚರ್ಮದ ಎಲ್ಲ ಭಾಗದಲ್ಲಿಯೂ ಇರುವುದು. ಆ 'ನ'ಕಾರವೇ ರಕ್ತದಲ್ಲಿರುವುದು, 'ಮ'ಕಾರವು ಮಾಂಸದಲ್ಲಿರುವುದು, 'ಶಿ'ಕಾರವು ಮೇದಸ್ಸಿನಲ್ಲಿರುವುದು, ಇನ್ನು ಆ 'ವ' ಕಾರವು ಮೂಳೆಯಲ್ಲಿ ಇರುವುದು, 'ಯ'ಕಾರವು ಮಜ್ಜೆಯಲ್ಲಿರುವುದು. ಆ ಪವಿತ್ರವಾದ ಷಡಕ್ಷರಿಗಳು ರೇತಸ್ಸಿನಲ್ಲಿರುವುವು,

CC-0. Jangamwadi Math Collection. Digitized by eGangotri

ಇಂತಿದೇ ಸರ್ವಾಂಗಲಿಂಗಸಾಹಿತ್ಯವೈ
ಮುಂದೆ ಲಿಂಗಾರ್ಪಣವಿಧಾನವುಂ ಪೇಳ್ವೆನೋ
ರಂತೆ ಕ್ರಿಯಾರ್ಪಣಮುದೆಂದು ಜ್ಞಾನಾರ್ಪಣಮುದೆಂದುಭಯಭೇದಂಗಳು
ಎಂತೆನೆ ಕ್ರಿಯಾರ್ಪಣದ ಭೇದಮುಂ ವಿಸ್ತರಿಪೆ
ನೀಂ ತಿಳಿವುದಾತ್ಮೋಪಭೋಗಕ್ಕೆ ತಕ್ಕ ದ್ರ
ವ್ಯಂ ತಾನೆ ಬರಲದೇ ಮೂರು ತೆರನದರ ಪರಿಯಾಯಮುಂ ಪೇಳ್ವೆನಿನ್ನು ೫೧

ಸ್ಥೂಲದ್ರವ್ಯಾರ್ಪಣಂ ಸೂಕ್ಷ್ಮದ್ರವ್ಯಾರ್ಪಣಂ
ಮೇಲೆಯಾನಂದದ್ರವ್ಯಾರ್ಪಣಮಿವೀಗಲಾ
ಸ್ಥೂಲದ್ರವ್ಯವೆ ರೂಪು ಸೂಕ್ಷ್ಮದ್ರವ್ಯವೆ ರುಚಿ ಸದಾನಂದವೇ ತೃಪ್ತಿಯು
ಸ್ಥೂಲದ್ರವ್ಯದ ರೂಪನಿಷ್ಟಲಿಂಗಾರ್ಪಣವ
ಲೀಲೆಯಿಂ ಮಾಡುವಾತನೆ ವಿಶ್ವನೊಲವಿನಿಂ
ದಾಲಿಸಾ ಸೂಕ್ಷ್ಮದ್ರವ್ಯದ ರುಚಿಯನೇ ಪ್ರಾಣಲಿಂಗಕರ್ಪಿಸುವಾತನೇ ೫೨

ಸಲೆ ತೈಜಸಂ ನಿರ್ಮಳಾನಂದದ್ರವ್ಯಮುಮು
ನೊಲಿದು ಸದ್ಭಾವಲಿಂಗಾರ್ಪಣವ ಮಾಳ್ಪನೇ
ನೆಲೆವೆತ್ತ ಪ್ರಾಜ್ಞನೆಂದಿಷ್ಟಲಿಂಗದ ಪ್ರಸಾದವೆ ಶುದ್ಧವೆಂದೆನಿಪುದು
ಬಳಿಕಲಾ ಪ್ರಾಣಲಿಂಗದ ಪ್ರಸಾದವೆ ಸಿದ್ಧ
ವಳವಟ್ಟ ಭಾವಲಿಂಗದ ಪ್ರಸಾದವೆ ತಾನೆ
ತಿಳಿಯಲ್ ಪ್ರಸಿದ್ಧವಾ ಸುಪ್ರಸಾದಿಗಳೆ ವಿಶ್ವಂ ತೈಜಸಂ ಪ್ರಾಜ್ಞರು ೫೩

ಎಲೆ ಸಿದ್ಧರಾಮ, ಕೇಳು ಎಂದನು. ೫೧. ಹೀಗೆ ಇದೇ ಸರ್ವಾಂಗಲಿಂಗ ಸಾಹಿತ್ಯವು ಮುಂದೆ ಲಿಂಗಾರ್ಪಣ ವಿಧಾನವನ್ನು ಹೇಳುತ್ತೇನೆ. ಕ್ರಿಯಾರ್ಪಣ ಮತ್ತು ಜ್ಞಾನಾರ್ಪಣ ಎಂದು ಎರಡು ರೀತಿಗಳು. ಹೇಗೆಂದರೆ ಕ್ರಿಯಾರ್ಪಣದ ಭೇದವನ್ನು ವಿವರಿಸುತ್ತೇನೆ. ನೀನು ತಿಳಿದುಕೊ, ತನ್ನ ಉಪಭೋಗಕ್ಕಾಗಿ ಯೋಗ್ಯವಾದ ದ್ರವ್ಯವು ತಾನಾಗಿಯೇ ಬರಲು ಆ ದ್ರವ್ಯವೇ ಮೂರು ರೀತಿ. ಅದರ ಭೇದವನ್ನು ಇನ್ನು ಹೇಳುತ್ತೇನೆ. ೫೨. ಸ್ಥೂಲದ್ರವ್ಯಾರ್ಪಣ, ಸೂಕ್ಷ್ಮದ್ರವ್ಯಾರ್ಪಣ, ಆಮೇಲೆ ಆನಂದ ದ್ರವ್ಯಾರ್ಪಣ. ಈಗ ಈ ಸ್ಥೂಲದ್ರವ್ಯವೇ ರೂಪು, ಸೂಕ್ಷ್ಮದ್ರವ್ಯವೇ ರುಚಿ, ಆನಂದವೇ ತೃಪ್ತಿ. ಸ್ಥೂಲದ್ರವ್ಯದ ರೂಪನ್ನು ಇಷ್ಟಲಿಂಗಕ್ಕೆ ಆನಂದದಿಂದ ಅರ್ಪಿಸುವವನೇ ವಿಶ್ವನು. ಪ್ರೀತಿಯಿಂದ ಕೇಳು, ಆ ಸೂಕ್ಷ್ಮದ್ರವ್ಯದ ರುಚಿಯನ್ನು ಪ್ರಾಣ ಲಿಂಗಕ್ಕೆ ಅರ್ಪಿಸುವಾತನೇ ೫೩. ತೈಜಸನು, ನಿರ್ಮಲವಾದ ಆನಂದದ್ರವ್ಯವನ್ನು ಪ್ರೀತಿ ಯಿಂದ ಸದ್ಭಾವಲಿಂಗಕ್ಕೆ ಅರ್ಪಿಸುವವನೇ ನಿಜವಾದ ಪ್ರಾಜ್ಞನು. ಇಷ್ಟಲಿಂಗದ ಪ್ರಸಾ ದವೆ ಶುದ್ಧವೆನಿಸಿಕೊಳ್ಳುತ್ತದೆ. ಅನಂತರ ಆ ಪ್ರಾಣಲಿಂಗದ ಪ್ರಸಾದವೆ ಸಿದ್ಧವು: ಭಾವ ಲಿಂಗ ಪ್ರಸಾದವೇ ಪ್ರಸಿದ್ಧವು. ಆ ಸುಪ್ರಸಾದಿಗಳೇ ವಿಶ್ವ, ತೈಜಸ ಮತ್ತು ಪ್ರಾಜ್ಞರು.

CC-0. Jangamwadi Math Collection. Digitized by eGangotri

ನಿರುತದಿಂ ಜಾಗ್ರ ಸ್ವಪ್ನಂ ಸುಷುಪ್ತಿಗಳೊಳಾ
ಪರಮಾತ್ಮನೇ ತ್ರಿವಿಧಭೇದದಿಂ ತ್ರಿವಿಧಪ
ತ್ಪರಮಲಿಂಗಾರ್ಪಿತಪ್ರಸಾದಭೋಗೋಪಭೋಗದೊಳೆ ಸಂತುಷ್ಟನಾಗಿ
ಪರಮಸುಖದಿಂದೆ ನಿರ್ಲೇಪತ್ವನಾಗಿ ತಾ
ನಿರುತಿರ್ಪನಿಂತಿದೇ ಸತ್ಕ್ರಿಯಾರ್ಪಣವೆಂದು
ಕರುಣದಿಂ ಚೆನ್ನಬಸವೇಶನಾ ಸಿದ್ಧರಾಮೇಶಂಗೆ ನಿರವಿಸಿದನು ೫೪

ಒರೆವೆನಾಲಿಪುದು ಸುಜ್ಞಾನಾರ್ಪಣವನಿನ್ನು
ಪರಿಕಿಸಲ್ ಸರ್ವೇಂದ್ರಿಯಂಗಳ ಮುಖಂಗಳ್ಗೆ
ಬರುತಿರ್ಪ ಸಕಲದ್ರವ್ಯಂಗಳ ಷಡ್ವಿಧಾತ್ಮಾಂಗರೂಪಿಂದಲವನು
ಇರದೆ ಷಡ್ವಿಧಲಿಂಗಮುಖದಿನರ್ಪಿಸಿ ನಿರಂ
ತರ ತತ್ಪ್ರಸಾದಮಂ ಭೋಗಿಸುವರಿನ್ನದರ
ಪರಿಯನಾಲಿಸು ಗಂಧ ರಸ ರೂಪು ಸ್ಪರ್ಶವಾ ಶಬ್ದ ಪರಿಣಾಮಂಗಳು ೫೫

ಇಂತೆಸೆವ ಷಡ್ವಿಷಯವೇ ಷಟ್ಪದಾರ್ಥಂಗ
ಳೆಂತೆನಲ್ ಗಂಧವೇ ಪರಿಮಳಪದಾರ್ಥವಾ
ಮುಂತೆಸೆವ ರಸವೆ ಮಧುರಾದಿ ಸುಪದಾರ್ಥವಾ ರೂಪೆ ವರ್ಣಪದಾರ್ಥವು
ಮುಂತಾ ಸ್ಪರುಶವೆ ಮೃದುವಾದಿ ಸುಪದಾರ್ಥವಾ
ನಂತರಂ ಶಬ್ದವೇ ನಾದ ಸುಪದಾರ್ಥವೋ
ರಂತೆ ಪರಿಣಾಮವೇ ಸುಖಪದಾರ್ಥವಿವೀಗಲೆಲೆ ರಾಮ ಕೇಳೆಂದನು ೫೬

೫೪. ಸದಾ ಜಾಗ್ರತಾವಸ್ಥೆ, ಸ್ವಪ್ನಾವಸ್ಥೆ ಮತ್ತು ಸುಷುಪ್ತಾವಸ್ಥೆಗಳಲ್ಲಿ ಆ ಪರಮಾತ್ಮನೆ ಮೂರು ರೀತಿಯಲ್ಲಿ ಮೂರು ರೀತಿಯಾದ ಲಿಂಗಕ್ಕೆ ಅರ್ಪಿಸಲ್ಪಟ್ಟ ಪ್ರಸಾದ ಭೋಗೋಪಭೋಗದಲ್ಲಿ ಸಂತುಷ್ಟನಾಗಿ ಪರಮಸುಖದಿಂದ ನಿರ್ಲಿಪ್ತನಾಗಿ ತಾನು ಇರುತ್ತಾನೆ. ಇದೇ ಸತ್ಕ್ರಿಯಾರ್ಪಣವು ಎಂದು ಕರುಣೆಯಿಂದ ಚೆನ್ನಬಸವನು ಸಿದ್ಧರಾಮನಿಗೆ ವಿವರಿಸಿದನು. ೫೫. ಇನ್ನು ಸುಜ್ಞಾನಾರ್ಪಣವನ್ನು ಹೇಳುತ್ತೇನೆ ಕೇಳು. ಎಲ್ಲ ಇಂದ್ರಿಯಗಳ ಮುಖಗಳಿಗೆ ಬರುವ ಎಲ್ಲ ದ್ರವ್ಯಗಳನ್ನು ಷಡ್ವಿಧವಾದ ಆತ್ಮಾಂಗರೂಪಿನಿಂದ ಅವುಗಳನ್ನು ಷಡ್ವಿಧಲಿಂಗಮುಖದಿಂದ ಅರ್ಪಿಸಿ ಸದಾ ಅದರ ಪ್ರಸಾದವನ್ನು ಭೋಗಿಸುವರು. ಇನ್ನು ಅದರ ರೀತಿಯನ್ನು ಕೇಳು. ಗಂಧ, ರಸ, ರೂಪ, ಸ್ಪರ್ಶ, ಶಬ್ದ ಪರಿಣಾಮಗಳು-ಇವೇ ಷಡ್ವಿಷಯಗಳು. ೫೬, ಈ ರೀತಿಯಾದ ಷಡ್ವಿಷಯವೇ ಷಟ್ಪದಾರ್ಥಗಳು. ಹೇಗೆಂದರೆ ಗಂಧವೇ ಪರಿಮಳಪದಾರ್ಥ. ಆ ಮುಂದಿನ ರಸವೇ ಮಧುರ ಮೊದಲಾದ ಸುಪದಾರ್ಥ. ರೂಪೇ ವರ್ಣಪದಾರ್ಥವು. ಮುಂದೆ ಆ ಸ್ಪರ್ಶವೇ ಮೃದು ಮೊದಲಾದ ಸುಪದಾರ್ಥವು. ಅನಂತರ ಶಬ್ದವೇ ನಾದ ಸುಪದಾರ್ಥ. ಹೀಗೆ ಪರಿಣಾಮವೇ ಸುಖಪದಾರ್ಥಗಳು, ಎಲೆ ರಾಮ, ಕೇಳು ಎಂದನು.

CC-0. Jangamwadi Math Collection. Digitized by eGangotri

ಪರಿಯೊಳಿಂತೆಸೆವ ನಾನಾ ಪದಾರ್ಥಂಗಳೊಳ್
ಬೆರಸಿ ಲಿಂಗಾರ್ಪಣಸುಬುದ್ಧಿಯುಂ ತಿಳಿದು ತ
ತ್ಪರಮಾತ್ಮನೇ ಷಡ್ವಿಧಾಂಗದಿಂ ಷಡ್ವಿಧಸುಲಿಂಗಮುಖದಿಂದರ್ಪಿಸಿ
ವರಸುಪ್ರಸಾದಮಂ ಭೋಗಿಸುವನಿಂತಿವರ
ಪರಿಯನೊರೆವೆಂ ಸುಚಿತ್ತದೊಳಾಲಿಸೆಂದಾಗ
ಕರುಣದಿಂ ಚೆನ್ನಬಸವೇಶನಾ ಸಿದ್ಧರಾಮೇಶಂಗೆ ನಿರವಿಸಿದನು ೫೭

ಪರಮಸದ್ಭಕ್ತಿಯುತ ಭಕ್ತನೊಲವಿಂ ತನ್ನ
ಧರಣಿಯಂಗದೆ ಕ್ರಿಯಾಶಕ್ತಿಸಂಯುಕ್ತವಾ
ಗಿರುತಿಹ ಸದಾಚಾರಲಿಂಗ ನಾಸಿಕಮುಖದೆ ಚಿತ್ತದುರುಹಸ್ತದಿಂದೆ
ವರಚಂದನಾದಿ ನಾನಾ ಪರಿಮಳಂಗಳಂ
ಹರುಷದಿಂದರ್ಪಿಸಿ ಸುಗಂಧಪ್ರಸಾದಮಂ
ನಿರುತದಿಂ ಭೋಗಿಪನೆ ಸದ್ಭಕ್ತನೆಲೆ ಸಿದ್ಧರಾಮೇಶ ಕೇಳೆಂದನು ೫೮

ಪರಮನಿಷ್ಠಾಭಕ್ತಿಯುತ ಮಾಹೇಶಂ ನಿರು
ತರ ವಾರಿಯಂಗದಿಂ ಸುಜ್ಞಾನಶಕ್ತಿಯುತ
ಗುರುಲಿಂಗರಸನಮುಖದಿಂದಾ ಸುಬುದ್ಧಿಯುರುಹಸ್ತದಿಂದನವರತವು
ಹರುಷದಿಂ ಮಧುರಾದಿ ಷಡ್ರಸಪದಾರ್ಥಮಂ
ಪರಿವಿಡಿಯೊಳುಂ ಸಮರ್ಪಿಸಿ ತತ್ಪ್ರಸಾದಮಂ
ಪರಿಣಾಮದಿಂದ ಭೋಗಿಸುವನೇ ಮಾಹೇಶನೆಲೆ ರಾಮ ಕೇಳೆಂದನು ೫೯

೫೭. ಹೀಗೆ ಕ್ರಮವಾಗಿರುವ ನಾನಾ ಪದಾರ್ಥಗಳಲ್ಲಿ ಕೂಡಿ ಲಿಂಗಾರ್ಪಣದ ಸುಬುದ್ಧಿಯನ್ನು ತಿಳಿದು ಆ ಪರಮಾತ್ಮನೇ ಷಡ್ವಿಧಾಂಗದಿಂದ . ಆರು ವಿಧವಾದ ಅಂಗಗಳಿಗೆ ಅರ್ಪಿಸಿ ಶ್ರೇಷ್ಠವಾದ ಪ್ರಸಾದವನ್ನು ಭೋಗಿಸುವನು. ಇವರ ರೀತಿ ಯನ್ನು ಹೇಳುತ್ತೇನೆ, ಒಳ್ಳೆಯ ಮನಸ್ಸಿನಿಂದ ಕೇಳು ಎಂದು ಆಗ ಚೆನ್ನ ಬಸವಣ್ಣನು ಕರುಣದಿಂದ ಆ ಸಿದ್ಧರಾಮನಿಗೆ ವಿವರಿಸಿದನು. ೫೮. ಶ್ರೇಷ್ಠವಾದ ಸದ್ಭಕ್ತಿಯಿಂದ ಕೂಡಿದ ಭಕ್ತನು ಪ್ರೀತಿಯಿಂದ ತನ್ನ ಭೂಮ್ಯಂಗದಿಂದ ಕ್ರಿಯಾಶಕ್ತಿ ಸಂಯುಕ್ತವಾಗಿರುವ ಸದಾಚಾರಲಿಂಗಕ್ಕೆ ಮೂಗಿನ ಮೂಲಕ ಚಿತ್ತಹಸ್ತದಿಂದ ಶ್ರೇಷ್ಠ ವಾದ ಗಂಧವೇ ಮೊದಲಾದ ನಾನಾ ಪರಿಮಳದ್ರವ್ಯಗಳನ್ನು ಸಂತೋಷದಿಂದ ಅರ್ಪಿಸಿ ಸುಗಂಧಪ್ರಸಾದವನ್ನು ಭೋಗಿಸುವನು. ಇವನೇ ಉತ್ತಮನಾದ ಭಕ್ತ, ಎಲೆ ಸಿದ್ಧ ರಾಮೇಶ ಕೇಳು ಎಂದನು. ೫೯. ಪರಮನಿಷ್ಠಾಭಕ್ತಿಯುತನಾದ ಮಹೇಶನು ಸದಾಕಾಲ ತನ್ನ ಜಲಾಂಗದಿಂದ ಸುಜ್ಞಾನಶಕ್ತಿಯೊಡಗೂಡಿರುವ ಗುರುಲಿಂಗಕ್ಕೆ ಸುಬುದ್ಧಿಹಸ್ತ ದಿಂದ ನಾಲಗೆಯ ಮೂಲಕ ಸದಾಕಾಲವು ಸಂತೋಷದಿಂದ ಮಧುರ ಮೊದಲಾದ ಷಡ್ರಸಪದಾರ್ಥವನ್ನು ಕ್ರಮವಾಗಿ ಅರ್ಪಿಸಿ ಕಡೆಗೆ ಅದರ ಪ್ರಸಾದವನ್ನು ಸುಖ ಸಂತೋಷದಿಂದ ಭೋಗಿಸುವನು. ಅವನೇ ಮಾಹೇಶನು, ಎಲೈ ಸಿದ್ಧರಾಮ ಕೇಳು

CC-0. Jangamwadi Math Collection. Digitized by eGangotri

ಅವಧಾನಭಕ್ತಿಸಂಯುತಸುಪ್ರಸಾದಿಯಾ
ಹವಿಯಂಗದಿಂದಲಿಚ್ಛಾಶಕ್ತಿಯೊಡನಿರ್ಪ
ಶಿವಲಿಂಗನೇತ್ರಮುಖದಿಂದೆ ನಿರಹಂಕಾರಹಸ್ತದಿಂದನವರತವು
ಸುವಿವೇಕದಿಂದೆ ಶ್ವೇತಾದಿಷಡ್ವರ್ಣ ದ್ರ
ವ್ಯವನೊಲವಿನಿಂದಲರ್ಪಿಸಿ ತತ್ಪ್ರಸಾದಮಂ
ಸವಿದಾತನೇ ಸುಪ್ರಸಾದಿಯಹನೆಲೆ ಸಿದ್ಧರಾಮೇಶ ಕೇಳೆಂದನು ೬೦

ಹರುಷದಿಂದನುಭಾವಭಕ್ತಿಯುಂ ಕೂಡಿಕೊಂ
ಡಿರುತಿರ್ಪ ಸತ್ಪ್ರಾಣಲಿಂಗಿಯೆಂದೆಂಬ ತ
ನ್ಮರುತಾಂಗದಿಂದಾದಿಶಕ್ತಿಸಂಯುತವಾದ ಚರಲಿಂಗ ತ್ವಙ್ಮುಖದೊಳು
ನಿರುತದಿಂದಾ ಸುಮನಹಸ್ತದಿಂ ಮೃದುವಾದಿ
ಸ್ಪರುಶನಪದಾರ್ಥಮುಮನರ್ಪಿಸಿ ಪ್ರಸಾದಮಂ
ಪರಿಣಾಮದಿಂದೆ ಭೋಗಿಸುವಾತನೇ ಪ್ರಾಣಲಿಂಗಿ ನೀಂ ಕೇಳೆಂದನು ೬೧

ನಿರುತದಿಂದಾನಂದಭಕ್ತಿಸಂಯುತವಾದ
ಶರಣನೇ ವ್ಯೋಮಾಂಗದಿಂ ಪರಾಶಕ್ತಿಯೊಡ
ನಿರುವ ಪ್ರಸಾದಲಿಂಗದ ಶ್ರೋತ್ರಮುಖದಿನಾ ಸುಜ್ಞಾನಹಸ್ತದಿಂದೆ
ವರಸುನಾದದ್ರವ್ಯಮಂ ಸಮರ್ಪಿಸಿ ನಿರಂ
ತರಸುಪ್ರಸಾದಮಂ ಸೇವಿಸುತ್ತಿರ್ಪನೇ
ಶರಣನೆಂದಾಗಲಾ ಚೆನ್ನಬಸವಂ ಸಿದ್ಧರಾಮಂಗೆ ನಿರವಿಸಿದನು ೬೨

ಎಂದನು. ೬೦. ಅವಧಾನಭಕ್ತಿಯಿಂದ ಕೂಡಿದ ಸುಪ್ರಸಾದಿಯು ತನ್ನ ಅಗ್ನಿಯಂಗದಿಂದ ಇಚ್ಛಾಶಕ್ತಿಯೊಡನಿರುವ ಶಿವಲಿಂಗಕ್ಕೆ ಕಣ್ಣಿನ ಮೂಲಕ ನಿರಹಂಕಾರಹಸ್ತದಿಂದ ಸದಾಕಾಲವು ಉತ್ತಮವಾದ ವಿವೇಕದಿಂದ ಬಿಳಿದು ಮೊದಲಾದ ಷಡ್ವರ್ಣದ್ರವ್ಯವನ್ನು ಪ್ರೀತಿಯಿಂದ ಸಮರ್ಪಿಸಿ ಆ ಪ್ರಸಾದವನ್ನು ಸವಿಯುವನು. ಆತನೇ ಸುಪ್ರಸಾದಿ ಎನ್ನಿಸಿಕೊಳ್ಳುವನು, ಎಲೆ ಸಿದ್ಧರಾಮ ಕೇಳು ಎಂದನು. ೬೧. ಸಂತೋಷದಿಂದ ಅನುಭಾವಭಕ್ತಿಯನ್ನು ಕೂಡಿಕೊಂಡಿರುವ ಪ್ರಾಣಲಿಂಗಿಯು ತನ್ನ ವಾಯುವಿನಂಗದಿಂದ ಆದಿಶಕ್ತಿಯೊಡಗೂಡಿರುವ ಚರಲಿಂಗಕ್ಕೆ ಚರ್ಮದ ಮೂಲಕ ಸದಾ ಸುಮನಹಸ್ತದಿಂದ ಮೃದು ಮೊದಲಾದ ಸ್ಪರ್ಶಪದಾರ್ಥವನ್ನು ಅರ್ಪಿಸಿ ಕಡೆಯಲ್ಲಿ ಪ್ರಸಾದವನ್ನು ಭೋಗಿಸುತ್ತಾನೆ. ಅವನೇ ಪ್ರಾಣಲಿಂಗಿಯು ಕೇಳು ಎಂದನು. ೬೨. ಸದಾ ಆನಂದಭಕ್ತಿಯಿಂದ ಕೂಡಿರುವ ಶರಣನು ವ್ಯೋಮಾಂಗದಿಂದ ಪರಾಶಕ್ತಿಯೊಡಗೂಡಿರುವ ಪ್ರಸಾದಲಿಂಗಕ್ಕೆ ಕಿವಿಯ ಮುಖೇನ ಸುಜ್ಞಾನಹಸ್ತದಿಂದ ಶ್ರೇಷ್ಠವಾದ ಶಬ್ದದ್ರವ್ಯವನ್ನು ಸಮರ್ಪಿಸಿ ಸದಾಕಾಲವೂ ಅದರ ಪ್ರಸಾದವನ್ನು ಸೇವಿಸುತ್ತಿರುವನು. ಅವನೇ ಶರಣನು ಎಂದು ಆಗ ಆ ಚೆನ್ನಬಸವನು ಸಿದ್ಧರಾಮನಿಗೆ ವಿವರಿಸಿದನು.

CC-0. Jangamwadi Math Collection. Digitized by eGangotri

ಎಸೆವ ಸಮರಸಭಕ್ತಿಯುಕ್ತನಾದೈಕ್ಯನಾ
ಪಸರಿಸುವ ಪರಮಾತ್ಮನೆಂದೆನಿಸುವಂಗದಿಂ
ಮಿಸುಪ ಚಿಚ್ಛಕ್ತಿಸಂಯುತ ಮಹಾಲಿಂಗ ಹೃನ್ಮುಖದಿಂದಲನವರತವು
ಹಸನಾದ ಸದ್ಭಾವಹಸ್ತದಿಂ ಪರಿಣಾಮ
ದೆಸಕದ ಪದಾರ್ಥಮುಮನರ್ಪಿಸಿ ಬಳಿಕ್ಕೆ ಸಂ
ತಸದೊಳಾ ಸುಪ್ರಸಾದವ ಭೋಗಿಸುವನೈಕ್ಯನೆಲೆ ರಾಮ ಕೇಳೆಂದನು ೬೩

ಪರಿವಿಡಿಯೊಳಿಂತೊಪ್ಪುವಂಗಮುಂ ಲಿಂಗಮುಂ
ಹರುಷದಿಂದಿರ್ಪ ಸದ್ಭಕ್ತಿಯುಂ ಶಕ್ತಿಯುಂ
ನಿರುತದಿಂದೆಸೆವ ತದ್ವದನಮುಂ ಹಸ್ತಮುಮನರ್ಪಿತಪ್ರಸಾದಂಗಳು
ಪರಿಕಿಸಲ್ಕೆಂಟುತೆರದಿಂ ಪ್ರತಿಷ್ಠಳಗಳ
ಲ್ಲಿರುತಿರ್ಪುವಿಂತಪ್ಪ ಷಟ್ಸ್ಥಲವಿದೀಗೆಂದು
ಕರುಣದಿಂ ಚೆನ್ನಬಸವೇಶನಾ ಸಿದ್ಧರಾಮೇಶಂಗೆ ನಿರವಿಸಿದನು ೬೪

ಎಸೆವ ಸತ್ತೇಯುಂಗಲಿಂಗವೆಂದೆರಡಾಯ್ತು
ಮಿಸುಪ ಚಿತ್ತೇ ಶಕ್ತಿಭಕ್ತಿಯೆಂಬೆರಡಾಯ್ತು
ಪಸರಿಪಾನಂದವೆ ಸಮರ್ಪಣಂ ತತ್ಪ್ರಸಾದಂಗಳೆಂಬೆರಡಾದುವು
ಹಸನಾದ ಸಚ್ಚಿದಾನಂದಲಕ್ಷಣವೆ ರಾ
ಜಿಸುವ ತತ್ತ್ವತ್ರಯಂ ತಾನೆ ಷಟ್ಸ್ಥಲವೆಂಬ
ಪೆಸರಾಂತುವೆಂದಾಗ ಚೆನ್ನಬಸವಂ ಸಿದ್ಧರಾಮಂಗೆ ನಿರವಿಸಿದನು ೬೫

೬೩. ಪ್ರಕಾಶಿಸುವ ಸಮರಸವಾದ ಭಕ್ತಿಯಿಂದ ಕೂಡಿರುವ ಐಕ್ಯನು, ಆ ವಿಶಾಲವಾದ ಪರಮಾತ್ಮನೆಂಬ ಅಂಗದಿಂದ ಹೊಳೆಯುವ ಚಿಚ್ಛಕ್ತಿಸಹಿತನಾದ ಮಹಾಲಿಂಗಕ್ಕೆ ಹೃದಯದ ಮೂಲಕ ಯಾವಾಗಲೂ ಹಸನಾದ ಸದ್ಭಾವಹಸ್ತದಿಂದ ಪರಿಣಾಮಕಾರಣದ ಪದಾರ್ಥವನ್ನು ಅರ್ಪಿಸಿ ಬಳಿಕ ಸಂತೋಷದಿಂದ ಆ ಪ್ರಸಾದವನ್ನು ಸ್ವೀಕರಿಸುವನು. ಇವನೇ ಐಕ್ಯನು, ಎಲೆ ಸಿದ್ಧರಾಮ ಕೇಳು ಎಂದನು. ೬೪. ಅನುಕ್ರಮವಾಗಿ ಹೀಗಿರುವ ಅಂಗ ಮತ್ತು ಲಿಂಗ, ಸಂತೋಷದಿಂದ ಇರುವ ಸದ್ಭಕ್ತಿ-ಶಕ್ತಿ, ಸದಾಕಾಲವಿರುವ ಆ ಮುಖ-ಹಸ್ತ, ಅರ್ಪಿತ-ಪ್ರಸಾದಗಳು ತಿಳಿಯಲು ಎಂಟು ರೀತಿಯಾಗಿ ಪ್ರತಿಸ್ಥಳಗಳಲ್ಲಿಯೂ ಇರುತ್ತವೆ. ಈ ರೀತಿಯಾದ ಷಟ್ಸ್ಥಲವಿದು ಎಂದು ಕರುಣೆಯಿಂದ ಚೆನ್ನಬಸವೇಶ್ವರನು ಸಿದ್ಧರಾಮೇಶನಿಗೆ ವಿವರಿಸಿದನು. ೬೫. ಖ್ಯಾತವಾದ ಸತ್ ಎಂಬುದೇ ಅಂಗ-ಲಿಂಗ ಎಂದು ಎರಡಾಯಿತು. ಹೊಳೆಯುವ ಚಿತ್ತೇ ಶಕ್ತಿ-ಭಕ್ತಿ ಎಂದು ಎರಡಾಯಿತು. ಆನಂದವೇ ಸಮರ್ಪಣ-ತತ್ಪ್ರಸಾದಗಳೆಂದು ಎರಡಾದುವು. ಉತ್ತಮವಾದ ಸಚ್ಚಿದಾನಂದ ಲಕ್ಷಣವೇ ಪ್ರಕಾಶಿಸುವ ತತ್ತ್ವತ್ರಯ. ಅದೇ ಷಟ್ಸ್ಥಲ ಎನ್ನುವ ಹೆಸರನ್ನು ಪಡೆಯಿತು ಎಂದು ಆಗ ಚೆನ್ನಬಸವನು ಸಿದ್ಧರಾಮನಿಗೆ ವಿವರಿಸಿ

CC-0. Jangamwadi Math Collection. Digitized by eGangotri

ಇಂತು ಪರಶಿವನೆ ಷಡ್ವಿಧಲಿಂಗವಾಗಲಾ
ನಂತರದಿ ಪರಮಾತ್ಮನೇ ಷಡ್ವಿಧಾಂಗವುಂ
ತಾಂ ತಳೆದು ಸರ್ವಾಂಗಲಿಂಗಿಯಾಗಿರುತೆ ಸರ್ವೇಂದ್ರಿಯ ಪದಾರ್ಥಂಗಳ
ತಾಂ ತಡೆಯದಾಗಲರ್ಪಿಸಿ ತತ್ಪ್ರಸಾದವುಂ
ಸಂತೋಷದಿಂದೆ ಸೇವಿಸಿ ಸುಖದೊಳಿರುತಲಾ
ಮುಂತೆ ಕ್ರಮದಿಂ ನಿವೃತ್ತಿಯೊಳೈಕ್ಯವಪ್ಪುದಂ ಪೇಳ್ವೆನೊಲಿದಾಲಿಸಿನ್ನು ೬೬

ಪರಶಿವನೆ ಲಿಂಗವಾ ಪರಮಾತ್ಮನೇಯಂಗ
ವೆರಡರೊಳ್ ತೆರಹಿಲ್ಲದಿರ್ಪುದೇ ಸಂಯೋಗ
ವಿರದೆ ಸಂಯೋಗವೇ ಸದ್ಭಕ್ತಿಯೆನಿಸಿತದರಿಂದಾಯ್ತು ಭಕ್ತಿಸ್ಥಲಂ
ವರಭಕ್ತನಾಚಾರಲಿಂಗಸಂಯೋಗದಿಂ
ದಿರುತಿರ್ಪ ಸದ್ಭಕ್ತಿಯಿಂದಿರ್ಪ ನಿಷ್ಠೆಯೇ
ಪರಮನಿಷ್ಠಾಭಕ್ತಿಯೆನಿಸಿತೆಲೆ ಸಿದ್ಧರಾಮೇಶ ನೀಂ ಕೇಳೆಂದನು ೬೭

ಎಸೆವ ನಿಷ್ಠಾಭಕ್ತಿಯಿಂದಲಾತ್ಮಂಗೆ ರಾ
ಜಿಸುವ ಮಾಹೇಶ್ವರಸ್ಥಲವದಾಯ್ತಾತನೇ
ಪಸರಿಸುವ ಗುರುಲಿಂಗಸಂಗದಿಂದಿರ್ಪ ನಿಷ್ಠಾಭಕ್ತಿಯವಧಾನವೇ
ಎಸಕದಿಂದವಧಾನಭಕ್ತಿಯೆನಿಸಿತ್ತದರ
ದೆಸೆಯಿಂ ಪ್ರಸಾದಿಯ ಸ್ಥಲವಾದುದಾತನಾ
ಜಸವೆತ್ತ ಶಿವಲಿಂಗಯೋಗದಿಂದಿರುವಾವಧಾನದ ಮಹಾನುಭವವೇ ೬೮

ದನು. ೬೬. ಹೀಗೆ ಪರಶಿವನೇ ಷಡ್ವಿಧಲಿಂಗವಾಗಲು ಅನಂತರ ಪರಮಾತ್ಮನೇ (ಆತ್ಮ) ಷಡ್ವಿಧವಾದ ಅಂಗವನ್ನು ಹೊಂದಿ ಸರ್ವಾಂಗಲಿಂಗಿಯಾಗಿರುತ್ತ ತಾನು ಸರ್ವೇಂದ್ರಿಯ ಪದಾರ್ಥಗಳನ್ನು ಅರ್ಪಿಸಿ, ಆ ಪ್ರಸಾದವನ್ನು ಸಂತೋಷದಿಂದ ಸೇವಿಸಿ ಸುಖದಿಂದ ಇರುತ್ತ, ಅನಂತರ ಕ್ರಮವಾಗಿ ನಿವೃತ್ತಿಯಲ್ಲಿ ಐಕ್ಯವಾಗುವ ವಿಧಾನವನ್ನು ಹೇಳುತ್ತೇನೆ ಪ್ರೀತಿಯಿಂದ ಕೇಳು. ೬೭. ಪರಶಿವನೆ ಲಿಂಗ. ಆ ಪರಮಾತ್ಮನೇ ಅಂಗ. ಇವೆರಡರಲ್ಲಿಯೂ ಭೇದವಿಲ್ಲದಂತೆ ಒಂದಾಗಿರುವುದೇ ಸಂಯೋಗ. ಈ ಸಂಯೋಗವೇ ಸದ್ಭಕ್ತಿ ಎನಿಸಿಕೊಂಡಿತು. ಅದರಿಂದ ಭಕ್ತಿಸ್ಥಲವಾಯಿತು. ಶ್ರೇಷ್ಠನಾದ ಭಕ್ತನು ಆಚಾರಲಿಂಗ ಸಂಯೋಗದಿಂದ ಸದ್ಭಕ್ತಿಯಿಂದಿರುವ ನಿಷ್ಠೆಯೇ ಪರಮ ನಿಷ್ಠಾಭಕ್ತಿ ಎನ್ನಿಸಿಕೊಂಡಿತು, ಎಲೆ ಸಿದ್ಧರಾಮ ಕೇಳು ಎಂದನು. ೬೮. ಆತ್ಮನಿಗೆ ನಿಷ್ಠಾಭಕ್ತಿಯಿಂದ ಪ್ರಕಾಶಿಸುವ ಮಹೇಶ್ವರಸ್ಥಲವಾಯಿತು. ಆ ಮಹೇಶ್ವರನು ಗುರು ಲಿಂಗ ಸಂಗದಿಂದ ನಿಷ್ಠಾಭಕ್ತಿಯವಧಾನದಿಂದಿರಲು ಪ್ರಕಾಶಿಸುವ ಅವಧಾನಭಕ್ತಿ ಎನಿಸಿಕೊಂಡಿತು. ಅದರ ಕಾರಣದಿಂದ ಪ್ರಸಾದಿಸ್ಥಲವಾಯಿತು. ಪ್ರಸಾದಿಯು ಆ ಖ್ಯಾತಗೊಂಡ ಶಿವಲಿಂಗಯೋಗದಿಂದಿರಲು ಅವಧಾನದ ಮಹಾನುಭವವೇ,

CC-0. Jangamwadi Math Collection. Digitized by eGangotri

ತಿಳಿಯಲನುಭವಭಕ್ತಿಯೆನಿಸಿತಾ ಭಕ್ತಿಯಿಂ
ದಳವಟ್ಟ ಪರಣಲಿಂಗಿಯ ಸ್ಥಲವದಾಯ್ತಾತ
ನೊಲಿದು ಚರಲಿಂಗಸಂಯೋಗದಿಂದಿರ್ಪ ಪರಮಾನುಭವದಾನಂದವೇ
ಪೊಳೆವುತಿರ್ಪಾನಂದಭಕ್ತಿಯೆನಿಸಿತ್ತದರೊ
ಳೊಲಿದು ಶರಣಸ್ಥಲವದಾಯ್ತಾತನೇ ತನ್ನ
ಬೆಳಗುವ ಪ್ರಸಾದಲಿಂಗದ ಯೋಗದಿಂದಿಹ ಸದಾನಂದಸಾಮರಸವೇ ೬೯

ಪರಮಸಮರಸಭಕ್ತಿಯೆನಿಸಿತಾ ಭಕ್ತಿಯಿಂ
ದಿರದಲೈಕ್ಯಸ್ಥಲಮದಾಯ್ತು ಬಳಿಕೈಕ್ಯನಾ
ವರಮಹಾಲಿಂಗಸಂಯೋಗದಿಂದೈಕ್ಯವಾಗಲ್ಕೆ ಪರಮೈಕ್ಯನಿಂದೆ
ಪರವಿಲ್ಲವಾಗಿ ಸಮರಸಭಕ್ತಿಯಾತನ
ಲ್ಲಿರುತೆ ಸಮರಸವಾಗಿ ನಿಶ್ಶಬ್ದವಾಯ್ತೆಂದು
ಕರುಣದಿಂ ಚೆನ್ನಬಸವೇಶನಾ ಸಿದ್ಧರಾಮೇಶಂಗೆ ನಿರವಿಸಿದನು ೭೦

ಶಶಿಮಂಡಲಂ ಜೊನ್ನವಾಗಸಂ ವಾಯುವಾ
ಕುಸುಮಮಾ ಸುರಭಿ ಕರಕಾಂಭಸಂ ವಾಗರ್ಥ
ವೆಸವ ದೀಪಂ ಬೆಳಗು ರತ್ನವಾ ಕಾಂತಿ ರಸ ರುಚಿಗಳೆಂದಿಂಬೆರಡರ
ಬೆಸುಗೆಯಿಂದಾ ವಿಭಾಗಂಗಳೆಂತಂತೆ ರಾ
ಜಿಸುತೆ ತಲ್ಲಿಂಗದಂಗದ ಸಂಗಯೋಗದಿಂ
ತೆಸೆದುಭಯವಳಿದೇಕವಾದುದೈಕ್ಯಸ್ಥಲವಿದೀಗ ನೀಂ ಕೇಳೆಂದನು ೭೧

೬೯. ತಿಳಿಯಲು ಅನುಭವಭಕ್ತಿಯೆನಿಸಿತು. ಆ ಭಕ್ತಿಯಿಂದ ಪ್ರಾಣಲಿಂಗಿಯ ಸ್ಥಲವಾಯಿತು. ಪ್ರಾಣಲಿಂಗಿಯು ಪ್ರೀತಿಯಿಂದ ಚರಲಿಂಗ ಸಂಯೋಗದಿಂದ ಇರುವ ಪರಮಾನುಭವದ ಆನಂದವೇ ಹೊಳೆಯುತ್ತಿರುವ ಆನಂದಭಕ್ತಿ ಎನ್ನಿಸಿಕೊಂಡಿತು. ಅದರಲ್ಲಿ ಒಲಿದು ಶರಣಸ್ಥಲವಾಯಿತು. ಶರಣನೇ ತನ್ನ ಬೆಳಗುವ ಪ್ರಸಾದಲಿಂಗ ಯೋಗದಿಂದ ಇರುವ ಸದಾನಂದ ಸಾಮರಸ್ಯವೇ ೭೦. ಶ್ರೇಷ್ಠವಾದ ಸಮರಸಭಕ್ತಿಯೆನಿಸಿತು ಆ ಭಕ್ತಿಯಿಂದ ಐಕ್ಯಸ್ಥಳವಾಯಿತು. ಅನಂತರ ಐಕ್ಯನು ಶ್ರೇಷ್ಠವಾದ ಮಹಾಲಿಂಗ ಸಂಯೋಗದಿಂದ ಐಕ್ಯವಾಗಲು ಪರಮೈಕ್ಯನಿಂದ ಬೇರೆ ಯಾವುದೂ ಇಲ್ಲವಾಗಿ ಸಮರಸ ಭಕ್ತಿ ಆತನಲ್ಲಿರುತ್ತ ಸಮರಸವಾಗಿ ನಿಶ್ಶಬ್ದವಾಯಿತು ಎಂದು ಕರುಣೆಯಿಂದ ಚೆನ್ನಬಸವೇಶನು ಆ ಸಿದ್ಧರಾಮನಿಗೆ ವಿವರಿಸಿದನು. ೭೧. ಚಂದ್ರನಿಗೂ–ಬೆಳುದಿಂಗಳಿಗೂ, ಆಕಾಶಕ್ಕೂ-ಗಾಳಿಗೂ, ಹೂವಿಗೂ-ಸುವಾಸನೆಗೂ, ಆಲಿಕಲ್ಲಿಗೂ-ನೀರಿಗೂ, ವಾಕ್ಕಿಗೂ–ಅರ್ಥಕ್ಕೂ, ಪ್ರಕಾಶಿಸುವ ದೀಪಕ್ಕೂ–ಅದರ ಬೆಳಕಿಗೂ, ರತ್ನಕ್ಕೂ–ಅದರ ಕಾಂತಿಗೂ, ರಸಕ್ಕೂ-ರುಚಿಗೂ, ಯಾವರೀತಿ ಹೊಂದಾಣಿಕೆಯಿಂದ ವಿಭಾಗಗಳುಂಟೋ ಅದೇ ರೀತಿ ಪ್ರಕಾಶಿಸುವ ಆ ಲಿಂಗ-ಅಂಗದ ಸಂಯೋಗವು ಈ ಎರಡರ ಭೇದಭಾವ ನಾಶಹೊಂದಿ

CC-0. Jangamwadi Math Collection. Digitized by eGangotri

ಪಸರಿಸುವ ಲಿಂಗದಂಗದ ಸಂಗವೇ ಯೋಗ
ವೆಸೆವ ಸಂಯೋಗವೆ ನಿವೃತ್ತಿಯಾ ನಿರ್ವೃತಿಯೆ
ಮಿಸುಗುವದ್ವೈತವೆನಲೈಕ್ಯವಂತೈಕ್ಯವೇ ಸಾಯುಜ್ಯವು
ಮಿಸುಪ ಸಾಯುಜ್ಯವೇ ವಿಶ್ರಾಂತಿಯೆನಿಪ್ಪುದಾ
ಪಸರಿಸುವ ವಿಶ್ರಾಂತಿಯೇ ಪರಮಪದವಿಯಾ
ಜಸವೆತ್ತ ಪರಮಪದದಿಂ ಬೇರೆ ಮುಕ್ತಿಯಿಲ್ಲೆಲೆ ರಾಮ ಕೇಳೆಂದನು ೭೨
ಇಂತು ಭಕ್ತಾದಿಯೈಕ್ಯಾಂತವಾದಾತ್ಮನೇ
ಮುಂತೆಯಾಚಾರಲಿಂಗಾದಿ ಸುಮಹಾಲಿಂಗ
ವಾಂತ ಷಡ್ವಿಧಲಿಂಗಮಂ ಷಡ್ವಿಧಾಂಗದಿಂ ತಳೆದೈಕ್ಯನಿಜಪದವಿಯು
ಅಂತು ಷಟ್ಸ್ಥಲಬ್ರಹ್ಮದಾಚರಣೆಮಾರ್ಗವಿದು
ನೀಂ ತಿಳಿವುದೆಂದಾಗ ಸಿದ್ಧರಾಮೇಶಂಗೆ
ಸಂತಸದೆ ಚೆನ್ನಬಸವೇಶ್ವರಂ ನಿರವಿಸಿದನಖಿಳಶರಣರು ತಿಳಿವೊಲು ೭೩
ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮಂ ನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ೭೪

ಅರುವತ್ತೊಂದನೆಯ ಸಂಧಿ ಸಂಪೂರ್ಣ

ಒಂದಾದುದೇ ಐಕ್ಯಸ್ಥಳವು, ಈಗ ನೀನು ಕೇಳು ಎಂದನು. ೭೨. ವಿಖ್ಯಾತವಾದ ಲಿಂಗಾಂಗದ ಸಂಗವೇ ಯೋಗ, ಆ ಸಂಯೋಗವೇ ನಿವೃತ್ತಿ. ಆ ನಿವೃತ್ತಿಯೇ ಪ್ರಕಾಶಿಸುವ ಅದ್ವೈತ, ಅದ್ವೈತವೆಂದರೆ ಐಕ್ಯವು. ಆ ರೀತಿಯಾದ ಐಕ್ಯವೇ ಸಾಯುಜ್ಯವು. ಹೊಳೆಯುವ ಸಾಯುಜ್ಯವೇ ವಿಶ್ರಾಂತಿಯೆನಿಸುವುದು. ವಿಶ್ರಾಂತಿಯೇ ಪರಮಪದ. ಆ ಖ್ಯಾತಗೊಂಡ ಪರಮಪದದಿಂದ ಬೇರೆ ಮುಕ್ತಿಯಿಲ್ಲ, ಎಲೆ ರಾಮ ಕೇಳು ಎಂದನು. ೭೩. ಹೀಗೆ ಭಕ್ತದಿಂದ ಪ್ರಾರಂಭಗೊಂಡು ಐಕ್ಯದಿಂದ ಕೊನೆಯಾಗುವ ಆತ್ಮನೇ ಮುಂದೆ ಆಚಾರಲಿಂಗದಿಂದ ಮಹಾಲಿಂಗದವರೆಗೆ ಷಡ್ವಿಧಲಿಂಗವನ್ನು ಷಡ್ವಿಧವಾದ ಅಂಗದಲ್ಲಿ ಧರಿಸಿ ಐಕ್ಯವನ್ನು ಹೊಂದಿ ನಿಜಪದವಿಯನ್ನು ಹೊಂದುತ್ತಾನೆ. ಇದು ಷಟ್ಸ್ಥಲ ಬ್ರಹ್ಮದ ಆಚರಣೆಯೆ ದಾರಿ. ಇದನ್ನು ನೀನು ತಿಳಿ ಎಂದು ಸಂತೋಷದಿಂದ ಚೆನ್ನಬಸವೇಶ್ವರನು ಎಲ್ಲ ಶರಣರೂ ತಿಳಿದುಕೊಳ್ಳುವಂತೆ ಆಗ ಸಿದ್ಧರಾಮನಿಗೆ ವಿವರಿಸಿದನು ೭೪. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿ ಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ಅರುವತ್ತೊಂದನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ಅರುವತ್ತೆರಡನೆಯ ಸಂಧಿ

ಸೂಚನೆ : ಎಸೆವ ಷಟ್ಸ್ಥಲಮಾರ್ಗಮಂ ತಿಳಿದೆನಿನ್ನು ರಾ
ಜಿಸುವ ಕಾಲಜ್ಞಾನಮಂ ತಿಳಿಯ:ಪೇಳ್ದು ರ
ಕ್ಷಿಸುವುದೆನೆ ಸಿದ್ಧರಾಮೇಶಂಗೆ ಗುರುಚೆನ್ನಬಸವೇಶ ನಿರವಿಸಿದನು

ಸಾರಂಗದೈತ್ಯಚರ್ಮಾಂಬರಧರು ದೇವ
ಸಾರಂಗಧರಕಲಾಜೂಟವಿಲಸದ್ದೇವ
ಸಾರಂಗವಾಹನಾದ್ಯಖಿಳದೇವರದೇವ ಸಾರಂಗಪಾಣಿದೇವ
ಸಾರಂಗಧರ ಪರಮವಾಹನ ಮಹಾದೇವ
ಸಾರಂಗವೈರಿವಾಹಿನಿಯಾಳ್ದನೇ ದೇವ
ಸಾರಂಗವದನಪಿತ ಪಂಪಾವಿರೂಪಾಕ್ಷ ಸಾರಂಗಪದವೀವುದು ೧

ಎಲೆ ಮಹಾಗುರುವೆ ನೀಂ ಕರುಣದಿಂ ಪೇಳ್ದ ಷ
ಟ್ಸ್ಥಲವನುರೆ ತಿಳಿದೆನ್ನ ಭವಭವಾಂತರವನತಿ
ಗಳೆದು ಸದ್ಯೋನ್ಮುಕ್ತನಾದೆನೆಂದಾ ಚೆನ್ನಬಸವನಂ ನುತಿಸುತಿರಲು
ನಲವಿನಿಂ ಪ್ರಭು ಸಿದ್ಧರಾಮ ನೀಂ ಬಂದುದಕೆ
ಫಲವಾಯ್ತು ನಾವಿನ್ನು ಪೋಗಿಬಂದಪೆವೆನಲ್
ಮಲಹರನೆ ನಿಮ್ಮಿಂದಲಿಂತಪ್ಪ ಸದ್ಗುರುವ ಕಂಡು ಕೃತಕೃತ್ಯನಾದೆ ೨

ಸೂಚನೆ : ಪ್ರಖ್ಯಾತವಾದ ಷಟ್ಸ್ಥಲದ ರೀತಿಯನ್ನು ತಿಳಿದುಕೊಂಡೆನು. ಇನ್ನು ಪ್ರಕಾಶಿಸುವ ಕಾಲಜ್ಞಾನವನ್ನು ತಿಳಿಯಹೇಳಿ ಕಾಪಾಡು ಎನ್ನಲು ಸಿದ್ಧರಾಮನಿಗೆ ಗುರು ಚೆನ್ನಬಸವೇಶ್ವರನು ವಿವರಿಸಿದನು. ೧. ಗಜಾಸುರನ ಚರ್ಮವನ್ನು ವಸ್ತ್ರವನ್ನಾಗಿ ಧರಿಸಿರುವ ದೇವನೆ, ಚಂದ್ರಕಲೆಯಿಂದ ಪ್ರಕಾಶಮಾನವಾದ ಜಟೆಯುಳ್ಳ ದೇವನೆ; ದೇವೇಂದ್ರ ಮೊದಲಾದ ಎಲ್ಲ ದೇವರಿಗೂ ದೇವನೆ, ವಿಷ್ಣುವಿಗೂ ದೇವನಾದವನೆ, ಜಿಂಕೆಯನ್ನು ಹಿಡಿದವನೆ, ಶ್ರೇಷ್ಠವಾದ ವೃಷಭವೇ ವಾಹನವಾಗಿ ಉಳ್ಳವನೆ, ಮಹಾದೇವ, ಪಾರ್ವತೀಪತಿ ಶಿವನೆ, ಗಣೇಶನ ತಂದೆಯೆ, ಪಂಪಾವಿರೂಪಾಕ್ಷ ಶಿವ ವಾದ ಕೈವಲ್ಯವನ್ನು ದಯಪಾಲಿಸು. ೨. ಎಲೈ ಮಹಾಗುರುವೆ, ನೀನು ಕರುಣೆಯಿಂದ ಹೇಳಿದ ಷಟ್ಸ್ಥಲವನ್ನು ಚೆನ್ನಾಗಿ ತಿಳಿದು ನನ್ನ ಜನ್ಮ ಜನ್ಮಾಂತರವನ್ನು ಸಂಪೂರ್ಣವಾಗಿ ನಾಶಮಾಡಿ ಸದ್ಯೋನ್ಮುಕ್ತನಾದೆ ಎಂದು ಚೆನ್ನಬಸವನನ್ನು ಸಿದ್ಧರಾಮನು ಸ್ತುತಿಸುತ್ತಿರಲು ಆಗ ಪ್ರೀತಿಯಿಂದ ಅಲ್ಲಮಪ್ರಭುವು, ಸಿದ್ಧರಾಮ ನೀನು ಬಂದುದಕ್ಕೆ ಫಲ ದೊರೆ ಯಿತು, ನಾವಿನ್ನು ಹೋಗಿಬರುತ್ತೇವೆ ಎನ್ನಲು, ಪಾಪನಾಶಕನೇ ನಿಮ್ಮಿಂದ ಈ ರೀತಿ

CC-0. Jangamwadi Math Collection. Digitized by eGangotri

ಎಂದಾಗ ಸಿದ್ಧರಾಮೇಶನಲ್ಲಮಗೆರಗಿ
ನಿಂದು ಕೊಂಡಾಡುತಿರೆ ಚೆನ್ನಬಸವೇಶನಾ
ನಂದದಿಂದಲ್ಲಮಪ್ರಭು ಸಿದ್ಧರಾಮೇಶನಾದ್ಯಖಿಳಗಣಕುಲವನು
ಮಂದಿರಕ್ಕೊಡಗೊಂಡುಪೋಗಿ ಮೃಷ್ಟಾನ್ನದಿಂ
ದಂದವರನೆಲ್ಲರಂ ತುಷ್ಟಿವಡಿಸಲ್ ಕರುಣ
ದಿಂದಾಗಲಲ್ಲಮಂ ಬಸವ ಮೊದಲಾದ ಗಣಸಂಕುಲಕ್ಕಿಂತೆಂದನು ೩

ಚೆನ್ನಬಸವಂ ಪೇಳ್ದ ಷಟ್ಸ್ಥಲಸುಮಾರ್ಗಮಂ
ಚೆನ್ನಾಗಿ ತಿಳಿದುಕೊಳುತಿರಿ ಮರಳಿಬಂದಾವು
ಭಿನ್ನವಿಲ್ಲದ ತೆರದೆ ಸಂಪಾದನಂಗೆಯ್ದು ನೋಡಿ ನಿಮಗಾಗ ಬಳಿಕೆ
ಉನ್ನತ ಸುಮುಕ್ತಿಯೊಳಗಿಂಬಿಟ್ಟು ಪೋದಪೆಂ
ನನ್ನಿಯೆಂದಾಗ ನಂಬುಗೆಯಿತ್ತು ಬಸವನಂ
ಚೆನ್ನಬಸವನ ಸಿದ್ಧರಾಮ ಮೊದಲಾದರಂ ನಿಲಿಸಿ ತಾಂ ಬೀಳ್ಕೊಂಡನು ೪

ಸಿದ್ಧರಾಮೇಶನಾ ಚೆನ್ನಬಸವಂಗೆರಗಿ
ಬುದ್ಧಿಯಿನ್ನಾವುದೆನಗೆನೆ ಕೇಳ್ದು ನೀಂ ಸುಪ್ರ
ಸಿದ್ಧಮೆನಿಸುವ ಸೊನ್ನಲಾಪುರದೆ ನಿಜಸಮಾಧಿಯೊಳಿರ್ಪುದೆನಲಾತನು
ಬದ್ಧಾಂಜಲಿಪ್ರಘಟ್ಟನಮಕುಟತಟನಾಗು
ತುದ್ಧರಿಸಬೇಕಿನ್ನು ಮುಂದಣಾಗಂತರದ
ಸುದ್ದಿಯಂ ಪೇಳ್ವುದೆನಗೀಗಲೆನೆ ಚೆನ್ನಬಸವೇಶನೊಲಿದಿಂತೆಂದನು ೫

ಯಾದ ಸದ್ಗುರುವನ್ನು ಕಂಡು ಕೃತಾರ್ಥನಾದೆ. ೩. ಎನ್ನುತ್ತ ಸಿದ್ಧರಾಮೇಶನು ಅಲ್ಲಮನ ಪಾದಕ್ಕೆ ನಮಸ್ಕರಿಸಿ ನಿಂತು ಕೊಂಡಾಡುತ್ತಿರಲು ಚೆನ್ನಬಸವೇಶನು ಆನಂದ ದಿಂದ ಅಲ್ಲಮಪ್ರಭು, ಸಿದ್ಧರಾಮನೇ ಮೊದಲಾದ ಎಲ್ಲ ಗಣಸಮೂಹವನ್ನೂ ತನ್ನ ಜೊತೆಯಲ್ಲಿ ಮಂದಿರದೊಳಕ್ಕೆ ಕರೆದುಕೊಂಡು ಹೋಗಿ ಮೃಷ್ಟಾನ್ನದಿಂದ ಅಂದು ಅವರೆಲ್ಲರನ್ನೂ ತೃಪ್ತಿಪಡಿಸಲು ಆಗ ಅಲ್ಲಮನು ಕರುಣೆಯಿಂದ ಬಸವಣ್ಣ ಮೊದಲಾದ ಗಣಸಮೂಹಕ್ಕೆ ಈ ರೀತಿ ಹೇಳಿದನು. ೪. ಚೆನ್ನಬಸವಣ್ಣನು ಹೇಳಿದ ಷಟ್ಸ್ಥಲ ಮಾರ್ಗವನ್ನು ಚೆನ್ನಾಗಿ ತಿಳಿದುಕೊಳ್ಳುತ್ತಿರಿ. ಮತ್ತೆ ಬಂದು ನಾವು ಎರಡಿಲ್ಲದ ರೀತಿಯಲ್ಲಿ ನಿಮ್ಮ ಆಧ್ಯಾತ್ಮಿಕ ಗಳಿಕೆಯನ್ನು ನೋಡಿ ನಿಮಗೆ ಅನಂತರ ಉನ್ನತ ಮುಕ್ತಿಯನ್ನು ಕೊಟ್ಟು ಹೋಗುತ್ತೇನೆ. ಇದು ಸತ್ಯ ಎಂದು ನಂಬುಗೆಯನ್ನು ಹೇಳಿ ಬಸವಣ್ಣನನ್ನು, ಚೆನ್ನಬಸವ–ಸಿದ್ಧರಾಮ ಮೊದಲಾದವರನ್ನು ಅಲ್ಲಿಯೇ ಇರಿಸಿ ತಾನು ಬೀಳ್ಕೊಂಡನು. ೫. ಸಿದ್ಧರಾಮೇಶನು ಆ ಚೆನ್ನಬಸವನಿಗೆ ನಮಸ್ಕರಿಸಿ ನನಗೆ ಮತ್ತೆ ಯಾವ ಜ್ಞಾನ ವನ್ನು ತಿಳಿಯುವುದಿದೆ ಎನ್ನಲು ಅದನ್ನು ಕೇಳಿ ಚೆನ್ನಬಸವಣ್ಣನು ನೀನು ಪ್ರಸಿದ್ಧವಾದ ಸೊನ್ನಲಾಪುರದಲ್ಲಿ ನಿಜಸಮಾಧಿಯಲ್ಲಿರು ಎನ್ನಲು ಸಿದ್ಧರಾಮನು ಕೈಜೋಡಿಸಿ ನಮಸ್ಕರಿಸಿ, ನನ್ನನ್ನು ಉದ್ಧಾರಮಾಡು, ಇನ್ನು ಮುಂದೆ ಆಗುವ ವಿಷಯಗಳನ್ನು ಈಗ

CC-0. Jangamwadi Math Collection. Digitized by eGangotri

ಆಲಿಸೈ ರಾಮ ಕಾಲಜ್ಞಾನಮಂ ಮಹಾ
ಲೀಲೆಯಿಂದಲ್ಲಮಪ್ರಭುವೀಗ ತಾಂ ಪೋದ
ಮೇಲಖಿಳದೇಶಮಂ ಚರಿಸುತಾ ಶಿವಭಕ್ತರಿಷ್ಟಮಂ ಕರುಣದಿಂದೆ
ಪಾಲಿಸುತ್ತಲಿರ್ಪ ಗಿರಿಗುಹಾನದನದೀ
ಜಾಲಮಂ ತನ್ನ ಪಾದಸ್ಪರ್ಶನದೊಳಾಗ
ಮೇಲಾದ ಪುಣ್ಯತೀರ್ಥಂಗಳಂ ಮಾಡುತಂ ತಿಗುಳಾಣ್ಯಕೈತರುವನು ೬

ಇರದಲ್ಲಿ ಕಂಚಿ ಕಾಳಾಸ್ತಿ ಪೊನ್ನಾಂಬಲಮ
ದರುಣಾಚಲಂ ಕುಂಭಕೋಣ ರಾಮೇಶ ಮ
ತ್ತಿರದಲ್ಲಿ ಗೋಕರ್ಣ ಸೌರಾಷ್ಟ್ರ ಕಾಶಿ ಕೇತಾರಾದಿ ತೀರ್ಥಂಗಳ
ಕರುಣದಿಂ ನೋಡುತ್ತೆ ಹಿಮಗಿರಿಯ ದಾಂಟಿ ತಾಂ
ತಿರುಗಿ ಬರುವಂ ಸವಾಲಕ್ಷಪರ್ವತದಲ್ಲಿ
ಪರಮಮುನಿಗಳ ನೋಡಿ ತತ್ತ್ವಮಂ ಪೇಳ್ದು ಮುಕ್ತಿಯನೊಲಿದುಕೊಟ್ಟು ಬಳಿಕೆ ೭

ಆ ಗಿರಿಗುಹಾಂತರದೆ ಹಟಯೋಗ ಲಂಬಿಕಾ
ಯೋಗ ಮೊದಲಾದವಕ್ಕಧಿಕವೆನಿಸುವ ರಾಜ
ಯೋಗದಿಂ ತನ್ನ ನಿಜಮಂ ತಾನೆ ಜಾನಿಸುತ್ತೀರಾರುವರುಷಮಿರ್ದು
ಆಗಲೀ ಬಸವಣ್ಣನಂದುವರೆಗಂ ಬಿಡದೆ
ಸಾಗಿಸುವ ಶೂನ್ಯಪೀಠವನರಿದು ತಾಂ ಮನೋ
ವೇಗದಿಂದಿಲ್ಲಿಗೈತರುವನೆಲೆ ಸಿದ್ಧರಾಮೇಶ ನೀಂ ಕೇಳೆಂದನು ೮

ನನಗೆ ಹೇಳಬೇಕು ಎನ್ನಲು ಚೆನ್ನಬಸವನು ಪ್ರೀತಿಯಿಂದ ಹೀಗೆಂದನು. ೬. ಕಾಲಜ್ಞಾನವನ್ನು ಕೇಳಯ್ಯ ಸಿದ್ಧರಾಮ, ಮಹಾಲೀಲೆಯಿಂದ ಅಲ್ಲಮಪ್ರಭುವು ಈಗ ತಾನು ಹೋದಮೇಲೆ ಎಲ್ಲ ದೇಶಗಳಲ್ಲೂ ಸಂಚರಿಸುತ್ತ ಆ ಶಿವಭಕ್ತರ ಇಚ್ಛೆಯನ್ನು ಕರುಣೆಯಿಂದ ಪೂರೈಸುತ್ತ ಇರುತ್ತಾನೆ. ಗಿರಿ ಗುಹೆ, ನದ-ನದೀ ಸಮೂಹವನ್ನೂ ತನ್ನ ಪಾದಸ್ಪರ್ಶದಿಂದ ಖ್ಯಾತನಾದ ಪುಣ್ಯತೀರ್ಥಗಳನ್ನಾಗಿ ಮಾಡುತ್ತ ದ್ರಾವಿಡದೇಶಕ್ಕೆ ಬರುವನು. ೭. ಅಲ್ಲಿ ಕಂಚಿ, ಕಾಳಹಸ್ತಿ, ಪೊನ್ನಾಂಬಲ, ಅರುಣಾಚಲ, ಕುಂಭಕೋಣ, ರಾಮೇಶ್ವರ, ಗೋಕರ್ಣ, ಸೌರಾಷ್ಟ್ರ, ಕಾಶಿ, ಕೇದಾರ ಮೊದಲಾದ ತೀರ್ಥಕ್ಷೇತ್ರಗಳನ್ನು ನೋಡುತ್ತ ಹಿಮಾಲಯವನ್ನು ದಾಟಿ ತಾನು ಮತ್ತೆ ಹಿಂದಿರುಗಿ ಬರುತ್ತಾನೆ. ಸವಾಲಕ್ಷ ಪರ್ವತದಲ್ಲಿ ಶ್ರೇಷ್ಠರಾದ ಮುನಿಗಳನ್ನು ನೋಡಿ ತತ್ತ್ವವನ್ನು ಹೇಳಿ, ಮುಕ್ತಿಯನ್ನು ಕೊಟ್ಟು ಮತ್ತೆ ೮. ಆ ಪರ್ವತದ ಗುಹೆಯೊಳಗೆ ಹಟಯೋಗ, ಲಂಬಿಕಾಯೋಗ, ಮೊದಲಾದುವುಗಳಿಗಿಂತ ಉನ್ನತವಾದ ರಾಜಯೋಗದಿಂದ ತನ್ನನ್ನು ತಾನೇ ಧ್ಯಾನಿಸುತ್ತ ಹನ್ನೆರಡು ವರ್ಷವಿದ್ದು ಆಗ ಈ ಬಸವಣ್ಣನು ಅದುವರೆಗೆ ಬಿಡದೆ ಪೋಷಿಸಿ ನಿರ್ವಹಿಸುತ್ತಿರುವ ಶೂನ್ಯಪೀಠವನ್ನು ತಿಳಿದು ಅವನು ಮನೋವೇಗದಿಂದ ಇಲ್ಲಿಗೆ ಬರುತ್ತಾನೆ,

CC-0. Jangamwadi Math Collection. Digitized by eGangotri

ಅಲ್ಲಮಪ್ರಭುವಿಲ್ಲಿಗೈತರ್ಪುದಂ ತಿಳಿದು
ಮೆಲ್ಲನೀ ಬಸವಣ್ಣಗರುಪೆ ಬಳಿಕೀ ಶರಣ
ರೆಲ್ಲರುಂ ಸಹಿತಿದಿರ್ಗೊಂಡು ಕರೆತರಲಾತ ಶೂನ್ಯಪೀಠವನೇರುವಂ
ಅಲ್ಲಿರ್ದ ಚರಪತಿಗಳದ ಕಂಡು ಕಡುಮುಳಿದು
ನಿಲ್ಲದೇ ಪೋಗಲೀ ಬಸವರಾಜಂ ಮಹಾ
ತಲ್ಲಣಂಗೊಂಡು ಪ್ರಭುರಾಯಂಗೆ ಬಿನ್ನವಿಪನೆಲೆ ರಾಮ ಕೇಳೆಂದನು ೯

ನೋಡಿರೇ ಗುರುವೆ ಜಂಗಮದೇವರಿರದೆ ಮಾ
ತಾಡದೇ ಮುಳಿದು ಸಲಿಸದೆ ಪೋದರಿದಕೇನ
ಮಾಡುವೆಂ ತಾನೆನುತ್ತೀ ಬಸವನಲ್ಲಮಂಗುಸಿರಲತಿಕರುಣದಿಂದೆ
ಕೋಡದಿರ್ ಮನದೆ ಘನಚರಲಿಂಗಕೀಗ ನೀಂ
ಮಾಡಿಸಿದ ಪರಿಕರವನೆಲ್ಲಮಂ ತರಿಸೆಮಗೆ
ನೀಡಿಸಿದೊಡಾರೋಗಿಸುವೆವೆಂದು ನುಡಿಯಲದ ಕೇಳುತತಿಭಕ್ತಿಯಿಂದೆ ೧೦

ಲಕ್ಕದಿಂ ಮೇಲೆ ತೊಂಬತ್ತಾರು ಸಾವಿರದ
ಲೆಕ್ಕದಿಂ ಮಿಗಿಲೆನಿಪ ಚರಲಿಂಗಕೊಲವಿನಿಂ
ಚೊಕ್ಕಟದೆ ಮಾಡಿಸಿದ ಪರಿಪರಿಯ ಪರಿಕರಂಗಳನಿರದೆ ತರಿಸಿ ಕೂಡೆ
ಉಕ್ಕುವತಿಹರುಷದಿಂ ನೀಡಿಸುವನನಿತುಮಂ
ಮುಕ್ಕಣ್ಣನಪರಾವತಾರನಲ್ಲಮನಾಗ
ಲೆಕ್ಕಿಸದೆ ಸಲಿಸುವಂ ಗಗನವೇ ಬಾಯ್ದೆರೆದೊಲೆಲೆ ರಾಮ ಕೇಳೆಂದನು ೧೧

ಎಲೆ ಸಿದ್ಧರಾಮೇಶ ಕೇಳು ಎಂದನು. ೯. ಅಲ್ಲಮಪ್ರಭುವು ಇಲ್ಲಿಗೆ ಬರುವುದನ್ನು ತಿಳಿದು ಮೆಲ್ಲನೆ ಬಸವಣ್ಣನಿಗೆ ತಿಳಿಸಲು ಅನಂತರ ಈ ಶರಣರೆಲ್ಲರೊಡಗೂಡಿ ಎದುರುಗೊಂಡು ಕರೆತರಲು ಆತ ಶೂನ್ಯಪೀಠವನ್ನು ಏರುತ್ತಾನೆ. ಅಲ್ಲಿದ್ದ ಜಂಗಮರು ಅದನ್ನು ನೋಡಿ ಬಹಳ ಕೋಪಗೊಂಡು ಅಲ್ಲಿ ನಿಲ್ಲದೆ ಹೋಗಲು ಈ ಬಸವರಾಜನು ಅತಿಯಾಗಿ ತಲ್ಲಣಗೊಂಡು ಪ್ರಭುದೇವನಿಗೆ ಬಿನ್ನವಿಸಿಕೊಳ್ಳುವನು, ಎಲೆ ಸಿದ್ಧರಾಮ, ಕೇಳು ಎಂದನು. ೧೦. ನೋಡಯ್ಯ, ಗುರುವೆ, ಜಂಗಮದೇವರುಗಳು ನಿಲ್ಲದೆ, ಮಾತನಾಡದೆ, ಕೋಪಗೊಂಡು ಊಟಮಾಡದೆ ಹೊರಟುಹೋದರು. ಇದಕ್ಕೆ ನಾನು ಏನು ಮಾಡಲಿ ? ಎನ್ನುತ್ತ ಬಸವಣ್ಣನು ಅಲ್ಲಮನಿಗೆ ತಿಳಿಸಲು ಅಲ್ಲಮನು ಅತಿಯಾದ ಕರುಣೆಯಿಂದ ಮನಸ್ಸಿನಲ್ಲಿ ಹೆದರಬೇಡ, ಶ್ರೇಷ್ಠರಾದ ಜಂಗಮರಿಗಾಗಿ ನೀನು ಈಗ ಮಾಡಿಸಿದ ಸಾಮಗ್ರಿಯೆಲ್ಲವನ್ನೂ ತರಿಸಿ ನಮಗೆ ಬಡಿಸಿದರೆ ಆರೋಗಿಸುತ್ತೇವೆ ಎಂದು ಹೇಳಲು ಅದನ್ನು ಕೇಳಿ ಬಹುಭಕ್ತಿಯಿಂದ, ೧೧. ಲಕ್ಷದ ಮೇಲೆ ತೊಂಬತ್ತಾರು ಸಾವಿರಕ್ಕಿಂತ ಅಧಿಕವಾದ ಜಂಗಮರಿಗೆ ಪ್ರೀತಿಯಿಂದ ಪರಿಷ್ಕಾರವಾಗಿ ಮಾಡಿಸಿದ ನಾನಾರೀತಿಯ ಪರಿಕರಗಳನ್ನು ಕೂಡಲೇ ತರಿಸಿ ಉಕ್ಕುತ್ತಿರುವ ಅತಿಯಾದ ಸಂತೋಷದಿಂದ ಅಲ್ಲಮನಿಗೆ ನೀಡಿಸುವನು. ಅಷ್ಟನ್ನೂ ಮುಕ್ಕಣ್ಣನ ಅಪರಾವತಾರನಾದ ಅಲ್ಲಮನು ಆಗ ಸ್ವಲ್ಪವೂ ಲಕ್ಷಿಸದೆ ಆಕಾಶವೇ ಬಾಯಿ

CC-0. Jangamwadi Math Collection. Digitized by eGangotri

ಅವಿರಳಾನಂದಮಯ ಗುರು ಚೆನ್ನಬಸವ ನೀಂ
ವಿವರಿಸುವುದೆನಗೆ ಘನಚರಲಿಂಗಕೊಲವಿನಿಂ
ಸವೆದ ಬೋನವನೀತನೊರ್ವನಲ್ಲಮದೇವನುಂಬುದಚ್ಚರಿಯೆಂದೆನೆ
ಶಿವನಾಜ್ಞೆಯಿಂದಖಿಳಗಣಕುಲಕೌತಣವ
ಶಿವೆ ಪೇಳ್ದು ಮಾಡಿದನಿತನ್ನವುಂ ತಾನವರ
ನೆವದಿಂದಲಂಗುಷ್ಠಗಣನಾಥನೊರ್ವನಾರೋಗಿಸನೆ ಕೇಳೆಂದನು ೧೨

ಆ ಗಣೇಶ್ವರನಿಂದಸಂಖ್ಯಾತಗಣಕುಲ
ಕ್ಕಾಗದೇ ತೃಪ್ತಿ ಕೇಳೈ ಸಿದ್ಧರಾಮ ನೀ
ನೀಗಳಾ ನಿರ್ಮಾಯನೆನಿಪ ಗಣನಾಥನಲ್ಲಮನೆನಿಸಿ ಚರಿಸಿ ಬಂದು
ರಾಗದಿಂದನಿತನೊಬ್ಬನೆ ಸಲಿಸೆ ಮುಳಿದೆದ್ದು
ಪೋಗೆ ಚರರೆಲ್ಲರ್ಗೆ ತೃಪ್ತಿಯಹುದೆನೆ ಪರಮ
ಶ್ರೀಗುರುವೆಯೊರ್ವನಿಂದಿನಿಬರ್ಗೆ ತೃಪ್ತಿಯೆಂತಪ್ಪುದೆನಲಿಂತೆಂದನು ೧೩

ಕುರುಪತಿಯ ನೇಮದಿಂ ದೂರ್ವಾಸನಂದು ಹ
ನ್ನೆರಡುಸಾವಿರವುಂದಿ ಋಷಿಗಳಂ ಕೂಡಿಕೊಂ
ಡಿರದೈದಿ ಧರ್ಮಜನ ಗ್ರಾಸಮಂ ಕೇಳಲಾ ಕೃಷ್ಣನಕ್ಷಯಪಾತ್ರೆಯ
ತರಿಸಿ ತೊಳೆದುದಕವುಂ ಕುಡಿಯೆ ಹನ್ನೆರಡು ಸಾ
ವಿರವುಂದಿ ಋಷಿಗಳ್ಗೆ ತೃಪ್ತಿಯಾಗದೆ ಪೇಳ್ವೆ
ಮರುಳೆ ಶಿವಚಿತ್ಪ್ರಸಾದದೆ ತೃಪ್ತಿಯಪ್ಪುದದು ಚೋದ್ಯವೇ ಕೇಳೆಂದನು ೧೪

ತೆರೆದಂತೆ ಉಣ್ಣುತ್ತಾನೆ, ಎಲೆ ಸಿದ್ಧರಾಮೇಶ ಕೇಳು ಎಂದನು. ೧೨. ಅವಿರಳಾನಂದ ಮಯನಾದ ಗುರು ಚೆನ್ನಬಸವೇಶ, ಶ್ರೇಷ್ಠರಾದ ಜಂಗಮರಿಗಾಗಿ ಪ್ರೀತಿಯಿಂದ ಮಾಡಿದ ಅಡಿಗೆಯಷ್ಟನ್ನೂ ಒಬ್ಬನೇ ಆದ ಅಲ್ಲಮದೇವನು ಊಟಮಾಡುವುದು ಆಶ್ಚರ್ಯ ಎನ್ನಲು, ಚೆನ್ನಬಸವಣ್ಣನು ಶಿವನ ಆಜ್ಞೆಯಿಂದ ಸಕಲ ಗಣಸಮೂಹಕ್ಕೂ ಪಾರ್ವತಿಯು ಔತಣಕ್ಕೆ ಹೇಳಿ ಮಾಡಿದ ಅಷ್ಟು ಅನ್ನವನ್ನೂ ಅವರ ನೆಪದಿಂದ ತಾನು ಅಂಗುಷ್ಠಗಣ ನಾಥನೆಂಬುವನೊಬ್ಬನೇ ಊಟಮಾಡಲಿಲ್ಲವೇ ಕೇಳು ಎಂದನು, ೧೩. ಆ ಗಣೇಶ್ವರನಿಂದ ಅಸಂಖ್ಯಾತ ಗಣಸಮೂಹಕ್ಕೆ ತೃಪ್ತಿಯಾಗದೆ ಇರುತ್ತದೆಯೆ ? ನೀನೀಗ ಕೇಳಯ್ಯ, ಸಿದ್ಧರಾಮ. ನಿರ್ಮಾಯನೆಂಬ ಗಣನಾಥನು ಅಲ್ಲಮನಾಗಿ ಹುಟ್ಟಿ ಸಂಚರಿಸುತ್ತಾ ಬಂದು ಪ್ರೀತಿಯಿಂದ ಅಷ್ಟನ್ನೂ ಒಬ್ಬನೇ ಆರೋಗಿಸಲು ಕೋಪಗೊಂಡು ಹೋದ ಜಂಗಮ ರೆಲ್ಲರಿಗೂ ತೃಪ್ತಿಯುಂಟಾಗುತ್ತದೆ ಎನ್ನಲು, ಶ್ರೇಷ್ಠನಾದ ಶ್ರೀಗುರುವೆ, ಒಬ್ಬನಿಂದ ಅಷ್ಟು ಜನರಿಗೂ ಹೇಗೆ ತೃಪ್ತಿಯುಂಟಾಗುತ್ತದೆ ಎನ್ನಲು ಹೀಗೆಂದನು. ೧೪. ಹಿಂದೆ ದುರ್ಯೋಧನನ ಇಷ್ಟಾನುಸಾರ ಆ ದಿನ ದೂರ್ವಾಸನು ಹನ್ನೆರಡು ಸಾವಿರಮಂದಿ ಋಷಿಗಳೊಡಗೂಡಿ ಬಂದು ಧರ್ಮರಾಯನನ್ನು ಆಹಾರವನ್ನು ಬಡಿಸೆಂದು ಕೇಳಲು ಕೃಷ್ಣನು ಅಕ್ಷಯಪಾತ್ರೆಯನ್ನು ತರಿಸಿ ಅದನ್ನು ತೊಳೆದ ನೀರನ್ನು ಕುಡಿಯಲು ಹನ್ನೆರಡು ಸಾವಿರ ಋಷಿಗಳಿಗೆ ತೃಪ್ತಿಯಾಗಲಿಲ್ಲವೆ ? ಮರುಳೆ, ಶಿವಚಿತ್ ಪ್ರಸಾದದಿಂದ ತೃಪ್ತಿ

CC-0. Jangamwadi Math Collection. Digitized by eGangotri

ಅದು ನಿಮಿತ್ತದೊಳಲ್ಲಮನ ಮುಖದಿನನಿತುಚರ
ರುದರ ತುಂಬುವುದಾಗ ಬಸವನವರೆಲ್ಲರಂ
ಸದನಕ್ಕೆ ಮರಳಿ ಕರೆತಂದವರ್ ಬೇಡಿದಿಷ್ಟಂಗಳಂ ಕೊಟ್ಟು ಕಳುಪಿ
ಮುದದೆ ಗಣಕುಲಸಹಿತೆ ಬಸವನಲ್ಲಮಗೆರಗಿ
ಸದಮಲಜ್ಞಾನಿ ಗತಿಯೆಮಗಾವುದೆನೆ ನಿಮ್ಮ
ಹೃದಯದನುಭಾವದೈಕ್ಯಸ್ಥಲವ ಪೇಳಿಮೆಂದಲ್ಲಮಂ ನಿರವಿಸುವನು ೧೫

ಎಂದು ನಿರವಿಸಲಾಗ ಬಸವಾದಿ ಸಕಲಗಣ
ಬೃಂದಮಿರದೊಡನೆ ತಮ್ಮೈಕ್ಯಸ್ಥಳಂಗಳಂ
ಸಂದಿಲ್ಲದಂತೆ ಬಿನ್ನವಿಸಲಲ್ಲಮನಾಗ ಮೆಚ್ಚಿ ನಿಮಗೈಕ್ಯಪದವಿ
ಚೆಂದದಿಂದಳವಟ್ಟುದೆನುತೆ ನಿರವಯವಾಗು
ವಂದವಂ ಕರುಣದಿಂ ತಿಳಿಪಿ ಬಳಿಕೆಮ್ಮನಾ
ನಂದದಿಂ ಬೀಳ್ಕೊಂಡು ಶ್ರೀಶೈಲಕೈದುವಂ ಕೇಳೆಂದು ನಿರವಿಸಿದನು ೧೬

ಆ ಗಿರಿಯ ಮೇಲೆ ಗೋರಕ್ಷ ಮೊದಲಾದಖಿಳ
ಯೋಗಿಗಳ ಮನದಿಷ್ಟಮಂ ಕೊಟ್ಟು ಮಹದೇವಿ
ಗಾಗ ನಿರ್ವಾಣಪದವಿಯನರಿಪಲಾಕೆ ಕದಳಿಯಲಿ ನಿರವಯಮಪ್ಪಳು
ರಾಗದಿಂದಲ್ಲಮಂ ಕದಳಿಯಂ ಪೊಕ್ಕು ಶಿವ
ಯೋಗದಿಂ ನಿರವಯವನೈದುವನದಂ ತಿಳಿದು
ಬೇಗದಿಂದೀ ಬಸವನಖಿಳಗಣಸಂಕುಲಕ್ಕೆರಗಿ ಬಿನ್ನಹವ ಮಾಡಿ ೧೭

ಯಾಗುವುದು ಆಶ್ಚರ್ಯವೇ ? ಕೇಳು ಎಂದನು. ೧೫. ಅದು ಕಾರಣ ಅಲ್ಲಮನ ಮೂಲಕ ಅಷ್ಟು ಜನ ಜಂಗಮರ ಹೊಟ್ಟೆ ತುಂಬುವುದು. ಆಗ ಬಸವಣ್ಣನು ಅವರೆಲ್ಲ ರನ್ನೂ ಮಹಮನೆಗೆ ಮತ್ತೆ ಕರೆತಂದು ಅವರು ಬೇಡಿದ ಇಷ್ಟಾರ್ಥಗಳನ್ನು ಕೊಟ್ಟು ಕಳುಹಿಸುತ್ತಾನೆ. ಅನಂತರ ಸಂತೋಷದಿಂದ ಶರಣ ಸಮೂಹದೊಡಗೂಡಿ ಬಸವಣ್ಣನು ಅಲ್ಲಮನ ಪಾದಗಳಿಗೆ ನಮಸ್ಕರಿಸಿ, ಸದಮಲಜ್ಞಾನಿಯೆ, ನಮಗೆ ದಿಕ್ಕಾವುದು ಎನ್ನಲು, ನಿಮ್ಮ ಹೃದಯದ ಅನುಭಾವದೈಕ್ಯಸ್ಥಳವನ್ನು ಹೇಳಿ .ಎಂದು ಅಲ್ಲಮನು ನಿರೂಪಿ ಸುವನು. ೧೬. ಅವನ ನಿರೂಪದಂತೆ ಬಸವನೇ ಮೊದಲಾದ ಎಲ್ಲ ಗಣಸಮೂಹವೂ ತಮ್ಮ ಐಕ್ಯಸ್ಥಳಗಳನ್ನು ಅನುಮಾನವಿಲ್ಲದಂತೆ ಬಿನ್ನವಿಸುವರು. ಆಗ ಅಲ್ಲಮನು ಮೆಚ್ಚಿ ನಿಮಗೆ ಐಕ್ಯಪದವಿಯು ಚೆನ್ನಾಗಿ ಸಿದ್ಧಿಸಿತು ಎನ್ನುತ್ತ ಅವರು ಬಯಲಾಗುವ ರೀತಿ ಯನ್ನು ಕರುಣೆಯಿಂದ ತಿಳಿಸಿ ಅನಂತರ ನಮ್ಮನ್ನು ಆನಂದದಿಂದ ಬೀಳ್ಕೊಂಡು ಶ್ರೀ ಶೈಲಕ್ಕೆ ಹೋಗುತ್ತಾನೆ ಕೇಳು ಎಂದು ಚೆನ್ನಬಸವಣ್ಣನು ಹೇಳಿದನು. ೧೭. ಆ ಪರ್ವತದ ಮೇಲೆ ಗೋರಕ್ಷ ಮೊದಲಾದ ಎಲ್ಲ ಯೋಗಿಗಳ ಮನಸ್ಸಿನ ಇಷ್ಟವನ್ನೂ ಸಲ್ಲಿಸಿ. ಮಹಾ ದೇವಿಗೆ ಆಗ ನಿರ್ವಾಣಪದವಿಯನ್ನು ತಿಳಿಸಲು ಆಕೆ ಕದಳಿಬನದಲ್ಲಿ ಬಯಲಾಗುವಳು. ಪ್ರೀತಿಯಿಂದ ಅಲ್ಲಮನೂ ಕದಳಿಯನ್ನು ಹೊಕ್ಕು ಶಿವಯೋಗದಿಂದ ಬಯಲಾಗುವನು. ಅದನ್ನು ತಿಳಿದು ಈ ಬಸವನು ಎಲ್ಲ ಶರಣಸಮೂಹಕ್ಕೆ ನಮಸ್ಕರಿಸಿ ವಿಜ್ಞಾಪಿಸಿಕೊಂಡು

CC-0. Jangamwadi Math Collection. Digitized by eGangotri

ಆಲಿಸೈ ಸಿದ್ಧರಾಮೇಶ ನೀಂ ಬಳಿಕಲಾ
ಶಾಲಿವಾಹನಶಕದೊಳರುನೂರರಿಂದ ಮು
ದೇಳನೆಯ ರಕ್ತಾಕ್ಷಿಯೆಂಬ ವತ್ಸರದ ಫಾಲ್ಗುಣಶುದ್ಧದೇಕಾದಶಿ
ಮೇಲಾದ ತಿಥಿಯ ಮಂಗಳವಾರದುದಯದಾ
ಕಾಲದಿಪ್ಪತ್ತೈದು ಗಳಿಗೆಯೊಳ್ ಬಸವನತಿ
ಲೀಲೆಯಿಂ ಸಂಗಮೇಶ್ವರನ ಹೃತ್ಕಮಲಕರ್ಣಿಕೆಯ ಮಧ್ಯದೊಳಡಗುವಂ ೧೮

ಅಲ್ಲಮಪ್ರಭುವಲ್ಲಿ ನಿರವಯುವನೈದೆ ಬಳಿ
ಕಿಲ್ಲಿಯಾ ಬಸವಣ್ಣನಿರದೆ ಸಂಗಮನಾಥ
ನಲ್ಲಿ ತಾನೈಕ್ಯವಾಗಲ್ಕಂಡು ಹಡಪದಪ್ಪಣ್ಣನೀ ನೀಲಾಂಬೆಗೆ
ನಿಲ್ಲದುಸಿರ್ದಿರ್ವರುಂ ತಮ್ಮಿಷ್ಟಲಿಂಗಂಗ
ಳಲ್ಲಿ ತಾವೈಕ್ಯರಾಗುವರಾಗ ಶಿವಶರಣ
ರಲ್ಲಿ ಕೆಲಕೆಲರೈಕ್ಯವಾಗುವರ್ ಸಿದ್ಧರಾಮೇಶ ನೀಂ ಕೇಳೆಂದನು ೧೯

ಬಸವದಂಡಾಧೀಶನೈದೆ ತತ್ಪಟ್ಟಮಂ
ವಸುಧೇಶ ಬಿಜ್ಜಳಂ ನಮಗೆ ಕಟ್ಟುವನಾಗ
ಲಸಮಕುಲವೆಂದು ಹಳ್ಳಯ್ಯ ಮಧುವಯ್ಯಗಳನೆಳಹೂಟೆಯಂ ಕಟ್ಟಿಸೆ
ಹಸನಾದುದೆಂದು ಜಗದೇವ ಬೊಮ್ಮಣ್ಣಂಗ
ಳೆಸೆವುತಿಹ ಮಂಜಿನವರಾಗಿ ಬಿಜ್ಜಳರಾಯ
ನಸುಗೊಂಬೆವೆಂದೆಮ್ಮ ಕೈಯಿಂದಲಲಗಿನ ಪ್ರಸಾದವಂ ಪಡೆದೊಯ್ವರು ೨೦

೧೮. ಕೇಳಯ್ಯ, ಸಿದ್ಧರಾಮ, ಅನಂತರ ಆ ಶಾಲಿವಾಹನ ಶಕ ಆರುನೂರ ಏಳನೆಯ (607) ರಕ್ತಾಕ್ಷಿಸಂವತ್ಸರದ ಫಾಲ್ಗುಣ ಶುದ್ಧ ಏಕಾದಶಿ ಮಂಗಳವಾರ ಉದಯಾನಂತರದ ಇಪ್ಪತ್ತೈದು ಗಳಿಗೆಯಲ್ಲಿ ಬಸವನು ಲೀಲೆಯಿಂದ ಸಂಗಮೇಶ್ವರನ ಹೃದಯ ಕಮಲದ ಮಧ್ಯದಲ್ಲಿ ಮರೆಯಾಗುವನು. ೧೯. ಅಲ್ಲಮಪ್ರಭುವು ಅಲ್ಲಿ ಬಯಲಾಗಲು, ಅನಂತರ ಆ ಬಸವಣ್ಣನು ತಡೆಯದೆ ಸಂಗಮನಾಥನಲ್ಲಿ ತಾನೂ ಐಕ್ಯವಾಗಲು ಅದನ್ನು ನೋಡಿ ಹಡಪದ ಅಪ್ಪಣ್ಣನು ಈ ವಿಷಯವನ್ನು ನೀಲಾಂಬೆಗೆ ಹೇಳುವನು. ಅವರು ಇಬ್ಬರೂ ತಮ್ಮ ಇಷ್ಟಲಿಂಗಗಳಲ್ಲಿ ಐಕ್ಯರಾಗುವರು. ಆಗ ಶಿವಶರಣರಲ್ಲಿ ಕೆಲಕೆಲವರು ಐಕ್ಯರಾಗುವರು ಸಿದ್ಧರಾಮೇಶ ಕೇಳು ಎಂದನು. ೨೦. ಬಸವದಂಡಾಧೀಶನು ಹೋಗಲು ಆ ಪಟ್ಟವನ್ನು ದೊರೆ ಬಿಜ್ಜಳನು ನಮಗೆ ಕಟ್ಟುವನು. ಆಗ ಹಳ್ಳಯ್ಯ-ಮದುವಯ್ಯನೆಂಬುವವರನ್ನು ಬೇರೆ ಬೇರೆ ಕುಲದವರೆಂದು ಪಶುವಿನ ಕಾಲಿಗೆ ಕಟ್ಟಿಸಲು ಸರಿಯಾಯಿತೆಂದು ಜಗದೇವ ಬೊಮ್ಮಣ್ಣನವರು ಮಂಜಿನವರಾಗಿ ಬಿಜ್ಜಳರಾಯನ ಪ್ರಾಣ ತೆಗೆಯುತ್ತೇವೆ ಎಂದು ನಮ್ಮ ಕೈಯಿಂದ ಆಯುಧವನ್ನು ಪಡೆದುಕೊಂಡು ಹೋಗುವರು.

CC-0. Jangamwadi Math Collection. Digitized by eGangotri

ಬಳಿಕಿತ್ತಲಾವು ಘನಪರ್ವವೆಂದಾ ಶರಣ
ಕುಲವನೆಲ್ಲವ ಕರೆಸಿ ಕೇಳ್ವೆವಿಲ್ಲಿರಬಾರ
ದುಳುವೆಯ ಮಹಾಮನೆಗೆ ಹೋಗಬೇಕೆನೆ ಕೆಲವರೊಪ್ಪುವರ್ ಮತ್ತವರೊಳು
ಕೆಲಬರೇ ಬಾರೆವೆನಲವರನೆಲ್ಲರ ತಿರುಗಿ
ಕಳುಪಿ ಮಿಕ್ಕವರನೀ ಪುರದಿಂದಲಾಗಳೇ
ಕಳುಪುವೆವು ಸಂಗಮೇಶ್ವರನ ಘನಪರ್ವವೆಂದೆಂಬ ನೆವದಿಂದೆ ಬೇಗ ೨೧

ಇತ್ತ ನಾವೀ ಶರಣರೊಳಗೆ ಕೆಲಬರ್ ಸಹಿತೆ
ಜತ್ನಾಯತದೊಳಾನೆ ಕುದುರೆ ಕಾಲಾಳುಗಳ
ಮೊತ್ತಸಹಿತತಿಜತನವಾಗಿ ನಮ್ಮರಮನೆಯನೇ ಕಾದುಕೊಂಡಿರ್ಪೆವು
ಅತ್ತಲಾ ಜಗದೇವ ಬೊಮ್ಮಣ್ಣರಿರ್ವರುಂ
ಚಿತ್ತಹರುಷದೊಳೈದಿ ಬಿಜ್ಜಳಮಹೀಪಾಲ
ನೊತ್ತಿನೊಳಗೆಂದಿನಂದದಲಿ ಪಂಜುಗಳನುರೆ ಪಿಡಿದುಕೊಂಡಿರಲಾಗಳು ೨೨

ಓಲಗದವರನೆಲ್ಲರಂ ಕಳುಪಿ ಬಿಜ್ಜಳನ್ನ
ಪಾಲನಾ ಪಂಜುಗಳ ಬೆಳಗಿನಿಂ ತನ್ನ ರಾ
ಜಾಲಯವನೊಳಪೊಕ್ಕು ಬರಲಾಗ ಜಗದೇವ ಮೊಲ್ಲೆಯಾ ಬೊಮ್ಮಣ್ಣನು
ಬೀಳಲಿರಿದರಸಿನುದರವ ಸಿಳ್ದು ಬಳಿಕಲ್ಲಿ
ಕೇಳೆವೆನಬೇಡ ಪರವಾದಿಯುಂ ಕೊಂದೆವೆಂ
ದಾಲಿ ಬೊಬ್ಬಿರಿವುತ್ತಲೆಮ್ಮ ರಾಜಾಲಯಕ್ಕೈತರ್ಪರುತ್ಸವದೊಳು ೨೩

೨೧. ಅನಂತರ ಇತ್ತ ಕಡೆ ನಾವು ದೊಡ್ಡ ಪರ್ವಕಾಲವೆಂದು ಆ ಶರಣಕುಲವನ್ನೆಲ್ಲ ಕರೆಸಿ ಇಲ್ಲಿ ಇರಬಾರದು ಉಳುವೆಯ ಮಹಾಮನೆಗೆ ಹೋಗಬೇಕೆಂದು ಕೇಳುತ್ತೇವೆ. ಅದಕ್ಕೆ ಕೆಲವರು ಒಪ್ಪುತ್ತಾರೆ, ಮತ್ತೆ ಅವರಲ್ಲಿ ಕೆಲವರು ಬರುವುದಿಲ್ಲ ಎನ್ನಲು ಅವರೆಲ್ಲರನ್ನೂ ಹಿಂದಕ್ಕೆ ಕಳುಹಿಸಿ ಉಳಿದವರನ್ನು ಸಂಗಮೇಶ್ವರನ ದೊಡ್ಡ ಹಬ್ಬವೆಂಬ ನೆಪದಿಂದ ಆ ಕೂಡಲೇ ಈ ಪಟ್ಟಣದಿಂದ ಬೇಗ ಕಳಿಸುತ್ತೇವೆ. ೨೨. ಇತ್ತಕಡೆ ನಾವು ಈ ಶರಣರಲ್ಲಿ ಕೆಲವರೊಡನೆ ಪ್ರಯತ್ನಪೂರ್ವಕವಾಗಿ ಆನೆ-ಕುದುರೆ-ಕಾಲಾಳುಗಳ ಗುಂಪಿನೊಡನೆ ಎಚ್ಚರಿಕೆಯಿಂದ ನಮ್ಮ ಮಹಾಮನೆಯನ್ನೇ ಕಾದುಕೊಂಡಿರುತ್ತೇವೆ. ಅತ್ತಕಡೆ ಆ ಜಗದೇವ-ಬೊಮ್ಮಣ್ಣ ಇಬ್ಬರೂ ಸಂತೋಷದಿಂದ ಹೋಗಿ ಬಿಜ್ಜಳದೊರೆಯೊಡನೆ ಎಂದಿನಂತೆ ಪಂಜುಗಳನ್ನು ಹಿಡಿದುಕೊಂಡಿರುವಾಗ, ೨೩. ಸಭೆಯಲ್ಲಿದ್ದವರೆಲ್ಲರನ್ನೂ ಕಳಿಸಿ ಬಿಜ್ಜಳರಾಯನು ಆ ಪಂಜುಗಳ ಬೆಳಕಿನಲ್ಲಿ ತನ್ನ ಅರಮನೆಯನ್ನು ಹೊಕ್ಕು ಬರಲು ಆಗ ಜಗದೇವ ಮೊಲ್ಲೆಯ ಬೊಮ್ಮಣ್ಣನು ರಾಜನು ಕೆಳಕ್ಕೆ ಬೀಳುವಂತೆ ಹೊಟ್ಟೆಯನ್ನು ಸೀಳಿ ಅನಂತರ ಅಲ್ಲಿ "ಕೇಳಲಿಲ್ಲ ಎನ್ನಬೇಡ, ಅನ್ಯಮತೀಯನನ್ನು ಕೊಂದೆವು" ಎಂದು ಚೀರಿ ಬೊಬ್ಬೆಹಾಕುತ್ತ ನಮ್ಮ ಅರಮನೆಗೆ ಸಂತೋಷದಿಂದ

CC-0. Jangamwadi Math Collection. Digitized by eGangotri

ಬಂದು ತದ್ವಾರ್ತೆಯುಂ ಪೇಳ್ದವರ್ ಬಳಿಕಲಾ
ನಂದದಿಂ ಕೈಲಾಸಕೈದುವರ್ ನಾವಿರದೆ
ಮಂದಿಕುದುರೆಯ ಕೂಡಿಕೊಂಡಾಗಲೀ ಪುರವನತಿಗಳೆದು ಪೋಗುತಿರಲು
ಹಿಂದುಗೊಂಡಳಿಯ ಬಿಜ್ಜಳನೊಡನೆ ದಾಳಿಯುಂ
ಬಂದೆಮ್ಮ ತಡೆವ ತಡೆಗೊಡದಲ್ಲಿ ನಾವಾಗ
ನಿಂದು ಕಾದುವೆವು ಕಾತರವಳ್ಳಿಯಲ್ಲಿ ಮುರುಗೋಡಿಂದ ಮುರಿಯ ತಿವಿದು ೨೪

ಮಡಿವಳಯ್ಯಗಳ ಕೂಗಿನ ಮಾರಿತಂದೆಗಳ
ನೊಡಗೂಡಿಕೊಂಡಳಿಯ ಬಿಜ್ಜಳನ ಸೇನೆಯುಂ
ಮಡಿಪಿ ತನ್ನೃಪತಿಯುಂ ಕೈಸೆರೆಯ ಪಿಡಿದು ಪಾಳಯಕೆ ಬರೆ ನಾಗಾಂಬಿಕೆ
ಕಡುನೊಂದು ಶಿವಶರಣರಿಂತಪ್ಪ ಕೊಲೆಗೊಡಂ
ಬಡುವರೇ ಸಾಕಿನ್ನವನ ಬಿಟ್ಟು ಪ್ರಾಣಮಂ
ಮಡಿದ ಸೇನೆಗೆ ಕೊಟ್ಟು ಕಳುಪಿ ನೀವೆಂದೆಮಗೆ ಪೇಳ್ದು ಮತ್ತಿಂತೆಂಬಳು ೨೫

ಬಸವಣ್ಣನೈದಲಾ ಪಟ್ಟಕ್ಕೆ ನೀನಿಂದು
ಸಸಿನದಿಂ ಮೂರುವರೆ ತಿಂಗಳಾಯ್ತಷ್ಟರೊಳ್
ವಸುಧೇಶ ಬಿಜ್ಜಳನನಿರಿದ ಶರಣರ್ ಶಿವನ ಪೊರೆಗೈದಲಾತನವರ
ಹಸನಾಯ್ತು ಶಿವಭಕ್ತರಿಂತು ಬಿಜ್ಜಳರಾಯ
ನಸುಗೊಂಡು ಬಂದಿರಬರಿಂದವನಿಯೊಳ್ ಜನಿಸಿ
ಬಸಿದ ಶೂಲವನೇರಿ ಬನ್ನಿಮೆನಲವರು ಭೂಲೋಕದೊಳ್ ಜನಿಸಿ ಬಳಿಕೆ ೨೬

ಬರುವರು. ೨೪. ಬಂದು ಆ ಸಮಾಚಾರವನ್ನು ಹೇಳಿ ಅವರು ಅನಂತರ ಆನಂದದಿಂದ ಕೈಲಾಸಕ್ಕೆ ಹೋಗುವರು. ನಾವು ಕೂಡಲೇ ಜನ ಮತ್ತು ಕುದುರೆಗಳನ್ನು ಕೂಡಿಕೊಂಡು ಆಗ ಈ ಪಟ್ಟಣವನ್ನು ದಾಟಿ ಹೋಗುತ್ತಿರಲು ಹಿಂಬಾಲಿಸಿದ ಅಳಿಯ ಬಿಜ್ಜಳನು ಕೂಡಲೇ ಸೈನ್ಯಸಮೇತ ದಾಳಿ ಬಂದು ನಮ್ಮನ್ನು ತಡೆಯುತ್ತಾನೆ. ತಡೆಗೊಡ ಎಂಬ ಊರಿನಲ್ಲಿ ನಾವು ಆಗ ಎದುರಿಸಿ ನಿಂತು ಯುದ್ಧಮಾಡುವೆವು. ಮುರುಗೋಡಿಂದ ಮುರಿಯ ತಿವಿದು ಕಾತರವಳ್ಳಿಯಲ್ಲಿ ಕಾದುವೆವು. ೨೫. ಮಡಿವಳಯ್ಯ, ಕೂಗಿನ ಮಾರಿತಂದೆಗಳನ್ನು ಕೂಡಿಕೊಂಡು ಅಳಿಯ ಬಿಜ್ಜಳನ ಸೇನೆಯನ್ನು ನಾಶಮಾಡಿ ಆ ದೊರೆಯನ್ನು ಕೈಸೆರೆ ಹಿಡಿದು ಪಾಳಯಕ್ಕೆ ಬರಲು ನಾಗಾಂಬಿಕೆ ಬಹುವಾಗಿ ನೊಂದು ಶಿವಶರಣರು ಈ ರೀತಿಯಾದ ಕೊಲೆಗೆ ಮನಮಾಡುವರೆ ? ಸಾಕು ಇನ್ನು ಇವನನ್ನು ಬಿಟ್ಟು ನೀವು ಸತ್ತ ಸೈನ್ಯಕ್ಕೆ ಪ್ರಾಣವನ್ನು ಕೊಟ್ಟು ಕಳಿಸಿ ಎಂದು ನಮಗೆ ಹೇಳಿ ಮತ್ತೆ ಹೀಗೆನ್ನುವಳು. ೨೬. ಬಸವಣ್ಣನು ಹೊರಟುಹೋಗಲು ಆ ಪಟ್ಟಕ್ಕೆ ನೀನು ಬಂದು ಸರಿಯಾಗಿ ಮೂರೂವರೆ ತಿಂಗಳಾಯಿತು. ಅಷ್ಟರಲ್ಲಿ ದೊರೆ ಬಿಜ್ಜಳನನ್ನು ಕೊಂದ ಶರಣರು ಶಿವನ ಬಳಿಗೆ ಹೋಗಲು ಆತನು ಅವರನ್ನು ಕುರಿತು ಚೆನ್ನಾಯಿತು, ಶಿವಭಕ್ತರು ಹೀಗೆ ಬಿಜ್ಜಳರಾಜನ ಪ್ರಾಣ ತೆಗೆದುಬಂದಿರಿ. ಅದರಿಂದ ಭೂಮಿಯಲ್ಲಿ ಹುಟ್ಟಿ ಸೋರುತ್ತಿರುವ ಶೂಲವನ್ನು ಬನ್ನಿ ಏರಿ ಎನ್ನಲು, ಅವರು ಭೂಲೋಕದಲ್ಲಿ ಹುಟ್ಟಿ ಅನಂತರ,

CC-0. Jangamwadi Math Collection. Digitized by eGangotri

ಓರುಗಲ್ಲೆಂಬ ಪಟ್ಟಣದ ಹೊರಪುರದಲ್ಲಿ
ವೀರಗುಂಡಬ್ರಹ್ಮರೆಂಬ ಪೆಸರಿಂದಿರಲ್
ಮಾರಾರಿ ಬಂದು ಗಣಪತಿರಾಯನರಮನೆಯು ಕದ್ದವರ ಮರೆಯು ಪೊಗಲು
ದಾರಿವಿಡಿದೈತಂದ ಕಳ್ಳರಂ ನೀವೆಮಗೆ
ತೋರಿವೆನೆ ಮರೆಯುಹೊಕ್ಕರ ಕೊಡದವರಿಗಾಗಿ
ಧೀರರಾ ಗುಂಡಬೊಮ್ಮಯ್ಯಗಳ್ ಶೂಲಮಂ ಪತ್ತಿ ನೆರೆ ಮುಕ್ತರಹರು ೨೭

ಅದುಕಾರಣದೊಳೀಶಭಕ್ತರೀ ಕಾರ್ಯಮಂ
ಹೃದಯದೊಳ್ ನೆನೆಯಲಾಗದು ಹೋಗಲೀತನಂ
ಪದುಳದಿಂ ತತ್ಪುರಕೆ ಕಳುಪೆಂದು ನಾಗಲಾಂಬಿಕೆ ನನಗೆ ತಿಳುಪಲಾನು
ಬೆದರಬೇಡೆಂದಳಿಯ ಬಿಜ್ಜಳನನೆನ್ನಾನೆ
ಕುದುರೆ ಕಾಲಾಳನೆಲ್ಲವನಿತ್ತು ಮಡಿದಿರ್ದ
ಚದುರಂಗಕುಂ ಹರಣಮಂ ಕೊಟ್ಟು ಪೋಗೆಂದೊಡಾತನಿರದಿಂತೆಂಬನು ೨೮

ಮುಂದೆನಗೆ ಗತಿಯಾವುದೆನೆ ಪಿಂತೆ ಬಿಜ್ಜಳಂ
ಮಂದಮತಿಯಿಂದೆ ಶಿವಶರಣರಂ ಯೆಳೆಹೂಟಿ
ಯಿಂದೆಳೆಸಲಾ ಕೊಲೆಗೆ ಜಗದೇವ ಮೊಲ್ಲೆಯಾ ಬೊಮ್ಮಣ್ಣನವರು ತನ್ನ
ಕೊಂದರಾತನ ತೆರದೆ ನಡೆಯದೆ ಸದಾಚಾರ
ದಿಂದೆ ನಡೆಯೆಂದಳಿಯ ಬಿಜ್ಜಳಂಗಾಗಲಾ
ನಂದದಿಂ ಪಟ್ಟಮಂ ಕಟ್ಟಿ ಬಳಿಕಾಗಲಾ ನೃಪತಿಯೊಡನಿಂತೆಂಬೆವು ೨೯

೨೭. ಓರುಗಲ್ಲು ಎಂಬ ಪಟ್ಟಣದ ಹೊರವಲಯದಲ್ಲಿ ವೀರಗುಂಡ ಬ್ರಹ್ಮರೆಂಬ ಹೆಸರಿನಿಂದ ಇರಲು ಶಿವನು ಬಂದು ಗಣಪತಿರಾಯನ ಅರಮನೆಯಲ್ಲಿ ಕದ್ದು ಅವರ ಮರೆ ಹೊಗಲು, ಈ ದಾರಿಯಲ್ಲಿ ಬಂದ ಕಳ್ಳರನ್ನು ನೀವು ನಮಗೆ ತೋರಿಸಿ ಎನ್ನಲು ಮರೆ ಹೊಕ್ಕವರನ್ನು ಬಿಟ್ಟುಕೊಡದೆ ಅವರಿಗಾಗಿ ಧೀರರಾದ ಆ ಗುಂಡಬೊಮ್ಮಯ್ಯಗಳು ಶೂಲವನ್ನು ಹತ್ತಿ ಮುಕ್ತರಾಗುವರು. ೨೮. ಆ ಕಾರಣದಿಂದ ಶಿವಭಕ್ತರು ಈ ಕೆಲಸ ವನ್ನು ಮನಸ್ಸಿನಲ್ಲಿಯೂ ನೆನೆಯಬಾರದು. ಹೋಗಲಿ ಈತನನ್ನು ಕ್ಷೇಮದಿಂದ ಆ ಪಟ್ಟಣಕ್ಕೆ ಕಳಿಸೆಂದು ನಾಗಲಾಂಬಿಕೆ ನನಗೆ ಹೇಳಲು ನಾನು ಹೆದರಬೇಡವೆಂದು ಅಳಿಯ ಬಿಜ್ಜಳನಿಗೆ ನನ್ನ ಆನೆ-ಕುದುರೆ-ಕಾಲಾಳುಗಳೆಲ್ಲವನ್ನೂ ಕೊಟ್ಟು ಸತ್ತಿದ್ದ ಚತುರಂಗ ಸೇನೆಗೆ ಪ್ರಾಣವನ್ನು ಕೊಟ್ಟು ಹೋಗು ಎಂದು ಆತನಿಗೆ ಹೇಳಲು ಅವನು ಹೀಗೆನ್ನುವನು. ೨೯. ಇನ್ನುಮೇಲೆ ನನಗೇನು ದಾರಿ ಎನ್ನಲು ಹಿಂದೆ ಬಿಜ್ಜಳನು ಬುದ್ಧಿಹೀನನಾಗಿ ಶಿವ ಶರಣರನ್ನು ಪಶುವಿನ ಕಾಲಿಗೆ ಕಟ್ಟಿಸಿ ಎಳೆಸಿ ಕೊಂದ ಕಾರಣಕ್ಕಾಗಿ ಜಗದೇವ ಮತ್ತು ಮೊಲ್ಲೆಯ ಬೊಮ್ಮಣ್ಣನವರು ಅವನನ್ನು ಕೊಂದರು. ಆ ರೀತಿ ನೀನು ನಡೆದುಕೊಳ್ಳದೆ ಸದಾಚಾರದಿಂದ ನಡೆ ಎಂದು ಅಳಿಯ ಬಿಜ್ಜಳನಿಗೆ ಆಗ ಆನಂದದಿಂದ ಪಟ್ಟವನ್ನು ಕಟ್ಟಿ,

CC-0. Jangamwadi Math Collection. Digitized by eGangotri

ಅರಸ ಕೇಳೀ ಪಟ್ಟವಿಂದಿಗಿನ್ನರುವತ್ತು
ವರುಷಪರಿಯಂತರಂ ನಿನಗೆ ನಡೆವುದು ಮುಂದೆ
ಹರನ ವರದಿಂದೆ ರಾಕ್ಷಾಸಶ್ವೇತಾಂಬರಂ ತುರುಕಕುಲದಿಂದ ಜನಿಸಿ
ಪರಿವಿಡಿಯೊಳಾಗಲೇಳ್ನೂರು ಮೇಲೆಪ್ಪತ್ತು
ವರುಷಪರಿಯಂತರದೊಳಾಳ್ವರೀ ದೇಶಮಂ
ತುರುಕಾಣ್ಯವೆನಿಸಿ ಕಲ್ಯಾಣಮಂ ಕೆಡಿಸಿ ಕಲುಬುರಿಗೆಯಂ ಕಟ್ಟಿಸುವರು ೩೦

ಹೀಗಿನ್ನು ತುರುಕಾಣ್ಯವಾಗುವುದು ನಾವೀಗ
ಹೋಗಬೇಕೆಂದಳಿಯಬಿಜ್ಜಳನ ಕಳುಹಲತಿ
ವೇಗದಿಂ ಕಲ್ಯಾಣಪುರಕೈದಿ ಬಿಜ್ಜಳಂ ಸತ್ತ ಹಾವಳಿಯ ನಿಲಿಸಿ
ಮೇಗೆ ತದ್ರಾಜ್ಯಮಂ ಸುಖದಿಂದಲಾಳುವಂ
ರಾಗದಿಂದುಳವಿಯ ಮಹಾಮನೆಗೆ ನಾವಿನ್ನು
ಸಾಗಬೇಕೆನೆ ಮಡಿವಳಯ್ಯನಾ ಹಿಪ್ಪಲಿಗೆಗಿರದೆ ಕಳುಹಿಸಿಕೊಂಬನು ೩೧

ಇರದಲ್ಲಿ ತಮ್ಮ ಗುರು ಲಿಂಗಣಾರ್ಯನ ಪಾದ
ಸರಸಿರುಹದಲ್ಲೈಕ್ಯವಾಗುವಂ ನಾವು ಶಿವ
ಶರಣರೆಲ್ಲರ ಕೂಡಿಕೊಂಡಾಗಲುಳುವೆಗೈತರುವೆವತಿಸಂಭ್ರಮದೊಳು
ಹರುಷದಿಂದಲ್ಲಿ ಘನಪರ್ವಮಂ ಮಾಡಿ ತ
ತ್ಪರಮಮಾಹೇಶ್ವರರ ಕರುಣಮಂ ಪಡೆದಾಗ
ಶರಣರೆಲ್ಲರ್ ನಿಮ್ಮ ನಿಜದಲ್ಲಿ ನಿರವಯುವನೈದಿ ಮೇಲವರಾಗಳು ೩೨

ಅನಂತರ ರಾಜನೊಡನೆ ಹೀಗೆ ಹೇಳುವೆವು. ೩೦. ರಾಜನೇ ಕೇಳು, ಇಂದಿನಿಂದ ನಿನಗೆ ಈ ಪಟ್ಟವು ಇನ್ನು ಅರವತ್ತು ವರ್ಷಗಳವರೆಗೆ ನಡೆಯುತ್ತದೆ. ಅನಂತರ ಶಿವನ ವರದಿಂದ ತುರುಕರ ಜಾತಿಯಲ್ಲಿ ರಾಕ್ಷಾಸ ಶ್ವೇತಾಂಬರನು ಹುಟ್ಟಿ ಕ್ರಮವಾಗಿ ಏಳ್ನೂರ ಎಪ್ಪತ್ತು ವರ್ಷಗಳವರೆಗೆ ಈ ದೇಶವನ್ನು ತುರುಕರ ದೇಶವನ್ನಾಗಿ ಮಾಡಿ ಆಳುತ್ತಾರೆ. ಕಲ್ಯಾಣ ಪಟ್ಟಣವನ್ನು ನಾಶಮಾಡಿ ಕಲುಬುರಿಗೆಯನ್ನು ಕಟ್ಟಿಸುತ್ತಾರೆ. ೩೧. ಹೀಗೆ ಇನ್ನು ತುರುಕರ ದೇಶವಾಗುವುದು. ಈಗ ನಾವು ಹೋಗಬೇಕು ಎಂದು ಅಳಿಯ ಬಿಜ್ಜಳನನ್ನು ಕಳಿಸಿಕೊಡಲು ಬಹಳ ವೇಗವಾಗಿ ಕಲ್ಯಾಣಪುರವನ್ನು ಸೇರಿ ಬಿಜ್ಜಳನು ಸತ್ತದ್ದರಿಂದ ಆದ ಹಾವಳಿಯನ್ನು ನಿಲ್ಲಿಸಿ ಆ ರಾಜ್ಯವನ್ನು ಸುಖವಾಗಿ ಆಳುವನು. ಪ್ರೀತಿಯಿಂದ ಉಳುವೆಯ ಮಹಾಮನೆಗೆ ನಾವು ಹೋಗಬೇಕೆನ್ನಲು ಮಡಿವಳಯ್ಯನು ಹಿಪ್ಪಲಿಗೆಗೆ ಬೀಳ್ಕೊಳ್ಳುವನು. ೩೨. ಅಲ್ಲಿ ನಿಲ್ಲದೆ ತಮ್ಮ ಗುರುವಾದ ಲಿಂಗಣಾರ್ಯರ ಪಾದಕಮಲದಲ್ಲಿ ಐಕ್ಯನಾಗುವನು. ನಾವು ಎಲ್ಲ ಶಿವಶರಣರೊಡಗೂಡಿ ಆಗ ಉಳುವೆಗೆ ಬಹಳ ಸಂಭ್ರಮದಿಂದ ಬರುತ್ತೇವೆ. ಸಂತೋಷದಿಂದ ಅಲ್ಲಿ ದೊಡ್ಡ ಹಬ್ಬವನ್ನು ಮಾಡಿ ಆ ಪರಮ ಮಹೇಶ್ವರರ ಕರುಣೆಯನ್ನು ಪಡೆದಾಗ ಶರಣರೆಲ್ಲರೂ ನಿಮ್ಮ ಎದುರಿನಲ್ಲಿ ಮುಕ್ತರಾಗುವರು.

CC-0. Jangamwadi Math Collection. Digitized by eGangotri

ಹರಶರಣರೆಲ್ಲರುಂ ತಮ್ಮ ತಮ್ಮಿಷ್ಟದೊಳ್
ನಿರವಯುವನೈದುವರ್ ನಮ್ಮ ಸಮಯಾಚಾರ
ದುರುತರದ ಹನ್ನೆರಡು ಸಾವಿರಂ ಬಸವಣ್ಣನವರ ಸಮಯಾಚಾರದ
ಪರಮಮಾಹೇಶ್ವರರ್ ಮೂರು ಹನ್ನೆರಡು ಸಾ
ವಿರವನಿಬರೆಲ್ಲರಂ ಹೊನ್ನರಳಿಯೆಂದೆಂಬ
ಮರಕೆ ತೊಟ್ಟಿಲಕಟ್ಟಿ ತೂಗುವೆವು ತೂಗಲವರಿರದೆ ನಿರವಯುಮಪ್ಪರು ೩೩

ನಾವಾಗಲುಳಿದ ಚರಪತಿಗಳ್ಗೆ ಶರಣೆಂದು
ದೇವರೆಲ್ಲರ್ ನಿರಾಕಾರಮು ತಳೆದಪಿರೊ
ಕೇವಲಂ ಸಾಕಾರದಿಂದಿರ್ಪಿರೋ ನಿರೂಪಿಸುವುದೆನಲವರಾಗಳು
ನೀವೆಲ್ಲರುಂ ಮರಳಿ ಬರುವಪರಿಯಂತರಂ
ನಾವು ನಮ್ಮಾರಾಧ್ಯರಿತ್ತಪ್ರಸಾದವಂ
ಸೇವಿಸುತಲತಿಗೋಪ್ಯದಿಂದಲೀ ಕಲ್ಯಾಣಪಟ್ಟಣದೊಳಿಹೆವೆಂಬರು ೩೪

ಇಂತೆಂದು ರುದ್ರಮುನಿಮುಖ್ಯಚರಪತಿಗಳಿಗ
ನಂತಭಕ್ತಿಯೊಳೆರಗಿ ಬಳಿಕಾಗ ನಿನ್ನೊಡನೆ
ನೀಂ ತಡೆಯದೈದಿ ಸೊನ್ನಲಪುರದೆ ಶಿವಯೋಗನಿಜಸಮಾಧಿಯಲಿ ನಿಂದು
ಸಂತೋಷದಿಂದಿಹುದು ನಾವಿನ್ನು ಮರಳಿ ಬರು
ವಂತನಕಲೆಂದುಸುರಿ ರೇಚಣ್ಣನಂ ಪಿಂತೆ
ನಿಂತಲ್ಲಿ ಹಾವುಗೆಯ ಮರೆದುಬಂದೆವು ಕೊಂಡುಬಹುದೆಂದು ಕಳುಪಿ ಬಳಿಕ ೩೫

೩೩. ಶಿವಶರಣರೆಲ್ಲರೂ ತಮಗೆ ಇಷ್ಟಬಂದಂತೆ ಬಯಲಾಗುವರು. ನಮ್ಮ ಸಮಯಾಚಾರದ ಶ್ರೇಷ್ಠರಾದ ಹನ್ನೆರಡು ಸಾವಿರ ಮತ್ತು ಬಸವಣ್ಣನವರ ಸಮಯಾಚಾರದ ಮೂವತ್ತಾರು ಸಾವಿರ ಮಂದಿ ಪರಮ ಮಾಹೇಶ್ವರರು ಇಷ್ಟು ಜನರನ್ನೂ ಹೊನ್ನರಳಿಯ ಮರಕ್ಕೆ ತೊಟ್ಟಿಲನ್ನು ಕಟ್ಟಿ ತೂಗುತ್ತೇವೆ. ಆಗ ಅವರು ನಿಲ್ಲದೆ ಬಯಲಾಗುವರು. ೩೪. ನಾವು ಆಗ ಉಳಿದ ಜಂಗಮರಿಗೆ ನಮಸ್ಕರಿಸಿ, ಪೂಜ್ಯರೆಲ್ಲರೂ ನಿರಾಕಾರವನ್ನು ತಾಳುತ್ತೀರೊ ಅಥವಾ ಸಾಕಾರದಿಂದ ಇರುತ್ತೀರೊ ಹೇಳಬೇಕು ಎನ್ನಲು ಆಗ ಅವರು ನೀವೆಲ್ಲರೂ ಮತ್ತೆ ಬರುವವರೆಗೆ ನಾವು ನಮ್ಮ ಗುರುಗಳು ಕೊಟ್ಟ ಪ್ರಸಾದವನ್ನು ಸೇವಿಸುತ್ತ ಅತಿ ಗೋಪ್ಯವಾಗಿ ಈ ಕಲ್ಯಾಣಪಟ್ಟಣದಲ್ಲಿ ಇರುತ್ತೇವೆ ಎನ್ನುವರು. ೩೫. ಹೀಗೆಂದು ರುದ್ರಮುನಿ ಮೊದಲಾದ ಜಂಗಮರಿಗೆ ಅನಂತ ಭಕ್ತಿಯಿಂದ ನಮಸ್ಕರಿಸಿ ಅನಂತರ ನಿನ್ನನ್ನು ಕುರಿತು, ನೀನು ಕೂಡಲೇ ಸೊನ್ನಲಾಪುರಕ್ಕೆ ಹೋಗಿ ಶಿವಯೋಗ ನಿಜಸಮಾಧಿಯಲ್ಲಿ ನಿಂತು ಸಂತೋಷದಿಂದ ನಾವು ಬರುವತನಕ ಇರು ಎಂದು ಹೇಳಿ ರೇಚಣ್ಣನವರನ್ನು ಕುರಿತು ಹಿಂದೆ ನಾವು ನಿಂತಲ್ಲಿ ಪಾದುಕೆಗಳನ್ನು ಮರೆತುಬಂದಿದ್ದೇವೆ

CC-0. Jangamwadi Math Collection. Digitized by eGangotri

ಅಕ್ಕ ನಾಗಾಂಬಿಕೆಯುಸಹವಾಗಿ ನಾವಲ್ಲಿ
ಮಿಕ್ಕ ಶರಣರನಿರದೆ ನಿರವಯುವನೈದಿಸಿ ಬ
ಳಿಕ್ಕಾವು ನಿರವಯುವನೈದುವೆವು ಸಿದ್ಧರಾಮೇಶ ನೀಂ ಕೇಳ್ವುದಿನ್ನು
ಲಕ್ಕದಿಂ ಮೇಲೆ ತೊಂಬತ್ತಾರುಸಾವಿರದ
ಲೆಕ್ಕದಿಂ ಮಿಗಿಲಾದ ಜಂಗಮಂ ಚರಿಸುವೊಡೆ
ದಿಕ್ಕುದಿಕ್ಕಿಗೆ ಪೋಪರುಳಿದ ಚರಪತಿಗಳೇ ಕಲ್ಯಾಣಕ್ಕೆತರುವರು ೩೬

ಬಂದನಿಬರತಿಗೋಪ್ಯದಿಂದಿರುತೆ ರುದ್ರಮುನಿ
ತಂದೆ ತನ್ನಯ ಶಿಷ್ಯ ಮುಕ್ತಿಮುನಿಯೊಡನೆ ನೀ
ನಿಂದ್ಯೆದಿ ಸಕಲದೇಶಂಗಳಂ ಚರಿಸುತುಂ ದುಷ್ಟಪರವಾದಿಗಳನು
ಕೊಂದು ಶರಣರ ಪೊರೆವುದೆಂದುಸಿರಿ ಕಳುಹಲಾ
ನಂದದಿಂದಖಿಳದೇಶಂಗಳಂ ಚರಿಸುತಾ
ನಿಂದು ಶ್ರೀಗಿರಿಯ ಸಿಂಹಾಸನದೆ ಸಕಲ ಸದ್ಭಕ್ತರಂ ಪಾಲಿಸುವನು ೩೭

ಇರುತಲೈವತ್ತಾರು ದೇಶಕ್ಕೆ ತಾವು ಸ
ದ್ವರಗಣಾಚಾರಿಗಳ ಕಳುಹಿ ತಮ್ಮಾಜ್ಞೆಯಿಂ
ದಿರದೆ ಮೀರಿದರ ಕೈಯಿಂದಲಪರಾಧಕಾಣ್ಕೆಗಳ ತಾಂ ತರಿಸಿಕೊಳುತೆ
ಪರವಾದಿಗಳನಿರದೆ ಸಂಹರಿಸುತಾಗಲತಿ
ಹರುಷದಿಂದಿರಲತ್ತ ಮಲೆರಾಜ್ಯದೊಳ್ ದುರುಳ
ದೊರೆ ಜೈನರೇ ಪೆರ್ಚಿ ಶಿವಮತವ ಜರೆದು ವೀರೇಶನಂ ಕಿತ್ತು ಬಿಸುಡೆ ೩೮

ಅದನ್ನು ತೆಗೆದುಕೊಂಡು ಬಾ ಎಂದು ಕಳಿಸಿ, ಅನಂತರ ೩೬. ಅಕ್ಕ ನಾಗಲಾಂಬಿಕೆಯೊಡನೆ ಮಿಕ್ಕ ಶರಣರನ್ನು ನಾವು ಬಯಲಾಗಿಸಿ ಅನಂತರ ನಾವು ಸಹ ಬಯಲಾಗುವೆವು. ಸಿದ್ಧರಾಮೇಶ ನೀನು ಇನ್ನು ಕೇಳು, ಲಕ್ಷ ತೊಂಬತ್ತಾರು ಸಾವಿರ ಲೆಕ್ಕಕ್ಕೂ ಅಧಿಕವಾದ ಜಂಗಮರು ದಿಕ್ಕುದಿಕ್ಕಿಗೆ ಚದುರಿಹೋಗುವರು. ಉಳಿದ ಜನರು ಕಲ್ಯಾಣಕ್ಕೆ ಬರುವರು. ೩೭. ಬಂದ ಅಷ್ಟು ಜನರೂ ಅತಿ ಗೋಪ್ಯವಾಗಿರುತ್ತ ರುದ್ರಮುನಿತಂದೆಯು ತನ್ನ ಶಿಷ್ಯ ಮುಕ್ತಿಮುನಿಯೊಡನೆ ಹೀಗೆನ್ನುವನು, ನೀನು ಈ ದಿನ ಹೊರಟು ಎಲ್ಲ ದೇಶಗಳನ್ನೂ ಸಂಚಾರ ಮಾಡುತ್ತ ದುಷ್ಟರಾದ ಅನ್ಯಮತೀಯರನ್ನು ಕೊಂದು ಶರಣರನ್ನು ಕಾಪಾಡು ಎಂದು ಹೇಳಿ ಕಳಿಸಿಕೊಡಲು ಆವನು ಆನಂದದಿಂದ ಅಖಿಲದೇಶಗಳನ್ನೂ ಸುತ್ತುತ್ತಾ ಶ್ರೀಗಿರಿಯ ಸಿಂಹಾಸನದಲ್ಲಿ ನಿಂತು ಸಕಲ ಸದ್ಭಕ್ತರನ್ನೂ ಕಾಪಾಡುವನು. ೩೮. ಹೀಗಿರುತ್ತ ಐವತ್ತಾರು ದೇಶಕ್ಕೆ ತಾವು ಶ್ರೇಷ್ಠಗಣಾಚಾರಿಗಳನ್ನು ಕಳಿಸಿ ತಮ್ಮಾಜ್ಞೆಯನ್ನು ಮೀರಿದವರ ಕೈಯಿಂದ ತಪ್ಪು ಕಾಣಿಕೆಗಳನ್ನು ತರಿಸಿಕೊಳ್ಳುತ್ತಾ ಅನ್ಯಮತೀಯರನ್ನು ಸಂಹರಿಸುತ್ತ ಆಗ ಬಹಳ ಸಂತೋಷದಿಂದ ಇರಲು ಇತ್ತಕಡೆ ಮಲೆನಾಡಿನಲ್ಲಿ ದುಷ್ಟ ಜೈನದೊರೆಗಳೇ ಅಧಿಕರಾಗಿ ಶಿವಮತವನ್ನು ಹೀಯಾಳಿಸಿ ವೀರೇಶನನ್ನು ಕಿತ್ತು

CC-0. Jangamwadi Math Collection. Digitized by eGangotri

ಈ ವಾರ್ತೆಯುಂ ಕೇಳ್ದು ಬಳಿಕಲಾ ಮುಕ್ತಿಮುನಿ
ದೇವರಾಜಾತಭಿಕ್ಷಾವರ್ತಿಯೆಂದೆಂಬ
ದೇವರ್ಗೆ ಪಟ್ಟಮಂ ಕಟ್ಟಿ ಕಾಣ್ಕೆಯನಿತ್ತು ತನ್ನ ವರಶಿಷ್ಯನಾದ
ಕೋವಿದ ದಿಗಂಬರ ಸುಮುಕ್ತಿಮುನಿಯೆಂದೆಂಬ
ದೇವರಂ ಕರೆದು ನೀನೀಗ ಮಲೆರಾಜ್ಯದೊಳ್
ತೀವಿರ್ದ ಪರವಾದಿಗಳನಿರದೆ ಸಂಹರಿಸು ಹೋಗೆಂದು ಪೇಳ್ದು ತಾವು ೩೯

ಮಲ್ಲಿಕಾರ್ಜುನಲಿಂಗದಲ್ಲಿ ನಿರವಯುವಾಗೆ
ನಿಲ್ಲದೆ ದಿಗಂಬರ ಸುಮುಕ್ತಿಮುನಿಚರಪತಿಗ
ಳಲ್ಲಿ ಕೆಲಬರ್‌ ಸಹಿತೆ ಮಲದೇಶಕ್ಕೈತಂದು ಖಾಂಡೆಯದಿ ಬಂದು ನಿಂದು
ಖುಲ್ಲ ಪರವಾದಿ ಜೈನರನಿರದೆ ಸಂಹರಿಸಿ
ಹಲ್ಲುಗಳ ಕಳೆದು ಮಣುವಿನ ಮೂರು ಖಂಡುಗವ
ನಲ್ಲಿ ಕಣಜಂ ಕಟ್ಟಿ ತುಂಬಿಸುವರೆಲೆ ಸಿದ್ಧರಾಮೇಶ ಕೇಳೆಂದನು ೪೦

ಬಳಿಕಲ್ಲಿ ವೀರೇಶನಂ ಕಿತ್ತು ಜೈನರಾ
ಹೊಳೆಯಲ್ಲಿ ಹಾಯ್ಕಿರಲ್ ತೆಗೆದು ಬಾಳೆಯದೊಂದು
ಎಲೆಯದಂಡಿಗೆಯ ಮೇಲೊಲಿದು ಬಿಜಯಂಗೆಯ್ಸಿ ತಂದಾಗ ಹೊನ್ನೂರಿನ
ಬಳಿಯಲ್ಲಿ ಗುಡಿಯ ಕಟ್ಟಿಸಿ ಪ್ರತಿಷ್ಠಿಸಿ ತಾವು
ನೆಲೆಯಾಗಿ ನಿಂದು ದುರ್ಜನರ ಸಂಹರಿಸುವೊಡೆ
ಸ್ಥಳಮಿದೀಗೆಂದು ಬಾಳೆಯಹಳ್ಳಿಯೆಂಬ ಪುರಮಂ ಬೇಗ ಕಟ್ಟಿಸುವರು ೪೧

ಬಿಸಾಡಲು, ೩೯. ಈ ಸುದ್ದಿಯನ್ನು ಕೇಳಿ, ಅನಂತರ ಆ ಮುಕ್ತಿ ಮುನಿದೇವರು ಅಜಾತಭಿಕ್ಷಾವರ್ತಿ ಎಂಬ ದೇವರಿಗೆ ಪಟ್ಟವನ್ನು ಕಟ್ಟಿ ಕಾಣಿಕೆಯನ್ನಿತ್ತು ತನ್ನ ಶ್ರೇಷ್ಠ ಶಿಷ್ಯನಾದ ಕೋವಿದ ದಿಗಂಬರ ಸುಮುಕ್ತಿಮುನಿಯೆಂಬುವನನ್ನು ಕರೆದು ನೀನೀಗ ಮಲೆನಾಡಿನಲ್ಲಿ ತುಂಬಿರುವ ಅನ್ಯಮತೀಯರನ್ನು ಕೂಡಲೆ ಸಂಹರಿಸು ಹೋಗು ಎಂದು ಹೇಳಿ ತಾವು ೪೦. ಮಲ್ಲಿಕಾರ್ಜುನಲಿಂಗದಲ್ಲಿ ಬಯಲಾಗಲು ದಿಗಂಬರ ಸುಮುಕ್ತಿಮುನಿಯು ಜಂಗಮರು ಕೆಲವರೊಡಗೂಡಿ ಮಲೆನಾಡಿಗೆ ಬಂದು ಖಾಂಡ್ಯವೆಂಬಲ್ಲಿ ನಿಂತು ಕ್ಷುಲ್ಲಕ ಅನ್ಯಮತೀಯರಾದ ಜೈನರನ್ನು ನಾಶಮಾಡಿ ಅವರ ಹಲ್ಲುಗಳನ್ನು ಕಿತ್ತು ಬಂದು ಮಣದ ಮೇಲೆ ಮೂರು ಕಂಡುಗದಷ್ಟು ತೂಕವಿದ್ದ ಕಣಜವನ್ನು ಕಟ್ಟಿ ತುಂಬಿಸುವರು, ಎಲೆ ಸಿದ್ಧರಾಮೇಶ ಕೇಳು ಎಂದನು. ೪೧. ಅನಂತರ ಅಲ್ಲಿ ವೀರೇಶನನ್ನು ಕಿತ್ತು ಜೈನರು ಹೊಳೆಯಲ್ಲಿ ಹಾಕಿರಲು ಅದನ್ನು ತೆಗೆದು ಬಾಳೆಎಲೆಯ ಪಲ್ಲಕ್ಕಿಯಲ್ಲಿ ಪ್ರೀತಿಯಿಂದ ಕರೆತಂದು ಹೊನ್ನೂರಿನ ಬಳಿ ಗುಡಿ ಕಟ್ಟಿಸಿ, ಪ್ರತಿಷ್ಠಾಪನೆ ಮಾಡುವರು. ತಾವು ಅಲ್ಲೇ ನೆಲೆನಿಂತು ದುಷ್ಟರನ್ನು ಸಂಹರಿಸಲು ಇದೀಗ ಸರಿಯಾದ ಸ್ಥಳವೆಂದು ಆಲೋಚಿಸಿ ಬಾಳೆಯ

CC-0. Jangamwadi Math Collection. Digitized by eGangotri

ಹರುಷದಿಂದಲ್ಲಿ ಸಿಂಹಾಸನಾಸೀನನಾ
ಗಿರುತಾ ದಿಗಂಬರಸುಮುಕ್ತಿಮುನಿನಾಥನಾ
ಚರಪತಿಗಳಲ್ಲೊರ್ವ ಯೋಗ್ಯರಂ ನೋಡಿ ಪಟ್ಟವಗಟ್ಟಿ ಬಳಕವರೊಳು
ಪರವಾದಿಗಳನಿರದೆ ಸಂಹರಿಸುವುದು ತಮ್ಮ
ಶರಣರಂ ಪಾಲಿಸುವುದೆಂದುಸುರಿ ತಾವಾಗ
ಪರಮಶಿವಯೋಗದಿಂ ನಿಜಸಮಾಧಿಯೊಳಿರ್ದರೆಲೆ ರಾಮ ಕೇಳೆಂದನು ೪೨

ವರದಿಗಂಬರಮುಕ್ತಿಮುನಿದೇವರಾಜ್ಞೆಯಿಂ
ಹರುಷದಿಂ ಸುಕುಮಾರ ಚೆನ್ನಬಸವೇಶ್ವರಂ
ಶರಣಸಂಕುಲವನುರೆ ಪಾಲಿಸುತ ದುಷ್ಟಪರವಾದಿಗಳ ಸಂಹರಿಸುತೆ
ಇರುತಿರಲ್ಕಿತ್ತಲೀ ಚಿಕ್ಕಸಿದ್ಧೇಶ್ವರಂ
ಚರಪತಿಗಳಂ ಕೂಡಿಕೊಂಡು ಚರಿಸುತ್ತೆ ಬಂ
ದಿರದೆ ಶಿವಗಂಗೆಗೈತಂದು ಹೊನ್ನಾದೇವಿಯಿಂದೆ ಕಂಕಣವ ಪಡೆದಂ ೪೩

ಬಸವೇಶನೈಕ್ಯವಾದರುವತ್ತು ವರುಷವೀ
ವಸುಮತಿಯನಳಿಯಬಿಜ್ಜಳನಾಳುತಿರ್ದು ಬಳಿ
ಕಸಮಬಲದಿಂ ತುರುಕರೊಳ್ ಕಾದಿ ಮಡಿಯಲಾ ತುರುಕರತಿಸಾಹಸದೊಳು
ಎಸೆವ ಕಲ್ಯಾಣಮಂ ಕೆಡಿಸಿ ಕಲುಬುರಿಗೆಯುಂ
ಹೊಸದಾಗಿ ರಚಿಸಿ ತ್ರಿಪುರಾಂತಕಾಲಯದಲ್ಲಿ
ಪಸುಗಳಂ ಕೊಂದು ಗರುಡನ ಕಂಬಮಂ ಮುರಿದು ಮಸುದಿಯಂ ಕಟ್ಟಿಸುವರು ೪೪

ಹಳ್ಳಿ ಎಂಬ ಊರನ್ನು ಬೇಗನೆ ಕಟ್ಟಿಸುವರು. ೪೨. ಸಂತೋಷದಿಂದ ಅಲ್ಲಿ ಸಿಂಹಾಸನಾರೂಢನಾಗಿರುತ್ತ, ಆ ದಿಗಂಬರ ಸುಮುಕ್ತಿ ಮುನಿನಾಥನು ಆ ಜಂಗಮರಲ್ಲಿ ಒಬ್ಬ ಯೋಗ್ಯರನ್ನು ನೋಡಿ ಅವರಿಗೆ ಪಟ್ಟವನ್ನು ಕಟ್ಟಿ ಅನಂತರ ಅವರೊಡನೆ ಅನ್ಯಮತೀಯರನ್ನು ನಾಶಮಾಡಿ ; ನಮ್ಮ ಶರಣರನ್ನು ಕಾಪಾಡಿ ಎಂದು ಹೇಳಿ ತಾವು ಆಗ ಪರಮ ಶಿವಯೋಗದಿಂದ ತಮ್ಮ ಸಮಾಧಿಯಲ್ಲಿರುವರು, ಎಲೆ ಸಿದ್ಧರಾಮ ಕೇಳು ಎಂದನು. ೪೩. ಶ್ರೇಷ್ಠನಾದ ದಿಗಂಬರ ಮುಕ್ತಿಮುನಿದೇವರ ಆಜ್ಞೆಯಂತೆ ಸಂತೋಷದಿಂದ ಸುಕುಮಾರ ಚೆನ್ನಬಸವೇಶ್ವರನು ಶರಣಸಮೂಹವನ್ನು ಚೆನ್ನಾಗಿ ಕಾಪಾಡುತ್ತ ದುಷ್ಟರಾದ ಅನ್ಯಮತೀಯರನ್ನು ಸಂಹರಿಸುತ್ತ ಇರಲು ಇತ್ತಕಡೆ ಈ ಚಿಕ್ಕಸಿದ್ಧೇಶ್ವರನು ಜಂಗಮರನ್ನು ಕೂಡಿಕೊಂಡು ಸಂಚರಿಸುತ್ತ ಶಿವಗಂಗೆಗೆ ಬಂದು ಹೊನ್ನಾದೇವಿಯಿಂದ ಸಂಕಲ್ಪಸೂತ್ರವನ್ನು ಪಡೆಯುತ್ತಾನೆ. ೪೪. ಬಸವಣ್ಣನು ಐಕ್ಯನಾದ ಅರವತ್ತು ವರ್ಷದವರೆಗೆ ಈ ದೇಶವನ್ನು ಅಳಿಯ ಬಿಜ್ಜಳನು ಆಳುತ್ತಿದ್ದು ಅನಂತರ ಅಸಮ ಪರಾಕ್ರಮದಿಂದ ತುರುಕರೊಡನೆ ಯುದ್ಧ ಮಾಡಿ ಮೃತನಾಗಲು ಆ ತುರುಕರು ಅತಿಸಾಹಸದಿಂದ ವಿಖ್ಯಾತವಾದ ಕಲ್ಯಾಣಪುರವನ್ನು ನಾಶಮಾಡಿ ಕಲುಬುರಿಗೆಯನ್ನು ಹೊಸದಾಗಿ ಕಟ್ಟಿಸಿ ತ್ರಿಪುರಾಂತಕನ ದೇವಾಲಯದಲ್ಲಿ ಹಸುಗಳನ್ನು ಕೊಂದು ಗರುಡಗಂಬವನ್ನು ಮುರಿದು

CC-0. Jangamwadi Math Collection. Digitized by eGangotri

ಎಲೆ ಸಿದ್ಧರಾಮೇಶ ಕೇಳ್ ಜಸದಿ ಕಲ್ಯಾಣ
ವಳಿಯಲಾ ಪ್ರಜೆಗಳಂ ತುರುಕರಾಕ್ಷಸರಾಗ
ಸುಲಿದು ಸೂರ್ಯಾಡಲಾ ಗುಮ್ಮಣಂ ಪೆಮ್ಮಣಯ್ಯಗಳೆನಿಪ ವ್ರತಿಗಳಿರದೆ
ನೆಲೆಗೆಟ್ಟು ಪೋಗಿ ದಕ್ಷಿಣಕಾಶಿಯೆನಿಸಿ ಭೂ
ತಳದೊಳಗೆ ಮೆರೆವ ಶಿವಗಂಗೆಯು ಸಮೀಪ ಸು
ಸ್ಥಳದೊಳಗೆ ಪುರವನುರೆ ರಚಿಪರಾ ಗುಮ್ಮಣಂ ಪೆಮ್ಮಣಯ್ಯಗಳೆಂಬರು ೪೫

ಪರಮಕೈಲಾಸಕ್ಕೆ ಮಿಗಿಲೆನಿಸಿ ಗುಮ್ಮಳಾ
ಪುರವೆಂಬ ನಾಮದಿಂದುದ್ಧರಿಪರೆಂತೆನಲ್
ಚರಲಿಂಗದಮಳಪಾದೋದಕವನೇ ಮಣ್ಣ ಹಸಿಯ ಬಿಂದಿಗೆಯು ತುಂಬಿ
ಪರಿವಾಣದೊಳಗಿರಿಸಿ ಹೊತ್ತುಕೊಂಡಾ ಪುರವ
ತಿರುಗಿ ಬಂದಾ ಮಧ್ಯದಲ್ಲಿ ನಿಕ್ಷೇಪಿಸೀ
ಪುರವನೇ ಲಿಂಗವಿಲ್ಲದ ಭವಿಯು ಪೊಗಲಳಿಯಲೆನುತಲಾಜ್ಞಾಪಿಸುವರು ೪೬

ಆಲಿಸೈ ರಾಮೇಶ ಬಳಿಕಲಿನ್ನಾ ಪುರಂ
ಭೂಲೋಕಕರಿದೆನಿಸಿ ಮೆರೆವುದಾ ಸ್ಥಳದಲ್ಲಿ
ಧೂಳಿಪಾವಡವಾದಿ ಸರ್ವಾಂಗಪಾವಡಂ ಕಡೆಯಾಗಿ ಕ್ರಮದೊಳೆಸೆವ
ಶೀಲಂಗಳರುವತ್ತುನಾಲ್ಕುಮವ ನಡೆಸುವಾ
ಶೀಲವಂತರೆ ಬಹಳವವರ ಮಾಹಾತ್ಮೆಗಳ
ಪೇಳಲೆನ್ನಳವಲ್ಲವೆಂದಾಗ ಚೆನ್ನಬಸವೇಶ್ವರಂ ನಿರವಿಸಿದನು ೪೭

ಮಸೀದಿಯನ್ನು ಕಟ್ಟಿಸುವರು. ೪೫. ಎಲೆ ಸಿದ್ಧರಾಮ ಕೇಳು, ಖ್ಯಾತವಾದ ಕಲ್ಯಾಣ ಪಟ್ಟಣವು ನಾಶವಾಗಲು, ಆ ಪ್ರಜೆಗಳನ್ನು ತುರುಕರು ಆಗ ಸುಲಿದು ಸೂರೆಮಾಡುವರು. ಗುಮ್ಮಣ ಪೆಮ್ಮಣರೆನ್ನುವ ಶಿವಾಚಾರಿಗಳು ದಿಕ್ಕೆಟ್ಟು ಹೋಗಿ ದಕ್ಷಿಣ ಕಾಶಿಯೆಂದು ಹೆಸರನ್ನು ಪಡೆದು ಪ್ರಪಂಚದಲ್ಲಿ ಖ್ಯಾತವಾದ ಶಿವಗಂಗೆಯ ಸಮೀಪದಲ್ಲಿ ಯೋಗ್ಯವಾದ ಸ್ಥಳದಲ್ಲಿ ಪಟ್ಟಣವನ್ನು ಕಟ್ಟುವರು. ೪೬. ಶ್ರೇಷ್ಠವಾದ ಕೈಲಾಸಕ್ಕಿಂತ ಅಧಿಕವೆನಿಸಿ ಗುಮ್ಮಳಾಪುರವೆಂಬ ಹೆಸರಿನಿಂದ ಉದ್ಧರಿಸುವರು. ಹೇಗೆಂದರೆ ಚರಲಿಂಗದ ಪವಿತ್ರ ಪಾದೋದಕವನ್ನು ಹಸಿಮಣ್ಣಿನ ಬಿಂದಿಗೆಯಲ್ಲಿ ತುಂಬಿ ಹರಿವಾಣದಲ್ಲಿರಿಸಿ ಹೊತ್ತು ಕೊಂಡು ಆ ಪಟ್ಟಣವನ್ನು ಪ್ರದಕ್ಷಿಣೆ ಬಂದು ಮಧ್ಯದಲ್ಲಿ ಪ್ರತಿಷ್ಠಾಪಿಸಿ ಈ ಪುರವನ್ನು ಲಿಂಗವಿಲ್ಲದ ಭವಿಯು ಹೊಕ್ಕರೆ ನಾಶವಾಗಲಿ ಎಂದು ಆಜ್ಞಾಪಿಸುವರು. ೪೭. ಕೇಳಯ್ಯ ಸಿದ್ಧರಾಮ, ಅನಂತರ ಆ ಪಟ್ಟಣವು ಭೂಲೋಕಕ್ಕೆ ಅಸಾಧ್ಯ ಎನ್ನಿಸಿ ಪ್ರಖ್ಯಾತವಾಗುವುದು, ಆ ಸ್ಥಳದಲ್ಲಿ ಧೂಳಿಪಾವಡ ಮೊದಲಾಗಿ ಸರ್ವಾಂಗ ಪಾವಡಗಳೇ ಕಡೆಯಾಗಿ ಕ್ರಮವಾಗಿ ಅರವತ್ನಾಲ್ಕು ಶೀಲಗಳನ್ನು ನಡೆಸುವ ಶೀಲವಂತರೇ ಬಹಳ. ಅವರ ಮಹಾತ್ಮೆಗಳನ್ನು ಹೇಳಲು ನನ್ನಿಂದ ಸಾಧ್ಯವಿಲ್ಲ ಎಂದು ಆಗ ಚೆನ್ನಬಸವೇಶ್ವರನು ನಿರೂಪಿಸಿದನು.

-CC-0. Jangamwadi Math Collection. Digitized by eGangotri

ಚಾರುಚರಲಿಂಗಕ್ಕೆ ಸದ್ಭಕ್ತಿಯಿಂದಾಗ
ವಾರಿಯಿಂದೆಡೆವಿಡದೆ ದಾಸೋಹಮಂ ಮಾಳ್ಪ
ವೀರಶೈವಾಚಾರಸಂಪನ್ನ ಸದ್ಭಕ್ತರಲ್ಲಿರುವರದು ಕಾರಣಂ
ಧಾರುಣಿಗೆ ಮಿಗಿಲೆನಿಸಿ ತದ್ದೇಶವೆಸೆವುದಾ
ಚಾರವೇ ಪ್ರಾಣವೆಂದೆನಿಸಿ ತದ್ರಾಜ್ಯದೊಳ
ಪಾರಮಹಿಮರೆ ಜನಿಸಿ ನೆರೆ ಬಾಳ್ವರೆಲೆ ಸಿದ್ಧರಾಮೇಶ ಕೇಳೆಂದನು ೪೮

ಮುದದಿಂದಲಲ್ಲಿ ಧನಸಂಪನ್ನ ಸೆಟ್ಟಿಗಳ್
ಪುದಿದಿರ್ಪಕಾರಣಂ ಸೆಟ್ಟಿನಾಡೆನಿಪುದದು
ಪದುಳದಿಂ ಸಕಲಸೌಭಾಗ್ಯದಿಂ ಪ್ರಭುಗಳಿರೆ ಪ್ರಭುವಾಡವೆಂದೆನಿಪುದು
ಸದಮಲಜ್ಞಾನ ಸಕಲಾಗಮ ಪುರಾಣಕೋ
ವಿದ ಸಕರ್ಣಾಟಕಾದ್ಯಖಿಳಶಾಸ್ತ್ರವ ಬಲ್ಲ
ಚದುರರಿರೆ ಕರ್ಣಾಟಕವೆನಿಪುದೆಲೆ ಸಿದ್ಧರಾಮೇಶ ನೀಂ ಕೇಳೆಂದನು ೪೯

ಚಿತ್ತಶುದ್ಧಿಯೊಳಾಲಿಸೆಲೆ ರಾಮ ಬಳಿಕಲೈ
ವತ್ತಾರು ದೇಶಕ್ಕೆ ಕರ್ಣಾಟದೇಶವೇ
ಉತ್ತಮಮದರಲ್ಲಿರ್ಪ ಶಿವಭಕ್ತರೆಲ್ಲರುಂ ಸತ್ಯರ್ ಸದಾವ್ರತಿಗಳು
ಮತ್ತಿನ್ನು ಮಿಕ್ಕ ದೇಶದೊಳಲ್ಲಿಗಲ್ಲಿಗಂ
ಹತ್ತುಸಾವಿರಲಕ್ಷಕೋಟಿಗೋರೊರ್ವರೇ
ಚಿತ್ತಜಾರಿಯ ಶರಣರುದಿಸಿ ನಾನಾ ಪವಾಡಂಗಳಂ ನೆರೆ ಮೆರೆವರು ೫೦

೪೮. ಮನೋಹರವಾದ ಚರಲಿಂಗಕ್ಕೆ ಸದ್ಭಕ್ತಿಯಿಂದ ಆಗ ನೀರಿನಿಂದ ಎಡಬಿಡದೆ ದಾಸೋಹವನ್ನು ಮಾಡುವ ವೀರಶೈವಾಚಾರ ಸಂಪನ್ನರಾದ ಸದ್ಭಕ್ತರು ಅಲ್ಲಿರುವರು. ಆ ಕಾರಣದಿಂದ ಭೂಮಿಗೆ ಅಧಿಕವೆನ್ನಿಸಿದ ಆ ದೇಶವು ಪ್ರಕಾಶಿಸುವುದು, ಆಚಾರವೇ ಪ್ರಾಣ ವೆಂದೆನ್ನಿಸಿ ಆ ರಾಜ್ಯದಲ್ಲಿ ಅಪಾರ ಮಹಿಮರೇ ಹುಟ್ಟಿ ಚೆನ್ನಾಗಿ ಬಾಳುವರು, ಎಲೆ ಸಿದ್ಧ ರಾಮೇಶ ಕೇಳು ಎಂದನು. ೪೯. ಅಲ್ಲಿ ಸಂತೋಷದಿಂದ ಧನವಂತರಾದ ಸೆಟ್ಟಿಗಳು ತುಂಬಿರುವ ಕಾರಣ ಅದು ಸೆಟ್ಟಿನಾಡೆನ್ನಿಸುವುದು. ಸುಖವಾಗಿ ಸಕಲ ಸೌಭಾಗ್ಯಗಳಿಂದ ಕೂಡಿದ ಪ್ರಭುಗಳಿರಲು ಪ್ರಭುವಾಡವೆನಿಸುವುದು. ಸದಮಲಜ್ಞಾನ ಸಕಲಾಗಮ ಪುರಾಣ ಕೋವಿದ ಸಕರ್ಣಾಟಕಾದಿ ಎಲ್ಲ ಶಾಸ್ತ್ರವನ್ನು ತಿಳಿದ ಚತುರರು ಇರಲು ಕರ್ಣಾಟಕವೆನ್ನಿಸುವುದು, ಎಲೆ ಸಿದ್ಧರಾಮ ನೀನು ಕೇಳು ಎಂದನು. ೫೦. ನಿರ್ಮಲ ಚಿತ್ತದಿಂದ ಕೇಳಯ್ಯ ಸಿದ್ಧರಾಮ. ಅನಂತರ ಐವತ್ತಾರು ದೇಶಕ್ಕೆ ಕರ್ಣಾಟಕದೇಶವೇ ಉತ್ತಮವಾದುದು. ಅಲ್ಲಿರುವ ಶಿವಭಕ್ತರೆಲ್ಲರೂ ಸತ್ಯವಂತರು, ಸದಾಚಾರಸಂಪನ್ನರು. ಮತ್ತೆ ಇನ್ನುಳಿದ ದೇಶದಲ್ಲಿ ಅಲ್ಲಲ್ಲಿಗೆ ಹತ್ತು ಸಾವಿರ ಲಕ್ಷ ಕೋಟಿಗೆ ಒಬ್ಬೊಬ್ಬರೇ ಶಿವ

CC-0. Jangamwadi Math Collection. Digitized by eGangotri

ಶಾಲಿವಾಹನ ಶಕದೊಳೆಂಟುನೂರಿಂದಲಾ
ಮೇಲಣ ವಿಳಂಬಿ ವತ್ಸರ ಚೈತ್ರ ಶುದ್ಧದೊಳ್
ವೇಲಾದ ದಶಮಿಯಾ ಗುರುವಾರದುದಯದೊಳ್ ಗಳಿಗೆ ಹನ್ನೆರಡಾಗಲಾ
ವೇಳೆಯೊಳ್ ಹೊಯ್ಸಳಗೆ ಪಟ್ಟವಂ ಕಟ್ಟಲವ
ನಾಳುತಿರ್ಪಿಳೆಯೆ ಹೊಯ್ಸಳರಾಜ್ಯವೆನಿಪುದದು
ಲೀಲೆಯಿಂದದನಾದಿಯಾದ ನವಬಲ್ಲಾಳರೊಲಿದಾಳ್ವರಾ ಧರೆಯನು ೫೧

ಆಲಿಸವರೊಳ್ ವಿಷ್ಣುವರ್ಧನನೆನಿಪ್ಪ ಬ
ಲ್ಲಾಳನತಿಸುಖಿಗೆ ತದ್ರಾಜ್ಯವಾಳುತ್ತಲಾ
ವೇಲಾಪುರದೊಳೊಂದು ಗುಡಿಯನೊಲವಿಂದೆ ಕಟ್ಟಿಸಿ ಪರಮಸಂತಸದೊಳು
ಗಾಳಿಪೂಜೆಯೊಳಿರ್ದ ವಿಷ್ಣುವಂ ತೆಗೆತರಿಸಿ
ಲೀಲೆಯಿಂದಾ ಗುಡಿಯೊಳುಂ ಪ್ರತಿಷ್ಠಿಸಿ ಬಳಿಕ
ಪೇಳಲೇನಲ್ಲಿ ಹೊಲೆಹದಿನೆಂಟು ಜಾತಿಯವರೊಂದಾಗಿ ಸಲೆ ನಡೆವರು ೫೨

ಹಳೆಯಬೀಡೆಂಬ ಪಟ್ಟಣದಲ್ಲಿ ಕರಣಿಕರ
ಕುಲತಿಲಕನೆನಿಸುವ ಹರೀಶ್ವರನ ಲೆಕ್ಕವನೆ
ಯಿಳೆಯಾಣ್ಮ ಬಲ್ಲಾಳ ಕೇಳುತಿರೆ ಕಡಿತವಂ ಬಿಟ್ಟು ಕೆಯ್ಗಳನೊರೆಸಲು
ತಿಳಿಪಿದರ ವೃತ್ತಕವನೆಂದು ಭೂಪಂ ಕೇಳೆ
ಬಳಿಕ ಪೇಳ್ದಂ ವಿರೂಪಾಕ್ಷನಾಲಯದೊಳಗೆ
ಹೊಳೆವದೀಪಂ ಸೋಂಕಿ ತೆರೆಸೀರೆ ಬೇವುತಿರಲಾರಿಸಿದೆ ಕೇಳೆಂಬನು ೫೩

ಶರಣರು ಹುಟ್ಟಿ ನಾನಾ ಪವಾಡಗಳನ್ನು ತೋರಿಸುವರು. ೫೧. ಶಾಲಿವಾಹನ ಶಕ ಎಂಟನೂರ ವಿಳಂಬ ಸಂವತ್ಸರದ ಚೈತ್ರ ಶುದ್ಧ ದಶಮಿಯ ಗುರುವಾರದ ದಿನ ಸೂರ್ಯೋದಯದ ನಂತರ ಹನ್ನೆರಡು ಗಳಿಗೆಗೆ ಹೊಯ್ಸಳನಿಗೆ ಪಟ್ಟವನ್ನು ಕಟ್ಟುವರು. ಅವನು ಆಳುವ ರಾಜ್ಯ ಹೊಯ್ಸಳ ರಾಜ್ಯ ಎನಿಸಿಕೊಳ್ಳುವುದು. ಅದನ್ನು ಒಂಬತ್ತು ಮಂದಿ ಬಲ್ಲಾಳರು ಪ್ರೀತಿಯಿಂದ ಆಳುವರು. ೫೨. ಕೇಳು, ಅವರಲ್ಲಿ ವಿಷ್ಣುವರ್ಧನನೆಂಬ ಬಲ್ಲಾಳನು ಬಹಳ ಸುಖದಿಂದ ಆ ರಾಜ್ಯವನ್ನು ಆಳುತ್ತ ವೇಲಾಪುರ(ಬೇಲೂರು)ದಲ್ಲಿ ಒಂದು ಗುಡಿಯನ್ನು ಪ್ರೀತಿಯಿಂದ ಕಟ್ಟಿಸಿ ಬಹು ಸಂತೋಷದಿಂದ ಬೈಲಿನಲ್ಲಿ ಬಿದ್ದಿದ್ದ ವಿಷ್ಣುವನ್ನು ತೆಗೆದುತರಿಸಿ ಲೀಲೆಯಿಂದ ಗುಡಿಯಲ್ಲಿ ಪ್ರತಿಷ್ಠಾಪಿಸುತ್ತಾನೆ. ಅನಂತರ ಹೇಳುವುದಿನ್ನೇನು, ಹೊಲೆ ಹದಿನೆಂಟು ಜಾತಿಯವರೂ ಒಂದಾಗಿ ಆ ದೇವರಿಗೆ ನಡೆದುಕೊಳ್ಳುವರು. ೫೩. ಹಳೆಯಬೀಡು ಎಂಬ ಪಟ್ಟಣದಲ್ಲಿ ಕರಣಿಕರ ಕುಲತಿಲಕನೆನಿಸುವ ಹರೀಶ್ವರನನ್ನೂ ರಾಜನಾದ ಬಲ್ಲಾಳನು ಲೆಕ್ಕವನ್ನು ಕೇಳುತ್ತಿರಲು ಅವನು ಕಡತವನ್ನು ಬಿಟ್ಟು ಕೈಗಳನ್ನು ಉಜ್ಜಿಕೊಳ್ಳುತ್ತಾನೆ, ಇದರ ವೃತ್ತಾಂತವೇನು ತಿಳಿಸು ಎಂದು ರಾಜನು ಕೇಳಲು ವಿರೂಪಾಕ್ಷನ ದೇವಾಲಯದಲ್ಲಿ ಬೆಳಗುತ್ತಿದ್ದ ದೀಪ ಸೋಕಿ

CC-0. Jangamwadi Math Collection. Digitized by eGangotri

ಎಲ್ಲಿಯು ವಿರೂಪಾಕ್ಷನಾಲಯದ ತೆರೆಸೀರೆ
ಯೆಲ್ಲಿ ನೀನೆಲ್ಲಿಯಚ್ಚರಿಯೆಂದು ಭೂವಿಪತಿ
ನಿಲ್ಲದೋರ್ವನ ಕಳುಪಿ ಕೇಳಿಸೆ ವಿರೂಪಾಕ್ಷಲಿಂಗನಾಸ್ಥಾನದವರು
ಇಲ್ಲಿಯೆ ಹರೀಶ್ವರಂ ತೆರೆಸೀರೆಯುರಿಯೆ ಕರ
ಪಲ್ಲವದೊಳಾರಿಸಿದ ನೋಡೆಂದು ತೋರಲವ
ನೆಲ್ಲವಂ ಮರಳಿ ಬಂದಾ ಚರಂ ಭೂಪತಿಗೆ ಪೇಳ್ವಂ ಸವಿಸ್ತರದೊಳು ೫೪

ಚರನೆಂದ ಮಾತಿಗಚ್ಚರಿವಟ್ಟು ಧರಣಿಪಂ
ಹರಿಯಣ್ಣ ನೀಂ ವಿರೂಪಾಕ್ಷನಾಲಯದಲ್ಲಿ
ಬರೆದುಕೊಂಡಿಹುದೆಂದು ಕಳುಪೆ ಪಂಪಾಕ್ಷೇತ್ರಕೈತಂದು ಬಳಿಕಾತನು
ವರವಿರೂಪಾಕ್ಷನೊಪ್ಪಿತದ ರಗಳೆಗಳನಾ
ಪರಿಪರಿಯ ಶಿವಗಣಂಗಳ ಮೇಲೆ ಪೇಳ್ದು ಸ
ದ್ಗಿರಿಜಾವಿವಾಹವಂ ಪೇಳ್ದಾ ವಿರೂಪಾಕ್ಷಲಿಂಗದಲ್ಲೈಕ್ಯವಹನು ೫೫

ವರಹರೀಶ್ವರನ ಸೋದರದಳಿಯನುಭಯಕವಿ
ಶರಭಭೇರುಂಡನೆಂದೆಂಬ ನಾನಾಪರಿಯ
ಬಿರುದಾಂಕಕವಿ ರಾಘವಾಂಕನಿರಲೋರುಗಲ್ಲೆಂಬ ಪಟ್ಟಣಕೆ ಪೋಗಿ
ಪರವಾದಿಗಳನಲ್ಲಿ ಗೆಲ್ದು ವೀರೇಶನಿಂ
ದರಿದೆನಿಪ ಪದಕವಂ ಪಡೆದು ವೇಲಾಪುರಿಗೆ
ಮರಳಿಬಂದಲ್ಲಿ ದೇಹವನುಳಿದು ವರಸಮಾಧಿಯೊಳಿರದೆ ಬಯಲಪ್ಪನು ೫೬

ತೆರೆಯ ಬಟ್ಟೆ ಸುಡುತ್ತಿತ್ತು. ಅದನ್ನು ಆರಿಸಿದೆ ಕೇಳು ಎಂದು ಹೇಳುತ್ತಾನೆ. ೫೪. ವಿರೂಪಾಕ್ಷ ದೇವಾಲಯದ ತೆರೆಯ ಬಟ್ಟೆಯೆಲ್ಲಿ ? ನೀನೆಲ್ಲಿ ? ಇದು ಆಶ್ಚರ್ಯಕರವಾದುದು ಎಂದು ರಾಜನು ಕೂಡಲೇ ಸೇವಕನೊಬ್ಬನನ್ನು ಕಳಿಸಿ ಕೇಳಿಸಲು ವಿರೂಪಾಕ್ಷ ದೇವಾಲಯದವರು ತೆರೆಯ ಬಟ್ಟೆ ಹತ್ತಿಕೊಂಡು ಉರಿಯಲು ಹರೀಶ್ವರನು ಅದನ್ನು ಇಲ್ಲಿಯೇ ಕೈಯಲ್ಲಿ ಉಜ್ಜಿ ಆರಿಸಿದನು, ನೋಡಿ ಎಂದು ತೋರಿಸುವರು. ಅದೆಲ್ಲವನ್ನೂ ಹಿಂದಿರುಗಿ ಬಂದ ಆ ಸೇವಕನು ರಾಜನಿಗೆ ವಿವರವಾಗಿ ಹೇಳುವನು. ೫೫. ಸೇವಕನು ಹೇಳಿದ ಮಾತಿಗೆ ಆಶ್ಚರ್ಯಹೊಂದಿ ರಾಜನು ಹರಿಯಣ್ಣ ನೀನು ವಿರೂಪಾಕ್ಷನ ದೇವಾಲಯದಲ್ಲಿ ಬರೆದುಕೊಂಡಿರು ಎಂದು ಕಳಿಸಿಕೊಡಲು ಪಂಪಾಕ್ಷೇತ್ರಕ್ಕೆ ಬಂದು ಬಳಿಕ ಆತನು ವಿರೂಪಾಕ್ಷನಿಗೆ ಒಪ್ಪಿಗೆಯಾದ ರಗಳೆಗಳನ್ನು ನಾನಾ ಶಿವಗಣಗಳ ಮೇಲೆ ರಚಿಸಿ, ಉತ್ತಮವಾದ ಗಿರಿಜಾಕಲ್ಯಾಣವನ್ನು ಹೇಳಿ ಆ ವಿರೂಪಾಕ್ಷಲಿಂಗದಲ್ಲಿ ಐಕ್ಯನಾಗುವನು. ೫೬. ಶ್ರೇಷ್ಠನಾದ ಹರೀಶ್ವರನ ಸೋದರಳಿಯ ಉಭಯಕವಿ ಶರಭಭೇರುಂಡನೆಂದು ಬಿರುದು ಹೊಂದಿದ ರಾಘವಾಂಕನು ಓರಂಗಲ್ಲೆಂಬ ಪಟ್ಟಣಕ್ಕೆ ಹೋಗಿ ಪರವಾದಿಗಳನ್ನು ಗೆದ್ದು ವೀರೇಶನಿಂದ ಅಸಾಧ್ಯವಾದದ್ದು ಎಂಬ ಪ್ರಶಸ್ತಿಯನ್ನು ಪಡೆದು ವೇಲಾಪುರಿಗೆ ಹಿಂದಿರುಗಿ ಅಲ್ಲಿ ದೇಹತ್ಯಾಗಮಾಡಿ, ಶ್ರೇಷ್ಠವಾದ ಸಮಾಧಿಯಲ್ಲಿ ಕುಳಿತು

CC-0. Jangamwadi Math Collection. Digitized by eGangotri

ಮತ್ತೆ ಕೇಳಲ್ಲಿ ಪದ್ಮರಸನೆನಿಸುವ ಬ್ರಾಹ್ಮ
ಣೋತ್ತಮಂ ವೀರಶೈವಾಚಾರ್ಯನಿರಲಲ್ಲಿ
ಗತ್ತಣಿಂ ಬಂದು ತ್ರಿಭುವನತಾತನೆನಿಪನವರೊಡನೆ ವಾದವ ಮಾಡಲು
ಚಿತ್ತದಿಂದರಿದವನ ತೃಣಪುರುಷನಿಂ ಗೆಲ್ದು
ಬಿತ್ತರದೆ ವೀರಶೈವೋಪದೇಶವನಾಗ
ಳಿತ್ತು ವರಶಿಷ್ಯನಂ ಮಾಡಿಕೊಂಡಿರೆ ವಿಷ್ಣು ಬಲ್ಲಾಳನವರ ಕರೆಸಿ ೫೭

ಬಳಿಕಲಾ ಪದ್ಮರಸರಂ ನೀವು ನಮಗೊಂದು
ಬಲುಗೆರೆಯ ಕಟ್ಟಿಸೆಂದಧಿಕಧನಮಂ ಕೊಟ್ಟು
ಕಳುಹಲಾ ರೊಕ್ಕದಿಂ ಜಂಗಮಾರ್ಚನೆಯ ನಲವಿಂ ಮಾಡಿ ಶಿವನೊಲವಿನಿಂ
ತಳುವದಾ ಕೆರೆಯ ಕಟ್ಟಿಸಲರಸನಾ ಕೆರೆಯ
ಕೆಳಗಿರ್ಪ ಬಯಲನೆಂಬತ್ತೆಂಟುಮಂದಿಯಾ
ಸ್ಥಲದ ಬ್ರಹ್ಮರಿಗಿತ್ತು ಕೆರೆಯ ಪದ್ಮರಸರಂ ಮೊಗನೋಡುತಿಂತೆಂಬನು ೫೮

ನಿಮಗಾವ ಬಯಲಾಗಬೇಕು ನಿರವಿಸುವುದೆನ
ಲೆಮಗೀ ಮಹಾಬಯಲೆ ಸಾಕೆನುತ್ತಾಗಲಾ
ಸುಮತಿ ಸತ್ಕೆರೆಯಪದ್ಮರಸರಾ ಬಯಲಲ್ಲಿ ಬಯಲಪ್ಪರಿನ್ನಾಲಿಸು
ವಿಮಲಚರಿತಂ ಪಾಲ್ಕುರಿಕೆಯ ಸೋಮೇಶ್ವರಂ
ಕ್ರಮದಿಂದಲರವತ್ತುನಾಲ್ಕು ಶೀಲವ ನಡೆಸಿ
ಸುಮನದಿಂ ಕಳ್ಳೆಯಕೆ ಬಂದಲ್ಲಿ ಶಿವಸಮಾಧಿಯಲಿ ನಿಜಮುಕ್ತನಹನು ೫೯

ಬಯಲಾಗುವನು. ೫೭. ಅನಂತರ ಕೇಳು, ಪದ್ಮರಸನೆಂಬ ವೀರಶೈವ ನಿಷ್ಠ ಬ್ರಾಹ್ಮಣನು ಅಲ್ಲಿರುತ್ತಾನೆ. ಅಲ್ಲಿಗೆ ಬೇರೆ ಕಡೆಯಿಂದ ತ್ರಿಭುವನತಾತನೆಂಬುವನು ಬಂದು ಪದ್ಮರಸನೊಡನೆ ವಾದ ಮಾಡಲು ಮನಸ್ಸಿನಲ್ಲಿ ಅರ್ಥಮಾಡಿಕೊಂಡು ತೃಣಪುರುಷನಿಂದ ಅವನನ್ನು ಗೆದ್ದು ವಿವರವಾಗಿ ಆಗ ವೀರಶೈವೋಪದೇಶವನ್ನು ಕೊಟ್ಟು ಅವನನ್ನು ಶಿಷ್ಯನನ್ನಾಗಿ ಮಾಡಿಕೊಂಡಿರಲು ವಿಷ್ಣುಬಲ್ಲಾಳನು ಅವರನ್ನು ಕರೆಸಿ ೫೮. ಅನಂತರ ಆ ಪದ್ಮರಸನನ್ನೂ ಕುರಿತು ನೀವು ನಮಗೊಂದು ದೊಡ್ಡಕೆರೆಯನ್ನು ಕಟ್ಟಿಸಿ ಎಂದು ಹೇರಳವಾಗಿ ಹಣವನ್ನು ಕೊಟ್ಟು ಕಳಿಸಲು ಆ ಹಣದಿಂದ ಅವನು ಜಂಗಮಪೂಜೆಯನ್ನು ಮಾಡಿ ಶಿವನ ಕರುಣೆಯಿಂದ ಶೀಘ್ರವಾಗಿ ಕೆರೆಯನ್ನು ಕಟ್ಟಿಸಲು, ವಿಷ್ಣುಬಲ್ಲಾಳನು ಆ ಕೆರೆಯ ಕೆಳಗಿದ್ದ ಬಯಲನ್ನೂ ಅಲ್ಲಿನ ಎಂಬತ್ತೆಂಟು ಮಂದಿ ಬ್ರಾಹ್ಮಣರಿಗೆ ಕೊಟ್ಟು ಕೆರೆಯ ಪದ್ಮರಸನ ಮುಖ ನೋಡುತ್ತ ಹೀಗೆನ್ನುವನು. ೫೯. ನಿಮಗೆ ಯಾವ ಬಯಲಾಗಬೇಕು ನಿರೂಪಿಸಿ ಎನ್ನಲು ನಮಗೆ ಈ ಮಹಾಬಯಲೇ ಸಾಕೆನ್ನುತ್ತ ಆಗ ಮಹಾಜ್ಞಾನಿಯಾದ ಕೆರೆಯ ಪದ್ಮರಸರು ಆ ಬಯಲಲ್ಲಿ ಬಯಲಾಗುವರು. ಇನ್ನು ಕೇಳು, ಉತ್ತಮಚರಿತ್ರನಾದ ಪಾಲ್ಕುರಿಕೆಯ ಸೋಮೇಶ್ವರನು ಕ್ರಮವಾಗಿ ಅರವತ್ತು ನಾಲ್ಕು ಶೀಲವನ್ನು ನಡೆಸಿ ಒಳ್ಳೆಯ ಮನಸ್ಸಿನಿಂದ ಕಳ್ಳೆಯಕ್ಕೆ ಬಂದು ಅಲ್ಲಿ ಶಿವಸಮಾಧಿ

CC-0. Jangamwadi Math Collection. Digitized by eGangotri

ಮೋಪೂರಿನಿಂದೆ ಭೈರವರಾಜನಧಿಕಪ್ರ
ತಾಪದಿಂ ಮಲ್ಲಿಪಟ್ಟಣಕೆ ಬಂದಲ್ಲಿರ್ಪ
ಭೂಪತಿಯ ಕಂಡೆಲ್ಲರಂ ಗೆಲ್ದು ಬೇಂಟೆಯು ಪವಾಡದಿಂ ಲಿಂಗಂಗಳ
ಸ್ತ್ರೀಪುರುಷರಿರ್ವರುಂ ಹರುಷದಿಂ ವೀರಶೈ
ವೋಪದೇಶವನಾಂತು ಸಾಸಲಿಗೆ ಪೋಗಿ ಚಿ
ದ್ರೂಪನೊಳ್ ಕಾದಿ ಕೈಲಾಸಕ್ಕೆ ಪೋಪರೆಲೆ ರಾಮೇಶ ಕೇಳೆಂದನು ೬೦

ಆಲಿಸಾ ಸಾಸಲೆಂಬೂರಲ್ಲಿ ಬಳಿಕ ಸ
ಲ್ಲೀಲೆಯಿಂ ಸೋಮೇಶಲಿಂಗದಿಂ ಘನವಾಗಿ
ಹಾಲು ಸುರಿವುದು ನೋಡಲಾ ಸಮೀಪದೊಳೆ ಕೆಂಡದಮಳೆಯು ಕರೆವುದಿನ್ನು
ಭೂಲೋಕಕಧಿಕದಿಂ ಮೆರೆವುತಿಹ ಶ್ರೀಗಿರಿಯ
ಮೇಲೆ ವೇಶ್ಯೆಯರು ಗುಡಿಲಂ ಕಟ್ಟುವರ್ ಬಳಿಕ
ಪೇಳಲೇಂ ಸುರೆಯನುರೆ ಮಾರುವರ್ ಮತ್ತಲ್ಲಿ ನೆತ್ತರಿನ ಹೊಳೆ ಹರಿವುದು ೬೧

ದಿಂಡುಗೂರಲ್ಲಿ ನಾಗಾಭಕ್ತನಿರುತಲು
ದ್ದಂಡಭಕ್ತಿಯಲಿ ಜಂಗಮಕೆ ನೀಡುತ್ತಿರ
ಲ್ಕಂಡಲೆದು ಹಣ ಹೊನ್ನ ಬೇಡೆ ಸಾಲವ ತೆಗೆದು ನೀಡೆ ಬಹುಋಣವಾಗಲು
ಖಂಡಪರಶುವಿನ ಕೆಯ್ಯಿಂದಲಾ ಹೊನ್ನ ತೆ
ಕ್ಕೊಂಡು ಸಾಲವ ತಿದ್ದಿ ಶುಚಿಯಾಗಿ ಬಳಿಕ ಭೂ
ಮಂಡಲಂ ಬೆರಗಾಗಿ ನೋಡುತಿರೆ ಕೈಲಾಸಕೈದುವಂ ಸಂಭ್ರಮದೊಳು ೬೨

ಯಲ್ಲಿ ಮುಕ್ತನಾಗುವನು. ೬೦. ಮೋಪೂರಿನಿಂದ ಭೈರವರಾಜನು ಬಹಳ ಪರಾಕ್ರಮ ದಿಂದ ಮಲ್ಲಿಪಟ್ಟಣಕ್ಕೆ ಬಂದು ಅಲ್ಲಿನ ರಾಜನನ್ನು ಕಂಡು ಎಲ್ಲರನ್ನೂ ಗೆದ್ದು ಬೇಟೆಯ ಪವಾಡದಿಂದ ಸ್ತ್ರೀಪುರುಷರೆಲ್ಲರೂ ಶಿವದೀಕ್ಷೆಯನ್ನು ಪಡೆವರು : ವೀರಶೈವೋಪದೇಶ ವನ್ನು ಹೊಂದಿ ಸಾಸಲಿಗೆ ಹೋಗಿ ಚಿದ್ರೂಪನೊಡನೆ ಯುದ್ಧಮಾಡಿ ಕೈಲಾಸಕ್ಕೆ ಹೋಗುವರು, ಎಲೆ ಸಿದ್ಧರಾಮೇಶ ಕೇಳು ಎಂದನು. ೬೧. ಕೇಳು, ಆ ಸಾಸಲು ಎಂಬ ಊರಿನಲ್ಲಿ ಅನಂತರ ಲೀಲೆಯಿಂದ ಸೋಮೇಶ್ವರಲಿಂಗದಿಂದ ಧಾರಾಕಾರವಾಗಿ ಹಾಲು ಸುರಿಯುವುದು. ಅದರ ಸಮೀಪದಲ್ಲಿ ಕೆಂಡದ ಮಳೆ ಕರೆಯುವುದು. ಇನ್ನು ಭೂಲೋಕ ದಲ್ಲಿ ಪ್ರಖ್ಯಾತವಾಗಿ ಮೆರೆಯುತ್ತಿರುವ ಶ್ರೀಗಿರಿಯ ಮೇಲೆ ವೇಶ್ಯೆಯರು ಗುಡಿಸಲನ್ನು ಕಟ್ಟುವರು. ಅನಂತರ ಏನು ಹೇಳಲಿ ? ಹೆಂಡವನ್ನು ಮಾರುವರು, ಅಲ್ಲದೆ ಅಲ್ಲಿ ರಕ್ತದ ಹೊಳೆ ಹರಿಯುತ್ತದೆ. ೬೨. ದಿಂಡುಗೂರಲ್ಲಿ ನಾಗಭಕ್ತನು ದೃಢಭಕ್ತಿಯಿಂದ ಜಂಗಮರಿಗೆ ದಾನ ಮಾಡುತ್ತಾ ಅದಕ್ಕಾಗಿ ಅಲ್ಲಲ್ಲಿ ಸಾಲ ಮಾಡುತ್ತಾನೆ. ಸಾಲ ಹೆಚ್ಚಾಗಲು ಶಿವನ ಕೈಯಿಂದ ಹಣವನ್ನು ಪಡೆದು ಸಾಲ ತೀರಿಸಿ ಶುಚಿಯಾಗಿ ಬಳಿಕ ಭೂಲೋಕವೆಲ್ಲ

CC-0. Jangamwadi Math Collection. Digitized by eGangotri

ಹರಭಕ್ತನೆಂಬನೇ ಕಂಜನೂರಾಂಡಿಯಾ
ಪರಮವೇದಂಗಳ್ಗೆ ಭಾಷ್ಯಮಂ ಮಾಡಿ ತಾ
ನಿರುತಲ್ಲಿ ಸರಸಿಯೊಳಗಳಿಯನಂ ಪುಗಿಸಿ ಮಣಿಕರ್ಣಿಕೆಯೊಳೊಲಿದೆಬ್ಬಿಸಿ
ಹರುಷದಿಂ ರಂಗನಾಥನ ಕೆಯ್ಲೆ ಬಾಗಿಲಂ
ತೆರೆಸಿ ಮಹಿಮೆಯ ತೋರಿ ಶಿವನ ವರದಿಂ ತನ್ನ
ಪುರದುಭಯಕೇರಿಯೊಳಗಿರ್ದರಂ ಕೈಲಾಸಕೊಯ್ವನತಿಸಂಭ್ರಮದೊಳು ೬೩

ಎಲೆ ರಾಮ ಕೇಳಿನ್ನು ವೆಕ್ಕಲೂರೊಳಗೊರ್ವ
ನುಲಿಯ ಕಾಯಕದ ಕಲ್ಲಪ್ಪನಿರುತೊಂದು ದಿನ
ಹೊಲದೊಳೊಣಗಿದ ನಾರನೆತ್ತುತಿರೆ ಹಾವ್ಕಚ್ಚಿ ಮಗ ಸಾಯೆ ತಂದು ತನ್ನ
ನುಲಿಯ ವಿಕ್ರಯದಿಂದೆ ಜಂಗಮಾರ್ಚನೆ ಮಾಡಿ
ನಲವಿನಿಂ ತೀರ್ಥಪ್ರಸಾದಮಂ ಮಗಗೂಡೆ
ಮಲಗಿದವರೇಳ್ವಂದದಿಂದೇಳೆ ಶಿವನವರ ಶಿವಪುರಕ್ಕೊಲಿದೊಯ್ವನು ೬೪

ಕರಿಯೆಡೆಯೆನಿಪ್ಪ ಪುರದಲ್ಲಿ ಮುಮ್ಮಡಿಭಕ್ತ
ನಿರುತ ಜಂಗಮಕೆ ಮೃಷ್ಟಾನ್ನಮಂ ನೀಡಿ ತಾ
ನಿರದವರಿಗೊಂದೊಂದು ವಸ್ತ್ರಮಂ ಕೊಡುವನದಕೊರ್ವ ಜಂಗಮನಾತನ
ಅರಸಿಯಡಪಿಟ್ಟ ಸೀರೆಯನುಟ್ಟುಕೊಂಡಾಗ
ಬರಲದರ ಸೆರಗ ಬೇಡಿದೊಡಿತ್ತು ಬಳಿಕದಕೆ
ಪರಮಪಾದೋದಕವ ತಳಿಯಲಾ ಸೆರಗು ಬರಲಡಪಿನವಗಿತ್ತು ಮೆರೆವಂ ೬೫

ಬೆರಗಾಗಿ ನೋಡುತ್ತಿರಲು ಸಂಭ್ರಮದಿಂದ ಕೈಲಾಸಕ್ಕೆ ಹೋಗುತ್ತಾನೆ. ೬೩. ಹರಭಕ್ತ ಎಂಬುವನೇ ಕಂಜನೂರಾಂಡಿಯು, ಆ ಪರಮ ವೇದಗಳಿಗೆ ಭಾಷ್ಯವನ್ನು ಬರೆದು ತಾನಿದ್ದ ಜಾಗದಲ್ಲಿ ಕೊಳದಲ್ಲಿ ಅಳಿಯನನ್ನು ಮುಳುಗಿಸಿ ಮಣಿಕರ್ಣಿಕೆಯಲ್ಲಿ ಎಬ್ಬಿಸಿ ಸಂತೋಷದಿಂದ ರಂಗನಾಥನ ಕೈಯಿಂದ ಬಾಗಿಲನ್ನು ತೆಗೆಸಿ ಮಹಿಮೆಯನ್ನು ತೋರಿ ಶಿವನ ವರದಿಂದ ತನ್ನ ಪಟ್ಟಣದ ಎರಡು ಕೇರಿಯಲ್ಲಿದ್ದ ಜನರನ್ನು ಸಂಭ್ರಮದಿಂದ ಕೈಲಾಸಕ್ಕೆ ಕರೆದುಕೊಂಡು ಹೋಗುವನು. ೬೪. ಎಲೆ ಸಿದ್ಧರಾಮ, ಇನ್ನು ಕೇಳು, ವೆಕ್ಕಲೂರಲ್ಲಿದ್ದ ಒಬ್ಬನು ಹಗ್ಗದ ಕಾಯಕದ ಕಲ್ಲಪ್ಪ. ಅವನು ಒಂದು ದಿನ ಹೊಲದಲ್ಲಿ ಒಣಗಿದ ನಾರನ್ನು ಎತ್ತುತ್ತಿರುವಾಗ ಮಗನು ಹಾವು ಕಚ್ಚಿ ಸಾಯಲು ಅವನನ್ನು ತಂದು, ಹಗ್ಗವನ್ನು ಮಾರಿ ಜಂಗಮಪೂಜೆಯನ್ನು ಮಾಡಿ ಸಂತೋಷದಿಂದ ತೀರ್ಥಪ್ರಸಾದವನ್ನು ಮಗನಿಗೆ ಉಣಿಸಲು ಮಲಗಿದವರು ಏಳುವಂತೆ ಮಗನು ಏಳುತ್ತಾನೆ. ಆಗ ಶಿವನು ಅವರನ್ನು ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾನೆ. ೬೫. ಕರಿಯೆಡೆ ಎನ್ನುವ ಊರಿನಲ್ಲಿ ಮುಮ್ಮಡಿ ಭಕ್ತನು ಜಂಗಮರಿಗೆ ಮೃಷ್ಟಾನ್ನವನ್ನು ನೀಡಿ ಅವರಿಗೆ ಒಂದೊಂದು ವಸ್ತ್ರವನ್ನು ಕೊಡುವನು, ಒಬ್ಬ ಜಂಗಮನು ಆತನ ಹೆಂಡತಿ ಅಡವಿನ ಸೀರೆಯನ್ನು ಉಟ್ಟುಕೊಂಡು ಬರಲು ಅದರ ಸೆರಗನ್ನು ಬೇಡಲು ಅದನ್ನೂ ಕೊಡುತ್ತಾನೆ. ಅನಂತರ ಅದಕ್ಕೆ ಶ್ರೇಷ್ಠವಾದ ಪಾದೋದಕವನ್ನು ಚಿಮುಕಿಸಲು ಸೆರಗು ಬರುತ್ತದೆ. ಅದನ್ನು ಅಡವಿಟ್ಟ

CC-0. Jangamwadi Math Collection. Digitized by eGangotri

ಪೆರುವೊಗೆಯೆನಿಪ್ಪ ಪುರದಲ್ಲಿ ದೇವಮ್ಮ ತಾ
ನಿರುತೆ ಜಂಗಮಕೆ ವಾರಿಯಲಿ ದಾಸೋಹಮಂ
ಪರಿವಿಡಿಯೊಳೊದಗಿ ಮಾಡುತ್ತಮಿರಲೊರ್ವ ಜಂಗಮ ತನ್ನ ಪುಲಿಚರ್ಮವ
ಗುರುತಿನಿಂ ಬೈಚಿಡುವುದೆಂದಿತ್ತು ಪೋಗಿ ತಾಂ
ಮರಳಿಬಂದಾ ಚರ್ಮಮಂ ಬೇಡಲೊಡನಿಲ್ಲ
ದಿರಲದಕೆ ತನ್ನ ದೇಹದ ಚರ್ಮಮಂ ಕೊಡುವಳೆಲೆ ರಾಮ ಕೇಳೆಂದನು ೬೬

ಕಂಚಿಯೊಳ್ ಬಯಲಲಿಂಗಣ್ಣನತಿವಾದದಿಂ
ಪಂಚಾಕ್ಷರಿಯ ಮಂತ್ರವೇ ಮಹಾ ಘನವೆಂದು
ಸಂಚಿಕೆಯ ಚೀಟನಿಂ ಬರೆದದಂ ತೂಗಿ ಮೆರೆವಂ ಮತ್ತೆ ಕೇಳ್ವುದಿನ್ನು
ಮಿಂಚುತಿಹ ಕೆಯ್ಯ ಬೆರಳುಂಗುರದ ಬಸವಂಗೆ
ಕಿಂಚಿತುಳಿಯದ ಹಾಗೆ ರಾಸಿಕಡಲೆಯ ಮೆಲಿಸಿ
ಸಂಚಿತಪವಾಡಮಂ ಗೆಲ್ವನಾ ಗುಜ್ಜರಾತಿಯಲಿ ದೇಶಾರಾವುತಂ ೬೭

ಎಸೆವ ಪಟ್ಟೇಶ್ವರದೆ ವೀರಭದ್ರನ ಮುಂದೆ
ಬಸವಪ್ಪನಿರದೆ ತನ್ನಯ ಮಕ್ಕಳಿರ್ವರಂ
ಹೊಸತೆನಿಸಿ ತಲೆಗಳಂ ತರಿದು ಪತ್ತಿಸಿ ಮೆರೆದು ಪರವಾದಿಗಳ ಗೆಲ್ವನು
ಉಸಿರ್ವುದೇನುದಯಗಿರಿಯಲ್ಲಿ ಪರವಾದಿಗಳ್
ಬಸವಪೌರಾಣಮಂ ಪಳಿಯಲಾ ಪುಸ್ತಕವ
ನೊಸೆದು ಕಿಚ್ಚಲಿ ಹಾಯ್ಕೆ ಬೇಯದಿರೆ ವಾದಿಗಳ ಗೆಲುವನಾ ರಾಮಯ್ಯನು ೬೮

ವನಿಗೆ ಕೊಟ್ಟು ಪವಾಡವನ್ನು ಮೆರೆಯುತ್ತಾನೆ, ೬೬. ಪೆರುವೊಗೆ ಎಂಬ ಪಟ್ಟಣದಲ್ಲಿ ದೇವಮ್ಮನೆಂಬಾಕೆ ಇರುತ್ತ ಜಂಗಮರಿಗೆ ನೀರಿನ ದಾಸೋಹವನ್ನು ಕ್ರಮವಾಗಿ ಮಾಡುತ್ತಿರಲು ಒಬ್ಬ ಜಂಗಮನು ತನ್ನ ಹುಲಿಚರ್ಮವನ್ನು ಗುರುತಾಗಿ ಬಚ್ಚಿಡಲು ಹೇಳಿ ಕೊಟ್ಟುಹೋಗುತ್ತಾನೆ. ಮತ್ತೆ ಹಿಂದಿರುಗಿ ಬಂದು ಕೇಳಿದಾಗ ಚರ್ಮವು ಇಲ್ಲದಿರಲು ತನ್ನ ದೇಹದ ಚರ್ಮವನ್ನೇ ಕೊಡುತ್ತಾಳೆ, ಎಲೆ ಸಿದ್ಧರಾಮ ಕೇಳು ಎಂದನು. ೬೭. ಕಂಚಿಯಲ್ಲಿ ಬಯಲ ಲಿಂಗಣ್ಣನು ಬಹಳ ವಾದ ಮಾಡಿ ಪಂಚಾಕ್ಷರೀಮಂತ್ರವೇ ಬಹಳ ದೊಡ್ಡದೆಂದು ಸಂಚಿಕೆಯ ಚೀಟಿಯಲ್ಲಿ ಅದನ್ನು ಬರೆದು ತೂಗಿ ತೋರಿಸುತ್ತಾನೆ. ಮತ್ತೆ ಇನ್ನು ಕೇಳು, ಆ ಗುಜರಾತಿನಲ್ಲಿ ದೇಶಾರಾವುತನೆಂಬುವನು ಮಿಂಚುತ್ತಿದ್ದ ತನ್ನ ಕೈಬೆರಳಿನ ಉಂಗುರದ ಬಸವನಿಗೆ ಸ್ವಲ್ಪವೂ ಉಳಿಯದಂತೆ ರಾಶಿ ಕಡಲೆಯನ್ನು ತಿನ್ನಿಸಿ ಸಂಚಿತ ಪವಾಡವನ್ನು ಗೆದ್ದು ತೋರಿಸಿದನು. ೬೮. ಪ್ರಖ್ಯಾತವಾದ ಪಟ್ಟೇಶ್ವರ ಎನ್ನುವ ಊರಿನಲ್ಲಿ ವೀರಭದ್ರನ ಮುಂದೆ ಬಸವನು ಹೊಸದೆನ್ನುವಂತೆ ತನ್ನ ಮಕ್ಕಳಿಬ್ಬರ ತಲೆಯನ್ನು ಕಡಿದು ಮತ್ತೆ ಸೇರಿಸಿ ಪವಾಡವನ್ನು ತೋರಿ ಅನ್ಯ ಧರ್ಮದವರನ್ನು ಗೆಲ್ಲುತ್ತಾನೆ, ಹೇಳುವುದೇನು, ಉದಯಗಿರಿಯಲ್ಲಿ ಪರವಾದಿಗಳು ಬಸವ ಪುರಾಣವನ್ನು ನಿಂದಿಸಲು ಆ ಪುಸ್ತಕವನ್ನು ರಾಮಯ್ಯನು ಬೆಂಕಿಯಲ್ಲಿ ಹಾಕಿ ಅದು ಸುಡದಿರಲು

CC-0. Jangamwadi Math Collection. Digitized by eGangotri

ಇರದೆ ರಾಜಮಹೇಂದ್ರದಲ್ಲಿ ವಿಪ್ರರ್ ನೆರೆದು
ಪರಭಕ್ತನಾದನೀ ಬ್ರಾಹ್ಮಣಂ ನೋಢನು
ತಿರದೆ ನಿಂದಿಸಲಾತ ಕೇಳದಂತಿರಲವರ ಕೇರಿಯಾದ್ಯಂತವೆಲ್ಲ
ಉರಿವುದಾತನದೊಂದು ಮನೆಯುಳಿಯಲದ ಕಂಡು
ವರಭಕ್ತಭಂಡಾರಿ ಸೋವಣ್ಣನಡಿಗಳಿಗೆ
ಶರಣೆಂದು ಬಳಿಕವನ ಕರುಣಮಂ ಪಡೆವರೆಲೆ ರಾಮೇಶ ಕೇಳೆಂದನು ೯

ವರದಕ್ಷಿಣಾಪುರದಿ ಶಿವಭಕ್ತರೊಲವಿನಿಂ
ಕೊರಡನುರೆ ಕುಣಿಸಿ ಬರಡಂ ಹಯನಮಾಳ್ಪರೆಂ
ದಿರದಾಗ ಬೇಳೆಯೊಡೆಯರ್ ನುಡಿಯೆ ತುರುಕರದ ಕೇಳ್ದು ನೀಂ ಮಾಡೆಂದೆನೆ
ಮರನ ಕುದುರೆಯನೇರಿ ಕುಣಿಸಿ ಗೊಡ್ಡಾಕಳಂ
ಕರಿಸಿ ಮಿನಾನಂ ಚಂದ್ರಕಾಂತಲಿಂಗವಮಾಡಿ
ಯುರುಲಿಂಗವೆರಡುಹೋಳಾಗಿರಲ್ ಪತ್ತಿಸುವರೆಲೆ ರಾಮ ಕೇಳೆಂದನು ೨೦

ಕುರುವವೆಂಬೂರಲ್ಲಿ ಸೊಪ್ಪಿಯುಂ ಕೊಂಡು ದಿನ
ಚರಿಯದಿಂ ಬಸವಂಗೆ ಹಾಯ್ಕುತಿರೆ ಕೇಳ್ದದಂ
ಸುರಿತಾಳನಾತನಂ ಕರೆಸಿ ಮನೆಯೊಂ ಹೊಗಿಸಿ ಕಿಚ್ಚನಿಕ್ಕಿಸಲಾತನು
ಇರದಲ್ಲಿಯೆಂದಿನಂದದಿ ಸೊಪ್ಪಿಯುಂಗಡಿಯೊ
ಳಿರಲದಂ ಕೇಳ್ದು ಸುರಿತಾಳನಾತನ ಕರೆಸಿ
ಪರಮಕರ್ತಾರನೆಂದೆರಗಿ ಪೂಜಿಸುವನಾ ಸೊಪ್ಪಿಯಾ ಬಸವಪ್ಪನ ೨೧

ಅನ್ಯಮತೀಯರನ್ನು ಗೆಲ್ಲುವನು. ೯. ರಾಜಮಹೇಂದ್ರದಲ್ಲಿ ಬ್ರಾಹ್ಮಣರು ಗುಂಪು ಗೂಡಿ ಸೋಮಣ್ಣನ ಬಗ್ಗೆ ಈ ಬ್ರಾಹ್ಮಣನು ಶಿವಭಕ್ತನಾದ, ನೋಡು ಎನ್ನುತ್ತ ಬೈಯಲು ಆತನು ಕೇಳಿಸದಂತೆ ಇರುತ್ತಾನೆ. ಆಗ ಕೇರಿಯೆಲ್ಲ ಬೆಂಕಿಯಲ್ಲಿ ಬೇಯಲು ಅವನ ಮನೆ ಮಾತ್ರ ಹಾಗೇ ಉಳಿದುದನ್ನು ನೋಡಿ ಎಲ್ಲರೂ ಶ್ರೇಷ್ಠನಾದ ಭಕ್ತಿ ಭಂಡಾರಿ ಸೋಮಣ್ಣನ ಪಾದಗಳಿಗೆ ನಮಸ್ಕರಿಸಿ ಶರಣೆಂದು ಅವನ ಕರುಣೆಯನ್ನು ಪಡೆಯುತ್ತಾರೆ, ಎಲೆ ಸಿದ್ಧರಾಮ ಕೇಳೆಂದನು. ೨೦. ಶ್ರೇಷ್ಠವಾದ ದಕ್ಷಿಣಾಪುರದಲ್ಲಿ ಶಿವಭಕ್ತರು ಪ್ರೀತಿಯಿಂದ ಕೊರಡನ್ನು ಕುಣಿಸಿ, ಗೊಡ್ಡು ಹಸುವನ್ನು ಕರೆಯುವಂತೆ ಮಾಡುತ್ತಾರೆ ಎಂದು ಬೇಳೆಯೊಡೆಯರು ಹೇಳಲು ತುರುಕರು ಅದನ್ನು ಕೇಳಿ ನೀನೂ ಮಾಡು ಎನ್ನಲು ಅವನು ಮರದ ಕುದುರೆಯನ್ನು ಹತ್ತಿ ಅದನ್ನು ಕುಣಿಸಿ, ಗೊಡ್ಡು ಹಸುವನ್ನು ಕರೆಯುವಂತೆ ಮಾಡಿ, ಮಿನಾನನ್ನು, ಚಂದ್ರಕಾಂತಲಿಂಗವನ್ನಾಗಿ ಮಾಡಿ, ಶ್ರೇಷ್ಠವಾದ ಲಿಂಗವು ಎರಡು ಭಾಗವಾಗಿರಲು ಅದನ್ನು ಸೇರಿಸುತ್ತಾರೆ, ಎಲೆ ಸಿದ್ಧರಾಮ ಕೇಳು ಎಂದನು. ೨೧. ಕುರುವ ಎನ್ನುವ ಊರಿನಲ್ಲಿ ಸೊಪ್ಪಿಯ ಬಸಪ್ಪನು ಸೊಪ್ಪನ್ನು ಕೊಂಡು ಪ್ರತಿದಿನವೂ ಬಸವನಿಗೆ ಹಾಕುತ್ತಿರಲು ಅದನ್ನು ಕೇಳಿ ಸುಲ್ತಾನನು ಅವನನ್ನು ಕರೆಸಿ ಮನೆಯಲ್ಲಿ ಕೂಡಿ ಬೆಂಕಿಯನ್ನು ಹಾಕಿಸಲು ಅವನು ಅಲ್ಲಿರದೆ ಎಂದಿನಂತೆ ಸೊಪ್ಪಿ ನಂಗಡಿಯಲ್ಲಿ ಇರಲು ಅದನ್ನು ಕೇಳಿ ಸುಲ್ತಾನನು ಆತನನ್ನು ಕರೆಸಿ ಪರಮಕರ್ತಾರನೆಂದು

CC-0. Jangamwadi Math Collection. Digitized by eGangotri

ವರಶಿವಕವೀಶನೇಕೋಭಾಯಿ ಬಿದಿರಿಯಲಿ
ಸುರಿತಾಳನೊಡನೆ ವಾದಿಸಿ ಸತ್ತ ಕುದುರೆಗಂ
ಹರಣವಂ ಪಡೆದು ಸುರಿತಾಳನ ಮಗಂ ಸಾಯಲವನ ಪ್ರಾಣವನು ಪಡೆವಂ
ಇರದೆ ಮತ್ತೊರ್ವನಂ ಹಾವ್ ಕಚ್ಚೆ ಸಾಯಲಾ
ಪರಿವಿಡಿಯೊಳವನಸುವನುಂ ಪಡೆವನೆಂದೆನುತೆ
ಕರುಣದಿಂ ಚೆನ್ನಬಸವೇಶ್ವರಂ ಸಿದ್ಧರಾಮೇಶಂಗೆ ನಿರವಿಸಿದನು ೭೨

ಮೇಲುಕೊಂಕಣದೇಶದಲ್ಲಿ ದೋಪೇಶ್ವರದ
ನೀಲಕಂಠೇಶ್ವರನ ಗುಡಿಯಲ್ಲಿ ಸದ್ಭಕ್ತ
ಶೀಲವಂತಂ ಸೂಜಿಗಾಯಕದ ವೀರಪ್ಪನಿರುತೆ ಪರವಾದಿಜನರ
ಲೀಲೆಯಿಂ ಗೆಲ್ದು ತದ್ದೇಶದೊಳಗುಳ್ಳ ಜನ
ಜಾಲವೆಲ್ಲಂ ನೋಡುತಿರಲಖಿಳವಿಭವದಿಂ
ಕೈಲಾಸಕೈದುವಂ ಕೇಳೆಂದು ಸಿದ್ಧರಾಮೇಶಂಗೆ ನಿರವಿಸಿದನು ೭೩

ಹರಿಭಕ್ತನುಪ್ಪಲಿಕರಣ್ಣಪ್ಪನಿರೆ ಶಿವಂ
ಹರಭಕ್ತನಾಗೆಂದೊಡಾಗಲಾ ಮುದ್ರೆಗಳ
ವಿರದೆ ಪಾದಕ್ಕಿಳಿಯೆ ಪರವಾದಿಗಳ ಕಂಡು ವಾದಮಂ ಮಾಡಲಾಗ
ಹರನೊಲವಿನಿಂ ಹಾಳುಗೆರೆಗಳಂ ಬೇಸಗೆಯೊ
ಳಿರದೆ ಮಳೆಯಂ ಬರಿಸಿ ತುಂಬಿಸಿ ಬಳಿಕ್ಕಲಾ
ಪರವಾದಿಗಳನೆಲ್ಲರಂ ಗೆಲ್ವ ಮೆರೆವನಣ್ಣಾಭಕ್ತನೊಲವಿನಿಂದೆ ೭೪

ನಮಸ್ಕರಿಸಿ ಆ ಸೊಪ್ಪಿಯ ಬಸಪ್ಪನನ್ನು ಪೂಜಿಸುವನು. ೭೨. ಬಿದಿರೆಯಲ್ಲಿ ಶಿವಕವೀಶ ಏಕೋಭಾವಿ ಎನ್ನುವವನು ಸುಲ್ತಾನನೊಡನೆ ವಾದಮಾಡಿ ಸತ್ತ ಕುದುರೆಗೆ ಪ್ರಾಣ ಬರಿಸಿ, ಸುಲ್ತಾನನ ಮಗ ಸಾಯಲು ಅವನಿಗೂ ಪ್ರಾಣ ಬರಿಸಿ, ಮತ್ತೊಬ್ಬನು ಹಾವು ಕಚ್ಚಿ ಸಾಯಲು ಅವನ ಪ್ರಾಣವನ್ನೂ ಬರಿಸುತ್ತಾನೆ ಎಂದು ಕರುಣೆಯಿಂದ ಚೆನ್ನ ಬಸವೇಶ್ವರನು ಸಿದ್ಧರಾಮನಿಗೆ ನಿರೂಪಿಸಿದನು. ೭೩. ಮೇಲುಕೊಂಕಣ ದೇಶದಲ್ಲಿ ದೋಪೇಶ್ವರದ ನೀಲಕಂಠೇಶ್ವರನ ಗುಡಿಯಲ್ಲಿ ಸದ್ಭಕ್ತ ಮತ್ತು ಶೀಲವಂತನಾದ ಸೂಜಿ ಕಾಯಕದ ವೀರಪ್ಪನು ಅನ್ಯಮತೀಯರನ್ನು ನಿರಾಯಾಸವಾಗಿ ಗೆದ್ದು ಆ ದೇಶದಲ್ಲಿನ ಎಲ್ಲ ಜನಸಮೂಹವೂ ನೋಡುತ್ತಿರಲು ಸಕಲ ವೈಭವದಿಂದ ಕೈಲಾಸಕ್ಕೆ ಹೋಗುವನು ಕೇಳು ಎಂದು ಸಿದ್ಧರಾಮನಿಗೆ ವಿವರಿಸಿದನು. ೭೪. ವಿಷ್ಣುಭಕ್ತ ಉಪ್ಪಲಿಕರ ಅಣ್ಣಪ್ಪ ನನ್ನು ಶಿವನು ಶಿವಭಕ್ತನಾಗೆಂದು ಹೇಳಲು ಆಗ ಅವನ ಮುದ್ರೆಗಳು ಶಕ್ತಿಗುಂದಿ ಪಾದಕ್ಕಿಳಿಯಲು ಅನ್ಯಮತೀಯರು ಅದನ್ನು ನೋಡಿ ವಾದ ಮಾಡಲು ಆಗ ಶಿವನ ಒಲವಿನಿಂದ ಬೇಸಗೆಯಲ್ಲಿ ಮಳೆ ಬರಿಸಿ ಪಾಳು ಬಿದ್ದ ಕೆರೆಗಳನ್ನು ತುಂಬಿಸಿ ಅನಂತರ

CC-0. Jangamwadi Math Collection. Digitized by eGangotri

ವರಸುಗ್ಗಲೂರಲ್ಲಿ ಕಾಚನಾಯಕನೆನಿಪ
ಹರಿದಾಸನಿರುತೆ ಬೇಂಟೆಗೆ ಪೋಗಿ ಮೊಲನ ಕಂ
ಡಿರದೆ ಬೆಂಬತ್ತಲದು ಕೆರೆಯೊಳಗೆ ಬೀಳೆ ತಾನುಂ ಕೂಡೆ ಬಿದ್ದು ಪಿಡಿಯೆ
ಪರಮಶಿವಲಿಂಗವಾಗಿರೆ ಕಂಡು ತಾನದಂ
ಧರಿಸಿ ಮಹಲಿಂಗದೇವಯ್ಯನೆಂದಾಗ ತಾಂ
ಕರೆಸಿಕೊಳುತತಿನಿಷ್ಠೆಯಿಂದಿರದೆ ಬಳಿಕಲಾ ಲಿಂಗದೊಳಗೊಡವೆರೆವನು ೭೫

ಅಸಗೋಡ ಮಲ್ಲಪಯ್ಯಂ ತನ್ನ ಹೋರಿಯುಂ
ಬಸವನಂ ಬರೆದು ಬಿಡಲದು ಕೆಲವುದಿವಸಕಂ
ದಸುವಳಿಯಲದರೊಡನೆ ತಾನು ತನ್ನರಸಿ ತನ್ನಯ ಮಗಂ ಮಗನ ಸತಿಯುಂ
ಬಸವನೊಡನೆ ಸಮಾಧಿಯಂ ಕುಳಿತು ಜನರೆಲ್ಲ
ಹೊಸತೆನುತೆ ಚೋದ್ಯದಿಂ ನೋಡುತಿರಲಳಿದಿರ್ದ
ಬಸವನ ಸುಪ್ರಾಣಮಂ ಪಡೆವನೆಲೆ ಸಿದ್ಧರಾಮೇಶ ನೀಂ ಕೇಳೆಂದನು ೭೬

ಇಂತಿವರ್ ಮೊದಲಾದ ಶಿವಶರಣರಲ್ಲಲ್ಲಿ
ಸಂತಸದೆ ನಾನಾ ಪವಾಡಂಗಳಂ ಮೆರೆದು
ಕಂತುಹರನೊಲವಿನಿಂ ನಿಜಪದವಿಯುಂ ಪಡೆವರೆಲೆ ರಾಮ ಕೇಳ್ವುದಿನ್ನು
ಮುಂತೆ ಹೊಸಮಲೆಯಲ್ಲಿ ಕಂಪಿಲನೆನಿಪ್ಪ ಭೂ
ಕಾಂತನಿಹನವನ ಸುಕುಮಾರಕಂ ರಾಮನಾ
ಥಂ ತನಗೆ ಕುಮ್ಮಟವೆನಿಪ್ಪ ದುರ್ಗವನಿರದೆ ಕಟ್ಟಿಸುವನರ್ತಿಯಿಂದ ೭೭

ಅವರೆಲ್ಲರನ್ನೂ ಗೆದ್ದು ಅಣ್ಣಾಭಕ್ತನು ಮೆರೆಯುತ್ತಾನೆ. ೭೫. ಶ್ರೇಷ್ಠವಾದ ಸುಗ್ಗಲೂರಲ್ಲಿದ್ದ ಕಾಚನಾಯಕನೆಂಬ ವಿಷ್ಣುಭಕ್ತನು ಬೇಟೆಗೆ ಹೋಗಿ ಮೊಲವನ್ನು ನೋಡಿ ಅದನ್ನು ಬೆನ್ನಟ್ಟಲು ಅದು ಕೆರೆಯಲ್ಲಿ ಬೀಳುತ್ತದೆ. ಅದರ ಜೊತೆಯಲ್ಲಿ ಅವನೂ ಬಿದ್ದು ಹಿಡಿಯಲು ಅದು ಶ್ರೇಷ್ಠವಾದ ಶಿವಲಿಂಗವಾಗಿರುವುದನ್ನು ನೋಡಿ ಅವನು ಅದನ್ನು ಧರಿಸಿ ಮಹಲಿಂಗದೇವಯ್ಯನೆಂದು ಹೆಸರಿಟ್ಟುಕೊಂಡು ಬಹಳ ನಿಷ್ಠೆಯಿಂದ ಇದ್ದು ಅನಂತರ ಲಿಂಗದಲ್ಲಿ ಬೆರೆಯುತ್ತಾನೆ. ೭೬. ಅಸಗೋಡ ಮಲ್ಲಪಯ್ಯನು ತನ್ನ ಹೋರಿಗೆ ಬಸವನ ಮುದ್ರೆಯನ್ನೊತ್ತಿ ಬಸವನನ್ನಾಗಿ ಬಿಡಲು ಅದು ಕೆಲವು ದಿವಸದಲ್ಲಿಯೇ ಪ್ರಾಣಬಿಡಲು ಅವನು, ಅವನ ಹೆಂಡತಿ, ಅವನ ಮಗ, ಮಗನ ಹೆಂಡತಿ ಆ ಬಸವನೊಡನೆ ಸಮಾಧಿಯಲ್ಲಿ ಕುಳಿತು ಜನರೆಲ್ಲರೂ ಇದು ಅಪೂರ್ವವೆನ್ನುವಂತೆ ವಿಸ್ಮಯದಿಂದ ನೋಡುತ್ತಿರಲು ಸತ್ತಿದ್ದ ಬಸವನ ಪ್ರಾಣವನ್ನು ಪಡೆಯುತ್ತಾನೆ, ಎಲೆ ಸಿದ್ಧರಾಮ ಕೇಳು ಎಂದನು. ೭೭. ಹೀಗೆ ಇವರೇ ಮೊದಲಾದ ಶಿವಶರಣರು ಅಲ್ಲಲ್ಲಿ ಸಂತೋಷದಿಂದ ನಾನಾ ಪವಾಡಗಳನ್ನು ಮೆರೆದು ಶಿವನ ಕೃಪೆಯಿಂದ ಮೋಕ್ಷವನ್ನು ಪಡೆಯುತ್ತಾರೆ. ಎಲೆ ಸಿದ್ಧರಾಮ ಇನ್ನು ಕೇಳು, ಮುಂದೆ ಹೊಸಮಲೆಯಲ್ಲಿ ಕಂಪಿಲನೆಂಬ ರಾಜನಿರುವನು, ಅವನ ಸುಪುತ್ರ ರಾಮನಾಥನು ತನಗಾಗಿ ಕುಮ್ಮಟದುರ್ಗವನ್ನು

CC-0. Jangamwadi Math Collection. Digitized by eGangotri

ಅಲ್ಲಿ ತಾನಿರುತೆ ಸುತ್ತಣ ಭೂಮಿಪಾಲಕರ
ನೆಲ್ಲರಂ ಗೆಲ್ದು ಹೊಗಳಿಸಿಕೊಳಲದಂ ಕೇಳ್ದು
ಡಿಳ್ಳಿಯಿಂದಿರವೆ ಲಕ್ಕದ ಮೇಲೆ ತೊಂಭತಾರ್ಸಾವಿರಂ ಕುದುರೆ ಸಹಿತೆ
ಬಲ್ಲಿದ ಸುಖಾನರಾ ಕುಮ್ಮಟಕೆ ದಾಳಿಯುಂ
ನಿಲ್ಲದೈತಂದು ತಾವಿರ್ವರುಂ ಕಾದಿ ಬಳಿ
ಕಲ್ಲಿಯೇ ಬಯಪ್ಪರಾಗಲಾ ಕುಮ್ಮಟಂ ಹಾಳಪ್ಪುದೇನೆಂಬೆನು ೭೮

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮಂನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ೭೯

ಅರುವತ್ತೆರಡನೆಯ ಸಂಧಿ ಸಂಪೂರ್ಣ

ಆಸೆಯಿಂದ ಕಟ್ಟಿಸುತ್ತಾನೆ. ೭೮. ಅಲ್ಲಿ ತಾನಿದ್ದು ಸುತ್ತಮುತ್ತಲಿನ ರಾಜರೆಲ್ಲರನ್ನೂ ಗೆದ್ದು ಹೊಗಳಿಸಿಕೊಳ್ಳಲು ಅದನ್ನು ಕೇಳಿ ದಿಲ್ಲಿಯಿಂದ ಒಂದು ಲಕ್ಷ ತೊಂಬತ್ತಾರು ಸಾವಿರ ಕುದುರೆಗಳ ಸಮೇತ ಬಂದು ಪರಾಕ್ರಮಿಯಾದ ಸುಖಾನನು ಕುಮ್ಮಟದ ಮೇಲೆ ದಾಳಿ ಮಾಡಲು ಅವರಿಬ್ಬರೂ ಹೋರಾಡಿ ಅನಂತರ ಅಲ್ಲಿಯೇ ಸಾಯುವರು. ಆಗ ಕುಮ್ಮಟದುರ್ಗವು ಹಾಳಾಗುವುದು. ಏನೆನ್ನಲಿ ? ೭೯. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವ ಪುರಾಣವನ್ನು ಸಂತೋಷದಿಂದ ಪ್ರತಿಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ಅರುವತ್ತೆರಡನೆಯ ಸಂಧಿ ಮುಗಿಯಿತು.

CC-0. Jangamwadi Math Collection. Digitized by eGangotri

ಅರುವತ್ತು ಮೂರನೆಯ ಸಂಧಿ

ಸೂಚನೆ : ಹರನಾಜ್ಞೆಯಿಂದಿಂದ್ರಸಹವಾಗಿ ನೂರೊಂದು
ವಿರತರಿಳೆಯೊಳ್ ಜನಿಸಿ ಬಯಲಾಗಲೇಳ್ನೂರು
ವಿರತರುಂ ಸಂಜನಿಸಿ ಪೋಗಲೀ ಬಸವಾದಿ ಶರಣರುಂ ಜನಿಯಿಸುವರು

ದೇವ ಜಯಜಯ ಶಾರ್ವರೀಶ್ವರಕಲಾಜೂಟ
ದೇವ ಜಯಜಯ ಮನ್ಮಥಪ್ರಮೋದವಿದೂರ
ದೇವ ಜಯಜಯ ವಿಭವವಿಕ್ರಮಾನ್ವಿತದೇವ ರಾಕ್ಷಸವಿಮದವಿದೂರ
ದೇವ ಜಯಜಯ ಶುಕ್ಲಧಾತುವಿಲಸದ್ಗಾತ್ರ
ದೇವ ಜಯಜಯ ನಂದನಶ್ರೀಮುಖಾಂಭೋಜ
ದೇವ ಜಯಜಯ ಪ್ರಭವತಾರಣಶರಣ ವಿರೂಪಾಕ್ಷ ಕಾಲಸ್ವರೂಪ ೧

ಆಲಿಸೈ ಶಾಲಿವಾಹನಶಕದ ಸಾವಿರದ
ಮೇಲದಿನ್ನೂರೈವತೆಂಟರಿಂದಂ ಮುಂದೆ
ಪೇಳಲೇಂ ಧಾತುಸಂವತ್ಸರದ ವೈಶಾಖ ಶುದ್ಧ ಸಪ್ತಮಿ ಸುದಿನದೆ
ಲೀಲೆಯಿಂ ಹರಿಹರಗೆ ಪಟ್ಟಮಂ ಕಟ್ಟಲವ
ನಾಳುವಂ ಹದಿಮೂರು ಪಟ್ಟ ಪರಿಯಂತರಂ
ಪೇಳಲೇಂ ತನ್ನ ಸಂತತಿಗೂಡಿ ನೂರೈವತ್ತೈದು ಸಂವತ್ಸರವನು ೨

ಸೂಚನೆ : ಈಶ್ವರನ ಆಜ್ಞೆಯಿಂದ ಇಂದ್ರನ ಸಮೇತ ನೂರೊಂದು ವಿರಾಗಿಗಳು ಭೂಮಿಯಲ್ಲಿ ಹುಟ್ಟಿ ಬಯಲಾಗಲು, ಏಳು ನೂರು ವಿರಾಗಿಗಳೂ ಹುಟ್ಟಿ ಬಯಲಾಗಲು ಬಸವ ಮೊದಲಾದ ಶರಣರು ಹುಟ್ಟುವರು. ೧. ಚಂದ್ರಚೂಡದೇವನೆ ಜಯಜಯ, ಮನ್ಮಥನ ಸಂತೋಷವನ್ನು ದೂರಮಾಡಿದ ದೇವನೇ ಜಯಜಯ, ವೈಭವ ಪರಾಕ್ರಮ ಗಳಿಂದ ಕೂಡಿದ ದೇವ, ರಾಕ್ಷಸಮದವನ್ನು ನಾಶಮಾಡಿದ ದೇವನೇ ಜಯಜಯ, ಪ್ರಕಾಶಿಸುವ ಬಿಳಿಯಶಿಲೆಯಂತಹ ದೇಹವುಳ್ಳ ಪೇವ ಜಯ ಜಯ, ನಂದನ ಶ್ರೀ ಮುಖಾಂಭೋಜ ದೇವನೇ ಜಯ ಜಯ (ಶರಣರ ಹುಟ್ಟು ಸಾವುಗಳನ್ನು ದಾಟಿಸು ವವನೇ) ಪ್ರಭವತಾರಣ ಶರಣ ವಿರೂಪಾಕ್ಷ, ಕಾಲಸ್ವರೂಪ ದೇವನೇ ಜಯ ಜಯ. (ಇಲ್ಲಿ ಸಂವತ್ಸರಗಳ ಹೆಸರನ್ನು ಚಮತ್ಕಾರವಾಗಿ ಬಳಸಲಾಗಿದೆ) ೨. ಕೇಳಯ್ಯ, ಶಾಲಿ ವಾಹನ ಶಕ ಸಾವಿರದ ಇನ್ನೂರೈವತ್ತೆಂಟರಿಂದ ಮುಂದೆ ಏನು ಹೇಳಲಿ ? ಧಾತು ಸಂವ ತ್ಸರದ ವೈಶಾಖ ಶುದ್ಧ ಸಪ್ತಮಿಯ ದಿನ ಸಂತೋಷದಿಂದ ಹರಿಹರನಿಗೆ ಪಟ್ಟವನ್ನು ಕಟ್ಟಲು ಅವನು ಮತ್ತು ಅವನ ಹದಿಮೂರು ತಲೆಮಾರಿನವರೂ ತಮ್ಮ ಸಂತತಿಯೊಡ

CC-0. Jangamwadi Math Collection. Digitized by eGangotri

ಆಲಿಸಾನೆಯಗೊಂದಿಯಲ್ಲಿರುತೆ ಹರಿಹರನ್ನ
ಪಾಲವಂಶೋದ್ಭವಂ ಪಂಪಾವಿರೂಪಾಕ್ಷ
ನಾಲಯಸಮೀಪದೊಳ್ ವಿದ್ಯಾನಗರಿಯೆಂಬ ಪಟ್ಟಣವ ರಚಿಪನಿತ್ತ
ಲೀಲೆಯಿಂದಮರೇಂದ್ರನತಿವಿಭವದಿಂದಭವ
ನೋಲಗಕೆ ಪೋಗುತಿರೆ ಕೈಲಾಸಪರ್ವತದ
ಮೇಲೆ ವಿಕಟಾಂಗದ ಗಣೇಶ್ವರರ ಕಂಡು ತನ್ನವರ ಕೂಡಿಂತೆಂಬನು ೩

ನೋಡಿರಿವರಿಗೆ ಶಿವನ ಲಾಂಛನಮದಿಲ್ಲಿವರ
ಗಾಡಿಕೆಯೆ ಪೊಸತು ಭವಿಗಳೊ ಕಾಣಬಾರದೆಂ
ದಾಡಲವನೆಲ್ಲವಂ ಕೇಳ್ದವರ್ ಕಡುಕೋಪದಿಂದೆ ಸುರಪಾಲ ನೀನು
ಮೂಢನೇ ನಮ್ಮ ಮಹಿಮೆಗಳನರಿಯದೆ ಹೋಗ
ಳಾಡುವುದು ನೀತಿಯೇ ಕೇಳ್ಳುದದುಕಾರಣಂ
ಗಾಢದಿಂದಿಳೆಯೊಳಗೆ ಭವಿಯಾಗಿ ಪುಟ್ಟು ಪೋಗೆಂದಾಗ ಶಾಪಿಸುವರು ೪

ಸುರಪನಾ ಶಾಪಮಂ ಕೈಕೊಂಡು ಬಂದೊಡನೆ
ಹರಗೆ ಬಿನ್ನವಿಸಲದನರಿದಾ ಗಣೇಶ್ವರರ
ವರಶಾಪಮಂ ಮೀರಬಾರದದುಕಾರಣಂ ಪ್ರೌಢದೇವೇಂದ್ರನೆಂಬ
ನರಪಾಲನಾಗಿ ಜನಿಸೆಂದಾ ಗಣೇಶ್ವರರ
ಕರೆಸಿ ನೀವನಿಬರಾ ಧಾರುಣಿಯೊಳುದಿಸಿ ಬಳಿ
ಕಿರದಲ್ಲಿ ಮಹಿಮೆಗಳ ತೋರಿ ನಿರವಯಮಾಹುತು ಬಹುದೆಂದು ಬೀಳ್ಕೊಡುವನು ೫

ಗೂಡಿ ನೂರೈವತ್ತೈದು ವರ್ಷಗಳ ಕಾಲ ರಾಜ್ಯಭಾರ ಮಾಡುವರು. ೩. ಕೇಳು, ಆನೆ ಗೊಂದಿಯಲ್ಲಿರುತ್ತ ಹರಿಹರಭೂಪನ ವಂಶದವನು ಪಂಪಾವಿರೂಪಾಕ್ಷನ ದೇವಾಲಯದ ಹತ್ತಿರ ವಿದ್ಯಾನಗರಿ ಎಂಬ ಪಟ್ಟಣವನ್ನು ಕಟ್ಟಿಸುತ್ತಾನೆ. ಇತ್ತಕಡೆ ಸಂತೋಷದಿಂದ ಕೂಡಿದ ದೇವೇಂದ್ರನು ಬಹುವೈಭವದಿಂದ ಶಿವನ ಸಭೆಗೆ ಹೋಗುತ್ತಿರುವಾಗ ಕೈಲಾಸ ಪರ್ವತದ ಮೇಲೆ ವಿಕೃತರೂಪದ ಗಣೇಶ್ವರರನ್ನು ನೋಡಿ ತನ್ನವರ ಸಂಗಡ ಹೀಗೆಂದು ಹೇಳುವನು. ೪. ನೋಡಿರಿ ಇವರಿಗೆ ಶಿವನ ಲಾಂಛನವಿಲ್ಲ, ಇವರ ಸೌಂದರ್ಯವೇ ಹೊಸತು, ಭವಿಗಳೋ ಏನೋ ? ಇವರನ್ನು ನೋಡಬಾರದು ಎಂದು ನುಡಿಯಲು ಅವೆಲ್ಲವನ್ನೂ ಕೇಳಿ ಅವರು ಅತಿಯಾದ ಕೋಪದಿಂದ 'ದೇವೇಂದ್ರ, ನೀನು ಮೂಢನೆ ? ನಮ್ಮ ಮಹಿಮೆಗಳನ್ನು ತಿಳಿಯದೆ ಹೀಯಾಳಿಸುವುದು ನೀತಿಯೆ ? ಕೇಳು, ಈ ಕಾರಣ ದಿಂದ ನೀನು ಕೂಡಲೇ ಭೂಮಿಯಲ್ಲಿ ಭವಿಯಾಗಿ ಹುಟ್ಟು ಹೋಗು ಎಂದು ಶಾಪ ಕೊಡುವರು. ೫. ದೇವೇಂದ್ರನು ಈ ಶಾಪವನ್ನು ಪಡೆದು ಬಂದು ಕೂಡಲೇ ಶಿವನಿಗೆ ಬಿನ್ನವಿಸಲು ಅದನ್ನು ತಿಳಿದು ಆ ಗಣೇಶ್ವರರ ಶ್ರೇಷ್ಠವಾದ ಶಾಪವನ್ನು ಮೀರಬಾರದು; ಆ ಕಾರಣದಿಂದ ಪ್ರೌಢದೇವೇಂದ್ರ ಎಂಬ ರಾಜರಾಗಿ ಹುಟ್ಟು ಎಂದು ಹೇಳಿ ಆ ಗಣೇಶ್ವರರನ್ನು ಕರೆಸಿ ನೀವಿಷ್ಟು ಜನರೂ ಭೂಮಿಯಲ್ಲಿ ಹುಟ್ಟಿ ಅನಂತರ ಅಲ್ಲಿ ಮಹಿಮೆ

CC-0. Jangamwadi Math Collection. Digitized by eGangotri

ಹರನಾಜ್ಞೆಯಿಂದೆ ಬೀಳ್ಕೊಂಡಿಂದ್ರನಿಳೆಗೈದಿ
ಹರಿಹರಮಹಾರಾಯ ಬುಕ್ಕರಾಯನೆನಿಪ್ಪ
ಧರಣೀಶರಂಶದಿಂ ಜನಿಸಿ ವಿದ್ಯಾನಗರಿಯಲ್ಲಿ ರಾಜ್ಯವನಾಳುತೆ
ಹರುಷದಿಂ ಪ್ರೌಢದೇವೇಂದ್ರನಿರುತಿರಲತ್ತ
ಪರಮಕೈಲಾಸದಿಂದಿಳೆಗೈದಿ ನೂರೊಂದು
ವರಗಣೇಶ್ವರರುದಿಸಿ ಜಂಗಮಸ್ಥಲವನಂಗೀಕರಿಸಿ ವಿರತರಹರು ೬

ವರಕರಸ್ಥಲದ ವೀರಣ್ಣೊಡೆಯರೆಂಬುವರ
ಕರಕಮಲಸಂಜಾತನಕ್ಕಸಾಲೆಯನಾಗ
ನಿರುತಲೊಂದಿನದಲ್ಲಿ ಹಾದರಕೆ ಹೋಕ್ಕೊಡಾ ಮನೆಯವರ್ ಮುತ್ತಿಕೊಳಲು
ಪರಮಸಮ್ಯಗ್‌ಜ್ಞಾನ ತಲೆದೋರೆ ಚಿತ್ತದಿಂ
ವಿರತನಹೆನೆಂದು ಸಂಸಾರಮಂ ಬಿಟ್ಟಾಗ
ಕರಪೀಠದಲ್ಲಿ ಲಿಂಗವ ತೆಗೆದುಕೊಂಡು ಪೀಠವನೊಡನೆ ಕಡೆಗೆ ಹಾಯ್ಕಿ ೭

ಮರುಳನಂದದೆ ತನ್ನ ತಲೆಗೆ ಬೂದಿಯ ಹೂಸಿ
ವರದಿಗಂಬರನಾಗುತಾ ಮನೆಯ ಬಾಗಿಲಂ
ಹೊರಟುಬರೆ ಸರ್ವರುಂ ನೋಡುತಿರೆ ತನ್ನ ಗುರುವಿದ್ದ ಪುರಕೈದಿಬರಲು
ಪರಿಹಾಸ್ಯಮಂ ಮಾಡುತಕ್ಕಸಾಲೆಯನಾಗ
ನಿರವೆ ಭಿಕ್ಷಕೆ ಬಂದನಿದಕೊ ನೋಡೆನಲವರ
ಗುರುವೈದೆ ಕಾಣುತ್ತಿದೇನೆಂದು ಕೇಳಲಾ ಗುರುವಿನೊಡನಿಂತೆಂಬನು ೮

ಗಳನ್ನು ತೋರಿಸಿ ಬಯಲಾಗಿ ಬನ್ನಿ ಎಂದು ಅವರನ್ನು ಬೀಳ್ಕೊಡುವನು. ೬. ಶಿವನ ಆಜ್ಞೆಯಿಂದ ಬೀಳ್ಕೊಂಡು ಇಂದ್ರನು ಭೂಮಿಗೆ ಬಂದು ಹರಿಹರ ಮಹಾರಾಯ ಮತ್ತು ಬುಕ್ಕರಾಯರೆಂಬ ರಾಜರ ಅಂಶದಿಂದ ಹುಟ್ಟಿ ವಿದ್ಯಾನಗರಿಯಲ್ಲಿ ಪ್ರೌಢದೇವೇಂದ್ರ ಎಂಬ ಹೆಸರಿನಿಂದ ರಾಜ್ಯವಾಳುತ್ತ ಸಂತೋಷದಿಂದ ಇರುತ್ತಿರಲು ಅತ್ತ ಶ್ರೇಷ್ಠವಾದ ಕೈಲಾಸದಿಂದ ಭೂಮಿಗಿಳಿದು ನೂರೊಂದು ಮಂದಿ ಗಣೇಶ್ವರರು ಹುಟ್ಟಿ ಜಂಗಮಸ್ಥಲ ವನ್ನು ಸ್ವೀಕರಿಸಿ ವಿರಕ್ತರಾಗುವರು. ೭. ಶ್ರೇಷ್ಠವಾದ ಕರಸ್ಥಲದ ವೀರಣ್ಣೊಡೆಯ ಎಂಬುವವರ ಶಿಷ್ಯ ಅಕ್ಕಸಾಲೆಯ ನಾಗನು ಒಂದು ದಿನ ಹಾದರಕ್ಕೆ ಹೋಗಲು ಆ ಮನೆ ಯವರು ಮುತ್ತಿಕೊಳ್ಳುವರು. ಆಗ ಶ್ರೇಷ್ಠವಾದ ಸಮ್ಯಗ್‌ಜ್ಞಾನವು ತಲೆದೋರಲು, ಮನಸ್ಸಿನಲ್ಲಿ ವಿರಾಗಿಯಾಗುವೆನೆಂದು ಸಂಸಾರವನ್ನು ತೊರೆದು ಆಗ ಕೈಯಲ್ಲಿ ಲಿಂಗವನ್ನು ತೆಗೆದುಕೊಂಡು ಪೀಠವನ್ನು ಕೂಡಲೇ ಪಕ್ಕಕ್ಕೆ ಇಟ್ಟು, ೮. ಹುಚ್ಚನಂತೆ ತನ್ನ ತಲೆಗೆ ಬೂದಿಯನ್ನು ಬಳಿದುಕೊಂಡು ದಿಗಂಬರನಾಗಿ ಮನೆಯನ್ನು ಬಿಟ್ಟು ಹೊರಗೆ ಬಂದು ಎಲ್ಲರೂ ನೋಡುತ್ತಿರುವಂತೆ ತನ್ನ ಗುರುವಿದ್ದ ಪಟ್ಟಣಕ್ಕೆ ಬರಲು ಜನರು ಅಪಹಾಸ್ಯ ವನ್ನು ಮಾಡುತ್ತ ಅಕ್ಕಸಾಲೆಯ ನಾಗನು ಭಿಕ್ಷಕ್ಕೆ ಬಂದನು, ಇದೋ ನೋಡು ಎನ್ನಲು ಅವರ ಗುರುವು ಬಂದು ನೋಡಿ ಇದೇನೆಂದು ಕೇಳಲು ಆ ಗುರುವಿನೊಡನೆ ಹೀಗೆ ಹೇಳು

CC-0. Jangamwadi Math Collection. Digitized by eGangotri

ಎಲೆ ಗುರುವೆ ಕೇಳೆಂದು ತನ್ನ ವೃತ್ತಾಂತವುಂ
ತಿಳಿಪಿ ಕೈಯೊಳಗಿರ್ದ ಲಿಂಗಮಂ ತೋರಲದ
ಬಲಿದು ಮತ್ತೊಂದು ಪೀಠಕ್ಕದಂ ಮಗುಳ್ದಿತ್ತು ಕ್ರಿಯೆಯಳಿವ ಪರಿಯಂತರ
ತೊಲಗಲೀಯದಿರು ಲಿಂಗವ ಪೀಠದಿಂದಲೆಂ
ದಲಘುಮತಿ ಮಗುಳೆ ಬೋಧಿಸಿ ಪ್ರಸಾದವ ನೀಡಿ
ಕಳುಹಲಲ್ಲಿಂದೈದಿ ಸಕಲದೇಶವ ತಿರುಗಿ ಮಗುಳಲ್ಲಿಗೈತರುವನು ೯

ಬಂದ ಶಿಷ್ಯನ ನಿಲವನರಿದು ವೀರಣ್ಣೊಡೆಯ
ರಂದು ಗುರುವೆಂಬ ಭಾವವನುಳಿದು ಬಳಿಕಲಾ
ನಂದದಿಂದರ್ಘ್ಯಪಾದ್ಯಾದಿ ಸತ್ಕ್ರಿಯೆಗಳಿಂದುಪಚರಿಸಿ ಭಕ್ತಿಯಿಂದೆ
ಚೆಂದದಿಂದೆಸೆವ ಮಣಿಮಂಚ ಸುಪ್ಪತಿಗೆಯಲಿ
ತಂದು ಬಿಜಯಂಗೆಯ್ಸಿ ಪುಷ್ಪಕ್ಕೆ ಪೋಗೆ ನಲ
ವಿಂದೆ ಮೂರೆಡೆಯಲ್ಲಿ ಮಲವ ಬಿಟ್ಟಲ್ಲಿರ್ದ ನಾರಿಯೊಡನಿಂತೆಂಬನು ೧೦

ತರುಣಿ ಕೇಳೀ ಮಲಕ್ಕೊಳಗಾದೊಡಿಲ್ಲಿ ಸುಖ
ವಿರಲಿ ನಿಮ್ಮೊಡೆಯರಲ್ಲದೊಡೆಮ್ಮಕೂಡೀಗ
ಬರಲಿಯೆನುತುಸುರಿ ತಾಂ ಪೋಗೆ ವೀರಣ್ಣೊಡೆಯರೆಯ್ತಂದು ಕೇಳೆ ನಿಮ್ಮ
ಗುರುವೊ ಶಿಷ್ಯನೊ ಕಾಣೆವೀ ಮಲಕ್ಕೊಳಗಾದೊ
ಡಿರಲಿಯಲ್ಲದೆ ಬರಲಿಯೆಂದುಸಿರಿ ಪೋದನೆನೆ
ಹರಹರಾಯೆಂದೆಲ್ಲವಂ ಬಿಟ್ಟು ಬಳಿಕಾತನಡಿವಿಡಿದು ನಡೆಗೊಂಬನು ೧೧

ತ್ತಾನೆ. ೯. ಎಲೆ ಗುರುವೆ ಕೇಳು ಎಂದು ತನ್ನ ವಿಷಯವೆಲ್ಲವನ್ನೂ ತಿಳಿಸಿ ಕೈಯೊಳಗಿದ್ದ ಲಿಂಗವನ್ನು ತೋರಿಸಲು ಅದನ್ನು ಮತ್ತೊಂದು ಪೀಠದಲ್ಲಿ ಪ್ರತಿಷ್ಠಾಪಿಸಿ ಅವನಿಗೇ ಕೊಟ್ಟು ಬಾಹ್ಯಕ್ರಿಯೆಯು ನಾಶವಾಗುವತನಕ ಲಿಂಗವನ್ನು ಪೀಠದಿಂದ ತೆಗೆಯಬೇಡ ಎಂದು ಗುರುವು ಮತ್ತೆ ಉಪದೇಶ ನೀಡಿ ಪ್ರಸಾದವನ್ನು ಕೊಟ್ಟು ಕಳಿಸಲು ಅಲ್ಲಿಂದ ಹೊರಟು ಎಲ್ಲ ದೇಶಗಳನ್ನೂ ಸುತ್ತಿಕೊಂಡು ಮತ್ತೆ ಅಲ್ಲಿಗೇ ಬರುವನು. ೧೦. ಬಂದ ಶಿಷ್ಯನ ಸ್ಥಿತಿಯನ್ನು ತಿಳಿದು ವೀರಣ್ಣೊಡೆಯರು ಆ ದಿನ ತಾವು ಗುರುವೆಂಬ ಭಾವವನ್ನು ಬಿಟ್ಟು ಅನಂತರ ಆನಂದದಿಂದ ಅರ್ಘ್ಯಪಾದ್ಯಾದಿ ಸತ್ಕ್ರಿಯೆಯಿಂದ ಉಪಚಾರ ಮಾಡಿ ಭಕ್ತಿಯಿಂದ ಚೆನ್ನಾಗಿರುವ ಮಣಿಮಂಚ ಸುಪ್ಪತ್ತಿಗೆಯಲ್ಲಿ ಕರೆತಂದು ಬಿಟ್ಟು ಹೂ ತರುವುದಕ್ಕೆ ಹೋಗಲು ನಾಗನು ಮೂರು ಕಡೆಯಲ್ಲಿ ಮಲವಿಸರ್ಜನೆ ಮಾಡಿ ಅಲ್ಲಿದ್ದ ಸ್ತ್ರೀಯೊಡನೆ ಹೀಗೆ ಹೇಳುವನು. ೧೧. ತರುಣಿಯೆ ಕೇಳು, ನಿಮ್ಮ ಒಡೆಯರು ಈ ಮಲಕ್ಕೆ ಒಳಗಾಗದಿದ್ದರೆ ಇಲ್ಲಿಯೇ ಸುಖವಾಗಿರಲಿ. ಇಲ್ಲದಿದ್ದರೆ ನಮ್ಮೊಡನೆ ಈಗ ಬರಲಿ ಎಂದು ಹೇಳಿ ತಾನು ಹೋಗಲು ವೀರಣ್ಣೊಡೆಯರು ಬಂದು ಕೇಳುವರು -ನಿಮ್ಮ ಗುರುವೋ ಶಿಷ್ಯನೋ ತಿಳಿಯದು. ಈ ಮಲಕ್ಕೆ ಒಳಗಾದರೆ ಇರಲಿ, ಇಲ್ಲದೆ ಇದ್ದರೆ ಬರಲಿ ಎಂದು ಹೇಳಿ ಹೋದನು ಎನ್ನಲು ಹರಹರಾ ಎಂದು ಎಲ್ಲವನ್ನೂ ಬಿಟ್ಟು

CC-0. Jangamwadi Math Collection. Digitized by eGangotri

ಬರುತಲ್ಲಿ ಕಾಂಬನಾ ಮೆಳೆಗೆ ಕೂದಲು ಸಿಕ್ಕಿ
ಪರಮಶಿವಯೋಗದಿಂದಿರಲೊಡನೆ ಬೇಗದಿಂ
ಪರಿತಂದು ತಲೆಯ ಕೂದಲು ಬಿಡಿಸೆ ಕಣ್ದೆರೆದು ಕಂಡು ಹಾ ವೀರ ನೀನು
ಪರಿಹರಿಸಿ ಬಂದೆಯಾ ಸಂಸಾರಬಂಧವಂ
ನಿರುತವೇ ನಡೆಯೆಂದು ತಾವಿರ್ವರೊಂದಾಗಿ
ಹರುಷದಿಂದಿರದೆ ವಿದ್ಯಾನಗರಿಗೈತರುವರೆಲೆ ರಾಮ ಕೇಳೆಂದನು ೧೨

ಒಂದಲ್ಲಿ ಹುಚ್ಚರಾವುತನ ಮನೆಯಂಗಣದೊ
ಳಂದು ಲಿಂಗಾರ್ಪಿತದ ಭಿಕ್ಷವಂ ಬೇಡೆ ನಲ
ವಿಂದಲಾ ಮನೆಯಾಕೆ ಭಸಿತವಂ ಮುಂದಿರಿಸಿ ತನ್ನ ಕೆಯ್ಕೊಂಬುದೆನಲು
ಸಂದೇಹವಿಲ್ಲದಾಕೆಯನಾಗಳಾ ಮನೆಯ
ಮುಂದೆ ಸಂಭೋಗಿಸುತ್ತಿರಲಾಗಲವಳ್ಗಂಡ
ನೆಂದೆಂಬ ಹುಚ್ಚರಾವುತನೈದಿ ಬಂದವರ ಕಾಣುತತಿಕೋಪದಿಂದೆ ೧೩

ಉಚ್ಚಿದಾಯುಧದಿಂದಲಿರ್ವರಂ ತಿವಿಯೆ ತ
ಟ್ಟುಚ್ಚಲಲಗಂ ಕೀಳೆ ಗಾಯಂಗಳಿಲ್ಲದಿರ
ಲಚ್ಚರಿಯೆನುತ್ತವಂ ನಡುಗುತಿರೆ ನಾಗಿದೇವಂ ಕಂಡು ಕರುಣದಿಂದೆ
ಬೆಚ್ಚಬೇಡಲವೊ ನೀನೊಂದು ಭಿಕ್ಷವನಿತ್ತೆ
ಮೆಚ್ಚಿಯಿವಳೊಂದು ಭಿಕ್ಷವನಿತ್ತಳಿವರೊಳಗೆ
ಹೆಚ್ಚು ಕುಂದಿಲ್ಲೆಮಗೆ ನೀನಂಜಲೇತಕೆಲೆ ಹುಚ್ಚ ನೀಂ ಕೇಳೆಂದನು ೧೪

ಅನಂತರ ಆತನ ಹೆಜ್ಜೆಯನ್ನೇ ಅನುಸರಿಸಿ ಹೋಗುವನು. ೧೨. ಬರುತ್ತ ಅಲ್ಲಿ ಮೆಳೆಗೆ ಕೂದಲು ಸಿಕ್ಕಿ (ನಾಗನು) ಪರಶಿವಯೋಗದಿಂದ ಇರಲು ಅದನ್ನು ನೋಡಿ ಕೂಡಲೇ ಓಡಿಬಂದು ತಲೆಯಕೂದಲನ್ನು ಬಿಡಿಸಲು ಕಣ್ಣು ತೆರೆದು ನೋಡಿ ಹಾ ವೀರ, ನೀನು ಸಂಸಾರಬಂಧನವನ್ನು ಬಿಟ್ಟು ಬಂದೆಯಾ ? ಇದು ಸತ್ಯವೇ ನಡೆ, ಎಂದು ತಾವಿಬ್ಬರೂ ಒಂದಾಗಿ ಸಂತೋಷದಿಂದ ವಿದ್ಯಾನಗರಿಗೆ ಬರುವರು, ಎಲೆ ರಾಮ ಕೇಳು ಎಂದನು. ೧೩. ಬಂದು ಅಲ್ಲಿ ಹುಚ್ಚರಾವುತನ ಮನೆಯಂಗಣದಲ್ಲಿ ಆ ದಿನ ಲಿಂಗಾರ್ಪಿತಕ್ಕಾಗಿ ಭಿಕ್ಷವನ್ನು ಬೇಡಲು ಸಂತೋಷದಿಂದ ಮನೆಯಾಕೆ ವಿಭೂತಿಯನ್ನು ಮುಂದಿಟ್ಟು ನನ್ನನ್ನು ಕೈಕೊಳ್ಳಿಯೆನ್ನಲು ಸಂದೇಹವಿಲ್ಲದೆ ಆಗ ಆಕೆಯನ್ನು ಆ ಮನೆಯ ಮುಂದೆ ಸಂಭೋಗಿಸುತ್ತಿರಲು ಅವಳ ಗಂಡನಾದ ಹುಚ್ಚರಾವುತನು ಬಂದು ಅವರನ್ನು ನೋಡಿ ಬಹಳ ಕೋಪದಿಂದ ೧೪. ಒರೆ ಕಳಚಿದ ಆಯುಧದಿಂದ ಅವರಿಬ್ಬರನ್ನೂ ತಿವಿದು ಶರೀರವನ್ನು ಹೊಕ್ಕ ಕತ್ತಿಯನ್ನು ಕೀಳುವನು. ಆಗ ಅವರಿಗೆ ಗಾಯವಾಗದಿರಲು ಆಶ್ಚರ್ಯ ಎಂದು ಅವನು ನಡುಗುತ್ತಿರಲು ನಾಗಿದೇವನು ನೋಡಿ ಕರುಣೆಯಿಂದ ಹೆದರ ಬೇಡವೋ, ನೀನೊಂದು ಭಿಕ್ಷವನ್ನು ಕೊಟ್ಟೆ, ಮೆಚ್ಚಿ ಇವಳೊಂದು ಭಿಕ್ಷವನ್ನು ಕೊಟ್ಟಳು. ಇವರಲ್ಲಿ ನಮಗೆ ಹೆಚ್ಚು-ಕಡಮೆ ಇಲ್ಲ, ನೀನೇಕೆ ಹೆದರುತ್ತೀಯ ? ಹುಚ್ಚ ಕೇಳು

CC-0. Jangamwadi Math Collection. Digitized by eGangotri

ಹರುಷದಿಂದವನೈದಿ ಪ್ರೌಢದೇವೇಂದ್ರಂಗೆ
ವಿರಚಿಸಿದೊಡೆಲ್ಲವಂ ಕೇಳ್ದು ಬೇಗದೊಳವರ
ಕರೆಸಿ ಭಯಭಕ್ತಿಯಿಂದೆರಗಿ ಗುರುಬಸವೇಶನರಮನೆಗೆ ಕಳುಹಲಾತ
ಪರಮಸಂತೋಷದಿಂ ಲಿಂಗಪೂಜೆಯ ಮಾಡು
ತಿರೆ ನೋಡುತುಪಕರಣವಂ ಬಿಸುಟು ದಂಡಿಗೆಯ
ನಿರದೆ ನೆಲಕಪ್ಪಳಿಸೆ ಗುರುಬಸವನಾ ನಾಗಿದೇವರೊಡನಿಂತೆಂಬನು ೧೫

ಏನ ಮಾಡಿತ್ತು ದಂಡಿಗೆ ನಿಮ್ಮನೆನೆ ನಿನ್ನ
ಧ್ಯಾನವೆಲ್ಲಿತ್ತು ಲಿಂಗವಬಿಟ್ಟು ಬಯಲಸಂ
ಧಾನವಲ್ಲದಲರ್ಪಿತಾವಧಾನವನರಿಯೆ ಕೇಳೆನುತ್ತೈಕ್ಯಪದವ
ಸ್ವಾನುಭಾವದೊಳರಿಪೆ ಗುರುಬಸವದೇವರನು
ಮಾನವಿಲ್ಲದೆ ನಾಗಿದೇವಂಗೆ ನಮಿಸಿ ಸು
ಮ್ಮಾನದಿಂದಾ ವಿರಕ್ತರ ಕೂಡಿ ತೋಂಟಕ್ಕೆ ಪೊರಮಡುವರುತ್ಸವದೊಳು ೧೬

ಸಿಂಗಾರತೋಟಕ್ಕೆ ವಿರತರೆಲ್ಲರ್ ಪೋಗಿ
ತೆಂಗಿನಮರನ ಮೇಗಳೆಳನೀರ್ಗಳುಂ ತಮ್ಮ
ಲಿಂಗಕರ್ಪಿತವಾದುವೆನುತವಂ ಕುರಿತುಕೊಳೆ ತೋಟಿಗಂ ತಂದಿರಿಸಲು
ಹಿಂಗದೆಲ್ಲರ್ ಕುರಿತ ಕಾಯಿಗಳು ಮೊದಲಂತೆ
ಕಂಗೆಸೆವುತಿರ್ದುವಾ ನಾಗಿದೇವರ ಕಾಯ್ಗ
ಳಿಂಗಿ ನೀರೆಲ್ಲ ಬಯಲಾಗಲದನೋಡಿ ವೀರಣ್ಣೊಡೆಯರಿಂತೆಂಬರು ೧೭

ಎಂದನು. ೧೫. ಹುಚ್ಚರಾವುತನು ಸಂತೋಷದಿಂದ ಬಂದು ಪ್ರೌಢದೇವರಾಯನಿಗೆ ಇದನ್ನು ಹೇಳಲು ಎಲ್ಲವನ್ನೂ ಕೇಳಿ ಬೇಗನೆ ಅವರನ್ನು ಕರೆಸಿ ಭಯಭಕ್ತಿಯಿಂದ ನಮಸ್ಕರಿಸಿ ಗುರುಬಸವೇಶನ ಅರಮನೆಗೆ ಕಳಿಸುತ್ತಾನೆ. ಆತ ಬಹಳ ಸಂತೋಷದಿಂದ ಲಿಂಗಪೂಜೆಯನ್ನು ಮಾಡುತ್ತಿರಲು ಅದನ್ನು ನೋಡಿ ಪೂಜಾಸಾಮಗ್ರಿಗಳನ್ನು ಬಿಸಾಡಿ ದಂಡಿಗೆಯನ್ನು ನೆಲಕ್ಕೆ ಒಗೆಯಲು ಗುರುಬಸವನು ನಾಗಿದೇವರೊಡನೆ ಹೀಗೆನ್ನುವನು. ೧೬. ದಂಡಿಗೆ ನಿಮ್ಮನ್ನು ಏನು ಮಾಡಿತ್ತು ಎನ್ನಲು ಲಿಂಗವನ್ನು ಬಿಟ್ಟು ನಿನ್ನ ಧ್ಯಾನವೆಲ್ಲಿತ್ತು ? ಬಯಲ ಸಂಧಾನದಲ್ಲಿದ್ದು ಅರ್ಪಿತಾವಧಾನ ಮಾಡುವುದು ಹೇಗೆ ಎಂಬ ಕ್ರಮ ನಿನಗೆ ಗೊತ್ತಿಲ್ಲ ಕೇಳು ಎನ್ನುತ್ತ ಐಕ್ಯಸಂಧಾನವನ್ನು ಸ್ವಾನುಭಾವದಿಂದ ತಿಳಿಸಲು ಗುರುಬಸವದೇವರು ಅನುಮಾನವಿಲ್ಲದೆ ನಾಗಿದೇವನಿಗೆ ನಮಸ್ಕರ ಮಾಡಿ ಸಂತೋಷದಿಂದ ಆ ವಿರಕ್ತರನ್ನು ಕೂಡಿಕೊಂಡು ಉತ್ಸಾಹದಿಂದ ತೋಟಕ್ಕೆ ಹೊರಡುವರು. ೧೭. ತೋಟಕ್ಕೆ ಹೋಗಿ ವಿರಕ್ತರೆಲ್ಲರೂ ತೆಂಗಿನ ಮರದ ಮೇಲಿನ ಎಳನೀರುಗಳು ತಮ್ಮ ಲಿಂಗಕ್ಕೆ ಅರ್ಪಿತವಾದುವು ಎನ್ನುತ್ತ ಅವನ್ನು ಕುರಿತು ಹೇಳಲು ತೋಟಿಗನು ಅವನ್ನು ತಂದಿರಿಸುತ್ತಾನೆ. [illegible]ವೆ. ಆ ನಾಗಿದೇವರ ಕಾಯಿಗಳು ಬತ್ತಿ ನೀರೆಲ್ಲ ಹೊರಟುಹೋಗಿರಲು ಅದನ್ನು ನೋಡಿ ವೀರ

CC-0. Jangamwadi Math Collection. Digitized by eGangotri

ತಿಳಿದುಕೊಳಿ ನಮ್ಮಂತೆ ಕ್ರಿಯೆಗಳಿಂ ಶಿವಗಿತ್ತು
ಕೊಳಬೇಕಲ್ಲದೊಡೆ ನಾಗಿದೇವರ ತೆರದೊ
ಳುಳಿದ ಕ್ರಿಯೆಗಳನಿಂತು ನಡೆಯಬೇಕಲ್ಲೆರಡಕೆ ಬಿಟ್ಟ ಕರುವಿನಂತೆ
ಕಳವಳಿಸಬೇಡವೆಂದಾ ವಿರಕ್ತರಿಗಾಗ
ತಿಳಿಪಿ ಷಟ್ಸ್ಥಲಮಾರ್ಗಮಂ ಕರುಣದಿಂದಿರದೆ
ಒಳಿಕ ತಾವಿರ್ವರೇ ಶ್ರೀಗಿರಿಗೆ ಪೋಪರೆಲೆ ರಾಮೇಶ ಕೇಳೆಂದನು ೧೮

ಗುರು ಕರಸ್ಥಲದ ವೀರಣ್ಣೊಡೆಯರೇ ತನ್ನ
ವರಶಿಷ್ಯ ನಾಗಿದೇವನ ಕೂಡೆ ನಾವಿನ್ನು
ನಿರವಯುವನೈದಬೇಕೆನಲಾಗ ಮೋಹಿನೀಗಜವಿದ್ದ ಬಳಿಗೆ ಪೋಗಿ
ಸರವಿಗಳನೆಡೆಗೆಡೆಗೆ ಕಟ್ಟಿಕೊಂಡಾ ಗಜವ
ನಿರದೇರಿ ಗುರುವೆ ನೋಡೆಂದೊಡಾತಂ ನೋಡಿ
ಸರವಿಗಳೆ ಪರಿಪರಿಯ ಬಂಗಾರವಾಗಿ ಕಾಣಿಸುತಿವೆಕೊ ಕೇಳೆಂಬನು ೧೯

ಎನೆ ಕೇಳ್ದು ನಾಗಿದೇವಂ ಗುರುವೆ ನೀವಿನ್ನು
ಜನಪನಿಂ ಪೂಜೆಯಂ ಕೆಯ್ಕೊಳುತ್ತುಂ ಕೆಲವು
ದಿನವಿದ್ದು ಬಹುದೆಂದೊಡಾಗ ವೀರಣ್ಣೊಡೆಯರೆಲೆ ಮಗನೆ ನಂಬಿದೆನೆನೆ
ಅನುಮಾನವೇಕೆ ನಾನೇ ಬಂದು ನಿಮ್ಮನಾ
ಜನವರಿಯೆ ನಿರವಯುವನೈದಿಸುವೆನೆಂದಾಗ
ವಿನಯದಿಂದವರ ಬೀಳ್ಕೊಟ್ಟು ತಾಂ ನಿರವಯುವನೈದುವಂ ಕೇಳೆಂದನು ೨೦

ಣ್ಣೊಡೆಯರು ಹೀಗೆನ್ನುವರು. ೧೮. ತಿಳಿದುಕೊಳ್ಳಿ, ನಮ್ಮಂತೆ ಕ್ರಿಯಾಸ್ಥಲದಿಂದ ಶಿವನಿಗೆ ಸಮರ್ಪಿಸಿ ಪರಿಗ್ರಹಿಸಬೇಕು ಅಥವಾ ನಾಗಿದೇವರಂತೆ ಕ್ರಿಯೆಯನ್ನು ಬಿಟ್ಟು ನಡೆಯಬೇಕು. ಎರಡನ್ನೂ ಬಿಟ್ಟು ತಾಯಿತಪ್ಪಿದ ಕರುವಿನಂತೆ ಕಳವಳಿಸಬೇಡಿ ಎಂದು ಆ ವಿರಕ್ತರಿಗೆ ಆಗ ಷಟ್ಸ್ಥಲಮಾರ್ಗವನ್ನು ಕರುಣೆಯಿಂದ ಬೋಧಿಸಿ ತಾವಿಬ್ಬರೇ ಶ್ರೀಗಿರಿಗೆ ಹೋಗುವರು, ಎಲೆ ರಾಮೇಶ ಕೇಳು ಎಂದನು. ೧೯. ಗುರುವಾದ ಕರಸ್ಥಲದ ವೀರಣ್ಣೊಡೆಯರೇ ತನ್ನ ಶಿಷ್ಯನಾದ ನಾಗಿದೇವನೊಡನೆ ನಾವಿನ್ನು ಬಯಲಾಗಬೇಕೆನ್ನಲು ಅವನು ಆಗ ಮೋಹಿನಿಯೆಂಬ ಆನೆಯ ಬಳಿಗೆ ಹೋಗಿ ಸರಪಣಿಗಳಿಂದ ಬಿಗಿಸಿಕೊಂಡಿದ್ದ ಆ ಆನೆಯನ್ನು ಏರಿ ನೋಡು ಎಂದು ಗುರುವಿಗೆ ಹೇಳುವನು. ಆತನು ನೋಡಿ ಸರಪಣಿಗಳು ನಾನಾ ರೀತಿಯ ಬಂಗಾರವಾಗಿ ಕಾಣಿಸುತ್ತಿವೆ ಎನ್ನುವನು. ೨೦. ಅದನ್ನು ಕೇಳಿ ನಾಗಿದೇವನು 'ಗುರುವೆ, ನೀವು ಇನ್ನೂ ರಾಜನಿಂದ ಪೂಜೆಯನ್ನು ಕೈಕೊಳ್ಳುತ್ತ ಕೆಲವು ದಿನಗಳಿದ್ದು ಬನ್ನಿ, ಎನ್ನಲು, ವೀರಣ್ಣೊಡೆಯರು 'ಎಲೆ ಮಗನೆ, ನಿನ್ನನ್ನೇ ನಂಬಿದೆ' ಎನ್ನುವನು. ಆಗ ಅವನು 'ಅನುಮಾನವೇಕೆ ? ನಾನೇ ಬಂದು ನಿಮ್ಮನ್ನೂ ಆ ಜನರೆಲ್ಲರೂ ತಿಳಿಯುವಂತೆ ಬಯಲಾಗಿಸುತ್ತೇನೆ ಎಂದು ಆಗ ವಿನಯದಿಂದ ಅವರನ್ನು ಬೀಳ್ಕೊಟ್ಟು

CC-0. Jangamwadi Math Collection. Digitized by eGangotri

ಇನ್ನಾಲಿಸೈ ಸಿದ್ಧರಾಮ ವೀರಣ್ಣೊಡೆಯ
ರುನ್ನತದ ಚಿಂತೆಯಿಂದಲ್ಲಿರದೆ ಬೇಗದಿಂ
ಮುನ್ನ ತಾನಿರ್ದ ವಿದ್ಯಾನಗರಿಗೈತರಲ್ ಪ್ರೌಢದೇವೇಂದ್ರನರಿದು
ತನ್ನ ಮಗಳಂ ಕೊಟ್ಟು ಕಳುಹಲಾ ತತ್ತ್ವಸಂ
ಪನ್ನನಾ ನಾಗಿದೇವಂ ಬರುವತನಕ ನಾ
ವಿನ್ನಿಲ್ಲಿ ಬಿಟ್ಟಗಲೆವೆಂದು ಶಿವಗೋಷ್ಠಿಯಿಂದಿರುತಿರ್ಪರುತ್ಸವದೊಳು ೨೧

ಒಂದು ದಿನವಾ ನೃಪತಿಯೊಡನೆ ವೀರಣ್ಣೊಡೆಯ
ರೊಂದಾಗಿ ಪಂಪಾನದೀತೀರಕೈತಂದು
ನಿಂದಿರಲ್ ಮಿಾನ್ಬುಲಿಗನೆಂದೆಂಬ ಪಕ್ಕಿ ಮಿಾನಂ ಕಚ್ಚಿ ಗಗನಕೊಯ್ದು
ತಿಂದಪೆನೆನುತ್ತದಂ ಬಿಡೆ ಬೀಳುತಿರೆ ಮಗುಳೆ
ಬಂದದಂ ಪಿಡಿಯೆ ವೀರಣ್ಣೊಡೆಯರದ ಕಾಣು
ತೆಂದದಕೆ ಮೆಚ್ಚಿ ಪಚ್ಚೆಯ ಕಡಗಮಂ ಹಾಯ್ಕೆ ಹೊಳೆಯಲ್ಲಿ ಬೀಳೆ ಕಂಡು ೨೨

ಪಚ್ಚೆಯದ ಕಡಗಮಂ ಬಿಸುಟೆಯೇಕೆನಲದಕೆ
ಮೆಚ್ಚಿ ಯಾವಲ್ಲಿಯೆನೆ ಮತ್ತೊಂದು ಕಡಗವನ
ಮೆಚ್ಚಿ ಮೊದಲಿಟ್ಟ ಬಳಿಯಲಿ ಹಾಯ್ಕಿ ತೋರಿಸಿದೊಡರಸನತಿಚಿಂತೆಯಿಂದೆ
ಹೆಚ್ಚಿನವು ಕಡಗಂಗಳೆನೆ ನೃಪತಿ ನೀನದೇಂ
ಹುಚ್ಚನೇ ಬೊಕ್ಕಸದೊಳಿವೆ ತರಿಸಿ ನೋಡೆಂದೊ
ಡಚ್ಚರಿಯೆನುತ್ತಾಗ ನೋಡಲಾ ಕಡಗಂಗಳಿರೆ ನೃಪತಿ ಬೆರಗಪ್ಪನು ೨೩

ತಾನು ಬಯಲಾಗುವನು ಕೇಳು ಎಂದನು. ೨೧. ಇನ್ನು ಕೇಳಯ್ಯಾ ಸಿದ್ಧರಾಮ, ವೀರಣ್ಣೊಡೆಯರು ಅತಿಯಾದ ಚಿಂತೆಯಿಂದ ಅಲ್ಲಿ ನಿಲ್ಲದೆ ಬೇಗನೆ ಹಿಂದೆ ತಾವಿದ್ದ ವಿದ್ಯಾನಗರಿಗೆ ಬರಲು ಪ್ರೌಢದೇವರಾಯನು ಅದನ್ನು ತಿಳಿದು ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿ ಕಳುಹಿಸಿಕೊಡುವನು. ಆ ತತ್ತ್ವಸಂಪನ್ನನು ನಾಗದೇವನು ಬರುವ ತನಕ ನಾನು ಈ ಜಾಗವನ್ನು ಬಿಟ್ಟು ಕದಲುವುದಿಲ್ಲ ಎಂದು ಸಂಭ್ರಮದಿಂದ ಶಿವಗೋಷ್ಠಿಯಲ್ಲಿರುವನು. ೨೨. ಒಂದು ದಿನ ಆ ರಾಜನೊಡನೆ ವೀರಣ್ಣೊಡೆಯರು ಕೂಡಿಕೊಂಡು ಪಂಪಾನದೀತೀರಕ್ಕೆ ಬಂದು ನಿಂತಿರಲು ಮಿಾಂಬುಲಿಗನೆಂಬ ಹಕ್ಕಿ ಮಿಾನನ್ನು ಕಚ್ಚಿ ಆಕಾಶಕ್ಕೆ ತೆಗೆದುಕೊಂಡು ಹೋಗಿ ತಿನ್ನುತ್ತೇನೆ ಎಂದು ಅದನ್ನು ಬಿಡಲು ಅದು ಕೆಳಕ್ಕೆ ಬೀಳುತ್ತಿರುವುದು. ಮತ್ತೆ ಬಂದು ಅದನ್ನು ಹಿಡಿಯಲು ವೀರಣ್ಣೊಡೆಯರು ಅದನ್ನು ನೋಡಿ ಮೆಚ್ಚಿ ಪಚ್ಚೆಯ ಕಡಗವನ್ನು ಹಾಕಲು ಅದು ಹೊಳೆಯಲ್ಲಿ ಬೀಳುವುದು. ಅದನ್ನು ನೋಡಿ ೨೩. ಪಚ್ಚೆಯ ಕಡಗವನ್ನು ಏಕೆ ಬಿಸುಟೆ ಎನ್ನಲು, ಅದಕ್ಕೆ ಮೆಚ್ಚಿ ಎಂದು ವೀರಣ್ಣೊಡೆಯನು ಹೇಳುವನು. ಎಲ್ಲಿ ಬಿಸುಟೆ ಎಂದು ದೊರೆ ಕೇಳಲು ಮತ್ತೊಂದು ಕಡಗವನ್ನು ಬಿಚ್ಚಿ ಮೊದಲು ಹಾಕಿದ ಜಾಗದಲ್ಲಿ ಹಾಕಿ ತೋರಿಸುವನು. ಆಗ ರಾಜನು ಬಹಳ ಚಿಂತೆಯಿಂದ ಕಡಗಗಳು ಬಹಳ ಬೆಲೆಬಾಳುವುವು ಎನ್ನಲು ರಾಜನೇ ನೀನೇನು ಹುಚ್ಚನೆ ? ಅವು ಬೊಕ್ಕಸದಲ್ಲಿವೆ ತರಿಸಿನೋಡು ಎನ್ನುವನು. ಅವನ ಮಾತು ಆಶ್ಚರ್ಯ

CC-0. Jangamwadi Math Collection. Digitized by eGangotri

ಚೆನ್ನಾಗಿ ಚಂದ್ರಗಾವಿಯ ಹಚ್ಚಡವ ಮಾಡಿ
ತನ್ನ ಗುರುವಿಂಗೊಂದು ಹೋಳನರಸಿಂಗೊಂದು
ನನ್ನಿಯಿಂ ಕೊಡೆ ಕರಸ್ಥಲದ ವೀರಣ್ಣೊಡೆಯರರಸಿಯದನುಟ್ಟುಕೊಂಡು
ತನ್ನ ಪಿತನರಮನೆಗೆ ಬರಲರಸ ನೋಡುತಾ
ಹೊನ್ನನಂ ಕರೆಸಿದೆಲ್ಲಿಯದೆಂದು ಕೇಳಲವ
ನೆನ್ನ ದೇವರಿಗೊಂದ ರಾಯರಿಗೊಂದ ನಾಂ ಕೊಟ್ಟೆನೆನಲಿಂತೆಂಬನು ೨೪

ನನ್ನೊದವೆಯಂ ನಿನ್ನ ದೇವರಿಗದೆಂತಿತ್ತೆ
ಚೆನ್ನಾಗಿ ತಿಳಿಪೆಂದೊಡೆಲೆ ಭೂಮಿಪತಿ ಕೇಳ್ವು
ದೆನ್ನ ದೇವರದನವರಿಗೆ ಕೊಟ್ಟೆನಲ್ಲದಾಂ ಪೆರರೊಡವೆಯಂ ಕೊಡುವೆನೇ
ನಿನ್ನೊಡವೆ ನಿನ್ನ ಬೊಕ್ಕಸದ ಪೆಟ್ಟಿಗೆಯಲಿದೆ
ನನ್ನಿಯೆನೆ ಪೆಟ್ಟಿಗೆಯ ತರಿಸಿ ನೋಡಿದೊಡಿರಲ್
ಹೊನ್ನಯ್ಯ ನೀನಸಗನಲ್ಲವೆನಲವನರಿದನೆನುತೆ ನಿರವಯಮಪ್ಪನು ೨೫

ಮಿಡಿಬಿಲ್ಲ ಶಾಂತದೇವರೆ ತನ್ನ ಲಿಂಗಮಂ
ತೊಡಚಿ ಸಂಧಾನದಿಂ ನೋಳ್ಪವರನೆಲ್ಲರಂ
ಮಿಡಿಯೆಪೋಗಲ್ಕಿವಂ ಹುಚ್ಚನೆಂದಿರದೋಡುತಿರಲಾಗದೊಂದು ದಿವಸ
ಕಡುವೇಗದಿಂ ಕರಸ್ಥಲದ ವೀರಣ್ಣೊಡೆಯ
ರೆಡೆಗೆ ಬಂದೆಸವುತಿರೆ ಸಂಧಾನವಾಯ್ತಿನ್ನು
ಬಿಡದೆಸವುದೆನಲಾತನೆಸೆದು ಬಳಿಕಾ ಲಿಂಗದೊಡನೆ ನಿರವಯಮಪ್ಪನು ೨೬

ವಾಗಿದೆಯೆಂದು ತರಿಸಿ ನೋಡಲು ಕಡಗಗಳು ಬೊಕ್ಕಸದಲ್ಲಿರಲು ರಾಜನು ಬೆರಗಾಗುವನು. ೨೪. ಚಂದ್ರಗಾವಿಯ ಬಣ್ಣದ ಹಚ್ಚಡಗಳನ್ನು ಚೆನ್ನಾಗಿ ಒಗೆದು ಮಡಿ ಮಾಡಿ ತನ್ನ ಗುರುವಿಗೊಂದು, ರಾಜನಿಗೊಂದು ಹಚ್ಚಡವನ್ನು ಪ್ರೀತಿಯಿಂದ ಕೊಡಲು ಕರಸ್ಥಳದ ವೀರಣ್ಣೊಡೆಯರ ಪತ್ನಿ ಅದನ್ನು ಉಟ್ಟುಕೊಂಡು ತನ್ನ ತಂದೆಯ ಅರಮನೆಗೆ ಬರಲು ರಾಜನು ಅದನ್ನು ನೋಡಿ ಆ ಅಗಸನ ಹೊನ್ನನನ್ನು ಕರೆಸಿ ಇದೆಲ್ಲಿಯದು ? ಎಂದು ಕೇಳಲು ಅವನು ನನ್ನ ದೇವರಿಗೊಂದನ್ನೂ ಅರಸನಿಗೆ ಒಂದನ್ನೂ ನಾನು ಕೊಟ್ಟೆ ಎನ್ನಲು ಇಂತೆನ್ನುವನು. ೨೫. ನನ್ನ ವಸ್ತುವನ್ನು ನಿನ್ನ ದೇವರಿಗೆ ಹೇಗೆ ಕೊಟ್ಟೆ ಎಂಬುದನ್ನು ಚೆನ್ನಾಗಿ ವಿವರಿಸು ಎನ್ನಲು, ಎಲೆ ರಾಜನೆ ಕೇಳು, ನನ್ನ ದೇವರ ಒಡವೆಯನ್ನು ಅವರಿಗೆ ಕೊಟ್ಟಿದ್ದೇನೆಯಲ್ಲದೆ ಬೇರೆಯವರ ವಸ್ತುವನ್ನು ಕೊಡುತ್ತೇನೆಯೆ ? ನಿನ್ನೊಡವೆ ನಿನ್ನ ಬೊಕ್ಕಸದ ಪೆಟ್ಟಿಗೆಯಲ್ಲಿದೆ. ಇದು ನಿಜವೆನ್ನಲು ರಾಜನು ಪೆಟ್ಟಿಗೆಯನ್ನು ತರಿಸಿ ನೋಡಿದನು. ಆಗ ರಾಜನ ವಸ್ತು ಅದರಲ್ಲೇ ಇರಲು, ಹೊನ್ನಯ್ಯ ನೀನು ಅಗಸನಲ್ಲ ಎನ್ನಲು ಇವನು ನನ್ನ ಸ್ವರೂಪವನ್ನು ತಿಳಿದನೆಂದು ಹೊನ್ನಯ್ಯನು ಬಯಲಾಗುವನು. ೨೬. ಮಿಡಿಬಿಲ್ಲ ಶಾಂತದೇವರು ತನ್ನ ಬಿಲ್ಲಿಗೆ ಲಿಂಗವನ್ನು ಹೂಡಿ ಕಂಡವರಿಗೆಲ್ಲ ಹೊಡೆಯಹೋಗಲು ಇವನು ಹುಚ್ಚನೆಂದು ಅವರು ಓಡುವರು. ಒಂದು ದಿನ ಬಹಳ ವೇಗವಾಗಿ ಕರಸ್ಥಳದ ವೀರಣ್ಣೊಡೆಯರ ಬಳಿಗೆ ಬಂದು ಲಿಂಗವನ್ನು ಹೂಡುತ್ತಿರಲು

CC-0. Jangamwadi Math Collection. Digitized by eGangotri

ಪೇಳಲಿನ್ನೇಂ ಸಿದ್ಧರಾಮ ಹೇಟಿಯ ಮರುಳ
ಕೋಳಿಗಳ ಮೇಲೆ ತನ್ನಯ ಹೇಟಿಯಂ ಬಿಟ್ಟು
ಕಾಳೆಗದಿನೆಲ್ಲವಂ ಗೆದ್ದುಕೊಂಡಿರದೆ ತಾನೊಯ್ವುತಿರಲೊಂದು ದಿವಸ
ಆಳೋಚನಂಗೆಯ್ದು ತನ್ನೊಳಗೆ ಚಿಂತೆಯಂ
ತಾಳಿ ವೀರಣ್ಣೊಡೆಯರ್ಕೈತಂದು ನೋಡಲಾ
ಕೋಳಿಗಳನೆಲ್ಲವಂ ನಿರವಯವನೈದಿಸಲ್ ಕಂಡೆನೆನೆ ಬಯಲಪ್ಪನು ೨೭

ತಗರಕಾಳೆಗದ ಪ್ರಭುವಾ ತೆರದೊಳೈದುವಂ
ಮಿಗೆ ಗೆಲ್ಲಗೂಳಿಯಂಗಡಿಯ ಕಜ್ಜಾಯಗಳ
ತೆಗೆತೆಗೆದು ಮೆಲುತಿರಲ್ಕಿರದವರ್ ಕೊಲ್ಲುತಿರಲೀ ಪರಿಯೊಳೊಂದು ದಿವಸ
ವರಕರಸ್ಥಲದ ವೀರಣ್ಣೊಡೆಯರಾಗಲೈ
ತರುತಾತನಂ ಕಂಡು ಕೊಲ್ಲಬೇಡೀತನೇ
ಪರಮಶಿವಯೋಗಿಯೆನಲರಿದನೆಂದೆನುತಾಗಲಿರದೆ ನಿರವಯವಪ್ಪನು (?) ೨೮

ಬಾಲಲಿಂಗಣ್ಣನೊಲವಿಂದೆ ವೀರಣ್ಣೊಡೆಯ
ರಾಲಯಕೆ ಬಂದು ಭಿಕ್ಷವ ಬೇಡೆ ಕಾಣುತಿವ
ಬಾಲನೆಂದೊಳಯಿಕ್ಕೆ ಕರೆಯಲೈತಂದು ಮಂಚದ ಮೇಲೆ ಪವಡಿಸಿರಲು
ಲೀಲೆಯಿಂದಾತನಂಗೆಯ್ಯ ಲಿಂಗವ ತೆಗೆದು
ಮೇಲೆ ತಾವೆಲ್ಲರುಂ ಸವಿಸಿ ಬಳಿಕಾಗಲಾ
ಬಾಲಲಿಂಗಣ್ಣನಂ ಕರೆಯೆನಲ್ ಕರೆಯೆ ಹರಣವನುಳಿದು ಡಿಂಬಮಿರಲು ೨೯

ಲಿಂಗಾನುಸಂಧಾನವಾಯಿತು, ಇನ್ನು ಬಿಡು ಎನ್ನಲು ಶಾಂತದೇವನು ಲಿಂಗಬಾಣ ಬಿಟ್ಟು ಅನಂತರ ಆ ಲಿಂಗದೊಡನೆಯೇ ಬಯಲಾಗುವನು. ೨೭. ಇನ್ನೇನು ಹೇಳಲಯ್ಯ ಸಿದ್ಧರಾಮ, ಹೇಟೆಯ ಮರುಳನೆನ್ನುವನು ಕೋಳಿಗಳ ಮೇಲೆ ತನ್ನ ಕೋಳಿಯನ್ನು ಬಿಟ್ಟು ಜಗಳದಲ್ಲಿ ಎಲ್ಲವನ್ನೂ ಗೆದ್ದುಕೊಂಡು ಹೋಗುತ್ತಿರುವನು. ಒಂದು ದಿನ ಆಲೋಚನೆ ಮಾಡಿ ತನ್ನಲ್ಲಿಯೇ ಚಿಂತಿಸುತ್ತ ವೀರಣ್ಣೊಡೆಯರು ಬಂದು ನೋಡಲು ಹೇಟೆಯ ಮರುಳನು ಕೋಳಿಗಳನ್ನೆಲ್ಲ ಬಯಲು ಮಾಡುವನು. ನಿನ್ನ ರಹಸ್ಯವನ್ನು ತಿಳಿದುಕೊಂಡೆ ಎನ್ನಲು ಹೇಟೆಯ ಮರುಳನು ಬಯಲಾಗುವನು. ೨೮. ಟಗರಿನ ಕಾಳಗದ ಪ್ರಭುವೂ ಸಹ ಅದೇ ರೀತಿ ಬಯಲಾಗುವನು. ಅವನು ಗೆದ್ದವನ ಅಂಗಡಿಯ ಕಜ್ಜಾಯಗಳನ್ನು ತೆಗೆತೆಗೆದು ತಿನ್ನುತ್ತಿರಲು ಅವರು ಅವನನ್ನು ಹೊಡೆಯುತ್ತಿರುವರು. ಈ ರೀತಿ ಒಂದು ದಿನ ಕರಸ್ಥಳದ ವೀರಣ್ಣೊಡೆಯರು ಬರುತ್ತಾ ಅವನನ್ನು ನೋಡಿ-ಹೊಡೆಯಬೇಡಿ ಅವನೇ ಪರಮ ಶಿವಯೋಗಿ ಎನ್ನಲು ತನ್ನ ರಹಸ್ಯವನ್ನು ತಿಳಿದನೆನ್ನುತ್ತ ಆ ಪ್ರಭುವು ಬಯಲಾಗುವನು. ೨೯. ಬಾಲ ಲಿಂಗಣ್ಣನು ಪ್ರೀತಿಯಿಂದ ವೀರಣ್ಣೊಡೆಯರ ಮನೆಗೆ ಬಂದು ಭಿಕ್ಷವನ್ನು ಬೇಡಲು ಅವನನ್ನು ನೋಡಿ ಹುಡುಗನೆಂದು ಒಳಕ್ಕೆ ಕರೆಯಲು ಅವನು ಬಂದು ಮಂಚದ ಮೇಲೆ ಮಲಗಿರುವನು. ವಿನೋದದಿಂದ ಆತನ ಅಂಗೈಯಲಿಂಗವನ್ನು ತೆಗೆದುಕೊಂಡು ತಾವೆಲ್ಲರೂ

CC-0. Jangamwadi Math Collection. Digitized by eGangotri

ಕಂಡಾಗಲಾ ವಿರಕ್ತರನೆಲ್ಲರು ಕೂಡಿ
ಕೊಂಡು ವೀರಣ್ಣೊಡೆಯರೇ ತಾವು ಮೊದಲೆ ತೆ
ಕ್ಕೊಂಡ ಲಿಂಗವನಾತನಂಗೆಯ್ಯೊಳಿರಿಸೆ ಕಣ್ದೆರೆಯಲಾ ಲಿಂಗಣ್ಣನ
ಉಂಡುದಿಲ್ಲೇಳೆಂದೊಡಾನು ನಿಮ್ಮೊಡನಾಗ
ಳುಂಡೆನೆನೆ ಕೇಳ್ದು ವೀರಣ್ಣೊಡೆಯರೆಂತು ನೀ
ನುಂಡೆಯೆನೆ ಬಾಲಲಿಂಗಣ್ಣನವರುಂಡೂಟಗಳ ಕುರುಪುಗಳ ಪೇಳ್ದನು ೩೦

ಆ ನುಡಿಯ ಕೇಳ್ದು ವೀರಣ್ಣೊಡೆಯರಧಿಕಸು
ಮ್ಮಾನದಿಂದಾಗಲೀತಂ ಪ್ರಾಣಲಿಂಗಸಂ
ಧಾನಿ ನೀನಹುದೆಂದು ಬಾಲಲಿಂಗಣ್ಣನಂ ಪಿಡಿದೆತ್ತಿಕೊಂಡು ಕೂಡೆ
ಸ್ವಾನುಭಾವದೊಳೊಲಿದು ಕೊಂಡಾಡುತಿರಲದಂ
ತಾನರಿದು ನಾಗಿದೇವಂ ಬಳಿಕ್ಕವರನನು
ಮಾನವಿಲ್ಲದೆ ನೋಡಿ ನಿರವಯುವನೈದಿಸುವನೆಲೆ ರಾಮ ಕೇಳೆಂದನು ೩೧

ಸರವಿಯಿಂ ತನ್ನ ಕಾಲಂ ಸುತ್ತಿಕೊಂಡು ಬಳಿ
ಕಿರಲದಕೆ ಲಿಂಗಮಂ ಕಟ್ಟಿಕೊಂಡೆಡೆಯಾಡು
ತಿರಲೊಂದು ದಿನದಲ್ಲಿ ಮಲಗಿಕೊಂಡಿರೆ ಪ್ರೌಢರಾಯನದ ಕಂಡು ತೆಗೆಸೆ
ಹರಣವಿಲ್ಲದೆ ಡಿಂಬವಿರೆ ನೋಡಿ ಭೂಪನಾ
ಸರವಿಗಾ ಲಿಂಗಮಂ ಕಟ್ಟಿಸಲ್ ಕಣ್ದೆರೆವು
ತಿರಬಾರದಿವನರಿದನೆನುತೆ ನಿರವಯುಮಪ್ಪನೆಲೆ ರಾಮ ಕೇಳೆಂದನು ೩೨

ಊಟಮಾಡಿ ಬಳಿಕ ಆ ಬಾಲಲಿಂಗಣ್ಣನನ್ನು ಕರೆ ಎನ್ನುವರು. ಅವನನ್ನು ಕರೆಯಲು ಪ್ರಾಣಹೋದ ಶರೀರ ಮಾತ್ರವಿರಲು ೩೦. ಅದನ್ನು ನೋಡಿ ವಿರಕ್ತರೆಲ್ಲರೊಡಗೂಡಿ ಕೊಂಡು ವೀರಣ್ಣೊಡೆಯರು ತಾವು ಮೊದಲೇ ಅವನಿಂದ ತೆಗೆದುಕೊಂಡಿದ್ದ ಲಿಂಗವನ್ನು ಆತನ ಅಂಗೈಯಿನ ಮೇಲಿರಿಸಲು ಅವನು ಕಣ್ಣನ್ನು ಬಿಡುವನು. ಅವನನ್ನು ಊಟ ಮಾಡಲು ಏಳೆನ್ನಲು ನಾನು ನಿಮ್ಮೊಡನೆ ಆಗಲೇ ಊಟ ಮಾಡಿದೆನೆನ್ನುವನು. ಅದನ್ನು ಕೇಳಿ ವೀರಣ್ಣೊಡೆಯರು ನೀನು ಹೇಗೆ ಊಟ ಮಾಡಿದೆ ಎನ್ನಲು ಬಾಲ ಲಿಂಗಣ್ಣನು ಅವರು ಊಟ ಮಾಡಿದ ಪದಾರ್ಥಗಳ ಗುರುತುಗಳನ್ನೆಲ್ಲ ಹೇಳುವನು. ೩೧. ಆ ಮಾತನ್ನು ಕೇಳಿ ವೀರಣ್ಣೊಡೆಯರು ಅತಿಯಾದ ಆನಂದದಿಂದ ಪ್ರಾಣಲಿಂಗ ಸಂಧಾನಿ ನೀನು ಎಂದು ಬಾಲಲಿಂಗಣ್ಣನನ್ನು ಹಿಡಿದೆತ್ತಿಕೊಂಡು ಸ್ವಾನುಭಾವದಿಂದ ಕೊಂಡಾಡುತ್ತಿರಲು ಅದನ್ನು ತಿಳಿದು ನಾಗಿದೇವನು ಅವರನ್ನು ಅನುಮಾನವಿಲ್ಲದೆ ನೋಡಿ ಬಯಲಾಗಿಸುವನು, ಎಲೆ ಸಿದ್ಧರಾಮ ಕೇಳು ಎಂದನು. ೩೨. ತನ್ನ ಕಾಲನ್ನು ಹಗ್ಗದಿಂದ ಸುತ್ತಿ ಅದಕ್ಕೆ ಲಿಂಗವನ್ನು ಕಟ್ಟಿಕೊಂಡು ಓಡಾಡುತ್ತಿದ್ದ ವಿರಕ್ತನೊಬ್ಬನು ಒಂದು ದಿನ ಮಲಗಿರುವ ಸಮಯದಲ್ಲಿ ಪ್ರೌಢರಾಯನು ಅದನ್ನು ನೋಡಿ ಆ ಲಿಂಗ ವನ್ನು ತೆಗೆಸುವನು. ಆಗ ಆ ವಿರಕ್ತನ ಪ್ರಾಣ ಹೋಗಿ ಬರಿಯ ದೇಹವಿರುವುದನ್ನು ನೋಡಿ ರಾಜನು ಹಗ್ಗಕ್ಕೆ ಲಿಂಗವನ್ನು ಮತ್ತೆ ಕಟ್ಟಿಸುವನು. ಆಗ ಅವನು ಕಣ್ಣನ್ನು

CC-0. Jangamwadi Math Collection. Digitized by eGangotri

ಬತ್ತಲೇಶ್ವರನೆಂಬ ಶಿವಯೋಗಿ ಗುಹೆಯಲ್ಲಿ
ಬತ್ತಿದ ಶರೀರದಿಂದಿರೆ ನೃಪತಿ ನೋಡುತ್ತೆ
ವೃತ್ತಕುಚೆ ನೀನೀತನಂ ಒಲಿಸಲಾಪೆಯಾ ಎಂದೊಡಾ ಪದ್ಮಾವತಿ
ಚಿತ್ತೈಸು ಜೀಯ ನಾನೀತನಿಂ ಪುತ್ರನಂ
ಪೆತ್ತು ನಿನ್ನಯ ಬಳಿಗೆ ಕರೆತರುವೆನೆಂದೊಡನೆ
ಬಿತ್ತರದೊಳಾ ಯತಿಯನೊಲಿಸಿಕೊಂಡೊರ್ವ ಮಗನಂ ಪಡೆವಳುತ್ಸವದೊಳು ೩೩

ಇರುತಲೊಂದಿನ ವಿರೂಪಾಕ್ಷಲಿಂಗನ ತೇರ
ಪರುಸೆಗೆಂದಾಗಳಾ ಪದ್ಮಾವತಿಯೆ ತನ್ನ
ಪುರುಷನಂ ಕೂಡಿಕೊಂಡೈತಂದು ಮಗನನಾತನ ಕೆಯ್ಗೆ ಕೊಟ್ಟು ಬಳಿಕ
ಧರಣಿಪತಿ ನೋಡೀತ ಬತ್ತಲೇಶ್ವರನೆಂದು
ಕರವೆತ್ತಿ ತೋರಲಿವರರಿದರಿಲ್ಲಿನ್ನು ನಾ
ವಿರಬಾರದೆನುತಲಾ ಶಿಶುವ ಮೇಲಕೆ ಹಾಯ್ಕಿ ತಾನೊಡನೆ ಬಯಲಪ್ಪನು ೩೪

ಪರಮಗುರು ಬಸವೇಶನಧಿಕತರವಾದದಿಂ
ದಿರದೆ ಶಾರದೆಯ ಪೀಠವನೇರಿ ಗೆಲವಿನಿಂ
ಮರಳಿಬಂದಾ ಪ್ರೌಢನರಮನೆಯೊಳಿರಲೊರ್ವಯೋಗಿ ಖೇಚರಪವನದೆ
ಇರಲರಸನತಿಚೋದ್ಯದಿಂ ನೋಡುತಿರಲರಿದು
ಗುರುಬಸವನವನಿಗಿಂ ಮೇಲಕ್ಕೆ ಪೋಗಿ ಖೇ
ಚರದಲ್ಲಿ ಸಕಲರಾಗಂಗಳಂ ಪಾಡಿ ಬಳಿಕಿರದೆ ನಿರವಯಮಪ್ಪನು ೩೫

ತೆರೆದು ಇನ್ನು ಉಳಿಯಬಾರದು. ಇವನು ನನ್ನ ರಹಸ್ಯವನ್ನು ತಿಳಿದನು ಎನ್ನುತ್ತ ಆ ವಿರಕ್ತನು ಬಯಲಾಗುವನು, ಎಲೆ ಸಿದ್ಧರಾಮ ಕೇಳು ಎಂದನು. ೩೩. ಬತ್ತಲೇಶ್ವರನೆನ್ನುವ ಶಿವಯೋಗಿ ಗುಹೆಯಲ್ಲಿ ಒಣಗಿ ಕೃಶವಾದ ಶರೀರದಿಂದ ವಾಸವಾಗಿರುವುದನ್ನು ನೋಡಿ ರಾಜನು ಪದ್ಮಾವತಿ ಎಂಬ ಪ್ರಾಯದ ವೇಶ್ಯೆಯೊಬ್ಬಳನ್ನು ಕುರಿತು ನೀನೀತನನ್ನು ಒಲಿಸಿಕೊಳ್ಳಲಾರೆಯೊ ? ಎಂದು ಕೇಳಲು, ಆಕೆಯು ಕೇಳಯ್ಯಾ ದೊರೆಯೆ, ನಾನು ಈತನಿಂದ ಮಗನನ್ನು ಪಡೆದು ನಿನ್ನ ಬಳಿಗೆ ಕರೆತರುತ್ತೇನೆ ಎಂದು ಹೇಳಿ ಆ ಯತಿಯನ್ನು ಒಲಿಸಿಕೊಂಡು ಒಬ್ಬ ಮಗನನ್ನು ಸಂಭ್ರಮದಿಂದ ಪಡೆಯುತ್ತಾಳೆ. ೩೪. ಹೀಗಿರುವಾಗ ಒಂದು ದಿನ ವಿರೂಪಾಕ್ಷಲಿಂಗನ ರಥೋತ್ಸವಕ್ಕೆ ಎಂದು ಆ ಪದ್ಮಾವತಿಯು ತನ್ನ ಗಂಡನನ್ನು ಕೂಡಿಕೊಂಡು ಬಂದು ಮಗನನ್ನು ಅವನ ಕೈಗೆ ಕೊಟ್ಟು ಅನಂತರ ರಾಜನೇ, ನೋಡು, ಈತ ಬತ್ತಲೇಶ್ವರ ಎಂದು ಕೈಯೆತ್ತಿ ತೋರಿಸಲು ಇವರು ನನ್ನ ರಹಸ್ಯ ತಿಳಿದುಕೊಂಡರು. ಇನ್ನು ನಾವಿಲ್ಲಿ ಇರಬಾರದು ಎಂದು ಆ ಮಗವನ್ನು ಮೇಲಕ್ಕೆ ಎಸೆದು ತಾನು ಕೂಡಲೇ ಬಯಲಾಗುವನು. ೩೫. ಶ್ರೇಷ್ಠ ಗುರುವಾದ ಬಸವೇಶನು ದೊಡ್ಡ ವಾದದಲ್ಲಿ ಗೆದ್ದು ಅಲ್ಲಿನ ಶಾರದೆಯ ಪೀಠವನ್ನು ಏರಿ ಹಿಂದಿರುಗಿ ಬಂದು ಪ್ರೌಢದೇವನ ಅರಮನೆಯಲ್ಲಿರಲು ಒಬ್ಬ ಯೋಗಿಯು ಆಕಾಶ ಸಂಚಾರಿಯಾಗಿ ಕಾಣಿಸಲು ರಾಜನು ಆಶ್ಚರ್ಯದಿಂದ ನೋಡುತ್ತಿರುವನು. ಅದನ್ನು

CC-0. Jangamwadi Math Collection. Digitized by eGangotri

ಆಲಿಸಿನ್ನೆಲೆ ಸಿದ್ಧರಾಮೇಶ ನಿರ್ವಾಣಿ
ಚೋಳೇಶನತಿಪವಾಡಂಗಳಂ ಮೆರೆವುತಿರು
ತಾಲದಮರನ ಬಿಳಲ ಪಿಡಿಕೊಂಡು ಶಿವಯೋಗನಿಜಸಮಾಧಿಯಲಿ ನಿಂದು
ಲೀಲೆಯಿಂದಿರಲಾಗಲಲ್ಲಿರ್ಪ ಭಕ್ತಜನ
ಜಾಲಮಿಾತಂ ತೀರ್ದನೆಂದು ತೆಗೆಯಲ್ಕಿರದೆ
ಪೇಳಲೇನವರ ಕೆಯ್ಯೊಳಗೆ ನಿರವಯುವಪ್ಪನೆಲ್ಲರುಂ ಚೋದ್ಯಮೆನಲು ೩೬

ಮರುಳನಂದದೆ ಮಕ್ಕಳೊಡನೆ ಪರಪಟ್ಟಿ ತಾ
ನಿರ್ದದಾಡುತಿರಲರಸನೈತರುತೆ ನೋಡೀತ
ಪರಮಶಿವಯೋಗಿಯಹನೆಂದು ನಿಶ್ಚಯಿಸಿ ಕರೆಯೆಂದೊಡಿವನರಿದನೆನುತೆ
ಇರದಾಗ ಬಯಲಪ್ಪನಾತ ಮೊದಲಾಗಿ ಪರಿ
ಪರಿಯಲತಿಮರುಳರಂದದೊಳಿರ್ಪ ನೂರೊಂದು
ವಿರತರೆಲ್ಲರ್ ನಿರಾಕಾರಮಂ ತಳೆವರೆಲೆ ರಾಮೇಶ ಕೇಳೆಂದನು ೩೭

ಎಲೆ ರಾಮು ಕೇಳಿನ್ನು ಸಕಲಾಗಮಂಗಳ್ಗೆ
ನೆಲೆಯೆನಿಸಿ ಪ್ರೌಢನಿಂ ಪೂಜೆಯಂ ಕೊಂಡು ಷ
ಟ್ಸ್ಥಲಮಾರ್ಗಮಂ ಸಕಲಶಿವಭಕ್ತಸಂತತಿಗೆ ಕರತಳಾಮಳಕವಾಗಿ
ತಿಳುವೊಲನುಭವಸೂತ್ರವಾದಿ ಶಾಸ್ತ್ರಂಗಳಂ
ಗೆಲವಿನಿಂ ಪೇಳ್ದು ನಿಜಶಿವಸಮಾಧಿಯಲಿ ಮಿಗೆ
ನಲವಿನಿಂದಲ್ಲಿ ಮಗ್ಗೆಯ ಮಾಯಿದೇವಪ್ರಭುವರನಿರದೆ ಮುಕ್ತನಹನು ೩೮

ತಿಳಿದು ಗುರುಬಸವನು ಅವನಿಗಿಂತ ಮೇಲಕ್ಕೆ ಹೋಗಿ ಆಕಾಶದಲ್ಲಿ ಎಲ್ಲ ರಾಗಗಳನ್ನು ಹಾಡಿ ಅನಂತರ ಬಯಲಾಗುವನು. ೩೬. ಇನ್ನು ಕೇಳಯ್ಯ ಸಿದ್ಧರಾಮು, ನಿರ್ವಾಣಿ ಚೋಳೇಶನು ಅನೇಕ ಅದ್ಭುತ ಪವಾಡಗಳನ್ನು ತೋರಿಸುತ್ತ ಆಲದಮರದ ಬಿಳಲನ್ನು ಹಿಡಿದುಕೊಂಡು ಶಿವಯೋಗ ಸಮಾಧಿಯಲ್ಲಿ ನಿಂತು ವಿನೋದದಿಂದಿರಲು ಅಲ್ಲಿರುವ ಭಕ್ತರ ಸಮೂಹ ಈತನು ಸತ್ತುಹೋದನೆಂದು ಅಲ್ಲಿಂದ ತೆಗೆಯುವರು. ಏನು ಹೇಳಲಿ ? ಅವರೆಲ್ಲರೂ ಆಶ್ಚರ್ಯ ಎನ್ನುವಂತೆ ಆವನು ಅವರ ಕೈಯಲ್ಲಿ ಇದ್ದಂತೆಯೇ ಬಯಲಾಗುವನು. ೩೭. ಮತ್ತೊಬ್ಬ ಪರಪಟ್ಟಿ ಎಂಬ ವಿರಕ್ತನು ಹುಚ್ಚನಂತೆ ಮಕ್ಕಳೊಡನೆ ಕೂಡಿ ಆಡುತ್ತಿರಲು ರಾಜನು ಬಂದು ಅವನನ್ನು ನೋಡಿ ಈತನು ಪರಮಶಿವಯೋಗಿಯೆಂದು ನಿಶ್ಚಯಿಸಿ ಆತನನ್ನು ಕರೆದುತಾ ಎಂದು ಅಜ್ಞಾಪಿಸಲು ತನ್ನ ರಹಸ್ಯವು ಬಯಲಾಯಿತೆಂದು ಕೂಡಲೇ ಆತನು ಬಯಲಾಗುವನು. ಆತನೇ ಮೊದಲಾಗಿ ನಾನಾ ರೀತಿಯಲ್ಲಿ ಹುಚ್ಚರಂತಿರುವ ನೂರೊಂದು ಜನ ವಿರಕ್ತರು ಎಲ್ಲರೂ ಬಯಲಾಗುವರು, ಎಲೆ ಸಿದ್ಧರಾಮು ಕೇಳು ಎಂದನು. ೩೮. ಎಲೆ ಸಿದ್ಧರಾಮು ಇನ್ನು ಮುಂದೆ ಕೇಳು, ಎಲ್ಲ ಆಗಮಗಳಿಗೂ ನೆಲೆಬೀಡು ಎನಿಸಿಕೊಂಡು ಪ್ರೌಢದೇವರಾಯನಿಂದ ಪೂಜೆಯನ್ನು ಮಾಡಿಸಿಕೊಂಡು ಸಕಲ ಶಿವಭಕ್ತರ ಸಮೂಹಗಳಿಗೂ ಸುಲಭವಾಗಿ ತಿಳಿಯುವಂತೆ ಷಟ್ಸ್ಥಲಮಾರ್ಗವನ್ನು, ಅನುಭವಸೂತ್ರ ಮೊದಲಾದ ಶಾಸ್ತ್ರಗಳನ್ನು

CC-0. Jangamwadi Math Collection. Digitized by eGangotri

ಎಲೆ ರಾಮ ಕೇಳ್ಬುದಾ ಪ್ರೌಢದೇವೇಂದ್ರನಿರು
ತಳಿವನವನಂಶದೆ ವಿರೂಪಾಕ್ಷರಾಯನಂ
ದಿಳೆಯನಾಳುತ್ತಮಿರಲವನನೆಬ್ಬಟ್ಟಿ ನರಸಣನಾಯ್ಕನಾ ನಗರಿಯ
ಗೆಲವಿನಿಂ ತೆಗೆದುಕೊಳಲವನ ಸುತರಾಗ ಭೂ
ತಳವನೊಲಿದಾಳ್ವರೈವತ್ತೊಂದು ವರುಷವುವ
ತಿಳಿವುದಾ ಪಟ್ಟಕಚ್ಯುತನೆ ಕಡೆ ಬಳಿಕಲವರಳಿಯಂದಿರೊಲಿದಾಳ್ವರು ೩೯

ಅಲಿಸಾ ಪ್ರೌಢರಾಯಂ ಪೋದ ಕೆಲದಿನದ
ಮೇಲಿರದನಾಚಾರವೇ ಪೆರ್ಚಿ ಧರೆಯೊಳಗೆ
ಮೇಲಾದ ವೀರಶೈವಾಚಾರವಡಗಿ ಪರವಾದಿಗಳೆ ಘನವಾಗಲು
ಕೈಲಾಸಕೈದಿ ನಾರದನಾಗ ಪರಮೇಶ
ನೋಲಗಂಗೊಟ್ಟಿರ್ಪ ಸಮಯದೊಳ್ ಕಂಡು ಸ
ಲ್ಲೀಲೆಯಿಂದೆರಗಿ ಮಗುಳ್ದೆದ್ದು ಬಿನ್ನವಿಸುವಂ ಭಯಭರಿತಭಕ್ತಿಯಿಂದೆ ೪೦

ಮಾರಾರಿ ಚಿತ್ತೈಸು ಪಿಂತೆ ಧರೆಯೊಳಗನಾ
ಚಾರವೇ ಪೆರ್ಚಿತೆನೆ ನಂದಿಮೊದಲಾದರಂ
ವೀರಶೈವಾಚಾರವಂ ಪ್ರತಿಷ್ಠಿಪುದೆಂದು ಕಳುಹಿದಿರಿ ಕೂಡೆ ನೀವು
ಓರಂತೆ ರಾಕ್ಷಸಶ್ವೇತಾಂಬರಂಗದೇ
ಳ್ನೂರುಯೆಪ್ಪತ್ತುವರುಷಮುಮವನ ಸಂತತಿಯ
ಧಾರುಣಿಯನಾಳೆಂದು ಕಳುಹಿದಿರಿ ಕಳುಹಲಾ ಬಸವಾದಿ ಶರಣರೆಲ್ಲ ೪೧

ಸಂತೋಷದಿಂದ ಹೇಳಿ, ಶಿವಸಮಾಧಿಯಲ್ಲಿ ನಿಂತು ಆನಂದದಿಂದ ಮಗ್ನೆಯ ಮಾಯಿ ದೇವಪ್ರಭುವು ಮುಕ್ತನಾಗುತ್ತಾನೆ. ೩೯. ಎಲೆ ರಾಮ ಕೇಳು, ಆ ಪ್ರೌಢ ದೇವೇಂದ್ರನು ಸಾಯಲು ಅವನ ವಂಶೋದ್ಭವನಾದ ವಿರೂಪಾಕ್ಷರಾಯನು ರಾಜ್ಯಭಾರ ಮಾಡುತ್ತಿರುವಾಗ ಅವನನ್ನು ಸೋಲಿಸಿ ನರಸಣ್ಣನಾಯಕನು ಆ ನಗರವನ್ನು ಗೆದ್ದು ಆಕ್ರಮಿಸಿಕೊಳ್ಳಲು ಅವನ ಮಕ್ಕಳು ಆ ರಾಜ್ಯವನ್ನು ಐವತ್ತೊಂದು ವರ್ಷದವರೆಗೆ ಆಳುವರು. ಆ ಪಟ್ಟಣದಲ್ಲಿ ಅಚ್ಯುತರಾಯನೇ ಕೊನೆಯವನು. ಅನಂತರ ಅವನ ಅಳಿಯಂದಿರು ರಾಜ್ಯಭಾರ ಮಾಡುವರು, ಇದನ್ನು ತಿಳಿ. ೪೦. ಕೇಳು, ಆ ಪ್ರೌಢ ದೇವರಾಯನು ಆಳಿದ ಕೆಲವು ದಿನಗಳ ನಂತರ ಅನಾಚಾರವು ಹೆಚ್ಚಿ ಭೂಮಿಯಲ್ಲಿ ಉನ್ನತವಾದ ವೀರಶೈವಾಚಾರವು ನಶಿಸಿ ಅನ್ಯಮತೀಯರು ಅಭಿವೃದ್ಧಿಗೆ ಬರಲು ಆಗ ನಾರದನು ಕೈಲಾಸಕ್ಕೆ ಹೋಗಿ ಪರಮೇಶ್ವರನು ಓಲಗದಲ್ಲಿ ಇರುವ ಸಮಯ ನೋಡಿ ಸಂತೋಷದಿಂದ ಅವನ ಪಾದಕ್ಕೆ ನಮಸ್ಕರಿಸಿ ಎದ್ದು ನಿಂತು ಭಯಭರಿತ ಭಕ್ತಿಯಿಂದ ಬಿನ್ನವಿಸುವನು. ೪೧. ಮಾರಾರಿ ಶಿವನೇ ಕೇಳು, ಹಿಂದೆ ಭೂಮಿಯಲ್ಲಿ ಅನಾಚಾರವೇ ಹೆಚ್ಚಾಯಿತೆಂದು ಹೇಳಲು ಕೂಡಲೇ ನೀವು ನಂದಿ ಮೊದಲಾದವರನ್ನು ವೀರಶೈವಾ ಚಾರವನ್ನು ಪ್ರತಿಷ್ಠಿಸಿರಿ ಎಂದು ಹೇಳಿ ಕಳಿಸಿಕೊಟ್ಟಿರಿ. ಅದೇ ರೀತಿ ರಾಕ್ಷಸ ಶ್ವೇತಾಂಬರ ನನ್ನು ಅವನ ಸಂತತಿಯೊಡಗೂಡಿ, ಏಳುನೂರ ಎಪ್ಪತ್ತು ವರ್ಷದವರೆಗೂ

CC-0. Jangamwadi Math Collection. Digitized by eGangotri

ಹರನೆ ಚಿತ್ತೈಪುದೇಳ್ನೂರು ಮೇಲೆಪ್ಪತ್ತು
ವರುಷಪರಿಯಂತರಂ ಬರಲೊಲ್ಲೆವೆಂದವರ್
ನಿರವಯುವನೈದಿದರ್ ಧರೆಯೊಳಗೆ ಮೊದಲಂತನಾಚಾರವೇ ಪೆರ್ಚಲು
ಸುರಪನ ನಿಮಿತ್ತದಿಂದಿಳೆಯೊಳಗೆ ನೂರೊಂದು
ವರಗಣೇಶ್ವರರುದಿಸಿ ಜಂಗಮಸ್ಥಲವಾಂತು
ಪರಮಷಟ್ಸ್ಥಲವನುದ್ಧರಿಸಿ ಬಳಿಕವರಿರದೆ ನಿರವಯುವನೈದಲೀಗ ೪೨

ಧರೆಯೊಳಗೆ ವೀರಶೈವಾಚಾರವಡಗಿತ್ತು
ಕರುಣದಿಂ ನೀವೆ ಚಿತ್ತೈಸಿ ಷಟ್ಸ್ಥಲವನು
ದ್ಧರಿಸೆಂದು ನಾರದಂ ಬಿನ್ನವಿಸಲೀಶಂ ನಿರಂಜನಗಣೇಶನೊಡನೆ
ವರಗಣೇಶ್ವರರನೇಳ್ನೂರ್ವರಂ ಕೂಡಿಕೊಂ
ಡಿರದೆ ಭೂಮಿಯೊಳುದಿಸಿ ಜಂಗಮಸ್ಥಲವಾಂತು
ಪರಮಷಟ್ಸ್ಥಲವನುದ್ಧರಿಸೆಂದು ಕಳುಹಲವರೊಡಗೂಡಿ ಭೂಮಿಗಿಳಿದು ೪೩

ಪರಮಗೋಸಲಚೆನ್ನಬಸವೇಶ್ವರನ ಹಸ್ತ
ಸರಸಿರುಹದಿಂದಾ ನಿರಂಜನ ಗಣೇಶ್ವರಂ
ಹರುಷದಿಂದೊಗೆದು ಸಿದ್ಧೇಶನಾಮವನಾಂತು ಕಗ್ಗರೆಯ ತೋಂಟಕೈದಿ
ಇರದೆ ನಂಬ್ಯಣ್ಣನೆಂಬಾತನತಿಭಕ್ತಿಯಿಂ
ಶರಣೆಂದು ಭಿಕ್ಷಕ್ಕೆ ಬಿನ್ನವಿಸಿಕೊಂಡೀಗ
ತಿರುಗಿಬಂದಾನೆ ಕರೆಕೊಂಡು ಪೋದಪೆನೆಂದು ಕಗ್ಗರೆಗೆ ಪೋಗಲಾಗ ೪೪

ವಾಳೆಂದು ಕಳಿಸಿದಿರಿ. ಈ ರೀತಿ ಕಳಿಸಲು ಆ ಬಸವ ಮೊದಲಾದ ಶರಣರೆಲ್ಲ ೪೨. ಶಿವನೇ ಕೇಳು, ಏಳುನೂರ ಎಪ್ಪತ್ತೈದು ವರ್ಷದವರೆಗೆ ಬರುವುದಿಲ್ಲವೆಂದು ಅವರು ಬಯಲಾದರು. ಭೂಮಿಯಲ್ಲಿ ಮೊದಲಿನಂತೆ ಅನಾಚಾರವೇ ಹೆಚ್ಚಾಗಲು ದೇವೇಂದ್ರನ ಕಾರಣದಿಂದ ಭೂಮಿಯಲ್ಲಿ ನೂರೊಂದು ಗಣೇಶ್ವರರು ಹುಟ್ಟಿ ಜಂಗಮಸ್ಥಳವನ್ನು ಸ್ವೀಕರಿಸಿ ಶ್ರೇಷ್ಠವಾದ ಷಟ್ಸ್ಥಲವನ್ನು ಉದ್ಧರಿಸಿ ಅನಂತರ ಅವರು ಬಯಲಾದರು. ಈಗ, ೪೩. ಭೂಮಿಯಲ್ಲಿ ವೀರಶೈವಾಚಾರ ಕುಂದಿತು. ಕರುಣೆಯಿಂದ ನೀವೇ ದಯಮಾಡಿ ಷಟ್ಸ್ಥಲವನ್ನು ಉದ್ಧರಿಸಿ ಎಂದು ನಾರದನು ಬಿನ್ನವಿಸಿಕೊಳ್ಳಲು ಈಶ್ವರನು ನಿರಂಜನ ಗಣೇಶನನ್ನು ಕುರಿತು, ಶ್ರೇಷ್ಠರಾದ ಏಳುನೂರು ಗಣೇಶ್ವರರನ್ನು ಕೂಡಿಕೊಂಡು ಭೂಮಿಯಲ್ಲಿ ಜನಿಸಿ ಜಂಗಮಸ್ಥಳವನ್ನು ಸ್ವೀಕರಿಸಿ ಶ್ರೇಷ್ಠವಾದ ಷಟ್ಸ್ಥಲವನ್ನು ಉದ್ಧರಿಸು ಎಂದು ಹೇಳಿ ಕಳಿಸಲು, ನಿರಂಜನನು ಅವರೊಡಗೂಡಿ ಭೂಮಿಯಲ್ಲಿ ಅವತರಿಸಿ, ೪೪. ಆ ನಿರಂಜನ ಗಣೇಶ್ವರನು ಶ್ರೇಷ್ಠನಾದ ಗೋಸಲ ಚೆನ್ನಬಸವೇಶ್ವರನ ಶಿಷ್ಯನಾಗಿ ಹುಟ್ಟಿ ಸಿದ್ಧೇಶನೆಂಬ ಹೆಸರನ್ನು ಹೊಂದಿ ಕಗ್ಗರೆಯ ತೋಟಕ್ಕೆ ಹೋಗಲು ನಂಬಿಯಣ್ಣನು ಅತಿಭಕ್ತಿಯಿಂದ ನಮಸ್ಕರಿಸಿ ಭಿಕ್ಷಕ್ಕೆ ತನ್ನ ಮನೆಗೆ ಬರಬೇಕೆಂದು ಬಿನ್ನವಿಸಿಕೊಂಡು ಮತ್ತೆ ಬಂದು ತಾನೇ ಕರೆದುಕೊಂಡು ಹೋಗುತ್ತೇನೆಂದು

CC-0. Jangamwadi Math Collection. Digitized by eGangotri

ಜಗಳದಿಂದೂರೊಡೆದು ಪೋಗಿ ಕೆಲದಿವಸಕ್ಕೆ
ಮಗುಳೆ ಬರ್ಪನ್ನೆಗಂ ತೋಂಟದೊಳಗೇನುಮಂ
ಬಗೆಯದೆ ಶಿವಧ್ಯಾನದಿಂದೆ ಪರವಶವನೈದಿರೆ ಗೆದಲೆ ಹುತ್ತವಿಕ್ಕೆ
ಜಗವೆಲ್ಲಮತಿಚೋದ್ಯದಿಂ ನೋಡಿ ಹುತ್ತಮಂ
ಬಗಿದು ಕಂಡಾಗ ತೋಂಟದ ಸಿದ್ಧಲಿಂಗನೆಂ
ದಗಣಿತಮಹಾಪುರುಷನೆಂದು ಪೂಜಿಸುವರೆಲೆ ರಾಮೇಶ ಕೇಳೆಂದನು ೪೫

ಅಲ್ಲಲ್ಲಿ ನಾನಾ ಪವಾಡಮಂ ಮೆರೆವುತಿರ
ಲಲ್ಲಲ್ಲಿ ಗಣನಾಥರುದಿಸಿ ಚರರೂಪಿನಿಂ
ದಲ್ಲಲ್ಲಿ ಪೂಜೆಗೊಳುತ್ತೈದಿ ತೋಂಟದ ಯತಿಯ ಸಾರಲತಿಪ್ರೀತಿಯಿಂದೆ
ಮೆಲ್ಲಮೆಲ್ಲನೆ ತೋಂಟದಾರ್ಯರಾ ವಿರತರೊಳ್
ಬಲ್ಲಬಲ್ಲರೊಳು ತತ್ವಾನುಭಾವಂಗಳಿಂ
ಸೊಲ್ಲುಸೊಲ್ಲಿಗೆ ಪರಮಷಟ್ಸ್ಥಲವನುಸಿರ್ವರಾ ವಿರತರಾರಾರೆಂದೆನೆ ೪೬

ಸಿದ್ಧಲಿಂಗೇಶ್ವರಂ ಕಂಬಳಾದೇವರಾ
ಸಿದ್ಧನಂಜೇಶ್ವರಂ ಚೆನ್ನದೇವರ್ ದೊಡ್ಡ
ಸಿದ್ಧಲಿಂಗೇಶ್ವರಂ ಕಂಕಣದ ದೇವರಾ ಲಂಬಕರ್ಣದ ದೇವರು
ಸಿದ್ಧಮಲ್ಲೇಶ್ವರಂ ಗುಮ್ಮಳಾಪುರದ ವರ
ಸಿದ್ಧಲಿಂಗೇಶ್ವರಂ ಯೆಡತೊರೆಯಪುರದ ಗುರು
ಸಿದ್ಧವೀರಣ್ಣೊಡೆಯರೆಸೆವ ಘನಲಿಂಗದೇವರ್ ಚಿಕ್ಕಮಲ್ಲೇಶನು ೪೭

ಹೇಳಿ ಕಗ್ಗೆರೆಗೆ ಹೋಗುವನು. ಆಗ ೪೫. ಜಗಳದ ಕಾರಣದಿಂದ ಊರು ಒಡೆದು ಹೋಗಿ ಕೆಲವು ದಿನಗಳ ನಂತರ ನಂಬಿಯು ಹಿಂದಕ್ಕೆ ಬರುವಷ್ಟರಲ್ಲಿ ತೋಟದಲ್ಲಿ ಸಿದ್ಧೇಶ್ವರನು ಏನನ್ನೂ ಆಲೋಚಿಸದೆ ಶಿವಧ್ಯಾನ ಪರವಶನಾಗಿರಲು ಗೆದ್ದಲು ಹತ್ತಿ ಹುತ್ತ ಕಟ್ಟುತ್ತದೆ. ಲೋಕವೆಲ್ಲ ಅತ್ಯಾಶ್ಚರ್ಯದಿಂದ ಇದನ್ನು ನೋಡಿ ಹುತ್ತವನ್ನು ಬಗೆದು ನೋಡಿ ಅವನನ್ನು ತೋಂಟದ ಸಿದ್ಧಲಿಂಗನೆಂದೂ ಮಹಾಪುರುಷನೆಂದೂ ಪೂಜಿಸಿದರು, ಎಲೆ ಸಿದ್ಧರಾಮೇಶ ಕೇಳು ಎಂದನು. ೪೬. ಅಲ್ಲಲ್ಲಿ ನಾನಾ ಪವಾಡಗಳನ್ನು ತೋರಿಸುತ್ತ, ಅಲ್ಲಲ್ಲಿ ಗಣೇಶ್ವರರು ಹುಟ್ಟಿ ಜಂಗಮರೂಪದಿಂದ ಅಲ್ಲಲ್ಲಿ ಪೂಜೆ ಹೊಂದುತ್ತ ತೋಟದ ಯತಿಯ ಬಳಿಗೆ ಬರಲು ಅತಿಪ್ರೀತಿಯಿಂದ ಮೆಲ್ಲಮೆಲ್ಲನೆ ತೋಂಟದಾರ್ಯರು ವಿರಕ್ತರಲ್ಲಿ, ತಿಳಿದವರಲ್ಲಿ ತತ್ತ್ವಾನುಭಾವಗಳಿಂದ ಮಾತು ಮಾತಿಗೆ ಶ್ರೇಷ್ಠ ಷಟ್ಸ್ಥಲವನ್ನು ಹೇಳುವರು. ಆ ವಿರಕ್ತರು ಯಾರೆಂದರೆ ೪೭. ಸಿದ್ಧಲಿಂಗೇಶ್ವರ, ಕಂಬಳಾದೇವ, ಸಿದ್ಧನಂಜೇಶ್ವರ, ಚೆನ್ನದೇವ, ದೊಡ್ಡ ಸಿದ್ಧಲಿಂಗೇಶ್ವರ, ಕಂಕಣದ ದೇವ, ಲಂಬಕರ್ಣದ ದೇವರು, ಸಿದ್ಧಮಲ್ಲೇಶ್ವರ, ಗುಮ್ಮಳಾಪುರದ ಶ್ರೇಷ್ಠ ಸಿದ್ಧಲಿಂಗೇಶ್ವರ, ಯೆಡತೊರೆಪಟ್ಟಣದ ಗುರುಸಿದ್ಧ ವೀರಣ್ಣೊಡೆಯರು

CC-0. Jangamwadi Math Collection. Digitized by eGangotri

ಮರುಳಸಿದ್ಧೇಶ್ವರಂ ಚಂದ್ರಶೇಖರನೆಸೆವ
ಸುರಗಿಯಾರ್ಯಂ ಶಾಂತಮಲ್ಲಿಕಾರ್ಜುನದೇವ
ರಿರದೆ ಬೆಡಗಿನ ಪರ್ವತೇಶ್ವರಂ ಪಟ್ಟಣದ ದೇವರೇದಾ ಜಗುನಿಯ
ಮರುಳದೇವರ್ ಮಳೆಯದೇವರಾ ಬತ್ತಲೆಯ
ಲಿರುವ ದೇವರ್ ಸಂಪಗೆಯ ರಾಚವಟ್ಟಿದೇ
ವರು ಸಪ್ಪಿಯಾರ್ಯನುಪ್ಪಿನಹಳ್ಳಿಯಾರ್ಯನೊಪ್ಪುವ ಶೀಲವಂತಾರ್ಯನು ೪೮

ಎಸೆವ ಕೊಡಗಿಯಹಳ್ಳಿಯಾರ್ಯನುಂ ಜೋಲಿಯಾ
ಬಸವೇಶ್ವರಂ ರಾಚವಟ್ಟಿ ಕೋರಿಯ ಸಿದ್ಧ
ಬಸವೇಶ್ವರಂ ಹಿರಣ್ಯಾರ್ಯನಾ ಶಿವಪೂಜೆಯಾರ್ಯನೆಂದೆನಿಪ ಚೋಳ
ಬಸವೇಶನುದು ಕಿತ್ತಾವರದೆ ನಿಂದು ರಾ
ಜಿಸುವ ಚೆನಮಲ್ಲೇಶ್ವರಾದಿ ಪರಿಪರಿಯಲ್ಲಿ
ಪೆಸರ್ವಡೆದ ವಿರತರೇಳ್ನೂರ್ವರಾ ತೋಂಟದ ಯತೀಶನು ಕೂಡಿರ್ಪರು ೪೯

ಇಂತಿವರ್ ಮೊದಲಾದ ವಿರತರೇಳ್ನೂರ್ವರುಂ
ಸಂತತಂಗೂಡಿ ಷಟ್ಸ್ಥಲಮಾರ್ಗಮುಂ ಧರೆಯೊ
ಳಂತರಿಸದಂತೆ ನೆಲೆಗೊಳಿಸುತ್ತೆ ಪೂಜೆಗೊಳುತಿರದೆ ನಿಜಮುಕ್ತರಹರು
ಸಂತಸದೆ ಹುಚ್ಚನಂಜೇಶ್ವರಂ ಬಳಿಕವರ
ಪಿಂತೆ ಬಲು ಹುಚ್ಚ ವಿರುಪಾಕ್ಷನುಂ ಶ್ರೀಗಿರಿಯ
ಪ್ರಾಂತದೊಳಗಿರ್ಪ ಮೋಹಿನಿಯ ಗಜಮುಂ ಪತ್ತಿ ನೋಡೆ ನಿರವಯವಪ್ಪರು ೫೦

ಪ್ರಖ್ಯಾತರಾದ ಘನಲಿಂಗದೇವರು, ಚಿಕ್ಕಮಲ್ಲೇಶನು, ೪೮. ಮರುಳ ಸಿದ್ಧೇಶ್ವರರು ಚಂದ್ರಶೇಖರ, ಸುರಗಿಯಾರ್ಯ, ಶಾಂತಮಲ್ಲಿಕಾರ್ಜುನದೇವ, ಬೆಡಗಿನ ಪರ್ವತೇಶ್ವರ, ಪಟ್ಟಣದ ದೇವರು, ಆ ಜಗುನಿಯ ಮರುಳದೇವರು, ಮಳೆಯದೇವರು, ಬತ್ತಲೆಯ ದೇವರು, ಸಂಪಗೆಯ ರಾಚವಟ್ಟಿದೇವರು, ಸಪ್ಪಿಯಾರ್ಯ, ಉಪ್ಪಿನ ಹಳ್ಳಿಯಾರ್ಯ, ಕಂಗೊಳಿಸುವ ಶೀಲವಂತಾರ್ಯ, ೪೯. ಖ್ಯಾತನಾದ ಕೊಡಗಿಯ ಹಳ್ಳಿಯಾರ್ಯ, ಜೋಲಿಯಾ ಬಸವೇಶ್ವರ, ರಾಚವಟ್ಟಿ, ಕೋರಿಯ ಸಿದ್ಧಬಸವೇಶ್ವರ, ಹಿರಣ್ಯಾರ್ಯ, ಶಿವಪೂಜೆಯಾರ್ಯ ಎಂದು ಹೆಸರಾದ ಚೋಳಬಸವೇಶ ಕಿತ್ತಾವರದಲ್ಲಿ ನೆಲಸಿ ಖ್ಯಾತ ನಾದ ಚೆನ್ನಮಲ್ಲೇಶ್ವರ ಮೊದಲಾದ ನಾನಾ ರೀತಿಯ ಹೆಸರನ್ನು ಹೊಂದಿದ ಖ್ಯಾತರಾದ ಏಳ್ನೂರು ಮಂದಿ ವಿರಕ್ತರು ಆ ತೋಂಟದ ಯತಿಯನ್ನು ಕೂಡಿರುತ್ತಾರೆ. ೫೦. ಈ ರೀತಿಯಲ್ಲಿ ಇವರೇ ಮೊದಲಾದ ಏಳ್ನೂರು ಮಂದಿ ವಿರಕ್ತರು ಸದಾಕಾಲ ಜೊತೆ ಯಲ್ಲಿದ್ದು ಷಟ್ಸ್ಥಲಮಾರ್ಗವು ಭೂಮಿಯಲ್ಲಿ ಅಳಿಸಿಹೋಗದಂತೆ ನೆಲೆಗೊಳಿಸುತ್ತ ಪೂಜೆ ಮಾಡಿಸಿಕೊಳ್ಳುತ್ತ ಮುಕ್ತರಾಗುತ್ತಾರೆ. ಹುಚ್ಚನಂಜೇಶ್ವರ, ಅನಂತರ ಅವರ ಹಿಂದೆ ಹುಚ್ಚ ವಿರೂಪಾಕ್ಷ ಇವರಿಬ್ಬರೂ ಶ್ರೀಗಿರಿಯ ಪ್ರಾಂತ್ಯದಲ್ಲಿ ಇರುವ

CC-0. Jangamwadi Math Collection. Digitized by eGangotri

ಮಾದಾಪುರದ ಮರುಳದೇವರೆಂಬುವರಧಿಕ
ವಾದದಿಂ ಸತ್ತ ಪ್ರಾಣಂಗಳಂ ಪಡೆದು ಸ
ನ್ಮೋದದಿಂ ಬಿತ್ತಿದರುದಿಂಗಳಿಗೆ ತೆಂಗು ಮೊದಲಾದ ಫಲಗಳನೆ ಪಡೆವರ್
ಮೇದಿನಿಗೆ ಪೊಸತೆನಿಸಿ ಹೊನ್ನಹಳ್ಳಿಯುಲಿರುತ
ನಾದಿಸಿದ್ಧರ ದೇವ ಸಿದ್ಧವೀರೇಶಂ ವಿ
ನೋದದಿಂ ನಾನಾ ಪವಾಡಂಗಳಂ ಮೆರೆದು ಬಳಿಕ ನಿಜಮುಕ್ತರಹರು ೫೧

ನಿಡುಮಾಮುಡಿಯ ಕರಿಯಬಸವೇಶನೈತರುತೆ
ನುಡಿದು ತೆಂಗಿನಮರನ ಭಿಕ್ಷಮಂ ಬೇಡಲತಿ
ಕಡುಬಾಗಿನಿಂದು ಫಲಗಳ ನೀಡಿ ಬಳಿಕಲಾ ಮರನೆಂದಿನಂತೆಸೆವುದು
ಬಿಡದೆ ಸುವ್ರತದ ಕರಡಿಯ ಹಾಲದೇವರಂ
ದೊಡನೆ ಸರವೆಯ ಸಿದ್ಧರಾಮೇಶನಾದಿಯಾ
ದೊಡೆಯರುಗಳುದಿಸಿ ನಾನಾ ಪವಾಡಂಗಳಂ ಮೆರೆದು ನಿಜಮುಕ್ತರಹರು ೫೨

ವೀರಶೈವಾಚಾರಷಟ್ಸ್ಥಲಬ್ರಹ್ಮ ಸ
ಚ್ಚಾರುಚರಮೂರ್ತಿ ಯತಿಕುಲತಿಲಕನೆಂದೆನಿಪ
ಕೋರಾನ್ನದಾರ್ಯನೆಡೆವಿಡದೆ ಘನಚರಕೆ ಮೃಷ್ಟಾನ್ನಮಂ ನೀಡಿಸುವನು
ಧಾರುಣಿಯೊಳೆಸೆವುತಿಹ ಬುಕ್ಕಸಾಗರದ ಘನ
ಚಾರಿತ್ರಮಹಿಮನಾ ಕರಿಯ ಸಿದ್ಧೇಶ್ವರನ
ವಾರಿಯಿಂ ಬಂದ ಜಂಗಮಕೆ ಮೃಷ್ಟಾನ್ನಮಂ ನೀಡಿಸುವನತಿಮುದದೊಳು ೫೩

ಮೋಹಿನಿಯ ಗಜವನ್ನು ಹತ್ತಿ ನೋಡಿ ಬಯಲಾಗುವರು. ೫೧. ಮಾದಾಪುರದ ಮರುಳದೇವರೆಂಬುವರು ವಾದ ಮಾಡಿ, ಸತ್ತವರನ್ನು ಬದುಕಿಸಿ, ಬಿತ್ತಿದ ಆರು ತಿಂಗಳಿನಲ್ಲಿಯೇ ತೆಂಗು ಮೊದಲಾದ ಫಲಗಳನ್ನು ಪಡೆಯುವರು. ಭೂಮಿಗೆ ಹೊಸತೆನ್ನುವ ಹೊನ್ನಹಳ್ಳಿಯಲ್ಲಿರುತ್ತ ಅನಾದಿಸಿದ್ಧರ ದೇವ ಸಿದ್ಧವೀರೇಶರು ವಿನೋದದಿಂದ ನಾನಾ ಪವಾಡಗಳನ್ನು ತೋರಿಸಿ ಅನಂತರ ಮುಕ್ತರಾಗುವರು. ೫೨. ನಿಡುಮಾಮಿಡಿಯ ಕರಿಯ ಬಸವೇಶನು ಬಂದು ತೆಂಗಿನಮರವನ್ನು ಮಾತನಾಡಿಸಿ ಭಿಕ್ಷವನ್ನು ಬೇಡಲು ಅದು ಬಹಳವಾಗಿ ಬಾಗಿ ನಿಂತು ಫಲಗಳನ್ನು ಕೊಟ್ಟು ಮತ್ತೆ ಮೊದಲಿನಂತೆಯೇ ನೆಟ್ಟಗೆ ನಿಲ್ಲುವುದು. ಒಳ್ಳೆಯ ವ್ರತಾಚಾರದ ಕರಡಿಯ ಹಾಲ ದೇವರು, ಅವರೊಡನೆ ಸರವೆಯ ಸಿದ್ಧರಾಮೇಶ ಮೊದಲಾದವರು ಹುಟ್ಟಿ ನಾನಾ ಪವಾಡಗಳನ್ನು ಮೆರೆದು ಮುಕ್ತರಾಗುತ್ತಾರೆ. ೫೩. ವೀರಶೈವಾಚಾರ ಷಟ್ಸ್ಥಲ ಬ್ರಹ್ಮ, ಸಚ್ಚಾರುಚರಮೂರ್ತಿ, ಯತಿಕುಲತಿಲಕ ಎಂದು ಹೆಸರಾದ ಕೋರಾನ್ನ ದಾರ್ಯನು ಎಡೆಬಿಡದೆ ಜಂಗಮರಿಗೆ ಮೃಷ್ಟಾನ್ನವನ್ನು ನೀಡಿಸುವನು. ಭೂಮಿಯಲ್ಲಿ ಪ್ರಖ್ಯಾತವಾದ ಬುಕ್ಕಸಾಗರದ ಘನಚಾರಿತ್ರ ಮಹಿಮನಾದ ಕರಿಯ ಸಿದ್ಧೇಶ್ವರನು ಸರತಿಯಿಂದ ಬಂದ ಜಂಗಮರಿಗೆ ಸಂತೋಷದಿಂದ ಮೃಷ್ಟಾನ್ನವನ್ನು ನೀಡಿಸುವನು.

CC-0. Jangamwadi Math Collection. Digitized by eGangotri

ನಾರಕಂಥೆಯದೇವರೆಸೆವ ಚೆಂಗಡಹಳ್ಳಿ
ವೀರಪ್ಪನಲ್ಲಿ ಮಾವಿನಹಳ್ಳಿಮಲ್ಲಪ್ಪ
ನೋರಂತೆ ಗ್ರಾಮದಾ ಸಂಗಮೇಶಂ ಗುಮ್ಮಳಾಪುರದೊಳಿಹ ಜಂಗುಳಿ
ವೀರಪ್ಪನುಂ ಸುಪ್ರಸಾದಿ ದೇವಮುಖ್ಯ
ಚಾರುಚರಮೂರ್ತಿಗಳೆ ಬಂದ ಜಂಗಮಕಿರವೆ
ವಾರಿಯಿಂ ದಾಸೋಹಮಂ ಮಾಳ್ಪರೆಲೆ ಸಿದ್ಧರಾಮೇಶ ಕೇಳೆಂದನು ೫೪

ಪರಮಜಂಗಮಕಿನ್ನು ದಾಸೋಹಮಂ ಮಾಳ್ಪ
ದೊರೆಗಳಂ ಪೇಳ್ವೆನಾ ನಂಜರಾಯಂ ಮುಂಪೆ
ನಿರುತದಿಂ ಕೆಂಜಸೋಮಣ್ಣನಾಯಕ ಯೆಳಂದೂರರಸು ಚೆನ್ನೊಡೆಯರು
ಬರಗಿರಿಯ ದೇವಿನಾಯಕನು ಬುಕ್ಕಣ್ಣೊಡೆಯ
ನಿರದಲ್ಲಿ ಸಿದ್ಧಮಲಿನಾಯಕಂ ಮತ್ತೆ ಶಿವ
ಶರಣನಾ ಸಂಕಣ್ಣನಾಯಕಂ ಜಂಬೂರದಾನಿವಾಸದ ದೊರೆಗಳು ೫೫

ಕೇತಸಾಗರದ ಚಿಕ್ಕಣ್ಣಸೆಟ್ಟಿಗಳು ವಿ
ಖ್ಯಾತಿಬಿಜ್ಜಾವರದ ಪ್ರಭುವೆ ಚಿಕ್ಕಣಗೌಡ
ಸಾತಿಶಯದಿಂದೆ ಸುಕುಟೂರ ತಮ್ಮಣಗೌಡನೆಸೆವ ತಗಡೂರ ಪ್ರಭುವು
ಪ್ರೀತಿಯಿಂ ತಳಕಾಡ ಚಂದ್ರಶೇಖರನುರುವ
ದಾತನಾ ಭೋಗವಾಡಿಯ ಲಿಂಗರಾಯನತಿ
ಭೂತಹಿತನುಡುವಂಕನಾಡ ಪ್ರಭು ಮೊದಲಾಗಿ ದಾಸೋಹಮಂ ಮಾಳ್ಪರು ೫೬

೫೪. ನಾರಕಂಥೆಯ ದೇವರು, ಚೆಂಗಡಹಳ್ಳಿ ವೀರಪ್ಪ, ಮಾವಿನಹಳ್ಳಿ ಮಲ್ಲಪ್ಪ, ಅದೇ ರೀತಿ ಗ್ರಾಮದ ಸಂಗಮೇಶ, ಗುಮ್ಮಳಾಪುರದ ಜಂಗುಳಿ ವೀರಪ್ಪ, ಸುಪ್ರಸಾದಿದೇವ ಮೊದಲಾದ ಶ್ರೇಷ್ಠ ಜಂಗಮಮೂರ್ತಿಗಳು ಬಂದ ಜಂಗಮರಿಗೆ ಸರತಿಯಿಂದ ದಾಸೋಹ ಮಾಡುವರು, ಎಲೆ ಸಿದ್ಧರಾಮ ಕೇಳು ಎಂದನು. ೫೫. ಶ್ರೇಷ್ಠರಾದ ಜಂಗಮರಿಗೆ, ದಾಸೋಹವನ್ನು ಮಾಡುವ ದೊರೆಗಳ ಹೆಸರನ್ನು ಹೇಳುತ್ತೇನೆ. ನಂಜರಾಯ, ಕೆಂಜ ಸೋಮಣ್ಣನಾಯಕ, ಯಳಂದೂರಿನ ದೊರೆ ಚೆನ್ನೊಡೆಯರು, ಬರಗಿರಿಯ ದೇವಿನಾಯಕ, ಬುಕ್ಕಣ್ಣೊಡೆಯ, ಸಿದ್ಧಮಲ್ಲಿನಾಯಕ, ಶಿವಶರಣ ಸಂಕಣ್ಣ ನಾಯಕ, ಜಂಬೂರದಾ ನಿವಾಸದ ದೊರೆಗಳು. ೫೬. ಕೇತಸಾಗರದ ಚಿಕ್ಕಣ್ಣಶೆಟ್ಟಿಗಳು, ಪ್ರಖ್ಯಾತವಾದ ಬಿಜ್ಜಾವರದ ಪ್ರಭುವಾದ ಚಿಕ್ಕಣಗೌಡ, ಸುಕುಟೂರ ತಮ್ಮಣಗೌಡ, ಖ್ಯಾತನಾದ ತಗಡೂರ ಪ್ರಭು, ಅಲ್ಲದೆ ತಲಕಾಡ ಚಂದ್ರಶೇಖರ, ಬಹಳ ದಾನಿ ಭೋಗವಾಡಿಯ ಲಿಂಗರಾಯ, ಪ್ರಾಣಿದಯಾಪರ ಉಡುವಂಕನಾಡಿನ ಪ್ರಭು

CC-0. Jangamwadi Math Collection. Digitized by eGangotri

ಜಂಗಮಕೆ ಬಿಡದೆ ದಾಸೋಹಮಂ ಮಾಳ್ಪ ನಿಜ
ಲಿಂಗೈಕ್ಯನೆಸೆವ ಸೋಲೂರ ಬಸವಪ್ಪನಾ
ಸಂಗಯ್ಯನುಂ ಮಹಂತಯ್ಯನುಂ ಸಂಡಿಗೆಯ ಸಿದ್ಧಪ್ಪನಿರದೆ ಮುದ್ದು
ಸಂಗಪ್ಪನಂದೂರ ಕೆರೆಯ ದಾಸೋಹದಾ
ಲಿಂಗಪ್ಪನಲ್ಲಿ ಮಲ್ಲಪ್ಪನಾ ಕಾಬಣದ
ಬಿಂಗಿಗಂಗಾಧರಂ ಕಳಲಿಯಾ ವೀರಪ್ಪನೆಸೆವ ಧೂಳಾಭಕ್ತನು ೫೭

ಪೊಸಹಳ್ಳಿಯಲ್ಲಿ ನಾಗಪ್ಪನುಂ ನೆರೆದಾತ
ಬಸವಪ್ಪನುಂ ಮೋಳಿಗಯ್ಯನುಂ ಬಿಡದೆ ರಾ
ಜಿಸುವ ಬಾಣಾವರದ ಸಿದ್ದಪ್ಪನುಂ ಶೀಲವಂತ ಸಿರಿಯಾಳಯ್ಯನು
ಜಸವಡೆದ ಹೋಳಿನಾ ಸಿದ್ದಪ್ಪನುಂ ಮತ್ತೆ
ಹೊಸತೆನಿಪ ದುರ್ಗದಾ ಕಲ್ಲಪ್ಪನುಂ ವಿರತ
ಬಸವಪ್ಪನುಂ ತೈಲದಲ್ಲಿ ಮರುಳಪ್ಪನುಂ ಮಾನಂಗಿಶಿಖರಪ್ಪನು ೫೮

ಬಿಟ್ಟಮುಂಡೆಯ ಪ್ರಭುವರಂ ಬಯಲಪ್ರಭುವರಂ
ನೆಟ್ಟನಾ ಕಳಲಿಯಾ ಕಂಚಿದೇವರ್ ಮಹಾ
ದಿಟ್ಟ ಕಾನಾಪುರದ ಮರುಳಸಿದ್ಧೇಶನುಪ್ಪಲಗುಡಿಯ ಸಂಗಮೇಶ
ಕೊಟ್ಟೂರ ಬಸವಲಿಂಗೇಶನಾನೆಯಗೊಂದಿ
ಬೆಟ್ಟದಲ್ಲಿಹ ಹುಚ್ಚದೇವರಾ ಬೆಳುಗಾವಿ
ಪಟ್ಟಣದೊಳಿಹ ಹುಚ್ಚಸಿದ್ಧರಾಮೇಶ ನಿರವಧಿಕಮಹಿಮೆಯ ಪುರುಷರು ೫೯

ನರಸಿಂಹನಂತದಳಿಯರ್ ಮೂವರುಂ ಪೋಗಿ
ತುರುಕರೊಳ್ ಕಾದಿ ಮಡಿಯಲ್ಕೆ ಹಿರಿಯವನ ತಲೆ
ನಿರುತದಿಂ ಕಾಶಿಯೊಳ್ ಪೂಜೆಗೊಂಬುದು ಬಳಿಕ್ಕುಳಿದವರೆ ತಮ್ಮ ಪುರದೆ

ಮೊದಲಾದವರು ದಾಸೋಹವನ್ನು ಮಾಡುವರು. ೫೭. ಜಂಗಮಕ್ಕೆ ದಾಸೋಹ ಮಾಡುವ ನಿಜಲಿಂಗೈಕ್ಯ ಸೋಲೂರ ಬಸವಪ್ಪ, ಸಂಗಯ್ಯ, ಮಹಂತಯ್ಯ, ಸಂಡಿಗೆಯ ಸಿದ್ದಪ್ಪ, ಮುದ್ದುಸಂಗಪ್ಪ, ಊರಕೆರೆಯ ದಾಸೋಹದ ಲಿಂಗಪ್ಪ, ಮಲ್ಲಪ್ಪ, ಕಾಬಣದ ಬಿಂಗಿ ಗಂಗಾಧರ, ಕಳಲಿಯ ವೀರಪ್ಪ, ಧೂಳಾಭಕ್ತ, ೫೮. ಹೊಸ ಹಳ್ಳಿಯ ನಾಗಪ್ಪ, ಮಹಾದಾನಿ ಬಸವಪ್ಪ, ಮೋಳಿಗಯ್ಯ, ಬಾಣಾವರದ ಸಿದ್ದಪ್ಪ, ಶೀಲವಂತ ಸಿರಿಯಾಳಯ್ಯ, ಖ್ಯಾತನಾದ ಹೋಳಿನ ಸಿದ್ದಪ್ಪ, ಹೊಸದುರ್ಗದ ಕಲ್ಲಪ್ಪ, ವಿರಕ್ತ ಬಸವಪ್ಪ, ತೈಲದ ಮರುಳಪ್ಪ, ಮಾನಂಗಿ ಶಿಖರಪ್ಪ ೫೯. ಬಿಟ್ಟಮುಂಡೆಯ ಪ್ರಭು, ಬಯಲಪ್ರಭು, ಕಳಲಿಯ ಕಂಚಿದೇವರು, ದಿಟ್ಟನಾದ ಕಾನಾಪುರದ ಮರುಳಸಿದ್ದೇಶ, ಉಪ್ಪಲಗುಡಿಯ ಸಂಗಮೇಶ, ಕೊಟ್ಟೂರ ಬಸವಲಿಂಗೇಶ, ಆನೆಗೊಂದಿ ಬೆಟ್ಟದಲ್ಲಿರುವ ಹುಚ್ಚದೇವರು, ಬೆಳುಗಾವಿ ಪಟ್ಟಣದ ಹುಚ್ಚ ಸಿದ್ಧರಾಮೇಶ ಅಧಿಕವಾದ ಮಹಿಮಾಪುರುಷರು. ೬೦. ನರಸಿಂಹರಾಜನ ಅಳಿಯಂದಿರು ಮೂರು ಜನವೂ ಹೋಗಿ ತುರುಕರೊಡನೆ ಯುದ್ಧಮಾಡಿ ಸಾಯಲು ಹಿರಿಯವನ ತಲೆ ಸದಾ ಕಾಶಿಯಲ್ಲಿ ಪೂಜೆ ಹೊಂದುತ್ತದೆ. ಬಳಿಕ

CC-0. Jangamwadi Math Collection. Digitized by eGangotri

ಇರದೋಡಿಪೋಗಲಾ ಪಟ್ಟಣಕೆ ಬೇಗದಿಂ
ತುರುಕರ್ಕೈತಂದು ಸೆರೆಗಳ ಪಿಡಿದು ಸೂರಾಡಿ
ಭರದಿಂದೆ ಸಕಲರಂ ಸಂಹರಿಪರೆಲೆ ಸಿದ್ಧರಾಮೇಶ ಕೇಳೆಂದನು ೬೦

ಎಲೆ ಸಿದ್ಧರಾಮೇಶ ಕೇಳಿನ್ನು ಹಂಪೆಯಾ
ನೆಲೆನೆಲೆಯ ಗೋಪುರವನಳಿದು ಮಾತಂಗದಿಂ
ದುಳುಕದಾ ವೀರೇಶನಂ ಕಿತ್ತು ವಿಷ್ಣು ಮೊದಲಾದ ಪ್ರತಿಮೆಗಳನೊಡೆದು
ಬಳಿಕಲ್ಲಿ ಸಕಲವಂ ಸಂಹರಿಸಿ ಕೆಲದಿನಂ
ಕಳಿದು ಬಳಿಕಲ್ಲಿಂದೆ ಸಂತಸದೆ ತಂತಮ್ಮ
ನೆಲೆಗಳ್ಗೆ ಪೋಗಲಾ ಪಟ್ಟಣದ ರಾಜ್ಯದೊಳಗೇನೆಂಬೆನದ್ಭುತವನು ೬೧

ಪಟ್ಟಣಂ ಕೆಟ್ಟು ತದ್ರಾಜ್ಯದೊಳಗೆಲ್ಲಿಯುಂ
ಹಟ್ಟಿ ಕೊಟ್ಟಿಗಳಾಗಿ ದೇಶದೊಳಗಲ್ಲಲ್ಲಿ
ಸೆಟ್ಟಿಸುಪ್ರಜೆಗಳಂ ಕಟ್ಟಿಕೊಂಡುಳ್ಳ ಧನವಂ ಕೊಂಡು ಬಾಧಿಸುವರು
ನೆಟ್ಟನೆ ಸುಜಂಗಮಂ ಭಕ್ತರಾಚಾರವಂ
ಬಿಟ್ಟು ಮನಬಂದಂತೆ ತಮತಮಗೆ ಭೂಮಿಯೊಳ್
ಕೆಟ್ಟು ಧರ್ಮವನು ವರ್ಜಿಸುವರೆಲೆ ಸಿದ್ಧರಾಮೇಶ ನೀಂ ಕೇಳೆಂದನು ೬೨

ಎಲೆ ರಾಮ ಕೇಳಿನ್ನು ದುರ್ಗಿ ಮಾರಿಯರೆ ಭೂ
ತಳದಲ್ಲಿ ನರಬೇಂಟೆಯಾಡುವರ್ ಮತ್ತವರೊ
ಳುಳಿವರಲ್ಲಲ್ಲಿ ಕುಲಕೊಬ್ಬೊಬ್ಬ ಸತ್ಯರೇ ಮಿಕ್ಕವರ್ ಲಯವಪ್ಪರು

ಉಳಿದವರು ತಮ್ಮ ಪಟ್ಟಣದಲ್ಲಿ ಇರದೆ ಓಡಿಹೋಗಲು ಆ ಪಟ್ಟಣಕ್ಕೆ ತುರುಕರು ಬೇಗನೆ ಬಂದು ಸಿಕ್ಕವರನ್ನು ಸೆರೆ ಹಿಡಿದು, ಸೂರೆ ಮಾಡಿ, ರಭಸದಿಂದ ಎಲ್ಲರನ್ನೂ ಸಂಹಾರ ಮಾಡುತ್ತಾರೆ, ಎಲೆ ಸಿದ್ಧರಾಮ ಕೇಳು ಎಂದನು. ೬೧. ಎಲೆ ಸಿದ್ಧರಾಮ ಇನ್ನು ಕೇಳು, ಹಂಪೆಯಲ್ಲಿ ಅಲ್ಲಲ್ಲಿರುವ ಗೋಪುರಗಳನ್ನು ಕೆಡವಿ ಆನೆಯಿಂದ ಹೆದರದ ವೀರೇಶನನ್ನು ಕಿತ್ತು, ವಿಷ್ಣು ಮೊದಲಾದ ಪ್ರತಿಮೆಗಳನ್ನು ಒಡೆದು ಅನಂತರ ಎಲ್ಲವನ್ನೂ ನಾಶಮಾಡಿ ಕೆಲವುದಿನ ಕಳೆದು ಅಲ್ಲಿಂಧ ಹೊರಟು ತಮ್ಮ ತಮ್ಮ ರಾಜ್ಯಗಳಿಗೆ ಹೋಗಲು ಆ ಪಟ್ಟಣದಲ್ಲಿ, ರಾಜ್ಯದಲ್ಲಿ ಆದ ಅದ್ಭುತವನ್ನು ಏನೆಂದು ಹೇಳಲಿ ? ೬೨. ಪಟ್ಟಣ ಪಾಳಾಗಿ, ಆ ರಾಜ್ಯದಲ್ಲಿ ಎಲ್ಲೆಲ್ಲಿಯೂ ಹಟ್ಟಿ–ಕೊಟ್ಟಿಗೆಗಳಾಗಿ, ದೇಶದಲ್ಲಿ ಅಲ್ಲಲ್ಲಿ ಬಲಶಾಲಿಗಳಾದ ಶೆಟ್ಟರು ಗುಂಪುಕಟ್ಟಿ, ಇದ್ದ ಹಣವನ್ನೆಲ್ಲ ದೋಚಿ ಹಿಂಸೆ ಮಾಡುವರು. ಉತ್ತಮರಾದ ಜಂಗಮರೆಲ್ಲ ಭಕ್ತಾಚಾರ ಬಿಟ್ಟು ತಮ್ಮ ಮನಸ್ಸಿಗೆ ಬಂದಂತೆ ಭೂಮಿಯಲ್ಲಿ ಕೆಟ್ಟು ಧರ್ಮಭ್ರಷ್ಟರಾಗುವರು, ಎಲೆ ಸಿದ್ಧರಾಮೇಶ ಕೇಳು ಎಂದನು. ೬೩. ಎಲೆ ರಾಮ ಇನ್ನು ಕೇಳು, ದುರ್ಗಿ–ಮಾರಿಯರು ಭೂಮಿಯಲ್ಲಿ ನರಬೇಟೆಯಾಡುವರು, ಮತ್ತೆ ಅವರಲ್ಲಿ ಕುಲಕ್ಕೊಬ್ಬರಂತೆ ಸತ್ಯವಂತರು ಉಳಿಯುವರು. ಉಳಿದವರು

CC-0. Jangamwadi Math Collection. Digitized by eGangotri

ಅಳಿದಳಿಯುನನುಜನಂದುಳಿದೋಡಿ ಪೋಗಿರ್ದು
ಬಳಿಕ ತುರುಕರ್ ಪೋಗೆ ತಾನಾಗಬಂದು ತ
ವ್ಮಿಳೆಯುನೊಲಿದಾಳ್ವನಾ ದೇಶದೊಳಗಲ್ಲಲ್ಲಿ ಕೊಟ್ಟಂಗಳಾಗಿರ್ಪುವು ೬೩

ಎಲೆ ಸಿದ್ಧರಾಮೇಶ ಕೇಳ್ವುದೊಲವಿಂ ಮುಂದೆ
ಕಲಿಯುಗದ ನಾಲ್ಕುಸಾವಿರದಾರುನೂರರಿಂ
ಬಳಿಕಲೆಂಭತ್ತುಮೂರನೆಯ ಸ್ವಭಾ೯ನುಸಂವತ್ಸರದ ಮಾಘ ಬಹುಳ
ಸಲೆ ಚತುರ್ದಶಿ ಸೋಮವಾರದಿಪ್ಪತ್ತೆಂಟು
ಗಳಿಗೆಯೊಳ್ ಕರ್ಣಾಟದೇಶವಂ ತಾನಂದು
ತಳುವದೈದುವನಿರದೆ ವೀರವಸವಂತಭೂಪಾಲನತಿಗೋಪ್ಯದಿಂದೆ ೬೪

ಎಸೆವ ಶಿವಭಕ್ತ ಕ್ಷತ್ರಿಯರಲ್ಲಿ ಜನಿಸಿ ರಾ
ಜಿಸುವೆಣ್ಣೆ ಕಾವೇರಿಮಧ್ಯದಲ್ಲಿರುತಿರ್ಪ
ಬಸವನಾಮಾಂಕಿತದ ಪಟ್ಟಣಕ್ಕೈದುವಂ ನಾವಾಗಲಾ ಸ್ಥಳದೊಳು
ಜಸವಡೆದ ವಿಪ್ರಜಾತಿಯುಲುದಿಸಿ ಪರಮಸಂ
ತಸದೆ ಷಟ್ಸ್ಥಲವನುದ್ಧರಿಸುವೆವು ಬಳಿಕಲೀ
ಬಸವಣ್ಣನಖಿಳಗಣಸಂಕುಲಂ ಸಹಿತಲ್ಲಿಗೈತರುವನುತ್ಸವದೊಳು ೬೫

ನರಸಿಂಹನಂಶದಳಿಯರ ಸುತರು ಪೆರ್ಚಿಯಾ
ತುರುಕಾಣ್ಯಕೈದಿ ಬಿದಿರೆಯ ಕೋಂಟೆಯುಂ ಕೆಡೆಪಿ
ಗುರುತಿನಿಂ ಮೆರೆವ ಮಧುರಸೆಗಳಂ ಮುರಿದಾಗ ಕಾಶಿಯಾ ಪರಿಯಂತರ

ನಾಶವಾಗುವರು. ಸತ್ತ ಅಳಿಯನ ತಮ್ಮನು ಆದಿನ ಜೀವಸಹಿತ ಓಡಿಹೋಗಿದ್ದವನು ತುರುಕರು ಹೋದನಂತರ ಹಿಂದಿರುಗಿ ಬಂದು ರಾಜ್ಯಭಾರ ಮಾಡುವನು. ಆ ದೇಶದಲ್ಲಿ ಅಲ್ಲಲ್ಲಿ ಪುಂಡಾಟ ನಡೆಯುವುದು. ೬೪. ಎಲೆ ಸಿದ್ಧರಾಮ ಪ್ರೀತಿಯಿಂದ ಕೇಳು, ಇನ್ನು ಮುಂದೆ ಕಲಿಯುಗದ ನಾಲ್ಕು ಸಾವಿರದಾರುನೂರ ಎಂಬತ್ತುಮೂರನೆಯ ಸ್ವಭಾ೯ನು ಸಂವತ್ಸರದ ಮಾಘ ಬಹುಳ ಚತುರ್ದಶಿ ಸೋಮವಾರದಂದು ಇಪ್ಪತ್ತೆಂಟು ಘಳಿಗೆಗೆ ಕರ್ಣಾಟಕ ದೇಶವನ್ನು ವೀರವಸವಂತ ಭೂಪಾಲನು ತಡಮಾಡದೆ ಗೋಪ್ಯವಾಗಿ ಬಂದು ಸೇರುತ್ತಾನೆ. ೬೫. ಖ್ಯಾತರಾದ ಶಿವಭಕ್ತ ಕ್ಷತ್ರಿಯರಲ್ಲಿ ಹುಟ್ಟಿ ಎಣ್ಣೆಹೊಳೆಗೂ-ಕಾವೇರಿಗೂ ಮಧ್ಯದಲ್ಲಿರುವ ಬಸವಾಪಟ್ಟಣಕ್ಕೆ ಹೋಗುವನು. ನಾವು ಆಗ ಆ ಸ್ಥಳದಲ್ಲಿ ಖ್ಯಾತವಾದ ಬ್ರಾಹ್ಮಣಜಾತಿಯಲ್ಲಿ ಹುಟ್ಟಿ ಪರಮ ಸಂತೋಷದಿಂದ ಷಟ್ಸ್ಥಲವನ್ನು ಉದ್ಧರಿಸುವೆವು. ಅನಂತರ ಈ ಬಸವಣ್ಣನು ಎಲ್ಲ ಗಣಸಮೂಹದೊಡನೆ ಅಲ್ಲಿಗೆ ಉತ್ಸಾಹದಿಂದ ಬರುವನು. ೬೬. ನರಸಿಂಹನ ವಂಶದ ಅಳಿಯಂದಿರ ಮಕ್ಕಳು ಬಲಶಾಲಿಗಳಾಗಿ ತುರುಗಾಣ್ಯಕ್ಕೆ ಹೋಗಿ ಬಿದಿರೆಯ ಕೋಟೆಯನ್ನು ಕೆಡವಿ ಅವರುಗಳ ಗುರುತಾದ ಗೋರಿ ಮೀನಾರಗಳನ್ನು ಮುರಿದು ಕಾಶಿಯವರೆಗೂ ಹರಡಿರುವ ತುರುಕರನ್ನು ಸಂಹಾರ

CC-0. Jangamwadi Math Collection. Digitized by eGangotri

ತುರುಕರಂ ಸಂಹರಿಸಲದ ಕೇಳ್ದು ಡಿಳ್ಳಿಯಾ
ಸುರಿತಾಳನಿರದೆ ತೆಲುಗರ ಮೇಲೆ ದಂಡೆತ್ತಿ
ತೆರಳುವಂ ರಾಮೇಶಪರಿಯಂತರಂ ಸಿದ್ಧರಾಮೇಶ ಕೇಳೆಂದನು ೬೬

ಹದಿನೆಂಟು ನೇಜಯುದ ಖಾನರುಂ ಸಹ ತಮ್ಮ
ಹದಿನೆಂಟುಲಕ್ಷ ಕುದುರೆಯು ಕೂಡಿಕೊಂಡಾಗ
ಮುದದಿಂದೆ ಸಕಲದೇಶಂಗಳಂ ಸುಡುತೆ ಸೇತುವೆಗೈದಿ ಕೂಡೆ ಮರಳಿ
ಕದಲುವಂ ಬೇಡರಿರಲ್ಲಲ್ಲಿ ಗಿಡಕೊಂದು
ಕುದುರೆಯುಂ ತೆಗೆತೆಗೆದು ಕಟ್ಟುತುಂ ಬಳಿಕಲಾ
ಸದಳಮಂ ಸುಲಿದು ಸೂರಾಡಿ ಸಂಹರಿಪರೆಲೆ ರಾಮೇಶ ಕೇಳೆಂದನು ೬೭

ಬಂದ ದಂಡಿನೊಳರ್ಧವಳಿಯಲವರದ ಕಂಡು
ಹಿಂದುವರನೆಲ್ಲರಂ ಸಂಹರಿಸುತಾಗಲೈ
ತಂದು ಪಾಳೆಯವನಾನೆಯುಗೊಂದಿಯಲ್ಲಿಳಿದು ಪರಮಸಂತೋಷದಿಂದೆ
ಮುಂದಿರ್ಪ ಬಾಲಿಯಾ ಭಂಡಾರವಂ ತೆಗೆಸಿ
ತಂದು ತದ್ಧನವ ರಾಸಿಯು ಮಾಡಿ ನನಗೆ ತನ
ಗೆಂದು ತಮ್ಮೊಳ್ ತಾವೆ ಕಡಿದಾಡಿ ಮಡಿವರೆಲೆ ರಾಮೇಶ ಕೇಳೆಂದನು ೬೮

ನರಸಿಂಹನವತಾರಮುಳಿವುದಾ ಕಾಲಕ್ಕೆ
ಪರಮೇಶನಿತ್ತ ವರವಂದಿಂಗೆ ಸರಿಯಾಗೆ
ತುರುಕರುಂ ತಮ್ಮೊಳಗೆ ತಾವೆ ಕಡಿದಾಡಿ ಹತಮಪ್ಪರಾ ಪಟ್ಟಣವನು

ಮಾಡಲು, ಅದನ್ನು ಕೇಳಿ ಡಿಲ್ಲಿಯ ಸುಲ್ತಾನನು ತೆಲುಗರ ಮೇಲೆ ದಂಡೆತ್ತಿ ರಾಮೇಶ್ವರ ಎಂಬಲ್ಲಿಯವರೆಗೂ ಹೋಗುವನು, ಸಿದ್ಧರಾಮ ಕೇಳು ಎಂದನು. ೬೭. ಹದಿನೆಂಟು ಮಂದಿ ಕೈಭರ್ಜಿಗಳ ಮುಸಲ್ಮಾನಖಾನರುಗಳೂ ತಮ್ಮ ಹದಿನೆಂಟು ಲಕ್ಷ ಕುದುರೆಗಳನ್ನು ಕೂಡಿಕೊಂಡು ಎಲ್ಲ ದೇಶಗಳನ್ನೂ ಸುಡುತ್ತ ರಾಮಸೇತುವೆಯವರೆಗೆ ಹೋಗಿ ಹಿಂದಿರುಗುತ್ತ ಬೇಡರೊಡನೆ ಯುದ್ಧ ಮಾಡಲು ಅವರು ಗಿಡಕ್ಕೊಂದರಂತೆ ಇವರ ಕುದುರೆಗಳನ್ನು ಕಟ್ಟಿ ಹಾಕಿ ಅನಂತರ ಆ ಸೈನ್ಯವನ್ನು ಸುಲಿಗೆ ಮಾಡಿ ಸಂಹಾರ ಮಾಡುತ್ತಾರೆ, ಎಲೆ ಸಿದ್ಧರಾಮ ಕೇಳು ಎಂದನು. ೬೮. ಬಂದ ಹದಿನೆಂಟು ಲಕ್ಷ ಕುದುರೆಗಳಲ್ಲಿ ಅರ್ಧ ನಾಶವಾಗಲು ಅದನ್ನು ನೋಡಿ ಹಿಂದುಗಳೆಲ್ಲರನ್ನೂ ಸಂಹರಿಸುತ್ತ ಬಂದು ಆನೆಯಗೊಂದಿಯಲ್ಲಿ ಪಾಳೆಯ ಹೂಡುತ್ತಾರೆ. ಸಂತೋಷದಿಂದ ಮುಂದಿದ್ದ ವಾಲಿಯ ಭಂಡಾರವನ್ನು ತೆಗೆಸಿ ತಂದು ಆ ಹಣವನ್ನು ರಾಶಿಹಾಕಿ ನನಗೆ ತನಗೆಂದು ತಮ್ಮಲ್ಲಿ ತಾವೇ ಕಡಿದಾಡಿ ಸಾಯುತ್ತಾರೆ, ಎಲೆ ರಾಮೇಶ ಕೇಳು ಎಂದನು. ೬೯. ಪರಮೇಶ್ವರನು ಕೊಟ್ಟ ವರವು ಆ ಕಾಲಕ್ಕೆ ಮುಗಿಯಲು ನರಸಿಂಹನ ಅವತಾರದ ಪ್ರಭಾವವು ಮುಗಿಯುತ್ತದೆ. ತುರುಕರು ತಮ್ಮಲ್ಲಿ ತಾವೇ ಹೊಡೆದಾಡಿ ಸಾಯುತ್ತಾರೆ. ಆ ಪಟ್ಟಣವನ್ನು ಕ್ರಮವಾಗಿ ಕಟ್ಟಿಸಿ

CC-0. Jangamwadi Math Collection. Digitized by eGangotri

ಪರಿವಿಡಿಯೊಳೊದಗಿ ಕಟ್ಟಿಸಿ ಬಳಿಕ್ಕಲ್ಲಿ ತಾ
ಪಿರುತೆ ಪಟ್ಟವನಾಗ ಬೇಡರರುದಿಂಗಳತಿ
ಹರುಷದಿಂದಾಳ್ವರಲೆ ರಾಮೇಶ ಕೇಳ್ವುದೊಲಿದಿತ್ತಲತಿ ಸಂಭ್ರಮದೊಳು ೧೯

ಬಸವನಾಮಾಂಕಿತದ ಪಟ್ಟಣದೊಳಾ ವೀರ
ವಸವಂತಗಾಗ ಪಟ್ಟವ ಕಟ್ಟಲಿರದೆ ರಾ
ಜಿಸುವ ವಿದ್ಯಾನಗರಿಗೈತಂದು ಬಾಲಿಯಾ ಭಂಡಾರದಾ ಧನವನು
ವಶವರ್ತಿಯಂ ಮಾಡಿಕೊಂಡು ಬಳಿಕಲ್ಲಿ ಸಂ
ತಸದೆ ತದ್ರಾಜ್ಯಮಂ ಪಾಲಿಸುತ್ತಿರುತಿರ್ದು
ಜಸವಡೆದ ಕಲ್ಯಾಣಪಟ್ಟಣವನಾಗ ಕಟ್ಟಿಸುವರಧಿಕೋತ್ಸವದೊಳು ೨೦

ತರತರದಗಳ್ ಕೋಂಟೆ ಕೊತ್ತಳಗಳಾಳ್ವೇರಿ
ಪರಿಪರಿಯ ಬಣ್ಣದಟ್ಟಳೆ ಕೇತನಂಗಳಿಂ
ಸುರುಚಿರದ ಶಶಿ ಸೂರ್ಯವೀಥಿಗಳ ಗಡಣದಿನಗಣ್ಯಸೌಧಂಗಳಿಂದೆ
ದೊರೆ ದೊರೆಗಳರಮನೆಯ ಸಾಲ್ಗಳಿಂದಲ್ಲಲ್ಲಿ
ಪರಿವಿಡಿಯ ಮಂತ್ರಿಮುಖ್ಯರ ಗೃಹಗೃಹಂಗಳಂ
ಪುರಜನದ ಭವನಭವನಂಗಳಿಂ ವೇಶ್ಯಾಲಯದ ಪಂತಿಯಿಂ ರಚಿಪರು ೨೧

ಎಸೆವ ತ್ರಿಪುರಾಂತಕಾಲಯವಾದಿ ಗುಡಿಗಳಂ
ಪೊಸತಾಗಿ ಕಟ್ಟಿಸುವರಧಿಕತರ ವಿಭವದಿಂ
ಬಸವಣ್ಣ ಮೊದಲಾದ ಸಕಲಶರಣರ ಮನೆ ಮಠಗಳಂ ಕಟ್ಟಿಸುವರು

ಆ ಬೇಡರು ಆರು ತಿಂಗಳವರೆಗೆ ಸಂತೋಷದಿಂದ ರಾಜ್ಯವಾಳುವರು, ಸಿದ್ಧರಾಮ ಪ್ರೀತಿಯಿಂದ ಕೇಳು. ಇತ್ತಕಡೆ ಅತಿಸಂಭ್ರಮದಿಂದ ೨೦. ಬಸವನೆಂಬ ಹೆಸರಿನ ಪಟ್ಟಣದಲ್ಲಿ ಆ ವೀರ ವಸವಂತನಿಗೆ ಪಟ್ಟವನ್ನು ಕಟ್ಟಲು ಅವನು ವಿದ್ಯಾನಗರಿಗೆ ಬಂದು ವಾಲಿಯ ಭಂಡಾರದ ಹಣವನ್ನು ವಶಪಡಿಸಿಕೊಂಡು ಅನಂತರ ಅಲ್ಲಿಯೇ ಆ ರಾಜ್ಯವಾಳುತ್ತಿದ್ದು ಖ್ಯಾತಿ ಹೊಂದಿದ ಕಲ್ಯಾಣಪಟ್ಟಣವನ್ನು ಅಧಿಕವಾದ ಉತ್ಸಾಹದಿಂದ ಕಟ್ಟಿಸುವನು. ೨೧. ನಾನಾರೀತಿಯ ಅಗಳು, ಕೋಟೆ-ಕೊತ್ತಳು, ಕಂದಕ, ನಾನಾರೀತಿಯ ಬಣ್ಣದ ಕೊತ್ತಳ ಬಾವುಟಗಳಿಂದ, ಮನೋಹರವಾದ ಚಂದ್ರ-ಸೂರ್ಯ ಬೀದಿಗಳ ಸಮೂಹದಿಂದ, ಅಗಣಿತವಾದ ಮಹಡಿಮನೆಗಳಿಂದ, ದೊರೆಗಳ ಅರಮನೆಯ ಸಾಲುಗಳಿಂದ, ಅಲ್ಲಲ್ಲಿ ಸಾಲಾದ ಮಂತ್ರಿ ಮೊದಲಾದವರ ಮನೆಗಳಿಂದ, ಪಟ್ಟಣದ ಜನರ ಭವನಗಳಿಂದ, ವೇಶ್ಯಾಗೃಹದ ಸಾಲುಗಳಿಂದ ಪಟ್ಟಣವನ್ನು ನಿರ್ಮಿಸುತ್ತಾರೆ. ೨೨. ಕಂಗೊಳಿಸುವ ತ್ರಿಪುರಾಂತಕಾಲಯ ಮೊದಲಾದ ಗುಡಿಗಳನ್ನು ಹೊಸದಾಗಿ ಕಟ್ಟಿಸುವರು. ಅಧಿಕತರವಾದ ವೈಭವದಿಂದ ಬಸವಣ್ಣ ಮೊದಲಾದ ಎಲ್ಲ ಶರಣರ ಮನೆ-ಮಠಗಳನ್ನು ಕಟ್ಟಿಸು

CC-0. Jangamwadi Math Collection. Digitized by eGangotri

ಉಸಿರಲೇನಂದಿನಿಂದಧಿಕ ನಾನಾಚಿತ್ರ
ಕುಶಲದಿಂ ಕಲ್ಯಾಣಪಟ್ಟಣದೊಳೆಡೆವಿಡದೆ
ಮಿಸುನಿಗೆಲಸಂಗಳಿಂದೆಲ್ಲವಂ ಕಟ್ಟಿಸುವರೆಲೆ ರಾಮ ಕೇಳೆಂದನು ೭೨

ಎಲೆ ಸಿದ್ಧರಾಮೇಶ ಕೇಳ್ವುದೀ ಪಟ್ಟಣವ
ನಲವಿನಿಂದೆಂದಿನಿಂ ಮಿಗಿಲಾಗಿ ಪೊಸಬಗೆಯು
ಚೆಲುವಿನಿಂ ಸಕಲಸಂಪದ ಸಕಲಶಿವಭಕ್ತಿ ಸಕಲಸುಕೃತಂಗಳಿರವ
ನೆಲೆಯಾಗಿ ರಾಜಿಸಲ್ ವೀರವಸವಂತನತಿ
ಗೆಲವಿನೀದಾಗ ವಿದ್ಯಾನಗರಿಯಿಂದೆ ಬಂ
ದಳಿಯಬಿಜ್ಜಳರಾಯನರಮನೆಯೊಳಿರುವನಂದಧಿಕತರವಿಭವದಿಂದೆ ೭೩

ಬಸವೇಶನಾಗಲೇಳ್ನೂರೆಪ್ಪತಮರಗಣ
ವಿಸರಮಂ ಕೂಡಿಕೊಂಡೈತಂದು ತಂತಮ್ಮ
ಮಿಸುಗುವರಮನೆಗಳೊಳಗೊಲಿದಿರ್ಪರಾಗಲಾ ವೀರವಸವಂತರಾಯ
ಒಸೆದು ನಮಗಾಗಂ ಪ್ರಧಾನಿಪಟ್ಟವ ಕಟ್ಟ
ಲೆಸೆವುತಿರ್ಪೆಮ್ಮ ರಾಜಾಲಯಕೆ ಪೋಗಿ ಸಂ
ತಸದಿಂದಲಿರ್ಪೆವೆಲೆ ಸಿದ್ಧರಾಮೇಶ ನೀಂ ಕೇಳೆಂದು ನಿರವಿಸಿದನು ೭೪

ಎಂದಿಂತು ಚೆನ್ನಬಸವೇಶನಂದತಿಕರುಣ
ದಿಂದಾಗ ಸಿದ್ಧರಾಮೇಶಂಗೆ ಪೇಳ್ದನಿದು
ಮುಂದಣಾಗಾಂತರದ ಸುದ್ದಿ ನೀಂ ಸೊನ್ನಲಾಪುರದೊಳೈಕ್ಯಸ್ಥಲದಲಿ

ವರು, ಹೇಳುವುದೇನು ? ಅಂದಿನಿಂದ ಅಧಿಕವಾದ ನಾನಾ ಕುಶಲಕರ್ಮದಿಂದ ಕಲ್ಯಾಣ ಪಟ್ಟಣದಲ್ಲಿ ಎಡೆಬಿಡದೆ ಚಿನ್ನದ ಕೆಲಸಗಳಿಂದ ಎಲ್ಲವನ್ನೂ ಕಟ್ಟಿಸುವರು, ಎಲೆ ರಾಮ ಕೇಳು ಎಂದನು. ೭೩. ಎಲೆ ಸಿದ್ಧರಾಮೇಶ ಕೇಳು, ಈ ಪಟ್ಟಣವು ಸಂತೋಷದಿಂದ ಎಂದಿಗಿಂತಲೂ ಮಿಗಿಲಾಗಿ ಹೊಸರೀತಿಯ ಚೆಲುವಿನಿಂದ, ಸಕಲ ಸಂಪತ್ತು, ಸಕಲ ಶಿವಭಕ್ತಿ, ಸಕಲ ಪುಣ್ಯಗಳಿಗೂ ಆವಾಸಸ್ಥಾನವಾಗಿ ಪ್ರಕಾಶಿಸಲು ವೀರವಸವಂತನು ಅತಿ ಉತ್ಸಾಹದಿಂದ ವಿದ್ಯಾನಗರಿಯಿಂದ ಬಂದು ಅಳಿಯ ಬಿಜ್ಜಳರಾಯನ ಅರಮನೆಯಲ್ಲಿ ಬಹಳ ವೈಭವದಿಂದ ಇರುವನು. ೭೪. ಬಸವೇಶನು ಆಗ ಏಳ್ನೂರ ಎಪ್ಪತ್ತು ಅಮರಗಣ ಸಮೂಹವನ್ನು ಕೂಡಿಕೊಂಡು ಬಂದು ತಂತಮ್ಮ ರಂಜಿಸುವ ಅರಮನೆಗಳಲ್ಲಿ ಪ್ರೀತಿಯಿಂದ ಇರುತ್ತಾರೆ. ಆಗ ಆ ವೀರವಸವಂತರಾಯನು ನಮಗೆ ಪ್ರೀತಿಯಿಂದ ಪ್ರಧಾನಿ ಪಟ್ಟವನ್ನು ಕಟ್ಟಲು ಸೊಗಸಿನಿಂದಿರುವ ನಮ್ಮ ಅರಮನೆಗೆ ಹೋಗಿ ಸಂತೋಷದಿಂದಿರುತ್ತೇವೆ, ಎಲೆ ಸಿದ್ಧರಾಮೇಶ ನೀನು ಕೇಳು ಎಂದು ನಿರೂಪಿಸಿದನು. ೭೫. ಎಂದು ಈ ರೀತಿಯಾಗಿ ಚೆನ್ನಬಸವೇಶನು ಆ ದಿನ ಬಹಳವಾಗಿ ಕರುಣೆಯಿಂದ ಮುಂದಾಗುವ ಅಷ್ಟು ಸಂಗತಿಯನ್ನೂ ಸಿದ್ಧರಾಮೇಶನಿಗೆ ಹೇಳಿ,ನೀನು ಸೊನ್ನಲಾಪುರಕ್ಕೆ ಹೋಗಿ ಐಕ್ಯ

CC-0. Jangamwadi Math Collection. Digitized by eGangotri

ನಿಂದು ನಿಜಸುಖಸಮಾಧಿಯೊಳಿರೆನೆ ಕೇಳ್ದು ಸಾ
ನಂದದಿಂದೆದ್ದು ಸಾಷ್ಟಾಂಗಪ್ರಣತನಾಗಿ
ಮುಂದಿರ್ದ ಬಸವೇಶಮೊದಲಾದ ಶರಣರ್ಗೆ ನಮಿಸಿದಂ ಭಕ್ತಿಯಿಂದೆ ೭೫

ಬಸವದಂಡಾಧೀಶ ಮೊದಲಾದ ಶರಣಗಣ
ವಿಸರವಾ ಸಿದ್ಧರಾಮೇಶಂಗೆ ನಮಿಸೆ ಸಂ
ತಸದಿಂದೆ ಬೀಳ್ಕೊಂಡು ಸೊನ್ನಲಾಪುರಕೈದಿ ಶಿವಸಮಾಧಿಯೊಳಿರ್ದನು
ಎಸೆವ ಕಲ್ಯಾಣಪಟ್ಟಣದೊಳಂದಾ ಚೆನ್ನ
ಬಸವೇಶನುಂ ಬಸವದಂಡೇಶ ಮೊದಲಾದ
ಜಸವಡೆದ ಶರಣಸಂಕುಲಮಾಗಿ ಶಿವತತ್ತ್ವಗೋಷ್ಠಿಯಿಂ ಸುಖಮಿರ್ದರು ೭೬

ಶಾಲಿವಾಹನಶಕದ ಸಾಹಸ್ರದೈಸೂರ
ಮೇಲದೇಳನೆಯ ತಾರಣ ಸುಸಂವತ್ಸರದ
ಕಾಲದೊಳಗೆಸೆವ ಶ್ರಾವಣ ಬಹುಳ ದಶಮಿಯಾ ಗುರುವಾರಕತಿಸಾಂಗದೆ
ಪೇಳಿ ಮುಗಿಸಿದ ಪಂಡಿತಾಗ್ರಣಿ ವಿರೂಪಾಕ್ಷ
ಲೀಲೆಯಿಂ ಚೆನ್ನಬಸವೇಶನ ಪುರಕಣವಿದ
ನಾಲಿಸುವ ಶರಣರ್ಗೆ ಸಕಲಪದವಿಯನೀವ ಚೆನ್ನಬಸವೇಶನೊಲಿದು ೭೭

ಇದು ಸಕಲ ವೀರಮಾಹೇಶ್ವರರ ಸದ್ವಿಮಲ
ಹೃದಯಾಬ್ಜಮಿತ್ರನುರುಷಟ್ಸ್ಥಲಬ್ರಹ್ಮವೆಂ
ಬುದಧಿವರ್ಧನಸೋಮನೆನಿಪ ಗುರುಸಿದ್ಧವೀರೇಶ್ವರನ ಕರಜಾತನು

ಸ್ಥಳದಲ್ಲಿ ನಿಂತು ನಿನ್ನ ಸುಖಸಮಾಧಿಯಲ್ಲಿ ಇರು ಎನ್ನಲು ಅದನ್ನು ಕೇಳಿ ಆನಂದದಿಂದ ಎದ್ದು ಮುಂದಿದ್ದ ಬಸವಾದಿ ಶರಣರಿಗೆ ಭಕ್ತಿಯಿಂದ ದೀರ್ಘದಂಡ ನಮಸ್ಕಾರ ಮಾಡಿದನು. ೭೬. ಬಸವದಂಡಾಧೀಶ ಮೊದಲಾದ ಶರಣಗಣಸಮೂಹವು ಆ ಸಿದ್ಧರಾಮೇಶನಿಗೆ ನಮಸ್ಕಾರ ಮಾಡಲು ಅವನು ಸಂತೋಷದಿಂದ ಬೀಳ್ಕೊಂಡು ಸೊನ್ನಲಾಪುರಕ್ಕೆ ಹೋಗಿ ಶಿವಸಮಾಧಿಯಲ್ಲಿದ್ದನು. ಪ್ರಕಾಶಿಸುವ ಕಲ್ಯಾಣಪಟ್ಟಣದಲ್ಲಿ ಆಗ ಚೆನ್ನಬಸವೇಶನು, ಬಸವದಂಡಾಧೀಶ ಮೊದಲಾದ ಖ್ಯಾತಿವೆತ್ತ ಶರಣಸಮೂಹದೊಡನೆ ಶಿವತತ್ತ್ವಗೋಷ್ಠಿಯಿಂದ ಸುಖವಾಗಿದ್ದನು. ೭೭. ಶಾಲಿವಾಹನಶಕದ ಸಾವಿರದ ಐನೂರ ಏಳನೆಯ ತಾರಣಸಂವತ್ಸರದ ಶ್ರಾವಣ ಬಹುಳ ದಶಮಿ ಗುರುವಾರದಂದು ಪಂಡಿತಾಗ್ರಣಿ ವಿರೂಪಾಕ್ಷನು ಸಂತೋಷದಿಂದ ಸಾಂಗವಾಗಿ ಹೇಳಿ ಮುಗಿಸಿದ ಈ ಚೆನ್ನಬಸವೇಶನ ಪುರಾಣವನ್ನು ಕೇಳುವ ಶರಣರಿಗೆ ಪ್ರೀತಿಯಿಂದ ಚೆನ್ನಬಸವೇಶನು ಸಕಲ ಪದವಿಯನ್ನೂ ಕೊಡುವನು. ೭೮. ಎಲ್ಲ ವೀರಮಾಹೇಶ್ವರರ ನಿರ್ಮಲ ಹೃದಯ ಕಮಲಗಳಿಗೆ ಮಿತ್ರನಾದ ಸೂರ್ಯನಂಥವನು, ಶ್ರೇಷ್ಠವಾದ ಷಟ್ಸ್ಥಲಬ್ರಹ್ಮವೆಂಬ ಸಮುದ್ರವನ್ನು ಸಂತೋಷದಿಂದ ಹೆಚ್ಚಿಸುವ ಚಂದ್ರನಂಥವನಾದ ಗುರುಸಿದ್ಧವೀರೇಶ್ವರನ

CC-0. Jangamwadi Math Collection. Digitized by eGangotri

ಸದಮಲಜ್ಞಾನಿ ಸಕಲಾಗಮಪುರಾಣಕೋ
ವಿದನಾ ವಿರೂಪಾಕ್ಷ ಪಂಡಿತಾರಾಧ್ಯರತಿ
ಮುದದೆ ಪೇಳ್ದೀ ಚೆನ್ನಬಸವಪೌರಾಣಸತ್ಕಥೆಯೊಳೈದನೆಯ ಕಾಂಡಂ ೭೮

ಇಂತೆಸೆವ ಚೆನ್ನಬಸವೇಶನ ಪುರಾಣಮಂ
ಸಂತಸದೆ ಬರೆದವರ್ಗೋದಿದರ್ಗರ್ಥಮಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲಭೋಗಮನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆನ್ನಬಸವೇಶನಕ್ಕರಿಂದೆ ೭೯

ಅರುವತ್ತುಮೂರನೆಯ ಸಂಧಿ ಸಂಪೂರ್ಣ

ಐದನೆಯ ಕಾಂಡ ಸಮಾಪ್ತ

ಶಿಷ್ಯ ವಿರೂಪಾಕ್ಷಪಂಡಿತ. ಇವನು ನಿರ್ಮಲಜ್ಞಾನಿ, ಎಲ್ಲ ಆಗಮಪುರಾಣಗಳಲ್ಲಿ ಕೋವಿದ. ಇವನು ಅತಿಪ್ರೀತಿಯಿಂದ ಬರೆದ ಚೆನ್ನಬಸವಪುರಾಣವೆಂಬ ಉತ್ತಮವಾದ ಕಥೆಯಲ್ಲಿ ಇದು ಐದನೆಯ ಕಾಂಡವು. ೭೯. ಈ ರೀತಿಯಲ್ಲಿ ಶ್ರೇಷ್ಠವಾದ ಚೆನ್ನಬಸವೇಶನ ಪುರಾಣವನ್ನು ಸಂತೋಷದಿಂದ ಪ್ರತಿ ಮಾಡಿದವರಿಗೆ, ಓದಿದವರಿಗೆ, ಅರ್ಥವನ್ನು ಮೊದಲಿನಿಂದ ಕೊನೆಯವರೆವಿಗೂ ಹೇಳಿದವರಿಗೆ, ವಾಚನ ಮಾಡಿದವರಿಗೆ, ಭಕ್ತಿಯಿಂದ ಕೇಳಿದವರಿಗೆ ಪರಮೇಶ್ವರನ ಅಪರಾವತಾರನಾದ ಚೆನ್ನಬಸವೇಶ್ವರನು ಪ್ರೀತಿಯಿಂದ ಯಾವಾಗಲೂ ಎಲ್ಲ ಸುಖಗಳನ್ನೂ, ಎಲ್ಲ ಭೋಗಗಳನ್ನೂ, ಅನಂತ ಸೌಭಾಗ್ಯವನ್ನೂ ಕೊಟ್ಟು ಕಾಪಾಡುವನು.

ಅರುವತ್ತುಮೂರನೆಯ ಸಂಧಿ ಮುಗಿಯಿತು.

ಐದನೆಯ ಕಾಂಡ ಸಮಾಪ್ತ

CC-0. Jangamwadi Math Collection. Digitized by eGangotri

ಶಬ್ದಕೋಶ

ಅ

ಅರ್ಕ–ಸೂರ್ಯ

ಅಗಜೆ–ಪಾರ್ವತಿ, ಗಿರಿಜೆ

ಅಘಹರ–ಈಶ್ವರ

ಅಗಳು-ಕಂದಕ

ಅಗ್ಗಳಿಕೆ–ದೊಡ್ಡಸ್ತಿಕೆ

ಅಘ–ಪಾಪ

ಅರ್ಘ್ಯಪಾದ್ಯ–ಕೈಕಾಲು ತೊಳೆಯಲು ಕೊಡುವ ನೀರು

ಅಚ್ಚರೆ–ಅಪ್ಸರೆ

ಅಚ್ಚಿ–ಅಕ್ಷಿ, ಕಣ್ಣು

ಅಜ–ಹೋತ ; ಬ್ರಹ್ಮ

ಅಜಾಂಡ-ಬ್ರಹ್ಮಾಂಡ

ಅಜಾತ-ಹುಟ್ಟಿಲ್ಲದವನು

ಅಜಿನ–ಚರ್ಮ

ಅಟ್ಟುಳಿಗೆ–ಪೀಡೆ

ಅಟ್ಟಳೆ–ಗೋಪುರ

ಅಟ್ಟೆ–ರುಂಡವಿಲ್ಲದ ದೇಹ

ಅಡಕಿಲ್–ಒಂದರಮೇಲೊಂದು ಪೇರಿಸಿದ್ದು

ಅಣಲ್–ದವಡೆ

ಅರ್ಣವ–ಸಮುದ್ರ

ಅಣಿಯರ–ಚೆನ್ನಾಗಿ

ಅಣುಗಿ–ಪ್ರೀತಿಯುವಳು ; ಮಗಳು

ಅತಿಸಂಚಯ–ರಸಭರಿತ

ಅದಿತಿನಂದನ–ದೇವೇಂದ್ರ

ಅನಡ್ವಾಹ-ಎತ್ತು, ಹೋರಿ

ಅನಿಮಿಷಾಪಗ-ದೇವಗಂಗೆ

ಅನಿಮೇಷ–ದೇವತೆ, ಮೀನು

ಅಪನೋದ–ಹೋಗಲಾಡಿಸುವುದು

ಅಪರಾಂಗನೆ-ಸಂಧ್ಯಾಂಗನೆ,ಸಂಜೆ

ಅಬ್ಜ-ಕಮಲ ; ಚಂದ್ರ

ಅಬ್ಜಸಖಸಂಭವ–ಸೂರ್ಯನ ಮಗ ಯಮ

ಅಬ್ಜಾರಿಚೂಡ–ಚಂದ್ರಶೇಖರ

ಅಬ್ಜಿನಿ–ಹೂವು

ಅಭವ–ಶಿವ

ಅಭವಮಿತ್ರ–ಕುಬೇರ

ಅಭ್ರ–ಮೋಡ

ಅರ್ಭಕ–ಮಗು

ಅಮರ್ದು-ಅಮೃತ

ಅಮೃತಾಂಗನೆ-ಗಂಗೆ

ಅರಲ್–ಹೂವು

ಅರಹು–ವಿಸ್ತಾರ

ಅರಿಷ್ಟ–ಅನಿಷ್ಟ

ಅರುಜಾಂಗ–ರೋಗವಿಲ್ಲದವ

ಅರುಣ–ಕೆಂಪು ; ಸೂರ್ಯ

ಅರೆ-ನಗಾರಿ ; ಬಂಡೆ ; ನಾಶಮಾಡು

ಅರೆವೆರಸಿ-ದೂರಮಾಡಿ

ಅಲರುಣಿ–ದುಂಬಿ

ಅಲರ್ಗಣೆ–ಹೂಬಾಣ

ಅವಗಡಿಸು–ಹುರಿದುಂಬು

ಅಶನ–ಊಟ

ಅಷ್ಟಮೂರ್ತಿ–ಈಶ್ವರ

ಅಷ್ಟಾಪದ–ಬಂಗಾರ

ಅಸತಿ–ಕೆಟ್ಟಹೆಂಗಸು

ಅಸದಳಪೆರ್ಮೆ–ಅಸಾಧ್ಯವಾದ ಸಾಮರ್ಥ್ಯ

ಅಸಮಾಸ್ತ್ರ–ಮನ್ಮಥ

ಅಸಿಧಾರೆ-ಕತ್ತಿಯ ಅಲಗು

ಅಸಿಧೇನು–ಕತ್ತಿ

CC-0. Jangamwadi Math Collection. Digitized by eGangotri

ಅಸುಗೆ–ಅಶೋಕ
ಅಳಕ–ಮುಂಗುರುಳು
ಅಳರ್ವ–ಮುಂದೆ ಹೋಗುವ
ಅಳಲು–ವ್ಯಥೆ
ಅಳವಳಿ–ಬಲಗುಂದು
ಅಳವಿಗೆ–ದುಂಬಿ
ಅಳಿ–ಸಾಯು ; ಕೆಟ್ಟ ; ದುಂಬಿ
ಅಳಿಜಸ–ಅಪಕೀರ್ತಿ
ಅಳುಪು–ಅನುರಾಗ
ಅಳ್ಕುರಿ–ಭಯಹುಟ್ಟಿಸು
ಅಳೆ–ಮಜ್ಜಿಗೆ
ಅಳ್ಕೆ–ಆಸೆ
ಅಂಗಜಾರಿ–ಶಿವ
ಅಂಗುಲಿ–ಹೆಬ್ಬೆರಳು
ಅಂಘ್ರಿ–ಪಾದ
ಅಂಚಲ–ಸೆರಗು, ಅಂಚು
ಅಂಚಿತ–ಕೂಡಿದ
ಅಂಡಲೆ–ಪೀಡಿಸು
ಅಂತರ–ಒಳಗೆ
ಅಂತರಿಸದೆ–ತಡಮಾಡದೆ
ಅಂದುಗೆ–ಕಾಲಂದುಗೆ
ಅಂಬರ–ಬಟ್ಟೆ ; ಆಕಾಶ
ಅಂಬುಚರ–ಜಲಚರ
ಅಂಭೋರುಹಾಸನ–ಬ್ರಹ್ಮ

ಆ

ಆಕೆವಾಳ–ಶೂರ
ಆಖಂಡಲ–ದೇವೇಂದ್ರ
ಆಣೆ–ಆಜ್ಞೆ
ಆತಪತ್ರ–ಬಿಳಿಕೊಡೆ
ಆನಲು–ತಡೆಯಲು
ಆಮಳಕ–ನೆಲ್ಲಿಕಾಯಿ
ಆಮ್ನಾಯ–ವೇದ
ಆಯತ–ವಿಸ್ತೃತ
ಆಯತಿ–ವಿಸ್ತಾರ
ಆಯತಿಕೆ–ವೈಭವ
ಆರಡಿ–ದುಂಬಿ
ಆರಡಿವಾತು–ಚಾಡಿಮಾತು ; ದುಂಬಿಯೆಂಬ ನುಡಿ
ಆರಾಧ್ಯ–ಪೂಜಿಸಲ್ಪಡುವ
ಆರೈದು–ವಿಚಾರಿಸಿ
ಆಲಿಬರಲು–ಆಲಿಕಲ್ಲು
ಆಶಾ–ದಿಕ್ಕು, ಆಸೆ
ಆಶ್ಲೇಷೆ–ಆಲಿಂಗನ ; ಒಂದು ನಕ್ಷತ್ರ
ಆಸರು–ಆಯಾಸ ; ಬಾಯಾರಿಕೆ
ಆಳ್ದ–ಅಧಿಪತಿ
ಆಳಿ–ದಾಸಿ
ಆಳೆಯರ–ಸ್ನೇಹಿತೆಯರ
ಆಳ್ವೇರಿ–ಕೋಟೆಯಗೋಡೆ

ಇ

ಇಕ್ಕೆಕ್ಕೆ–ಒತ್ತೊತ್ತಾಗಿ
ಇಕ್ಕೆ–ಮನೆ
ಇಟ್ಟಣಿಸು–ಒಟ್ಟುಮಾಡು, ಗುಂಪಾಗು
ಇನಸುತ–ಯಮ
ಇಳೆ–ಇಳೆ, ಭೂಮಿ
ಇಸು–ಬಾಣಪ್ರಯೋಗಮಾಡು
ಇಳೆಯರಸಿ–ರಾಜ್ಯಲಕ್ಷ್ಮಿ
ಇಂದಿರನದೆಸೆ–ಪೂರ್ವದಿಕ್ಕು
ಇಂದೂಪಲ–ಚಂದ್ರಕಾಂತಶಿಲೆ

ಈ

ಈಕ್ಷಣರಜ್ಜು–ಕಣ್ನೋಟವೆಂಬ ಪಗ್ಗ

ಉ

ಉರ್ಚು–ಸೆಳೆ, ಚುಚ್ಚು
ಉಡಿ–ಸೊಂಟದ ಮೇಲ್ಭಾಗ, ಕತ್ತರಿಸು; ಮುರಿ;

CC-0. Jangamwadi Math Collection. Digitized by eGangotri

ಜಜ್ಜು ; ಮಡಿಲು
ಉಡುಪ-ಚಂದ್ರ
ಉತ್ಕಳಿಕೆ-ಹೂವು, ಕಮಂಡಲು, ಅಲೆ
ಉತ್ತಾರಕ-ಹಡಗು
ಉದ್ದಂಡ-ವಿಶಾಲ ; ಉದ್ಧತ
ಉಪೇಂದ್ರ-ವಿಷ್ಣು
ಉಬ್ಬಸ-ತೊಂದರೆ
ಉಬ್ಬೇರು-ಹುರುಪುಗೊಳ್ಳು
ಉರವಣೆ-ಪ್ರಭಾವ
ಉರು-ಹೆಚ್ಚಾದ
ಉರುಗಲ್-ದೊಡ್ಡಬಂಡೆ
ಉರುಗಿಸು-ವಕ್ರಮಾಡು
ಉರುಜವಣೆ-ಲಾಮಂಚ
ಉರುಬು-ಹಲ್ಲೆಮಾಡು, ಉಬ್ಬು
ಉರೆ-ಹೆಚ್ಚಾಗಿ, ಚೆನ್ನಾಗಿ
ಉಳುಹು-ಉದ್ಧಾರಮಾಡು
ಉಂಗುರುಡಿಕೆ-ಉಡಿಕೆ ಶಾಸ್ತ್ರದಲ್ಲಿ ಉಂಗುರ ವೀಳೆಯ, ವಸ್ತ್ರಗಳನ್ನು ಕೊಡುವುದು

ಊ

ಊರು-ತೊಡೆ
ಊಳ್ವ-ಬೊಗಳುವ

ಋ

ಋಕ್ಷಪತಿ-ಚಂದ್ರ

ಎ

ಎಕ್ಕಸರ-ಏಕಾವಳಿಸರ
ಎಕ್ಕೆಕ್ಕೆ-ಸಾಲು ಸಾಲು
ಎಗ್ಗ-ದಡ್ಡ
ಎಚ್ಚು-ಬಿಡು
ಎರೆಯುರ-ನಾಯಕರ
ಎರೆವರು-ದಾನಿಗಳು
ಎಸಕ-ಸಾಮರ್ಥ್ಯ, ಸರಿಯಾದ ರೀತಿ
ಎಳೆವರೆ-ಅರ್ಧಚಂದ್ರ
ಎಳೆಲ್-ಜೋತಾಡು

ಏ

ಏರ್-ಗಾಯ

ಒ

ಒಕ್ಕಲಿಕ್ಕು-ನಾಶಮಾಡು
ಒರ್ಗುಡಿಸು-ಓರೆಯಾಗು
ಒಚ್ಚತ-ಸಂತೋಷ ; ಚೆನ್ನಾಗಿ
ಒಟ್ಟಿಲ್-ಬೋಗಸೆ
ಒಡ್ಡಣೆ-ರಾಶಿ
ಒಡ್ಡವಣೆ-ಗುಂಪು
ಒಸಗೆ-ಶುಭಸಮಾಚಾರ, ಉತ್ಸಾಹ
ಒಸೆದ-ಪ್ರೀತಿಸಿ

ಓ

ಓತಪ್ಪು-ಪ್ರೀತಿಯಿಂದ ಅಪ್ಪಿಕೊ
ಓಪಳು-ಪ್ರಿಯಳು
ಓವದೆ-ಮುದ್ದಿಸದೆ
ಓಷಧಿ-ಗಿಡಮೂಲಿಕೆ
ಓಸರಿಸು-ಹಿಂದೆ ಮುಂದೆ ನೋಡು
ಓಳಿ-ಪಂಕ್ತಿ

ಕ

ಕಕ್ಕಸ-ಗಟ್ಟಿ, ಒರಟು, ಕ್ರೂರ
ಕಕ್ಷ-ಕಂಕುಳು
ಕಚ-ತಲೆಕೂದಲು
ಕಚ್ಛಪ-ಆಮೆ
ಕಚ್ಚುರಿ-ಬಜ್ಜಿ (ತಿನಿಸು)
ಕಜ್ಜಳ-ಕಾಡಿಗೆ
ಕಟಕ-ಸೈನ್ಯ
ಕಟಕಿ-ಅಣಕ
ಕಟ್ಟೆಸಕ-ಅತಿ ಪರಾಕ್ರಮ
ಕಡವ-ಈಚಲು ಮರ

CC-0. Jangamwadi Math Collection. Digitized by eGangotri

ಕಡವರ-ಬಂಗಾರ
ಕಡಿಯಣ–ಕಡಿವಾಣ
ಕಡುಪ್ರು–ಅದಟು, ಸಾಮರ್ಥ್ಯ
ಕಡಂಬ–ಈಚಲು ಮರ
ಕಣ್ಗೊನೆ-ಕಡೆಗಣ್ಣು
ಕದಕ್ಕದಿಸು–ಮೇಲೆ ಕೆಳಗೆ ಆಡಿಸುವುದು
ಕರ್ದಮ–ಪಾಪಪುರುಷ
ಕರ್ದುಂಕು-ಕಚ್ಚು, ಕುಕ್ಕು
ಕನಕಾಂಬಕ–ಹಿರಣ್ಯಾಕ್ಷ
ಕನಲ್ಕೆ–ಕೋಪ
ಕರ್ಪರ–ತಲೆಬುರುಡೆ, ಮಡಿಕೆ
ಕಬರಿ-ತುರುಬು
ಕಮಠ–ಆಮೆ
ಕಮಲಸಖಪುತ್ರ–ಸೂರ್ಯನ ಮಗ ಯಮ
ಕರ–ಸೊಂಡಿಲು ; ಕೈ
ಕರಟ–ಕಾಗೆ
ಕರಡೆ–ಕಟ್ಟಿಗೆಯಿಂದ ಬಾರಿಸುವ ಒಂದು ರೀತಿಯ ಮೃದಂಗ
ಕರಣಿ–ಹೆಣ್ಣಾನೆ
ಕರಣಿಕೆ–ಕಿವಿಯ ಆಭರಣ
ಕರಹ–ಕೂಗು ; ಆಮಂತ್ರಣ
ಕರು–ಅಚ್ಚೊತ್ತು
ಕರುಪಿಟ್ಟ–ಎರಕಹೊಯ್ದ
ಕರೋಟಿ–ತಲೆಬುರುಡೆ
ಕಲಧೌತ–ಬೆಳ್ಳಿ
ಕವೆಡು–ಮೋಸ
ಕವಳ–ತಾಂಬೂಲ ; ಗಂಡೂಷ ; ತುತ್ತು
ಕಸವರ–ಚಿನ್ನ
ಕಳಕಳಿ–ಚಿಂತೆ
ಕಳಿಕೆ–ಮೊಗ್ಗು
ಕಳಂಬ–ಬಾಣ
ಕಳಲ್ಚು–ಸಡಿಲಮಾಡುವ
ಕಳಹಂಸಿ–ರಾಜಹಂಸ
ಕಾರ್ತಸ್ವರ–ಬಂಗಾರ
ಕಾದಂಬರಿ–ಹೆಂಡ
ಕಾದಂಬಿನಿ–ಮೋಡ
ಕಾಯಮಾನ–ಮಂಟಪ
ಕಾಯಿ–ಕೋಪಗೊಳ್ಳು
ಕಾರಣೆ–ಗೋಡೆಯ ಕೆಳಭಾಗವನ್ನು ಅಲಂಕರಿಸುವ ಬಣ್ಣದಪಟ್ಟಿ
ಕಾಲ–ಕಪ್ಪು ; ಯಮ ; ವಿಷ
ಕಾಲಹರ–ಶಿವ
ಕಾವಗಲಹ–ಮನ್ಮಥನ ಯುದ್ಧ
ಕಾವರ–ಅವಕಾಶ
ಕಾಷಾಂಬರ–ಕೆಂಪು ಬಟ್ಟೆ
ಕಾಸು–ಕಾಚು
ಕಾಳಾಂಜಿ–ರಸಪಾತ್ರೆ, ಗುಲಾಬ್‌ದಾನಿ
ಕಾಳಿಕೆ–ಕಪ್ಪು
ಕಾಳಿಮಲೇಖೆ–ಕಪ್ಪುಗೆರೆ
ಕಿಗ್ಗಡೆ–ಸಣ್ಣದಾಗಿ ತಾಗು
ಕಿಟಿ–ಹಂದಿ
ಕಿಸಲಯ–ಚಿಗುರು
ಕಿಸುರು–ಅಸಹ್ಯಭಾವ
ಕಿರುಬ–ಹಸುಗೂಸು
ಕೀನಾಶ–ಯಮ, ಮೃತ್ಯು
ಕೀರ–ಗಿಳಿ
ಕೀರು–ಸಿಕ್ಕ ಸಿಕ್ಕಕಡೆ ನುಗ್ಗು
ಕೀಲಾಲ–ನೀರು ; ರಕ್ತ
ಕುಚಿತ–ಕುತ್ಸಿತ ; ಮೋಸ
ಕುಜ–ಮರ ; ಮಂಗಳಗ್ರಹ
ಕುಟಿಲಗಮನ–ಕದ್ದು ಬೇರೆಯವರೊಂದಿಗೆ ಸುಖಿಸುವುದು

CC-0. Jangamwadi Math Collection. Digitized by eGangotri

ಗ

ಗಕ್ಕುಪಾಡು–ಇದ್ದಕ್ಕಿದ್ದಂತೆ

ಗನ್ನಗತನ–ಠಕ್ಕುತನ

ಗಭಸ್ತಿ–ಕಾಂತಿ, ಕಿರಣ

ಗಮ್ಮನೆ–ಕೂಡಲೆ

ಗರುತ್ಮ–ಗರುಡ

ಗರುವಿಕೆ–ಶ್ರೇಷ್ಠತೆ

ಗವಾಸ್ಪದ-ಗೋವಾಳ

ಗಸಣಿ–ತೊಂದರೆ ; ವಿಪತ್ತು

ಗಂಧಿಗರು-ಔಷಧಿ ಮಾರುವವರು

ಗಾವಳಿ–ಆರ್ಭಟ, ಶಬ್ದ

ಗಿಡಿ-ತುರುಕು

ಗಿಡಿಬಿಡಿ–ಡಮರುಗ

ಗಿರಿಕ–ಇಲಿ

ಗೀರ್ವಾಣ–ದೇವತೆ

ಗೀಷ್ಪತಿ–ಬ್ರಹ್ಮ ; ಬೃಹಸ್ಪತಿ

ಗ್ರೀವ–ಕತ್ತು, ಕಂಠ

ಗುಡ–ಬೆಲ್ಲ

ಗುದಿ–ಗೊಂಚಲು

ಗುಲ್ಫ–ಕಾಲಿನ ಹರಡು

ಗುಲ್ಮ–ಪೊದೆ

ಗುಹ್ಯಕೇಶ್ವರ–ಕುಬೇರ

ಗುಂಜ–ಗುಲಗಂಜಿ

ಗುಂಡು–ರಾಶಿ

ಗೂಳೆಯ–ಒಲಸೆ ಹೋಗು

ಗೇಹ–ಮನೆ

ಗೊಂದಣ–ಸಮೂಹ

ಗೋ–ಕೂದಲು ; ಕಿರಣ ; ಹಸು ; ಸರಸ್ವತಿ ; ನೀರು

ಗೋಕರ್ಣ–ಕಣ್ಣನ್ನೇ ಕಿವಿಯಾಗಿ ಉಳ್ಳದ್ದು–ಹಾವು

ಗೋತ್ರ–ಪರ್ವತ, ಭೂಮಿ

ಗೋಪರ್ತ-ಇಂದ್ರ ; ವೃಷಭ

ಗೋಪಾಟವ–ವಾಕ್ಪಟುತ್ವ

ಗೋಮಾಯು–ನರಿ

ಗೋಂಟು–ಮೂಲೆ

ಘ

ಘಟಿಕಾ ಶತಕ–ಒಂದು ಗಳಿಗೆಗೆ ನೂರು ಪದ್ಯಗಳ ರಚನಾಸಾಮರ್ಥ್ಯ

ಘನಕೇಕಿ–ನವಿಲು

ಘರ್ಮಜಲ–ಬೆವರು

ಘಾಟಿ–ಇಳಿಯುವ ಮೆಟ್ಟಿಲು

ಚ

ಚಕ್ರಿ–ಸರ್ಪ

ಚಟುಲ–ಚಂಚಲ

ಚರಣಾಯುಧ-ಕೋಳಿ

ಚಲ್ಲಣ–ಚಡ್ಡಿ

ಚಲ್ಲೆ–ದೀರ್ಘತೆ

ಚಲ್ಲೆಗಂಗಳು–ವಿಲಾಸದ ಕಣ್ಣುಗಳು

ಚಷಕ–ಬಟ್ಟಲು

ಚಳೆಯ–ಚಿಮುಕಿಸು

ಚಕ್ಷುಶ್ರವ–ಸರ್ಪ

ಚಂಚರೀಕ–ದುಂಬಿ

ಚಂದ್ರಾಶ್ಮ–ಚಂದ್ರಶಿಲೆ

ಚಂಬಕ–ಒಂದು ತರದ ಡೋಲು

ಚಾರಿವರಿ–ವ್ಯವಸ್ಥಿತವಾಗಿ ಮುಂದುವರಿ

ಚಾಳಾಂಕಿ–ಒಂದು ಹಕ್ಕಿ

ಚುಬುಕ–ಗಲ್ಲ

ಚೂಚಕ–ಮೊಲೆತೊಟ್ಟು

ಚೇಲ–ಬಟ್ಟೆ

ಚೌಕಳಿ–ಕಿವಿಯ ಆಭರಣ

ಛ

ಛರ್ದಿ–ವಾಂತಿ

CC-0. Jangamwadi Math Collection. Digitized by eGangotri

ಛಪ್ಪನ–ಐವತ್ತಾರು

ಛಲಿ–ಲೂಟಿ ಮಾಡುವವ

ಛಾನಸ–ವಿಳಂಬ

ಜ

ಜಕ್ಕಣಿ–ಯಕ್ಷಿಣಿ

ಜಲವ್ಯಾಳ-ನೀರುಹಾವು

ಜರ್ವಿ–ಗಂಟಿಕ್ಕು

ಜೀಮೂತ–ಮೋಡ

ಜುಣುಗು ಹಿಂದೆಸರಿ

ಜುಮ್ಮನೆ–ತಕ್ಷಣ

ಜೇಟೆಕಾರ–ಜಟೆಯುಳ್ಳವ,ಶಿವ, ಚಾಟುಕಾರ(?)

ಜೊತ್ತು–ಜೋಡಿ

ಜಂಬೀರ–ಗಜನಿಂಬೆ

ಜಂಬು–ನೇರಳೆ

ಜಂಭಾರಿ–ದೇವೇಂದ್ರ

ಜುಂಜುದಲೆ–ಕೆದರಿದತಲೆ

ಜೊಂಡು–ಪಾಚಿ

ಝ

ಝುಲ್ಲೆ–ಗೊಂಡೆಗಳು

ಝುಲ್ಲಿಪಟ್ಟೆ–ಗೊಂಡೆಗಳ ಸಾಲು

ಠ

ಠಾಣೆ–ಸ್ಥಳ, ಕಾವಲು ಕಟ್ಟೆ

ಠೌಳಿ–ಮೋಸ

ಡ

ಡಕ್ಕೆ–ಡೋಲು

ಡಮಾನ–ಡೋಲು

ಡೌಡೆ–ಸಣ್ಣಡೋಲು

ಡಾಳಿ–ಒಯ್ಯಾರ

ಡಾಳಿಸು–ಬೀಸು

ಡಿಂಡಿಮ-ಮದ್ದಳೆ

ಡೊಕ್ಕರ–ಹೊಡೆತ

ಡೊಳ್ಳಾರಿ–ನಗಾರಿ

ತ

ತರಹರ–ತಾಳ್ಮೆ

ತರಹರಿಸು–ತಾಳಿಕೊ

ತರಕ್ಷು–ಹುಲಿ

ತಳ್ಗು–ಧೈರ್ಯಗುಂದು

ತಳ್ವು–ನಿಧಾನಮಾಡು

ತಾಮ್ರಚೂಡ–ಕೋಳಿ

ತಾರುಥಟ್ಟು–ಚೆಲ್ಲಾಪಿಲ್ಲಿಯಾಗಿ ಓಡು

ತಾಲವೃಂತ–ಬೀಸಣಿಗೆ

ತಿಗುರು–ಸುವಾಸನೆ, ಬಳಿ, ಸವರು

ತಿಣ್ಣ–ದೊಡ್ಡದಾದ

ತಿಮಿ–ಮೀನು

ತಿರಿಕಲ್ಲು–ಕವಣೆಕಲ್ಲು

ತಿರುಕುಳಿ–ಭಿಕ್ಷುಕ

ತ್ರಿದಶ–ದೇವತೆ

ತ್ರಿವಳಿ–ಹೆಂಗಸಿನ ಹೊಟ್ಟೆಯ ಮೇಲಿನ ಮೂರು ಗೆರೆಗಳು (ಸುಕ್ಕುಗಳು)

ತುರುಗೆವೆ–ಒತ್ತಾದ ಹುಬ್ಬು

ತುಮುರಾಗು–ಚೂರಾಗು

ತುಳಿಲ್–ಪರಾಕ್ರಮ ; ವಂದನೆ

ತೂಪಿರಿ–ಊದು

ತೂರ್ಯತ್ರಯ–ಗೀತ-ನಾಟ್ಯ-ವಾದ್ಯ

ತೆತ್ತೀಸ–ಮೂವತ್ತುಮೂರು

ತೆವರು–ಹೋಗಲಾಡಿಸು

ತೈಜಸ–ತೇಜಸ್ಸು

ತೊಕ್ಕು–ಅಂಶ

ತೊದಲು–ಸುಳ್ಳು

ತೋಟಿ–ಜಗಳ, ಯುದ್ಧ

ತೋರ–ಗಾತ್ರವಾದ

ತಿಂಗಳು–ಚಂದ್ರ, ಅಮೃತಕಿರಣ

CC-0. Jangamwadi Math Collection. Digitized by eGangotri

ತಿಂತಿಣಿ–ಸಮೂಹ

ದ

ದಶನದೀಧಿತಿ–ಹಲ್ಲಿನ ಹೊಳಪು

ದಾಮ–ಹಗ್ಗ

ದಿಮ್ಮಿದರ್–ಶ್ರೇಷ್ಠರು

ದಿಶಾಪರಿವೃಢ–ದಿಕ್ಪಾಲಕ

ದುಗ್ಧ–ಹಾಲು

ದುಮ್ಮಾನ–ಮನಸ್ಸಿನ ಆತಂಕ

ದೂವೆ–ಹೊಗೆ

ದೂಸರು–ಕಾರಣ

ದೂಸಿಗರ್–ಬಟ್ಟೆವ್ಯಾಪಾರಿಗಳು

ದೇವನಿಮ್ನಗೆ–ದೇವಗಂಗೆ

ದೇವಮಾತೃಕ–ಮಳೆಯ ನೀರಿನಿಂದ ಬೆಳೆಯುವ ಹೊಲ

ದೊದ್ದೆಗ–ಸೈನಿಕ ; ಗುಂಪಿಗೆ ಸೇರಿದವ

ದಾಂಗುಡಿ–ನೀಳವಾದ ಕುಡಿ

ಧ

ಧನಂಜಯ–ಅಗ್ನಿ

ಧನುಷ್ಕ–ಬಿಲ್ಲುಳ್ಳವನು

ಧವಳಾಂಶು–ಚಂದ್ರ

ಧರಾಧೃತ–ಪರ್ವತ

ಧೀರ್ಘಿಕೆ–ಕೆರೆ

ಧುರ–ಯುದ್ಧ

ನ

ನಕುಲ–ಮುಂಗುಸಿ

ನನೆ–ಮೊಗ್ಗು

ನಸೆ–ಮೃದುಗೊಳಿಸು

ನಾಕರಿಸು–ದೂರಮಾಡು

ನಾಗ–ಆನೆ ; ಸರ್ಪ

ನಾಗಾರಿ–ಸಿಂಹ ; ಗರುಡ

ನಾಣ್–ನಾಚು

ನಾರಂಗ–ಕಿತ್ತಳೆ

ನಾರಾಚ–ಬಾಣ

ನಾರಿ–ಬಿಲ್ಲಿನ ಹಗ್ಗ

ನಿರಯ–ನರಕ

ನಿದಾಘ–ಬೇಸಗೆಯ ಸಮಯ

ನಿಗಮ–ವೇದ : ಪಟ್ಟಣ

ನಿಗ್ಗವ–ಆನೆಯ ಕೋರೆಹಲ್ಲು

ನಿಧಾನ–ಸಂಪತ್ತು, ರಹಸ್ಯ, ಮೂಲಕಾರಣ

ನಿಮ್ನಗಾ–ನದಿ

ನಿಮಿಷ–ರೆಪ್ಪೆ ಮುಚ್ಚುವುದು

ನಿಲಿಂಪೇಶ–ದೇವೇಂದ್ರ

ನಿಶಾಟ–ರಾಕ್ಷಸ

ನಿಸ್ಸಾಳ–ಡೋಲು

ನಿಹಾರ–ಮಂಜು

ನೆಗಳ್–ಮೊಸಳೆ

ನೆವರು–ಜಾರು ; ನುಸುಳು ; ಮೇಲೆತ್ತು

ಪ

ಪಕ್ಕರಕ್ಕೆ–ಜೀನು

ಪಚಾರಿಸು–ಹೀಯಾಳಿಸು, ತಿರಸ್ಕರಿಸು

ಪಚ್ಚುವ–ಹಂಚುವ

ಪಚ್ಚೆಯಾಡು–ಹಸಿರು ಕಾಯನ್ನು ನಡೆಸು

ಪಟ್ಟಿಸ–ಒಂದು ರೀತಿಯ ಆಯುಧ

ಪಟಹ–ಡೋಲು, ನಗಾರಿ

ಪಡಿಗ–ಪೀಕದಾನಿ

ಪಡಿಯರ–ಬಾಗಿಲು ಕಾಯುವವ

ಪಡಿಹಾರ–ಕೈತುಂಬ

ಪಣಹ–ದುಂದುಭಿ

ಪತ್ರಿ–ಪಕ್ಷಿ ; ಬಾಣ

ಪದವು–ಸಂತೋಷ ; ಆಸೆ

ಪದ್ಮ–ಒಂದು ಸಂಖ್ಯೆ, ಕಮಲ, ಒಂದು ರೀತಿಯ ಹಾವು

CC-0. Jangamwadi Math Collection. Digitized by eGangotri

ಪಣರು–ರೀತಿ ; ಶಕ್ತಿ
ಪರಪುಟ್ಟ–ಕೋಗಿಲೆ
ಪರಭೃತ–ಕೋಗಿಲೆ
ಪರವೆ–ಎಚ್ಚರ, ಅರಿವು
ಪರಿಣಾಮ–ತೃಪ್ತಿ
ಪರಿವೇಶ–ಸೂರ್ಯನ ಸುತ್ತಲಿನ ರೇಖೆ
ಪಲ್ಲವಕ–ವಿಟಪುರುಷ
ಪಸದನ–ಅಲಂಕಾರ
ಪಳಂಚು–ಎದುರಾಗು, ವಿರೋಧಿಸು
ಪಳಿಕು–ಸ್ಫಟಿಕ
ಪಸರ–ವಿಸ್ತಾರ ; ಹರಡುವಿಕೆ
ಪಳಿವು–ನಿಂದೆ
ಪಾಕಶಾಸನ–ಇಂದ್ರ
ಪಾಟಕರಕೈವಾರ–ವಂದಿಮಾಗಧರು
ಪಾಳಿ–ಸಾಲು
ಪಾಸಟಿ–ಸಮಾನ
ಪಿಡಿ–ಹೆಣ್ಣಾನೆ
ಪಿಶಂಗ–ಕಂದು ಬಣ್ಣ
ಪೀತಪಟ–ವಿಷ್ಣು
ಪೀತವಾಸ–ವಿಷ್ಣು
ಪೀಲಿ–ನವಿಲು
ಪುನ್ನಾಗ–ಸುರಗಿ ಮರ
ಪುರುಹೂತ–ಇಂದ್ರ
ಪುರುಳಿ–ಹೆಣ್ಣು ಗಿಳಿ
ಪುಷ್ಕರಭವ–ಬ್ರಹ್ಮ
ಪುಷ್ಕರಾಪ್ತ–ಸೂರ್ಯ
ಪೂವಂಡು–ಹೂವಿನರಸ, ಮಕರಂದ
ಪೆಣೆಲ್–ಡುಬ್ಬ
ಪೊಡಕರಿಸು–ಕಾಣಿಸು
ಪೊಣರ್–ಹೋರಾಡು
ಪೊಣ್ಮೆ–ಅರಳಿ
ಪೊಣ್ಮು–ಹೊರಬೀಳು
ಪೊರವಾರ–ಪೃಷ್ಠ, ನಿತಂಬ
ಪೊರೆ–ಹೊರೆ, ಪಕ್ಕ, ಉಕ್ಕಿಹರಿ
ಪೊರೆಯೇರು–ಹುರುಪೇರು
ಪೊಳಕು–ಸ್ಫಟಿಕ
ಪೋರು–ಹೋರಾಡು
ಪಂಚಧಾರಾ–ಕುದುರೆಯ ಓಟದ ಐದು ಗತಿಗಳು
ಪಂಥ–ಸ್ಪರ್ಧೆ
ಪಾಥೇಯ-ದಾರಿಹೋಕ
ಪಿಂಜರ–ಬಂಗಾರದ ಬಣ್ಣ
ಪುಂಡರೀಕ–ಬಿಳಿಯ ತಾವರೆ ; ಹುಲಿ
ಪೆಂಡೆಯ–ಬಿರುದಿನ ಬಳೆ
ಪೆಂಪು–ಪ್ರಖ್ಯಾತಿ, ಹೆಚ್ಚಳ
ಪೊಂಗು–ಆನಂದಪಡು, ಉಬ್ಬು
ಪೊಂಗುವ–ಅರಳುವ
ಪ್ರಭಂಜನ–ಬಿರುಗಾಳಿ
ಪ್ರವಾಳ–ಹವಳ
ಪ್ರವೇಷ್ಟಿಸು–ಸುತ್ತುವರಿ
ಪ್ರಸೂನ–ಹೂವು
ಪ್ಲವಗ–ಕಪ್ಪೆ ; ಕೋತಿ
ಪ್ಲವಂಗ–ಕೋತಿ ; ಒಂದು ಸಂವತ್ಸರ
ಪಲ್ಗುಣಮಿತ್ರ–ಕೃಷ್ಣ

ಫ

ಫೇನ–ನೊರೆ

ಬ

ಬಕ್ಕುಡೆ–ಬೆರಗು ; ಭೀತಿ
ಬಗರಿ–ಅಗಲಬಾಯಿನ ಪಾತ್ರೆ
ಬಗ್ಗದೊವಲು–ಹುಲಿಯಚರ್ಮ
ಬಗ್ಗರಿ–ಗಂಟಲು ; ಎದೆಪಂಜರ
ಬತ್ತೀಸ–ಮೂವತ್ತೆರಡು
ಬದರೀಫಲ–ಬೋರೆಹಣ್ಣು
ಬಧಿರ–ಕಿವುಡ

CC-0. Jangamwadi Math Collection. Digitized by eGangotri

ಬಳ್ಳು–ನರಿ
ಬಸೆ–ನೆಣ, ಮೇದಸ್ಸು
ಬಾಸೆ–ಹೆಂಗಸಿನ ಹೊಕ್ಕಳ ಮೇಲಿನ ಕೂದಲು
ಬಾಹುರಕ್ಕೆ–ಭುಜಕೀರ್ತಿ
ಬಾಹೆ–ಹೊರಭಾಗ
ಬಿಜ್ಜಣಿಗೆ–ಬೀಸಣಿಗೆ
ಬಿಡಾಲ–ಬೆಕ್ಕು
ಬಿಡೆವಣ್–ಬಿರುಕುಬಿಟ್ಟ ಹಣ್ಣು
ಬಿದಿರು–ಹರಡು ; ಸಡಲಿಸು
ಬಿಸುಗದಿರ–ಸೂರ್ಯ
ಬುದ್ಬುದ–ಗುಳ್ಳೆ
ಬೆಟ್ಟಿತು–ಕಠಿಣ ; ದೊಡ್ಡದು
ಬೆರೆ–ಅಹಂಕಾರ
ಬೆಳರ್ತುದು–ಕಾಂತಿಯುಳ್ಳದು
ಬೆಳುಗವತೆ–ಹಗಲುದರೋಡೆ
ಬೆಳ್ಸರಿಗೆ-ಬಿಳಿಯ ಪ್ರವಾಹ
ಬೇಳು–ಹೋಮಮಾಡು, ಬಲಿಕೊಡು
ಬೋದುಗೆ-ಕಂಬದ ಮೇಲಿಟ್ಟ ಚಪ್ಪಡಿ
ಬಂಡು-ಮಧು, ಲಜ್ಜಾಸ್ಪದ ನಡತೆ
ಬಂಧಕಿ-ಜಾರಸ್ತ್ರೀ
ಬಿಂಜ–ವಿಂಧ್ಯಪರ್ವತ
ಬಿಂಬಾಫಲ-ತೊಂಡೆಹಣ್ಣು
ಬೃಂಹಿತ–ಗರ್ಜನೆ
ಬೊಂಬಲು–ಗುಂಪು
ಬೊಂಬಾಳದೀವಿಗೆ-ಬೊಂಬೆಯಾಕಾರದಲ್ಲಿ ಕೆತ್ತಿರುವ ದೀಪ
ಭಣಿತೆ–ಧ್ವನಿ ; ಶಬ್ದ
ಭರ್ಮ–ಬಂಗಾರ
ಭಾರಣೆ–ಗೌರವ, ಹೆಚ್ಚಳ
ಭಲ್ಲೆಹ–ಈಟಿ
ಭಿತ್ತಿ–ಗೋಡೆ
ಭೈತ್ರ-ಹಡಗು
ಭಂಗ–ಮೋಸ, ಅಲೆ

ಮ

ಮಘವ–ದೇವೇಂದ್ರ
ಮಡ-ಹಿಮ್ಮಡಿ
ಮಡಹು–ಹೆಗಲು
ಮಣಿಹ-ಅಧಿಕಾರ
ಮರುಜ–ಮದ್ದಳೆ
ಮಲಯಜ-ಶ್ರೀಗಂಧ
ಮಸಕ–ಉದ್ರೇಕ, ಅಬ್ಬರ, ವೇಗ
ಮುಕ್ತಿಕ–ನೊಣ
ಮುಡುಹು–ಹೆಗಲು
ಮುನ್ನೀರಸತಿ-ಸಮುದ್ರರಾಜನ ಪತ್ನಿ
ಮುರುಕಿಸು–ಕೊಂಕುತನ
ಮೇಘ್ರ–ಟಗರು
ಮೇರುವೆ–ಗೋಪುರಾಕಾರದ ಮಂಟಪ
ಮೇಲುಗುಲ್ಲಾಯಿ–ತಲೆಗೆ ಹಾಕಿಕೊಳ್ಳುವ ಕುಲಾವಿ
ಮೇಳ–ಜೊತೆ
ಮೊಗರಂಬ–ಶಿರಸ್ತ್ರಾಣ
ಮಂಡನ–ಅಲಂಕಾರ

ಯ

ಯಕ್ಷಪತಿ-ಕುಬೇರ
ಯಮಿ–ತಪಸ್ವಿ
ಯೂತಿಕ–ಕಾಡುಮಲ್ಲಿಗೆ

ರ

ರಕ್ತಾಕ್ಷಿ–ಸಂವತ್ಸರ, ರಕ್ತದಂತೆ ಕಣ್ಣುಳ್ಳವಳು
ರಕ್ಕೆ–ಭಸ್ಮದಿಂದ ಮಾಡುವ ರಕ್ಷೆ
ರಕ್ಕೆವಣಿ–ರಕ್ಷಾಮಣಿ
ರದನ-ಹಲ್ಲು
ರವಿಗ್ರಾವ–ಸೂರ್ಯಕಾಂತಶಿಲೆ
ರಾಜ–ಚಂದ್ರ

CC-0. Jangamwadi Math Collection. Digitized by eGangotri

ರಾಜೀವ-ತಾವರೆ
ರೋಚಿ-ಕಾಂತಿ
ರಂಚಿಕೆ-ಅಂಬಾರಿ
ರಂಭಾ-ಬಾಳೆ

ಲ

ಲಾಕುಳ-ತಪಸ್ವಿಗಳು ಹಿಡಿಯುವ ಕೋಲು
ಲಾವಕರು-ಚಾಡಿಕೋರರು
ಲಾಸ್ಯಭವನ-ನಾಟ್ಯಮಂದಿರ
ಲೆತ್ರ-ಪಗಡೆ
ಲೋವೆ-ಸೂರಿನ ಮಾಡು
ಲೌಡಿ-ಕಬ್ಬಿಣದ ಗದೆ
ಲೆಂಕ-ಸೇವಕ

ವ

ವನಾಧಿಪ-ಸಮುದ್ರರಾಜ
ವಾಘೆ-ಲಗಾಮು
ವಾಡವ-ಕುದುರೆ
ವಾಣಿಯರ್-ವ್ಯಾಪಾರಿಗಳು
ವಾರಣ-ಆನೆ
ವಾರುಣಿ-ಪಶ್ಚಿಮದಿಕ್ಕು, ಹೆಂಡ
ವಿಚಕಿಲ-ಸೂಜಿಮಲ್ಲಿಗೆ
ವಿತರಣ-ದಾನ
ವಿಧಾವಂತ-ಬಾಡಿಗೆ ಆಳು
ವಿಧು-ಚಂದ್ರ
ವಿಯದ್-ಆಕಾಶ
ವಿರತೆ-ವಿರಕ್ತೆ
ವೀತಿಹೋತ್ರ-ಅಗ್ನಿ
ವೀರಣ-ಲಾವಂಚ
ವೇಡಯ-ಮುತ್ತಿಗೆ
ವೇತಂಡ-ಆನೆ
ವೇಷ್ಟಿಸು-ಆವರಿಸು
ವೈಸಿಕ-ವೇಶ್ಯಾವೃತ್ತಿ ; ಮೋಸ

ಶ

ಶ್ವಸನ-ವಾಯು
ಶಾತ-ಹರಿತ
ಶಾತಕುಂಭ-ಬಂಗಾರ
ಶಿವ-ಗಿಳಿ, ಸರ್ಪ, ಹೆಣ್ಣುನರಿ, ನೀರು
ಶಂಖ ನಿಧಿ, ಹಣೆಯ ಮಧ್ಯದ ಮೂಳೆ, ನೀರಿನಲ್ಲಿ ಸಿಗುವ ಶಂಖ
ಶುಂಡಾಳ-ಆನೆ
ಶೈಲಾದಿ-ನಂದಿ

ಷ

ಷಟ್ಪದ-ದುಂಬಿ

ಸ

ಸಕ್ಕಸಮ-ಒಂದೇಸಮ
ಸಕಳೆ-ಶಾಖ
ಸಗಾಟ-ರಭಸ ; ಶೌರ್ಯ
ಸತ್ರ-ಯಜ್ಞ
ಸದಳಿಗ-ಧಾನ್ಯ ವ್ಯಾಪಾರಿ
ಸಪ್ತಾಂಗ-ಸ್ವಾಮಿ-ಅಮಾತ್ಯ-ಸ್ನೇಹಿತ-ಕೋಶ-ರಾಷ್ಟ್ರ-ದುರ್ಗ-ಸೈನ್ಯ
ಸರ್ಪಿ-ತುಪ್ಪ
ಸ್ವರ್ಭಾನು-ರಾಹು
ಸಮ್ಮ-ಚರ್ಮ
ಸರಿಸ-ಹತ್ತಿರ
ಸಾಧ್ವಸ-ಭಯ
ಸಾಮಜ-ಆನೆ
ಸಾಯಕ-ಬಾಣ
ಸಾರಣೆ-ಬಳಿಯುವಿಕೆ
ಸಿಕತ-ಮರಳು
ಸಿತ-ಬಿಳಿಯಬಣ್ಣ, ಸಕ್ಕರೆ
ಸಿರಿಖಂಡ-ಶ್ರೀಗಂಧ
ಸೀಕರ-ತುಂತುರುಹನಿ

CC-0. Jangamwadi Math Collection. Digitized by eGangotri

ಸೀಸಕ–ಶಿರಸ್ತ್ರಾಣ
ಸುಪರ್ವ–ದೇವತೆ
ಸುಮನ–ದೇವತೆ ; ಹೂ
ಸುರಗಿ-ಕಠಾರಿ
ಸುರುಜಾಂಗ–ರೋಗಿಷ್ಠ
ಸುರತಾಳ-ಸುಲ್ತಾನ
ಸುಶಿರ-ರಂಧ್ರ
ಸೂಳೆಬಂಟಿಕೆ–ಸೂಳೆಗೇರಿ
ಸೆಜ್ಜರ–ಹಾಸಿಗೆ
ಸೆಲವು-ಅಪ್ಪಣೆ
ಸೊದೆ–ಸುಣ್ಣ
ಸೋಗಿಲು-ಮಡಿಲು
ಸೌದಾಮಿನಿ-ಮಿಂಚು
ಸೌಮ್ಯ-ಬುಧ
ಸಂವರ್ತ–ಪ್ರಳಯ
ಸೈಂಹಿಕೇಯ–ರಾಹು
ಸಿಂಗಾಡಿ–ಬಿಲ್ಲು
ಸಿಂಜಿನಿ–ಬಿಲ್ಲಿನ ಹೆದೆ
ಸಿಂಧು-ಸಮುದ್ರ ; ನದಿ

ಹ

ಹದಿರುಕಾರ-ಅನನುಭವಿ
ಹಮ್ಮ್ಯ-ಉಪ್ಪರಿಗೆ
ಹರವಿರೋಧಿ-ಕೇತಕಿ
ಹರಿಗೆ-ಗುರಾಣಿ
ಹಲಗೆ-ಗುರಾಣಿ
ಹಸಗೈ-ಉದ್ದೀಪನಗೊಳಿಸು
ಹಸರ-ಅಂಗಡಿ
ಹಸ್ತಿರಾಣ್ಮುಖಿ-ಗಣೇಶ
ಹಾಹೆ-ದೋಣಿಯ ಹಾಯಿ
ಹೇತಿ-ಆಯುಧ, ಕಿರಣ
ಹೊಕ್ಕರಿಣಿ-ಪುಷ್ಕರಣಿ
ಹೊಗರು–ಕಾಂತಿ
ಹೊರಜು–ದಪ್ಪನೆಯ ಹಗ್ಗ
ಹಂಸ–ಸೂರ್ಯ ; ಹಂಸಪಕ್ಷಿ

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 4228

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

1979

ಕನ್ನಡದ ಪ್ರಾಚೀನ ಕಾವ್ಯ ಸಂಪತ್ತು ಅಮೂಲ್ಯವಾಗಿದೆ. ಈ ಸಂಪತ್ತನ್ನು ಈಗಿನ ಕನ್ನಡ ಜನತೆ ಓದಿ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಆದರೆ ಈ ಕಾವ್ಯಗಳು ಜನಸಾಮಾನ್ಯರಿಗೆ ಕಠಿಣವಾಗಿ ತೋರುವುದರಿಂದ ಇವುಗಳ ವ್ಯಾಸಂಗದಲ್ಲಿ ಉತ್ಸಾಹ ಪೂರ್ಣವಾದ ಪ್ರವೃತ್ತಿ ಕಂಡುಬರುತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಮೂಲ ಗ್ರಂಥಗಳೂ ದೊರೆಯುವುದಿಲ್ಲ......ಆದ್ದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ಕನ್ನಡ ಸಾಹಿತ್ಯ ಪರಿಷತ್ತು ತನ್ನ ಪಂಚವಾರ್ಷಿಕ ಯೋಜನೆಯಲ್ಲಿ ಹಳಗನ್ನಡ ಕಾವ್ಯಗಳ ಪುನರ್ಮುದ್ರಣಕ್ಕೆ ವಿಶೇಷಗಮನ ಹರಿಸಿ ಅದಕ್ಕಾಗಿ ಪ್ರತ್ಯೇಕ ಯೋಜನೆಯನ್ನು ಹಾಕಿಕೊಂಡಿತು. ಆರಿಸಿದ ಹಳಗನ್ನಡ ಹಾಗೂ ನಡುಗನ್ನಡ ಕಾವ್ಯಗಳನ್ನು ಹೊಸಗನ್ನಡ ಗದ್ಯದಲ್ಲಿ ಅನುವಾದಿಸಿ ಆ ಅನುವಾದದೊಡನೆ ಮೂಲ ಪಾಠವನ್ನು ಪ್ರಕಟಿಸಿ ಪುಸ್ತಕರೂಪದಲ್ಲಿ ಹೊರತರುವುದು ಮತ್ತು ಸರ್ಕಾರದ ಸಹಾಯ ಪಡೆದು ಆ ಪುಸ್ತಕಗಳು ಸಾಧ್ಯವಾದ ಮಟ್ಟಿಗೆ ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡುವುದು ಇವು ಆ ಯೋಜನೆಯ ಮುಖ್ಯ ಅಂಶಗಳು.

—ಪ್ರಸ್ತಾವನೆಯಿಂದ

ಈ ಕಾರ್ಯಕ್ರಮದಲ್ಲಿ ಈಗ ಅಂಗೀಕರಿಸಿರುವ ಹಳಗನ್ನಡ-ನಡುಗನ್ನಡ ಕಾವ್ಯಗಳು ನಲವತ್ತನಾಲ್ಕು. ಇವುಗಳಲ್ಲಿ ಮೊದಲ ಕಂತಾಗಿ ಹದಿಮೂರು ಗ್ರಂಥಗಳು ಪರಿಷತ್ತಿನ ವಜ್ರಮಹೋತ್ಸವ ಸಂದರ್ಭದಲ್ಲಿ ಬಿಡುಗಡೆಯಾಗಲಿವೆ.

CC-0. Jangamwadi Math Collection. Digitized by eGangotri